ಕನ್ನಡ ಜಾನಪದ ಗೀತೆಗಳು

ಮಹಾ ಪ್ರಬಂಧ : ಮೂಲಕೃತಿ

ದೈವ ದೇವರ ಹಂತಿ, ಭವದೊಳಗೆ ನಮ್ಹಂತಿ
ತೇದುಂಡ ಹಂತಿ ನಂಬಾಳು। ಒಕ್ಕಲಿಗ
ಕೋದತೆನಿ ಹಂತಿ ಜನುಮಕೊ॥

ಡಾ. ಬಿ.ಎಸ್. ಗದ್ದಗಿಮಠ

ರಾಚಯ್ಯ ನಿನ ಮಗನು ಊಚ ಸಾವಳಿಗೇಶ
ಕೋಚೆತ್ತಿ ಕಣಕೆ ಹಾಡಿದನು। ಬೆಳತನಕ
ನಾಚಿ ಕತ್ತಲೆಯು ಬೆಳಗಾಯ್ತು॥

ಕನ್ನಡ ಜಾನಪದ ಗೀತೆಗಳು

(Narrative Kannada Folk Songs)

ಮಹಾಪ್ರಬಂಧ : ಮೂಲ ಕೃತಿ

ಡಾ. ಬಿ.ಎಸ್. ಗದ್ದಗಿಮಠ

ಸರ್ಪನ್ ಪ್ರಕಾಶನ
ಧಾರವಾಡ

GADDAGIMATH, Basayya Savaligayya (1917-1960)
Kannada Janapada Geetegalu : Mahaprabhanda Moolakruti (in Kannada)
Dharwad, Karnataka, Sarpan Prakashana, Crown, Pages : x + 284 = 294, 2017

ISBN : 978-81-93177-10-5

Kannada Janapada Geetegalu
(Maha Prabhandha - Moola Kruti)

Dr. B.S. Gaddagimath

Publisher
Sarpan Prakashana
27, 2nd Cross, Kalyan Nagar
Dharwad - 580 007, Karnataka
Ph: 0836-2744851, 2743377
Mob.: 9844226604, 9448059309
Email : sarpanprakashana@gmail.com

First Print : 2017
Pages : x + 284 = 294

Price : ₹ **1200/-**
Copies : 1000
Paper : 80 gsm maplitho

Printed at
Ila Mudrana
Bengaluru - 560 026
Ph : 26757159

ಕನ್ನಡ ಜಾನಪದ ಗೀತೆಗಳು
(ಮಹಾಪ್ರಬಂಧ : ಮೂಲಕೃತಿ)

ಡಾ. ಬಿ.ಎಸ್. ಗದ್ದಗಿಮಠ

ಪ್ರಕಾಶಕರು
ಸರ್ಪನ್ ಪ್ರಕಾಶನ
೨೭, ೨ನೇ ಅಡ್ಡರಸ್ತೆ, ಕಲ್ಯಾಣ ನಗರ
ಧಾರವಾಡ – ೫೮೦ ೦೦೭, ಕರ್ನಾಟಕ
ದೂ.: ೦೮೩೬-೨೭೪೪೮೫೧, ೨೭೪೩೩೭೭
ಮೊ : ೯೮೪೪೨೨೬೬೦೪, ೯೪೪೮೦೫೯೩೦೯
ಇ-ಮೇಲ್ : sarpanprakashana@gmail.com

ಮೊದಲ ಮುದ್ರಣ : ೨೦೧೭
ಪುಟಗಳು : x + ೨೮೪ = ೨೯೪
ಬೆಲೆ : ₹ ೧೨೦೦/-

ಕಾಗದ : ೮೦ ಜಿಎಸ್‌ಎಂ ಮ್ಯಾಪ್‌ಲಿಥೋ

ಮುದ್ರಣ
ಇಳಾ ಮುದ್ರಣ
ಬೆಂಗಳೂರು-೫೬೦ ೦೨೬
ದೂರವಾಣಿ : ೨೬೭೫೭೧೫೯

ಪ್ರಕಾಶಕರ ಮಾತು

In the year 1954, 31st July the Syndicate of Karnataka University, Dharwad vide item No. 39, awarded Doctorate to Dr. B.S.Gaddagimath for his remarkable work on "ಕನ್ನಡ ಜಾನಪದ ಗೀತೆಗಳು" (Kannada Narrative Folk Songs) a hand written thesis of 750 pages compiled and classified very scientifically, elsewhere none had attempted and first of its kind in its own way exploring the rich and more meaningful Folklore treasure, hidden, specially in north Karnataka districts.

The sources say, the thesis "ಕನ್ನಡ ಜಾನಪದ ಗೀತೆಗಳು" (Kannada Narrative Folk songs) was submitted to Karnataka University, Dharwar for award of Doctorate in the year 1952 and it took two years to award the Doctorate. The sources also say, the Committee did ask Dr. B.S.Gaddagimath to rewrite the thesis "ಕನ್ನಡ ಜಾನಪದ ಗೀತೆಗಳು" (Kannada Narrative Folk songs) into English script and submit the thesis for award of Doctorate. The sources say, the thesis submitted by Dr. B.S.Gaddagimath was the first Ph.D. produced by the University, for all the faculties of Karnataka University, Dharwad.

In the year 1960 on 2nd November, Dr. B.S.Gaddagimath ceased to be no more in this world. He passed away in his forties, a Zenith period of his life. The sudden demise of Dr. B.S.Gaddagimath brought a great loss to the literary field as was said by Prabhudda Karnataka a monthly periodical of Manasa Gangotri, University of Mysore and to quote – "ನಲವತ್ತರ ವಯಸ್ಸಿನ ಈ ಕಿರಿಯ ನಿಷ್ಠಾವಂತ ಜನಪದ ಸಾಹಿತ್ಯ ವಿದ್ವಾಂಸರ ಮರಣ ಕನ್ನಡಕ್ಕೆ ಆದ ತುಂಬಲಾರದ ನಷ್ಟ".

Looking at the sudden demise of Dr. B.S.Gaddagimath the Department of Publications (Prasaranga) of Karnataka University, Dharwad published the thesis and it was said by the then Vice Chancellor Wrangler Dr. D.C. Pawate that "ಅವರ ಈ ಅಕಾಲಿಕ ಮರಣದಿಂದ ಕನ್ನಡ ಸಾಹಿತ್ಯ ಕ್ಷೇತ್ರ ಎಷ್ಟೊಂದು ಬಡವಾಯಿತೆಂಬುದನ್ನು ಹೇಳತೀರದು" Further while bringing out the thesis for publication, the Publications Committee abridged the original. The Publisher's note in this printed volume says "ಮೂಲ ಪ್ರಬಂಧವನ್ನು ಪುಸ್ತಕ ರೂಪದಲ್ಲಿ ಕೊಡುವಾಗ ಅಗತ್ಯವೆನಿಸಿದ ಕೆಲವೊಂದು ಮಾರ್ಪಾಡುಗಳನ್ನು ವಿಶ್ವವಿದ್ಯಾಲಯದ ಪ್ರಕಟನಾ ಸಮಿತಿಯ ಸದಸ್ಯರಾದ ಪ್ರಿ. ಎಸ್.ಎಸ್. ಮಾಳವಾಡ ಹಾಗೂ ಡಾ. ಆರ್.ಸಿ. ಹಿರೇಮಠ ಅವರು ಮಾಡಿಕೊಟ್ಟಿದ್ದಾರೆ. ಇದೆಲ್ಲಕ್ಕೂ ಒಂದು ರೂಪ ಕೊಡುವಲ್ಲಿ ಪ್ರಕಟನಾ ಶಾಖೆಯ ನಿರ್ದೇಶಕರಾದ ಶ್ರೀ ಸಿ.ಎಸ್. ಕಣವಿಯವರು ವಿಶೇಷ ಶ್ರಮ ವಹಿಸಿದ್ದಾರೆ. ಸಾಹಿತ್ಯ ಪ್ರೇಮಿಗಳು ಈ ಹೊತ್ತಿಗೆಯನ್ನು ಆದರದಿಂದ ಎತ್ತಿಕೊಳ್ಳುವರೆಂದು ಆಶಿಸಲಾಗಿದೆ."

"ಕನ್ನಡ ಜಾನಪದ ಗೀತೆಗಳು" a rare thesis of distinction by Dr. B.S.Gaddagimath that provided foundation to the Folk literature and lead for further intensive and extensive research. Numerous requests and appeals were made to us by the literary giants, folklorists, researchers and well wishers to publish the thesis in its original format. The long awaited desire of all is met now as the hand written original thesis of Dr. B.S.Gaddagimath in its orginal form is published and dedicated to the Folklore field for study, reference and further intense research by the future generation.

Indeed this rare research work laid foundation to the development of Folklore and Folk-literature, emerged as an independent and new scientific field of study which has now grown to greater heights and helped in preserving and documenting our rich culture, heritage and traditions.

–ಎಸ್.ಬಿ. ಗದ್ದಗಿಮಠ
ಸರ್ಪನ್ ಪ್ರಕಾಶನದ ಪರವಾಗಿ

ಧಾರವಾಡ
ಡಿಸೆಂಬರ್ ೦೬, ೨೦೧೬

ಮೊದಲ ಮಾತು

ಜಾನಪದ ಸಾಹಿತ್ಯದ ರಸರುಚಿಯು ಜನತೆಯನ್ನು ಮರಳುಗೊಳಿಸಿದ್ದು ಕೇವಲ ಇತ್ತೀಚೆಗೆ, ಇಪ್ಪತ್ತು ವರುಷಗಳ ಹಿಂದೆ, ಇಪ್ಪತ್ತನೆಯ ಶತಮಾನದಲ್ಲಿ. ಮೊಟ್ಟಮೊದಲು ಇದರಲ್ಲಿ ಅಭಿರುಚಿ ಹುಟ್ಟಿಸಿದ ಶ್ರೇಯಸ್ಸು ಹಲಸಂಗಿ ಗೆಳೆಯರ ಗುಂಪಿಗೆ ಸಲ್ಲುವುದು. ಇವರ ಪ್ರಯತ್ನದ ಫಲವಾಗಿ 'ಜಯಕರ್ನಾಟಕ' ಮಾಲೆಯಿಂದ 'ಗರತಿಯ ಹಾಡು,' 'ಜೀವನ ಸಂಗೀತ,' 'ಮಲ್ಲಿಗೆ ದಂಡೆ' ಎಂಬ ಮೂರು ಉತ್ತಮ ಸಂಕಲನಗಳು ಕನ್ನಡ ಸಾಹಿತ್ಯಕ್ಕೆ ಮೀಸಲಾದುವು. ಶ್ರೀ ಮಧುರಚೆನ್ನ, ಬೇಂದ್ರೆ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಬಿ.ಎಮ್. ಶ್ರೀಕಂಠಯ್ಯ, ದೇವುಡು, ಬೆಟಗೆರಿ ಕೃಷ್ಣಶರ್ಮ, ಗೊರೂರು ರಾಮಸ್ವಾಮಿ ಅಯ್ಯಂಗಾರ್ ಮೊದಲಾದವರು ಜಾನಪದ ಸಾಹಿತ್ಯದ ಅಮೌಲ್ಯ ವಿಮರ್ಶೆಗಳನ್ನು ಬಿಡಿ ಲೇಖನಗಳಲ್ಲಿ ಜನತೆಯ ಮುಂದೆ ಇಡುತ್ತ ಬಂದರು. ಜಾನಪದ ಸಾಹಿತ್ಯವು ಜನಜೀವನದ ರಮ್ಯಚಿತ್ರ; ಜನಜೀವನ ರಸವಾಣಿ ಆದುದರಿಂದ ಸಹಜವೇ ಜನರಲ್ಲಿ ಆಸಕ್ತಿ ಹೆಚ್ಚಿ ಅದರ ಸಂಕಲನ ಕಾರ್ಯವು ಅಖಿಲ ಕರ್ನಾಟಕದಲ್ಲಿ ಬಲುಭರದಿಂದ ಸಾಗಿತು. ಇದರ ಪರಿಣಾಮವಾಗಿ ಬಿ.ಎನ್. ರಂಗಸ್ವಾಮಿ ಅವರ 'ಹಳ್ಳಿಯ ಹಾಡುಗಳು,' 'ಹಳ್ಳಿಯ ಪದಗಳು,' ಎಲ್. ಗುಂಡಪ್ಪ ಅವರ 'ನಾಡಪದಗಳು' ಅಲ್ಲದೆ ಅನೇಕ ಚಿಕ್ಕ ಸಂಕಲನಗಳು ಬೆಳಕಿಗೆ ಬಂದುವು. ಇವೆಲ್ಲವುಗಳನ್ನು ಪರಿಶೀಲಿಸಿ ಬರೆದ ಶ್ರೀ ದೇವುಡು ಅವರ 'ಕರ್ನಾಟಕ ಸಂಸ್ಕೃತಿ,' ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರರ 'ಹಳ್ಳಿಯ ಬಾಳು' ಎಂಬ ಎರಡು ವಿಮರ್ಶೆ ಗ್ರಂಥಗಳೂ ಬೆಳಕಿಗೆ ಬಂದುವು. ಅವು ಕನ್ನಡಿಗರ ಮೆಚ್ಚುಗೆಯನ್ನು ಪಡೆದಿವೆ.

ಅಪಾರವಾದ ಜಾನಪದ ಸಾಹಿತ್ಯದಲ್ಲಿ ಈಗಾಗಿರುವ ಕೆಲಸವು ತೀರ ಕಡಿಮೆಯೆಂದೇ ಹೇಳಬಹುದು. ಉತ್ತರ ಕರ್ನಾಟಕದಲ್ಲಿ ಹಲಸಂಗಿ ಗೆಳೆಯರ ಗುಂಪಿನವರು ಮಾಡಿದ ಕೆಲಸದ ಹೊರತಾಗಿ ಜಾನಪದ ಸಾಹಿತ್ಯ ಸಂಕಲನವು ಮುಂದುವರಿದಂತೆ ಕಂಡುಬರುವುದಿಲ್ಲ. ಅವರ ಸಂಕಲನಗಳು ಬಹಳವಾಗಿ ಬಿಡಿಪದ್ಯಗಳು, ಲಾವಣಿಗಳು ಹಾಗೂ ಹಲಕೆಲವು ಹಾಡುಗಳು. ಅವರು ದೊಡ್ಡ ಹಾಡುಗಳನ್ನು ಸಂಗ್ರಹಿಸುವ ಗೋಜಿಗೆ ಹೋದಂತೆ ಕಂಡುಬರುವುದಿಲ್ಲ. ಸಂಗ್ರಹವು ಎಲ್ಲ ಪ್ರಕಾರದ ಹಾಡುಗಳನ್ನೊಳಗೊಂಡು ಪರಿಪೂರ್ತಿಯಾಗಿಲ್ಲ. ದೊಡ್ಡ ಹಾಡುಗಳ ಕೊರತೆಯು ಕಂಡುಬರುವುದು. ಆ ಕೊರತೆಯನ್ನು ತುಂಬಲು ಪ್ರಯತ್ನ ಮಾಡಲಾಗಿದೆ.

ಜಾನಪದ ಸಾಹಿತ್ಯದಲ್ಲಿ ನನಗೆ ಅಭಿರುಚಿ ಹುಟ್ಟಲು ನನ್ನ ತಾಯಿತಂದೆಗಳೇ ಮೂಲಕಾರಣ. ನನ್ನ ತೀರ್ಥರೂಪರು ನೂರೊಂದು ಶಿವಶರಣರ ಅಮೌಲ್ಯವಾದ ಹಂತಿಯ ಕಥನ ಕವನಗಳನ್ನು ಸುಗ್ಗಿಯ ಕಾಲದಲ್ಲಿ ಬೆಳಗು ಹರಿಯುವವರೆಗೂ ಬಲುಹುಮ್ಮಸದಿಂದ ಕೋಚೆತ್ತಿ ಹಾಡುತ್ತಿದ್ದರು. ಅವುಗಳ ನಿರರ್ಗಳ ಶೈಲಿ, ಕಥೆಯ ಬೆಡಗು, ರಸಪಾಕ, ಮಾರ್ದವತೆ, ನವೀನತೆ, ಮೊದಲಾದುವು ನನ್ನ ಮನವನ್ನು ಸೆಳೆಯಲು ಅವುಗಳ ಮಹತ್ವವನ್ನರಿತು ಬಿಡುವು ದೊರೆತಾಗ ಕಲೆಹಾಕುತ್ತ ಬಂದೆ. ನನ್ನ ತಂದೆಯು ಹಂತಿಯಲ್ಲಿ ಹಾಡುವ ಶಿವಶರಣರ ಹಾಡುಗಳನ್ನು ತಾಯಿಯು ತನ್ನ ಮೂವರು ಗೆಳತಿಯರೊಡನೆ ಅನೇಕ ಧಾಟಿಗಳಲ್ಲಿ ಶಿವಸೊಲ್ಲುಗಳನ್ನು ಹಾಕಿ ಶ್ರಾವಣ ಮಾಸದಲ್ಲಿ ಹಾಡುತ್ತ ಬಂದಿದ್ದಾರೆ. ಅಲ್ಲದೆ ಅವರು ಮಹಾಭಾರತ, ರಾಮಾಯಣ, ಮಳೆರಾಜನ ಹಾಡು, ಶಿವಶರಣೆ ಚೆನ್ನಮ್ಮನ ಹಾಡು, ಗುಣಸಾಗರಿಯ ಹಾಡು, ರಡ್ಡೇರ ಅವ್ವಣ್ಣೆವ್ವನ ಹಾಡು–ಇವೇ ಮೊದಲಾದ ದೊಡ್ಡ ಹಾಡುಗಳನ್ನೂ ಹಾಡುತ್ತಾರೆ. ಇವರನ್ನು ಕುರಿತು ಈ ಗ್ರಂಥದ ಮೂರನೆಯ ಭಾಗದಲ್ಲಿ ಚರ್ಚಿಸಲಾಗಿದೆ. ಈ ಹಾಡುಗಳನ್ನು ಹಾಡುವ ರೀತಿಯೂ, ಅವುಗಳಲ್ಲಿಯ ಕನ್ನಡತನವೂ, ನವೀನತೆಯೂ, ಸೊಗಸೂ, ಮೊದಲಾದವು ನನ್ನ ಮನಸ್ಸನ್ನು ಹಿಡಿಯಲು ಈ ದೊಡ್ಡ ಹಾಡುಗಳನ್ನು ಸಂಕಲನ ಮಾಡಲು ಉದ್ಯುಕ್ತನಾದೆ. ಸಂಕಲನದ ಅಭಿರುಚಿಯು ದಿನದಿನಕ್ಕೆ ತುಂಬಲು ಅದು ನನ್ನ ನಿತ್ಯದ ಕೆಲಸವೇ ಆಯಿತು. ಕಳೆದ ಐದಾರು ವರುಷಗಳಿಂದ ಸಮಯ ಸಿಕ್ಕಾಗ ಪಟ್ಟಣ, ಹಳ್ಳಿ ಎಂಬ ಭಿನ್ನಭಾವವಿಡದೆ ಈ ಹಾಡುಗಳನ್ನು ಸಂಕಲನಮಾಡಲು ಅಲೆದಾಡ ಹತ್ತಿದೆ. ಅವುಗಳನ್ನು ಅಭ್ಯಾಸಿಸಿ ಅನೇಕ ಮಹತ್ವದ ಸಂಗತಿಗಳನ್ನು ಅರಿತುಕೊಂಡು ಜನತೆಯ ಮುಂದೆ ಇಡಬೇಕೆಂಬ ಕುತೂಹಲವಾಗಲು ಮಾಡಿದ ಪ್ರಯತ್ನವೇ ಈ 'ಕನ್ನಡ ಜಾನಪದ ಗೀತೆಗಳು' ಎಂಬ ಮಹಾಗ್ರಂಥ. ಇದರಲ್ಲಿ ಉತ್ತರ ಕರ್ನಾಟಕದ ಜನಪದ ಜೀವನವನ್ನು ನೈಜರೀತಿಯಲ್ಲಿ ಚಿತ್ರಿಸಲಾಗಿದೆ.

ಈ ಜಾನಪದ ಹಾಡುಗಳನ್ನು ಮರೇಗುದ್ದಿ (ಜಮಖಂಡಿ), ಗಲಗಲಿ, ನಾಗರಾಳ, ಹಲಗಲಿ, ಬಾಗಲಕೋಟೆ, ಸಂಗಮ, ತಾಳೀಕೋಟೆ, ಮಮದಾಪುರ, ಬಬಲೇಶ್ವರ ಈ ಊರುಗಳಲ್ಲಿಯೂ, ಕೆರೂರು, ನರಗುಂದ, ನವಲಗುಂದ, ಶೆಲವಡಿ, ಬದಾಮಿ, ಜಾಲೀಹಾಳ, ನರೇಗಲ್ಲು, ಮುಳಗುಂದ ಈ ಊರುಗಳಲ್ಲಿಯೂ, ತೊರಗಲ್ಲು, ಕಡಕೋಳ, ಮುರಗೋಡ, ಬೈಲಹೊಂಗಲ, ವಡಗಾವಿ (ಬೆಳಗಾವಿ), ಗೋಕಾವಿ ಈ ಊರುಗಳಲ್ಲಿಯೂ, ಧಾರವಾಡ, ಹುಬ್ಬಳ್ಳಿ ಮತ್ತು ಸುತ್ತುಮುತ್ತಲಿನ ಹಳ್ಳಿಗಳಲ್ಲಿಯೂ ಹೆಣ್ಣುಮಕ್ಕಳು ಹಾಡುವುದನ್ನು ಕೇಳಿಕೊಂಡು

ಬೇಕಾದುವುಗಳನ್ನು ಸಂಕಲಿಸಲಾಗಿದೆ. ಈ ಸಂಕಲನ ಕಾರ್ಯದಲ್ಲಿ ನನಗೆ ಸಹಾಯಮಾಡಿದ ಆಯಾ ಊರ ಹೆಣ್ಣು ಮಕ್ಕಳಿಗೂ, ಗಂಡುಮಕ್ಕಳಿಗೂ ಹೃತ್ಪೂರ್ವಕ ಧನ್ಯವಾದಗಳನ್ನರ್ಪಿಸದಿರಲಾರೆ.

ಬಹುತರವಾಗಿ ಎಲ್ಲ ಭಾಗಗಳಲ್ಲಿ ಹಲಕೆಲವು ಹಾಡುಗಳನ್ನು ಹಾಡುವ ರೀತಿಯು ಹೆಚ್ಚು ಕಡಿಮೆ ಒಂದೇ ಕಂಡುಬರುವುದು. ಹಲಕೆಲವು ಸ್ಥಾನಿಕ ಕಲ್ಪನೆಗಳನ್ನು ಬಿಟ್ಟರೆ ಹಾಡುಗಳು ಕಥಾಸಾರದಲ್ಲಿ ಒಂದೇ ಇದ್ದಂತೆ ಅನಿಸದಿರವು.

ದೊಡ್ಡ ಹಾಡುಗಳನ್ನು ಸಂಕಲನ ಮಾಡುವುದು ಬಲು ಕಷ್ಟದಾಯಕ ಕೆಲಸ. ಅದಕ್ಕೆ ತಾಳ್ಮೆಯು ಬೇಕು. ಹಾಡುಗಳನ್ನು ಹಾಡುವವರು ವಿಶೇಷವಾಗಿ ಅವುಗಳನ್ನು ಬಾಯಪಠನ ಮಾಡಿರುವುದೇ ಹೆಚ್ಚು. ಹಾಡುವಾಗ ಒಂದು ನುಡಿಯು ಮರೆತರೆ ಅವರಿಗೆ ಇಡೀ ಹಾಡು ನೆನಪಾಗದೆ ಅಷ್ಟಕ್ಕೇ ನಿಂತುಬಿಡುವರು. ಹಲ ಕೆಲವು ಹೆಣ್ಣುಮಕ್ಕಳು ಸ್ವತಃ ಕವಿಗಳೇ ಇರುವರು. ಅವರಿಗೆ ಕಥಾಸಾರವು ತಿಳಿದರೆ ಸಾಕು ಆ ಕಥೆಯನ್ನು ತಮಗೆ ಗೊತ್ತುಳ್ಳ ಧಾಟಿಯೊಡನೆ ಪಲ್ಲವಿಗಳನ್ನು ಕೂಡಿಸಿ ಹಾಡ ಹತ್ತಿದರೆಂದರೆ ಅವರ ಪ್ರತಿಭೆಗೆ ತಡೆಯೇ ಇಲ್ಲ. ಇಂಥವರ ಬಾಯಿಂದ ಬಂದ ಹಾಡುಗಳು ಇಂದು ಒಂದು ರೂಪವಾದರೆ ನಾಳೆ ಅವರ ಬಾಯೊಳಗಿಂದ ಬೇರೆಯೇ ಆಗುವುದು ಸಹಜ. ಹೀಗಾಗಿ ಸಂಕಲನ ಕಾರ್ಯವು ಬಹಳೇ ಕಠಿಣವಾಗಿ ಅನೇಕ ಎಡರುತೊಡರುಗಳ ಮೂಲಕ ಕಲೆಹಾಕುವುದನ್ನು ನಿಲ್ಲಿಸಬೇಕಾಗುವುದು. ನಮ್ಮ ಹಳ್ಳಿಗರಿಗೆ ಇಂದಿನ ದುಷ್ಕಾಲ ದಿನಗಳಲ್ಲಿ ಹೊಟ್ಟೆಯ ಪ್ರಶ್ನೆಯು ಜೀವನದ ಒಂದು ದೊಡ್ಡ ಸಮಸ್ಯೆಯಾಗಿದೆ. ಆದುದರಿಂದ ಹಲಕೆಲವು ಹೆಣ್ಣುಮಕ್ಕಳು ಹಾಡು ಬಂದರೂ ಹಾಡಲು ಒಪ್ಪುವದಿಲ್ಲ. ಇಂತಹ ಪ್ರಸಂಗದಲ್ಲಿ ಸಂಕಲನ ಮಾಡುವುದೇ ದುಸ್ತರವಾಗುವುದು. ಒಮ್ಮೊಮ್ಮೆ ಸಂಕಲನಕಾರರು ಅವರು ಬೇಡಿದಷ್ಟು ಹಣತೆತ್ತು ಹಾಡಿಸುವ ಪ್ರಸಂಗವೂ ಬರುವುದು. ಹೀಗೆ ಸಂಕಲನಕಾರರು ಅನೇಕತರದ ಅನುಭವಗಳನ್ನು ಅನುಭವಿಸಬೇಕಾಗುವುದು. ಬಂದದ್ದಕ್ಕೆ ಟೊಂಕಕಟ್ಟಿ ನಿಂತು ನಮ್ಮ ಆಯುಷ್ಯವನ್ನೇ ಮೀಸಲಾಗಿಟ್ಟರೂ ಈ ಹಾಡುಗಳನ್ನು ಸಂಕಲನ ಮಾಡುವುದು ಅಸಾಧ್ಯವಾಗಿಬಿಡುವುದು.

ನಾನು ಈಗ ಸಂಕಲನ ಮಾಡಿರುವ ಬಹುಭಾಗವು ನನ್ನ ತಾಯಿತಂದೆಗಳಿಂದ ಮತ್ತು ನನ್ನ ತಾಯಿಯ ಮೂವರು ಗೆಳತಿಯರಿಂದ. ಮಹಾಭಾರತ, ರಾಮಾಯಣ, ಶಿವಶರಣರ ಹಂತಿಯ ಹಾಡುಗಳನ್ನು ಪ್ರತ್ಯೇಕವಾಗಿ ಸಂಕಲಿಸಲಾಗಿದೆ. ನಾಲ್ಕು ಮುಗ್ಧ ಶಿವಶರಣರ ಹಂತಿಯ ಹಾಡುಗಳನ್ನು 'ನಾಲ್ಕು ನಾಡ ಪದಗಳು' ಎಂಬ ಪುಸ್ತಕ ರೂಪದಲ್ಲಿ ಈಗಾಗಲೇ ಬೆಳಕಿಗೆ ತಂದಿದೆ. 'ಹೋಳಿಯ ಹಾಡುಗಳು' ಎಂಬ ಬಿಡಿ ಪದ್ಯಗಳನ್ನೂ, ದುಂದುಮಿಗಳನ್ನು ಬೇರೆ ಸಂಕಲಿಸಲಾಗಿದೆ. ಕಂಬಿಯ ಹಾಡುಗಳು, ಸಂಪ್ರದಾಯ ಹಾಡುಗಳು, ಸೋಬಾನ ಹಾಡುಗಳು, ಮದುವೆಯ ಹಾಡುಗಳು, ಬೀಸುವ ಕುಟ್ಟುವ ಹಾಡುಗಳು ಇನ್ನಿತರ ಕೋಲುಪದಗಳು, ಹಂತಿಯ ಹಾಡುಗಳು ಇವೇ ಮೊದಲಾದ ದೊಡ್ಡ ಹಾಡುಗಳನ್ನು ಒಂದೆಡೆಗೆ ಶೇಖರಿಸಿ ಆ ಸಂಕಲನ ಗುಚ್ಛಕ್ಕೆ 'ಜಾನಪದ ಸಂಭಾರ'* ಎಂದು ಕರೆದಿದೆ. ಶಿವಶರಣರ ಹಂತಿಯ ಹಾಡುಗಳಲ್ಲಿ ಅವರವರ ಚರಿತಾನುಸಾರವಾಗಿ ಹಾಡುಗಳನ್ನು ಕೂಡಿಸಿ 'ಕಾಯಕ ಗೀತೆಗಳು,' 'ಸಮರಸ ಗೀತೆಗಳು,' 'ಮೂರು ನಾಡಪದಗಳು' ಎಂದು ಅವುಗಳನ್ನು ಕರೆಯಲಾಗಿದೆ. ಇವಾವೂ ಇನ್ನೂ ಅಚ್ಚಾಗಿಲ್ಲ. ಈ ಎಲ್ಲ ಹಾಡುಗಳನ್ನು ಬೇಕಾದಲ್ಲಿ ಈ ಗ್ರಂಥದ ತುಂಬೆಲ್ಲ ಬಳಸಿಕೊಳ್ಳಲಾಗಿದೆ.

ಇವು ಅಲ್ಲದೆ (ಬೆಲ್ಲದ) ಬಾಗೇವಾಡಿಯ ಗೋಪಾಳ, ಮಹಾಲಿಂಗಪುರದ ಕುಬ್ಬಣ್ಣ, ಬಾಗೇವಾಡಿಯ ಬಸಪ್ಪ, ಅವರಾದಿಯ ಮಲ್ಲಪ್ಪ, ಹುಲಕುಂದದ ಬಸಪ್ಪ, ಮೊದಲಾದ ಹಾಡುಗಾರರ ಹಾಗೂ ಕೆರೂರ (ಬದಾಮಿ) ನೀಲಗಾರ ಮಾರ್ತಂಡಪ್ಪ ಮೊದಲಾದ ಹೋಳಿಯ ಪದಗಾರರ ಜಾನಪದ ಗೀತೆಗಳು ಉತ್ತರ ಕರ್ನಾಟಕದ ಆಯಾ ಭಾಗಗಳಲ್ಲಿ ಬಹಳ ಪ್ರಸಿದ್ಧವಾಗಿವೆ. ಆದರೂ ಉತ್ತರ ಕರ್ನಾಟಕದ ಜನಜೀವನವನ್ನು ಪರಿಪೂರ್ಣವಾಗಿ ಹೇಳುವ ಗ್ರಂಥಗಳೇ ಇಲ್ಲ. ಆ ಕೊರತೆಯನ್ನು ಪೂರ್ತಿಮಾಡುವ ಉದ್ದೇಶದಿಂದ ಜಾನಪದ ಸಾಹಿತ್ಯದಲ್ಲಿ ಅಡಕವಾದ ಅನೇಕ ಮಹತ್ವದ ಸಂಗತಿಗಳನ್ನು ಜನತೆಯ ಮುಂದೆ ಇಡಲಿಕ್ಕೂ ಜಾನಪದ ಮಹಾಭಾರತ, ರಾಮಾಯಣ, ಶಿವಶರಣರ ಹಂತಿಯ ಹಾಡು ಮೊದಲಾದ ದೊಡ್ಡ ಹಾಡುಗಳ ಅವಶ್ಯಕತೆಯನ್ನು ತಿಳಿಸಲಿಕ್ಕೂ ಈ 'ಕನ್ನಡ ಜಾನಪದ ಗೀತೆಗಳು' ಎಂಬ ವಿಮರ್ಶಾತ್ಮಕ ಗ್ರಂಥವನ್ನು ಬರೆದು ಬೆಳಕಿಗೆ ತರಲು ಪ್ರಯತ್ನಿಸಿದೆ. ಈ ಗ್ರಂಥವು ಉತ್ತರ ಕರ್ನಾಟಕದ ಜನಜೀವನವನ್ನು 'ಚಾಚೂ' ಬಿಡದೆ ಚಿತ್ರಿಸುವುದೆಂಬ ಆತ್ಮಭರವಸೆಯಿದೆ. ಇದನ್ನು ಬರೆಯಲು ಮಾರ್ಗದರ್ಶಕರಾದ ಗುರುವರ್ಯ ಪ್ರೊ. ಕೆ.ಜಿ. ಕುಂದಣಗಾರ ಅವರಿಗೆ ನನ್ನ ಭಕ್ತಿಯ ಅನಂತ ಪೂಜ್ಯ ವಂದನೆಗಳು. ಮೇಲೆ ಕಾಣಿಸಿದ ಸಂಕಲನಗಳಿಂದ ಹಲ ಕೆಲವು ಪದ್ಯಗಳನ್ನು ಸಂದರ್ಭಕ್ಕೆ ಬೇಕಾದಲ್ಲಿ ಈ ಗ್ರಂಥದೊಳಗೆ ಉದಹರಿಸಲಾಗಿದೆ. ಆದುದರಿಂದ ಆ ಎಲ್ಲ ಸಂಕಲನಗಾರರಿಗೆ ನನ್ನ ಕೃತಜ್ಞತೆಗಳನ್ನು ಅರ್ಪಿಸದಿರಲಾರೆ.

ಜಾನಪದಕೆ ಜಯವಾಗಲಿ

ಧಾರವಾಡ

ಬಿ.ಎಸ್. ಗದ್ದಗಿಮಠ

ಜನೆವರಿ, ೧೯೫೦

* ಅಚ್ಚಿನಲ್ಲಿದೆ

ಜಾನಪದ ಸಂದೇಶ

ಹೋಳಿಯಾಡದ ನಾಡು, ನಾಳೆನದೆ ಕಾಡಾತೊ
ಗೋಳಾತೊ ಜನಕ ಮೂಲಾತೋ। ಮಳೆಹೋಗಿ
ಹಾಳಾತೊ ಪಿಡಗೆದ್ದು ದಿನದಿನಕೊ ॥

ದೈವ ದೇವರ ಹಂತಿ, ಭವದೊಳಗೆ ನಮ್ಮಂತಿ
ತೇದುಂಡ ಹಂತಿ ನಂಬಾಳು । ಒಕ್ಕಲಿಗ
ಕೋದತೆನಿ ಹಂತಿ ಜನುಮಕೊ ॥

ಗಂಡು ಹೊಡಿಯಲಿ ಭೂಮಿ, ಹೆಣ್ಣು ಹೂಡಲಿ ಒಲೆಯ
ಬಣ್ಣ ತೊಟ್ಟೀಲ ತೂಗಲಿ । ಶಿವರಾಯ
ಗಿಣ್ಣ ನಿನಗೆಡೆಯೊ ಕೈಮುಗಿದು ॥

–ಜಾ.ಸಂ.

ಗ್ರಂಥದಲ್ಲಿ ಬಂದ ಸಂಕೇತಗಳು

ಇ.ಬೊ.	ಇಳಿಹಾಳ ಬೊಮ್ಮಯ್ಯ
ಕುಂ.ಗುಂ.	ಕುಂಬಾರ ಗುಂಡಯ್ಯ
ಕಿ.ಬೊ.	ಕಿನ್ನರಿ ಬೊಮ್ಮಯ್ಯ
ಕಂ.ಹಾ.	ಕಂಬಿಯ ಹಾಡುಗಳು
ಕೋ.ಕೊ	ಕೋಳೂರ ಕೊಡಗೂಸು
ಗ.ಹಾ	ಗರತಿಯ ಹಾಡು
ಜಾ.ಚೌ.	ಜಾತಿಗರ ಚೌಡಯ್ಯ
ಜಾ.ಮ.ಬಾ.ಜೋ.ಸಂ.	ಜಾನಪದ ಮಹಾಭಾರತ–ಜೋಗಿಯ ಸಂದು
ಜಾ.ರಾ.ಲ.ಕು.ಸಂ	ಜಾನಪದ ರಾಮಾಯಣ ಲವಕುಶರ ಸಂದು
ಜಾ.ಸಂ.	ಜಾನಪದ ಸಂಭಾರ
ಜೀ.ಸಂ.	ಜೀವನ ಸಂಗೀತ
ನೇ–ಅ.	ನೇಗೆಯ ಅಮುಗಯ್ಯ
ಬಿ.ಮ.	ಬಿಜ್ಜ ಮಹಾದೇವಿ
ಬೇ.ಕ.	ಬೇಡರ ಕನ್ನಯ್ಯ
ಮ.ದಂ.	ಮಲ್ಲಿಗೆ ದಂಡೆ
ಮ.ಮಾ.	ಮಡಿವಾಳ ಮಾಚಯ್ಯ
ಮಾ.ಚೆ.	ಮಾದರ ಚೆನ್ನಯ್ಯ
ಮೇ.ಕೇ.	ಮೇದಾರ ಕೇತಯ್ಯ
ಹ.ಪ.	ಹಳ್ಳಿಯ ಪದಗಳು
ಹೂ.ಮಾ.	ಹೂಗಾರ ಮಾದಯ್ಯ
ಹ.ಹಾ.	ಹಳ್ಳಿಯ ಹಾಡುಗಳು
ಹೋ.ಹಾ.	ಹೋಳಿಯ ಹಾಡುಗಳು

ಪರಿವಿಡಿ

ಭಾಗ–೧

ಹಳ್ಳಿಗರ ಪ್ರಪಂಚ ದರ್ಶನ

ಜನ ಜೀವನ

ಪರಿವಿಡಿ

ಜಾನಪದ ಸಾಹಿತ್ಯ

ಜನಾಂಗದ ಸಂಸ್ಕೃತಿಯನ್ನು ವಿಶ್ವತೋಮುಖವಾಗಿ ಸಂಪೂರ್ಣ ಅಭ್ಯಾಸ ಮಾಡುವ ಮಾನವನು ಜನಾಂಗದ ಜೀವನವನ್ನು ಬದಿಗಿಡಲಾರ. ಜಗತ್ತಿನಲ್ಲಿ ಜನಾಂಗವು ತಲೆಯೆತ್ತಿದಂದಿನಿಂದ ಇಂದಿನವರೆಗೆ ಎಲ್ಲ ದೇಶಗಳಲ್ಲಿಯೂ ಕಾಲ ಕಾಲಕ್ಕೆ ಜನಾಂಗಗಳಲ್ಲಿ ಜೀವನ ಆಂದೋಲನಗಳೆದ್ದು ತೆರೆತೆರೆಗಳಲ್ಲಿ ಈಸಿ ಮಾನವನು ಇಂದಿನ ಸ್ಥಿತಿಗೆ ಬಂದು ನಿಂತಿದ್ದಾನೆ. ಜನಾಂಗಗಳ ಸಂಸ್ಕೃತಿಯನ್ನು ಅರಿಯಲು ಸಂಶೋಧಕರು ಯತ್ನಿಸಿದ್ದಾರೆ; ಯತ್ನಿಸುತ್ತಲಿದ್ದಾರೆ. ಅವರು ಕೈಕೊಂಡ ಅನೇಕ ಸಾಧನಗಳಲ್ಲಿ ಜಾನಪದ ಸಾಹಿತ್ಯ (Folklore) ವೇ ಮುಖ್ಯವೆಂದು ಹೇಳಬಹುದು. ಈ ಜಾನಪದ ಸಾಹಿತ್ಯದ ಸ್ಥಿತಿಗತಿಯನ್ನು ವಿಶದವಾಗಿ ವಿಚಾರಿಸುವುದೇ ಇಲ್ಲಿ ನಮ್ಮ ಮುಖ್ಯ ಉದ್ದೇಶ.

ಪಾಶ್ಚಿಮಾತ್ಯರಲ್ಲಿ

ಜಾನಪದ ಸಾಹಿತ್ಯವನ್ನು ಕುರಿತು ವಿಮರ್ಶಿಸುವಾಗ ಇತರರು ಈ ವಿಚಾರವಾಗಿ ಏನೇನು ಹೇಳಿರುವುರೆಂಬುದನ್ನು ವಿಚಾರಿಸುವುದು ಅವಶ್ಯಕವು. ಅನೇಕರು ಅನೇಕ ರೀತಿಯಿಂದ ವಿಮರ್ಶಿಸಿ ಇದರ ವ್ಯಾಖ್ಯೆಯನ್ನು ಹೇಳ ಹೋಗಿದ್ದಾರೆ. 'ಧರ್ಮನೀತಿ ವಿಶ್ವಕೋಶ'ದ (Encyclopeadia of Religion and Ethics) ಸಂಪಾದಕರಾದ 'ಜೇಮ್ಸ ಹೆಸ್ಟಿಂಗ್ಸರು' ``Folklore is the traditional fact of prehistoric life in contradiction to history, which is the recorded fact of State or National life."[1] ಎಂದು ಹೇಳಿದ್ದಾರೆ. ಅದೇ ಗ್ರಂಥದಲ್ಲಿ ಅದರ ಮಹತ್ವವನ್ನು ಕುರಿತು ಬಲು ವಿಶದವಾಗಿ, ಚರ್ಚಿಸಿದ್ದಾರೆ. "And very often, where the historical record is faulty, the traditional record may be relied on to fill up the vacuum. Myths are not created out of nothing.... Myth is definitely and distinctly not a fiction." ಇದಲ್ಲದೆ "Folk tales are the myths of the race. Myths are the accounts which the science of prescientific ages gave of phenomena which could not be understood except by such accounts as early knowledge and observation would allow."[2] ಐತಿಹಾಸಿಕ ಸಂಗತಿಗಳು ಜನಾಂಗದ ಸ್ಥಿತಿಗತಿಗಳನ್ನು ಹೇಳಲು ತಪ್ಪಿದರೆ ಸಂಪ್ರದಾಯಗಳು ಅವುಗಳನ್ನು ಹೇಳಿ ಇಲ್ಲಿಯವರೆಗೆ ತುಂಬುತ್ತ ಬಂದಿವೆ. ಜಾನಪದ ಕಥೆಗಳೇ ಜನಾಂಗದ ಪೌರಾಣಿಕ ಕಥೆಗಳು. ಹಿಂದಿನ ಯುಗದಲ್ಲಿ ವಿಜ್ಞಾನವು ಹೇಳಲು ಅಸಾಧ್ಯವಾದ ಸೃಷ್ಟಿಯ ಅನೇಕ ಸಂಗತಿಗಳನ್ನು ಪೌರಾಣಿಕ ಕಥೆಗಳು ಹೇಳಲು ಯತ್ನಿಸಿವೆ. ಜಾನಪದ ಸಾಹಿತ್ಯದ ವಿಶಾಲತೆಯನ್ನು ವರ್ಣಿಸುತ್ತ ಈಗಿನ ಜನರು ಜಾನಪದ–ಸತ್ವಸಾರವನ್ನು ಅರಿಯದೆ ಅಲಕ್ಷಮಾಡಿದ್ದಕ್ಕೆ ಅದೇ ಗ್ರಂಥಕಾರರು ಕಾರಣಗಳನ್ನು ಹೇಳಿದ್ದಾರೆ. "But because modern scholarship is out of touch with primitive science or with religious accounts of forgotten ritual, it does not do to relegate the whole subject to the waste paper basket. Scholars should frankly confess on inability to explain and leave the subject there perhaps for more sucessful efforts by future generation."[3] ಹೀಗೆಂದು ಅತಿ ಗೌರವವಾಗಿ ಆಶಾಭರಿತ ಮಾತುಗಳನ್ನು ಆಡಿದ್ದಾರೆ.

ಜಾನಪದ ಸಾಹಿತ್ಯವೆಂಬ ಶಬ್ದವು ನಮಗೆ ಪಶ್ಚಿಮದಿಂದ ಬಂದದ್ದು. ಶ್ರೀ ಬಾಲ್ಡವಿನ್ನರು (Mr. Baldwin) ತತ್ತ್ವಜ್ಞಾನ ಮತ್ತು ಮನಃಶಾಸ್ತ್ರಕೋಶದಲ್ಲಿ (Dictionary of philosophey and psychology) 'ಜಾನಪದ ಸಾಹಿತ್ಯ' (Folklore) ಈ ಶಬ್ದವು ಇಂಗ್ಲಿಷ ಶಬ್ದವಿದ್ದು ಎಲ್ಲ ಭಾಷೆಗಳಲ್ಲಿ ಉಪಯೋಗಿಸಲ್ಪಟ್ಟಿದೆ. (The English word used in all the other languages). "The word was invented by W.J. Thomas (1846), from folk+lore after analogy with German compounds. In all civilizations there is a considerable part of the population whose habits of thoughts are relatively unaffected by the advances of culture and who retain by tradition and conservatism of custom, something of the mental and material life of by gone perieods of developments."[4] ಎಂದು ವಿಶದವಾಗಿ ಹೇಳಿದ್ದಾರೆ. ಜಿ.ಎಲ್. ಗೊಮ್ಮೆ (G.L. Gomme) ಎಂಬ ಇಂಗ್ಲಿಷ ಜಾನಪದ ಸಾಹಿತಿಯು ತನ್ನ ಪ್ರಸಿದ್ಧ ಪುಸ್ತಕ (Hand book of Floklore)ದಲ್ಲಿ ಅದರ ವೈಶಿಷ್ಟ್ಯಗಳನ್ನೂ, ವಿಶಾಲತೆಯನ್ನೂ ಸುದೀರ್ಘವಾಗಿ ಚರ್ಚಿಸಿ ಕಡೆಗೆ ಜಾನಪದ ಸಾಹಿತ್ಯವೆಂದರೆ "The comparison and identification of the servivals in modern ages of archaic belief, customs, and traditions." ಎಂದು ಹೇಳಿದ್ದಾನೆ.

---

1. Encyclopeatic of Religion and Ethics, p.p. 57.
2. Encyclopeatic of Religion and Ethics, p.p. 58.
3. Dictionary of philosophy and psychology - Flok lore p.p. 387.
4. Dictionary of philosophy and psychology - Flok lore p.p. 387.

ಜಾನಪದ-ಸಾಹಿತ್ಯವು ಯಾವ ಜನಾಂಗದಲ್ಲಿಯೂ ಗ್ರಂಥಸ್ತವಾಗಲಿಲ್ಲ. ಅದು ಜನರ ಬಾಯಿಂದ ಬಂದುದು. ಅನೇಕ ಶತಮಾನಗಳವರೆಗೆ ಅದನ್ನು ಯಾರೂ ಬರೆದಿಡುವ ಗೋಜಿಗೆ ಹೋಗಲಿಲ್ಲ. ಪಂಡಿತರಂತೂ ಅವಾಚ್ಯವೆಂದು ಅದನ್ನು ಲಕ್ಷಕ್ಕೇ ತರಲಿಲ್ಲ. ಆದರೆ ಕೊನೆಯವರೆಗೆ ಇದೇ ವಾತಾವರಣ ಉಳಿದಂತೆ ಕಂಡುಬರುವುದಿಲ್ಲ. ೧೮ನೆಯ ಶತಮಾನದ ಕೊನೆಯ ಭಾಗದಲ್ಲಿ ಇಂಗ್ಲೆಂಡ್‌ದಲ್ಲಿ ಜಾನಪದ ಸಾಹಿತ್ಯವನ್ನು ಸಂಕಲನ ಮಾಡುವುದು ಪ್ರಾರಂಭವಾಯಿತು. ಆಗ ಬಿಶಾಪ್ ಪರ್ಶಿ (Bishop Percy) ಎಂಬವನು ``Reliquiae of English Poetry" ಎಂಬ ಗ್ರಂಥವನ್ನು ಬೆಳಕಿಗೆ ತಂದನು. ಮುಂದೆ ಇದರ ಪ್ರಭಾವವು ವಡ್ಸ್‌ವರ್ಥ, ಶೆಲ್ಲಿ, ಕೀಟ್ಸ್ ಮೊದಲಾದ ಕವಿಗಳ ಮೇಲೆ ತೋರಿ, ಜಾನಪದ ಸಾಹಿತ್ಯವು ಈ ಕವಿಗಳ ಕಾವ್ಯಕ್ಕೆ ಮೂಲಾಧಾರವಾಗಿ ನಿಂತುಕೊಂಡದ್ದು ತಿಳಿದುಬರುವುದು.

ಜಸರಂಡರು (J.J. Jusserand) ತನ್ನ ಪುಸ್ತಕದಲ್ಲಿ ಈ ಜಾನಪದ ಗೀತೆಗಳನ್ನು ಹಾಡುವವ (Minstrels) ಸಂಬಂಧ ಚರ್ಚೆ ಮಾಡಿ ಇಂಗ್ಲೆಂಡ್‌ನಲ್ಲಿ ಇವರ ಅಳಿಗಾಲದ ಕಾರಣಗಳನ್ನು ಹೇಳಿ ಕನಿಕರಪಟ್ಟಿರುವನು. ``Minstrels however, as singers of songs, propagaters of thoughts, tellers of romances were to disappear."[5] ಜಾತ್ರೆ ಮಹೋತ್ಸವಗಳಲ್ಲಿ ಈ ಜನರು ಸರದಾರ, ಸೇನಾಪತಿಗಳ ಮಂದಿರಗಳನ್ನೂ ಅರಸರ ದರಬಾರಗಳನ್ನೂ ಸೇರಿ, ಹಾಡಿ ಮನರಂಜನೆ ಮಾಡುತ್ತಿದ್ದರೆಂದು ಶ್ರೀ ಜಸಂಡರು ಬರೆದಿದ್ದಾರೆ. ಈಗ ಸಹ ಕರ್ನಾಟಕದಲ್ಲಿ ಗೊಂದಲ ಹಾಡುಗಳನ್ನು ಹಾಡುವ ಗೊಂದಲಿಗರು ಈ ತರದ ಜನರನ್ನು ಹೋಲಬಹುದು.

ಇಂಗ್ಲಂಡ, ಅಮೇರಿಕಾ ಮೊದಲಾದ ಪಶ್ಚಿಮ ರಾಷ್ಟ್ರಗಳು ವಿಶ್ವವಿದ್ಯಾಲಯಗಳಲ್ಲಿ ಜಾನಪದ ಸಾಹಿತ್ಯಕ್ಕೆ ಸ್ಥಾನಕೊಟ್ಟಿರುವರು. ಶ್ರೀ ಆರ್.ಎಸ್. ಬ್ಯಾಗ್ಸ (R.S. Baggs) ಅವರು ಭಾಷೆ ಮತ್ತು ಸಾಹಿತ್ಯಾಭ್ಯಾಸ (Studies in languages and literature) ಎಂಬ ಪುಸ್ತಕದ ವಿಶ್ವವಿದ್ಯಾಲಯದಲ್ಲಿ ಜಾನಪದ ಸಾಹಿತ್ಯದ ಬೆಳವಣಿಗೆ ಎಂಬ ಲೇಖನದಲ್ಲಿ ಪದವೀಧರರು ಈ ವಿಷಯವನ್ನು ತಕ್ಕೊಂಡು ಅಭ್ಯಾಸ ಮಾಡುವದನ್ನು ಹೇಳಿ ಕಡೆಗೆ "Only in the field of political propaganda do I anticipate with some anxiety folklore's future growth, although under the guidance of soundly trained government's folklorists it can serve well in the fusion of groups of diverse traditional cultural elements and in unifying and strengthening national consciousness, as well as in stimulating mutual comprehension and amity among nations."[6] ಎಂದು ಹೇಳಿದ್ದಾರೆ.

ಭರತಖಂಡದಲ್ಲಿ

ಎಲ್ಲ ಯುಗಗಳಲ್ಲಿಯೂ ಜಾನಪದ ಸಾಹಿತ್ಯವನ್ನು ಪರಿಹಾಸ್ಯ ಮಾಡಿ ಅದು ಸಾಹಿತ್ಯವಲ್ಲವೆಂದು ಅಲ್ಲಗಳೆದ ಭಾರತೀಯರು ಪಾಶ್ಚಿಮಾತ್ಯರ ಸಾಹಿತ್ಯ ಸಂಪರ್ಕದಿಂದ ಇತ್ತೀಚೆಗೆ, ೨೦ನೆಯ ಶತಮಾನದಲ್ಲಿ ಮನಸ್ಸನ್ನು ಬದಲಾಯಿಸಿ ಜಾನಪದ ಸಾಹಿತ್ಯವನ್ನು ಅಭ್ಯಾಸ ಮಾಡಹತ್ತಿದರು. ಅನೇಕರು ತಮ್ಮ ಸಂಶೋಧನೆಯ ಅನುಭವಗಳನ್ನು ಜನತೆಯ ಮುಂದೆ ಇಟ್ಟಿರುವರು. ಶ್ರೀ ಬಿ.ಕೆ. ಸರಕಾರ ಅವರು ``There has ever been an attempt to govern the folk customs, popular faith, image worship and public festivals by the transcendental conceptions of the divinity of man and transitoriness of this world. The folkore of the Hindus is nothing but the adaptations of their metaphysical culture lore to the instincts and aptitudes of 'the man in the street,' or obversely, the interpretation of the grosses systems of thought and activity with the consceptions of a higher system of life values and life attitudes."[7] ಎಂದು ಬರೆದಿದ್ದಾರೆ. ಪ್ರೊ. ದೇವೇಂದ್ರ ಸತ್ಯಾರ್ಥಿ ಅವರು ಅಸಹಾಯ ಶೂರರಾಗಿ ಇಡೀ ಭರತಖಂಡದ ಜಾನಪದ ಸಾಹಿತ್ಯದ ಅನುಭವವನ್ನು ಕೊಡಲು ಹೋಗಿದ್ದಾರೆ. "Indian folk songs are a great national asset of India. Much of the kernal of the cultural heritage of India lies in them. They are the Elysian shrines of music and poetry with their doors open to the millions of India. Spontaneous self expressions of the people as they are in them we feel the joys and sorrows of the open air life of rural India. They help us to become more intimately acquainted with the people who work hard to obtain the necessaries of daily life.[8] ಇದೇ ಲೇಖನದ ಮತ್ತೊಂದೆಡೆಯಲ್ಲಿ– ``Indian folksongs are India's precious gems of purest ray serene." `The pathos, the fine poetry and the common sense which are embodies in these songs of the people" says Pandit Madan Mohan Malaviya "deserve to be preserved and popularised. I have no doubt that if a proper selection is made of them they will be regarded as a necessary part of the study of poetry at our universities."[9] ಎಂದು ಹೇಳಿ ಭವಿಷ್ಯದ ಬುತ್ತಿಯನ್ನೇ ಭಾರತೀಯರ ಬೆನ್ನಿಗೆ ಕಟ್ಟಿದ್ದಾರೆ.

ಕವಿವರ್ಯ ರವೀಂದ್ರನಾಥ ಟಾಗೂರರು "Folksongs enable us to understand the mind and heart of the people. From similarities in the folksongs of diferent regions we perceive the unity in divercity of human nature throughout India. And if the folksongs of all counties could be collected and compared it would be seen that there was one mind and heart underlying there common to all mankind."[10] ಎಂದು ಬರೆದಿದ್ದಾರೆ.

---

5. "English way fairing life. p.p. 215. by J.J. Jusserand.
6. Studies in languages and literature, p.p. 111 Edited by George R. Coffman.
7. The folklore elements in Indian culture, p.p. 10 by B.K. Sarkar.
8. Modern Review, Vol. 56, p.p. 30.
9. Modern Review, Vol. 56, p.p. 30.
10. Modern Review, Vol. 56, p.p. 266.

ಶ್ರೀ ಕೆ.ಎಮ್. ಮುನ್ಸಿ (K.M. Munsi) ಅವರು "From prehistoric times India possessed a facinating wealth of folklore. Literary men from Bhas downwards have drawn freely upon it, and all literatures, Sanskrit, Prakrit, Apabhramsa old and modern, glisten with its golden threads."[11] ಎಂದು ಹೇಳಿ ಗುಜರಾಥದ ಜಾನಪದ ಸಾಹಿತ್ಯದ ಗ್ರಂಥಸ್ಥತೆಯನ್ನು ವಿಸ್ತಾರವಾಗಿ ಬರೆದಿರುವರು. ಜಾನಪದ ಸಾಹಿತ್ಯವು ವೇದಕಾಲದಲ್ಲಿಯೂ, ರಾಮಾಯಣ ಮಹಾಭಾರತಗಳ ಕಾಲದಲ್ಲಿಯೂ, ಇದ್ದಿಲ್ಲವೆಂದು ಯಾರು ಹೇಳಲ್ಲರು? ಅವು ಮರೆತಿರಬಹುದು. ಅಥವಾ ಬೇರೆ ಬೇರೆ ರೂಪಗಳನ್ನು ಹೊಂದಿ ಜನಪದದ ನಾಲಗೆಯ ಮೇಲೆ ನಲಿಯುತ್ತಿರಬಹುದು. ಇಂದು ನಮಗೆ ಬಂದ ಜಾನಪದ ಸಾಹಿತ್ಯವು ತನ್ನ ಕಾಲಮಾನದ ಜೀವನವನ್ನೇ ಉಸಿರುವುದು. ಜಾನಪದದಲ್ಲಿ ಹಳ್ಳಿಗರ ಬಾಯಿಂದ ಈಗಲೂ ನಾವು ಕೇಳಬಹುದಾದ ಅನೇಕ ಕಥೆಗಳನ್ನು ಸಂಗ್ರಹ ಮಾಡಹೋದರೆ ಜಾನಪದ ಕಥೆಗಳ ಅಮೌಲ್ಯವಾದ ಸಂಗ್ರಹವೇ ಆಗುವುದು. ಇಂದು ನಮಗೆ ದೊರೆಯದ ಗುಣಾಢ್ಯನ "ಬೃಹತ್ ಕಥಾ ಸಂಗ್ರಹವು" ಈ ತೆರದ್ದಿರಬಾರದೇಕೆ? ಎಂಬ ಸಂಶಯವು ಸಂಶೋಧಕರಿಗೆ ಬಾರದಿರದು. ಪಂಚತಂತ್ರ ಹಿತೋಪದೇಶಗಳಲ್ಲಿ ಬರುವ ಕಥೆಗಳು ಸಾಮಾನ್ಯ ಜನತೆಯ ಜೀವನದ ಅನುಭವಸಾರವಿರುವುದರಿಂದ ಗ್ರಂಥಕಾರನು ಜನರ ಬಳಕೆಯಲ್ಲಿರುವ ಕಥೆಗಳನ್ನು ಬಳಸಿಕೊಂಡಿರಬಹುದೆಂದು ಊಹಿಸಿದರೆ ತಪ್ಪಾಗಲಿಕ್ಕಿಲ್ಲ.

ಶ್ರೀ ವಾಮನ ಘೋರಫಡೆ ಅವರು ತಮ್ಮ 'साहित्याचे मूलधन' ಎಂಬ ಮರಾಠಿ ಪುಸ್ತಕದಲ್ಲಿ ಲೋಕಗೀತಗಳು 'साहित्याची गंगोत्री' ಎಂದೂ 'लोकगीतें हीं साहित्याच्या मूळधनांत मोडतात' ಎಂದೂ लोकगीतांत समाजाची बाल्यावस्था दिसते. ही बाल्यावस्था ..... येतो.' ಎಂದೂ ಅದರ ಮಹತ್ವವನ್ನು ವಿವರಿಸಿ ಬರೆದಿದ್ದಾರೆ.

'ನಾಡ-ಪದಗಳು' ಎಂಬ ಪುಸ್ತಕದ ಮುನ್ನುಡಿಯಲ್ಲಿ ಬಿ.ಎಮ್. ಶ್ರೀಕಂಠಯ್ಯನವರು "ಕರುಳು ಕರುಳನ್ನು ಮಿಡಿಯುತ್ತಿದೆ. ಅಂತರಂಗ ಅಂತರಂಗವನ್ನು ತಟ್ಟಿ ಮಾರ್ದನಿಗೊಡುತ್ತದೆ. ನಮ್ಮ ಹಳ್ಳಿಗರ ಗಂಡು ಹೆಣ್ಣುಗಳೆಲ್ಲರ ಜೀವನಸಾರವನ್ನೇ ಹೊರ ಹೊಮ್ಮಿಸುತ್ತಿರುವ ಈ ಹಾಡುಗಳು ಅವರನ್ನು ತಣಿಸಿ ಹುರಿದುಂಬಿಸುವಂತೆ ಮತ್ತೆ ಯಾವುದೂ ಹುರಿದುಂಬಿಸಲಾರದು."

ಅಲ್ಲದೆ 'ಗರತಿಯ ಹಾಡಿನ' ಮುನ್ನುಡಿಯಲ್ಲಿ ಅವರೇ "ನಾಗರಿಕತೆಯ ಕಾಲದಲ್ಲಿ ಇತಿಹಾಸ ಪುರಾಣಗಳ ಸಾರವನ್ನು ಜನರ ಮಟ್ಟಕ್ಕಿಳಿಸುವುದೂ, ಚರಿತ್ರೆಯಲ್ಲಿ ನಡೆದ ಮರೆಯಲಾಗದ ಸಂಗತಿಗಳನ್ನು ಜನರ ನೆನಪಿನಲ್ಲಿ ನಿಲ್ಲಿಸುವುದೂ ಭಕ್ತಿಜ್ಞಾನ ವೈರಾಗ್ಯಗಳನ್ನು ಮನೆ ಮನೆಗೂ ಬೀರುವುದೂ ಈ ಜಾನಪದ ಸಾಹಿತ್ಯದ ಕೆಲಸ." ಎಂದು ನುಡಿದಿದ್ದಾರೆ.

ಕರ್ನಾಟಕದಲ್ಲಿ

ಮೇಲೆ ಉದಹರಿಸಿದ ಅನೇಕ ಜಾನಪದ ಸಾಹಿತಿಗಳ ಅನುಭವದ ಬೆಳಕಿನಲ್ಲಿ ಕನ್ನಡ ಜಾನಪದ ಸಾಹಿತ್ಯವನ್ನು ಹಿಂಜಿ ನೋಡೋಣ. ಯಾವ ದೇಶದಲ್ಲಿಯೆ ಆಗಲಿ ಯಾವ ಜನಾಂಗದಲ್ಲಿಯೆ ಆಗಲಿ ಸುತ್ತು ಮುತ್ತಲಿನ ವಾತಾವರಣದ ಮೇಲಿಂದ ಮಾನವನ ಸಂಸ್ಕೃತಿಯು ಮಾತ್ರ ಬದಲಾಗಬಹುದಲ್ಲದೆ ಅವನ ಮನೋಭಾವನೆಗಳು ಎಲ್ಲಿದ್ದರೂ ಒಂದೆ. ಗಂಡ ಹೆಂಡಿರ ಪ್ರೇಮ, ತಾಯಿ ಮಕ್ಕಳ ವಾತ್ಸಲ್ಯ ಮೊದಲಾದ ಜೀವನ ಚಿತ್ರಗಳು ಎಲ್ಲ ಕಡೆಗೂ ಒಂದೆ. ಅವುಗಳ ಬಣ್ಣಗಳು ಬೇರೆ ಕಂಡರೂ ರೂಪಗಳು ಒಂದೆ. ಕನ್ನಾಡು ಇದಾವುದಕ್ಕೂ ಹೊರತಾಗಿಲ್ಲ. ಇಂದು ನಮಗೆ ಕರ್ನಾಟಕ ತುಂಬೆಲ್ಲ ಸರಳ ಜೀವನದ ತಿರುಳ ಚಿತ್ರವನ್ನೊಳಗೊಂಡ ಜಾನಪದ ಸಾಹಿತ್ಯವೇ ಇದಕ್ಕೆ ಸಾಕ್ಷಿ.

೯ನೇ ಶತಮಾನದಲ್ಲಿ ಕನ್ನಡದ ಅರಸು-ಕವಿ ನೃಪತುಂಗನು 'ಕವಿರಾಜಮಾರ್ಗ'ದಲ್ಲಿ ತನ್ನ ಕಾಲದಲ್ಲಿಯೂ ಹೇರಳ ಜಾನಪದ ಸಾಹಿತ್ಯವಿತ್ತೆಂದು ಒಪ್ಪಿದ್ದಾನೆ. "ಚದುರರ್ ನಿಜದಿಂ ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್," ಎಂದು ನಿರಕ್ಕರ ಕನ್ನಡ ಜಾನಪದ ಸಾಹಿತಿಗಳನ್ನು ಕೊಂಡಾಡಿದ್ದಾನೆ. ಚಕ್ರವರ್ತಿ ಕವಿ, ನೃಪತುಂಗನ ಮಾತು ಅಕ್ಷರಶಃ ನಿಜವೇನೊ ಎಂಬಂತೆ ನಮ್ಮ ಭಾಷೆಯಲ್ಲಿ ನಿರಕ್ಷರಿಗಳೆಂದು ಹೇಳುವ ಹಳ್ಳಿಯ ಹೆಂಗಸರೂ ಗಂಡಸರೂ ರಚಿಸಿದ ಸಾಹಿತ್ಯವು ಅಪಾರವಿದೆ. ಇನ್ನೂ ಈ ಸಾಹಿತ್ಯವು ಬೆಳೆಯುತ್ತಲಿದೆ. ಆದರೆ ಹಿಂದಿನ ಜಾನಪದ ಸಾಹಿತ್ಯವನ್ನು ನಾವು ಇಂದು ಮರೆಯುತ್ತಿರುವುದು ಅನಿಷ್ಟಕಾರಿಯಾದ ಸಂಗತಿ. ನಮ್ಮ ಪಂಡಿತರು ಮೊದಲಿನಿಂದ ಜಾನಪದ ಸಾಹಿತ್ಯಕ್ಕೆ ಪ್ರಾಶಸ್ತ್ಯವನ್ನು ಕೊಡಲಿಲ್ಲ. ಅವರು ಅದನ್ನು ಸಾಹಿತ್ಯವೆಂದು ಭಾವಿಸಲೇ ಇಲ್ಲ.

ಪಂಡಿತರುಂ ವಿವಿಧಕಳಾ
ಮಂಡಿತರುಂ ಕೇಳತಕ್ಕ ಕೃತಿಯಂ ಕ್ಷಿತಿಯೊಳ್ ।
ಕಂಡರ್ ಕೇಳ್ವಡೆ ಗೊರವರ
ದುಂಡುಟಿಯ್ಯೇಬೀದಿವರೆಯ ಬೀರನ ಕತೆಯೇ ॥

ಎಂದು ಮಧುರಕವಿಯು ಹಾಸ್ಯ ಮಾಡಿದ್ದಾನೆ. ಪಂಡಿತರ ದೃಷ್ಟಿಯಿಂದ ಜಾನಪದ ಕವಿಗಳು ಕುಕವಿಗಳು. ಚಂಪೂಶೈಲಿಗೆ ಮನಸೋತ ಬಹುತರ ಎಲ್ಲ ಕವಿಗಳು ತಮ್ಮ ಕಾವ್ಯಗಳಲ್ಲಿ ಈ ಕುಕವಿಗಳನ್ನು ಅಣಕವಾಡಿ ನಕ್ಕಿದ್ದಾರೆ.

ಮಿಗೆ ಪದ-ಮಿಡಲರಿಯದನಾ
ಲಗೆ ವೆಟಿವರ್ ಸಲೆ ಸದರ್ಥಮಂ ಕಾಣದ ಪೋ ।
ಬಗೆ ಗುರುಡರ್ ಬಗೆವೊಡೆ ಕ
ಬ್ಬಗರಕ್ಕುವೆ ಓದುಗೇಳದಕ್ಕರ ಗಿವುಡರ್ ॥೨೩॥[೧೨]

11. Gujarati and its literature Chapter V.

ಎಂದು ನೇಮಿಚಂದ್ರನು ತನ್ನ ಕಾವ್ಯದಲ್ಲಿ ಜಾನಪದ ಕವಿಗಳನ್ನು, 'ಓದುಗೇಳದ ಕ್ಕರಗಿವುಡರ್' ಎಂದು ಮೂದಲಿಸಿ ಕರೆದಿದ್ದಾನೆ. ಅಲ್ಲದೆ

ಕವಿಗಳ ಬಿಸುಟ್ಟ ಬಗೆಯುಂ
ತವಗುಂಟೆ ವಿದಗ್ಧ–ಹೃದ್ಯ–ಕಾವ್ಯ ವಿಚಾರ।
ಕ್ಕವಟವಿಸಿ ಗಂಟಲೊಡೆದೊಣ
ಗುವಿನಂ ಬಾಯ್ಮಾ ಟ್ವಿರೇಕೆ ಬೆಳ್ಳಕ್ಕರಿಗರ್॥೧೨॥[೧೩]

ಇಲ್ಲಿ ಕುಕವಿಗಳ ಪೇಚಾಟ ನೋಡಿ ಅವರನ್ನು 'ಬೆಳ್ಳಕ್ಕರಿಗರ್' ಎಂದು ಕರೆದು ನಕ್ಕು ಬಿಟ್ಟಿದ್ದಾನೆ. ಕವಿ ನಯಸೇನನು–

ಮಂಡೂಕಂ ಶರನಿಧಿಯಂ
ಕಂಡಱಿಯದೆ ಪಳಿಗುಮಬ್ಧಿಗದು ಭಂಗಮೆ ಪೇಳ್।
ಖಂಡಿಸೆ ಕೂಕವಿ ಸಮೂಹಂ
ಪಂಡಿತರಪ್ಪವರ್ಗೆ ಭಂಗಮಕ್ಕುಮೆ ಜಗದೊಳ್ ॥೪೪॥[೧೪]

ಎಂದು ಕುಕವಿಗಳನ್ನು ಶರಧಿಯನ್ನರಿಯದ ಕಪ್ಪೆಯಂದು ಕರೆದಿದ್ದಾನೆ. ಅಲ್ಲದೆ ಅನೇಕ ಕವಿಗಳು ಅನೇಕ ದೃಷ್ಟಿಯಿಂದ ಜಾನಪದ ಕವಿಗಳನ್ನು ಕುಕವಿಗಳೆಂದು ಹೀಯಾಳಿಸಿದ್ದನ್ನು ಬಹುತರ ಪಂಡಿತರ ಎಲ್ಲ ಚಂಪೂ ಕಾವ್ಯಗಳಲ್ಲಿ ನೋಡಬಹುದು.

ಜಾನಪದ ಸಾಹಿತ್ಯವು ಪಂಡಿತರಿಗೆ ಹಾಸ್ಯಾಸ್ಪದವಾಗಿದ್ದಿರಬೇಕು. ಅರಸನೊಡ್ಡೋಲಗವನ್ನಂತೂ ಅದು ಕಾಣಲೇ ಇಲ್ಲ. ಗುಡಿಸಲವೆ ಅದರ ಉಗಮವಾಯಿತು. ಸಾಮಾನ್ಯ ಜನಜೀವನ ಚಿತ್ರವೇ ಕಥೆಯಾಯಿತು. ನಿಸರ್ಗವೆ ಪ್ರಸಂಗಗಳಲ್ಲಿ ಆಡಿ ತೋರಿಸಲು ರಂಗಭೂಮಿಯಾಯಿತು; ಜನಸಾಮಾನ್ಯರೆ ಕಿವಿಗೊಟ್ಟು ಕೇಳುವ ಪರಸಿಯಾಯಿತು. ಅಂದಮೇಲೆ ಅದು ಗ್ರಂಥಸ್ಥವಾಗುವ ಬಗೆ ಎಂತು? ಜಾನಪದ ಸಾಹಿತ್ಯ ಕರ್ತೃಗಳಂತೂ ಎಲ್ಲರೂ ನಿರಕ್ಷರಿಗಳೆ. ಬಲ್ಲವರಿಂದ ಬರೆಯಿಸಿ ಇಡಬೇಕೆಂಬ ವಿಚಾರವಂತೂ ಅವರನ್ನು ಸೋಂಕಿದಂತೆ ಕಾಣಿಸುವುದಿಲ್ಲ. ಅವರು ಸ್ಫೂರ್ತಿ ತುಂಬಿದಾಗ, ಸಂತೋಷವಾದಾಗ, ಪ್ರಸಂಗ ಬಂದಾಗ ತಮಗೆ ಬಂದಂತೆ ಹಾಡಿಕೊಂಡು ತೃಪ್ತಿ ಪಡೆದರು. ಕೆಲವೊಂದು ಹಾಡುಗಳು ಜನರ ಬಾಯಲ್ಲಿ ಉಳಿದು ಅನೇಕ ವೇಳೆ ಮಾರ್ಪಾಟು ಹೊಂದಿ ಬೆಳೆಯುತ್ತ ಬಂದುವು.

ಕನ್ನಡ ಜಾನಪದ ಸಾಹಿತ್ಯ

ಕನ್ನಡಿಗರು ತೀರ ಇತ್ತೀಚೆಗೆ ಜಾನಪದ ಸಾಹಿತ್ಯ ಸಂಕಲನಕ್ಕೆ ಕೈಹಾಕಿದ್ದಾರೆ. ಹಲಸಂಗಿ ಗೆಳೆಯರ ಗುಂಪಿನ ಹಿರಿಯ ಸಾಹಿತಿಗಳಾದ ಶ್ರೀ ಮಧುರಚೆನ್ನರೆ ಈ ಪ್ರಯತ್ನದಲ್ಲಿ ಮೊದಲಿಗರು. ವಿಜಯಪುರದಲ್ಲಿ ೯ನೆಯ ಕನ್ನಡ ಸಾಹಿತ್ಯ ಸಮ್ಮೇಳನವು ನಡೆದಾಗ ಮೊದಲು ಇವರೇ ಜಾನಪದ ಸಾಹಿತ್ಯದ ಸಂಬಂಧ ಎತ್ತಿ ಮಾತಾಡಿದವರು. ಮುಂದೆ ಇದರ ಪ್ರಚಾರವು ಕರ್ನಾಟಕದ ತುಂಬ ಹಬ್ಬಿ ಅನೇಕರು ತಮ್ಮ ಜಾನಪದ ಸಾಹಿತ್ಯಾಭ್ಯಾಸದ ಅನುಭವಗಳನ್ನು ಇಂದು ಜನತೆಯ ಮುಂದೆ ಇಟ್ಟಿದ್ದಾರೆ. ಶ್ರೀ ಮಧುರಚೆನ್ನ, ಬೇಂದ್ರೆ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಬೆಟಗೇರಿ ಕೃಷ್ಣಶರ್ಮ, ಗೊರೂರು ರಾಮಸ್ವಾಮಿ ಅಯ್ಯಂಗಾರ್, ದೇವುಡು ಮೊದಲಾದ ಪ್ರಸಿದ್ಧ ಸಾಹಿತಿಗಳು ಅನೇಕ ರೀತಿಯಿಂದ ಜಾನಪದ ಸಾಹಿತ್ಯವನ್ನು ಚರ್ಚಿಸಿದ್ದಾರೆ. ಅದರ ಕೂಡ ನಾಲ್ಕಾರು ಒಡೆದು ಕಾಣುವ ಜಾನಪದ ಸಾಹಿತ್ಯ ಸಂಕಲನಗಳೂ ಬೆಳಕಿಗೆ ಬಂದಿವೆ. ಅಪಾರವಾದ ಕನ್ನಡ ಜಾನಪದ ಸಾಹಿತ್ಯವನ್ನು ನೋಡಿದರೆ ಈ ಸಂಕಲನಗಳು ತೀರ ಕಡಿಮೆಯೆ. ಕರ್ನಾಟಕದ ಒಂದೊಂದು ಭಾಗದ ಜಾನಪದ ಸಾಹಿತ್ಯವನ್ನು ಕಲೆಹಾಕಿ ಬೆಳಕಿಗೆ ತಂದರೆ ಕನ್ನಡ ಜನತೆಯ ನಿಜವಾದ ಸಂಸ್ಕೃತಿಯು ಒಂದು ಅಮೌಲ್ಯವಾದ 'ವಿಶ್ವಕೋಶ'ವೇ ಆಗಬಹುದೆಂದು ಹೇಳಬಹುದು. ಇದರಲ್ಲಿ ಕೆಲಸವು ತೀರ ಮಂದಗತಿಯಿಂದ ನಡೆದಿದೆ. ನಮ್ಮ ಸಂಘ, ಸಂಸ್ಥೆ, ವಿಶ್ವವಿದ್ಯಾಲಯಗಳಿಗಂತೂ ಇದರ ಅರಿವೇ ಇಲ್ಲವೆಂದು ಬರೆಯಲು ಬಹಳೇ ವಿಷಾದವೆನಿಸುವುದು. ಆದರೆ ಮಾಡತಕ್ಕ ಕೆಲಸ ಮಾತ್ರ ಇನ್ನೂ ಸಾಕಷ್ಟು ಉಂಟು. ಸಂಶೋಧಕರಿಗೆ ಪ್ರೋತ್ಸಾಹಿಸದ ಹೊರತು ಕೆಲಸ ಮುಂದೆ ಸಾಗುವ ಬಗೆ ಎಂತು?

ಜಾನಪದ ಸಾಹಿತ್ಯವು ಕರ್ನಾಟಕದಲ್ಲಿ ಬಹುಮುಖವಾಗಿ ಬೆಳೆದುಕೊಂಡು ಬಂದಿದೆ: ಬೀಸುವ ಹಾಡು, ಒನಕೆಯ ಹಾಡು, ಬೆಳದಿಂಗಳಲ್ಲಿ ಕೋಲಿನ ಹಾಡು, ಹೋಳಿಯ ಹಾಡು, ಮಕ್ಕಳಾಟದ ಹಾಡು, ಸುಗ್ಗಿಯಲ್ಲಿ ಹಂತಿಯ ಹಾಡು, ಸಮುದ್ರ ತೀರಗಳಲ್ಲಿ ಡೋಣಿಯ ಹಾಡು, ಜಾತ್ರೆ ಮಹೋತ್ಸವಗಳಲ್ಲಿ ಲಾವಣಿ ಹಾಡು, ಪರಸಿಗಳಲ್ಲಿ ದುಂದುಭಿ ಹಾಡು, ಕೆಲವು ಹಬ್ಬಹುಣ್ಣಿಮೆಗಳಲ್ಲಿ ಗೊಂದಲಿಗರ ಗೊಂದಲ ಹಾಡು, ಹೆಣ್ಣುಮಕ್ಕಳ ಗೌರಿ–ಶೀಗೆಯ ಹಾಡು, ಲಗ್ನ ಮುಹೂರ್ತಗಳಲ್ಲಿ ಸೋಬಾನ ಹಾಡು, ಶಿವರಾತ್ರಿ ಯುಗಾದಿಗಳಲ್ಲಿ ಕಂಬಿಯ ಹಾಡು, ಪುಣ್ಯತಿಥಿಮಿತಿಗಳಲ್ಲಿ ವಿಶೇಷವಾಗಿ ಶ್ರಾವಣಮಾಸದಲ್ಲಿ ಹಳ್ಳಿಯ ಹರದೆಯರು ಅನೇಕ ದಿನಗಳವರೆಗೆ ಹಾಡುವ ಶಿವಶರಣರ ಹಾಡುಗಳು, ಎಲ್ಲಮ್ಮನ ಹಾಡುಗಳು, ರಾಮಾಯಣ, ಮಹಾಭಾರತ ಇವೇ ಮೊದಲಾದುವುಗಳನ್ನು ಕಾಣಬಹುದು. ಇರದು ಬಲು ಹುಲುಸಾದ ಸಾಹಿತ್ಯ; ಕರ್ನಾಟಕದ ತುಂಬೆಲ್ಲ ರಾಶಿರಾಶಿಯಾಗಿ ಕೇಳಬರುತ್ತದೆ. ಇದರ ಕಾಲಮಾನವನ್ನು ಅಳೆಯುವುದು ಅಸಾಧ್ಯ. ಇಂದೇ ನಿರ್ಮಿತವಾಯಿತೆಂದು ಹೇಳುವುದು ಬಲು ಕಷ್ಟ. ಅನೇಕ ಬದಲಾವಣೆಗಳನ್ನು ಹೊಂದಿ ಇದು ನಮಗೆ ಬಂದರೂ ಹಲ ಕೆಲವುಗಳ ಕಥಾಗರ್ಭದಿಂದ ಕೆಲವುಗಳನ್ನು ಮಾತ್ರ ಕೆಲವೊಂದು ಕಾಲಮಾನಕ್ಕೆ ಎಳೆಯಬಹುದು. ಮದುವೆಯ ಹಾಡುಗಳು ಮಾನವ ಜನಾಂಗದಲ್ಲಿ ಮದುವೆಯು ಎಂದು ಪ್ರಾರಂಭವಾಯಿತೊ ಅಂದಿನಿಂದ ಬಳಕೆಯಲ್ಲಿ ಬಂದಿರಬಹುದೆಂದು ಹೇಳಬಹುದು. ಬೆಳುವಲದಲ್ಲಿ

೧೨. ನೇಮಿಚಂದ್ರನ 'ಲೀಲಾವತಿ', ಪ್ರಥಮ ಆಶ್ವಾಸ.
೧೩. ನೇಮಿಚಂದ್ರನ 'ಲೀಲಾವತಿ,' ಪ್ರಥಮ ಆಶ್ವಾಸ.
೧೪. ನಯಸೇನನ 'ಧರ್ಮಾಮೃತ,' ಪ್ರಥಮ ಆಶ್ವಾಸ.

ಹಾಡುವ ಅನೇಕ ಹಂತಿಯ ಹಾಡುಗಳು, ಸೋಬಾನ ಹಾಡುಗಳು, ಗುರಚಿ, ಜೋಕುಮಾರ, ಕಂಬಿ ಮೊದಲಾದ ಸಂಪ್ರದಾಯಗಳನ್ನೊಳಗೊಂಡ ಹಾಡುಗಳನ್ನು ಶಿವಶರಣರ ಯುಗದವರೆಗೆ ಎಳೆಯಬಹುದು. ಈಗ ಸಂಕಲನ ಮಾಡಿರುವ ಶಿವಶರಣರ ಹಂತಿಯ ಹಾಡು, ಮೊದಲಾದುವುಗಳಲ್ಲಿ ಸಂಪ್ರದಾಯಗಳನ್ನೊಳಗೊಂಡ ಅನೇಕ ಪದ್ಯಗಳು ಇದಕ್ಕೆ ಸಾಕ್ಷಿ.

ಸೋ ಅನ್ನು ಸಬುದವ, ಯಾರು ಮಾಡ್ಯಾರು ಗುರುವೆ
ದೇವ ಗುರು ಚೆನ್ನ ಬಸವಣ್ಣ, ಸೊಗಲದೊಳು
ಮಾದೇವಗ ಮದುವೆ ಮಾಡ್ಯಾರ ॥ಸೋ॥ *–ಜಾನಪದ ಸಂಭಾರ–*
ಆಯ್ದ ಅಕ್ಕಿಯ ದಾನ, ಆದಯ್ಯ ನಿಮ ದಾನ
ಬೇಯ್ದ ಅಂಬಲಿಯ ಶಿವ ದಾನ, ಚೆನ್ನಯ್ಯ
ಕಾಯ ಮನದಾನ ಶಿವಮತಕ ॥ಸೋ॥ *–ಜಾನಪದ ಸಂಭಾರ–*

ಹೀಗೆ ಅನೇಕ ಉದಾಹರಣೆಗಳನ್ನು ಕೊಡುತ್ತ ಹೋಗಬಹುದು. ನಾಗರಿಕ ಜೀವನವನ್ನರಿಯದ ಇಂದಿನ ಕಾಡಜನರಲ್ಲಿಯ ಕುಣಿತದ ಹಾಡುಗಳು ಶಿವಶರಣರ ಯುಗಕ್ಕಿಂತಲೂ ಮುಂಚಿನವಿರಬಹುದೆಂದು ಶಂಕಿಸಬಹುದು.

ಕರ್ನಾಟಕದ ಲಮಾಣಿಗಳು ಹಾಡುವ 'ಮಳೆರಾಜನ ಕುಣಿತದ ಹಾಡು' ಇದಕ್ಕೆ ಬಲವಾದ ಉದಾಹರಣೆಯಾಗಿದೆ. ಅವರ ಈ ಹಾಡು ಮೇಘರಾಜನಿಗೆ ಪ್ರಾರ್ಥನೆಯಿದ್ದು ಹಾಡಿ ಕುಣಿದು ಮಾಡುವ ಪೂಜೆ! ಲಮಾಣಿಗಳು ಬೆಳುವಲದಲ್ಲಿ ಮಳೆಯು ದೂರ ಸರಿದರೆ ಈ ಹಾಡನ್ನು ಹಾಡಿ ಊರೂರಲ್ಲಿ ಕುಣಿದು ಹೋದರೆ ಮಳೆಯಾಗುವದೆಂದು ಈಗಲೂ ಹಳ್ಳಿಗಳಲ್ಲಿ ಜನರ ಭಾವನೆ ಇದೆ. ಇಂಥ ಪೂಜಾವಿಧಾನಗಳು ಭರತಖಂಡದಲ್ಲಿ ಆರ್ಯರು ಬರುವದಕ್ಕಿಂತ ಮುನ್ನವೇ ಪ್ರಚಲಿತವಿದ್ದವೆಂದು ಕಂಡುಬರುತ್ತವೆ. ಕಾಡಜನಾಂಗದ ಲಮಾಣಿಗಳು ಈ ಹಾಡುಗುಣಿತವನ್ನು ತಮ್ಮ ಮುತ್ತಜ್ಜರಿಂದ ಕಲಿತು ಈಗಲೂ ಅದನ್ನು ಪಾಲಿಸುವದನ್ನು ಈ ಜನರು ವಾಸಮಾಡಿಕೊಂಡಿರುವ ಭಾಗಗಳಲ್ಲಿ ನೋಡಬಹುದು.

ಸಾಧಾರಣವಾಗಿ ಜಾನಪದ ಸಾಹಿತ್ಯವು ಜನಾಂಗದೊಡನೆ ಹುಟ್ಟಿ ಒಂದೇ ಸವನೆ ಹರಿದು ಬಂದಿದೆ ಎಂದು ಹೇಳಬಹುದು. ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರರು ಈ ಸಾಹಿತ್ಯದ ಸೊಗಸನ್ನು ಕುರಿತು, ಮಾತಾಡುವಾಗ "ಬಾಳನ್ನು ತಿದ್ದುವ ಈ ಸಾಹಿತ್ಯ ಅನೂಚಾನವಾಗಿ ಬೆಳೆದು ಬಂದಿದೆ. ಜೀವನದ ಹೋರಾಟ ಇಷ್ಟು ಪ್ರಬಲವಾಗಿ ಇರದೆ ಇದ್ದಿದ್ದರೆ ಈಗಲೂ ಆ ಸಾಹಿತ್ಯದ ಕುಡಿಗಳು ಚಿಗುರುತ್ತಿದ್ದುವೆಂಬುದರಲ್ಲಿ ಸಂದೇಹವಿಲ್ಲ. ಈಗ ದೊರೆತಿರುವಷ್ಟರಿಂದಲೇ, ರೈತನ ಜೀವನ ಎಷ್ಟು ಅನುಭವಪೂರ್ಣವಾದುದು, ಕೂರಾದುದು, ಕಾವುಳ್ಳುದು ಎಂಬುದು ಗೊತ್ತಾಗುತ್ತದೆ."[೧೫] ಎಂದು ಚರ್ಚಾತ್ಮಕವಾಗಿ ನುಡಿದಿದ್ದಾರೆ. 'ಬ್ರಿಟಾನಿಕಾ ವಿಶ್ವಕೋಶ'ದಲ್ಲಿ ``It is not the question of age or authoriship that is important in a folksong but that of spontaneity and beauty.... A folksong them is always grafting the new on the old.....A folksong is neither new nor old because it is continuelly taking on new life; it is an individual flowering on a common stem."[16] ಎಂದು ಹೇಳಿದೆ. ಇದು ಮಾತ್ರ ಸತ್ಯ. ನಿತ್ಯದ ಪ್ರಪಂಚವು ಇದಕ್ಕಿದ್ದಂತೆ ಒಡಮೂಡಿದ್ದು ಜಾನಪದ ಸಾಹಿತ್ಯದಲ್ಲಿ. ಇದಕ್ಕೆ ವೇಷ ಭೂಷಣಗಳಿಲ್ಲ; ಪಂಡಿತರು ಕೈಕೊಂಡ ಲಕ್ಷಣಗಳ ಕಟ್ಟುನಿಟ್ಟುಗಳಿಲ್ಲ. ಕನ್ನಡವೇ ತನ್ಮಯವಾಗಿ ಓದುಬರೆಹವನ್ನರಿಯದ ಹಳ್ಳಿಗರ ಲಹರಿಯ ಝುರಿಯಲ್ಲಿ ಒಂದೇ ಸವನೆ ಧಾರಾಳವಾಗಿ ಪ್ರವಹಿಸುತ್ತ ಬಂದಿದೆ. ಕನ್ನಡ ಮನೆ ಮಾತುಗಳು ಜೆನುಗಾಗಿ ಪೋಣಿಸಲ್ಪಟ್ಟ ರಾಗವನ್ನೊಳಗೊಂಡು, ಕಿವಿಗೆ ಅತಿ ಇಂಪಾಗಿ ಕೇಳಬರುವುವು. ತ್ರಿಪದಿಯು ಇದಕ್ಕೆ ಛಂದಸ್ಸಾಗಿ ಅಂಶಗಣಗಳನ್ನೊಳಗೊಂಡಿರುವುದರಿಂದ ಏರಿಳಿತಗಳ ಕೋಚನ್ನೆತ್ತಿ ರಾಗಮಾಡಿ ಹಾಡಲು ಬರುತ್ತದೆ. ತಾಳ, ಮದ್ದಳಗೆ ಹೊಂದದ ಹಾಡು ಜಾನಪದ ಸಾಹಿತ್ಯದಲ್ಲಿ ಯಾವುದೂ ಇಲ್ಲ. ಅಂತೆಯೆ ಹಾಡುವವರಿಗೆ ಹೊಸ ಹುರುಪು, ಕೇಳುವವರಿಗೆ ರಸಾನಂದ. ಅನುಭವದ ಮಾತುಗಳ ವಿದ್ಯುಲ್ಲತೆಯು ನೇರವಾಗಿ ಮನಕ್ಕೆ ತಾಗಿ ಮನವು ವಿಕಾಸ ಹೊಂದಿ ಇಡೀ ಮಾನವ ಪ್ರಪಂಚವನ್ನೇ ಆ ಬೆಳಕಿನಲ್ಲಿ ಕಾಣಲೆತ್ನಿಸುವುದು. ಕಾರಣ ಅವುಗಳಲ್ಲಿ ಕಾಲಕಾಲಕ್ಕೆ ಪ್ರಪಂಚಕ್ಕನುಸಾರವಾಗಿ ಜನರಿಗೆ ಹೊಸತನವೇ ಕಂಡುಬರುತ್ತದೆ.

❐

---

೧೫. ಹಳ್ಳಿಯ ಬಾಳು, ಪು. ೧೦೨

೧೬. Encyclopaedia of Britanica, 14th Edn. p.p. 448.

೧. ಸ್ತುತಿ – ಸ್ತವನಗಳು

ನಮ್ಮ ಒಕ್ಕಲಿಗನಿಗೆ ಧರ್ಮಕ್ಕಿಂತ ದೇವರ ಭಾವನೆಯೇ ದೊಡ್ಡದು. ಅವನಿಗೆ ಊರ ಮುಂದಿನ ಪಾದಗಟ್ಟೆಯ ಬಸವನೂ ಬೇಕು. ಊರ ಹೊರಗಿನ ಗರುಡ ಗಂಬದೆದುರಿನ ಹನುಮನೂ ಬೇಕು; ರೋಗಾದಿಗಳ ಪೀಡೆಯಾದರೆ ಮಾರಿ, ಮಸಣ ಮೊದಲಾದ ದೇವತೆಗಳೂ ಬೇಕು; ಭೂತ ಪಿಶಾಚಿಗಳ ಕಾಟ, ಉಪಟಳವಾದರೆ ನವಾದಿಗ್ರಹಗಳ ಬಲವೂ ಬೇಕು. ಹೀಗಾಗಿ ಅವನಲ್ಲಿ ದೇವರೆಂಬ ಭಾವನೆಯು ಸ್ಥಿರವಿರದೆ ಸ್ಥಿತಿಗತಿಗಳ ಎಳೆತದ ಪ್ರಕಾರ ಹೊಯ್ದಾಡಿ ಧರ್ಮದ ಗಡಿಗಳನ್ನು ಮೀರಿ ದೂರ ದೂರದವರೆಗೂ ಹೋಗುವುದು. ಒಮ್ಮೊಮ್ಮೆ ಸಂಪ್ರದಾಯದಿಂದ ಬಂದ ಮನೆಯ ದೇವರನ್ನು ಸಹ ಬಿಟ್ಟುಕೊಟ್ಟು ತನಗೆ ಹಿತವಾಗುವದೆಂದು ಕಂಡುಬಂದರೆ ಬೇರೆ ದೇವರನ್ನು ಭಕ್ತಿಯಿಂದ ಪೂಜಿಸುವನು. ಆ ದೇವರ ಹೆಸರಿನಿಂದ ಕಾಯಿಕಟ್ಟಿ ಹರಕೆಯನ್ನು ಹೊರುವನು. ಊರು ಬಿಟ್ಟು ಊರಿಗೆ ಹೋಗಿ ಸಮಾಜಕ್ಕೆ ಗೊತ್ತಾಗದೆ ನಡೆದುಕೊಂಡು ಬರುವನು. ಸಮಾಜವು ದೊಡ್ಡದೆಂಬ ಅಂಜಿಕೆಯು ಹುಟ್ಟಿದಾಗ ಮಾತ್ರ ಅವನಿಗೆ ಸ್ವಧರ್ಮದ ಕಲ್ಪನೆ ಬರುತ್ತದೆ. ಅವನ ದೇವರಿಗೆ ಸಮಾಜವು ಅಡ್ಡಬಂದರೆ ಸಮಾಜಕ್ಕೆ ಹೊರತಾಗಬಾರದೆಂದು, 'ದೈವದವರು' ಕೂಡಿದಾಗ ಅವರ ಹೇಳಿಕೆಗೆ ಒಪ್ಪಿ ತನಗೆ ಬೇಕಾದ ದೇವರ ಹೆಸರಿನಲ್ಲಿ ಕಟ್ಟಳೆಗಳನ್ನು ಮುರಿದು ಜೀವನದ ಹಿತಚಿಂತನೆಗಳ ಗುರಿಯನ್ನು ಸಾಧಿಸುತ್ತಾನೆ. ಒಮ್ಮೊಮ್ಮೆ ಸಮಾಜವು ಒತ್ತಾಯ ತಂದರೆ ಅವನು ದೇವರ ಸಲುವಾಗಿ ಧರ್ಮಾಂತರವನ್ನೂ ಮಾಡಬಹುದು. ಇಂತಹ ಉದಾಹರಣೆಗಳು ಎಲ್ಲ ಧರ್ಮಗಳಲ್ಲಿಯೂ ಕಂಡುಬರುತ್ತವೆ.

ಅಪಾರವಾದ, ಹಳ್ಳಿಗರ ಸಾಹಿತ್ಯವನ್ನು ನೋಡಿದರೆ ಬಿಡಿಪದ್ಯಗಳನ್ನು ಬಿಟ್ಟು ಸ್ತುತಿ ಸ್ತವನಗಳಿಲ್ಲದ ಹಾಡುಗಳೇ ಇಲ್ಲ. ಹಾಡುವವರು ಹಾಡುವ ಮುನ್ನ ಒಂದೆರಡು ಸ್ತುತಿ ಸ್ತವನಗಳ ಪದ್ಯಗಳನ್ನು ಹೇಳಿ ಹಾಡಲು ಆರಂಭಿಸುತ್ತಾರೆ; ಇಲ್ಲವೆ ಮುಕ್ತಾಯ ಮಾಡುವ ಕಾಲಕ್ಕಾಗಲಿ ಈ ಪದ್ಯಗಳು ಬಂದೇ ಬರುತ್ತವೆ. ಸ್ತುತಿ ಸ್ತವನಗಳು ದೇವರಿಗಿರಬಹುದು. ದೈವಕ್ಕಿರಬಹುದು, ಇಲ್ಲವೆ ದೆವ್ವ, ಪಿಸಾಳಿ ಮೊದಲಾದವುಗಳಿಗೂ ಇರಬಹುದು. ರೈತನು ಈ ಮೂರರಲ್ಲಿಯೂ ನಂಬಿಗೆಯಿಟ್ಟು ಭಕ್ತಿಯಿಂದ ಅಂಜಿ ನಡೆಯುತ್ತ ಬಂದಿದ್ದಾನೆ. ಅವನು ಉತ್ಸಾಹ ಬಂದಾಗ ಆನಂದ ತುಂಬಿ ಹಾಡಿ ಹೊಗಳಿದ್ದಾನೆ; ಅಸಹಾಯಕನಾದಾಗ ಅದರ ಮೇಲೆಯೇ ಭಾರ ಹಾಕಿ ಬಾಳುವೆ ಮಾಡುತ್ತ ಬಂದಿದ್ದಾನೆ; ಮೈ ಮೇಲೆ ಬಂದಾಗ ಅಂಜಿ ಮೊರೆಹೊಕ್ಕಿದ್ದಾನೆ.

ಹೊತ್ತು ಮುಳುಗಿದರೇನ, ಕತ್ತಲಾದರು ಏನ
ಕಷ್ಟದಲಿ ಗುಡಿಗೆ ಬರುವೇನೂ ಸೂಗಯ್ಯ
ಮುತ್ತಿನ ಬಾಗಿಲ ತಗೆದೀರೊ ॥ *–ಜಾ.ಸಂ.–*

ಅಪ್ಪಸಂಗನ ನಂಬಿ, ಒಪ್ಪತ್ತು ನಾನಿರುವೆ
ತುಪ್ಪದ ದೀವಿಗೆ ಹಚ್ಚೂವೇ ಸಂಕಟಕ
ನೆಪ್ಪಿರಲೊ ದೇವ ಕೈಮುಗಿವೆ ॥ *–ಜಾ.ಸಂ.–*

ಭಾಗಾದಿ ಬಲಕಿರಲಿ, ವೈರಿ ತಾ ಎಡಕಿರಲಿ
ಭಾಡಿ ನಿನ ಮಃನೆ ಇದರಿರಲಿ ಬಲಭೀಮ
ದೇವ ನನ ಮ್ಯಾಲೆ ದಯವಿರಲಿ ॥ *–ಜಾ.ಸಂ.–*

ಎಂದು ದೇವರಿಗೆ ತನ್ನ ಸ್ಥಿತಿಗತಿಯನ್ನು ಎತ್ತಿಹಿಡಿಯಲೆಂದು ಹಾಡಿದ್ದಾನೆ. ಈ ಮೂರರಲ್ಲಿ ದೇವ, ದೈವಗಳೆರಡೂ ಹಳ್ಳಿಗರ ಜೀವನದಲ್ಲಿ ಬಹಳ ಮಹತ್ವದ ವಿಷಯಗಳಾಗಿವೆ. ಗುಡ್ಡ, ಭೂಮಿ, ಮಳೆ, ಬೆಳೆ, ಗಾಳಿ, ಚಳಿ, ಬಿಸಿಲು, ಹುಟ್ಟು, ಸಾವು ಮೊದಲಾದವುಗಳು ಆ ದೇವನ ಕೈಯಲ್ಲಿ. ದೇವರಿಲ್ಲದೆ ಜಗತ್ತಿಲ್ಲ. ಅವನೊಲಿದರೆ ಮಾತ್ರ ನಮ್ಮೆಲ್ಲರ ಬಾಳು; ಮುನಿದರೆ ಹಾಳು; ಎಂದು ಮುಗ್ಧಭಾವದಿಂದ ದೇವರನ್ನು ಅನೇಕ ರೀತಿಯಿಂದ ಪ್ರಾರ್ಥಿಸಿದ್ದಾನೆ.

ನಮ್ಮದೆನ್ನುವ ಬದಕು, ಸೊಮ್ಮು ಶಿವನದು ಕಾಣೊ
ಹುಮ್ಮಸವು ಬೇಡ ರೈತನಿಗೆ। ಕೈಲಾಸ
ಒಮ್ಮನದಿ ನೀಡೆ ಕೈ ಮುಂದೆ ॥೫೬॥ ಇ.–ಬೊಮ್ಮಯ್ಯ–

ಎಂದು 'ಇಳಿಹಾಳ ಬೊಮ್ಮಯ್ಯ'ನ ಹಂತಿಯ ಹಾಡಿನಲ್ಲಿ ರೈತನು ನಮ್ಮದೆನ್ನುವದೆಲ್ಲವೂ ದೇವರದೆಂದು ಹಾಡಿ ಅವನು ಕರುಣಿಸಿದರೆ ಕೈಲಾಸವೆಂದು ಕೊಂಡಾಡಿದ್ದಾನೆ. ಅಲ್ಲದೆ ಆ ದೇವರನ್ನು ವಶಪಡಿಸಿಕೊಳ್ಳಲು ಯತ್ನಿಸಿದ್ದಾನೆ; ಅವು ನಿಷ್ಫಲವಾಗಲು ಬೇರೆ ರೀತಿಯಿಂದ ಶಾಂತಮಾಡಲು ಸಾಧನಗಳನ್ನು ಕೈಕೊಂಡಿದ್ದಾನೆ.

ಏನು ಬರುವದೊ ದೇವ, ಸಾಣಸಮಗೇಟಲ್ಲ
ಹಾನಿ ತಟ್ಟುವದು ಹೇಳೆಸಗೆ। ನಾಡೊಳಗೆ
ಏನು ಶಾಂತಿಯನು ಮಾಡಿಸಲಿ ॥೫೮॥
ಊರ ಹಿರಿಯರು ಕೂಡಿ, ತೇರ ನಿಂದೆಳೆಯುವೆವು
ಭೂರಿ ಜಂಗಮರ, ಉಣಿಸುವೆವು, ಶಿವಲಿಂಗ
ಸೋರುನೆತ್ತರಕೆ ತಡೆಹಾಕು ॥೫೯॥ *ಬೇ-ಕನ್ನಯ್ಯ-*

ಎಂದು 'ಬೇಡರ ಕನ್ನಯ್ಯ' ಶಿವಶರಣನ ಹಂತಿಯ ಹಾಡಿನಲ್ಲಿ, ದೇವರನ್ನು ಒಲಿಸಿಕೊಳ್ಳುವ ಉಪಾಯವನ್ನು ಹಾಡಿದ್ದಾನೆ. ಅವನಿಗೆ ಈ ದೇವರು ಬೇಡ, ಆ ದೇವರು ಬೇಕು ಎಂಬ ಭಾವನೆಯಿಲ್ಲ. ದೇವರೆಂಬುವುದು ಅವನಿಗೆ ಎಲ್ಲವೂ ಬೇಕು. ಹೀಗಾಗಿ ಅವನಿಗೆ ದೇವರು ಅನಂತಕೋಟಿಯಾಗಿವೆ. ಒಕ್ಕಲತನವೇ ಮುಖ್ಯ ಉದ್ಯೋಗವಾದ ನಮ್ಮ ಹಳ್ಳಿಗರಿಗೆ ಬಹುತರವಾಗಿ ದೊಡ್ಡದೇವರು ಅಥವಾ ಮೂಲದೇವರೆಂದರೆ 'ಮಹಾದೇವರು' ಇಲ್ಲವೆ 'ಶಿವಲಿಂಗ'. ಈ ಶಿವಲಿಂಗ (ಈಶ್ವರ) ಮತ್ತು ಬಸವಣ್ಣ ಇಲ್ಲದ ಹಳ್ಳಿಗಳು ಬಹಳ ಕಡಿಮೆ. ಕೊಂಪೆ ಕಳ್ಳಿಯಲ್ಲಾದರೂ ಬಸವಣ್ಣನಿದ್ದದ್ದನ್ನು ಈಗಲೂ ಹಳ್ಳಿಗಳಲ್ಲಿ ಪ್ರತ್ಯಕ್ಷ ನೋಡಿ ಮನಗಾಣಬಹುದು. ಈ ಶಿವಲಿಂಗಗಳು ಒಕ್ಕಲುನಾಡಿನ ಶಿವಧರ್ಮವನ್ನು ಹೇಳದಿರುವುವೇ?

ಶಿವ ಶಿವ ಎಂದಾರ ಸಿಡಿಲೆಲ್ಲ ಬಯಲಾಗಿ
ಕಲ್ಲ ಬಂದೆರಗಿ ಕಡೆಗಾಗಿ। ಎಲೆಮನವೆ
ಶಿವನೆಂಬ ಸಬುದ ಬಿಡಬ್ಯಾಡ ॥ *-ಜಾ.ಸಂ.-*

ಎಂದು ರೈತನು ತಾನು ಶಿವೋಪಾಸಕನೆಂಬ ಮಾತನ್ನು ಹಾಡಿದ್ದಾನೆ.

ಮಾದೇವ ನಿನಹೊರ್ತು ನಾನ್ಯಾರ ನಂಬಿಲ್ಲ
ನಾಮಾಡೆನೆಂಬ ಅಳವಿಲ್ಲ। ಮಲ್ಲಯ್ಯಾ
ನೀ ನಡೆಸೊ ನನ್ನ ಸರುವೆಲ್ಲ ॥ *-ಜಾ.ಸಂ.-*

ಎಂದು ತನ್ನ ನಂಬುಗೆಯ ದೇವರಿಗೆ ಮಾನವನ ಅಸಹಾಯತನವನ್ನು ತೋರಿಸಿ ಮೊರೆಹೊಕ್ಕು ಗತಿಯಾಗೆಂದು ಬೇಡಿಕೊಂಡಿದ್ದಾನೆ. ಅವನಿಗೆ ಸುಗ್ಗಿಯ ದೇವರೇ ಬೇರೆ[೧] ಅಲ್ಲದೆ, ಭೂತಾಯಿ, ಬನದಮ್ಮ, ಪತ್ರಿಯಗಿಡ, ಬನ್ನಿಯಗಿಡ ಮೊದಲಾದ ನಿಸರ್ಗದೇವತೆಗಳನ್ನು ಅಡವಿಯಲ್ಲಿ ಪೂಜಿಸುವನು.

ಬೆಳೆದ ಬೆಳಸಿಗೆ ಬನ್ನಿ, ಭೂಮಿತಾಯಿಗೆ ಬನ್ನಿ
ನಾಡ ಸಂಪತ್ತ ಬೆರಿಬನ್ನಿ ॥ ಕೋಲು ಕೋಲು ॥ *-ಜಾ.ಸಂ.-*

ಎಂದು 'ಬನ್ನಿಯ ಹಬ್ಬ'ದ ಕೋಲು ಪದವನ್ನು ಹಾಡಿ ಕುಣಿದಿದ್ದಾನೆ.

ಬತ್ತೀದ ಹೊಲದಾಗ, ಒತ್ತಿ ಹಾಕಿಯಾರ
ಮುತ್ತಿನುಡಿಯಕ್ಕಿ ಬನದಮ್ಮ। ಹಾಯ್ದರ
ಬಿಚ್ಚಬಿದ್ದಾವ ಬಿಳಿಜೋಳ ॥ *-ಗ.ಹಾ.ವು.ಶಿ...*

ಎಂದು ಬನದಮ್ಮನ ಮುತ್ತಿನುಡಿಯೇ ಬಿಳಿಜೋಳದ ರಾಶಿಯೆಂದು ಸ್ವಾರಸ್ಯವಾಗಿ ಹಾಡಿದ್ದಾನೆ. ಅಲ್ಲದೆ 'ಜೋಕುಮಾರ'ನ ಹಾಡಿನಲ್ಲಿ ಒಕ್ಕಲಿಗನು ಜೋಕುಮಾರನಿಗೆ 'ಬನವಯ್ಯ'ನೆಂದೂ ಕರೆದಿದ್ದಾನೆ.

ಅಕ್ಕ ಹಡೆದಾಳಂತ ಏನೊಯ್ದೊ ಬನವಯ್ಯ
ಮುತ್ತೀನ ಚೆಂಡ ಕಾರ್ಮುಗಿಲ। ಸುರಿಮಳೆಯ
ಅರತೀಲಿ ಒಯ್ದೆ ಅರಳೆಲೆಯ ॥ *-ಜಾ.ಸಂ.-*

ಎಂದು ಹೇಳಿದ್ದಾನೆ. ಇಲ್ಲಿ 'ಹಡೆದ ಅಕ್ಕ' ಅಂದರೆ ಬೆಳಸುಳ್ಳ ಭೂತಾಯಿ. ಭಾದ್ರಪದ ಮಾಸದಲ್ಲಿ ಬೆಳುವಲದಲ್ಲಿ ಮಳೆಯು ಆಗದಿರಲು ಬೆಳೆಗಳು ಒಣಗಹತ್ತುವವು. ಆಗ ಜೋಕುಮಾರನು ಹುಟ್ಟಿ ಮಳೆಯನ್ನು ತರುವನೆಂದು ಒಕ್ಕಲಿಗನು ನಂಬುತ್ತಾನೆ.[೨] ಅವನು ಪೂಜೆ ಮಾಡುವ ಇನ್ನೊಂದು ನಿಸರ್ಗ ದೇವರೆಂದರೆ ಮಳೆರಾಜ. ಅನಾವೃಷ್ಟಿಯಿಂದ ಸದಾ ಬಳಲುವ ಬೆಳುವಲದಲ್ಲಿ ಈ ದೇವರ ಆರಾಧನೆಯು ಎತ್ತ ನೋಡಿದರೂ ಕಂಡುಬರುವುದು. ಮಳೆರಾಜನ ಮಠಗಳು ಬೆಳುವಲದಲ್ಲಿಯೇ ಅವೆ. ಮಳೆ ಹೋಗಲು ಜನರು, ಹಳ್ಳಿಗಳಲ್ಲಿ ಮಳೆರಾಜನನ್ನು ಪೂಜೆಮಾಡಿ ಹಾಡುಗಳನ್ನು ಹಚ್ಚುವರು. ಕೆರೂರ ಕವಿ ಕುರುಡ ರಾಜನೆಂಬ ಹುಟ್ಟುಗುರುಡ-ಜಾನಪದ ಕವಿಯು ಮಳೆರಾಜನ ಹಾಡನ್ನು

---

೧. 'ಸುಗ್ಗಿಯ ಸಂಪ್ರದಾಯಗಳು' ನೋಡಿರಿ
೨. 'ಜಾನಪದ ಸಂಪ್ರದಾಯಗಳು' ನೋಡಿರಿ. - ಐತಿಹಾಸಿಕ ಸಂಗತಿಗಳು, ಭಾಗ-೨

ಅನೇಕ ತಿಂಗಳವರೆಗೆ ಹಾಡುತ್ತಿದ್ದನೆಂದು ಬೆಳುವಲದ ಬಹಳ ಭಾಗಗಳಲ್ಲಿ ಪ್ರತೀತಿಯಿದೆ. ಈ ಹಾಡು ಪೂರ್ಣ ದೊರೆತಿಲ್ಲ. ದೊಡ್ಡದಾದೀ ಹಾಡಿನ ನೂರಾರು ಪದ್ಯಗಳನ್ನು ಮಾತ್ರ ಸಂಕಲನ ಮಾಡಲು ಸಾಧ್ಯವಾಗಿದೆ.

ರಾಗಿಬಣ್ಣದ ಕುದುರಿ, ರಾಜೇಕ ದೊಡ್ಡದು
ರಾಜರೊಳುರಾಜ ಮಳೆರಾಜ। ಬರುವಾಗ
ರಾಜೀವ ಕೈಯ ಮುಗಿದಾವ ॥
ಕ್ಯಾವೀನ ಉಟ್ಟಾನ, ಕ್ಯಾವೀನ ತೊಟ್ಟಾನ
ಮಾವೀನ ಗಿಡಕ ಮನಗ್ಯಾನ। ಮಳೆರಾಜ
ಮಾಯವಾಗ್ಯಾನ ಮಟದಾಗ ॥
ಕೆಂದಗುದುರಿಯನೇರಿ, ಕೆರೆಯಾಗ ನಿಂತವನ್ಯಾರ
ಅಂಜತೀನಯ್ಯ ಹೆಸರ್ಹೇಳ। ಲೋಕಾದ
ಮಂಜನಾಗಿರುವ ಮಳೆರಾಜ ॥
ಮಳಿಯಪ್ಪ ಮಳೆರಾಜ, ಕರೆಯುತಾರೊ ನಿನ್ನ
ಮೊದಲು ಕೂರೀಗೆ ರೈತಾರು। ಹೊಲದಾಗ
ಫಲವೆದ್ದು ಕೈಯ ಮುಗಿದಾವ ॥
ಮಳಿಯಪ್ಪ ಮಳೆರಾಜ, ಬೆಳಿ ಒಣಗಿ ಹೋದಾವೊ
ಬಡವsರು ಬಾಯ ಬಿಡತಾರೋ। ಅಡವೆನ್ನ
ಗಿಡಬಳ್ಳಿ ಕೊರಗಿ ಕಮರ್ಯಾವೊ ॥ —*ಜಾ.ಸಂ.*—

ಎಂದು ಮಳೆರಾಜನನ್ನು ವರ್ಣಿಸಿ ಹಾಡಿದ್ದಾರೆ.

ಬಾಬಾರೊ ಮಳೆರಾಜ, ಹೊಲದ ಬೆಳೆ ಕರೆದಾವೊ
ತೆನಿಯದ್ದು ಕೈಯ ಮುಗಿದಾವೊ। ಬೆಳವಲದ
ಜನಮುಗಿಲ ಮಾರಿ ನೋಡ್ಯಾರ ॥ —*ಜಾ.ಸಂ.*—

ಎಂದು ಬೆಳುವಲವು ಮುಗಿಲ ಮೋರೆ ನೋಡುವ ಅನಾವೃಷ್ಟಿಯ ಚಿತ್ರವು ನಮ್ಮೆಲ್ಲರ ಕಣ್ಣಿಗೆ ಬಾರದಿರದು.

ಆ ರಾಜ ಈ ರಾಜ, ಘನರಾಜ ಮಳೆರಾಜ
ತೇಜೇರಿ ಸುರಿದ ಮಳೆರಾಜ। ಬೆಳೆದಾನು
ಲೋಕದೊಳು ರಾಜ ತೆನಿರಾಜ ॥ —*ಜಾ.ಸಂ.*—

ಎಂದು ಒಕ್ಕಲಿಗನು ಮಳೆರಾಜನಿಂದ ಬೆಳೆದ ತೆನಿರಾಜನು ಲೋಕದ ಜೀವಾಳವಾದನೆಂದು ಹಾಡಿ ಕೊಂಡಾಡಿದ್ದಾನೆ.

ಏಳುತಾಲೇ ಎದ್ದು, ಯಾರ್‍ಯಾರ ನೆನೆಯಾಲೆ
ಎಳ್ಳುಜೀರಿಗೆ ಬೆಳೆಯೋಳ। ಭೂಮಿತಾಯಿ
ಎದ್ದೊಂದು ಗಳಿಗೆ ನೆನೆದೇನು ॥ —*ಹ.ಹಾ.ಪು*—೩
ಎಲ್ಲಕೂ ನಿನ್ನ ಮೊದಲ, ನಲ್ಲೆ ನಾ ಬಲಗೊಂಬೆ
ಎಳ್ಳುರಾಜನ್ನ ಬೆಳೆವಾಕಿ। ಭೂತಾಯಿ
ಬಲ್ಲಿದಳ ಮೊದಲ ಬಲಗೊಂಬೆ ॥ ಕೋ ॥ —*ಜಾ.ಮ.ಭಾ.*—

ಎಂದು ರೈತನಿಗೆ ಭೂದೇವಿಯನ್ನು ಸ್ತುತಿಸುವದೇ ಉದಯರಾಗವಾಗಿ ಪರಿಣಮಿಸುವುದು.

ನಮ್ಮ ಒಕ್ಕಲಿಗನಿಗೆ ಗೃಹ ದೇವದೇವತೆಗಳೂ, ಕುಲ ದೇವದೇವತೆಗಳೂ ಬೇರೆ ಅಲ್ಲದೆ ಗ್ರಾಮ ದೇವತೆಗಳೂ ಬೇರೆ ಇದ್ದಂತೆ ಕಂಡುಬರುತ್ತವೆ. ಒಮ್ಮೊಮ್ಮೆ ಅವನು ಈ ಎಲ್ಲ ದೇವದೇವತೆಗಳನ್ನು ಬಿಟ್ಟುಕೊಟ್ಟು, ಆತ್ಮತೃಪ್ತನಾಗಿ ಆರಾಧಿಸುವ ಆತ್ಮ ದೇವತೆಗಳೂ ಅವನಿಗೆ ಉಂಟು. ಅವನ ಆತ್ಮ ದೇವತೆಗಳ ಮೇಲೆ ಯಾರ ಹಕ್ಕೂ ನಡೆಯಲಾರದು. ಅದು ಕೇವಲ ಅವನ ಮನಸ್ಸಿನ ಪ್ರವೃತ್ತಿ ವಿಕಾಸವಾಗಿ ಅವನೊಡನೆ ಅದು ಬೆರೆತರೆ ಅವನು ಆತ್ಮ ದೇವ ಅಥವಾ ದೇವತೆಯೊಡನೆ ಒಂದಾಗುವನು. ಆಗ ಅವನಿಗೆ ಬಾಹ್ಯಪ್ರಪಂಚದ ಪರಿವೆಯೇ ಇರುವುದಿಲ್ಲ. ಶಿವಶರಣದಲ್ಲಿ ಅನೇಕರು ಈ ತೆರದ ಒಕ್ಕಲಿಗರಿದ್ದು ತಮ್ಮ ಕಾಯಕದಲ್ಲಿಯೇ ನಿರತರಾಗಿ ಇಹಲೋಕದಲ್ಲಿ ಪ್ರಪಂಚವನ್ನುಂಡು ಪಾರಮಾರ್ಥ್ಯವನ್ನು ಗೆದ್ದವರಿದ್ದಾರೆ. ಕರ್ನಾಟಕದ ತುಂಬೆಲ್ಲ ಇವರ ಸ್ಮಾರಕಗಳು ನಿದರ್ಶನಕ್ಕೆ ಬರಲು ಸಾಕು. ಉತ್ತರ ಕರ್ನಾಟಕದಲ್ಲಿ ಒಕ್ಕಲಿಗನು ತನ್ನ ಗ್ರಾಮ ದೇವತೆಗಳನ್ನಲ್ಲದೆ ಬೇರೆ ಅನೇಕ ದೇವದೇವತೆಗಳನ್ನೂ, ಶರಣ–ಸಾಧು–ಸತ್ಪುರಷರನ್ನೂ, ಸಂಪ್ರದಾಯ ದೇವದೇವತೆಗಳನ್ನೂ, ಭೂತಾದಿಗಳನ್ನೂ ಆರಾಧಿಸುತ್ತಾನೆ. ಅವುಗಳಿಗೆ ಹರಕೆ ಹೊತ್ತು ಬಿಡುಗಾಲದಲ್ಲಿ ಹೋಗಿ ತೀರಿಸಿ ಬರುತ್ತಾನೆ; ತೇರೆಳೆದು ಮಜಲು ಮೋಜುಗಳನ್ನು ಮಾಡುತ್ತಾನೆ. ಅವನು ಆರಾಧಿಸುವ ದೇವದೇವತೆಗಳಲ್ಲಿ ಕೆಳಗೆ ಕೊಟ್ಟವುಗಳು ಒಡೆದು ಕಂಡುಬರುವವು.

ಅ) ದೇವರು : ೧. ಸಂಗಮೇಶ್ವರ, ೨. ಮಹಾಕೂಟೇಶ್ವರ, ೩. ಸೋಮೇಶ್ವರ, ೪. ವೀರಭದ್ರ, ೫. ವಿರುಪಾಕ್ಷ, ೬. ಮಲ್ಲಿಕಾರ್ಜುನ, ೭. ಮಹಾಬಳೇಶ್ವರ, ೮. ಬಸವಣ್ಣ, ೯. ಹನುಮಂತ ಇವೇ ಮೊದಲಾದವುಗಳು.

ಬ) ದೇವತೆಗಳು : ೧. ಎಲ್ಲವ್ವ, ೨. ಬನಶಂಕರಿ, ೩. ಕಾಳವ್ವ, ೪. ಸತ್ಯವ್ವ, ೫. ಸೋರವ್ವ, ೬. ಸೆಟ್ಟೆವ್ವ, ೭ ದ್ಯಾಮವ್ವ, ೮. ದುರಗವ್ವ, ೯. ಜಕ್ಕವ್ವ, ೧೦. ಕರಿಯವ್ವ ಇವೇ ಮೊದಲಾದವುಗಳು.

ಕ) ಸಂಪ್ರದಾಯ ದೇವದೇವತೆಗಳು : ೧. ಮಳೆರಾಜ, ೨ ಗುರ್ಚಿ (ಗುರುಚಿ), ೩. ಜೋಕುಮಾರ. ದೇವತೆಗಳು : ೪. ಭೂತಾಯಿ, ೫. ಬನದಮ್ಮ ಮೊದಲಾದುವುಗಳು.

ಡ) ಶಿವಶರಣ ಸಾಧು ಸತ್ಪುರುಷರು : ಶಿವಶರಣರು : ೧. ಬಸವೇಶ್ವರ, ೨. ಚೆನ್ನಬಸವೇಶ್ವರ, ೩. ಸಿದ್ಧರಾಮೇಶ್ವರ, ೪. ರೇವಣಸಿದ್ಧೇಶ್ವರ, ೫. ಗೊಲ್ಲಾಳ, ೬. ನೀಲಮ್ಮ.

ಸಾಧು ಸತ್ಪುರುಷರು : ೧. ಅಥಣಿ ಶಿವಯೋಗಿಗಳು ೨. ಕುಮಾರಸ್ವಾಮಿಗಳು, ೩. ಬಾಲಲೀಲಾ ಮಹಾಂತ ಸ್ವಾಮಿಗಳು, ೪. ಚಿತ್ತರಗಿ ಮಹಾಂತಸ್ವಾಮಿಗಳು, ೫. ಶಿರಹಟ್ಟಿ ಫಕೀರ ಸ್ವಾಮಿಗಳು, ೬. ಶ್ರೀಸಿದ್ಧಾರೂಢರು, ೭. ನಾಯಿಲಿಂಗಪ್ಪನವರು, ೮. ಅಡವಿಸ್ವಾಮಿಗಳು, ೯. ಮಡಿವಾಳಪ್ಪನವರು, ೧೦. ಶಿಸುನಾಳ ಶರೀಫರು, ೧೧. ಬಬಲಾದಿ ರುದ್ರಯ್ಯನವರು, ೧೨. ಕೊಡಿಕಲ್ಲ ಸ್ವಾಮಿಗಳು. ೧೩. ಕೋಡಿಕೊಪ್ಪ ಹುಚ್ಚಯ್ಯನವರು, ೧೪. ಹೂಲಿಯ ಸ್ವಾಮಿಗಳು.

ಮೊದಲಾದ ಅನೇಕ ಲೀಲಾಪುರುಷರನ್ನು ಒಕ್ಕಲಿಗನು ಭಕ್ತಿಯಿಂದ ನೆನೆಯುವನಲ್ಲದೆ, ಬೆಳಸನ್ನು ದಾಸೋಹಮಠಗಳಿಗೆ ಮುಟ್ಟಿಸುವನು. ಬೆಳುವಲದಲ್ಲಿ ದಾಸೋಹಮಠ ಗಳಿಲ್ಲದ ಊರುಗಳು ವಿರಳ.

ಇ) ಭೂತಾದಿಗಳು : ೧. ಭರಮಪ್ಪ, ೨. ಏಳು ಮಕ್ಕಳ ತಾಯಿ, ೩. ಬ್ರಹ್ಮರಾಕ್ಷಸ, ೪. ಕೊಳ್ಳಿಯ ದೆವ್ವ ಮೊದಲಾದ ಪಿಸಾಳಿಗಳಿಗೂ ಒಕ್ಕಲಿಗನು ನಡೆಕೊಳ್ಳುವನು. ಉತ್ತರ ಕನ್ನಾಡಿನ ಆಯಾ ಭಾಗಗಳಲ್ಲಿ ಈ ಎಲ್ಲ ದೇವರ ಸಂಬಂಧ ಜಾನಪದ ಸಾಹಿತ್ಯವು ರಾಶಿರಾಶಿಯಾಗಿ ಒಟ್ಟಿದೆ. ಅದೆಲ್ಲವನ್ನು ಸಂಕಲನ ಮಾಡುವದೇ ಅಸಾಧ್ಯ.

ದೇವರೆಂಬ ದೊಡ್ಡ ಕಲ್ಪನೆಯು ಇದ್ದರೂ ಒಕ್ಕಲಿಗನಿಗೆ ದೇವರು ತೀರ ಹತ್ತಿರದವನಂತೆ ಕಾಣುತ್ತಾನೆ. ಅವನು ದೇವರೊಡನೆ ಸಲಿಗೆ ಸಲ್ಲಾಪಗಳನ್ನೂ ಆಡುವನು. ಅವನ ಮುಗ್ಧ ಭಕ್ತಿಯು ಬೆಳೆದು ಮಾನವ ಸ್ವಭಾವಕ್ಕನುಸಾರವಾಗಿ ದೇವರಿಗೂ ಸುಖದುಃಖಗಳನ್ನು ಅಂಟಿಸಿ ಲಕ್ಷ್ಯಕ್ಕೆ ತರುವುದು. ದಢದಢಿಸಿ ಹರಿಯುವ ಕೃಷ್ಣೆ–ಮಲಪ್ರಭೆಗಳ ಕೂಡಲದಲ್ಲಿ ಸಂಗಮೇಶ್ವರನು ಎಂದೋ ನೆಲೆಸಿದ್ದಾನೆ.

ಕೂಡಲ ಸಂಗಯ್ಯ, ಹೊಳಿಯಾಗ ಹ್ಯಾಂಗಿದ್ದಿ
ಹಳ್ಳೊತ್ತಿ ಸಣ್ಣ ಮಳಲೊತ್ತಿ। ಗಂಗೀಯ
ನೀರೊತ್ತಿ ಲಿಂಗ ನೆನೆದಾನ ॥ *–ಗ.ಹಾ. ಪು.೬–*

ಹರಳು ಮಳಲು ಒತ್ತುವದಿಲ್ಲವೇ? ನೀರು ಹೊಡೆಹೊಡೆದು ಕೊರೆಯುವದಿಲ್ಲವೇ? ಎಂದು ವಿಚಾರಿಸಿದರೂ ಮುಗ್ಧ ಭಕ್ತಿಯು ಅನುಭಾವಕ್ಕಿಳಿದಿದೆ. ಇಲ್ಲಿ ಹಾಗೆ, ಹೀಗೆ ಎಂಬ ಕಲ್ಪನೆಯು ರೈತನಿಗಿಲ್ಲ. ಹೊಳೆಯಲ್ಲಿ ನೆಲೆಸಿದ ಲಿಂಗವನ್ನು ಅನುಭಾವದ ಕಣ್ಣಿಂದ ಕಂಡು ಅನುಭವಿಸಿ ಮಾತಾಡಿದಂತಾಗಿದೆ. ಹಲಕೆಲವು ಹಳ್ಳಿಗಳಲ್ಲಿ ಒಕ್ಕಲಿಗನು ಮಠ ಮೊದಲಾದ ಪವಿತ್ರ ಸ್ಥಳಗಳಿಗೂ ನಡೆದುಕೊಳ್ಳುತ್ತಾನೆ. ಬೆಳಸು ದವಸಗಳನ್ನು ಮಠದ ದಾಸೋಹಕ್ಕೆ ಕೊಡುತ್ತಾನೆ. ಹಣ್ಣು ಹಂಪಲ, ಕಾಯಿಕಸರು, ಮೊದಲಾದುವುಗಳ ಮೊದಲನೆಯ ಬೀಡನ್ನು ಮಠಕ್ಕೆ ಮೀಸಲೆಂದು ನೀಡುತ್ತಾನೆ. ಮಠದ ಯೋಗಿಯು ಬೇಡಿದ್ದನ್ನು ಒದಗಿಸಿಕೊಡಲು ಯತ್ನಿಸುತ್ತಾನೆ. ಭಕ್ತಿಯು ತುಂಬಿದಾಗ ಆ ಮಠವನ್ನೂ ಹಾಗೂ ಪಟ್ಟದಯೋಗಿಯನ್ನೂ ಪರಿಪರಿಯಿಂದ ಗುಣಗಾನ ಮಾಡುತ್ತಾನೆ.

ಅಟವೆಲ್ಲೆ ಮಟವೆಲ್ಲೆ, ಮಟದ ಬಾಗಿಲವೆಲ್ಲೆ
ಕಟದ ರುದ್ರಾಕ್ಷಿ ಕದವೆಲ್ಲೆ। ಗದ್ದಗಿ
ಮಠವೈತೆ ಬಾಳಿ ವನದಾಗ ॥ *–ಜಾ.ಸಂ.–*

ಎಂದು ಅಭಿಮಾನದಿಂದ ಆ ಮಠದ ಸ್ಥಾನಮಾನವನ್ನು ಹೇಳುತ್ತಾನೆ. ಆ ಮಠದ ಶಿವಲಿಂಗಯೋಗಿಯ ಅದ್ಭುತ ಶಕ್ತಿಯನ್ನು ಕಂಡು, ಕೇಳಿ ಅಚ್ಚರಿಗೊಂಡು ಹಾಡಿದ್ದಾನೆ.

ಆರಾಣದಡಿವ್ಯಾಗ, ಆರುಕಾಲಿನ ಮಂಚ
ನಾಗರ ಸರಪು ತಲೆಗಿಂಬು। ಶಿವಲಿಂಗ
ಹ್ಯಾಂಗ ಗವಿದಾವೊ ಸಪನಿದ್ದೆ ॥ *–ಜಾ.ಸಂ.–*

ಎಂದು ಚಕಿತನಾಗಿ ಕೇಳಿದ್ದಾನೆ. ಜಟಾಧಾರಿಯಾದ ಆ ಯೋಗಿಯ ಬೀಸಗೂದಲುಗಳನ್ನು ನೋಡಿ–

ಇಂಜಾಣ ದಡಿವ್ಯಾಗ, ಮಂಜು ಬಿದ್ದಾವ ತಾಯಿ
ಮಂಜಲ್ಲ ಮಳೆಯ ಸರುವಂದೆ। ಶಿವಲಿಂಗ
ಕೆಂಜೆಡೆ ಬಿಟ್ಯಾರ ಬಿಸಲಿಗೆ ॥ *–ಜಾ.ಸಂ.–*

ಮಂಜೊ, ಮಳೆಯ ಸರುವೊ ಎಂಬಂತೆ ಕಾಣುತ್ತದೆ ಆ ಯೋಗಿಯ ಕೆಂಜೆಡೆ!

ಪಟ್ಟಿಽಕ ಒಪ್ಪೂವ ಪರದೇಶಿ ನೆನೆದೇನೆ
ಬಟ್ಟಲೀಭೂತಿ ಧರಿಸೂರು। ಶಿವಲಿಂಗ
ಪಟ್ಟದೇಗೀಯ ನೆನೆದೇನೆ ॥

ತೆಳ್ಳನ್ನ ಕಾಲೀಗೆ, ಬೆಳ್ಳೀಯ ಆವೀಗೆ
ಮೆಲ್ಲಕ ಮಟವ ಇಳಿದಾರ। ಶಿವಲಿಂಗ
ಜಕಣೇರ ಭಾವಿ ಜಳಕಕ॥ *-ಜಾ.ಸಂ.-*

ಆ ಶಿವಲಿಂಗ ಯೋಗಿಯ ದಿನಚರಿಯನ್ನೂ, ರೂಪ ರೇಷೆಯನ್ನೂ ಇಲ್ಲಿ ಕಾಣಬಹುದು.

ಹರೆಯ ಹೊತ್ತೀಲೆದ್ದು, ನರಿಯ ಮಾರಿಯ ಕಂಡೆ
ತಿರುಗಾಡುದ ಕಂಡೆ ಪವಳ್ಯಾಗ। ಶಿವಲಿಂಗ
ಸಾಲುಸಂಪೀಗೆ ವನದಾಗ॥
ಮಲ್ಲೀಗೆ ತೂರೀನೆ, ಗಲ್ಲೀಪ ಹೊಲಿಸೇನ
ಯಾಕೊಲ್ಲನವ್ವ ಮಟದೊಡೆಯ। ಶಿವಲಿಂಗ
ಬೇಡ್ಯಾನ ಬೆಳ್ಳಿ ಚವರೀಯ॥ *-ಜಾ.ಸಂ.-*

ಈ ಶಿವಲಿಂಗ ಯೋಗಿಯನ್ನು ಕಾಣುವದೆಂದರೆ ಒಂದು ಭಾಗ್ಯ ಆ ಭಕ್ತನಿಗೆ. ಗುರುವನ್ನು ತೃಪ್ತಿ ಪಡಿಸಲು ಭಕ್ತಿಯಿಂದ ತನ್ನ ಸೇವೆಯನ್ನು ಅರ್ಪಿಸಲು ಹೋಗಿದ್ದಾನೆ. ಕಡೆಗೆ-

ಯಾರೀಗೆ ಮಾಡಿದರ, ಸಾರತ ನನಗಿಲ್ಲ
ಗದ್ದಗಿಮಠದ ಗುರುವೀಗೆ। ಮಾಡಿದರ
ಸಾರತ ಹೊಂದೀನೆ ಶಿವನಲ್ಲೆ॥ *-ಜಾ.ಸಂ.-*

ಎಂದು ತನ್ನ ದೃಢವಾದ ಭಕ್ತಿಯನ್ನು ಸಾರಿ ಹೇಳಿದ್ದಾನೆ. ಇಂತಹ ಅನೇಕ ಹಾಡುಗಳನ್ನು ಒಬ್ಬೊಬ್ಬ ರೈತನಿಗೆ ಸಂಬಂಧಿಸಿದ ಮನೆಯ ದೇವರಿಗಾಗಲಿ ಇಲ್ಲವೆ ಸಾಧು ಸತ್ಪುರುಷರಿಗಾಗಲಿ ಇರುವದನ್ನು ಜನತೆಯ ನಿದರ್ಶನಕ್ಕೆ ತರಲು ಮೇಲಿನ ಪದ್ಯಗಳನ್ನು ಕೊಡಲಾಗಿದೆ. ಇಂತಹ ಹಾಡುಗಳು ನೋಡುವವರಿಗೆ ವೈಯಕ್ತಿಕವೆಂದೆನಿಸಿದರೂ ಶಬ್ದ ಶಬ್ದಗಳಲ್ಲಿ ಅವನ ನಿರ್ಮಲವಾದ ಭಕ್ತಿಭಾವನೆಯು ಹೊರ ಸೂಸದಿರದು. ಎಲ್ಲ ಹಳ್ಳಿಗರೂ ತಮ್ಮ ಆತ್ಮ ದೇವದೇವತೆಗಳನ್ನು ಹೀಗೆ ಹಾಡುತ್ತ ಬಂದಿದ್ದಾರೆ.

ಉತ್ತರ ಕರ್ನಾಟಕದಲ್ಲಿ ಬಹುತರವಾಗಿ ಎಲ್ಲ ಒಕ್ಕಲಿಗರೂ ಬಸವಣ್ಣನಾರಾಧನೆಯನ್ನು ಮಾಡುತ್ತಾರೆ. ಹಲ ಕೆಲವು ಬಸವಣ್ಣನ ಪ್ರಸಿದ್ಧ ಗುಡಿಗಳೂ ಉಂಟು. ಬಾಗೇವಾಡಿಯ ಬಸವ, ಕುಂಟೋಜಿಯ ಬಸವ, ಪಟ್ಟದಕಲ್ಲಿನ ಬಸವ ಮೊದಲಾದುವುಗಳು ಬಹಳ ಪ್ರಸಿದ್ಧವಾದುವುಗಳು.

ಬಾಗೆವಾಡಿಯ ಬಸವ, ಬಹಳ ದೊಡ್ಡವನೆಂದು
ಬೆಳ್ಳೀಯ ಮಗಡ ಮಾಡ್ಸೇನೊ। ಬಸವಣ್ಣ
ಹೊನ್ನ ಹಣೆಕಟ್ಟ ಬಿಗಸೇನೊ॥ *-ಜಾ-ಸಂ.-*

ಎಂದು ಬಾಗೇವಾಡಿಯ ಬಸವನು ದೊಡ್ಡವನೆಂದು, ಪ್ರೀತಿಯಿಂದ ಆ ಬಸವನಿಗೆ ಆಭರಣಗಳನ್ನು ಮಾಡಿಸುವನು. ಪಟ್ಟದಕಲ್ಲಿನ ಬಸವಣ್ಣನಿಗೆ ಮಕ್ಕಳಾಗದವರು ಬಂದು ಮಕ್ಕಳನ್ನು ಬೇಡಿಕೊಂಡು ಹೋಗುವರೆಂದು ಕಾಣುತ್ತದೆ.

ಚೆಂದುಳ್ಳ ಪಟ್ಟದಕಲ್ಲ, ಇಂಬುಳ್ಳ ಗುಡಿಯಾಗ
ಮಂದಾನ ಬಸವ ಮಲಗ್ಯಾನ। ಗುಡಿಮುಂದ
ಕಂದನ ಬೇಡವರು ಕಡೆಯಿಲ್ಲೊ॥ *- ಜಾ.ಸಂ.-*

ಎಂದು ಕೂಡಿದ ಪರಸಿಯ ಮನೋಭಾವನೆಯನ್ನೇ ಹಾಡಿದ್ದಾನೆ. ಹಳ್ಳಿಗರು ಮಕ್ಕಳ ಸಲುವಾಗಿ ಅನೇಕ ದೇವದೇವತೆಗಳಿಗೆ ಬೇಡಿಕೊಂಡು ಹಡೆದು, ಮಕ್ಕಳಿಗೆ ಆ ದೇವರ ಹೆಸರನ್ನು ಇಟ್ಟು ಕರೆಯುವುದನ್ನು ಈಗಲೂ ಕಣ್ಣಾರೆ ನೋಡಬಹುದು. ಅದಾವುದೋ ಕಾರಣ ನಿಮಿತ್ತ ಕುಂಟೋಜಿ ಬಸವಣ್ಣನು ಕಾದಾಡಿದಂತೆ ಕಾಣುತ್ತದೆ. ಅಂತೆಯೇ ಇಂದಿಗೂ ಕಾಲು ಮುರಿದುಕೊಂಡಿದ್ದನ್ನು ನೋಡಬಹುದು.

ಕುಂಟೋಜಿ ಬಸವಣ್ಣ, ಬಂಟಾಗಿ ರೌದಾಡಿ-
ಕುಂಟಾದ ಕಾಲ ಮುರಕೊಂಡು। ಪರಿಸ್ಯಾಗ
ಮಂಟಪದ ಮುಂದ ಮಲಗ್ಯಾನ॥ *-ಜಾ.ಸಂ.-*

ಒಮ್ಮೆ ಈ ಬಸವಣ್ಣಗಳಿಗೆ ಕಾದಾಟ ಬಿತ್ತಂತೆ. ರಭಸದಲ್ಲಿ ಕುಂಟೋಜಿ ಬಸವಣ್ಣನು ಕಾಲು ಮುರಿದುಕೊಂಡನಂತೆ, ಎಂದೊಂದು ಜನಪದ ಕಥೆಯೂ ಉಂಟು. ದ್ರಾವಿಡ-ಸಂಸ್ಕೃತಿಯ ಮೂಲ ಚಿನ್ಹವಾದ ಬಸವಣ್ಣನನ್ನು ಪೂಜಿಸಿದ ಒಕ್ಕಲಿಗನೇ ಇಲ್ಲ. ಹಳ್ಳಿಗೆ ದೊಡ್ಡ ಬಸವನಿಲ್ಲದಿದ್ದರೂ, ಕಳ್ಳಿಯ ಬಸವನಾದರೂ ಇದ್ದೇ ಇರುತ್ತಾನೆ. ಇದರ ಮೇಲಿಂದ ದ್ರಾವಿಡರು ಒಕ್ಕಲತನವನ್ನು ಮೊದಲನೆಯ ಬೇಸಾಯವನ್ನಾಗಿ ಪ್ರಾರಂಭಿಸಿದರೆಂದು ಊಹಿಸಬಹುದು. ಉತ್ತರ ಹಿಂದುಸ್ತಾನದ ಯಾವ ಭಾಗಗಳಲ್ಲಿಯೂ ಬಸವಣ್ಣನ ಜಾತ್ರೆ ಮಹೋತ್ಸವಗಳನ್ನು ಆಚರಿಸುವುದಿಲ್ಲ. ಬಸವಣ್ಣನ ಜಾತ್ರೆಗಳು ಕರ್ನಾಟಕದ ವೈಶಿಷ್ಟ್ಯಗಳು. ದ್ರಾವಿಡ ಜನಾಂಗದಲ್ಲಿ ಬಂದ ಅನೇಕ ಸಂಪ್ರದಾಯಗಳೂ, ಒಕ್ಕಲಿಗನ ಉಪಕರಣಗಳೂ ಈ ಮಾತನ್ನು ಪುಷ್ಟೀಕರಿಸುವುವು.

ಹಳ್ಳಿಗರು ಆರಾಧಿಸುವ ಇನ್ನೊಂದು ಮಹತ್ವದ ದೇವರೆಂದರೆ ಮಲ್ಲಯ್ಯ[೩] ಕರ್ನಾಟಕದ ತುಂಬೆಲ್ಲ ಮಲ್ಲಯ್ಯನ ಒಕ್ಕಲುಗಳು ಕಂಡುಬರುವುವು. ಮಲ್ಲಯ್ಯನು ಮಹಾದೇವರ ಅವತಾರವೆಂದು ನಮ್ಮ ಹಳ್ಳಿಗರಲ್ಲಿ ದೃಢವಾದ ಭಾವನೆಯಿದೆ.

---

೩. 'ಚಿತ್ರವಿಚಿತ್ರಗಳು' ಈ ಪ್ರಕರಣ ನೋಡಿರಿ.

ನಂಬಿದರೆ ನಂಬೇನ, ನಂಬಿ ಗುಳ್ಳಯ್ಯಾನ
ಕಂಬಿಕಾವಡಿ ಒಡಿಯೊನ। ಮಲ್ಲಯ್ಯ
ನಂಬೀನೇ ಬಹಳ ದುಡದಿಂದ॥

ಏಳುತಲೆ ನೆನೆದೇನ, ಏಳೆಂಟು ದೇವರನ
ಏಳುಬಾಗಿಲದ ಒಡಿಯಾನ। ಪರುತಮಲ್ಲ
ಏಳುತಲೆ ಮೊದಲು ನೆನೆದೇನೆ॥

ಏಳುತಲೆ ನೆನೆದೇನ, ಭಾಳಲೋಚನ ಶಿವನೆ
ಜೋಳೀಗಿ ಹೊನ್ನ ಮಳೆಗರೆದ। ಪರವುತದ
ದೇವಮಲ್ಲಯ್ನ ನೆನೆದೇನ॥ *–ಜಾ.ಸಂ.–*

ಹೀಗೆ ಮಲ್ಲಯ್ಯನ ಅಗಾಧ ಲೀಲೆಗಳನ್ನು ಹಾಡಿ–ಏಳುತೇಳುತಲೆ ನೆನಿಸಿ ಏಳುವನು– ಅಷ್ಟಕ್ಕೆ ತೃಪ್ತಿಯಾಗದೆ–

ಗುಡ್ಡದ ಮಲ್ಲಯ್ನ, ಗುಡಿಯೆಲ್ಲ ಬಂಗಾರ
ಹಾಸೀಗೆ ಗಲ್ಲು ಹವಳಾವು। ಮಲ್ಲಯ್ನ
ಬೀಸಣಿಕೆಗೆಲ್ಲ ಬಿಡಿಮುತ್ತು॥ *–ಜಾ.ಸಂ.–*

ಎಂದು ಸುಂದರವಾದ ಗರ್ಭಗುಡಿಯ ಸಿಂಗಾರದಲ್ಲಿರುವ ಮಲ್ಲಿಕಾರ್ಜುನನ ಚಿತ್ರವು ಅವನ ಕಣ್ಣೆದುರು ಬಂದು ನಿಲ್ಲುವುದು. ಗುಡಿಯ ಎದುರಿನ ಗರುಡಗಂಬದ ಮೇಲೆ ಉರಿಯುವ ಸರದೀಪಗಳು ಕಣ್ಣತುಂಬಲು–

ಗುಡ್ಡದ ಮಲ್ಲಯ್ನ, ಗರುಡಗಂಬದ ಮೇಲೆ
ಯಾರ ಹಚ್ಯಾರ ಸರದೀಪ। ನಮ್ಮನೆಯ
ಬಾಲ ಹಚ್ಯಾನ ನಿಜದೀಪ॥ *–ಜಾ.ಸಂ.–*

ಎಂದು ಒಳ್ಳೆ ಅಭಿಮಾನದಿಂದ ಹಾಡಿ ಹೊಗಳಿದ್ದಾನೆ–

ಮಂದಿ ಮಂದೀ ಎಂದು, ಮಂದಿ ನಂಬಲು ಹೋದೆ
ಮಂದಿ ಬಿಟ್ಟಾರ ನಡುನೀರ। ಮಲ್ಲಯ್ಯ
ತಂದೆ ನನ ಕೈಯ ಬಿಡಬ್ಯಾಡ॥ *–ಜಾ.ಸಂ.–*

ಎಂದು ಕೈಮುಗಿದು ತನ್ನ ಅಸಹಾಯ ಸ್ಥಿತಿಯನ್ನು ತೋಡಿಕೊಂಡು ದೇವರಿಗೆ ರಕ್ಷಿಸೆಂದು ಶರಣಾಗತನಾಗಿದ್ದಾನೆ. ಜ್ಯೋತಿರ್ಲಿಂಗಗಳಲ್ಲಿ ಶ್ರೀಶೈಲ ಮಲ್ಲಿಕಾರ್ಜುನ ಲಿಂಗವೂ ಒಂದು ಲಿಂಗವಾಗಿದೆ.

'ವೀರಭದ್ರ,' 'ವಿರುಪಾಕ್ಷ' ದೇವರು ಅತಿಶಯ ಉಗ್ರದೇವರೆಂದು ಹಳ್ಳಿಗರು ತಿಳಿಯುತ್ತಾರೆ. ಈ ದೇವರ ಮುಂದೆ ಮೈಲಿಗೆ, 'ಮುಡಚಟ್ಟು'ಗಳು ನಡೆಯುವದಿಲ್ಲ.

ಹಾಂವು ಅಂದರ ಜೀವ, ಹರಣsವ ಹಾರ್‍ಯಾವ
ಹಾಂವಲ್ಲ ಹಂಪಿ ವಿರುಪಾಕ್ಷ। ನಿನಮುಂದ
ಹಾಂವಾಗಿ ಗಂಗಿ ಹರಿದಾಳ॥ *–ಚಾ.ಸಂ.–*

ಹಾವಿನ ಸಿಟ್ಟನ್ನು ಕಂಡ ನಮ್ಮ ಹಳ್ಳಿಗರು, ಹಂಪಿಯ ವಿರುಪಾಕ್ಷನ ಸಿಟ್ಟು ಅಂತಹದೆಂದು ಹಾಡಿದ್ದಾರೆ. ತುಂಗಭದ್ರೆಯು ಹಾವಾಗಿ ಹರಿದಿರುವಳೆಂಬ ಉಪಮೆಯಂತೂ ಎಷ್ಟು ಸ್ವಾಭಾವಿಕವಾಗಿದೆ! ಲಗ್ನ ಮೊದಲಾದ ಮಂಗಲಕಾರ್ಯಗಳಲ್ಲಿ ಈ ದೇವರ ಒಕ್ಕಲುಳ್ಳವರು ಗುಗ್ಗುಳ ಹೊತ್ತಿಸಿ ನಂದಿಯ ಆಡುತ್ತಾರೆ. ಈ ಪ್ರಸಂಗವು ನೋಡುವ ಹಾಗೆ ಇರುವುದು.[೪]

ಗುಗ್ಗಳದ ಕೊಡಹೊತ್ತಿ ಸಗ್ಗದೊಳು ಹೊಗೆಯೆದ್ದು
ಉಗ್ಗಡಿಸಿ ಕುಣಿದ ಗುಂಡಯ್ಯ। ಪುರವಂತ
ಸಗ್ಗನಡುಗಿಸಿದ ಕಡೆ ಹೇಳಿ॥ ೩॥ *–ಕುಂ.ಗುಂ.–*

ಎಂದು 'ಕುಂಬಾರ ಗುಂಡಯ್ಯ'ನ ಹಂತಿಯ ಹಾಡಿನಲ್ಲಿ ಒಕ್ಕಲಿಗನು ಈ 'ಗುಗ್ಗುಳ' ವನ್ನು ಕುರಿತು ಹಾಡಿದ್ದಾನೆ.

ವೀರಭದ್ರನ ಮುಂದ, ಊರನಂದಿಯ ಕೋಲ
ಹಾರಾಡಿ ಕುಣಿದು ಕಡೆಹೇಳಿ। ಜಗದೊಳಗೆ
ಸಾರುವದು ಬಿದಿರು ಶಿವಮತವ॥೧೬॥ *–ಮೇ.ಕೇ.–*

ಎಂದು ವೀರಭದ್ರನ ಮುಂದೆ ಕುಣಿಯುವ ನಂದಿಯ ಕೋಲನ್ನು 'ಮೇದಾರ ಕೇತಯ್ಯ'ನ ಹಂತಿಯ ಹಾಡಿನಲ್ಲಿ ಹಾಡಿದ್ದಾನೆ. ಆ ದೇವರ ರೌದ್ರರೂಪವನ್ನು ಕಂಡ ಒಕ್ಕಲಿಗನು ಭಯ ಭಕ್ತಿಯಿಂದ

ಕಣಬಿಟ್ಟು ಕೋರ್ಮೀಸಿ ಕಂಡರಂಜಿಕೆ ಬರುವ
ಮಂಜಾನದಾಗ ನೆನದಾರ। ವೀರಭದ್ರ
ತುಂಬಿದಾರೂತಿ ತರುವೇನ॥ *–ಗ.ಹಾ–ಪು.೪–*

---

೪. 'ಹಳ್ಳಿಯ ಕುಣಿತಗಳು' ಈ ಪ್ರಕರಣ ನೋಡಿರಿ.

ಎಂದು ಸ್ತುತಿಸಿದ್ದಾನೆ. ಈ ಹಾಡನ್ನು ಕೇಳಿದರೆ ಮನಃಪಟಲದ ಮೇಲೆ ಕೂಡಲೇ ಆ ವೀರಭದ್ರನ ಚಿತ್ರವು ಮೂಡುವುದು. ಇಂಥ ವೀರಭದ್ರನನ್ನು ಕಂಡು ನಮ್ಮ ಹಳ್ಳಿಯ ಹೆಣ್ಣುಮಕ್ಕಳು ಅವನನ್ನು ನೂರಾರು ರೀತಿಯಿಂದ ಸ್ತೋತ್ರ ಮಾಡಿದ್ದಾರೆ; ಮಂಗಳಾರತಿಗಳನ್ನು ಹಾಡಿ ಆರತಿ ಎತ್ತಿದ್ದಾರೆ.

ಎಡವೂರ ತಳದಲ್ಲಿ ಏನೇನ ಶಡಗರ
ಎಡುಕ ನಂದೀ ಕೋಲ ಬಲಕ ಪಲ್ಲಕಿ ಪಂಕ
ಶಡಗರದ ಛತ್ತರಿಕೆ ಎಡಬಲ ಬತಾಗಿರಿ
ಹಾರೂವ ಹೂಬಾಣ, ಹೂಬತ್ತಿ ಕಂಡೆsರಿ
ಗುಗ್ಗsಳದಾರೂತಿ ಗುಡಿಮುಂದ ಕಂಡೆsರಿ
ಶರಣ ಬಂದಯ್ಯಗ ಕರಣ ನೋಡಿ ಪೂಜೆಗೋಳಬನ್ನೆ
ಜಯಮಂಗಳs ನಿತ್ಯ ಶಿವಮಂಗಳ ॥ *–ಮ.ದಂ.ಪು.೯–*

ಎಂದು 'ಎಡೂರ' ವೀರಭದ್ರನ ಸಡಗರವನ್ನು ಹೆಣ್ಣುಮಕ್ಕಳು ಹಾಡಿದ್ದಾರೆ. 'ಮಂಗಳಾರ ದಿನ ವೀರ ನಿನ್ನೋಲಗ' ಎಂದು ಮಂಗಳವಾರವು ವೀರಭದ್ರನ ವಾರ ವೆಂದು ಜನರು ಒಂದ್ಗೊತ್ತು ಮಾಡಿ ನಡೆದುಕೊಳ್ಳುತ್ತಾರೆ. ಈ ದೇವರ ವಾಲಗವು ನಡೆಯಬೇಕಾದರೆ, ಹೆಗ್ಗಾಳಿ, ಚಿನಕಾಳಿ, ರಂಗಿನಕಾಳಿ ಮೊದಲಾದವುಗಳು ಮೊಳಗ ಬೇಕು; ನಗಾರಿ, ನೌಬತ್ತು, ಚೌಗಡಗಳು ಪ್ರತಿಧ್ವನಿಗೊಡಬೇಕು; ಗುಡಿಯ ಮುಂದಿನ ಪಟಾಂಗಣದಲ್ಲಿ ಒಂದೆಡೆ ಗುಗ್ಗುಳವು ಹೊತ್ತಿ, ಮತ್ತೊಂದೆಡೆ ಪಾತರದ ಮೇಳವು ಕುಣಿಯಬೇಕು; ಆಗ ನೂರಾರು ಪತ್ರಿ ಪುಷ್ಪಗಳೊಂದಿಗೆ ವೀರಭದ್ರನು ಪೂಜೆಗೊಳ್ಳುವನು. ನೂರೊಂದೂರ ವೀರಭದ್ರನ ಹೆಸರುಗಳನ್ನೊಳಗೊಂಡ ಇನ್ನೊಂದು ಹಾಡೂ ಜಾನಪದದಲ್ಲಿ ಇರುವುದು.

ರಾಚೇಟೇಶ್ವರನು, ವೀರಭದ್ರದೇವರ ಇನ್ನೊಂದು ರೂಪಾಂತರ. ಬೆಳುವಲದ ಕೆರೂರಲ್ಲಿ ಈ ದೇವರು ನೆಲೆಸಿದ್ದಾನೆ. ಅಲ್ಲಿಯ ಒಕ್ಕಲಿಗರು ಈ ದೇವರಿಗೆ ಭಕ್ತಿಯಿಂದ ನಡೆದುಕೊಳ್ಳುವರು.

ಸತ್ಯುಳ್ಳ ರಾಚಣ್ಣs ಸತ್ತೇವೇನ್ಹೇಳಲಿ
ಸುತ್ತಲವರೆಲ್ಲ ಬರತಾರ । ರಾಚೋಟ
ಕಿಚ್ಚಿನಾಗ್ಹಾದು ಗುಡಿಹೊಕ್ಕು । । *–ಜಾ.ಸಂ.–*

ಎಂದು ಅದ್ಭುತ ಕಿಚ್ಚು ಹಾಯುವುದನ್ನು ಇಲ್ಲಿ ಹೇಳಿದೆ. ಈ ದೇವರ ರಥೋತ್ಸವದಲ್ಲಿ ಜನರು ಕಿಚ್ಚು ಹಾಯುವರು. ಹಾಯುವವರಿಗೆ ಆ ಕಿಚ್ಚಿನ ಜಳವು ಸಹ ತಾಕುವುದಿಲ್ಲ. ಇಂತಹ ಪ್ರಸಂಗಗಳನ್ನು ಕಣ್ಣಾರೆ ಕಂಡು ನಮ್ಮ ಹಳ್ಳಿಗರಲ್ಲಿ ಭಕ್ತಿ ಹುಟ್ಟುವುದು ಏನು ಆಶ್ಚರ್ಯ?

ರಾಚೋಟ ಮಾನ್ಯಾನ, ರಾಜಂಗಳೊಡಗೀನಿ
ರಾಜೀವ ನನ್ನ ತವರೀಗೆ । ಆಗ್ಲೆಂದು
ಡ್ವಾರೇದ ಕೈಯ ಸವಿಸೇನ ॥ *–ಜಾ.ಸಂ.–*

ಎಂದು ಆ ಊರ ಸೊಸೆಯಾಗಿ ಬಂದ ಪರ ಊರ ಹೆಣ್ಣು ದೇವರ ಪರಮಭಕ್ತಳಾಗಿ ತನ್ನ ತವರಿಗೆ ಹರಸೆಂದು ಬೇಡಿಕೊಂಡು ಸೇವೆ ಮಾಡುತ್ತಾಳೆ.

ಕಪ್ಪೂರ ಬೆಳಕೀಲಿ, ಗುಗ್ಗಳ ಹೊಗೆಯsಲಿ
ಅಪ್ಪ ರಾಚಣ್ಣ ಬೆವತಾನ । ಪೂಜ್ಯಾರಿ
ಮುತ್ತೀನ ಚೌರಿ ನೀ ಬೀಸೊ ॥ *–ಜಾ.ಸಂ.–*

ಎಂದು ನಮ್ಮ ಹಳ್ಳಿಗರು ಆ ದೇವರ ತೀರ ಹತ್ತಿರದವರಾಗಿ ಮಾತಾಡುತ್ತಾರೆ. ಮನೆಗೆಲಸದಲ್ಲಿ ತೊಡಗಿದ ಹೆಣ್ಣುಮಗಳಿಗೆ ತೇರೆಳೆಯುವ ಕಾಲಕ್ಕೆ ಬರುವುದಾಗದಿರಲು–

ಅಪ್ಪ ರಾಚಣ್ಣನ, ತೇರೆಳೆದು ಬರುವಾಗ
ತೀರಲಿಲ್ಲವ್ವ ಮನೆದಗದ । ನಾನೀಗ
ಕಳಸವ ಕಂಡು ಕೈಮುಗಿದೆ ॥ *–ಜಾ.ಸಂ.–*

ಎಂದು ತನ್ನ ತಪ್ಪನ್ನು ಒಪ್ಪಿಕೊಂಡು ಕ್ಷಮಿಸೆಂದು ದೇವರಿಗೆ ಕೈಮುಗಿಯುತ್ತಾಳೆ.

ಹಳ್ಳಿ ಹಳ್ಳಿಗಳಲ್ಲಿ ಕಂಡುಬರುವ ಇನ್ನೊಂದು ದೇವರೆಂದರೆ ಊರ ಹೊರಗಿರುವ 'ಹನುಮಪ್ಪ'. 'ಊರ ಸುಟ್ಟರೂ ಹನುಮಪ್ಪ ಹೊರಗೆ' ಎಂಬ ಗಾದೆಯೂ ಕನ್ನಡಿಗರಲ್ಲಿ ಬಳಕೆಯಲ್ಲಿದೆ. ಉತ್ತರ ಕರ್ನಾಟಕದಲ್ಲಿ ಕೆಲವಡಿ ರಂಗನಿಗೂ, ಈ ಹನುಮಂತ ದೇವರಿಗೂ ಅನೇಕ ಕಸಬಿಯರೂ, ಬಸವೆಯರೂ ತಾಳಿಯನ್ನು ಕಟ್ಟಿಕೊಳ್ಳುತ್ತಾರೆ. ಇಲ್ಲಿ ಹನುಮಪ್ಪನು ಒಕ್ಕಲಿಗನಿಗೆ ಸುಗ್ಗಿಯ ದೇವರಲ್ಲ; ಕಾಟ ಪೀಡೆಗಳನ್ನು ಕಳೆದುಕೊಳ್ಳಲು ನಡೆದುಕೊಳ್ಳುವ ದೇವರಾಗಿದ್ದಾನೆ. ಅನೇಕ ಪೀಡಾದಿಗಳನ್ನು ಕಳೆದುಕೊಳ್ಳಲು ಹಳ್ಳಿಯಲ್ಲಿ ಜೋಯಿಸನು ಹೇಳುವಂತೆ ನಮ್ಮ ಹಳ್ಳಿಗರು ಈ ದೇವರಿಗೆ ನಡೆದುಕೊಳ್ಳುತ್ತಾರೆ. ಬಿಡುವು ದೊರೆತಾಗ ಈ ದೇವರ ಓಕಳಿಯನ್ನು ಆಡುತ್ತಾರೆ. ಹಲಕೆಲವು ಹಳ್ಳಿಗಳಲ್ಲಿ ಈ ಉತ್ಸವಕ್ಕೆ 'ಹರಿಶಾಂವ' ಎಂದು ಕರೆಯುವದೂ ಉಂಟು. ಹನುಮಂತ ದೇವರು ದ್ರಾವಿಡ ಜನಾಂಗದವನು, ರಾಮಭಕ್ತನೆಂದು ಪೌರಾಣಿಕ ಕಥೆಯೂ ಉಂಟು.

ಡೊಂಕ ಮಾರಿಯ ಹನುಮ, ಲಂಕಾಕ ಬಲುಚೆಲುವ
ಟೊಂಕದ ಮ್ಯಾಲೆ ಎಡಗೈಯ ಇಟಗೊಂಡು
ಲಂಕಾಕ ಲಾಗ ಒಗೆದಾನೊ ॥ –ಹ.ಹಾ.ಪು.೯–

ಎಂದು ಹನುಮಂತನು ಲಂಕಾಪಟ್ಟಣಕ್ಕೆ ಚೆಲುವನೆಂದೂ ಲಂಕೆಗೆ ಜಿಗಿದನೆಂದೂ ಭಕ್ತಿ ಭರಿತ ರೈತನು ಹಾಸ್ಯವಾಗಿ ಹಾಡಿದ್ದಾನೆ.

ಸೀತನ್ನ ಒಯ್ದಾಗ ಶ್ರೀರಾಮ ಸಣ್ಣವ
ಆಗ ಹನುಮಂತ ಹೊಸಮಗ । ತಾಕೂತು
ಸೀತಾನ ಸೆರೆಯ ಬಿಡಸ್ಯಾ ॥ –ಗ.ಹಾ. ಪು.೬೩–

ಇದರಲ್ಲಿ ಒಕ್ಕಲಿಗನು, ಹನುಮಂತ ರಾಮಭಕ್ತನಾದರೂ, ರಾಮನಿಗಿಂತ ಹಿರಿಯನೆಂದೂ, ಸೀತೆಯನ್ನು ರಾವಣನು ಕದ್ದೊಯ್ದಾಗ, ರಾಮನು ಇನ್ನೂ ಸಣ್ಣವನಿದ್ದುದರಿಂದ ಆಗ ಪ್ರಾಯಕ್ಕೆ ಬಂದ ತಾನು ಸೀತೆಯ ಸೆರೆಯನ್ನು, ಬಿಡಿಸಿದನೆಂದೂ ಅವರಿಬ್ಬರ ವಯೋಮಾನವನ್ನು ಗುರುತಿಸಿದ್ದಾನೆ. ಅಲ್ಲದೆ–

ಹೊತ್ತು ಮುಣಗಿತೊ, ಕತ್ತಲಾಯಿತೊ
ಬೆಂಕಿ ಹಣುಮನ ಕಾವಲೊ ॥
ಬೆಳ್ಳಿ ಮೂಡಿತೊ ಬೆಳಗನಾಯಿತೊ
ಸೂರ್ಯಚಂದ್ರರ ಕಾವಲೊ ॥ –ಜಾ.ಸಂ.–

ಈ ಮಾತುಗಳು ಸೀತೆಯ ವನವಾಸದ ಕಾವಲನ್ನು ಹೇಳುತ್ತವೆ. ಕತ್ತಲೆ ಬರಲು ಸೀತೆಗೆ ಹನುಮಂತನೇ ಕಾವಲಾದನೆಂದೂ, ಹಗಲು ಬರಲು ಸೂರ್ಯಚಂದ್ರರೇ ಕಾವಲಾಗಿ ಸೀತೆಯ ಪಾತಿವ್ರತ್ಯವನ್ನು ಕಾಯ್ದರೆಂದೂ ರೈತನು ಹಾಡಿದ್ದಾನೆ. ಈ ಪ್ರಸಂಗದ ಮೂಲಕ ಹನುಮಂತ ಎಲ್ಲ ಜಾತಿಪಂಗಡದವರಿಗೂ ದೇವರಾಗಿ ಪೂಜೆಗೊಳ್ಳುತ್ತಾನೆ.

ಹಚ್ಚನ್ನ ಹರಿನಾಮ, ಮುತ್ತಿನ ಗೋಪಾಳ
ಹೊತ್ತೇರಿ ಬರುವ ಇವನ್ಯಾರೊ । ಕೆರೂರ
ಗಚ್ಚೀನ ಗುಡಿಯ ಕರಿಹನಮೊ ॥ –ಜಾ.ಸಂ.–

ಈ ಪದ್ಯದಲ್ಲಿ ಬರುವ ಹರಿನಾಮ ಮತ್ತು ಗೋಪಾಳ ಎರಡೂ ಶಬ್ದಗಳು ಮಾಧ್ವ ಸಂಪ್ರದಾಯವನ್ನು ಸೂಚಿಸುತ್ತವೆ. ಈ ಸಂದರ್ಭದಲ್ಲಿ ಹನುಮಂತ ದೇವರ ಪೂಜೆಯಾಗಲಿ, ದೇವರೆಂಬ ಭಾವನೆಯಾಗಲಿ ಅಥವಾ ಗುಡಿಗಳಾಗಲಿ ಕರ್ನಾಟಕದಲ್ಲಿ ಎಂದು ಬಂದುವು, ಎಂಬ ಸಂಗತಿಗಳನ್ನು ವಿಚಾರಿಸುವದಗತ್ಯ. ಸಂಶೋಧಕರ ದೃಷ್ಟಿಯಿಟ್ಟು ಕರ್ನಾಟಕದಲ್ಲಿರುವ ದೇವಾಲಯಗಳ ಪರಂಪರೆಯನ್ನು ಅಳೆಯಹೋಗಲು, ಶಿವಾಲಯಗಳೇ ಅತಿ ಪ್ರಾಚೀನಕಾಲದುವೆಂದು ತಮ್ಮ ಇತಿಹಾಸವನ್ನು ಕೂಗಿ ಹೇಳುವುವು. ಅಲ್ಲದೆ ಈ ಶಿವಾಲಯಗಳು ಕರ್ನಾಟಕದ ಎಲ್ಲ ಭಾಗಗಳಲ್ಲಿಯೂ ಕಂಡುಬರುವುವು. ಅದರಂತೆ ನಾವು ಹನುಮಂತ ದೇವರ ಗುಡಿಗಳನ್ನು ನೋಡಿದರೆ, ಅವು ತೀರ ಇತ್ತೀಚಿನವೆಂದೆನಿಸುವವಲ್ಲದೆ, ಒಂದು ವಿಶಿಷ್ಟ ಸಂಪ್ರದಾಯದವರಿಂದ ಜನತೆಯಲ್ಲಿ ಪ್ರಸಿದ್ಧಿಗೆ ಬಂದಿವೆ ಎಂದು ಕೂಡ ಕಂಡುಬರುವುದು. ಈ ಗುಡಿಗಳು ಕರ್ನಾಟಕದ ಹಲಕೆಲವು ಭಾಗಗಳಲ್ಲಂತೂ ಒಂದು ಸಹ ಇಲ್ಲದಿರುವದೇ ಸೋಜಿಗದ ಮಾತಾಗಿದೆ. ಉತ್ತರ ಕೊಂಕಣದಲ್ಲಿಯೂ, ಮಲ್ಲಾಡದ ಬೆಟ್ಟದ ಬಹುಭಾಗಗಳಲ್ಲಿಯೂ ಈ ಗುಡಿಗಳು ಕಂಡುಬರುವುದಿಲ್ಲ. ಇದರ ಕಾರಣವೇನಿರಬಹುದು? ಎಂಬ ಸಂಶಯವು ಸಂಶೋಧಕರಿಗೆ ಬಾರದಿರದು.

ನಮ್ಮ ಹಳ್ಳಿಗರನ್ನು ಎಲ್ಲ ಮತಗಳೂ ಸಾಧಿಸಿವೆ; ಸಾಧಿಸಿಕೊಂಡಿವೆ. ಇದಕ್ಕೆ ಮಾಧ್ವಮತವು ಹೊರತಾಗಿಲ್ಲ. ಹಳ್ಳಿಗಳಲ್ಲಿರುವ ಮಾಧ್ವಮತಾನುಯಾಯಿಗಳು, ಹನುಮಂತ ದೇವರು ಎಲ್ಲರಿಗೂ ಬೇಕಾದ ದೇವರಾಗಲು ಮೂಲ ಕಾರಣರಾದಂತೆ ತೋರುತ್ತದೆ. ಭೂತಾದಿಗಳ ಕಾಟ, ಪೀಡೆ, ಉಪಟಳ ಮೊದಲಾದವುಗಳಲ್ಲಿ ನಂಬುಗೆಯುಳ್ಳ, ರೋಗಾದಿಗಳಿಗೆ ಅಂಜಿದ, ನಮ್ಮ ಹಳ್ಳಿಗರು, ನಂಬುಗೆಯ ಜೋಯಿಸನನ್ನು ಕೇಳ ಹೋಗುತ್ತಾರೆ. ಈ ಜನರ ಅಂಧಶ್ರದ್ಧೆಯನ್ನು ತಿಳಿದ ಜೋಯಿಸನು, ರೋಗ, ಪೀಡಾದಿಗಳು ವಾಸಿಯಾಗಬೇಕಾದರೆ ಊರ ಹನುಮಂತದೇವರಿಗೆ ನಡೆದುಕೊಳ್ಳಬೇಕೆಂದು ಹೇಳುತ್ತಾನೆ. ಅವನ ಹೇಳುವಿಕೆಯನ್ನು ನಂಬಿ ನಮ್ಮ ಹಳ್ಳಿಗರು ಇಲ್ಲಿಯವರೆಗೂ ಆ ದೇವರಿಗೆ ನಡೆದುಕೊಳ್ಳುತ್ತ ಬಂದಿದ್ದಾರೆ. ಹಳ್ಳಿಗಳಲ್ಲಿ ಹನುಮಂತದೇವರು ರೋಗಪೀಡಾದಿಗಳನ್ನು ಕಳೆಯುವ ದೇವರಾಗಿದೆ.

ಮಾಧ್ವ ಸಂಪ್ರದಾಯದವರು 'ಮಧ್ವಾಚಾರ್ಯರು' ಹನುಮಂತನ (ವಾಯುದೇವನ) ಅವತಾರವೆಂದು ನಂಬುತ್ತಾರೆ. ಮಧ್ವಾಚಾರ್ಯರು ೧೨ನೆಯ ಶತಮಾನದ ಕೊನೆಯ ಭಾಗದಲ್ಲಿ ತಮ್ಮ ಮತವನ್ನು ಹಬ್ಬಿಸುತ್ತ ಬಂದರು. ಮಾಧ್ವಮತವು ಪ್ರಚಾರವಾದಂತೆ ಮಧ್ವಾಚಾರ್ಯರು ಹನುಮಂತನ ಅವತಾರವೆಂದು ನಂಬಿದ ಅನುಯಾಯಿಗಳು ಹನುಮಂತನನ್ನು ದೇವರೆಂದು ಗುಡಿಕಟ್ಟಿ ಪೂಜೆಮಾಡುತ್ತ ಬಂದಂತೆ ಕಾಣುತ್ತದೆ. ಈ ದೇವರ ಗುಡಿಗಳು ಮೊದಲು ಇದ್ದಿರಲಿಕ್ಕಿಲ್ಲ. ಇದ್ದಿದ್ದರೆ ಒಂದಾದರೂ ಪ್ರಾಚೀನ ಗುಡಿಯು ಜನರ ನಿದರ್ಶನಕ್ಕೆ ಬರಬೇಕಾಗಿತ್ತು. ಇದರ ಮೇಲಿಂದ ವಸ್ತುಸ್ಥಿತಿಯು ಹಾಗಿಲ್ಲವೆಂದು ತೋರುತ್ತದೆ. ಮಧ್ವಾಚಾರ್ಯರ ನಂತರ ಮಾಧ್ವಮತವು ಕರ್ನಾಟಕದಲ್ಲಿ ಬೆಳೆದು ಪ್ರಚಾರವಾದಂತೆ ಈ ಗುಡಿಗಳು ಅಸ್ತಿತ್ವದಲ್ಲಿ ಹೆಚ್ಚಾಗಿ ಬಂದಿರಬಹುದು. ಆದುದರಿಂದ ಹನುಮಂತ ದೇವರ ಗುಡಿಗಳು ೧೫ನೆಯ ಶತಮಾನಕ್ಕಿಂತ ಇತ್ತೀಚಿನವೆಂದು ಅಲ್ಲಿ ಉಪಯೋಗಿಸಿದ ಶಿಲ್ಪಕಲೆ ಮೊದಲಾದವುಗಳಿಂದ ತಿಳಿದುಬರುತ್ತದೆ. ಮಾಧ್ವಮತವು ಹಳ್ಳಿಗಳಿಗೆ ಮುಟ್ಟಲು ಹಳ್ಳಿಗರು ಆ ಮತದ ಎರಡು ಮೂಲ ಗುರುತುಗಳನ್ನು ಮಾತ್ರ ತಮಗೆ ಬೇಕಾದಾಗ ಉಪಯೋಗಿಸುತ್ತ

ಬಂದಿದ್ದಾರೆ. ಈ ಗುರುತುಗಳೆಂದರೆ ಒಂದು 'ಹರಿನಾಮ,' ಇನ್ನೊಂದು 'ಗೋಪಾಳ,' ಹರಿಸೇವೆಗೆ ಗೋಪಾಳವು ಒಕ್ಕಲಿಗನ ಕಣವನ್ನು[೫] ಸೇರಿತು. ಈಗಲೂ ಗೋಪಾಳವು ಬೆಳುವಲ ರೈತರ ಕಣದಲ್ಲಿ ಕಂಡುಬರುತ್ತಿದೆ. ಹನುಮಂತನಿಗೆ ಹರಿನಾಮದ ಗುರುತು ಹಣೆಯ ಮೇಲೆ ಈಗಲೂ ಉಳಿದಿದೆ. ಆದುದರಿಂದ ಹನುಮಂತ ದೇವರ ಗುಡಿಗಳು ಮಾಧ್ವಮತವು ಹಬ್ಬಿದ ಮೇಲೆ ಅನೇಕ ದಿನಗಳ ನಂತರ, ಅಂದರೆ ಸುಮಾರು ೧೫ನೆಯ ಶತಮಾನದಲ್ಲಿ ಅಸ್ತಿತ್ವದಲ್ಲಿ ಬಂದಿರಬಹುದೆಂದು ಹೇಳಬಹುದು. ಮಾಧ್ವಮತವು ಹಬ್ಬದಿರುವ ಭಾಗಗಳಲ್ಲಿ ಈಗಲೂ ಈ ಗುಡಿಗಳೇ ಕಂಡುಬರುವುದಿಲ್ಲ. ಇನ್ನೊಂದು ಸೋಜಿಗವೇನೆಂದರೆ ಶಿವೋಪಾಸಕರು ಈ ಹನುಮಂತನಿಗೆ ವೀರಭದ್ರದೇವರ ಕೈಯಿಂದ ಶಿವದೀಕ್ಷೆಯನ್ನು ಕೊಡಿಸಿ ಲಿಂಗಧಾರಣ ಮಾಡಿಸಿದ್ದು, ಶಿವಪುರಾಣಗಳಲ್ಲಿ ಬರುತ್ತದೆ. ಹೀಗೆ ಮಾಡಿದರೂ ಹನುಮಪ್ಪನ ಹಣೆಯ ಮೇಲಿನ ಹರಿನಾಮವು ಅಳುಕಿ ಹೋಗಲಿಲ್ಲ. ಹನುಮಂತನು ಹಳ್ಳಿಹಳ್ಳಿಗರಿಗೂ ಬೇಕಾದ ದೇವನಾದ. ಅವರು ಅವನನ್ನು ಹರಿಭಕ್ತನೆಂದೇ ಪೂಜಿಸುತ್ತ ಬಂದಿದ್ದಾರೆ. 'ಹನುಮಪ್ಪನು' ಯಾವ ರಾಜರಿಗೂ ಕುಲ ದೇವನಾಗಲಿ, ಅಥವಾ ಗೃಹ ದೇವನಾಗಲಿ ಆದದ್ದು ಕಂಡುಬರುವುದಿಲ್ಲ.[೬] ಹಲಕೆಲವು ಹನುಮಪ್ಪನ ಗುಡಿಗಳಲ್ಲಿ ಈಗಲೂ ಮಾಧ್ವ ಮತದವರು ವೇದಾಂತ ಮೊದಲಾದುವುಗಳನ್ನು ವಾದಿಸಿ, ಮಾಧ್ವಮತದ ತತ್ವಗಳನ್ನು ಜನರಿಗೆ ತಿಳಿಸಿ ಹೇಳುವದನ್ನು ನೋಡಿದರೆ, ಈ ಗುಡಿಗಳನ್ನು ಹಳ್ಳಿಗಳಲ್ಲಿ ಮಾಧ್ವಮತವನ್ನು ಹಬ್ಬಿಸಲು ಆ ಮತದ ಅನುಯಾಯಿಗಳು ಕಟ್ಟಿಸಿರಬಹುದೆಂದು ಶಂಕಿಸಬಹುದು.

ದೇವರಂತೆ ದೇವತೆಗಳ ಮೇಲೂ ನಮ್ಮ ಹಳ್ಳಿಗರು ಭಯಭಕ್ತಿಯಿಂದ ನಡೆದುಕೊಳ್ಳುತ್ತ ಬಂದಿದ್ದಾರೆ. ಕೆಲವರಿಗೆ ಈ ದೇವತೆಗಳು ಗೃಹ ದೇವತೆಗಳಾಗಿವೆ; ಬೇರೆ ಕೆಲವರಿಗೆ ಕುಲದೇವತೆಗಳಾಗಿವೆ; ಇನ್ನೂ ಕೆಲವರಿಗೆ ಗ್ರಾಮ ದೇವತೆಗಳಾಗಿವೆ; ಅಲ್ಲದೆ ಕೆಲವರು ಈ ದೇವತೆಗಳನ್ನು ಆತ್ಮ ದೇವತೆಗಳೆಂದೂ ಪೂಜೆಮಾಡುತ್ತಾರೆ. ಕರ್ನಾಟಕದಲ್ಲಿ ಎಲ್ಲವ್ವ ದೇವತೆಯ[೭] ಒಕ್ಕಲಿಲ್ಲದ ಹಳ್ಳಿಯೇ ಇಲ್ಲ. ಈ ದೇವತೆಯು ಮಾಯಕಾರಳೆಂದು ನಮ್ಮ ಹಳ್ಳಿಯ ಗಂಡು ಹೆಣ್ಣುಮಕ್ಕಳಲ್ಲಿ ಭಯದ ಭಾವನೆಯಿದೆ. ಮಹಾ ಚರ್ಮರೋಗಾದಿಗಳಾದರೆ ಈ ದೇವತೆಗೆ ನಡೆದುಕೊಳ್ಳಲು ಗುಣವಾಗುವದೆಂಬ ಮುಗ್ಧ ಕಲ್ಪನೆಯೂ ಇದೆ. ಅದರಂತೆ ಜನರಲ್ಲಿ ಭಕ್ತಿಯೂ ಬಂದಿದೆ. ಇವಳು ಮಾಯಕಾರಳು ಸತ್ಯವೇನೊ ಎಂಬಂತೆ ಗಂಡು ತನ್ನ ಗಂಡಸುತನವನ್ನು ಮರೆತು ಜೋಗತಿಯಾಗಿ ಸೀರಿಯನ್ನುಟ್ಟು ಉಳಿದ ಹೆಣ್ಣು ಜೋಗತಿಯರೊಡನೆ ಈ ದೇವತೆಯ ವಾಲಗ ಮಾಡುತ್ತ 'ಜಗ'ವನ್ನು ಹೊತ್ತು ಹಾಡಿ ಹೆಜ್ಜೆಗಳನ್ನು ಹಾಕುತ್ತ ದಣಿವಿಲ್ಲದೆ ಕುಣಿಯುತ್ತದೆ.

ಎಲ್ಲಿ ಕಾಣೆಲ್ಲಿ ಕಾಣೆ ಎಲ್ಲವ್ವ
ನಿನ್ನಂಥಾಕೀನೆಲ್ಲಿ ಕಾಣೆಲ್ಲಿ ಕಾಣೆ ॥ಪ॥

ತಾನ, ತಾಳ, ಲಯಾದಿಗಳನ್ನೊಳಗೊಂಡ ಈ ಹಾಡಿನೊಡನೆ 'ಜಗ' ಹೊತ್ತು ಜೋಗಯ್ಯನಾಗಲಿ, ಜೋಗತಿಯಾಗಲಿ ಹೆಜ್ಜೆಗಳನ್ನು ಹಾಕಿ ಕುಣಿಯುವ ದೃಶ್ಯವು ಎಲ್ಲರ ಚಿತ್ತವನ್ನು ಆಕರ್ಷಿಸದಿರದು. ಚೌಡಕಿಯನಾದ ಸುತಿಯ ಸೂರು, ತಾಳಗೆಜ್ಜೆಗಳ ಗತ್ತಿನ ಕಡಿತ (ಪೆಟ್ಟು) ಮೊದಲಾದುವುಗಳ ಒಮ್ಮೇಳ (ಸಂಗ ಜೋಡಣೆ) (orchestra) ಕಿವಿಗೆ ಅತಿ ಇಂಪಾಗಿ ಇನ್ನಷ್ಟು ಕೇಳಬೇಕೆಂದನಿಸುವುದು.

ಎಲ್ಲಮ್ಮದೇವಿ ಮರುತೇಕ ಬಂದೀದೆ ನೀನು ॥ಪ॥
ಮುದಕಿರೂಪವ ತೊಗೊಂಡಾಳ ಮೂರ್ತಿ
ಉಗುರ ಗೊಳ್ಳಕ ನಡೆದಾಳ ಶಕ್ತಿ
ಆಗ ಏಳು ವರುಷದಾಕಿದ್ದೆ ॥ *–ಜಾ.ಸಂ.–*

ಎಂದು ಭಕ್ತಿಯಿಂದ ಹಾಡಿ ಬಂದ ಮೇಳದವರು ಈ ದೇವತೆಯನ್ನು ಕೊಂಡಾಡುವರು.

ಕಂಚೀನ ಚೌಡುಕಿ ಮಿಂಚೂವ ಜಾಂಗೂಟಿ
ಪಂಚಾಳಿ ಕೋಟಿ ಶಬುದವ। ಎಲ್ಲವ್ವ
ಕೆಂಚಿ ಜೋಗಾಡ ಬಂದಾಳ ॥ *–ಜಾ.ಸಂ.–*

ಎಂದು ಎಲ್ಲವ್ವದೇವತೆಯು 'ಜೋಗಾಡು'ವ ಒಂದು ಪೂರ್ಣವಾದ ಚಿತ್ರವೇ ಇಲ್ಲಿ ಬಂದಿದೆ.

ಏಳು ಕೊಳ್ಳಗಳ ದಾಟಿ ಸಿದ್ಧರಗಿರಿಯಲ್ಲಿ ನೆಲೆಸಿದ ಈ ದೇವತೆಯ ಸುತ್ತು ಮುತ್ತಲಿನ ಸೃಷ್ಟಿ ಸೌಂದರ್ಯವನ್ನು ಎಷ್ಟು ಬರೆದರೂ ಕಡಿಮೆಯೇ. ಕೊಳ್ಳಗಳಲ್ಲಿ ಕೊಂಡಗಳೂ, ದರಿಗಳಲ್ಲಿ ಗವಿಗಳೂ, ಸುತ್ತಸುತ್ತೆಲ್ಲ ಕಾಡಪುಷ್ಪಗಳೂ ಅರಳಿ ಆ ಭಾಗವೇ ಅತಿ ರಮ್ಯವಾಗಿ ಕಾಣುತ್ತದೆ. ಈ ದೇವತೆಯ ಜಾತ್ರೆಗೆ ಬಂದು ಅಲ್ಲಿಯ ಬನಸಿರಿಯನ್ನುಂಡ ಹಳ್ಳಿಗರು ಭಕ್ತಿಯಿಂದ,

ಏಳ ಯಲ್ಲವ್ವ ತಾಯಿ, ಎಷ್ಟೊತ್ತು ಮಲಗೀದೆ
ಹೂವೆಂಜವಾಗಿ ಹುಳಮುಟ್ಟಿ। ಕೊಳ್ಳದ
ನೀರೆಂಜಲಾಗಿ ಗಿಳಿಕುಡಿದು ॥ *– ಜಾ.ಸಂ.–*

ಎಂದು 'ಎಲ್ಲವ್ವ ದೇವತೆ'ಯನ್ನು ಸೂರ್ಯೋದಯದ ಮುನ್ನವೇ ಎಚ್ಚರಿಸುವರೇನೊ ಅನ್ನುವಂತೆ ಈ ದೇವತೆಯ ಸೂರ್ಯೋದಯದ ಮುನ್ನವೇ ಆಗುವ ನಿತ್ಯಪೂಜೆಯನ್ನು ಹಾಡಿದ್ದಾರೆ. ಎಂಜಲಾಗದ ಹೂಗಳೂ, ಮೀಸಲ ನೀರೂ ಪೂಜೆಗೆ ಬೇಕೆಂದೂ ಬನಬನಗಳಲ್ಲಿ

---

೫. 'ಸುಗ್ಗಿಯ ಸಂಪ್ರದಾಯಗಳು' ನೋಡಿರಿ–ಐತಿಹಾಸಿಕ ಸಂಗತಿಗಳು ಭಾಗ–೨
೬. ಕ್ಷತ್ರಿಯ ವಂಶಕ್ಕೆ ಸೇರಿದ ಹಲಕೆಲವು 'ದೇಸಾಯಿಗಳು' ನಡೆದುಕೊಳ್ಳುತ್ತಾರೆ.
೭. 'ಚಿತ್ರವಿಚಿತ್ರಗಳು' ಈ ಪ್ರಕರಣ ನೋಡಿ.

ಹಾರುವ ತುಂಬಿಗಳು ಹೂಗಳಿಗೆರಗುವ ಮುನ್ನ, ಗಿಳಿವಿಂಡುಗಳು ನೀರಡಿಸಿ ಕೊಳ್ಳದ ನೀರನ್ನು ಕುಡಿಯುವ ಮುನ್ನ ಭಕ್ತರು ಈ ದೇವತೆಯನ್ನು ಪೂಜೆಗೊಳ್ಳಲು ಎಬ್ಬಿಸುವರೇನೊ ಅನ್ನುವಂತೆ ದಿನನಿತ್ಯ ಕೊಳ್ಳದಲ್ಲಿ ಪೂಜೆಯು ಕೇಳಬರುವುದು. ನೂರಾರು ಚೌಡಿಕೆಗಳು ನಾದಗೈಯುವುವು; ಸುತಿಗಳು ಸೂರು ಹಿಡಿಯುವುವು; ಜಾಗಟೆ, ಘಂಟೆಗಳು ಢಣ ಢಣಿಸುವುವು; ತಾಳಗಳು ಕಣಕಣಿಸುವುವು; ಗೆಜ್ಜೆಗಳು ಘಿಲಘಿಲಿಸುವುವು; ಚೈಯಾಕಗಳು ಚಳ್ ಚೈಯ್ ಎಂದು ಕುಟ್ಟುತ್ತಿರುವುವು. ಇಂತಹ ಮಂಗಳವಾದ್ಯಗಳ ಸಪ್ಪಳಕ್ಕೆ ಪೌಳಿಪೌಳಿಗಳಲ್ಲಿ ಬಂದಿಳಿದ ಭಕ್ತಗಣವು ಮಲಗುವದಾದರೂ ಹೇಗೆ?

ಹರೆಯ ಹೊತ್ತೀಲೆದ್ದು, ಹರದಿ ನಿನ ಗುಡಿಗ್ಹೋದೆ
ಕೊಡಹಾಲ ಬೆಣ್ಣೆ ಮಜನಾವ । ಮಾಡಿಸಿ
ಹಾಡಿ ಮಲ್ಲವ್ವ ಕುಣಿದೇನ ॥ *–ಜಾ.ಸಂ.–*

ಎಂದು ಬಂದ ಪರಸಿಯು ಪೂಜೆ ಮಾಡುವ ಚಿತ್ರವೇ ಈ ಹಾಡಿನಲ್ಲಿದೆ. ವೆಂಕಟರಮಣ, ರಂಗನಾಥ, ಹನುಮಂತ ಮೊದಲಾದ ದೇವರಿಗೆ ದೇವದಾಸಿಯರನ್ನು ಬಿಡುವಂತೆ ಎಲ್ಲವ್ವನಿಗೂ ಬಿಡುವರು. ಈ ದೇವದಾಸಿಯರು ಜೋಗತಿಯರಾಗಿ ದೇವತೆಯ ವಾಲಗ ಮಾಡಿ ಚೌರಿಯ ಬೀಸುವರು.

ಎಕ್ಕಲಿಗೋ ಜೋಗವ । ಉಕ್ಕಲಿಗೋ ಜೋಗವ ॥[೮]

ಎಂದೆನ್ನುವ ಪಲ್ಲವಿಯು ಭಕ್ತರು 'ಜೋಗಾಡು'ವ ಕಾಲಕ್ಕೆ ಎತ್ತುವ ಸೊಲ್ಲು. 'ಏಳು ಕೊಳ್ಳದ ಮಲ್ಲವ್ವ ನಿನ್ವಾಲಗರ್ ಉಧೋ ಉಧೋ ಉಧೋ' । ಎಂದು ವಾಲಗವಾಡುವರು. ಜಾನಪದದಲ್ಲಿ ಈ ದೇವತೆಗಿರುವ ಆದರ, ಭಕ್ತಿ ಭಯಗಳನ್ನು ನೋಡಿದರೆ ಯಲ್ಲವ್ವನು ಕರ್ನಾಟಕ ದೇವತೆಯೆಂದೇ ಹೇಳಬೇಕಾಗುತ್ತದೆ.

ಸತ್ಯವ್ವನ ಕೊಳ್ಳವು ಏಳು ಕೊಳ್ಳದಲ್ಲಿ ಒಂದು ದೊಡ್ಡ ಕೊಳ್ಳ. ಈ ಕೊಳ್ಳದ ಸಮೀಪದಲ್ಲಿರುವ ಜೋಗಳ ಕೊಂಡದ ದಂಡೆಯ ಮೇಲಿರುವ ಮಾಮರಗಳ ಮೇಲೆ ಪ್ರಸಿದ್ಧ ಸಿದ್ಧಶಿವಶರಣರಾದ 'ಎಕ್ಕಯ್ಯ' ಹಾಗೂ 'ಜೋಗಯ್ಯ'ರೆಂಬ ಸಿದ್ಧಪುರುಷರು ವಾಸಮಾಡಿದ್ದ ರೆಂದು ಜನಪದದಲ್ಲಿ ಪ್ರತೀತಿಯು. ಈ ಕೊಳ್ಳದಲ್ಲಿ 'ಸತ್ಯವ್ವ'ಳೆಂಬ ದೇವತೆಯೂ ನೆಲೆಯೂರಿದ್ದಾಳೆ.

ಚೆಂದ ಚೆಂದಗುಡ್ಡ, ಮುಂದ ಜೋಗಳಭಾವಿ
ಮುನ್ನೂರರವತ್ತು ಎಳೆಮಾವು । ಬನದಾಗ
ರಂಭಿ ಸತ್ಯವ್ವ ನೆನೆದಾಳ ॥ *–ಗ.ಹಾ–ಪು. ೭–*

ಎಂದು ಭಕ್ತರು ಈ ದೇವತೆಯು ನೆಲೆಸಿದ ರಮ್ಯ ಸ್ಥಳವನ್ನು ಬಣ್ಣಿಸಿದ್ದಾರೆ.

ಬಾದಾಮಿಯ ಮುಂದಿನ ರಮ್ಯವಾದ ಬನದಲ್ಲಿ ನೆಲೆಸಿದ 'ಬನಶಂಕರಿ'ಯು ಬೆಳುವಲದಲ್ಲಿ ದೊಡ್ಡ ದೇವತೆ. ಎಲ್ಲ ಜಾತಿ ಪಂಗಡದವರು ಈ ದೇವತೆಗೆ ನಡೆದುಕೊಳ್ಳುತ್ತಾರೆ. ಈ ಸ್ಥಾನವು ಸಾವಿರಾರು ತುಂಬಿದ ತೋಟಗಳಿಂದ ಯಾವಾಗಲೂ ತುಳಿಕಿ ಕುಲುಕುಲು ನಗುತ್ತಿರುತ್ತದೆ. ಸರಸ್ವತೀ ವಾಹಿನಿಯು ಈ ತೋಟಗಳನ್ನುಣಿಸಿ ಶಿವಯೋಗ ಮಂದಿರ ತೋಳ ತೆಕ್ಕೆಯಲ್ಲಿ ಮಲಾಪಹಾರಿಣಿಗೆ ಕೂಡಿದ್ದಾಳೆ. ಈ ದೇವತೆಯನ್ನು ಕುರಿತು ಜಾನಪದ ಸಾಹಿತ್ಯವು ಸಾಕಷ್ಟಿದೆ. ಈ ದೇವಸ್ಥಾನವು ಬಹಳ ಪ್ರಾಚೀನ ಕಾಲದ್ದೆಂದು ತಿಳಿದುಬರುವುದು. ಇದು ಬಾದಾಮಿಯ ಚಾಲುಕ್ಯರ ಕುಲದೇವತೆಯಾಗಿತ್ತೆಂದು ಅಲ್ಲಿಯ ಶಾಸನಗಳಿಂದ ತಿಳಿದುಬರುತ್ತದೆ. ಜನರು ಈ ದೇವತೆಯನ್ನು ಅನೇಕ ರೀತಿಯಿಂದ ವಾಲಗ ಮಾಡಿ ಹಾಡುವದನ್ನು ಕೇಳಬಹುದು.

ಅತ್ತೀಗಿಡದ ಸತ್ಯವ್ವ ನಿನ್ನ ವಾಲಕ ಶಂಭೂಕೊ!
ಬಾದಾಮಿ ಬನಶಂಕರೀ ನಿನ್ನ ವಾಲಕ ಶಂಭೂಕೊ!
ಆದಿ ಜಗದಂಬಾ ನಿನ್ನ ವಾಲಕ ಶಂಭೂಕೊ!

ಎಂದು ವಾಲಗಮಾಡಿ ಆರತಿ ಎತ್ತುವರು.

ಈ ದೇವತೆಗಳನ್ನಲ್ಲದೆ ಒಕ್ಕಲಿಗನು ಗ್ರಾಮ ದೇವತೆಗಳನ್ನೂ ಪೂಜಿಸುವನು. ನಮ್ಮ ಹಳ್ಳಿಗರಿಗೆ ಬಹುಶಃ ಗ್ರಾಮ ದೇವತೆಗಳೆಂದರೆ ದ್ಯಾಮವ್ವ ದುರಗವ್ವಗಳು – (ಈ ದೇವತೆಗಳು ತೃಪ್ತಿಯಾಗದಿದ್ದರೆ ಅವು ಊರಿಗೆ ಊರನ್ನೇ ಪೀಡಿಸುವವೆಂದು ಅವರಲ್ಲಿ ಅಂಧಶ್ರದ್ಧೆ ಬೇರೂರಿದೆ.) ಬೆಳೆಗಳು ಒಣಗಿದರೆ, ದನಕರುಗಳಿಗೆ ಪೀಡೆಯಾದರೆ, ಊರಲ್ಲಿ ರೋಗಾದಿಗಳು ಹಬ್ಬಿದರೆ, ಏನಾದರೂ ಸಂಭವಿಸಿದರೆ ಈ ದೇವತೆಗಳೇ ಮೂಲ ಕಾರಣರೆಂದು ತಿಳಿದು ವಾರಗಳನ್ನು ಆಚರಿಸುವರು. ಆ ದಿವಸ ಊರಿಗೆ ಊರೇ ತಮ್ಮ ಕೆಲಸ ಬೊಗಸೆಯನ್ನು ಬಿಟ್ಟು ಈ ದೇವತೆಗಳಿಗೆ ನೀರೆರೆದು, ಭಕ್ತಿಯಿಂದ ದೀಪ ಕೊಡುವುದು. ಕಡೆಯ ವಾರದಲ್ಲಿ ಉಡಿ ತುಂಬಿ, ಡೊಳ್ಳು ಮೊದಲಾದ ವಾದ್ಯಗಳನ್ನು ಬಾರಿಸಿ ಕುಣಿಯುವದೂ ಉಂಟು. ಹತ್ತು ಅಥವಾ ಹದಿನೈದು ವರುಷಕ್ಕೊಮ್ಮೆ ಈ ದೇವತೆಗಳ ರಥೋತ್ಸವ ಮಾಡಿ ಪಶುಬಲಿ ಕೊಟ್ಟು ದೇವತೆಗಳನ್ನು ಶಾಂತಗೊಳಿಸಿ ಇಡೀ ಊರಿಗೆ ಕಾಯಿಕಟ್ಟು ಮಾಡಿಸುವುದೂ ಉಂಟು.

ಸತ್ಯುಳ್ಳ ದ್ಯಾಮವ್ವ, ಮುತ್ತಿನ ಉಡಿಯಕ್ಕಿ
ಹೋತ್ತೇರಿ ಗೊಡದೆ ದಿನಪೂಜೆ । ನಿನಮುಂದ
ಮತ್ಯಾರ ಆಟ ನಡಿಯಾವ ॥ *–ಜಾ.ಸಂ.–*

---

೮. 'ಚಿತ್ರವಿಚಿತ್ರಗಳು' ಈ ಪ್ರಕರಣ ನೋಡಿರಿ– ಐತಿಹಾಸಿಕ ಸಂಗತಿಗಳು ಭಾಗ ೨

ಊರ ಊರಿಗೆ ಕಟ್ಟು, ಊರೀಗೆ ಕಾವಲಿ
ಯಾರಿಲ್ಲ ತಾಯಿ ನಿನಬಿಟ್ಟು। ದ್ಯಾಮವ್ವ
ತೇರಳೆದು ಕೈಯ ಮುಗಿದೇವೊ ॥ *–ಜಾ.ಸಂ.–*

ಎಂದು ಗ್ರಾಮ ದೇವತೆಯಾದ ದ್ಯಾಮವ್ವನನ್ನು ಸತ್ಯುಳ್ಳವಳೆಂದು ಒಕ್ಕಲಿಗನು ತೇರೆಳೆದು ಕೈಮುಗಿದಿದ್ದಾನೆ. ದೊಡ್ಡ ಹಾಡುಗಳನ್ನು ಹೇಳುವಾಗ ಪ್ರಾರಂಭದಲ್ಲಿ ಹಳ್ಳಿಯ ಹೆಣ್ಣುಮಕ್ಕಳು

ಅಕ್ಕನ ಬಲಗೊಂಡೆ, ಅಕ್ಕಯ್ಯನ ಬಲಗೊಂಡೆ
ಅಕ್ಕಮಾದೇವಿ ಬಲಗೊಂಡೆ। ಕೋ। ನಮ್ಮೂರ
ಅಕ್ಕದ್ಯಾಮವ್ವನ ಬಲಗೊಂಡೆ। ಕೋ। *–ಜಾ.ಮ–ಭಾ–*

ಎಂದು ಗ್ರಾಮ ದೇವತೆಯಾದ ದ್ಯಾಮವ್ವನನ್ನು ಬಲಗೊಂಬುವರು. ದ್ಯಾಮವ್ವ ದೇವತೆಯು ಕರ್ನಾಟಕ ಬಿಟ್ಟು ಹಿಂದುಸ್ತಾನದ ಯಾವ ಭಾಗದಲ್ಲಿಯೂ ಕಂಡು ಬರುವುದಿಲ್ಲ. 'ದುರಗವ್ವನು' ದುರ್ಗಿಯ ಬೇನೆ (Cholera)ಗೆ ಕಾರಣಭೂತಳಾಗಿದ್ದರೆ, 'ದ್ಯಾಮವ್ವನು' ಗಣಜಲಿ, ಗೊಬ್ಬರ, ಮೈಲಿಯ ಬೇನೆ ಮೊದಲಾದ ರೋಗಗಳ ತರುವವಳಾಗಿದ್ದಾಳೆ. ದುರ್ಗವ್ವನ ಕಥೆಯು ಪುರಾಣಗಳಲ್ಲಿ ಬರುತ್ತದೆ; ದ್ಯಾಮವ್ವನ ಹೆಸರು ಎಲ್ಲಿಯೂ ಕೇಳಬರುವದಿಲ್ಲ. ದ್ಯಾಮವ್ವನನ್ನು ಕುರಿತು ಜನಪದದಲ್ಲಿ ಅನೇಕ ಹಾಡುಗಳೂ, ಕಥೆಗಳೂ ಅವೆ. "ದ್ಯಾಮವ್ವನು ಬ್ರಾಹ್ಮಣರ ಮಗಳಂತೆ. ಒಬ್ಬ ಹೊಲೆಯನು ಬ್ರಾಹ್ಮಣ ವೇಷದಿಂದ ಅವಳನ್ನು ಮದುವೆಯಾಗಿ ಮಕ್ಕಳನ್ನು ಹಡೆದ. ಗಂಡನ ಕಸಬನ್ನು ಮಕ್ಕಳ ಮುಖಾಂತರ ಅರಿತ ದ್ಯಾಮವ್ವನು, ಅತ್ತೆ (ಮಾತಂಗಿ)ಯನ್ನು, ಮಕ್ಕಳನ್ನೂ ಕೊಂದು ಗಂಡನನ್ನು ಕೊಲ್ಲಲು ಬೆಂಬತ್ತಿದಾಗ ಅವನು ಅಂಜಿ ಕೋಣದ ಮೈಯೊಳಗೆ ಅಡಗಿಕೊಳ್ಳಲು ಅವಳು ಆ ಕೋಣವನ್ನು ಕಡಿದು ಸಮಾಧಾನವಾದಳು." ಆದುದರಿಂದ ಈಗಲೂ ಈ ದೇವತೆಯ ಮುಂದೆ ಜಾತ್ರೆಯಲ್ಲಿ ಕೋಣವನ್ನು ಕಡಿಯುವರು. ಊರ ದೈವದವರು 'ಅಂಕಿಯ ಹಾಕಿ'[೯] ಕೊನೆಯ ದಿನದಲ್ಲಿ ತೇರಕಟ್ಟಿ ಎಳೆಯುವರು. ಈ ದೇವತೆಯ ಜಾತ್ರೆಯಲ್ಲಿ ಮಾಡುವ ವಿಧಾನಗಳನ್ನು ನೋಡಿದರೆ, ಇವಳು 'ಮಹಿಷಾಸುರ ಮರ್ದಿನಿ' ಶಕ್ತಿಯ ಅವತಾರವೆಂದು ಹೇಳಬಹುದು. "ಬನವಾಸಿಯ ಕದಂಬರ ಕಾಲದಿಂದ ಈ ದೇವತೆಯ ಮೂರ್ತಿಗಳು ದೊರೆಯುತ್ತವೆ." ಎಂದು ಸಂಶೋಧಕರಾದ ಪ್ರೊ. ಕೆ.ಜಿ. ಕುಂದಣಗಾರರು ಹೇಳುತ್ತಾರೆ.

ಶಿವಶರಣ, ಸಾಧು–ಸತ್ಪುರುಷರ ಪಾದಧೂಳಿಯಿಂದ ಕನ್ನಾಡು ಪಾವನವಾಗಿದೆ. ಇವರ ಪವಾಡಗಳನ್ನೂ, ಲೀಲೆಗಳನ್ನೂ ಕಂಡು, ಕೇಳಿದ ಜನಪದವು ಇವರನ್ನು ಹಾಡಿ ಕೊಂಡಾಡುತ್ತ ಬಂದಿದೆ. ಸದಾಚಾರ ಸಂಪನ್ನರಾದ ಶಿವಶರಣರ ಪ್ರಭಾವವು ಜನತೆಯ ಮೇಲೆ ಬಹಳವಾಗಿದೆ. ಅಂತೆಯೇ ಒಕ್ಕಲಿಗನು ಶಿವಶರಣರನ್ನು ತನ್ನ ಸುಗ್ಗಿಯ ಕಣದಲ್ಲಿಯೂ ಬರಮಾಡಿಕೊಂಡಿದ್ದಾನೆ.[೧೦] ಶಿವಶರಣರ ವಿಷಯವಾಗಿ ಜಾನಪದ ಸಾಹಿತ್ಯವು ಸರ್ವತೋಮುಖಗಳಲ್ಲಿ ಅಪಾರವಾಗಿದೆ. ಅವುಗಳಲ್ಲಿ ನೂರೊಂದು ಶಿವಶರಣರ ಹಂತಿಯ ಹಾಡುಗಳ ಸಾವಿರಾರು ಪದ್ಯಗಳು ದೊರೆಯುತ್ತವೆ. ಈ ಸಾಹಿತ್ಯದ ಸವಿನೆನಪನ್ನು ಎಷ್ಟು ಬಣ್ಣಿಸಿದರೂ ತೀರದು.[೧೧]

ಶರಣರ ನೆನೆದಾರ, ಸರಗೀಯ ಇಟ್ಟಾಂಗ
ಅರಳ ಮಲ್ಲೀಗೆ ಮುಡಿದ್ಹಂಗ। ಕಲ್ಯಾಣ
ಶರಣರ ನೆನೆಯೊ ನನ ಮನವೆ ॥ *–ಗ.ಹಾ.ಪು.೪–*

ಎಂದು ಒಕ್ಕಲಿಗನು ಕಲ್ಯಾಣ ಶರಣರನ್ನು ನೆನೆಸಿದ್ದಾನೆ; ಅಪಾರವಾದ ಅವರ ಮಹಿಮೆಯನ್ನು 'ಶಿವಶರಣರ ಹಂತಿಯ ಹಾಡು'ಗಳ ತುಂಬೆಲ್ಲ ಭಕ್ತಿಯಿಂದ ಗುಣಗಾನ ಮಾಡಿದ್ದಾನೆ. ಕಲ್ಯಾಣ ಬಸವಣ್ಣನ ಮಹಿಮೆಯ ಕೂಗು ನಮ್ಮ ಹಳ್ಳಿಹಳ್ಳಿಗೆಲ್ಲ ಕೇಳಿರಲೇ ಬೇಕು; ಆ ಮಹಿಮನನ್ನು ಸಾಕ್ಷಾತ್ ದೇವರೆಂದು ತಿಳಿದ ನಮ್ಮ ರೈತನು–

ಕರುಣ ಬಂದರೆ ಕಾಯಾ, ಮರಣ ಬಂದರೆ ಒಯ್ಯಾ
ಕರುಣಿ ಕಲ್ಯಾಣ ಬಸವಣ್ಣ। ಶಿವಲಿಂಗ
ಕಡೆತನಕ ಕಾಯೊ ಅಭಿಮಾನ ॥ *–ಗ–ಹಾ.ಪು.೫–*

ಎಂದು ಬಸವಣ್ಣನ ಬಗ್ಗೆ ತಾಳಿದ ಭಾವನೆಯನ್ನು ಭಕ್ತಿಸೂಸಿ ಹಾಡಿದ್ದಾನೆ.

ಮುಗ್ಧ ಶರಣರ ಹಾಡು, ಸಿದ್ಧಿ ಮಂತ್ರವು ನೋಡು
ಸಿದ್ಧಾಗೊ ಹಾಡು ಹಾಡುದಕೆ। ಎಲೆ ಜೀವ
ಶುದ್ಧಾಗಿ ಹೊಂದು ಶಿವಪದವ ॥೩॥ *–ಗೊಲ್ಲಾಳ–*

ಅಷ್ಟೇ ಏಕೆ? ಅವನಿಗೆ ಶರಣರ ಹಾಡು ಶಿವಪದವನ್ನು ಕೊಡುವ ಸಿದ್ಧಿಮಂತ್ರವೇ ಆಗಿದೆ. 'ಲಿಂಗಯ್ಯ'ನ ಪವಿತ್ರತೆಯನ್ನರಿತ ಒಕ್ಕಲಿಗನಿಗೆ ಆ ದಿವ್ಯ ತೇಜವು ಚೈತನ್ಯ ತುಂಬಿದಂತೆ ಕಾಣುತ್ತದೆ.

ಆರೂತಿ ಹಿಡಕೊಂಡು, ಆರ್‍ಯಾಣ ತಿರಗೀದ
ದೇವರಿಲ್ಲೇನ ಗುಡಿಯಾಗ। ಲಿಂಗಯ್ಯಾ
ಮಾಯ ವಿಲ್ಲೇನ ನನಮ್ಯಾಲೆ ॥ *–ಹ.ಹಾ.ಪು.೫–*

---

೯. 'ಅಂಕಿಯ ಹಾಕು' ಅಂದರೆ, ಏಳು ಅಥವಾ ಒಂಬತ್ತು ದಿನಗಳವರೆಗೆ ಗುಡಿಯಲ್ಲಿ ನಂದಾದೀಪವಿಟ್ಟು, ಊರಲ್ಲಿ ಬೀಸುವ, ಕುಟ್ಟುವ ಸಪ್ಪಳ ಮಾಡದೆ ದಿನಗೆಲಸ ಬಿಟ್ಟು ದೇವತೆಯ ಸೇವೆಗೆ ನಿಲ್ಲುವರು.

೧೦. 'ಸುಗ್ಗಿಯ ಸಂಪ್ರದಾಯಗಳು' ಈ ಪ್ರಕರಣ ನೋಡಿರಿ – 'ಐತಿಹಾಸಿಕ ಸಂಗತಿಗಳು' ಭಾಗ–೨.

೧೧. ವಿಮರ್ಶೆ – ಭಾಗ–೩ 'ಹಂತಿಯ ಕಥನ ಕವನಗಳು' ನೋಡಿರಿ.

ಆ ದಿವ್ಯ ತೇಜಸ್ಸಿನಲ್ಲಿ ಈ ಜಗತ್ತಿನ ಆಗುಹೋಗುಗಳು ನಡೆದಿವೆ. ಅವನ ಆಶೀರ್ವಾದವು ತನಗಿರಲೆಂದು ಲಿಂಗಯ್ಯನನ್ನು ಮಹಾದೇವರೆಂದು ಆರಾಧಿಸುತ್ತಾನೆ. ಆ ಲಿಂಗದ ಬೆಳಕಿನಿಂದಲೇ ಅಜ್ಞಾನವೆಂಬ ನಿದ್ದೆಯು ಬಯಲಾಗುವದೆಂದು ರೈತನು ನಂಬಿದ್ದಾನೆ.

ಹೂವಿನಾಗ ಹುದುಗ್ಯಾನ, ಮಾಲ್ಯಾಗ ಮಲಗ್ಯಾನ
ಮೊಗ್ಯಾಗ ಕಣ್ಣು ತೆರದಾನ। ಲಿಂಗಯ್ಯ
ನೋಡಟಗೆ ನಿದ್ದೆ ಬಯಲಾಗಿ॥ *-ಗ.ಹಾ.ವು.ಶಿ-*

ಎಂದು ಸೃಷ್ಟಿ ಸೌಂದರ್ಯದಲ್ಲಿ ತೇಲುವ ದಿವ್ಯ ತೇಜಸ್ಸನ್ನು ತತ್ವಪೂರ್ಣವಾಗಿ ಹಾಡಿದ್ದಾನೆ. ಶಿವಶರಣರಂತೆ, ಹಳ್ಳಿಗರು ಶಿವಶರಣೆಯರನ್ನೂ ಹೊಗಳಿದ್ದಾರೆ.

ನೀಲವ್ವ ನೀ ಬಾರ, ನೀಲಲೋಚನೆ ಬಾರ
ನೀ ನನ್ನ ಮನೆಗೆ ಇರಬಾರ। ಸೋಮಾರ
ಹಾಲೀಗೆ ಹೆಪ್ಪ ಕೊಡು ಬಾರ॥ *-ಜಾ.ಸಂ.-*

ಶಿವದಾನ (ಮಜ್ಜಿಗೆ) ಸಂಪತ್ತುಳ್ಳ ಒಕ್ಕಲಿಗನ ಮನೆಯ ಹಾಲಿಗೆ ಹೆಪ್ಪು ಹಾಕುವವಳು ಶಿವಶರಣೆ ನೀಲಮ್ಮ. ಅಂದಮೇಲೆ ಅವನ ಮನೆಯ ಹೈನದ ಸಂಪತ್ತನ್ನು ಹೇಳಬೇಕೆ? ಸಾಧುಸತ್ಪುರುಷರಂತೂ ನಮ್ಮ ಹಳ್ಳಿಗರಿಗೆ ಯಾವಾಗಲೂ ಬೇಕು. ಅವರು ಬಂದು ಹೋದರೆ ಹಳ್ಳಿಯು ಪವಿತ್ರವಾಯಿತೆಂದು ನಂಬುವರು. ಆರೂಢಸ್ವಾಮಿ, ಅಡವಿಸ್ವಾಮಿ[೧೨] ಮೊದಲಾದ ಸತ್ಪುರುಷರ ಉತ್ಸವಗಳನ್ನು ಹಳ್ಳಿಗರು ಭಕ್ತಿಯಿಂದ ಈಗಲೂ ಮಾಡುವುದನ್ನು ನೋಡಬಹುದು. ಉತ್ತರ ಕರ್ನಾಟಕದಲ್ಲಿ ಕಾಲಜ್ಞಾನವನ್ನು ಸಾರುವ 'ಬಬಲಾದಿ' ಮತ್ತು 'ಕೊಡೆಕಲ್ಲು' ಈ ಪ್ರಸಿದ್ಧ ಮಠಗಳು ಈಗಲೂ ಉಳಿದು ಬಂದಿವೆ. ಈ ಕಾಲಜ್ಞಾನವನ್ನು ಸಾರಲು ಬಂದ ಅಯ್ಯಗಳಿಗೆ ಸತ್ಪುರುಷರೆಂಬ ಭಾವನೆಯಿಂದ ನಮ್ಮ ಹಳ್ಳಿಗರು ಬಹಳ ಆದರದಿಂದ ನಡೆದುಕೊಳ್ಳುವರು.

ಸಿಟ್ಟಿನ ಶಿವರುದ್ರ, ಬಿಟ್ಟಾರ ಬಬಲಾದಿ
ಮೆಟ್ಟ ಮಾಡ್ಯಾರ ಪಡಸಲಗಿ। ತಳದಾಗ
ನಿಂತ ಸಾರ್‍ಯಾರ ಕಲಿಕಾಲ॥ *-ಜಾ.ಸಂ.-*

ಎಂದು ರೈತನು ಈ ಕಾಲಜ್ಞಾನಿಯನ್ನು ದೇವರೆಂಬ ಭಾವನೆಯಿಂದ ಹಾಡಿದ್ದಾನೆ. ಹೀಗೆ, ನಮ್ಮ ಹಳ್ಳಿಗರಿಗೆ ದೇವರೆಂಬ ಕಲ್ಪನೆಯು ವಿಶಾಲವಾಗಿದೆ.

ಮೇಲೆ ಹೇಳಿದ ಅನೇಕ ದೇವತೆಗಳ ಜಾತ್ರೆ-ಮಹೋತ್ಸವ ಮೊದಲಾದುವುಗಳು ಬಹಳ ವಿಜೃಂಭಣೆಯಿಂದ ಆಗುತ್ತವೆ. ಜಾತ್ರೆಯೆಂದರೆ ಹಳ್ಳಿಗರಿಗೆ ಒಂದು ಆನಂದ. ತೇರುಕಟ್ಟಿ ಎಳಿಸುವುದೂ, ಮೋಜುಮಜಲು ಮಾಡಿ ದೇವರನ್ನು ಶಾಂತಪಡಿಸುವುದೂ ಅವರಿಗೆ ಬಹಳ ಸೇರುತ್ತದೆ. ದೇವರು ಶಾಂತ ಆದರೆ ಜಗತ್ತೇ ಶಾಂತೆಂಬ ದೊಡ್ಡ ಕಲ್ಪನೆಯೂ ಈ ಜಾತ್ರೆಯ ಹಿಂದೆ ಅದೆ. ಒಕ್ಕಲಿಗನಿಂದಲೇ ಈ ದೊಡ್ಡ ಜಾತ್ರೆಗಳ ಸಂಭ್ರಮ. ಸಂಗಮೇಶ್ವರ, ಮಹಾಕೂಟೇಶ್ವರ, ಸೋಮೇಶ್ವರ, ವೀರಭದ್ರ, ವಿರುಪಾಕ್ಷ, ಚೆನ್ನಬಸವೇಶ್ವರ, ಮಹಾಬಲೇಶ್ವರ, ಮಹಾಲಿಂಗೇಶ್ವರ, ಬಸವಣ್ಣ, ಎಲ್ಲವ್ವ, ಬನಶಂಕರಿ ಮೊದಲಾದ ದೇವ-ದೇವತೆಗಳ ಜಾತ್ರೆಗಳು, ದೊಡ್ಡ ಜಾತ್ರೆಗಳೆಂದು ಇಡೀ ಕರ್ನಾಟಕದಲ್ಲಿ ಪ್ರಸಿದ್ಧವಾಗಿವೆ.

'ಸಂಗಯ್ಯ ಜಾತ್ರೆ ಶರಣರದು' ಎಂದು ಉತ್ತರ ಕರ್ನಾಟಕದಲ್ಲಿ ಹೆಸರುವಾಸಿಯಾಗಿದೆ. ಈ ಜಾತ್ರೆಗೆ ದೊಡ್ಡ ಪರಸಿಯು ಕೂಡುವದು. ನೂರಿಪ್ಪತ್ತು ಅಡಿ ಎತ್ತರವಾದ ಹೊನ್ನಕಳಸದ ತೇರು ಶೃಂಗಾರಾಗಿ ನಿಲ್ಲುವುದು.

ಸಂಗಪ್ಪಯ್ಯನ ತೇರು, ಸಿಂಗಾರಾಗ್ಯಾವೇನ
ಗಂಧಕಸ್ತೂರಿ ರಥವೇರಿ। ಬಾಗಲಕೋಟೆ
ಬಂಗಾರ ಕಳಸ ಬರತಾವ॥ *-ಜಾ.ಸಂ.-*

ಈ ಕಳಸಕ್ಕೆ ಸರಕಾರದ ಕಾವಲು ಉಂಟು. ಬಾಗಲಕೋಟೆಯ ದೈವವೇ ಈ ಕಳಸವನ್ನು ಹೊತ್ತುಕೊಂಡು ಹೋಗಿ ಸಂಗಯ್ಯನ ತೇರೆಳೆದು, ಮರುದಿನವೇ ಕಳಸದೊಡನೆ ಬಾಗಲಕೋಟೆಗೆ ಬರುವುದು.

ಹೋಗಣ್ಣನ ಕೈಯಾಗ, ಹೊಳೆವೆರಡು ಉಂಗಾರ
ಹೋಗು ನಿನ ದಾರಿ ಬಲು ದೂರ। ಸಂಗಮದ
ತೇರು ನಿನಗಾಗಿ ತಡೆದಾವು॥ *-ಜಾ.ಸಂ.-*

ಎಂದು ತಂಗಿಯು ಸಂಗಮದ ಜಾತ್ರೆಗೆ ಹೊರಟ ಅಣ್ಣನನ್ನು ತಡೆಯಲು ಮನಸಿಲ್ಲ. ಅಷ್ಟು ಅವಳ ಭಕ್ತಿ ಸಂಗಮೇಶ್ವರನ ಮೇಲೆ. ದಕ್ಷಿಣಕಾಶಿಯೆಂದು ಪ್ರಸಿದ್ಧವಾದ 'ಮಹಾಕೂಟ'ವೂ ಹಳ್ಳಿಗರಿಗೆ ಪುಣ್ಯಕ್ಷೇತ್ರ, ನಿಸರ್ಗದಡಿಯಲ್ಲಿರುವ ಈ ಕ್ಷೇತ್ರವು ಒಕ್ಕಲಿಗನನ್ನು ಮೇಲಿಂದ ಮೇಲೆ ಬರಮಾಡಿಕೊಳ್ಳುವುದು. ವರುಷದ ಹನ್ನೆರಡು ಹುಣ್ಣಿಮೆಗಳಲ್ಲಿಯೂ ಒಕ್ಕಲಿಗರು ಇಲ್ಲಿ ಕೂಡುತ್ತಾರೆ. ಅಗಿಯ ಹುಣ್ಣಿಮೆಗೆ ಮಾತ್ರ ದೊಡ್ಡ ಪರಸಿಯು ಕೂಡಿ ಜಾತ್ರೆಯಾಗುವುದು.

---

೧೨. 'ರಸಾವೇಶಗಳು' ಈ ಪ್ರಕರಣ ನೋಡಿರಿ.

ಅಣ್ಣತಮ್ಮರು ಕೂಡಿ, ನಿನ್ನೆ ಗುಡ್ಡವನೇರಿ
ಚೆನ್ನಂಗಿ ಬಿದಿರ ಕಡಿದಾರ। ಕಟ್ಟಿಸಲು
ಹೊನ್ನ ಮಾಗಡದ ಹೂದೇರ॥ -ಜಾ.ಸಂ.-

ಹೀಗೆ ಅನೇಕ ಜಾತ್ರೆಗಳು ನಮ್ಮ ನಿದರ್ಶನಕ್ಕೆ ಬರುವುವು. ಒಕ್ಕಲಿಗನು ಬಹುತರವಾಗಿ ಎಲ್ಲ ಜಾತ್ರೆಗಳನ್ನು ತನ್ನ ಬಳಗದವರೊಡನೆ ಮಾಡುವನು.

ಮಾನವ ಪ್ರಪಂಚದ ಆಗುಹೋಗುಗಳು ದೈವಸಂಕಲ್ಪವೆಂದು, ಮೂಢನಂಬುಗೆಯಲ್ಲಿ ಹಳ್ಳಿಗರು ಬಂದಿದ್ದಾರೆ. ಅವರ ಪ್ರಪಂಚದಲ್ಲಿ ಏನಾದರೂ ಅನರ್ಥವಾಗಲಿ, ದುರಂತವಾಗಲಿ, ಸಂಭವಿಸಿದರೆ 'ಹಡೆದವರೇನು ಹಣೆಬರಹ ಬರೆದರೇ?,' 'ತಲೆಯಿದ್ದಲ್ಲಿ ಕಾಲು ಎಳಿಸಿತು' ಮೊದಲಾದ ಅರ್ಥಗರ್ಭಿತ ಗಾದೆಯ ಮಾತುಗಳನ್ನು ಮುರಿದು ಸುಮ್ಮನಾಗುತ್ತಾರೆ; ಎಲ್ಲವೂ ದೈವಸಂಕಲ್ಪವೆಂದು ಉಸಿರುಗರೆಯುತ್ತಾರೆ. ಹೀಗೆ 'ನಸಿಬ'ವನ್ನು ನಂಬಿದ ಹಳ್ಳಿಗರು, ಮುಂಚಿತವಾಗಿ ಅದನ್ನರಿಯಲು ಭವಿಷ್ಯ, ಶಕುನ ಮೊದಲಾದುವುಗಳನ್ನು ಕೇಳುವರು. ಈ ನಸಿಬವನ್ನು ಓದಿ ಹೇಳುವ ಜನರೂ ಹಳ್ಳಿಗಳಲ್ಲಿದ್ದಾರೆ; ಅವರೇ ಹಳ್ಳಿಯ ಜ್ಯೋಯಿಸರು. ಇವರು ಭವಿಷ್ಯವನ್ನು ಹೇಳಿಯೇ ತಮ್ಮ ಹೊಟ್ಟೆಯನ್ನು ಹೊರಕೊಳ್ಳುವರು. ದೈವವನ್ನು ಗೆದೆಯಲು ಮಂತ್ರಗಳನ್ನು ಊದುವರು; ಯಂತ್ರಗಳನ್ನು ಕಟ್ಟುವರು. ಹಾಲು, ಮೊಸರು, ಬೆಣ್ಣೆ, ಕಾಳುಕಡಿ, ಕಾಯಿಕಸರು ಮೊದಲಾದವುಗಳನ್ನು ಜೋಯಿಸನಿಗೆ ಕೊಟ್ಟು ನಸಿಬವನ್ನು ಕೇಳಿಕೊಂಡು ಹೋಗುತ್ತಾರೆ. ಹಳ್ಳಿಯ ಹೆಣ್ಣುಮಕ್ಕಳಿಗೆ ಶಕುನ ಮೊದಲಾದುವುಗಳನ್ನು ಕೇಳುವ ಮನಸ್ಸೂ ಆಗುವುದು. ಶಕುನಾದಿಗಳನ್ನು ಹೇಳುವವರೆಂದರೆ, ಸುಗ್ಗಿಗೆ ಹೊಟ್ಟೆಯ ತುಂಬಿಕೊಳ್ಳಲು ಬಂದ 'ಕೊರವಂಜಿಗಳು.' ಹಳ್ಳಿಯ ಹೆಣ್ಣುಮಕ್ಕಳ ಇಂಗಿತವನ್ನು ಅರಿತು ಅನುಕೂಲವಾಗುವ ಮಾತುಗಳನ್ನು ಆಡಿ ತಮ್ಮದನ್ನು, ಈ ಕೊರವಂಜಿಗಳು ಸಾಧಿಸಿಕೊಳ್ಳುವರು. ಕೇಳಿದವರು ಇವರಿಗೆ ರೊಕ್ಕ, ಕಾಳುಕಡಿ ಮೊದಲಾದುವುಗಳನ್ನು ಕೊಟ್ಟು ಕಳಿಸುತ್ತಾರೆ. ಹಳ್ಳಿಗರು 'ಪಣತಿಯ ಶಕುನ,' 'ಗುರ್ಚಿಯ' ಶಕುನ ಮೊದಲಾದುವುಗಳನ್ನೂ ಕೇಳುವರು. ಹಲ್ಲಿಯ ಶಕುನ, ಕಾಗೆಯ ಶಕುನ, ಬೆಕ್ಕಿನ ಶಕುನ, ಗೂಗೆಯ ಶಕುನ, ಹಂಗದ ಶಕುನ ಮೊದಲಾದುವುಗಳನ್ನೂ ನಂಬುವರು. ಇರುಳೆಲ್ಲ ಸುಡಗಾಡಿನಲ್ಲಿ ಅಲೆದಾಡಿ ಹಾಲ್ಹಕ್ಕಿಯ 'ಪಣಕಟ್ಟ,' ಅದನ್ನು ಓದಿ ಜನರಿಗೆ ಹೇಳುವ ಇನ್ನೊಬ್ಬ ವ್ಯಕ್ತಿಯೆಂದರೆ 'ಬುಡಬುಡುಕಿ'ಯು ರಾತ್ರಿಯಲ್ಲಿ ಘಂಟೆ ಬಾರಿಸಿ, ಬುಡಬುಡಕಿಯನ್ನು ನುಡಿಸುತ್ತ ಊರೆಲ್ಲ ತಿರುಗಿ, ಕಡೆಗೆ ಸುಡನಾಡು ಸೇರಿ ಹಾಲ್ಹಕ್ಕಿಗಳುಲಿಯುವದನ್ನು ಕೇಳಿ ಅರ್ಥವರಿಯುತ್ತಾನೆ; ತನ್ನ ಆಳವಾದ ಅಭ್ಯಾಸದಿಂದ ರಾಜ್ಯ ರಾಜ್ಯಗಳು ಕಟ್ಟಿ ಉರುಳಿ ಹೋದದ್ದನ್ನು ಸೂಚಿಸುತ್ತ ಬಂದಿದ್ದಾನೆ. ಇವನ ಶಕುನವನ್ನು ಕನ್ನಡ ಅರಸು ಕುಲಗಳೂ ನಂಬುತ್ತ ಬಂದಿರುತ್ತವೆ. ಹಳ್ಳಿಗಳಿಗೆ ರೋಗಪೀಡಾದಿಗಳು ಬರುವುದನ್ನೂ ಸೂಚಿಸುತ್ತಾನೆ; ಊರಿಗೆ ಕಾಯಕಟ್ಟು ಮಾಡಿಸಿರೆಂದು ಹೇಳುತ್ತಾನೆ. ಹಳ್ಳಿಗರು ಅದನ್ನು ನಂಬಿ ಬೇಡಿದ್ದನ್ನು ಕೊಟ್ಟು ಅವನಿಂದ ಕಾಯಕಟ್ಟನ್ನೂ ಮಾಡಿಸುವರು.

ಜಯವಾಗತದ, ಜಯವಾಗತದ
ಜಯವಾಗತದ ತಾಯೀ ಜಯವಾಗತದ ॥ಪ॥
ಮೂಡಲದ ಗಂಡಕ್ಕಿ ನುಡಿದೇತಿ ಶಕುನಾವ
ಜೋಗಳ ಹಾಡೈತಿ ಹೆಣ್ಣಕ್ಕಿ ತಾಯಿ ॥ಜ॥

ಎಂದು ಅನೇಕ ಹರಕೆಯ ಪದ್ಯಗಳನ್ನು 'ಡಮರಿ'ಯ ತಾಳದಲ್ಲಿ ನುಡಿಸಿ ಹೆಣ್ಣುಮಕ್ಕಳ ಮನಸ್ಸನ್ನೇ ಗೆದೆಯುವನು. ಅವನು ಹೇಳುವುದನ್ನು ಕಿವಿಗೊಟ್ಟು ಕೇಳುವ ನಮ್ಮ ಹೆಣ್ಣುಮಕ್ಕಳು ನಂಬಿ ತಲೆದೂಗುವರು, ಬೇಡಿದ್ದನ್ನು ಕೊಟ್ಟೇ ಬಿಡುವರು. ಇಷ್ಟು ಬೇರೂರಿದೆ ಹಳ್ಳಿಗರಲ್ಲಿ ಈ ದೈವ ಸಂಕಲ್ಪ!

ಹಣೆಯ ಬರಹದ ಗೆರೆಯು, ಹರೆದರು ತಪ್ಪದು
ಹರಿಚಂದ ರಾಯ ಸುಡಗಾಡು। ಸೇರಿದರ
ಇದಿಯವನ ಬೆನ್ನ ಬಿಡಲಿಲ್ಲ॥ -ಗ.ಹಾ.ಪು.೬೩-

ಎಂದು ನಮ್ಮ ಹಳ್ಳಿಗರು ನಸಿಬದ ದೊಡ್ಡ ಪುರಾಣವನ್ನೇ ಇಲ್ಲಿ ಹಾಡಿಬಿಟ್ಟಿದ್ದಾರೆ. ಐತಿಹಾಸಿಕ 'ಕಿತ್ತೂರ' ದುರಂತವೂ ಅವರಿಗೆ ದೈವದಾಟವೆನಿಸಿದೆ. ಕಿತ್ತೂರ ಬಂಟರು ಎಷ್ಟು ಹೆಣಗಾಡಿದರೂ ನಸಿಬದ ಮುಂದೆ ಅವರಾಟ ನಡೆಯಲಿಲ್ಲೆಂದು ಕಾಣುತ್ತದೆ.

ಕನ್ನೂರ ಕಲ್ಲೂರ, ಮಲ್ಲsರs ಪಿತೂರಿ
ರಾಗಿ ಕೂಡೀಸಿ ಹುಸಿಮದ್ದು। ಕಿತ್ತೂರ
ನಸಿಬ ಹಾರ್‍ಯಾವು ಹುಸಿಗುಂಡು ॥ -ಜಾ.ಸಂ.-

ಎಂದು ಕಿತ್ತೂರ ನಸಿಬವನ್ನೂ ಹಾಡಿದ್ದಾರೆ. ಹಳ್ಳಿಯ ಹೆಣ್ಣುಮಕ್ಕಳು ಹಾಡುವ ಶಿವಶರಣೆ, 'ಸತ್ತ ಗಂಡನ ಪಡೆದ ಚೆನ್ನವ್ವ'ನ ಹಾಡಂತೂ ನಸಿಬದಾಟದ ಒಂದು ಮಾದರಿಯ ಹಾಡಾಗಿದೆ. 'ದೈವ' ಈ ಶಬ್ದಕ್ಕೆ ಬೇರೊಂದು ವಿಶಿಷ್ಟ ಅರ್ಥವೂ ಇದೆ ಜನಪದದಲ್ಲಿ. ಊರ ಸಮಾಜವೇ ಆ ಊರ 'ದೈವ'ವಾಗುತ್ತದೆ. ದೈವ ಹೇಳಿದ್ದನ್ನೂ, ಮಾಡಿದ್ದನ್ನೂ ಯಾರೂ ಸಿಂತರಿಸರು. ಒಮ್ಮೊಮ್ಮೆ ಹಳ್ಳಿಗರಿಗೆ ಈ ದೈವವೇ ದೇವರಾಗಿ ನಿಲ್ಲುತ್ತದೆ. ಈ 'ದೈವ'ದ ಬಲವನ್ನು ಹಳ್ಳಿಗರ ಲಗ್ನ ಮುಹೂರ್ತಗಳಲ್ಲಿ ಈಗಲೂ ಕಾಣಬಹುದು. ಹಂದರದಲ್ಲಿ 'ದೈವ' ಕೂಡಿದಾಗ ಅಣ್ಣ ತಮ್ಮಂದಿರ ಮದುವೆಯಲ್ಲಿ ಅಕ್ಕತಂಗಿಯರು ಅವರನ್ನು ಮನೆಯ ಬಾಗಿಲದಲ್ಲಿ ತಡೆದು, ಹೆಣ್ಣಿಡೆದು ಬೀಗತನವನ್ನು ಮಾಡಬೇಕೆಂದು ವಚನ ತಕ್ಕೊಂಡೇ ಬಿಡುತ್ತಾರೆ. ಸಮಯ ಬಂದಾಗ ದೈವದಲ್ಲಾಡಿದ ಮಾತುಗಳನ್ನು ಸಾಧಿಸಿಕೊಳ್ಳುತ್ತಾರೆ. ಈ ರೂಢಿಯನ್ನು ಹಳ್ಳಿಗರು ಮೊದಲಿನಿಂದಲೂ ಪಾಲಿಸುತ್ತ ಬಂದಿದ್ದಾರೆ. ಈಗಲೂ ಹಲಕೆಲವರು ಪಾಲಿಸುತ್ತಾರೆ. ಆದರೆ ಮದುವೆಯಲ್ಲಿ ಇದು ಈಗ ಹಾಡಿನಲ್ಲಿ ಮಾತ್ರ ಉಳಿದಿದೆ. ಹಳ್ಳಿಗರಲ್ಲಿ 'ಅಟ್ಟರೂ ದೈವ, ಕೊಟ್ಟರೂ ದೈವ' ಎಂಬ ಗಾದೆಯ ಮಾತೂ ಇದೆ. ಯಾರಾದರೂ, ದೈವದ ವಿರುದ್ಧ ಹೋದರೆ

ತೀರಿತು. ಅವನಿಗೆ, ಮರುದಿನವೇ ಊರಿಗೆ ಊರೇ ಬಹಿಷ್ಕಾರ, ಕಟ್ಟಕಡೆಗೆ ಅವನು ನಮೋ ನಮೋ ಎಂದು ದಂಡತೆತ್ತು ದೈವ ಕೂಡುವನು. ದೈವವನ್ನು ಬಿಟ್ಟು ಹೋದವನಿಗೆ ಗತಿಯೇ ಇಲ್ಲ ಹಳ್ಳಿಗರಲ್ಲಿ, ಹುಟ್ಟಿಸಿದ ದೇವರಿಗೂ ಒಮ್ಮೊಮ್ಮೆ ಅಂಜದ ಮಾನವನು, ದೈವಕ್ಕೆ ಅಂಜಿ ನಡೆಯಬೇಕಾಗುತ್ತದೆ. ಅಂದರೆ ಮಾತ್ರ ಅವನ ಪ್ರಪಂಚವು ಸುರಳಿತ ಸಾಗುವುದು.

ದೇವ, ದೈವಗಳಂತೆ ದೆವ್ವವೂ ನಮ್ಮ ಹಳ್ಳಿಗರನ್ನು ಹಿಡಿದಿದೆ. ಹಳ್ಳಿಯ ಹೆಣ್ಣು ಮಕ್ಕಳಿಗಂತೂ ದೆವ್ವದ ಕಾಟವು ಇದ್ದೇ ಇರುತ್ತದೆ. ದೆವ್ವ ಬಡಿದರೆ ಬಿಡಿಸುವ ಬಂಟರೂ ಇದ್ದಾರೆ ಹಳ್ಳಿಗಳಲ್ಲಿ. ಪಿಶಾಚಿಗಳ ಅರಸು ದೆವ್ವವನ್ನು ಗೆದ್ದು ಕೈವಶಮಾಡಿಕೊಂಡ 'ಬೆಟಗೇರಿ ಬೇತಾಳ ಚೆನಬಸಪ್ಪ'ನ ಕಥೆಯು ಉತ್ತರ ಕರ್ನಾಟಕದವರಿಗೆ ಗೊತ್ತಿದ್ದ ಅದ್ಭುತ ಕಥೆಯು. ಅನೇಕ ಮಂತ್ರತಂತ್ರವಾದಿಗಳೂ ಆಗಿ ಹೋಗಿದ್ದಾರೆ. ಬಾದಾಮಿಯ ಸಿದ್ಧರಗಿರಿಯಲ್ಲಿಯ ಕುಟುಗನ ಕೇರಿ, ಹಾಗೂ ಕೆಂದೂರು, ಈ ಗ್ರಾಮಗಳು ಈ ವಿದ್ಯೆಯಲ್ಲಿ ಈಗಲೂ ಪ್ರಸಿದ್ಧ ಇರುವುವು. ಭೂತ ಪಿಶಾಚಿಗಳು ವಾಸಮಾಡಿದ ದೊಡ್ಡ ದೊಡ್ಡ ಹಾಳುಮನೆಗಳೂ, ತೋಟಪಟ್ಟಿಗಳೂ ಹಳ್ಳಿಗಳಲ್ಲಿ ಉಂಟು. ಅವು ಅಡ್ಡಾಡುವ ಕಾಲವೆಂದರೆ ಧೂಳಸಂಜೆ, ಅಥವಾ ದೊಡ್ಡನಸುಕು. ಅವುಗಳ ಅಂಜಿಕೆಯುಳ್ಳ ಹಳ್ಳಿಗರು ಆ ಸಮಯದಲ್ಲಿ ತಮ್ಮ ಮಕ್ಕಳನ್ನಾಗಲಿ, ಹೆಂಗಸರನ್ನಾಗಲಿ ಆ ಭಾಗಗಳಿಗೆ ಎಂದೂ ಕಳಿಸುವುದಿಲ್ಲ. ದೆವ್ವ ಪಿಶಾಚಿಗಳಿಗೆ ಅಂಜಿ ಅನೇಕ ಹಳ್ಳಿಗರು ಜೀವ ಕೊಟ್ಟದ್ದೂ ಉಂಟು. ಇಷ್ಟು ಮೈಯುಂಡಿದೆ ಈ ಕಲ್ಪನೆಯು ನಮ್ಮ ಹಳ್ಳಿಗರಲ್ಲಿ!

ಉತ್ತರ ಕರ್ನಾಟಕದಲ್ಲಿ ಕಂಡುಬರುವ ದೆವ್ವ, ಪಿಸಾಳಿಗಳ ಬಗ್ಗೆ (೧. ಏಳು ಮಕ್ಕಳ ತಾಯಿ, ೨. ಬ್ರಹ್ಮರಾಕ್ಷಸ, ೩. ಕೊಳ್ಳಿದೆವ್ವ, ೪. ಬರಮಪ್ಪ) ಇವುಗಳ ಸಂಬಂಧ ಅನೇಕ ದಂತ ಕಥೆಗಳೂ, ಹಾಡುಗಳೂ ಜಾನಪದದಲ್ಲಿ ಉಂಟು. ಈ ಭೂತಾದಿಗಳು ವಾಸಮಾಡಿಕೊಂಡಿರುವ ಸ್ಥಾನಗಳೆಂದರೆ ಹಳೆಮನೆಗಳೂ, ಗುಡಿಗುಂಡಾರಗಳೂ, ಕೋಟೆಕೊತ್ತಲಗಳೂ, ಬಹಳ ಹಳೆ ಹುಣಸಿ, ಆಲ, ಒಸರಿ ಮೊದಲಾದ ಮರಗಳೂ, ಊರ ಮುಂದಿರುವ ಸುಡಗಾಡ ಇವೇ ಮೊದಲಾದ ಭಯಾನಕ ಬೀಭತ್ಸ ಸ್ಥಳಗಳು. ಏಳು ಮಕ್ಕಳ ತಾಯಿಯು ವಿಶೇಷವಾಗಿ ವಾಸಮಾಡುವುದು ಹಳೆ ಹುಣಸಿಯ ಮರದಲ್ಲಿ ಇಲ್ಲವೆ ಜಡಿಆಲದ ಮರದಲ್ಲಿ. ನೂರಾರು ವರುಷದ ಈ ಮರಗಳಾದರೂ ನೋಡಲಿಕ್ಕೆ ರೌದ್ರವಾಗಿಯೂ, ಭಯಾನಕವಾಗಿಯೂ ಕಾಣುವುವು. ಈ ದೆವ್ವದ ಸಂಬಂಧ ಒಂದು ವಿಚಿತ್ರವಾದ ಜಾನಪದ ಕಥೆಯೂ ಇದೆ. "ಒಂದು ಊರಲ್ಲಿ ಒಬ್ಬ ಬಡವಿ ಹೆಣ್ಣುಮಗಳು ಇದ್ದಳು. ಅವಳು ತನ್ನ ಏಳು ಮಕ್ಕಳನ್ನು ಕರಕೊಂಡು ಹೇಗೋ ಉಪಜೀವನವನ್ನು ಸಾಗಿಸುತ್ತ ಬಂದಿದ್ದಳು. ದುರ್ದೈವದ ಮೂಲಕ ಆಗ ದೊಡ್ಡ ಬರವೂ ಬಂತು. ಮೊದಲೇ ಬಡತನ, ಅದರಲ್ಲಿ ದೊಡ್ಡ ಬರ. ಹೀಗಾಗಿ ಆಹಾರವಿಲ್ಲದೆ ಆ ಹೆಣ್ಣುಮಗಳು, ಮಕ್ಕಳನ್ನು ಬಿಟ್ಟು ಮರಣ ಹೊಂದಿದಳು. ಗತಿಗಾಣದೆ ಉಪವಾಸವಿದ್ದು ಮಕ್ಕಳೂ ಸತ್ತು ಹೋದುವು. ಈ ಲೋಕದಲ್ಲಿ ಕೂಳಿಲ್ಲದೆ ಸತ್ತು ಹೋದ ಈ ತಾಯಿ ಮಕ್ಕಳು ಆಶಾಭರಿತವಾಗಿ ದೆವ್ವಗಳಾದವು. ಅವು ಊರ ಮುಂದಿನ ದೊಡ್ಡಹೊಲದಲ್ಲಿಯ ಒಂದು ಹಳೆ ಹುಣಸಿಯ ಮರದಲ್ಲಿ ವಾಸ ಮಾಡಹತ್ತಿದುವು. ಬಿತ್ತುಗೆಯಾದ ಮೇಲೆ ಆ ಹೊಲದಲ್ಲಿ ನೆದರೊಡೆಯುವಂಥ ಬೆಳೆ ಬಂತು. ಮಾನವ ಜನ್ಮದಲ್ಲಿ ಕೂಳಿಲ್ಲದೆ ಸತ್ತ ಆ ತಾಯಿ ಮಕ್ಕಳ ಭೂತಾತ್ಮಗಳು ಆ ಬೆಳೆಯನ್ನು ದಿನನಿತ್ಯ ತಿನ್ನ ಹತ್ತಿದವು. ಒಕ್ಕಲಿಗನಿಗೆ ಬೆಳಸೇ ಬರಲಿಲ್ಲ. ಪ್ರತಿವರುಷ ಇದೇ ಗತಿಯಾಗಲು ಒಕ್ಕಲಿಗನು ಊರ ಜೋಯಿಸನನ್ನು ಕೇಳಿದನು. ಅವನು, ಏಳುಮಕ್ಕಳ ತಾಯಿಯೇ ಹೀಗಾಗಲು ಕಾರಣವೆಂದು ಹೇಳಲು ಯೋಗ್ಯ ಉಪಾಯಗಳನ್ನು ಕೈಕೊಳ್ಳಲು, ಮುಂದಿನ ಬೆಳೆಯು ಬಂದಾಗ ಬಂದು ಭೆಟ್ಟಿಯಾಗು ಎಂದು ತಿಳಿಸಿ ಕಳಿಸಿದನು. ಮತ್ತೆ ಆ ವರುಷದ ಬೆಳೆಯೂ ಉಕ್ಕಿಬಂತು. ದೆವ್ವಗಳು ಬೆಳೆಯನ್ನು ಹಾಳಮಾಡಲು ಪ್ರಾರಂಭಿಸಿದುವು. ಒಕ್ಕಲಿಗನು ಜೋಯಿಸನಿಗೆ ಭೆಟ್ಟಿಯಾದ. ಜೋಯಿಸನು, ತನ್ನ ವಿದ್ಯಾಬಲದಿಂದ ಆ ದೆವ್ವಗಳ ಬಳಗಿಷ್ಟರನ್ನು ಗುರುತಿಸಿ, ಆ ಒಕ್ಕಲಿಗನಿಗೆ ಉಪಾಯ ಹೇಳಿದನು. ನಿನ್ನ ಹೊಲದಲ್ಲಿಯ ಹುಣಸಿಯ ಗಿಡದ ಮುಂದೆ ನಿಂತು ಸಂಜೆಯ ಸಮಯಕ್ಕೆ 'ನಿಮ್ಮಕ್ಕನು ಸಂಕಟದಲ್ಲಿರುವಳು' ಎಂದು ಕೂಗು. ನಿನ್ನ ಮಾತನ್ನು ಕೇಳಿದ ಆ ಏಳುಮಕ್ಕಳ ತಾಯಿಯು ಹಳಹಳಿಸಿ ಅಕ್ಕನ ಕ್ಷೇಮ ಸಮಾಚಾರವನ್ನರಿಯಲು ನೆರೆಹಳ್ಳಿಗೆ ಹೋಗುವುದು. ಅದು ತಿರುಗಿ ಬರುವದರೊಳಗಾಗಿ, ಮೂರು ದಿನಗಳಲ್ಲಿಯೇ ಹೊಲದ ಬೆಳಸನ್ನು ಮನೆಗೆ ತರಬೇಕು ಎಂದು ಹೇಳಿದನು. ಒಕ್ಕಲಿಗನು ಆ ದಿನ ಸಂಜೆಯ ಸಮಯಕ್ಕೆ ಹಾಗೆ ಮಾಡಲು ಆ ದೆವ್ವವು ಮೂರು ದಿವಸ ಹೊಲವನ್ನು ಬಿಟ್ಟು ಹೊಗುವೆನೆಂದು ಹೇಳಿ ಹೋಯಿತು ಒಕ್ಕಲಿಗನು ಬೆಳಸನ್ನು ಮನೆಗೆ ತಂದ. ಬಂದ ಬೆಳಸನ್ನು ನೋಡಿ ಹಿಗ್ಗಿ ಜೋಯಿಸನಿಂದ ಕಾಯಕಟ್ಟು ಮಾಡಿಸಿ ಗಿಡದ ಬೊಡ್ಡೆಯಲ್ಲಿ ಅವುಗಳಿಗೆ ಆಹಾರವನ್ನಿಡಿಸಿದ. ಹಸಿದು ತಿರುಗಿ ಆ ಮರಕ್ಕೆ ಬಂದ ದೆವ್ವಗಳು ಅಲ್ಲಿಟ್ಟ ಆಹಾರವನ್ನು ತಿನ್ನಲು ಅವುಗಳಿಗೆ ದಿಗ್ಬಂಧನವಾಗಿ ಗಿಡಬಿಟ್ಟು ಹೊರಗೆ ಬಾರದಂತಾಯಿತು. ಅವುಗಳ ಕಾಟ ತಪ್ಪಲು ಪ್ರತಿವರುಷ ಆ ಒಕ್ಕಲಿಗನು ದೊಡ್ಡ ಬೆಳಸನ್ನು ಆ ಹೊಲದಲ್ಲಿ ಒಕ್ಕುತ್ತ ಬಂದ. ಕಾಲಾಂತರದ ಮೂಲಕ ಆ ಜೋಯಿಸನ ಅಂತ್ಯ ಸಮಯವು ಬರಲು ಮಂತ್ರಶಕ್ತಿಯು ಕಡಿಮೆಯಾಗಹತ್ತಿತು. ಆಗ ಅವನು ಒಕ್ಕಲಿಗನನ್ನು ಕರೆದು 'ನನ್ನ ಅವಸಾನ ಕಾಲ ಬಂದಿದೆ. ಈ ದೆವ್ವನ ಮುಂದೆ ನನ್ನ ಆಟವು ಇನ್ನು ನಡೆಯಲಾರದು. ಹಾಕಿದ ದಿಗ್ಬಂಧನವನ್ನು ತೆಗೆಯುವೆ'ನೆಂದು ತೆಗೆದನು. ಮೊದಲೇ ಕೂಳು ಕೂಳೆಂದು ಸತ್ತು, ಈಗ ಉಪವಾಸ ಮಾಡುತ್ತಿದ್ದ ಆ ದೆವ್ವಗಳು ಅತಿಶಯ ಸಿಟ್ಟಾಗಿ ಆ ಒಕ್ಕಲಿಗನ ಮನೆಯನ್ನೇ ಹೊಕ್ಕು ನಾಶಮಾಡಿದವು. ಅದನ್ನು ಕಂಡು ಜನವು ಅವುಗಳಿಗೆ 'ಏಳು ಮಕ್ಕಳ ತಾಯಿ'ಯೆಂದು ಕರೆಯಿತು. ಈ ಸಂಗತಿಗಳ ಮೂಲಕ ಹಳ್ಳಿಗರು ಏಳುಮಕ್ಕಳ ತಾಯಿಗೆ ಅಂಜುತ್ತಾರೆ. ಅಷ್ಟೇ ಅಲ್ಲ, ಅದು ಹೊಲದಲ್ಲಿ ವಾಸ ಮಾಡಿದ್ದರೆ, ಒಕ್ಕಲಿಗನು ರಾಸಿ ಮಾಡುವ ಮುನ್ನ ಅದಕ್ಕೆ ಕುರಿಯನ್ನಾಗಲಿ, ಹೋತನ್ನಾಗಲಿ ಬಲಿಕೊಟ್ಟು, ನಂತರ ರಾಶಿಯನ್ನು ಮಾಡುವನು. ಈ ವಾಡಿಕೆಯು ಬೆಳುವಲದ ಎಲ್ಲ ಭಾಗಗಳಲ್ಲಿದೆ.

ಜೋಳದ ಹೊಲದನ್ನ, ಏಳು ಮಕ್ಕಳ ತಾಯಿ
ಹಾಳ ಮಾಡಬ್ಯಾಡ ನಂಬೆಳಸು । ಸುಗ್ಗ್ಯಾಗ
ಬಲಿಕೊಟ್ಟು ಕೈಯ ಮುಗಿದೇವ ॥ *-ಜಾ.ಸಂ.-*

ಎಂದು ರೈತನು ಆ ಏಳು ಮಕ್ಕಳ ತಾಯಿಗೆ ಬೇಡಿಕೊಂಡಿದ್ದಾನೆ. ಈ ಏಳು ಮಕ್ಕಳ ತಾಯಿಯು ಊರಲ್ಲಿ ವಾಸಮಾಡಿದ್ದರೆ ಜನರು ಅದಕ್ಕೆ ಕೋಳಿ ಮೊದಲಾದುವುಗಳನ್ನು ಬಲಿಕೊಡುವರು. ಅಥವಾ ಕಡಬು-ಕಜ್ಜಾಯ ಮಾಡಿಸಿ ಆ ದೆವ್ವಗಳಿದ್ದ ಸ್ಥಳದಲ್ಲಿ ರಂಗಹೊಯ್ದು ಗೊಂಬೆಗಳನ್ನು ಮಾಡಿ-ಮಧ್ಯದಲ್ಲಿಟ್ಟು ಅರಿಷಿಣ, ಕುಂಕುಮ ಲಿಂಬಿಯ ಹಣ್ಣು ಮೊದಲಾದುವುಗಳನ್ನಿಟ್ಟು ಅಹಾರ ಕೊಡುವರು. ಇದನ್ನು ಈಗಲೂ ಉತ್ತರ ಕರ್ನಾಟಕದ ಎಲ್ಲ ಭಾಗಗಳಲ್ಲಿಯೂ ಕಾಣಬಹುದು.

ಹಳ್ಳಿಗರಿಗೆ ಇನ್ನೊಂದು ದೊಡ್ಡ ಭಯವೆಂದರೆ 'ಬ್ರಹ್ಮರಾಕ್ಷಸ.' ಬ್ರಹ್ಮರಾಕ್ಷಸವು ಮನೆಯಲ್ಲಿ ವಾಸಮಾಡಿದರೆ ಜನರು ಅಂಜಿ ಮನೆಯನ್ನೇ ಬಿಡುತ್ತಾರೆ. ಈ ಭೂತವು ಯಾರನ್ನೂ ಮನೆಯಲ್ಲಿ ಇರಗೊಡುವುದಿಲ್ಲ. ಆ ಮನೆಯ ವಂಶಜರನ್ನೇ ನಾಶಮಾಡಿ ಬಿಡುತ್ತದೆ. ಬ್ರಹ್ಮಜ್ಞಾನವನ್ನು ಬಲ್ಲವನು ತೃಪ್ತಿಯನ್ನು ಹೊಂದದೆ ಅಕಾಲ ಮರಣ ಹೊಂದಿದರೆ ಬ್ರಹ್ಮರಾಕ್ಷಸನಾಗುತ್ತಾನೆಂದು ಜನರು ನಂಬುತ್ತಾರೆ. ಇಂತಹ ಒಂದು ಸನ್ನಿವೇಶವನ್ನು ಕೇವಲ ಕೆಲವು ವರ್ಷಗಳ ಹಿಂದೆಯೇ ಬಾಗಲಕೋಟೆಯಲ್ಲಿ ಕಣ್ಣಾರೆ ಕಾಣಬಹುದಾಗಿತ್ತು. ಬಾಗಲಕೋಟೆಯ ಕಿಲ್ಲೆಯಲ್ಲಿ ಒಂದು ದೊಡ್ಡಮನೆಯಲ್ಲಿ ಬ್ರಹ್ಮರಾಕ್ಷಸವು ವಾಸಮಾಡಿಕೊಂಡಿತ್ತು. ಅದು ರಾತ್ರಿಯಲ್ಲಿ ವೇದಪಾರಾಯಣ ಮಾಡುತ್ತಿತ್ತು. ಅಲ್ಲಿಯ ಅನೇಕ ಆಚಾರ್ಯರು ಈ ವೇದ ಪಾರಾಯಣ ಮಾಡುವದನ್ನು ಕೇಳಿ, ಕಲಿಯಲು ಬೆಳಗಿನಲ್ಲಿ ಕೂಡುತ್ತಿದ್ದರು. ಈ ಭೂತವನ್ನು ಶಾಂತಮಾಡಲು 'ಕೋಟೇಕರ ರಾಮದೀಕ್ಷಿತ'ನೆಂಬ ವೇದಾಂತ ವಿದ್ವಾನನು ಅನೇಕ ವರುಷ ಪ್ರಯತ್ನಪಟ್ಟನೆಂದು ಅಲ್ಲಿಯ ಜನರು ಈಗಲೂ ಹೇಳುತ್ತಾರೆ. ಆದರೆ ಆ ರಾಕ್ಷಸನನ್ನು ಸ್ಥಾನಾಂತರ ಮಾಡಲು ಸಾಧ್ಯವಾಗಲಿಲ್ಲ. ಇತ್ತೀಚೆಗೆ ಇದರ ಅವಸಾನವು ಕಡಿಮೆಯಾಗ ಹತ್ತಿದೆ ಎಂದು ತಿಳಿದುಬಂದಿದೆ. ಹೀಗೆ ಸಂಭವಿಸಿದ ಅನೇಕ ಉದಾಹರಣೆಗಳನ್ನು ನಿದರ್ಶನಕ್ಕೆ ತರಬಹುದು. ಜನರು ವೇದಪಾರಾಯಣ ಮೊದಲಾದ ವಿಧಾನಗಳಿಂದ ಈ ಭೂತಗಳನ್ನು ಶಾಂತಮಾಡುತ್ತಾರೆ.

ರೈತನು ಹೊಲದಲ್ಲಿರುವಾಗ 'ಕೊಳ್ಳಿಯ ದೆವ್ವ'ಗಳನ್ನು ಕಾಣುತ್ತಾನೆ. ಅವುಗಳ ಅಂಜಿಕೆಯೂ ಅವನಿಗೆ ಬಹಳ. ಅವುಗಳನ್ನು ಕುರಿತು ಅನೇಕ ಅದ್ಭುತ, ಅಗಾಧವಾದ ಭಯಾನಕ ಕಥೆಗಳನ್ನೂ ಅವನು ಹೇಳುವನು. ಅವುಗಳ ದರ್ಶನವಾಗಬಾರದೆಂದು, ತಾಯತ, ದಾರ ಮೊದಲಾದವುಗಳನ್ನು ಜೋಯಿಸರಿಂದ ಮಂತ್ರಿಸಿಕೊಂಡು ಕಟ್ಟಿಕೊಳ್ಳುತ್ತಾನೆ. ಹೀಗೆ ಅನೇಕ ಪರಿಯಿಂದ ದೆವ್ವಗಳಿಗೆ ಅಂಜಿ ತನ್ನ ರಕ್ಷಣೆಯನ್ನು ಮಾಡಿಕೊಳ್ಳುತ್ತಾನೆ. ಎಲ್ಲ ದೆವ್ವಗಳನ್ನು ತನ್ನ ಆಧೀನದಲ್ಲಿಟ್ಟುಕೊಂಡು ತನ್ನ ಮನಸ್ಸಿಗೆ ಬಂದಂತೆ ಅವುಗಳಿಗೆ ನಿರೂಪಣೆಯನ್ನು ಕೊಡುವ ಅರಸು ದೆವ್ವವೆಂದರೆ 'ವೇತಾಳ'ವು. ವೇತಾಳ ವಿದ್ಯೆಯನ್ನು ಬಲ್ಲವರು ಮಂತ್ರಯಂತ್ರಗಳ ಶಕ್ತಿಯಿಂದ ಮೊದಲು ಈ 'ವೇತಾಳ'ವನ್ನು ಒಲಿಸಿಕೊಳ್ಳುವರು. ಕೇವಲ ನೂರೇ ವರುಷಗಳ ಹಿಂದೆ ಈ ವೇತಾಳವನ್ನು ಒಲಿಸಿಕೊಂಡ ಒಬ್ಬ ಮಾಂತ್ರಿಕನು ಗದುಗಿನ ಹತ್ತಿರ ಬೇಟಗೇರಿಯಲ್ಲಿ ಬಹಳ ಪ್ರಸಿದ್ಧಿಯಾಗಿ ಹೋಗಿದ್ದಾನೆ. ಅವನಿಗೆ ಜನರು ವೇತಾಳ ಚನಬಸಪ್ಪನೆಂದು ಕರೆಯುತ್ತಿದ್ದರು. ಈಗಲೂ ಆ ಭಾಗದಲ್ಲಿಯ ಮಾಂತ್ರಿಕರು ಈ ವ್ಯಕ್ತಿಯ ಹೆಸರನ್ನು ಎತ್ತಿ ತಮ್ಮ ವಿದ್ಯೆಯನ್ನು ಕಲಿಯುತ್ತಾರೆ.

ಹಳ್ಳಿಗಳಲ್ಲಿ ಸಣ್ಣಮಕ್ಕಳನ್ನು 'ಬರಮಪ್ಪ'ನೂ ಹಿಡಿದುಕೊಳ್ಳುವದುಂಟು. ಆಗ ಕೂಸುಗಳು ಒಂದೇ ಸವನೆ ನಿಗ್ಗರಿಸಿ ಅಳಹತ್ತುವುವು. ಹೆಣ್ಣುಮಕ್ಕಳು ತಾವು ಮಕ್ಕಳನ್ನೆತ್ತಿ ತಿರುಗಾಡಿ ಬಂದ ಸ್ಥಳಗಳನ್ನು ನೆನಪಿಗೆ ತಂದು, ಅಲ್ಲಿ ಭರಮಪ್ಪನಿರುವನೆಂದು ತಿಳಿದುಬಂದರೆ ಕೂಡಲೇ ದೀಪ ಹಚ್ಚಿ ಕಾಯಿಕಪ್ಪುರ ಕೊಡುವೆನೆಂದು ಬೇಡಿಕೊಳ್ಳುತ್ತಾರೆ. ಮಕ್ಕಳು ತಮ್ಮ ಅಳುವನ್ನು ನಿಲ್ಲಿಸಲು ಮರುದಿವಸ ಆ ಭರಮಪ್ಪನ ಪೂಜೆ ಮಾಡಿ ಪನಿವಾರ ಹಂಚುವರು. ಹಳ್ಳಿಗಳಲ್ಲಿ ಈ ಭರಮಪ್ಪನಿರುವುದು ಮನೆಯ ಹಿಂದಿನ ಹಿತ್ತಲಲ್ಲಿ; ಇಲ್ಲವೆ ಬಾಗಲ ಮುಂದಿನ ಕಟ್ಟೆಯ ಕೆಳಗಿನ ಮಾಡಿನಲ್ಲಿ ಅಥವಾ ಹೆಬ್ಬಾಗಿಲದ ಎರಡೂ ಬದೆಯ ಮೂಲೆಗಳಲ್ಲಿ. ಇದೊಂದೇ ದೇವರು ಮಾತ್ರ ನಿತ್ಯಪೂಜೆಯನ್ನು ಹೊಂದದಿರುವದೆಂದು ಕಂಡುಬರುತ್ತದೆ. ಭರಮಪ್ಪನೆಂದರೆ ಸೃಷ್ಟಿ ಕರ್ತನಾದ ಬ್ರಹ್ಮನು. ಬ್ರಹ್ಮನು ಪೂಜೆಗೊಳ್ಳುವ ದೇವರಲ್ಲೆಂದು ಕಾಣುತ್ತದೆ. ಇದರ ವಿಷಯವಾಗಿ 'ಸ್ಕಂದ ಪುರಾಣ'ದ 'ಕಾಶೀಖಾಂಡ'ದಲ್ಲಿ ಒಂದು ಕಥೆಯು ಬರುತ್ತದೆ 'ಒಮ್ಮೆ ಬ್ರಹ್ಮ ವಿಷ್ಣುಗಳಿಬ್ಬರು ನಾ ಹೆಚ್ಚು, ನೀ ಹೆಚ್ಚು, ಎಂದು ನ್ಯಾಯವನ್ನು ಪ್ರಾರಂಭಿಸಿದರು. ಈ ನ್ಯಾಯವನ್ನು ತೀರಿಸಲು ಶಿವನು ಬಂದು ತೇಜೋಮಯ ರೂಪತಾಳಿ ಅವರ ಮುಂದೆ ಅಖಂಡ ನಿಂತುಬಿಟ್ಟನು. ಅವರಿಬ್ಬರಿಗೂ, ಶಿವನು ತನ್ನ ದಿವ್ಯರೂಪದ ತಳ ಮತ್ತು ತುದಿಯನ್ನು ನೋಡಿ ಬಂದವನೇ ಹೆಚ್ಚಿನವನೆಂದು ಅನ್ನಲು ಆಗ ವಿಷ್ಣುವು ವರಾಹ ಅವತಾರವನ್ನು ತಾಳಿ ಪಾತಾಳಕ್ಕೆ ಹೋದನು. ಬ್ರಹ್ಮನು ಗರುಡನಾಗಿ ಆಕಾಶಕ್ಕೆ ಹಾರಿದನು. ವಿಷ್ಣು, ಪಾತಾಳ ಲೋಕವನ್ನು ಗದಬಡಿಸಿ ಭೂಮಿಯನ್ನು ಎತ್ತಿ ಹಿಡಿದರೂ ಶಿವನ ದಿವ್ಯ ತೇಜರೂಪದ ತಳವು ಅವನಿಗೆ ಕಾಣಲಿಲ್ಲ. ಬ್ರಹ್ಮನು ಗರುಡನಾಗಿ ಆಕಾಶ ದಾಟಿ ಹಾರಿ ನೋಡಿದರೂ ಶಿವನ ಆ ತೇಜೋರೂಪದ ಶಿಖರು ಕೊನೆಯಾದದ್ದನ್ನು ನೋಡಲಿಲ್ಲ. ಆಗ ಇಬ್ಬರೂ ತಿರುಗಿ ಬಂದು ಶಿವನ ಮುಂದೆ ನಿಂತರು. ಶಿವನು ವಿಷ್ಣುವಿನನ್ನು ಕೇಳಲು ಅವನು ಕಂಡ ಸತ್ಯವನ್ನೇ ಶಿವನ ಮುಂದೆ ಹೇಳಿದನು. ಆದರೆ, ಬ್ರಹ್ಮನು ಶಿವನ ಮುಂದೆ ತಾನು ಆ ತೇಜೋರೂಪದ ತುದಿಯನ್ನು ಕಂಡುಬಂದೆನೆಂದು ಸುಳ್ಳು ಹೇಳಲು, ಇದನ್ನರಿತ ಶಿವನು 'ಯಾರೂ ನಿನ್ನನ್ನು ಪೂಜೆ ಮಾಡದಿರಲಿ' ಎಂದು ಶಾಪ ಕೊಟ್ಟನು. ಬ್ರಹ್ಮನು ಇದನ್ನರಿತು ಮನದಲ್ಲಿ ಮರುಗಿ, ಸೃಷ್ಟಿಕರ್ತನಾದ ತನಗೆ ಲೋಕದಲ್ಲಿ ಪೂಜೆಯಾಗದಿರಲು ಅವಮಾನವೆಂದು ಬಿನ್ನವಿಸಿಕೊಳ್ಳಲು ಸಿಟ್ಟಿಳಿದ ಶಿವನು ವಿಚಾರಿಸಿ 'ಜನರು ನಿನ್ನನ್ನು ಆಶ್ವಿನ ಕೃಷ್ಣಪಕ್ಷ ತ್ರಯೋದಸಿಯ ದಿವಸ ಪೂಜಿಸಲೆ'ಂದು ವರ ಕೊಟ್ಟನು. ಆಗ ಬ್ರಹ್ಮಪೂಜೋತ್ಪತ್ತಿಯು ಈ ಲೋಕದಲ್ಲಾಯಿತು.' ಎಂದು ಬಂದಿವೆ. ನಮ್ಮ ಹಳ್ಳಿಗರು ಈ ಪೂಜೆಯನ್ನೂ ಆಚರಿಸುತ್ತಾರೆ. ಅಲ್ಲದೆ ಭರಮಪ್ಪನು, ಕೂಸಿನ ತಾಯಿಯಾದರೂ ತನ್ನನ್ನು ಆಗೊಮ್ಮೆ ಈಗೊಮ್ಮೆ ಪೂಜೆ ಮಾಡಲೆಂದು ಅವಳ ಕೂಸನ್ನು ಹಿಡಿದುಕೊಳ್ಳವನೆಂದು ಹಳ್ಳಿಗರು ನಂಬುತ್ತಾರೆ. ಇದೇ ರೂಢಿಯು ಹಳ್ಳಿಗಳಲ್ಲಿ ಈಗಲೂ ಬಳಕೆಯಲ್ಲಿದೆ.

ಈ ಪ್ರಕಾರವಾಗಿ ನಮ್ಮ ಹಳ್ಳಿಗರು ಸ್ತುತಿಸ್ತವನಗಳಲ್ಲಿ ದೇವ, ದೈವ, ದೆವ್ವ ಮೊದಲಾದುವುಗಳ ಕಲ್ಪನೆಗಳನ್ನು ಕಾಣಬಹುದು, ಅಲ್ಲದೆ ಜನತೆಯ ಮೇಲೆ ಆದ ಅವುಗಳ ಪರಿಣಾಮಗಳನ್ನೂ ತುಂಬ ನೋಡಬಹುದು.

❐

೨. ಸುಗ್ಗಿಯ ಹಾಡುಗಳು

ಒಕ್ಕಲುನಾಡು ಕರ್ನಾಟಕದಲ್ಲಿ ಸುತ್ತಲೂ ಸುಗ್ಗಿಯಲ್ಲಿ ಕೇಳಬರುವ ಹಂತಿಯ ಹಾಡುಗಳು ಎಲ್ಲರ ಮನವನ್ನು ಆಕರ್ಷಿಸದಿರವು. ಬೆಳುವಲ ನಾಡಿನ ಹಂತಿಗಳೆಂದರೆ ನೂರಾರು ಚೀಲಗಳ ರಾಶಿ. ಸುಗ್ಗಿಯ ಸೊಬಗನ್ನು ಕಾಣಬೇಕು ಬೆಳುವಲದಲ್ಲಿ. ನೂರು ಎತ್ತುಗಳ ಮೇಟಿಯ ಕಣಗಳನ್ನು ನೋಡಿದರೆ ಮಲೆನಾಡಿನವರಿಗೆ ದಂಗು ಬಡಿಯದಿರದು. ಉತ್ತಿ, ಬಿತ್ತಿ, ಬೆಳೆ ಬೆಳೆದ ಒಕ್ಕಲಿಗನಿಗೆ ಸುಗ್ಗಿಯು ಬೆಳುವಲದಲ್ಲಿ ದೊಡ್ಡ ಹಬ್ಬ; ದಾಸೋಹದ ಆರಾಧನೆಯ ಕೊನೆಯ ದಿನ. ಕಾಡಸಿರಿ ನಾಡು ತುಂಬಿ ತಣಿಸುವ ದಿನ. ರಾತ್ರಿಯಲ್ಲಿ ಹಂತಿಯನ್ನು ಹೂಡಿದ ರೈತನು ದಣಿವನ್ನು ಹಿಂಗಿಸಲು ಹಲಗೆಯನ್ನು ನುಡಿಸಿಯೊ, ದಪ್ಪು ಬಾರಿಸಿಯೊ, ಡೊಳ್ಳಿನೊಡನೆ ಕುಣಿದೊ, ಹಾಡುವ ನೋಟ ಬಲು ರಮ್ಯವಾದುದು. ಬೆಳುವಲ ರೈತರು ಈ ಹಂತಿಯ ಹಾಡುಗಳನ್ನು ಬೆಳಗು ಹರಿಯುವವರೆಗೂ ಹಾಡುವರು. ಆ ನಿರಭ್ರ ರಾತ್ರಿಯ ಈ ಹಂತಿಯ ಹಾಡುಗಳು ಕಿವಿಗೆ ಮಂಜುಳವಾಗಿ ಕೇಳಬರುವುವು.

ಭರತಖಂಡದಲ್ಲಿ ಎಲ್ಲ ಕಾರ್ಯಗಳಲ್ಲಿಯೂ ಮೊದಲು 'ವಿಘ್ನೇಶ'ನಿಗೆ ಪೂಜೆ. ಕಾವ್ಯ ಬರೆದ, ಬರೆಯುವ ಪಂಡಿತರೂ, ಕಾರ್ಯಕಾರಣ ಚಾಲಕರೂ ಮೊದಲು 'ಬೆನಕ'ನನ್ನು ಸ್ತುತಿಸಿಯೇ ಮುಂದಿನ ಕೆಲಸ. ಆದರೆ ಈ ಮಾತಿನಲ್ಲಿ ಒಕ್ಕಲಿಗನೊಬ್ಬನು ಮಾತ್ರ ಹೊರತಾಗಿದ್ದಾನೆ. ಗಣಪತಿ ಪೂಜೆಯು ಆರ್ಯ ಸಂಸ್ಕೃತಿಯ ಸಂಸ್ಕಾರವು. ಆರ್ಯರು ಭರತಖಂಡಕ್ಕೆ ಬರುವ ಮುನ್ನ ಮೂಲ ಜನಾಂಗ ದ್ರಾವಿಡರು ತಮ್ಮ ಸಂಸ್ಕೃತಿಯ ಹೆಗ್ಗುರುತಾದ ಕೃಷಿಕರ್ಮದಲ್ಲಿ ನಿಪುಣರಿದ್ದು ಮುಂದುವರಿದಿದ್ದರು. ಅವರ ಮೇಲೆ ಆರ್ಯ ಸಂಸ್ಕೃತಿಯ ಗಣಪತಿ ಪೂಜೆಯು ಏನೂ ಪ್ರಭಾವ ಮಾಡಿದಂತೆ ಕಂಡುಬರುವುದಿಲ್ಲ. ಏಕೆಂದರೆ ಗಣಪತಿ ಪೂಜೆಗೆ ಸುಗ್ಗಿಯಲ್ಲಿ ಸ್ಥಾನವಿಲ್ಲ. ಮುಂದೆ ಶಿವಶರಣರ ಕ್ರಾಂತಿಯಾದ ನಂತರ ಶರಣರ ಸಂಸ್ಕೃತಿಯ ಪ್ರಭಾವವು ಸರಳ ಮನಸ್ಸಿನ ಒಕ್ಕಲಿಗನನ್ನು ತಟ್ಟಿದಂತೆ ಕಾಣುತ್ತದೆ. ಕಾರಣ ಒಕ್ಕಲಿಗನು (ವಿಶೇಷ ಬೆಳುವಲದಲ್ಲಿ) ಶಿವಶರಣರ ನೀತಿಯ ಕಟ್ಟುಗಳನ್ನು ಒಪ್ಪಿಕೊಂಡು ಅವರನ್ನು ತನ್ನ ಸುಗ್ಗಿಯ ಕಣದಲ್ಲಿ ಬರಮಾಡಿ ಕೊಂಡಿದ್ದಾನೆ. ಅನೇಕ ಸುಗ್ಗಿಯ ಸಂಪ್ರದಾಯಗಳು ಶರಣರನ್ನೊಳಗೊಂಡಿರುವದೇ ಇದಕ್ಕೆ ನಿದರ್ಶನ[೧] ಅವನ ಅತ್ಯಂತ ಪವಿತ್ರ ಕಾರ್ಯವಾದ ಸುಗ್ಗಿಯಲ್ಲಿ ಅವನಿಗೆ ಗಣಪತಿಯು ಬೇಕಿಲ್ಲ.

ಹಂತಿಪದಕೊಂದಿಲ್ಲ, ನಿಂತು ಬೆನಕನ ಪೂಜೆ
ಹಂತಿಯೊಳು ಪೂಜೆ ಶರಣರಿಗೆ । ಗಣಪನಿಗೆ
ಸ್ವಂತ ನೆನೆಯಂದ ಒಕ್ಕಲಿಗ ॥ —*ಜಾನಪದ ಸಂಭಾರ*—

ಬೆಳುವಲ ಒಕ್ಕಲಿಗನು ಸುಗ್ಗಿಯ ಕಣದಲ್ಲಿ ಮಾನ ಮನ್ನಣೆಯಿಂದ ಬರಮಾಡಿ ಕೊಂಡದ್ದು ಶಿವಶರಣರನ್ನು; ಗಣಪತಿಯನ್ನು ನಿರಾಕರಿಸಿದ್ದಾನೆ.

ಹಂತಿ ಹೊಡೆಯುತ ನೆನೆದೆ, ಸಂತಸದಿ ಶರಣರನು
ಕಂತು ಹರ ನಿನ್ನ ಭಕ್ತರನು । ನೆನೆಸಿದರೆ
ಸಂತಸದಿ ನೀಡೊ ವರ ಶಿವನೆ ॥ —*ಜಾನಪದ ಸಂಭಾರ*—

ಎಂದು ಶಿವಶರಣರನ್ನು ಹೊಗಳಿ ಶಿವನನ್ನು ವರಕೊಡು ಎಂದು ಬೇಡಿಕೊಳ್ಳುವನು.

ಬೂದನಿಗೆ ಬಾಸಿಂಗ, ಭೂಮಿತಾಯಿಗೆ ದಂಡೆ
ಸಾಲ ಶರಣರಿಗೆ ಸರಮಾಲೆ । ಕಟಗೊಂಡು
ಮಾದಯ್ಯ ಗೆದ್ದ ಕೈಲಾಸ ॥ —*ಜಾನಪದ ಸಂಭಾರ*—

(ಬೂದ: 'ಸುಗ್ಗಿಯ ಸಂಪ್ರದಾಯಗಳು' ನೋಡಿರಿ). ಇಲ್ಲಿ ಬಂದ ಮಾದಯ್ಯನು ಶಿವಶರಣ ಹೂಗಾರ ಮಾದಯ್ಯನಿರಬೇಕೆಂದು ಕಾಣುತ್ತದೆ. ಬೆಳುವಲ ಸುಗ್ಗಿಯಲ್ಲಿ 'ಬಾಬುದಾರ' ಹೂಗಾರನು ಸುಗ್ಗಿಯ ಕಣಕ್ಕೆ ಹೂ ಪತ್ರಿಗಳನ್ನಲ್ಲದೆ ಬೂದನಿಗೆ ಬಾಸಿಂಗವನ್ನೂ, ಭೂತಾಯಿಗೆ ದಂಡೆಯನ್ನೂ, ಸಾಲಶರಣರಿಗೆ (ಅಂದರೆ–ಸುಗ್ಗಿಯ ಉಪಕರಣ–ಸಳ್ಳು, ರಾಘೋಲು, ಜಂತೆ–ಗುಂಟೆ, ಹಂತಿಗಣ್ಣೆ, ಮೆಟ್ಟು, ಕರಿಬಂಟ,

---

೧. ಐತಿಹಾಸಿಕ ಸಂಗತಿಗಳು: 'ಸುಗ್ಗಿಯ ಸಂಪ್ರದಾಯಗಳು' ನೋಡಿರಿ

ಬಿಳಿಬಂಟ ಮೊದಲಾದವು) ಸರಮಾಲೆಗಳನ್ನು ಕೊಡುವ ವಾಡಿಕೆಯುಂಟು. ಈ ಉಪಕರಣಗಳು ಒಬ್ಬೊಬ್ಬ ಶರಣರ ಹೆಸರಿನೊಡನೆ ಈಗ ಸಂಪ್ರದಾಯಗಳಾಗಿ ಸುಗ್ಗಿಯಲ್ಲಿ ಬಳಕೆಯಲ್ಲಿವೆ.[೨] ಬೆಳುವಲ ಒಕ್ಕಲಿಗನ ಸುಗ್ಗಿಯ ಕಣದಲ್ಲಿ ಬಾಬುದಾರರೂ (ಮಠದಯ್ಯ, ಹೂಗಾರ, ಚೆಲುವಾದಿ ಮೊದಲಾದವರೂ), ಆಯಗಾರರೂ (ಬಡಿಗ, ಕಂಬಾರ, ಕುಂಬಾರ, ಮಡಿವಾಳ, ಹಡಪಿಗ, ಮೊದಲಾದವರು), ಹಕ್ಕುದಾರರೂ (ಸರಕಾರಿ ಚಾಕರಿ ಮಾಡುವ ಹಳಬ (ತಳಾರ), ಹೊಲೆಯ ಮೊದಲಾದವರು), ಅಲ್ಲದೆ ದಾಸ, ಮುಲ್ಲಾ, ಚೋರಗಸ್ತಿ, ಕೊರವಂಜಿ ಮೊದಲಾದ ಭಿಕ್ಷುಕರೂ ಕಂಡುಬರುವರು. ಕೊಡುಗೈಯಾದ ಅವನು ಈ ಎಲ್ಲ ಜನರಿಗೆ ತನ್ನ ಬೆಳಸಿನಲ್ಲಿ ದಾನ ಮಾಡುತ್ತಾನೆ. ಹಳಬ, ಹೊಲೆಯ ಮೊದಲಾದ ಸರಕಾರಿ ಚಾಕರಿ ಮಾಡುವವರಿಗೆ ಇಂತಿಷ್ಟು ಹೊಲಗಳ ಬಾಬನ್ನು ಉಣ್ಣಲು ಸರಕಾರವು ನೇಮಿಸಿ ಕೊಟ್ಟಂತೆ ಕಂಡುಬರುತ್ತದೆ. ಇದು ಈಗ ಕಡಿಮೆಯಾಗುತ್ತ ನಡೆದಿದೆ. ಸಮಾಜ ಸೇವೆಯನ್ನು ಮಾಡುವ ಮಠದಯ್ಯ, ಹೂಗಾರ ಮೊದಲಾದವರಿಗೆ ಸಮಾಜವು ಆ ಊರ ಭೂಮಿಯ ಬಾಬನ್ನು ಉಣ್ಣಲು ಎಲ್ಲರ ವತಿ (ಮುಖಾಂತರ)ಯಿಂದ ಹೇಳಿದಂತೆ ತಿಳಿದುಬರುತ್ತದೆ. ಕಾರಣ ಸುಗ್ಗಿಯ ಲಿಂಗಯ್ಯ (ಬೂದನ) ರಾಸಿಯು ಈಗಲೂ ಅನೇಕ ಹಳ್ಳಿಗಳಲ್ಲಿ ಊರ ಮಠಕ್ಕೆ ಸಲ್ಲುವುದು. ಒಕ್ಕಲಿಗನು ತನ್ನ ಬೆಳಸಿನಲ್ಲಿ ಮುಷ್ಟಿದಾನ ವನ್ನಾದರೂ ಹಳ್ಳಿಯ ಈ ಎಲ್ಲ ಬಳಗಕ್ಕೆ ಮಾಡಿಯೇ ಮಾಡುವನು. ಈ ಎಲ್ಲ ಸಂಗತಿಗಳ ಮೇಲಿಂದ ಹಿಂದಿನ ಕಾಲದ ಹಳೇಹಳ್ಳಿಯ ಸಮಾಜ ಆಡಳಿತೆಯನ್ನು ಐತಿಹಾಸಿಕವಾಗಿ ಕಲ್ಪಿಸಬಹುದು.

ಕಡಗೋಲು ಕುಡಗೋಲು, ಸೆಡ್ಡಿ ಮಂಡೆಯಗೋಲು
ಬಡಗಿ ಬ್ಯಾಕೋಲು ಬಾರ್ಕೋಲು । ಊರ್ಗೋಲು
ಚಿತ್ರಾದ ಕೋಲು ರಾಘೋಲು ॥
ಚಿತ್ರಾದ ರಾಘೋಲ, ಮತ್ಯಾರ ಮಾಡ್ಯಾರ
ಚಿತ್ತರದ ಬಡಿಗ ಪಡುಮಣ್ಣ, ಮಾಡಿರುವ
ಚಿತ್ರರಾಘೋಲ ಎಳಲ್ಯಾಗೊ ॥ *–ಜಾನಪದ ಸಂಭಾರ–*

ಒಕ್ಕಲಿಗನು ತನ್ನ ಬೆಳಸಿನಲ್ಲಿ ಆಯ ಕೊಡುವದಲ್ಲದೆ ಈ ಹಾಡುಗಳನ್ನು ಹಂತಿಯಲ್ಲಿ ಹಾಡಿ ಆಯಗಾರರಿಗೆ ಕೃತಜ್ಞತೆಗಳನ್ನು ಸಲ್ಲಿಸದಿರಲಾರ. ಮಳೆಯಾಗದ ಬೆಳುವಲದಲ್ಲಿ ಇಡೀ ಬೆಳುವಲವೇ ಮುಗಿಲ ಮೋರೆಯನ್ನು ನೋಡುತ್ತ ಹೌಹಾರಿ, ಬಾಯ್ತೆಗೆದು ಮಳೆರಾಜನನ್ನು ಪ್ರಾರ್ಥಿಸುವದುಂಟು. ಒಕ್ಕಲಿಗನಂತೂ ಹಗಲಿರುಳು ಎದ್ದ ಮೊದಲು ಮಳೆರಾಜನಿಗೆ ಕೈಮುಗಿದೇ ಮುಂದಿನ ಕೆಲಸ. ಮಳೆಯಾಗಲು ಒಕ್ಕಲಿಗನಿಗೆ ಅಮೃತಪಾನ ಮಾಡಿದಂತೆ! ಕಳೆತುಂಬಿ ಬೆಳೆಯು ತೆನೆಯೆತ್ತಿ ಕೈಮುಗಿಯುವವೊ ಅನ್ನುವಂತೆ ಭೂಮಿಯ ತುಂಬೆಲ್ಲ ಕಾಣುವುದು.

ಆ ರಾಜ ಈ ರಾಜ, ಭೋರಾಜ ಮಾರಾಜ
ರಾಜರೊಳು ರಾಜ ಮಳೆರಾಜ । ಘನರಾಜ
ಬೀಜ ಸಕಲರಿಗೆ ತೆನಿರಾಜ ॥ *–ಜಾನಪದ ಸಂಭಾರ–*

ಎಂದು ಮಳೆರಾಜನನ್ನು ಕೊಂಡಾಡಿದ್ದಾನೆ.

ರೋಣೀಯ ಮಳೆಯಾಗಿ, ಓಣೆಲ್ಲ ಜ್ಯೋಳಾಗಿ
ಕಾಣಾದ ಹುಲುಸು ಕುಡಿಯಾಗಿ । ಹೊಲದಾಗ
ಕಣ ತುಂಬ ರಾಶಿ ಹೊಳಿಯಾಗಿ ॥
ಆರದ್ರಿ ಅರಗಳೆದು, ಬೀರ ಬೀಜವ ಬಿತ್ತಿ
ಅರೆಮಾಸಕೊಮ್ಮೆ ಮಳೆಸುರಿದು । ಬೆಳವಲಕ
ಗಿರಿಯಂತರಾಸಿ ಮನಿಯಾಗ ॥ *–ಜಾನಪದ ಸಂಭಾರ–*

ಬೆಳುವಲದ ಮಸಾರಿಯಲ್ಲಿ 'ರೋಣಿ ಯಾದರೆ ಓಣೆಲ್ಲ ಜೋಳ' ಎಂಬ ಗಾದೆಯ ಮಾತು ಬಳಕೆಯಲ್ಲಿರುವುದು. ಇದು ಮುಂಗಾರಿಯ ಮಳೆಯಿದ್ದು ಈ ಮಳೆಗೆ ಭೂಮಿಗಳು ಬಿತ್ತಲ್ಪಟ್ಟರೆ ಬೆಳುವಲದ ಒಕ್ಕಲಿಗನು ಜೋಳದ ರಾಸಿಯನ್ನು ಕಾಣುವನು. ಈ ಮಳೆಗೆ ಬಿತ್ತಿದ ಬೆಳೆಯು ಹೆಚ್ಚು ಕಾಳನ್ನು ಕಚ್ಚಿ ಹುಲುಸಾಗುವದನ್ನು ಪ್ರತ್ಯಕ್ಷ ಮನಗಾಣಬಹುದು. ಆರದ್ರಿ ಅರೆಗಳೆದು ಬೀಜ ಹಾಕಿದರೂ ರೈತನು ಮುಂದೆ ಮಳೆಗಳು ಸಾಧಿಸಿದರೆ ಕಾಳು ಕಾಣುವ ಭರವಸೆಯು.

ಉತ್ತರಿಯ ಮಳೆಯಾಗಿ, ಉತ್ತಮರು ತಿಳಿಯಾಗಿ
ಉತ್ತತ್ತಿ ಫಲವು ಘನವಾಗಿ । ಕಣದಾಗ
ಉತ್ರಾಣಿ ಸೆಳ್ಳು ಮೇಲಾಗಿ ॥

ಸಾತೀಯ ಮಳೆಯಾಗಿ, ಭೂತಾಳ ಹಸಿಯಾಗಿ
ಪಾತಾಳ ಎಲ್ಲ ತುಳಿಕ್ಯಾವು । ಭೂಮ್ಯಾಗ
ಫಲವೆದ್ದು ಕೈಯ ಮುಗಿದಾವು ॥
ಆಸಾಡ ಮುಂದಾಗಿ, ಬೀಸ್ಯಾವ ಈ ಗಾಳಿ
ಮೋಸ ಮಾಡ್ಯಾವ ಮಗಿಮಳಿ । ಉತ್ರಿಸಾತಿ
ಬಾಸೆ ಕೊಟ್ಟಾವ ಬಡವರಿಗೆ ॥ *–ಜಾನಪದ ಸಂಭಾರ–*

---

೨. ಐತಿಹಾಸಿಕ ಸಂಗತಿಗಳು: 'ಸುಗ್ಗಿಯ ಸಂಪ್ರದಾಯಗಳು' ನೋಡಿರಿ.

ಎಂದು ಮನ ಉಕ್ಕಿ ಹಾಡಿದ್ದಾನೆ. ಬೆಳುವಲ ಒಕ್ಕಲಿಗನಿಗೆ ಉತ್ತರಿ, ಸ್ವಾತೀ ಮಳೆಗಳು ಭಾಷೆ ಕೊಟ್ಟ ಮಳೆಗಳು. ಅವು ಆಗಿಯೇ ಹೋಗುವುವೆಂಬ ತುಂಬ ಭರವಸೆ ಅವನಿಗೆ. ಈ ಎರಡೂ ಮಳೆಗಳು ಸುರಿದರೆ ಬೆಳುವಲ ಒಕ್ಕಲಿಗನ ಕೈ ಹಿಡಿಯುವರಾರು? ಕಣ ಉಕ್ಕಿ ಓಣೆಲ್ಲ ಜೋಳವೇ ಜೋಳ:

ಕೊಂಕಣದ ಕೊಪ್ಪಿರಲಿ, ಅಂಕಣದ ಗುತ್ತಿರಲಿ
ಬಂಕಣದ ರೊಕ್ಕ ಗಪ್ಪಿರಲಿ । ಸುಗ್ಯಾಗ
ಕಂಕಿಕಣ ಸುಂಕ ಒಪ್ಪಿರಲೊ ॥ *–ಜಾನಪದ ಸಂಭಾರ–*

ಅದೇಕೊ ಬೆಳುವಲ ರೈತನು 'ಕೊಂಕಣದ ಕೊಪ್ಪಿರಲಿ' ಎಂದು ಬಯಸಿದ್ದಾನೆ. ಮೇಲಿಂದ ಮೇಲೆ ಅನಾವೃಷ್ಟಿಯ ಮೂಲಕ ಫಲವತ್ತಾದ ಭೂಮಿಯಿದ್ದರೂ ಅವನು ಬರಗಾಲಕ್ಕೆ ಬೇಸತ್ತು ಮಳೆ ಸಮೃದ್ಧಿಯುಳ್ಳ ತುಂಡು ಭೂಮಿಯ ಕೊಂಕಣದ ಕೊಪ್ಪಿ (ಕೊಪ್ಪ; ಹಳ್ಳಿ)ಯಿರಲೆಂದು ಹೇಳಿದ್ದಾನೆ. ಅಂಕಣದ ಮನೆಯು ಗುತ್ತಿರಬೇಕೆಂದೂ ಒಂಕಣ ರೊಕ್ಕ ತುಂಬಿದ್ದರೂ ಸದ್ದಿಲ್ಲದಿರಬೇಕೆಂದೂ ಕಂಕಿಕಣಸುಂಕ ಒಪ್ಪಿರಲೆಂದೂ ಬಲು ಸ್ವಾರಸ್ಯವಾಗಿ ಹಾಡಿದ್ದಾನೆ. ತನಗೆ ಹೆಮ್ಮೆ ಬೇಡೆಂದು ಅವನ ಆಶೆ.

ನಮ್ಮದೆನ್ನುವ ಬದಕು; ಸೊಮ್ಮು ಶಿವನದು ಕಾಣೊ
ಹುಮ್ಮಸವು ಬೇಡ ರೈತನಿಗೆ । ಕೈಲಾಸ
ಒಮ್ಮನದಿ ನೀಡೆ ಕಣ್ಮುಂದೆ ॥೫೬॥ *–ಇಳಿಹಾಳ ಬೊಮ್ಮಯ್ಯ–*

ಎಂಬ ದೊಡ್ಡ ತತ್ತ್ವದರ್ಶನವನ್ನೇ ಒಕ್ಕಲಿಗನು ಶಿವಶರಣ ಇಳಿಹಾಳ ಬೊಮ್ಮಯ್ಯನ ಹಾಡಿನಲ್ಲಿ ಹಾಡಿದ್ದಾನೆ.

ಮೂಡಲ ಹೋರೀಗೆ, ಮುರಗೀಯ ಕೋಡಣಸು
ಸಣಗೆಜ್ಜಿ ಕೊರಳ ಸರಪಳಿಯೊ । ಕಟಗೊಂಡು
ಸವನಾಗಿ ಹಂತಿ ತುಳಿದಾನೊ ॥

ಹಂಡ ಹವಳ್ಯಾನ ಕಟ್ಟು ಗುಂಡ ಗೂಳ್ಯಾನ ಕಟ್ಟು
ಮಾಲಿಂಗನ ಕಟ್ಟು ಮೇಟ್ಯಾಗೊ । ನಮ್ಮೆತ್ತ
ಕಾಡಿದರೆ ಕಟ್ಟೊ ಕಡಿಸುತ್ತೊ ॥

ಹಂತೀಯ ಕಟ್ಟವನ ಹೌಸ ಹುರುಪನು ನೋಡೊ
ಹಂತೀಯ ಧೂಳ ಮೈದೂಳೊ । ಹದಿನಾರು
ಹಂತಿ ಎತ್ತಿನಾ ಹಣಿಧೂಳೊ ॥ *–ಜಾನಪದ ಸಂಭಾರ–*

ಎಂದು ಹಂತಿಯ ಕಟ್ಟುವ, ತುಳಿಸುವ ಸಿದ್ಧತೆಯನ್ನು ಹಾಡಿದ್ದಾನೆ. ಎತ್ತಿನ ಸಿಂಗಾರವು ಒಕ್ಕಲಿಗನಿಗೆ ಜೀವನದ ಒಂದು ಆನಂದ. ತನ್ನ ಬಾಳು ಬದುಕೇ ಆದ ಅದರ ಸಿಂಗಾರ ನೋಡಬೇಕೆಂಬ ಕಕ್ಕುಲತೆಯೂ ಉಂಟು. ಕಾರಣ ಅಂದ ಚೆಂದ ಹೆಸರುಗಳಿಂದ ಅವುಗಳನ್ನು ಕರೆಕರೆದು ಹಂತಿಯನ್ನು ಹೊಡೆದು, ಹಾಡುವುದೇ ಒಂದು ಜೀವನ ತೃಪ್ತಿ. ಅವನಿಗೆ ದಣಿವೇ ಇಲ್ಲ. ತನ್ನ ಕಾಯಕದ ಗುರಿಯೇ ಗುರಿ! ಕಣ ತುಂಬ ರಾಶಿಯನ್ನು ನೋಡಬೇಕೆಂಬ ಉಲ್ಲಾಸವೇ ಉಲ್ಲಾಸ! ಹೀಗೆ ಅನೇಕ ನಾದಗಳಲ್ಲಿ ಅವನಿಗೆ ಆ ಇರುಳು ಹೇಗೋ ಜಾರಿಹೋಗುವುದು. ಇದೆಲ್ಲವೂ ಅವನ ಜೀವನದ ವೈಶಾಲ್ಯ; ಸುತ್ತು ಮುತ್ತಲಿನ ನಿಸರ್ಗದ ಪ್ರಭಾವವೇ ಅನ್ನಬಹುದು. ಸುಗ್ಗಿ ಹಂತಿಯೆಂದರೆ ಒಕ್ಕಲಿಗನ ಮನೆಯವರೆಲ್ಲರಿಗೂ ಹಿಗ್ಗು, ಹೌಸು. ಒಕ್ಕಲು–ಮನೆತನದ ತಾಯಿಗೆ ನಸುಕಿನಲ್ಲಿಯೇ ಹಂತಿಯ ಬುತ್ತಿಯನ್ನು ಹೊತ್ತುಕೊಂಡು ಹೋಗಿ ಹೊಲದಲ್ಲಿ ಬೆಳಗಿನ ಹಂತಿಯ ಕಾಣುವ ಬಯಕೆ ಬಲು ದೊಡ್ಡದು. ಬೆಳತನಕ ಅವಳೆದುರು ಹೊಲದಲ್ಲಿ ನಡೆದಿರುವ ಹಂತಿಯ ಚಿತ್ರವೇ ಚಿತ್ರ. ಬುತ್ತಿಯನ್ನು ಕಣದ ದಂಡೆಯಲ್ಲಿ ಇಟ್ಟವಳೆ, ಕಣದ ಚಿತ್ರದ ಸೊಬಗಿನ ಆನಂದ ಉಕ್ಕಿ, ಹಂತಿಯ ತಿರುಗುವ ಬಸವಣ್ಣನ ಮೈಮೇಲಿನ ಸುಂಕವನ್ನು ತನ್ನ ಮಗನ ಎತ್ತೆಂದು ಬಲು ಹೆಮ್ಮೆಯಿಂದಲೂ ಅಭಿಮಾನದಿಂದಲ್ಲೂ ಜಾಡಿಸುವಳು.

ಹಂತೀಯ ಹೊಡೆದೆತ್ತು, ಹಂತೇಲಿ ಬಂದಾರ
ಸುಂಕ ಜಾಡಿಸಿದೆ ಸೆರಗೀಲೆ । ಕಂದನಿಗೆ
ಹಂತೀಯ ಎತ್ತು ಹದಿನೆಂಟು ॥ *–ಜಾನಪದ ಸಂಭಾರ–*

ಆ ಒಕ್ಕಲು–ತಾಯಿಗೆ ಮಗನ ಈ ಸಂಪತ್ತನ್ನು ನೋಡಿ ತುಂಬ ಆನಂದ.

ಶಂಕೂರಿ ಗಂಡsನ, ಸೇವsಕ ನನಮಗs
ಸುಂಕು ಮೈದರಿಸಿಲುಣಬಂದ । ಮನಿಸೊಸಿ
ಸಂಪತ್ತ ನೋಡಿ ಬೆರತಾಳೊ ॥ *–ಜಾ.ಸಂ.–*

ಒಕ್ಕಲಿಗನ ಸಂಪತ್ತೇ ರಾಶಿ. ಬೆಳುವಲದಲ್ಲಿ ಹೆಣ್ಣು ಕೊಡುವ ಮುನ್ನ ಅವನಿಗೆ ಮನೆ ಹೊಲಗಳುಂಟೊ, ರಾಶಿ, ಕಣಜಗಳುಂಟೊ? ವಿಚಾರಿಸಿ ಹೆಣ್ಣು ಕೊಡುವ ವಾಡಿಕೆ ಈಗಲೂ ಇದೆ. ಒಕ್ಕಲಿಗನ ಸಂಪತ್ತನ್ನು ನೋಡಿ ಅದನ್ನು ಬಯಸುತ್ತಿರಲು ಮನೆ ಸೊಸೆಯು ಬೆರಗಾಗುವದರಲ್ಲಿ ಆಶ್ಚರ್ಯವೇನು? ವಿಶೇಷವಾಗಿ ಒಕ್ಕಲಿಗರು ಶಿವೋಪಾಸಕರಿರುವುದನ್ನು ಬೆಳುವಲದಲ್ಲಿ ಕಣ್ಣಾರೆ ಕಾಣಬಹುದು. 'ಶಂಕುರೀ ಗಂಡsನ, ಸೇವsಕ, ನನಮsಗ.' ಎಂಬ ಮಾತೇ ಇದಕ್ಕೆ ಸಾಕ್ಷಿ. ರಾಶಿಯ ಸಂಜೆಯ ದಿನವೇ ರಾಶಿ ಬುತ್ತಿಯ ದಿನ. ಒಕ್ಕಲಿಗನು

ಬೆಳೆಯನ್ನು ಮನೆಗೆ ತರುವುದರೊಳಗೆ ಮೂರು ಚರಗಗಳನ್ನು ಬೆಳೆಗೆ ಎಡೆಮಾಡಿ ಒಗೆದು, ಕಡೆಗೆ ರಾಶಿಯನ್ನು ಹೇರಿಕೊಂಡು ಬರುವನು. ಜೋಕುಮಾರನ ಅಳಕ ಅಂಬಿಲಿಯೇ ಬೆಳೆಗೆ ಮೊದಲನೆಯ ಚರಗ. ಶೀಗೆಯ ಹುಣ್ಣಿಮೆಯಲ್ಲಿ ಬನದೂಟ ಮಾಡಿ ಚರಗ ಚಲ್ಲುವದೇ ಎರಡನೆಯ ಚರಗ. ಚರಗ ಚೆಲ್ಲುವ ಉದ್ದೇಶವು, ಬೆಳೆಯು ಫಲವತ್ತಾಗಿ ರಾಶಿಯು ಹುಲುಸಾಗಲೆಂದು. ಅವನು ಚೆಲ್ಲುವ ಕೊನೆಯ ಚರಗವೆಂದರೆ ರಾಶಿಬುತ್ತಿಯ ಕಾಲದಲ್ಲಿ. ಭೂಮಿ–ತಾಯಿಗೂ, ಕಣದಲ್ಲಿಯ ಸಾಲುಶರಣರಿಗೂ, ಎಡೆಮಾಡಿ ಹುಲುಸು ಕೊಡಿರೆಂದು ಉಡಿಯೊಡ್ಡಿ ಬೇಡಿಕೊಂಡು ಕಡೆಯ ಚರಗವನ್ನು ಚೆಲ್ಲಿ, ಉಂಡು, ಬೆಳತನಕ ರಾಸಿಯನ್ನು ಕಾಯುವನು. ಬೆಳಗಿನ ಜಾವದಲ್ಲಿ ನರಿಯು ಕೂಗಲು ಕನ್ನಯ್ಯನ ಮುಗ್ಧ ಭಕ್ತಿಯು ತನ್ನ ರಾಶಿಗೆ ಹುಲುಸು ಕೊಡುವದೆಂಬ ಸಂಪ್ರದಾಯದ ಮುಗ್ಧ ನಂಬುಗೆಯಿಂದ[೩] 'ಹುಲುಸು ಹುಲ್ಘಲ್ಲಿಗೊ' ಎಂದಂದು ರಾಶಿಯನ್ನು ತುಂಬುವನು. ಅಂದೇ ಬನದಸಿರಿಯು ನಾಡಸಿರಿಯೊಡನೆ ಬೆರೆಯುವಳು. ನಾಡು ನಾಡೆಲ್ಲ ಚೇತರಿಸಿ ಜಾತ್ರೆ ಮಹೋತ್ಸವಗಳಲ್ಲಿ ತೊಡಗುವುದು. ಆ ಸಮಯವೇ ಅವನಿಗೆ ಬಿಡುಗಾಲ, ಆನಂದಪಡುವ ಕಾಲ

ದೈವ ದೇವರ ಹಂತಿ, ಭವದೊಳಗೆ ನಮ್ಹಂತಿ
ತೇದುಂಡ ಹಂತಿ ನಮ್‌ಬಾಳು । ಒಕ್ಕಲಿಗ
ಕೋದ ತೆನಿಹಂತಿ – ಜನುಮsಕೊ ॥ *–ಜಾ.ಸಂ.–*

ಈ ಪ್ರಕಾರ ತನ್ನ ಸುಗ್ಗಿಯ ಹಂತಿಯನ್ನು, ಸುತ್ತು ಮುತ್ತಲಿನ ಪ್ರಪಂಚದಲ್ಲಿ ದಿನನಿತ್ಯ ಕಂಡ ಅನುಭವವನ್ನು ತುಂಬಿದ ಧ್ವನಿಯಿಟ್ಟು ಹಾಡಿದ್ದಾನೆ.

❒

---

೩. ಐತಿಹಾಸಿಕ ಸಂಗತಿಗಳು: 'ಸುಗ್ಗಿಯ ಸಂಪ್ರದಾಯಗಳು' ನೋಡಿರಿ.

೩. ರಸ ನಿಮಿಷಗಳು

ನಿಸರ್ಗದಡಿಯಲ್ಲಿ ಹಗಲಿರುಳು ಕಾಲ ಕಳೆಯುವ ರೈತನು ರಸಿಕನೂ ಹೌದು. ಸುಗ್ಗಿಯು ಮನೆಗೆ ಬಂದ ಮೇಲೆ ಅವನ ಕೈಯಲ್ಲಿ ತುಂಬ ರೊಕ್ಕವೂ ಆಡುವುದು, ಸಾಕಷ್ಟು ಬಿಡುವೂ ದೊರೆಯುವುದು. ಮೋಜು ಮಜಲುಗಳೆಂದರೆ ಅವನಿಗೆ ಅತಿ ಪ್ರೇಮ. ಕಾಮನ ಹಬ್ಬ ಬರುವುದು ಇವೇ ದಿನಗಳಲ್ಲಿ. ಜಾತ್ರೆ ಮಹೋತ್ಸವಗಳು ವಿಶೇಷವಾಗಿ ಆಗುವುದೂ ಇವೇ ದಿನಗಳಲ್ಲಿ. ಅವನಿಗೆ ಈ ಎಲ್ಲವುಗಳಲ್ಲಿಯೂ ಅಭಿರುಚಿ. ಕಾಮನ ಹಬ್ಬದಲ್ಲಿ ಬಾರಿಸಿ ಮಜಲು ಮಾಡಿ ಹಾಡಿ ಕುಣಿಯುವುದೂ, ಯುಗಾದಿಯ ಹೊಸ ದಿನಕ್ಕೆ ಗುಡಿಕಟ್ಟಿ ದನಕರಗಳನ್ನು ಸಡಗರದಿಂದ ಮೆರಿಸುವುದೂ, ಕಾರಹುಣ್ಣಿಮೆಯಲ್ಲಿ ಹೊನ್ನುಗ್ಗಿಯ ದಿವಸ ದನಕರಗಳನ್ನು ಪೂಜೆಮಾಡಿ ಹುಗ್ಗಿಯನ್ನುಣಿಸುವುದೂ, ಹುಣ್ಣಿಮೆಯ ದಿವಸ ಎತ್ತುಗಳನ್ನು ಮೆರೆಸಿ ವರುಷದ ಮಳೆ ಬೆಳೆಯ ಭವಿಷ್ಯವನ್ನರಿಯಲು ಕರಿಯ ಹರಿಯುವುದೂ, ಅವನಿಗೆ ತುಂಬ ಆನಂದ!

ಬಿಸಿಲು ಗಾಳಿಗೆ ಮೈಬಿಟ್ಟು ಬೆವರು ಸುರಿಸಿ ಬಲಾಢ್ಯ ಕಾಯ ಬೆಳೆಸಿದ ಹುರಿಯಾಳವನು; ಕೆಚ್ಚೆದೆಯ ಬಂಟನವನು. ಅವನಿಗೆ ಈ ಬಾಳಿನಲ್ಲಿ ರಸ ನಿಮಿಷಗಳೂ ಬೇಕು. ಬಾಳತೋಟದ ಪ್ರೇಮಲತೆ ಕುಡಿಬಿಟ್ಟು ಫಲವಾಗಲೂ ಬೇಕು. ಕಾರಣ ಅವನು ಮದುವೆ ಮಂಗಲಕಾರ್ಯಗಳನ್ನು ಕೈಕೊಳ್ಳುವ ಕಾಲವಾದರೂ ಇದೆ. ನಿಸರ್ಗ ಸಂಪರ್ಕದಿಂದ ಅವನಲ್ಲಿ ಪ್ರೇಮದ ಸಹಜತೆಯು ತಾನಾಗಿಯೇ ಅಂಟಿಕೊಂಡಿದೆ. ರಸಿಕತೆಯ ಪ್ರೇಮದ ಬುಗ್ಗೆಯು ಪುಟಿಯಲು ಅವನು ರಸ ನಿಮಿಷಗಳನ್ನು ಭೋಗಿಸುವನು. ಈ ರಸ ನಿಮಿಷಗಳಲ್ಲಿ ಹೆಣ್ಣೂ ಭಾಗಿಯಾಗುವದು. ವಿಶೇಷವಾಗಿ ಗಂಡಸರಕ್ಕಿಂತ ಹೆಂಗುಸರದೇ ಮದುವೆ ಮಂಗಲ ಕಾರ್ಯಗಳಲ್ಲಿ ದೊಡ್ಡ ಚಾಜ. ಮಾನವನ ಆಯುಷ್ಯದಲ್ಲಿ ಮದುವೆಯ ಪ್ರಸಂಗವು ಅತಿ ಮಹತ್ವವಾದುದು. ಅದೇ ಗಂಡ–ಹೆಂಡಿರ ಮೊದಲನೆಯ ಪರಿಚಯ ದಿನವೆನ್ನಬಹುದು. ಪ್ರಪಂಚದಲ್ಲಿ ಅವರ ಈ ಪರಿಚಯದ ದಿನದ ಪ್ರೇಮವು ಅವ್ಯಾಹತವಾಗಿ ಸುಸೂತ್ರ ಸಾಗಬೇಕು. ಒಲೆಹೊತ್ತಿ ಹೊಗೆ ಹಾಯಬೇಕು. ಒಕ್ಕಲಿಗ ಹೊಲ ಉತ್ತಿ, ಬಿತ್ತಿ ಬೆಳೆಯಬೇಕು. ಗಂಡ–ಹೆಂಡಿರ ಪ್ರೇಮ ಕುಡಿಬಿಟ್ಟು ಹೂವಾಗಿ ಫಲಿಸಬೇಕು. ಅಂದರೆ ಮಾತ್ರ ಈಶ್ವರನ ಚೆಲುವಾದ ಈ ಸೃಷ್ಟಿಯು ಮುಂದೆ ಸಾಗುವುದು. ಆದುದರಿಂದಲೇ ಮದುವೆಯ ಅವಶ್ಯಕತೆಯು ಜನಾಂಗದಲ್ಲಿ ಬಂದಿದೆ. ಮಾನವನು ಮನೆ ಕಟ್ಟಿಕೊಂಡು ಇರಹತ್ತಿದ ಮೇಲೆ ಮದುವೆಯ ಕಲ್ಪನೆಯು ಬಂದಿರಬೇಕು. ಈ ಮದುವೆಯ ಸಮಯವೆಂದರೆ ಹೆಣ್ಣಿಗೆ ಅಂದಿನಿಂದ ಇಂದಿನವರೆಗೆ ಒಂದು ವಿಶೇಷ ಸೊಬಗಿನ ಪ್ರಸಂಗ. ಹಾಸ್ಯ, ವಿಲಾಸ, ವಿನೋದಗಳನ್ನು ಎಲ್ಲರಿಗೂ ಉಣಿಸುವುದೇ ಹೆಣ್ಣು ಬಳಗದ ಹಿರಿಯಾಶೆ. ಬೀಗರೆದುರುಗೊಳ್ಳುವುದು, ಅರಿಷಿಣವಾಡುವುದು, ಸುರಗಿಯ ಸುತ್ತುವುದು, ಐರಣಿ ತರುವುದು, ಗುಗ್ಗಳ ಹೊರವುದು, ಭೂಮವಾಡುವುದು ಇವೇ ಮೊದಲಾದ ಅನೇಕ ಕಾರ್ಯಗಳಲ್ಲಿ ಮಂಗಳಾರತಿ ಎತ್ತಿ ಹಾಡಿ ವಧೂವರರಿಗೆ ಸುಖವನ್ನು ಬಯಸುವುದು ಮುಖ್ಯ ಧ್ಯೇಯ. ಮದುವೆಯೊಡನೆ ಉಗಮ ಹೊಂದಿದ ಈ ಹಾಡುಗಳು ಹೆಚ್ಚು ಕಡಿಮೆಯಾಗಿ ಯುಗಯುಗಗಳಲ್ಲಿ ಜನಾಂಗದಲ್ಲಿ ಸುಧಾರಣೆಗಳು ತೋರಲು ಮಾರ್ಪಾಡಾಗಿ ಇಂದು ನಮಗೆ ಈ ರೂಪದಲ್ಲಿ ಬಂದಿವೆ. ಮೊದಲಿನಿಂದಲೂ ಈ ಹಾಡುಕಟ್ಟಿ ಹಾಡಿದವರು ನಮ್ಮ ಹೆಣ್ಣುಮಕ್ಕಳೆ. ಮದುವೆಯಲ್ಲಿ ಸೋಬಾನದ ಸೊಲ್ಲೆತ್ತಿ ಗುಂಪುಗಟ್ಟಿ ಹಾಡುವ ವಾಡಿಕೆಯಿದೆ. ಇಂದು ಸೊಲ್ಲೆತ್ತಿ ಸೋಬಾನ ಹಾಡದ ಮದುವೆಯೇ ಕರ್ನಾಟಕದಲ್ಲಿ ಇಲ್ಲ. ಬಾಳಿನ ಆಗುಹೋಗುಗಳ ಸಾರವನ್ನು ಶಿವಸೊಲ್ಲಿನೊಡನೆ ಹಾಡಿ ವಧೂವರರನ್ನು ಆಶೀರ್ವದಿಸಿ ಎಲ್ಲ ಕಾರಣಗಳನ್ನು ಮಾಂಗಲ್ಯದಲ್ಲಿ ಮುಗಿಸಿ ಮದುವೆಯ ಕೊನೆಯನ್ನು ಮಾಡುವುದು ಭರತಖಂಡದ ಎಲ್ಲ ಭಾಗಗಳಲ್ಲಿ ಉಂಟು. ಆರ್ಯ ಸಂಸ್ಕೃತಿಯ ಸಂಸ್ಕಾರ ಹೊಂದಿದ್ದರೂ ಶಿವಶರಣರ ಕ್ರಾಂತಿಯನ್ನು ಕಂಡು ಕರ್ನಾಟಕವು ಈ ಭಾಗದಲ್ಲಿ ಒಂದು ಹೆಜ್ಜೆ ಮುಂದಿರುವುದು. ಹಳ್ಳಿಗರು ವೇದ, ವೈದಿಕ ವಿಧಿಗಳಿಗೆ ತುತ್ತಾಗದೆ ಶುಭವೇ ಲಾಭವೆಂದು ಸೋಬಾನ ಹಾಡಿ ಈ ಸೋಬಾನ ಸೊಲ್ಲನ್ನು ಉಳಿವೆಯ ಚೆನ್ನಬಸವನು ಕಲಿಸಿದನೆಂದು ಎತ್ತಿ ಹೊಗಳುತ್ತಾರೆ.

ಸೋಬಾನವೆನ್ನಿರೇ, ಸೋಬಾನ ವೆನ್ನಿರೇ
ಸೋಬಾನಕ್ಕೊಮ್ಮೆ ಶಿವಗೊಮ್ಮೆ । ಐದೇರ
ಸೋಬಾನಕಿಂದು ಬರಬೇಕ ॥ ಸೋ ॥

ಸೋಬಾನ ಶುಭಕಾರ್ಯ, ದಾವಲ್ಲಿ ಹುಟ್ಯಾವ
ಭಾಗೆ ಉಳ್ಳವರ ಮನಿಯಾಗ । ಶುಭಕಾರ್ಯ
ಆಗ ಹುಟ್ಯಾಗ ಬೆಳದಾವ ॥ ಸೋ ॥

ಹನ್ನೆರಡು ವರುಷದೊಳು, ಕೂಡಿಹಾಕಿದ ಬದುಕ
ಮುರಿಸ್ಯಾರ ಮೂರು ಗಳಿಗ್ಯಾಗ। ತಾಯ್ತಂದಿ
ಮಾಡ್ಯಾರ ಮದುವೆ ಬಾಲಂದ ॥ಸೋ ॥

ಸೋ ಅನ್ನು ಸಬುದವನು, ಯಾರು ಮಾಡ್ಯಾರ ಗುರುವೆ
ದೇವಗುರು ಚೆನ್ನಬಸವಣ್ಣ। ಸೊಗಲದಾಗ
ಮಾದೇವಗ ಮದುವೆ ಮಾಡಿದರ ॥ ಸೋ ॥ *–ಜಾ.ಸಂ.–*

ಹೀಗೆಂದು ದನಿ ಎತ್ತಿ ಮನೆಯಲ್ಲಿ ಸೋಬಾನ ಹುಟ್ಟಿದ ಸ್ಥಿತಿಗತಿಗಳನ್ನು ಹಾಡಿದ್ದಾರೆ. ಹಾಡುವಾಗ 'ಸೋ' ಎತ್ತುವವರು ಬೇಸರ ಪಟ್ಟರೆ, ಅವರನ್ನು ಹುರುದುಂಬಿಸಲು ಆ ಹಾಡಿನ ಕೂಡ ಅವರ ಬಣ್ಣನೆ ಮಾಡಿ ಒಂದೆರಡು ಪದ್ಯಗಳನ್ನು ಕೂಡಿಸಿ ಹಾಡುವದೂ ಉಂಟು.

ಗಂಟಲದ ದನಿಕೇಳ, ಗಂಟಿ ಬಾರಿಸಿದ್ಹಂಗ
ಎಂಟು ಕಿನ್ನೂರಿ ನುಡಿದ್ಹಂಗ। ನನಗೆಣತಿ–
ತಂತ ನಿನಗ್ಯಾಕ ದನಿಗೋಡ ॥ಸೋ॥ *–ಜಾ.ಸಂ.–*

ಎಂದು ಹಾಡಿ 'ಸೋ' ಎತ್ತಲು ಎಚ್ಚರಿಸಿದ್ದಾರೆ. ಮನೆಯಲ್ಲಿ ಮದುವೆಯನ್ನು ಹೂಡಲು ಒಂದರ ಮೇಲೊಂದು ಮಂಗಲ ಕಾರ್ಯಗಳ ಪ್ರಾರಂಭವೇ ಪ್ರಾರಂಭ! ಮದುವೆಯ ಸೌರಣೆಗೆ ಮನೆಯಲ್ಲಿ ಓಡಾಟವೇ ಓಡಾಟ! ಬೀಸುವುದು, ಕುಟ್ಟುವುದು ಮೊದಲಾದ ಆಹಾರ ಸಾಹಿತ್ಯ ಸಂಗ್ರಹ ಮಾಡಬೇಕು. "ಸುವ್ವೀ ಸುವ್ವೀ ಸುವ್ವಾಲೆ' ಎಂದು ಹಾಡಿ 'ಒರಳು ಕಲ್ಲಪೂಜೆ'ಯನ್ನು ಮಾಡಿ ಮದುವೆಯ ಮನಿಯಲ್ಲಿ ಮೊದಲನೆಯ ಕಾರಣವು ಆರಂಭವಾಗುವುದು. ಕನ್ನಡಿಗರು ದೇಶಾಭಿಮಾನಿಗಳು. ಪಾರತಂತ್ರ್ಯದಲ್ಲಿ ಭಾರತವು ಮುಳುಗುತ್ತಿರಲು ಅದನ್ನು ಕಿತ್ತೊಗೆಯಲು ಕನ್ನಡತಿಯು ದೇಶಾಭಿಮಾನದಿಂದ ಸ್ವಾತಂತ್ರ್ಯ ಹೋರಾಟವನ್ನು 'ಒರಳಕಲ್ಲ ಪೂಜೆ'ಯ ಹಾಡಿನ ರೂಪವಾಗಿ ಹಾಡಿದ್ದಾಳೆ. ಅವಳ ಮೂಲ ಹೇತು, ಹೆಣ್ಣು ಬಳಗ ಕೂಡಿದ ಮದುವೆಯಲ್ಲಿ ದೇಶಾಭಿಮಾನವನ್ನು ಹುಟ್ಟಿಸಿ, ಪಾರತಂತ್ರ್ಯದ ಅರಿವನ್ನು ಹೆಣ್ಣುಮಕ್ಕಳಿಗೆ ತಂದು ಕೊಡುವುದೇ ಇರಬೇಕು. ಈ ಹಾಡು ತೀರ ಇತ್ತೀಚಿನದಿದ್ದರೂ ಕನ್ನಡ ಹೆಣ್ಣುಮಕ್ಕಳ ಕಾವ್ಯ ಕಟ್ಟುವ ಸಹಜತೆಯನ್ನು ತೋರಿಸದಿರದು.

ಸುವ್ವೀ ಸುವ್ವಿ ಸುವ್ವಾಲೇ ॥ಪ॥
ಅಕ್ಕೀಯ ತೊಳಸುದಕ, ಒಕ್ಕಟ್ಟು ಇರಬೇಕು
ಪಕ್ಕ ಸವರಾಜ್ಯ ಗೆದೆಯುದಕ। ಆಂಗ್ಲರಿಗೆ
ಬಿಕ್ಕಿ ಬೇಡಿದರೆ ಕೊಡುರೇನ ॥ಸು॥

ಚಳವಳಿಯ ಮಾಡವರ, ಒಳಗ್ಯಾಕ ಕೂತೀರೆ
ಜಳಕವ ಮಾಡಿ ಖಾದೀಯ। ಉಟಗೊಂಡು
ಒಳಕಲ್ಲ ಪೂಜೆ ಬರಬೇಕು ॥ಸು॥

ಮುತ್ತೈದಿ ಮಕ್ಕಳೆ, ಜೆತ್ತಾಗಿ ಬನ್ನೀರೆ
ಉತ್ತಮರ ಮದುವೆ ಮಾಡುದಕ। ಪರತಂತ್ರ
ಕಿತ್ತೊಗೆದು ರಾಜ್ಯ ಗಳಸುದಕ ॥ಸು॥

ಕೇಸರಿ ಬಣ್ಣದ ಕ್ಯಾವಿ, ಬಿಳಿಯ ಬಣ್ಣದ ಸುಣ್ಣ
ಹಾಸಕ್ಕೆ ಕುಸುರು ಬರೆಯೀರೆ। ಪೂರದಲಿ
ಸೋಸಿ ಮದುವೇಯ ಮಾಡುದಕ ॥ಸು॥

ಬೀಸೂವ ಕಲ್ಲಾಗ, ಕೂಸು, ನೂಲುವ ರಾಟಿ
ಈಶ ನೀನೆಂದು ಬರೆಯೀರೆ। ಗಾಂಧೀಯ
ಬೀಸಿ ನೆನೆಯೀರೆ ಹಾಡ್ಹಾಡಿ ॥ಸು॥

ಕಲ್ಲಪೂಜೆಯ ಮಾಡಿ, ಇಲ್ಲಿ ಬೀಸುವರಿಲ್ಲ
ಎಲ್ಲ ಗೋದೀಯ ಗಿರsಣಿಗೆ। ಬೀಸಿದರೆ
ಎಲ್ಲಿ ಬರಬೇಕ ಸವರಾಜ್ಯ ॥ಸು॥ *–ಜಾ.ಸಂ.–*

ಎಂದು ಭಾರತ ಸ್ವಾತಂತ್ರ್ಯ ಸಂಗ್ರಾಮವನ್ನು ಬಿಚ್ಚಿ ಬಿಚ್ಚಿ ಹಾಡಿ 'ಸೋಸಿ–ಮದುವೆಯ ಮಾಡುದಕೆ' ಒಟ್ಟಾದಂತೆ ಸ್ವಾತಂತ್ರ್ಯವನ್ನು ಪಡೆಯಲು ಒಟ್ಟಾಗಿರೆಂದು ಹೇಳಿದ್ದಾಳೆ. ಕಡೆಗೆ ನಮ್ಮವರು ಮದುವೆಯಲ್ಲಿ 'ಒರಳುಕಲ್ಲ ಪೂಜೆ' ಮಾಡಿದರೂ ಅಲ್ಲಿ ಬೀಸುವವರು ಯಾರೂ ಇಲ್ಲ; ಬೀಸುವದನ್ನೆಲ್ಲ ಗಿರಣಿಗೆ ಒಯ್ದರೆ ಸ್ವರಾಜ್ಯ ಎಲ್ಲಿ ಬರಬೇಕು? ಎಂದು ವ್ಯಥೆ ಪಟ್ಟು ಅಸಹಾಯಕ ಉದ್ಗಾರವನ್ನು ತೆಗೆದಿದ್ದಾಳೆ. ಎಲೆ–ಸಕ್ಕರಿಯನ್ನು ಸಮಾಜಕ್ಕೆ ಹಂಚಿ ಹೆಣ್ಣನ್ನು ಗಟ್ಟಿ ಮಾಡುವ ಮುನ್ನ ಹೆಣ್ಣು ಬಳಗವು ಒಂದೆಡೆ ಕೂಡಿಕೊಂಡು ವಿಚಾರಿಸಿ ಒಂದು ನಿರ್ಧಾರಕ್ಕೆ ಬರುವ ಪ್ರಸಂಗವನ್ನು 'ಒಟಗಿ'ಯ ಹಾಡಿನಲ್ಲಿ ಕಾಣಬಹುದು.

ವರಸುದ್ದ ನಿದ್ದರ, ಕುಲ ಚೊಕ್ಕನಿದ್ದರ
ಫಣೆನಾಲಿಗಿ ಸುದ್ದ ಮಕಸುದ್ದ। ಇದ್ದsರ
ನಮ್ಮ ಮಗಳನ್ನು ಕೊಡ ಹೋಗ್ರೆ॥

ಕುಲ ಚೊಕ್ಕವಿದ್ದು ವರ ಶುದ್ಧನಿದ್ದರೆ ಸಾಕು! ಹೆಣ್ಣನ್ನು ಕೊಡಲು ಎಲ್ಲರದೂ ಒಮ್ಮತವು. ಬೇರೆ ಪ್ರಶ್ನೆಗಳಿಗೆ ಅಷ್ಟೊಂದು ಮಹತ್ವವನ್ನು ಕೊಡಲಾರರು. ಅಳಿಯ ದೊರೆಯುವದೆಂದರೆ, ಹೆಣ್ಣು ಮನೆಗೆ ಸೂರ್ಯಚಂದ್ರರು ಉದಯವಾದಂತೆ. ಎಲ್ಲರಿಂದಲೂ ಅಳಿಯನಿಗೆ ಆದರ ಸತ್ಕಾರ.

ಮದುವೆಯ ಮುಹೂರ್ತದಲ್ಲಿ ರೈತನು ಎಲ್ಲರನ್ನು ಬರಮಾಡಿಕೊಳ್ಳುವನು. ಒಬ್ಬರು ಬಾರದಿದ್ದರೆ ಅವನು ಹೂಡಿರುವ ಮದುವೆಯು ಮಂದೆ ಸಾಗದು. ಅವನಿಗೆ ಎಲ್ಲ ಆಯಗಾರರೂ, ಬಾಬುಗಾರರೂ ಬರಲೇಬೇಕು. ಐರಣಿ, ಗುಗ್ಗುಳಕ್ಕೆ ಕುಂಬಾರ ಬೇಕು; ಬಡಿಗನೂ ಬೇಕು. ಗುಗ್ಗುಳದಲ್ಲಿ ವಧೂವರರಿಗೆ ಹಡದಿಯನ್ನು ಹಾಸಲು ಮಡಿವಾಳನೂ ಬೇಕು. ಬಾಸಿಂಗ, ದಂಡೆ ಹೆಣೆಯಲು ವಾಲಿಯವನೂ, ಹೂಗಾರನೂ ಬೇಕು. ಬಾಸಿಂಗ, ದಂಡೆಯನ್ನು ತರುವ ಸಂಭ್ರಮವು ದೊಡ್ಡದು. ಅನೇಕ ರೀತಿಯಿಂದ ಹಾಡಿ ಬಾಸಿಂಗ– ದಂಡೆಯ ಮಹತ್ವವನ್ನು ಹೆಣ್ಣುಬಳಗವು ವಧೂವರರಿಗೆ ಎಚ್ಚರಿಸಿ ಹೇಳುವುದು.

ಸೋ ಅನ್ನೆ ಸೋಬಾನ ಬನ್ನೇ ॥ಪ॥
ಬಾಸಿಂಗ ಮೇಲಿರುವ, ಸೂಸಾಡು ಗಿಳಿರಾಮ
ದೇಸೆಲ್ಲಿ ನಿಮ್ಮ ದಳವೆಲ್ಲಿ। ಮದುಮಗನ
ಬಾಸಿಂಗ ಮೇಲೆ ಬಲಬಂದೆ ॥ಸೋ ॥ ॥೧॥

ದಂಡೆಯೊಳು ಒರಗಿರುವ, ಮಂಡಲದ ಗಿಳಿರಾಮ
ತೊಂಡಲವು ತೂಗಿ ದಳವೆಲ್ಲಿ। ಮದುಮಗಳ
ದಂಡೆಯಾ ಮೇಲೆ ಬಲಬಂದೆ ॥ಸೋ ॥ ॥೨॥

ಬಾಸಿಂಗ ತರುವಾಗ, ಸೂಸಾಡಿ ಮಳೆಯಾಗಿ
ಬಾಸಿಂಗ ಚಿಗಿತು ಬನವಾಗಿ। ನಮ್ಮೂರ
ಕೂಸ ಬಡವರಿಗೆ ನೆರಳಾಗಿ ॥ಸೋ॥ ॥೩॥

ದಂಡೆಯನು ತರುವಾಗ, ತೊಂಡಲದ ಮಳೆಯಾಗಿ
ದಂಡೆಲ್ಲ ಅರಳಿ ಹೂವಾಗಿ। ಗೊನೆಬಿಟ್ಟು
ಪುಂಡ ಮದುಮಗನ ಫಲವಾಗಿ ॥ಸೋ॥ ॥೪॥

ಗುಂಡು ಮಲ್ಲಿಗೆ ಹೂವ, ತೊಂಡಲದ ನೆನೆದಂಡೆ
ಇಂಡಿ ಕೊರಳೊಳಗ ಬಾಸಿಂಗ। ಹೂವನು
ಕೊಂಡು ಮೆರೆಸಿದರ ಬೆಳತನಕ ॥ಸೋ॥ ॥೫॥

ಮದುಮಗನ ಬಾಸಿಂಗ, ಮದುಮಗಳ ನೆನೆದಂಡೆ
ಪದಪಿನಲಿ ಮೆರೆಸಿ ಬೆಳತನಕ। ಹಾಡಿದರ
ಚದುರೆಯರು ಕೂಡಿ ನಾಗೋಲ ॥ಸೋ॥ ॥೬॥

ಪೇಟೆ ಪೇಟೆಯ ಗುಂಟ, ಕೂಟ ಕೂಟಕ ನಿಂತು
ಥಾಟಿನಲಿ ಮೆರೆದು ಮನೆಹೊಗಲು। ಹಡದವ್ವ
ತಾಟಬಾನ್ಸತ್ತಿ ಇಳದೊಗೆದು ॥ಸೋ॥ ॥೭॥ *–ಜಾ.ಸಂ.–*

ಈ ಹಾಡು ರಸ ನಿಮಿಷಗಳ ಕುಸುರರಳು ಇದ್ದಂತೆ. ಬೆಳುವಲ ನಾಡಿನ ಒಕ್ಕಲಿಗನ ಲಗ್ನವನ್ನು ನೋಡುವ ಕಾರಣವೇ ಬೀಳುವುದಿಲ್ಲ. ಆ ಚಿತ್ರವು ಈ ಹಾಡಿನ ಮುಖಾಂತರ ಓದುವ, ಕೇಳುವ ಜನರ ಮನಃಪಟಲದ ಮೇಲೆ ಒಲ್ಲೆಂದರೂ ಮೂಡಿಯೇ ಬಿಡುವುದು. ಬಾಸಿಂಗ ದಂಡೆಗಳ ಸೊಬಗಿನ ಚಿತ್ರ, ಬಲಬಂದವರು ಮದುಮಕ್ಕಳಿಗೆ ಅವುಗಳನ್ನು ಧರಿಸುವುದು, ಎಲ್ಲವೂ ನಮ್ಮನ್ನು ತಲೆದೂಗಿಸುವುವು. ಬಾಸಿಂಗ ತರುವ ಸೊಬಗನ್ನು ಒಂದು ವಿಶಿಷ್ಟ ರೀತಿಯಲ್ಲಿ ಇಲ್ಲಿ ಕಾಣಬಹುದು. ಬಾಸಿಂಗವು ಚಿಗಿತು ಬನವಾಗಿ ಕೂಸಾದ ಬಡವರಿಗೆ ನೆರಳಾಗಲೆಂದೂ, ದಂಡೆಲ್ಲ ಅರಳಿ ಹೂವಾಗಿ ಪುಂಡು ಮದುಮಗನ ಫಲವಾಗಲೆಂದೂ ಹಾಡಿ ಹರಸಿದ್ದುಂಟು. ಬಾಸಿಂಗ, ದಂಡೆ, ಇಂಡೆ, ತೊಂಡಲ, ಬಾನ್ಸತ್ತಿ ಮೊದಲಾದ ಅಚ್ಚ ಜಾನಪದ ಶಬ್ದಗಳು ಹಾಡಿನಲ್ಲಿ ಅಲ್ಲಲ್ಲಿ ಹೊಳೆಯುವ ಸಿಂಗಾರ ಸರದ ಮಾಣಿಕದ ಹರಳಿನಂತೆ ಹಾಡಿಗೆ ಸೊಬಗನ್ನು ತುಂಬಿವೆ. ಸೋಬಾನ ಸೊಲ್ಲಿನ ರಾಗವಂತೂ, ಕೇಳುವ ಕಿವಿಗಳಿಗೆ ಇಂಪಾಗಿ ತಲೆದೂಗಿಸದೆ ಬಿಡದು.

ಕಳಸಗಿತ್ತಿ ಥಾಟಗಿತ್ಯಾಗಿ ಹಕ್ಕಿನಿಂದ ಮದುವೆಯ ಕಾರಣಗಳನ್ನು ನಡೆಯಿಸುವವಳೆಂದರೆ ಬಲಬಂದವಳು. ಬಾಸಿಂಗ ದಂಡೆಯನ್ನು ಕಟ್ಟಿ ಬಿಚ್ಚುವವಳೂ ಅವಳೇ, ಹಾಸಕ್ಕಿ ಹೊಯ್ದು ಮಂಗಳಾರತಿಯನ್ನೆತ್ತಿ ವಧೂವರರ ಒಡಪಾಟ ಆಡಿಸುವವಳೂ ಅವಳೆ. ವಿಶೇಷ ಬಳಗವಂತರಲ್ಲಿ ಈ ಹಕ್ಕು ಅಕ್ಕತಂಗಿಯರಿಗಿದ್ದಂತೆ ಕಂಡುಬರುವದು.

ಬಲಬಂದ ತಂಗೆವ್ವ, ಬಲಗೈಲಿ ಆರೂತಿಯ
ಹಲವಾರೆ ಎತ್ತಿ ಬೆಳಗವ್ವ। ಶಿವನೆಂದು
ಬಲವಂತಳೆಂದು ಕರೆಬಂದೆ ॥ಸೋ॥

ಬಾಸಿಂಗ ಬಲಬರಲು, ಬಾಸೆ ಕೊಡುವೆನು ತಂಗಿ
ಸೋಸಿ ನೀಮಾಡ ನಮಮದುವೆ। ನಂಬಳ್ಳಿ
ಹಾಸಿ ಕುಡಿಬಿಡಲಿ ಹಂದರಕ ॥ಸೋ॥

ನಮ್ಮನೆಯ ಲಕ್ಕಸಮಿ ತಮ್ಮಗಾರುತಿ ಎತ್ತ
ಸುಮ್ಮ ಜಗಳ್ಯಾಕ ಮಗಳೀವೆ। ನನ್ನಕ್ಕ
ದಿಮ್ಮ ನಮಗಿಲ್ಲ ತಿಳಬೇಕ ॥ಸೋ॥ *–ಜಾ.ಸಂ.–*

ಎಂದು ಬಲಬಂದ ಅಕ್ಕನಿಗೆ ಮದುಮಗನ ಅಣ್ಣನು ವಿನಯಪೂರ್ವಕವಾಗಿ ಕೇಳಿಕೊಂಡಿದ್ದಾನೆ. ಇನ್ನೊಂದೆಡೆಯಲ್ಲಿ ಅಕ್ಕತಂಗಿಯರು ತವರು ಮನೆಯ ಹಕ್ಕನ್ನುಳಿಸಿಕೊಳ್ಳಲು ಮದುಮಗನಿಗೆ, ಬಾಗಿಲದಲ್ಲಿ ನಿಂತು ಹಡೆದು ಮಗಳನ್ನು ಕೊಡಬೇಕೆಂದು ಕೇಳುವ ವಾಡಿಕೆಯೂ ಉಂಟು. ಮದುಮಕ್ಕಳನ್ನು ಕಾಡಿ ಕಡೆಗೆ ವಚನ ತಕ್ಕೊಂಡೇ ಬಿಡುವರು.

ಬಾಗಿಲಽ ಬಾಗಿಲಽ
ತೋಳಬಿಡ ತಂಗಿ ಕಾಲಽ ॥ಪ॥

ಕಟ್ಟಿಸಿದ ಬಾಗಿಲಕ, ಕೆತ್ತಿಸಿದ ಒಣಕೀಯ
ಯಾಕಡ್ಡ ಚೆಲ್ಲಿದೆ ನನ ತಂಗಿ ॥೧॥

ಒಣಕೊಗೆದ ಕಾರಣ, ಯಾಕ ಕೇಳುವಿರಣ್ಣ
ಹಡೆದು ಹೆಣ್ಣಮಗ ಕೊಡಬೇಕ ॥೨॥

ಹಣ್ಣು ಹಣ್ಣಂದರ, ಯಾತರ ಹಣ್ಣವ್ವ
ಮಾವಿನಾ ಹಣ್ಣ ಕೊಡತೀನೆ ॥೩॥

ಮಾವಿನಾ ಹಣ್ಣವ, ಏನು ಮಾಡಲಿ ಅಣ್ಣ
ಹಡೆದು ಹೆಣ್ಣಮಗ ಕೊಡಬೇಕ ॥೪॥

ಎತ್ತು ಹೂಡಲು ಕೊಡುವೆ, ಎಮ್ಮಿ ಬಳುವಲ ಕೊಡುವೆ
ಚೊಚ್ಚಲ ಮಗಳ ಕೊಡಲಾರೆ ॥೫॥

ಎತ್ತು ಎಮ್ಮಿಯು ಬೇಡ, ಮುತ್ತು ಕೊಳಗವು ಬೇಡ
ಹೊಟ್ಟೆಲ್ಹುಟ್ಟೇದ ಹೆಣ್ಣೆನಗ ॥೬॥

ಹಣ್ಣು ಹಣ್ಣಂದರ, ಯಾತರ ಹಣ್ಣವ್ವ
ಲಿಂಬೀಯ ಹಣ್ಣ ಕೊಡತೀನೆ ॥೭॥

ಲಿಂಬೀಯ ಹಣ್ಣನ್ನು, ಏನು ಮಾಡಲಿ ಅಣ್ಣ
ರಂಭೆ ನಿನಮಗಳ ಅಳಿಯಾನ ॥೮॥

ಆನಿ ಕೊಡುವೆನು ತಂಗಿ, ಅಂಬಾರಿ ಕೊಡುವೆ ತಂಗಿ
ನಾ ಹಡೆದ ಮಗಳ ಕೊಡಲಾರೆ ॥೯॥

ಆನಿ ಅಂಬಾರಿ ಒಲ್ಲೆ, ಜಾಣನುಡಿ–ನಾನೊಲ್ಲೆ
ಮಾನಿ ನಿನ ಮಗಳ ಬಿಡಲಾರೆ ॥೧೦॥

ಹಂದರದ ಜನ ಕೇಳಿ, ಬಂಧು ಬಳಗಽ ಕೇಳಿ
ಒಪ್ಪಿ ಮಗಳೆನಗ ಕೊಡಬೇಕ ॥೧೧॥

ಬೆನಿಲ್ಹುಟ್ಟಿದ ನಾನು, ಬಿಟ್ಟು ಹೋಗದ ಚಾಜ
ಸಿಟ್ಟು ಸೆಡವಿಲ್ಲ ಕೊಡುಮಗಳ ॥೧೨॥

ಬಾಯಿ ಸಕ್ಕರಿಮಾಡು, ಕಾಯಿ ವೀಳೆಯ ಹಂಚು
ತಾಯ್ಮನೆಯ ಹಾಲು ನಿನಮಗಳ ॥೧೩॥ *–ಜಾ.ಸಂ.–*

ಇಲ್ಲಿ ಬೆಡಗಿನ ಸಂಭಾಷಣೆಯನ್ನು ಕಾಣಬಹುದು. ಮದುಮಕ್ಕಳ ಮೆರವಣಿಗೆಯನ್ನು ಮುಗಿಸಿ, ಮೇಲಿನ ಚಾಜವನ್ನು ಕೇಳುವ ವಾಡಿಕೆಯುಂಟು. ಮೆರವಣಿಗೆಯು ಮುಗಿಯುವ ಮುನ್ನ ತಾಯಿಯು

ದೇವರಿಗೆ ಶರಣನ್ನು, ದೇವರಂತಾ ಮಗನೆ
ದೇವರಿಗೆ ನಮಗ ಒಳಮಾತು । ನಮ್ಮೂರ
ದೇವ ಶಂಕರನಿಗೆ ಶರಣನ್ನು ॥ *–ಜಾ.ಸಂ.–*

ಮಗನಿಗೆ ಉಪದೇಶದ ಕಿವಿಮಾತನ್ನು ಹೇಳುವಳೊ ಏನೊ ಅನ್ನುವಂತೆ ಮೆರವಣಿಗೆಯ ಹಾಡು ಮುಗಿಯವುದು. ಕೊನೆಗೆ ಮದುವೆಯಲ್ಲಿ ಮದುಮಕ್ಕಳ ಬಳಗ ಒಂದೆಡೆಗೆ ಕೂಡಿ ಪ್ರೇಮದಿಂದ ಊಟ ಮಾಡುವುದೇ ಭೂಮದೂಟ. ಭೂಮದೂಟಕ್ಕೆ ಸಕಲ ಸಂಭಾರವೂ ಬೇಕು. ಭೂಮವನ್ನು ಮುಚ್ಚಿ ಬಾನ್ಬತ್ತಿಗಳನ್ನು ಬೆಳಗಿ ಭೂಮವನ್ನು ಮದುಮಕ್ಕಳ ಮುಂದೆ ಉಣಲಿಡುವರು. ಈ ಆರತಿಯನ್ನು ಎತ್ತುವಾಗ ಸಪ್ಪಳಾಗದಂತೆ ಎತ್ತುವ ವಾಡಿಕೆಯಿರುವುದು. ಕಾರಣ

ಗಣಲಂದಾವಲ್ಲ ಮುತ್ತಿನಾ
ಭರಣ ಸುಳಿದಿಂಬುನಿಲ್ಲ ॥ಪ॥

ಎಂಬ ಪಲ್ಲವಿಯು ಭೂಮದ ಹಾಡಿಗೆ ಹೊಂದಿಕೆಯಾಗಿರುವುದು. ಮುಂದೆ ಹೆಣ್ಣು ಮನೆ ತುಂಬಿಸಿ, ಒಪ್ಪಿಸಿ ಕೊಡುವುದೇ ಮದುವೆಯ ಕೊನೆಯೆನ್ನಬಹುದು. ಈ ಹಾಡುಗಳು ಸಾಕಷ್ಟು ದೊಡ್ಡವಿದ್ದು ಹೆಣ್ಣುಬಾಳಿನ ಅಸಹಾಯಕತೆಯನ್ನು ಬಿಚ್ಚಿ ಹೇಳುವುವು.

ಒಂಬತ್ತು ತಿಂಗಳು ನಿನ್ನ ತುಂಬಿಕೊಂಡು ತಿರುಗೇನs ।
ಹಂಬಲಿಸೀ ನಿನ್ನs ಹಡೆದೇನ ॥ಸೋ॥

ಹಂಬಲಿಸೀ ನಿನ್ನs ಹಡೆದೇನs ಚಿತ್ರದ
ಗೊಂಬಿ ನಿನಗೊಪ್ಪಿಸಿ ಕೊಡಲ್ಯಾಂಗ ॥ಸೋ॥

ಹತ್ತು ತಿಂಗಳು ನಿನ್ನs ಹೊತ್ತುಕೊಂಡು ತಿರುಗೇನs ।
ಮುತ್ತು ಸುರುವಿದರs ಬರಿಉಡಿಯs ॥ಸೋ॥

ಮುತ್ತು ಸುರುವಿದರ ಬರಿಉಡಿಯs ನನ ಮಗಳ ।
ಅತ್ತೇರಿಗೊಪ್ಪಿಸಿ ಕೊಡಲ್ಯಾಂಗs ॥ಸೋ॥

ಕುಂಬಳಕಾಯೀ ಓಯ್ದು ಕುಡಗೋಲ್ಗೆ ಕೊಟ್ಟಂಗೆ
ಇಂದ ನಮ್ಮಗಳ ಕೊಡತೀವ ॥ಸೋ॥

ಇಂದ ನಮ್ಮಗಳ ಕೊಡತೀವ ಪಾರ್ವತಿ ।
ಕಂದನ ಸರಿಮಾಡಿ ಸಲಹವ್ವಾ ॥ಸೋ॥ *–ಮಲ್ಲಿಗೆ ದಂಡೆ ಪು.೬೬–*

ಎಂಬ ಹೆಣ್ಣಿನ ತಾಯಿತಂದೆಗಳ ನುಡಿಗಳು ಎಲ್ಲರ ಕರುಳನ್ನು ತಾಕದಿರುವು. ಹೆಣ್ಣು ಕರುಳಂತೂ ಅತ್ತೇ ಬಿಡುವುದು. ಹಡೆದ ಗಂಡಿಗೆ ಏನೋ ಏನೋ ಎಂದೆನಿಸಿ ಬಿಡುವುದು. ತವರುಮನೆಯ ಸುಖಸಂಪತ್ತಿನ ಸುಪ್ತಿಯಲ್ಲಿದ್ದ ಮಗಳು ಮದುವೆಯಾದ ಮರುದಿನವೇ ಎಚ್ಚರದಿಂದ ನಡೆಯುವುದೆಂದರೆ ಸಾಮಾನ್ಯ ಮಾತಲ್ಲ. ಅವಳಿಗೆ ಎಲ್ಲವೂ ಅರಿಯದ್ದು ತಾಯ್ಗರುಳು ಕರುಣಾಜನಕವಾದುದು. ಹಡೆದ ಹೊಟ್ಟೆಯು ಬರಿದಾಯಿತೆಂಬ ಮಾತು ಎದೆಗುಂಡಿಗೆ ಹಾಯಲು, ಹಂಬಲಿಸಿ ಪಡೆದ ಮಗಳ ಸುಖದುಃಖಗಳ ಚಿತ್ರವನ್ನು ಕಾಣುವಳೊ ಏನೋ ಎಂಬಂತೆ ಅತ್ತು ಮತ್ತೆ ಸುಮ್ಮನಾಗುವಳು. ತಂದೆ, ಅಣ್ಣತಮ್ಮಂದಿರೂ ದುಃಖಸಮಯದಲ್ಲಿ 'ಹಾ' ಎಂದು ಮೌನ ತಾಳುವರು. ಏನು ಸಂಭವಿಸಿದರೂ ಮಗಳ ಸೌಭಾಗ್ಯವೆಂದು ಎಲ್ಲರೂ ಹರಸಿ ಕಡೆಗೆ ಹರುಷಿತರಾಗುವರು. ಹೆಣ್ಣು ಜೀವ ಹುಟ್ಟಿದ ಮನೆಬಿಟ್ಟು ಹೊಸಮನೆ ಗಳಿಸಲೇ ಬೇಕು. ಹೆಂಡತಿಯಾಗಿ ಬಾಳಿ ಕುಲವನ್ನುದ್ಧಾರ ಮಾಡಲೇಬೇಕು.

ಮದುವೆಯ ಸೊಬಗಿನೊಡನೆ ದಂಡೆಯ ಕಟ್ಟಿಕೊಂಡ ಹೆಣ್ಣು ಪುಷ್ಪವತಿಯಾಗಿ, ಫಲವತಿಯಾಗುವ ಸೊಬಗಿನ ಸಮಯ, ಅವಳು ಮುಂದು ಕಾಣುವ ಸೌಭಾಗ್ಯ ಚಿತ್ರ, ಗೊಂಬೆಯ ಆಟಪಾಟಗಳನ್ನಾಡಿ ನೆನೆಸಿದ ಚಿತ್ರಗಳು ಇಂದು ಅವಳ ಜೀವನದಲ್ಲಿಯೇ ಸಂಭವಿಸಲು ಏನೂ ಅರಿಯದ ಆ ಹೆಣ್ಣಿನ ಸೂಕ್ಷ್ಮ ಮನಸ್ಸು ಅಳುನಗೆಯ ಸುಳುವಿನ ಬಾಳ ಚಿತ್ರವನ್ನೇ ಹೆಣೆಯುವುದು. ತನಗಾದ ಬದಲಾವಣೆಗಳನ್ನು ಬಿಚ್ಚಿ ಹೇಳಲು ಮನಸ್ಸಿಲ್ಲದೆ ಕುಡಿಬಾಳೆಯು ಕಡುಬಿಸಿಲಿಗೆ ಬಾಡಿ ನೀರುಂಡ ಮೇಲೆ ಬೆಳಗಾಗಲು ಕುಡಿಚಾಚಿ ಗೊನೆ ಬಿಡುವಂತೆ ಋತುಮತಿಯಾಗುವಳು.

ಬಾಲಿ ತಾ ಮೈನೆರೆದು, ಬಾಗಿಲಕ ನಿಂತಾಳ
ಬಾಳೇಲಿ ಹಂಗ ಮಕಬಾಡಿ । ಸೋ । ಅವರವ್ವ
ಬಾ ಬಾಲಿಯೆಂದು ಕರದಾಳ ॥ಸೋ॥

ರಂಬಿ ತಾ ಮೈನೆರೆದು, ಅಂಗಳಕ ನಿಂತಾಳ
ನಿಂಬೆಲಿ ಹಾಂಗ ಮಕಬಾಡಿ ॥ಸೋ॥ ಅವರವ್ವ
ಬಾ ರಂಬಿಯಂದು ಕರದಾಳ ॥ಸೋ॥ —ಮ.ದಂ.–

ಅವಳ ಮುಖಚರ್ಯೆಯನ್ನರಿತ ತಾಯಿಯು ಅವಳನ್ನು ಒಳಕರೆದು ಹೊಲನೀರನೆರೆದು, ಮೊಗ್ಗೆಗೊನೆಯನ್ನು ಮಲಕಿನಲಿ (ಮಲುವಿನಲಿ) ತಿರುವಿ ಹೆಣೆದ ತಲೆದಂಡೆಯನ್ನು ಹಾಕಿ ಸುಬ್ಬೆಯರ ಕರೆಸಿ ಆರತಿಯನ್ನೆತ್ತುವಳು. ಇಂದು ಅರಳಿದ ಈ ಹೂವು ನಾಳೆ ಫಲವಾಗಲೆಂಬುದೇ ಎಲ್ಲರ ಆಶೀರ್ವಾದ. ಆರುತಿಯನ್ನೆತ್ತ ಬಂದ ಹೆಣ್ಣುಮಕ್ಕಳು ಹೆಣ್ಣಾದ ಆ ಕನ್ನೆಗೆ ಹಾಡಿ ಸಿಂಗಾರ ಮಾಡಿ ಉಡುಗರೆಯನ್ನು ಕೊಡುವ ವಾಡಿಕೆಯಿದೆ.

ಮೈನೆರೆದ ಹಾಡು:

ಸೋ ಅನ್ನಿರೇ ॥ಪ॥
ಬಾಲ ಮೈನೆರೆದಾಳ, ಬಾಲಿಗೇನೊಯ್ಯಾಲೆ
ಬಾಗೀಣ ತುಂಬ ಉಡಿಮುತ್ತ ॥ಸೋ॥ ॥೧॥

ತರಳೆ ಮೈನೆರದಾಳ, ತರಳೆಗೇನೊಯ್ಯಾಲೆ
ಹರಿವಾಣ ತುಂಬ ಅಂಬ್ಯಳದೆ ॥ಸೋ॥ ॥೨॥

ರಂಬಿ ಮೈನೆರದಾಳ ರಂಬಿಗೇನೊಯ್ಯಾಲೆ
ತುಂಬಿದಾರೂತಿ ನೆನೆದಂಡೆ ॥ಸೋ॥ ॥೩॥

ಕನ್ನೆ ಮೈನೆರೆದಾಳ, ಕನ್ನೆಗೇನೊಯ್ಯಾಲೆ
ಸಣ್ಣ ಸಾಂವೀಗೆ ಸಕ್ಕರೆ ॥ಸೋ॥ ॥೪॥

ಸುಬ್ಬಿ ಮೈನೆರದಾಳ, ಸುಬ್ಬಿಗೇನೊಯ್ಯಾಲೆ
ಕೊಬ್ಬರಿ ಕಾರ ತಿಳಿದುಪ್ಪ ॥ಸೋ॥ ॥೫॥

ಹರದಿ ಮೈನೆರೆದಾಳ, ಹರದಿಗೇನೊಯ್ಯಾಲೆ
ಪರಡಿ ಪಾಯಸ ರಸಪಾಕ ॥ಸೋ॥ ॥೬॥

ಕೆಂಚಿ ಮೈ ನೆರೆದಾಳ, ಕೆಂಚಿಗೇನೊಯ್ಯಾಲೆ
ಮಂಚಕ್ಷಾಸಾಕ ಸಾಸಕ್ಕಿ ॥ಸೋ॥ ॥೭॥

ಮಿತ್ರಿ ಮೈ ನೆರದಾಳ, ಮಿತ್ರಿಗೇನೊಯ್ಯಾಲೆ
ಸೂತರದಗೊಂಬಿ ಎಡಬಲಕ ॥ಸೋ॥ ॥೮॥

ಹೆಣ್ಣಿನ ಹೊಸತನಕ್ಕೆ ಈ ಎಲ್ಲ ವಿಧಾನಗಳನ್ನು ಮಾಡಿ ಜೀವನದ ಪವಿತ್ರತೆಯನ್ನು ಸೂಚಿಸುವ ನಮ್ಮ ಹಳ್ಳಿಗರ ಸಂಸ್ಕೃತಿಯು ಎಷ್ಟು ಶ್ರೇಷ್ಠತರದ್ದಿರಬಹುದು? ಹೊಸತನ ತುಂಬಿದವಳಿಗೆ ಬಾಲೆ, ತರಳೆ, ರಂಬೆ, ಕನ್ನೆ, ಸುಬ್ಬೆ, ಹರದಿ, ಕೆಂಚಿ, ಮಿತ್ರಿ ಎಂದು ಕರೆಯುವ ನಮ್ಮ ಹೆಣ್ಣುಮಕ್ಕಳ ಜೀವನವು ಸಂಸ್ಕೃತಿಯ ಬೆಳಕು ಸುತ್ತಲು ಹರಡದಿರುವುದೇ? ದೆಶೆಮುಖದ ಅಳಿಯನು ಮನೆಗೆ ಬರಲೆಂದು ಹಸನ ಮುಖಿಯರು ಹಾಸ್ಯವಾಡಿ ನಕಲಿಯ ಒಡಪವಾಡುವ ಹಸುನಗೆಯ ಬಾಳಚಿತ್ರ ನಮ್ಮೆಲ್ಲರ ಕಣ್ಮುಂದೇ ಕಟ್ಟುವುದು. ಹೊಸ ಬಾಳೆಯು ರಸಗುಡಿಗಳನ್ನು ಬಿಟ್ಟ ಕೆಲಕಾಲದಲ್ಲಿಯೇ ಹೂಹಾರಿ ಗೊನೆ ಬಿಡುವಂತೆ ಹೊಸ ಮಗಳು ಹೂಹೊತ್ತು ಗೊನೆ ಬಿಡುವಳು. ಫಲವತಿ ಯಾಗುವಳು. ಅವಳರಿಯದೆ ಎಲ್ಲವೂ ಸಂಭವಿಸುತ್ತದೆ. ಇದೆಲ್ಲವೂ ಅವಳಿಗೆ ಹೊಸತು. ಹುಸಿಬಯಕೆಗಳು ಅನುವಾಗಿ, ಬಸಿರು ಬಯಕೆಗಳೇ ತೋರಹತ್ತುವುವು. ಮೊದಲ ತಿಂಗಳಿಗೆ ಎಳಿಬಿಸಿಲ ಬಯಸಿ, ಮೂರನೆಯ ತಿಂಗಳಲ್ಲಿ ಮಧುರವಾದ ಹುಳಿಹುಳಿ ತಿನಿಸು ಗಳನ್ನು ಬಳಸಿ ಐದನೆಯ ತಿಂಗಳಿಗೆ ತೊಂಡಿಲ ದಂಡೆಯನ್ನೇ ಇಚ್ಛಿಸುವಳು. ಆರನೆಯ ತಿಂಗಳಿಗೆ ಆರಿದ ಕೆನೆಮೊಸರ ಹಾದಿಬುತ್ತಿಯನ್ನು ತವರೂರಿಂದ ಬೇಡುವಳು. ಎಳೆದಿನಗಳಲ್ಲಿ ಆಡಿಹರಿದಾಡಿದ ತವರೂರು ಅವಳಿಗೆ ನೆನಪಾಗಲು ಏಳನೆಯ ತಿಂಗಳಿಗೆ ಹೇಳಿಕಳಿಸುವಳು. ಅವಳ ಬಯಕೆ ಕೈಗೂಡುವದೊ ಏನೊ ಎಂಬಂತೆ ಹೆಣ್ಣಿನ ಅಣ್ಣನ ಕಂಟಲಿ, ಎತ್ತು ಕರೆಯಬರುವುದು. ಎಂಟನೆಯ ತಿಂಗಳಿಗೆ ತವರೂರ ಸೇರಿ ದಿನ ತುಂಬಲು ಸಂದು ಸಂದುಗಳು ಕಿರಿಬೇನೆ ತುಂಬಿ ದೇವರ ಕೃಪೆಯ ಬಲದಿಂದ ಎತ್ತಿ ಮುದ್ದಾಡಲು ಬಯಸಿದ ಪುತ್ರನು ಮುಂದಾಗಿ ಅವಳ ಉಡಿಯೊಳಗೆ ಜೋ ಆಡುವನು. ಬಾಳಿನ ಪ್ರತಿಬಿಂಬವಾದ ಮಗುವನ್ನು ಕಂಡು ಹೊಸ ತಾಯಿಗೆ ಸಗ್ಗದ ಸೊಗವೇ ಆಗುವುದು.

ಹೀಗೆ ಹೆಣ್ಣಿನ ಬಾಳಿನ ಎಲ್ಲ ಪ್ರಸಂಗಗಳಲ್ಲಿ ಹಾಡಿದ ಒಟ್ಟನ್ನು ಕೂಡಹಾಕಿದರೆ ಒಂದು ಹಿರಿಯ ಸಂಕಲನವೇ ಆಗುವುದು. ಹಲಕೆಲವುಗಳನ್ನು ಮಾತ್ರ ಸಂಕಲನ ಮಾಡಲಾಗಿದೆ.[೧] ಹೀಗೆ ಒಂದೊಂದು ವಿಧಾನದಲ್ಲಿ ಆಯಾ ವಿಧಾನಕ್ಕೆ ಸರಿಯಾಗಿ ಅನೇಕ ಹಾಡುಗಳನ್ನು ನಾವು ಕಾಣಬಹುದು. ಈ ಹಾಡುಗಳನ್ನು ವೇದ ವಿಧಾನ ಮಂತ್ರಗಳಂತೆ ಹಳ್ಳಿಗರ ಮದುವೆಯ ಮಂತ್ರಗಳೆಂದೂ ಕರೆಯಬಹುದು. ಇವು ಮಂತ್ರಗಳಂತೆ ಕೇವಲ ಶುಷ್ಕ ಪದಪುಂಜವಿರದೆ ರಸ ನಿಮಿಷಗಳ ರಸತೆರೆಗಳನ್ನೊಳಗೊಂಡಿರುವುದನ್ನು ಅವುಗಳನ್ನು ಓದಿಯೇ ಅನುಭವಿಸಬೇಕು. ಮದುಮಕ್ಕಳಿಗೆ ಆಶೀರ್ವಾದ, ಬಂಧುಬಳಗದ ಪ್ರೇಮ, ರೀತಿನೀತಿಗಳ ಉಪದೇಶ, ಮದುಮಕ್ಕಳು ಮುಂದೆ ಮಾಡಬೇಕಾದ ಸಮಾಜಸೇವೆಯ ಸೂಚನೆ ಮೊದಲಾದುವುಗಳನ್ನು ಇಲ್ಲಿ ಕಾಣಬಹುದು.

---

೧. 'ಜಾನಪದ ಸಂಭಾರ' – ಮುಂಬರುವ ಸಂಕಲನ.

೪. ರಸಾವೇಶಗಳು

ರಸನಿಮಿಷಗಳ ರಸಿಕತೆಯನ್ನುಂಡ ಹುರಿಯಾಳು ರೈತನು ವೀರಾವೇಶಗಳ ಬಂಟನೂ ಅಹುದು. ಜಾನಪದ ಜೀವನವು ರಸಾವೇಶಗಳ ಜೀವನ. ನಿಸರ್ಗದ ನಿಕಟ ಸಂಪರ್ಕದಿಂದ ರೈತನು ಶೂರನು ಅಹುದು. ಧೀರನೂ ಅಹುದು. ಅವನಿಗೆ ಈ ಎರಡೂ ಆವೇಶಗಳು ಸಹಜವಾಗಿ ಬಂದವುಗಳು. ಅವನಿಗೆ ಆವೇಶ ತುಂಬಲು ತನ್ನ ಬಾಂಧವರಲ್ಲಿ ಆವೇಶದೊಡನೆ, ದೇಶಾಭಿಮಾನ, ಧರ್ಮಾಭಿಮಾನ ಮೊದಲಾದುವುಗಳನ್ನು ಹುಟ್ಟಿಸಲು ಅನೇಕ ಪೌರಾಣಿಕ, ಐತಿಹಾಸಿಕ, ಸಾಮಾಜಿಕ ಹಾಡುಗಳನ್ನು ಹಾಡುವನು. ಜಾನಪದದಲ್ಲಿ ಆಗಾಗ ಗಂಡು ಹೆಣ್ಣಿಗೆ ಆವೇಶ ಬರುವುದುಂಟು. ಗಂಡಸು ಜಾನಪದ ಕಲಿಗಳ ಕಥನಗಳನ್ನು ಕೇಳಿ, ಕಣ್ಮುಟ್ಟನೋಡಿ ಅವರ ಶೂರತನವನ್ನು ಜನತೆಯ ಮುಂದೆ ಆವೇಶ ತುಂಬಿ ಹಾಡಿ ತೋರಿಸುವುದುಂಟು. ಅವನು ಆವೇಶದಲ್ಲಿ ತನ್ಮಯವಾಗಿ ಮೈಮರೆತು ಕಾವ್ಯಲಹರಿಯನ್ನೇ ಹರಿಸುವನು. ಅವನ ಈ ಹಾಡುಗಳು ಚುಟುಕು ಪದಗಳಿರದೆ ರಸಾತ್ಮಕವಾದ ಒಂದೊಂದು ಖಂಡ ಕಾವ್ಯದಂತೆ ಓದುಗರಿಗೆ ಎನಿಸದಿರವು.

ಈ ಆವೇಶಭರಿತ ಗೀತೆಗಳಲ್ಲಿ ಗಂಡಸರು ಹಾಡುವ (ಅ) ೧) ಲಾವಣಿಗಳು, ೨. ದುಂದುಭಿಗಳು, ೩. ಭಲರೆ ಹಾಡುಗಳು, ೪. ಹೋಳಿಯ ಪದಗಳು ಎಂದೂ ಹೆಂಗುಸರು ಹಾಡುವ (ಬ) ೧) ಬೀಸುವ ಹಾಡುಗಳು, ೨) ಕುಟ್ಟುವ ಮೊದಲಾದ ಹಾಡುಗಳೂ ಎಂದು ಎರಡು ಭಾಗಗಳನ್ನು ಮಾಡಬಹುದು. ಗಂಡಸು ಹಬ್ಬ, ಮಹೋತ್ಸವಗಳು ಬಂದಾಗ ಈ ಹಾಡುಗಳನ್ನು ಹಾಡಿ ತಣಿಯುತ್ತಾನೆ. ಹೆಂಗಸು ಮಾತ್ರ ದಿನನಿತ್ಯ ಪ್ರಪಂಚದ ಜಂಜಾಟದ ಭಾರವನ್ನು ಇಳಿಸಲು ಬೀಸುವ, ಕುಟ್ಟುವ ಹಾಡುಗಳನ್ನು ಆಗಾಗ ಹಾಡುವಳು. ಬೆಳಗಿನ ಜಾವದಲ್ಲಿ ಕೋಳಿ ಕೂಗುವ ಮುನ್ನ ಹಳ್ಳಿಯ ಹೆಂಗುಸು ಎದ್ದು ತನಗಾದ ಪ್ರಪಂಚದ ಭಾರವನ್ನು ತೋಡಿ ತೋಡಿ ಬೀಸುತ್ತ ಹಾಡಿ ಕಷ್ಟನಷ್ಟಗಳನ್ನು ಮರೆತು ಹೊಸಬಳಾಗಿ ಬೆಳಗು ಹರಿಯಲು, ಹಸನ ಮನಸಿನಿಂದ ಪ್ರಪಂಚಕ್ಕೆ ಮತ್ತೆ ಧುಮುಕುವಳು.

ಪ್ರಪಂಚ ನೌಕೆಗೆ ಸಂಸಾರ ಸಾಗರದಲ್ಲಿ ಹೆಣ್ಣೆ ಚುಕ್ಕಾಣಿ. ಅವಳನ್ನುಳಿದು ಗಂಡಿಗೆ ಗತಿಯಿಲ್ಲ. ಅನೇಕ ಎಡರು ತೊಡರು ಬಂದರೂ ಪ್ರಪಂಚದ ಭಾರವನ್ನು ಹೊರಲು ಗಂಡುಹೆಣ್ಣಿನ ಮನವು ಅವುಗಳನ್ನು ಎದುರಿಸಿ ಮಸೆದು ಮತ್ತಷ್ಟು ಹದನವಾಗುವುದು. ಪ್ರಪಂಚವು ಸುಲಲಿತವಾಗಿ ಸಾಗಲೇಬೇಕು. ಆದದ್ದನ್ನು ಮರೆತು ಬರುವುದನ್ನು ಸ್ವಾಗತಿಸಲೇಬೇಕು. ಒಬ್ಬರು ಎಡುವಿದರೆ ಮತ್ತೊಬ್ಬರು ಎತ್ತಿ ನಿಲ್ಲಿಸಲೇಬೇಕು. ಹುಟ್ಟಿದ ಮನೆಬಿಟ್ಟು ಕೊಟ್ಟ ಮನೆಯನ್ನು ಸೇರುವ ಹೆಣ್ಣು ಆ ಮನೆಯ ವಾತಾವರಣಕ್ಕೆ ಹೊಂದಿಕೊಂಡು ಹೋಗಲೇಬೇಕು. ಗಂಡು ಬಿರುಸಾದರೂ ಹೆಣ್ಣು ಕೋಮಲ ಹೃದಯದವಳಾಗಿ ಗಂಡಿನೊಡನೆ ನಕ್ಕು ಪ್ರಪಂಚ ಸಾಗಿಸಲೇಬೇಕು. ಅಂತೆಯೇ ನಮ್ಮ ಬಾಳು ನಗೆಹೊಗೆಗಳ ಸುಳುವುಳ್ಳ ಮನೋಹರ ರಂಗಶಾಲೆ.

ಗಂಡನ ಮನೆಯಲ್ಲಿದ್ದ ಹೆಣ್ಣಿಗೆ ತವರುಮನೆ, ಗೆಳತಿಯರು, ಮನೆಗೆಲಸ, ಸತಿಪತಿಯರಾಟ, ಮಕ್ಕಳ ಲಾಲನೆ ಪಾಲನೆ ಹಾಗೂ ಸಂಭ್ರಮದ ಕುತೂಹಲ ಮೊದಲಾದ ಜೀವನ ಸನ್ನಿವೇಶಗಳು ಆಗಾಗ ಒಂದರ ಮೇಲೊಂದು ನೆನಪಾಗುವುದು ಸಹಜ. ಇವೆಲ್ಲವುಗಳನ್ನು ಮರೆಯಲು ಸಾಧ್ಯವಾಗಲು ಆವೇಶ ತುಂಬಿದಾಗ ಹಾಡಿ ತನಗಾದ ಬೇಸರವನ್ನು ನೀಗಿಸಿಕೊಳ್ಳುವಳು. ಅವಳು ವಿಶೇಷ ಹಾಡುವ ಸಮಯವೆಂದರೆ ದಿನನಿತ್ಯ ಬೀಸುವಾಗ, ಕುಟ್ಟುವಾಗ. ಬೀಸುವ ಕಲ್ಲಸಪ್ಪಳಕ್ಕೆ ಕೈಬಳೆಗಳ ಝುಣತ್ಕಾರ ಕೂಡಿಸಿ ನಾದ ಕಿವಿ ತುಂಬಲು, ತಲೆಹಾಕಿ ಹಾಕಿ ಗತ್ತಿನೊಡನೆ ರಾಗವೆತ್ತಿ ಹಾಡುಹತ್ತಿದಳೆಂದರೆ ಬೀಸುವ ಕಾಳು ಮುಗಿಯುವವರೆಗೆ ಅವಳಿಗೆ ಬೇರೊಂದು ಪರಿವೆಯೇ ಇರುವುದಿಲ್ಲ. ಅದರಲ್ಲಿ ಲೀನಳಾಗಿ ತನ್ನನ್ನು ತಾನೇ ಮರೆಯುವಳು. ಮನ ತುಂಬಲು ಆವೇಶ ಉಕ್ಕಿ ಕಾವ್ಯವು ಒಂದೇ ಸವನೆ ಹರಿಯಹತ್ತುವುದು. ಅವಳಿಗೆ ಒಂದರ ಮೇಲೊಂದು ಬಾಳಿನ ಚಿತ್ರಗಳು ಹೊಳೆದು, ಕಾವ್ಯ ಸಾಗರದಲ್ಲಿಯೇ ತೇಲಹತ್ತುವಳು. ಪ್ರಪಂಚದಲ್ಲಿ ಗಂಡಹೆಂಡಿರ ಸಿಡಿಮಿಡಿ ಸನ್ನಿವೇಶಗಳನ್ನು ನೆನೆದು–

ಗಂಡಹೆಂಡಿರ ಜಗಳ, ಗಂಧ ತೀಡೀಧಾಂಗ
ನಿಂಗಕ ನೀರು ಎರೆದಾಂಗ। ಹಿರಿಹೊಳೆಯ
ಗಂಗವ್ವ ಸಾಗಿ ಹರಿದಂಗ॥ *–ಗ–ಹಾ–ಪು.೩೧.*

ಎಂದು ಸದಾ ಹೊಸದಾದ ಕಾವ್ಯ ಝುರಿಯನ್ನೇ ಹರಿಸುವಳು. ಜಗಳವಿಲ್ಲದ ಪ್ರಪಂಚ ಹಳಸುವದೆಂದು ಅವಳ ಭಾವನೆ. ಅದು ಮುಂದೆ ಸಾಗಬೇಕಾದರೆ ಆಗಾಗ ಕಿಡಿಗಳು ಕಾಣಲೇಬೇಕು. ಕಿಡಿ ಕಂಡರೂ ಅವಳಿಗೆ ಗಂಡನ ಮನೆಯೇ ಲೇಸು. ಒಡೆತನ, ಬಡತನವೆಂಬ ಚಿಂತೆಯಿಲ್ಲ. ಮುತ್ತೈದಿ ತನವೊಂದೇ ಅವಳಿಗೆ ಸಕಲ ಸೌಭಾಗ್ಯ. ಮಕ್ಕಳೇ ಸರ್ವ ಸಂಪತ್ತು:

ಮಕ್ಕಳ ಕುಡು ಶಿವನೆ, ಮತ್ತೊಂದು ನಾನೊಲ್ಲೆ
ಹತ್ತು ಮಂದ್ಯಾಗ ಹರುನೀರು। ತರುವಂಥ
ಮುತ್ತೈದಿ ತನವ ಕೊಡು ಶಿವನೆ॥ –ಗ.ಹಾ.ಪು.೭೨.–

ಹೀಗೆಂದು ಶಿವನನ್ನು ಪ್ರಾರ್ಥಿಸಿದ್ದಾಳೆ.

ಗಂಜೀಯ ಕುಡಿದರು, ಗಂಡನ ಮನಿ ಲೇಸ
ಅಂದಣದ ಮ್ಯಾಲ ಚವುರವ। ಸಾರಿದರ
ಹಂಗೀನ ತವರ ಮನಿಸಾಕ॥ –ಗ.ಹಾ–ಪು.೧೨.–

ಎಂದು ಬಡವ ಗಂಡನೇ ಲೇಸೆಂದೂ ಚೌರಿ ಬೀಸುವ ತವರು ಹಂಗಿನದೆಂದೂ ನಿರಾಕರಿಸಿದ್ದಾಳೆ. ಆದರೂ ಅವಳು ತವರಿಗೆ ಕೇಡು ಬಗೆಯಳು.

ಹಾಲುಂಡ ತವರೀಗಿ, ಏನೆಂದು ಹಾಡಲೆ
ಹೊಳೆ ದಂಡಿಲಿರುವ ಕರಕೀಯ। ಕುಡಿಯಂಗ
ಹಬ್ಬಲೆ ಅವರ ರಸಬಳ್ಳಿ॥ –ಗ–ಹಾ–ಪು.೧೧–

ಎಂದು ಹಾಡಿ ಹರಿಸಿದ್ದಾಳೆ; ತನ್ನ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಮರ್ಪಿಸಿದ್ದಾಳೆ.

ಅಕ್ಕನ ಕಕ್ಕುಲತೆಯು ತಮ್ಮ ತಂಗಿಯರ ಮೇಲೆ ಬಹಳ. ಬೀಸುವಾಗಾಗಲಿ, ಕುಟ್ಟುವಾಗಾಗಲಿ, ಅವರನ್ನು ಹಾಡದೆ ಬೀಸುವ ಕಡೆಯ ಮುಕ್ಕೂ, ಕುಟ್ಟುವ ಕಡೆಯೊಬ್ಬಿಯೂ ಕೊನೆಗೊಳ್ಳುವದಿಲ್ಲೆಂದು ತೋರುತ್ತದೆ. ಅಕ್ಕನು ಗಂಡನ ಮನೆಯಲ್ಲಿದ್ದರೆ, ತಮ್ಮ ತಂಗಿಯರೊಡನೆ ಆಡಿ ಬೆಳೆದ ಅವಳ ಜೀವನವು ಅವರನ್ನು ಮೇಲಿಂದ ಮೇಲೆ ನೆನಿಸುವುದು. ಅವಳಿಗೆ ಸಮಯ ಸಿಕ್ಕರೆ ಆನಂದ ತುಂಬಿ ತಮ್ಮನ ಗುಣಗಾನ ಮಾಡಿ ಹಾಡುತ್ತಾಳೆ; ತಂಗಿಯ ರೂಪ ಲಾವಣ್ಯಗಳನ್ನೂ ಬಣ್ಣಿಸುತ್ತಾಳೆ. ಈ ಬಣ್ಣನೆಯ ಹಾಡುಗಳು ಬಾಂಧವ್ಯತೆಯ ಒಲವನ್ನು ತೋರಿಸುವುವಲ್ಲದೆ, ಕೌಟುಂಬಿಕ ಜೀವನದ ಒಕ್ಕಟ್ಟನ್ನೂ ಸೂಚಿಸುವುವು.

ಅಕ್ಕತಂಗೆರು ಮೇಲ, ಮುತ್ತು ಮಾಣಿಕ ಮೇಲ
ಉತ್ತುರಿ ಸಾತಿ ಮಳೆ ಮೇಲ। ನನತಮ್ಮ
ನೀ ಮೇಲ ನನ್ನ ಬಳಗಾಕ॥ –ಗ.ಹಾ–ಪು.೧೫.

ಎಂದು ಚಿಕ್ಕತಮ್ಮನು, ಒಕ್ಕಲಿಗನಿಗೆ ಉತ್ತರಿಸ್ವಾತಿ ಮಳೆಗಳಂತೆ, ಬಳಗಕ್ಕೆ ಆಗಿದ್ದಾನೆ. ಚಿಕ್ಕವನೆಂಬ ಪ್ರೇಮವೂ, ಕಡೆಯವನೆಂಬ ಲಾಲನೆಯೂ ಎಲ್ಲರಲ್ಲಿಯೂ ಹುಟ್ಟುವಂತೆ ಅಕ್ಕನಲ್ಲಿಯೂ ಹುಟ್ಟಿ ಅವಳಿಗೆ ಹೆಚ್ಚಿನ ಆಶೆ ಆಕಾಂಕ್ಷೆಗಳು ಒಂದರ ಮೇಲೊಂದು ತಮ್ಮನ ಸಂಬಂಧ ಹುಟ್ಟಲಾರಂಭಿಸುವುವು.

ಸರದಾರ ಬರುವಾಗ, ಸುರಿದಾವ ಮಲ್ಲೀಗಿ
ಥೊರೆ ನನ್ನ ತಮ್ಮ ಬರುವಾಗ। ಯಾಲಕ್ಕಿ
ಗೊನಿಬಾಗಿ ಹಾಲ ಸುರಿದಾವ॥ –ಗ.ಹಾ–ಪು.೧೫–

ಎಂದು ತಮ್ಮನ ಬರುವಿಕೆಯನ್ನು ಹಾಡಿದ್ದಾಳೆ. ತಮ್ಮನು ದಿನದಿನಕೆ ಬೆಳೆದು ಪ್ರಾಯ ತುಂಬಲು ಅಕ್ಕನ ಹಿರಿಯಾಸೆ ಹಿಗ್ಗಹತ್ತುವುದು. ತಮ್ಮನು ಬಲು ಚೆಲುವ; ಹಡೆದು ಮಗಳನ್ನು ಕೊಡಬೇಕೆಂಬ ಆಶೆ ಮೂಡಿದ್ದು ಇಂದು ಅವಳಿಗೆ ಪ್ರತಿಫಲಿಸಿದಂತಾಗಿ–

ಮುನವಳ್ಳಿ ಮುಂದೀನ, ವನವ ಕಂಡೀರಕ್ಕ
ತನುವೀಗಿ ಅಳ್ಯಾವ ಹೂಮಗ್ಗಿ। ನನ ಚೆಲುವ
ತಮ್ಮ ಗೊಡದಾವ ಮೊಕ ಮೀಸಿ॥

ಬಾವೂಲಿ ಇಟಗೊಂಡು, ಕಾವೂಲಿ ತಿದ್ದೂವ
ಗಾಳಿಬಂದತ್ತ ಬಳಕೂವ। ನನತಮ್ಮ
ಬಾಳೆ ಎಲಿಗಿಂತ ಬಲುಚೆಲುವ॥ –ಗ.ಹಾ–ಪು. ೨೧.

ಎಂದು ಅವನಿಗೆ ಬರುವ ಯೌವನವನ್ನೂ, ತುಂಬಿದ ಚೆಲುವಿಕೆಯನ್ನೂ ನೋಡಿ ಬಾಯಿ ಬಿಚ್ಚಿ ಆಡದೆ ತಮ್ಮನು ಪ್ರಸಂಗಕ್ಕೆ ತನ್ನ ಮನೆಗೆ ಬಂದಾಗ ತನ್ನ ಮನಸ್ಸಿನ ಒಲವನ್ನು ಸೂಚಿಸುವಳು.

ಆಡಿಕೊಂಬವನಲ್ಲ. ಆಲಿಸಿ ಕೇಳವನಲ್ಲ
ಗಾಡೀಗನಲ್ಲ ನನತಮ್ಮ। ನಿನ್ನಂತ
ಬೀಗನು ಬೇಕೊ ನನ ಮನೆಗೆ॥ –ಜಾ.ಸಂ.–

ಎಂದು ಹುದುಗಿದ ತನ್ನ ಹವ್ಯಾಸವನ್ನು ಹಾಡಿ ಹೇಳುವಳು. 'ನನತಮ್ಮ ಎಲಿಗೊಂದು ಮಾತ ಒಗೆದಾನ.' ಮೊದಲಾದ ಅವನ ಮಾತಿನ ಚಾಣಾಕ್ಷತೆಯನ್ನು ಕೇಳಿ ಬೆರಗಾಗುವಳು.

ಬಸುರಾದರ ತೊಡಬೇಕ, ಹಸರ ತಾಬುಲಿ ಕುಬಸ
ಹಸರೇಲಿ ಒಳಗ ಉಣಬೇಕ । ನನತಮ್ಮ
ಹೊಸ ಬೀಗನಾಗಿ ಬರಬೇಕ ॥ –ಗ–ಹಾ–ಪು. ೧೬.

ಎಂದು ತಾನು ಬಸಿರ ಬಂಕೆ (ಬಯಕೆ)ಯನ್ನು ಹೊರಬೇಕು; ತಮ್ಮನು ಹೊಸ ಬೀಗನಾಗಿ ತನ್ನ ಮನೆಗೆ ಬರಬೇಕು, ಎಂಬ ಪಂಥವನ್ನು ತೊಡುವಳು.

ಕುಂತಾಡು ಮಗಳೀಗೆ, ಕೂದಲ ಬಟ್ಟೇನ
ನಗರದ ಚೌರಿ ತರಸೇನ । ಮನಿಯಾನ
ತಮ್ಮಗ ಧಾರಿ ಎರದೇನ ॥ –ಗ–ಹಾ–ಪು. ೪೭.

ಎಂದು ತಾನು ಹಡೆದ ಮಗಳು ಇನ್ನೂ ಬಾಲ್ಯಾವಸ್ಥೆಯಲ್ಲಿರುವಾಗಲೇ ಅಕ್ಕನು ಅವಳ ಸಿಂಗಾರಮಾಡಿ ತಮ್ಮನಿಗೆ ಮದುವೆಯ ಮಾಡಲು ಬಯಸುತ್ತಾಳೆ.

ತಮ್ಮನಂತೆ–ತಂಗಿಯೂ ಅಕ್ಕನ ಪ್ರೇಮಕ್ಕೆ ಪಾತ್ರಳಾಗುತ್ತಾಳೆ.

ಆಡೀನ ಮಲಿಹಂಗ, ಜೋಡ ನಾವಿಬ್ಬರು
ಆಡಬ್ಯಾಡ ತಂಗಿ ಕದನಾವ । ಜಗಳಕ
ಜೋಡೀನ ಹಕ್ಕಿ ಅಗಲ್ಯಾವ ॥ –ಗ.ಹಾ–ಪು.೧೭

ಎಂದು ಅಕ್ಕನು, ಅಗಲದವರಂತೆ ಬೆಳೆದ ಅಕ್ಕತಂಗಿಯರ ಇರವನ್ನು ಹಾಡಿದ್ದಾಳೆ. ಚಿಕ್ಕತಂಗಿಯು ತಿಳಿಯದೆ ಕದನ ಹೂಡಿದರೆ ಹಾಗೆ ಮಾಡಬಾರದೆಂದು ತಿಳಿಹೇಳಿ ಸಮಾಧಾನ ಮಾಡುತ್ತಾಳೆ. ತಂಗಿಗೆ ಮಂಗಲವಾಗಿ ಸುಖವಾಗಲೆಂದು ಬಗೆಸುವ ಕಾಲದಲ್ಲಿ

ಹನ್ನೆರಡು ವರುಷಕ್ಕ ಕನ್ನೆ ಮೈನೆರದಾಳ
ನಾನೇನ ಒಯ್ಲಿ ಕೊಡವೀಗಿ । ತಂಗೀಗ
ಕನ್ನಡಿ ಕುಬುಸ ನನೆದಂಡಿ ॥ –ಗ.ಹಾ–ಪು.೧೬–

ಎಂದು ಅಕ್ಕನು ತಂಗಿಗೆ ಆಶೀರ್ವದಿಸಲು ಒಯ್ಯುತ್ತಾಳೆ. ಋತುಮತಿ ದಿನವು ಹೆಣ್ಣಿನ ಆಯುಷ್ಯದಲ್ಲಿ ಬಹಳೇ ಮಹತ್ವದ್ದು. ಅವಳು ಅಂದೇ ನಿಜವಾಗಿ ಹೆಣ್ಣೆನಿಸುವಳು. ಈ ಮೈನೆರೆಯುವದು ಹೆಣ್ಣಿಗೆ ಪ್ರಪಂಚದಲ್ಲಿ ಹೆಣ್ಣಾಗಿ ಬಾಳಲು ನಿಸರ್ಗದ ಸನದು ಸಿಕ್ಕಂತೆ; ಅವಳು ಮದುವೆಯಾಗಿ ಮುಂದೆ ಫಲವತಿಯಾಗುವಳೆಂದು ಆಶೆ ಭರವಸೆಗಳನ್ನು ಅದು ಸೂಚಿಸುತ್ತದೆ. ಆಗ ಅವಳಿಗೆ ಹಸುರು ಬಳೆ, ನನೆದಂಡೆ ಮೊದಲಾದ ಮಾಂಗಲ್ಯಗಳೇ ಮುಂಬರುವ ಶುಭ ಚಿನ್ಹಗಳನ್ನು ನೋಡುವವರಿಗೆ ತೋರದಿರವು.

ಅಚ್ಚ ಮಲ್ಲಿಗಿ ಹೂವ, ಮುಚ್ಚಿ ಮಾರುವ ಜಾಣ
ನಾ ಕೊಳುವೆನದರ ಬೆಲೆ ಹೇಳೊ । ತಂಗೀಗಿ
ಸುರುಳಿಗೂದಲದ ಸುಗಣೇಗಿ ॥ –ಜಾ.ಸಂ.–

ಎಂದು ಅಕ್ಕನು ತಂಗಿಯನ್ನು ಮಲ್ಲಿಗಿ ಹೂವಿನಿಂದ ಸಿಂಗಾರ ಮಾಡಲು ಬಗೆಸಿದ್ದಾಳೆ. ತಂಗಿಯ ಚೆಲುವಿಕೆ ಅವಳ ಕಣ್ಣನ್ನೇ ಕುಕ್ಕುವುದು.

ಹಂಪೀಯ ತೇರೀಗೆ, ಹೊಂದಿ ನಿಂತವಳ್ಯಾರ
ಚೆಂದಾಳ ಗೊಂಬಿ ನನ ತಂಗಿ । ನಿಂತಾರ
ಚೆಂದಪ್ಪನ ಛಾಯ ಹಿಡಿದ್ಹಾಂಗ ॥ –ಜಾ.ಸಂ.–

ಎಂದು ಅವಳ ಚೆಲುವಿಕೆ ಚಂದ್ರನ ಚೆಲುವಿಕೆಯನ್ನು ಹೀಯಾಳಿಸುವದೆಂದು ಹಾಡಿದ್ದಾಳೆ. 'ತಂಗಿ ತಂಗೀ ಬಾರ, ತಂಬೂಲ ತುಟಿಬಾರ' 'ನನ ತಂಗೀ ನಡೆದಾರ । ರುದ್ದರನ ತೇರ ಎಳಿದ್ಹಾಂಗ'। ಎಂಬ ಮಾತುಗಳು ಅಕ್ಕನು ತಂಗಿಯ ಚೆಲುವಿಕೆಯನ್ನುಂಡು ಆಡಿದ ಸವಿನುಡಿಗಳಾಗಿವೆ.

ಸಂತೋಷದ ಸುದ್ದಿ, ಸಂತ್ಯಾಗ ಕೇಳೀನಿ
ಕೆಂಚಿ ನನ ತಂಗಿ ಬಸರಂತ । ಹೇಳ್ಯಾನ
ಹಂಪಿಸಾಗರದ ಬಣಜೀಗ ॥ –ಜಾ.ಸಂ.–

ಎಂದು ತಂಗಿಯು ಬಸಿರಿರುವ ಸಂತೋಷದ ಸುದ್ದಿಯನ್ನು ಕೇಳಿ ಅಕ್ಕನ ಪ್ರೀತಿಯು ತಂಗಿಗೆ ಬಸಿರೂಟವನ್ನು ಒಯ್ಯಲು ಇಚ್ಛಿಸುವುದು.

ಸಜ್ಜೀಯ ರುಚಿಕೊಟ್ಟಿ, ಸಜ್ಜಕದ ಹೋಳೀಗಿ
ಗಜ್ಜೂರಿ ಚಿಟ್ಟು ಎಳ್ಳೆಣ್ಣೆ । ತಂಗೆವ್ವ
ಗುಜ್ಜ ನಿನಬಂಕಿ ತಿಳಿಯಾವ ॥ –ಜಾ.ಸಂ.–

ಹೀಗೆ ಒಯ್ದ ಬಂಕೆ (ಬಯಕೆ)ಯ ಊಟವು ತಂಗೆಯ ಹೊಟ್ಟೆಯಲ್ಲಿ ಬೆಳೆಯುವ ಎಂಥ ಕೂಸಿಗೆ?

ಬಂಗಾರ ಬಳಿಯೊತ್ತಿ, ದುಂಡಕಂಕಣವೊತ್ತಿ
ಗೊಂಡೇವ ಒತ್ತಿ ಮನಗ್ಯಾಳ । ನನ ತಂಗಿ
ದಂಡನಾಳವನ ಬಂಕೀಲಿ ॥ –ಜಾ.ಸಂ.–

ಎಂದು ತಂಗಿಯ ಬಸಿರು ಅರಸಾಗಿ ಹುಟ್ಟಲೆಂದು ಆಶಿಸುತ್ತಾಳೆ. ತಂಗಿಯು ಶೀಲವಂತಿ ಶಿವಶರಣೆ. ಅವಳ ಭಾವಕ್ಕೆ ಶಿವನು ಸಹ ಸದರು ಇಳಿಯುವನು.

ಸೀತಾಳ ಕೊಡಪಾನ, ಶಿವಮೊಗ್ಗಿ ಪಾವೂಡ
ಶೀಲವಂತೆವ್ವ ನನ ತಂಗಿ। ಬರುವಾಗ
ಶಿವ ತನ್ನ ಸದರು ಇಳಿದಾನ॥ *-ಜಾ.ಸಂ.-*

ಎಂದು ಹಾಡಿ ಹೊಗಳಿದ್ದಾಳೆ. ಅವಳ ಭಕ್ತಿಗೆ ಶಿವನು ಒಲೆದು ಅವಳಿಗೆ ಸಕಲ ಸಂಪತ್ತನ್ನು ಕೊಟ್ಟಿರುವನು.

ವರನುಳ್ಳ ಒಗತನ, ಒಳಗ ಸೇದು ಭಾವಿ
ಹಲಗಿ ತೊಟ್ಟೀಲ ಹಸಗೂಸು। ನನತಂಗಿ
ಪಡೆದು ಬಂದೀದಿ ಶಿವನಲ್ಲೆ॥ *-ಗ.ಹಾ-ಪು.೧೯.*

ಎಂದು ಹಾಡಿ ಆನಂದ ಪಟ್ಟಿದ್ದಾಳೆ.

ಸರಸ ವಿರಸಗಳ ಸಮ್ಮಿಲನವಾದ ಈ ಬಾಳಿನಲ್ಲಿ ಅವಳಿಗೆ ತನ್ನ ಬಾಲ್ಯದ ಜೀವನವು ನೆನಪಾಗಿ ತವರೂರ ಗೆಳತಿಯನ್ನು ನೆನೆಸುವಳು.

ಮನಿಯ ಮುಂದಿನ ಗೆಳತಿ, ದನಿಯ ಕೂಡಿಸಬಾರ
ದನಿಸುದ್ದ ನಿನ್ನ ಗುಣಸುದ್ದ। ಗಳತೆವ್ವ
ಗುಣಕ ಕಟ್ಟೇನಿ ಗೆಳತನ॥ *-ಗ.ಹಾ-ಪು. ೨೪.*

'ಚೆಲುವಿಕೆಗೆ ಗೆಳತನ ಕಟ್ಟಲಿಲ್ಲ. ನಿನ್ನ ಗುಣಕ್ಕೆ ನಾನು ಗೆಳತಿಯಾಗಿರುವೆ' ಎಂದು ಹಾಡುತ್ತಾಳೆ. ಗೆಳತಿಯ ಸೌಭಾಗ್ಯದಲ್ಲಿ ತಾನೂ ಭಾಗವಹಿಸುವಳು. ಅವಳಿಗೆ ತನ್ನ ಗೆಳತಿ, ಮಗನ ತಾಯಿಯೆಂದು ಬಲು ಹೌಸು; ಒಂದು ಆನಂದ. ಕಂಕುಳಲ್ಲಿ ಮಗುವನ್ನೆತ್ತಿಕೊಂಡು ರಾತ್ರಿಯ ವಸತಿಗೆ ತನ್ನ ಮನೆಗೆ ಬಂದ ಗೆಳತಿಯನ್ನು ಕಂಡು ಹಿಗ್ಗಿ–

ಎಳ್ಳ ಹೂವಿನ ಸೀರಿ, ಕೊರಳಾಗ ಟಂತಾಕ
ಇರುಳ ಬಂದೆತ್ತ ಇಳಿದಾಳ। ನನಗೆಳದಿ
ಅರಳೇಲಿ ಮಗನ ಹೆಸರೇನ॥ *-ಗ.ಹಾ-ಪು. ೨೫*

ಎಂದು ಪ್ರೇಮದಿಂದಲೂ, ಆದರದಿಂದಲೂ, ಕೇಳುತ್ತಾಳೆ. ಗೆಳತಿಯ ಮಗನ ಹೆಸರು ಕೇಳಿ ಮುದ್ದಾಡಬೇಕೆಂದು ಒಂದು ಹಿರಿಯಾಶೆ.

ಅವಳಿಗೆ ಅತ್ತೆಯ ಮನೆಗೆಲಸವೆಂದರೆ ಅರಿಕಿಲ್ಲದ ದುಡಿಮೆ. ಎಷ್ಟು ದುಡಿದರೂ ಆ ಮನೆಗೆ ಕಣ್ಣೇ ಇಲ್ಲ.

ಮಾತೀಗಿ ಮಲಕಿಲ್ಲ, ರೀತೀಗಿ ತೊಡಕಿಲ್ಲ
ಸಾಸೀವಿ ಕಾಳ ಹುಳುಕಿಲ್ಲ। ಅತ್ತೀಗಿ
ಸೋಸಿ ನಡೆದರ ಅರಿಕಿಲ್ಲ॥ *-ಗ.ಹಾ.ಪು. ೨೭*

ಎಂದು ತನ್ನ ದಿನದ ದುಡಿಮೆಯನ್ನು ನೆನಪಿಗೆ ತಂದು ಹಾಡಿ ಸೋತು, ಉದ್ಗಾರ ತಗೆದಿದ್ದಾಳೆ. ಅವಳಿಗೆ ಪ್ರಪಂಚದಲ್ಲಿ ಮನಸ್ತಾಪಗಳಾಗುವುದೂ ಉಂಟು. ಪ್ರೇಮ ಪುತ್ಥಳಿಯು ಮನೆಯಲ್ಲಿದ್ದರೆ ಸಾಕು, ಏನೂ ಲೆಕ್ಕಕ್ಕೆ ತಾರಳು.

ಕೂಲಿ ಮಾಡಿದರೇನ, ಕೋರಿ ಹೊತ್ತರೇನ
ನಮಗ ನಮರಾಯ ಬಡವೇನ। ಬಂಗಾರ
ಮಾಲು ಇದ್ದಾಂಗ ಮನೆಯಾಗ॥ *-ಗ-ಹಾ-ಪು. ೩೨*

ಅಂತೆಯೇ ಹೆಣ್ಣು ಗಂಡಿನ ಕೈಹಿಡಿದು ತಾಯಿಯ ಬಿಟ್ಟು ಗಂಡನ ಬೆನ್ಹತ್ತಿ ಬೇರೆ ಮನೆಯನ್ನೇ ಸಂಪಾದಿಸುವಳು. ಇರುತಿರುತ ಅವಳಿಗೆ ಮಕ್ಕಳ ಚಿಂತೆಯಾಗಿ ಬಂಜೆಂಬು ಸಬುದ ಈ ಜನುಮದಲಿ ಬೇಡೆಂದು ದೇವರಿಗೆ ಬೇಡಿಕೊಳ್ಳುವಳು.

ಕಂದನ ಕುಡು ಶಿವನೆ, ಬಂಧನ ಬಿಡಲಾರೆ
ಹಂಗೀನ ಬಾನ ಉಣಲಾರೆ। ಮರ್ತ್ಯದಾಗ
ಬಂಜೆಂಬು ಶಬುದ ಹೊರಲಾರೆ॥ *-ಗ-ಹಾ-ಪು. ೬೧.*

ಕೊಟ್ಟಮನಿ ಬೆಳಗಿಸುವುದು, ಕುಡಿದೀಪವು ಅಮರಜ್ಯೋತಿಯಾಗಿ ಕುಲವೇ ಉದ್ಧಾರವಾಗುವುದು ಹೆಣ್ಣಿನಿಂದಲ್ಲವೇ? ಮಕ್ಕಳಿಲ್ಲದ ಜೀವನ ವ್ಯರ್ಥವೆಂದು ಬೇಸತ್ತು ಹೆಣ್ಣಿನ ಜೀವವು ಮನಸ್ಸಿನಲ್ಲಿ ಏನೇನೊ ಬಯಸುವುದು.

ಆಡು ಮಕ್ಕಳ ಕಂಡು, ಬೇಡಿತ್ತನನ ಜೀವ
ಕೇಳಿದ್ದನೇನ ಶಿವರಾಯ। ಹೊಟ್ಯಾಗ
ಮೂಡಿದ್ದನೇನ ಮಗರಾಮ॥ *-ಜಾ.ಸಂ.-*

ಎಂದು ಬಸಿರು ಬಂಕೆ (ಬಯಕೆ)ಯ ಹಂಬಲವು ಮನದಲ್ಲಿ ಸುಳಿದಾಡಿ ಹೆಣ್ಣು ಗೊನೆಹೊತ್ತು ತೃಪ್ತಿಯಾಗುವುದು. ಗಂಡುಮಗುವನ್ನು ಹೆತ್ತ ತಾಯಿಗೆ ಆದ ಆನಂದವನ್ನು ಬರೆಯಬಹುದೇ? ಮಗುವೆತ್ತಿ ಲಾಲನೆ ಪಾಲನೆ ಮಾಡುವ ಹಿಗ್ಗು ಅವಳನ್ನು ಕಡೆಗೂ ಬಿಡದು.

ತೊಟ್ಟೀಲದಾಗೊಂದು, ತೊಳೆದ ಮುತ್ತಿನ ಕಂಡೆ
ಹೊಟ್ಟೆ ಮೇಲಾಗಿ ಮಲಗ್ಯಾನ। ಕಂದೈಗ
ಮುತ್ತಿನಾ ದಿಟ್ಟ ತಗದೇನ॥ –ಗ.ಹಾ–ಪು. ೪೧.

ಅವಳಿಗೆ ಮಗನ ಲಾಲನೆ ಪಾಲನೆಯ ಸೊಗಸೇ ಸೊಗಸು.

ಹಾಲಬೇಡ್ಯತ್ತಾನ, ಕೋಲಬೇಡಿ ಕುಣದಾನ
ಮಸರಬೇಡಿ ಕೇಸರ ತುಳಿದಾನ। ಕಂದಯನ
ಕುಸುಲದ ಗೆಜ್ಜ ಕೇಸರಾಯ್ತು॥ –ಗ–ಹಾ.ಪು.೪೩

ಎಂದು ಬೆಳೆಯುವ ಕಂದನ ಹಟಮಾರಿತನವನ್ನು ತಾಯಿಯು ಹಾಡಿ ಆನಂದ ಪಟ್ಟಿದ್ದಾಳೆ. ಮಗನು ದೊಡ್ಡವನಾದ ಮೇಲೆ ಅವನ ಸಂಭ್ರಮವನ್ನು ನೋಡುವ ಕುತೂಹಲವು ತಾಯಿಗೆ ದಿನ ದಿನಕೆ ಹಿರಿದಾಗಹತ್ತುವುದು. ಆಟ ನೋಟಗಳನ್ನು ಕಂಡ ತಾಯಿಯು ಮಗನ ಬಾಳನ್ನು ನೋಡಲು ಹಾತೊರೆಯುವಳು. ಹೆಣ್ಣಿನ ಜನುಮಕ್ಕೆ ಏನು ಕಂಡರೂ ತೃಪ್ತಿಯಿಲ್ಲ. ಮಗನು ಮದುವೆಯಾಗಿ ಮನೆಯಲ್ಲಿ ಪ್ರಪಂಚ ಮಾಡಹತ್ತಿದ ಮೇಲೆ ಸಿಹಿಯು ಕಹಿಯಾಗಲು

ಸೊಸೆಯು ಬರತಾಳಂತ, ಖುಸಿ ಭಾಳ ಮನದಾಗ
ಸೊಸಿ ಬಂದು ಮನಗ ಕಸಗೊಂಡು। ಬಾಳ್ವಾಗ
ಮುಗಲೀಗೆ ಬಾಯ ಬಿಡತಾಳ॥ –ಗ–ಹಾ–ಪು.೫೯

ಬಾಳಿನಲ್ಲಿ ಎಲ್ಲವೂ ಸಂಭವಿಸಲಿಕ್ಕೇ ಬೇಕು. ಇಡೀ ಪ್ರಪಂಚವನ್ನು ನೆನಿಸಿ ಹಾಡುವಳು. ಬೀಸುವ ಕಡೆ ಮುಕ್ಕನ್ನರಿತು ನೋಡಲು ಬೆಳಗಿನ ಬೆಳ್ಳಿಯು ಮೂಡಿ ಮೇಲೆ ಬಂದದ್ದನ್ನು ಕಂಡು

ಬೆಳ್ಳಗ ಬೆಳಗಾಗಿ, ಬೆಳ್ಳಿ ಮೂಡಲವಾಗಿ
ಒಳ್ಳೊಳ್ಳೆ ಮೀನ ಗರಿತಗಿದು। ಆಡ್ಯಾವ
ಗರತಿ ಗಂಗಮ್ಮನ ಉಡಿಯಾಗ॥ –ಗ.ಹಾ–ಪು.೬೭.

ಎಂದು ಅವಳಿಗೆ ಹೊರಗಿನ ಅರಿವಾಗಿ ನಿಸರ್ಗದ ಒಂದು ಎಂದೂ ಮಾಸದ ಬೆಳಗಿನ ಸುಂದರವಾದ ಚಿತ್ರವನ್ನೇ ಚಿತ್ರಿಸುವಳು. ಬೆಳಗಾಯಿತು; ಮತ್ತೆ ಪ್ರಪಂಚ ಪರ್ಯಟನಕ್ಕನುವಾಯಿತು; ಮೈಮರೆತು ಹಾಡುವ ರಸಾವೇಶಗಳು ಇನ್ನೂ ಉಳಿದವೆಂದು ತಿಳಿದು

ಆದಾವ ನಮ ಜೋಳ, ಉಳಿದಾವ ನಮಹಾಡ
ಈಗ ಸಾಕವ್ವ ನಿನಕಲ್ಲ। ಕೈಯಾನ
ಹಾಕಿದುಂಗುರ ಸವಿದಾವ॥ –ಗ.ಹಾ–ಪು.೮೦.

ಸತ್ತು ಹುಟ್ಟುವದೊಲ್ಲೆ, ಸಾಯುಗಂಡನ್ನೊಲ್ಲೆ
ಸತ್ತಿಕರ ಮಗಳ ಗೌರವ್ವ। ನಿನ್ನಂಥ
ಮುತ್ತೈದಿತನವ ಕೊಡು ನಮಗ॥ –ಜಾ.ಸಂ.–

ಆದ ಮುಕ್ಕಿಗೆ ಶರಣು, ಗೋದಿಕಲ್ಲಿಗೆ ಶರಣು
ಓಂನಾಮ ಶಿವಗ ಶಿವಶರಣು। ಮಲ್ಲಯ್ಯ
ನಿಮ್ಮ ಪಾದಕ ನಮ ಶರಣು॥ –ಗ–ಹಾ–ಪು.೮೦

ಎಂದು ಮುಕ್ತಾಯ ಮಾಡಿ ಕಡೆ ಮುಕ್ಕು ಜಾಡಿಸಿ ಕಲ್ಲು ನಿಲ್ಲಿಸುವಳು. ಹೊಸ ಮನಸ್ಸಿನವಳಾಗಿ ಹೊಸ ಹುರುಪಿನಿಂದ ಮತ್ತೆ ನಿತ್ಯ ಪ್ರಪಂಚಕ್ಕಿಳಿಯುವಳು.

ಕರುಳು ಕರಗುವ ಜೀವ ಹೆಣ್ಣಿನದು. ಮನೆ, ಹೊಲ, ದನಕರು ಮೊದಲಾದವುಗಳೇ ಅವಳ ಬಾಳಿನ ಸಂಪತ್ತು. ದುಡಿಯುವ ಎತ್ತು ಸೊರಗ ಕೂಡದು; ಹಿಂಡುವ ದನ ಕೊರಗ ಕೂಡದು; ಏನಾದರೂ ಆದರೆ ಅವುಗಳ ಮರುಕವು ತನ್ನ ಪಾಲಿಗೆಂದು ಅವುಗಳನ್ನು ಬಲು ಜತನದಿಂದ ಜೋಕೆ ಮಾಡುವಳು. ಉತ್ತಿ, ಹದಮಾಡಿ ಬಿತ್ತುವವನೇ ಬಸವಣ್ಣ; ಇಂದು ಕಾಣುವ ಬೆಳಸು ಅವನಿಂದಲೇ; ಒಕ್ಕಲಿಗನ ಸಂಪತ್ತೂ ಅವನಿಂದಲೇ; ಇಡೀ ಲೋಕಕ್ಕೆ ಅನ್ನದಾತನೇ ಅವನೆಂದು ತಿಳಿದು ಯಾವಾಗಲೂ ಅವನ ಸೇವೆ ಶೂಶ್ರೂಷೆಗೆ ಬದ್ಧಳಾಗುವಳು. ಅವು ಮೇದು ಉಕ್ಕಲಾಡಿದರೆ ಅವಳಿಗೆ ತುಂಬ ಆನಂದ. ಹೀಗಿದ್ದ ಅವಳ ಹೃದಯವು ಎತ್ತಿಗೆ ಆದ ಕಷ್ಟನಷ್ಟಗಳನ್ನು ನೋಡಿ ಸುಮ್ಮನಿರಬಹುದೇ? ಕರುಣ ಹುಟ್ಟಿ ದುಃಖ ತುಂಬಿ ಅತ್ತು ಎತ್ತಿನ ಗೋಳನ್ನು ನೋಡಿ ತಾನೇ 'ಎತ್ತಾಗಿ' ಕನಿಕರವಿಲ್ಲದ ಹಲ ಕೆಲವು ಕಟುಗರಿಗೆ ಬುದ್ಧಿ ಬರಲೆಂದು ಹಾಡಿದ್ದಾಳೆ.

ನಮಜೀವ ಹೋದಾವ್ರಿ ಕೈಲಾಸಕ॥ಪ॥
ಕಲ್ಲು ಕಟಸೀದ ಬಾವಿ
ಅದರೋಳು ಮಲ್ಲಿಗೆ ಸಪನಗಳ।
ಕಲ್ಲೊಳಗೆ ಬಂಡೀ ಹೊಡೆಯು ಹೇಡೊಕ್ಕಲಿಗ
ನಲ್ಲೆಯಳ ತಂದು ಹೂಡೊ ॥೧॥

ಹರಗೂವ ದಿನವ ಬಂದು
ಭೂಮ್ಯಾಗ ಬಿತ್ತಿ ಸಸಿಯ ಕಂಡೆ।
ಸಾಲ್ಹಿಡಿದು ಹೋಗುವಾಗ ದಂಟೊಂದು ಕಡಿದsರೆ
ಈರ್ಯಾಡಿ ಹೊಡವಿಯಲ್ಲೊ ॥೨॥

ಹಿಂಡೀಯ ಇಡು ಅನಲು
ನಿನಮಡದಿ ಹಿಂದಮುಂದ ನೋಡುವಳೊ
ಆರುಖಂಡಗ ಗೋದಿ ಬೆಳೆಯು ಒಕ್ಕಲಿಗಾನೆ
ನಾರಿಯಳ ತಂದ ಹೊಡೊ ॥೩॥

ಹತ್ತಿ ಕಾಳ್ದಾಕು ಎನಲು
ನಿನ ಮಡದಿ ಅತ್ತ ಹೋದಳಲ್ಲೊ
ಹತ್ತು ಖಂಡಗ ಜೋಳ ಒಕ್ಕು ಒಕ್ಕಲಿಗಾನೆ
ಮಿತ್ರಿಯನು ತಂದು ಹೂಡೊ ॥೪॥

ಹಿಂಡು ಎಮ್ಮೀಯ ಮುಂದ
ನೋಡರಿ ಹಾಲ್ಹೊಡೆ ಕದರ್ಹೋಡೆಯೊ
ನನ ಮುಂದ ನೀವೆರಡು ಬಡದಂಟ ಚೆಲ್ಲುವಿರಿ
ನಾಯಾರಿಗ್ವೈರಿಯಾದೆ ॥೫॥

ಸತ್ತು ದುಡಿಯೂವೆ ನಾನು
ಭೂಮೀಗೆ ಮಿಣಜತಿಗೆ ಹೂಡೂದಕ
ಸರ್ವರು ಮೆಟ್ಟುದಕ ಕಾಲೋಳು ಚಿಮ್ಮಣಿಗೆ
ನಾಯಾರಿಗ್ವೈರಿಯಾದೆ ॥೬॥

ಹಾಕಿದರೆ ಸೆಗಣಿ ಆದೆ
ಜಗದೋಳು ಹಚ್ಚಿದರೆ ಕುಳ್ಳು ಆದೆ
ಸಕಲರು ಧರಿಸುದಕೆ ನೊಸಲಿಗಿಬ್ಬತ್ಯಾದೆ
ನಾಯಾರಿಗ್ವೈರಿ ಯಾದೆ ॥೭॥ –ಜಾ. ಸಂ.–

ಈ ಹಾಡನ್ನು ಕೇಳುವ ಕರುಳು ಕರಗದಿರುವದೇ? ದುಡಿ ದುಡಿದು ಉಣ್ಣದೆ 'ನಮ ಜೀವ ಹೋದಾವ್ರಿ ಕೈಲಾಸಕ' ಎಂಬ ಪಲ್ಲವಿಯು ಮಾನವನು ಹುಟ್ಟಿದ್ದು ದುಡಿದುಣ್ಣುವದಕ್ಕೆಂಬ ದೊಡ್ಡ ತತ್ವವನ್ನೇ ಹೇಳುವುದು. ಇಂದು ನಾವು ಹೆಣಗಾಡುವ 'ಸಮತಾವಾದ' ತತ್ವಗಳು ಹಳ್ಳಿಗರಿಗೆ ಎಂದೋ ಪರಿಚಿತವಾಗಿ ಹೋಗಿಬಿಟ್ಟಿವೆ. ಇದಕ್ಕೆ ಮೇಲಿನ ಹಾಡಿನ ತಾತ್ಪರ್ಯವು ಎಲ್ಲರಿಗೂ ಹೊಳೆದರೆ ಸಾಕು.

ಹಬ್ಬ ಹರಿದಿನಗಳಲ್ಲಿ ಹಳ್ಳಿಯ ಹೆಣ್ಣುಮಕ್ಕಳಿಗೆ ಧರ್ಮ ನೀತಿಗಳ ಅರಿವು ಬಾರದಿರದು. ಜೀವನದಲ್ಲಿ ಅವಳಿಗೆ ಶರಣ–ಸಾಧು–ಸತ್ಪುರುಷರ ಆಶೀರ್ವಾದವೂ ಬೇಕು. ಅವಳು ಅವರ ಜೀವನವನ್ನು ಹೆಣ್ಣು ಬಳಗದ ಮುಂದೆ ಹಾಡಿ ಭಜಿಸುವುದೂ ಉಂಟು. ಉತ್ತರ ಕರ್ನಾಟಕದ ಹೆಣ್ಣುಮಕ್ಕಳು ಶ್ರಾವಣ ಮೊದಲಾದ ಪವಿತ್ರ ಮಾಸಗಳಲ್ಲಿ ಹಾಡುವ ಶಿವಶರಣರ ಹಾಡುಗಳು ಇದಕ್ಕೆ ಬಲವಾದ ನಿದರ್ಶನ. ಅಂಕಲಗಿ 'ಅಡುವೀಸ್ವಾಮಿಯು' ಲೀಲಾ ಮೂರ್ತಿಯು. ಈ ದಿವ್ಯ ತೇಜೋರೂಪವು ಇದೇ ಶತಮಾನದ ಹಿಂದೆ ನಮ್ಮ ಭಾಗದಲ್ಲಿ ಅಲೆದಾಡಿ ಪರಂಜ್ಯೋತಿಯಾಗಿ ಹೋಗಿದ್ದಾನೆ. ಈ ಪರಮಾತ್ಮನ ಹಾಡು ಬಹುತರ ಎಲ್ಲ ಹಳ್ಳಿಯ ಹೆಣ್ಣುಮಕ್ಕಳ ಬಾಯಲ್ಲಿದ್ದದ್ದನ್ನು ಕೇಳಬಹುದು.

ಕಂಡಿರೇನಡವಿ ಸ್ವಾಮೀನ ॥ಪ॥
ಕಡೆಯುವ ಕಡಗೋಲ ಬಿಟ್ಟೆ
ಹಿಂಡು ಆಕುಳಕ್ಕೆ ಬಿಟ್ಟೆ
ಕಂದ ಗುಣಿಸುವದು ಬಿಟ್ಟೆ
ತಂದಿ ಬೆನ್ಹತ್ತಿಹೋದೆ
ದೊರೆಯಲಿಲ್ಲವ್ವ ಜ್ಯೋತಿ ॥೧॥

ಓಣಿ ಓಣೀಯ ತಿರುಗಿ
ವಾರಿ ವಾರೀಯ ಹುಡುಕಿ
ಪಾತಳ ಗಂಗೆಯ ಗದಬಡಿಸಿದೆ
ಏನಾಗಿದ್ದಾರವ್ವ
ತೋರಲಿಲ್ಲ ಲೀಲಾಮೂರ್ತಿ ॥೨॥

ಬಾದಾಮಿ ಬನಶಂಕರಿ ಸೇರಿ
ಮಾಕುಟಹೊಂಡಾನ ಹುಡುಕಿ
ಪಾರಮಾತ್ಮನ ನೆನೆಸಿದ್ದೆ
ಪುಣ್ಯ ನಾ ಪಡದಿದ್ದೆ
ಕಾಣಲಿಲ್ಲವ್ವ ಜ್ಯೋತಿ ॥೩॥

ಪತ್ರಿಬನಕ ಹೋಗಿದ್ದೆ
ಮುತ್ತ ಮಾಡಿ ಹುಡುಕಿದ್ದೆ
ಹುತ್ತಿನಾಗ ಕೈ ಇಟ್ಟದ್ದೆ
ಜೀವದಾಶೆ ಬಿಟ್ಟದ್ದೆ
ಸಿಗಲಿಲ್ಲ ಜ್ಯೋತಿ ಎನಗ ॥೪॥

ಗುಡ್ಡದೆಲ್ಲವ್ವ ದೊಡ್ಡಾಕಿ
ಸಿದ್ಧಶರಣರ ವರುವ ಪಡೆದಾಕಿ
ಎಲ್ಲಾ ತಾರತಮ್ಯಾ ತಿಳಿದಾಕಿ
ಹೇಳಲಿಲ್ಲವ್ವ ಎನಗ
ಜ್ಯೋತಿ ಹೋಗಿದ್ದ ದಿಕ್ಕ ॥೫॥

ಅಲ್ಲೆ ಇಲ್ಲೆ ಕಾಣುವರು
ಕನಸ ಮನಸಿನೊಳಿರುವುದು
ಸುತ್ತ ನೋಡಿದರು ಕಾಣರು
ಇಲ್ಲೆ ಇದ್ದಾಂಗಾಗೂರು
ಪರಶಿವ ಸಿಕ್ಕಾರೇನ ಎನಗ ॥೬॥

ಬಾರವ್ವ ಮಗಳ ದಣಕೊಂಡಿ
ಕಲ್ಲ ಮುಳ್ಳ ತುಳಕೊಂಡಿ
ಪಾರಮಾತ್ಮನ ನೆನಕೊಂಡಿ
ಪುಣ್ಯಾನೀ ಪಡಕೊಂಡಿ
ಅಂತ ಜ್ಯೋತಿ ಕರೆದಾರೇನ ॥೭॥

ಕಪ್ಪತಗುಡ್ಡೆಂಬ ಅಧಿಕಾರ
ಅದರೊಳಗಿರುವರು ಧೀರ
ಹಾವ ಕಚ್ಚಿದರ ಪರಿಹಾರ
ಇಲ್ಲಿಗೆ ಹಾಡ ಮುಕ್ತಾರ
ನೀ ಕರುಣಿಸೊ ನಿರಂಕಾರ ॥೮॥

'ಅಡವಿಸ್ವಾಮಿ'ಯ ನೆನಪಾಗಲು ಆ ಪರಂಜ್ಯೋತಿಯ ದರ್ಶನ ಪಡೆಯುವ ಹಂಬಲು ಹೆಚ್ಚಾಗಿ ಪ್ರಪಂಚದಾಶೆಯನ್ನು ಬಿಟ್ಟು ಪರಮಾರ್ಥವನ್ನು ದೊರಕಿಸಿದ ಆ ಜ್ಯೋತಿಯನ್ನು ಹುಡುಕುತ್ತ ಹೋಗಿ ಕಾಣದೆ ಅವನ ಶಿಷ್ಯಳಾಗಿ ಹಳ್ಳಿಯ ಗರತಿಯು ಪ್ರಪಂಚದಲ್ಲಿದ್ದು ಪಾರಮಾತ್ಮವನ್ನು ಗೆದೆಯಲು ಕೈಹಾಕಿದ್ದಾಳೆ. ಇಂತಹ.ಅನೇಕ ಹಾಡುಗಳನ್ನು ಸಂಗ್ರಹಿಸಬಹುದು. ಇಷ್ಟು ಹುಲುಸಾಗಿದೆ ನಮ್ಮ ಹೆಣ್ಣುಮಕ್ಕಳ ಸಾಹಿತ್ಯ!

ಹೆಣ್ಣಿನ ಈ ರಸಾವೇಶಗಳು ಅವಳುಂಡು ಅರಗಿಸಿದ ಬಾಳಿನ ಎಂದೂ ಮಾಸದ ಚಿತ್ರಗಳು. ಬಾಳಿದು ಅವಳಿಗೆ ಕೇವಲ ಕನಸಲ್ಲ. ಪ್ರೇಮಿಗಳು, ತುಂಬಿ ಹರಿಸುವ ರಸನಿಮಿಷಗಳ ಸಂಗಮ. ಕೆಲಕಾಲ ಸುಕ್ಕುವುದೂ ಉಂಟು; ಕೆಲಕಾಲ ಉಕ್ಕುವುದೂ ಉಂಟು. ಹೇಗಿದ್ದರೂ ಬಾಳು ಮುನ್ನಡೆಯಲೇ ಬೇಕಲ್ಲವೇ? ಅಂತೆಯೇ ಜಗತ್ತಿನಲ್ಲಿ ನಾವು ಕೈಕೊಳ್ಳುವುದು ಸಂಸಾರ ಯಾತ್ರೆ. ಈ ರಸಾವೇಶದ ಹಾಡುಗಳನ್ನು ಹಾಡುವ ನಮ್ಮ ಹಳ್ಳಿಗರು ರಸಿಕರಲ್ಲವೇ? "ಕಾವ್ಯಕ್ಕೆ ರಸವೇ ಕಣ್ಣೆಂಬ"ಂತೆ ಹೆಣ್ಣುಮಕ್ಕಳ ಈ ಬೀಸುವ ಹಾಡುಗಳು ಬಿಡಿ ಪದ್ಯಗಳಿದ್ದರೂ ರಸಾತ್ಮಕವಾದ ಕಾವ್ಯದ ಬಿಡಿ ಮುತ್ತುಗಳಲ್ಲವೇ?

ಈಗಲೂ ಇಂತಹ ಅನೇಕ ಚಿತ್ರಗಳನ್ನು ಹಳ್ಳಿಗಳಲ್ಲಿ ನೋಡಬಹುದು. ಈ ಎಲ್ಲ ಹಾಡುಗಳನ್ನು ಕೇಳುವ ನಮಗೆ ಜಾನಪದವು ವಸಂತ ಮಾಸದಲ್ಲಿ ಹಾರಾಡಿ ಹಾಡುವ ಕೋಗಿಲೆಯೊ ಎಂಬಂತೆ ಭಾಸವಾಗುವುದು. ಪ್ರೊ. ದೇವೇಂದ್ರ ಸತ್ಯಾರ್ಥಿಯವರು ಹೇಳುವಂತೆ:

"Life is like spontaneous and perenial song in rural India, the nest of singing birds. Folk songs pervade all walks of life, they are deeply associated with various religious rites, social ceremonies and festivities of joy and glee. All classes, all forms of occupation, men and women, young and old, all alike have songs of numerous tones and tunes."[1] ಜಾನಪದ ಭಾರತವು (Rural India) ಹಾಡುಗಳಿಂದ ತುಂಬಿದೆ. ಈ ಹಾಡುಗಳು ಒಂದಕ್ಕೊಂದು ಒರೆಗೆ ನಿಂತ ಬಂಗಾರದ ತುಂಡುಗಳಿದ್ದಂತೆ. ಇವುಗಳಲ್ಲಿ ಕೇವಲ ಕಲ್ಪನೆಗಳ ಹುಚ್ಚಾಟವಿರದೆ ನೈಜಭಾವದ ನಾವೀನ್ಯವು ತುಂಬಿ ಹರಿಯುವುದು. ಪ್ರೇಮಯಾತ್ರೆ, ಯೌವನ, ಸಾಹಸ, ಸೌಂದರ್ಯ ಮೊದಲಾದುವುಗಳನ್ನು ಚಿತ್ರಿಸುವ ಈ ಹಾಡುಗಳು ತೆರೆಮರೆ ಮಾಡದೆ ಜನಜೀವನದ ನಗೆಹೊಗೆ, ಆಶೆನಿರಾಶೆ, ಆಗುಹೋಗು, ಸುಖದುಃಖ ಮೊದಲಾದುವುಗಳ ರೂಪ-ರೇಷೆಗಳನ್ನು ಓದುಗರ ಮನಃಪಟಲದ ಮೇಲೆ ಕೂಡಲೇ ಮೂಡಿಸುವುವು. ಕಡೆಗೂ ಮಾಸದ ಈ ಹಾಡುಗಳು ಪ್ರೊ. ದೇವೇಂದ್ರ ಸತ್ಯಾರ್ಥಿಯವರು ಚರ್ಚಿಸಿದಂತೆ– "Many of them are as beautiful and fragrant as the lotus flowers, most natural in their form and colour - and most natural in their fragrance. They are of numerous variety; as in expression so in substance they are simple and direct and bring before us vivid pictures of the open air country life"[2] ಜಾನಪದ ಜೀವನದ ಚೆಲುವ ಚಿತ್ರಗಳಿದ್ದಂತೆ. ಈ ಹಾಡುಗಳ ಸರಳತೆಯು ನೇರವಾಗಿ ಮನಕ್ಕೆ ಮುಟ್ಟದಿರದು ಅಲ್ಲದೆ– ``We hear in these folk songs the very heart beats of India; through them vibrates the life lit music of India's soul. No picture of India can convey more forcibly and clearly to our mind the manners, habits and the psychological depths of her inner life, than an insight into these songs"[3] ಎಂದು ಬಲು ಚರ್ಚಾತ್ಮಕವಾಗಿ ನುಡಿದ್ದಾರೆ.

ಅರಸೊತ್ತಿಗೆಯ ಸಂಭ್ರಮದಲ್ಲಿ ಬೆಳೆದು ಕೇವಲ ರಾಜಾಸ್ಥಾನಗಳಿಗೆ ಮೀಸಲಾಗಿದ್ದ ಕನ್ನಡ ಕಾವ್ಯಶ್ರೀಯು ಯುಗ ಯುಗಗಳಲ್ಲಿ ರೂಪಾಂತರ ಹೊಂದಿ 'ದುಂದುಭಿ,' 'ಲಾವಣಿ' ಮೊದಲಾದ ಸಾಹಿತ್ಯ ಟಿಸಿಲುಗಳಾಗಿ ಕನ್ನಾಡಿನ ಸಾಮಾನ್ಯ ಜನರ ಕೈ ಸೇರಿದಳೆಂದು ಹೇಳಬಹುದು. ಕನ್ನಡ-ಸಾಹಿತ್ಯ ವಾಹಿನಿಯು ಇಂದು ಸಾಮಾನ್ಯ ಜನತೆಯ ಬೀದಿ ಬೀದಿಗಳಲ್ಲಿ ಹರಿದು, ಹೊಸ ಹೊಸ ರೂಪಗಳನ್ನು ತಾಳಿ ಶೋಭಾಯಮಾನಳಾಗಿದ್ದಾಳೆ. ಇಂದು ಕರ್ನಾಟಕದಲ್ಲಿ ಹೇರಳವಾಗಿ ಕಾಣುವ 'ದುಂದುಭಿ,' 'ಲಾವಣಿ' ಮೊದಲಾದ ಹಾಡುಗಳೇ ಇದಕ್ಕೆ ನಿದರ್ಶನ.

ರಾಜಪುತಾನ ಮೊದಲಾದ ಉತ್ತರ ಹಿಂದೂಸ್ತಾನದ ಭಾಗಗಳಲ್ಲಿ ಹಳ್ಳಿಗರು ವೀರ ಗೀತೆಗಳನ್ನು ಹಾಡುವಂತೆ ಕನ್ನಡಿಗರು ಅನೇಕ ಐತಿಹಾಸಿಕ, ಸಾಮಾಜಿಕ ವೀರ ಪುರುಷರ ದುಂದುಭಿ, ಲಾವಣಿ ಮೊದಲಾದುವುಗಳನ್ನು ಹಾಡುತ್ತಾರೆ. ಉತ್ತರ ಕರ್ನಾಟಕದಲ್ಲಿ ದೊರೆಯುವ ಕಿತ್ತೂರ ಚೆನ್ನಮ್ಮ, ಸಂಗೊಳ್ಳಿ ರಾಯಣ್ಣ, ನರಗುಂದ ಬಾಬಾಸಾಹೇಬ, ಹಲಗಲಿಯ ಹತಾರ ಕದನ, ಸಿಂಧೂರ ಲಕ್ಷ್ಮಣ, ಕಟ್ಟಿ ಚೆನ್ನ, ಹೊಂಗಲ ಸಂಗ್ಯಾ, ಕಡ್ಲಿಮಟ್ಟಿ ಸ್ಟೇಶನ್ ಮಾಸ್ತರ,' ಮೊದಲಾದವರ ಹಾಡುಗಳು ಜಾನಪದದಲ್ಲಿ ಹಾಸುಹೊಕ್ಕಾಗಿವೆ. ದಕ್ಷಿಣ ಕರ್ನಾಟಕದಲ್ಲಿ ಹೈದರ, ಟಿಪ್ಪುಸುಲ್ತಾನ, ಪೆರಿಯ ಪಟ್ಟಣ ಕದನ ಮೊದಲಾದ ಲಾವಣಿಗಳು ಜನತೆಯ ಆದರಕ್ಕೆ ಪಾತ್ರವಾಗಿವೆ. 'ಲಾವಣಿ'ಯೆಂಬ ಪದವೂ ನಮಗೆ ಹೊಸತಲ್ಲ. ಷಟ್ಪದೀ ಕಾವ್ಯಗಳಲ್ಲಿ ಈ ಪದವು 'ಯುದ್ಧದ ಕುಣಿತ, ಸೌಂದರ್ಯ, ಕೌಶಲ್ಯ, ಪ್ರಯೋಗ ಚಾತುರ್ಯ' ಎಂಬ ಅರ್ಥದಲ್ಲಿ ದೊರೆಯುತ್ತದೆ."[೪] ಎಂದು 'ದೇವುಡು' ಅವರು ಅದರ ಹುಟ್ಟು ಬೆಳವಣಿಗೆಯನ್ನು ನಿರೂಪಿಸಿದ್ದಾರೆ. ಲಾವಣಿಗಳಲ್ಲಿ ವೀರ ಗಥೆಗಳಲ್ಲದೆ, ಅನೇಕ ಕಟ್ಟು ಕಥೆಗಳೂ, ಶೃಂಗಾರ ಸಂವಾದಗಳೂ, ಹಾಸ್ಯ ವಿನೋದಗಳೂ, ತರ್ಕನೀತಿ ವೇದಾಂತ ತತ್ವಗಳೂ, ಪೌರಾಣಿಕ, ಸಾಮಾಜಿಕ ಮೊದಲಾದ ಸನ್ನಿವೇಶಗಳೂ, ರೂಪತೊಟ್ಟು ಜನಾಂಗದಲ್ಲಿರುವುದನ್ನು ಕಾಣಬಹುದು. ಇವುಗಳಲ್ಲಿ ಹಳ್ಳಿಗರು ವೀರಗಥೆಗಳಿಗೆ ಪ್ರಾಧಾನ್ಯತೆಯನ್ನು ಕೊಡುವದರಿಂದ 'ಲಾವಣಿ'ಯೆಂದರೆ 'ವೀರ ಗೀತೆ'ಯೆಂದು ಕರೆಯುವ ವಾಡಿಕೆಯು ಜನಪದದಲ್ಲಿ ಉಂಟು. ಇಂತಹ 'ವೀರ ಗೀತೆ'ಗಳು ಪ್ರಾಚೀನ ಕರ್ನಾಟಕದಲ್ಲಿಯೂ ಇರಬೇಕೆಂಬ ಸಂಶಯವು ಸಂಶೋಧಕರಿಗೆ ಬಾರದಿರದು. ಫಲವತ್ತಾದ ಕನ್ನಡನಾಡ ಮೇಲೆ ಪರ ಗಡಿಗಳಿಂದ ಮೇಲಿಂದ ಮೇಲೆ ದಾಳಿ, ದಂಗೆಗಳು ಆಗುತ್ತಿದ್ದುವೆಂದು ಇತಿಹಾಸದಿಂದ ತಿಳಿದುಬರುತ್ತಿದೆ. ಕನ್ನಡ ಗಂಡುಗಲಿಗಳು ಅವುಗಳನ್ನು ತಡೆದು ಕನ್ನಡಿಗರ ಮಾನಮರ್ಯಾದೆಯನ್ನು ಕಾಪಾಡಿದ್ದುಂಟು. ಅನೇಕರು ಸಾಹಸದಲ್ಲಿ ರಕ್ತವನ್ನು ಕನ್ನಡ ಭೂಮಿಗೆ ಸುರಿಸಿ ವೀರಸ್ವರ್ಗವನ್ನು ಹೊಂದಿದ್ದೂ ಉಂಟು. ಇವರ ಕಥೆಗಳನ್ನು ಕೂಗಿ ಹೇಳುವವೊ ಎಂಬಂತೆ ಕನ್ನಡ ಗಡಿ ಗಡಿಗಳಲ್ಲಿ ದೊರೆಯುವ ಮಹಾಸತಿ, ವೀರಗಲ್ಲು, ಗರುಡಗಂಬ ಮೊದಲಾದುವುಗಳು ಈ ವೀರಗಲಿಗಳ ಸಾಹಸದ ಕುರುಹುಗಳಾಗಿ ನಿಂತದ್ದೇ ಸಾಕು. ಕನ್ನಡ ಕವಿಗಳೂ, ಪಂಡಿತರೂ ರಾಜಾಶ್ರಯದಲ್ಲಿದ್ದುಕೊಂಡು. ಈ ವೀರಗಲಿಗಳ ಶೌರ್ಯವನ್ನು ಕಂಡು, ಕೇಳಿ, ಅಖಂಡ ಕಾವ್ಯಗಳನ್ನೇ ರಚಿಸಿದ್ದಾರೆ. 'ಕುಮಾರ ರಾಮ ಚರಿತೆ,' 'ಬುಕ್ಕ ರಾಯ ಚರಿತೆ,' 'ಪ್ರೌಢ ರಾಯ ಚರಿತೆ' ಮೊದಲಾದ ಕಾವ್ಯಗಳು ಈ ಜಾತಿಗೆ ಸೇರಿವೆ. ಇವರ ಸಾಹಸಕ್ಕೆ ಮೆಚ್ಚಿ ಜನತೆಯನ್ನು ಹುರುದುಂಬಿಸಲು, ಅಂದಿನ ಹಿರಿಯರೂ, ಸೆಟ್ಟಿ ಸಾವುಕಾರರೂ ಈ ಕಲಿಗಳ ಸಾಹಸವನ್ನು ಶಾಸನಗಳಲ್ಲಿ ಕೊರೆಯಿಸಿದ್ದಾರೆ. ಅವರ ಹೆಸರು ಅಜರಾಮರ ಉಳಿಯಲೆಂದು ಜನಪದವು ಆ ಊರನ್ನೇ ಅವರಿಗೆ ನಾಮಾಂಕಿತ ಮಾಡಿದ್ದುಂಟು. ಇಂತಹ ಅನೇಕ ಊರ ಟಿಪ್ಪಣಿಗಳನ್ನು ಕುರಿತು ಹಿರಿಯ ಸಾಹಿತಿಗಳಾದ ಮಾಸ್ತಿ ವೆಂಕಟೇಶ ಅಯ್ಯಂಗಾರರು ತಮ್ಮ 'ಜನಪದ ಸಂಸ್ಕೃತಿ' (ಪು. ೪೬) ಎಂಬ ಪುಸ್ತಕದಲ್ಲಿ ವಿಶದವಾಗಿ ಚರ್ಚಿಸಿದ್ದಾರೆ. ಹೀಗೆ ಶಾಸನಗಳಲ್ಲಿಯೂ, ವೀರಗಲ್ಲುಗಳಲ್ಲಿಯೂ, ಮಹಾಸತಿಗಲ್ಲುಗಳಲ್ಲಿಯೂ

1. Modern Review Vol. 56 p.p. 296
2. Modern Review Vol. 56 p.p. 295
3. Modern Review Vol. 56 p.p. 295
೪. 'ಕರ್ನಾಟಕ ಸಂಸ್ಕೃತಿ' ಪು. ೧೭– 'ದೇವುಡು'

ಮೂರ್ತಗೊಂಡ ವೀರರ ಸಾಹಸಗಳನ್ನು ಓದಿ, ಕೇಳಿ, ತೃಪ್ತಿಹೊಂದಿ ಜನತೆಯು ಮೌನವಂತಿತೇ? ಅಥವಾ ಕಾಲಮಹಿಮೆಯು ಅವರನ್ನು ಮರೆಯಿಸಿಬಿಟ್ಟಿತೇ? ಇಲ್ಲ, ಹಾಗಾದಂತೆ ಕಂಡುಬರುವುದಿಲ್ಲ. ಈ ಕುರುಹು, ನೆನಹುಗಳನ್ನು ನೋಡಿದ, ನೋಡುತ್ತ ಬಂದ ಜನಾಂಗವು ಅವರ ಕಲಿತನವನ್ನು ಹೊಸ ಹೊಸ ಚಿತ್ರಗಳೊಡನೆ, ಹುರುಪು ತುಂಬಿದಾಗ ಜನಪದಕೆ ಹಾಡಿ ಅವರ ಅತ್ಯುಜ್ವಲ ಜೀವನವನ್ನು ಜನತೆಯ ಕಣ್ಮುಂದೆ ತಂದುಕೊಟ್ಟು ಮಹದುಪಕಾರ ಮಾಡುತ್ತ ಬಂದಿದೆ. ಇಂತಹ ಅನೇಕ ಹಾಡುಗಳು ಜನಪದದಲ್ಲಿ ಅಂದಿನಿಂದ ಇಂದಿನವರೆಗೂ ಬಳಕೆಯಲ್ಲಿವೆ. ಇಂಥ ಹಾಡುಗಳೇ ನಮ್ಮ ನಾಡ 'ಲಾವಣಿಗಳು' ಅಥವಾ ಹಳ್ಳಿಗರ ವೀರಕಾವ್ಯಗಳು. ನಮ್ಮ ದುರ್ದೈವದ ಮೂಲಕ ಇವು ಇದ್ದಕ್ಕಿದ್ದಂತುಳಿಯದೆ ಹಾಡುಗಾರನ ಕೈ ಬೆಳಕಿನಲ್ಲಿ ಮಾರ್ಪಾಟು ಹೊಂದಿ ಈಗಿನ ರೂಪ ತಾಳಿವೆ. ಆದರೆ ಕಥಾವಸ್ತು ಮಾತ್ರ ಬಹುತರವಾಗಿ ಹಾಗೇ ಉಳಿದಿರುವುದನ್ನು ಈ ಲಾವಣಿಗಳನ್ನೋದಿ, ಅಲ್ಲಲ್ಲಿ ಕಂಡುಬರುವ ವೀರರ ಸ್ಮಾರಕಗಳಿಗೆ ಹೋಲಿಸಿ ತಿಳಿದುಕೊಳ್ಳಬಹುದು. ಕಲಾದಗಿಯ ಉತ್ತರಕ್ಕೆ ಐದು ಅಥವಾ ಆರು ಮೈಲು ದೂರವಿರುವ 'ಹಲಗಲಿ'ಗೆ ಜಾನಪದ ಸಾಹಿತ್ಯ ಸಂಕಲನ ಮಾಡಲು ಹೋದಾಗ, ವೀರಾವೇಶ ತುಂಬಿಸುವ 'ಹಲಗಲಿ ಬಂಟರ ಹತಾರ ಕದನ'ವೆಂಬ ವೀರರಸ ಲಾವಣಿಯು ನಿದರ್ಶನಕ್ಕೆ ಬಂತು. ಕತೆ ಹೇಳುವ ರೀತಿ ತುಂಬಿ ತುಳುಕುವ ವೀರಾವೇಶ, ಓದುವ, ಕೇಳುವ ಜನರಲ್ಲಿ ಕವಿಯು ಹುಟ್ಟಿಸುವ ಕರುಣಾಜನಕ ಪರಿಸ್ಥಿತಿ, ಜನತೆಯ ಅಸಹಾಯಾವಸ್ಥೆ, ಸನ್ನಿವೇಶ ಮೊದಲಾದುವುಗಳು ಈ ಲಾವಣಿಗೆ ಮಹತ್ವವನ್ನು ತಾರದಿರಲಾರುವು. ಕಾವ್ಯದೃಷ್ಟಿಯಿಂದಲೂ ಈ ಲಾವಣಿಯು ಒಂದು ಉತ್ತಮವಾದ ಹಳ್ಳಿಗರ ಕವಿತೆಯೆಂದು ಹೇಳಬಹುದು. ಈ ಲಾವಣಿಯು

"ಹೊತ್ತು ಬಂದಿತು ಮತ್ತ ನೋಡಿರಿ ಕತ್ತಿ ಹಿಡಿಯುವ ಜನಕ
ಸಿಟ್ಟಿನ ಮಂದಿ ಹಲಗಲಿ ಬಂಟರು ಮುಟ್ಟಲಿಲ್ಲೊದಡಕ" ॥ಪ॥

ಎಂಬ ಪಲ್ಲವಿಯಿಂದ ಆರಂಭವಾಗುವುದು. 'ಕುಂಪಣಿ' ಸರಕಾರವು ವ್ಯಾಪಾರದೊಡನೆ ಸಾಧಿಸಿ ಹಿಂದೂಸ್ತಾನದ ರಾಜಕಾರಭಾರದಲ್ಲಿ ಕೈಹಾಕಿ ದೇಶವನ್ನು ಗೆದ್ದರು. 'ಸಿಪಾಯಿಗಳ ಬಂಡಾಯ'ವಾದ ನಂತರ ಭಾರತೀಯರ ಮೇಲೆ 'ನಿಃಶಸ್ತ್ರೀಕರಣ'ದ ಅಮಲ ಬಜಾವಣಿ ನಡೆಸಲು, ಸರಕಾರವು ತಮ್ಮ ಅಧಿಕಾರದ ಒಂದು ಹುಕುಮನ್ನು ಹೊರಡಿಸಿತು. ಭಾರತೀಯರೆಲ್ಲರೂ ಸರಕಾರದ ಮನ್ನಣೆಯಿಲ್ಲದ ಶಸ್ತ್ರಾಸ್ತ್ರಗಳನ್ನು ಹಿಡಿಯಕೂಡದೆಂದೂ, ಈಗಿಂದೀಗಲೇ ತಮ್ಮಲ್ಲಿದ್ದುವುಗಳನ್ನು ಸರಕಾರಕ್ಕೆ ಒಪ್ಪಿಸಬೇಕೆಂದೂ, ಒಪ್ಪಿಸದಿದ್ದರೆ ಬಂದಿಯ ವಾಸ ಖಂಡಿತವೆಂದೂ ಈ ಹುಕುಮಿನ ಆಶಯವಾಗಿತ್ತು. ಭಾರತ ವೀರರು ಇದನ್ನು ಕೇಳಿ ಅಲ್ಲಲ್ಲಿ ದಂಗೆಗಳನ್ನೆಬ್ಬಿಸಿದರು. 'ಕುಂಪಣಿ' ಸರಕಾರವು ಒಳಸಂಚಿನಿಂದ ದಂಗೆಗಾರರನ್ನು ಬಗ್ಗು ಬಡೆದು ರಾಜ್ಯದಲ್ಲಿ ಶಾಂತತೆಯನ್ನು ಸ್ಥಾಪಿಸಿ ಆಳಿದ್ದು ಇತಿಹಾಸದಿಂದ ತಿಳಿದುಬರುತ್ತದೆ. ಈ 'ಹಲಗಲಿ ಹತಾರ ಕದನ'ವು ಇಂತಹ ಒಂದು ಸಂಭವಿಸಿದ ದಂಗೆ. ಹಲಗಲಿ ಬೇಡರ ಊರು. ಮೊದಲು ಮುಧೋಳ ಸಂಸ್ಥಾನದಲ್ಲಿದ್ದು, ಸಂಸ್ಥಾನಗಳು ವಿಲೀನವಾದ ನಂತರ ಇಂದು ವಿಜಯಪುರ ಜಿಲ್ಲೆಗೆ ಒಳಪಟ್ಟಿದೆ. ಈ ಕದನವು ಸಂಭವಿಸಿದಾಗ ಕಲಾದಗಿಯು ಜಿಲ್ಲೆಯ ಸ್ಥಾನವಾಗಿತ್ತು. ಹಲಗಲಿಯ ಬೇಡರ ನಾಯಕರು – ಹನುಮ, ರಾಮ, ಬಾಲ, ಜಡಗ–ಮೊದಲಾದವರು ತಮ್ಮ ಕೈಯೊಳಗಿನ ಖಡ್ಗಗಳನ್ನು ಕೊಡಲೊಪ್ಪದೆ ದಂಗೆ ಎಬ್ಬಿಸಿ 'ಹೆಬಲಕ' ಸಾಹೇಬನನ್ನು ಖೂನೀ ಮಾಡಿದರು. 'ಕಾರ್' ಸಾಹೇಬನು ಇದನ್ನು ಕೇಳಿ ಕಲಾದಗಿಯಿಂದ ದಂಡು ಕಳುಹಿಸಿ ಹಲಗಲಿಯನ್ನು ಮುತ್ತಿ ಸುಲಿದದ್ದೇ ಈ ಲಾವಣಿಯು. ಮೇಲೆ ಕಾಣಿಸಿದ ಕಡುಗಲಿಗಳ ಕತ್ತಿಯ ಕಣವು ಹಲಗಲಿ ಕೆರೆಯ ಮಡ್ಡೆಯ ಕೆಳ ಓರೆಯ ಅಗಸೆಯ ಮುಂದಿನ ಪಟಾಂಗಣವೆಂದೂ ಅಲ್ಲಿರುವ ಬೇವಿನಕಟ್ಟೆಗೆ ಹಲಗಲ ಕತ್ತೀ ಬಂಟರ ಕಟ್ಟೆಯೆಂದೂ, ಜನರು ಈಗಲೂ ಕರೆಯುತ್ತಾರೆ. ಎಲ್ಲರ ಮನವನ್ನ ಹಿಡಿಯುವ ಈ ಲಾವಣಿಯನ್ನು ಕೆಳಗೆ ಕೊಡಲಾಗಿದೆ.

ಹೊತ್ತು ಬಂದಿತು ಮತ್ತ ನೋಡರಿ ಕತ್ತಿ ಹಿಡಿಯುವ ಜನಕ
ಸಿಟ್ಟಿನ ಮಂದಿ ಹಲಗಲಿ ಬಂಟರು ಮುಟ್ಟಲಿಲ್ಲೊದಡಕ ॥ಪ॥

ವಿಲಾತಿಯಿಂದ ಹುಕುಮ ಕಳಿಸಿತು ಕಂಪಣಿ ಸರಕಾರ
ಎಲ್ಲ ಜನರಿಗೆ ಜೋರ ಮಾಡಿ ಕಸಿದುಕೊಳ್ಳರಿ ಹತಾರಾ.
ಕತ್ತಿಕಟಾರಿ, ಕೈಚೂರಿ, ಬಾಕು, ಗುರ್ದಿ, ಸುರಗಿಚಕ್ರಾ
ಪಟಾಕ ಪಿಸ್ತುಲ ಕರಲಿ ತೋಕೆ ಚಾಪಗೊಡ್ಲಿ ಶಸ್ತ್ರಾ
ಭಾಲಿಬರ್ಚಿ ಬಿಚ್ಚಗತ್ತಿ ನೋಡೊ ಬಿಲ್ಲಬಾಣಾ
ತೋಪ ತುಬಾಕಿ ಮದ್ದುಗುಂಡು ಬಿಡ ಬ್ಯಾಡೊ ಜಾಣಾ.
ಮುಚ್ಚಿದವರಿಗೆ ಮೂರುವರುಷ ಬೇಡಿ ಹಾಕಿರೊ ಪೂರಾ
ಕೊಡದೆ ದಿಟಾಯಿ ಮಾಡಿದವರಿಗೆ ಕಡಿದು ಹಾಕಿರೊ ಶಾರಾ.
ಬೇಡಿದ ಚಣಕ ತಾವೇ ಕೊಟ್ಟರೆ ಹಿಡಿರಿ ಅಂದು
ವತನ ಕೊಡತಿವಿ ಅನ್ನಿರಿ ಒಂದೇ ಕೊಡುವರು ಖುಷಿಲಂದು.
ಬಂದೀ ಹುಕುಮ ಕುಂಪಣಿಯಿಂದ ಡಂಗರ ಸಾರ್‍ಯಾರೊ ಅಂದು
ಶೂರ ಸಿಪಾಯಿ ಊರ ಜನ ತಿಳಿದು ಅಳತಾರೊ ಕಣ್ಣಿಗೆ ನೀರ್ತಂದು.
ಬಹಳ ಚಿಂತೆ ಮಾಡಿ ದುಃಖದಿಂದ ಬಿದ್ದರವರಣ್ಣ ನೆಲಕ ॥೧॥

ಕೇಳುತ ಹುಕುಮ ತಂದ ತಂದ ಕೊಟ್ಟರೊ ಕೆಲವರು ಆವಾಗ
ಬಹಳ ಬೆಲೀವು ಹೆಚ್ಚಿನ ಹತಾರ ಮುಚ್ಚಿಟ್ಟರೊ ಒಳಗ.
ಸಾಲಸಮುದ ಮಾಡಿ ದನಕರ ಮಾರಿ ತಂದಿನ್ನೀ ಹಬ್ಬದಾಗ
ನೋಡಿ ನೋಡಿ ಹ್ಯಾಂಗ ಕೊಡೂನಂತ ಹುಗಿದು ಇಟ್ಟರೊ ನೆಲದಾಗ.
ಶೂರ ಚಟೇಗಾರು ಜಾಯದ ಸಾಹೇಬ ಬಂದರೊ ಆವಾಗ

ಸಂದಿಗೊಂದಿಯೊಂದುಳಿಯದ್ಹಂಗ ಹೊಕ್ಕುಹುಡಿಕ್ಯಾರೊ ಮನಿಯಾಗ.
ತಪ್ಪಿತು ಉಪಾಯಿನ್ನು ಯಾವ್ತರ ಮಾಡ್ಬೇಕು ಅಂತರೊ ಹ್ಯಾಂಗ
ಒಬ್ಬರ ಮೇಲೊಬ್ಬರ ಚಾಡ ಹೇಳತಾರ ವರ್ಮಸಾಧಿಸಿ ಹಾಂಗ.
ಜಾಡಿಸಿ ಹೋದವೊ ನಾಡೊಳಗೆಲ್ಲ ಏನು ಉಳಿಯಲಿಲ್ಲಾ
ಕವಚ ಬೆಳ್ಳಿ ಮಕಮಲು ರತ್ನದ ಹಿಡಿಕಿ ಹತಾರ ಹೋದವೆಲ್ಲಾ.
ಮುತ್ತಜ್ಜ ಹಿಡಿಯುವ ಪಿಸ್ತುಲ ಕಸಿದು ಹೋದರೊ ಕತ್ತಿ ಢಾಲಾ
ಹೋದ ಹತಾರಕ ಹೊಟಬ್ಯಾನಿ ಹಚಗೊಂಡು ನಿಂತರಣ್ಣ ಸಾವುದಕ ॥೨॥

ಹಲ್ಲಕಿತ್ತಿದ ಹಂಬಿನ ಪರಿಯು ನಮಗ ಆದಿತಲ್ಲಾ
ರಂಡಿ ಮುಸಕ ಹಾಕಿ ತಿರುಗಲು ನಮ್ಮ ಮಾನ ಉಳಿಯುವದಿಲ್ಲಾ.
ಮಗ್ಗಲದಾಗಿನ ಹೇಣ್ತಿಕೊಟ್ಹಾಂಗ, ಕೊಚ್ಚಿ ಆದೆವು ನಾವೆಲ್ಲಾ
ಸತ್ತ ಹೆಣ ಸಿಂಗಾರ ಮಾಡಿದ ಪರಿ ಪಾಲಿಗೆ ಬಂತಲ್ಲಾ.
ಸಾವುಕಾರ ತಮ ಜೀವ ಹೋತಂತ ಚಿಂತಿ ಮಾಡಿದರಲ್ಲಾ
ಹಗಲು ಮನೆಹೊಕ್ಕೂ ಹಣಾ ಒಯ್ದರೆ ಕೇಳುವರ್‍ಯಾರಿಲ್ಲ.
ಪುಂಡ ಪಾಳೆಗಾರಪಾಚ್ಛ್ಯ ವಜೀರರು ಪಂತಹಿಡಿಯಲಿಲ್ಲ
ದಂಡನಾಳುವ ಧೊರೆ ದೌಲತಂಜಿ ಕುಳಿತರಲ್ಲ.
ದೇವರು ತಂದ ಪಡಿಪಾಟಾ ಚಿಂತಿ ಹತ್ತಿ ಆದರೊ ನಷ್ಟಾ
ಅಧಿಕಾರ ಉಳಿಯಲಿಲ್ಲೊ ಎಳ್ಳಷ್ಟು ಕಡೆಗಾಲ ಬಂದಿತೆ ಕನಿಕಪ್ಪಾ.
ಹೆಂಗಸಾಗಿ ಸೀರಿಯ ಉಟ್ಟಾ, ಸೊಂಡಿ ಒಣಗಿತೊ ಬೊಬ್ಬಾಟಾ
ಆಥಂಗಾಂತೊ ಸ್ತ್ರೀಯರಾಟ, ಕಾಟ ಬಂಟ್ರಗೆ ಬಂತೊ ಬಿಕ್ಕಟ್ಟಾ.
ಪಕ್ಕಕಿತ್ತ ಹಾಕ್ಕಿಯಾಗಿ ಚಿಂತಿ ಆದರಣ್ಣ ಮನಕ ॥೩॥

ಹಲಗಲಿ ಹಳ್ಳಿ ಮಧೋಳ ಹತ್ತರ ಮೆರೆಯಿತೊ ಸುತ್ತಮುತ್ತ
ಪೂಜೇರಿ ಹನುಮಾ, ಬ್ಯಾಡರ ಬಾಲ ಜಾಡಗರಾಮ ಮಸಲತ್ತ.
ಕೈಯಾನ ಹತಾರ್ ಕೊಡಬಾರದೊ ನಾವು ನಾಲ್ಕು ಮಂದಿ ಜತ್ತ
ಹತಾರ ಹೋದಿಂದ ಬಾರದು ಜೀವ ಸತ್ತು ಹೋಗುದು ಗೊತ್ತ.
ಸುತ್ತ ಹಳ್ಳಿ ಮತ್ತು ದೊರೆಗಳ್ಗೆ ತಿಳಿಸರಿ ಹೀಂಗ ಅಂತ
ಕತ್ತಿ ಕಟಾರಿ ಕೊಡಬಾರದೆಂದು ನಮ್ಮ ಮಸಲತ ಈಗಂತ.
ಹೊಡಿರಿ ಜಗಳ ಕೂಡಿ ತೀರ್ತೇವು ಕುಮಕಿ ನಮ್ಮ ದ್ಯಾವತ್ತ
ಒಳಗಿಂದೊಳಗ ವಚನಕೊಟ್ಟರೊ ಬ್ಯಾಡರೆಲ್ಲ ಕಲ್ತ.
ಕಾರಕೂನನ ಕಪಾಳಕ ಬಡಿದರ ಸಿಪಾಯಿ ನೆಲಕ ಬಿತ್ತ
ಆಗಿಂದಾಗ ದುಃಖದ ಸುದ್ದಿ ಸಾಹೇಬಗ ಹೋಯ್ತ.
ಕೇಳಿ ಸಾಹೇಬ ಸಿಟ್ದಲೆ ತಿರುಗಿದ, ಸೇರಿದನಾಗ ಕಲಾದಗಿ
ಕರಿಸಿ ಕುಂದರ್ರಿ ಕೃಷ್ಣನಾಯಕ್ನ ಬಗೆಹರಿಸುದಕಾಗಿ
ಹಟ ಮಾಡಬಾರದು ಹತಾರ ಕೊಡ್ರಿ ಸಾಹೇಬನ ತಾಬಾಕ ॥೪॥

ಹತಾರ ಕೊಡಲಾಕ ಹೆಂಗಸಾಗಿ ಬಳಿ ಇಟ್ಟೆಲ್ಲೊ ಕೈಯಾಗ
ಬಂದವನ್ಯಾರೊ ಸುಮ್ಮನೆ ಹೋಗೊ, ಜೀವ ಹೋದರು ಕೊಡುದಿಲ್ಲೀಗ.
ಅಂದ ಮಾತು ಬಂದು ಹೇಳಿದನೆಲ್ಲ ಸಾಹೇಬಗಾವಾಗ
ಸಿಟ್ಟಲ ಮುಂಗೈ ಕಟ್ಟನೆ ಕಡಕೊಂಡ, ಹುಕುಮ ಕೊಟ್ಟ ಸಾಹೇಬಾಗ,
ಕುದರಿ ಮಂದಿ ಕೂಡಿ ಮುಟ್ಟಿತೊ ಹಲಗಲಿ ತಳದ ಮ್ಯಾಗ
ಒಳಗಿನ ಮಂದಿ ಗುಂಡಹೊಡಿದರೊ ಮುಂಗಾರಿ ಸಿಡಿಲ ಸಿಡಿದ್ಹಾಂಗ.
ಹೊರಗಿನ ಮಂದಿ ಗುಂಡಹತ್ತಿ ಸರಿದು ನಿಂತರೊ ಹಿಡಿದು ದಂಗ
ಕಾಗದ ಬರೆದು ಕುಳುವ್ಯಾರಬೇಗ, ದಂಡು ಬರಲೆಂತ ಹೀಂಗ.
ದಂಡ ಬಂದಿತೊ ತಯಾರಾಗಿ ಜಲದ ಮಾಡಿ ಹಲಗಲಿಗಿ
ಊರಿಗೆ ರಾತ್ರ ಮುತ್ತಗಿ ಹಾಕ್ಯಾರೊ ನಡುರಾತ್ರಿಗೆ ಹೋಗಿ.
ಗುಂಡು ಹೊಡಿದರೊ ವಿಪರೀತ ಸೂರಿ, ಅಂಜಿ ಓಡಹತ್ತಿತೊ ಮುಂದಾಗಿ
ಬೆನ್ನಹತ್ತಿ ನೋಡಿದರಿವರ, ಬಿದ್ದವು ಹೆಣಗಳು ಸಾವಿರಾಗಿ
ಮುತ್ತಿಗೆ ಹಾಕಿ ಕತ್ತಲೆ ಕಡಿದರು, ಅಂಜಲಿಲ್ಲಣ್ಣ ಯಾತಕು ಮಂದಿ ॥೫॥

ಬೆನಬೆನ್ಹತ್ತಿ ತಿರಿತಿರ್ವಿ ಕಡಿದರೊ ಏನು ಉಳಿಯದ್ಹಂಗ
ನಡುವೆ ಹಾಕ್ಕೊಂಡು ಹೊಡೆದರೆ ಗುಂಡ ಕರುಣ ಇಲ್ಲದ್ಹಂಗ.
ಕವಾತ ಫೈರಾ ಸುತ್ತಗಟ್ಟಿ ತುಂಬ ನಡಿಸ್ಯಾರೊ ಆಗ
ತೋಫು ತುಬಾಕಿ ಕುರುಳಿ ಪಿಸ್ತುಲ ಬಾಕ ಸಹಿತ ನಡುವಿನಾಗ.
ಸಿಡಿಲಿನ್ಹಂಗ ಗುಂಡ ಹೊಡಿಯುತ ಕತ್ತಿಲೆ ಕಡಿದರ ಒಳಿತ್ಹಾಂಗ

ನಡುಗಿತು ಬ್ಯಾಡಕಿ ಕೆಂಧೂಳ ಹರಿದು ಕಡಿದಾಟವು ಹ್ಯಾಂಗ.
ಕಡೆಗಾಲ ಬಂತೊ ನಡುವೆ ಸಿಕ್ಕರೊ ಬಿಡಿಸುವರ್‍ಯಾರೊ ಈಗ
ಚಟಕಾರರು ಚೌಕಿ ಮಾಡುತ, ನಡೆದರೊ ಹೇಳದೆ ಗುಡದಾಗ.
ಅಗಸಿಗೆ ಬಂದು 'ಹೆಬಲಕ' ಸಾಬ ಹೇಳತಾನ ಬುದ್ಧಿ ಮಾತ
ಕೊಡತಿವಿ ಕುಬುಲ ಕೇಳರಿ ಮಾತ ಹೋಗಬ್ಯಾಡರಿಸತ್ತ.
ಅನುವ ಮಾತಿಗೆ ನಂಬಿಗೆ ಸಾಲದೆ 'ಹನುಮ' ಬಂದನೊಮುಂದಿತ್ತ ॥೬॥

ಜಡಗ ಹೇಳತಾನೊ ಹೊಡಿಯರಿ ಇವರ ಪೂರ ಘಾತಕರಾ
ಇಸವಾಸ ಘಾತಕ ಮಾಡಿದರಿವರ, ನಂಬಿಗಿಲ್ಲ ನಮಗ ಪಿತೂರಾ.
ಮೋಸ ಮಾಡಿ ನಮ ದೇಶ ಗೆದಿತಾರೊ ಮುಂದ ನಮಗ ಘೋರಾ
ಅಂದು ಹೊಡಿದಾನೊ ಒಂದು ಗುಂಡಿಗೆ ಆದ ಸಾಹೇಬ ಟಾರಾ.
'ಕಾರ' ಸಾಹೇಬ ಬೆಂಕಿ ಚೂರಾದ, ಲೂಟ ಮಾಡಂತನೊ ಊರಾ
ಸಿಟ್ಟಿಲೆ ಹೊಡೆದರು ಸಿಡಿಲ ಸಿಡಿದ್ಹಾಂಗ ಗುಂಡು ಸುರಿದಾವೊ ಭರ್‌ಪೂರಾ.
ಹನುಮ ಹೇಳತಾನ ಗುಂಡುಹೊಡಿದು ಕೆರ ಕೆಡವುನಷ್ಟ ಭಾರಾ
ಮುನ್ನುರ ಮಂದಿ ಮೈಮ್ಯಾಗ ಬಂದರ ಆಗ ನೋಡೊ ಜೋರಾ.
ಭೀಮನು ಇದುರಿಗೆ ನಿಂತಾ ಐನೂರ್‍ಮಂದಿಗೆ ಮತ್ತಾ
ಬಾಲನು ಮಾಡಿದ ಕಸರತ್ತಾ, ಕುದುರಿಯ ಕಡಿದು ಹತ್ತಿಪ್ಪತ್ತಾ.
ರಾಮನ ಕಡಿತ ವಿಪರೀತಾ, ಕಾಲುವೆ ಹರಿಯಿತೊ ರಕ್ತಾ
ಸಾವಿರ ಆಳಿಗೆ ಒಬ್ಬ ಕೂಗತಾನೊ ಕಡಿಕಡಿರಿ ಅಂತ ಮತ್ತಾ.
ನಾಲ್ಕು ಮಂದಿ ಹಿಂಗ ಕಡಿದು ಸತ್ತರೊ ಹಲಗಲಿ ಬಂಟರಣ್ಣ ಜನಕ ॥೭॥

ಯಾರು ಕೇಳಲಿಲ್ಲ ಆರು ಗುಂಡು ತಾಕಿ, ಹನುಮ ಬಿದ್ದನೊ ನೆಲಕ
ಚೀರಾಡುತ ಜನ ಸುತ್ತುಗಟ್ಟಿತೊ ಅಂಜಿ ತಮತಮ್ಮ ಜೀವಕ.
ಶೂರ ಒಬ್ಬ ಜೋರ ಮಾಡಿದ, ಕೈಯಾಗ ಹತ್ತಾರ ತಗೊಳ್ಳುದಕ
ಏರಿಬರು ಕುದುರಿ ಕಾಲ ಕಡಿದನೊ, ಸ್ವಾರ ಬಿದ್ದನೊ ನೆಲಕ.
ರಾಮಿ ಗುಂಡಿಲಿ ಜೋರಿಲಿ ಹೊಡಿದಾಳೊ ಮೂರ ಮಂದಿ ಶಿರಕ
ಆರು ಕುದುರಿಯ ಕಡಿದು ಸಿಡಿದಳೊ, ವೀರಬಾಲನ ಹುಡುಕುದಕ.
ಯಾರು ಊರಾಗ ಇಲ್ಲದಾಯಿತು, ಊರಾಯಿತೊ ಲೂಟಾ
ಮನಿಮನಿಹೊಕ್ಕು ದಂಡು ಹುಡಿಕಿತು ದನಕರ ಸಹಿತ ಲೂಟಾ.
ಕೂಸು ಕುನ್ನಿ ಹೋದಾವೊ ಸತ್ತ ; ಬೆಂಕಿ ಹಚ್ಯಾರೊ ಕೂತ
ನಷ್ಟ ಆತು ನೋಡರಿ ಈವತ್ತ, ಕಂಡದ್ಹೇಳತೀನಿ ಈ ಮಾತ.
ಇಷ್ಟೆಲ್ಲ ಅಳುವಾಗಿ ಗತಿಗೆ ಮುಟ್ಟಲಿಲ್ಲ ಹಲಗಲಿ ಬಂಟರಣ್ಣ ಕಡಿಕಾ ॥೮॥

ಕತ್ತಿ ಕುದುರಿ ಮುತ್ತು ಮಾಣಿಕ ಯಾವದು ಬಿಡಲಿಲ್ಲಾ
ಸರಗಿ ಸರದಾಳಿ ಬುಗುಡಿ ಬಾವುಲಿ ಒಂದೊಂದುಳಿಯಲಿಲ್ಲಾ.
ಬೆಳ್ಳಿ ಬಂಗಾರ ಹರಳಿನುಂಗುರ ಹೊನ್ನುಂಗರ ಗೋಲಾ
ಕಡಗ ಕಂಕಣ ನಡುವಿನ ಡಾಬಾ ನಡುಕುಟ್ಟು ರುಮಾಲಾ.
ಕುಬುಸ ಸೀರಿ ಹಪ್ಪಳ ಸೆಂಡಿಗೆ ಕುರಚಿಗಿ ಕುಡಗೋಲಾ
ಕೊಡಲಿ ಕೋರೆ ಕುಡ ಕಬ್ಬಿಣ ಮೊಸರು ಬೆಣ್ಣೆ ಹಾಲಾ.
ಉಪ್ಪು ಎಣ್ಣೆ ಅರಿಸಿಣ ಜೀರಗಿ ಅಕ್ಕಿಸಕ್ಕರಿ ಬೆಲ್ಲಾ
ಗಂಗಳ ಚೆರಗಿ ಮಂಗಳಸೂತ್ರ ಹೋದವು ಬೀಸುಕಲ್ಲಾ.
ಹಾಳಾಗಿ ಹೋಯಿತು ಅತ್ತು ವರ್ಣಿಸಿ ಹೇಳಲಿ ನಾನೆಷ್ಟಾ
ಸಿಕ್ಕದ್ದು ತಗೊಂಡು ಸರ್ದನಿಂತರೊ, ಊರಿಗೆ ಕೊಳ್ಳಕೊಟ್ಟಾ
ಬೂದಿ ಮಾಡ್ಯಾರೊ ಹಲಗಲಿ ಸುಟ್ಟು ಗುರ್ತುಳಿಯಲಿಲ್ಲೆಳ್ಳಷ್ಟು
ಕಾಣದೆ ಹೋಯಿತೊ ಕೆಟ್ಟು ವರ್ಣಿಸಿ ಹೇಳಿದೆ ಕಂಡಷ್ಟು.
ಕುರ್ತಕೋಟಿ ಕಲ್ಮೇಶನ ದಯದಿಂದ ಹಾಡಿದೆನಣ್ಣ ಜನಕಾ ॥೯॥

'ಹಲಗಲ ಕತ್ತೀ ಕದನ'ವು ಒಂದು ಐತಿಹಾಸಿಕ ಲಾವಣಿಯು. 'ರಾಣೀ ಸರಕಾರವು 'ಕುಂಪಣಿ'ಯವರಿಂದ ಹಿಂದೂಸ್ತಾನದ ರಾಜ್ಯಸೂತ್ರಗಳನ್ನು ತಕ್ಕೊಂಡ ಮೇಲೆ ೧೮೬೦ ರಲ್ಲಿ 'ಶಸ್ತ್ರಾಸ್ತ್ರ ಶಾಸನ'ವನ್ನು ಅಮಲಿನಲ್ಲಿ ತಂದಿತು. ಹಲಗಲಿ ಕದನವು ಇದೇ ಸಮಯಕ್ಕೆ ಸಂಭವಿಸಿರಬಹುದು. ಅದರ ಸಂಗತಿಗಳು ಲಾವಣಿಯಲ್ಲಿ ನಂಬಲರ್ಹವಾಗಿವೆ; ಅತಿಶಯೋಕ್ತಿಗಳೇನೊ ಕಂಡುಬರುವುದಿಲ್ಲ. ಆದುದರಿಂದ ಇದನ್ನು ರಚಿಸಿದ ಕವಿಯು ಈ ಕದನವು ಸಂಭವಿಸಿದ ಕಾಲಕ್ಕೆ ಇರಬಹುದೆಂದು ಊಹೆ. ಅಲ್ಲದೆ, "ಕಾಣದೆ ಹೋಯಿತೊ ಕೆಟ್ಟು, ವರ್ಣಿಸಿ ಹೇಳಿದೆ ಕಂಡಷ್ಟು" ಎಂದು ಕೊನೆಯಲ್ಲಿ ಕವಿಯು ಹೇಳಿದ್ದಾನೆ. ಇವನು ತನ್ನ ಹೆಸರನ್ನು ಲಾವಣಿಯಲ್ಲಿ ಎಲ್ಲಿಯೂ ಹೇಳಿಲ್ಲ. "ಕುರ್ತಕೋಟಿಯ ಕಲ್ಮೇಶನ ದಯದಿಂದ" ಎಂದು ಹಾಡಿರುವ ಮೂಲಕ ಇವನು ಕುರ್ತಕೋಟಿಯವನಿರಬೇಕೆಂದೂ ಕಲ್ಮೇಶನ ಭಕ್ತನಾಗಿರಬೇಕೆಂದೂ ತೋರುತ್ತದೆ.

ಸಂಗೊಳ್ಳಿ ರಾಯಣ್ಣ ಮೊದಲಾದ ಕೆಲವು ಲಾವಣಿಗಳನ್ನು ಡಾ. ಫ್ಲೀಟರು Indian Antiquery Vol XVIIIದಲ್ಲಿ ಅಚ್ಚು ಹಾಕಿಸಿದ್ದಾರೆ. ಸಂಗೊಳ್ಳಿ ರಾಯಣ್ಣನು ಕಿತ್ತೂರ ಸಂಸ್ಥಾನವನ್ನು ಪ್ರತಿಷ್ಠಾಪನೆ ಮಾಡಲಿಕ್ಕೆ ಹೆಣಗಾಡಿದ ಬಂಟ.[೫] ಇಂತಹ ಐತಿಹಾಸಿಕ ಲಾವಣಿಗಳಲ್ಲದೆ ಅನೇಕ ಸಾಮಾಜಿಕ ಲಾವಣಿಗಳನ್ನೂ ಕಾಣಬಹುದು. 'ಹೊಂಗಲ ಸಂಗ್ಯಾ' ಮೊದಲಾದ ಲಾವಣಿಗಳೇ ಇದಕ್ಕೆ ನಿದರ್ಶನ. 'ಸಂಗ್ಯಾ ಬಾಳ್ಯಾ'ನ ಬೈಲಾಟ ನೋಡದ ಹಳ್ಳಿಗಳು ಉತ್ತರ ಕರ್ನಾಟಕದಲ್ಲಿ ಇಲ್ಲವೆಂದರೆ ಅತಿಶಯೋಕ್ತಿಯಾಗದು. ಇದಕ್ಕೆ 'ಗಂಗೀ' ಆಟವೆಂದೂ ಕರೆಯುತ್ತಾರೆ. ಬಡರೈತ 'ಸಂಗ್ಯಾನು' ಸಾಲಕೊಟ್ಟ ಸಾವುಕಾರ ಚೆನ್ನಬಸವಣ್ಣನನ್ನು ಖೂನೀ ಮಾಡಿದ್ದೇ ಇದರ ಮೂಲಕಥೆ.

ಬಡತನವೆಂಬುದು ಬಲುಕಷ್ಟ। ಬಡವಗಬಂತೊ ಬಹುಸಿಟ್ಟ।
ಸಾವಕಾರ್‍ರ ಸಾಲಾ ಕೊಡಬೇಕಾದರ। ಸಂಗ್ಯಾಗ ಆಯಿತೊ ಸಂಕಷ್ಟ ॥ಪ॥

ಎಂದು ಹಾಡು ಮೊದಲಾಗುತ್ತದೆ. ಸಾಧಾರಣವಾಗಿ ಇಂತಹ ಚಿತ್ರಗಳನ್ನು ಈಗಲೂ ಜನಪದದಲ್ಲಿ ಕಾಣಬಹುದು. ಹಣೆಯಬರಹವನ್ನು ತಪ್ಪಿಸಲು ಅದಾರಿಗೆ ಸಾಧ್ಯ! ನಸಿಬದಾಟವನ್ನು ಈ ಲಾವಣಿಯಲ್ಲಿ ಕಾಣಬಹುದಾಗಿದೆ. ಸಮಾಜದ ಕೊಳಚನ್ನೂ ಎತ್ತಿ ಹಾಡುವ ಹಲಕೆಲವು ಲಾವಣಿಗಳುಂಟು. 'ಜೀವನ ಸಂಗೀತ'ದಲ್ಲಿಯ 'ಅಪ್ಪೂರ ಮಾತಿದು' ಎಂಬ ಲಾವಣಿಯು ಇಂದಿನ ನಾಗರಿಕತೆಯ ಅಣಕವಾಡಾಗಿದೆ.

ಅಪ್ಪೂರ ಮಾತಿದು ನಿಪ್ಪೂರ ಹೇಳತೀನಿ
ಬಿಟ್ಟಿಲ್ಲ ತುಂಬಿಽತು ಜಗವೆಲ್ಲಾ।
ಹೊಟ್ಟೆಯಂಥ ವೈರಿ ಯಾವುದಿಲ್ಲಾ
ರೊಟ್ಟಿಯಂಥ ಮೈತರು ಇಲ್ಲಾ॥ *–ಜೀ–ಸಂ.–*

ಇಂದಿನ ಜಗತ್ತಿನಲ್ಲಿ ಹೊಟ್ಟೆಯ ಪ್ರಶ್ನೆಯು ದೊಡ್ಡದಾಗಿದೆ. ಶಿಕ್ಷಣ ಕ್ರಮವು ನಮ್ಮನ್ನು ನೈತಿಕ ಮಟ್ಟದಿಂದ ಜಗ್ಗಹತ್ತಿದೆ.

ಹಿರಿಯಽರ ಕಿರಿಯಽರ ಮರಿಯಾದೆ ಉಳದಿಲ್ಲ
ಕಾಯ್ದೆ ಬುಕ್ಕ ಓದಿದ ಮ್ಯಾಲೆ॥....
ಸಾಲಿಗ್ಹಾಕಿ ಮಗನ ಶಾಣೇರ ಮಾಡತೀರಿ
ಹೆಂಡಿ – ತಿನೂದು ಇವರು ಬಿಟ್ಟಿಲ್ಲ।
ಸಾಲಿಕಲ್ತವರೆಲ್ಲ ಶಾಣ್ಯಾರ‍್ಯಾಕ ಆಗಿಲ್ಲ?
ತಿನ್ಲಾಕ – ಮನಿಯಾಗ ಕೂಳಿಲ್ಲ॥ *–ಜೀ.ಸಂ.–*

ಹೀಗೆ ಅದೆ ನಮಗೆ ದೊರೆಯುವ ಶಾಲೆ ಕಾಲೇಜುಗಳಲ್ಲಿಯ ವಿದ್ಯಾಭ್ಯಾಸ.

ಕಮಾನ ಝುಟ್ಟ ಬಿಟ್ಟು ಕಾಲಾಗಬೂಟ ಮೆಟ್ಟು
ಕೋಟ ತೊಟ್ಟು ಮಾಡತಾರ ಒಣಡೌಲಾ।
ಹೆಂಡ್ರು ಹಾದರ ಮಾಡಿದರ ಗಂಡ ರೊಕ್ಕ ಇಸ್ಗೋತಾನ
ಬರದೈತಿ ಅವರಿಗೇನು ಬಿಟ್ಟಿಲ್ಲ॥ *–ಜೀ.ಸಂ.–*

ಇದೆಲ್ಲವೂ ಕಾಲಮಾನದ ಆಟವೆಂದು ಜಾನಪದ ಕವಿಯು ಉದ್ಗಾರ ತೆಗೆದಿದ್ದಾನೆ. ಇಂದಿನ ಜೀವನವನ್ನು ಮುಚ್ಚುಮರೆ ಮಾಡದೆ ಹೇಳುವ ಈ ಹಾಡು ಯಾರ ಮನಕ್ಕೆ ತಾಗಲಿಕಿಲ್ಲ? ನಾಡಿಗರೆಂದು ಜಂಬ ಕೊಚ್ಚಿಕೊಳ್ಳುವ ನಾವು ಇದನ್ನು ಕೇಳಿ ನಾಚಿ ನಡೆಯಬೇಕು. ನಮ್ಮ ಇರುವಿಕೆಯು ಎಷ್ಟು ಜೊಳ್ಳಿದೆ, ಅದು ನಮ್ಮ ರಾಷ್ಟ್ರೋನ್ನತಿಗೆ ಎಷ್ಟು ತೊಡಕಾಗಿದೆ ಎಂಬುದನ್ನರಿತು ಸ್ವಾತಂತ್ರ್ಯ ದೊರಕಿಸಿದ ನಾವು ರಾಷ್ಟ್ರದ ಅಡಿಗಲ್ಲನ್ನು ತೂಕಮಾಡಿ ಹಾಕಬೇಕಲ್ಲವೇ? ಹಳ್ಳಿಗಳೇ ಬೆನ್ನ ಮೂಳೆಯಾದ ನಮ್ಮ ರಾಷ್ಟ್ರವು ಪ್ರಗತಿಯಾಗಬೇಕಾದರೆ, ಮೊದಲು ಹಳ್ಳಿಗಳು ಪ್ರಗತಿಯನ್ನು ಹೊಂದಬೇಕಲ್ಲವೇ? ಸಮಾಜದ ಕುಂದುಕೊರತೆಗಳನ್ನು ಹೇಳುವ ಇಂತಹ ಲಾವಣಿಗಳು ಇಂದು ನಮಗೆ ಅವಶ್ಯವಾಗಿರಬೇಕು. ಅವುಗಳ ಸಂಗ್ರಹವು ಜನತೆಯ ಉನ್ನತಿಗೆ ಅತಿ ಮಹತ್ವದ್ದು.

ಜೀವನದ ತಿಕ್ಕಾಟ ಮುಕ್ಕಾಟಗಳಲ್ಲಿ ಮಾನವನಿಗೆ ಶೃಂಗಾರವು ಸಿಂಪಿನಲ್ಲಿದ್ದ ಮುತ್ತಿನಂತೆ. ಹಳ್ಳಿಗರಿಗೆ ಅದು ಸಹಜ ಬಂದುದು. ಜೌವನದ ಜೋಲಿಯನ್ನು ಹಿಡಿಯಲು ಯಾರಿಗೆ ತಾನೇ ಸಾಧ್ಯ? ಹರೆಯದ ಗುಂಗಿನಲ್ಲಿ, ಕಾದನೆತ್ತರದ ಹರಿದಾಟದಲ್ಲಿ ಮಾನವನು ತನ್ನನ್ನು ತಾನೇ ಮರೆಯುವನು. ಪ್ರೇಮವು ಸುರಳಿತ ಕೂಡಿದರೆ ಕಲ್ಯಾಣವು. ಒಮ್ಮೊಮ್ಮೆ ಸಮಾಜ ಕಟ್ಟಳೆ ಮೀರಿ ದುರಂತಗಳಾಗುವ ಸಂಭವಗಳೂ ಉಂಟು. ಇಂತಹ ಸನ್ನಿವೇಶದಲ್ಲಿ ಒಮ್ಮೆ ಹೆಣ್ಣು ಅಗ್ರಗಾಮಿಯಾಗುವುದು. ಒಮ್ಮೆ ಗಂಡು ಮುಂದಾಳಾಗುವುದು. ಪ್ರೇಮಯಾತ್ರೆಯು ಸುರಳಿತ ಸಾಗುವುದು ಬಲು ಕಷ್ಟ. ಅನೇಕ ಅಘಟಿತ ಘಟನೆಗಳಿಗೆ ಈಡಾಗಿ ಪ್ರೇಮಿಗಳು ಪೇಚಾಡುವದೇ ಹೆಚ್ಚು. ಇಂತಹ ಅನೇಕ ಸನ್ನಿವೇಶಗಳನ್ನು ಪ್ರತ್ಯಕ್ಷ ಕಂಡು ಜನಪದ ಕವಿಯು ತನ್ನ ಅನುಭವಗಳನ್ನು ಹಾಡಿನಲ್ಲಿ ಜನತೆಯೆದುರು ತೋಡಿಕೊಳ್ಳದಿರನು. ಇವೇ ಇಂದು ಕರ್ನಾಟಕದಲ್ಲಿ ನಾವು ಕರೆಯುವ 'ಶೃಂಗಾರ ಲಾವಣಿಗಳು.' ಈ ಲಾವಣಿಗಳು ವಿಶೇಷವಾಗಿ 'ತುರಾ'[೬] ಮತ್ತು 'ಕಲ್ಕಿ'[೭]ಗಳೆಂಬ ಲಾವಣಿಗಾರರ ಸಂವಾದಗಳಾಗಿ ಬಳಕೆಯಲ್ಲಿ ಬಂದಿವೆ. ಕೆಲವೇ ವರುಷಗಳ ಹಿಂದೆ ಈ ಲಾವಣಿಕಾರರು ಕರ್ನಾಟಕದ ತುಂಬೆಲ್ಲ ತಿರುಗಾಡುತ್ತಿದ್ದರು. ಅವರಿಗೆ ಆದರ ಮನ್ನಣೆಯಿತ್ತು. ಹಿಂಡುಗಟ್ಟಿ ಜನವು ತಮ್ಮ ಕೈಕೆಲಸಗಳನ್ನು ಬಿಟ್ಟು ಇವರ ಲಾವಣಿಗಳನ್ನು ಕೇಳುತ್ತಿರಲು

---

೫. ಭಾಗ–೨ ಐತಿಹಾಸಿಕ ಸಂಗತಿಗಳು 'ಕಿತ್ತೂರು' ಈ ಪ್ರಕರಣ ನೋಡಿರಿ

೬. 'ತುರಾ' – 'ಹರಿದಾಸರು': ಪುರುಷ ಪ್ರಾಧಾನ್ಯತೆಯು ಹಾಡಿನಲ್ಲಿ. ಈ ಲಾವಣಿಗಾರರಿಗೆ 'ಹರಿದಾಸ'ರೆಂದೂ ಕರೆಯುತ್ತಾರೆ.

೭. 'ಕಲ್ಕಿ' – 'ನಾಗೇಶರು' – ಸ್ತ್ರೀ ಪ್ರಾಧಾನ್ಯತೆಯ ಹಾಡಿನಲ್ಲಿ. ಈ ಲಾವಣಿಗಾರರಿಗೆ 'ನಾಗೇಶ'ರೆಂದೂ ಕರೆಯುತ್ತಾರೆ.

ಸಾಕು. ತೀರ ಇತ್ತೀಚೆಗೆ ವಾಕ್‌ಚಿತ್ರಗಳೂ, ಬಾನುಲಿಯೂ ಹಾಡಹತ್ತಿದಂದಿನಿಂದ ಲಾವಣಿಗಳು ಜನತೆಯಲ್ಲಿ ಕಡಿಮೆಯಾಗಹತ್ತಿವೆ. ಈಗಂತೂ ಇವರ ಸದ್ದು ತೀರ ಕೇಳಬಾರದಿರುವುದು ಈ ಲಾವಣಿಗಳ ಅವಸಾನ ಕಾಲವೆಂದೇ ಹೇಳಬಹುದು. ಇವುಗಳ ಸಂಗ್ರಹ ಕೆಲಸವು ನಡೆದಿಲ್ಲವೆಂದು ಬರೆಯಲು ತುಂಬ ವಿಷಾದ. ಇಲ್ಲಿಯವರೆಗೆ ಹಲಸಂಗಿ ಗೆಳೆಯರ ಗುಂಪಿನ 'ಜೀವನ ಸಂಗೀತ'ವೆಂಬ ಒಂದೇ ಒಂದು ಉತ್ತಮ ತರಗತಿಯ ಸಂಗ್ರಹವಾಗಿದೆ ಎಂದು ಹೇಳಬಹುದು. ರಸ, ಧ್ವನಿಗಳನ್ನು ಸೂರೆಗೊಳಿಸುವ ಈ ಹಾಡುಗಳು ನಿಜವಾಗಿಯೂ 'ಜೀವನ ಸಂಗೀತ'ವೆಂದೇ ಹೇಳಬೇಕು. ಈ ಪುಸ್ತಕದಲ್ಲಿಯ 'ಅಸಲಜಾತ ಹೆಣ್ಣು,' 'ಸಂಪಿಗಿ ತೆನೆಯಂಥ ಹುಡುಗ' ಎಂಬ ಎರಡು ಲಾವಣಿಗಳು ಶೃಂಗಾರರಸದ ಸುರಿಮಳೆಯಾಗಿವೆ.

ಗರಾಗರಾ ತಿರವತೇ ಕಣ್ಣಾ
ಕೆಂಪ ಮೈ ಬಣ್ಣ
ಬೇತಲ ಸಣ್ಣ। ಕತ್ತಿ ಧಾರಿ।

ನಿನ್ನ ಕಂಡು ಪಕ್ಷಿಗಳು ನಿಂತು ಹೌಹಾರಿ।
ನಿನ್ನ ನಡಗಿ ನೋಡಿ ನವಲ ಕುಣಿವುದ ಮರೆತಿತರಿ।

ನಿನ್ನ ಶಬ್ದ ಕೇಳಿ ಆಯ್ತು ಲುಬ್ದ
ಕೋಗಿಲ ನಾಚಿ ಕದ್ದ
ವನಾಬಿಟ್ಟು ಎದ್ದ। ಹೋಯ್ತು ಹಾರಿ॥ *–ಜೀ.ಸಂ.–*

ಎಂದು ಗಂಡು ಹೆಣ್ಣನ್ನೊಲಿಸುವ ಮುಖಸ್ತುತಿ ಇದು. ಮುಖಸ್ತುತಿಗೆ ಮೆಚ್ಚದವರಾರು? ಹೆಣ್ಣು ಹಲಕೆಲವು ಲೋಕರೂಢಿಯ ಮಾತುಗಳನ್ನಾಡಿದರೂ ಮಾಯಾ ಮೋಹದ ಜಾಲದಲ್ಲಿ ಮನಸೋಲುವುದು.

ನಿನ್ನ ಮಾತ ಅನುವದಿಲ್ಲ ಸುಳ್ಳ
ರತ್ನದ ಹಳ್ಳ
ಆದೆನಾ ಮಳ್ಳ, ನಿನಗ ನೋಡಿ।

ಈ ಹೆಣ್ಣ ಗಂಡ ಶಿವ ಹುಟ್ಟಿಸಿದಾನ ಜೋಡಿ।
ಇರಲು ಎಂಬತ್ತು ಕೋಟಿ ಜೀವರಾಸಿ ಮೊದಲ ಮಾಡಿ।

ಹೆಚ್ಚು ಕಮ್ಮ ಮಾಡಿಲ್ಲ ಗುರುರಾಯ
ತತ್ವದ ಕಾಯ।
ಮನ್ಮಥಕ ಮಾಯ। ಪ್ರೀತಿ ಕೂಡಿ॥ *–ಜೀ.ಸಂ.–*

ಎಂಬ ಗಂಡಿನ ಮಾತಿಗಂತೂ ಹೆಣ್ಣು ಕಾಮರಸದೊಡನೆ–

ಕೇಳಿ ಮಾಯ ಬಂತ ಮನಕರಗಿ
ಹೇಳತಾಳ ತಿರಗಿ
ಇಬ್ಬರದು ವಾರಿಗೀ। ಒಂದೆಜತ್ತಾ।

ನಮ ನಿಮದ ಪಣಾ ಇಂದ ಕೂಡಿ ಬಂತು ವರತಾ।
ನಮ ಮನಿಗಿ ಬಂದ್ರ ಬೋಚಾಟ ಆಗುದು ತುರ್ತ।
ನಿಮ್ಮ ಮನಿಗಿ ಬರತ ನಡಿ ಚದರ

ಹಿಡಿದ ನಿಮ ಪದರ
ಹುಣ್ಣಿವಿಚಂದರ್। ನಿಮ್ಮ ಸುರತ॥ *–ಜೀ.ಸಂ.–*

ಎಂದು ಹೆಣ್ಣು ಹೆಣ್ಣಾಗಿಯೇ ಬಿಡುವುದು. ಇನ್ನೊಂದೆಡೆಯಲ್ಲಿ ಹೆಣ್ಣು ಗಂಡಿನ ಮುಖಸ್ತುತಿ ಮಾಡುವುದನ್ನು ಕಾಣಬಹುದು.

ಸಂಪಿಗಿ ತೆನಿಯಂಥ ಹುಡುಗ
ಸಂತ್ಯಾಗ್ಹಾಯ್ದು ಹೋಗ್ತಾನ
ಹಂತೀಲ್ಹೋಗಿ ಕೇಳತೀನ ಹೆಸ್ಸರ್।

ನನ್ನ ಕಾಂತನ ರೂಪ ಹೊಂಟಂಗ ಹುಣ್ವಿಚಂದ್ಸರ್।
ಇವನ ಚಿಂತಿಯೊಳಗ ಜೀವಕಿಲ್ಲ ಸ್ಥಿರಾರ।
ಕನಸೀನಾಗ ಕಂಡಾಂಗಾಯ್ತು
ಮನಸೀನಂದು ಹೋಗವೊಲ್ದು
ಹಲಸಂಗಿ ಊರಾಗಿಲ್ಲ ಇವನ್ಹಂತ ವರಾ॥ *–ಜೀ.ಸಂ.–*

ಈ ಎಲ್ಲ ಲಾವಣಿಗಳಲ್ಲಿ ಕವಿಯ, ಶಬ್ದಗಳ ಚಣತ್ಕಾರದ ರಾಗದೊಂದಿಗೆ ಶೃಂಗಾರ ರಸವು ಪುಟಿ ಪುಟಿದು ಹರಿದು ಬರುತ್ತಿದೆ. ಈ ಎರಡೂ ಲಾವಣಿಗಳಲ್ಲಿ ಕವಿಯು ಶೃಂಗಾರದ ಮಟ್ಟನ್ನು ಎಲ್ಲಿಯೂ ಮೀರಿಲ್ಲ. ಅದನ್ನು ಹೇಗೆ ಬಳಸಿಕೊಳ್ಳಬೇಕೊ ಹಾಗೆ ಹಿತಮಿತವಾಗಿ

ಬಳಸಿಕೊಂಡಿದ್ದಾನೆ. ಹರೆತುಂಬಿದ ಜೀವಗಳು ಈ ಹಾಡುಗಳನ್ನು ಕೇಳಿ ಪುಳುಕದಿರುವುವೇ? ಇಂತಹ ಶೃಂಗಾರವನ್ನು ತಾನು ಮನಸೋಲದೆ ಹಾಡುವ ಕವಿಯು ಧನ್ಯನಲ್ಲವೇ?

'ದುಂದುಭಿಗಳು' ಕನ್ನಡಿಗರಿಗೇನು ಅಪರಿಚಿತವಲ್ಲ. ಶಿವಶರಣರು ತಮ್ಮ ಕಾಲಜ್ಞಾನದ ಹಾಡುಗಳನ್ನು, ಹೋಳಿಯ ದುಂದುಮಿಯಲ್ಲಿ ಹಾಡಿದ್ದಾರೆ. ಬಸವಣ್ಣನವರು ಹಾಡಿದ 'ಕಲಿಕಾಲಹೋಳಿ'ಯು ದುಂದುಮಿಯಲ್ಲಿದೆ. ಅದರ ಕೆಲವು ತಾಡೋಲೆಗಳ ಗರಿಗಳು ಗದ್ದಗಿ ಮಠದಲ್ಲಿದ್ದುವು. ಅವುಗಳನ್ನು ಶ್ರೀ ಜಂಗಿನ ಮುರಗೆಯ್ಯನವರು ಒಯ್ದು ಅಚ್ಚು ಹಾಕಿಸಿದರು. ಅವು ಬೆಡಗಿನ ಕಾಲಜ್ಞಾನ ದುಂದುಮಿಗಳಿದ್ದವೆಂದೂ, ಅವುಗಳ ಅರ್ಥವು ಗಹನವಾಗಿದ್ದುದರಿಂದ ತಿಳಿಯಲು ಬಹಳ ಕಠಿಣವಾಗಿತ್ತೆಂದೂ, ತಿಳಿದು ಬರುತ್ತದೆ. ಕೆಲವೇ ಪ್ರತಿಗಳನ್ನು ತೆಗೆಸಿದ್ದರಿಂದ ಈಗ ಪ್ರತಿಗಳು ಸಿಗುವದಿಲ್ಲ. ಮೂಲಪ್ರತಿಯು ಮುರಿಗೆಯ್ಯನವರ ಬಳಿಯಲ್ಲಿ ಉಳಿದಿದೆ–

'ದುಂದುಭಿ' ಹಾಗೂ 'ದುಂದುಮಿ' ಇವು ಎರಡೂ ಭಾಜನೆಗಬ್ಬಗಳಿದ್ದರೂ, ಹಾಡುವ ತಾಳ, ಲಯ, ಗತಿ, ರಾಗ ಮೊದಲಾದುವುಗಳು ಬೇರೆ ಬೇರೆ ಇವೆ. 'ದುಂ' 'ದುಂ' ಎಂಬ ಸಪ್ಪಳಮಾಡುವ ವಾದ್ಯಗಳನ್ನು ಬಾರಿಸಿ ಹಾಡುವ ವಾಡಿಕೆಯು ಮೊದಲಿನಿಂದಲೂ ಬಂದಿವೆ. ಅದು ಯಾವ ದಿನವೇ ಇರಲಿ, ಪರಸಿ ಕೂಡಿದಾಗ ಇವುಗಳನ್ನು ಹಾಡುತ್ತಿದ್ದರು. ಅರಸಂಗಳದಲ್ಲಿ ವಿಶೇಷವಾಗಿ ದುಂದುಭಿಗಳನ್ನು ಹಾಡುತ್ತಿದ್ದರು. ದುಂದುಭಿ ವಾದ್ಯಗಳ ಜೋಡಣೆಯು ಅರಸಂಗಳದಲ್ಲಿಯೇ ಇರುತ್ತಿತ್ತೆಂದು ಕಾಣುತ್ತದೆ. ರಾಜನು ದಿಗ್ವಿಜಯಕ್ಕೆ ಹೊರಟನೆಂದರೆ ಮೊದಲು ಕೆಲವು ದಿನಗಳವರೆಗೆ ದಂಡಿನಲ್ಲಿ ವಿಜಯ ದುಂದುಭಿಗಳೇ ಮೊಳಗುತ್ತಿದ್ದುವು. ಅರಸಂಗಳದಲ್ಲಿ ಜನರು ಕೂಡಿದಾಗ 'ದುಂದುಭಿಗಳು' ನಡೆಯುತ್ತಿದ್ದುವು. ಮೊದಲು 'ದುಂದುಭಿ' ವಾದ್ಯವನ್ನು ಬಾರಿಸಿ, ಜನತೆಯ ಸದ್ದನ್ನಡಗಿಸಿ, ಹಿಂದಿನಿಂದ ಹಾಡು ಪ್ರಾರಂಭವಾಗಲು, ದುಂದುಭಿ ವಾದ್ಯದ ಕೆಳದನಿಯ ಗತ್ತನ್ನು ಹಾಡಿನೊಡನೆ ಕೂಡಿಸುತ್ತಿದ್ದಂತೆ ಕಾಣುತ್ತದೆ. ಆಗ ಅದಕ್ಕೆ ಬರುವ ಮಾರ್ದವವನ್ನು ಕೇಳಿ ತಣಿಯಬೇಕಲ್ಲದೆ ಅದನ್ನು ಇಲ್ಲಿ ಬರೆಯಲಾಗದು. ದುಂದುಭಿಗಳು ವಿಶೇಷವಾಗಿ ಸರಳ ರಗಳೆಯ ಚೌಪದಿಗಳಿದ್ದರೂ ಜಾನಪದ ಕವಿಯು ಆದಿ ಪ್ರಾಸವನ್ನು ಮರೆತಿಲ್ಲ.

'ದುಂದುಮಿ'ಯು ಹೋಳಿಯ ಪದದ ಒಂದು ಉತ್ಕೃಷ್ಟವಾದ ಕುಸುರು. ಇದನ್ನು ಮೋಜು ಮಜಲುಗಳೊಡನೆ ಕರಡೆಯ ಬಾರಿಸಿ, ತಾಳ, ಲಯ, ಗತ್ತುಗಳೊಡನೆ ಹಾಡುವ ವಾಡಿಕೆಯು ಕರ್ನಾಟಕದಲ್ಲಿ ಶಿವಶರಣರ ಕಾಲದಿಂದ ಹೆಚ್ಚು ಬಳಕೆಯಲ್ಲಿ ಬಂದಿದೆ ಎಂದು ಹೇಳಬಹುದು. ಕರಡೆ, ಸಂಬಾಳ, ಮದ್ದಲಿ ಮೊದಲಾದವುಗಳಿಗೆ ಶಿವಶರಣರು ತಮ್ಮ ಸಂಪ್ರದಾಯಗಳಲ್ಲಿಯೂ ಹಾಡುಗಳಲ್ಲಿಯೂ ಬಹಳ ಮಹತ್ವ ಕೊಟ್ಟಿದ್ದಾರೆ. ವೀರಶೈವ ಸಮಾಜದಲ್ಲಿ 'ಕರಡೆ'ಯವರೆಂದೂ, ಸಂಬಾಳದವರೆಂದೂ ಪಂಗಡಗಳಿವೆ. ಆ ಸಮಾಜದಲ್ಲಿ ಅವರಿಗೆ ಒಂದು ಮಹತ್ವದ ಸ್ಥಾನವಿದ್ದುದು ಈಗಲೂ ಒಡೆದು ಕಂಡುಬರುತ್ತದೆ. ಈ ಜನರು ಇಂಚರ 'ಗುಣಿಕೆಯ ಗತ್ತಿ'ನೊಡನೆ ಇವುಗಳನ್ನು ನುಡಿಯಿಸಲು ಹಾಡುವವರು ಹಾವಭಾವದ ಆವೇಶದಿಂದ ಹಾಡುಗಳನ್ನು ಹೇಳುವರು. ಮುಂದೆ ಈ ವಾದ್ಯಗಳು ಮಾರ್ಪಾಟಾಗಿ 'ದಿಮ್ಮ,' 'ದಮ್ಮಡಿ' ಮೊದಲಾದುವುಗಳು ಬಳಕೆಯಲ್ಲಿ ಬಂದುವು. ಈಗಿನ ಲಾವಣಿಕಾರರು 'ದಪ್ಪು' ಹಾಗು 'ತುಣ್ತಿಣಿ'ಗಳನ್ನು ಜೋಡಣೆಮಾಡಿ ಹಾಡುತ್ತಾರೆ. ಇಂದು, ಇವರು ಹಾಡುವ ಹಾಡುಗಳಿಗೆ ಲಾವಣಿಯೆಂದು ಕರೆಯುತ್ತಿದ್ದರೂ, ಅವುಗಳಿಗೆ ಈಗಿನ ಕಾಲದ ದುಂದುಮಿಗಳೆಂದು ಕರೆದರೆ ತಪ್ಪಾಗಲಿಕ್ಕಿಲ್ಲ. ಕರ್ನಾಟಕದ ಮೂಲೆ ಮೂಲೆಗಳಲ್ಲಿ ಈಗಲೂ ಸಾರುವ ಅಯ್ಯಗಳು 'ಏಕತಂತಿ' ಮತ್ತ 'ದಮ್ಮಡಿ'ಗಳನ್ನು ಬಿಟ್ಟು ಹಾಡಿ ಸಾರುವದಿಲ್ಲ. ಶಿವಶರಣೆ, ನೀಲಮ್ಮನವರ ಕಾಲಜ್ಞಾನವನ್ನು ಈ ವಾದ್ಯಗಳ ಸಂಗ ಜೋಡಣೆ ಮಾಡಿ ಈಗಲೂ ಹಾಡಿ ಸಾರುವುದೇ ಇದಕ್ಕೆ ಬಲವಾದ ನಿದರ್ಶನವು.

ಸುವ್ವಿ ಬಾ ಸಂಗಯ್ಯ, ಸುವ್ವಿ ಬಾ ಲಿಂಗಯ್ಯ
ಸುವ್ವಿ ಬಾ ಚೆನ್ನ – ಬಸವಯ್ಯಾ ಸುವ್ವಿ ॥ ಪಲ್ಲವಿ॥
ಸುವಿಬಾ ಚೆನ್ನಬಸವಯ್ಯ ಬರುವಾಗ ಹುಯ್ಯಾಲೆ ಬೊಬ್ಬೆ
ಜಗಕೆಲ್ಲ ಸುವ್ವಿ ॥ ಅನು ಪ॥

ಅಲ್ಲದೆ, 'ಕಣಿಯ ಕೇಳಿರೊ,' 'ಹುಯ್ಯಲೊ ಡಂಗುರವ,' 'ಹಾಕಿರೊ ಮುಂಡಿಗೆಯ,' 'ದಿಮ್ಮಿಸಲೆನ್ನಿರೊ' ಮೊದಲಾದ ಕಾಲಜ್ಞಾನದ ಪಲ್ಲವಿಗಳು ಕಾಲಜ್ಞಾನವನ್ನು ಹಾಡಿ ಸಾರುವ ಕಾಲಕ್ಕೆ ಬಾರಿಸುವ ವಾದ್ಯಗಳ ಅನುಕರಣ ನುಡಿಗಳೆಂಬುದು ಸ್ಪಷ್ಟ. 'ದಿಮ್ಮಿಸಲೆನ್ನಿರೊ' ಎಂಬ ಪಲ್ಲವಿಯನ್ನು 'ಕರಸ್ಥಲದ ನಾಗಲಿಂಗಯ್ಯನು' ತನ್ನ ಕಾಲಜ್ಞಾನದಲ್ಲಿ ಸಾರಲು ಬಳಸಿದ್ದಾನೆ.

ದಿಮ್ಮಿಸಲೆನ್ನಿರೊ ನಮ್ಮವರೆಲ್ಲ ದಿಮ್ಮಿಸಲೆನ್ನಿರೊ
ದಿಮ್ಮಿಸಲೆಂದು ಬಿದ್ದಾದೆ ಸತ್ಯವುಳ್ಳ ಶರಣರೆಲ್ಲ ॥ದಿಮ್ಮಿ॥ ॥ಪ॥[೮]

ಈ 'ದಿಮ್+ದಿಮ್ಮಿ=ದಿಂದಿಮ್ಮಿ ಜೋಡಣೆಯು ದುಮ್+ದುಮ್ಮಿ=ದುಂದುಮ್ಮಿ= ದುಂದುಮಿ'ಯನ್ನು ಎಲ್ಲದರಲ್ಲಿಯೂ ಹೋಲುತ್ತದೆ. ಆದುದರಿಂದ 'ದಿಂದಿಮಿ' ಮತ್ತು 'ದುಂದುಮಿ'ಗಳು ಎರಡೂ ಒಂದೇ ಅಂದರೆ ತಪ್ಪಾಗಲಿಕ್ಕಿಲ್ಲ. ಈ ಎಲ್ಲ ಪಲ್ಲವಿಗಳು ದನಿಗೊಡುವ ರೀತಿಯು 'ದುಂದುಮಿ'ಯು. ಇದು ಶಿವಶರಣರ ಹಾಡುಗಳಲ್ಲಿ ಉದಯಿಸಿತೊ, ಅಥವಾ ಆ ಮೊದಲೇ ಇದ್ದಿತೊ ಎಂಬುದು ಇನ್ನೂ ಚರ್ಚಿಸಿ ನಿರ್ಣಯಿಸಬೇಕಾದ ಸಮಸ್ಯೆ. ಈಗಲೂ ದುಂದುಮಿ ಹಾಡನ್ನು ಹಾಡುವ ಕಾಲಕ್ಕೆ 'ದುಂದುಮಿ ಬಸವಂತನ ಹಬ್ಬ। ದುಂದುಮೆ॥' ಎಂಬ ಪಲ್ಲವಿಯನ್ನು ಉಪಯೋಗಿಸುವೆವು. ದುಂದುಮಿಗಳು ಶಿವಶರಣರ ಕಾಲದಲ್ಲಿ ಬಳಕೆಯಲ್ಲಿದ್ದುವು. ಶಿವಶರಣರು ಕಾಲಜ್ಞಾನ

೮. ಕಾಲಜ್ಞಾನ ಸಂಗ್ರಹ ಪು. ೭೫ ಸಂ–ಶ್ರೀ ಶಿವಬಸವಸ್ವಾಮಿಗಳು.

ಮೊದಲಾದುವುಗಳನ್ನು ಪರಸಿ ಕೂಡಿದಲ್ಲಿ ದುಂದುಮಿ ಪಲ್ಲವಿ ಹಾಕಿ ಹಾಡುತ್ತಿದ್ದರು. ಜಾನಪದ ಸಂಪ್ರದಾಯವಾದ ಹೋಳಿಯಲ್ಲಿ ಶಿವಶರಣರು ಭಾಗವಹಿಸುತ್ತಿದ್ದರು. ಈಗ ಬೆಳಕಿಗೆ ಬಂದ 'ಕಲಿಕಾಲಹೋಳಿ' ಎಂಬ ದುಂದುಮಿ ಕಾಲಜ್ಞಾನವೇ ಇದಕ್ಕೆ ಸಾಕ್ಷಿ.

ಇಲ್ಲಿಯವರೆಗೆ ಬೆಳಕಿಗೆ ಬಂದ ದುಂದುಭಿ ಮತ್ತು ದುಂದುಮಿ ಕಾವ್ಯಗಳೆಂದರೆ–'ಕಲಿಕಾಲಹೋಳಿ,' ಕಿತ್ತೂರ ಐತಿಹಾಸಿಕ ಮಂಡಲದವರು ಬೆಳಕಿಗೆ ತಂದ 'ದೊರೆ ಮಲ್ಲಸರ್ಜನ' ಎಂಬ ಒಂದೆರಡು ಕಾವ್ಯಗಳು. ಈ ಎರಡೂ ಕಾವ್ಯಗಳಲ್ಲಿ ಕಿತ್ತೂರ ದೊರೆ ಮಲ್ಲಸರ್ಜನನೇ ಕಥಾವಸ್ತು. ಕಥೆಯು ಒಂದೇ ಇದ್ದರೂ ಎರಡರಲ್ಲಿಯೂ ಹಾಡುವ ರೀತಿಯು ಬೇರೆ ಬೇರೆ. 'ದೊರೆ ಮಲ್ಲಸರ್ಜ' ಎಂಬ ದುಂದುಭಿ ಕಾವ್ಯ ಬರೆದವನು ರಾಜಾಶ್ರಯದಲ್ಲಿದ್ದ ರುದ್ರಕವಿಯೆಂದು ಊಹಿಸಿದ್ದಾರೆ. ಕವಿಯ ಸಂಬಂಧ ಕಾವ್ಯದಲ್ಲಿ ಏನೂ ಬರುವುದಿಲ್ಲ. ಕವಿಯು ಮಲ್ಲಸರ್ಜ ದೊರೆಯ ಅವಸಾನಕಾಲ ಹೇಳಿ ಕಾವ್ಯವನ್ನು ಮುಗಿಸಿದ್ದಾನೆ. ಈ ದೊರೆಯು ಕ್ರಿ.ಶ. ೧೮೧೬ರಲ್ಲಿ ಮರಣ ಹೊಂದಿದನು. ಈ ಕಾವ್ಯದಲ್ಲಿ ಕಿತ್ತೂರ ದುರಂತವು ಬರುವುದಿಲ್ಲ. ಅದು ಸಂಭವಿಸಿದ್ದು ಕ್ರಿ.ಶ. ೧೮೨೪ರಲ್ಲಿ. ಕಾರಣ ಕವಿಯು ಈ ಕಾವ್ಯವನ್ನು ಕ್ರಿ.ಶ. ೧೮೧೬ರಿಂದ ೧೮೨೪ರ ನಡುವೆ ಬರೆದಿರಬೇಕು. ದೊರೆಯ ಅವಸಾನ ಕಾಲದ ಸಂಗತಿಗಳನ್ನು ಬಹಳ ವಿಶದವಾಗಿ ಚಿತ್ರಿಸಿರುವದರಿಂದ ಕವಿಯು ಈ ಕಾವ್ಯವನ್ನು ದೊರೆಯು ತೀರಿದ ಕೆಲವೇ ದಿನಗಳಲ್ಲಿ ಬರೆದಿರಬೇಕು. ಕ್ರಿ.ಶ. ೧೮೧೮ರಲ್ಲಿ ಬರೆದಿರಬಹುದೆಂದು ಊಹಿಸಬಹುದು.

ದುಂದುಭಿ ಪದಗಳ ಚೆಂದಾಗಿ ಕೇಳಿರಿ।
ಕಂದುಗೊರಳ ಭಕ್ತ ಮಲ್ಲೇಂದ್ರನ ॥
ಸಿಂಧುರ ವಾಹನನೆಂದು ಮರ್ತ್ಯದಲ್ಲಿ
ಬಂದು ರಾಜಿಸುವಂಥ ದೇವೇಂದ್ರನ ॥೧॥

ಎಂದು 'ದೊರೆ ಮಲ್ಲಸರ್ಜ' ದುಂದುಭಿಯು ಈ ಪದ್ಯದಿಂದ ಸುರುವಾಗುತ್ತದೆ. ಒಟ್ಟು ಇದರಲ್ಲಿ ೧೭೭ ಚೌಪದಿಗಳಿದ್ದು ಕವಿಯು ಜಾನಪದ ರಸಾವೇಶಗಳನ್ನು ಕಾವ್ಯದ ತುಂಬ ತುಂಬಿರುವನು.

ಹರಹರ ಎನುತಲಿ ಹರಸೀದರಾಗ।
ಹರನೊಳು ಮಲ್ಲೇಂದ್ರ ಬೆರದನ ಬೇಗ।
ದೊರೆ ಮಲ್ಲೇಂದ್ರ ಮರಣೈದನ ಹೀಗ।
ಗುರುಶಾಂತ ವೀರನು ಹೇಳಿದನ ಹೀಗ ॥೧೭೭॥

ಎಂದು ಈ ದುಂದುಭಿ ಕಾವ್ಯವು ಮುಕ್ತಾಯವಾಗುವುದು.

'ದೊರೆ ಮಲ್ಲಸರ್ಜನ' ದುಂದುಮಿಯಲ್ಲಿ ಬರುವುದು ಇದೇ ಕಥೆ. ಕವಿಯು ಕಥೆಯನ್ನು ಮುಂದೆ ಸಾಗಿಸಿ ಕಿತ್ತೂರ ದುರಂತವನ್ನೂ ಹಾಡಿದ್ದಾನೆ. ಈ ದುಂದುಮಿ ಕಾವ್ಯವನ್ನು ರಚಿಸಿದ ಕವಿ ಬೈಲಹೊಂಗಲದ ವೃಷಭರಾಜನೆಂದು ಕಾವ್ಯದಲ್ಲಿ ಬಂದಿವೆ.

ಸೋಮಧರನ ಸಮಯ, ಪ್ರೇಮ ವೃಷಭನೆಂಬ।
ನಾಮದ ಸೇವಕ ಪೇಳಿದ ಕೃತಿಯ ॥

ಈ ಕಾವ್ಯವನ್ನು ಕವಿಯು ಕ್ರಿ.ಶ. ೧೮೩೬ರ ನಂತರ ಮತ್ತು ೧೮೪೦ರ ಹಿಂದೆ ಬರೆದಿರಬಹುದೆಂದು ಕಾವ್ಯದೊಳಗಿನ ಸಂದರ್ಭಗಳಿಂದ ತರ್ಕಿಸಲಾಗಿದೆ. ದುಂದುಮಿಯಲ್ಲಿ ದುಂದುಭಿ ಕಾವ್ಯಗಳಂತೆ ಚೌಪದಿಗಳಿರದೆ, ತ್ರಿಪದಿಯ ಅರ್ಧ, ಚೌಪದಿ ಮೊದಲಾದುವುಗಳ ಕೂಡುವಿಕೆಯ 'ಚಳಕು'ಗಳಿರುವುವು. ದುಂದುಭಿಯಲ್ಲಿರುವ ಗಂಭೀರತೆಯು ದುಂದುಮಿಗಳಲ್ಲಿರುವುದಿಲ್ಲ. ದುಂದುಮಿಯು ಜನಸಾಮಾನ್ಯರಿಗೆ ಬಂದ ಕಾವ್ಯವಾಗಿದೆ. ದುಂದುಮಿಯ ಒಂದು ಚಳಕನ್ನು ಕೆಳಗೆ ಕೊಡಲಾಗಿದೆ.

ಗುರುವೆ ನಿಮ ಕರುಣದಲಿ। ಸರುವರನು ಪೊಗಳುವೆನು
ವರದ ಕರ ಪೊರೆವುದೀಗೆನುತೆ ॥ ಹೋಳಿಪದ ॥

ಸ್ಮರಿಸುವೆ ಮೂಲೋಕ। ದರಸನಡಿಗಳೆಂಬ
ಸರಸೀರುಹದೊಳೆನ್ನ ಶಿರಸವನು ಇಟ್ಟು।
ಪರಶಿವನರಸಿಯ ಸ್ಮರಿಸುವೆನು। ಸುಖ।
ವೆರಸಿ ತೋರುವ ಗಂಗೆಯ ನಿರುಸುವೆನು ॥

ಗಣನಾಥನ।
ಗುಣಯುತನ।
ಷಣ್ಮುಖದಾತನ। ದಕ್ಷನ
ಸೊರಿಸಿ ಶಿರವನ್ನಿತ್ತು ಹರಸಿದವನ। ಇವ
ನೆರಸಿ ಬಲವಗೊಂಡು ಗರಿಸುವೆನು। ಕೃತಿ
ಸರಸದಿಂದಲಿ ಮನ। ವೆರಸಿ ಪೇಳುವೆ ಕಿತ್ತೂ।
ರರಸನ ವರಣ ವಿಸ್ತರಿಸುವೆ ಮುಂದೆ ॥ ದುಂದುಮೆ ॥

ವರದಕರ ಪೊರೆವುದೀಗೆನುತೆ ಮಲ್ಲೇಂದ್ರನರ।
ವರನ ಸಂಪದವ ನರಿಸುವೆನು ॥ ಹೋಳಿಪದ ॥

ಆಲಿಸುವುದು ಬುಧರೀಗ। ಪೇಳ್ವುದ।
ಲೀಲೆಯಿಂದಲಿ ಕೇಳಿರೀಗ ॥ ದುಂದುಮೆ ॥

ಎಂದು ಪ್ರತಿಯೊಂದು ಚಳಕಿನಲ್ಲಿ ಹೀಗೆ ಚರಣಗಳು ಬರುವುವು. 'ದುಂದುಭಿ'ಗಳನ್ನು ಅನ್ನುವ ಧಾಟಿಯು ಸಾರುವ ಪದ್ಯಗಳ ಧಾಟಿಗೆ ಸರಿ ಹೋಗುತ್ತದೆ. ಆದರೆ 'ದುಂದುಮಿ'ಯನ್ನು ಅನ್ನುವ ಧಾಟಿಯೇ ಬೇರೆ. ಮೊದಲು ತ್ರಿಪದಿಯನ್ನು ಹೋಳಿಯ ಧಾಟಿಯಲ್ಲಿ ಎತ್ತಿ, ಮುಂಬರುವ ಎರಡು ಚೌಪದಿಗಳನ್ನು ತೀವ್ರ ಗತ್ತಿನ ತಾಳದ ಓಟದಲ್ಲಿ ಕೂಡಿಸಿ 'ದುಂದುಮೆ' ಎಂದು ಮುಗಿಸಿ, ಮತ್ತೆ ಹೋಳಿಯ ಧಾಟಿಯನ್ನು ಹಾಕಿ, ಚೌಪದಿಯ ಕಡೆಯ ಎರಡು ಚರಣಗಳ ದುಂದುಮಿ ಧಾಟಿಯನ್ನು ಹಾಡಿ ಒಂದು ಚಳಕನು ಮುಗಿಸುವರು. ಎಲ್ಲ ಚಳಕುಗಳನ್ನು ಹಾಡುವದೇ ಹೀಗೆ. ಈ ಧಾಟಿಯನ್ನು ಕಿವಿಗೊಟ್ಟು ಕೇಳುವುದೇ ಒಳಿತು. ಅದನ್ನು ಬರೆಯಲು ಅಸಾಧ್ಯ.

ದುಂದುಭಿ, ದುಂದುಮಿ ಹಾಗೂ ಲಾವಣಿಗಳನ್ನು ರಚಿಸಿ ಹಾಡಿದ ಕವಿಗಳು ತೀರ ನಿರಕ್ಷರಿಗಳಿದ್ದಂತೆ ಕಾಣುವುದಿಲ್ಲ. ಹಾಗಿದ್ದರೂ, ಕನ್ನಡ ಮನೆಯ ಸಂಸ್ಕೃತಿಯನ್ನುಂಡು ಅರಗಿಸಿ ರಸಕವಿಗಳಾಗಿ ಪದಗಳನ್ನು ರಚಿಸಿ ಹಾಡಿದ್ದು ಓದುವವರಿಗೆ ಅನಿಸದಿರದು. ಅವರು ತಮ್ಮ ಗುರುಕುಲವನ್ನು ಹೇಳಿ ಪಂಡಿತ ಕವಿಗಳಂತೆ ದೇವ, ದೇವತೆಗಳನ್ನು ಬಲಗೊಂಡದ್ದೂ ಉಂಟು. ಈ ಕವಿಗಳು ಯಾರ ಭಿಡೆ, ಮುರವತ್ತುಗಳನ್ನಿಟ್ಟಂತೆ ಕಂಡುಬರುವುದಿಲ್ಲ. ಕಂಡದ್ದನ್ನು ಮಾರ್ಮಿಕವಾಗಿ ಪ್ರತಿಬಿಂಬಿಸುವಂತೆ, ನಿರರ್ಗಳವಾದ ಒಂದು ಶೈಲಿಯಲ್ಲಿ ಚಿತ್ರರೂಪವಾಗಿ ಹಾಡಿದ್ದಾರೆ. ವೀರ ರಸವಿದ್ದರೆ ವೀರಾವೇಶ ತುಂಬಿ ತಂದಿದ್ದಾರೆ.

ಚಂಡಿಯೊ ಚೌಡಿಯೊ, ಮಾರಿಯೊ ಮಸಣಿಯೊ ಖಂಡಿತ
ಮಾನವಳಿವಳಲ್ಲ।
ಗಂಡು ಗಲಿಗಳ ಮೀರಿ ರುಂಡುವ ತರಿವಳು ಮಹಾ
ಮಾಯಿಯಲ್ಲದೆ ಬ್ಯಾರಲ್ಲ।
ಪುಂಡ ರಕ್ಕಸ ಹಿಂಡುಮುರಿದ ಚಾಮುಂಡಿಯೆ
ಈಕೆಯು ಸುಳ್ಳಲ್ಲ।
ಚಂಡ ಪ್ರಚಂಡರ ತಂಡವೆ ಕುಂದಿತು ಎಂಬುವ
ಶಬ್ದವೆ ರಣವೆಲ್ಲ ॥

ಇದು ಕಿತ್ತೂರ ಚೆನ್ನವ್ವ ರಾಣಿಯ ಕೆರಳಿದ ರಣದ ಮೇಲಿನ ರೌದ್ರಚಿತ್ರ! ಹಾಡು ಕೇಳುಕೇಳುತಲಿ ರಕ್ತ ಉಕ್ಕಿ ಶೌರ್ಯದ ರೋಮಾಂಚಗಳೆದ್ದು ನಿಲ್ಲುವುವು. ಹಾಸ್ಯವಿದ್ದರೆ ಹಸನ ಮನಸ್ಸಿನಿಂದ ನಕ್ಕು ಉಪದೇಶ ಪರವಾಗಿ ಹಾಡಿದ್ದಾರೆ. ಶೃಂಗಾರ ಪ್ರಧಾನವಿದ್ದರೆ ಅದರ ಬಲಿಗೆ ಬೀಳದೆ ಎಸರೊಸೆವ ಜೊಲ್ಲುತನ ಗೆದ್ದು ರಸಿಕರಾಗಿ ಹಾಡಿದ್ದಾರೆ. ಹಾಡುವಾಗ ಅವರಿಗೆ ಉಚ್ಚ ತುಚ್ಚ ಶೃಂಗಾರವೆಂಬ ಹೆದರಿಕೆ ಇದ್ದಂತೆ ತೋರುವುದಿಲ್ಲ. ಅವರ ಹಾಡುಗಳಲ್ಲಿ ಅಲ್ಲಲ್ಲಿ ಅಶ್ಲೀಲ ಪ್ರಯೋಗಗಳು ಕಂಡುಬಂದರೂ, 'ಭರತೇಶ ವೈಭವ' ಕಾವ್ಯವನ್ನು ಬರೆದ, ಕವಿ ರತ್ನಾಕರನಂತೆ, ಸನ್ನಿವೇಶದ ಮೂಲ ಉದ್ದೇಶ, ಕಲ್ಪನೆ ಮೊದಲಾದುವುಗಳನ್ನು ಅರಿಯಲಿಕ್ಕೆ ಮಾತ್ರವಲ್ಲದೆ, ಬೇರೆ ಮತ್ತೊಂದಕ್ಕಿಲ್ಲ. ಅಂತೆಯೇ ಅವುಗಳನ್ನು ನಾವು ತಪ್ಪು ತಿಳಿದುಕೊಂಡು ತುಚ್ಚ ಶೃಂಗಾರವೆಂದು ನಿರಾಕರಿಸಕೂಡದು. ಹಾಗಾದರೆ ಆ ಹಾಡಿನ ಬಿಗುವೇ ಸಡಿಲಾಗುವುದು; ಉದ್ದೇಶವಂತೂ ಬೈಲಾಗುವುದು.

ಉತ್ತರ ಕರ್ನಾಟಕದಲ್ಲಿ ಮೇಲೆ ಉದಹರಿಸಿದ, ಬಹುತರ ಎಲ್ಲ ಲಾವಣಿಗಳು ಜನರ ಮೆಚ್ಚಿಗೆಯನ್ನು ಪಡೆದು ರಂಗಭೂಮಿಗೆ ಇಳಿದಿವೆ. ಹಳ್ಳಿ ಪಟ್ಟಣಗಳಲ್ಲಿ ಈ ಸನ್ನಿವೇಶಗಳನ್ನು ಈಗಲೂ ನಾಟಕ, ಬೈಲಾಟ ಮೊದಲಾದುವುಗಳ ರೂಪಗಳಲ್ಲಿ ಕಾಣಬಹುದು. ಈ ಪ್ರಕಾರ ಲಾವಣಿಗಳೂ ದುಂದುಮಿಗಳೂ ರಾಷ್ಟ್ರ ಹಾಗೂ ಸಮಾಜದ ಪ್ರಚಾರಕಾರ್ಯವನ್ನು ಮಾಡುವ ಮೂಲಸಾಧನಗಳಾಗಿವೆ. 'ಕರೋಲಿನಾ' ವಿಶ್ವವಿದ್ಯಾಲಯದ ಆರ್.ಎಸ್. ಲೋಗ್ಸ್ ಅವರು ಜಾನಪದ ಸಾಹಿತ್ಯವನ್ನು ಕುರಿತು "Only in the field of political propaganda do I anticipate with some anxiety folklores' future growth"[9] ಎಂದು ಬರೆದಿದ್ದಾರೆ. ಅವರು ಹೇಳುವ ಈ ಮಾತುಗಳು ಅಕ್ಷರಶಃ ಸತ್ಯವೆನ್ನುವಂತೆ ಜಾನಪದ ಸಾಹಿತ್ಯದ ಮಹತ್ವವನ್ನರಿತು ಭಾರತ 'ಕಾಂಗ್ರೇಸು' ಸರಕಾರವು ಇನ್ನೂ ಮೊನ್ನೆ ಮೊನ್ನಿನ ಚುನಾವಣೆಯಲ್ಲಿ ಪ್ರಚಾರ ಕಾರ್ಯಕ್ಕೆಂದು ಲಾವಣಿಗಾರರ ಮೇಳಗಳನ್ನು ನೇಮಿಸಿ ದೇಶದ ತುಂಬ ತಮ್ಮ ಆಡಳಿತೆಯನ್ನು ಪ್ರಚಾರ ಮಾಡಿಸಿದ್ದು ಎಲ್ಲರಿಗೂ ಗೊತ್ತರಲಿಕ್ಕೆ ಸಾಕು. ಇಷ್ಟು ಮಹತ್ವವಿವೆ ಈ ಲಾವಣಿ ಹಾಡುಗಳು ನಮ್ಮ ಜನಾಂಗಕ್ಕೆ!

❐

9. `Studies in Language and Literature : "The Development of Folklore in a University." p.p. 111 Ed: George R. Coffman.

೫. ಹಾಸ್ಯಗಳು

ರಸನಿಮಿಷಗಳ ರಸಿಕನೂ ರಸಾವೇಶಗಳ ಬಂಟನೂ ಆದ ರೈತನು ಅಲ್ಲೊಮ್ಮೆ ಇಲ್ಲೊಮ್ಮೆ ಹಾಸ್ಯವಾಡಿ ನಕ್ಕದ್ದೂ ಉಂಟು; ನಗಿಸಿದ್ದೂ ಉಂಟು. 'ನಗುವೆ ಬಾಳು, ಅಳುವೆ ಗೋಳು' ಎಂಬ ಮಾತಿನ ಮರ್ಮವನ್ನು ಒಕ್ಕಲಿಗನು ಪೂರಾ ಅರಿತಿದ್ದಾನೆ. 'ಕಾರ್ಲಾಯಿರ್'ನು ನಗೆಯ ಮಾತನ್ನೆತ್ತಿ ``No man who has once wholly and heartily laughed can be altogether irreclaimably bad. In cheerful souls there is no evil." ಎಂದು ನುಡಿದಿದ್ದಾನೆ. ನಗೆ ಮುಖದ ಸರಳ ಜೀವಿಯು ವಿಷದ ಹೊಗೆಯನ್ನು ಬಿಡಬಹುದೇ?

ಹಳ್ಳಿಗರ ಈ ದುಡಿಮೆಯ ಬಾಳಿನಲ್ಲಿ ಹಾಸ್ಯವು ಒಂದು ವಿಶ್ರಾಂತಿ. ದಣಿವಾರಿಸಲು ರಸಭರಿತವಾದ ಹಾಡುಗಳನ್ನಲ್ಲದೆ ಆಗಾಗ ಹಾಸ್ಯದ ಕೋಲ್ಮಿಂಚುಗಳ ಬೆಡಗನ್ನು ಹಾಡಿನೊಡನೆ ಕೂಡಿಸಿ ದುಡಿಯುವವರನ್ನು ಅವರು ನಿಂತಲ್ಲಿಯೇ ತಣಿಸಬಲ್ಲರು. ಹಾಸ್ಯವು ರಸಾತ್ಮಕ ಜೀವಿಗೆ ತಂಗೊಳದ ತಾವರೆಗೆ ಬೆಳಗಿನ ಹೂಬಿಸಿಲು. ಅದರೊಂದಿಗೆ ಜೀವವೂ ಅರಳುವುದಲ್ಲದೆ, ಸುತ್ತ ಮುತ್ತಲಿನ ಜೀವನವೂ ಅರಳಿ ಕುಲುಕುಲು ನಕ್ಕು ಮೈದೋರುವುದು. ನಕ್ಕುಂಡ ಜೀವನವೇ ಜೀವನ. ಪ್ರಸಂಗವು ಹಾಸ್ಯದೊಡನೆ ತುಳುಕಿದರೆ ಹೊಟ್ಟೆ ತುಂಬ ನಕ್ಕು ಹೊಟ್ಟೆಯ ಹಸಿವು ಹಿಂಗಿದ್ದೂ ಉಂಟು. ಹಾಸ್ಯದ ಒಳಮುಗುಳು ಆನಂದ. ಅದು ಅರಳಿ ಹೊರಸೂಸುವ ಪರಿಮಳವೇ ನಗೆ. ಹಸುನಗಲಿ ತುಸುನಗಲಿ, ಬಹುನಗಲಿ ನಗುವು ಮನೋಜಾಡ್ಯವನ್ನಡಗಿಸಿ ಹಗುರು ಮಾಡುವುದು. ಅಂತೆಯೇ ಮಾನವನು ಸಮಯ ಸಿಕ್ಕಾಗಾದರೂ ನಕ್ಕು ಹಗುರಾಗುತ್ತಾನೆ. ಸಂಸಾರ ಸಾಗರದಲ್ಲಿ ದಿನಚರಿಯ ತೆರೆಗಳನ್ನೆದುರಿಸಿ ಈಸಬಲ್ಲ. ನಮ್ಮ ಹಳ್ಳಿಗರು ಆಗಾಗ ಹಾಸ್ಯದ ಬುಗ್ಗೆಯಾಗಿ ಬೆಡಗುಗಳನ್ನೊಳಗೊಂಡು ಹಾಡುಗಳ ಕಾರಂಜಿಯನ್ನು ಜಾನಪದ ಸಾಹಿತ್ಯದ ತೋಟವನ್ನು ರಂಜಿಸಲೇನೊ ಎಂಬಂತೆ ರಸಕವಿಗಳಾಗಿ ಪುಟಿಸಿದ್ದಾರೆ. ತಮ್ಮ ಹಾಡುಗಳಲ್ಲಿ ಬಲು ಹಿತ ಮಿತದಿಂದ ಹಾಸ್ಯವಾಡಿ ನಕ್ಕಿದ್ದಾರೆ.

ರೈತನು ಬಲು ಹಿತಮಿತಜೀವಿಯೂ ಅಹುದು. ಮನೆಕಟ್ಟಿ, ಒಲೆಹೂಡಿ ಬಾಳುವೆ ಮಾಡಹತ್ತಿದ ಗಂಡ ಹೆಂಡತಿರಿಬ್ಬರಿಗೂ ಹಾಸ್ಯವಿನೋದಗಳು ಬೇಕು. ಇಬ್ಬರೂ ಒಬ್ಬರನ್ನೊಬ್ಬರು ನೋಡಿ ನಗಬಹುದು; ಮತ್ತೊಮ್ಮೆ ಮಾತಾಡಿ ನಗಬಹುದು. ಈ ಹಾಸ್ಯ ವಿನೋದಗಳ ತಾಕಲಾಟದ ಬೆಳಕೇ ನಗೆಯೆನ್ನಬೇಕಾಗಿದೆ. ಕೂಸು–ಮಕ್ಕಳ ನಗೆ, ಗಂಡ ಹೆಂಡರ ನಗೆ, ಹಿರಿಹಿರಿಯರ ನಗೆ, ನಟನಾಟ್ಯದನಗೆ, ಪ್ರಿಯ–ಪ್ರೇಯಸಿಯ ನಗೆ ಬೇರೆ ಬೇರೆ ಕಂಡರೂ ಎಲ್ಲದರಲ್ಲಿ ಮನಸ್ಸೇ ವಿಕಾಸ ಹೊಂದುವುದು. ಅಂತೆಯೇ ಹಾಸ್ಯದಲ್ಲಿ ನಗೆಯು ಪುಷ್ಪದಲ್ಲಿ ಪರಿಮಳ ಬೆರೆದಂತೆ. ನಮ್ಮ ಹಳ್ಳಿಗರು ಹಾಡುವ ಹಾಸ್ಯ ಮತ್ತು ನಗೆಗಳನ್ನೊಳಗೊಂಡ ಇಂತಹ ಹಾಡುಗಳು ಒಕ್ಕಲು ನಾಡಾದ ಕನ್ನಾಡಿನಲ್ಲಂತೂ ಹೇರಳವಾಗಿವೆ.

ಉತ್ತರ ಕರ್ನಾಟಕದಲ್ಲಿ ಜಾನಪದ ಸಾಹಿತ್ಯವನ್ನು ಸಂಕಲನ ಮಾಡುವಾಗ ಇಂತಹ ಅನೇಕ ಹಾಡುಗಳು ನಿದರ್ಶನಕ್ಕೆ ಬಂದಿವೆ. ಕೆಳಗೆ ಕೊಡುವ ಹಾಡಿನಲ್ಲಿ ನಡುಹರೆಯದ ಗಂಡ–ಹೆಂಡರ ಬೆಡಗಿನ ಹಾಸ್ಯದ, ಒಂದು ಸೌರಭವವನ್ನು ಹಾಡಿನ ತುಂಬೆಲ್ಲ ಕಾಣಬಹುದು. ಶಬ್ದ ಶಬ್ದಗಳಲ್ಲಿ ಬೆಡಗಿನ ಹಾಸ್ಯವು ಚಿಮ್ಮಿ ಚಿಮ್ಮಿ ಓದುವ, ಕೇಳುವ ಜನರನ್ನು ನಗಿಸದಿರದು. ಹಾಸ್ಯದೊಡನೆ ಬೆಡಗೂ ಇದ್ದರೆ ಅದು ಮತ್ತಷ್ಟು ಜನರ ಮನಸ್ಸನ್ನು ಹಿಡಿದು ವಿಚಾರಕ್ಕೆ ತೊಡಕಿಸುವುದು. ಮನುಷ್ಯನು ಇಂಥ ಹಾಸ್ಯಗಳನ್ನು ನುಡಿಯಹತ್ತಿದನೆಂದರೆ, ತಿಳಿಯದೆ ಹೋದಲ್ಲಿ ಕೇಳುವವನ ಮನೋವ್ಯಾಪಾರವೇ ಕದಲು ಬದಲು ಆಗುವುದು. ಅದು ತಿಳಿದರೆ ಮನಸು ವಿಕಾಸವಾಗಿ ಆ ಸನ್ನಿವೇಶಗಳನ್ನು ಮೆಚ್ಚಿ ತಲೆದೂಗಹತ್ತುವುದು. ಕೆಳಗಿನ ಹಾಡಿನಲ್ಲಿ ಗಂಡನು ಹೆಂಡತಿಯನ್ನು ಮನೆಯಲ್ಲಿ ಬಿಟ್ಟು ಕಾಶೀಯಾತ್ರೆಗೆ ಹೋಗಿ, ಯಾತ್ರೆ ಮುಗಿಸಿಕೊಂಡು ಮನೆಗೆ ಬಂದ ನಂತರ, ತಾನಿಲ್ಲದ ಸಮಯದಲ್ಲಿ ದಿನಗಳೆದ ರೀತಿಯ ಸೊಬಗನ್ನು ಕೇಳಲು ಚದುರೆಯೂ ಚಾಣಾಕ್ಷಳೂ ಆದ ಅವಳು ಬಲು ಔಚಿತ್ಯದಿಂದ ಹೇಳುತ್ತಾಳೆ:

೧ನೆಯ ಚೌಕು : ಕಾಶಿಗೆ ನಾನು ಹೋಗಿದ್ದೆ ಈಶ್ವರ ಪೂಜೆಯ ಮಾಡಿದ್ದೆ
ಹ್ಯಾಂ ಗ್ಯಾಂಗ ಬಾಳುವೆ ಮಾಡಿದ್ದೇಳ ಹೂವಿನ ॥ಪ॥
ಒಬ್ಬನ್ನ ಒಳಗಿಟ್ಟೆ, ಒಬ್ಬನ್ನ ಹೊರಗಿಟ್ಟೆ
ಒಬ್ಬನ್ನ ನೋಡಿ ನಗತಿದ್ದೆ ಹೂವಿನ ॥
ಯಾವನ್ನ ಒಳಗಿಟ್ಟೆ, ಯಾವನ್ನ ಹೊರಗಿಟ್ಟೆ
ಯಾವನ್ನ ನೋಡಿ ನಗತಿದ್ದೆ ಹೂವಿನ ॥

ಹಲ್ಪಿಟ್ಟ ಒಳಗಿಟ್ಟೆ, ಕುಂಕುಮ ಹೊರಗಿಟ್ಟೆ
ಕನ್ನೂಡಿ ನೋಡಿ ನಗತಿದ್ದೆ ಹೂವಿನ ॥

೨ನೆಯ ಚೌಕು : ಕಾಶಿಗೆ ನಾನು ಹೋಗಿದ್ದೆ ಈಶ್ವರ ಪೂಜೆಯ ಮಾಡಿದ್ದೆ
ಹ್ಯಾಂಗ್ಹ್ಯಾಂಗ ಬಾಳುವೆ ಮಾಡಿದ್ದೇಳ ಹೂವಿನ ॥
ಒಬ್ಬನ್ನ ಕೂಡ್ರಿಸಿದ್ದೆ, ಒಬ್ಬನ್ನ ನಿಲಸಿದ್ದೆ
ಒಬ್ಬನ್ನ ಗೂಡ ಎಳೆದಾಟ ಹೂವಿನ ॥
ಯಾವನ್ನ ಕೂಡ್ರಿಸಿದ್ದೆ ಯಾವನ್ನ ನಿಲಸಿದ್ದೆ
ಯಾವನ್ನ ಗೂಡ ಎಳದಾಟ ಹೂವಿನ ॥
ಮಜ್ಜಿಗಿ ಗಡುಗಿ ಕೂಡ್ರಿಸಿದ್ದೆ, ಕಡುಗೋಲನಿಲಸಿದ್ದೆ
ಹಗ್ಗದ ಕೂಡ ಎಳೆದಾಟ ಹೂವಿನ ॥

೩ನೆಯ ಚೌಕು : ಕಾಶಿಗೆ ನಾನು ಹೋಗಿದ್ದೆ ಈಶ್ವರ ಪೂಜೆಯ ಮಾಡಿದ್ದೆ
ಹ್ಯಾಂಗ್ಹ್ಯಾಂಗ ಬಾಳುವೆ ಮಾಡಿದ್ದೇಳ ಹೂವಿನ ॥
ಒಬ್ಬನ್ನ ಕಟ್ಟಿದ್ದೆ, ಒಬ್ಬನ್ನ ಬಿಚ್ಚಿದ್ದೆ
ಒಬ್ಬಗ ಕೈ ಕೊಟ್ಟೆ ಕರಕೊಂಡೆ ಹೂವಿನ ॥
ಯಾವನ್ನ ಕಟ್ಟಿದ್ದೆ, ಯಾವನ್ನ ಬಿಚ್ಚಿದ್ದೆ
ಯಾವನ್ನಗೂಡ ಕೈಕೊಟ್ಟೆ ಹೂವಿನ ॥
ಆಕಳವ ಕಟ್ಟಿದ್ದೆ, ಕರವನಾ ಬಿಚ್ಚಿದ್ದೆ
ಕೆಚ್ಚಲ ಕೈಕೊಟ್ಟು ಕರಕೊಂಡೆ ಹೂವಿನ ॥

೪ನೆಯ ಚೌಕು : ಕಾಶಿಗೆ ನಾನು ಹೋಗಿದ್ದೆ ಈಶ್ವರ ಪೂಜೆಯ ಮಾಡಿದ್ದೆ
ಹ್ಯಾಂಗ್ಹ್ಯಾಂಗ ಬಾಳುವೆ ಮಾಡಿದ್ದೇಳ ಹೂವಿನ ॥
ಒಬ್ಬನ್ನ ಇಕ್ಕಿದ್ದೆ, ಒಬ್ಬನ್ನ ಎಳದಿದ್ದೆ
ಒಬ್ಬನ್ನ ಕೈಯ ಹಿಡದಿದ್ದೆ ಹೂವಿನ ॥
ಯಾವನ್ನ ಇಕ್ಕಿದ್ದೆ, ಯಾವನ್ನ ಎಳದಿದ್ದೆ
ಯಾವನ್ನ ಕೈಯ ಹಿಡದಿದ್ದೆ ಹೂವಿನ ॥
ಕದವನಾ ಇಕ್ಕಿದ್ದೆ, ಆಗಳಿನಾ ಎಳದಿದ್ದೆ
ದೀಪ ಕೈಯಾಗ ಹಿಡದಿದ್ದೆ ಹೂವಿನ ॥

೫ನೆಯ ಚೌಕು :ಕಾಶಿಗೆ ನಾನು ಹೋಗಿದ್ದೆ, ಈಶ್ವರ ಪೂಜೆಯ ಮಾಡಿದ್ದೆ
ಹ್ಯಾಂಗ್ಹ್ಯಾಂಗ ಬಾಳುವೆ ಮಾಡಿದ್ದೇಳ ಹೂವಿನ ॥
ಒಬ್ಬನ್ನ ಹಾಸಿದ್ದೆ, ಒಬ್ಬನ್ನ ಇಟ್ಟಿದ್ದೆ
ಒಬ್ಬನ್ನ ಗೂಡು ಸೊಗನಿದ್ದೆ ಹೂವಿನ ॥
ಯಾವನ್ನ ಹಾಸಿದ್ದೆ, ಯಾವನ್ನ ಇಟ್ಟಿದ್ದೆ
ಯಾವನ್ನಗೂಡ ಸೊಗನಿದ್ದೆ ಹೂವಿನ ॥
ಹಾಸಿಗೆಯ ಹಾಸಿದ್ದೆ, ತಲಿಗಿಂಬ ಇಟ್ಟಿದ್ದೆ
ಹಚ್ಚಡಗೂಡ ಸೊಗನಿದ್ದೆ ಹೂವಿನ ॥ –ಜಾ.ಸಂ.–

ಇಲ್ಲಿ ಗಂಡು ಹೆಣ್ಣಿಗೆ 'ಹೂವಿನ' ಎಂದು ಕರೆಯುವುದರಲ್ಲಿ ರಸಿಕತೆಯ ತುತ್ತುದಿಯನ್ನು ಮುಟ್ಟಿದ್ದಾನೆ. ಹೆಣ್ಣು, ಗಂಡಿಗೆ ಕೇಳಿದ್ದಕ್ಕೆ ಉತ್ತರ ಕೊಟ್ಟು 'ಹೂವಿನ' ಎಂದು ಅನ್ನುವದರಲ್ಲಿಯೂ ಒಂದು ಬಿಂಕದ ಸಿಂಗಾರದ ಔಚಿತ್ಯವಿದೆ. ಹೆಣ್ಣು ಜೀವಿಗೆ ನೆರತ ಗಂಡೂ ಒಂದು ಹೂವಲ್ಲವೇ? ದಿನಚರಿಯನ್ನು ಕೇಳಿದ ಹೆಣ್ಣು ಬೆಡಗಿನ ಹಾಸ್ಯದ ಸಮರ್ಪಕವಾದ ಉತ್ತರವನ್ನು ಗಂಡನಿಗೆ ಕೊಡುವ ರಸಿಕತೆಯು ಇಲ್ಲಿ ಬಲು ಆಕರ್ಷಕವಾಗಿದೆ. ಸುಸಂಸ್ಕೃತನೆಂದು ಜಂಬ ಕೊಚ್ಚುವ ಗಂಡು ಇದನ್ನು ಅರಿಯದೆ ಕಿಚ್ಚಾಗಬಹುದು. ಆದರೆ ಹಾಡಿನಲ್ಲಿ ಗಂಡಸು ರಸಿಕನಾಗಿ ಸರಳ ಹೃದಯದಿಂದ ಸಂವಾದ ಮಾಡಿ ಬೆಡಗಿನ ಮಾತಿನ ತಿರುಳನ್ನೇ ಹೆಣ್ಣಿನ ಮುಖದಿಂದ ಜನತೆಗೆ ತಿಳಿಸಿಬಿಡುವನು. ಗಂಡಿನಲ್ಲಿ ಸಹನತೆ, ಹೆಣ್ಣಿನಲ್ಲಿ ಜಾಣತನ ಮತ್ತು ಸಮಯೋಚಿತ ಚಾಣಾಕ್ಷತನ ಎಷ್ಟು ಹಿತಮಿತವಾಗಿ ಬಂದಿವೆ! ಯಾರೂ ಮಾನವ ಸಂಸ್ಕೃತಿಯ ಸೌಜನ್ಯವನ್ನು ಮೀರರು. ಅವರ ಹಾಸ್ಯದಲ್ಲಿ ನಯವಿದೆ; ಮಾತಿನಲ್ಲಿ ವಿನಯವಿದೆ; ಸಂವಾದದಲ್ಲಿ ಹುದುಗಿಕೊಂಡ ನಗೆಯಸೂಸ ಪರಿಮಳವಿದೆ. ಇಷ್ಟು ಮಧುರವಿದೆ ನಮ್ಮ ಹಳ್ಳಿಗರ ಜೀವನ ಸಂಸ್ಕೃತಿ! ಆದುದರಿಂದ ನಾಡ–ಸಂಸ್ಕೃತಿಯೇ ಅಡಿಗಲ್ಲಾಗಿರುವ ನಮ್ಮ ಹಳ್ಳಿಗರಿಗೆ ರಸಿಕತೆಯು ಸಹಜವೆಂಬುವುದರಲ್ಲಿ ಏನು ಆಶ್ಚರ್ಯ?

ಶಿವಶರಣರ ದೊಡ್ಡ ಹಾಡುಗಳನ್ನೂ, ಗುಣಸಾಗರಿ, ರಾಮಾಯಣ, ಮಹಾಭಾರತ ಮೊದಲಾದುವುಗಳನ್ನೂ ಹಾಡುವಾಗ 'ಬಲಗೊಳ್ಳುವ ಸಂದಿ'ನಲ್ಲಿ ಆಗಲಿ 'ಮುಕ್ತಾಯ ಸಂದಿ'ನಲ್ಲಿ ಆಗಲಿ ನಮ್ಮ ಹಳ್ಳಿಯ ಹೆಣ್ಣುಮಕ್ಕಳು ತಮ್ಮೊಡನೆ ದನಿಗೊಡುವ ಹಾಗೂ

ಸೋಬಾನ ಸೊಲ್ಲು ಎತ್ತುವವರಿಗೆ, ಆಭಾರ ಮನ್ನಿಸಿ ವಿನಯದಿಂದ ಹಾಸ್ಯ ಮಾಡಿದ್ದಾರೆ. ಮುತ್ತೈದಿತನವೂ, ಮುಕ್ತಿಮಾರ್ಗವೂ, ಇಂದ್ರಸುಖವೂ ದೊರೆಯಲೆಂದು ಹಾರೈಸಿದ್ದಾರೆ.

ಹಾಡಿದವ್ವನಿಗೈದು, ಕೇಳಿದವ್ವಗ ಹತ್ತು
ಸೋಬಾನದವ್ವಗ ಸವರಾಜ್ಯ। ದೊರೆಯಾಲಿ
ಅನ್ಸೂತ ಹಾಡಿ ಸಾರ್‍ಯಾರ ॥ ಕೋ ॥

ಹಾಡಿದವ್ವನಿಕಿಂತ, ಕೇಳಿದವ್ವನಿಕಿಂತ
ಸೋಬಾನದವ್ವ ದಣಿದೆವ್ವ। ಮನಿಯಾಗಿ
ಹಾಲುಬಾನುಂಡು ಮನಗವ್ವ ॥ ಕೋ ॥

ಸೋಬಾನ ಸೋಹಾಡಿ, ಚೆವರ್ಥನಿ ಸೂಸಾಡಿ
ದನಿ ಕುಂತು ಕೂತು ಮನದಣಿದು। ಚೆಂಚೇಲಿ
ತೂಗ ಮಂಚಕ ತೂಗಾಡ ॥ ಕೋ ॥ *-ಜಾ-ಮ-ಭಾ-*

ಹೀಗೆ ವಿನಯದಿಂದ ಹಾಡಗಾರತಿಯು ಹಾಸ್ಯಮಾಡಿದ್ದಾಳೆ. ಬಾಯಿಂದ ಬಾಯಿಗೆ ಬಂದ, ಬರುತ್ತಿರುವ ಈ ಜಾನಪದ ಸಾಹಿತ್ಯವನ್ನು ಹಾಡುವ ಪದ್ಧತಿಯು ಅದನ್ನು ಕಲಿಸುವ ಮೂಲ ಯೋಜನೆಯಾಗಿದೆ. ಹಾಡುವವಳು ಮುಮ್ಮೇಳದವಳೆಂದರೆ, ದನಿಗೊಡುವವಳೂ, ಸೋಬಾನ ಸೊಲ್ಲೆತ್ತುವವಳೂ ಹಿಮ್ಮೇಳದವರೆನ್ನಬಹುದು. ಪದ್ಯವನ್ನು ಎರಡು ಸಾರೆಯೊ, ಮೂರು ಸಾರೆಯೊ ಎತ್ತಿ ಹಾಡುವುದರಿಂದ ಹಿಮ್ಮೇಳದವರಿಗೆ ಹಾಡನ್ನು ಕಲಿಯಲು ಅವಕಾಶ ದೊರೆಯುವುದು. ಆದುದರಿಂದ ಓದುಬರಹವನ್ನರಿಯದ ಹೆಣ್ಣುಮಕ್ಕಳು ಅದನ್ನು ಸಹಜವಾಗಿ ಕಲಿತು ನೆನಪಿನಲ್ಲಿಟ್ಟು ತಮಗೆ ಬೇಕಾದಾಗ ಹಾಡುವರು. ಮೊಟ್ಟಮೊದಲು, ಹಾಡಲಿಕ್ಕೆ ಬಾರದ ಇವರಿಗೆ ದನಿಕೊಡುವುದಕ್ಕೂ, ಸೋಬಾನವೆತ್ತುವುದಕ್ಕೂ ಬೇಸರ ಬರುವುದು ಸಹಜ. ಹಾಡಗಾರತಿಯು ಅವರ ಬೇಸರವನ್ನಿರಿತು, ಒಂದೆರಡು ಪದ್ಯಗಳನ್ನು ಹಾಡಿನಲ್ಲಿ ಜೋಡಿಸಿ ವಿನಯದಿಂದ ಉಪಹಾಸ ಮಾಡಿ ಎಚ್ಚರಿಸುವಳು. ಒಮ್ಮೊಮ್ಮೆ ಅದು ಹಾಸ್ಯದೊಡನೆ ಮುಖಸ್ತುತಿಯಿದ್ದದ್ದೂ ಕಂಡುಬರುವುದು.

ಗಂಟಲ ದನಿಕೇಳ, ಗಂಟಿ ಬಾರಿಸಿದ್ಹಂಗ
ಎಂಟು ಕಿನ್ನೂರಿ ನುಡಿದ್ಹಾಂಗ। ನನ ಗೆಳತಿ
ಪಂತ ನಿನಗ್ಯಾಕ ದಿನಿಗೋಡ ॥ *-ಜಾ.ಸಂ.-*

ಹಾಡುಗಳು ಜನಾಂಗದ ಪೀಳಿಗೆಗೆ ಚಾಜಾಗಿ ಉಳಿಯಲೆಂದು ಹಾಡಗಾರತಿಯು ಸುತ್ತುಮುತ್ತಲಿನ ಬಳಗದೊಡನೆ ವಿನಯದಿಂದ ಹಾಸ್ಯ ಮಾಡಿ ಹುರುದುಂಬಿಸಿ ನಗುವಳು; ಅಲ್ಲದೆ ಹಾಡಲು ತನಗೊಂದು ಸಮಯವನ್ನು ತಂದುಕೊಳ್ಳುವಳು. ಇದು ಹೆಣ್ಣುಮಕ್ಕಳಿಗೆ ಅಂಟಿಕೊಂಡ ಒಂದು ಸಹಜ ಗುಣವೆಂದೇ ಹೇಳಬಹುದು. ಇಂತಹವುಗಳು ಜನತೆಯ ಮೆಚ್ಚುಗೆಯನ್ನು ಪಡೆಯುವುದರಲ್ಲಿ ಸಂದೇಹವೇನು? ಜನಾಂಗವು ಅವುಗಳನ್ನು ಮರೆಯುವ ಬಗೆಯಾದರೂ ಹೇಗೆ? ಅಂತೆಯೇ ಅವು ಉಳಿದು ಬಂದಿವೆ ನಮಗಿಂದು.

ಜಾನಪದ ಸಾಹಿತ್ಯದಲ್ಲಿ ಹಾಸ್ಯವು ಒಮ್ಮೊಮ್ಮೆ ಅಪಹಾಸ್ಯವಾದುದೂ ಉಂಟು. ಅದರಲ್ಲಿಯೂ ಪ್ರೇಮ ಬಾಂಧವ್ಯಗಳು ಬೆಳೆಯಲೆಂಬುದೇ ನಮ್ಮ ಹಳ್ಳಿಗರ ಮೂಲ ಧ್ಯೇಯ. ಅಪಹಾಸ್ಯದಣುಕವಾಡಿ ಮೂದಲಿಸುವ ಹಾಡುಗಳಲ್ಲಿ ಮನಸ್ಸು ಒಮ್ಮೆ ಕೆರಳುವುದೂ ಉಂಟು. ಮತ್ತೊಮ್ಮೆ ಕನಲುವುದೂ ಉಂಟು; ಇನ್ನೊಮ್ಮೆ ಅದೆಲ್ಲವನ್ನು ಮರೆತು ನಕ್ಕು ಬಾಂಧವ್ಯವನ್ನು ಅರಳಿಸುವುದೂ ಉಂಟು. ಇಂತಹ ಹಾಡುಗಳಲ್ಲಿ ತುಂಬ ಕಿಡಿಯೆಬ್ಬಿಸುವ ಚಕಮಕಿಯ ಶಬ್ದಗಳೇ ಹೆಚ್ಚು. ಆದರೆ ಆ ಪ್ರಸಂಗ, ಸಮಯ ಮೊದಲಾದುವುಗಳು ನಗೆಗೆ ಈಡಾದರೂ ಮುಂದೆ ಚಣದಲ್ಲಿಯೇ ಮರೆತು ಹೋಗುವುವು. ಇಂತಹ ಸನ್ನಿವೇಶಗಳನ್ನು ಬೀಗ ಬೀಗತಿಯರ ಹಾಡುಗಳಲ್ಲಿ ಕಾಣಬಹುದು. ಅವುಗಳನ್ನು ಹಾಡುವುದು, ಮದುವೆಯಲ್ಲಿ ಬೀಗರೂಟವಾದ ಮೇಲೆ; ಬೀಗರನ್ನು ಬಿಳ್ಕೊಡುವ ಕಾಲಕ್ಕೆ ಇದನ್ನರಿಯದ ಅಂದಗೇಡಿಗಳು ರೀತಿನೀತಿಗಳ ಮಟ್ಟನ್ನು ದಾಟಿ ಒಯ್ದಾಡುವ ಸ್ಥಿತಿಗೆ ಬಂದದ್ದೂ ಉಂಟು. ಬೀಗತನವು ಕೇವಲ ಹಾದಿಯ ಮೇಲಿನ ಭೆಟ್ಟಿಯಲ್ಲ. ಹೊಸ ಮದುಮಕ್ಕಳ ಪ್ರೇಮ ಸಮ್ಮಿಲನವದು. ಇದನ್ನರಿತ ಎರಡೂ ಕಡೆಯ ಜನರು, ಎದ್ದ ಕಿಡಿಗಳು ನಗೆಬೆಳದಿಂಗಳದಲ್ಲಿ ಉದುರಿದ ಉಲ್ಕೆಗಳೆಂದು ಸರಸವಾಗಿ ನಕ್ಕು ಒಬ್ಬರನ್ನೊಬ್ಬರಪ್ಪಿ ಬೀಗತನವನ್ನು ಬಿಗಿಮಾಡಿಕೊಳ್ಳಲು ಪ್ರಯತ್ನ ಮಾಡಿ ಸಮಾಧಾನ ತಾಳುತ್ತಾರೆ. ಆದುದರಿಂದ ಮದುವೆಯು ಮುಗಿದ ನಂತರ ಒಬ್ಬರನ್ನೊಬ್ಬರು ಬಿಳ್ಕೊಳ್ಳುವ ಮುಂಚೆ ಹಂದರದಲ್ಲಿ ಮುಯ್ಯ, ಉಡುಪುಗಳ ಮಾನಮರ್ಯಾದೆಗಳನ್ನು ಮಾಡುತ್ತಾರೆ. ಇದನ್ನು ಮದುವೆಯಲ್ಲಿ ಈಗಲೂ ಆಚರಿಸುತ್ತಾರೆ.

ಬೀಗತಿ ಹಾಡು

ಚೂರಹೋಳ್ಗಿ, ಚೂರಹಪ್ಪಳ
ಸೂರಿ ಮಾಡ್ಯಾಳ ಬೀಗತಿ ॥
ಸೂರಿ ಮಾಡ್ಯಾಳ ಬೀಗತಿ
ನಮ್ಮೂರ ತನಕ ಕೀರ್ತಿ ॥೧॥

ಚೆಜ್ಜಕ ಹೋಳಿಗಿ, ಚೂಜಲ ತುಪ್ಪ
ಕಜ್ಜಾಲೆವ್ವ ಬೀಗತಿ ॥
ಕಜ್ಜಾಲೆವ್ವ ಬೀಗತಿ
ರಾಜೂರ ತನಕ ಕೀರ್ತಿ ॥೨॥

ಕಡುಬು ಮಾಡ್ಯಾಳ ಒಣಕಿಯಂತ
ಕುಣಕಾಲೆವ್ವ ಬೀಗತಿ ॥
ಕುಣಕಾಲೆವ್ವ ಬೀಗತಿ
ಕುಳೂರತನಕ ಕೀರ್ತಿ ॥೩॥

ಸ್ಯಾಂವಿಗೆ ಬಸ್ತಾಳ, ಬಾಲ್ಹುಳ ದಂತ
ಸಾಂವಂತ್ರೆವ್ವ ಬೀಗತಿ ॥
ಸಾಂವಂತ್ರೆವ್ವ ಬೀಗತಿ
ಸವಣೂರ ತನಕ ಕೀರ್ತಿ ॥೪॥

ಅನ್ನಾ ಮಾಡ್ಯಾಳ ಹಂಜಕ್ಕೆಂತ
ಬಂಜಾಲೆವ್ವ ಬೀಗತಿ ॥
ಬಂಜಾಲೆವ್ವ ಬೀಗತಿ
ಗಂಜ್ಯಾಳ ತನಕ ಕೀರ್ತಿ ॥೫॥

ಆಮ್ರಾ ಕಾಸ್ಯಾಳ, ಅಟಗಾಳೆಂತ
ಸೊಟಗಾಳೆವ್ವ ಬೀಗತಿ ॥
ಸೊಟಗಾಳೆವ್ವ ಬೀಗತಿ
ಕೊಟ್ಟೂರತನಕ ಕೀರ್ತಿ ॥೬॥

ಸೆಂಡಗಿ ಮಾಡ್ಯಾಳ, ಗೊಂಡಾಳೆಂತ
ಚೆಂಡಾಲೆವ್ವ ಬೀಗತಿ ॥
ಚೆಂಡಾಲೆವ್ವ ಬೀಗತಿ
ಸೊಂಡುರ ತನಕ ಕೀರ್ತಿ ॥೭॥

ಕೊಳಕ್ ಎಲಿಗೆ ಹುಳಕ್ ಅಡಕಿ
ಕಳಸಗಿತ್ತೆವ್ವ ಬೀಗತಿ ॥
ಕಳಸಗಿತ್ತೆವ್ವ ಬೀಗತಿ
ಬೆಳಗಲ್ ತನಕ ಕೀರ್ತಿ ॥೮॥ *–ಜಾ.ಸಂ.–*

ಬೀಗಬೀಗರು ಮದುವೆಯಲ್ಲಿ ಉಣಿಸು ತಿನಿಸುಗಳ ಮಾತೆನ್ನೆತ್ತಿ ಒಬ್ಬರಿಗೊಬ್ಬರ ಜೀನತನವನ್ನು ಅಪಹಾಸ್ಯಮಾಡಿ ನಕ್ಕಿದ್ದಾರೆ. ಹೇಳುವ ರೀತಿಯು ಸ್ವಲ್ಪ ಒರಟಾಗಿದೆ. ಅಷ್ಟೇ ಏಕೆ? 'ಚೂರಹೋಳ್ಗಿ ಚೂರಹಪ್ಪಳ.' 'ಚೆಜ್ಜಕಹೋಳ್ಗಿ ಚೂಜಲಿ ತುಪ್ಪ.' 'ವಣಕೀಯಂತ ಕಡುಬು,' 'ಬಾಲ್ಹುಳದಂತ ಸ್ಯಾಂವಿಗೆ,' 'ಅಟಗಾಳಿಯಂತ ಆಮ್ರ,' 'ಹಂಜಕ್ಕಿಯಂತ ಅನ್ನ' ಮೊದಲಾದವುಗಳನ್ನು ಸೂರೆ ಮಾಡಿ ಉಣಿಸಿದಳೆಂದೂ, ಅವಳ ಕೀರ್ತಿಯು ಊರೂರಿಗೆ ಹೋಯಿತೆಂದೂ ಮೂದಲಿಸಿ ಪರಿಹಾಸ್ಯ ಮಾಡಿದೆ. 'ಕಜ್ಜಾಲ,' ಕುಣಕಾಲ,' 'ಬಿಂಜಾಲ,' 'ಸೊಟಗಾಳಿ,' 'ಚೆಂಡಾಲ' ಮೊದಲಾದ ನಿಂದಾ ಪ್ರಧಾನ ಶಬ್ದಗಳಿಂದ ನಿಂದಿಸಿ ನಕ್ಕಿದೆ. ಇನ್ನೊಂದು ಹಾಡಿನಲ್ಲಿ ಬೀಗರ ಸ್ವರೂಪವೇ ತಿಳಿಯಿತೆಂದು ಹಾಸ್ಯವಾಡಿದ್ದಾರೆ. ಬೀಗಬೀಗರು ಅವರವರ ಸ್ಥಿತಿಗತಿಯನ್ನು ಅಣಕಿಸಿ, ಮದುವೆಯ ಸಂಭ್ರಮಕ್ಕೆ ಮಾಡಿದ ಖರ್ಚು ಬಲು ಖರ್ಚೆಂದು ಬಿದ್ದು ಬಿದ್ದು ನಕ್ಕಿದ್ದಾರೆ.

ಸರಕ್ಕ ಸರಿತಲ್ಲ ಬೀಗರ ಸುರಪ್ಪ ತಿಳಿತಲ್ಲ ॥ಪ॥

ಆನಿಬರತಾವಂತ ಆರಭಣವೀ ಕೊಂಡ
ಆನಲ್ಲೆ ನಿಮ್ಮ ದಳವೆಲ್ಲಿ ॥೧॥

ಆನೆಲ್ಲಿ ನಿಮ್ಮ ದಳವೆಲ್ಲಿ ಬೀಗಾ
ಬೊಳ್ಳೋರಿ ಮ್ಯಾಲೆ ಬರತಾರ ॥೨॥

ಒಂಟಿ ಬರತಾವಂತ, ಎಂಟು ಬಣವಿಕೊಂಡ
ಒಂಟೆಲ್ಲಿ ನಿಮ್ಮ ದಳವೆಲ್ಲಿ ॥೩॥

ಒಂಟೆಲ್ಲಿ ನಿಮ್ಮ ದಳವೆಲ್ಲಿ ಬೀಗಾ
ಕುಂಟ್ಹೋರಿ ಮ್ಯಾಲೆ ಬರತಾರ ॥೪॥

ಬೀಗತೊಳ್ಳೆವಳಂತ ದೇವರ ಮನಿಕೊಟ್ಟೆ
ದೇವರ ಕದ್ದಾಳ ಬಗಲಾದ ॥೫॥

ಬೀಗತೊಳ್ಳೆವಳಂತ ಅಡಗೀಯ ಮನಿಕೊಟ್ಟೆ
ಹೋಳೀಗಿ ಘಳಿಗಿ ಬಗಲಾಗ ॥೬॥

ಹೋಳೀಗಿ ಘಳಿಗಿ ಬಗಲಾಗ ಅವರಣ್ಣ
ನೀಡ್ಲಿಕ್ಕಿಲೆಂದು ಕಸಗೊಂಡ ॥೭॥

ಎಲ್ಲಾರು ಕಟ್ಯಾರ ಮಲ್ಲಿಗ್ಹೂವಿನ ದಂಡಿ
ಬೀಗೂತಿ ಕಟ್ಯಾಳ ಹುಲ್ಹೊರಿಯ ॥೮॥

ಬೀಗೂತಿ ಕಟ್ಯಾಳ ಹುಲ್ಹೊರಿಯ ಅವರಣ್ಣಾ
ಕುದುರಿಗಿಲ್ಲೆಂದು ಕಸಗೊಂಡ ॥೯॥ -ಮ-ದಂ-ಪು.೬೪

ದೂರಿಂದಲೇ ಬೀಗರ ಆಡಂಬರವನ್ನು ಕೇಳಿದ ಬೀಗರು, ಬರುವರೆಂದು ಅನೇಕ ರೀತಿಯಿಂದ ಸೌರಿಸುವರು. ಆದರೆ ಬರುವ ಬೀಗರ ಆನೆ, ಒಂಟೆ ಮೊದಲಾದುವುಗಳ ದಳವೆಲ್ಲಿ? ಅವರು ಬಂದದ್ದು ಬೋಳಹೋರಿಯ ಮೇಲೊ, ಕುಂಟಹೋರಿಯ ಮೇಲೊ. ಬಂದವರು ಒಳ್ಳೆಯವರೆಂದು ಇರಲಿಕ್ಕೆ ಅಡಗಿಯಮನೆ ಕೊಡಲು ಅವರು ನುರಿತ ಕಳ್ಳರಾಗಿ ಮನೆಯ ಸೌರಣಿಗಳನ್ನೇ ಕದ್ದರೆಂದು ಹಾಸ್ಯದಲ್ಲಿ ಆರೋಪಣೆ. ಒಣ ಜಂಬ ಇಲ್ಲದ ಆಡಂಬರ ಮೊದಲಾದುವುಗಳು ಕೊನೆಗೆ ಹಾಸ್ಯಾಸ್ಪದವಾದುವುಗಳೆಂದು ಈ ಹಾಡು ಸಮಾಜಕ್ಕೆ ಸಾರಿಹೇಳುವುದು. ಇಲ್ಲಿ ಮಾಡಿದ ಹಾಸ್ಯವು ಬಲು ಹದನಾಗಿದೆ. ಕೇಳಿದ ಬೀಗರ ಸಿಟ್ಟು ಉಕ್ಕಿಬಂದರೂ ಅದು ಕೇವಲ ಹಾಸ್ಯವೆಂದು ತಿಳಿದು ನಗಲು ಮನಸಿಲ್ಲದಿದ್ದರೂ ನಕ್ಕುಬಿಡುವರು. ಹಾಡಿನಲ್ಲಿ ಬಂದ ಬೀಗರು, ಬರುಮಾಡಿಕೊಂಡ ಬೀಗರ ಜಿಪುಣತನವನ್ನು ಹಾಸ್ಯವಾಡಿ ನಕ್ಕದ್ದೂ ಉಂಟು. ಚುಚ್ಚಿದ ಅಣಕವು ಎಲ್ಲರನ್ನೂ ಕೆರಳಿಸಿದೆ. ಒಂದರಲ್ಲಿ ಒಂಬತ್ತು ಸಾಧಿಸಿ, ಬಂದ ಖರ್ಚು ಬಲು ಖರ್ಚೆಂದು ಬೀಗನು ಹಂದ ಹಂದರ, ಕಂಬಕಂಬಕ್ಕೆ ತೆಕ್ಕೆ ಬೀಳುವುದೂ, ಬೀಗರು ಬಂದು ಹಂದರವನ್ನು ಸೇರಿದಾಗ ಹಾಸಲಿಕ್ಕೆ ಮನೆಯಲ್ಲಿ ಕಂಬಳಿ ಸಹ ಇಲ್ಲವೆಂದು ಮನಿ ಮನಿ ಕಂಬಳಿ ತರಲು ಹೋಗುವುದೂ, ಬೀಗರಿಗೆ ಜನತೆಯಲ್ಲಿ ಹಾಸ್ಯಾಸ್ಪದವಲ್ಲವೇ? ಜನರು ಅವರ ನಡತೆಯನ್ನು ನೋಡಿ ನಗದಿರುವರೇ?

ಅಚ್ಚೀಕ ಹೊಲಗೇರಿ, ಇಚ್ಚೀಕ ಮಾದರಗೇರಿ
ನಟ್ಟ ನಡ ಬರಕ ಶಿವಪೂಜೆ ॥೨೨॥

ನಟ್ಟ ನಡ ಬರಕ ಶಿವಪೂಜೆ ಆಗಟಿಗೆ
ನಾಲತ್ತ ನಾಯಿ ಬೊಗಳ್ಯಾವ ॥೨೩॥ *-ಮ-ದಂ-ಪು.೬೬*

ಮೊದಲು ಜಂಬ ಕೊಚ್ಚಿ ಬಂದ ಬೀಗರನ್ನು ಹಾಸ್ಯ ಮಾಡಿದ ಬೀಗರು ಹೊಲಗೇರಿ ಮಾದರಗೇರಿಯ ನಡುವೆ ಇದ್ದುಕೊಂಡು ಶಿವಪೂಜೆಯ ಮಾಡಲು 'ನಾಲತ್ತ ನಾಯಿ ಬೊಗಳ್ಯಾವ' ಎಂಬ ಬೀಭತ್ಸ ದೃಶ್ಯವನ್ನು ನೋಡಿ ಜನರು ಏನನ್ನಬಹುದು? ಅಣಕಕ್ಕೆ ಅಣುಕವಾಡಿ ಮುಯ್ಯಕ್ಕೆ ಮುಯ್ಯ ತೀರಿಸಿಕೊಂಡಿದ್ದಾರೆ ಹಾಡಿನಲ್ಲಿ ಬೀಗಬೀಗರು. ಹೀಗೆ ಒರಟು ಹಾಸ್ಯಗಳಲ್ಲದೆ ನಯವಿನಯಾದಿಗಳೊಂದಿಗೆ ಸೌಜನ್ಯತೆಯ ಸೌರಭವನ್ನು ಹಾಸ್ಯದೊಡನೆ ಸೂಸುವ ಬೀಗರ ಹಾಡುಗಳೂ ಇವೆ. ಅವುಗಳಲ್ಲಿ ಬರುವ ಮಾತುಗಳು ಸುಸಂಸ್ಕೃತಿಯ ಪರಿಮಳ ಪುಷ್ಪಗಳಾಗಿವೆ.

ಏಳೇಳ ಬೀಗೂತಿ-ನಿಂದೆಷ್ಟ ನಿದ್ದಿ ॥ ಪ ॥

ತಬಕದಿ ವೀಭೂತಿ ವೀಳೆಕುಂಕುಮಗಂಧ
ಸುಭದಿಂದ ತಂದೀವಿ ನಾವೆಲ್ಲರು।
ಸೊಬಗೀನ ಮಂತ್ರವ ತೆಗೆದುಕೊ ಬೇಗನೆ
ಅಬಲೆ ಇಷ್ಟೊತ್ಯಾಕ ಮಲಗಿದೇಳ ॥೧॥

ಲಲನೆ ಲಿಂಗದ ಚೌಕ, ತಲೆಗಿಂಬಿಲಿಟಗೊಂಡು
ಮಲಗಿಕೊಳ್ಳುವದು ಸರಿಯೇನ।
ಒಲವಿನ ಗುರುಕೊಟ್ಟ ಮಲಹರಲಿಂಗವ
ಒಲಿದ್ಹಾಕಿ ಕೊರಳೀಗೆ ತಗಿಯದೀರ ॥೨॥

ಬೆಳಗಿ ನೋಳೆದ್ದು ನೀ, ತೊಳೆದಿಲ್ಲ ಮಾರೀಯ
ಕಳೆಗೇಡಿ ನೀನೆಂಥ ಶಿವಭಕ್ತಳ।
ತಿಳದಿಲ್ಲ ಶಿವಭಕ್ತಿ ಹಲವು ವಿಭೂತಿಯ
ತಿಲಕವಿಲ್ಲದ ಹಣಿ ಸುಡಗಾಡೇಳ ॥೩॥

ಎದ್ದು ಮಾರಿಯ ತೊಳೆದು, ಮುದ್ದಲಿಂಗವ ನೋಡಿ
ತಿದ್ದಿ ವಿಭೂತಿ ಹಣಿಯಲಿಟ್ಟು।
ಗದ್ದಿಗಿ ಮ್ಯಾಲಿದ್ದ ಗುರುಲಿಂಗ ಜಂಗಮಗ
ಬಿದ್ದು ಶರಣೆಂದು ನೀನಿತ್ತ ಬಾರ ॥೪॥

ಹಣೆಯಲ್ಲಿ ವಿಭೂತಿ, ಅಣುಮಾತ್ರವಿಲ್ಲದೆ
ಸೊಣಗನ ಮಾರಿಯ ನೋಡದೆಂದು।
ಉಣಹೇಳ ಬಂದಿರು ಹೆಣ್ಣು ಮಕ್ಕಳೆಲ್ಲರು
ಗುಣಗುಟ್ಟುತಿಹರು ಬೇಗನೇಳ ॥೫॥

ಮಡದಿ ಕಂಡೆನು, ಕೆಟ್ಟ ನಡತೆ ನಿನ್ನದು ನಿನ್ನ
ಒಡೆಯ ಲಿಂಗಯ್ಯಗೆಡೆ ಮಾಡದೇ।
ಪಡಿಕೂಳ ತಿಂದು ನೀ, ಕುಡಿದೆಲ್ಲ ನೀರನ್ನು
ಒಡಲುಹರಿಯಲೆಂಥಾ ಪಾಪಿಷ್ಟಳ ॥೬॥

ಹುಟ್ಟು ಸಾವುಗಳನ್ನು, ಕಟ್ಟಿ ನೂಕುವ ನಮ್ಮ
ಪಟ್ಟದರಸು ಲಿಂಗ ಮೂರತಿಯ।
ಬೆಟ್ಟದುಡ್ಡಿನ ಸರಿಗಟ್ಟಿ ಮೂಢಳೆ ನಿನಗೆ ಲಿಂಗ
ಕೊಟ್ಟದ್ದು ತಪ್ಪೇನ ಗುರುರಾಯ ॥೭॥

ವೀರಶೈವಳೆ ಹಸ್ತ, ಪಾವೂಡವಿಲ್ಲದೆ
ಊರಿಂದೂರಿಗೆ ಬಂದೀ ಹ್ಯಾಂಗ।
ನಾರಿ ಲಿಂಗಯ್ಯಗ ನೀರೆರೆದು ನೀನುಟ್ಟ
ಸೀರಿ ಸೆರಗಿಲೆ ಲಿಂಗ ಒರಿಸಿದೆಲ್ಲ ॥೮॥

ಸೆರಗೀಲೆ ಮೂಗವ, ಒರಸೀದೆ ಹಗಲೆಲ್ಲ
ತಿರಗೂವೆ ಬಾಯಾಗಿಟಗೊಂಡು।
ಪರಿಪರಿ ಹೊಲಸಾದ ಸೀರೀಯ ಸೆರಗಿದು
ಸರಿಯಲ್ಲ ಲಿಂಗವ ತಿಕ್ಕು ವದು ॥೯॥

ಕಳೆದಿಟ್ಟ ಸೀರಿಯ, ನಿಳಿದು ಬಚ್ಚಲದೊಳು
ಕುಳಿತು ಮೈದೊಳೆದುಟ್ಟು ಮತ್ತದನೆ।
ಜಳಕವಾಯಿತು ಮಡಿ ಆದೆನೆಂಬುವೆ ನಿನ್ನ
ತಿಳುವಳಿಕೆಗೆ ಬೆಲೆ ಇಲ್ಲೇಳ ॥೧೦॥

ನಿತ್ಯದ ಸೀರಿಯ, ಸುತ್ತದೆ ನಡುವೀಗೆ
ಬತ್ತಲೆ ಬಚ್ಚಲದೊಳು ಕುಳಿತು।
ಕತ್ತೆನೀ ನೀರ ಎತ್ತ ಹೊಯ್ಕೊಂಬೂವೆ
ಗೊತ್ತಿಲ್ಲ ಜಳಕವ ಮಾಡೂವ ರೀತಿ ॥೧೧॥

ಶಂಭು ಲಿಂಗಯ್ಯಗ, ಇಂಬಾದ ಚೌಕವು
ತುಂಬೀದಿ ದುಡ್ಡು ದಮಡೆಗಳನ್ನ।
ರಂಭೆ ಬೇಕಾದಾಗ ಮುಸರಿಗೈಯಲಿ ತೆಗೆದು
ಕೊಂಬೂವೆ ನಿನಗೆಷ್ಟು ಭಯವಿಲ್ಲೇಳ ॥೧೨॥

ಅಡಕೀ ಲವಂಗವ ಕಡಿದು ಲಿಂಗಯ್ಯನ
ಹುಡುಗೆ ನಿತ್ಯ ನೀ ಚೌಕದೊಳು ತುಂಬಿ।
ಹುಡುಗಿ ನೀ ಕಂಡಲ್ಲಿ ಒಡೆದು ತಿಂಬುವಿಯಲ್ಲ
ಅಡಕಿ ಎಂಜಲ ಲಿಂಗ ಚೌಕದೊಳು ॥೧೩॥

ಹಟಮಾರಿ ನೀನಿತ್ಯ, ಮಟಕೆ ಹೋಗದೆ ಊರ
ಸೆಟೆಗೆವ್ವ ದ್ಯಾಮವ್ವ ದುರಗವ್ವಗ।
ಸೆಟೆ ಸೆಟೆದು ನೀ ಹೋಗಿ ಅಡ್ಡ ಬೀಳುವೆ ನಿನ್ನ
ಕುಟಿಲವ ಬಲ್ಲೆ ಮ್ಯಾಲಕೇಳ ॥೧೪॥

ಗುರುಲಿಂಗ ಜಂಗಮದ, ಹೊರತು ಪರದೈವವ
ಅರಿಯನು ಸದ್ಭಕ್ತ ಗುಣವಂತನು।
ಸರಿಯಾದ ಹೆಂಡತಿ ಅಲ್ಲ ನಮ್ಮಣ್ಣಗ
ಸಿರಿಗೇಡಿ ನೀನೆಲ್ಲಿ ಕುಳಿತಿದ್ದೇಳ ॥೧೫॥

ಅಣ್ಣನ ಮಗಳೆಂದು, ಹೆಣ್ಣು ತೆಗೆದುಕೊಂಡೆ
ನಿನ್ನ ದುರ್ನಡತೆಯ ನೋಡುದಲೆ।
ಇನ್ನು ಮೇಲಾದರೆ ಚೆನ್ನಾಗಿ ಶೀಲ ಸಂ
ಪನ್ನಳೆನಿಸಿಕೊ ಜಗದೊಳಗೇಳ ॥೧೬॥

ತರವಲ್ಲ ಶಿವಭಕ್ತಿ, ಅರಿಯದವರ ಹೆಣ್ಣ
ತರವಲ್ಲ ಬುದ್ಧಿವಂತರ ಮನೆಗೆ।
ಗುರುಲಿಂಗಜಂಗಮದ ಚರಣ ಸೇವೆಯೊಳಿಪ್ಪ
ಶರಣರ ಹೆಣ್ಣು ಯೋಗ್ಯವು ನಮಗೆ ॥೧೭॥

ಎಲೆ ಪಾಪಿ ಶಿವಭಕ್ತ ಕುಲದೋಳು ಹುಟ್ಟೀದಿ
ನೆಲೆಯನರಿಯವ್ವ ಶಿವಾಚಾರದ।
ಹಲವುದೇವರ ಭಕ್ತಿ ಕುಲಗೇಡಿ ನೀ ಮಾಡಿ
ಹೊಲೆಗೆಲಿಸಿದೆನ್ನ ತವರ ಮನಿಯ ॥೧೮॥ *–ಜಾ.ಸಂ.–*

ಅಣಕಿಸುವ ಧ್ವನಿಯು ಹಾಡಿನ ತುಂಬೆಲ್ಲ ತುಂಬಿದ್ದರೂ ಅದು ವೀರಶೈವ ಸಂಸ್ಕಾರವನ್ನು ಹೊಂದಿ ಬಂದಿರುವುದರಿಂದ ಮಾರ್ದವತೆಯು ತುಂಬಿ ತುಳಕಾಡುವುದು. ಧರ್ಮ, ನೀತಿ, ರೀತಿಗಳ ಉಪದೇಶವಿರುವದರಿಂದ ಮತ್ತಷ್ಟು ಬೇಕೆಂದೇ ಅನಿಸುವುದು. ಹಾಡಿನಲ್ಲಿ ಪಡೆಮಾತಿನೊಡನೆ ಒಡಮೂಡಿದ್ದು ವೀರಶೈವ ಹೆಣ್ಣುಮಕ್ಕಳ ಸುಸಂಸ್ಕೃತಿ; ಸುಳಿದಾಡುವುದು ಆಚಾರ ವಿಚಾರಗಳ ಸೌಭಾಗ್ಯ ಸುಳಿಗಾಳಿ. ಹೀಗೆ ಆಯಾ ಜಾತಿ ಪಂಗಡಗಳಲ್ಲಿ ಅನೇಕ ಹಾಡುಗಳು ನಿದರ್ಶನಕ್ಕೆ ಬರುವುವು. ಅವುಗಳಲ್ಲಿ ಕಂಡುಬರುವ ಹಾಸ್ಯವು ಬೀಗ ಬೀಗರನ್ನು ಕೆಣಕಿಸಿ ಬೀಗತನಕ್ಕೆ ಬಿಚ್ಚದ ಬೆಸುಗೆಯನ್ನು ಹಾಕಿಸುವುದೇ ಮೂಲವಾಗಿದೆ. ಸುಸಂಸ್ಕೃತರಿಗೆ ಇವು ಅಸಮಂಜಸವೆಂದೂ, ಅನುಚಿತವೆಂದೂ ಕಂಡರೂ ಹಳ್ಳಿಗರು ಇವುಗಳನ್ನು ಮದುವೆಯಲ್ಲಿ ಹಾಡಿ ಈಗಲೂ ತಣಿಯುತ್ತಾರೆ. ಅವರ ನಡೆನುಡಿಗಳ ರೂಪುರೇಷೆಗಳನ್ನು ಚಿತ್ರಿಸುವ ಈ ಹಾಡುಗಳು ಜನಾಂಗಕ್ಕೆ ಅತ್ಯವಶ್ಯವಾದುವುಗಳನ್ನು ಉಳಿಸದಿದ್ದರೆ ಜಾನಪದ ಹಾಸ್ಯದ ಈ ಭಾಗವು ಕಣ್ಮರೆಯಾಗಬಹುದಲ್ಲವೇ?

ಜನಾಂಗದಲ್ಲಿಯ ತಪ್ಪು ತಡೆಗಳನ್ನು ಉಪಹಾಸ ಮಾಡಿ ಹಾಸ್ಯದೊಡನೆ ಎಚ್ಚರಕೊಡುವ ಹಲಕೆಲವು ಹಾಡುಗಳನ್ನೂ ಜನಪದದಲ್ಲಿ ಕಾಣಬಹುದು. ಗಂಡನ ಮನೆಯಲ್ಲಿ ಬಾಳುವೆ ಮಾಡುವ ಹೆಣ್ಣಿಗೆ ಗಂಡನಲ್ಲಿ ತುಂಬ ಆತ್ಮವಿಶ್ವಾಸ. ನೆರೆಯವಳು ಮನಸ್ಸು ನೋಡಬೇಕೆಂದು ಹಾಸ್ಯ ಮಾಡಿದರೂ ಅವಳಿಗೆ ತಪ್ಪು ತಿಳವಳಿಕೆಯಾಗದು. ಪ್ರಪಂಚವನ್ನುಂಡು ತುಂಬಿದವಳಾಗಿ ಮಾತಾಡುತ್ತಾಳೆ.

ಚಿಂತಾಕು ಇಟಗೊಂಡು, ಚಪ್ಪಾಟ ಬಳಿವಾಕಿ
ಚಿಂತಿಲ್ಲ ಏನ ನಿನಗಿಷ್ಟು। ನಿಮ ರಾಯ
ಅಲ್ಲೊಬ್ಬ ಕೂಡ ನಗುತಿದ್ದಾ॥

ನಕ್ಕರೆ ನಗಲೆವ್ವಾ, ನಗೆಮುಖದ ಕ್ಯಾದೀಗಿ
ನಾ ಮುಚ್ಚಿ ಮುಡಿವ ಪರಿಮಳ। ದಾ ಹೂವ
ಅವಳೊಂದು ಘಳಿಗೆ ಮುಡಿಯಲಿ॥ *–ಗ.ಹಾ–ಪು.೬೮–*

ಬಾಳನ್ನರಿತ ಹೆಣ್ಣಿನ ಚಂಚಲ ಮನಸ್ಸು ಹೊಯ್ದಾಡದೆ ಹಾಸ್ಯಕ್ಕೆ ಕಿವಿಗೊಡದು; ಕಿವಿಗೊಟ್ಟರೂ ತಾಳ್ಮೆಯಿಂದ ಮಾತಾಡಬೇಕಾದ ಬಾಳ್ನುಡಿಗಳನ್ನೇ ನುಡಿದು ಬಿಡುವುದು. ಇಲ್ಲಿ ಹಾಸ್ಯವು ಅಲ್ಲಲ್ಲಿ ತಲೆಯೆತ್ತಿದ್ದರೂ ಹೆಣ್ಣಿನ ತಾಳ್ಮೆಯು ಗಂಭೀರತೆಯಲ್ಲಿ ಮುಳುಗಿ ಬಿಡುತ್ತದೆ.

ಈ ನುಡಿಗಳನ್ನು ಕೇಳುವವರು ಸಂಶಯದಿಂದ ನಗಬಹುದು; ಕೇಳಿದವಳು ಹಾಸ್ಯವಾಡಬೇಕೆಂದು ನಗಬಹುದು; ಎರಡನ್ನೂ ಅರಿತು ಹೇಳುವ ಹೆಣ್ಣು ಒಳ ಒಳಗೆ ನಕ್ಕರೂ ಹೊರಗೆ ಪತಿವ್ರತೆಗೆ ತಕ್ಕ ಸಹನಶೀಲತೆಯನ್ನು ತೋರಿಸುವುದು. ಇನ್ನೊಂದು ಸನ್ನಿವೇಶದಲ್ಲಿ ಗಂಡನು ತನ್ನ ಮೇಲೆ ಸವತಿಯನ್ನು ತರುವನೆಂದು ಕೇಳಿದ ಹೆಣ್ಣು

ತಂದಾರ ತರಲೆಂದೆ, ತಂಗ್ಯಾಗಿ ಇರಲೆಂದೆ
ನಾ ಬಿಟ್ಟ ಜವಳಿ ಉಡುಲೆಂದೆ। ನನಗಾಕಿ
ಜೋಡಾಗಿ ಕೂಡ ಇರಲೆಂದೆ॥ *–ಜಾ.ಸಂ.–*

ಎಂದು ನಾಡಂತ ಸವತಿಯಂತೆ ಹಾಸ್ಯವಾಡಿದ್ದಾಳೆ. ರಸತುಂಬಿ ಹಣ್ಣಾದ ಬಾಳನ್ನು ಉಣ್ಣುವ ಗಂಡನು ಮತ್ತೆ ಬಾಳ ಕಗ್ಗಾಯಿಗೆ ಬಯಸಬಹುದೇ?

ಹಣ್ಣಹಾಗಲಕಾಯ, ಎಣ್ಣ್ಯಾಗ ಕರಿದಿರುವೆ
ಉಂಡಾದರು ನೋಡೊ ಸವಿಗಾರ। ನನಮ್ಯಾಲ
ತಂದಾದರು ನೋಡೊ ಸವತೀಯ॥ *–ಜಾ.ಸಂ.–*

ಹೀಗೆ ಬಾಳಿನ ಆತ್ಮವಿಶ್ವಾಸವುಳ್ಳ ಹೆಣ್ಣು ಗಂಡನೆ 'ಸವಾಲು' ಕೊಟ್ಟರೂ ಅದು ಕೇವಲ ಮಾತಿನ ಹಾಸ್ಯ ಪರಿಹಾಸ್ಯಕ್ಕಾಗಿ. ಇಂತಹ ಅನೇಕ ಬಿಡಿಪದ್ಯಗಳನ್ನು ಹೆಣ್ಣುಮಕ್ಕಳು ದಿನನಿತ್ಯದ ಬೀಸುವಾಗ, ಕುಟ್ಟುವಾಗ ಹಾಡುವುದನ್ನು ಕೇಳಬಹುದು.

ಗಂಡು ಹೆಣ್ಣು ಪ್ರೇಮದ ಗುಟ್ಟಿನಿಂದ ಕೂಡಿರುವುದೇ ಪ್ರಪಂಚ, ಪ್ರಪಂಚರಥವು ಮುಂದೆ ಸಾಗಬೇಕಾದರೆ ಇಬ್ಬರೂ ಸಮಹೆಗಲು ಕೊಡಲೇಬೇಕು. ಅಂದರೆ ಮಾತ್ರ ಎಲ್ಲವೂ ಸುಸೂತ್ರ ಸಾಗುವುದು. ಅಂತೆಯೇ ಹಲಕೆಲವು ಪ್ರಸಂಗಗಳಲ್ಲಿ ಗಂಡುಹೆಣ್ಣು ಒಂದೆಡೆಗೆ ಕೂಡಿ, ಮಾತಾಡಿಕೊಂಡು ಪ್ರಪಂಚ ಮಾಡುವುದು. ಒಮ್ಮೊಮ್ಮೆ ಹೆಣ್ಣು ಹೊಯ್ಮಾಲೆಯಾಗಿ ಒಣಸೋಗು ಮಾಡಿ ಹಾಸ್ಯಕ್ಕೆ ಗುರಿಯಾಗುವುದೂ ಉಂಟು. ಇಂತಹ ಅನೇಕ ಸನ್ನಿವೇಶಗಳನ್ನು ಜಾನಪದದಲ್ಲಿ ಕಾಣಬಹುದು. ಮಕ್ಕಳ ಹುಚ್ಚು ಹಿಡಿದ ಹೆಣ್ಣಿಗೆ ಬಸಿರು ಬಯಕೆಯ ಹುಚ್ಚೇ ಹುಚ್ಚು. ಯಾವುದನ್ನೂ ಸಾರಾಸಾರ ವಿಚಾರಿಸದೆ ಮಾತಾಡಿ, ಅದು ಮಾತಾಡಿದಂತೆ ಸಂಭವಿಸದಿರಲು ಎಲ್ಲವೂ ನಗ್ಗೇಡಾಗುವುದು. ಇವುಗಳನ್ನು ಕಣ್ಣಾರೆ ಕಂಡ ಹಳ್ಳಿಗರು ಜನಪದಕ್ಕೆ ಎತ್ತಿ ಹಾಡದೆ ಬಿಡುವರೇ? ಕೆಳಗೆ ಕೊಟ್ಟ ಹಾಡಿನಲ್ಲಿ ಈ ಚಿತ್ರವನ್ನು ಕಾಣಬಹುದು.

'ಬಸರಿದ್ದೀನ್ಹೆಸರಿನ್ನೇನಿಡೂನ'?

೧ನೆಯ ಚೌಕು :

ಸತಿ ಪತಿ ಕೂಡಿ ಜೋಡಿ
ಹಿತದಿಂದ ಮಲಗಿದಾಗ
ಗೊತ್ತು ಮಾಡಿ ಹೇಳ್ಗಂಡಾ ಹ್ಯಾಂಗ್ಮಾಡೂನ?
ನಿನ್ಮುಂದ ಮಾತೊಂದು
ಬಿಚ್ಚಿ ಮುಚ್ಚಿ ಹೇಳ್ತೀನು
ಬಸರಿದ್ದೀನ್ಹೆಸರಿನ್ನ ಏನಿಡೂನ?"
ಗಂಡು ಹಿಗ್ಗಿ ನಕ್ಕ ನಗಿ
'ಸುಳ್ಳತಗಿ ಗಾಳಮಾತ
ನನ್ಮುಂದ ಹೇಳಬ್ಯಾಡ ಇಂಥಾ ಹೊಯ್ಕಾ'
'ಔ ಶಿವನೆ ಎಂಥಾ ಮಾತ?
ತಿಂಗಳ ಮ್ಯಾಲೆ ಒಂದಿನಾ ಆಯ್ತು
ಮಂದಿ ಹಾಂಗ ಹೇಳಕ್ಕೆಲ್ಲ ನಾ ಸುಮಕೆ'॥
'ಕುರುಬರಂಥ ಅರಬರಂಡಿ
ಜರಬದಿಂದ ಬೇದ್ಹೇಳ್ತೀನು
ಅರಬಿಸಾತ ಮಾಡ ಕೂಸೀಗಿ ಮೆತ್ತಗ್ಹಾಸುದಕ'॥
ಕೆಟ್ಟ ತೊಟ್ಲ ಕಟ್ಟಾಂವಲ್ಲ
ನಿತ್ತ ತೂಗ ಅಳುವಾಗ
ಬಿಟ್ಟು ಹೊರಗ ಹೋದ ರೊದ್ದು ಮುರದೇನ ಸೊಣಕ॥
ಖುಷಿಯಿಂದ ಕೂತಕೊಂಡು
ಹೇಣ್ತಿಮುಂದ ಹೇಳ್ತಾನ
'ಮಕ್ಕಳ ಮಾರಿ ಇದ್ದಿದ್ದಿಲ್ಲ ಇಂದಿನ ತನಕಾ।
ಇನ್ನ ಮಾತ್ರ ದೇವರ ಕೊಟ್ಟಾ
ಸಂಶಾಇಲ್ಲ ಎಳ್ಳಷ್ಟ
ನಡೆತಾನ ಮಾಡಬೇಕ ನಮತಕ್ಕ'॥
ಹೇಣತ್ಹೇಳತಾಳ ಓಡಾಡಿ।
ವರ ನೋಡಿ ಬಾರೊ ತಿರುಗಾಡಿ॥

ಮುಚ್ಚಿ ಹುಚ್ಚನಂತವ ನೀ ಖೋಡಿ।
ಕೋರಿಹರಕರ ನಡೆತನ ಮಾಡಿಗೀಡಿ।
ಅಳಿಯಾಗ ಹಾಕಬೇಕ ಖಡಿ ತೋಡಿ।
ಸೀರಿ ಕುಬುಸಬೇಕ ಧೋತ್ರ ಜೋಡಿ॥
ಯಾತರಾಗ ಏನೂs ಇಲ್ಲ
ಖಾತ್ರಿ ಮಾತ್ರ ಬೀಗರು ಬೇಕು
ರಾತ್ರಿ ಹಗಲು ಕೂಡಿ ನಾವು ಮದವಿ ಮಾಡೂನ!
ನಿನ್ನಿಂದ ಮಾತೊಂದು
ಬಿಚ್ಚಿ ಮುಚ್ಚಿ ಹೇಳ್ತೀನು
ಬಸರಿದ್ದೀನ್ಹೆಸರಿನ್ನೇನಿಡೂನ॥ –ಜೀ.ಸಂ.–ಪು.೪೧

ಹೆಂಡತಿಯು ಬಸಿರಿರುವೆನೆಂದು ಹೇಳಿದರೆ. ಗಂಡನಿಗೂ ಆನಂದ. ಹಾಡಿನಲ್ಲಿ ಹೆಂಡತಿಯ ಮಾತನ್ನು ನಂಬಿ ಮುಂದೆ ಬೇಕಾಗುವ ಎಲ್ಲ ಸಾಹಿತ್ಯಗಳನ್ನು ಗಂಡನು ಬಲು ದಕ್ಷತೆಯಿಂದ ಮಾಡಲು ಹೆಂಡತಿಗೆ ಹೇಳುತ್ತಾನೆ. ಅವಳನ್ನು ಮುಂದೆ ಕೂಡ್ರಿಸಿಕೊಂಡು ಬಲು ಖುಷಿಯಿಂದ ಮಕ್ಕಳಾದ ಮೇಲೆ ಉತ್ತಮ ನಡೆತನವನ್ನು ಮಾಡೋಣವೆಂದು ಗೇಣಿಸುತ್ತಾನೆ. ಆ ಗೇಣಿಕೆಯು ಹಾಸ್ಯದಿಂದ ಉಕ್ಕುತ್ತದೆ. ಓಡಾಡಿ ಸೌರಣೆಯನ್ನು ಮಾಡುವ ಗಂಡನನ್ನು ಅದೇ ತಿಂಗಳಹೊತಿ ತಡೆದ ಹೆಂಡತಿಯು "ತಿಂಗಳ ಬಸರಾ ಕೇಳಿಕೊಂಡು। ಗುಂಗಭಾಳ ಸೇರ್ಯಾದವ್ವ। ಮಂಗನ್ಹಾಂಗ ಮಾಡತಾನ ಮಾಡಲಿನ್ನೇನ॥" ಎಂದು ಗಾಬರಿಯಾಗಿ ಹಡೆಯದ ಕೂಸಿನ ಮೇಲೆ ಗಂಡನ ಮನಸ್ಸು ಹೆಚ್ಚುತ್ತಿರುವದೆಂದೂ ತನ್ನ ಮೇಲಿನ ಪ್ರೇಮವು ಕಡಿಮೆಯಾಗುವದೆಂದೂ ಮನದಲ್ಲಿ ಹಾಸ್ಯಾಸ್ಪದವಾದ ಅಸೂಯೆ. ಮಗನನ್ನು ಹಡೆಯುವೆನೆಂಬ ಹಿಗ್ಗಿನಲ್ಲಿದ್ದ ಗಂಡನು ಹೆಂಡತಿಗೆ ಉಡುಗರೆ ಮೊದಲಾದುವುಗಳನ್ನು ತವರಿಂದ ತರಬೇಕೆಂದು ಉಪದ್ರ ಕೊಡುವನು. "ಹಡಿಯು ದಿನಾ ಸನೀ ಬಂತು। ಎಂಟs ತಿಂಗಳ ಮುಂದುಳೀತು। ಕೆಟ್ಟ ಗಿಟ್ಟ ಹಡೆದೀ ನಿನ್ನ ಚಟ್ಟಾ ಎತ್ತೀನ"॥ ಎಂದು ಅವಳಿಗೆ ಎಚ್ಚರ ಕೊಡುತ್ತಾನೆ. 'ಗಂಡು' ಹಡೆಯುವದೊ ಅಥವಾ 'ಹೆಣ್ಣು' ಹಡೆಯುವದೊ ಎಂಬ ಮಾತಿನ ತುರಿಸಾಗಿ ಅವನು ಅವಳನ್ನು ಹೊಡೆದು ತನ್ನ ಕೆಲಸಕ್ಕೆ ಹೋಗುವನು. ಅವನು ಹೋದ ಮೇಲೆ ಹೊಲ ಹೋಗಲು, ತಿರುಗಿ ಬಂದ ಮೇಲೆ.

'ನೀ ನನ್ನ ಬಡಿಯ ಬಾರದಿತ್ತ।
ಕೂಸೀಗಿ ಪೆಟ್ಟ ಪೂರಸ್ತ॥
ಹೆಣ್ಣಲ್ಲ ಗಂಡು ಹುಟ್ಟಿತ್ತ।
ಥೇಟ ಹೋಲಿಕಿ ನಿನ್ಹಾಂಗ ಇತ್ತ'॥
ಗಂಡ ಅಳತಾನ ಭೋರಾಡಿ – ಕುಂತ।
'ಮೊದಲೆ ದೇವರು ಕುಡಬಾರದಿತ್ತ'॥ –ಜೀ.ಸಂ.–

ಹೀಗೆ ಹೊಡೆದ ನೆವಮಾಡಿ ಹಾಡಿಕೊಂಡು ಅಳುವಳು. ಇಲ್ಲಿ ನೆವತೊಟ್ಟ ಹೆಣ್ಣಿನ ಹೊಯ್ಮಾಲಿತನವು ಅಡಿಗಡಿಗೆ ನಗೆಯೂಟವನ್ನೇ ಉಣಿಸುವುದು. ಹೆಣ್ಣಿನ ಸೋಬತಿಯಲ್ಲಿ ಗಂಡು, ಸೋತು ಹೇಗೆ ಮೋಸ ಹೋಗುವದೆಂಬುದನ್ನು ಇಲ್ಲಿ ಹಾಸ್ಯದೊಡನೆ ಕಾಣಬಹುದು. ಗಂಡುಹೆಣ್ಣಿನ ಹಾವಭಾವಗಳನ್ನು ಮೂಡಿಸುವ ಈ ಲಾವಣಿಯು ಹಾಸ್ಯದ ಕಾರಂಜಿಯೆಂದೇ ಅನ್ನಬಹುದು. ಇದನ್ನು ಓದುವ, ಕೇಳುವ ರಸಿಕರು ತಮಗೆ ಬೇಕಾದಾಗ ನೆನಪು ಮಾಡಿಕೊಂಡು ನಗಬಹುದು. ಅಷ್ಟು ಮಾಸದ ಹಾಸ್ಯವಿದೆ ಇಲ್ಲಿ! ಹೆಣ್ಣುಮಕ್ಕಳು ಹಾಡುವ ಬಸಿರು ಬಯಕೆಯ ಹಾಡುಗಳೂ ಈ ತೆರದ್ದಿರುವುವು.

ಒಕ್ಕಲಿಗನು ನಿಸರ್ಗದಲ್ಲಿ ಹಕ್ಕಿಪಕ್ಕಿಗಳೊಡನೆ ಹಾಸ್ಯವಾಡ ಹೋಗಿದ್ದಾನೆ. ಬಾಳಿನಲ್ಲಿಯ ಹಾಸ್ಯಪರಿಹಾಸ್ಯಗಳನ್ನೂ ಅವುಗಳಿಗೆ ಅಂಟಿಸಿದ್ದಾನೆ.

ಕಾಗವ್ವ ಬಸರಾಗಿ, ಗುಬ್ಬೆವ್ವ ಹಲಿವುಳಿದು
ಟೀಟ ಟಿಮ್ಮೆವ್ವ ಹೊಳಿಮೆಟ್ಟಿ। ಓಡ್ಯಾಡಿ
ಬುರ್ಲೆವ್ವ ನೀರಹೊರತಾಳ॥ –ಜಾ.ಸಂ.–

ಎಲ್ಲ ಹಕ್ಕಿಗಳ ಜೀವನವನ್ನು ಮನಗಂಡು ಹಳ್ಳಿಗರು ಈ ಹಾಡನ್ನು ಕೇಳಿದ ಕೂಡಲೆ ಹೊಟ್ಟೆ ಉಬ್ಬುವಂತೆ ನಕ್ಕು ಸುಮ್ಮನಾಗಲು ಪ್ರಯತ್ನಿಸಿದರೂ ಆ ಹಕ್ಕಿಗಳು ಕಣ್ಮುಂದೆ ನಿಲ್ಲಲು 'ಖೊಳ್ಳೆಂದು' ಮತ್ತೆ ನಕ್ಕೇ ಬಿಡುವರು. ಇದನ್ನರಿಯದ ಪಟ್ಟಣಿಗರು ಹಾಸ್ಯವನ್ನು ತಿಳಿಯಲಾರದೆ ಅದರರ್ಥವನ್ನು ಹುಡುಕಲು ಉದ್ಯುಕ್ತರಾಗುತ್ತಾರೆ.

ಚಿಕ್ಕಾಡು ಗುಂಗಾಡು, ತಗಣೆ ನಿಬ್ಬಣಕ್ಹೋಗಿ
ಕೂರೆವ್ವ ಕಳಸ ಹಿಡಿದಾಳ। ಇಣಿಚಿವ್ವ
ಹಾರ್‍ಯಾಡಿ ಡೊಳ್ಳ ಬಡಿದಾಳ॥ –ಜಾ.ಸಂ.–

ಮಾನವ ಪ್ರಪಂಚವನ್ನು ಕ್ರಿಮಿಕೀಟಕಗಳಿಗೆ ಅಂಟಿಸಿ ಅವು ಅದನ್ನು ಅನುಕರಣ ಮಾಡುವುವೆಂದು ಹಾಸ್ಯಮಾಡಿದ್ದಾನೆ. ಪಟ್ಟಣಿಗರಿಗೆ ಈ ಹಾಸ್ಯವು ಜಿಗುಪ್ಸೆಯನ್ನುಂಟು ಮಾಡಬಹುದು. ಆದರೆ ಕ್ರಿಮಿಕೀಟಕಗಳನ್ನು ಕಾಣುವ ಒಕ್ಕಲಿಗನಿಗೆ ಈ ಪದ್ಯವು ಬಿಡುವೇಳೆಯಲ್ಲಿ ಕೂತಾಗ, ಮಾತಾಡುತ್ತಿರಲು ಹಾಸ್ಯವಾಗುವುದು.

'ಹಂಗಾಮು' ಮೀರಿದ ವರ್ತನೆಯು ನಗ್ಗೇಡೆಂಬ ಮಾತನ್ನು ಒಕ್ಕಲಿಗನು ಪೂರಾ ಅರಿತಿದ್ದಾನೆ. ಮುದುಕರು ಹರೆಯದವರಂತೆ ವರ್ತಿಸಿದರೆ ಜನತೆಯಲ್ಲಿ ಅದು ಅಪಹಾಸ್ಯವಾಗಲಾರದೇ?

ಮುದುಕ ಮುದಕೀ ಕೂಡಿ, ಮುದಕವಿ ಸಂತೀಗ್ಹೋಗಿ
ಮುದುಕಿ ಬೇಡ್ಯಾಳ ಕುಲಾಯಿ । ಆ ಮುದಕ
ಕಟಬಗಲಿ ಕಂಡು ಅಳತಾನೊ ॥ *–ಜಾ.ಸಂ.–*

ಎಂದು ರೈತನು ಹಾಡಿ ನಕ್ಕಿದ್ದಾನೆ. 'ಹಂಗಾಮ ಹೋದ ಮೇಲೆ ನಿಂಗಮ್ಮ ಬಸರಾದ್ದಂಗ' ಎಂಬ ಗಾದೆಯ ಮಾತು ಬಳಕೆಯಲ್ಲಿದೆ. ನಮ್ಮ ಹಳ್ಳಿಗರು ಸಲಿಗೆ ಸೋಬತಿಯಿಂದಲೂ ಹಾಸ್ಯವಾಡಿದ್ದಾರೆ. ಭೂಮಿಯ ತಿರಗುವ ರೈತನು, ಕುರುಬರ ಹುಡುಗಿಯನ್ನು ಮೇಲಿಂದ ಮೇಲೆ ನೋಡುತ್ತಾನೆ. ಅವಳೊಡನೆ ಸಲಿಗೆ ಸಲ್ಲಾಪಗಳನ್ನೂ ಆಡುವನು. ಅವಳ ರೂಪ, ಬಲವಾದ ಕಾಯ ಕಣ್ಮುಂದೆ ನಿಲ್ಲಲು–

ಕುರುಬರ ಹುಡುಗೀಯ, ತುರುಬ್ಯಾಕ ನಿಗರೇತೊ
ತುರಬಿನಾಗೆರಡು ಕುರಣೀಯ । ಕಟಗೊಂಡು
ಕುರಿಯ ಟರ್‍ಹೆಂದು ತಿರುವ್ಯಾಳೊ ॥ *–ಜಾ.ಸಂ.–*

ಎಂದು ಅವಳು ಕುರಿಕಾಯುವ ಚಿತ್ರವನ್ನು ನಗೆಬರುವಂತೆ ಹಾಡಿದ್ದಾನೆ. ಅವನಿಗೆ ವಡ್ಡರವಳ ಸೋಬತಿಯು ಗೊಡ್ಡಮ್ಮಿ ಹೈನ ಉಂಡಂತೆ.

ವಡ್ಡರ ಮನಿ ಮುಂದ, ವಟ್ಟಟ್ಟಗಿಡ ಹುಟ್ಟಿ
ವಡ್ಡರ ಹುಡುಗಿಯ ಗೆಳತಾನ । ಮಾಡಿದರ
ಗೊಡ್ಡೆಮ್ಮೆ ಹೈನ ಉಣಿಸ್ಯಾಳೊ ॥ *–ಜಾ.ಸಂ.–*

ಇಲ್ಲಿ ಹಾಸ್ಯವು ಅವಳಿರುವಿಕೆಗೆ ಅನುಗುಣವಾಗಿ ಬಂದಿದೆ–

ಕಟ್ಟರಿವಿ ಕಂದ್ಹಾಕಿ, ಎಂಟು ಮಗಿ ಹಾಲ್ಹಿಂಡಿ
ನೆಂಟsರು ಉಂಡು ನೆಲವುಂಡು । ಈಗೀನ
ಕುಂಟ್ಲೇರು ಉಂಡು ಕುಡಿಕುಂಡು ॥ *–ಜಾ.ಸಂ.–*

ಎಷ್ಟು ಹಾಲು ಹಿಂಡಿರಬಹುದು ಆ ಕಂದ ಹಾಕಿದ ಕಟ್ಟರಿವಿ? ರೈತನೇನೊ ಈ ಹಾಸ್ಯವನ್ನು ಸಹಜ ಮಾಡಿರಬಹುದು. ಆದರೆ ಇದರಲ್ಲಿಯ ಧ್ವನಿಯನ್ನು ಎತ್ತಿ ಹೇಳುವದಕ್ಕಿಂತ ಓದುಗರಿಗೇ ಬಿಡುವುದು ಉಚಿತ. ಹೀಗೆ ಅವನು ಏನೋ ಒಂದು ವಿಪರೀತ ಪರಿಹಾಸ್ಯವಾಡಿ ನಕ್ಕಿದ್ದಾನೆ.

ಉದ್ಯೋಗವಿಲ್ಲದೆ, ಹಳ್ಳಿಯ ಹೆಣ್ಣುಮಕ್ಕಳು ಒಂದೆಡೆ ಕೂಡಿದರೆ ಹೊತ್ತುಗಳೆಯಲು ಹಾಸ್ಯ, ಹರಟೆಗಳನ್ನೂ ಕೊಚ್ಚುವುದುಂಟು. ಅವು ಚುಟುಕು ಪದ್ಯಗಳಿರಬಹುದು; ಕಥೆಗಳಿರಬಹುದು; ಇಲ್ಲವೆ ನಾಣ್ಣುಡಿಗಳಿರಬಹುದು. ಇವು ಜನಪದದಲ್ಲಿ ತುಂಬ ಬಳಕೆಯಲ್ಲಿರುವುದನ್ನು ಮನವಾರೆ ಕಾಣಬಹುದು. 'ತಿಂದೋಡಿ' ಹೆಣ್ಣುಬರುವುದನ್ನು ಕಂಡು–

ತಿಂದೋಡಿ ನಿನಗಂಡ, ತಿಂದೇನ ಮಾಡಂದ
ತಿಂದೇಳ ಮನಿಯ ತಿರಗಂದ । ಉಟಸೀರಿ
ಉಂಗಟಕ ಹಾಕಿ ಹರಿಯೆಂದ ॥ *–ಗ–ಹಾ–ಪು.೬೨.*

"ಕುಂತು ಉಂಡ್ರ ಕುಡಿಕಿ ಹೊನ್ನು ಸಾಲದು" ಎಂಬುದನ್ನರಿತು, ಪಾಲಿಸುವ ಅವರು ತಿಂದೋಡಿಗೆ ಹೀಗೆ ಹಾಸ್ಯ ಮಾಡುವುದರಲ್ಲಿ ತಪ್ಪೇನು? ಈ ಹಾಸ್ಯವು ಅವಳನ್ನು ಕೇವಲ ಅಣಕಿಸಲು ಇಲ್ಲ. ಉಳಿದವರು ತಿಂದೋಡಿ ಆಗಬಾರದೆಂದು, ತಿಂದೋಡಿಯು ತಪ್ಪನ್ನು ತಿದ್ದುಕೊಳ್ಳಲೆಂದು. 'ನಾ ಹಾಡು, ನೀ ಹಾಡು' ಎಂದು ಅವಳೊಂದು ಇವಳೊಂದು ಹಾಡು ಹಾಡುತ್ತ ಅವರು ಹಾಡುವ ಸ್ಪರ್ಧೆಗೆ ಇಳಿಯುತ್ತಿದ್ದರೆಂದು ಕಾಣುತ್ತದೆ.

ಮೂರ ಹಾಡಿನ ಮೂಳ, ಮುಕ್ಕಟ್ಟು ಬರಬೇಡ
ಮೂಗೀಗೆ ಕವಡಿ ಪೋಣ್ಸೇನ । ಎಲೆ ಮಗಳ
ಊರಾಗ ನಿನ್ನ ಮೆರೆಸೇನ ॥ *–ಹ–ಹಾ–ಪು. ೭೭*

ಇಲ್ಲಿ ಅಣಕದ ಕಿಡಿಗಳಿದ್ದರೂ 'ಮೂಗೀಗೆ ಕವಡಿ ಪೋಣ್ಸೇನ,' 'ಮೂರ ಹಾಡಿನ ಮೂಳ,' 'ಊರಾಗ ಮೆರೆಸೇನೆ' ಈ ಮಾತುಗಳು ಸ್ಪರ್ಧೆಯಲ್ಲಿ ಬಳಸುವ ಕಟುತರ ಹಾಸ್ಯಗಳು. ಇಂತಹ ನುಡಿಗಳನ್ನು 'ಕಲ್ಕಿ' ಮತ್ತು 'ತುರಾಯಿ' ಲಾವಣಿಗಾರರು ಹೇರಳವಾಗಿ ಬಳಸಿದ್ದನ್ನು ನೋಡಬಹುದು. ವೇಷ, ಭೂಷಣ, ಶೃಂಗಾರ ಬೆಡಗು ಮೊದಲಾದ ಮಾತುಗಳನ್ನೆತ್ತಿ

ಕಾಳೀಗೆ ಕಪ್ಪ್ಯಾಕ, ಬೋಳೀಗೆ ತುರುಬ್ಯಾಕ
ಬಡವ್ನ ಮಡದೀಗೆ ಬೆಡಗೇಕೆ । ದಂಡೀನ
ಬಿಡಿಗುದರಿಗೇಕೆ ಮೊಕ ಹಾರ ॥ *–ಹ–ಹಾ–ಪು.೬೭.*

ಕಪ್ಪು ಹೆಣ್ಣು ಕಾಡಿಗೆ ಹಚ್ಚುವುದು, ಬೋಳ ತುರುಬು ಬೇಡುವುದು, ಬಡವನ ಹೆಂಡತಿ ಬೆಡಗು ಮಾಡುವುದು, ಪರಿಹಾಸವಲ್ಲವೇ?

ಹಾಸ್ಯತುಂಬಿದ ಜಾನಪದ ಕಥೆಗಳಂತೂ ಹಳ್ಳಿಯ ಹೆಣ್ಣುಮಕ್ಕಳ ಕಟ್ಟೆಯ ಪುರಾಣಗಳು. ಅವು ಹಳ್ಳಿಗಳಲ್ಲಿ ಹೇರಳವಾಗಿವೆ. 'ಅಡಗಲಜ್ಜಿಯ ಕಥೆಗಳ' ದೊಡ್ಡ ಸಂಗ್ರಹವನ್ನೇ ಮಾಡಬಹುದು. 'ಗಿಳಿರಾಮರ ಕಥೆಗಳು' 'ಶೃಂಗಾರ ಕಥೆಗಳು' 'ಬೆಡಗಿನ ಕಥೆಗಳು' ಮೊದಲಾದ ಕಥೆಗಳ ಅಮೌಲ್ಯಸಂಗ್ರಹಗಳನ್ನು ಮಾಡಬಹುದು. ಇದನ್ನು ಮುಂಬರುವ ಜಾನಪದ ಸಾಹಿತಿಗಳಿಗೆ ಬಿಟ್ಟುಕೊಟ್ಟಿದೆ.

ಮಾದರಿಗಾಗಿ, ಹಾಸ್ಯಭರಿತ ಒಂದು ಕಥೆಯನ್ನು ಕೊಟ್ಟಿದೆ. “ಮದುವೆಯಾದ ಮೇಲೆ ಅಳಿಯನು ಹೆಂಡತಿಯನ್ನು ಮನೆಯಲ್ಲಿಟ್ಟು ಆವುದೊ ಕಾರಣ ಅತ್ತೆಯ ಮನೆಗೆ ಹೋದ. ಅಳಿಯ ಬಂದನೆಂದು ಅತ್ತೆಯು ಆದರ ಸತ್ಕಾರ ಮಾಡಿ ಕಡುಬಿನ ಊಟ ಮಾಡಿದಳು. ಎಂದೂ ಕಡುಬನ್ನುಣ್ಣದ ಅವನಿಗೆ ಅವುಗಳ ರುಚಿಯೇರಿ ತೃಪ್ತಿಯಾಗುವವರೆಗೆ ಊಟ ಮಾಡಿದ. ಊರಿಗೆ ಹೋದ ಮೇಲೆ ಹೆಂಡತಿಯ ಕೈಯಿಂದ ಮಾಡಿಸಿಕೊಂಡು ಎಥೇಚ್ಛ ಊಟ ಮಾಡಬೇಕೆಂದು ಆಶೆಯಾಗಿ ಅತ್ತೆಯ ಬಾಯಿಂದ ಆ ಊಟದ ಹೆಸರನ್ನು ಕೇಳಿದ. ‘ಕಡಬು’ ‘ಕಡುಬು’ ಎಂದು ಮನದಲ್ಲಿಯೇ ಪಠನ ಮಾಡುತ್ತ ರಾತ್ರಿಯಲ್ಲಿ ನಿದ್ರೆ ಹೋದ. ಇರುಳು ಹೇಗೋ ಕಳೆದು ಬೆಳಗಾಯಿತು. ಏಳುವದರಲ್ಲಿಯೇ ‘ಕಡಬು’ ಶಬ್ದವನ್ನು ಮರೆತು ಮತ್ತೆ ಅತ್ತೆಯಿಂದ ಕೇಳಿಕೊಂಡ. ಆತುರತೆಯಿಂದ ಊರಿಗೆ ಹೊರಟ. ಹಾದಿಗುಂಟ ‘ಕಡಬು’ ‘ಕಡಬು’ ಎಂದನ್ನುತ್ತಲೇ ನಡೆದ. ಮೇಲದಿಕ್ಕಿಗೆ ಮಳೆಯಾಗಿ ಊರ ಮುಂದಿನ ದೊಡ್ಡ ಹಳ್ಳವು ಬಂದು ಜಾರಿಕೆಯಾಗಿತ್ತು. ಹಳ್ಳವನ್ನು ದಾಟುವಾಗ ಜಾರಿಬೀಳಲು ‘ಉಂಯಿಕ್’ ಎಂದು ಅಂದ. ‘ಕಡಬನ್ನು’ ಮರೆತು ‘ಉಂಯಿಕ್’ ಎಂದೇ ಅನ್ನುತ್ತ ಮನೆಯನ್ನು ಸೇರಿದ. ಹೆಂಡತಿಯನ್ನು ಕರೆದು ‘ನಿಮ್ಮವ್ವನು ಉಂಯಿಕ್’ ಮಾಡಿ ಉಣಿಸಿದಳು. ನೀನೂ ‘ಮಾಡೆಂದು’ ಹೇಳಿದ. ಅದನ್ನರಿಯದೆ ಅವಳು ಏನೆಂದು ಕೇಳಲು ಮತ್ತೆ ಬಿಗುವಿನಿಂದ ‘ಉಂಯಿಕ್’ ಮಾಡೆಂದೇ ಹೇಳಿದ. ಪಾಪ! ಅವಳೇನು ಮಾಡಬೇಕು? ಸುಮ್ಮನಾದಳು. ಊಟದ ಹೊತ್ತಿಗೆ ಬಂದು ನೋಡಿದ. ಹೇಳಿದ್ದನ್ನೇಕೆ ಮಾಡಲಿಲ್ಲೆಂದು ಕೇಳಿದ. ಕೆರಳಿದ. ಅವಳು ಸುಮ್ಮಿರಲು ಸಿಟ್ಟಿಗೆದ್ದು ಬಡಗಿಯಿಂದ ಹೊಡದೇಬಿಟ್ಟ. ಗದ್ದಲವನ್ನು ಕೇಳಿ ತಾಯಿಯು ಒಳಗೆ ಬಂದು ಏನೆಂದು ಸೊಸೆಗೆ ಕೇಳಲು ಅವಳು ಮತ್ತಷ್ಟು ದುಃಖಿಸಹತ್ತಿದಳು. ಸೊಸೆಯ ಮೈಮೇಲಿನ ಬಾರುಗಳನ್ನು ನೋಡಿ, ಮಗನನ್ನು ಕರೆದು ‘ಕಡಬನಂತ ಬಾರು ಏಳುವ ಹಾಗೆ ಬಡಿಯಬೇಕೆ?” ಎಂದು ಸಿಟ್ಟು ಮಾಡಿದಳು. ಆಗ ಅವನಿಗೆ ಅತ್ತೆಯ ಕರಿಗಡುಬಿನ ಅರಿವು ಬಂದು, ‘ಉಂಯಿಕ್’ ಅಲ್ಲ ಕರಿಗಡುಬು ಮಾಡಿರಿ ಎಂದು ಹೇಳಿದನಂತೆ.” ಅಳಿಯನ ಮಂಕುಬುದ್ಧಿಯನ್ನು ಕೇಳಿ, ನಗದವರಾರು? ಇಂಥ ಅನೇಕ ಕಥೆಗಳನ್ನು ಹಳ್ಳಿಗರ ಬಾಯಿಂದ ಕೇಳಬಹುದು.

ಕಲೆತ ಹೆಣ್ಣುಮಕ್ಕಳು ಆಕೆ ಚೆಲುವೆ, ಈಕೆ ಚೆಲುವೆ, ಎಂಬ ಮಾತುಗಳನ್ನು ಬಳಸುವ ಕಾಲಕ್ಕೆ ಮತ್ತೊಬ್ಬಳು ‘ಇಡ್ಲಿ ಮಸಿಗೆ ಬುದ್ಧೀ ಹೇಳಿದಂತೆ,’ ಇನ್ನೊಬ್ಬಳು ‘ಎಲ್ಲರ ಮನೆಯ ದೋಸೆಗಳು ತೂತೇ’ ಎಂದು ಅರ್ಥಗರ್ಭಿತ ಹಾಸ್ಯದೊಡನೆ ಅರ್ಥಗಳನ್ನು ಮುರಿಯುವರು. ದುಡಿಮೆಯ ಪ್ರಶ್ನೆ ಬಂದಾಗ ಹಾರುವನ ಆಳಾಗಬೇಡ, ಗಾಣಿಗನ ಎತ್ತಾಗಬೇಡ,’ ‘ಒಳ್ಳೊಳ್ಳೆ ದೇವರು ಹೊಳ್ಳಾಡು ಮುಂದೆ ಕಳ್ಳೆನ್ನ ದೇವರು ಕಾಯಿ ಬೇಡತಿತ್ತಂತೆ,’ ‘ಹಣಮಪ್ಪ ಹಗ್ಗಾ ತಿನ್ನುವಾಗ ಪೂಜ್ಯಾರಿ ಪಾಯಸಾ ಬೇಡಿದ, ‘ಹಣಮಂತನ ಮುಂದ ಹಾರು ಗುಬ್ಬೀ ಆಟ?’ ‘ಗಾಣಿಗನ ಕೂಡ ಸೆಟಗೊಂಡು ಒಣರೊಟ್ಟಿ ತಿಂದ್ಹಾಂಗ’ ಈ ಎಲ್ಲ ಗಾದೆಗಳಲ್ಲಿ ಒಣ ‘ಹ್ಯಾಂವ’ದ ಜಂಬನ್ನು ಮಾರ್ಮಿಕವಾದ ಸತ್ಯದೊಡನೆ ಹಾಸ್ಯ ಮಾಡಿದ್ದಾರೆ. ಅಲ್ಲದೆ ಹಾಸ್ಯ ತುಂಬಿದ ಅನೇಕ ಒಗಟಗಳೂ ಜಾನಪದದಲ್ಲಿವೆ. ‘ಬಡ ಬಡ ಬಂತು ಭಾವಿ ಇಳಿತು ತೋಳ ತಿಂತು, ಬಾಲ ಉಳಿತು’ ‘ಮಾತು ಕತೆ ಯಾವಾಗ? ಇದರಬದರ ಕುಂತಾಗ; ಅಳುದು ಕೆರೆಯೂದು ಯಾವಾಗ? ಅರ್ಧದಾರಿ ಬಂದಾಗ; ನಗುದ ಕೆಲೆಯೂದು ಯಾವಾಗ? ಪೂರಾ ಏರಿ ಬಂದಾಗ.” ಇವೇ ಮೊದಲಾದ ಒಗಟಗಳು ಹಾಸ್ಯಾತ್ಮಕವಾಗಿವೆ. “ಕಾಲು ಮೇಲಕ ಮಾಡಿ ನೀರು ಕುಡಿಯುವಣ್ಣ (ಆಡು), ಮೂಗಿನವ ಬರತಾನು ಬೇಗನೇಳಣ್ಣ (ಆನೆ); ನಿನಗಾರು ಹೇಳಿದರು ತಲೆಯಿಲ್ಲದಣ್ಣ (ಏಡಿ); ನನಗೊಬ್ಬ ಹೇಳಿದ ಕರುಳಿಲ್ಲದಣ್ಣ (ಗಂಟೆ).” ಇಲ್ಲಿಯ ಹಾಸ್ಯವನ್ನು ಬಲು ಸೋಸಿ ನೋಡಬೇಕು. ಒಡಮೂಡಿ, ಹಾಸ್ಯವು ತೀವ್ರ ಕಾಣದಿದ್ದರೂ ಹಾಸ್ಯದ ಪರಿಮಳವು ಒಗಟದ ಚಿತ್ರದೊಡನೆ ತುಂಬ ಓಡಾಡುವುದು.

ಜನತೆಯ ಇಂತಹ ಅನೇಕ ಗಾದೆ ಒಗಟಗಳನ್ನು ಶಿವಶರಣರೂ, ದಾಸರೂ, ತಮ್ಮ ಹಾಡುಗಳಲ್ಲಿ ಆಗಾಗ ಬಳಸಿಕೊಂಡು ಜನಪದಕ್ಕೆ ಹಾಡಿದ್ದಾರೆ. ಅವು ಜನತೆಗೆ ಅತಿ ಪ್ರಿಯವಾಗಿರುವುದೇ ಸಾಕು. ಗಾದೆ ಒಗಟುಗಳು ಇಂದೆಮಗೆ ನಾಣ್ನುಡಿ ರೂಪದಲ್ಲಿ ಬಂದಿವೆ. ಅವು ಎಲ್ಲರ ಸೊತ್ತಾಗಿರುವುದರಿಂದ, ಎಲ್ಲರೂ ತಮಗೆ ಬೇಕಾದಾಗ ಅವುಗಳನ್ನು ಉಪಯೋಗಿಸುತ್ತಾರೆ. ಗಾದೆಗಳ ಸಂಬಂಧ ಮಾಸ್ತಿ ವೆಂಕಟೇಶ ಅಯ್ಯಂಗಾರರು “ಹಲವರ ಭಾವ ಒಬ್ಬನ ಮಾತಿನಲ್ಲಿ ಕಂಡು ಆ ಮಾತು ಹಲವರ ಮಾತಾಗುತ್ತದೆ... ಎಲ್ಲದರಲ್ಲಿಯೂ ವಿಶಾಲವಾದ ಪ್ರಪಂಚದ ಜ್ಞಾನವಿದೆ. ಅನೇಕ ಗಾದೆಗಳಲ್ಲಿ ಸರಸವಾದ ಹಾಸ್ಯವಿದೆ.”[೧] ಎಂದು ನುಡಿದಿದ್ದಾರೆ. ‘ದೇವುಡು’ ಅವರು ಒಗಟುಗಳನ್ನು ಕುರಿತು ಹೇಳುವಾಗ ‘ಗಾದೆಗಳು ಊಟ, ಉಪಚಾರಗಳಂತೆ ಬಾಳಿನಲ್ಲಿ ಬೆರತಿದ್ದರೆ ಒಗಟಗಳು ಆಟಗಳಂತೆ ಜೀವನದಲ್ಲಿ ಒಂದು ಸ್ಥಾನವನ್ನು ಪಡೆದಿವೆಯೆನ್ನಬಹುದು.”[೨] ಎಂದು ಅವುಗಳ ಹುಟ್ಟು ಮೊದಲಾದುವುಗಳನ್ನು ಬಲು ವಿಶದವಾಗಿ ಚರ್ಚಿಸಿದ್ದಾರೆ. ಗಾದೆ-ಒಗಟುಗಳು ಹಳ್ಳಿಗರ ಜೀವನದಲ್ಲಿ ಬೆರತು ಹೋಗಿವೆ. ಪ್ರಸಂಗ ಸಿಕ್ಕಾಗ ಇವುಗಳನ್ನಾಡಿ ಅರ್ಥ ಮುರಿಯದ ಹೆಣ್ಣುಮಕ್ಕಳೇ ಕಡಿಮೆ ಎನ್ನಬಹುದು. ಇಂತಹ ಹಾಡು, ಕಥೆ, ಒಗಟು, ಗಾದೆ ಮೊದಲಾದುವುಗಳನ್ನು ಜನಪದವು ಕೇಳಿ ಎದೆ ಹಣ್ಣಾಗುವಂತೆ ನಗದಿರುವುದೇ? ಇಟಲಿಯ ಗಾದಿಯ ಮಾತಿನಂತೆ– “Laughter makes good blood.” ಎಂಬುದು ಸತ್ಯ. ಆದುದರಿಂದ ಹಾಸ್ಯಭರಿತ ಈ ಹಾಡುಗಳು ಶರೀರ ಸಂಪತ್ತನ್ನು ಬೆಳೆಸುವ ಸಾಧನವಾಗಲಾರವೇ? ಇಂದಿನ ಯಾಂತ್ರಿಕ ಯುಗದಲ್ಲಿ ಮಾನವನಿಗೆ ಬಿಡುವೇ ಇಲ್ಲ. ನಮ್ಮ ಜೀವನವೇ, ನಡೆಸಬೇಕಾದ ‘ಪ್ರಯೋಗ’ವಾದಾಗ ನಕ್ಕು ನಲಿಯಲು ಸಮಯವೆಲ್ಲಿ? ಇದನ್ನರಿತು ಸರಕಾರವು ದೊಡ್ಡ ಪಟ್ಟಣಗಳಲ್ಲಿ ವಿನೋದಾವಳಿಗಳ ಕೇಂದ್ರಗಳನ್ನೂ (Recreation centres) ಸಲಕರಣೆಗಳನ್ನೂ ಅನುಕೂಲ ಮಾಡಿಕೊಟ್ಟದ್ದು ಎಲ್ಲರ ನಿದರ್ಶನಕ್ಕೆ ಬಂದರೆ ಸಾಕು. ಇಂದಿನ ಶಾರೀರಿಕ ಶಿಕ್ಷಣದಲ್ಲಿ ವಿನೋದಾವಳಿಗಳಿಗೆ (Recreations) ಸ್ಥಾನವಿದೆ. ವಿಶೇಷವಾಗಿ ಜನಾಂಗದ ಹಾಡುಗಳಿಗೂ (Community songs) ಪಂಗಡ ಹಾಡುಗಳಿಗೂ (group songs) ಪ್ರಶಸ್ತಿ ಇರುವುದು. ಇದರ ಮಹತ್ವವನ್ನರಿತು ಸರಕಾರವು ಇದನ್ನು ಶಾರೀರಶಿಕ್ಷಣದಲ್ಲಿ ಮಹತ್ವದ ಭಾಗವನ್ನಾಗಿ ಮಾಡಿ ಇಂತಹ ಹಾಸ್ಯದ ಹಾಡುಗಳಿಗೆ ಏಕೆ ಪ್ರಾಶಸ್ತ್ಯ ಕೊಡಬಾರದು?

---

೧. ‘ಜನತೆಯ ಸಂಸ್ಕೃತಿ’ ಪು. ೫೦

೨. ‘ಕರ್ನಾಟಕ ಸಂಸ್ಕೃತಿ’ ಪು. ೧೧೦

❐

೬. ಹಳ್ಳಿಯ ಕುಣಿತಗಳು

ದುಡಿದು ಬೇಸತ್ತ ರೈತನಿಗೆ ವಿವಿಧ ವಿನೋದಾವಳಿಗಳೂ ಬೇಕು. ಈ ಸಮಯ ಪ್ರಸಂಗಗಳನ್ನು ಅವನು ವಿಶೇಷವಾಗಿ ತನ್ನ ಬಿಡುವಿನ ವೇಳೆಯಲ್ಲಿ ತಂದುಕೊಳ್ಳುವನು. ಸುಗ್ಗಿಯನ್ನು ಮುಗಿಸಿ ಬೇಸಗೆಯ ವಿರಾಮಕಾಲದಲ್ಲಿ ಒಕ್ಕಲಿಗರು ಆಟನೋಟಗಳ ಹವ್ಯಾಸಕ್ಕೆ ಬೀಳುವರು. ಮೋಜು ಮಜಲಿನ ಹಬ್ಬಗಳೂ, ಜಾತ್ರೆ ಮಹೋತ್ಸವಗಳೂ ಬರುವುದು ಈ ವಿರಾಮ ಕಾಲದಲ್ಲಿಯೇ. ಇಂತಹ ಹಬ್ಬ, ಉತ್ಸವ ಮೊದಲಾದುವುಗಳು ಬರುವ ಮುನ್ನವೆ, ಅನೇಕ ದಿನಗಳವರೆಗೆ ದಿನನಿತ್ಯ ಹೆಜ್ಜೆ ಹಾಕುವದನ್ನು ಕಲಿತು, ಸಮಯ ಬಂದಾಗ ಅವರು ನಲಿನಲಿದು ಕುಣಿಯುವದನ್ನು ಈಗಲೂ ಕರ್ನಾಟಕ ತುಂಬೆಲ್ಲ ಕಾಣಬಹುದು. ಈ ಕುಣಿತಗಳನ್ನು ಕುಣಿಯುವ ದಿನಗಳೆಂದರೆ ಹೋಳಿಯ ಹಬ್ಬ, ಯುಗಾದಿಯ ಹಬ್ಬ, ಸುಗ್ಗಿ, ಜಾತ್ರೆ ಮಹೋತ್ಸವ, ಪಂಚಮಿ ಹಬ್ಬ, ಬನ್ನಿಯ ಹಬ್ಬ, ಹಟ್ಟಿಯ ಹಬ್ಬ ಮೊದಲಾದ ಬಿಡುಗಾಲದಲ್ಲಿ, ಉತ್ಸವಕಾಲದಲ್ಲಿ. ಜಂಗು ನುಡಿಸಿಯೊ, ಕಂಕರಿಯ ಬಾರಿಸಿಯೊ, ಸರಗೆಜ್ಜೆ ಘಲಘಲಿಸಿಯೊ, ಕೋಲ್ಬಿಣಿಯ ಕಣಕಣಿಸಿಯೊ, ಕರಡಿ, ಚೌಗಡ, ಸಂಬಾಳ, ಮದ್ವಲಿ, ದಿಮ್ಮ, ದಪ್ಪು, ದುಂದುಭಿ, ತಾಳ, ಚೈಯಾಕ (ಚೆಳ್ಳಂಕ) ಡೊಳ್ಳು, ಜಗ್ಗಲಿಗೆ ಮೊದಲಾದುವುಗಳ ಸಂಗಜೋಡಣೆ ಮಾಡಿ ಹಾವಭಾವ ತುಂಬಿ ಹಳ್ಳಿಗರು ಕುಣಿಯುತ್ತಾರೆ. ಹಲಕೆಲವು ಜಾತ್ರೆ ಮಹೋತ್ಸವಗಳಲ್ಲಿ ಸಂಬಾಳ, ಚೈಯಾಕದ ಮೇಳದೊಡನೆ ನಂದಿಯ ಕೋಲನ್ನು ಹೊತ್ತು "ಹಾ! ಹಾ! ವೀರ! ಹಾ! ಹಾ! ಶರಭಾ! ಕಡೆ ಮಹಾರುದ್ರ!" ಎಂದು ಪುರಾತರ ವಚನಗಳನ್ನು ಹೇಳಿ, ಐದು ಅಥವಾ ಏಳು ಹೆಜ್ಜೆಗಳ ನಂದಿಯ ಕುಣಿತವನ್ನು ಕುಣಿಯುವರು. ತಾಳ, ತಾನ ತುಂಬಿ ಸಂಬಾಳ ಮೇಳದೊಡನೆ ಈ ಹೆಜ್ಜೆಗಳು ಬೀಳುವುದರಿಂದ ನೋಡುವವರಿಗೆ ಕುಣಿತವು ಬಲುಚೆಂದ ಕಾಣುವುದು. ಇಂತಹವೇ ಕುಣಿತಗಳನ್ನು ಹಲಕೆಲವು ವೀರಶೈವರ ಮದುವೆ ಮಂಗಲಕಾರ್ಯಗಳಲ್ಲಿ ಕಾಣಬಹುದು. ಇಲ್ಲಿ ಮೇಳಕ್ಕೆ ಸಂಬಾಳ, ಚೈಯಾಕೆಗಳಲ್ಲದೆ ಕರಡೆ, ಚೌಗಡಗಳೂ ಇರುವುವು. ಇಲ್ಲಿ ಕುಣಿಯುವ ಕುಣಿತಗಳು 'ನಂದಿ' ಮತ್ತು 'ಭೃಂಗಿ'. ಜಂಗುಕಟ್ಟಿಗೊಂಡು ಇವುಗಳನ್ನು ಗುಗ್ಗಳದ ಮುಂದೆ ಕುಣಿದು ಆಡಿ ತೋರಿಸುವವರು ವೀರಶೈವ ಧರ್ಮದಲ್ಲಿಯ 'ಪುರವಂತರು.' ತ್ರಿಶೂಲವನ್ನು ಹಿಡಿದು ಕುಣಿಯುತ್ತ ಕುಣಿಯುತ್ತ ಒಮ್ಮೊಮ್ಮೆ ತಾಂಡವಕ್ಕೂ ಇಳಿಯುವರು. ಕುಣಿತವು ಒಂಬತ್ತು ಅಥವಾ ಹನ್ನೊಂದು ಹೆಜ್ಜೆಗಳಲ್ಲಿ ಓಡಾಡುವುದು. ಅದರೊಡನೆ ವೀರಾವೇಶದ ವೀರಭದ್ರಾವತಾರದ ಪಲ್ಲವಿಗಳನ್ನು ಹೇಳಿ, ಕುಣಿಯುವವರಿಗೆ ವೀರಾವೇಶವನ್ನು ತುಂಬಿಸುವರು:

"ಹಾ! ಹಾ! ವೀರ! ಹಾ! ಹಾ! ಶರಭಾ! ಹಾ! ಹಾ! ರುದ್ರ! ಪಂಚಾಂಗ ಪಂಚಾಂಗವೆಂದು ಕಳವಳಗೊಂಡು ಜೋಯಿಸನ ವಾಕ್ಯ ಸಕಲಕಾರ್ಯಕ್ಕೆ ಸಿದ್ಧಿಯೆಂದು ಅವನ ಬಾಯಿ ತುಂಬುವಾ ಪಂಚಾಂಗವ ಕೇಳಿದಾ ದಕ್ಷಬ್ರಹ್ಮನ ತಲೆ ಯಾಕೆ ಹೋಯಿತು? ಹಾ! ಹಾ! ವೀರ!....

ಪಂಚಾಗ ಕೇಳಿದ ಇಂದ್ರನ ಶರೀರವು ಯೋನಿ ಮಂಡಲ ಆದಿತೇಕೆ? ಹಾ! ಹಾ! ವೀರ!... ಪಂಚಾಂಗ ಕೇಳಿದ ಸರಸ್ವತಿಯ ಮೂಗು ಯಾಕೆ ಹೋಯಿತು? ಹಾ! ಹಾ! ವೀರ!.... ಪಂಚಾಂಗ ಕೇಳಿದ ಕಾಮ ಸುಟ್ಟು ಭಸ್ಮವಾದನೇಕೆ? ಹಾ! ಹಾ! ವೀರ!..... ಪಂಚಾಂಗ ಕೇಳಿದ ಬ್ರಹ್ಮನ ತಲೆ ಯಾಕೆ ಹೋಯಿತು? ಹಾ! ಹಾ! ವೀರ!.... ಪಂಚಾಂಗ ಕೇಳಿದ ಬ್ರಹ್ಮ, ವಿಷ್ಣು, ಇಂದ್ರ ಮೊದಲಾದ ಮೂವತ್ತಮೂರು ಕೋಟಿ ದೇವತೆಗಳು ತಾರಕಾಸುರನ ಆಜ್ಞೆಯಿಂದ ಕಂಗೆಟ್ಟು ಶಿವನ ಮೊರೆಹೊಕ್ಕರ್‍ಯಾಕೆ? ಹಾ! ಹಾ! ವೀರ!... ಕುರುಡ, ಕುಂಟ, ಹಲಮುರಕ, ಗುರು–ತಪ, ಕಲಬಲವು ಕಾಳಭಾಗದಂತ ನಮ್ಮ ನಿಜಭಕ್ತ ಅಂಬಿಗರ ಚೌಡಯ್ಯನ ಕಂಡು ಹಾ! ಹಾ! ವೀರ!".... ಎಂದು ಕೈ ಮಾಡಿ ಕುಣಿಕುಣಿದು ಕಡೆ ಹೇಳುವುದನ್ನು ನೋಡಿಯೇ ಮನಗಾಣಬೇಕಲ್ಲದೆ ಆ ಕುಣಿತವನ್ನು ಬರೆಯಬಹುದೇ? ಇವುಗಳನ್ನು ವೀರಶೈವ ಸಂಪ್ರದಾಯ ಕುಣಿತಗಳೆಂದೂ ಕರೆಯಬಹುದು. ವೀರಶೈವರಲ್ಲಿ ಹಾಡುವುದೂ ಬಾರಿಸುವುದೂ ಭಕ್ತಿಯ ಅರ್ಪಣೆಯಿದ್ದಂತೆ, ಕುಣಿತವೂ ಒಂದು ಭಕ್ತಿಯ ಅರ್ಪಣೆಯಾಗಿದೆ. ಕಂಕರಿಯ ಕಕ್ಕಯ್ಯನು ಕಂಕರಿಯ ನುಡಿಸಿಯೂ, ಮಲ್ಹಣನು ಶಿವಗೀತಗಳನ್ನು ಹಾಡಿಯೂ ಶಿವನನ್ನು ಒಲಿಸಿಕೊಂಡದ್ದು ವೀರಶೈವ ಧರ್ಮಗ್ರಂಥಗಳಲ್ಲಿ ಬಂದಿವೆ. ಪುರಾತರಲ್ಲಿ ನಾಟ್ಯ ತಂಡನು ಕುಣಿದು ಶಿವನಿಗೆ ಭಕ್ತಿಯನ್ನು ಅರ್ಪಿಸಿದ್ದಾನೆ. ಕುಂಬಾರ ಗುಂಡಯ್ಯನು ಮಡಿಕೆಗಳನ್ನು ಬಾರಿಸಿ ಗತ್ತಿಟ್ಟು ಕುಣಿದು ಶಿವಸಮರಸ ಹೊಂದಿದ್ದಾನೆ. ಜಾತಿಗರ ಚೌಡಯ್ಯನು ಶಿವನ ನೂರೊಂದು ಲೀಲೆಗಳನ್ನು ವೇಷಹಾಕಿ ಜನಪದಕ್ಕೆ ಕುಣಿದು ಮೋಕ್ಷ ಹೊಂದಿದ್ದಾನೆ. ಕುಂಬಾರ ಗುಂಡಯ್ಯನ ಹಾಗೂ ಜಾತಿಗರ ಚೌಡಯ್ಯನ ಹಂತಿಯ ಹಾಡುಗಳನ್ನು ಸಂಕಲಿಸಲಾಗಿದೆ.

ಕುಣಿತಗಳ ವಾದ್ಯಗಳಲ್ಲಿ 'ಕರಡೆ'ಯು ಕರ್ನಾಟಕದಲ್ಲಿ ಮೊದಲಿನಿಂದಲೂ ಬಳಕೆಯಲ್ಲಿತ್ತೆಂದು ಕಾಣುತ್ತದೆ. ಚಕ್ರವರ್ತಿ ನೃಪತುಂಗನು ಕಾವ್ಯರಚನೆಯ ನಿರ್ಣಯವನ್ನು ಹೇಳುತ್ತ ಹೋಗಿ ಸಮಸಂಸ್ಕೃತದಲ್ಲಿ ಆಗಮ ಕೋವಿದನು ಕನ್ನಡ ಪದಗಳನ್ನು ಬೆರೆಸಲಾಗದು. ಬೆರಸಿದರೆ

ಬೆರಸಿರೆ ಕನ್ನಡದೊಳ್ಗಂ
ಧುರಮಾಗದು ಕಾವ್ಯರಚನೆ ಪೇಳ್ವೊಡೆ ಪೀನಂ।
ಪರುಷತರ ಮಕ್ಕು ಮೋದುಂ
ಕರಡೆಯ ಮದ್ದಳೆಯ ಜರ್ಜ್ಝರ ಧ್ವನಿಗಳ ವೊಲ್ ॥೫೨॥[೧]

ಎಂದು ಕರಡೆಯ ಮಾತನ್ನು ಎತ್ತಿದ್ದಾನೆ. ಈ ವಾದ್ಯವು ನೃಪತುಂಗನ ಕಾಲಕ್ಕಿಂತಲೂ ಮುಂಚೆಯೇ ಜನತೆಗೆ ಪ್ರೀಯವಾಗಿತ್ತೆಂಬುದರಲ್ಲಿ ಸಂದೇಹವಿಲ್ಲ. ಪಂಪ ಮೊದಲಾದ ಕವಿಗಳು 'ಕರಡೆ' ಶಬ್ದವನ್ನು ತಮ್ಮ ಕಾವ್ಯಗಳಲ್ಲಿ ಬಳಸಿದ್ದಾರೆ. ಆದರೆ ಇದಕ್ಕೆ ಮುಂದೆ ವಿಶಿಷ್ಟ ಮಹತ್ವವವು ಬಂದದ್ದು ಶಿವಶರಣರ ಕಾಲದಲ್ಲಿ. ವೀರಶೈವ ಸಂಪ್ರದಾಯದಂತೆ ಕರಡೆಯ ಬಾರಿಸದೆ, ಮದುವೆಯಲ್ಲಿ 'ಗುಗ್ಗಳ'ವೇ ಏಳುವದಿಲ್ಲ. ಗುಗ್ಗಳವೇಳಲು, ಮುಂದೆ ಸಾಗಲು ಕರಡೆಯು ಅಗತ್ಯ ಬೇಕು. ನಂದಿಯ ಕುಣಿತಕ್ಕೆ ಸಂಬಾಳ ಬೇಕು. ಅನ್ಯ ಮತದವರು ಕರಡೆ ಮೊದಲಾದ ವಾದ್ಯಗಳನ್ನು ಧರ್ಮಕಾರ್ಯಗಳಲ್ಲಿ ವಿಶಿಷ್ಟ ರೀತಿಯಿಂದ ಉಪಯೋಗಿಸದಿರುವುದೇ ಇದಕ್ಕೆ ಸಾಕ್ಷಿ.

ಎಲ್ಲವ್ವ, ಮಾಯವ್ವ, ಕರಿಯವ್ವ, ದುರಗವ್ವ, ದ್ಯಾಮವ್ವ ಮೊದಲಾದ ದೇವತೆಗಳ ಉತ್ಸವವನ್ನು ಮಾಡುವ ಕಾಲಕ್ಕೆ ಹಳ್ಳಿಗರು, ಡೊಳ್ಳು, ಹಲಗೆ, ದಮ್ಮಡಿ, ದಪ್ಪು, ಟುಮುಕಿ ಮೊದಲಾದ ವಾದ್ಯಗಳನ್ನು ಬಾರಿಸಿಯೂ, ಏಕತಂತಿ, ಚೌಡಕಿ, ತಾಳಗಳನ್ನು ನುಡಿಸಿಯೂ ಕುಣಿಯುವದನ್ನು ಕರ್ನಾಟಕದ ತುಂಬ ಈಗಲೂ ನೋಡಬಹುದು. ಎಲ್ಲವ್ವ ದೇವತೆಯ ಭಕ್ತರು 'ಜಗ' ಹೊತ್ತು ವಾಲಗವಾಡಿ, ಚೌಡಕಿ, ತುಂತುಣಿ, ಸೂರು, ಗೆಜ್ಜಿ, ತಾಳ ಮೊದಲಾದುವುಗಳ ಸಂಗ ಜೋಡಣೆಯೊಡನೆ ಹಾಡಿ, ಪರುಷದಲ್ಲೆಲ್ಲ ಕುಣಿಯುವರು. ಎಲ್ಲವ್ವ, ಚೆಂಚಲಿ ಮಾಯವ್ವ ದೇವತೆಗಳನ್ನು ಕುರಿತು ಹಾಡುಗಳಂತೂ ಹಳ್ಳಿಗಳಲ್ಲಿ ಹೇರಳವಾಗಿವೆ; ಅಲ್ಲದೆ ಅನೇಕ ಜಾನಪದ ಕಥೆಗಳು ಬಳಕೆಯಲ್ಲಿವೆ. ಇವರು ಕುಣಿಯುವ ಕುಣಿತಗಳು 'ಕಥಕ್ಕಲಿ' ಕುಣಿತಗಳಿಗೆ ಸಮೀಪವಾಗಿವೆ.

ಯುಗಾದಿಯಲ್ಲಿ ಒಕ್ಕಲಿಗರು ಅಂಬಲಿ ಬಂಡಿಯನ್ನು ಹೂಡಿ ಮೋಜು ಮಜಲಿನೊಡನೆ ಹೆಜ್ಜೆಗಳನ್ನು ಹಾಕುವರು. ವೀರಶೈವರ ಕಂಬಿಗಳು ಬರುವ ದಿನವಾದರೂ ಇದೆ. ಕಂಬಿಯ ಅಯ್ಯಗಳು, ಕಂಬಿಯ ಹಾಡುಗಳನ್ನು ಹಾಡುತ್ತ ಕುಣಿದು ಕಂಬಿಗಳನ್ನು ಆಡಿಸುವರು. ಈ ಕುಣಿತಗಳು ಬಲು ಮನರಂಜಕವಾಗಿ ಕಾಣುವುವು. ಅವುಗಳಲ್ಲಿ ಭಕ್ತಿರಸದ ಪ್ರಾಧಾನ್ಯತೆಯು ಕಂಡುಬರುವುದು. ಸಂಬಾಳದೊಡನೆ ಕುಣಿಯುವ 'ನಂದಿ' ಹಾಗೂ 'ಭೃಂಗಿ' ಕುಣಿತಗಳಿಗೆ ಈ ಕುಣಿತಗಳು ಸಮೀಪವಾಗಿವೆ. ಇಲ್ಲಿಯೂ ಸಂಬಾಳ ಚೈಯಾಕ (ಚೆಳ್ಳಂಕ)ಗಳ ಜೋಡಣೆಯು ಕಂಡುಬರುವುದು. ಹೋಳಿಯು ಕನ್ನಡಿಗರಿಗೆ ಆರ್ಯ ಸಂಸ್ಕೃತಿಯ ಸಂಸ್ಕಾರ. ಹೋಳಿಯನ್ನು ಆಚರಿಸಿ ಹಾಡಿ ಕುಣಿಯುವುದೇ ಹೆಚ್ಚು. ವಿಶೇಷವಾಗಿ ಆಗ ಕುಣಿಯುವ ಎಲ್ಲ ಕುಣಿತಗಳು ಗುಂಪು ಕುಣಿತಗಳು. ಅವುಗಳಲ್ಲಿ ದಿಮ್ಮ, ಒಗ್ಗ್ಹಲಿಗೆ ಮೊದಲಾದ ದಿಮ್ಗುಡುವ ವಾದ್ಯಗಳನ್ನೂ, ಕರಡೆ, ಕಣಿ ಮೊದಲಾದ 'ಗಿರಡಿ'ಯ ವಾದ್ಯಗಳನ್ನೂ ಕಣಕಣಿಸುವ ಗತ್ತಿನೊಡನೆ ಮೇಳ ಮಾಡಿ ಮೂರು ಹೆಜ್ಜೆಗಳಲ್ಲಿಯೊ, ಅಥವಾ ಐದು ಹೆಜ್ಜೆಗಳಲ್ಲಿಯೊ, ಹುಸಿಪೆಟ್ಟುಗಳ ಲಯವನ್ನು ಹಿಡಿದು ಜನರು ಗುಂಪಿಟ್ಟು ಹಾಡಿ ಕುಣಿಯುವರು. ಆಗ ಹಾಡುವ ಹಾಡುಗಳು ಹೋಳಿಯ ಹಾಡುಗಳು. ಅವುಗಳನ್ನು ಅನ್ನುವ ರೀತಿಯನ್ನೂ, ಹೆಜ್ಜೆ ಹಾಕುವುದನ್ನೂ ಕೇಳಿ, ನೋಡಿಯೇ ಅನುಭವಿಸಬೇಕು.

ಮಾವ ನಿನ್ನ ಮಗಳ ಮಲ್ಲಡಕ ಕೊಡಬ್ಯಾಡ
ಭತ್ತ ಕುಟ್ಟಿ ಕುಟ್ಟಿ ಕೈದಡ್ಡ ಜಾಣೆ ॥ಪ॥

ಎಂದು ಪಲ್ಲವಿ ಹಾಕಿ ಒಬ್ಬನು ಮುಮ್ಮೇಳದವನಾಗಿ ಹಾಡುತ್ತಾನೆ. ಉಳಿದವರು ಗುಂಪಿನಲ್ಲಿ ಹಿಮ್ಮೇಳದವರಾಗಿ ಹಾಡಿ, ಕಣಿ, ಜಗ್ಗ್ಹಲಗೆಗಳ ಇಳು ಹಾಗೂ ಏರುಗತ್ತಿನಲ್ಲಿ ಬೆರೆಸಿ, ತಾಳ–ತಾನಗಳೊಡನೆ ಬೇಕಾದಂತೆ ಒಟ್ಟಾಗಿ ಹೆಜ್ಜೆ ಹಾಕುವರು. ಹೆಜ್ಜೆ ಹಾಕುವುದು ಬಹಳೇ ಸರಳ. ಕೂತವರು, ನಿಂತವರು ಒಮ್ಮೆ ನೋಡಿ ಅದನ್ನು ಕಲಿತು ಕುಣಿಯಲು ಗುಂಪು ಸೇರಬಹುದು. ದಪ್ಪಿನೊಡನೆ ಕುಣಿಯುವ ಕುಣಿತಗಳು ಗುಂಪುಗುಣಿತಗಳಲ್ಲ. ಅವು ಗಂಡುಹೆಣ್ಣಿನ ಶೃಂಗಾರ ಕುಣಿತಗಳು. ಹೊಲೆಯರಲ್ಲಿಯೂ, ದಾಸರಲ್ಲಿಯೂ, ಕಸಬೆಯರಲ್ಲಿಯೂ ಹೋಳಿಯಲ್ಲಿ ಈ ಕುಣಿತಗಳು ಕಂಡುಬರುವುವು. ಗಂಡೂ ಹೆಣ್ಣೂ ಕುಣಿತದಲ್ಲಿ ವಾದ ಮಾಡಿ ಕಡೆಗೆ ಕೈಗೆ ಕೈಕೊಟ್ಟು ಕುಣಿಯುವದನ್ನು ಇಲ್ಲಿ ಮನವಾರೆ ನೋಡಬಹುದು.

ಗಂಡು : **ಮಾತಾಡ ಮಾನುನೀ,**
ಯಾವನಾಡ ದೂರಿ ಶ್ಯಾನೀ
ನಿನ ಮೂಗ ಸಂಪಿಗಿ ತೆನೀ
ನಿನ ತುರುಬ ನಾಗರ ಪಾಣೀ
ನಿನ ಹೆರಳ ಬಾಳಿ ಗೊನೀ
ಇಲಿಗ್ಯಾಕ ಬಂದಿನೀ ॥

ಎಂದು ಗಂಡು, ಹೆಣ್ಣನ್ನು ಕುಣಿಯುವ ಗತ್ತಿನಲ್ಲಿ ಕೈ ಮಾಡಿ ಕರೆಕರೆದು ಹಾಡಿ ಕೈಹಿಡಿಯ ಹೋಗುವುದು. ಬಿಂಕದ ಬಿಗುವಿನಲ್ಲಿದ್ದ ಹೆಣ್ಣು–

---

೧. ಕವಿರಾಜಮಾರ್ಗ, ಪ್ರಥಮ ಆಶ್ವಾಸ

ಸರಿಸರಿ ದೂರ ಸರಿ
ಸರಿಸರಿ ದೂರಸರಿ
ಮುಟ್ಟೂದು ತರವಲ್ಲ। ಮತಿವಂತ ॥

ಎಂದು ಹೆಜ್ಜೆಗಳನ್ನು ದಪ್ಪಿನೊಡನೆ ಹಾಕಿ ಗಂಡಿನ ಕೈ ಕೊಸರುವುದು. ಗಂಡಿಗೆ ಹುಣಚೆಯ ನೋಡಿ ಹುಳ್ಳುಳ್ಳಗಾಗಿ–

ನೀ ಒಲ್ಲೆನಂಬು ಬಗೆ ಹೇಳ
ನೀ ಯಾವ ದೊಡ್ಡ ಗರತಿ ॥

ಎಂದು ಹಾಡುತ್ತ, ಗದ್ದ, ತುಟಿಗಳನ್ನೇ ಹಿಡಿಯ ಹೋಗುವುದು. ಹೆಣ್ಣು ಬಿರುಸಾಗುವುದನ್ನು ಕಂಡು ಗಂಡು ಮುಖಸ್ತುತಿ ಮಾಡಿ–

ಜಾಣೆ ಮೋಹದ ಗಿಣಿಯೆ
ಮಾತಾಡ ಎನ್ನ ಮನೆಯ
ಮಂಚದಮ್ಯಾಲೆ ರುತುವಂತಿ ॥

ಎಂದು ರಮಿಸಲು ಹೆಣ್ಣು ಒಲಿದು ಕಡೆಗೆ ಕೈಕೊಟ್ಟು ಕುಣಿಯುವ ಸಿಂಗಾರ ಕುಣಿತವನ್ನು ಉತ್ತರ ಕರ್ನಾಟಕದ ಹಳ್ಳಿಗಳಲ್ಲಿ ಕಾಣಬಹುದು. ಅಲ್ಲಿಯ ಹೋಳಿಯ ಅಬ್ಬರವನ್ನೂ ಸಡಗರವನ್ನೂ ನೋಡಬೇಕು ಬಾಗಲಕೋಟೆಯಲ್ಲಿ– ಹೋಳಿಯು ರಂಗಪಂಚಮಿಯವರೆಗೆ ಅಲ್ಲಿ ಬಹಳ ಐಶ್ವರ್ಯದಿಂದ ನಡೆಯುವುದು. ಹಗಲು ನೂರಿನ್ನೂರು ಬಂಡಿಗಳ ಓಕಳಿಯಾಡಿ ಇರುಳು ನೂರಿನ್ನೂರು ಬಂಡಿಗಳಲ್ಲಿ ಸೋಗುಹಾಕಿ ಮಜಲಿನೊಡನೆ ಹಾಡಿ ಬಾರಿಸಿ ಜನರು ಆಡಂಬರದಿಂದ ಕುಣಿಯುವರು. ನೆರೆಹೊರೆಯ ಹಳ್ಳಿಯವರೂ ಈ ಉತ್ಸವದಲ್ಲಿ ಭಾಗವಹಿಸುತ್ತಾರೆ. ಆಗ ಅಲ್ಲಿಯ ಗೌಳಿಗರು ಕುಣಿಯುವ 'ಸುತ್ತಹೆಜ್ಜೆ'ಯ ಹಾಡುಕುಣಿತಗಳು ಎಲ್ಲರ ಮನವನ್ನಾಕರ್ಷಿಸದಿರುವು. ದೂರಿಂದ ಜನರು ಈಗಲೂ ಈ ಕುಣಿತಗಳನ್ನು ನೋಡಲಿಕ್ಕೆ ಬರುತ್ತಾರೆ.

ಶ್ರಾವಣ ಮೊದಲಾದ ಮಾಸಗಳಲ್ಲಿ ಹಲಕೆಲವು ಭಾಗಗಳಲ್ಲಿ ಭಜನೆಯ ಕುಣಿತಗಳನ್ನೂ ಕಾಣಬಹುದು. ಭಕ್ತಿಪ್ರಧಾನವಾದ ಈ ಕುಣಿತಗಳು ಉಳಿದ ಕುಣಿತಗಳಂತೆ ಜನರ ಮನಸ್ಸನ್ನು ಸೆಳೆಯದಿದ್ದರೂ ಧರ್ಮವಂತರಾದ ಹಳ್ಳಿಗರು ಈ ಕುಣಿತಗಳಲ್ಲಿಯೂ ಭಾಗವಹಿಸುತ್ತಾರೆ. ಕಲಿತು ಪಟ್ಟಣ ಸೇರಿದ ಅನೇಕ ಜನರಿಗೆ ಭಜನೆಯ ಕುಣಿತಗಳನ್ನು ಮಾಡುವ ಕಾಲವೂ ಗೊತ್ತಿರುವುದಿಲ್ಲ. ಧಾರವಾಡ ದಲ್ಲಿಯೂ, ಅದರ ಸುತ್ತಮುತ್ತಲಿನ ಹಲಕೆಲವು ಹಳ್ಳಿಗಳಲ್ಲಿಯೂ ಶ್ರಾವಣ ಮಾಸದಲ್ಲಿ ಭಜನೆಯ ಕುಣಿತಗಳನ್ನಲ್ಲದೆ ಜನರು ಗುಂಪಿಕ್ಕಿ ಕೋಲುಹಾಕಿ ಕುಣಿಯುತ್ತಾರೆ.

ಬಂತೊ ಶ್ರಾವಣ ಬಿಲ್ಲಿಗೆ ಬಾಣ ॥

ಎಂದು ಹಾಡುತ್ತ ತುಂಡು ತಂಡಾಗಿ ಕೋಲುಹಾಕಿ ಕುಣಿದು ಶ್ರಾವಣ ಸೋಮವಾರಗಳಲ್ಲಿ ಜನರು ಧಾರವಾಡದಲ್ಲಿ ಉಳುವಿಯ ಬಸುವನ ಗುಡಿಗೆ ಹೋಗುವ ದೃಶ್ಯವು ಬಲು ರಮ್ಯವಾದುದು. ಆಷಾಢ ಏಕಾದಸಿಯ ದಿವಸ, ಕರ್ನಾಟಕದ ಹಲಕೆಲವು ಭಾಗಗಳಲ್ಲಿ 'ಸಂತರು' ಮಾಡುವ ಭಜನೆಯ ಕುಣಿತವೂ ನಿದರ್ಶನಕ್ಕೆ ಬಾರದಿರದು. ಬನ್ನಿಯ ಹಬ್ಬದಲ್ಲಿ ಬೆಳಗಾವಿ ಮತ್ತು ಸುತ್ತು ಮುತ್ತಲಿನ ಭಾಗಗಳಲ್ಲಿ ಅರಸೊತ್ತಿಗೆಯ ಮೆರವಣಿಗೆಯಲ್ಲದೆ ಜನರು ಕುಣಿಯುವದನ್ನೂ ಕಾಣಬಹುದು. ಹಟ್ಟಿಯ ಹಬ್ಬದಲ್ಲಿ ಉತ್ತರ ಕರ್ನಾಟಕದ ಗೌಳಿಗರು ತಮ್ಮ ಎಮ್ಮೆಗಳನ್ನು ಶೃಂಗಾರ ಮಾಡಿ ಸಂಜೆಯ ಮುಂದೆ ಮೆರಿಸಿ 'ಕೋಟೆ ಹಾಕಿ ಕೋಲು ಹಾಕುವರು.[೧] ಅಲ್ಲದೆ ಗೋಕುಲಾಷ್ಟಮಿಯ ದಿವಸ, ಎಳೆಮಕ್ಕಳು ಕೋಲ್ಚಿಣಿಗಳನ್ನು ಹಿಡಿದು ಹಾಡಿ 'ಗೋಪು' ಹೆಣೆಯುತ್ತಾರೆ. ಚಿಕ್ಕ ಬಾಲಕಿಯರು ವರ್ತುಲಾಕಾರವಾಗಿ ಕೈಕೈ ಹಿಡಿದು ನಿಂತು, ಮಧ್ಯದಲ್ಲಿ ಚಿಕ್ಕವಳೊಬ್ಬಳನ್ನು ತುಂಬುತ್ತಾರೆ. ಕೋಲುಪದಗಳನ್ನು ಹೇಳುತ್ತ ಕೋಲಾಟವಾಡುವದಕ್ಕೆ 'ಗೋಪು' ಹೆಣೆಯುವದೆಂದು ಅನ್ನುವ ವಾಡಿಕೆಯಿದೆ. ಕೆಲವರು ಇದಕ್ಕೆ 'ಕೋಟೆ'ಯೆಂದೂ ಕರೆಯುವರು. ಬಹುತರ ಬ್ರಾಹ್ಮಣ ಹುಡುಗಿಯರು 'ಕೋಟೆ'ಯ ಹಾಕುತ್ತಾರೆ.

ಕೋಲು ಕೋಲಿನ ಕೋಲ, ಮುತ್ತಿನ ಕೋಲು ಕೋಲಿನ ಕೋಲ।
ಕೋಲುನಾಡುವ ಬಾರ ಜಾಣ ರಂಗನ ಕೂಡ ॥ಪ॥

ಎಂದು ಹಾಡುತ್ತ ಸುತ್ತು ತಿರುಗಿ ಗೋಪು ಹೆಣೆಯುವರು.

ಕೋಲನಾಡುತ ಬಂದ। ಕಾವೇರಿ ರಂಗ।
ಶ್ಯಾಮs ಸುಂದರ ನಂದ। ಗೋಪೀಯ ಕಂದ ॥ಪ॥

ಎಂದು ಪಲ್ಲವಿಯ ಸೊಲ್ಲೂ, ಕೋಲ್ಚಿಣಿಗಳ ಕಣಕಣಿಸುವ ತಾನವೂ, ಹಾಡಿ ಆಡುವ ಮಕ್ಕಳನ್ನು ಮೈ ಮರೆಸುವುದರಲ್ಲಿ ಆಶ್ಚರ್ಯವೇನು? ಈ ಗೋಪಿಯ ಕಂದನ ಹಾಡುಗುಣಿತಗಳು ಎಷ್ಟು ರಮ್ಯವಾದುವುಗಳು? ಬಾಗಿ ಬಳುಕಿ ಕೋಲ್ಚಿಣಿಗಳನ್ನು ಹಾಕಿ, ಕತ್ತೆತ್ತಿ ಕೋಲ್ಚಿಣಿಗಳನ್ನು ನುಡಿಸಿ ಸರಾಗವಾಗಿ ಗೋಕುಲಕಂದನ ಲೀಲೆಗಳನ್ನು ಹಾಡಿ ಕುಣಿಯುವ ಎಳೆಮಕ್ಕಳ ಕರ್ನಾಟಕವು, ಗೋಪಿಯರೊಡನೆ ಗೋಪಿಯ ಕಂದನು ಆಡಿದ ಗೋಕುಲವೊ ಎಂಬಂತೆ ಭಾಸವಾಗುವುದು. ಇಂತಹ ಅನೇಕ ಹಾಡುಗುಣಿತಗಳನ್ನು ಜಾನಪದದಲ್ಲಿ ಕಾಣಬಹುದು. ಒಕ್ಕಲಿಗನೂ, ಸುಗ್ಗಿ ಮೊದಲಾದುವುಗಳಲ್ಲಿ ಸಮಯಕ್ಕೆ ಸರಿಯಾಗಿ ಪ್ರಸಂಗ ಬಂದಂತೆ ಹಾಡಿ ಕುಣಿದು ತಣಿಯುವನು.

---

೧. ಬಿದಿರುಗಳಕ್ಕೆ ಸಿಂಗಾರ ಮಾಡಿ ಸರಿ ಅಂಕಿಯಲ್ಲಿ ನಿಂತು ಸುತ್ತಲು ತಿರುಗಿಸಲು ಬರುವ ಹಾಗೆ ಹಗ್ಗಗಳನ್ನು ಕಟ್ಟಿ ಜೋತು ಬಿಡುವರು. ಅವುಗಳನ್ನು ಹಿಡಿದು ಸುತ್ತಲು ತಿರುಗಿ ಕುಣಿಯುವುದಕ್ಕೆ 'ಕೋಟೆ ಹಾಕು' ಎಂದು ಕರೆಯುತ್ತಾರೆ.

ಈ ಕುಣಿತಗಳನ್ನು ಕುಣಿಯುವ ಹಳ್ಳಿಗರು ಶಾಸ್ತ್ರೋಕ್ತವಾಗಿ ಕುಣಿಯುವರೇ? ದ್ರಾವಿಡ ಜನಾಂಗವು ಮೊದಲಿನಿಂದಲೂ ನೃತ್ಯ ಸಂಗೀತಗಳಲ್ಲಿ ಕೈಯಿಟ್ಟಂತೆ ಕಾಣುತ್ತದೆ. ಅನೇಕ ರಾಗಗಳೂ, ಕುಣಿತಗಳೂ ಅಚ್ಚ ದ್ರಾವಿಡ ವರ್ಗದುವು ಇರುವುದೇ ಇದಕ್ಕೆ ಬಲವಾದ ನಿದರ್ಶನ. ಇಂದು ಕರ್ನಾಟಕದಲ್ಲಿ ಉಳಿದು ಬಂದ ಹಳ್ಳಿಗರ ಕುಣಿತಗಳು ದ್ರಾವಿಡ ಕುಣಿತಗಳ ಮೂಲ ಅವಶೇಷಗಳೆಂದು ಹೇಳಬಹುದು. ಅಂತೆಯೇ ನಾವು ಅವುಗಳಿಗೆ ಮಹತ್ವ ಕೊಡಬೇಕಾಗಿದೆ. ಸಂಗೀತದಲ್ಲಿ 'ಕರ್ನಾಟಕ ಸಂಗೀತ'ವೆಂದಿರುವಂತೆ ಸಂಪ್ರದಾಯದಿಂದ 'ಔತ್ತರೇಯ'ಹಾಗೂ 'ದಾಕ್ಷಿಣೇಯ' ಕುಣಿತಗಳೆಂದು ಬಳಕೆಯಲ್ಲಿ ಬಂದಿವೆ. ನಾಟ್ಯಶಾಸ್ತ್ರವನ್ನು ಬರೆದ ಭರತಮುನಿಯು ಆಗಿನ ಕಾಲದಲ್ಲಿಯ 'ಲೋಕ ನೃತ್ಯ'ಗಳನ್ನು ಕೂಲಂಕುಷವಾಗಿ ಅಭ್ಯಾಸಮಾಡಿ ತನ್ನ ನಾಟ್ಯ ಶಾಸ್ತ್ರದಲ್ಲಿ ಶಾಸ್ತ್ರೋಕ್ತವಾಗಿ ಬರೆದಿರಬೇಕು. ಅಂತೆಯೇ ಅವನ ನಾಟ್ಯಶಾಸ್ತ್ರದಲ್ಲಿಯ 'ಚತ್ವಾರೋಭಿನಯ'[3]ಗಳಲ್ಲಿ ಹಳ್ಳಿಗರ ಕುಣಿತಗಳ ಛಾಯೆಯು ಅಲ್ಲಲ್ಲಿ ಮಿಣುಕುತ್ತಿರುವುದನ್ನು ಓದುಗರು ಕಾಣಬಹುದು. ಭರತಮುನಿಯು ನೃತ್ಯಗಳಲ್ಲಿ 'ತಾಂಡವ' (ಗಂಡುಕುಣಿತ), 'ಲಾಸ್ಯ' (ಹೆಣ್ಣುಕುಣಿತ) ಎಂದು ಎರಡು ದೊಡ್ಡ ಭಾಗಗಳನ್ನು ಮಾಡಿದ್ದರೂ ಪ್ರಾದೇಶಿಕವಾಗಿ ನೃತ್ಯಗಳಲ್ಲಿ ೧. ಕಥಕ್ಕಳಿ, ೨. ಭರತ ನಾಟ್ಯ, ೩. ಕಥಕ್ ಮತ್ತು ೪. ಮಣಿಪುರಿ ಎಂದು ವಿಭಾಗಿಸಿದ್ದಾನೆ. ಮೊದಲಿನ ಎರಡು ಕುಣಿತಗಳು ಹೆಚ್ಚಾಗಿ ದಕ್ಷಿಣ ಭಾಗಗಳಲ್ಲಿ ಕಂಡುಬರುವುವು. ಉಳಿದ ಎರಡು ಕುಣಿತಗಳು ಉತ್ತರ ಭಾಗಗಳಲ್ಲಿ ಹೆಚ್ಚಾಗಿ ಬಳಕೆಯಲ್ಲಿರುವುವು. ಮೊದ ಮೊದಲು ಆರ್ಯ, ದ್ರಾವಿಡ ಕುಣಿತಗಳೆಂದು ಇದ್ದರೂ ಇರಬಹುದು. ಆದರೆ ಭರತಮುನಿಯು ನಾಟ್ಯಶಾಸ್ತ್ರ ಬರೆದ ಮೇಲೆ ಈ ಭೇದಗಳು ಮಾಯವಾಗಿ, ಈಗ ಬಳಕೆಯಲ್ಲಿರುವ ನೃತ್ಯಗಳಾಗಿವೆ. ಮದ್ರಾಸ ಭಾಗದ ನೃತ್ಯಗಳಲ್ಲಿ ಭರತನಾಟ್ಯದ ಸಂಪೂರ್ಣ ಛಾಯೆಯಿದೆ. ಮಂಗಳೂರು, ಕಾರವಾರ ಜಿಲ್ಹೆಗಳಲ್ಲಿಯ ಯಕ್ಷಗಾನವು ಭರತಮುನಿಯ ಕಥಕ್ಕಳಿಗೆ ತೀರ ಸಮೀಪವಾಗಿದೆ. ಉತ್ತರ ಕರ್ನಾಟಕದಲ್ಲಿಯ ಮೂಡಲಪಾಯದ ಕುಣಿತಗಳು, ಕಥಕ್ಕಳಿ ಹಾಗೂ ಭರತನಾಟ್ಯದ ಛಾಯೆಗಳನ್ನೊಳಗೊಂಡಿವೆ. ಹಾವಭಾವ ತುಂಬಿದ ನಮ್ಮ ಹಳ್ಳಿಗರ ಕುಣಿತಗಳು ಭರತಮುನಿಯ ನೃತ್ಯಗಳನ್ನು ಅನೇಕ ಸಂದರ್ಭಗಳಲ್ಲಿ ಹೋಲಬಹುದು. ಅಷ್ಟೇ ಏಕೆ? ಹಲಕೆಲವು ಕುಣಿತಗಳಂತೂ, ಶಾಸ್ತ್ರೋಕ್ತವಾಗಿಯೇ ಬಳಕೆಯಲ್ಲಿರುವುದನ್ನು ಮನವಾರೆ ಕಾಣಬಹುದು. ಉತ್ತರ ಕರ್ನಾಟಕದಲ್ಲಿ 'ಮೂಡಲಪಾಯ' ಬೈಲಾಟಗಳಲ್ಲಿಯ ಕುಣಿತಗಳೇ ಇದಕ್ಕೆ ಬಲವಾದ ಸಾಕ್ಷಿ. ಜನಸಾಮಾನ್ಯರಿಗೆ ಬೇಕಾಗುವ ಹಳ್ಳಿಗರ ಕುಣಿತಗಳು ನಾಟ್ಯಶಾಸ್ತ್ರಕಾರರ ಕೈಚೆಲಾಕಿನಲ್ಲಿ ಶಾಸ್ತ್ರೋಕ್ತ ರೂಪ ಹೊಂದಿ ಅರಸರಂಗಳವನ್ನು ಸೇರಿರಬಹುದು. ಸುಧಾರಿಸಿದವರೂ, ಕಲಿತವರೂ ಅವುಗಳಿಗೆ ಮೆಚ್ಚಿ, ಹಲಕೆಲವರಂತೂ ಕಲೋಪಾಸಕರಾಗಿ ನೃತ್ಯಕಲೆಯಲ್ಲಿ ತಜ್ಞರಾಗಿ ಜನರನ್ನು ಮನರಂಜನೆಗೊಳಿಸುವುದು ಎಲ್ಲ ಜನಾಂಗಗಳಲ್ಲಿಯೂ ಕಂಡುಬರುವುದು.

ಈಗ ಹಳ್ಳಿಗರ ಕುಣಿತಗಳು ವಿಶೇಷವಾಗಿ ಹಳೆಒಕ್ಕಲು ಜನಾಂಗಗಳಲ್ಲಿ ಹೆಚ್ಚಾಗಿ ಇರುವುವು. ಸುಸಂಸ್ಕೃತರೆಂದು ಜಂಬ ಕೊಚ್ಚಿಕೊಳ್ಳುವ ಪಟ್ಟಣಿಗರು ಈ ಕುಣಿತಗಳಿಗೆ ಮೆಚ್ಚಿರುವುದಿಲ್ಲ. ಆದುದರಿಂದ ಇವು ಹಳ್ಳಿಗರ ಸೊತ್ತಾಗಿ ಇಂದು ಕೇವಲ ಹಲಕೆಲವು ಕಾಡಜನಾಂಗಗಳಲ್ಲಿ ಮಾತ್ರ ಕಂಡುಬರುವುವು. ಹಾಡುಗಳೊಡನೆ ಹೊಂದಿಕೆಯಾಗುವ ಈ ಕುಣಿತಗಳಂತೂ ಜನತೆಗೆ ಮೋಡಿ-ಮಾಡಿಯೇ ಬಿಡುವುವು. ಹೆಜ್ಜೆ ಗೊತ್ತಿಲ್ಲದ ಹಳ್ಳಿಗರು ಈ ಹಾಡುಕುಣಿತಗಳನ್ನು ನೋಡಿ ಕೇಳಿ, ನಿಂತಲ್ಲಿಯೇ ಹೆಜ್ಜೆಗಳೊಡನೆ ತಾನ ಹಾಕಿ ಮನತುಂಬಿ ನಲಿಯುವರು. ಹಾವಭಾವಗಳ ಮನೋಬಯಕೆ ತುಂಬಿರುವ ಇವು ಕಾವ್ಯದ ಹೆಚ್ಚಳವನ್ನು ಬೆಳಗಿ ನಾವೀನ್ಯತೆಯನ್ನು ಹುಟ್ಟಿಸದಿವು.

'ರಾಸ', 'ಗಾರ್ಬಾ' ಮೊದಲಾದ ಶೃಂಗಾರ ಕುಣಿತಗಳಿಗೆ ಗುಜರಾಥವು ಈಗಲೂ ಹೆಸರುವಾಸಿಯಾಗಿದೆ. ಇಲ್ಲಿ ಹೆಣ್ಣು ಗಂಡಿಗೆ ಕೈಗೆಕೈಕೊಟ್ಟು ಕುಣಿಯುವುದನ್ನು ನೋಡಬಹುದು. ಬಂಗಾಲ, ಆಸಾಮ ಮೊದಲಾದ ತೀರ ಉತ್ತರ ಪ್ರದೇಶಗಳಲ್ಲಿಯ ಹಳ್ಳಿಯ ಕುಣಿತಗಳು (Folk dance) ಜನತೆಯ ಮೆಚ್ಚುಗೆಯನ್ನು ಪಡೆದಿವೆ. ಪ್ರೊ. ದೇವೇಂದ್ರ ಸತ್ಯಾರ್ಥಿ ಮತ್ತು ಬೀರೇಂದ್ರನಾಥ ಗಂಗೊಳಿ ಮೊದಲಾದ ಜಾನಪದ ಸಾಹಿತಿಗಳು ಉತ್ತರ ಹಿಂದೂಸ್ತಾನದ ಹಳ್ಳಿಗರ ಕುಣಿತಗಳನ್ನು ಕುರಿತು ಚರ್ಚಾತ್ಮಕವಾಗಿ ಬರೆದಿದ್ದಾರೆ. ಮೊನ್ನೆ ಮೊನ್ನೆ ದಿಲ್ಲಿಯ ಕೋಟೆಯ ಮುಂದೆ ಬಂಗಾಲದ ಹಳ್ಳಿಯ ಕುಣಿತಗಳು (Folk dance) ನಡೆದಾಗ, ನೋಡಿ ಪಟ್ಟಣಗರೆಲ್ಲರೂ ಸೋಜಿಗಪಟ್ಟರು, ಆ ಸಮಯದಲ್ಲಿ 'ಕಾವಸ್ಜಿ ಜೆಹಂಗೀರ (Sir Cowasji Jehangir) ಎಂಬವರು ದಿಲ್ಲಿಯ ಜನರ ಮನೋಭಾವನೆಗಳನ್ನು ಕಂಡು ``A new educational horizon had been unveiled by the performance of these Bengali Folk dances."[4] ಎಂದು ಮಾತಾಡಿದರು. ಇತ್ತೀಚೆ ಇವುಗಳ ಪ್ರಚಾರವನ್ನರಿತು ಚಲಚಿತ್ರ ಮಂಡಳಿಯವರು ತಮಗೆ ಬೇಕಾದ ಹಲಕೆಲವುಗಳನ್ನು ಮಾತ್ರ ಪ್ರದರ್ಶನ ಮಾಡಿದ್ದಾರೆ. ಅಲ್ಲದೆ ಗುಜರಾಥದಲ್ಲಿಯೂ, ಬಂಗಾಲದಲ್ಲಿಯೂ, ಆಸಾಮ ಮೊದಲಾದ ಉತ್ತರಭಾಗಗಳಲ್ಲಿ ಕೆಲವು ಜನರು ಈ ಕುಣಿತಗಳನ್ನು ಪ್ರಚಾರ ಮಾಡುವ ಮತ್ತು ಪ್ರದರ್ಶಿಸುವ ಕಾರ್ಯವನ್ನು ಕೈಕೊಂಡದ್ದು ಭರತಖಂಡದ ನೃತ್ಯಕಲೆಯ ಭಾಗ್ಯೋದಯವೆನ್ನಬೇಕು. ಆದರೆ ಈ ಕೆಲಸವನ್ನು ಕರ್ನಾಟಕದಲ್ಲಿ ಯಾರೂ ಕೈಕೊಳ್ಳದಿರುವುದು ಕನ್ನಡಿಗರ ದುರ್ಭಾಗ್ಯವಲ್ಲವೇ?

ಹಳ್ಳಿ ಕೆಟ್ಟು ಹೋಗುವ ಇಂದಿನ ಹದಗೆಟ್ಟ ವಾತಾವರಣದಲ್ಲಿ ಮೋಜು ಮಜಲುಗಳು ಮುಗ್ಗಹತ್ತಿವೆ. ಇದಕ್ಕೆ ಮಧ್ಯಮ ತರಗತಿಯ ಜನರ ದುಃಸ್ಥಿತಿಯೇ ಮೂಲ ಕಾರಣ. ಅಲ್ಲದೆ ಪರಿಸ್ಥಿತಿಗೆ ಅನುಕೂಲವಾಗುವಂತೆ ಸರಕಾರವು ಹೋಳಿ ಮೊದಲಾದ ಹಬ್ಬಗಳನ್ನು ಆಚರಿಸಲು ಮನ್ನಣೆ ಕೊಡುವುದಿಲ್ಲ. ಯುದ್ಧ, ಬರಗಾಲ ಮೊದಲಾದ ದುಷ್ಕಾಲಗಳು ಒಂದರ ಮೇಲೊಂದು ಕೂಡಿ ಬಂದು ಈ ಕುಣಿತಗಳನ್ನು ಮತ್ತಷ್ಟು ಕುಗ್ಗಿಸಹತ್ತಿವೆ. ಅಂದಮೇಲೆ ಪ್ರೋತ್ಸಾಹವೆಲ್ಲಿಂದ ಸಿಗಬೇಕು?

---

೩. 'ನಾಟ್ಯಶಾಸ್ತ್ರ' ಅಷ್ಟಮಾಧ್ಯಾಯ : ಶ್ಲೋಕ-೯

4. Modern Review Vol. 54. p.p. 1951

ಹಳ್ಳಿಗರ ಮನರಂಜನೆ (Entertainments)ಗಳ ಮೂಲಭಾಗವಾದ ಈ ಹಾಡು ಕುಣಿತಗಳು ಕಣ್ಮರೆಯಾದರೆ ಹಳ್ಳಿಗರ ಜೀವನದ ಕಳೆಯೇ ಕಂದಿಹೋಗುವುದಿಲ್ಲವೇ? ಇಂದು ನಮಗೆ ಈ ಹಾಡು ಕುಣಿತಗಳು ಅವಶ್ಯವಾಗಿ ಬೇಕು. ಇವುಗಳಿಗೆ ಸಾಕಷ್ಟು ಪ್ರೋತ್ಸಾಹವನ್ನು ಜನರೂ, ಸರಕಾರವೂ ಕಾಲಕಾಲಕ್ಕೆ ನೀಡಲೇಬೇಕು. ಅಂದರೆ ಮಾತ್ರ ಅವರ ಜೀವನವು ಅಭಿನಯಮಯವಾಗುವುದು.

ಕುಣಿತವು ಶರೀರಕ್ಕೆ ಸರ್ವಾಂಗ ವ್ಯಾಯಾಮ. ಇದನ್ನರಿತ ಭರತಖಂಡದ ಅರಸರು ತಮ್ಮ ಆಸ್ಥಾನಗಳಲ್ಲಿ ನೃತ್ಯಕಲೆಗೆ ಪೋಷಣೆಯನ್ನು ಕೊಡುತ್ತ ಬಂದಿದ್ದಾರೆ. ಪ್ರಾಚೀನ ಕಾಲದಲ್ಲಿ ಭರತಖಂಡದ ಅನೇಕ ಮಹಿಳೆಯರು ನೃತ್ಯಕಲೆಯನ್ನು ಕಲಿತು ರಾಜಕೀಯ ರಂಗದಲ್ಲಿ ಕೈಹಾಕಿ ಮುಖ್ಯಪಾತ್ರ ವಹಿಸಿದ್ದನ್ನು ಇತಿಹಾಸದಿಂದ ತಿಳಿದು ಕೊಳ್ಳಬಹುದು. ಜೌಗಿ, ಜಳುಕಿ, ತೂಗಿ, ತೊನೆದು ಹಾವಭಾವಗಳ ಜುಳುಕಿನಲ್ಲಿ ತಾಳಲಯಗಳ ಸಮ್ಮೇಳವಾಗಿ, ಮನಸ್ಸಿಗೆ ಶ್ರಮವೆನಿಸದೆ ಕುಣಿಯಲು ಸರ್ವಾಂಗಗಳು, ದಣಿದು ಕುಣಿತವು ಮುಗಿಯುವ ಮುನ್ನವೇ ವಿಶ್ರಾಂತಿಯನ್ನು ಬೇಡಹತ್ತುವುವು. ರಕ್ತಾಶಯವು ಪುಟಿ ಪುಟಿದು ರಕ್ತವು ಚೆಲ್ಲರೆಯಾಗಿ ಶರೀರದ ಅಂಗಾಂಗಗಳಲ್ಲಿ ಹರಿದು, ಸರ್ವಾಂಗಗಳು ಸುಂದರವಾಗಿ ಸ್ನಾಯುಗಳು ಹುರಿಯಾಗಿ ಶರೀರವು ಅಂದವಾಗಿಯೂ ಬಲಾಢ್ಯವಾಗಿಯೂ ಕಾಣುವುದು. ಅಲ್ಲದೆ ಕಾಯ ಕಾಂತಿಯುಕ್ತವಾಗಿ ಮಿರುಗಹತ್ತುವುದು. ಅಂಗಾಂಗಗಳ ಹಿಡಿತಬಲ್ಲ ನೃತ್ಯಕನು ಜೀವನ ಸರ್ವತೋಮುಖಗಳಲ್ಲಿ ಮರಿದುಂಬಿಯಂತೆ ಹಾರಾಡಿ ಬಾಳತೋಟದ ಮಕರಂದರಸವನ್ನೇ ಕುಡಿಕುಡಿದು ಸುಖಜೀವಿಯಾಗುವನು. ಹಳ್ಳಿಗರ ಜೀವನ ಕಳೆ ತುಂಬಿಸುವ ಈ ಕುಣಿತಗಳು ಅವರ ಜೀವನ ಜೀವಾಳವೆಂದರೆ ತಪ್ಪಾಗಲಿಕ್ಕಿಲ್ಲ. ಇಂತಹ ಜೀವನವನ್ನು ಬಗೆಸದವರಾರು? ಅಂದಮೇಲೆ ಶರೀರ ಶಿಕ್ಷಣದಲ್ಲಿ ಕುಣಿತಕ್ಕೆ ಇಂದು ನಾವು ಮಹತ್ವದ ಸ್ಥಾನವನ್ನು ಕೊಡಬಾರದೇಕೆ? ಮನರಂಜನೆ ವಿನೋದಾವಳಿಗಳಲ್ಲಿ ಕುಣಿತಗಳು ಜನರನ್ನು ತಣಿಸುವುವಲ್ಲದೆ ಜನರ ಆಯುರಾರೋಗ್ಯವನ್ನು ಹಿಗ್ಗಿಸಬಲ್ಲವು. ಸುಗ್ಗಿಯ ಕುಣಿತಗಳೂ, ಹೋಳಿಯ ಕುಣಿತಗಳೂ, ಜಾತ್ರೆಮಹೋತ್ಸವ ಮೊದಲಾದುವುಗಳಲ್ಲಿ ಹೆಜ್ಜೆಯ ಕುಣಿತಗಳೂ ಕರ್ನಾಟಕದ ಎಲ್ಲ ಭಾಗಗಳಲ್ಲಿ ಇರುವುವು. ಇವು ಗುಂಪು ಕುಣಿತಗಳಾಗಿರುವ ಮೂಲಕ ಬಹಳ ಜನರಿಗೆ ಮೇಳಗೂಡಿ ಕುಣಿದು ಲಾಭ ಪಡೆಯಲು ಸಮಯ ಸಿಗುವುದು. ಆದುದರಿಂದ ಇವುಗಳನ್ನು ನಮ್ಮ ಜನತೆಗೆ, ಪ್ರೋತ್ಸಾಹಿಸಿ ಉಳಿಸಿಕೊಡುವುದು ನಮ್ಮೆಲ್ಲರ ಕರ್ತವ್ಯ.

❒

೨. ಪ್ರಣಯ ಹಾಗೂ ದಾಂಪತ್ಯ[೧]

ಪ್ರಣಯವು ಹರೆಯದ ಜೀವಿಗೆ ಸ್ವಾಭಾವಿಕ. ಗಂಡಿನ ಹರೆ ಹೆಣ್ಣನ್ನೂ, ಹೆಣ್ಣಿನ ಹರೆ ಗಂಡನ್ನೂ ನೋಡಿ ನೋಡಿ ಆನಂದಪಡುವುದಲ್ಲದೆ, ತೃಪ್ತಿ ಹೊಂದಲು ಒಂದನ್ನೊಂದು ಬಗೆಸುವುದು.

ಹೆಣ್ಣೀನ ಈ ಹರೆಯ, ಹಣ್ಣೀನ ಗೊಂಚಲು
ಕಣ್ಣೀಲಿ ನೋಡಿ ಮನಚಾರ । ಬಡವಂತ
ಕನ್ನೆರಿಲ್ಲೀನ ಮನಿಯಾಗ ॥ *–ಗ.ಹಾ–ಪು.೫೯*

ಎಂದು ಹೆಣ್ಣು ಗಂಡಿಗೆ ಕೇಳಿದೆ. ಗಂಡು ಎದೆಗಾರನಾಗಿ ಹೆಣ್ಣನ್ನು ಎದ್ದು ನೋಡುವುದು, ಹೆಣ್ಣು ಅಬಲೆಯಾಗಿ ಗಂಡನ್ನು ಕದ್ದು ನೋಡುವುದು. ಅಂತೆಯೇ ಹೆಣ್ಣು ಗಂಡಿಗೆ ಶರಣು ಹೋಗುತ್ತದೆ. ಪ್ರಣಯ ಕ್ಷೇತ್ರದಲ್ಲಿ ಗಂಡು ಮೊದಲಿಗನಾಗಿ ಕೈಹಾಕಿದರೂ ಹೆಣ್ಣು ಸದ್ದು ಮಾಡದೆ 'ಹೂಂ' ಎಂದು ಕೈ ಕೊಡುವುದು.

ಕಾಮ ಕಂಪಾಗಿ ಬರಲು, ಕಾಯ ಕೆಂಪೇರಲು
ಉಬ್ಬುಡುಗಿ ನೀರೀಗೆ ಸಡಿಲ್ಯಾವೊ ದೇವಾ ॥ತುಂ॥
ರಾಸಾಟ ರಸದೂಟ, ಮನದಾಟ ಮನದೂಟ
ಕಾಯಕ ಕಾಮದ ಕೊನೆಯೂಟೊ ದೇವಾ ॥ತುಂ॥
ಅರಿಯದಲೆ ಇರುಳೆಲ್ಲ, ಕಳೆದು ಹೋಯಿತು ನೋಡ
ತೋಳ ತೆಕ್ಕ್ಯಾಗ ತೇಲ್ಯಾಡೊ ದೇವಾ ॥ತುಂ॥ *–ಜಾ.ಮ–ಭಾ–*

ಎಂದು ಜಾನಪದ ಮಹಾಭಾರತದಲ್ಲಿ ಹೆಣ್ಣು ಹಾಡಿದೆ. ಈ ಜೀವನದಲ್ಲಿ ಪ್ರಣಯ ಮೂಡಿ ಬಂದರೆ ನಮ್ಮ ಬಾಳು. ಪ್ರೇಮಕಾಮಗಳೆರಡೂ ಹೊಂದಿಕೆಯಾಗಿ ಬಂದರೆ ಮಾತ್ರ ಪ್ರಣಯ. ತುಂಬಿದ ಕಾಯ ಚುಂಬನ ಬಯಸುವ ಕಾಲವೇ ಈ ಪ್ರಣಯಕಾಲ. ಆಗ ಗಂಡು ಹೆಣ್ಣಿಗೂ ಹರೆಯುಕ್ಕಿಬರುವುದು. ಪ್ರಣಯದಲ್ಲಿ ಗಂಡು ಕಲಕಿ ತಡೆಯಬಹುದು; ಆದರೆ ಹೆಣ್ಣು ಚಂಚಲೆಯಾಗಿ, ಧೈರ್ಯತಾಳಿ ಪ್ರಣಯಕ್ಕಾಗಿ ತನ್ನ ಬಳಗಿಷ್ಟರನ್ನು ಸಹ ಬಿಟ್ಟು ಗಂಡಿನ ಬೆನ್ಹತ್ತಿಹೋಗುವುದು.

ಕಾಕು ಹಾಕಿದ ಕಂಡು, ಬೇಕಾಗಿ ನಾ ಬಂದೆ
ಬಾರೊ ನನಗೆಣೆಯ ಬೈಲೀಗಿ । ನಾನೆಂದು
ಬಾಸೆ ತಪ್ಪೊಂತ ಮಗಳಲ್ಲ ॥ *–ಜಾ–ಸಂ.–*

ಪ್ರಣಯವು ಯಾವಾಗಲೂ ಕಂಟಕವು. ಅದು ಸುಸೂತ್ರ ಕೈಗೂಡುವುದು ಬಲು ವಿರಳ. ಪ್ರಣಯಿಗಳು ಅನೇಕ ಎಡರುತೊಡರುಗಳನ್ನು ಅನುಭವಿಸಬೇಕಾಗುವದಲ್ಲದೆ, ಜನ ಹರಲೆ ಹೊತ್ತು ಸಮಾಜದ ಕಟ್ಟಳೆಗಳನ್ನು ಬದಿಗಿಟ್ಟು ಬದುಕಬೇಕಾಗುವುದು. ಪ್ರಣಯವು ಕೈಗೂಡಬೇಕಾದರೆ ಅವರಿಗೆ ಒಂದು ದೊಡ್ಡ ಸಾಹಸವೇ ಆಗುವುದು. ಹೀಗಿದ್ದರೂ ಕೂಡ, ಗಂಡು ಹೆಣ್ಣನ್ನೂ, ಹೆಣ್ಣು ಗಂಡನ್ನೂ ಒಬ್ಬರಿಗೊಬ್ಬರು ಬಯಸುವರು. ಅಂತೆಯೇ ಇಂದಿನವರೆಗೆ ಸಾಗುತ್ತ ಬಂದಿದೆ ನಮ್ಮ ಬಾಳು.

ರಸ ನಿಮಿಷಗಳ ರಸಿಕರೂ, ರಸಾವೇಶಗಳ ಬಂಟರೂ ಆದ ನಮ್ಮ ಹಳ್ಳಿಗರಲ್ಲಿ ಪ್ರಣಯವು ಒಂದು ರಸೋನ್ಮತ್ತವಾದ ಲೀಲೆಯಾಗಿದೆ. ಹಗಲಿರುಳು ಬಿಸಿಲು, ಗಾಳಿ, ಚಳಿಯೆನ್ನದೆ ದುಡಿದು ದೇಹಾರೋಗ್ಯವನ್ನು ಬೆಳೆಸಿದ ಅವರು ಪ್ರಣಯಿಗಳೂ ಅಹುದು. ಅವರ ಜೀವನವು ಪಟ್ಟಣಿಗರಂತೆ ಕೃತಕವಲ್ಲ. ಪಟ್ಟಣಿಗರ ಪ್ರಣಯ ಮಾರ್ಗವೇ ಬೇರೆ. ಹಳ್ಳಿಗರಿಗೆ ಪ್ರಣಯ ಬರುವುದು ಚಿಗಿತ ಮಾಮರಕ್ಕೆ ಮಿಟ್ಟೆ ಕೂತಂತೆ. ಅಲ್ಲಿ ಮೋಸ ಮುಚ್ಚುಮರೆಗಳಿಲ್ಲ. ಅದರ ಬರುವಿಕೆ–ಅಷ್ಟು ಸಹಜವಿದೆ! ಹಳ್ಳಿಯ ತರುಣ ಉತ್ಸಾಹಿಗಳು ನಿತ್ಯಜೀವನದಲ್ಲಿ ಒಬ್ಬರಿಗೊಬ್ಬರು ಕೂಡಿಯೇ ದುಡಿಯಬೇಕಾಗುವುದು. 'ಕೋಲಿಕಸ ತಗೆಯುವುದು, ಬಿತ್ತುವುದು, ಕಸಕಳೆ ಕೀಳುವುದು, ಕೊಯ್ಯುವುದು, ಕಟ್ಟುವುದು, ಒಕ್ಕುವುದು ಮೊದಲಾದ ಒಕ್ಕಲತನ ಹೋರೆಗಳಲ್ಲಿ ಗಂಡು ಹೆಣ್ಣು ಕೂಡಿಯೇ ದುಡಿಯಬೇಕಾಗುವುದು. ನೆರೆತು ಮೈದುಂಬಿದ ಈ ಪ್ರಾಯದ

---

೧. ಈ ಪ್ರಕರಣದ ಕೆಲವೊಂದು ಭಾಗವನ್ನು 'ಧಾರವಾಡ ಬಾನುಲಿ'ಯಿಂದ ಬಿತ್ತರಿಸಲಾಗಿದೆ. ೮–೧೨–೧೯೫೨

ಜೀವಿಗಳು ಒಬ್ಬರನ್ನೊಬ್ಬರು ದಿಟ್ಟಿಸಿ ನೋಡಿದಾಗ ಆ ನಿಸರ್ಗದ ಬಯಲಲ್ಲಿ ಹೇಗಾಗಬಹುದು? ಕೆಲಸದ ಭರದಲ್ಲಿ ಒಮ್ಮೊಮ್ಮೆ ಸಹಜ ತಾಕಿದಾಗ ಕಾಯ ಜುಮ್ಮೆನ್ನದೆ? ಅಷ್ಟೇ ಏಕೆ? ಯೌವನ ಭರದಲ್ಲಿ ಈ ತರುಣರಿಗೆ ತಿಳಿಯದೆ ಪ್ರೇಮವಂಕುರಿಸಿ ಬೆಳೆದು ಪ್ರಣಯಕ್ಕೆ ನಿಲ್ಲುವುದು. ಇದೇ ಅವರ ಪ್ರಣಯದ ಆರಂಭ. ಮುಂದೆ ಅದು ಸಮಾಜದ ಕಟ್ಟಳೆಯಂತೆ ಮದುವೆಯೊಡನೆ ಪೂರ್ತಿಹೊಂದಿ ದಾಂಪತ್ಯ ಜೀವನಕ್ಕಿಳಿಯಬಹುದು; ಇಲ್ಲವೆ ಹಾಗೆಯೆ ಉಳಿಯಬಹುದು. ಇದಕ್ಕೆ ನಾವು ಪ್ರಣಯಿಗಳ (ಗೆಣೆಯ ಗೆಣತಿಯರ) ಪ್ರಣಯವೆಂದು ಕರೆಯಬಹುದು. ಒಮ್ಮೊಮ್ಮೆ ಈ ಪ್ರಣಯವು ದಾಂಪತ್ಯ ಜೀವನಕ್ಕಿಂತಲೂ ಬಂಧುರವಾದುದು. ಇದನ್ನು ಬಿಡಿಸಿ ಅಗಲಿಸುವುದೇ ಅಸಾಧ್ಯ. ಆದುದರಿಂದ ಹಳ್ಳಿಗರ ಹಾಡುಗಳಲ್ಲಿ ಇದನ್ನು ಕುರಿತು ಅನೇಕ ಉಸುರುಗಳೂ, ಉದ್ಗಾರಗಳೂ ಬಂದಿವೆ.

ಹೊಳಿಯ ದಂಡೆಯ ಮ್ಯಾಲೆ, ಎಳಿಯ ಸವತೀಕಾಯಿ
ಹರಿಯಂದರ‍್ಹ್ಯಾಂಗ ಹರಿಯಾಲೆ। ಎಲೆ ಹುಡುಗಿ
ಮರಿಯಂದರ‍್ಹ್ಯಾಂಗ ಮರಿಯಾಲೆ॥ *–ಜಾ–ಸಂ.–*

ಅದೆ ನೆರತು ತುಂಬಿದ ಹುಡುಗಿಯು ಪ್ರಾಯದ ಗಂಡಿಗೆ ಹೊಳೆಯ ದಂಡೆಯ ಮೇಲೆ ಬೆಳೆದ ಮಾಸದ ಎಳೆ ಸವತಿಯ ಕಾಯಿ ಇದ್ದಂತೆ! ಅವಳನ್ನು ಅವನು ಮರೆಯುವುದಾದರು ಹೇಗೆ? ಯೌವನ ಭರದಲ್ಲಿ ತನ್ನ ಪ್ರಣಯಿಗೆ ಕೂಡಿದ ಹೆಣ್ಣು, ಏನೋ ಕಂಟಕದ ಮೂಲಕ ಅಗಲುವುದು ಬರಲು, ಅವಳಿಗೆ ಪ್ರಣಯಜ್ವರ ಬಂದು ತಲೆಶೂಲೆಯೇ ಏಳುವುದು.

ಚಳಿಜ್ವರ ಬಿಟ್ಟಾವು, ಒಳಜ್ವರ ಬಿಡಲಿಲ್ಲ
ಮಂಟಪದ ಜಾಜಿ ಮನೆಯವನೆ। ಸರದಾರ
ಮಂತ್ರೀಸಿ ಹೋಗೊ ತಲೆನೋವ॥ *ಹೋ–ರಾ*

ಎಂದು ನೆನಿಸಿ ಅತ್ತಿದ್ದಾಳೆ. ಆ ಜ್ವರವು ಆರುವ ಬಗೆ ಹೇಗೆ?

ಹಳ್ಳಿಯ ಹೆಣ್ಣಾಗಲಿ, ಗಂಡಾಗಲಿ ಒಬ್ಬರಿಗೊಬ್ಬರು ಮೆಚ್ಚಿ ಕೂಡಿದ್ದು ಗುಣಕ್ಕಾಗಲಿ ಇಲ್ಲವೆ ಚೆಲುವಿಕೆಗಾಗಲಿ. ಈ ದೃಷ್ಟಿಯು ಅವರವರ ರುಚಿಗಾನುಸಾರವಾಗಿರುತ್ತದೆ. ಗಂಡಿಗೆ ಹೆಣ್ಣಿನ ಬಣ್ಣ, ರೂಪ, ವೇಷಭೂಷಣ, ವೈಯಾರ, ಮುರುಕು, ಯಮಕು, ಒಳ್ಳೆತನ ಮೊದಲಾದುವುಗಳೇ ಮನಸ್ಸನ್ನು ಸೋಲಿಸುವುವು. ಸಾಹಸಿಗನಾಗಿ ಗಂಡು ಕೈಕೆಲಸವನ್ನು ಬಿಟ್ಟು ಅವಳನ್ನು ಹುಡುಕಿ, ಕೂಡಲು ಹವಣಿಸುತ್ತದೆ.

ನಿಂಬೀಯ ಹಣ್ಣಾಂಗ, ತುಂಬಿತ್ತ ಮೈಬಣ್ಣ
ಹಂಬಾಲ ಬಿತ್ತ ನಿನಮ್ಯಾಲೆ। ಎಲೆ ಹೆಣ್ಣ
ನಂಬಿ ಬಂದೀನೆ ಮನೆತನಕ॥

ಕಾಡೀಗಿ ಗಣ್ಣೀನ, ಕೂಡಿದ್ದುಬ್ಬೀನ್ಹೆಣ್ಣ
ಬೇಡ್ಯಾವ ನಿನ್ನ ನನಜೇವ। ನಿನ್ನೋಡಿ
ಓಡಿಬಂದೀನೆ ಕೂಡುದಕ॥

ಮಾರೀಯ ನೋಡಿದರ, ಮಾವುರದ ಬಂಗಾರ
ಸೀರಿನೋಡಿದರ ಜರತಾರ। ಎಲೆ ಹೆಣ್ಣ
ಯಾರ ಮನವನ್ನು ಸೆಳೆಯಾವ॥

ಅಡ್ಡಗುಡ್ಡವು ಚೆಂದ, ದೊಡ್ಡರಳಿ ಮರ ಚೆಂದ
ಗಿಡ್ಡಿ ನಿನ ಕೈಗೆ ಬಳಿ ಚೆಂದ। ನನ ಗೆಣತಿ
ಒಡ್ಯಾಣ ಚೆಂದ ನಡುದಾಗ॥

ಹೆಬ್ಬೊಬ್ಬಿ ಮರೆಯಾಗ, ಬಗ್ಗಿನೋಡವಳ್ಯಾರ
ಕಬ್ಬಕ್ಕಿಯಂತ ಮಲೆಯವಳ। ನಾ ಕಂಡು
ಗೊಬ್ಬರ‍್ಹಾಕುದಕ ಮನಸಿಲ್ಲ॥

ಅಡ್ಡಗುಡ್ಡವ ದಾಟಿ, ಕದ್ದು ಕಣವಿಯ ದಾಟಿ
ಬಿದ್ದೋಡಿ ಬಂದೆ ನಿನಗಾಗಿ। ಎಲೆ ಹುಡುಗಿ
ಎದ್ದ ದನಿದೋರ ನನಗಾಗಿ॥ *–ಹೋ–ಹಾ–*

ಎಂದು ಹೋಳಿಯ ಹಾಡಿನಲ್ಲಿಯ 'ಕಾಡೀಗಿ ಗಣ್ಣೀನ, ಕೂಡಿದ್ದುಬ್ಬೀನ್ಹೆಣ್ಣೆ,' 'ಗಿಡ್ಡಿ ನಿನ ಕೈಗೆ ಬಳಿ ಚೆಂದ,' 'ನಿಂಬೀಯ ಹಣ್ಣಾಂಗ, ತುಂಬಿತ್ತ ಮೈಬಣ್ಣ,' 'ಮಾರೀಯ ನೋಡಿದರ, ಮಾವುರದ ಬಂಗಾರ' ಇವೇ ಮೊದಲಾದ ಗಂಡಿನ ಪರಿಶೀಲನೆಗಳು ಎಷ್ಟು ಯಥಾರ್ಥವಾಗಿವೆ! ಕೇಳುವವರಿಗೆ ನೋಡದಿದ್ದರೂ ಕಣ್ತುಂಬ ಚಿತ್ರಗಳು ತುಂಬಿ ಬಿಡುತ್ತವೆ. ಇವುಗಳಲ್ಲಿಯ ಶೃಂಗಾರಮಯ ಸ್ವಾರಸ್ಯಕ್ಕಾಗಿಯೇ ಹಳ್ಳಿಗರು ಈ

ಹಾಡುಗಳನ್ನು ತಮಗೆ ಬೇಕಾದಾಗ ಹಾಡುತ್ತ ಬಂದಿದ್ದಾರೆ. ಬಾಳಿನಲ್ಲಿ ಕಾಣುವುದನ್ನೂ, ಅನುಭವಿಸುವುದನ್ನೂ, ಚಾಚೂತಪ್ಪದೆ ಇಲ್ಲಿ ಕಾಣುತ್ತೇವೆ. ಹಳ್ಳಿಗರ ಶೃಂಗಾರದಲ್ಲಿ ಪ್ರಣಯವು ಕೃತಕವಲ್ಲ. ಮಾನವ ಪ್ರವೃತ್ತಿಗಳಿಗೆ ಇಲ್ಲಿ ಅಸಹ್ಯ ವಾಸನೆಯೂ ಇಲ್ಲ. ಅತಿಶಯೋಕ್ತಿಯಾಗಲಿ, ನಟನೆಯಾಗಲಿ, ಎಲ್ಲಿಯೂ ತಲೆಯೆತ್ತುವುದಿಲ್ಲ. ಕಂಡ ಶೃಂಗಾರವು ಅಶ್ಲೀಲವೆಂಬ ಭಾವನೆಯೂ ಇಲ್ಲ. ಅವರ ಪ್ರಣಯದಲ್ಲಿ ಪ್ರೇಮ, ಕಾಮ, ಔದಾರ್ಯ, ಕೋಪ, ಸರಳತೆ ಮೊದಲಾದ ಭಾವಗಳು ಒಡೆದು ಕಾಣುತ್ತವೆ. ಹೆಣ್ಣು ಗಂಡಿನ ಮುಖಸ್ತುತಿಗೂ ಅಂದವಾದ ಮೈಕಟ್ಟಿಗೂ, ಠೀವಿಗೂ, ಗಂಭೀರತನಕ್ಕೂ ಮನಸೋಲುವುದು. ಅವಳು ತಾ ಕಂಡ ಗಂಡಿನ ರೂಪ ಚಿತ್ರಗಳು ಕಣ್ಣಲ್ಲಿ ಕುಣಿಯ ಹತ್ತಿದರೂ ಒಮ್ಮೆಲೇ ಧುಮುಕಳು. ತಕ್ಕ ಸಮಯವನ್ನರಿತು ಸಿಕ್ಕಾಗ ಕೈ ಹಿಡಿಯಲು ಯತ್ನಿಸುವಳು.

ಹಾಡು ಹಾಡಂದಾರೆ, ನಾನೇನು ಹಾಡಾಲೆ
ಹಾಡೊ ನನ ಗೆಣೆಯ ನನಮ್ಯಾಲೆ । ಮೂಡಾಣ
ಜಾಣ ಕೂರೀಗಿ ಹೊಡದ್ಹಾಂಗ ॥

ಕಬ್ಬು ಕಾರುಳ್ಳವನ, ಹುಬ್ಬುನೇರುಳ್ಳವನ
ಗೊಬ್ಬರದ ಗಾಡಿ ಹೊಡೆಯಾವ । ಗೆಣೆಯಾನ
ಹುಬ್ಬಿಗಿನ್ನೊಂದು ಸರಿವುಂಟ ॥

ಮೆಂಚೀಗಿ ಮ್ಯಾಲ್ಹತ್ತಿ, ಕೆಂಚ ಮೀಸಿಯತಿದ್ದಿ
ಹೊಂಟ್ಹಾಕಿ ಹೊಡೆದ ಕವಣೇಯ । ನೆರೆಹೊಲದ
ಕೆಂಚ ಗುರಿಕಂಡು ಬೆರತಾಳೊ ॥

ಕ್ವಾರಿ ಮೀಸಿಯ ತಿದ್ದಿ, ನೀರಿಗ್ಹೋಗುವಾಗ
ದಾರ್‍ಯಾಗ ಕಂಡೆ ಚೆಲುವನ್ನು । ಮನಸಾಗಿ
ವಾರ್‍ಯಾಗ ತರುಬಿ ಕೇಳೇನ ॥ *–ಹೋ–ಹಾ*

ಈ ಹಾಡುಗಳಲ್ಲಿ ಬಂದ ಚಿತ್ರಗಳು ಹೆಣ್ಣು ಕಂಡ ಗಂಡಿನ ರೂಪ ಚಿತ್ರಗಳಾಗಿವೆ. ಹೆಣ್ಣಿನ ಸ್ವಭಾವ ಜನ್ಯ ಪ್ರವೃತ್ತಿಗಳು ಇಲ್ಲಿ ಕಲುಕಿದಂತೆ ಕಾಣುತ್ತವೆ. 'ಕೆಂಚ' ಗುರಿಕಂಡು ಬೆರತಾಳ,' 'ಕ್ವಾರಿ ಮೀಸಿಯ ತಿದ್ದಿ,' ಮೊದಲಾದುವುಗಳಂತೂ ಪ್ರಣಯಕ್ಕೆ ಪ್ರೇಮ ತುಂಬಿದ ಸೋಪಾನಗಳಾಗಿವೆ. ಇವರ ಬೇಟ–ಕೂಟದ ತಾಣಗಳೆಂದರೆ, ಗುಡ್ಡದ ದಾರಿ, ಹೊಳಿಯ ದಾರಿ, ಊರ ಮುಂದಿನ ಕೆರೆ, ಗದ್ದೆ, ಹೊಲ ಮೊದಲಾದ ಏಕಾಂತ ಸ್ಥಳಗಳೂ, ಹಬ್ಬ, ನಿಬ್ಬಣ, ಸಂತೆ, ಜಾತ್ರೆ ಮೊದಲಾದ ಪ್ರಸಂಗಗಳೂ ಆಗಿವೆ. ಪ್ರಣಯದಲ್ಲಿ ಬೇಟವೇ ಮೊದಲು ಪ್ರೇಮವನ್ನು ಹುಟ್ಟಿಸುತ್ತದೆ. ನಿಬ್ಬಣಕೆ ಹೋದ ಹಳ್ಳಿಯ ಹುಡುಗನು ಮಾವನ ಮಗಳನ್ನು ನೋಡುತ್ತಾನೆ. ಅವಳ ರೂಪಲಾವಣ್ಯಕ್ಕೆ ಮನಸೋತು, ಅವಳ ಕೂಡ ಮಾತಾಡಲು ಸಮಯ ದೊರಕಿಸಿ,

ಮಾನವನ ಎಲೆ ಮಗಳೆ, ಕೋಗೀಲ ದನಿಯವಳೆ
ತಾವsರೆ ಮೊಗ್ಗಿ ಮೊಲೆಯವಳೆ । ಅರಗಿಳಿಯೆ
ಬಾಯಾರಿ ಬಂದೆ ನೀರ್ಕೊಡ ॥ *–ಜಾ–ಸಂ–*

ಎಂದು ಕಲುಕಿಸಿ ಮಾತಾಡಿಸುತ್ತಾನೆ. ಹೊಳೆಯ ನೀರಿಗೆ ಹೋಗುವ ಹೆಣ್ಣನ್ನು

ನೀರಿಗ್ಹೋಗು ಹೆಣ್ಣೆ, ನಿಲ್ಲ ನಾ ಬರತೀನ
ನಿನ್ನಾಣೆ ನಿನ್ನ ಕೊಡದಾಣೆ । ಕೊರಳನ್ನ
ಸರದಾಣೆ ನೀರ ಹೊಳೆಯಾಣೆ ॥ *–ಹೋ–ಹಾ–*

ಎಂದು ಹೆಜ್ಜೆಜ್ಜೆಗೆ ಆಣೆಹಾಕಿ ತಡೆದು, ಗಂಡು ಮಾತಾಡಿಸುವುದೂ, ಹಳ್ಳಿಯ ಜೀವನದಲ್ಲಿ ಕಂಡುಬರುವುದು. ಪ್ರಣಯಕ್ಕೆ ಹಸಿವು ನೀರಡಿಕೆಯಲ್ಲ. ನಿದ್ರೆ, ಅಂಜಿಕೆಯಲ್ಲ, ಲಜ್ಜೆ ಅಭಿಮಾನವಿಲ್ಲ, ಪ್ರೇಯಸಿಯ ಆಶೆಗಾಗಿ ಗಂಡು ಇರುಳೆನ್ನದೆ ತಿರುಗುವುದು. ಕದ್ದು ಮಾಡುವ ಪ್ರಣಯವು ಬೈಲಿಗೆ ಬಿದ್ದರೆ ಗತಿ–ಏನು? ಎಂದು ಹೆಣ್ಣು ತನ್ನ ಪಣ್ಣನಿಗೆ 'ಬೆಳದಿಂಗಳಕ ಬರಬ್ಯಾಡೊ' ಎಂದು ಮೇಲಿಂದ ಮೇಲೆ ಎಚ್ಚರಿಸುತ್ತದೆ. ತಮ್ಮಿಬ್ಬರ ಪ್ರಣಯ ಸುಸೂತ್ರ ಸಾಗಲೆಂದೇ ಅವಳ ಉದ್ದೇಶ. 'ದೂರು ಬಂದರೆ ಬರಲಿ, ವೈಯಾರ ನಿನಗಿರಲಿ,' 'ಹರಲಿ ಬಂದರು ಬರಲಿ, ಹರಿದಿರಲಿ ಗೆಣತಾನ' ಮೊದಲಾದ ನುಡಿಗಳು ಗಂಡಿನ ಸಿದ್ಧತೆಯನ್ನು ಹೇಳುತ್ತವೆ; ಅಲ್ಲದೆ ಹೆಣ್ಣಿಗೆ ಧೈರ್ಯವನ್ನು ತುಂಬುತ್ತವೆ; ಜನತೆಗಾಗಿ ನಮ್ಮ ಪ್ರಣಯವಲ್ಲ, ನಮಗಾಗಿ, ಎಂದು ಸಾರುತ್ತವೆ.

ಪ್ರಣಯಿಗಳ ವಿಹಾರಗಳಲ್ಲಿ ಜಾತ್ರೆಯೂ ಒಂದು. ಅವರಿಗೆ ಜಾತ್ರೆ ಮಾಡುವ ಹವ್ಯಾಸ ಬಹಳ. ಉತ್ತರ ಕರ್ನಾಟಕದ ಹಲಕೆಲವು ಜಾತ್ರೆಗಳಲ್ಲಂತೂ ಇದನ್ನು ವಿಶೇಷವಾಗಿ ಕಾಣಬಹುದು. ಜಾತ್ರೆಗೆ ಹೋಗಬೇಕೆಂಬ ಉಬ್ಬೂ ಹೆಚ್ಚು ಅವಳಿಗೆ. ಇಬ್ಬರೂ ಮೋಜಿನಿಂದ ಜಾತ್ರೆಯ ಮಾಡಿ ತೃಪ್ತಿಹೊಂದುತ್ತಾರೆ.

ಪ್ರಣಯದಲ್ಲಿ ಹರೆಯದ ಜೀವಿಗಳಿಗೆ ಅಗಲಲು ಮನಸ್ಸಿಲ್ಲದಿದ್ದರೂ ಪ್ರಪಂಚ ಕಾರಣ ನಿಮಿತ್ತ ಪ್ರಣಯಿಗಳು ಒಮ್ಮೊಮ್ಮೆ ಅಗಲಬೇಕಾಗುವುದು. ಅವಳೊಪ್ಪದಿರಲು ಗಂಡು ಅನೇಕ ರೀತಿಯಿಂದ ರಮಿಸಿ ಸಮಾಧಾನ ಹೇಳುತ್ತದೆ.

ಈಟೀಟ ಮೊಲೆಯವಳ, ಚೀಟಕುಪ್ಪಸದವಳ
ಬ್ಯಾಟ ಹೋಗತೀನಿ ಕೈಬೀಡ। ಮಲ್ಲಾಡ-
ಜೇನ ತರತೀನಿ ಸವಿನೋಡ ॥ -ಹೋ-ಹಾ-

'ನಾನು ಬೇಟೆಗೆ ಹೊರಡುವುದು ನಿನ್ನ ಸಲುವಾಗಿ,' ಮಲ್ಲಾಡ ಜೇನ ತರುವುದು ನಿನ್ನ ಸಲುವಾಗಿ,' ಎಂದು ಬೆಳವಲದ ವೀರನು ತನ್ನ ಪ್ರೇಯಸಿಗೆ ವಚನ ಕೊಡುತ್ತಾನೆ. ಹೋದವನು ತಡೆದು ಬಹಳ ದಿನವಾದುವು. ಬರುವ ದಿನಗಳನ್ನು ನೆನಪಿಟ್ಟು, ಉಣಿಸು ತಿನಿಸುಗಳನ್ನು ಮಾಡಿ ಅವನು ಬರುವ ಹಾದಿಯನ್ನೂ ಕಾಯುವಳು. ಬಾರದಿರಲು-

ಗೆಣಸಿನ್ಹೋಳಿಗಿ ಮಾಡಿ, ಎಣಿಸಿ ಗಂಗಳಿಕ್ಹಾಕಿ
ನೆನಸೀದ ಗೆಣೆಯ ಬರಲಿಲ್ಲ। ಆ ಹುಡುಗಿ
ಮನಸಿನಾಗ ಮರಗಿ ಅಳತಾಳ ॥ -ಹೋ-ಹಾ-

ಎಂದು ಕಳವಳಗೊಂಡು ಮರಮರುಗಿ ಅಳುತ್ತಾಳೆ. ಹೋದವನು ಮುಂದೆ ತಿರುಗಿ ಬಂದ ಮೇಲೆ ಸಿಡಿಮಿಡಿಮಾಡಿ ಸರಿದು ಮಾತಾಡದೆ ಸುಮ್ಮನಿರಲು ಗಂಡು ತನಗೆ ತಡವಾದ ಕಾರಣವನ್ನು ಹೇಳುತ್ತದೆ.

ಗುತ್ತೀಗೆ ಮಲೆನಾಡ, ಎತ್ತು ಮಾರಲು ಹೋದೆ
ಒತ್ತೀಯ ಬಿದ್ದೆ ತಡವಾತ। ನನ ಗೆಣತಿ
ಚಿತ್ತ ನನ ಮ್ಯಾಲೆ ಸೆಡುಬ್ಯಾಡ ॥ -ಹೋ-ಹಾ-

ಅನ್ನುತ್ತ ಅವಳಿಗೆ ತಿಳಿ ಹೇಳುವನು. ಏನು ಹೇಳಿದರೂ ಕೇಳದೆ ವಾಸ್ಯಾಡುವ ಗೆಣತಿಗೆ-

ಈ ವರುಷ ಬಂದೀನೆ, ಮೀಸೀಯ ತಿದ್ದೀನೆ
ವಾಸ್ಯಾಡ ಬ್ಯಾಡ ನನಗೂಡ। ಎಲೆ ಹುಡುಗಿ
ಬೇಸ್ಹಾಂಗ ಬೆಳಗು ಕಳೆಯೋಣ ॥ -ಹೋ-ಹಾ-

ಆತುರನಾಗಿ ಅವನು ಅವಳಿಗೆ ಉದ್ರೇಕಿಸಿ ಮಾತಾಡುತ್ತಾನೆ. ಆದರೆ ಹೆಣ್ಣು ವಿಪರೀತಕ್ಕೆ ಹೋಗಿ ಹಣ್ಣಾಗಿ ಕೂಡಿದ ಗೆಣತನವನ್ನು ಮಣ್ಣುಗೂಡಿಸಿ ಕಡೆಗೆ ನೆನೆನೆನಿಸಿ ಅತ್ತದ್ದೂ ಉಂಟು.

ಗೆಣೆಯನ್ನ ಕಳಕೊಂಡು, ಒಣಮಾರಿ ಮಾಡ್ಕೊಂಡು
ಮಣಮಣಿಸಿ ಊರ ತಿರಗ್ಯಾಳೊ। ಅಗಸ್ಯಾಗ
ಹಣಿಹಣಿಗೆ ಬಡೆದು ಅಳತಾಳೊ ॥ -ಹೋ-ಹಾ-

ಗೆಣೆಯ ಬಿಟ್ಟರು ಕೂಡ, ಗೆಣೆಯ ನಾಡಿದ ಆಟ
ಮನದಾಗ ಊರಿನಿತ್ಹಾಂಗ। ಆ ಹುಡುಗಿ
ಚೆಣಚೆಣಕ ನೆನಸಿ ಅಳತಾಳೊ ॥ -ಹೋ-ಹಾ-

'ಬಿಟ್ಟ ಗೆಣೆಯನ್ನು ಬೆಳತನಕ ಹೇಳಿದ್ರೂ ತೀರ್‍ಲಿಲ್ಲ' ಎಂಬ ಮಾತೂ ಹಳ್ಳಿಗರಲ್ಲಿ ಈಗಲೂ ರೂಢಿಯಲ್ಲಿದೆ. 'ನೆನಸಿದರ ಕನಸಿನಾಗ ಬರದಾವ,' 'ಎದುರಿಗೆ ಬಂದರೆ ಮಾತಾಡದವ' ಇವೇ ಮೊದಲಾದ ಹಳ್ಳಿಗರ ಬಳಕೆಯಲ್ಲಿರುವ ಮಾತುಗಳು ಪ್ರೇಮ ಕಳಕೊಂಡ ಪ್ರಣಯಿಗಳು ಬಿಟ್ಟ ನಿಟ್ಟುಸಿರುಗಳೆಂದೇ ಹೇಳಬಹುದು.

ಸಮಾಜದ ಕಟ್ಟು ನಿಟ್ಟುಗಳನ್ನು ಹಳ್ಳಿಗರೂ ಪಾಲಿಸುತ್ತ ಬಂದಿದ್ದಾರೆ. ಅವರಲ್ಲಿಯೂ ಮದುವೆಯೇ ದಾಂಪತ್ಯ ಜೀವನದ ಮೊದಲನೆಯ ಗುರುತು. ಗಂಡು ಹೆಣ್ಣನ್ನು ದೈವ ಕೂಡಿದ ಹಂದರದಲ್ಲಿ ವಿಧಾನಗಳಿಂದ ತಂದು ಗಂಡಹೆಂಡರೆಂಬ ಅರಿಕೆ ಮಾಡಿಕೊಡುವುದೇ ಮದುವೆ. ಈ ಕೂಡುವಿಕೆಯು ಲಗ್ನ ಸಂಸ್ಕಾರದಿಂದ ಬಂದರೂ, ದಾಂಪತ್ಯ ಜೀವನದ ಪವಿತ್ರ ಭಾವನೆಯ ಮೂಲಕ ಪ್ರೇಮವು ಹುಟ್ಟಿ ದಾಂಪತ್ಯ ಕ್ಕಿಳಿಯುವುದು. ಅವರ ಪ್ರೇಮ ಜೀವನವು ಸಮರಸವಾಗುವುದು. ಇದು ಎಲ್ಲರಿಗೂ ಸಿಗಲಾರದು. ಆದುದರಿಂದ ಅದು ನಮ್ಮ ಬಾಳಿನಲ್ಲಿ ದೈವದಾಟವಾಗಿದೆ. ಒಳ್ಳೆಯ ಗಂಡಿಗೆ ಅನುರೂಪ ಹೆಣ್ಣು ಸಿಗುವುದೂ, ಒಳ್ಳೆಯ ಹೆಣ್ಣಿಗೆ ತಕ್ಕ ಗಂಡು ಸಿಗುವುದೂ, ಅವರವರ ದೈವ ಸಂಕಲ್ಪ. "ಹಡೆದವರೇನು ಹಣೆಬರಹವ ಬರೆದರೇ?" ಎಂಬ ಮಾತೂ ರೂಢಿಯಲ್ಲಿದೆ. ಆದರೂ ದಾಂಪತ್ಯ ಜೀವನವು ನಡೆಯುತ್ತ ಬಂದಿದೆ. ಕೇವಲ ಪ್ರೇಮ ಕಾಮದಾಶೆಗಾಗಿಯೇ ಮದುವೆಯಲ್ಲ, ಮಕ್ಕಳ ಸಂಪತ್ತು ಹೆಚ್ಚೆಲೆಂಬುದೇ ಮದುವೆಯ ಈ ದಾಂಪತ್ಯ ಜೀವನದ ಗುಟ್ಟು.

ಸ್ವಾಭಾವಿಕ ಜೀವನವನ್ನುಂಡು ರಸಿಕನಾದ ಕೆಚ್ಚೆದೆಯ ರೈತನು ಪ್ರೇಮಸ್ಫೂರ್ತಿ ತುಂಬಿ ದಾಂಪತ್ಯ ಭೋಗಿಸಲು ಹೊಸ ಬಾಳನ್ನು ಹೂಡುವನು. ಈಗವನು ಒಂಟಿಗನಲ್ಲ. ಹುಡುಕಿ ಹಿಡತಂದ ಮದುವೆಯ ಸಂಗಾತಿಯು ಜೀವನದ ಸಂಗಾತಿಯೇ ಆಗುವಳು. ಉಕ್ಕೇರಿ ಬರುವ ಈ ಸಂಸಾರ ಸಾಗರವನ್ನು ದಾಟಲು, ಪ್ರೇಮ ತುಂಬಿದ ದಾಂಪತ್ಯ ಜೀವನವೇ ನೌಕೆಯಾಗುವುದು. ಗಂಡೇ ಅದನ್ನು ನಡೆಸುವ 'ಕಪ್ತಾನ.' ಹೆಣ್ಣೇ ಬೇಕಾದಾಗ ಚುಕ್ಕಾಣಿ. ಪ್ರೇಮಕಾಮಗಳು ಕಡೆಯಲು ಹುಟ್ಟುಗಳಾಗಿ, ಅವರ ಪ್ರಣಯ ಯಾತ್ರೆಯೇ ಸಂಸಾರ ಸಾಗರದಲ್ಲಿ ಆ ನೌಕೆಯು ಮಾಡಿದ ಪ್ರಯಾಣ. ಈ ದಾಂಪತ್ಯ ಜೀವನವು ನಮ್ಮ ಹಳ್ಳಿಗರ ಹಾಡುಗಳಲ್ಲಿ ಹಾಸುಹೊಕ್ಕಾಗಿದೆ.

ಮದುವೆಯಾದ ಮೇಲೆ ಮೊದಲನೆಯ ಸಲ ಹೆಣ್ಣು ಗಂಡನ ಮನೆಗೆ ಹೋದಾಗ ಅವಳಿಗೆ ಎಲ್ಲವೂ ಹೊಸತು; ಪ್ರಯತ್ನ ಮಾಡಿ ಇದ್ದ ಸ್ಥಿತಿಗತಿಗೆ ಹೊಂದಿಕೊಂಡು ಹೋಗುವಳು. ಅವಳ ಕೆಲಸ ಬೊಗಸೆ, ಊಟ ಉಪಚಾರ, ನಿದ್ರೆ ಜಾಗರಣೆ ಮೊದಲಾದುವುಗಳು ತನ್ನ ಸಲುವಾಗಿ ಗಂಡನ ಸುಖಕ್ಕಾಗಿ. ತನ್ನ ಬಳಗದಲ್ಲಿದ್ದು ಬೆಳೆದ ಹೆಣ್ಣು ದಿನದಿನಕ್ಕೆ ಆ ಬಳಗವನ್ನು ಮರೆತು

ಸರದಾರ ನಿಮ್ಮಿಂದ, ಸರುವೆಲ್ಲ ಮರತೇನ
ಸರದಾಗ ಇರುವ ಗುಳದಾಳಿ। ನಿಮ್ಮಿಂದ
ಸರುವ ಬಳಗೆಲ್ಲ ಮರತೇನೆ ॥ -ಗ-ಹಾ-ಪು-೩೨.

ಗಂಡನೇ ಸರ್ವಸ್ವವೆಂದು ಅವನನ್ನೇ ಅವಲಂಬಿಸುವಳು.

ಅರಸರ ದಯದಿಂದ, ಅರಿಶೀಣ ಕುಂಕೂಮ
ಗೋದ ಮಲ್ಲೀಗಿ ನನೆದಂಡೆ। ಕುಟ್ಟೂದು
ಅರಸ ಮಾರಾಯ್ರ ದಯದಿಂದ ॥ -ಗ-ಹಾ-ಪು-೩೭.

ಎಂದು ಗಂಡನೇ ತನಗೆ ಮಾಂಗಲ್ಯವೆಂದ ಅವನ ಸಂಬಂಧ ಪವಿತ್ರ ಭಾವನೆಗಳನ್ನು ತಾಳುತ್ತಾಳೆ, ಪತಿದೇವನೆಂದು ಪೂಜಿಸುತ್ತಾಳೆ. ಇಂತಹ ದಾಂಪತ್ಯ ಪ್ರಣಯಲೀಲೆ ಗಾಳಿ ಬೀಸದ ಹೂದೋಟ. ಒಂದು ಕೊನರಾದರೆ, ಮತ್ತೊಂದು ಮಿಟ್ಟಿ ಕೂತ ಚಿಗುರು; ಇನ್ನೊಂದು ಅರಳುವ ಮೊಗ್ಗಿ; ಮತ್ತೊಂದು ಅರ್ಧ ಅರಳಿದ ಹೂ; ಕೊನೆಗೆ ಪರಿಮಳ ತುಂಬಿದ ಹೂವೇ ಘಮಘಮಿಸುವುದು. ಆ ಹೆಣ್ಣಿಗೆ ಯಾವಾಗಲೂ ಗಂಡನ ರೂಪಲಾವಣ್ಯಗಳೇ ಕಣ್ತುಂಬ. "ಎಲ್ಲೆಲ್ಲಿ ನೋಡಿದರೂ, ನಲ್ಲನಂಥವರಿಲ್ಲ." "ಅರಗಿನಂಥಾನಲ್ಲ," "ಪರಿಮಳದ ಅರಸು," "ವಾರಗೀಯ ರಾಯ," "ಗಂಡ ಪಂಡಿತರಾಯ" ಎಂದು ಅನೇಕ ರೀತಿಯಿಂದ ಗುಣಗಾನ ಮಾಡುತ್ತಾಳೆ.

ಅಂಗೀಯ ತೊಟ್ಟಾರ, ಅಂಗಾಲ ಗೆರಿಮಾಟ
ಚುಂಗ ಬಿಟ್ಟಾರ ಗರಿಗರಿ। ಇನಿಯೊರು
ಸಿಂಗರ್‍ಯಾಗ್ಯಾರ ಸದನಕ ॥ -ಜಾ-ಸಂ.-

ಅದೇ, ತಾಯಿಯನ್ನಗಲಿ ಬಂದ ಹೆಣ್ಣು ಅವಳನ್ನು ನೆನೆಸುವುದನ್ನು ಕಂಡು ಗಂಡನು ಮರೆಯಿಸಬೇಕೆಂದು ಪ್ರೇಮದಿಂದ ಮಡದಿಗೆ ಹೇಳುತ್ತಾನೆ.

ಹಾಸೀಗಿ ಹಾಸೆಂದ, ಮಲ್ಲೀಗಿ ಸೂಸೆಂದ
ಬ್ಯಾಸತ್ರ ಮಡದಿ ಮಲಗಂದ। ಚೆಂಜೀಕ
ತನ್ನೋಡಿ ತವರ ಮರೆಯೆಂದ ॥ -ಜಾ-ಸಂ-

ಹೀಗೆ ಹೆಣ್ಣು ಗಂಡನು ಆಡಿದ ಪ್ರೇಮದ ಬಾಳ್ನುಡಿಗಳನ್ನೇ ಹಾಡಿದ್ದಾಳೆ. ಹಡೆದ ತಾಯಿಯು ಹೆಚ್ಚಿನವಳಾದರೂ ದೂರಿದ್ದ ಸಮಯದಲ್ಲಿ ಗಂಡನೇ ಅವಳಿಗೆ ಸಕಲವು. ನಗಿನಗಿಸಿ ಬಾಳಿನಾಶೆಯನ್ನು ಹಿಗ್ಗಿಸಲು ಗಂಡನು ಹೆಂಡತಿಯ ಕೂಡ ಮಾತು ಹೇಳಿ ನಗುವುದೂ, ನಗಿಸುವುದೂ ಉಂಟು.

ಗಂಧೆಣ್ಣೆ ಹಚಗೊಂಡು, ಗಂಗ್ಯಾಗ ನಿಂತಾರ
ಒಂದೊಂದು ಹೇಳಿ ನಗತಾರ। ರಾಯರಿಗೆ
ಎಂಥ ಸಿರಿಗಂಗಿ ಹಡೆದಾಳ ॥ -ಗ-ಹಾ-ಪು-೩೩

ಹಾಸೀಗಿ ಹಾಸೆಂದ್ರು, ಮಲ್ಲೀಗಿ ಮೂಸೆಂದ್ರು
ನಿಂತು ನೂರೆಲೆಯ ಮಡಿಚೆಂದ್ರು। ರಾಯರಿಗೆ
ಎಂಥ ಸಿರಿಗಂಗಿ ಹಡೆದಾಳ ॥ -ಗ-ಹಾ-ಪು-೩೬

ಕಾಜೀನ ಕಂಬಕ, ಮೋಜೀಲಿ ನಿಂತಾರ
ಒಂದೊಂದು ಹೇಳಿ ನಗತಾರ। ರಾಯರಿಗೆ
ಎಂಥ ಸಿರಿಗಂಗಿ ಹಡೆದಾಳ ॥ -ಗ-ಹಾ-ಪು-೩೮

ಮಾತ ಮಾತಾಡುತ್ತ ಒಬ್ಬರಮೇಲೊಬ್ಬರ ದೃಷ್ಟಿ ಬೀಳಲು ಪ್ರೇಮ ಹದವಾಗಿ ಗಂಡು ಆ ರಭಸದಲ್ಲಿ ಹೆಣ್ಣಿನ ಕೈಯನ್ನು ಹಿಚುಕಿ ಹಿಡಿಯಲು,

ಹಣಚಿ ಬಟ್ಟಿನ ಕೈಯ, ಒತ್ತಿ ಹಿಡಿಯಲಿ ಬ್ಯಾಡ
ನೆತ್ತರಿಳಿದಾವು ಬೆರಳೀಗೆ। ನನರಾಯ
ಅತ್ತಿ ಬೈದಾಳು ಕೈಬೀಡೊ ॥ -ಗ-ಹಾ-ಪು.೩೭

ಎಂದು ಅವಳಿಗೆ ಮನೆಯಲ್ಲಿಯ ಹಿರಿಯರ ಅಂಜಿಕೆಯ ಭಾವನೆಯು ಬರುವುದು. ಜೌವನ ತುಂಬಿದ ಗಂಡಹೆಂಡರಿಗೆ ಈ ನಗೆಯಾಟವೇ ಒಡಲೂಟ. ಇದರಿಂದ ಪ್ರೇಮ ವ್ಯಾಪ್ತಿಯಾಗಿ ಸತಿಪತಿಗಳು ಒಬ್ಬರನ್ನೊಬ್ಬರು ಅಗಲಲು ಎಂದೂ ಬಯಸುವುದಿಲ್ಲ. ಅಗಲುವಿಕೆಯೆಂದರೆ ಜೀವಕ್ಕೆ ಮುಳ್ಳು. ಆದರೆ ಮನೆತನದ ಹೊರೆ ಹೊತ್ತ ಗಂಡು ಮನೆಬಿಟ್ಟು ಹೋಗಿ ದುಡಿಯದ ಹೊರತು ಗತ್ಯಂತರವಿಲ್ಲ. ವ್ಯಾಪಾರದ ಸಾರಿಗೆ ಮಾಡುವುದೂ, ಬೇರೆ ಹಲಕೆಲವು ಕಾರಣಗಳ ನಿಮಿತ್ತ ಊರಿಂದೂರಿಗೆ ಮನೆಬಿಟ್ಟು ಅನೇಕ ದಿನಗಳವರೆಗೆ ಗಂಡು ಹೋಗಬೇಕಾಗುವುದು. ಯಾಂತ್ರಿಕ ಯುಗದ ಸಲಕರಣೆಗಳಿಲ್ಲದ ಆಗಿನ ಕಾಲದಲ್ಲಿ ಪ್ರಯಾಣವು ಸಂಕಟವಾಗಿತ್ತು. ಹೋದವರು ತಿರುಗಿ ಬರುವ ಭರವಸೆಯೇ ಇರುತ್ತಿದ್ದಿಲ್ಲ. ಹಾಗಿರಲು ಅಗಲುವುದು ಇಬ್ಬರಿಗೂ ಹೇಗೆ ಮನಸಾಗಬೇಕು?

ಊರೀಗಿ ಹೋಗವರ, ಮಾರ್‍ಯಾಕ ಬಾಡ್ಯಾವ
ಗೀರ ಗಂಧ್ಯಾಕ ಬೆವತಾವ। ಮಡದೀನ
ಬಿಟ್ಟು ಹೊಂಟಾರ ಪರನಾಡ ॥ -ಗ-ಹಾ-ಪು.೩೧

ಪರನಾಡಿಗೆ ಗಂಡನು ಹೊರಟಿದ್ದಾನೆ. ಎಳೆಹರೆಯದ ದಾಂಪತ್ಯ ಜೀವನವನ್ನು ಹೇಗೆ ಬಿಟ್ಟು ಹೋಗಬೇಕು?

ಕಾಮ ಕಸ್ತುರಿ ನಿನ್ನ, ಕಾಣದಲೆ ಇರಲಾರೆ
ಮಲ್ಲೀಗಿ ಮಾಯ ಬಿಡಲಾರೆ। ಸಮುದರರದ
ಮುತ್ತ ನಿನ್ನಗಲಿ ಇರಲಾರೆ॥ -ಜಾ-ಸಂ-

ಕಮಳದ ಹೂ ನಿನ್ನ, ಕಾಣದೆ ಇರಲಾರೆ
ಮಲ್ಲೀಗೆ ಮಾಯ ಬಿಡಲಾರೆ। ಕೇದೀಗೆ
ಗರಿ ನಿನ್ನ ಅಗಲಿ ಇರಲಾರೆ॥ -ಗ-ಹಾ-ಪು-೩೧

ಎಂದು ಗಂಡನು ಉತ್ತರ ಹೇಳುವುದೂ,

ಎಂದ ಬರತಿರಿ ನನ್ನ, ಗಂಧsದ ರತಿಗಾರ
ರುಮ್ಮಾಲ ಎಲ್ಲ ಪರಿಮಾಳ। ನನ ನಲ್ಲ
ಎಂದ ಬರತೀರಿ ನನಗ್ಹೇಳ॥ -ಜಾ-ಸಂ-

ಎಂದು ಹೆಂಡತಿಯು ಕೇಳಿ–

ಕಾಣದಲೆ ಇರಲಾರೆ, ಕನ್ನೊಡಿ ಮುಖದವರ
ಕಾಮsನಗಿಂತ ಬಲು ಚೆಲುವ। ಚೆನ್ನಿಗರ
ಕಾಣದರಗಳಿಗೆ ಇರಲಾರೆ॥ -ಜಾ-ಸಂ-

ಎಂದು ಮಾರುತ್ತರವನ್ನು ಕೊಡುವ ಈ ನುಡಿಗಳು ಆದರ್ಶ ದಾಂಪತ್ಯ ಜೀವನದ ಪ್ರೇಮದ ತಿರುಳಲ್ಲವೇ? ಹೋದವನು ಹೇಳಿದ ದಿನಕ್ಕೆ ಬಾರದೆ ಹೋದರೆ, ಹೆಣ್ಣಿನ ಆತ್ಮ ತಳಮಳಿಸಿ ದಿನಗಳೆಯುವ ಬಗೆ ಹೇಗೆಂದು ಹಾದೀ ಕಾಯುವುದು.

ಯಾಕವ್ವ ನಿನ ಜೀವ, ಜಾಚೀಲಿ ಒಲ್ಲದ
ಜಾತ್ರಿ ಗ್ಹೋದವರು ಬರಲಿಲ್ಲ। ಇಂದೀನ
ರಾತ್ರಿ ಹ್ಯಾಂಗಾರ ಕಳೆಯಲೆ॥

ವಾರೀಗಿ ಪುರುಷರು, ಊರೀಗೆ ಹೋದರ
ನಾರಿ ನಿನ ಕಣ್ಣ ಒಳಹೊರಗ। ತಿಂಗಳದ
ಚೆಂದ್ರಾಮರ್‍ಯಾಕ ತಡೆದಾರ॥ -ಗ-ಹಾ-ಪು.೩೨

ಹೆಣ್ಣು ಗಂಡನ ಮನೆಯನ್ನು ಗಳಿಸಿಕೊಂಡರೂ, ಆಗಾಗ ಹುಟ್ಟಿದ ಮನೆಯ ಹವ್ಯಾಸ ಬಿಡದು. ಅವಳಿಗೆ ತಾಯಿತಂದೆಗಳೂ ಬೇಕು; ಅಣ್ಣ ತಮ್ಮರೂ ಬೇಕು. ಮುದುಕಿಯಾದರೂ ತವರಮನೆಯ ಚಾಜವನ್ನು ಬಿಡಳು.

ಕಣ್ಣು ಕಾಣುವ ತನಕ, ಬೆನ್ನು ಬಾಗುವ ತನಕ
ತಾಯಿರಲಿ ನನಗ ತವರಿರಲಿ। ಹಡದವ್ವ
ಅಣ್ಣಯ್ಯರಿರಲಿ ಕರಿಸ್ಯಾಕ॥ -ಜಾ-ಸಂ-

ತವರಿಗೆ ಹೋಗಲು ಬಯಕೆಯಾದರೂ ಮನಸ್ಸು ಗಂಡನನ್ನು ಬಿಟ್ಟು ಹೋಗಲು ಹೊಯ್ದಾಡುವುದು. ಅದು ಕೇವಲ ಅವರಿಬ್ಬರಲ್ಲಿ ಬೆಳೆದು ಬಂದ ದಾಂಪತ್ಯಪ್ರೇಮ.

ಹಚ್ಚಡದ ಪದರಾಗ, ಅಚ್ಚಮಲ್ಲಿಗಿ ಹೂವ
ಬಿಚ್ಚಿ ನನಮ್ಯಾಲೆ ಒಗೆವಂಥ। ರಾಯರನ
ಬಿಟ್ಹ್ಯಾಂಗ ಬರಲೆ ಹಡೆದವ್ವ॥ -ಗ-ಹಾ-ಪು.೩೨

ಸೊಲ್ಲಾಪುರದ ಸೆಲ್ಲೆ, ಅದಕ ಮುತ್ತಿನ ಗೊಲ್ಲೆ
ಬಿಚ್ಚಿ ನನಮ್ಯಾಲೆ ಒಗೆವಂಥ। ರಾಯರಿಗಿ
ಬಿಟ್ಹ್ಯಾಂಗ ಬರಲೆ ಹಡದವ್ವ॥ -ಗ-ಹಾ-ಪು.೩೧

ಎಂದು ತವರಮನಿಗೆ ಹೋಗುವ ಹೆಣ್ಣು ಮಳಮಳಿಸುತ್ತಿದೆ. ಹೆಂಡತಿಯನ್ನು ತವರೂರಿಗೆ ಕಳುಹಿಸಿ ಗಂಡನು

ಅಡಗೀಯ ಮನಿಯಾಗ, ಮಡದೀಯ ಸುಳುವಿಲ್ಲ
ಅಡಿಗಿ ಬಾಯೀಗಿ ರುಚಿಯಿಲ್ಲ। ಹಡೆದವ್ವ
ಮಡದಿ ತವರೀಗೆ ಹೋಗ್ಯಾಳ॥ -ಗ-ಹಾ-ಪು.೩೧

ಎಂದು ಹಳಹಳಿಸಿ ವ್ಯಥೆಪಡುತ್ತಾನೆ. ಪ್ರಕೃತಿಯ ನಿಯಮದಂತೆ ಇದು ಎಲ್ಲರಿಗೂ ಸಹಜ.

ತಾಯ್ತನವು ಹೆಣ್ಣು ಜೀವನದ ಪರಿಪೂರ್ಣತೆಯಾದರೆ ಮುತ್ತೈದಿತನವು ಹೆಣ್ಣು ಜೀವನದ ಸೌಭಾಗ್ಯ. ಗಂಡನಿಂದಲೇ 'ಗುಳುದಾಳಿ,' ಅರಿಷಣ, ಕುಂಕುಮ, ಮಲ್ಲಿಗೆಯ ನೆನೆದಂಡೆ, ಹಸುರುಬಳೆ, ಸೀರಿ ಕುಪ್ಪುಸದ ಮಾಂಗಲ್ಯದ ಸಡಗರವೆಂದು ಹೆಣ್ಣು ತನ್ನ ಮುತ್ತೈದಿತನವು

ಘನವಾಗಲೆಂದು ದೇವದೇವತೆಗಳಲ್ಲಿ ಮೊರೆಹೊಕ್ಕು ಕೈಮುಗಿದು ಹರಕೆ ಹೊರುವುದು. ಹಳ್ಳಿಗರು ಕೃತಘ್ನರಲ್ಲ. ಹೆರವರ ಉಪಕಾರವನ್ನು ಸ್ಮರಿಸದಿರರು.

ಬಾಳಿನಲ್ಲಿ ಕೇವಲ ಸುಖವೇ ಇದ್ದರೆ ಅದು ಹಳಸುವುದೆಂದು ಕಾಣುತ್ತದೆ. ಕೂಡಿ ಮಾತಾಡಿಕೊಂಡು ಮಾಡುವ ಬಾಳಿನಲ್ಲಿ ಒಮ್ಮೊಮ್ಮೆ ಗಂಡ ಹೆಂಡರ ಮನಸ್ಸು ಎರಡಾಗಬಹುದು. ಕೋಪ, ಮನಸ್ತಾಪಗಳ ಚಕಮಕಿ ಕಿಡಿಗಳೆದ್ದು ದಾಂಪತ್ಯಜೀವನವು ಒಮ್ಮೊಮ್ಮೆ ಕುಂಟಿತವಾಗಬಹುದು. ಏನೋ ನಿಮಿತ್ತದ ಮೂಲಕ ಸೆಟಗೊಂಡ ಗಂಡನು–

ಹಾಸಿದ್ದಾಸಿಗಿ ಬಿಟ್ಟು, ಹಾದೀಗಿ ಮಲಗ್ಯಾರ
ಸೂಸಗಾಳೀಗಿ ಬಳಕೂವ। ರಾಯರಿಗಿ
ಏಸು ಬಾರಿ ಕಾಲ ಹಿಡಿಯಾಲೆ॥ *–ಗ–ಹಾ–ಪು–೩೬.*

ಎಂದು ಹೆಂಡತಿಯು ದೀನಳಾಗಿ ಕಾಲುಹಿಡಿದು ಬೇಡಿಕೊಂಡರೂ ಮನಕರಗದೆ ಮತ್ತಷ್ಟು ಸಿಟ್ಟಾಗುವನು. ಅಷ್ಟೇ ಏಕೆ? ಮಾತು ಮಾತಿಗೆ ಬಿರುಸಾಗಿ ಕೈಯೆತ್ತಿ ಹೊಡಿಯ ಹೋಗುವನು; ಸಿಟ್ಟಿನ ಭರದಲ್ಲಿ ಹೊಡಿದೇ ಬಿಡುವನು. ಆದರೆ ಈ ಸಿಟ್ಟು ಎಲ್ಲಿಯವರೆಗೆ? ಮರುಚಣದಲ್ಲಿಯೇ ಮನಕರಗಿ–

ಮಡದೀನ ಬಡಿದಾನ, ಮನದಾಗ ಮರಗ್ಯಾನ
ಒಳಗ್ಹೋಗಿ ಸೆರಗ ಹಿಡಿಯೂತ। ಕೇಳ್ಯಾನ
ನಾ ಹೆಚ್ಚು ನಿನ್ನ ತವರ್ಹೆಚ್ಚೋ॥ *–ಗ–ಹಾ–ಪು–೩೩*

ಎಂದು ತವರ ಮನೆಗೆ ಹೋಗುವೆನೆಂದು ಹಟತೊಟ್ಟು ಅಳುವ ಮಡದಿಯ ಕೈ ಹಿಡಿದು ಕೇಳಿದ್ದಾನೆ. ಅಲಂಕಾರವಿಲ್ಲದ ಈ ಪದ್ಯ ಎಷ್ಟು ಸರಸವಾಗಿದೆ! ಇಡೀ ಪ್ರಪಂಚವೇ ಇದೊಂದು ಪದ್ಯದಲ್ಲಿ ಮೂಡಿಹೋಗಿಬಿಟ್ಟಿದೆ. ಆದರೆ ಮನಸಿಗೆ ಕಸವಿಸಿಯಾದ ಹೆಣ್ಣು

ಕಡಗಽದ ನನಕೈಯ, ಬಿಡು ನನ್ನ ಮಾರಾಯ
ಕದನ ಬಂದಾವ ನಮನಿಮಗ। ವೀಳೇವ
ಮಡಚಾಗ ಕಂಡ ನಿಮ ಮನವ॥ *–ಗ–ಹಾ–ಪು–೩೬.*

ಹೀಗೆ ಮಾತಾಡಿ ಕಡೆಗೆ ಗಂಡ ಹೆಂಡರಾಗಿ ಸುಮ್ಮನಿರುವುದೂ ಉಂಟು. ಪ್ರೇಮದ ಹಾಸ್ಯದಲ್ಲಿ ರತಿಲೋಲುಪನಾದ ಗಂಡನು ಹೆಂಡತಿಯನ್ನು ಕೈ ಸುಮ್ಮಿರದೆ ಕೆಣಕಿ ಬಡಿಹೊಡಿಯುವ ಹಾಗೆ ತೋರಿಸುತ್ತಾನೆ.

ಕಾಕಿ ಹಣ್ಣಲಿ ಹೊಡೆದ, ಕಮಳದ್ಹೂವಿಲಿ ಹೊಡೆದ
ತ್ವಾಟದಾಗಿರುವ ಗಜಲಿಂಬಿ। ಲ್ಹೊಡೆದರ
ಮೋಜಿಲಳತಾಳ ಹಡೆದವ್ವ॥ *–ಗ–ಹಾ–ಪು–೬೯*

ಎಷ್ಟು ಸುಂದರವಾಗಿದೆ ನಮ್ಮ ಹಳ್ಳಿಗರ ರತಿವಿಲಾಸದ ಕಾವ್ಯ ಕಲ್ಪನೆ! ಕಾವ್ಯಮಾತಿಗೆ ಇವು ಮಾಸದ ಹೂಗಳಲ್ಲವೇ? ಇಷ್ಟು ರಸಮಯವಾಗಿದೆ ನಮ್ಮ ಹಳ್ಳಿಗರ ದಾಂಪತ್ಯ ಜೀವನ!

ಹೆಣ್ಣು ಹಡೆದ ತಾಯಿಯೂ, ಗಂಡು ಹಡೆದ ತಾಯಿಯೂ ತಮ್ಮ ಮಕ್ಕಳಿಗೆ ಅನುರೂಪ ಒಗೆತನವನ್ನು, ದೇವರಿಗೆ ಹರಕೆಹೊತ್ತು ಬಯಸುತ್ತಾರೆ. ತಕ್ಕ ಒಗೆತನವು ಗಂಡು ಹೆಣ್ಣಿಗೆ ದೊರೆಯದಿದ್ದರೆ ಅವರ ದಾಂಪತ್ಯವು ಸುರಳಿತ ಸಾಗದು. ಇಂತಹ ದಂಪತಿಗಳಲ್ಲಿ ಪ್ರಣಯದ ಮಾತೇ ದೂರ. ಹಳ್ಳಿಗರು ಒಗೆತನದ ವಿಷ ಅನುಭವಗಳನ್ನು ಅನುಭವಿಸಿದಂತೆ ಕಾಣುತ್ತದೆ. ದುಡ್ಡಿನಾಶೆಗಾಗಿ ತರುಣಿಯನ್ನು ಮುದುಕನಿಗೆ ಮದುವೆಯ ಮಾಡಿಕೊಡುವುದೂ, ಬಳಗದಲ್ಲಿ ಮುರುವತ್ತಿಗಾಗಿ ಅನುರೂಪವಾದ ಗಂಡುಹೆಣ್ಣನ್ನು ಮದುವೆಯ ಮಾಡುವುದೂ, ಕಂಡುಬರುವುದು. ಕುಲ ಶುದ್ಧ ಇದ್ದು, ವರ ಶುದ್ಧ ಇದ್ದರೆ ಹೆಣ್ಣಿನವರು ಹೆಣ್ಣು ಕೊಡಲು ಒಪ್ಪುತ್ತಾರೆ.

ಮಲ್ಲಿಗಿಯಂಥಾ ಮಗಳೀಗೆ, ಎಲ್ಲಿತ್ತೊ ಒಗೆತನ
ಹುಲ್ಲಾಗ ಬೆಂಕಿ ಒಗೆಧಂಗ। ಗುಡ್ಡದ
ಕಲ್ಲೀಗಿ ಧಾರಿ ಎರೆದಂಗ॥ *–ಗ–ಹಾ–ಪು.೫೩.*
ಒಲ್ಲದ ಒಗೆತನ, ಎಲ್ಲಿತ್ತೊ ಮಗಳೀಗೆ
ಬೆಲ್ಲಕಬೇವು ಕಲತಂಗ। ಅಡವ್ಯಾನ
ಕಲ್ಲೀಗಿ ಧಾರಿ ಎರೆದಂಗ। *–ಗ–ಹಾ–ಪು.೫೫*

ಎಂದು ತಾಯಿಯು ಧಾರಿ ಎರೆದು ಕೊಟ್ಟ ಮಗಳಿಗೆ ಅನುರೂಪ ಒಗೆತನವಾಗದಿರಲು ದುಃಖಿಸಿದ್ದಾಳೆ. ಮನೆಯಲ್ಲಿ ಅತ್ತೆಯ ಕಾಟವಿದ್ದರೂ ಹೆಣ್ಣು ಸಹನ ಮಾಡಿಕೊಂಡು ಹೋಗುವುದು. ಆದರೆ ಗಂಡನೇ ಕರಕಿರಿಯಾದ ಮೇಲೆ ಬಾಳು ವ್ಯರ್ಥವೆಂದು ನಿರಾಶೆಯಾಗುವುದು.

ಕಿರಕಸಾಲೀ ಗಿಡವು, ನೆಲಕ ಹಬ್ಬಿದರೇನ
ಕರಕರಿ ಗಂಡನ ಮದುವ್ಯಾಗಿ। ಆ ಬಾಲಿ
ಎರಕೊಂಡು ಮುಡಿಯ ಬಿಚ್ಚ್ಯಾಳ॥ *–ಗ–ಹಾ–ಪು–೭೪*

ಇಲ್ಲಿ ಹೆಣ್ಣಿನ ತಾರುಣ್ಯದ ವೇಷಭೂಷಣದ ಬಯಕೆಗಳು ಮಣ್ಣುಪಾಲಾಗಿ ಹೋಗಿವೆ. ಹೆಣ್ಣು ಮದುವೆಯಾಗುವುದು ಪ್ರಪಂಚ ಸುಖಕ್ಕೆ ಮುದುಕ ಗಂಡನಿಂದ ಪ್ರಾಯತುಂಬಿದ ಹೆಣ್ಣಿಗೆ ಅದಾವ ಸುಖ?

ಮದ್ದ ಗುಣಕಿಗೀಡಾ, ಉದ್ದ ಬೆಳದರೇನ
ಮುದುಕ ಗಂಡನ ಮದುವ್ಯಾಗಿ। ಆ ಬಾಲಿ
ಇದ್ದ ಬಂಗಾರ ಇಡವಳ್ಳ॥ *–ಗ–ಹಾ–ಪು.೭೫*

ಅವಳಿಗೆ ಬೇಕಾದದ್ದು ಬಂಗಾರವಲ್ಲ, ಪ್ರಪಂಚ ಸುಖ, ಅದಿಲ್ಲದ್ದು ಹೆಣ್ಣಿಗೆ ಏನಿದ್ದರೇನು?

ಹೆಸರಬ್ಯಾಳಿ ಒಯ್ದು, ಕೆಸರ ಕಲಸೀದಂಗ
ಹಸುಮಗಳನೊಯ್ದು ಮುದುಕಾಗ। ಕೊಟ್ಟರ
ದುಸ್ಮಾನದವರು ತವರವರು ॥ *–ಗ–ಹಾ–ಪು–೭೫*

ಎಂದು ಹೆಣ್ಣು ತವರನ್ನು ಶಪಿಸುವುದು. ವರಗೇಡಿಯ ಕೂಡ ಬೇಸತ್ತು ಕಣ್ಣೀರ ಕುಡಿದ ಹೆಣ್ಣು

ವರಗೇಡಿ ಒಗತನಕ, ಕುಡುಬ್ಯಾಡ ಹಡದವ್ವ
ವರ ನೋಡ ವರನ ಗುಣ ನೋಡ। ಮನಿಯಾನ
ಸಾಸಿ ಕಾಳ ರಿಣ ನೋಡ ॥ *–ಗ–ಹಾ–ಪು–೭೫*

ಎಂದು ಕಸವಿಸಿಯಾಗಿ ಹಡೆದ ತಾಯಿಗೆ ಹೇಳಿಕೊಂಡಿದೆ.

ಮನೆಯಲ್ಲಿ ಹೆಂಡತಿಯಿದ್ದರೂ ಹಲಕೆಲವು ಹಳ್ಳಿಗರು ಕಾಮಚೇಷ್ಟೆಗಾಗಲಿ, ಇಲ್ಲವೆ ಬದುಕಿನಾಶೆಗಾಗಲಿ, ಮತ್ತೊಬ್ಬಳನ್ನು ಮದುವೆಯಾಗುತ್ತಾರೆ. ಸವತಿ ಸವತಿಯರು ಕೂಡಿ ನಡೆಯದ ಅವನ ಬಾಳು ಕಲಕುಮಲಕಾಗಿ ಬಾಳುವೆಯೇ ಬೇಡೆಂದು ಅವನಿಗೆ ಅನಿಸಿಬಿಡುತ್ತದೆ.

ಇಬ್ಬರ್ಹೆಂಡರನಾದ, ಏಡೀಯ ಮುಳ್ಳಾದಾ
ಕೋಡಗನಾದಾ ಕೊರವಾದಾ। ಚಾಲ್ಯಾರು
ಮಾಡಿಟ್ಟ ಸಿಂಬಿ ಅರಿವ್ಯಾದ ॥ *–ಗ–ಹಾ–ಪು.೭೬*

ಗಂಡು ಇಬ್ಬರನ್ನು ಮದುವೆಯಾಗಿ ಕದನ ಹುಟ್ಟಿ ಸುಖಕಾಣದೆ ಕಂಗಾಲಾಗುತ್ತದೆ.

ಇಬ್ಬರ್ಹೆಂಡಿರ ಕಾಟ, ಇರುಳು ತಿಗಣೇ ಕಾಟ
ಕಬ್ಬಕ್ಕಿಕಾಟ ಬಲುಕಾಟ। ಜವರಾಯ
ಒಬ್ಬ ಬಿಟ್ಟೊಬ್ಬ ಕೊಂಡ್ಹೋಗೊ ॥ *–ಹ–ಹಾ–ಪು–೯೭*

ಎಂದು ಕಾಟ ತಪ್ಪಿಸಿಕೊಳ್ಳಲು ಒಬ್ಬಳ ಸಾವನ್ನು ಬಯಸುತ್ತಾನೆ.

ತಾರುಣ್ಯದಲ್ಲಿ ವಿಧವೆಯಾದರೆ ಹಳ್ಳಿಗರಲ್ಲಿ ಯಾರಾದರೂ ಅವಳನ್ನು 'ತಾಳ್ಯುಡಕೆ'ಯಾಗುವರು; ಇಲ್ಲವೆ 'ಸೀರ್ಯುಡುಕೆ'ಯಾಗುವರು. ಅವಳು ಹಾಗೇ ಉಳಿದು ಅನಾಚಾರಿಯಾದರೆ ಎಲ್ಲರೂ ಅವಳನ್ನು ದೂರುವರು. ಅವರ ಸಮಾಜದ ಕಟ್ಟು ನಿಟ್ಟುಗಳು ಮಾನವ ಸ್ವಭಾವದ ವಿರುದ್ಧ ಹೋಗುವುದಿಲ್ಲ. ಮಾನವನ ಹಿತಕ್ಕೂ ಕಲ್ಯಾಣಕ್ಕೂ ಅವು ಶಿಥಿಲವಾಗಿ ಹೆಣ್ಣಿನ ಅಸಹಾಯತೆಯನ್ನು ಎತ್ತಿಹಿಡಿಯುತ್ತವೆ. ತುಂಬ ದೇಹಾರೋಗ್ಯದ ಮಯ್‌ಕಟ್ಟುಳ್ಳ ಆ ತರುಣಿಯನ್ನು, ಹೆಂಡತಿಯನ್ನು ಕಳಕೊಂಡ ಹಳ್ಳಿಯ ಯಾವ ಯುವಕನಾದರೂ ಕೈಹಿಡಿದು ತಾಳಿಕಟ್ಟಿಸುವನು. ಅವಳು ಗಂಡನನ್ನು ಕಳಕೊಂಡಿದ್ದರೂ ಅದನ್ನು ಮರೆತು ಮತ್ತೆ ಕೈಹಿಡಿದವನ ಕೂಡ ಬಾಳುವೆ ಮಾಡಹತ್ತುವಳು. ಅವಳ ವಿಷಯವಾಗಿ ನಮ್ಮ ಹಳ್ಳಿಗರಲ್ಲಿ ಜಿಗುಪ್ಸೆಯಾಗಲಿ, ಅಥವಾ ಹೀನ ಕಲ್ಪನೆಯಾಗಲಿ ಮೂಡುವುದಿಲ್ಲ.

ಉಡುಕೀಯ ಹೆಂಡೂತಿ, ಉಡಿಯಾನ ಲಿಂಗೆಂದಾ
ಕಿರಿಬಳ್ಳು ಹಿಡಿದ ಮಡದೀಯ। ಸಂಗಾಟ
ಸಿಡಿಪಿಡಿಯಾಕೊ ಸಿರಿರಾಯ ॥ *–ಗ–ಹಾ–ಪು. ೭೬*

ಎಂದು ಮದುವೆಯ ಹೆಂಡತಿಯು ಕೇಳಬೇಕಾದರೆ ಅವಳ ಗಂಡನು ಆ ಉಡಕಿಯ ಹೆಣ್ಣನ್ನು ಯಾವ ರೀತಿಯಿಂದ ಕಾಣುತ್ತಿದ್ದನೆಂಬುದು ಸ್ಪಷ್ಟವಾಗುವುದು.

ಹಳ್ಳಿಗರಲ್ಲಿ ಸಮಾಜದ ಕಟ್ಟುನಿಟ್ಟುಗಳ ಪ್ರಕಾರ ಮದುವೆಯಾದರೂ ಒಮ್ಮೊಮ್ಮೆ ಗಂಡ ಹೆಂಡಿರಲ್ಲಿ ಕದನ ಹುಟ್ಟಿ ಅವರ ದಾಂಪತ್ಯ ಜೀವನವೇ ಹಾಳಾಗುವುದು.

ಮಾತ ಮಾತಾಡೂತ, ಮಾತು ರಂಗಿಲಿ ಬಂದ
ಮಾತೇನ ಅವನ ಹಿತವೇನ। ಹಡದವ್ವ
ಘಾತ ಗಂಗ್ಯಾಗ ಕೈಬಿಟ್ಟ॥ *–ಜಾ–ಸಂ–*

ಅವರ ಮನಸ್ಸೇ ಎರಡಾಗಿ ತಾರುಣ್ಯತೃಪ್ತಿಗೆ ಸಮಾಜದ ವಿರುದ್ಧ ನಡೆಯುವರು. ಒಮ್ಮೊಮ್ಮೆ ಹೆಣ್ಣು ತಿಳಿಯದೆ ಹರೆಯದ ಮಬ್ಬಿನಲ್ಲಿ ಜಾರಿ ತನ್ನ ಜೀವನವನ್ನೇ ಹಾಳು ಮಾಡಿಕೊಳ್ಳುವುದೂ ಉಂಟು.

ಬೇಲಿ ಮ್ಯಾಲಿನ ಹೂವ, ಬೆಳ್ಳಗಿದ್ದರೇನ
ಮಲ್ಲೀಗಿಯಂಥ ಮದಿಗಂಡ್ನ। ಬಿಟಕೊಟ್ಟು
ಹುಲ್ಲ ಕೊಯ್ಯವ್ನ, ಹುಡಿಕ್ಯಾಲೊ ॥ *–ಹೋ–ಹಾ–*

ಹೀಗೆ ಒಗೆತನ ಹರಿಸಿಕೊಂಡು ಹೋಗುವ ಹೆಣ್ಣಿಗೆ ಸುಖವುಂಟೇ?

ಹಾಡೀಗಿ ಹಾಡಿಲ್ಲ, ಏಡೀಗಿ ತಲೆಯಿಲ್ಲ
ಮೋಡ ಬಂದಲ್ಲಿ ಬಿಸಿಲಿಲ್ಲ। ಹೆಣ್ಣೀಗಿ
ಓಡಿ ಹೋದಲ್ಲಿ ಸುಖವಿಲ್ಲ॥ -ಗ-ಹಾ-ಪು-೭೩

ಮಾತ್ಗಂಟ ಮಗಳಲ್ಲ, ತಾಟ್ಗಿತ್ತಿ ಸೊಸೆಯಲ್ಲ
ತೂಪರದ ಚಿಕ್ಕಿ ಒಲಿಗಲ್ಲ। ತವರೀಗೆ
ಮಾತು ತಂದವಳು ಮಗಳಲ್ಲ॥ -ಹ-ಹಾ-ಪು.೯೮

ಎಂದು ತವರವರು ಅವಳ ಮೋರೆಯನ್ನು ಸಹ ನೋಡರು. ಅವಳು ತನ್ನ ಎಲ್ಲ ಬಳಗಕ್ಕೂ ಹೊರತಾಗುವಳು. ಇಡೀ ಸಮಾಜದ ಕಣ್ಣೇ ಅವಳ ಮೇಲೆ. ಸಮಾಜವು ಅವಳನ್ನು ಕಡೆಗಾಣುವುದು.

ಗಂಡಾನ ಹಿತವೇನ, ಕೆಂಡಾದ ತಂಪೇನ
ಕೊಂಡ ಮಜ್ಜೀಗಿ ರುಚಿಯೇನ। ಜನದಾಗ
ಬಂಡಾಗಿ ಬದುಕಿ ಫಲವೇನ॥ -ಜಾ-ಸಂ-

ಎಂದು ಹೆಣ್ಣು ಆತ್ಮಹತ್ಯೆ ಮಾಡಿಕೊಂಡದ್ದೂ ಉಂಟು.

ಗಂಡೂ ಪರಹೆಣ್ಣಿನ ಸುಖವನ್ನು ಬಯಸುತ್ತದೆ. ಇಲ್ಲವಾದರೆ ಸಮಾಜದ ಕೊಳಚಿನಲ್ಲಿದ್ದ ಸೂಳೆಯ ಬೆನ್ನು ಹತ್ತಿ ಮನೆಯವಳನ್ನು ಬಿಟ್ಟು ಪ್ರಣಯಕ್ಕೆ ಬೀಳುತ್ತದೆ. ಇಂಥ ದೃಶ್ಯಗಳು ಹಳ್ಳಿಗಳಲ್ಲಿ ಬಹಳ ಕಂಡುಬರುವುವು. ವಿಕೋಪದಲ್ಲಿ ವಿಪರೀತವಾಗಿ ಅನಾಹುತವೇ ಸಂಭವಿಸಿ ನ್ಯಾಯಬಿದ್ದು ಹಳ್ಳಿ ಹಳ್ಳಿಗಳೇ ಹಾಳಾದದ್ದನ್ನು ಕಾಣಬಹುದು. ಗಂಡು ಪರಹೆಣ್ಣಿಗೆ ಮನಸೋತು, ರಾತ್ರಿಯೆನ್ನದೆ ಅಡ್ಡಾಡಿ ತಲೆಕೊಟ್ಟದ್ದೂ ಉಂಟು.

ಹೆರವರ್ಹೆಣ್ಣೀಗಾಗಿ, ಹೊರಗ ಮಲಗುವ ಜಾಣ
ಗಿಡದ ಮ್ಯಾಲೆರಡು ಗಿಣಿ ಕೂತು। ನುಡಿದಾವ
ಎರವನ್ನೊರಾಯ ನಿನ ಜೀವ॥ -ಗ-ಹಾ-ಪು-೭೬

ಜಾತಮಲ್ಲಿಗಿ ಹೂವ, ಜಗ್ಗಿ ಕೊಯ್ಯುವರೇನ
ಜಗ್ಗಿದರ ಮಗ್ಗಿ ಉದರ್ಯಾವ। ಪರಹೆಣ್ಣ
ದಿಟ್ಟೀಸಿ ನೋಡಿ ಫಲವೇನ॥ -ಗ-ಹಾ-ಪು-೭೭

ನೀರಾಗ ನಿಂತಿರುವ, ನೀಲಿಪಾವಡದಣ್ಣ
ನೀರ ಕೆಟ್ಟಾವೊ ಬದಿಗಾಗೊ। ಗಂಡುಳ್ಳ
ಬಾಲಿ ಕೊಟ್ಟಾಳೂ ನಿನಗಾಗಿ॥ -ಗ-ಹಾ-ಪು-೭೭

ಎಂದು ಜನಪದವೇ ಇಂಥವರಿಗೆ ಉಪದೇಶ ಮಾಡಿಹಾಡಿದೆ. ಹದಿಬದೆಯಾದ ಮಾನುಳ್ಳ ಹೆಣ್ಣು, ಗಂಡಸು ಕೇಳಿದ್ದಕ್ಕಾಗಿ ತನ್ನ ಪಾತಿವ್ರತ್ಯವೇ ಹಾಳಾಯಿತೆಂದು ಗೋಳಿಟ್ಟು ಎದೆ ಒಡುಕೊಂಡು ನವದು ಸತ್ತದ್ದೂ ಉಂಟು. ಅಪಾರವಾದ 'ಕಿತ್ತೂರ ಕೋಲಪದಗಳೊಂದರಲ್ಲಿ ಕಂಡದ್ದನ್ನು ಹಳ್ಳಿಗರು ಹಾಡಿದ್ದಾರೆ.

ರನ್ನದ ಕೋಲು ಕೋಲಿನ ಕೋಲ।
ಹೂವಿನ ಕೋಲು ಕೋಲಿನ ಕೋಲ ॥ಪ॥

ಎಡಗೈಯಾಗ್ ಸಿಂಬಿ ಬಲಗೈಯಾಗ್ ಕೊಡ
ಹೊಂಟಾಳ್ ಸಂಗವ್ವ ಹೊಳಿನೀರೊ ॥೧॥

ಹೊಂಟಾಳ್ ಸಂಗವ್ವ ಹೊಳಿನೀರಿನ್ಹಾದ್ಯಾಗ
ಕಿತ್ತೂರ್ ದೇಸಾಯಿ ಮನಸಿಟ್ಟೊ ॥೨॥

ಕಿತ್ತೂರ್ ದೇಸಾಯಿ ಮನಸಿಟ್ಟು ಕೇಳ್ಯಾನೊ
ಹತ್ತೂರ್ ಕೊಡತೀನಿ ಮುಖದೋರೊ ॥೩॥

ಹತ್ತೂರ ಕೊಟ್ಟರ ನತ್ತೀನ ಬೆಲೆಯಿಲ್ಲ
ಅತ್ತೀಯ ಹೊಟ್ಟ್ಯಾವ ಅರ್ಜುನೊ ॥೪॥

ಅತ್ತೀಯ ಹೊಟ್ಟ್ಯಾವ ಅರ್ಜೂನ್ನ ಕಾಲನ್ನ
ಮೆಟ್ಟೀನ ಬೆಲೆಯು ನಿನಗಿಲ್ಲೊ ॥೫॥

ಎಂದು ಸಂಗವ್ವನು 'ಕಿತ್ತೂರ ದೇಸಾಯಿಗೆ' ಉಚಿತವಾದ ಉತ್ತರಕೊಟ್ಟು ನೀರಕೊಡ ತುಂಬಿತಂದು ಮಲಗಿಯೇ ಬಿಡುವಳು. ಅತ್ತೆ ಮಾವಂದರಿಗೆ ಸಂದುಸಾವಿರ ಬೇನೆ ಬಂದಿವೆ, ಹಡೆದವ್ವನನ್ನು ಬೇಗ ಕರೆಯಿಸಿರೆಂದು ಉಪದ್ರ ಕೊಟ್ಟು, ಹಡೆದ ತಾಯಿಯು ಬಂದ ಮೇಲೆ, ತನ್ನ ದುಃಖವನ್ನು ತೋಡಿಕೊಂಡು ಜೀವ ಬಿಡುವಳೆಂದು ಹಾಡಿನಲ್ಲಿ ಬರುವುದು. ಎಷ್ಟು ಆದರ್ಶಮಯವಾಗಿದೆ ನಮ್ಮ ಹಳ್ಳಿಯ ಹೆಣ್ಣುಮಕ್ಕಳ ಪಾತಿವ್ರತ್ಯದ ಮನೋಧರ್ಮ! ಬೆಳುವಲದ ಹೆಣ್ಣುಮಕ್ಕಳು ಇದೇ ಕಥಾಸಾರವನ್ನು ಎರಡೇ ಪದ್ಯಗಳಲ್ಲಿ ಬೀಸುವಾಗ ಹಾಡುತ್ತಾರೆ.

ಅತ್ತೀಯ ಮನಿ ಸೊಸಿ, ಎತ್ತೇರಿ ಬರುವಾಗ
ಕಿತ್ತೂರ ದೊರೆಯು ನೆದರಿಟ್ಟು। ಕೇಳ್ಯಾನ
ಹತ್ತು ರೂಪಾಯಿ ಮುಖದೋರ॥

ಹತ್ತ ನಿನರೂಪಾಯಿ, ನತ್ತೀನ ಬೆಲೆಯಿಲ್ಲ
ಅತ್ತಿ ಹೊಟ್ಟೀಲಿ ಅರ್ಜೂನ್ನ। ಕಾಲನ್ನ
ಮೆಟ್ಟೀನ ಬೆಲೆ ನಿನಗಿಲ್ಲ॥ *–ಜಾ–ಸಂ–*

ಇದು ಸಂಭವಿಸಿದ ಸಂಗತಿಯೇ ಆಗಿರಬಹುದೆಂದು ಕಾಣುತ್ತದೆ.

ಹಳ್ಳಿಗರ ಸಮಾಜದಲ್ಲಿ ಸೂಳೆಗೆ ಮಾನಮನ್ನಣೆಯೇ ಇಲ್ಲ. ಅವರ ಮಂಗಲ ಕಾರ್ಯಗಳಲ್ಲಿ ಅವಳಿಗೆ ಯಾವ ಸ್ಥಾನವೂ ಇಲ್ಲ. ಸುಸಂಸ್ಕೃತರೂ, ವೇದ ಪಂಡಿತರೂ ಆದ ಬ್ರಾಹ್ಮಣರು ಅವಳನ್ನು 'ನಿತ್ಯಸುಮಂಗಲೆ' ಎಂದು ಕರೆದಿದ್ದಾರೆ. ಅವರ ಮದುವೆ ಮೊದಲಾದ ಮಂಗಲಕಾರ್ಯಗಳಲ್ಲಿ ಅವಳಿಗೆ ಈಗಲೂ ಮುಖ್ಯಸ್ಥಾನವಿದೆ. ಹನುಮಪ್ಪನಿಗಾಗಲಿ, ವೆಂಕಟರಮಣನಿಗಾಗಲಿ, ರಂಗನಾಥನಿಗಾಗಲಿ ತಾಳಿಯ ಕಟ್ಟಿಕೊಂಡು ಸೂಳೆ(ವೇಶ್ಯಾಂಗನೆ)ಯು, ಬಂದು ಮದುಮಗಳಿಗೆ ತಾಳಿ[೨] (ಮಂಗಳಸೂತ್ರ)ಯನ್ನು ಕಟ್ಟದ ಹೊರತು, ಅವರ ಲಗ್ನವೇ ಆಗುವುದಿಲ್ಲ. ಈ ಪದ್ಧತಿಯು ಈಗ ಕಡಿಮೆಯಾಗಹತ್ತಿದೆ. ಹಳ್ಳಿಗಳಲ್ಲಿ ಸೂಳೆಗಾಗಿ ದೊಡ್ಡ ಮನೆತನಗಳು ಹಾಳಾದದ್ದು ನಿದರ್ಶನಕ್ಕೆ ಬರುತ್ತವೆ. ಸೂಳೆಯ ಬೆನ್ನುಹತ್ತಿದ ಗಂಡಿನ ಪಾಟವನ್ನು ಅವರು ತಮ್ಮ ಹಾಡುಗಳಲ್ಲಿ ಬಲು ಮಾರ್ಮಿಕವಾಗಿ ಚಿತ್ರಿಸಿದ್ದಾರೆ.

ಸೂಳೀಗೆ ಹೋದಾವ, ಏನಾದ ಎಂತಾದ
ಕಾಡುನಾಯಾದ ಕಪಿಯಾದ। ಮರುದಿನಕ
ಸೂಳೆ ಕಾಲೀಗಿ ಕೆರುವಾದ॥ *–ಜಾ–ಸಂ–*

ಹುಡುಗೀಯ ಕೂಡಾಡಿ, ಹುಡುಗ್ಯಾಕ ಬಡುವಾದ
ಬಂಗಾರ ಒತ್ತಿ ಬಳಿಒತ್ತಿ। ಆದಾವ
ಸಣ್ಣ ಸೀರೊತ್ತಿ ಸವೆದ್ಹೋದ॥ *–ಹೋ–ಹಾ–*

ಎಂದು ಸೂಳೆಗೆ ರೊಕ್ಕವೂ ಹಾಳು, ಮಾನವೂ ಹಾಳು, ಆರೋಗ್ಯವೂ ಹಾಳೆಂಬ ಸತ್ಯವನ್ನು ಇಲ್ಲಿ ಕಾಣುತ್ತೇವೆ. ಈ ಪದ್ಯದ ಹಿಂದಿನ ಧ್ವನಿಯನ್ನರಿತುಕೊಳ್ಳಲು ಓದುಗರಿಗೆ ಬಿಟ್ಟುಕೊಟ್ಟಿದ್ದೇನೆ.

ಸೂಳಿಗೆ ಹೋಗಾವ್ನ, ಸುಲಿದು ಮಟ್ಟೀ ಕಟ್ಟಿ
ಊರ ಹೊರಗವನ ಹೆಡಮುರಗಿ। ಕಟ್ಟಿದರ
ಸೂಳೆಂಬ ಸಬುದ ಬಿಡಲಿಲ್ಲೊ॥

ಪರಿಮsಳ ದರಸ್ಯಾರು, ಪರನಾರಿಗ್ಹೋದಾರ
ಮನಿಮಡದಿ ಬಾಯ ಬಿಡಬ್ಯಾಡ। ತಾವ್ತಮ್ಮ
ಮನಹೇಸಿ ಮನಿಗೆ ಬರತಾರ॥ *–ಜಾ–ಸಂ–*

ಕಡೆಗೆ ಗಂಡಿಗೆ ಬುದ್ಧಿ ಭೆಟ್ಟಿಯಾಗಿ, ತಾನೇ ತನ್ನವಳಲ್ಲಿಗೆ ತಿರುಗಿ ಬರುವನು. ಸೂಳೆಯ ಸೋಬತಿಯಾದ ಗಂಡನ ನೆನಿಸಿ ಫಲವೇನು? ಎಂದು ಹೆಣ್ಣು ಹಂಬಲಿಸದೆ

ಮುಗಿಲ ಮ್ಯಾಗಿನ ಚಿಕ್ಕಿ, ಹಗಲ ಮೂಡಿದರೇನ
ಅಗಲಿ ಇರುವವರ ಗೊಡುವೇನ। ಮಾಣೀಕ
ಹಾವೀನ ಬದಿಲಿದ್ದು ಫಲವೇನ॥ *–ಜಾ–ಸಂ–*

ಎಂದು ಸುಮ್ಮನಾಗಿಬಿಡುವಳು. ಇಷ್ಟೇ ಅಲ್ಲ ಹದಿಬದಿಯು ತನ್ನ ಧರ್ಮಕ್ಕನುಸಾರವಾಗಿ

---

೨. 'ತಾಳಿ' ಇದು ದ್ರಾವಿಡ ಸಂಸ್ಕೃತಿಯ ಲಗ್ನದ ಮಾಂಗಲ್ಯಗುರುತು. ಆರ್ಯಸಂಸ್ಕೃತಿಗೆ ಲಗ್ನದ ಗುರುತೇ ಇಲ್ಲ.

ಗಂಡ ಪಂಡಿತರಾಯಾ, ರಂಡೀಯ ಮಾಡಿದರ
ಭಂಡಮಾಡವರ ಮಗಳಲ್ಲ। ಕೊರಳಾನ
ಗುಂಡು ಬೇಡಿದರ ಕೊಡುವೇನ ॥ *–ಗ–ಹಾ–ವು–೩೬*

ಎಂದು ಹೇಳುವ, ಪತಿಯೇ ದೇವರೆಂಬ ಹದಿಬದೆಯರೂ ಹಳ್ಳಿಗರಲ್ಲಿ ಇದ್ದಾರೆ.

ಪ್ರಣಯದಲ್ಲಿ ಹಳ್ಳಿಗರ ಜಾತಿಕುಲಗಳು ಎಲ್ಲಿಯೋ ಮಸಕು ಮಸಕಾಗಿ ಹೋಗಿಬಿಟ್ಟಿವೆ. ಪ್ರಣಯವು ಹುಟ್ಟುಗುರುಡ. ಅಲ್ಲಿ ಜಾತಿಪಂಗಡದ ಭೇದವಿಲ್ಲ, ಪ್ರೇಮವೇ ಜಾತಿಯಾಗಿ ನಿಲ್ಲುವುದು. ಹೀಗೆ, ಹಳ್ಳಿಗರ ಹಾಡುಗಳಲ್ಲಿ ಅವರ ಪ್ರಣಯ ಹಾಗೂ ದಾಂಪತ್ಯ ಜೀವನವನ್ನು ತುಂಬ ಕಾಣಬಹುದು.

ಗಂಡು ಹೆಣ್ಣಿನ ಪ್ರಣಯ ಮಾನವ ಸ್ವಭಾವಕ್ಕನುಸಾರವಾಗಿ ಬಂದಿದೆ. ಸಮಾಜವು ಸುಧಾರಿಸಿ, ದಾಂಪತ್ಯವು ಅದರ ಕಟ್ಟುನಿಟ್ಟುಗಳಿಗೊಳಗಾಗಿ ಬಂದಿದೆ. ಈ ಪ್ರಣಯವೇ ದಾಂಪತ್ಯ ಜೀವನವಾಗಿದೆ. ಪ್ರಣಯದಲ್ಲಿ ಗಂಡಿಗೆ ಹೆಣ್ಣೇ ಕಣ್ಣು; ಹೆಣ್ಣಿಗೆ ಗಂಡೇ ಜಗವನ್ನರಿಯಲು ಒರೆಗಲ್ಲು. ಜಗತ್ತಿನ ಯಾವ ಶಾಸ್ತ್ರವೂ ಇಲ್ಲಿಯವರೆಗೂ ಗಂಡುಹೆಣ್ಣಿನ ಸಮಸ್ಯೆಯನ್ನು ಬಿಡಿಸಿ ನಿರ್ಧರಿಸಲಿಲ್ಲ. ಅಂತೆಯೇ ಸುಭಾಷಿತರ "ಸ್ತ್ರೀಯಶ್ಚರಿತ್ರಂ ಪುರುಷಸ್ಯ ಭಾಗ್ಯಂ, ದೇವೋ ನ ಜಾನಾತಿ ಕುತೋ ಮನುಷ್ಯಃ" ಎಂಬ ಮಾತು ಇಲ್ಲಿಯವರೆಗೂ ಊರಿ ನಿಂತಿದೆ. ಹೇಗಿದ್ದರೂ ಪ್ರಪಂಚವು ಮುಂದುವರಿಯಬೇಕಾಗುವುದು.

ಗಂಡು ಹೊಡಿಯಲಿ ಭೂಮಿ, ಹೆಣ್ಣು ಹೂಡಲಿ ಒಲಿಯ
ಬಣ್ಣ ತೊಟ್ಟೀಲ ತೂಗsಲಿ। ಶಿವರಾಯ
ಗಿಣ್ಣ ನಿನಗೆಡೆಯೊ ಕೈಮುಗಿದು ॥ *–ಜಾ–ಸಂ–*

ಎಂದು ರೈತನು ಆಶಾವಾದಿಯಾಗಿ ಬಾಳನ್ನು ಹಾಡಿದ್ದಾನೆ. ಇಂತಹ ಸಾಹಿತ್ಯವು ನಮಗೆ ಅಗತ್ಯ ಬೇಕು. ಹಳ್ಳಿಗಳು ಬೆಳೆಯಲಿ ಹಳ್ಳಿಗರು ಹಾಡಲಿ, ಆ ಹಾಡು ಹುಳಿಬೋನ ನಮ್ಮ ಸಾಹಿತ್ಯದ ಬುತ್ತಿಗಿರಲಿ.

❐

೮. ಬಾಳಿನಲ್ಲಿ ಆಸರಿಕೆ ಬೇಸರಿಕೆ

ಆಸರಕಿ ಅಳದಿಟ್ಟ, ಬ್ಯಾಸರಕಿ ಬಳದಿಟ್ಟ
ಚಿಂತಿಕಾಲಾಗ ತುಳದಿಟ್ಟ। ಈ ದೇಹ
ಶೀಲ ಮಾಡಿಟ್ಟ ಜಗದಾಗ ॥ *–ಗ–ಹಾ–ಪು–೩೦*

ಎಂದು ಗಂಡು ಹೆಣ್ಣು ಹಾಡಿ ಪ್ರಪಂಚವನ್ನು ಮಾಡುತ್ತ ಬಂದಿವೆ. ನೋಡುವವರಿಗೆ ಹಳ್ಳಿಗರ ಜೀವನವು ಸುಖಮಯವಾಗಿ ಕಂಡರೂ ಎಡರು ತೊಡರಿನ ಈ ಬಾಳಿನಲ್ಲಿ ಒಂದಿಲ್ಲೊಂದು ಕಂಟಕವು ಬಂದು ಅವರ ಜೀವನವೂ ಒಮ್ಮೊಮ್ಮೆ ಕಲಕುಮಲಕಾಗುವುದು. ಮುನಿಸು, ಕುನಸು, ವೈಮನಸ್ಸು, ಹಗೆತನ, ಬಂಜೆತನ, ಅಸೂಯೆ, ಸವತಿಮತ್ಸರ, ವಾದ, ಜಗಳ, ಅಳು, ದುಃಖ, ಮನಸ್ತಾಪ ಮೊದಲಾದುವುಗಳು ಅವರ ಸುಖಜೀವನವನ್ನು ಅಲ್ಲೋಲ ಕಲ್ಲೋಲ ಮಾಡಿ ದುಃಖದಲ್ಲಿ ನೂಕಿ ಬಿಡುವುವು. ಗಂಡನ ಮುನಿಸು, ಬಾಗಾದಿಗಳ ಕುನಸು, ಸೂಳೆಯ ವೈಮನಸ್ಸು, ಆಗದವರ ಹಗೆತನ, ಮಕ್ಕಳಾಗದ ಬಂಜೆತನ, ಸೇರದವರ ಅಸೂಯೆ, ಸವತಿ ಸವತಿಯರಲ್ಲಿ ಮತ್ಸರ, ಬಣಬಣಗಳಲ್ಲಿ ಜಗಳ, ಮಾತು ಮಾತಿಗೆ ಬಿರುಸಾಗಿ ಹಳ್ಳಿಯ ತುಂಬೆಲ್ಲ ವಾದ, ಅಸಹಾಯ ಪರಿಸ್ಥಿತಿಯಲ್ಲಿ ಅಳು, ದುಃಖ, ಮನಸ್ತಾಪ ಮೊದಲಾದುವುಗಳು ಎದ್ದು ಹಳ್ಳಿಗರ ಸ್ಥಿತಿಗತಿಗಳು ಕೆಟ್ಟು ಅಲ್ಲಿಯ ವಾತಾವರಣವೇ ಪ್ರಕ್ಷುಬ್ದವಾಗಿ ಹೋಗಿಬಿಡುವುದು. ಈಗಿನ ಹಳ್ಳಿಗಳಲ್ಲಂತೂ, ಈ ವಾತಾವರಣವು ದಿನದಿನಕ್ಕೆ ಬೆಳೆಯಹತ್ತಿದೆ. ಹಳ್ಳಿಗಳಲ್ಲಿ ಶಾಂತತೆಯು ಉಳಿದೇ ಇಲ್ಲೆಂದರೆ ಅತಿಶಯೋಕ್ತಿಯಾಗಲಾರದು. ಬಾಳ್ವೆವಂತರು ಈ ವಾತಾವರಣಕ್ಕೆ ಅಂಜಿ ಹಳ್ಳಿಗರನ್ನು ಬಿಟ್ಟು ಹೋದ ಉದಾಹರಣೆಗಳೂ ಉಂಟು.

ಇನ್ನೂ ಅಜ್ಞಾನದ ಕತ್ತಲೆಯಲ್ಲಿ ಬಳಲುವ ಹಳ್ಳಿಗರು ಇಂತಹ ವಾತಾವರಣವು ಹಳ್ಳಿಯಲ್ಲಿ ಬೇರೂರಲು, ಹೆಜ್ಜೆಜ್ಜೆಗೆ ಉಸುರು ಹಾಕಿ ಕೊರಗುವರು. ಕುಟುಂಬದಲ್ಲಿ ಎಲ್ಲರೂ ಕೂಡಿ ಇರುವಾಗ ಗಂಡಹೆಂಡಿರ ಪ್ರೇಮಕ್ಕೆ ಅತ್ತೆ, ಮೈದುನ, ಹೆಣ್ಣುಮಕ್ಕಳು ಮೊದಲಾದವರ ಕಾಟವು ಮುಳುವಾಗಿ ಪ್ರಪಂಚವೇ ಚಿಂತಾಜನಕವಾಗುವುದು. ದೇಹವು ಸವಿಸವಿದು ಬಾಳುವೆಯೇ ಬೇಸರಾಗುವುದು. ದುಡಿಯಲು ಮನೆಬಿಟ್ಟು ಹೋಗುವ ಗಂಡು ತನ್ನ ಕೆಲಸದಲ್ಲಿ ನಿರತರಾಗಲು ಬಂದ ಚಿಂತೆಯನ್ನು ಸ್ವಲ್ಪಾದರೂ ಮರೆಯಬಹುದು. ಆದರೆ ಹಗಲಿರುಳು ಮನೆಗೆಲಸದಲ್ಲಿ ತೊಡಗಿರುವ ಹೆಣ್ಣು, ಗಂಡಿನಂತೆ ಬಂದ ಚಿಂತೆಯನ್ನು ತೀವ್ರ ಮರೆಯಲಾರಳು. ಕೋಮಲವೂ, ಚಂಚಲವೂ ಆದ ಹೆಣ್ಣಿನ ಮನಸ್ಸು ಅತ್ತೊಮ್ಮೆ ಇತ್ತೊಮ್ಮೆ ಹೊಯ್ದಾಡಿ ಕಡೆಗೆ ನಿಲ್ಲುವುದು. ಆಗ 'ಬೇಸರಿಕೆ' ಬರಲು ಗಂಡು ಹೆಣ್ಣಿಗೆರಡಕ್ಕೂ 'ಆಸರಿಕೆ' ಬೇಕು.

ಹುಟ್ಟಿದ ಹೆಣ್ಣಿಗೆ ತಾಯಿಯ ಮನೆಯು ಎಲ್ಲಿಯವರೆಗೆ? ಮದುವೆಯಾದ ದಿನವೇ ಅವಳು ತನ್ನ ಮನೆಯನ್ನೇ ಗಳಿಸುವಳು. ಕೈಹಿಡಿದ ಗಂಡು ಹೆಣ್ಣನ್ನು ಕರೆದುಕೊಂಡು ಮನೆಕಟ್ಟಿ ಬಾಳುವೆ ಮಾಡಹತ್ತಿದ ಮೇಲೆ, ಮಮತೆಯಿಂದ ಹೆಣ್ಣನ್ನು ನಗಿಸಬಹುದು; ಮುನಿಸು ಬಂದಾಗ ಕೋಪಿಸಿ ಗದ್ದರಿಸಬಹುದು.

ಕನ್ನೇಯ ಬಡಿಬ್ಯಾಡs, ಕೈ ಬಳಿ ಒಡಿದಾವು
ಸಣ್ಣಂಚಿನ್ವಾಲೆ ಮುರಿದಾವು। ನನ ಮಗನ
ನನ್ನಾಣೆ ಮಡದಿ ಬಡಿಬ್ಯಾಡ ॥ *–ಜಾ–ಸಂ–*

ಎಂದು ತಾಯಿಯು ಸಿಟ್ಟಿನ ಭರದಲ್ಲಿ ಮಡದಿಯನ್ನು ಬಡಿಯುವ ಮಗನನ್ನು ತಡೆಯುತ್ತಾಳೆ. ಮುನಿದ ಗಂಡನಿಗೆ ಕುನಸಿಟ್ಟು ನಡಿದರೆ ಹೆಣ್ಣಿನ ಬಾಳುವೆಯೇ?

ಛೀ! ಏಳ ಛೀಮಾರಿ, ನಾಚಿಕಿಲ್ಲದ ನಾರಿ
ಗಂಡನ್ನ ಬೈಯ್ವ ಗೈಯ್ಯಾಳ। ಗಂಡಾಗ
ಆಂವ ಇವನೆಂದು ಕರೆದಾಳ ॥ *–ಜಾ–ಸಂ–*

ಎಂದು ಕುನಸಿಟ್ಟು ನಡೆವ ಹೆಣ್ಣಿಗೆ ಸಿಟ್ಟು ಮಾಡಿ ಹಿರಿಯರು ಹಾದಿಗೆ ಹಚ್ಚುವರು. ಎಲ್ಲವೂ ಸಮವೆಂದು ತಾಳಿ, ತಿಳಿದುಕೊಂಡು ಬಾಳಿದ ಹೆಣ್ಣಿಗೆ ಪ್ರಪಂಚವು ಭಾರವೆನಿಸಲಾರದು; ಒಂದು ವೇಳೆ ಅನಿಸಿದರೂ ತನ್ನ ಗಂಡನಲ್ಲಿ ಆತ್ಮವಿಶ್ವಾಸವುಳ್ಳ ಹೆಣ್ಣಿಗೆ ಪ್ರಪಂಚದಲ್ಲಿ ಅದು ಹೊಸದೆನಿಸದು; ಅನಿಸಿದರೂ ಪ್ರೇಮ ವ್ಯಾಮೋಹದಲ್ಲಿ ಹೆಣ್ಣಿಗೆ ಬಾಳ್ವೆಯು ಬೇಕೆನಿಸುವುದು. ಹಳ್ಳಿಗರ ಕೌಟುಂಬಿಕ ಜೀವನವು ಆದರಣೀಯ ವಾಗಿದೆ. ಅನೇಕ ದೊಡ್ಡ ಕೂಡುಮನೆತನಗಳು (Joint family) ಬದುಕಿ ಈಗಲೂ ಹಳ್ಳಿಗಳಲ್ಲಿ ಸುಖಮಯವಾಗಿ ಬಾಳುವುದೇ

ಇದಕ್ಕೆ ಬಲವಾದ ಸಾಕ್ಷಿ. ವಯೋಮಾನದಿಂದ ಮನೆಯಲ್ಲಿ ಹಿರಿಯನಾದವನೇ ಕುಟುಂಬದ ಯಜಮಾನನಾಗುವನು. ಅವನ ಮುಖಾಂತರವೇ ನಿತ್ಯ ನಡೆಯುವ ವ್ಯವಹಾರ. ಎಲ್ಲರೂ ಅವನ ಅನುಮತಿಯಂತೆ ದುಡಿದು ಕೌಟುಂಬಿಕ ಜೀವನವನ್ನು ಸಾಗಿಸುವರು. ಇಂಥಲ್ಲಿ ಹೆಣ್ಣು ನೆರೆಹೊರೆಗಂಜಿ ಹಿರಿಕಿರಿಯರಿಗಳುಕಿ ನಡೆಯಬೇಕಾಗುವುದು. ಕುಟುಂಬದಲ್ಲಿ ಎಲ್ಲರೂ ಸಾರಾಸಾರ ವಿಚಾರದಿಂದ ನಡೆದರೆ ಒಳಿತು; ಇಲ್ಲವಾದರೆ ಅನೇಕ ತೊಂದರೆಗಳೆದ್ದು ಕೌಟುಂಬಿಕ ಜೀವನವು ದುಃಖಮಯವಾಗುವುದು. ಕುಟುಂಬದಲ್ಲಿ ಗಂಡನ ಮನೆಗೆ ನಡೆಯಲು ಬಂದ ಹೆಣ್ಣಿಗೆ ಮುಳುವಾಗಿ ಆತಂಕ ತರುವವರು ಭಾವಮೈದುನರು, ನೆಗೆಣ್ಣಿಯರು, ನಾದುನಿಯರು.

ಭಾವ ಮುನಿದರ, ಬಲಗಾಲ ಹಿಡಿದೇನ
ಭಾವಯ್ಯನ ಮಡದಿ ನೆಗೆಣ್ಣಿ। ಮುನಿದರೆ
ಬಾರಕ್ಕನೆಂದು ಕರೆದೇನ॥ *–ಗ–ಹಾ–ಪು.೨೭*

ಮಾರಯರು ಬೈದರ, ಬಾರಾವು ಕಣ್ಣೀರು
ಮಾರಯರ ತಮ್ಮ ಮೈದೂನ। ಬೈದರ
ಮಾಡಿಲ್ಲದ ಮಳೆಯು ಸುರಿದಂಗ॥ *–ಗ–ಹಾ–ಪು.೨೭*

ಮೈದುನರ ಮುನಿಸ್ಯಾಕ, ನನಗೂಡ ಮಾತಿಲ್ಲ
ನಾನೇನಂದಿಲ್ಲ ಅವರೀಗೆ। ಒಳಗಿರುವ
ವೈಯ್ಯಾರಿ ಹೇಳ್ಯಾಳ ಒಳಮಾತ॥ *–ಗ–ಹಾ–ಪು.೨೭*

ಎಂದು ಹೆಣ್ಣು ಕೌಟುಂಬಿಕ ಜೀವನವನ್ನು ಹಾಡಿದೆ. ಹಳ್ಳಿಗರ ಕುಟುಂಬದಲ್ಲಿ ಅಕ್ಕತಂಗಿಯರು ಸರ್ವ ಸಂಪತ್ತು, ಎಂಬ ಭಾವನೆಯಿದೆ. ಯಾವ ಹಳ್ಳಿಗನೂ ಅವರ ಮನಸ್ಸನ್ನು ನೋಯಿಸನು. ಮನೆಯ ದೇವತೆಯರೆಂದು ಅವರನ್ನು ಪೂಜೆ ಮಾಡುತ್ತಾರೆ. ಸುಧಾರಿಸಿದವರೆಂದು ಜಂಬ ಕೊಚ್ಚಿಕೊಳ್ಳುವ ಹಲ ಕೆಲವು ಕಲಿತ ವರ್ಗಗಳಲ್ಲಿ ಅಕ್ಕತಂಗಿಯರಿಗೆ ಆದರ ಸತ್ಕಾರವು ತೀರ ಕಡಿಮೆಯಿರುವುದು ದುಃಖದ ಸಂಗತಿ. ಅಷ್ಟೇ ಏಕೆ? 'ರಂಡೆ,' 'ಮುಂಡೆ,' 'ಬೋಳಿ' ಮೊದಲಾದ ಅಸಹ್ಯ ಅವಾಚ್ಯ ಶಬ್ದಗಳನ್ನು ಬಳಕೆಯ ಮಾತಿನಲ್ಲಿ ಸಹಜ ಆಡುವದನ್ನು ಈಗಲೂ ಕೇಳಬಹುದು. ಇವರ ಸಂಸ್ಕೃತಿಯೆಲ್ಲಿ? ಸುಧಾರಿಸಿದವರೆಂದು ಬೆನ್ನು ಚಪ್ಪರಿಸಿಕೊಂಡರೂ, ಅವರ ನೀತಿ–ರೀತಿಯ ಮಾರ್ಗವು ಈ ಸಂದರ್ಭದಲ್ಲಿ ದಿನದಿನಕ್ಕೆ ಕೊಳೆಯಹತ್ತಿದೆ. ಇವರು ನಮ್ಮ ಹಳ್ಳಿಗರನ್ನು ನೋಡಿ ನಾಚಿ–ತಲೆತಗ್ಗಿಸಿ ನಡೆಯಬೇಕಾಗುವುದು. ಇದು ಹಳ್ಳಿಗರಲ್ಲಿ ಬಂದುದು ಶಿವಶರಣರ ಸಂಸ್ಕೃತಿಯಿಂದಲೇ. ಅಕ್ಕ ತಂಗಿಯರು ಮುನಿದು ಮರುಗಿ ಹೋದರೆ ಆ ಶಾಪವು ತಮಗೆ ಬಿಡದೆಂದು ಒಂದು ಅಂಧಶ್ರದ್ಧೆಯಿಂದ–

ಹೊಸಲೀಗೆ ಹೊನ್ಯಾಕ, ಚೌಕಟ್ಟಿಗೆ ಮುತ್ಯಾಕ
ಚಿಕ್ಕತಂಗೀಗೆ ಮುನಿಸ್ಯಾಕ। ನನ ಮಗನ
ಲಕ್ಕsಸ ಪತಿಯೆ ಕಾಲ್ಹಿಡಿಯೊ॥ *–ಜಾ–ಸಂ–*

ಹೀಗೆಂದು ತಾಯಿಯೇ ಮಗನಿಗೆ ಬುದ್ಧೀ ಹೇಳಿ ಅಕ್ಕತಂಗಿಯರಿಗೆ ಆದರ ಸತ್ಕಾರ ತೋರಿಸಿರೆಂದು ಮಕ್ಕಳಿಗೆ ಸೂಚಿಸುತ್ತಾಳೆ.

ಕೂಡಿ ನಡೆದು ಬಂದ ಮನೆತನವು ಎರಡಾಗಬೇಕಾದರೆ ಹೊರಗಿಂದ ಮನೆಹೊಕ್ಕ ಹೆಣ್ಣುಮಕ್ಕಳೇ ಕಾರಣೀಭೂತರಾಗುವರು. ಮನೆಯೊಳಗಿನ ಭಾವ, ಮೈದುನ, ನಾದುನಿ, ಅತ್ತೆ ಮೊದಲಾದವರು ಅದಕ್ಕೆ ಪುಟವಾಗಲು ಕೌಟುಂಬಿಕ ಜೀವನವೇ ನಾಶವಾಗಿ ಹೋಗುವುದು.

ಹಚ್ಚೀದ ಮಾತೀಗಿ, ಹರಿವ ಗಂಗ್ಯೆರಡಾಗಿ
ಇಚ್ಚುಳ್ಳ ಮನವು ವಿಷವಾಗಿ। ಒಳಗೊಳಗೆ
ಹಚ್ಚಿದವರ್ಯಾರ ಕದನವ॥ *–ಗ–ಹಾ–ಪು–೨೮*

ನನ್ನ ಬೈದರು ಬೈಯ್ಯೆ, ಬೆನ್ನ ಬೈಯಲಿಬ್ಯಾಡ
ಬೆನ್ಹಿಂದ ಬೆಂಕಿ ಒಯ್ಯ್ಯಾಡ। ನನಗೊಬ್ಬ
ತಮ್ಮ ಇರವೂನ ಅರ್ಜೂನ॥ *–ಜಾ–ಸಂ–*

ಸುಸೂತ್ರವಾಗಿ ಸಾಗಿದ ಮನೆತನದಲ್ಲಿ ಹೆಣ್ಣುಮಕ್ಕಳ ಮಾತುಕೇಳಿ ಕದನ ಹುಟ್ಟಿ ಗಂಡುಮಕ್ಕಳ ಮನವು ವಿಷವಾಗಲು ಒಕ್ಕಟ್ಟು ಸಡಿಲಾಗಿ ಮನೆತನದ ಗೌರವವೇ ನಾಶವಾಗುವುದು. ವೈಮನಸ್ಸಿನಿಂದ ಒಂದು ಮನೆಗೆ ಬಾಗಿಲೆರಡಾಗಿ ಕುನಸು ಉತ್ಪನ್ನವಾಗುವುದು.

ಅಣ್ಣತಮ್ಮರ ಜಗಳ, ನಿನ್ನೆ ಮೊನ್ನ್ಯಾಗ್ಯಾವ
ಬಣ್ಣ ಬಾಗೀಲ ಎರಡಾಗಿ। ಕಡೆಮಗನ
ಸಣ್ಣವನಾಗಿ ಸರಕೋರೊ॥ *–ಜಾ–ಸಂ–*

ಎಂದು ತಾಯಿಯು ಸಣ್ಣ ಮಗನಿಗೆ ಸಮಾಧಾನ ಹೇಳಿ ಜಗಳದಲ್ಲಿ ಸಂದುಕೊಳ್ಳಲು ಬುದ್ಧೀ ಹೇಳುತ್ತಾಳೆ. ಮನೆ ಎರಡಾದರು ಹೆಣ್ಣು ಹಿಂದಿನ ವೈಮನಸ್ಸನ್ನು ಮರೆಯದೆ ಕುನಸು ತೀರಿಸದೆ ಬಿಡದು.

ಅಣ್ಣನ ಹೆಂಡತಿ, ಕಣ್ಣೀಗಿ ಒಳ್ಳೆವಳು
ಸುಣ್ಣದ ನೀರ ಒಲಿಮುಂದ। ಇಟಗೊಂಡು
ಎಮ್ಮಿ ಹಾಲೆಂದು ಬಡಿಸ್ಯಾಳ॥ –ಗ–ಹಾ–ಪು–೧೫

ಎಂಬ ಮಾತುಗಳು ಮನೆತನದಲ್ಲಿ ಕದನ ಹುಟ್ಟಿದ್ದನ್ನು ಹೇಳಿ ಅಣ್ಣನ ಹೆಂಡತಿಯು ಕುನಸಿಟ್ಟು ಸೇಡು ತೀರಿಸಿಕೊಳ್ಳುವ ಪರಿಯನ್ನು ವಿಶದ ಪಡಿಸುತ್ತವೆ.

ಊರಮ್ಯಾಗಲ ಊರ, ದಾರಿಮ್ಯಾಗಲ ಮನೆಯ
ಬಾರದ್ಯಾಕ್ಹೋದ ನನ್ನಣ್ಣ। ನಿನ ಮಡದಿ
ಬ್ಯಾಡಂದಳೇನೊ ನನ ಮನಿಗೆ॥ –ಜಾ.ಸಂ–

ಹೆಂಡತಿಯ ಮಾತನ್ನು ಕೇಳಿ ಅಣ್ಣನು ತಮ್ಮನೆಗೆ ಬರಲಿಲ್ಲವೆಂದು ಅಕ್ಕತಂಗಿಯರು ಹಳಹಳಿಸಿ ಮುಂದೆ, ಪ್ರಸಂಗಕ್ಕೆ ಅಣ್ಣನು ಅವರನ್ನು ಕರೆಯಹೋಗಲು–

ಬಡತನ ಬಂದರ, ಬಾಗಿ ಕೊಂಡಿರುವೇನೊ
ಬಾರೆನಣ್ಣಯ್ಯ ನಿನ ಮನೆಗೆ। ನಿನ ಮಡದಿ
ಏಳಲ ಮಾಡಿ ನುಡಿದಾಳ॥ –ಗ–ಹಾ–ಪು–೨೦

ಹೀಗೆ ಅಣ್ಣನ ಹೆಂಡತಿಯ ಸ್ವಭಾವವನ್ನು ಬೈಲಿಗಳೆಯುತ್ತಾರೆ; ಅವಳು ಕುನಸಿಟ್ಟು ಸೇಡು ತೀರಿಸಿಕೊಳ್ಳುವ ಕೀಳ ಗುಣವನ್ನು ಸೂಚಿಸುತ್ತಾರೆ.

ಹೆಂಡತಿಯ ಮೇಲೆ ಮನಸೆರಡಾದ ಗಂಡನು ತನ್ನ ಪ್ರೇಮವನ್ನು ಅವಳ ಮೇಲೆ ತೋರಿಸದೆ ಸಿಡಿಮಿಡಿಯಾಗಿ ವೈಮನಸ್ಸಿನಿಂದಿರಲು ಅಸಹಾಯಳಾಗಿ ಹೆಣ್ಣು

ಸಿಟ್ಟು ಮಾಡುವಿರೇನು, ಸಿರಿಯರು ನನ ಮ್ಯಾಲೆ
ಕಟ್ಟಿಕೋಬ್ಯಾಡ್ರಿ ವೈಮನಸ। ಹಡದವರು
ಕೊಟ್ಟು ಹೋಗ್ಯಾರ ನಿಮ್ಮನಿಗೆ॥ –ಜಾ–ಸಂ–

ಎಂದು ತನ್ನ ಅಬಲತೆಯನ್ನು ತೋಡಿಕೊಳ್ಳುತ್ತದೆ. ಹೆಂಡತಿಯಾಗಿ ಬಂದ ಹೆಣ್ಣು ತನ್ನ ಸುಖದುಃಖವನ್ನು ಯಾರ ಮುಂದೆ ತೊಡಬೇಕು? ಅಡ್ಡಹಾದಿಯನ್ನು ತುಳಿದ ಗಂಡನು ಅವಳ ಮಾತನ್ನು ಕೇಳುವನೇ? ಅವನ ವೈಮನಸ್ಸು ಮತ್ತಷ್ಟು ಉಕ್ಕೇರುವುದು.

ಸೂಳೆಯ ಕಣ್ಣು ಗೆಣೆಯನ ಹೆಂಡತಿಯ ಮೇಲೆ. ಇಲ್ಲದ ಚಾಡಿಯನ್ನಾಡಿ ಅವನ ಕೈಯಿಂದ ಅವಳನ್ನು ಬಡಿಸುವಷ್ಟು ವೈಮನಸು. ಅವನ ಹೆಂಡತಿಯು ಹೇಗಿದ್ದರೂ ಅವಳಿಗೆ ಸೇರದು.

ಸೂಳೀಯ ವೈಮನಸ, ಯಾರಿಗ್ಹೇಳಲಿ ದೇವ
ತಾಳ್ಯಾಗಿ ಹೋದ ಮನಿರಾಯ। ಗೈಯಾಳಿ
ಹೇಳಿ ಬಡಿಸ್ಯಾಳ ಹಟ ತೊಟ್ಟು॥ –ಜಾ–ಸಂ–

ಮನೆಯ ಗಂಡನೇ ಸೂಳೆಗೆ ತಾಳಿಯಾಗಿ ಹೋದ ಮೇಲೆ ಸೂಳೆಯ ವೈಮನಸ್ಸನ್ನು ಹೇಳುವದುಂಟೇ?

ತಡೆಯಬೇಡಲೆ ಗೆಣತಿ, ನಿಲ್ಲಾಕ ಹೊತ್ತಿಲ್ಲ
ಸೂತರದ ಗೊಂಬಿ ನನ ಮಡದಿ। ಕಂಡಾರೆ
ವೈಮನಸು ನೋಡ ನಿನಮ್ಯಾಲೆ॥ –ಜಾ–ಸಂ–

ಎಂದು ಹೆಂಡತಿಯುಳ್ಳ ಪಾಣ್ಬನು ಸೂಳೆಗೆ ಎಚ್ಚರಿಸುತ್ತಾನೆ. ಒಬ್ಬರೊಬ್ಬರಲ್ಲಿ ವೈಮನಸು ಹುಟ್ಟುವುದು ಸಹಜವಾಗಿದೆ.

ಮನೆಯಲ್ಲಿ ನೆಗೆಣ್ಣಿಯರು ಕಡಿದಾಡಿ ವೈಮನಸು ತಾಳುವುದೂ ಉಂಟು. 'ಮನೆಗೆಲಸ'ವನ್ನು ಮಾಡಲು ಒಟಗುಡುವ ನೆಗೆಣ್ಣಿಗೆ–

ಬೀಸಲಕ ಕೂತೀನಿ, ಕೂಸ ನನ ತೊಡಿಮ್ಯಾಲ
ವಾಸ್ಯಾಡ ಬ್ಯಾಡ ನೆಗೆಯೇಣಿ। ನಿನ ಕೆಲಸ
ತಾಸೊತ್ತಿನಾಗ ತಿರುವೇನ॥ –ಗ–ಹಾ–ಪು–೨೮

ಎಂದು ಮಾತಾಡಲು, ಮಾತಿಗೆ ಮಾತಾಗಿ ವೈಮನಸೇ ಬೆಳೆಯ ಹತ್ತುವುದು.

ಹಣ್ಣು ಮೆಣಸಿನಕಾಯಿ, ಕಣ್ಣೀಗಿ ಕೆಂಪಗ
ಸಣ್ಣಕ್ಕಿ ಏನ ನೇಗೆಣ್ಣೆ। ಆಕಿ ಮಾತ
ಬೆಣ್ಣ್ಯಾಗ ಮುಳ್ಳು ಮುರಿದ್ಹಂಗ॥ –ಗ–ಹಾ–೨೭

ಇಲ್ಲಿ ನೆಗೆಣ್ಣಿಯ ಚುಚ್ಚುಮಾತಿನ ಪ್ರತಿಕ್ರಿಯೆಯನ್ನು ಬಲುಮಾರ್ಮಿಕವಾದ ರೀತಿಯಲ್ಲಿ ಹೇಳಿದೆ. ಅಷ್ಟು ಹದನಾಗಿವೆ ಅವಳ ಚುಚ್ಚು ಮಾತುಗಳು ಮನೆಯಲ್ಲಿ! ಮನೆಯಲ್ಲಿ 'ಗುಸು ಗುಸು' ಆಗಿ, ಒಬ್ಬರಿಗೊಬ್ಬರು ಮಾತಾಡದೆ ಪ್ರಸಂಗ ಬಂದಾಗ ಮೂದಲಿಸುವುದೇ ಅವರ ಧ್ಯೇಯವಾಗುವುದು.

ನೆಗೆಣ್ಣೆ ಮಾತೇನ, ಸೆಗಣೀಯ ದಂಟೀನ
ಗಾಳೀಗೆ ಬಂದ ರವದೀಯ। ಮಾತೀಗೆ
ಮಾರಾಯ ಮನಸ ತಗೆದಾರ॥ –ಜಾ–ಸಂ–

ಹೀಗೆ ಬೆಳೆದ ವೈಮನಸ್ಸು ಕಡೆಗೆ ಮನೆತನವನ್ನು ಇಬ್ಭಾಗ ಮಾಡಿಯೇ ಬಿಡುವುದು. ಗಂಡು ಏನು ಪ್ರಯತ್ನ ಮಾಡಿದರೂ ಅವನಾಟ ಸಾಗದೆ–

ಸಾವೂತನಕ ಬಿಡದ, ಸವತಿ ಮಕ್ಕಳ ಜಗಳ
ಸರಿಮನ್ಯಾಗಿರುವ ನೆಗೆಣ್ಣಿ। ನಿನ ಜಗಳ
ಬ್ಯಾರ್ಯಾಗು ತನಕ ಬಿಡಲಿಲ್ಲ॥ –ಜಾ–ಸಂ–

ಹೀಗೆಂದು ಹೆಣ್ಣು ತನ್ನ ಗಂಡನ ಕರೆದುಕೊಂಡು ಬೇರೆ ಮನೆಯನ್ನೇ ಮಾಡಿಬಿಡುವುದು.

ಕೌಟುಂಬಿಕ ಜೀವನವು ಮುರಿದು ಟಿಸಿಲಾಗಿ ಬೇರೆ ಬೇರೆಯಾದ ಮೇಲೆ ಅಣ್ಣತಮ್ಮಂದಿರೇ ಭಾಗದೇಯರಾಗುವರು. ಇವರೇ ಒಬ್ಬರಿಗೊಬ್ಬರು ಆಗದವರಾಗುವರು. ಇವರಲ್ಲಿ ಹಗೆತನವು ದಿನದಿನಕ್ಕೆ ಬೆಳೆದು, ಒಬ್ಬರಿಗೆ ಕೇಡಾದರೆ ನೋಡಿ, ಮತ್ತೊಬ್ಬರು ನಗುವರು. ಸಮಯ ಸಿಕ್ಕರೆ ಕೇಡು ಬಯಸಿ ಸೇಡು ತೀರಿಸಿಕೊಳ್ಳುವರು.

ಬಾಗಾದಿ ಮಂದನೀ, ಹ್ಯಾಗಾದಿ ನನಮಗನ
ಬಾನಾದಿ ಕೇಳಿ ಹಾಸರತು। ಜನದಾಗ
ಮೂಗ ಮುರಿದಾಡಿ ನಗತಾಳ॥ –ಜಾ–ಸಂ–

ಎಂದು ಚಿಂತಿಸಿ,

ಹೊಂದಿಕಿಲ್ಲದ ಮಾತ, ಹೊಂದಿಸ್ಯಾಡಲಿ ಬ್ಯಾಡ
ಬಂಧಾನ ನಾನು ಬಿಡಲಾರೆ। ಕಣ್ಣೀರು
ಮುಂದಿರಲಿ ಅವರ ಶಿಸುವೀಗೆ॥ –ಜಾ–ಸಂ–

ತನಗಾದ ಮಾತಿನ ತಾಪವನ್ನು ತೋಡಿ ಅದು ಆಡಿದವರ ಮಕ್ಕಳಿಗಿರಲೆಂದು ಹೆಣ್ಣು 'ಚಟಕ' ಮುರಿದು ಶಾಪವನ್ನು ಕೊಡುವುದು.

ಬಾಗಾದಿ ಮನಿಮುಂದ, ಹ್ಯಾಂಗ್ಹಾಯ್ದೊ ನನ ಮಗನ
ಚೌರಿ ಛತ್ತರಕಿ ನೆರಳೀಲೆ। ಬರುವಾಗ
ಬಾನಾದಿ ಮಾರಿ ತಳ್ಯಾಕೊ॥ –ಜಾ–ಸಂ–

ಇಲ್ಲಿ ತಾಯಿಯು ಮಗ ಬರುವ ಐಸಿರಿಯನ್ನು ಕಂಡ ಬಾಗಾದಿಯ ಮನೋವ್ಯಾಪಾರ ವನ್ನು ಶಾಸ್ತ್ರೋಕ್ತವಾಗಿ ಚಿತ್ರಿಸಿದ್ದಾಳೆ. ಸರಿಬಾರದೆ, ಮಾತು ಮಾತಿಗೆ ಹೆಣ್ಣಿನಲ್ಲಿ ಹುಟ್ಟುವ, ಹಗೆತನವಿದು. ಸರಳ ಸ್ವಭಾವದ ಹಳ್ಳಿಯ ಹೆಣ್ಣು;

ಹಚ್ಚಿಕೊಂಡವ್ವಗ, ಚೊಚ್ಚೀಲ ಮಗಳಾದೆ
ಬಿಚ್ಚಾಡಿಕೊಳುವ ವೈರೀಯ। ಮನಿಮುಂದ
ಬಿಚ್ಚಗತ್ಯಾಗಿ ಹೊಳದೇನ॥ –ಗ–ಹಾ–ಪು–೨೯

ವೈರಿಯ ಮುಂದೆ ತನ್ನ ಹಗೆತನವನ್ನು ಉಚಿತವಾಗಿ ವ್ಯಕ್ತಮಾಡಿ ತೋರಿಸಿದೆ. ಕೂಡಿದವರ ಕೂಡ ಪ್ರೀತಿಯಿಂದ ಕೂಡಿ, ಆಗದವರಿಗೆ ಬಿಚ್ಚಗತ್ಯಾಗುವೆನೆಂದು ಹೇಳುವ ಹೆಣ್ಣಿನ ಮಾತು ಪ್ರಪಂಚದ ಮಾತಾಗಿದೆ. ಅಲ್ಲದವರ ಕೂಡ ಮಾತೇನು? ಆಗದವರ ನೆರೆ ಏನು?

ಬಾತೀಗೆ ಬಾರದ್ದು, ಯಾತಕ ನೆನೆಯಾಲೆ
ಜಾತಮಲ್ಲೀಗಿ ನನ ಮನವ। ಬಾಯಾನ
ಜಾಚೇಲಿ ಮಾಡಿ ಉಗಳೇನ॥ –ಗ–ಹಾ–ಪು–೨೯

ಎಂದು ತನ್ನ ಉಗಳಿಗಿಂತಲೂ ಕಡೆ ಮಾಡಿ ಆಗದವರನ್ನು ಕಾಣುವಳು; ಅವರ ಗೊಡವೆಗೆ ಹೋಗದೆ ತನ್ನ ಬಾಳನ್ನು ಸಾಗಿಸುವಳು; ಒಮ್ಮೆ ಹಗೆತನವು ಅವಳಲ್ಲಿ ಮೈಯೂರಿದರೆ ಕೊನೆಗೂ ಅದನ್ನು ಬಿಡಳು. ಆಗದವರನ್ನು ನೋಡಲು ಅವಳ ಮನಸೇ ಆಗದು.

ಸರಗೀಯ ಕೊಂಡ್ಹೆಂಗ, ಸರದಿತ್ತ ನನ ಮನವು
ಸರಿಬಾರದವರು ಇದರೀಗಿ। ಬಂದರ
ಧರಿ ಮೋಜಿನ ಮನವು ನೆಲನೋಡಿ॥ –ಗ–ಹಾ–ಪು–೨೯

ಎಂದು ಅಲ್ಲೋಲ ಕಲ್ಲೋಲವಾದ ಆತ್ಮವು, ಧರಿಯಂತೆ ಗಂಭೀರವಾಗಿ ಬಿಡುವುದು.

'ತಾಯಿಯಾಗದ ಹೆಣ್ಣು ಹೆಣ್ಣೇ?' ಎಂಬ ಉದ್ಗಾರವು, ಹಳ್ಳಿಯ ಹೆಣ್ಣುಮಕ್ಕಳಲ್ಲಿ ಮಾತು ಮಾತಿಗೆ ಬರುವುದು. ಬಂಜೆಯು ಹೆರವರ ಮಕ್ಕಳನ್ನು ಮುಟ್ಟಕೂಡದು, ದಿಟ್ಟಿಸಿ ನೋಡಕೂಡದು; ಮಕ್ಕಳಿದ್ದವರ ಮನೆಗೆ ಹೋಗಕೂಡದು. ಹೀಗೆ ಹೆಣ್ಣುಬಳಗದಲ್ಲಿ ಹೆಣ್ಣಿಗೆ ಬಂಜೆತನದ ಬಹಿಷ್ಕಾರವೇ ಬರುವುದು. ಬಂಜೆಗೆ ಬಂಜೆತನದ ಚಿಂತೆ; ಜನ ಹರಲೆಯ ಚಿಂತೆ, ಹೋದಬಂದಲ್ಲಿ ತಾಯಿ ಮಕ್ಕಳನ್ನು ನೋಡಿ ಚಿಂತೆ; ಹೀಗಾಗಿ ಹೆಜ್ಜೆಜ್ಜೆಗೆ ಜೀವನದಲ್ಲಿ ಉಸುರು ಹಾಕುವಳು.

ಬಾಲಕರಿಲ್ಲದ ಬಾಲಿದ್ಯಾತರ ಜನ್ಮ
ಬಾಡೀಗಿ ಎತ್ತು ದುಡಿದಂಗ। ಬಾಳೆಲೆಯ
ಹಾಸ್ಯುಂಡು ಬೀಸಿ ಒಗೆದಂಗ॥ –ಗ–ಹಾ–ಪು–೬೧

ಎಂದು ಹೆಣ್ಣು "ಹುಟ್ಟಿದ್ದೇಕೆ?" ಎಂಬ ತತ್ವವನ್ನು ಹಾಡಿದ್ದಾಳೆ. ಹಡೆಯದ ಹೆಣ್ಣು ಗಂಡನ ಮನೆಗೆ ಬಾಡಗಿಯ ಎತ್ತು; ಗಂಡನು ಹಾಸಿಉಂಡು ಬೀಸಿ ಒಗೆದ ಬಾಳೆಯ ಎಲೆ; ಎಂಬ ಕಲ್ಪನೆಯು ಹೆಣ್ಣಿಗೆ ಹೊಳೆಯಲು ಅವಳಿಗೆ ಹೇಗಾಗಬಹುದು? ತಾನು ಹೆಣ್ಣಾಗಿ ಬಾಳುವುದೇ ಹಂಗು. ಈ ಹಂಗಿನ ಜೀವ ತನಗೆ ಬೇಡೆಂದು ದೇವ ದೇವತೆಗಳಿಗೆ ಮೊರೆಯಿಟ್ಟು ಬೇಡಿಕೊಳ್ಳುತ್ತಾಳೆ.

ಕಂದನ ಕುಡು ಶಿವನೆ, ಬಂಧನ ಬಿಡಲಾರೆ
ಹಂಗೀನ ಬಾನ ಉಣಲಾರೆ। ಮರ್ತ್ಯದಾಗ
ಬಂಜೆಂಬ ಶಬsದ ಹೊರಲಾರೆ॥ *–ಗ–ಹಾ–ಪು–೬೧*

'ಬಂಜೆಂಬ' ಮಾತು ಅವಳಿಗೆ ದೇಹದಲ್ಲಿ ಕಾಣದ ಮಹಾರೋಗ. ಮಕ್ಕಳಾಗಲೆಂದು ಹಂಬಲಿಸಿ ಹರಕೆಯ ಹೊರುತ್ತಾಳೆ. 'ಮಕ್ಕಳ ಕುಡು ಶಿವನೆ ಮತ್ತೊಂದು ನಾನೊಲ್ಲೆ,' 'ಬಡತನ ನನಗಿರಲಿ, ಭಾಳ ಮಕ್ಕಳಿರಲಿ' ಎಂದು ಶಿವನಿಗೆ ಸೆರಗೊಡ್ಡಿ ಬೇಡಿಕೊಳ್ಳುವಳು. ಮಕ್ಕಳಾಡಿ ಬಂದು ತೊಡೆಯನ್ನೇರಲು ಬಂದ ಬಡತನವು ಬೈಲಾಗುವುದೆಂಬ ದೊಡ್ಡ ಕಲ್ಪನೆಯೂ ಅವಳಲ್ಲಿ ತುಂಬಿರುವುದು. ಹೆಣ್ಣಾಗಿ ಹುಟ್ಟಿದ ಮೇಲೆ ಹೆಣ್ಣುತನ ಸಾರ್ಥಕವಾಗಬೇಕಾದರೆ ಹಡೆದು ಮಕ್ಕಳಾಡಿಸಿದ ಮೇಲೆ.

ಹೆಣ್ಣಜನುಮಕ ಬಂದೆ, ಮಣ್ಣು ಮಾಡಲಿಬ್ಯಾಡ
ಹೆಣ್ಣುತನ ಶಿವನೆ ಜಗದಾಗ। ಕೈ ಮುಗಿವೆ
ಕಂದಯ್ನ ಕೊಟ್ಟು ಕಡಿಮಾಡು॥ *–ಜಾ–ಸಂ–*

ಎಂದು ಕೈಮುಗಿದು ದೇವರ ಮುಂದೆ ಹೆಣ್ಣು ಕೂಗಿಕೊಂಡಿದೆ. ಅವಳ ಬಂಜೆತನವನ್ನು ನೋಡಿ ಗೆಳತಿಯೂ ಕನಿಕರಬಟ್ಟು,

ಕೂಡಲ ಸಂಗಯ್ಯ, ನೀಡು ಮಕ್ಕಳ ನನಗ
ನನಗಲ್ಲ ನನ್ನ ಗೆಳತೀಗೆ। ಕೊಟ್ಟಾರೆ
ಬಾಗಿಲಕ ಹೊನ್ನ ಬಡಿಸೇನೆ॥ *–ಜಾ–ಸಂ–*

ಹೀಗೆ ಹರಕೆಯನ್ನು ಹೊತ್ತಿದ್ದಾಳೆ ಅವಳ ಗೆಳತಿ. ಬದುಕು ಬಾಳುವೆಯು ಮಕ್ಕಳಿಗಾಗಿ. ಮಕ್ಕಳಾಗದ ಬಂಜೆಗೆ–

ಬಂಜೀಯ ಮನಿಮುಂದ, ಸಿಂಗಾರ ಗಿಡ ಹುಟ್ಟ
ಕೊಂಗಿಕೊಂಗೀಲಿ ಗಿಳಿಕೂತು। ಓದ್ಯಾವ
ಬಂಜೆ ನಿನ ಬದಕು ಹೆರವರಿಗೆ॥ *–ಜಾ–ಸಂ–*

ಈ ಮಾತನ್ನು ಕೇಳಿ ಅವಳಿಗೆ ಹೇಗಾಗಬಹುದು? ಹೆಣ್ಣು ಎಂಟ್ಹತ್ತು ಗಂಡು ಮಕ್ಕಳನ್ನು ಹಡೆದರೂ ಕೂಡ, ಹೆಣ್ಣುಮಗುವನ್ನು ಹಡೆಯದೇ ಹೋದರೆ ಅವಳಿಗೆ ಬಂಜೆಂಬ ಶಬುದ ತಪ್ಪುವದಿಲ್ಲೆಂದು ಕಾಣುತ್ತದೆ.

ಹತ್ತು ಗಂಡ್ಹಡದರೂ, ಮತ್ತೆ ಬಂಜೆಂಬೂರ
ದಟ್ಟೀಯ ಉಡುವ ಧರಣೀಯ। ಹಡೆದಾರ
ಹೆತ್ತಾಯಿಯೆಂದು ಕಳಿದಾರ॥ *–ಜಾ–ಸಂ–*

ಹೆಣ್ಣು ಹಡೆದ ಮೇಲೆ ಮಾತ್ರ, ಹೆಣ್ಣು ಹೆತ್ತಾಯಿಯಾಗುವಳು. ಬ್ರಹ್ಮಸೃಷ್ಟಿಯು ಸಾಗಬೇಕಾದರೆ ಹೆಣ್ಣು ಅವಶ್ಯ. ಹೆಣ್ಣು ಹೊಟ್ಟೆಯ ಉಪಕಾರವನ್ನು ತೀರಿಸಲು ಅಸಾಧ್ಯ. ಬಂಜೆತನವು ಮಾನವೋತ್ಪತ್ತಿಗೆ ದೊಡ್ಡ ಕುಂದು. ಇದೆಲ್ಲವನ್ನು ನೋಡಿ ತಾಳಲಾರದೆ–

ಹೆಣ್ಣು ಆಗುದಕಿಂತ, ಮಣ್ಣು ಆಗುದು ಲೇಸು
ಮಣ್ಣೀನ ಮ್ಯಾಲೆ ಮರವಾಗಿ। ಬೆಳದಾರ
ಬಂದವರಿಗೆಲ್ಲ ನೆರಳವ್ವ॥ *–ಗ–ಹಾ–ಪು–೬೧*

ಎಂದು ಹೆಣ್ಣು ಬಂಜೆಯಾಗಿ, ಹೆಣ್ಣಾಗಿರುವದಕ್ಕಿಂತ ಮಣ್ಣಾದರಾಗಲೆಂದು ಹಾಡಿ ಸಮಾಧಾನ ಮಾಡಿಕೊಂಡಿದೆ.

ಪ್ರಪಂಚದಲ್ಲಿ ಕುಟುಂಬದೊಳಗೆ ಒಬ್ಬರಿಗೊಬ್ಬರು ಅಸೂಯೆ ಪಡುವವರು ಮಲತಾಯಿ–ಮಲಮಕ್ಕಳು. ಅವರು ಹೊಂದಿಕೊಂಡು ಹೋಗುವುದು ಬಹಳೇ ವಿರಳ. ತಾಯಿಯ ಕಳೆದುಕೊಂಡು ಮಕ್ಕಳು ಗತಿಗಾಣದೆ ತಿರುಗಾಡಿ ಮಲತಾಯಿಯ ಕೈಯಲ್ಲಿ ಸಿಕ್ಕು ಬಳಲಿದ್ದೂ ಉಂಟು. ಹೊಟ್ಟೆ ಹೊತ್ತು, ಬೇನೆಕೊಟ್ಟ ತಾಯಿಯ ಕರುಳು ಮಕ್ಕಳ ಆಟಪಾಟಗಳನ್ನು ನೋಡಿ ಆನಂದ ಪಡುವುದಲ್ಲದೆ ಮಲತಾಯಿಗೆ ಆ ಮಲಮಕ್ಕಳ ಸುಖದುಃಖವೇ? ಎಲ್ಲವೂ ತನ್ನ ಸುಖಕ್ಕಾಗಿ ಎಂದು ತಿಳಿದವಳಿಗೆ ಮಲಮಕ್ಕಳು 'ಸಿಂದೆ'ಂಬ (ಉತ್ತಮ) ಭಾವನೆಯು ಹುಟ್ಟಲಾರದು. ಮನೆಯಲ್ಲಿ ಗಂಡು ಅವಳಿಗೆ ಮನಸೋತು ಸುಮ್ಮನಿರಬೇಕಾಗುವುದು. ಇಂತಹ ಪರಿಸ್ಥಿತಿಯಲ್ಲಿ ಅಸೂಯೆಯು ಉತ್ಪನ್ನವಾಗುವುದು ಸಹಜ.

ಹಡೆದ ತಾಯಿಯ ಮುಂದ, ಹಾಲು ಕುಡಿದರ ಚೆಂದ
ಮಲತಾಯಿ ಮುಂದ ಮರಿಗುದರಿ। ಏರಿದರ
ಮನದಾಗ ಲಟಕು ಮುರಿದಾಳ॥ *–ಜಾ–ಸಂ–*

ಮಲಮಕ್ಕಳು ಆಡಿ ಬಂದರೆ ಅಸೂಯೆ; ಬೆಳೆದು ದೊಡ್ಡವಾದರೂ ಅಸೂಯೆ. ಒಟ್ಟಿಗೆ ಅವಳಿಗೆ ಆ ಮಕ್ಕಳ ನೋಟವೇ ಬೇಡೆನ್ನಿಸುವುದು ಹೆತ್ತಾಯಿಯನ್ನು ಕಳೆದುಕೊಂಡ ಮಕ್ಕಳು.

ಹೆತ್ತಾಯಿ ನಿನ ಕರುಳ, ಮತ್ತೆಲ್ಲಿ ದೊರೆತಾವ
ಚಿತ್ತರ ಬಗೆಯ ಮಕ್ಕಳಿಗೆ। ಕಂಡಾರ
ಕುತ್ತು ಮಲತಾಯಿ ಮನಿಯಾಗ ॥ *-ಜಾ-ಸಂ-*

ತಾಯಿಯನ್ನು ನೆನಸಿ ಕಳವಳಗೊಂಡಿದ್ದಾರೆ. "ತಾಯಿಗಿಂತ ಬಂಧುವಿಲ್ಲ; ಉಪ್ಪಿಗಿಂತ ರುಚಿಯಿಲ್ಲ," ಎಂಬ ಗಾದೆಯಮಾತೂ ಲೋಕರೂಢಿಯಲ್ಲಿ ಬಂದಿದೆ. ಅಸೂಯೆಯು ದಿನದಿನಕ್ಕೆ ಬೆಳೆದು ಹಳ್ಳಿಗಳಲ್ಲಿ ವಿಕಾರ ರೂಪತಾಳಿ ಅನೇಕ ಅನಾಹುತಗಳು ಸಂಭವಿಸಿದ್ದನ್ನು ಕೇಳಬಹುದು; ಸಂಭವಿಸುವುದನ್ನು ನೋಡಬಹುದು. ಮಲತಾಯಿಯು ಮನೆಯಲ್ಲಿ ಬಲವಂತಳಾದರೆ, ಮಲಮಕ್ಕಳನ್ನು ಪೀಡಿಸುವುದೂ, ಮಲಮಕ್ಕಳು ಬಲವಂತವಾದರೆ ಮಲತಾಯಿಯನ್ನು ಕಾಡುವುದೂ ಬೆಳೆದು ಮನೆಯಲ್ಲಿ ಶಾಂತತೆಯು ಅಳಿದುಹೋಗುವುದು. ಇದನ್ನರಿತ ಹೆಣ್ಣು,

ಸಾವೀರ ಕೊಟ್ಟರು, ಸವತೀಯ ಮನಿಬ್ಯಾಡ
ಸಾವಿರದ ಮ್ಯಾಲೆ ಐನೂರು। ಕೊಟ್ಟರು
ಮಲಮಕ್ಕಳಿರುವ ಮನಿಬ್ಯಾಡ ॥ *-ಗ-ಹಾ-ಪು-೭೪*

ಮಲಮಕ್ಕಳಿದ್ದ ಮನೆಯನ್ನು ನಿರಾಕರಿಸಿದೆ.

ಸವತಿ ಮತ್ಸರವು ಪ್ರಪಂಚದಲ್ಲಿ ಹೆಣ್ಣಿನ ಪಾಲಿಗೆ ಬಂದ ನುಂದದ ಕಿಚ್ಚು. "ಸವತಿಯೆಂದರೆ ಸಾಯುವ ಹೆಣವೂ ಎದ್ದು ಕೂತಿತಂತೆ" ಎಂಬ ಗಾದೆಯ ಮಾತೂ ಬಳಕೆಯಲ್ಲಿದೆ. ಹಳ್ಳಿಗರಲ್ಲಿ ಮಕ್ಕಳಾಸೆಗಾಗಲಿ, ಬದುಕಿನಾಶೆಗಾಗಲಿ, ಇಲ್ಲವೆ ಕಾಮಚೇಷ್ಟೆಗಾಗಲಿ ಮನೆಯಲ್ಲಿ ಚಿಕ್ಕಹೆಂಡತಿಯಿದ್ದರೂ ಗಂಡು ಮದುವೆಯಾಗಲು ಹವಣಿಸಲು

ರಾಯ ಬರತಾರಂತ, ರಾತ್ರೇಲಿ ನೀರಿಟ್ಟ
ರನ್ನ ಬಚ್ಚಲಕ ಮಣಿಹಾಕಿ। ಕೇಳೇನ
ಸಣ್ಣವಳ ಮ್ಯಾಲ ಸಂವತ್ಯಾಕ ॥ *-ಗ-ಹಾ-ಪು-೩೪*

ಅಂಗೀಯ ಮ್ಯಾಲಂಗಿ, ಛಂದೇನೊ ನನರಾಯ
ರಂಬಿ ಮ್ಯಾಲ ರಂಬಿ ಪ್ರತಿರಂಬಿ। ಬಂದರ
ಛಂದೇನೊ ರಾಯ ಮನಿಯಾಗ ॥ *-ಗ-ಹಾ-ಪು-೩೮*

ಎಂದು ಮೊದಲು ಕೈ ಹಿಡಿದ ಹೆಣ್ಣು ಗಂಡನಿಗೆ ಕೇಳದೆ ಬಿಡದು. ಆದರೂ ಗಂಡು ತನಗಾಗಿ ಮತ್ತೊಬ್ಬಳನ್ನು ಮದುವೆಯಾಗುವುದು. ಮೊದಲೇನೊ ಮೋಜು ಕಂಡರೂ ಬರಬರುತ್ತ ಮನೆಯಲ್ಲಿ ಜಗಳೆದ್ದು ಮುಳುವಾಗಿ ಬಾಳುವೆಯು ಕುಂಟಿತವಾಗುವುದು.

ಸವತಿ ಸವತೆರ ಜಗಳ, ಪಟ್ಟೆ ಮಂಚದ ಮ್ಯಾಲೆ
ಹೊನ್ನಸರ ಹರಿದು ಒಳವೊಡೆದು। ನನ ಸವತಿ
ವಾಲಿಕಿತ್ತೋಯ್ತು ಬಿಡ ಸೆರಗ ॥ *-ಜಾ-ಸಂ-*

ಹೀಗೆ ಗಂಡನ ಎದುರಿನಲ್ಲಿ ಸವತಿ ಸವತಿಯರು ಜಗಳಾಡಿ ಸೆರಗು ಕೊಸರಿ ಕೊಳ್ಳುವರು. ಯಾರಿಗೂ ಸುಖವಿಲ್ಲದೆ ಜೀವನವೇ ಬೇಸರಾಗುವುದು. "ಸಾವು ತನಕ ಬಿಡದು ಸವತಿಮಕ್ಕಳ ಜಗಳ" ಎಂಬುದು ಪ್ರತ್ಯಕ್ಷವಾಗಿ, 'ಸಾವಿರ ಕೊಟ್ಟರೂ, ಸವತೆಂಬ ಮನೆ ಬೇಡ' ಎಂದು ಹೆಣ್ಣು ಸವತಿಯಿದ್ದ ಗಂಡನನ್ನು ಮದುವೆಯಾಗಲು ಮನಸು ಮಾಡದು. ಅಕ್ಕತಂಗಿಯರೂ, ಸವತಿಯರಾಗಿ ಬಂದರೆ ಕಡೆಯವರೆಗೂ ಕಡಿದಾಡಿದ್ದುಂಟು. ಅಷ್ಟು ಕಟುತರವಾಗಿದೆ ಈ ಸವತಿ ಮತ್ಸರ! ಇಬ್ಬರ್ಹೆಂಡರಾದ ಗಂಡನ ಗೋಳಂತೂ ಬರೆಯಕೂಡದು.

ಇಬ್ಬರ್ಹೆಂಡರ ಕಾಟಕ್ಕಾಗಿ, ಎದ್ದು ಬಂದೆನೊ ಮಲ್ಲಯ್ಯ।
ಇಬ್ಬರೊಳಗ ಒಬ್ಬಾಕಿ ಹೋದರ ಗುಗ್ಗಳ ಹೊರುವೆನೊ ಮಲ್ಲಯ್ಯ ॥ *-ಕಂ-ಹಾ-*

ಎಂದು ಗಂಡು, ಹರಕೆಯ ಹೊತ್ತದ್ದನ್ನು ಕಂಬಿಯ ಹಾಡಿನಲ್ಲಿ ಹಾಡಿದೆ. ಅಲ್ಲದೆ ಸಾಕ್ಷಾತ್ ಶಿವನೇ ಇಬ್ಬರ್ಹೆಂಡರಾಗಿ ಪಟ್ಟಗೋಳನ್ನು ಹಳ್ಳಿಗರು ಹಾಡುವರು. ಅವರಿಗೆ "ಗೌರಿಗಂಗೆಯರ ಸವತಿ ಮತ್ಸರದ ಹಾಡು" ಅತಿ ಪ್ರಿಯವಾಗಿದೆ. ಈ ಹಾಡನ್ನು ಕೇಳಿದ ಹೆಣ್ಣುಮಕ್ಕಳೇ ಕರ್ನಾಟಕದಲ್ಲಿಲ್ಲ.

ಓಣಿಓಣಿಯ ಗುಂಟ, ಜಂಗಬಾರಿಸ ಬಂದ
ಜಂಗಮನೇನ ಶಿವನೇನ। ಹಿರಿಹೊಳಿಯ
ಗಂಗಿ ತಂದರಸ ಇವನೇನ ॥
ಗಂಗಿ ಗೌರೀ ಜಗಳ, ದುಂದು ಬಿದ್ದಾವಂದ
ಅಂಗಳದ ಕಲ್ಲ ಶಿವ ಮೆಟ್ಟಿ। ಕೇಳ್ಯಾನ
ಗಂಗಿ ನಿನ ಬಾಯಿ ಬಲುಬಾಯಿ ॥

ಹಾಲಗೋಳಿಯ ಮ್ಯಾಲ, ನೀರಗೋಳಿಯ ತಂದ
ನೀರಾಗ ನಿರಗಿ ಒದೆಯೂವ। ಹೆಣ್ಣೀನ
ಹ್ಯಾಂವಕ ತಂದ ಶಿವರಾಯ ॥ *-ಜಾ.ಸಂ.-*

ಎಂದು ಹಾಡಿನಲ್ಲಿ ಸವತಿಮತ್ಸರದಿಂದ ಗೌರಿಯು ಗಂಗೆಯನ್ನು ಆಡಿಕೊಳ್ಳುತ್ತಾಳೆ.

ಪಾದುಹಣ್ಣಿನ ರಸವ, ಹೀರ್‍ಯಾಳ ದುರ್ಪತಿ
ಬಾಡಿದ್ಹಣ್ಣಾಗಿ ಬಂದೀರಿ। ಸೂಭದ್ರೆ
ರಸಹೀರಿ ಕಬ್ಬ ಕಳಿಸ್ಯಾಳ॥ *–ಜಾ–ಮ–ಭಾ–*

'ಜಾನಪದ ಮಹಾಭಾರತ'ದಲ್ಲಿ ಅರ್ಜುನನು ಚದುರಂಗ ಕುಸುಮಾಲೆಯರ ಬಳಿಗೆ ಹನ್ನೆರಡು ವರುಷದ ನಂತರ ಹೋಗಲು, ಅವರು ತಮ್ಮ ಸವತಿ ಮತ್ಸರವನ್ನು ದ್ರೌಪತಿ ಸುಭದ್ರೆಯರ ಮೇಲೆ ತೋರಿಸಿದ್ದಾರೆ. ಹೀಗೆ ಸವತಿ ಮತ್ಸರವು ದೇವದೇವತೆಯರಲ್ಲಿ ಸಹ ಬಿಟ್ಟಿಲ್ಲ. ಅಂದಮೇಲೆ ಮಾನವನ ಪಾಡೇನು? ಎಂದು ಹಳ್ಳಿಯ ಹೆಣ್ಣುಮಕ್ಕಳು ಮಾತಾಡಿ ಸುಮ್ಮನಾಗುತ್ತಾರೆ.

ಹಳ್ಳಿಗಳಲ್ಲಿ ಬೀಗತನ ಮಾಡುವ ಮುಂಚೆ ಬೀಗ ಬೀಗರಲ್ಲಿ ಅನೇಕ ವಾದಗಳು ನಡೆದು ಕಡೆಗೊಂದು ನಿರ್ಧಾರಕ್ಕೆ ಬರುತ್ತಾರೆ. ಹೊಸ ಬೀಗತನ ಮಾಡುವ ಹವ್ಯಾಸಕ್ಕೆ ಅವರು ಹೋಗರು; ಹೋಗುವವರು ಬಹಳ ಕಡಿಮೆ. ತಮ್ಮ ಬಳಗದೊಳಗೆ ಕೈಹಾಕಿ ಬೀಗತನ ಮಾಡುವರು. ಅಕ್ಕತಂಗಿಯರು ಅಣ್ಣತಮ್ಮಂದಿರ ಮಕ್ಕಳನ್ನು ಚಾಜಾಗಿ ಹಿಡಿದು, 'ಅಣ್ಹೆಣ್ಣ ಹಡಿಯಾಲಿ, ನನಪಂಥ ಗೆದಿಯಾಲಿ,' ಎಂದು ಅವರಿಂದ ವಚನ ತಕ್ಕೊಳ್ಳುವುದೂ, ಅಣ್ಣ ತಮ್ಮಂದಿರು ಅಕ್ಕತಂಗಿಯರ ಮಕ್ಕಳನ್ನು ಮದುವೆಮಾಡಿ ಕೊಳ್ಳುವುದೂ, ಹಳ್ಳಿಗರಲ್ಲಿ ಕಂಡುಬರುತ್ತದೆ. ಅಕ್ಕನ ಮನೆಗೆ ಹೋದ ತಮ್ಮನಿಗೆ, ಅಕ್ಕನು ಎಷ್ಟು ಉಪಚಾರ ಮಾಡಿದರೂ ಅವನು ಸಮಾಧಾನವಾಗದಿರಲು ಅವನ ಹಟವನ್ನು ಅರಿತು

ಸಣ್ಣಶಾಂವಿಗಿ ಒಲ್ಲ, ಚಿನ್ನಿಸಕ್ಕರಿ ಒಲ್ಲ
ಹೆಣ್ಣಿಂಬ ಸಬುದ ಬಿಡವೊಲ್ಲ। ನನ ತಮ್ಮ
ಹೆಣ್ಣು ಕೊಡುತೀನಿ ಉಣ್ಣೇಳೊ॥ *–ಗ–ಹಾ–ಪು–೧೮*

ಎಂದು ಅಕ್ಕನು ವಚನಕೊಟ್ಟು ತಮ್ಮನನ್ನು ಸಮಾಧಾನ ಮಾಡುವಳು. ಇಲ್ಲಿ ತಮ್ಮನು ಅಕ್ಕನ ಕೂಡ ಹೆಣ್ಣು ಕೊಡುವೆನೆಂದರೆ ಉಣ್ಣುವೆನು ಎಂದು ಹಟಹಿಡಿದು ವಾದ ಮಾಡುತ್ತಾನೆ. ಅಣ್ಣತಮ್ಮಂದಿರ ಮದುವೆಯಲ್ಲಿ ಹೆಣ್ಣುಮಕ್ಕಳು ಅವರು ಹಡೆದು ಮಗಳನ್ನು ಕೊಡುವುದೇ ತಮಗೆ ಬರತಕ್ಕ ತಾಯ್ಮನೆಯ ಪಾಲೆಂದು ಅವರಿಂದ ವಚನ ತಕ್ಕೊಳ್ಳುವರು. ಮದುವೆಯಲ್ಲಿ ಬೀಗ ಬೀಗರು ಹಾಸ್ಯ ಮಾಡುತ್ತ ಬಿರುಸಾಗಿ ವಾದಕ್ಕೆ ಬಿದ್ದು ಜಗಳ ಹುಟ್ಟಿದ್ದೂ ಉಂಟು.[೧]

ಅಣ್ಣನ ಮನೀಗಿ, ಹೆಣ್ಣು ಬೇಡಲು ಹೋದೆ
ಕನ್ನೂಡಿ ನೋಡಿ ಮರಿಮಾಡಿ। ಅತ್ತೀಗಿ
ಕಣ್ಣ ಚಿವುಟ್ಯಾಳ ಪುರುಷಾಗ॥

ಕಣ್ಣ ಚಿವುಟಲು ಬ್ಯಾಡ, ನಿನ್ಹೆಣ್ಣ ನಾನೊಲ್ಲೆ
ಅನ್ನಿಗರ ಮಗಳು ಅತಿ ಚೆಲುವಿ। ತಗೊಂಡು
ನಿನ್ನೂರ ಮ್ಯಾಲೆ ಬರುವೇನ॥ *–ಜಾ–ಸಂ–*

ಹೀಗೆ ವಾದಿಸಿ ಹೆಣ್ಣು, ಸಟಗೊಂಡು ಹ್ಯಾವದಿಂದ ತನ್ನ ಮಕ್ಕಳಿಗೆ ಅನ್ನಿಗರ ಹೆಣ್ಣನ್ನು ಮದುವೆ ಮಾಡುವುದೂ ಉಂಟು. ಹಳೇಬೀಗತನದಿಂದ ಗಂಡನ ಮನೆಗೆ ಬಂದ ಹೆಣ್ಣಿಗೆ ಗಂಡನ ಮನೆಯು ಅಷ್ಟೊಂದು ಅಪರಿಚಿತವಲ್ಲ. ಅವಳಿಗೆ ಮನೆಯಲ್ಲಿ ಎಲ್ಲರೂ ಪರಿಚಿತರೆ. ಈ ಪರಿಚಯದ ಮೂಲಕ ಆ ಹೆಣ್ಣಿಗೆ ಬಲಬಂದಂತಾಗಿ ಅವಳು ತನ್ನ ನಡೆತೆಯಲ್ಲಿ ಸ್ವಲ್ಪ ಒರಟಾದರೂ ಆಗಬಹುದು.

ಅಣ್ಣನ ಮಗಳಂತ, ಹಮ್ಮೀಲಿ ನಾ ತಂದೆ
ಉಣ್ಣಾಳ ಮುಸುಕ ತಗಿಯಾಳ। ಅಣ್ಣಯ್ಯ
ಮನ್ನೂಣಿ ಹೇಳ ಮಗಳೀಗೆ॥ *–ಜಾ–ಸಂ–*

ಎಂದು ತಂಗಿಯು ಅಣ್ಣನಿಗೆ ಹೇಳುವುದೂ,

ಮನ್ನೂಣಿ ಹೇಳಾಕ, ಹೊನ್ನೆಷ್ಟು ಅಳದೆವ್ವ
ಪುಣ್ಣೇಕ ದಾರಿ ಎರದೀನೆ। ತಂಗೆವ್ವ
ಸೊನ್ನೀಲಿ ಮಗ್ಗ ಇರಹೇಳ॥ *–ಜಾ–ಸಂ–*

ಹೀಗೆಂದು ತಂಗಿಗೆ ಅಣ್ಣನು ಮಗನಿಗೆ ಬುದ್ಧೀ ಹೇಳೆಂದು ಅನ್ನುವುದೂ,

ಪುಣ್ಣೇಕ ದಾರೀಯ, ನೀಯಾಕ ಎರದೀವಿ
ಸಾವಿರಾಳಾಗ ಕೈಕಾಲ। ಹಿಡಿದಾಗ
ನೀ ಹೆಣ್ಣ ಕೊಟ್ಟ ಮಗನೀಗಿ॥ *–ಜಾ–ಸಂ–*

ಎಂದು ತಂಗಿಯು ವಾದ ಮಾಡುವುದೂ, ಕಂಡುಬರುವುದು. ಒಮ್ಮೊಮ್ಮೆ ಈ ಬೀಗತನವು ಕೂಡಿನಡೆಯದ ಮೂಲಕ ಜಗಳೆದ್ದು

---

೧. 'ಜನ ಜೀವನ' ಭಾಗ–೧ 'ಹಾಸ್ಯಗಳು' ಈ ಪ್ರಕರಣ ನೋಡಿರಿ

ನಿಗ್ಗಾರ ಈ ಹೆಣ್ಣ, ಮುಗ್ಗಾವ ಮನಿಯಾಗ
ಹಗ್ಗ ಕೊರಳೀಗಿ ಕಡೆತನಕ । ಹಡದವ್ವ
ಮುಗ್ಗೀಸಿ ಬಿಡುವೆ ಸೆರಗ್ಹರಿದು ॥ -ಜಾ-ಸಂ-

ಹೀಗೆ ಮದುವೆಯಾದ ಗಂಡು 'ಸೋಡ-ಚೀಟ'ಗೆ ಬಂದು ನಿಲ್ಲುವುದು. ಮೊದಲೇ ಹಾದಿಯ ತಪ್ಪಿ ತವರವರೇ ಹೆಣ್ಣಿನಿಂದ 'ಸೋಡಚೀಟಿ'ಯನ್ನು ಕೊಡಸಿದ್ದೂ ಉಂಟು. ವಿಪರೀತವಾಗಿ, ಗಂಡು ಯಾರ ಮಾತನ್ನೂ ಕೇಳದೆ ಸಿಟ್ಟಿಟ್ಟು ಸೆರಗ್ಹರಿದು ಬಿಟ್ಟದ್ದೂ ಉಂಟು. ಈ ವಾದವು ಬಿರುಸಾಗಿ ಹಳ್ಳಿಗಳಲ್ಲಿ ಜಗಳ ಹುಟ್ಟಿ, ಬಣಬಣಗಳು ಬಡಿದಾಡಿ ಕಚೇರಿಯ ಕಟ್ಟೆಯನ್ನು ಏರಿದ್ದೂ ಉಂಟು.

ಹಳ್ಳಿಗಳಲ್ಲಿ ಸಾವುಕಾರ-ಸಾಲಗಾರರು ವಾದಿಸಿ ಜಗಳಕ್ಕಿಳಿಯುವುದೂ ಕಂಡುಬರುವುದು. ಬಡತನದಲ್ಲಿ ರೈತನು ಅಡಚಣೆಗಳಿಗಾಗಲಿ, ಅಥವಾ ಬೇರೊಂದು (ಕಾರಣ)ನಿಮಿತ್ತಕ್ಕಾಗಲಿ ಸಾವುಕಾರನಿಗೆ ಹೊಲ ಮನೆಗಳನ್ನು ಒತ್ತೀಹಾಕಿ ಸಾಲತೆಗೆದು ತನ್ನ ಅಡಚಣೆಯನ್ನು ಸಾಗಿಸುವನು. ಅದನ್ನು ತಿರುಗಿ ಕೊಡುವುದಾಗದೆ ಸಾವುಕಾರೀಪಾಶವನ್ನು ಅರಿಯದ ನಮ್ಮ ಹಳ್ಳಿಗರು ಮನೆಮಾರುಗಳನ್ನು ಕಳೆದುಕೊಂಡು ಬಳಲುವುದೂ ಉಂಟು.

ಮ್ಯಾಲೀನ ಓಣೇಯ, ಮೂಗ ಸಂಪಿಗಿ ಹೆಣ್ಣ
ದೇಕೂದ ಬಂತ ನಿನಗಾಗಿ । ಎಲೆ ಹೆಣ್ಣ
ಒತ್ತಿಬಿದ್ದಾವ ಮನಿಮಾರ ॥ -ಹೋ-ಹಾ-

ಕರಿಯೆತ್ತು ಕಾಳಿಂಗ, ಬಿಳಿಯೆತ್ತು ಮಾಲಿಂಗ
ಸರಕಾರದೆತ್ತು ಶಿವಲಿಂಗ್ನ । ಮಾರಿದರ
ಸೂಳಿ ನಿನ ಸಾಲ ಹರಿಲಿಲ್ಲ ॥ -ಹೋ-ಹಾ

ಎಂದು ಸಾಲ ಮಾಡಿದ ಕಾರಣವನ್ನು ನೆನಪಿಗೆ ತಂದು ವ್ಯಥೆಪಡುತ್ತಾರೆ. ಆದರೇನು? ಹಣ ಸೆಳೆದುಕೊಂಡ ಸೂಳೆಯು ಹೊಣೆಗಾರಳಾಗುವಳೇ? ಕೈಮೀರಿ ಹೋದ ಮಾತು. ಸಾವುಕಾರ-ಸಾಲಗಾರರಲ್ಲಿ ಜಗಳವಾಗಿ ಸಾವುಕಾರನು ನ್ಯಾಯಹೂಡಿ ಹೊಲಮನೆಗಳನ್ನು ಕಸಿದುಕೊಳ್ಳಬಹುದು. ಅದರ ವಿಪರೀತವಾಗಿ ಕಳೆದುಕೊಂಡ ರೈತನು ಮಾನಮಾರ್ಯದೆಗೆ ಅಂಜಿ ಸಾವನ್ನು ತಂದುಕೊಳ್ಳಬಹುದು; ಕುನಸಿಟ್ಟು ಈರ್ಷೆಬಿದ್ದರೆ ಅನಾಹುತವೇ ಸಂಭವಿಸಬಹುದು. ಹೀಗೆ ವಾದ, ಜಗಳಗಳು ಒಂದಿಲ್ಲೊಂದು ಕಾರಣದಿಂದ ಹಳ್ಳಿಗಳಲ್ಲಿ ನಡೆಯುತ್ತ ಬಂದಿವೆ.

ಸುಸೂತ್ರ ಸಾಗದ ಪ್ರಪಂಚದಲ್ಲಿ ಪರಾಧೀನಳಾದ ಹೆಣ್ಣಿಗೆ ಒಂದಿಲ್ಲೊಂದು ಕಂಟಕವು ಬಂದೇ ಬರುವುದು. ಗಂಡನ ಮನೆಯಲ್ಲಿ ಹೆಣ್ಣು ಹೇಗೆ ನಡೆದರೂ ಒಂದು ಮಾತು; ಒಣಹರತಿ, ಅಪವಾದ, ಕೊಂಕುಬಿಂಕದ ಮಾತು, ಮೊದಲಾದುವುಗಳು ಅವಳಿಗೆ ಕಣ್ತುಂಬ ನೀರ ತರದಿರುವು.

ನಕ್ಕಾರೆ ನಗ್ಗೇಡು, ಅತ್ತಾರೆ ಅಳಗೇಡು
ಜಾಡೀಸಿ ನಡೆದೆ ಜನಹರಲಿ । ಶಿವರಾಯ
ಹ್ಯಾಂಗಿದ್ದು ಬರಲೆ ಅನಗಾಲ ॥ -ಜಾ.ಸಂ.-

ಈ ರೀತಿಯಾಗಿ ಬಾಳಿನ ತೊಡಕನ್ನು ಬಿಡಿಸಲು ಅಸಾಧ್ಯವಾಗಿ ಹುಟ್ಟಿಸಿದ ಶಿವನಿಗೆ ಹೆಣ್ಣು ದೀನಳಾಗಿ ಕೇಳಿದೆ. ಬಂದ ಹೆಣ್ಣು ಹಡೆದು, ಗಂಡುಮಗುವನ್ನೆತ್ತಿ ಆಡಿಸುವವರೆಗೂ, ಅವಳಿಗೆ ಮನೆಯಲ್ಲಿ ಮುಖವೆತ್ತಿ ವಾದಿಸಿ ಮಾತಾಡಲು ಅಧಿಕಾರವಿಲ್ಲ. ಹಡೆದರೂ ಒಮ್ಮೊಮ್ಮೆ ಕಾಟ ತಪ್ಪುವುದಿಲ್ಲ.

ಗಂಡನ ಮನೆಯವ್ವ, ಗಂಡು ಗಾರಿಯಮುಳ್ಳ
ಕುಂಡರ ಗೊಡರ ನಿಲಗೊಡರ । ಬೇಗೀಗೆ
ಕಂದಗ ಮಲಿಯ ಕೊಡಗೊಡರ ॥ -ಜಾ.ಸಂ.-

ಈ ರೀತಿಯಾಗಿ ಅವಳಿಗೆ ಗಂಡನ ಮನೆಯು ಗಂಡಗಾರಿಯ ಮುಳ್ಳಾಗುವುದು. ಈ ಎಲ್ಲ ದುಃಖಗಳನ್ನು ಸಹಿಸಲಾರದೆ ಅತ್ತತ್ತು ಸೆರಗತೊಯ್ದ ಹೆಣ್ಣು ಎದೆಗಾರಳಾಗಿ ಪ್ರಪಂಚವನ್ನು ಎದುರಿಸಬಹುದು; ಇಲ್ಲವೆ ಅಳುದುಃಖದಲ್ಲಿ ಬಳಲಿ ಹೆಣ್ಣಿನ ಸ್ವಭಾವಕ್ಕನುಸಾರವಾಗಿ, ಅಬಲೆಯಾಗಿ ತನ್ನ ಬಳಗಕ್ಕೆ ಮೊರೆಹೋಗಬಹುದು. ತನಗಾದ ಅನ್ಯಾಯವನ್ನು ಅತ್ತು, ಬೆನ್ನು ಕಟ್ಟುವವರ ಮುಂದೆ ತೋಡಿ, ವಿಚಾರಿಸಲು ಬೇಡಿಕೊಳ್ಳಬಹುದು. ಹೆಣ್ಣಿಗೆ ಈ ಪರಿಸ್ಥಿತಿಯಲ್ಲಿ ಬೆನ್ನು ಕಟ್ಟಿ ಮಾತಾಡುವವರೆಂದರೆ ಬಹುತರವಾಗಿ ಅವಳ ಅಣ್ಣತಮ್ಮಂದಿರು.

ಹೆಣ್ಣೀನ ಜನುಮಾಕ, ಅಣ್ಣತಮ್ಮರು ಬೇಕು
ಬೆನ್ನು ಕಟ್ಟುವರು ಸಭೆಯೊಳಗ । ಸಾವೀರ
ಹೊನ್ನ ಕಟ್ಟುವರು ಉಡಿಯೊಳಗ ॥ -ಗ-ಹಾ-ಪು-೧೪

ಹೀಗೆ ಹೆಣ್ಣು ತನ್ನ ಬೆನ್ನು ಕಟ್ಟಿ ಮಾತಾಡಲು ಅಣ್ಣತಮ್ಮಂದಿರು ಬೇಕೆಂದು ಆಶೆಮಾಡಿದೆ. ಗಂಡನ ಮನೆಯ ಉಪದ್ರವವನ್ನು ತಾಳಲಾರದೆ ತನ್ನನ್ನು ಸಮರ್ಥಿಸಿಕೊಳ್ಳಲು

ಲಿಂಬೀಯ ಹಣ್ಣಾಂಗ, ತುಂಬೇತ ನನ ಬಳಗ
ಹಂಗೂಸಿ ರಾಯ ಬೈಬ್ಯಾಡ। ತವರೂರ
ಹಿಂಡಿ ನನ್ನಾಕಿ ಅಗಲೀನೆ॥ –ಜಾ.ಸಂ.–

ಎಂದು ಗಂಡನ ಮನೆಗೆ ಎಚ್ಚರ ಬೆದರನ್ನು ಹಾಕುವಳು. ಆದರೆ ಅವಳ ಬೆದರಿಕೆಯು ಗಾಳಿಯ ಮಾತಾಗಿ, ಮತ್ತಿಷ್ಟು ಹಾಸರತವಾಗಿ, ಉಪದ್ರವವು ಮನೆಯಲ್ಲಿ ಇಮ್ಮಡಿಯಾಗುವುದು. ಆಗ ತುಂಬಿ ಉಕ್ಕಿ ಬರುವ ದುಃಖವನ್ನು ಯಾರ ಮುಂದೆ ಹೇಳಿ ಎದೆಯನ್ನು ಹಗುರುಮಾಡಿಕೊಳ್ಳಬೇಕು? ಅವಳ ದುಃಖವನ್ನು ಮನೆಯಲ್ಲಿ ಯಾಕೆಂದು ಕೇಳುವವರಾರು? ಗೆಳತಿಯ ಕಂಡಾಗ

ಕಂಡಂತ ಗೆಳತವ್ವ, ಉಂಡೆಂತ ಕೇಳಿದರ
ಉಂಡೆ ಬಾಗೆಣತಿ ಸುಖವಿಲ್ಲ। ಬಾಳೀಯ
ದಿಂಡ ನೀರಾಗ ಕೊಳೆತ್ಹಾಂಗ॥ –ಜಾ.ಸಂ.–

ಪರಿಪರಿಯಿಂದ ತನ್ನ ಸಮಾಚಾರವನ್ನು ಬಿಚ್ಚಿ ಅಳುತ್ತಾಳೆ. ತವರೂರ, ಪರಿಚಯದ ನೆರೆಹೊರೆಯನ್ನು ಕಂಡರೆ "ತಾಯಿ ನನ್ನ ಜೀವ ಸೊಗಸಿಲ್ಲ। ಬಾಳೀಯ ಹಣಿಗ್ಯಾಗ ಹಣ್ಣು ಕಳಿತ್ಹಾಂಗ," ॥ ಎಂದು ತನ್ನ ಸ್ಥಿತಿಯನ್ನು ಹೇಳಿ.

ತಾಯಿ ಕಾಣದೆ ಜೀವ, ತಾವೂರಿ, ಬಾವೂರಿ
ಭಾಳ ಬಿಸಿಲಾನ ಅವರೀಯ। ಹುವಿನ್ಹಾಂಗ
ಬಾಡತೀನಿ ತಾಯಿ ಕರೆದೊಯ್ಯ॥ –ಗ–ಹಾ–ಪು–೧೧

ಎಂದು ತನ್ನನ್ನು ಕರೆದೊಯ್ಯಲು ತಾಯಿಗೆ ಹೇಳಿ ಕಳಿಸುವಳು. 'ಬೆಳದಿಂಗಳು ನಮಗ ಬಿಸಿಲಾಗಿ,' 'ಎಂಥಲ್ಲಿ ಕೊಟ್ಟಿ ಹಡೆದವ್ವ । ನಡುಮನೆಯ। ಜಂತಿಜರೆದ್ಹಾಂಗ ಜರೆದೇನ," ॥ 'ಹಡೆದವ್ವಗ್ಹೇಳಣ್ಣ, ಕುಡುನೀರು ದಕ್ಕಾವು,' 'ಆರಾಣದಾಗ ಪರದೇಶಿ । ಸತ್ತರ । ಯಾರೀಗೆ ದುಃಖ ಹಡವ್ವ' ॥ ಮೊದಲಾದ ಈ ಅಳು ದುಃಖದ ಉಸಿರುಗಳು ಗಂಡನ ಮನೆಯ ದುಃಖಮಯ ಜೀವನವನ್ನು ವಿಶದ ಪಡಿಸದಿರವು. ತವರವರು ತಾನು ಹೇಳಿ ಕಳುಹಿಸಿದರೂ ತಡೆಯಲು, ಕಳುಹಿಸಿದ ಸುದ್ದಿ ಮುಟ್ಟಲಿಲ್ಲೇನೊ ಎಂಬ ಸಂಶಯಹುಟ್ಟಿ

ಗೋಕಾವಿ ಮುಂದೀನ, ಕಾಕೀಯ ಗಿಡಗಳಿರಾ
ತಾಯಿ ಹಡೆದೌವನ ಬರಹೇಳ। ಅತ್ತಿಮನಿ
ಇಗ್ಗರಿ ಭಾಳ ಇರಲಾರೆ॥ –ಗ–ಹಾ–ಪು.೨೭

ಊರಮ್ಯಾಗ್ಹಾಸಿ, ಬೀಸುವ ಬರಗಾಳಿ
ತೀರಾವ ದುಃಖ ತೋಡುದಕ। ಹಡದವ್ವ
ಮಾರಿ ನೋಡಾಕ ಬರಹೇಳ॥ –ಜಾ–ಸಂ–

ಎಂದು ನಿಸರ್ಗಕ್ಕೆ ಹೆಣ್ಣು ದೀನಳಾಗಿ ಶರಣು ಹೋಗಿದೆ. ಹೆಣ್ಣಿನ ಈ ಕನಿಕರ ಪರಿಸ್ಥಿತಿಯು ತವರಿಗೆ ಮುಟ್ಟದೆ ಇರುವುದೇ?

ಅತ್ತೀಯ ಮನಿಸುದ್ದಿ, ಹತ್ಯಾವ ತವರೀಗಿ
ಸಿಟ್ಟಿನವ ಭಾಳ ನನ್ನಣ್ಣ। ಕೇಳೂತ
ಬಿಟ್ಟಾನೆ ತನ್ನ ಮರಿಗುದರಿ॥ –ಗ–ಹಾ–ಪು–೧೮

ಅಬಲೆಯಾಗಿ ಬಾಯ್ಬಿಡುವ ಹೆಣ್ಣಿನ ಸಹಾಯಕ್ಕೆ ಬಂತು ತವರೂರು! ಬಂದ ಅಣ್ಣತಮ್ಮಂದಿರು ಸುಮ್ಮನಿರುವರೇ? ಗಂಡನ ಮನೆಯಲ್ಲಿ ಮಾತು ಮಾತುಗಳು ನಡೆದು ವಿಚಾರಕ್ಕೆ ಬರಲು, ಸಭೆಯಲ್ಲಿ ತಮ್ಮನ ಮಾತುಗಳು

ಪುಂಡೀಯ ಪಲ್ಲೀಯ, ಚೆಂಡೀಯ ಕಡಿದಂಗ
ಪುಂಡ ನನತಮ್ಮ ಸಾವುಕಾರ। ನಾ ಮಾತು
ಬಂಡೀಗಿ ಕೀಲು ಜಡಿದಂಗ॥ –ಗ–ಹಾ–ಪು. ೧೬

ಇಲ್ಲಿ ತಮ್ಮನ ಮಾತಿನ ಕಸುವನ್ನು ಹೆಣ್ಣು ಅಳೆದು ಬಿಟ್ಟಿದೆ ಸಭೆಯೊಳಗೆ. ಕೂಡಿದ ಸಭೆಯಲ್ಲಿ ಹಡೆದ ತಂದೆಯು ಸಮಾಧಾನದಿಂದ ಹೆಣ್ಣಿನ ನ್ಯಾಯವನ್ನು ನುಂದಿಸಲು

ಹೆಣ್ಣುಮಕ್ಕಳ ನ್ಯಾಯ, ಉಣ್ಣೊಲ್ದೆ ಮಾಡ್ಯಾನ
ಪುಣ್ಯಳ್ಳ ಧೊರೆಯು ಹಡದಪ್ಪ। ನಿನಹೊಲಕ
ಹೊನ್ನೀನ ಮಳೆಯು ಸುರಿಯಾಲೆ॥ –ಜಾ–ಸಂ.–

ಹೀಗೆ ಹೆಣ್ಣು ಹಡೆದ ತಂದೆಯನ್ನು ಹಾಡಿ ಹರಿಸಿದೆ. ಈ ಎಲ್ಲ ಸ್ಥಿತಿಗತಿಗಳನ್ನು ನೋಡಿ, ನ್ಯಾಯ ಮುಗಿದರೂ, ಹಡೆದ ತಾಯಿಗೆ ಹುದುಗದ ದುಃಖವು ಒಟ್ಟರಿಸಿ ಕಣ್ಣೀರು ತುಂಬಲು

ಚಿಂತಿಮಾಡಲು ಬ್ಯಾಡ, ಛೀ ಹುಚ್ಚಿ ಹಡೆದವ್ವ
ಚಿಂತ್ಯಾಗ ಕಾಯ ಇಳಿತರ। ಪಾಂಡವರ
ಅಂಥವರಿಗುಂಟು ವನವಾಸ॥ –ಗ–ಹಾ–ಪು.೨೯

ಚಿಂತಿ ಮಾಡುವರೇನ, ಅಂತರಿಲ್ಲದ ಗಂಗಾ
ಚಿಂತ್ಯಾಗ ಬಾಯ ಇಳತರ। ಮರ್ತ್ಯದಾಗ
ಸಂತೋಷದಿಂದ್ಯಾರು ಇರುವರ ॥ –ಗ–ಹಾ–ಪು–೭೪

ಎಂದು ದೊಡ್ಡ ಉಪದೇಶದ ಮಾತುಗಳನ್ನು ಹೇಳಿ, ಅಳುದುಃಖವನ್ನು ಮರೆತು ಗಂಡನ ಮನೆಯು ತನ್ನದೆಂದು ಹೆಣ್ಣು ಮತ್ತೆ ತನ್ನ ಸಂಸಾರಕ್ಕೆ ಹತ್ತುವುದು.

ಹೆಣ್ಣು, ಪ್ರಪಂಚದಲ್ಲಿ ಬಿದ್ದ ಕೂಡಲೇ ನಿತ್ಯ ಜೀವನದ ಅನೇಕ ಪ್ರಸಂಗಗಳಲ್ಲಿ ಅವಳ ಕೋಮಲವಾದ ಮನಸ್ಸು ನೊಂದು ಬಳಲುವುದು. ಬಾಲ್ಯದಲ್ಲಿ ತಾಯಿತಂದೆಗಳ ಕೈಯಲ್ಲಿಯೂ, ಯೌವನದಲ್ಲಿ ಗಂಡನ ಕೈಯಲ್ಲಿಯೂ, ಮುಪ್ಪಿನಲ್ಲಿ ಮಕ್ಕಳ ಕೈಯಲ್ಲಿಯೂ, ಆಗದವರ ವ್ಯವಹಾರದಲ್ಲಿಯೂ, ಸಂಪರ್ಕದಲ್ಲಿಯೂ, ಹೆಣ್ಣಿಗೆ ಮನಸ್ತಾಪವಾಗುವುದುಂಟು. ಮನೆಯಲ್ಲಿ ಸೊಸೆಯು ಮಾಡಿದ್ದು ಅತ್ತೆಗೆ ಸೇರಿಕೆ ಬರುವುದಿಲ್ಲ. ಭಾವ–ಮೈದುನರಿಗೆ ಸರಿಯಾಗುವುದಿಲ್ಲ. ನಾದುನಿಯರಿಗಂತೂ ಕಹಿಯಾಗಿ ಎಲ್ಲರೂ ಅವಳು ಮಾಡಿದ್ದನ್ನು ಸಿಂತರಿಸಿ (ಅಲ್ಲಗಳೆದು) ಬಿಡುವರು. ತಾನು ಮಾಡಿದ್ದು ಬರಿಗೈಯಾಯಿತೆಂದು ಹೆಣ್ಣು,

ಹೆಂತಾದು ಮಾಡಿದರು, ಸಿಂತರಿಸಿ ಬಿಡುವಾರು
ಹೆಂತಾದ ನನ್ನ ಕೈಗುಣ। ಶಿವಲಿಂಗ
ಬೆಂಕಿಯಂತವರು ಅರುವಿರಲಿ ॥ –ಜಾ.ಸಂ.–

ಎಂದು ದೇವರ ಸಾಕ್ಷಿಯಾಗಿ ತಾನು ಮಾಡಿದ್ದು ಅರಿಕೆ ಇರಲೆಂದು ಹಾಡಿದೆ.

ಕಾಣದ ನೀ ಮಾತ, ಬಂಡಗಂಡರೇನ
ಬಂಥ ಮಾಡುವರ ಗೊಡವೇನ। ತುಂಬೀದ
ಬಂಡಿ ನಡೆದ್ಹಂಗ ನಡೆದೇನ ॥ –ಜಾ.ಸಂ.–

ಹೀಗೆ ಬಿಚ್ಚಿ ಆಡಿದರೆ ಒಂದು, ಆಡದಿದ್ದರೆ ಒಂದು. ಹೀಗಾಗ ಹೆಣ್ಣು ಆಡಿದ್ದನ್ನು ಆಡಿಸಿಕೊಂಡು, ಮನಸ್ಸಿನಲ್ಲಿಯೇ ಕೊರಗಿ ಸುಮ್ಮನಾಗುವುದು.

ಅಲ್ಲದವರ ತಡವಿ, ಜಲ್ಲೆಂದು ನನ ಮನವ
ಕಲ್ಲಾಗ ಕಡ್ಡಿ ಒಡಿದ್ಹಾಂಗ। ನೆಗ್ಗೂಲಿ
ಮುಳ್ಳಾಗ ಹಾದಿ ತಗೆದ್ಹಾಂಗ ॥ –ಜಾ.ಸಂ.–

ಎಂಬ ನೀತಿಯ ಮಾತುಗಳ ಗುಟ್ಟನ್ನು ಅರಿತು ಯಾರ ಗೋಜಿಗೂ ಹೋಗದೆ ತನ್ನ ನೆರಳಿಗೆ ತಾನಂಜಿ ನಡೆದು, ಈ ಪ್ರಪಂಚವನ್ನು ಗೆದೆಯಬೇಕೆಂಬ ಭಾವನೆಯು ಅವಳಿಗೆ ಬರುವುದು. ಉಪದ್ವ್ಯಾಪಿಗಳ ಮನೆಯಲ್ಲಿ ಹೆಣ್ಣಿಗೆ ವಿನಾಕಾರಣ ಮಾತುಗಳೂ ಬರುವುವು. ಹಡೆದ ತಾಯಿಯು ಮಗಳನ್ನು ಕಾಣಲು ಬಂದಾಗ ಉಪದ್ವ್ಯಾಪಿ ಅಳಿಯನು ಹೆಣ್ಣು ಕೊಟ್ಟ ಅತ್ತೆಗೆ ಬಿರಸು ಮಾತಾಡಲು;

ನನ್ನವ್ವ ನನ ತಾಯಿ, ಹಣ್ಣ ಹಾಗಲ ಕಾಯಿ
ಸುಮ್ಮನೆ ಬೈದ ಗರತೀಗೆ। ಹಡೆದವ್ವ
ಉಣ್ಣೇಳ ಕಾಲ ಹಿಡಿದೇನ ॥ –ಜಾ.ಸಂ.–

ಎಂದು ತಾಯಿಗಾದ ಮಾತಿನ ದುಃಖವನ್ನು ಅರಿತ ಹೆಣ್ಣು ತನ್ನನ್ನು ನೋಡಿಯಾದರೂ ಗಂಡನ ಬಿರಿನುಡಿಗಳನ್ನು ಮನಸ್ಸಿಗೆ ತರಕೂಡದೆಂದು, ಕಾಲಹಿಡಿದು ಊಟಕ್ಕೆಬ್ಬಿಸುವಳು. ಮಾಡುವುದೇನು? ಇತ್ತ ನೋಡಿದರೆ ಗಂಡನ ಮಾತಿಗೆ ಮಾರುತ್ತರವನ್ನು ಕೊಡಲಾಗದು; ಅತ್ತ ನೋಡಿದರೆ ಹಡೆದ ತಾಯಿಯ ಮನಸ್ಸನ್ನು ನೋಯಿಸಲಾಗದು. ಹೀಗಾಗಿ ಹುಣ್ಣಾದ ಹೆಣ್ಣಿನ ಮನಸ್ಸಿಗೆ ಮನಸ್ತಾಪದ ಬರೆಬಿದ್ದು, ಕುದಿದು ಬೆಂದು ಹೋಗುವುದು. ಗಂಡಹೆಂಡರ ಪ್ರೇಮದಲ್ಲಿ ಸಂಶಯ ಬಂದರೆ, ಮನಸ್ತಾಪವಾಗಿ ಒಬ್ಬರನ್ನೊಬ್ಬರು ಪರೀಕ್ಷಿಸಲು ನಿಲ್ಲುತ್ತಾರೆ.

ಎಲ್ಲಿ ಹೋಗಿದ್ದಿ ನನ್ನ, ಮಲ್ಲಿಗೆಂಥಾ ರಾಯಾ
ಎಲ್ಲಾರು ನನ್ನ ಬೈದರ। ಆ ಕತಿಯ
ನಿಲ್ಲೀಸಿ ಕೇಳು ನಿನ ಕುದರಿ ॥ –ಗ–ಹಾ–ಪು–೩೮

ಗಂಡನು ಸೂಳೆಯ ಸೋಬತಿ (ಸಹವಾಸ) ಮಾಡಿರುವನೆಂದು ಹೆಂಡತಿಯು ಸಂಶಯದಿಂದ ಜನಹರತಿ ಬರುವುದೆಂದು ಹೇಳಿ, ಅವನು ಮಾಡಿದ ಕಥೆಯನ್ನು ಕುದುರೆಯ ತರುಬಿಸಿ ಹೇಳಲುದ್ಯುಕ್ತಳಾಗುವಳು. ಹೆಂಡತಿಯನ್ನು ಶಂಕಿಸಿ ಗಂಡನು ಆಡಿದ ಮಾತುಗಳನ್ನಾಡಲು ಆ ಗರತಿಗೆ–

ಮನವೊಂದು ಮಾಣೀಕ, ಏನಂದ ಘಾತಕ
ನಾನೊಂದು ನನ್ನ ಮನನೊಂದು। ಕೈಯಾನ
ಬಿಳಿಯೆಲಿ ಬಾಡಿ ರುಚಿ ಹಾರಿ ॥ –ಗ–ಹಾ–ಪು–೨೯

ಎಂದು ಆ ರಾತ್ರಿಯೆಲ್ಲ ವಿಷವಾಗುವುದು ಅವಳಿಗೆ. ಬಿಳಿಯೆಲೆಯು ಬಾಡಿ ರುಚಿ ಹಾರಿದಂತೆ ಪ್ರೇಮ ತುಂಬಿದ ಹೆಣ್ಣಿಗೆ ಕಾಮರುಚಿ ಹಾರಿ ಅವಳ ಹೆಣ್ತನವೇ ಬಾಡುವುದು. ತನ್ನ ಪಾತಿವ್ರತ್ಯವನ್ನು ಶಂಕಿಸಿದ ಗಂಡನಿಗೆ ಘಾತಕನೆಂದು ತಿಳಿದು ಬಾಯಿಬಿಚ್ಚಿ ಹೊರಗಾಡದೆ, ಮನಸಿನಲ್ಲಿಯೇ ನೊಂದು ಅವಳು ತಳಮಳಿಸುವಳು. ಗಂಡನ ಕೈಯಲ್ಲಿ ನಡೆದು ಮನಸ್ತಾಪ ಹೊಂದಿ, ಗಂಡುಮಕ್ಕಳ ತಾಯಿಯಾದ

ಹೆಣ್ಣು, ಮುಪ್ಪಿನ ಕಾಲದಲ್ಲಿ ಮಕ್ಕಳ ಕೈಯಲ್ಲಿಯೂ ಇರಬೇಕಾಗುವುದು. ಹರೆಯದ ಗುಂಗಿನಲ್ಲಿ ಮಕ್ಕಳು ಮನೆಯಲ್ಲಿ ಹೆಂಡರ ಮಾತಿಗಾಗಿ, ತಾಯಿಯ ಕೂಡ ಕೋಪಿಸಲು

ಮಗ ನಿನ್ನ ಹಡಿಲಾಕ, ಮುಗಿಲ ಮುಟ್ಟಿತ ಜೀವ
ಮದನಾರಿ ನನ್ನ ಸೊಸಿ ಬಂದು । ನಡಿವಾಗ
ಮಗ ನಿನ್ನ ಮನವು ಎರಡಾಗಿ ॥ –ಗ–ಹಾ–ಪು–೫೭

ಎಂದು ಹಡೆದ ಹೊಟ್ಟೆಯು ಬರಿದಾಯಿತೆಂದು ದುಃಖಿಸಿದ್ದಾಳೆ. ಇದನ್ನು ನೋಡಿ ಅಕ್ಕತಂಗಿಯರು–

ಒಡಹುಟ್ಟಿದವರೀಗೆ, ಒಡಜಾಲಿ ಮುಳ್ಳಾದ
ಹಡದವ್ವಗೀದ ಹುಲಿಯಾದ । ನನ ತಮ್ಮ
ಮಡದಿಗೆ ಮಾಣಿಕ ಹರಳಾದ ॥ –ಜಾ–ಸಂ–

ಎಂದು ನಿಟ್ಟುಸುರು ಬಿಟ್ಟಿದ್ದಾರೆ. ಆದರೆ ಉಪಾಯವೇನು?

ಹಡದವ್ವ ನೀ ನನ್ನ, ಹಡದೇನು ಸುಡಬೇಕ
ನಡಬಟ್ಟಿಲೊಬ್ಬ ಇದಿರಂಡಿ । ಸೆಟಿಗವ್ವ
ಮನಬಲ್ಲ ಬರಿಯ ಬರಿದಾಳ ॥ –ಜಾ–ಸಂ–

ಎಲ್ಲವೂ ತನ್ನ ಹಣೆಯಬರಹ; ಅದನ್ನು ತಪ್ಪಿಸಲು ಅದಾರಿಗೆ ತಾನೇ ಸಾಧ್ಯ? ಎಂದು ನಸಿಬದ ಮೇಲೆ ಹೊರೆಹಾಕಿ ಹಳ್ಳಿಯ ಹೆಣ್ಣು ಬಾಳುವೆ ಮಾಡುತ್ತ ಬಂದಿದೆ.

ಈ ಪ್ರಪಂಚದಲ್ಲಿ ಹೆಣ್ಣಿಗೆ ಗಂಡೇ ಆಸರ; ಗಂಡಿಗೆ ಹೆಣ್ಣೇ ಆಸರ. ಅಂತೆಯೇ ಹೆಣ್ಣುಗಂಡು ಜೋಡಾಗಿರಲು ಇಚ್ಛಿಸುವುವು. ದುಃಖ ಬಂದಾಗ ಹೆಣ್ಣು ತವರನ್ನು ನೆನಿಸಿ ಹಂಬಲಿಸಿದರೂ, ಅದು ಹೆಂಗೆಂದು ಕಡೆಮಾಡಿ ಗಂಡನ ಮನೆಯನ್ನೇ ನಂಬುವುದು, ಒಬ್ಬರಿಗೊಬ್ಬರು ಆಶ್ರಯಿಸದ ಹೊರತು ಗತ್ಯಂತರವಿಲ್ಲ. ಈ ಕಲ್ಪನೆಯು ಅವರಿಬ್ಬರಿಗೂ ಬರಲು ಎಲ್ಲವನ್ನು ಮರೆತು ಮತ್ತೆ ಇಬ್ಬರೂ ಹೊಸಬರಾಗಿ ಪ್ರಪಂಚಕ್ಕೆ ನಿಲ್ಲುವರು.

ಆ ಸೊತ್ರ ನನ ಮನೆಯು, ಬೇಸೊತ್ರ ನನ ಮನೆಯು
ಕೂಸು ಕಾಡಿದರು ನನ ಮನೆಯು । ತವರೂರು
ಏಸು ದಿನ ಇದ್ರ ನೆರೆ ಮನೆಯು ॥ –ಜಾ.ಸಂ.–

ಎಂದು ತಿಳಿದು ಹೆಣ್ಣು ಗಂಡನ ಮನೆಯನ್ನು ಉದ್ಧಾರ ಮಾಡುವುದು.

❒

೯. ಮಕ್ಕಳ ಆಟ-ಹಾಡುಗಳು

'ಪೀಳಿಗೆಯೇ ರಾಷ್ಟ್ರದ ಏಳಿಗೆ' ಎಂಬ ಮಾತನ್ನು ಯಾರೂ ಮರೆಯಕೂಡದು. ಮಾನವನ ಜೀವನವು ಅವನ ಬಾಲ್ಯದ ಮೇಲೆ ಬಹಳ ಅವಲಂಬಿಸಿರುವುದು. ಆಡಿ-ಹಾಡಿ-ಓಡಾಡದ ಮಕ್ಕಳ ದೇಹಾರೋಗ್ಯ-ಬುದ್ಧಿಗಳು ಸಮೃದ್ಧಿಯಾಗುವ ಬಗೆ ಹೇಗೆ? ತಾಯಿಯ ಹೊಟ್ಟೆಯಿಂದ ಜಾರಿ ಕೂಸು ಜಗತ್ತಿನ ಬೆಳಕನ್ನು ಕಂಡ ಕೂಡಲೇ ಚೀರಿ ಹೊಸೆದಾಡಿ ಅಳುವುದೇ ಅದರ ಮೊದಲನೆಯ ಆಟ. ದಿನಕಳೆದ ಮೇಲೆ ಕಾಲೆತ್ತಿ ಬೆರಳಾಡಿಸಿ ತನ್ನದೇ ಆದ ಒಂದು ರಾಗದಲ್ಲಿ ಕೂಸು ಹಾಡಿ ಆಡುವದನ್ನು ನಾವು ನೋಡಬಹುದು. ಕೂಸು ಬೆಳೆಯಹತ್ತಿದಮೇಲೆ 'ಗುನು, ಗುನು' ಹಾಡಿ ಆಡುವುದು. ಹಾಡಿ ಆಡುವುದೇ ಅದರ ದೇಹಕ್ಕೆ ವ್ಯಾಯಾಮ. ಗದ್ಯಕ್ಕಿಂತ ಪದ್ಯವೇ ಸರಳವಾಗುವದೇನೊ ಎಂಬಂತೆ ಕೂಸು ಮಾತಾಡಲು ಪ್ರಯತ್ನ ಮಾಡುವ ಮಾತುಗಳೂ ಹರಕು ಮುರಕು ರಾಗಗಳೇ! ಆಟದ ಭರದಲ್ಲಿ ತಲ್ಲೀನವಾದ ಮಗು ತನ್ನದೇ ಆದ ಒಂದು ತಾನ ಹಿಡಿದು ಹಾಡಹತ್ತಿತೆಂದರೆ, ಹಾಡಿಗೆ ತಡೆಯಿಲ್ಲ. ಹಾಡು ಅರ್ಥವಿಲ್ಲದಿದ್ದರೂ ಇರಬಹುದು. ಆದರೆ ಆ ರಾಗದೊಡನೆ ಆಡುವ ಆಟವು ಮಾತ್ರ ನೋಡುವವರ ಮನವನ್ನು ಸೆಳೆಯದಿರದು. ಕೂಸು ಮಾತಾಡಬೇಕೆಂಬ ಮಾತುಗಳೆಲ್ಲ ಹಾಡುಗಳಾಗಿಯೇ ಅದರ ದನಿಯಲ್ಲಿ ಪರಿಣಮಿಸುವುವು. ಅಂತೆಯೇ ಜಗತ್ತಿನ ತುಂಬೆಲ್ಲ ಮಕ್ಕಳಾಟದ ಹಾಡುಗಳು ಎಲ್ಲ ದೇಶಗಳಲ್ಲಿಯೂ ಹೇರಳವಾಗಿರುವುವು. ಆಡುವ ಮಕ್ಕಳಿಗೆ ಗದ್ಯಕ್ಕಿಂತ ಪದ್ಯದಲ್ಲಿಯೇ ಅಭಿರುಚಿ ಹೆಚ್ಚು. ಆದುದರಿಂದ ತಮ್ಮ ಆಟಪಾಟಗಳಲ್ಲಿಯೂ ಹಾಡುಗಳನ್ನು ಹಾಡಿ ಆಡಲು ಎಂದಿಗೂ ದಣಿಯರು.

ಪ್ರೊ. ದೇವೇಂದ್ರ ಸತ್ಯಾರ್ಥಿ ಅವರು `Indian Children's Rhymes and Chants' ಎಂಬ ಲೇಖನದಲ್ಲಿ, ``All over the world children live in a song-saturated atmosphere. Rhymes and chants come as easily to them as the green leaves to the forest. Their life is all poetry. They are quite at home with the inspiration of song. Whenever their unsophisticated hearts jump up with the care free simplicity of life, they can not but sing. Indian children have their own rhymes and chants. They are numerous like the forest flowers, which blossom of their own accord in the sweet cap of Mother Nature. Indian folklore is just a rosebush with children's rhymes and chants as its lovely buds."[1] ಎಂದು ಹೇಳಿದ್ದಾರೆ. ಅವರು ಈ ಲೇಖನದಲ್ಲಿ ಭರತಖಂಡದ ಮಕ್ಕಳ ಜಾನಪದ ಗೀತೆಗಳನ್ನು ವಿಶದವಾಗಿ ವಿಮರ್ಶಿಸಿ ಅವುಗಳ ಅಪಾರವಾದ ಮಹತ್ವವನ್ನು ತೋರಿಸಿಕೊಟ್ಟದ್ದಕ್ಕೆ ಭಾರತೀಯರು ಚಿರಋಣಿ.

ಮಕ್ಕಳಾಟದ ಹಾಡುಗಳು ಗಂಡುಮಕ್ಕಳಿಗಿಂತ ಹೆಣ್ಣುಮಕ್ಕಳಲ್ಲಿಯೇ ಹೆಚ್ಚು. ಮಕ್ಕಳಾಟವು ನಮ್ಮ ಪ್ರಪಂಚದ ಅನುಕರಣ. ಈ ಅನುಕರಣ ಬುದ್ಧಿಯು (Instinct of imitation) ಕೆಲವು ಮಕ್ಕಳಲ್ಲಿ ಐದು ವರುಷಕ್ಕಿಂತ ಮೊದಲು ಕಂಡರೂ ಎಲ್ಲ ಮಕ್ಕಳಲ್ಲಿ, ಬಹುತರವಾಗಿ ಐದು ವರುಷದ ನಂತರ ಕಂಡುಬರುವುದು. ತೀರ ಚಿಕ್ಕಮಕ್ಕಳಲ್ಲಿ ಒಡೆದು ಕಂಡುಬರುವ ಆಟಗಳೆಂದರೆ ಗೊಂಬೆಯ ಆಟಗಳು. ಆಡಲು ಅವರಿಗೆ ಗೊಂಬೆ ಮೊದಲಾದ ಜೀನಸುಗಳೂ ಬೇಕು. ಹೆಣ್ಣುಮಗು ಮನೆಯಲ್ಲಿ ತಾಯಿಯು ಜೋಗಳವೆತ್ತಿ ಲಾಲಿಗಳನ್ನು ಹಾಡಿ ಮಗುವನ್ನು ಚಪ್ಪರಿಸಿ ಮಗ್ಗಲು ಮಲಗಿಸುವುದನ್ನು ನೋಡಿ ಗೊಂಬೆಯನ್ನು ತನ್ನ ಮಗುವನ್ನಾಗಿ ಮಾಡಿ ತಾನೂ ತಾಯಿಯ ಅನುಕರಣ ಮಾಡುವುದು. ಗುಂಪಾಗಿ ಮಕ್ಕಳು ಆಡಲು ಹೊರಂಗಳವನ್ನು ಸೇರಲು ಅವರೊಳಗೆ ದೊಡ್ಡದಾದ ಮಗು ತಾಯಿಯನ್ನು ಅನುಕರಣ ಮಾಡಿ ಉಳಿದ ಮಕ್ಕಳಿಗೆ ತಾಯಿಯಾಗಿಯೇ ಬಿಡುವುದು. ಆಟಕ್ಕೆ ತಕ್ಕಂತೆ ಆಟಕ ಸಾಮಾನುಗಳನ್ನು ಕೂಡಿಸಿ ಆಟವನ್ನು ಹೂಡಿಯೇ ಬಿಡುವುದು. ಬಣ್ಣದ ಸುಪಲಿ (ಮುತಲಿ), ಬೀಸುವ ಕಲ್ಲು; ಬಣ್ಣದ ಒನಕೆ ಮೊದಲಾದುವುಗಳೇ ಅವಳ ಅನುಕರಣ ಪ್ರಪಂಚದ ಜೀನಸುಗಳಾಗಿ ಆಟವು ಪ್ರಾರಂಭವಾಗುವುದು. ಇದು ಧೂಳ, ಧುಮಸವೆನ್ನದೆ ಅಂಗಳದ ನಡುವೆ ಮಣ್ಣಲ್ಲಿ ಕುಳಿತು ಕುಟ್ಟುವುದು, ಬೀಸುವುದು, ಕೇರುವುದು ಇವೇ ಮೊದಲಾದ ಆಟಗಳನ್ನು, ಹಾಡುತ್ತಾ ಆಡುವುದು.

ಅಕ್ಕಿ ತೊಳಸೇನೌ, ಅಕ್ಕಿ ತೊಳಿಸೇನೌ
ಬಣ್ಣದ ಒಣಕೀಲೆ ॥

---

1. Modern Review: Vol. 60 p.p. 394.

ಅಕ್ಕಿ ಕೇರೇನೌ, ಅಕ್ಕಿ ಕೇರೇನೌ
ಬಣ್ಣದ ಸುಪಲೀಲೆ ॥

ಅನ್ನಮಾಡೇನೌ, ಅನ್ನ ಮಾಡೇನೌ
ತಾಮರ ತಪಲ್ಯಾಗ ॥

ಬಾನ ಬಸ್ತೇನೌ, ಬಾನ ಬಸ್ತೇನೌ
ಬಿದುರಿನ ಬುಟ್ಟ್ಯಾಗ ॥

ಉಣ್ಣಾಕ ನೀಡೇನೌ, ಉಣ್ಣಾಕ ನೀಡೇನೌ
ಕಂಚಿನ ಗಂಗಳಕ ॥ *–ಜಾ–ಸಂ–*

ಎಂದು ಹಾಡುತ್ತ ಬಣ್ಣದ ಒನಕೆಯಿಂದ ಮಣ್ಣು ಕುಟ್ಟುವುದೂ, ಮುತಲಿಯಿಂದ ಮಣ್ಣು ಕೇರುವುದೂ, ಬಣ್ಣದ ಬೀಸುವಕಲ್ಲಿನಿಂದ ಮಣ್ಣು ಬೀಸಿ ಆಡುವುದೂ ನಡೆಯುವುದು. ತಾಯಿಯಾದ ಮಗು ಉಳಿದ ಚಿಕ್ಕಮಕ್ಕಳಿಗೆ ತಾಯಿಯಂತೆ ಉಣಿಸುವುದೂ, ಆಡಿಸುವುದೂ, ಮಾತಾಡಿಸುವುದೂ ನೋಡುವವರಿಗೆ ಬಲು ಸೋಜಿಗವೆನಿಸದಿರದು.

ಚಿಕ್ಕಮಕ್ಕಳು ಹಿಂಡುಗಟ್ಟಿ ಕೂಡಿದಾಗ ಓಡಾಟದ ಆಟವೆಂದರೆ "ಕಣ್ಣು ಮುಚ್ಚಣಿಕೆ" ಗುಂಪಿನಲ್ಲಿ ದೊಡ್ಡ ಮಗುವೊಂದು ಚಿಕ್ಕ ಮಗುವಿನ ಕಣ್ಣು ಮುಚ್ಚಿ;

ಕದಲು ಬದಲು ಕಂಚೀ ಬದಲು
ಇವರ ಬಿಟ್ಟು ಇವರ್‍ಯಾರು?

ಎಂದು ಕೈ ಮಾಡಿ ಕೇಳಿ ಕೇಳಿ, ಕಡೆಗೆ, ನಿಂತ ಹುಡುಗರಿಗೆ ಅಡಗಿಕೊಳ್ಳಲು ಹೇಳಿ,

ಬಿಟ್ಟು ಬಿಟ್ಟು ಬೆಳಗಾಯಿತು
ತಟ್ಟೀ ಮನೆ ಹಾಳಾಯಿತು
ಹಾಳ ಗೊಡಚಿಯ ದೆವ್ವ ಬಂದು ಬಡೀತ ॥

ಎಂದೆನ್ನುತ್ತ ಕಣ್ಣು ಮುಚ್ಚಿದ ಮಗುವನ್ನು ಕೈಬಿಟ್ಟು ಅಡಗಿಕೊಂಡಿರುವ ಮಕ್ಕಳನ್ನು ಹುಡುಕಿ ಹಿಡಿದುತರಲು ಕಳಿಸುವುದು. ಓಡಾಡಿ–ಹುಡುಕಿ ಹಿಡಿಯುವುದರೊಳಗೆ ಅಡಗಿಕೊಂಡ ಚಿಕ್ಕಮಕ್ಕಳು ಕೂಗಾಡುತ್ತ ತಪ್ಪಿಸಿಕೊಂಡು 'ಪಾಜಿಗೊ' ಎಂದು ಪಚ್ಚೆಯಕಟ್ಟೆಯ ಮುಟ್ಟುವರು. ಹೀಗೆ ಬೇಸರಾಗುವ ತನಕ ಆಡುವುದನ್ನು ಹಳ್ಳಿಯ ಚಿಕ್ಕಮಕ್ಕಳಲ್ಲಿ ನೋಡಬಹುದು. ಈ ಆಟದಲ್ಲಿ ಓಡಾಟ–ಜಿಗಿದಾಟಗಳು ಇರುವ ಮೂಲಕ ಮಕ್ಕಳಿಗೆ ಶರೀರದ ಅಂಗಾಂಗಗಳಿಗೆ ಸಾಕಷ್ಟು ವ್ಯಾಯಾಮವು ದೊರೆಯುವುದು.

ವಯೋಮಾನದಂತೆ ಮಕ್ಕಳ ಆಟಪಾಟಗಳಲ್ಲಿಯೂ ಬದಲಾವಣೆಗಳು ಕಂಡುಬರುವುವು. ಮನೆಯಲ್ಲಿ ತಾಯಿ ತಂದೆಗಳು ಗಂಡಹೆಂಡಿರಾಗಿರುವುದನ್ನು ನೋಡಿದ ಹಲಕೆಲವು ಗಂಡುಹೆಣ್ಣುಮಕ್ಕಳು ಗಂಡಹೆಂಡಿರಾಗಿ ಆಟಹಚ್ಚಿ ಆಡುವುದನ್ನು ಹಳ್ಳಿಯ ಚಿಕ್ಕಮಕ್ಕಳಲ್ಲಿ ಈಗಲೂ ಕಾಣಬಹುದು. ಕೂಡಿ ಅಂಗಳದಲ್ಲಿ ಆಡುವಾಗ ಒಮ್ಮೊಮ್ಮೆ, ಹೆಣ್ಣು ಮಗು ಹೆಂಡತಿಯಾಗಿಯೂ, ಗಂಡುಮಗು ಗಂಡನಾಗಿಯೂ ಆಡಿ ಗಂಡಹೆಂಡಿರ ಅನುಕರಣ ಮಾಡಿ ಕಡಿದಾಡಿದ್ದೂ ಉಂಟು. ಅಷ್ಟೇ ಏಕೆ? ಹಲಕೆಲವು ಹಳ್ಳಿಗಳಲ್ಲಿ ಈ ಚಿಕ್ಕಮಕ್ಕಳ ಕಡಿದಾಟವು ಬಿರುಸಾಗಿ ದೊಡ್ಡವರೂ ಸಹ ಮೋರೆ ಕಟ್ಟಿಕೊಂಡದ್ದೂ ಉಂಟು. ಆದರೇನು? ಆಡುವ ಮಕ್ಕಳು ಆಡುವದನ್ನು ಬಿಡುವುವೇ? ಆಗ ಬಡಿದಾಡಿ ಅತ್ತು ಹೋದ ಮಕ್ಕಳು ಈಗ ಮತ್ತೆ ಅಂಗಳದಲ್ಲಿ ಸುತ್ತಕೂಡಿ ಆಟಕ್ಕೆ ಬರುವುವು.

ಒಂಬತ್ತು ಅಥವಾ ಹತ್ತು ವರುಷದ ಹೆಣ್ಣುಮಗುವಿಗೆ ಹೆಣ್ಣುಗಂಡೆಂಬ ಮನವರಿಕೆಯಾಗಲು ಗಂಡುಮಗುವಿನ ಕೂಡ ಆಟವಾಡುವುದನ್ನೇ ಬಿಡುವುದು. ನಾಚಿಕೆ, ಹೆಣ್ಣುತನ ಮೊದಲಾದುವುಗಳು ಅವಳಲ್ಲಿ ಒಡಮೂಡಹತ್ತುವುವು. ತಾನು ಹೆಣ್ಣೆಂಬ ಅರಿಕೆಯಾಗಹತ್ತಲು ಹೆಣ್ಣುಮಕ್ಕಳ ಹಿಂಡನ್ನು ಕೂಡಿಸಿಕೊಂಡು, ವಯೋಮಾನಕ್ಕನುಗುಣವಾಗಿ ಆಟಗಳನ್ನು ಆಡುವುದು ಕಂಡುಬರುವುದು. ಇದು ಅವಳ ದೇಹ ಬಲಿತು ಆರೋಗ್ಯ ಬೆಳೆಯುವ ಕಾಲ. ಈ ಕಾಲದಲ್ಲಿ ಹಾಡಿ ಆಡುವ ಆಟಗಳು ಅವಳ ಶರೀರಕ್ಕೆ ಸಾಕಷ್ಟು ವ್ಯಾಯಾಮ ಒದಗಿಸಿಕೊಟ್ಟು, ಅದನ್ನು ಅಂದವಾಗಿಯೂ, ಬಲಾಢ್ಯವಾಗಿಯೂ ಮಾಡುವುವು. ಸುತ್ತು ನಿಂತುಕೊಂಡು ಎಡುಗೈ ಟೊಂಕಕ್ಕೆ, ಬಲಗೈ ಹುಬ್ಬಿಗೆ ಹಚ್ಚಿ.

ಅಕಕ್ಕನಮಲ, ಕಾಜಿನ ಕಮಲ
ಪಾಜೀ ಪೌ! ಪಕ್ಕಾ ಪೌ! ॥

ಎಂದು ಹಾಡುತ್ತ ಹೆಜ್ಜೆಯೊಡನೆ ಒಳಗೊಮ್ಮೆ ಹಣಿಕಿ, ಹೊರಗೊಮ್ಮೆ ಇಣಿಕಿ, ಬಾಗಿಬಳುಕಿ ಸುತ್ತಿರುಗಿ ಕಡೆಗೆ ತನ್ನ ಹುದ್ದರಿಯೊಡನೆ ಕೈಗೆ ಕೈಕೊಟ್ಟು, 'ಗಂಗಾಳ ಮುರಗೆ'ಯನ್ನಾಗಲಿ, ಅಥವಾ ಕೂತು. 'ಇಬಲೆ'ಯನ್ನಾಗಲಿ ಆಡುವದನ್ನು ಹಳ್ಳಿಯ ಮಕ್ಕಳಲ್ಲಿ ಕಾಣಬಹುದು.

ಬಗಟ್ ಬಗರಿ, ಬಣ್ಣದ ಚೌರಿ ॥
ಬಗಟ್ ಬಗರಿ ಬಾಸಿಂಗ, ನಂದೀಕೋಲು ಲಾಲಿಂಗ ॥
ಅಂಗ್ಯಾಗ ಕಸ್‌ಕಸಿ, ಗಂಡಾಹೆಣ್ತಿ ಖುಸ್‌ಖುಸಿ ॥
ಬಾರ್‌ಕೋಲ ಬಿಗಿಬಿಗಿ, ಎಣ್ಣೆಹೋಳ್ಗಿ ಕರಿಕರಿ ॥
ನಾನುದ್ದೌ, ನೀನುದ್ದ್ಯಾ ॥

ಎಂಬ ಅನೇಕ ಪಲ್ಲವಿಗಳನ್ನು ತಮಗೆ ಬೇಕಾದಂತೆ ಎತ್ತಿ, ಕೈಗೆ ಕೈಕೊಟ್ಟು ಸುತ್ತಿರುಗಿ ರಭಸದಿಂದಾಡುವ ಈ 'ಗಂಗಾಳ ಮುರಗಿ' ಆಟದಲ್ಲಿ ಒಬ್ಬಳೊಂದು ಪಲ್ಲವಿಯ ತುಂಡನ್ನೂ, ಇನ್ನೊಬ್ಬಳೊಂದು ಅದೇ ಪಲ್ಲವಿಯ ಮುಂದಿನ ತುಂಡನ್ನೂ ಮೇಳ ಮಾಡಿ ಸರತಿಯಂತೆ ಹಾಡಿ ದಣಿಯುವವರೆಗೆ ಹಾಡುವರು. ಈ 'ಗಂಗಾಳ ಮುರಗಿ' ಆಟಕ್ಕೆ ಹಲಕೆಲವು ಭಾಗಗಳಲ್ಲಿ 'ಉದ್ದುದ್ದ್ಯಾ' 'ಬಗಟ ಬಗರಿ' ಎಂದೂ ಕರೆಯುವರು. ಇದರಲ್ಲಿ ಕತ್ತರಿಯ ಮೇಲೆ ಕೈ ಹಿಡಿದು, ನಿಂತಲ್ಲಿಯೇ ಜಗಿ ಜಗಿದು ಸುತ್ತಿರುಗಿ ಕುಣಿಯುವುದರಿಂದ ಶರೀರಕ್ಕೆ ವ್ಯಾಯಾಮವಾಗುವುದು. ಈಗಿನ, ಶಾರೀರ ಶಿಕ್ಷಣದಂತೆ ಚಿಕ್ಕಮಕ್ಕಳು ಎತ್ತರವಾಗಿ ಬೆಳೆಯುವುದಕ್ಕೆ ಮೊದಲಿನಿಂದಲೂ ಹಳ್ಳಿಗರಲ್ಲಿ ಇದೊಂದು ಉತ್ತಮವಾದ ವ್ಯಾಯಾಮ ಸಾಧನ. ತಾಯಿಯಾಗುವ ಹೆಣ್ಣುಮಗುವಿಗೆ ಸಶಕ್ತವೂ, ಆರೋಗ್ಯವೂ ಉಳ್ಳ ಗರ್ಭಾಶಯವು ಬೇಕು. ಶಾರೀರಿಕ ಶಿಕ್ಷಣವನ್ನು ಶಾಸ್ತ್ರೋಕ್ತವಾಗಿ ಅರಿಯದ ನಮ್ಮ ಹಳ್ಳಿಯ ಹೆಣ್ಣುಮಕ್ಕಳು 'ಪಾಜಿಪೌ' ಆಡಿದ ಮೇಲೆ ಜದ್ದಿಗೆ ಬಿದ್ದು 'ಇಬತಿ' ಎಂಬ ಒಂದು ಆಟವನ್ನು ಆಡುವರು. ತುದಿಗಾಲಿನ ಮೇಲೆ ಕೂತು, ಎರಡೂ ಕೈಗಳನ್ನು ಮುಂದೆ ಚಾಚಿ ರಭಸದಿಂದ ಕಾಲುಗಳನ್ನು ಕಿತ್ತು, ಒಮ್ಮೆ ಬಲಗಾಲು ಮುಂದೆ, ಮತ್ತೊಮ್ಮೆ ಎಡಗಾಲು ಮುಂದೆ ಜಗಿಸುತ್ತ 'ಇಬತಿ' 'ಇಬತಿ' ಎಂದು ಒಂದೇ ಸವನೆ ಅನ್ನುತ್ತ ಕೂತಲ್ಲಿಯೇ ಕಾಲ ಜಗಿಸಿ ಸರಿದಾಡುವ ಈ ಆಟವನ್ನು ಆಡುವರು. ಬಲವುಳ್ಳ ಹೆಣ್ಣುಮಕ್ಕಳು ಜಿದ್ದು ಹಾಕಿ ತಾಸು ತಾಸುಗಳವರೆಗೆ ಒಂದೇ ಸವನೆ ಈ 'ಇಬತಿ'ಯನ್ನು ಹಾಕುವರು. ಇದು ಒಂದು ಗುಂಪಾಟವಿರುವ ಮೂಲಕ ಬೇಕಾದಷ್ಟು ಹೆಣ್ಣುಮಕ್ಕಳು ಕೂಡಿ ಒಮ್ಮೆಲೇ ಆಡಬಹುದು. ಈ ಆಟದಿಂದ ಹೆಣ್ಣುಮಕ್ಕಳ ನಡುಕಟ್ಟು, ಗರ್ಭಾಶಯ, ಮೊದಲಾದುವುಗಳಲ್ಲಿ ಸ್ನಾಯುಗಳು ಬಲಗೊಳ್ಳುವುದರಿಂದ ಈ ಆಟವನ್ನು ಹಳ್ಳಿಗಳಲ್ಲಿ ದೊಡ್ಡ ಹೆಣ್ಣುಮಕ್ಕಳೂ ಆಡುವುದನ್ನು ಈಗಲೂ ನೋಡಬಹುದು. ಇಂತಹದೇ ಇನ್ನೊಂದು ಗುಂಪಾಟದಲ್ಲಿ ಹಳ್ಳಿಯ ಹಿರಿಕಿರಿಯ ಹೆಣ್ಣುಮಕ್ಕಳು ದುಂಡಗೆ ನಿಂತು ಬಲಗೈಯಿಂದ, ಉಟ್ಟಸೀರಿಯ ನೀರಿಗೆಗಳನ್ನು ಎತ್ತರಸಿ ಹಿಡಿದು ಎಡಗೈಯನ್ನು ಟೊಂಕದ ಮೇಲಿಟ್ಟು ಮೊಣಕಾಲ ಕುಣಿಸುತ್ತ

ಇಸ್ಸಿಸ್ಸೌ, ಇಸಗಾತೌ।
ಸಣ್ಣಸೀರಿಮ್ಯಾಲೆ ಎಣ್ಣಿ ಬಿದ್ದ್ ತೌ॥

ಹೀಗೆನ್ನುತ್ತ ಕಾಲುಜೋಡಿಸಿ ಎತ್ತಿ, ಮುಂದೊಮ್ಮೆ ಹಿಂದೊಮ್ಮೆ ಮೊಣಕಾಲುಗಳನ್ನು ಕುಣಿಕಿಸಿ ನಿಂತಲ್ಲಿಯೇ ಕುಣಿಕುಣಿದು ಆಡುವರು. ಹಲಕೆಲವು ಹೆಣ್ಣುಮಕ್ಕಳು ಜಿದ್ದಿಗೆ ಬಿದ್ದು ಈ ಆಟವನ್ನು ಅನೇಕ ತಾಸುಗಳವರೆಗೂ ಆಡುವರು. ಶಾರೀರಿಕ ಶಿಕ್ಷಣದ ಹೊಸ ಪದ್ಧತಿಯಂತೆ ಈ ಆಟದಿಂದ ಹೆಣ್ಣುಮಕ್ಕಳಿಗೆ ಕಿಬ್ಬೊಟ್ಟೆ, ಯಕೃತ್ತು, ಬೆನ್ನು ಹುರಿ ಮೊದಲಾದ ಹೊಟ್ಟೆಯ ಕೆಳಭಾಗದ ಅಂಗಗಳಿಗೆ ಸಾಕಷ್ಟು ವ್ಯಾಯಾಮ ದೊರೆಯುವುದು.

ಹುದ್ದರಿಯಾಗಿ, ಚಿಕ್ಕಮಕ್ಕಳು ಆಡುವ ಇನ್ನೊಂದು ಆಟವೆಂದರೆ–

ಅಡಕಲ ಗಡಿಗ್ಯಾಗ ಆಡುನ ಬಾ।
ನಿಬ್ಬಣ ಬಂದೈತಿ ನೋಡುನ ಬಾ॥

ಎಂದು ಪಲ್ಲವಿಯನ್ನು ಮೇಳ ಮಾಡಿ, ಒಬ್ಬರಿಗೊಬ್ಬರು ಹೆಗಲ ಮೇಲೆ ಕೈಹಾಕಿ ವಿರುದ್ಧ ದಿಕ್ಕಿಗೆ ನಿಂತು ಚಕ್ರಾಕಾರವಾಗಿ (ಬಟ್ಟಗೆ) ತಿರಗುವರು. ಈ ಆಟವನ್ನು ವಿಶೇಷವಾಗಿ ಬೆಳದಿಂಗಳಿನಲ್ಲಿ ಆಡುವರು. ಬೆಳುವಲದ ಬೆಳಗಿನಂಗಳದ ಸೊಬಗಿನಲ್ಲಿ 'ಅಗಸ್ ಬುಗಸ್' ಎಂಬ ಆಟವನ್ನು ಆಡದ ಬೆಳುವಲ ಹೆಣ್ಣುಮಕ್ಕಳಿಲ್ಲ. ಇದು ಒಂದು ತರದ 'ಕಪ್ಪೆಯ ಜಿಗಿದಾಟ'. ಹಳ್ಳಿಯ ಚಿಕ್ಕ ದೊಡ್ಡ ಮಕ್ಕಳು ಹುದ್ದರಿಗಳಾಗಿ ಎದುರು ಬದಿರಾಗಿ ಕೆಲವೊಂದು ಅಂತರದ ಮೇಲೆ ಕೂತು ಸರತಿಯ ಪ್ರಕಾರ "ಅಗಸ್ ಚುಗಸ್, ಅಕ್ಕಿ ತೊಳಿಸ್" ॥ ಎಂದೆನ್ನುತ್ತ ಎರಡೂ ಕೈಗಳನ್ನು ನೆಲದ ಮೇಲೆ ಊರಿ ಕಪ್ಪೆಯ ಹಾಗೆ ಜಿಗಿಯುತ್ತ ಒಬ್ಬರೊಬ್ಬರ ಕೂತ ತಳವನ್ನು ಮುಟ್ಟಿ, ತಿರುಗಿ ತಾವು ಕೂತ ತಳಕ್ಕೆ ಬಂದ ಮೇಲೆ ಉಗುಳಿ ಬೊಗಸಿಯಿಂದ ಮುಚ್ಚಿ,

ಥೂ ನನ್ನೆಮ್ಮಿ ಈತೆವ್ವ। ಏನೀತೆವ್ವ?
ಹೆಣಗಾರವ್ವ। ನನಗಟ ಗಿಣ್ಣ ಕೊಡವ್ವ?
ಆ ನಾಯಿ ತಿಂದು, ಈ ನಾಯಿ ತಿಂದು
ಉಳಿದದ್ದು ನಿನ್ನ ಗಂಡನ ಮೀಶಿಗೊರಿಸೌ॥

ಹೀಗೆ ಗೇಲಿಯ ಮಾಡಿ ಖೊಳ್ಳೆಂದು ನಕ್ಕು ಓಡಿಹೋಗುವರು. ಹಾಸ್ಯ ಮಾಡಿದವಳನ್ನು ಕೂತವಳು ಹಿಡಿಯಲು ಬೆನ್ನು ಹತ್ತುವಳು. ಇಂತಹ ಅನೇಕ ಪಲ್ಲವಿಗಳೊಡನೆ ಬೆರೆತ ಮಕ್ಕಳ ಆಟಗಳನ್ನು ನಾವು ಕರ್ನಾಟಕದ ತುಂಬೆಲ್ಲ ನೋಡಬಹುದು. ಈ ಆಟಗಳು ಚುಟುಕು ಪಲ್ಲವಿಗಳ ತಾನದೊಂದಿಗೆ ಇರುವ ಮೂಲಕ ಆಡುವ ಮಕ್ಕಳಿಗೆ ದಣಿವೇ ಅನಿಸದು.

ದಿನದಿನಕ್ಕೆ ದೊಡ್ಡವರಾಗುವ ಚಿಕ್ಕಮಕ್ಕಳು ಪ್ರಪಂಚವನ್ನು ತಿಳಿದುಕೊಳ್ಳಲು ಪ್ರಯತ್ನ ಮಾಡುವುವು. ಅವರ ಆಟಪಾಟಗಳು ನಿತ್ಯ ಪ್ರಪಂಚಕ್ಕೆ ಹೊಂದಿರುವ ಮೂಲಕ ನೋಡುವವರಿಗೆ ಮಕ್ಕಳು ಪ್ರಪಂಚವನ್ನು ಅನುಕರಣ ಮಾಡುವುದಲ್ಲದೆ, ಅಣಕಿಸುವುದೇನೊ ಎಂದು ಭಾಸವಾಗುವುದು. ಮದುವೆಯು ಹೆಣ್ಣಿನ ಜೀವನದಲ್ಲಿ ಆಗಲಿ, ಗಂಡಿನ ಜೀವನದಲ್ಲಿ ಆಗಲಿ ಒಂದು ಹೊಸ ಅನುಭವ. ಇನ್ನೂ ನೆರೆಯದ ಹೆಣ್ಣುಮಕ್ಕಳು ಒಂದೆಡೆ ಕೂಡಿದರೆ ಗೊಂಬೆಯ ಮದುವೆಯ ಆಟಗಳನ್ನು ಹೂಡಿ ಆಡುವುದನ್ನು ಹಳ್ಳಿಯ ಹುಡುಗರಲ್ಲಿ ಈಗಲೂ ನೋಡಬಹುದು. ಮದುವೆಯ ಆಟವನ್ನು ಹೂಡಿದ ಮಕ್ಕಳಲ್ಲಿ ಗಂಡಿನವರು, ಹೆಣ್ಣಿನವರು ಎಂದು ಇತ್ತಂಡಾಗಿ ಲೋಕರೂಢಿಯ ಹಿರಿಯರಂತೆ ಮಾತು ಕಥೆಗಳನ್ನು ಬೆಳಸುವರು. ಗಂಡಿನವರು ಕನ್ಯೆಯನ್ನು ನೋಡುವುದೂ, ಹೆಣ್ಣಿನವರು ವರನನ್ನು ನೋಡುವುದೂ,

ನಡೆಯುವುದು. ಇದಾದ ಮೇಲೆ ಕೊಡುತಗೊಳ್ಳುವ ಪ್ರಸಂಗದ ಮಾತೆತ್ತಿ ಚರ್ಚೆಗಳನ್ನು ಮಾಡುವರು. ಈ ಚರ್ಚೆ ಸಂವಾದವನ್ನು ಆಟ ಹೂಡಿದ ಮಕ್ಕಳು ಗಂಡುಹೆಣ್ಣಿನ ಪಂಗಡಗಳೆಂದು ಎದಿರುಬದಿರು ನಿಂತು ಸರಾಗದೊಡನೆ ಹಾಡುತ್ತ, ಬೇಕಾದ ಮಾತಿಗೆ ಹಾಡಿನಲ್ಲಿ ಪ್ರಶ್ನೆಗಳನ್ನು ಕೇಳುತ್ತ ಹೋಗುವರು. ಹಾಕಿದ ಪ್ರಶ್ನೆಗಳಿಗೆ ಸಂಬಂಧಿಸಿದ ಪಂಗಡದವರು ಉತ್ತರ ಕೊಡುತ್ತಹೋಗುವರು.

ಗುಜಗುಜಮಾಪುರಿ[೨]

ಇತ್ತಂಡದವರು : ಗುಜಗುಜ ಮಾಪುರಿ ಆಡೋಣ
ಗುಜೇರ ಮಾಪುರಿ ಆಡೋಣ
ಸಾಮದಂಡಿ ಆಡೋಣ
ಸರಲೋಕಕ್ಕೆಲ್ಲ ತಿಳಿಸೋಣ ॥ಪ॥

ಇತ್ತಂಡದವರು : ಗುಜಗುಜ ಮಾಪುರಿ ಗಂಡವರು
ಗುಜೇರ ಮಾಪುರಿ ಹೆಣ್ಣವರು
ಸಾಮದಂಡಿ ಹೆಣೆಯವರು
ಸರಲೋಕಕ್ಕೆಲ್ಲ ಸಭೆಯವರು ॥೧॥

ಇತ್ತಂಡದವರು : ಗುಜಗುಜ ಮಾಪುರಿ ಗೇನೈತೆ
ಗುಜೇರ ಮಾಪುರಿಗೇನೈತೆ
ಸಾಮದಂಡಿಗೇನೈತೆ
ಸರಲೋಕಕ್ಕೆಲ್ಲ ಏನೈತೆ ॥೨॥

ಗಂಡು : ಗುಜಗುಜ ಮಾಪುರಿ ಗಂಡೈತಿ
ಗುಜೇರ ಮಾಪುರಿ ಹೆಣ್ಣವರ
ಸಾಮದಂಡಿಗೆ ಗಂಡೈತಿ
ಸರಲೋಕಕ್ಕೆಲ್ಲ ಗಂಡೈತಿ ॥೩॥

ಹೆಣ್ಣು : ಗುಜಗುಜ ಮಾಪುರಿ ಗಂಡವರ
ಗುಜೇರ ಮಾಪುರಿ ಹೆಣ್ಣೈತಿ
ಸಾಮದಂಡಿಗೆ ಹೆಣ್ಣೈತಿ
ಸರಲೋಕಕ್ಕೆಲ್ಲ ಹೆಣ್ಣೈತಿ ॥೪॥

ಗಂಡು : ಗುಜಗುಜ ಮಾಪುರಿಗೇನೇನ
ಗುಜೇರ ಮಾಪುರಿಗೇನೇನ
ಸಾಮದಂಡಿಗೇನೇನ
ಸರಲೋಕಕ್ಕೆಲ್ಲ ಏನೇನ ॥೫॥

ಚೌಕು–೧

ಗಂಡು: ಒಂದ ರೂಪಾಯಿ ಕೊಡತಿವಿ
ಹೆಣ್ಣ ಕೊಡತಿಗೆ ಹೆಣ್ಣ ಕೊಡತಿಗೆ ॥

ಹೆಣ್ಣು : ಒಂದು ರೂಪಾಯಿ ಎಂಬುದು
ಹಾಸೂದು ಹಾಸುಣಕಿ
ಬೀಸೂದು ಬೀಸುಣಕಿ
ಗಂಡನ ಮನಿದುಡುಕಿ
ನಿನ್ನಂಥ ಬಿಡಕಿಗೆ
ಹೆಣ್ಣಿಲ್ಲತಿಗೆ ಹೆಣ್ಣಿಲ್ಲತಿಗೆ ॥

ಗಂಡು : ಗುಜಗುಜ ಮಾಪುರಿಗೇನ್ನಸ್ತ
ಗುಜೇರ ಮಾಪುರಿಗೇನ್ನಸ್ತ
ಸಾಮದಂಡಿಗೇನ್ನಸ್ತ
ಸರಲೋಕಕ್ಕೆಲ್ಲ ಏನ್ನಸ್ತ ॥೬॥

---

೨. ಈ ಹಾಡಿನ ಬೇರೆ ಬೇರೆ ರೂಪಾಂತರಗಳು ಸಿಗುತ್ತವೆ. ಅವುಗಳಲ್ಲಿ ಉತ್ತಮವೆನಿಸಿದ್ದನ್ನು ಇಲ್ಲಿ ಎತ್ತಿಕೊಳ್ಳಲಾಗಿದೆ.

ಚೌಕು–೨

ಗಂಡು: ವಂಕಿ ಸರಗೀಯ ಇಡತಿವಿ
ಹೆಣ್ಣ ಕೋಡತಿಗೆ ಹೆಣ್ಣ ಕೋಡತಿಗೆ ॥

ಹೆಣ್ಣು: ವಂಕಿ ಸರಗೀಯು ಭಂಗಾರ
ಮಯ್ಯೋಳು ಒಣಭಾರ
ಮಗಳೀಗೆ ದುಡುಕಿಯ
ಕಟಕಟಿ ಬಲು ಜೋರಾ
ನಿನ್ನಂಥ ಬದಿಕಿಗೆ
ಹೆಣ್ಣಲ್ಲತಿಗೆ ಹೆಣ್ಣಲ್ಲತಿಗೆ ॥

ಗಂಡು: ಗುಜಗುಜ ಮಾಪುರಿ ಮದುವೀಗೆ
ಗುಜೇರ ಮಾಪುರಿ ಹೆಣ್ಣವರ
ಸಾಮದಂಡಿ ತಂದೀವಿ
ಸರಲೋಕಕ್ಕೆಲ್ಲ ಕರದೀವಿ ॥೭॥

ಚೌಕು–೩

ಗಂಡು: ಬೇಡಿದ್ದ ಕೊಡತಿವಿ ಬೇಡಿದ್ದ ಇಡತಿವಿ
ಹೆಣ್ಣ ಕೋಡತಿಗೆ ಹೆಣ್ಣ ಕೋಡತಿಗೆ ॥

ಹೆಣ್ಣು: ಕುಲಸುದ್ದ ಮನಿಯಾಗ
ವರಸುದ್ದನಿರಬೇಕು
ತಾಳ್ಯೊಂದು ಮೂಗೂತಿ
ಮಂದ್ಯಾಗ ಮನಿ ಮುಂದ
ಮದುವೆಯ ಮಾಡಿದರ
ಹೆಣ್ಣೈತತಿಗೆ, ಹೆಣ್ಣೈತತಿಗೆ ॥

ಇತ್ತಂಡದವರು: ಗುಜಗುಜ ಮಾಪುರಿ ಅನ್ನೀರೆ
ಗುಜೇರ ಮಾಪುರಿ ಆಡೀರೆ
ಸಾಮದಂಡಿ ಹೆಣಿಯೀರೆ
ಸರಲೋಕಕ್ಕೆಲ್ಲ ಹಾಡೀರೆ ॥ *–ಜಾ–ಸಂ–*

ಆಹಾ! ಏನು ಧಾಟ! ಆಹಾ! ಏನು ಹಾಡುವ ಧರತಿ! ಆಹಾ! ಏನು ಹಾಡುವ ಮಕ್ಕಳ ಇಂಚರ! ಎಷ್ಟು ಮನರಂಜಕವಾಗಿದೆ ನಮ್ಮ ಹಳ್ಳಿಯ ಮಕ್ಕಳ ಈ ಆಟದ ಹಾಡು? ನಿಸರ್ಗವೇ ಕಿವಿನಿಮಿರಿಸಿ ನಿಂತುಕೇಳಿ ಬೆರಗಾಗುವಕಾಲಕ್ಕೆ ಮಾನವನ ಗತಿ ಏನು? ಹೆಚ್ಚಿಗೆ ಬರೆದರೆ ಅತಿಶಯೋಕ್ತಿಯಾಗಬಹುದು. ಕನ್ನಡ ರಸಿಕ ಕುಲವೇ ಕೇಳಿ, ಕಣ್ಮುಟ್ಟ ಈ ಆಟವನ್ನು ನೋಡಿ ಒಮ್ಮೆ ಆದರೂ ತಣಿಯಿರೆಂದು ನಮ್ರ ಬಿನ್ನಹ. ಹೀಗೆ ವಾದ ಸಂವಾದ ಮಾಡಿ ಗೊಂಬೆಯ ಮದುವೆಯ ನಿರ್ಧಾರಕ್ಕೆ ಬರುವರು. ಗಂಡು ಹೆಣ್ಣಿದ್ದಲ್ಲಿಗೆ ಹೋಗಿ ಹೆಣ್ಣು ಕೊಡಿರೆಂದು ಕೇಳುವುದೂ, ಹೆಣ್ಣು, ಕೇವಲ ದುಡ್ಡಿಗಾಗಲಿ, ವೇಷಭೂಷಣಕ್ಕಾಗಲಿ ಹೆಣ್ಣನ್ನು ಕೊಡುವದಿಲ್ಲೆಂದು ಹೇಳುವುದೂ, ಎಷ್ಟು ಲೌಕಿಕ ವ್ಯವಹಾರಕ್ಕೆ ನಿಕಟ ಸಂಬಂಧವಾಗಿದೆ! 'ವರ ಸುದ್ದನಿದ್ದರೆ' ಸಾಕು, ಅವರ ಬದುಕು ಬಂಗಾರ ಬೇಡ. ದೈವದಲ್ಲಿ ಧರ್ಮದಿಂದ ಮದುವೆಯ ಮಾಡಿದರೆ ಹೆಣ್ಣು ಕೊಡುವೆವೆಂದು ಹೇಳುವ ಮಾತು, ಆಟವಾಡುವ ಈ ಚಿಕ್ಕಮಕ್ಕಳ ಬಾಯಿಂದ ಹಾಡಿನಲ್ಲಿ ಬರಬೇಕಾದರೆ ನಮ್ಮ ಸಂಸ್ಕೃತಿಯ ಲಗ್ನ ಸಂಸ್ಕಾರ ಪ್ರಭಾವವು ಎಲ್ಲಿಯವರೆಗೆ ಬಂದಿರುವುದೆಂಬುದು ವಿದಿತವಾಗುವುದು. ಆ ಚಿಕ್ಕಮಕ್ಕಳಿಗೆ ಮದುವೆಯ ಅವಶ್ಯಕತೆಯು ಅವರ ಮದುವೆಯಾಗುವುದಕ್ಕಿಂತ ಮುಂಚಿತವೇ ಆಟಪಾಟಗಳಲ್ಲಿ ತಿಳಿದುಹೋಗುವುದು. ಮುಂಬರುವ ಆ ಪ್ರಸಂಗವನ್ನರಿಯದೆ ಹಾಡಿ ಆಟವಾಡಿದ ಚಿಕ್ಕಮಕ್ಕಳಿಗೆ, ಮುಂದೆ ಪ್ರಸಂಗವೇ ಬರಲು ನಗುನಗುತಲೆ ಒಪ್ಪಿಕೊಳ್ಳುವರು. ಅಂತೆಯೇ ಭರತಖಂಡದ ಮಹಿಳೆಯರ ನೀತಿ–ರೀತಿ–ಧರ್ಮದ ಮಟ್ಟ ಜಗತ್ತಿನ ಉಳಿದ ರಾಷ್ಟ್ರಗಳಿಗಿಂತ ಪವಿತ್ರವಾಗಿ ಉಳಿದಿದೆ. ಮದುವೆಯ ಮಹತ್ವವನ್ನು ಬಾಲ್ಯದಿಂದ ಅರಿತ ನಮ್ಮ ಹೆಣ್ಣುಮಕ್ಕಳು ಆದರ್ಶ ಗೃಹಿಣಿಯರಾಗಿದ್ದಾರೆ; ಆಗುತ್ತ ಬಂದಿದ್ದಾರೆ. ಇದಕ್ಕೆ ಭರತಖಂಡದ ಎಲ್ಲ ಭಾಗಗಳಲ್ಲಿ ಮಿಂಚಿದ ಮಹಿಳೆಯರ ಪ್ರಾದೇಶಿಕ ಪುಣ್ಯಕಥೆಗಳೇ ಬಲವಾದ ನಿದರ್ಶನ.

ಈ ಹಾಡಿನಲ್ಲಿ ನಮ್ಮ ಸಂಸ್ಕೃತಿಯ ಲಗ್ನ ಸಂಸ್ಕಾರದ ಸತ್ವಸಾರವಿದೆ. ಮೊದಲಿನಿಂದಲೂ, ಮಕ್ಕಳ ಬಾಯಿಂದ ಬಾಯಿಗೆ ಬಂದ ಈ ಹಾಡು ನಮ್ಮ ಪೂರ್ವಜರ ಮದುವೆಯ ಔಚಿತ್ಯವನ್ನು ತುಂಬೆಲ್ಲ ಬಿತ್ತರಿಸಿದೆ. ರೊಕ್ಕಕ್ಕಾಗಿ ಹೆಣ್ಣಿಲ್ಲ. "ಕುಲ ಸುದ್ದ ಮನಿಯಾಗ । ವರ ಸುದ್ದನಿರಬೇಕ । ತಾಳ್ಯೊಂದು ಮೂಗುತಿ ।" ಇದ್ದರೆ ಸಾಕು 'ದೈವ' ಕೂಡಿದಲ್ಲಿ 'ಗಂಡಿಗೆ ಹೆಣ್ಣೈತಿ' ಎಂಬ ನುಡಿಗಳು ನಮ್ಮ ಪೂರ್ವಜರು ಹಾಕಿಕೊಟ್ಟ ಮದುವೆಯ ಸಂಪ್ರದಾಯದ ಮಾತುಗಳು. ಹೆಣ್ಣು ಗಂಡು, ನಾಲ್ವರಿಗೆ ಒಪ್ಪುಂತೆ ಇದ್ದರೆ ಸಾಕು, ಹೆಣ್ಣಿಗೆ ಅದೇ ಸುಖವುಳ್ಳ

ಒಗೆತನ; ಗಂಡಿಗೆ ಅದೇ ಸಂಸಾರದಲ್ಲಿ ಕೈಬಿಡದ ಪ್ರಣಯ. ಇಲ್ಲಿ ನಮ್ಮ ಹಿರಿಯರ ಮದುವೆಯ ಉದ್ದೇಶವು ಕೂಡಿ ಬಂದಿದೆ. ಇಂತಹ ಉಚ್ಚ ತರಗತಿಯ ಉದ್ದೇಶವನ್ನು ಇಂದು ನಾವು ಮರೆತು, ಮದುವೆಯ ಪ್ರಸಂಗದಲ್ಲಿ ಎಲ್ಲಿ ನಿಂತಿರುವೆವೆಂಬುದನ್ನು ತಿಳಿದುಕೊಳ್ಳಲು ಜನತೆಗೆ ಬಿಟ್ಟುಕೊಟ್ಟಿದ್ದೇನೆ.

ಅಳು ತುಂಬಿ, ಏನು ಕೊಟ್ಟರೂ ಸಮಾಧಾನವಾಗದೆ ರೊಂಯೆಂದು ಒಂದೇ ಸವನೆ ಅಳುವ ಮಗುವನ್ನು, ಹಳ್ಳಿಗರು 'ಆನೆ ಬಂತು ಸುಮ್ಮನಾಗು' ಎಂದು ಹೆದರಿಕೆ ಹಾಕಿ ಬೆದರಿಸುವರು. ಇಷ್ಟಾದರೂ ಅಳಹತ್ತಿದರೆ 'ಆನೆಯ ಆಟ'ವನ್ನು ಆಡಿಸುವರು. ಈ ಆಟವನ್ನು ಆಡಿಸುವ ವ್ಯಕ್ತಿಯು ಅಂಗಾತ ಮಲಗಿ ಮೊಣಕಾಲುಗಳ ಮೇಲೆ ಮಗುವನ್ನು ಹಾಕಿಕೊಂಡು ತೂಗಿ ತೂಗಿ ಆಡಿಸುವುದನ್ನು ಹಳ್ಳಿಗರಲ್ಲಿ ನೋಡಬಹುದು. ಈ ಆಟವನ್ನು ಆಡಿಸುವ ಕಾಲದಲ್ಲಿ ಹಲಕೆಲವು ಪಲ್ಲವಿಗಳನ್ನು ಅಂದು ಕೂಸಿಗೆ ಜೀಕವನ್ನು, ಮೊಣಕಾಲುಗಳನ್ನೆತ್ತಿ ಎತ್ತಿ ಕೊಡುವನು. ಆಗ ಸುತ್ತಮುತ್ತಲಿನ ಹವೆಯ ಹರಿದಾಟವು ಹೆಚ್ಚಾಗಿ ಹರವೆಯು ಕೂಸಿನ ಎದೆ ತುಂಬಿ, ಹಾಡಿನೊಡನೆ 'ಗಲ್ಲಿಸಿ'ದಂತಾಗಲು ಕೂಸು ಅಳುವದನ್ನು ನಿಲ್ಲಿಸುವುದು. ಇದನ್ನು ಕಣ್ಣಾರೆ ಕಂಡು ಮನಗಾಣಬಹುದು.

> **ಆನಿ ಬಂತೌ ಆನಿ; ಇದ್ಯಾ ಊರ ಆನಿ?।**
> **ವಿಜಾಪುರ ಆನಿ; ಇಲ್ಲಿಗ್ಯಾಕ ಬಂತು?।**
> **ಹಾದಿತಪ್ಪಿ ಬಂತು; ಹಾದಿಗೊಂದು ದುಡ್ಡು।**
> **ಬೀದಿಗೊಂದು ದುಡ್ಡು; ಅದ ದುಡ್ಡ ಕೊಟ್ಟು।**
> **ಕೊಬರಿ ಬೆಲ್ಲ ತಂದು; ಲಟಲಟ ಮುರಿದು।**
> **ಯವನರ ಕೈಯಾಗ ಕೊಟ್ಟು; ಚಕ್ರಬಾಯನ ಗುಂಡು**
> **ಕೆಳಗ ಬಿದ್ದರ ತುಂಡು॥**

ಈ ನುಡಿಗಳ ಅರ್ಥವು ಏನಿರಬಹುದು? ಎಂದು ವಿಚಾರ ಮಾಡಹತ್ತಲು ಈ ಆನೆ ಯಾವುದು? ಇದರ ಕಾಲ ಯಾವುದು? ಚಿಕ್ಕಮಕ್ಕಳು ಈ 'ಆನೆ' ಬಂತು ಎನ್ನಲು ಸುಮ್ಮನಾಗುತ್ತಿದ್ದರೇಕೆ? ಜನರು ಹಾದಿಗೆ ಬೀದಿಗೆ ದುಡ್ಡು ಕೊಡುತ್ತಿದ್ದರೇಕೆ? ಎಂಬಿವೇ ಮೊದಲಾದ ಸಂಗತಿಗಳು ಸಂಶೋಧಕರ ಮುಂದೆ ಬಂದು ನಿಲ್ಲುವುವು. ಕೂಲಂಕುಷವಾಗಿ ಮೇಲಿನ ಮಾತುಗಳನ್ನು ಸೋಸಿ ನೋಡಿದರೆ, ಈ ಮಾತುಗಳ ಹಿಂದೆ ಆಗಿಹೋದ ಐತಿಹಾಸಿಕ ಭವ್ಯ ಸಂಗತಿಯು ತಲೆಯೆತ್ತಿ ಕುಣಿದಾಡುತ್ತಿರುವುದು ಕಂಡುಬರುವುದು. ಈ ಸಂಗತಿ ಯಾವದಿರಬಹುದು?

ಯವನರು (ಮುಸಲ್ಮಾನರು) ಹಿಂದೂಸ್ತಾನದ ಮೇಲೆ ದಂಡೆತ್ತಿ ಬಂದು, ಗೆದ್ದು ಆಕ್ರಮಣ ಮಾಡಿದ ಮೇಲೆ, ರಾಜ್ಯದಲ್ಲಿ ಒತ್ತಾಯದಿಂದ ತಮ್ಮ ಧರ್ಮವನ್ನು ಹಬ್ಬಿಸುತ್ತ ಬಂದಿದ್ದಾರೆ. ಧರ್ಮವನ್ನು ಹಬ್ಬಿಸಲು ಅವರು ಕೈಕೊಂಡ ಅನೇಕ ಕ್ರೂರಕೃತಿಗಳು ಇತಿಹಾಸದಿಂದ ತಿಳಿದುಬರುವುವು. ಇಂತಹ ಕೃತಿಗಳಲ್ಲಿ, ಅನ್ಯಧರ್ಮಗಳ ಚಿಕ್ಕಮಕ್ಕಳ ಚೆಂಡನ್ನು ಮುರಿಸಿ ಹಾಕುವುದು ಒಂದಾಗಿತ್ತೆಂದು ಕಂಡುಬರುತ್ತದೆ. ಇದರ ನಿದರ್ಶನಕ್ಕಾಗಿ ಮಕ್ಕಳ ಚೆಂಡು ಮುರಿಸಿ ಹಾಕಿದ ಹಳೆಬಾವಿಗಳು ಅಲ್ಲಲ್ಲಿ ಈಗಲೂ ಇವೆ. ಇಂತಹ ಕೃತಿಯನ್ನು ಜನಪದವು ಮರೆಯುವ ಬಗೆ ಹೇಗೆ? ಧರ್ಮವನ್ನು ಹಬ್ಬಿಸಲು ನೂರಾರು ಹತ್ಯಗಳನ್ನು ಮಾಡಿದರೆ ಅದು ಪಾಪವಲ್ಲೆಂಬ ಕಲ್ಪನೆಯು ಅವರಲ್ಲಿದ್ದ ಮೂಲಕ, ತಮ್ಮ ಧರ್ಮವನ್ನು ಹಬ್ಬಿಸಲು ಚಿಕ್ಕಮಕ್ಕಳ ಕತ್ತನ್ನು ಸಹ ಹಿಚಕುವುದಕ್ಕೆ ಹಿಂದು ಮುಂದು ನೋಡುತ್ತಿದ್ದಿಲ್ಲ. ಹಿಂದೂಸ್ತಾನದಲ್ಲಿ ಮುಸಲ್ಮಾನರು ಮಾಡಿದ ಮಕ್ಕಳ ಕೊಲೆಯು ಲೆಕ್ಕಕ್ಕಿಲ್ಲ. ರಜಪುತಾನದ ಇತಿಹಾಸವೇ ಇದಕ್ಕೆ ಬಲವಾದ ಸಾಕ್ಷಿ. ದಕ್ಷಿಣ ಹಿಂದೂಸ್ತಾನದ ಮೇಲೆ ಮುಸಲ್ಮಾನರ ದೌಡೇ ಇದಕ್ಕೆ ಬಲವಾದ ನಿದರ್ಶನ. ದಕ್ಷಿಣ ಹಿಂದೂಸ್ತಾನದಲ್ಲಿ ಮುಸಲ್ಮಾನರ ರಾಜ್ಯ ಸ್ಥಾಪಿಸಿದ ಪಂಚ ಬಾದಶಾಹಿಗಳಲ್ಲಿ, 'ವಿಜಾಪುರದ ಅಲ್ಲಿ ಆದಿಲಶಾಹನು' ಆಕಾರದಲ್ಲಿ ನೋಡಲು ಆನೆಯಂತೆ ಭೀಕರನೂ, ಕೃತಿಗಳಲ್ಲಿ ಹುಲಿಯಂತೆ ಕ್ರೂರನೂ, ರೌದ್ರ ಧರ್ಮಾಭಿಮಾನಿಯೂ, ಕಪಟಿಯೂ ಇದ್ದನೆಂದು ಇತಿಹಾಸವು ಹೇಳುವುದು. ಮದವೇರಿ ಹೊರಬಿದ್ದ ಆನೆಗೆ ಜನರು ಸಹಜ ಅಂಜುವಂತೆ ಇವನ ರಾಜ್ಯಾಡಳತೆಯ ಚಕ್ರದಲ್ಲಿ ಸಿಕ್ಕು ಜನರು ನಡಗುತ್ತಿದ್ದರು. ಒಮ್ಮೆ, ರಾಜ್ಯದ ಹಳ್ಳಿಗಳನ್ನು, ಇವನು ಹೊಕ್ಕರೆ ಇವನ ಪರಿವಾರದವರು ಯಾವ ಕೃತಿಗಳನ್ನೂ ಮಾಡಲು ಹೇಸುತ್ತಿದ್ದಿಲ್ಲ. ಕಾರಣ, ಜನರು ಅಂಜಿ ತಮ್ಮ ಮಕ್ಕಳನ್ನೂ, ಹೆಂಗುಸರನ್ನೂ ಮನೆಯಲ್ಲಿಯೇ ಬಚ್ಚಿಡುತ್ತಿದ್ದರು. ಅವರ ಹಾದಿಯ ಮೇಲೆ ಬಂದರೆ ಹಾದಿಯ ಮೇಲೂ, ಬೀದಿಯಲ್ಲಿ ಬಂದರೆ ಬೀದಿಯಲ್ಲಿಯೂ ಉಡಿಯಲ್ಲಿ ದುಡ್ಡು ಕಟ್ಟಿಕೊಂಡು ಜನರು, ಹಿಂದಿರುಗಲು ಬೇಡಿಕೊಳ್ಳುತ್ತಿದ್ದರಂತೆ; ಅಲ್ಲದೆ ಬೆಲ್ಲ ಕೊಬ್ಬರಿ ತಿನ್ನಲು ಕೊಟ್ಟು ಸಮಾಧಾನ ಮಾಡುತ್ತಿದ್ದರಂತೆ. ಈ ಸಂಗತಿಗಳನ್ನು ಈಗಲೂ ನಾವು ನಮ್ಮ ಮುತ್ತಜ್ಜರಿಂದ ಕೇಳಬಹುದು. ಮಕ್ಕಳು ಅತ್ತು ಕಾಡಿದರೆ ವಿಜಾಪುರದ ಆನೆಯ ಕೈಯಲ್ಲಿ ಹಿಡಿದು ಕೊಡುವೆವೆಂದು ಅವರ ಮುತ್ತಜ್ಜರು ತಾವು ಚಿಕ್ಕವರಿದ್ದಾಗ ತಮ್ಮನ್ನೂ ಬೆದರಿಸುತ್ತಿದ್ದರೆಂದೂ ಹೇಳುವರು. ಹೀಗಾಗಿ ವಿಜಾಪುರದ ಆನೆಯ ಬೆದರಿಕೆಯು ಮುಂದೆ ಮಕ್ಕಳನ್ನಾಡಿಸಲು 'ಆನೆಯ ಆಟ'ವಾಗಿ ಇಂದು ನಮ್ಮ ಜನಪದದಲ್ಲಿ ಬಂದಿದೆ ಎಂದು ಹೇಳಬಹುದು. ಆದುದರಿಂದ ಈ 'ಆನೆಯ ಆಟಕ್ಕೆ ವಿಜಾಪುರದ ಅಲ್ಲೀ ಆದಲಿಶಹ'ನೇ ಮೂಲಕಾರಣನೆಂದೂ, ಅವನು ಸತ್ತನಂತರ ಮಕ್ಕಳಿಗೆ ಹೆದರಿಕೆ ಹಾಕಲು ಜನರು ವಿಜಾಪುರದ ಆನೆಯು ಬಂತೆಂದು ಅಂಜಿಸಿ ಹಾಡಿ ಮಕ್ಕಳನ್ನು ಆಡಿಸುತ್ತ ಬಂದಿರುವರೆಂದೂ ಹೇಳಿದರೆ ತಪ್ಪಾಗಲಿಕ್ಕಿಲ್ಲ.

ಬೆಳುದಿಂಗಳು ಬಿದ್ದಾಗ ಹಳ್ಳಿಯ ಮಕ್ಕಳು ಹಾಡಿ ಆಡುವ ಇನ್ನೊಂದು ಆಟವು ಸಂಶೋಧಕರ ಮನವನ್ನು ಹಿಡಿಯದಿರದು. ಆಟವನ್ನು ಆಡಲು ಕೂಡಿದ ಮಕ್ಕಳಲ್ಲಿ ಒಬ್ಬನು ಒಕ್ಕಲಿಗನಾಗುತ್ತಾನೆ; ಇನ್ನೊಬ್ಬನು ಕುಂಬಾರನಾಗುತ್ತಾನೆ; ಮತ್ತೊಬ್ಬನು ಬಡಿಗನಾಗುತ್ತಾನೆ; ಉಳಿದವನೊಬ್ಬನು ಕಂಬಾರನಾಗುತ್ತಾನೆ. ಹೀಗೆ ಒಬ್ಬರಿಗೊಬ್ಬರು ಕೂಡಿ, ಮಾತು ಬೆಳೆಸಿ ತಮ್ಮ ಕೆಲಸವನ್ನು ಒಕ್ಕಲಿಗನಿಗೆ ಕೊಟ್ಟು, ಅದರ ಬೆಲೆಯನ್ನು ಕಾಳಿನ ರೂಪವಾಗಿ ತಕ್ಕೊಂಡಂತೆ ನಟಿಸಿ ಆಡುವರು. ಈ ಆಟಕ್ಕೆ ಹಳ್ಳಿಗರು 'ಆಯದಾಟ'ವೆಂದು ಕರೆಯುತ್ತಾರೆ. ಈ

ಆಯದಾಟದಲ್ಲಿ ಅತಿಶಯ ಮಹತ್ವವಾದ ಒಂದು ಸಂಗತಿಯು ಅಡಕವಾಗಿದೆ. ಆ ಸಂಗತಿಯು ಮಕ್ಕಳ ಆಟದ ರೂಪದಲ್ಲಿಳಿಯಬೇಕಾದರೆ ಕನ್ನಡಿಗರು ಒಕ್ಕಲಾಗಿ ನಿಂತು ತಮ್ಮ ಮನೆಗೆಲಸವಾದ ಒಕ್ಕಲತನವನ್ನು ಕೈಕೊಂಡ ಮೇಲೆ, ಮುಂದೆ ಕಾಲಾಂತರದಿಂದ ಮಕ್ಕಳು ಅದನ್ನು ಅನುಕರಣ ಮಾಡಿ, ಆಟದ ರೂಪದಲ್ಲಿ ತಂದಿವೆ. ಒಕ್ಕಲಿಗನಿಗೆ ತನ್ನ ಒಕ್ಕಲತನವು ಸಾಗಬೇಕಾದರೆ ಬಡಿಗ-ಕಂಬಾರರು ಬೇಕು; ಬಾಳುವೆ ನಡೆಯಬೇಕಾದರೆ ಕುಂಬಾರ, ಹಡಪಿಗ, ಮಡಿವಾಳ, ನೇಕಾರ ಮೊದಲಾದವರೂ ಬೇಕು. ಅವರೊಂದು ಇವನಿಗೆ ಅನುಕೂಲ ಮಾಡಿಕೊಟ್ಟರೆ, ಅವರಿಗೆ ಆಯವನ್ನು ಕೊಟ್ಟು ಮುಟ್ಟಿಸುವನು. ಇದಕ್ಕೆ ಇಂದು ನಾವು 'ವಿನಿಮಯ'ವೆಂದು ಕರೆಯುತ್ತೇವೆ. ಕರ್ನಾಟಕದಲ್ಲಿ ಹಿಂದಿನ ಕಾಲದ ಒಕ್ಕಲಿಗರು 'ಆಯ' ಎಂಬ ಶಬ್ದವನ್ನು 'ವಿನಿಮಯ' ಶಬ್ದದ ಬದಲು ಉಪಯೋಗ ಮಾಡುತ್ತಿರಬಹುದು. ಅಂತೆಯೇ ಈಗಲೂ ಹಳ್ಳಿಗಳಲ್ಲಿ ಒಕ್ಕಲಿಗನು ತನ್ನ ಕಾಯಕದಲ್ಲಿ ಅನುಕೂಲವಾದವರಿಗೆ 'ಆಯ'ವನ್ನು ಕೊಡುವನು. ಬಡಿಗ, ಕಂಬಾರ, ಕುಂಬಾರ, ಹಡಪಿಗ ಮೊದಲಾದ ಆಯಗಾರರು ಒಕ್ಕಲಿಗನಿಂದ 'ಆಯ' ಪಡೆದು ತಮ್ಮ ಜೀವನವನ್ನು ಹಳ್ಳಿಗಳಲ್ಲಿ ಸಾಗಿಸುತ್ತಾರೆ. ಈ 'ಆಯದಾಟ'ವನ್ನು ಕೂಡಿದ ಮಕ್ಕಳು ಆಡುವ ಕಾಲಕ್ಕೆ ಒಬ್ಬರಿಗೊಬ್ಬರು ಪ್ರಶ್ನೆ ಮಾಡುತ್ತಾರೆ.

ಕೈಯಲ್ಲೋಯ್ತು? ಕದ್ದಾಗ್ಹೋಯ್ತು।
ಕದಯೇನ್ಕೊಟ್ತ? ಚೆಕ್ಕಿ ಕೊಟ್ತ।
ಚೆಕ್ಕಿ ಏನ್ಮಾಡ್ದಿ? ಒಲಿಯಾಗ್ಹಾಕ್ದೆ।
ಒಲಿ ಏನ್ಕೊಟ್ತ ? ಬೂದಿಕೊಟ್ತ।
ಬೂದಿ ಏನ್ಮಾಡ್ದಿ ? ತಿಪ್ಪಿಗ್ಹಾಕ್ದೆ।
ತಿಪ್ಪೇನ್ಕೊಟ್ತ? ಗೊಬ್ರಾ ಕೊಟ್ತ।
ಗೊಬ್ರೇನ್ಮಾಡ್ದಿ ? ಹೊಲಕ್ಹಾಕ್ದೆ।
ಹೊಲ ಏನ್ಕೊಟ್ತ ? ಜೋಳಾ ಕೊಟ್ತ।
ಜೋಳಾ ಏನ್ಮಾಡ್ದಿ? ಕುಂಬಾರ್ಗ ಕೊಟ್ಟೆ।
ಕುಂಬಾರೇನ್ಕೊಟ್ಟ ? ಗಡಗಿ ಕೊಟ್ಟ।
ಗಡಗಿ ಏನ್ಮಾಡ್ದಿ ? ಬಾಂವ್ಯಾಗ್ಬಿಟ್ಟೆ।
ಬಾಂವೇನ್ಕೊಟ್ತ? ನೀರ್ಕೊಟ್ತ।
ನೀರೇನ್ಮಾಡ್ದಿ? ಗಿಡಕ್ಹಾಕ್ದೆ।
ಗಿಡ ಏನ್ಕೊಟ್ತ ? ಹೂವ್ಕೊಟ್ತ।
ಹೂವೇನ್ಮಾಡಿ ? ದೇವರಿಗೇರಿಸ್ದೆ।
ದೇವ್ರೇನ್ಕೊಟ್ರ ? ಗಂಟಿಕೊಟ್ರ।
ಗಂಟಿ ಏನ್ಮಾಡ್ದಿ ? ಗುಲಾಮ್ಗ ಕೊಟ್ಟೆ।
ಗುಲಾಮೇನ್ಕೊಟ್ಟ? ಸಲಾಮ್ಕೊಟ್ಟ॥

ಎಂಬ ಈ ಪ್ರಶ್ನೋತ್ತರ ಹಾಡು ಈಗಲೂ ನಿದರ್ಶನಕ್ಕೆ ಬರುವುದು. ಇದರ ಅರ್ಥವೇನು? ಮೂಲ ಉದ್ದೇಶವೇನು? ಕಾಲಮಾನ ಯಾವುದು? ಮೊದಲಾದ ಸಂಗತಿಗಳು ನಮ್ಮನ್ನು ತೊಡಕಿನಲ್ಲಿ ತೊಡಕಿಸುವುವು. ಈ ಹಾಡನ್ನು ಹಿಂಜಿ ಅರ್ಥಮಾಡಿ ನೋಡಿದರೆ ಈ ತೊಡಕು ಬಗೆ ಹರಿದುಹೋಗುವುದು. ಕರ್ನಾಟಕವು ಒಕ್ಕಲುನಾಡು. ಒಕ್ಕಲತನವೇ ಅದರ ಮೂಲ ಉದ್ಯೋಗ. ಒಕ್ಕಲತನ ಪ್ರಪಂಚವು ಸುರಳಿತ ಸಾಗಲೆಂದು, ಉಳಿದ ಕೈಗಾರಿಕೆಗಳೂ ನಂತರ ಸುರುವಾದುವು. ಆಗಿನ ಕಾಲದಲ್ಲಿ ನಾಣ್ಯಗಳಿದ್ದಿಲ್ಲ. ನಾಣ್ಯದ ಬದಲು ಕೂಲಿಯನ್ನಾಗಲಿ, ಒಡವೆಯ ಬೆಲೆಯನ್ನಾಗಲಿ ಧಾನ್ಯರೂಪದಲ್ಲಿ ಕೊಡುತ್ತಿದ್ದರು. ಈ ಪದ್ಧತಿಯು ಹಳ್ಳಿಗಳಲ್ಲಿ ಈಗಲೂ ಕಂಡುಬರುತ್ತದೆ. ಹೀಗೆ ಕೊಡುವ ಈ ಪದ್ಧತಿಯೇ 'ವಿನಿಮಯ ಪದ್ಧತಿ' (Barter system)ಯು. ಹಾಡಿನಲ್ಲಿ ಬರುವ ಕಡೆಯ ಒಂದೆರಡು ಸಾಲುಗಳು ಇತ್ತೀಚಿನವೆಂದು ಕಂಡುಬಂದರೂ, ಮೂಲಭಾಗವು ಜನಾಂಗದಲ್ಲಿ ವಿನಿಮಯ ಪದ್ಧತಿ (Barter system)ಯು ಬಳಕೆಯಲ್ಲಿ ಬಂದ ನಂತರ ಮಕ್ಕಳು ಆ ಜೀವನವನ್ನು ಆಟದಲ್ಲಿ ಅನುಕರಣ ಮಾಡಿರಬಹುದೆಂದು ಸಾಧಾರವಾಗಿ ಹೇಳಬಹುದು. ಇದೇ ಈ ಹಾಡು ಹುಟ್ಟಿದ ಕಾಲವೆಂದು ತಿಳಿದುಕೊಳ್ಳಬಹುದು. ಆದುದರಿಂದ ಇದರ ಕಾಲವು ಕ್ರಿ.ಶ. ಪೂರ್ವ ಅನೇಕ ಶತಮಾನಗಳ ಹಿಂದೆ ಎಂದು ಊಹಿಸಿದರೆ ತಪ್ಪಾಗಲಿಕ್ಕಿಲ್ಲ. ಇದನ್ನು ಇಲ್ಲಿಯವರೆಗೆ ಉಳಿಸಿಕೊಂಡು ಬಂದ ನಮ್ಮ ಹಳ್ಳಿಯ ಮಕ್ಕಳ ಬಳಗಕ್ಕೆ ಕನ್ನಡಿಗರ ಹೃತ್ಪೂರ್ವಕ ಕೃತಜ್ಞತೆಗಳು. ಅಲ್ಲದೆ ಕುದುರೆಯ ಸವಾರಿಯ ಇನ್ನೊಂದು ಆಟದಲ್ಲಿ 'ಕಾಣಕಾಣುತ್ತತ್ತ್ಯೋ; ದುಡ್ಡಿಗೆ ಸೇರು ಬಳ್ಳೊಳ್ಳ್ಯೊ' ಎಂದೂ ಬರುವುದು. ಇದು ಆಗಿನ ಜನರು, ಎತ್ತು, ಕುದುರೆ ಮೊದಲಾದುವುಗಳ ಮೇಲೆ ಸಾರಿಗೆ ಮಾಡುತ್ತಿದ್ದರೆಂದೂ, ನಾಣ್ಯಗಳು ಆಗಲೇ ಬಳಕೆಯಲ್ಲಿ ಬಂದಿದ್ದವೆಂದೂ, ದುಡ್ಡಿಗೆ ಸೇರು ಬಳ್ಳೊಳ್ಳಿಯು ಮಾರುತ್ತಿತ್ತೆಂದೂ ತಿಳಿದು ಬರುವುದು. ಮುಸಲ್ಮಾನರ ಆಳಿಕೆಯಲ್ಲಿ ರೂಪಾಯಿ, ದುಡ್ಡು ಮೊದಲಾದ ನಾಣ್ಯಗಳು ಆಗಲೇ ಬಳಕೆಯಲ್ಲಿ ಬಂದು ಹೋಗಿದ್ದವು. ಆಗಿನ ಕಾಲದ ಬಣಜಿಗರು ವ್ಯಾಪಾರಕ್ಕೆ ಹೋಗುವ ಕುದುರೆಯ ಸಾರಿಗೆಯನ್ನು ಚಿಕ್ಕಮಕ್ಕಳು ಆಟದಲ್ಲಿ ಅನುಕರಣ ಮಾಡಿರಬಹುದೆಂದು ಊಹಿಸಬಹುದು. ಹೀಗೆ ಹಳ್ಳಿಯ ಮಕ್ಕಳ ಅನೇಕ ಆಟದ ಹಾಡುಗಳು ಇಂತಹ ಅರ್ಥಸೂಚಕವಾಗಿವೆ. ಅವುಗಳನ್ನು ಉಳಿಸುವುದು ಎಲ್ಲ ಕನ್ನಡಿಗರ ಕರ್ತವ್ಯ.

ಗಂಡುಮಗುವಿನ ಆಟಪಾಟಗಳೇ ಬೇರೆ. ಹೆಣ್ಣುಮಕ್ಕಳಂತೆ ಗಂಡುಮಕ್ಕಳೂ ಹಾಡದಾಟಗಳನ್ನೂ ಆಡುವರು. ಇವರ ಆಟಗಳಲ್ಲಿ ಏರಾಟ, ಜಿಗಿದಾಟ, ಒಗೆದಾಟ, ಓಡಾಟಗಳೇ ಹೆಚ್ಚು. 'ಕಾಣಕಾಣುತ್ತತ್ತಿ,' 'ಕವಡ ಕಂಚಣ ಹೋರಿಮುಗದಾಣ,' 'ಹಂಡೋಲ ಪಂಡೋಲ'

ಮೊದಲಾದ ಆಟಗಳು ಏರಾಟಗಳು. ಇವುಗಳಲ್ಲಿ, ಒಬ್ಬ ಹುಡುಗನು ಬಗ್ಗಿ ಕುದುರೆಯಾಗುತ್ತಾನೆ. ಮತ್ತೊಬ್ಬನು ಸವಾರನಾಗುತ್ತಾನೆ. ಸವಾರನಾದವನು ಹಲಕೆಲವು ಪಲ್ಲವಿಗಳನ್ನುಲು ಅವನನ್ನು ಸುತ್ತುಗಟ್ಟಿ ನಿಂತ ಉಳಿದ ಮಕ್ಕಳೂ ಹಿಂದಿನಿಂದ ಅವನ್ನು ಅನ್ನುತ್ತಾರೆ.

ಸವಾರನು "ಕಾಣಕಾಣುತ್ತತ್ತ್ಯೋ" । ಎಂದೂ ಉಳಿದವರು ಇಲ್ಲಿಗೆ ಬಂತೊ ಸಂಗಯ್ಯಾ ॥ ಎಂದೂ ಅನ್ನುತ್ತ ತಮ್ಮ ಶರೀರದ ಅಳತೆಯನ್ನು ಮಾಡಿ ತೋರಿಸುತ್ತ ಕಡೆಗೆ 'ಕುತಿಗಿಗೆ ಬಂತೊ ಸಂಗಯ್ಯ' ಎಂದು ಅಂದವರೇ ಓಡಿಹೋಗುವರು. ಸವಾರನಾದವನು ಕುದುರೆಯಾದವನನ್ನು ಬಿಟ್ಟು ಅವರನ್ನು ಬೆನ್ನಟ್ಟಿ ಒಬ್ಬನನ್ನು ಹಿಡಿಯಲು ಓಡುತ್ತಾನೆ. ಆಗ ಉಳಿದ ಹುಡುಗರು ಕುದುರಿಯ ಸವಾರಿಯ ಮಾಡಲು ಪ್ರಯತ್ನಿಸುವರು. ಸವಾರನು ಯಾರನ್ನು ಮುಟ್ಟಿ ಹಿಡಿದು ತರುವನೊ ಅವನು ಕುದುರೆಯಾಗುವನು. ಮೊದಲು ಕುದುರೆಯಾದವನು ಈಗ ಸವಾರನಾಗಿ ಕುದುರೆಯನ್ನೇರುವನು. ಹೀಗೆ ಆಟವು ಮುಂದುವರಿಯುವುದು. ಗಂಡುಮಕ್ಕಳು ಇಂತಹ ಆಟಗಳನ್ನು ದಣಿಯುವವರೆಗೂ ಆಡುವರು. ಈ ಆಟಗಳಲ್ಲದೆ, ಜಗಿತ, ಒಗೆತ, ಓಟಗಳುಳ್ಳ ಆಟಗಳನ್ನು ವಯೋಮಾನಕ್ಕನುಸಾರವಾಗಿ ಹಳ್ಳಿಗಳಲ್ಲಿ ಹುಡುಗರು ಆಡುವರು. 'ತಿಳ್ಳಿ,' 'ಹುತುತು' 'ಖೋ', 'ಚಿಣಿಪಣಿ' 'ಗುಂಡು' 'ಗಜುಗ' ಮೊದಲಾದ ಓಡಾಟ (Running game) , ಗುರಿಯಾಟ (shooting game) ಗಳು ಗುಂಪಾಟ (group game) ಗಳಿರುವ ಮೂಲಕ ಬಹಳ ಹುಡುಗರು ಏಕಕಾಲಕ್ಕೆ ಭಾಗವಹಿಸಿ ಬಲುಹರುಪಿನಿಂದ ಆಡುವರು. ತೀರ ಚಿಕ್ಕ ಗಂಡುಮಕ್ಕಳು, ಚೆಂಡು, ಗುಂಡ, ಬೊಗರೆ ಮೊದಲಾದ ಗುರಿ ಕಲಿಸುವ ಆಟಗಳನ್ನು ಆಡುತ್ತಾರೆ. ಈ ಆಟಗಳಲ್ಲಿ ಪಲ್ಲವಿಗಳಾಗಲಿ, ಹಾಡುಗಳಾಗಲಿ ಕಂಡುಬಾರದಿದ್ದರೂ ಆ ಮಕ್ಕಳ ಆಟಪಾಟಗಳನ್ನು ಕಂಡು ಮನವಾರೆ ತಣಿದ ಗಂಡುಮಗುವಿನ ತಾಯಂದಿರು ಅವುಗಳ ಬಣ್ಣನೆ ಮಾಡಿ ಜೋಗಳವನ್ನೆತ್ತಿ 'ಲಾಲಿ'ಗಳನ್ನು ಹಾಡದೆ ಬಿಡುವರೇ?

ಬಾಲ ಹನುಮನ ಮುಂದ, ಬಾಗಿ ಚೆಂಡಾಡ್ಯಾನ
ಬಾವೂಲಿ ಗಿವಿಯ ನನಬಾಲ । ಕಂಡರ
ಬಾಲ್ಯಾರು ಬಸಿರು ಬಯಸ್ಯಾರ ॥ *-ಗ-ಹಾ-ಪು-೪೨*

ಬಾಲನ ಚೆಲುವಿಕೆ ಚೆಂಡನ್ನು ಎತ್ತೆತ್ತಿ ಆಡುವ ಚಿತ್ರ, ಮೊದಲಾದುವುಗಳನ್ನು ಕಂಡು ಹಾಯ್ದುಹೋಗುವ ಹೆಣ್ಣು ಅಂಥ ಮಗು ತನಗಾಗಲೆಂದು ಬಸಿರು ಬಯಸುವಳೆಂದು ಹಾಡುತ್ತಾಳೆ. 'ನನ ಮಗನ। ಮನಬಲ್ಲಂಗಾಡೊ ನವಿಲಾಟ' ॥, 'ಗುಲಗಂಜಿ ಗಿಡಕ ಗುರಿಯಿಟ್ಟ'।, 'ಲಗ್ಗಿ ಹೂಡ್ಯಾನ ನಡುಓಣಿ'। ಎಂದು ಮೊದಲಾದ ಆಟಪಾಟಗಳ ಬಣ್ಣನೆಯನ್ನು ಲಾಲಿಗಳಲ್ಲಿಯೂ ಹಾಡುವಳು. ಪುಂಡಮಗನ ಪುಂಡಾಟ ಕಂಡ ತಾಯಿ,

ಹಿಂಡು ಮಕ್ಕಳೊಳಗ, ಪುಂಡನನ ಕಂದಯ್ಯ
ದುಂಡು ಮಲ್ಲೀಗಿ ಮರನೇರಿ । ಹೂಕೊಯ್ದಾ
ಗಂಡುಳ್ಳ ಬಾಲಿ ತುರುಬೀಗೆ ॥ *-ಗ-ಹಾ-ಪು-೪೨*

ಚಿಕ್ಕನನ ಕಂದಯ್ಯ, ಚಿಣಿದಾಂಡು ಆಡ್ಯಾನ
ಚಿಕ್ಕ ಹೊಳಿದಾಟಿ ತೊರಗಲ್ಲ । ಬ್ಯಾಲ್ಯಾರ
ಚಿತ್ರದ ಕೊಡಕ ಚಿಣಿ ಬಡೆದ ॥ *-ಗ-ಹಾ-ಪು-೪೩*

ಗಂಡುಳ್ಳ ಬಾಲೆಯ ತುರುಬಿಗೆಂದು ದುಂಡುಮಲ್ಲಿಗೆಯ ಮರನೇರಿ ಹೂವ ಕೊಯ್ಯುವುದೂ, ಆಡಿದ ಚಿಣಿಯು ಚಿಕ್ಕಹೊಳಿ ದಾಟಿ, ಹೊಳಿನೀರ ಹೊತ್ತೊಯ್ವ ತೊರಗಲ್ಲ ಬಾಲೆಯರ ಚಿತ್ರದ ಕೊಡಕ್ಕೆ ಬಡಿಯುವುದೂ ಮಗನು ಮನೆಗೆ ತರುವ ಜಗಳದ ಆಟಗಳು. ಆದರೂ ತಾಯಿಗೆ ಮಗನು ಆಡಿಬಂದರೆ ಒಂದು ಹಿಗ್ಗು, ಆನಂದ. ಅವಳು ಅವನು ಆಡಿಬಂದ ಪುಂಡಾಟಗಳನ್ನು ಗಣನೆಗೆ ತಾರಳು. ಮಗನ ಹಟಮಾರಿತನವೂ ತಾಯಿಗೆ ಆ ಮಗನು ಆಡುವ ಆಟಗಳಂತೆ ಭಾಸವಾಗುತ್ತದೆ.

ಹಾಲಬೇಡ್ಯತ್ತಾನ, ಕೋಲುಬೇಡಿ ಕುಣಿದಾನ
ಮಸರ ಬೇಡಿ ಕೆಸರು ತುಳಿದಾನ । ಕಂದಯನ
ಕುಸಲದ ಗೆಜ್ಜಿ ಕೆಸರಾಯ್ತು ॥ *-ಗ-ಹಾ-ಪು-೪೩*

ಕಂದನ ಕಿರಿಕಿರಿ, ಇಂದೇನು ಹೇಳಲಿ
ಬಿಂದೀಗಿ ಹಾಲು ಸುರುವಂದ । ಥೆಂಜೀಯ
ಚೆಂದ್ರಮನ ತಂದು ನಿಲಿಸೆಂದಾ ॥ *-ಗ-ಹಾ-ಪು-೪೫*

ಓಣ್ಯಾಗ ಅವಚಾರಿ, ಮನಿಯಾಗ ರಿಪಿಗೇಡಿ
ಆಡಹ್ವಾದಲ್ಲಿ ಕಿಡಿಗೇಡಿ । ಬಾಳನ
ಹ್ಯಾಂಗ ಸಂಬಸಲೆ ಹಡೆದಮ್ಮ ॥ *-ಗ-ಹಾ-ಪು-೪೬*

ಇಲ್ಲಿ ಹಟಮಾರಿತನವಿದ್ದರೂ ಅದು ಆಟದ ರೂಪದಲ್ಲಿದೆ–ಅಂತೆಯೇ ಹಡೆದ ತಾಯಿಯು ಮಕ್ಕಳ ಆಟಪಾಟಗಳನ್ನು ನೋಡಿ ಪ್ರಪಂಚವನ್ನೇ ಮರೆಯುವಳು–

ಬಡತಾನ ಬಂದಾರ, ಬಡಿಬ್ಯಾಡ್ರಿ ಮಕ್ಕಳ
ಆಡ್ಯಾಡಿ ಬಂದು ತೊಡಿಮ್ಯಾಲೆ। ಕೂತಾರ
ಬಂದ ಬಡತಾನ ಬೈಲಾಗಿ॥ -ಜಾ-ಸಂ-

ಬಡತನವಿದ್ದರೇನು? ಮಕ್ಕಳಾಡಿ ಬಂದರೆ ಬಡತನವೇ ಬಯಲಾಗುವುದೆಂಬ ಭಾವನೆಯೇ ಅವಳಲ್ಲಿ ತುಂಬಿಬರುವುದು. ಎಲ್ಲಿ ಆದರೂ ಇದ್ದು ಆಡಿ ಬೆಳೆಯಲೆಂಬುದೇ ಅವಳ ಹಿರಿಯಾಶೆ.

ಎಲ್ಯಾರ ಇರಲೆವ್ವ, ಹುಲ್ಲಾಗಿ ಬೆಳೆಯಾಲಿ
ನೆಲ್ಲಿ ಬಡ್ಡ್ಯಾಗಿ ಚಿಗಿಯಾಲೆ। ಕಂದಯ್ಯಾ
ಜಯವಂತನಾಗಿ ಬೆಳೆಯಲಿ॥ -ಜ-ಸಂ-

ಎಂದು ಹಡೆದ ತಾಯಿಯು ಆಟದ ಲಾಲಿಗಳನ್ನು ಹಾಡಿ ಹರಸುವಳು. ಗಂಡುಮಕ್ಕಳ ಆಟಪಾಟಗಳನ್ನು ಹೇಳುವ ಈ ಹಾಡುಗಳು ಕನ್ನಡ ಮಕ್ಕಳು ಆಡಿ ಹಾಡಿ ಬೆಳೆಯಲು ಮಾರ್ಗ ತೋರಿಸುವ ಹಳ್ಳಿಗರ ಶಾರೀರ ಶಿಕ್ಷಣದ ಸಾಧನಗಳೆಂದು ಕರೆದರೆ ತಪ್ಪಾಗಲಿಕ್ಕಿಲ್ಲ. ಇಷ್ಟು ಮಹತ್ವವಿವೆ ನಮ್ಮ ಚಿಕ್ಕಮಕ್ಕಳ ಆಟಗಳು ಮತ್ತು ಹಾಡುಗಳು.

ಇವುಗಳ ಮಹತ್ವವನ್ನರಿತ ಪ್ರೊ. ದೇವೇಂದ್ರ ಸತ್ಯಾರ್ಥಿ ಅವರು. ``Indian children's rhymes and chants have survived many a national storm. The wealth of the country was plundered by invaders, but who could carry off these rhymes and chants from Indian's little sons and daughters? The people were the victims of great catastrophies, but none could kill the children's indigenious games and homspun songs.''[3] ಎಂದು ಆಶಾವಾದಿಗಳಾಗಿ ಬರೆದಿದ್ದಾರೆ. ಆದರೆ ಇಂದಿನ ಸ್ಥಿತಿಗತಿ ಏನು? ಹಳ್ಳಿಗಳು ಕೆಡಹತ್ತಿವೆ. ಮಕ್ಕಳು ಆಟಪಾಟಗಳನ್ನು ಮರೆಯಹತ್ತಿದ್ದಾರೆ. ಅವರ ಆರೋಗ್ಯಕ್ಕೆ ಇಂದು ಕುಂದು ಬರಹತ್ತಿದೆ. ಪಾಶ್ಚಿಮಾತ್ಯ ಸಂಸ್ಕೃತಿಯ ಸಂಪರ್ಕದಿಂದೊ, ವಿಜ್ಞಾನಯುಗದ ಪ್ರಭಾವದಿಂದೊ ಹಳ್ಳಿಯ ಜೀವನವೇ ಅಧಃಪತನವಾಗಹತ್ತಿದೆ. ಹಳ್ಳಿಗಳೇ ಹೀಗಾದ ಮೇಲೆ ರಾಷ್ಟ್ರದ ಗತಿಯೇನು? ಒಟ್ಟಿನ ಮೇಲೆ ಇದು ನಮ್ಮ ರಾಷ್ಟ್ರ ಹಾಗೂ ಸಂಸ್ಕೃತಿಯ ಅವನತಿಯ ಚಿನ್ಹವೆಂದು ಉಸಿರುಗರೆಯಬೇಕಾಗಿದೆ. ಭಾರತೀಯರು ಇಂತಹ ಸ್ಥಿತಿಯನ್ನು ನೋಡಿ ತಟಸ್ಥರಾಗಬೇಕೇ? ನಮ್ಮ ಮಕ್ಕಳ ಆಯುರಾರೋಗ್ಯ ಬೆಳೆಯಬೇಕಾದರೆ ಈ ಎಲ್ಲ ಆಟಪಾಟಗಳೂ, ಹಾಡು ಮೊದಲಾದುವುಗಳೂ ಅಗತ್ಯ ಬೇಕು. ಪಾಶ್ಚಿಮಾತ್ಯ ಸಂಸ್ಕೃತಿಯ ಸಂಪರ್ಕದ ಗಂಡಾಂತರದಿಂದ ಇವುಗಳನ್ನುಳಿಸಿ ನಮ್ಮ ಚಿಕ್ಕಮಕ್ಕಳಿಗೆ ಒದಗಿಸಿ ಅನುಕೂಲ ಮಾಡಿಕೊಡುವುದು ಸರಕಾರದ ಹೊಣೆಯಾಗಿದೆ. ನಮ್ಮೆಲ್ಲರ ಧರ್ಮವಾಗಿದೆ.

ಅಪಾರವಾದ ಜಾನಪದ ಸಾಹಿತ್ಯದ ವಿಶಾಲವಾದ ಹೂದೋಟದ ಕೊನರುಗಳಲ್ಲಿ ಅಲ್ಲೊಂದು ಇಲ್ಲೊಂದು ಮೊಗ್ಗೆಯನ್ನು ಮಾತ್ರ ಎತ್ತಿಕೊಂಡು ಅರಳಿಸಿ ಜನತೆಯ ಮುಂದೆ ಇಡಲು ಪ್ರಯತ್ನ ಮಾಡಲಾಗಿದೆ. ಆದರೆ ಈ ಕೊನರುಗಳ ಎಲೆ, ಚಿಗರು, ಮೊಗ್ಗೆ, ಹೂ ಮಿಡಿ, ಕಾಯಿ, ಹಣ್ಣು ಮೊದಲಾದುವುಗಳನ್ನು ಕೂಡಿಸಿ ಚಿತ್ರಿಸಹೋದರೆ ಒಂದೊಂದು ಕೊನರು ಒಂದೊಂದು ಮಹಾಗ್ರಂಥವೇ ಆಗಬಹುದು. ಅಷ್ಟು ಅಪಾರವಿದೆ ನಮ್ಮ ಹಳ್ಳಿಗರ ಸಾಹಿತ್ಯ! ಈ ಕೆಲಸವನ್ನು ಮುಂಬರುವ ಸಂಶೋಧಕರಿಗೆ ಬಿಟ್ಟುಕೊಟ್ಟಿದ್ದೇನೆ.

ಕನ್ನಡ ಸರಸಮ್ಮನ ವೀಣೆಯು ಬತ್ತೀಸ ರಾಗಗಳಲ್ಲಿ ತಂತಿಯನ್ನು ನುಡಿಸಿದಂತೆ ಕನ್ನಡ ಹಳ್ಳಿಯ ಮಕ್ಕಳ ಹಾಡುಗಳು ಅನೇಕ ಸೊಲ್ಲುಗಳೊಡನೆ ರಾಗಗೊಂಡು ಕಿವಿಗೆ ಇಂಪಾಗಿ ಕೇಳಬರುವುವು. ನಲಗುದನಿಯ ರಾಗದ ಈ ಸೊಲ್ಲುಗಳು ಎಲ್ಲರನ್ನೂ ಜಗ್ಗಿ ನಿಲ್ಲಿಸದೆ ಬಿಡಲಾರವು. ಹಳ್ಳಿಯ ಜೀವನದ ಮಾಸದ ಹೊಸತನವು ಜನರನ್ನು ತಲೆದೂಗಿಸದಿರದು. ಕನ್ನಡ ಜಾನಪದ ಹಾಡುಗಳು ಕನ್ನಡ ಹಳ್ಳಿಗರ ಕಾವ್ಯ ರಚನೆಯ ಹೆಗ್ಗುರುತಾಗಿವೆ. ಈ ಹಾಡುಗಳಲ್ಲಿ ಕನ್ನಡ ಗಡಿಗಡಿಗಳ ಗಾಳಿಯು ಒಂದೇ ಸವನೆ ಸುಳಿದಾಡಿ ಹಳ್ಳಿಗರ ರಸಿಕತೆಯ ಕಂಪನ್ನು ಬೀರುವುದು. ಕನ್ನಡ ಸಂಸ್ಕೃತಿಯೇ ಇಲ್ಲಿ ನಾದ ಮಾಡುತ್ತಿರುವುದು. ಕನ್ನಡಿಗರ ಸರಳಜೀವನವೇ ಇಲ್ಲಿ ಮೂರ್ತಗೊಂಡು ಅನೇಕ ಸಂಪ್ರದಾಯಗಳಾಗಿ ಬಂದಿದೆ. ಒಟ್ಟಿನ ಮೇಲೆ ಕನ್ನಡ ಸಂಸ್ಕೃತಿಯ ಕೈಗನ್ನಡಿಯೆಂದೇ ಹೇಳಬಹುದು.


"ನವೀನ ನಾಗರಿಕತೆಯ ಈ ವಿಜ್ಞಾನ ಯುಗದಲ್ಲಿ ಮಾನವನ ಕಾವ್ಯಾಭಿರುಚಿಯು ದಿನದಿನಕ್ಕೆ ಹಳಸಹತ್ತಿದೆ. ರಸೋನ್ನತ್ತವಾದ ಪಂಡಿತರ ಅಖಂಡ ಕಾವ್ಯಗಳನ್ನು ಜನರು ಅಲಕ್ಷಿಸುವಾಗ ಜಾನಪದ ಸಾಹಿತ್ಯದ ಮಾತೇ! ಇಂಚರ ದನಿಯನ್ನೆತ್ತಿ ಹಾಡುವ ಕನ್ನಡ ಹಳ್ಳಿಗರ ಹಾಡುಗಳು ಇಂದು ಕಣ್ಮರೆಯಾಗಹತ್ತಿವೆ. ಕನ್ನಡ ಸಂಸ್ಕೃತಿಯ ತಿರುಳಾದ ಈ ಹಾಡುಗಳನ್ನು ಅಲಕ್ಷ್ಯ ಮಾಡಿದರೆ ನಾಡ ಸಂಸ್ಕೃತಿಯ ಅಡಿಗಲ್ಲೇ ಅದುರಿದಂತಾಗುವುದಿಲ್ಲವೇ? ಯಾಂತ್ರಿಕಯುಗದ ಪ್ರಭಾವದಿಂದಾಗಲಿ, ಪಾಶ್ಚಿಮಾತ್ಯರ ಸಂಸ್ಕೃತಿಯ ಸಂಪರ್ಕದಿಂದಾಗಲಿ ಸಂಭವಿಸಿದ ಈ ಅನಾಹುತವನ್ನು ಪರರು ತುಂಬಿ ಕೊಡಬಹುದೇ? ಈ ಹಾಡುಗಳನ್ನು ಕೇಳಿ ಕಲಿತು ಹಾಡದಿದ್ದರೂ ಪ್ರೋತ್ಸಾಹದಿಂದ ಇಂದಿನ ಕನ್ನಡಿಗರು ಇವೆಲ್ಲವುಗಳನ್ನು ಸಂಗ್ರಹಿಸಿ ವಸ್ತುಸಂಗ್ರಹ ಕೋಶದಲ್ಲಿ ಇಡಬಾರದೇ?

❐

3. Modern Review Vol. 60 p.p. 394.

ಭಾಗ–೨

ಐತಿಹಾಸಿಕ ಸಂಗತಿಗಳು



ಪರಿವಿಡಿ

1. ಶಿವಶರಣರು

"ಶಿವಶರಣರು ಕಾಲ್ಪನಿಕ ಪುರುಷರಲ್ಲ. ಐತಿಹಾಸಿಕ ಪುರುಷರು" ಎಂಬ ಮಾತನ್ನು ರಾ.ಪಿ.ಜಿ. ಹಳಕಟ್ಟಿ ಅವರು 'ಶಿವಶರಣರ ಚರಿತ್ರೆಗಳು' ಭಾಗ ೧, ೨, ೩, ೪ ಹೀಗೆ ನಾಲ್ಕು ಮಹಾಗ್ರಂಥಗಳನ್ನು ಬರೆದು ಜನತೆಗೆ ಅವರ ಚಿರಪರಿಚಯವನ್ನು ಮಾಡಿಕೊಟ್ಟು ಕನ್ನಡ ಕುಲಕ್ಕೆ ಮಹದುಪಕಾರ ಮಾಡಿದ್ದಾರೆ. ಕನ್ನಡಿಗರ ದುರ್ದೈವದ ಮೂಲಕ ಅವರ ಚರಿತ್ರೆಗಳು ಮಾಸಿಹೋಗಿದ್ದರೂ, ಅವರ ಕುರುಹುಗಳೂ, ಸ್ಮಾರಕಗಳೂ, ಅವರಿದ್ದ ಗ್ರಾಮಗಳಲ್ಲಿ ಈಗಲೂ ಕಂಡುಬರುತ್ತವೆ. ೧೧ನೆಯ ಶತಮಾನದಿಂದ ಇಲ್ಲಿಯವರೆಗೂ ಕರ್ನಾಟಕದಲ್ಲಿ ಬ್ರಾಹ್ಮಣ, ಜೈನ, ವೀರಶೈವ, ಮುಸಲ್ಮಾನ ಮೊದಲಾದ ಧರ್ಮಗಳ ತಿಕ್ಕಾಟ ಮುಕ್ಕಾಟದಲ್ಲಿ ಯಾರು ಯಾರು? ಯಾವುದು ಯಾವುದು? ಏನು ಏನು? ಎಂಬುವುದು ತಿಳಿಯದೆ ಗಜಿಬಿಜಿಯಾಗಿ ಹೋಗಿಬಿಟ್ಟಿದೆ. ವೀರಶೈವ ಧರ್ಮವು ಜನಪದದ ಹಿತಕ್ಕಾಗಿ ಮೊದಲಿನಿಂದಲೂ ಟೊಂಕಕಟ್ಟಿ ನಿಂತದ್ದಾಗಿದೆ. ಈ ಧರ್ಮದ ಪ್ರಚಾರಕರೂ, ಪ್ರಸಾರಕರೂ, ಬಡವರು. ಅವರಿಗೆ ರಾಜಾಶ್ರಯವೇ ಇಲ್ಲ. ಈ ಮತದ ತತ್ವಜ್ಞಾನಿಗಳಾದ ಶಿವಶರಣರ ತತ್ವಗಳಿಗೆ ಜನಪದವು ಮನಸೋತು ಎಲ್ಲ ಕಸಬುಗಾರರೂ ಇದರ ಅನುಯಾಯಿಗಳಾದರು. ಹೀಗೆ ಇವರನ್ನೊಳಗೊಂಡ ಈ ಮತವು ಕಾಯಕವಾದಿಯಾಗಿದೆ. ಶಿವಶರಣರು ಅನ್ಯಮತದವರಂತೆ ಭಿಕ್ಷುಕರಲ್ಲ. ಅಂತೆಯೇ ಜನಪದವು ಅವರನ್ನು ಅನುಕರಣ ಮಾಡಿ, ಅವರಿಗೆ ಮಾನ ಮನ್ನಣೆಯನ್ನು ಸಲ್ಲಿಸುತ್ತ ಬಂದಿದೆ. ಅನೇಕ ಒಕ್ಕಲಿಗರೂ ಶಿವಶರಣರಾದ ಮೂಲಕ ಅವರ ಚರಿತ್ರೆಗಳನ್ನು ತಮ್ಮ ಕಾಯಕದಲ್ಲಿ (ಹೊಲಗೆಲಸದಲ್ಲಿ) ಹಾಡಿದ್ದಾರೆ. ಉತ್ತರ ಕರ್ನಾಟಕದಲ್ಲಿ ಹಾಡುವ ನೂರೊಂದು ಶಿವಶರಣರ ಹಂತಿಯ ಹಾಡುಗಳನ್ನು ಸಂಗ್ರಹಿಸಲಾಗಿದೆ. ಆ ಹಾಡುಗಳಲ್ಲಿ ಬಂದ ಶಿವಶರಣರನ್ನು ಜನತೆಗೆ ಪರಿಚಯಮಾಡಿಕೊಡುವುದೇ ಇಲ್ಲಿಯ ಮೂಲ ಉದ್ದೇಶ.

ಈಗಾಗಲೇ ಶಿವಶರಣರ ಸಂಬಂಧ ಅನೇಕ ಲೇಖನಗಳೂ ಹಲಕೆಲವು ಗ್ರಂಥಗಳೂ ಬೆಳಕಿಗೆ ಬಂದಿವೆ. ಆದರೆ, ಜನಸಾಮಾನ್ಯರ ಮನೆ ಬಾಗಿಲಿಗೆ ಮುಟ್ಟಿದ ಇವರ ಕಾಯಕ, ದಾಸೋಹ ಮೊದಲಾದ ತತ್ವಗಳನ್ನು ಜನರು ತಿಳಿದುಕೊಂಡು ಆಚರಿಸಿದ ರೀತಿಯು ಬಲು ಆಕರ್ಷಕವಾಗಿದೆ. ಶಿವಶರಣರು 'ಕಾಯಕ,' 'ದಾಸೋಹ'ದ ಅರ್ಥ ಮಾಡಿದಂತೆ ಆಗಿನ ಕಾಲದ ಜನಸಾಮಾನ್ಯರೂ ಮಾಡಿದಂತೆ ಕಂಡುಬರುವುದು. ಆ ಅರ್ಥವೇ ಪರಂಪರೆಯಾಗಿ ಬಂದು ಹಾಡು ಮೊದಲಾದುವುಗಳಲ್ಲಿ ಜನತೆಗೆ ತಿಳಿಯುವಂತೆ ಒಡಮೂಡಿದೆ. ವೀರಶೈವ ಧರ್ಮವೊಂದನ್ನು ಬಿಟ್ಟು ಹಿಂದೂಸ್ತಾನದಲ್ಲಿ ಉಳಿದ ಯಾವತ್ತೂ ಧರ್ಮಗಳು ಕಾಯಕದ ಮಹತ್ವವನ್ನು ಅರಿತಂತೆ ಕಂಡು ಬರುವುದಿಲ್ಲ. ಕಾಯಕವನ್ನು ತಿರಸ್ಕರಿಸಿದ ಈ ಧರ್ಮಗಳಲ್ಲಿ ಭಿಕ್ಷುಕರೇ ಹೆಚ್ಚಾಗಿ ಭರತಖಂಡವು ಒಂದಾನೊಂದು ಕಾಲದಲ್ಲಿ ಕ್ರಿಯಾಶೂನ್ಯ ದೇಶವಾದದ್ದು ಎಲ್ಲರಿಗೂ ಗೊತ್ತಿದ್ದ ಮಾತಾಗಿದೆ. ಈ ಧರ್ಮಗಳಲ್ಲಿ ಕಾಯಕದ ಬದಲಾಗಿ 'ಉದರ ವೈರಾಗ್ಯ'ವೇ ಹೆಚ್ಚು ಕಂಡುಬರುವುದು. 'ಕಾಯಕ'ದ ಅರ್ಥವನ್ನು ಹಳಕಟ್ಟಿ ಅವರು "ಶಿವಾನುಭವ ಶಾಸ್ತ್ರದಲ್ಲಿ 'ಕಾಯಕ' ಈ ಶಬ್ದಕ್ಕೆ ಒಂದು ವಿಶಿಷ್ಟ ಅರ್ಥವಿರುತ್ತದೆ. ಕಾಯಕವೆಂದರೆ ಕೇವಲ ಉಪಜೀವನದ ಹೊರೆಯಲ್ಲ. ಈಚೆಗೆ ಬಹುಜನರು ಕಾಯಕವೆಂದರೆ ಉಪಜೀವನಕ್ಕೋಸ್ಕರ ಕೈಕೊಂಡ ಒಂದು ಉದ್ಯೋಗವೆಂದು ಭಾವಿಸಿದ್ದಾರೆ. ಆದರೆ ಶಿವಶರಣರಿಗೆ ಇದು ಆಧ್ಯಾತ್ಮಿಕ ಉನ್ನತಿಯ ಮುಖ್ಯ ಮಾರ್ಗವಾಗಿದೆ. ನಿತ್ಯದ ಜೀವನವು ಅಥವಾ ಕಾಯಕವು ಸ್ವೋನ್ನತಿಗೆ ಸಹಕಾರಿಯಾಗುವಂತೆ ಅದನ್ನು ಶಿವಶರಣರು ಜರಗಿಸುತ್ತಾರೆ. ಅವರು ನಿಂತಲ್ಲಿ, ನೋಡುವಲ್ಲಿ, ಮಾಡುವಲ್ಲಿ, ಭಾವಿಸುವಲ್ಲಿ ಅರ್ಪಣ ಭಾವವುಳ್ಳವರಾಗಬೇಕು. ಆಗ ಈ ಕ್ರಿಯೆಗಳು ಅವರಿಗೆ ಲಿಂಗಪೂಜಾ ಸಾಧನಗಳಾಗಿ ಪರಿಣಮಿಸುತ್ತವೆ."[೧] ಎಂದು ಹೇಳಿದ್ದಾರೆ. ಜಾನಪದ ಹಾಡುಗಳಲ್ಲಿ ಕಾಯಕವು ಹೆರವರಿಗೆ ಸೋಜಿಗವೆನ್ನುವಂತೆ ಬಂದಿದೆ.

ಲಿಂಗಿಗಳು ಹಡೆದವರು, ಸಂಗ ಭವಿಗಳದಲ್ಲ
ಲಿಂಗವಂತರದು ಉಡುತೊಡಿಗೆ । ತೊಳೆಯುತಲಿ
ಅಂಗ ಸವಿತನಕ ಕಾಯಕವು ॥೪॥

ಸಂಗಯ್ಯಗ್ಹೋಗದೆ, ಲಿಂಗಕ ನೀರೆರಿಯದೆ
ಜಂಗು ಕಟ್ಟಿದಲೆ ಕಾಯಕವ । ಮಾಚಣ್ಣ
ಹಿಂಗಿಸನು ತನ್ನ ಕುಲಗೆಲಸ ॥೭॥

---

೧. ಶಿವಶರಣರ ಚರಿತ್ರೆಗಳು, ಭಾಗ ೨, ಪ್ರಸ್ತಾವನೆ ಪು. ೧೬

ಕಾಯಕವೆ ಕತ್ತ್ಯಾಗಿ, ಘಾಯ ಮಾಡುತ ಹೊರಟ
ರಾಯರಾಯರು ನಡುಗಿದರು । ಮಾಚನಿಗೆ
ನ್ಯಾಯ ನಡಗುತಲಿ ಸಭೆಯೊಳಗೆ ॥೯॥ *-ಮ-ಮಾ-*

ಎಂದು ಮಾಚಯ್ಯನ ಹಂತಿಯ ಹಾಡಿನಲ್ಲಿ ಬಂದಿದೆ. ಪ್ರತಿಯೊಬ್ಬ ಶಿವಶರಣನು ಅರ್ಪಣೆಯ ಭಾವದಿಂದ ಅಂತ್ಯಕಾಲದವರೆಗೂ ಕಾಯಕ ಮಾಡತಕ್ಕದ್ದು. ಅವನಿಗೆ ಕಾಯಕದ ಒಂದು ಗುರುತೂ ಇರುವುದು. ಪ್ರಸಂಗ ಬಂದಾಗ ಅವನಿಗೆ ವಾದಿಗಳನ್ನು ಸಂಹರಿಸಲು (ಸೋಲಿಸಲು) ಕಾಯಕವೇ ಕತ್ತಿಯಾಗಿ ಪರಿಣಮಿಸುವುದು. ಶಿವಶರಣರು, ತಾವು ಕೈಕೊಂಡ 'ಕಾಯಕ'ವು ಸುಲಭವಾಗಿ ನಡೆಯದೆ ಭಂಗವಾಗಲು, ಸರ್ವವೂ ನಾಶವೆಂದು ತಿಳಿದುಕೊಳ್ಳುತ್ತಾರೆ. ಬಿಜ್ಜಳನು ಕೊಂಡೆಯರ ಮಾತನ್ನು ಕೇಳಿ 'ಕಲ್ಯಾಣ'ದ ಜಲಾಶಯಗಳಿಗೆ ಕಾವಲಿಡಿಸಿ ಮಾಚನ ಕಾಯಕಕ್ಕೆ ಅಡ್ಡಬರಲು

ಅಂಗದೊಳು ಬೆರೆತಿರುವ, ಲಿಂಗವೇ ನೀ ಗತಿಯು
ಭಂಗವಾಗುವದು ಕಾಯಕವು । ಹಿಪ್ಪರಗಿ
ಸಂಗ ನೀನೆನ್ನ ಸಲುಹೆಂದು ॥೪೯॥
ಹೊತ್ತು ಮುಣಗುತ ಬಂತು, ಬತ್ತಲಯ ಜಗಕೆಲ್ಲ
ಸತ್ಯನಂದಿಂದಿಗ್ಬುಸಿಯಾಯ್ತು । ಕಾಯಕದ
ಬುತ್ತಿ ತೀರ್ಹೋಯ್ತು ಈ ದಿನಕೆ ॥೫೦॥ *-ಮ-ಮಾ*

ಎಂದು ಮಾಚಯ್ಯನು ತನ್ನ ಆತ್ಮಲಿಂಗವನ್ನೇ ಮೊರೆಹೊಕ್ಕಿದ್ದಾನೆ.

ಮೇದಾರ ಕೇತಯ್ಯ

ಮರಣ ಬಂದರು ಕೂಡ, ಶರಣ ಕಾಯಕ ಮುಗಿಸಿ
ಹರುಷದಲಿ ಹರಣ ನೀಗಿದನು । ಕೇತಯ್ಯ
ಹರನಿತ್ತ ಪದವ ಕರುಣೆಯಲಿ ॥೧॥

'ಶರಣರ ಶಿವಕಾಯಕ, ಒರೆಗೆ ಹಚ್ಚುವರಾರು' ಎಂಬ ಮಾತೂ ಶಿವಶರಣರ ಜೀವನದಲ್ಲಿ ನಿಜವೆಂದು ಕಾಣುತ್ತದೆ.

ಬಿಸಿರಗುತ ಚಿಮ್ಮುತಿರೆ, ಹಸುನಗುತ ಕೇತಯ್ಯಾ
ನೊಸಲಗಣ್ಣನಿಗೆ ಕೈಮುಗಿದು । ಬೇಡಿದನು
ಕಸುವೊಂದೆ ಸಾಕು ಕಾಯಕಕೆ ॥೫೮॥

ಹಾರದಿರು ಪಡುಗಡಲ, ಏರಿ ಇಳಿಯುವರ ರವಿಯೆ
ಮಾರಹರನಾಣೆ ಎನ್ನಾಣೆ । ಶಿವಶರಣ
ಧೀರಕಾಯದ ಮನದಾಣೆ ॥೫೯॥

ಎಂದು ತಮ್ಮ ಕಾಯಕ ಸಾಧಿಸಲು ಶಿವಶರಣರು ಹೆಣಗಾಡುತ್ತಾರೆ.

ಪತಿಯು ಲಿಂಗಾಗಿದ್ದ, ಸತಿ ಶರಣೆ ನಾನಿದ್ದೆ
ರತನ ಕಾಯಕವೆ ಶಿವಪೂಜೆ । ಇಂದ್ಹೋಯ್ತು
ಜತನೇಕೆ ಇಂದು ಬಾಳುದಕೆ ॥೬೯॥ *-ಮೇ-ಕೇ*

ಕಾಯಕವು ಶಿವಶರಣರಿಗೆ ಹೀಗೆ ಶಿವಪೂಜೆಯಾಗಿದೆ. ಅಲ್ಲದೆ

ಹೊಸ ಮತವೆ ಲಿಂಗಾಗಿ, ಕಸಬೆಂಬ ಕರಡಿಗೆಯು
ಹಸನ ಮನವದಕೆ ಶಿವದಾರ । ದಾಸೋಹ
ಉಸಿಲು ಶಿವಶರಣ ಕೇತನಿಗೆ ॥೩೫॥
ಜೀಯ ಬಸವನೆ ಶರಣು, ಕಾಯಕವು ಶರಣರಿಗೆ
ತಾಯಿ ಬೇರಂತೆ ಶಿವಮತಕೆ । ಜಗದೊಳಗೆ
ಕಾಯಕವೆ ಕಾಣೊ ಕೈಲಾಸ ॥೨೫॥ *-ಮೇ-ಕೇ-*

ಕಾಯಕದ ತಳಹದಿಯ ಮೇಲೆ ನಿಂತಿದೆ ವೀರಶೈವ ಮತವು. ಜಾನಪದ ಕವಿಯು ಈ ಮಾತನ್ನು ಹಾಡಬೇಕಾದರೆ, ಜನಸಾಮಾನ್ಯರಿಗೆ ಕಾಯಕ ದಾಸೋಹ ಭಾವನೆಯು ಮನಸ್ಸಿನಲ್ಲಿ ಎಷ್ಟು ಬೇರೂರಿತ್ತೆಂಬುದು ವಿಶದವಾಗದಿರದು.

ಇಳಿಹಾಳ ಬೊಮ್ಮಯ್ಯ

ಶಿವಶರಣನಾದ ಒಕ್ಕಲಿಗನಿಗೆ ಅವನ ಹೊಲಗೆಲಸವೇ ಕಾಯಕವಾಗಿದೆ. ಒಕ್ಕಲಿಗನ ಕಾಯಕವೂ, ದಾಸೋಹವೂ ಮಿಗಿಲಾದುವು.

ಜಗದೊಳಗೆ ಕಾಯಕವೆ, ನಗುನಗುತ ಮಾಡುವನು
ಮಗುವಾಗಿ ಅವನೆ ಒಕ್ಕಲಿಗ। ಹೊಲಗೆಲಸ
ಹಗಲಿರುಳು ಕೇಳೋ ದಾಸೋಹ ॥೮॥

ಒಕ್ಕಲಿಗನು ಸದಾ ಕೊಡುಗೈಯು. ಅವನ ದಾಸೋಹವು, ಅವನಿಗೆ ತಿಳಿಯದೆ ಹನ್ನೆರಡೂ ತಿಂಗಳು ನಡೆಯುತ್ತದೆ.

ಮಣ್ಣೇ ನೀ ಕಾಯವಿದು, ಮಣ್ಣಾಗಿ ಹೋಗುವದು
ಸಣ್ಣಾಗಿ ಸವಿಸಿ ಜಂಗಮಕೆ। ದಾಸೋಹ
ಕಣ್ಣೊಂದೆ ಸಾಕು ಕಾಯಕಕೆ ॥೨೫॥ -ಇ-ಬೊ-

ಶಿವಶರಣರಿಗೆ 'ದಾಸೋಹ'ವೇ 'ಕಾಯಕ'ಕೆ ಕಣ್ಣಾಗಿದೆ. ಕಾಯಕದಲ್ಲಿ ಅರ್ಪಣೆಯ ಭಾವವಿದ್ದ ಮೂಲಕ ವೀರಶೈವರಲ್ಲಿ ದಾಸೋಹ ಬಂದಿದೆ. ಬಹುತರ ಎಲ್ಲ ಶಿವಶರಣರೂ ದಾಸೋಹಿಗಳಾಗಿದ್ದಾರೆ. ಅವರು ತಮ್ಮದನ್ನುವದೆಲ್ಲವೂ ಶಿವನ ಸೊಲ್ಲೆಂದು ಅವನಿಗೆ ಅರ್ಪಿಸುತ್ತಾರೆ. ನೀಡುವ, ಮಾಡುವ ಮನವೊಂದದಾದರೆ ಅದೇ ಅವರಿಗೆ ಕೈಲಾಸ. ಆ ಅರ್ಪಣೆಯ ಭಾವವೇ ಪ್ರಸಾದ.

ಪ್ರಸಾದವೇ ಶಿವಲಿಂಗ, ಪ್ರಸಾದವೇ ಶಿವಪೂಜೆ
ಪ್ರಸಾದವೇ ನಿತ್ಯ ಕಾಯಕವು। ಶರಣರಿಗೆ
ಪ್ರಸಾದವೇ ನೋಡು ಶಿವಲೋಕ ॥೧೮॥ -ಇ-ಬೊ-

ಪ್ರಸಾದದ ಮಹತ್ವವು ಇಷ್ಟು ಅದೆ ವೀರಶೈವರಿಗೆ! ಹಳಕಟ್ಟಿಯವರು "ಈ ಪ್ರಸಾದದಲ್ಲಿ ಯಾವುದು ಅರ್ಪಣಯುಕ್ತ ಕ್ರಿಯೆಯೊ ಅದೇ ದಾಸೋಹ ವೆನಿಸಿಕೊಳ್ಳುತ್ತದೆ. ದಾಸೋಹದಲ್ಲಿ ನಾನು ದಾಸನು, ನಾನು ಕಿಂಕರನು ಎಂಬ ಭಾವವಿರಬೇಕು. ಇದು ಸೇವಾ ಭಾವವು ಅಥವಾ ಭೃತ್ಯಾಚಾರವು... ಈ ಆಚಾರವಿಲ್ಲದೆ ಹೋದರೆ ಯಾವನೂ ಭಕ್ತನಾಗಲಾರನು. ಶರಣನಂತೂ ಎಂದಿಗೂ ಆಗಲಾರನು."[೨] ಎಂದು ಹೇಳಿದ್ದಾರೆ.

ಮಾತಿನೊಳು ದಾಸೋಹ, ನೀತಿಯೊಳು ದಾಸೋಹ
ಭೂತದಯೆ ನಿತ್ಯ ದಾಸೋಹ। ಬೊಮ್ಮಯ್ಯಾ
ಮೂತರದಿ ಮಾಡಿ ಜಂಗಮಕೆ ॥೧೯॥ -ಇ-ಬೊ-

ಜಾನಪದ ಕವಿಯು ಈ ಮಾತಿನಲ್ಲಿ ವಚನಕಾರರಿಗಿಂತಲೂ ಒಂದ್ಹೆಜ್ಜೆ ಮುಂದೆ ಹೋಗಿ ಬೊಮ್ಮಯ್ಯನು ದಾಸೋಹವನ್ನು ಎಲ್ಲದರಲ್ಲಿಯೂ ಕಂಡು ಜಂಗಮಕ್ಕೆ ಅರ್ಪಿಸಿದನೆಂದು ಹೇಳಿದ್ದಾನೆ.

ಪ್ರಸಾದಿ ಬೊಮ್ಮನಿಗೆ, ಕಸವರವೆ ಕಸವಾಯ್ತು
ಹೊಸರಾಸಿ ತುಂಬಿ ಕಣಸೂಸಿ ದಾಸೋಹ
ಹಸಗೂಸು ಹಾಲ ಕುಡಿದಂತೆ ॥೨೦॥ -ಇ-ಬೊ-

ಎಂದು ದಾಸೋಹದ ಒಂದು ತೃಪ್ತಿಯನ್ನು ಇಲ್ಲಿ ಕಾಣಬಹುದಾಗಿದೆ. ಅವರಿಗೆ ಕಾಯಕವು ನಂದಾದೀಪವು. ಅದರ ಬೆಳಕಿನಲ್ಲಿಯೇ ಅವರು ಶಿವಾನುಭವ ಮಾರ್ಗವನ್ನು ತುಳಿದಿದ್ದಾರೆ, ಪ್ರಪಂಚದಲ್ಲಿದ್ದು ಪಾರಮಾತ್ಮವನ್ನು ಗೆದ್ದಿದ್ದಾರೆ. ಅವರ ಕಾಯಕವೇ ಅವರಿದ್ದ ಹಳ್ಳಿಗಳಲ್ಲಿ ಸ್ಮಾರಕವಾಗಿ ಉಳಿದಿದೆ. ಒಕ್ಕಲಿಗನು ನೇಗಿಯ ಅಮುಗಯ್ಯನನ್ನು ಹಂತಿಯಲ್ಲಿ ಹಾಡಿ ಅವನ ಕಾಯಕ ದಾಸೋಹಗಳನ್ನು ಜನರು ತಿಳಿಯಲೆಂದು ತೇರು ಎಳಿಯುತ್ತಾನೆ.

ನೇಗಿಯದೆ ಕಾಯಕವ, ತ್ಯಾಗಿ ಅಮುಗನು ಮಾಡಿ
ಯೋಗ ಹೊಂದಿದನು ಹೊಳಜೆಯ। ಜನಭಜಿಸಿ
ತೂಗಿ ದಾಸೋಹ ತೇರೆಳೆದು ॥೧॥

ಈ ಶಿವಶರಣನ ಪ್ರಭಾವವು ಜನತೆಯ ಮೇಲೆ ಬಹಳ ಬೀಳಲು, ಅನೇಕ ರಾಜರು ಬಂದು ಅವನ ಪರಮ ಭಕ್ತರಾಗಿ ಲಿಂಗಾಂಗಿಗಳಾದದ್ದು ಈ 'ಹೂಳಜೆ'ಯ ಸಿದ್ಧಸೋಮೇಶನ ಗುಡಿಯಲ್ಲಿಯ ಶಿಲಾಶಾಸನದಿಂದ ತಿಳಿದು ಬರುವುದು.[೩] ಇದರಲ್ಲಿ ಬಂದ ಅನೇಕ ಸಂಗತಿಗಳನ್ನು, ಕೇಳಿ, ನೋಡಿದ ಜನಪದವು ಅದನ್ನು ಮರೆಯದೆ ಹಾಡುತ್ತ ಬಂದಿದೆ. ಅದೇ ಪರಂಪರೆಯಾಗಿ ಬಂದು ಅಮುಗಯ್ಯನ ಹಂತಿಯ ಹಾಡಿನಲ್ಲಿಯೂ ಎದ್ದು ಕಾಣುತ್ತಿದೆ.

---

೨. ಶಿವಶರಣರ ಚರಿತ್ರೆಗಳು, ಭಾಗ ೨, ಪು. ೨೧
೩. ಶಿವಾನುಭವ, ಸಂಪುಟ ೯, ಸಂಚಿಕೆ ೬, ಪು. ೪೦೧-೪೨೦

ಅಮುಗಯ್ಯ

ಟಾಣಕೋಲುಗಳೆರಡು, ಕಾಣೆಮಗ್ಗದೊಳೇನೊ
ತಾಣ ಹೊಂದಿಹುದು ಜಗದೊಳಗೆ । ಹೊಸಮತಕೆ
ಕಾಣೆ ದಾಸೋಹ ಕಾಯಕವು ॥

ದಾಸೋಹ ಕಾಯಕವು ಹೊಸಮತಕ್ಕೆ ಈ ಜಗತ್ತಿನಲ್ಲಿ ಪರಮತಗಳೊಡನೆ ಸರಿಯಾಗಿ ಕತ್ತೆತ್ತಿ ನಿಲ್ಲಲು ಒಂದು ಕಾಣೆ (Balance)ಯಾಗಿದೆ. ಈ ಕಾಣೆಯ ಮೂಲಕ ವೀರಶೈವಮತವು ಹೊಯ್ದಾಡದೆ ಇಲ್ಲಿಯವರೆಗೂ ಸ್ಥಿರವಾಗಿ ನಿಂತಿದೆ. ನೇಗಿಯ ಅಮುಗಯ್ಯನು ಕಲ್ಯಾಣದಲ್ಲಿ ತನ್ನ ಕಾಯಕ ಮಾಡುತ್ತ ಬಸವಾದಿ ಪ್ರಮಥರೊಡಗೂಡಿ ಇರುತ್ತಿದ್ದನು. ಅಮುಗಯ್ಯನು, ಜನಪದವು ಮೆಚ್ಚಿದ ಶರಣನಾಗಿ ಹೋಗಿದ್ದಾನೆ. ಜಾನಪದ ಕವಿಯು ಈ ಶಿವಶರಣನ ಹಂತಿಯ ಹಾಡಿನಲ್ಲಿ ಅಮುಗಯ್ಯನ ಹಿರಿಮೆಯನ್ನು ತಲೆದೂಗುವಂತೆ ಜನಪದಕ್ಕೆ ಹಾಡಿದ್ದಾನೆ. ಅನೇಕ ಐತಿಹಾಸಿಕ ಸಂಗತಿಗಳು ಹಾಡಿನಲ್ಲಿ ಅಡಕವಾಗಿರುವುದರಿಂದ, ಅವುಗಳನ್ನು ಕೆಳಗೆ ಚರ್ಚಿಸಲಾಗಿದೆ.

ನೇಗಿಕಾಯಕಹೂಡಿ, ತಾಗು ಬಾಗಿನ ಶರಣ
ಕೂಗಿ ನೇಯುತಲಿ ಕಲ್ಯಾಣ । ಮಂಟಪವು
ಬಾಗಿ ಶರಣೆಂದು ಬಾರೆಂದು ॥೭೧॥ *–ನೇ–ಅ–*

ಕಲ್ಯಾಣಮಂಟಪವು ಅಮುಗಯ್ಯನನ್ನು ಬಲು ಆದರದಿಂದ ಬರಮಾಡಿಕೊಂಡಿದೆ. ಕಲ್ಯಾಣಕ್ರಾಂತಿಯಾಗಲು, ಅಮುಗಯ್ಯನು ತನ್ನ ಕುಲದೇವರಾದ ಸಿದ್ಧಸೋಮಲಿಂಗದಲ್ಲಿ ಬಂದು ನಿಂತಿದ್ದಾನೆ. ಇದಕ್ಕೆ ಹೂಳಜೆಯ ಶಾಸನವೇ ಬಲವಾದ ಸಾಕ್ಷಿ.

ಸಿದ್ಧ ಸೋಮೇಶನಿಗೆ, ಇದ್ದೂರು ಮಣಿಮಣಿದು
ಸುದ್ದಿ ಅಮುಗಯ್ಯ ಶರಣೆಂದು। ಹಬ್ಬುತಲಿ
ಬಿದ್ದು ಜನಬಂತು ನೋಡುದಕೆ ॥೮೮॥

ತರದೆವಾಡಿಯ ರಾಯ, ಹುರಿಯಾಳು ಜೈತುಗಿಯ
ಹಿರಿಮಗನು ಶೂರಸಿಂಘಣನು । ಕೇಳಿದನು
ಶರಣ ಅಮುಗಯ್ಯ ಗುರುವೆಂದು ॥೮೯॥

ಕೇಳಿ ಕಾಣಲು ಬಯಸಿ, ಹೂಳಜೆಗೆ ನಾಳೆನದೆ
ಪಾಳೆಯೊಡಗೂಡಿ ಮುಟ್ಟಿದನು । ಕೈಮುಗಿದ
ತಾಳಿ ಮನದೊಳಗೆ ಗುರುವೆಂದು ॥೯೦॥

ಶಿವಮಂತ್ರ ಸಿಂಘಣನೆ, ಶಿವಶರಣನೂದಿದನು
ಶಿವನೆಂದು ದಂಡು ಭಜಿಸುತಲಿ । ಬಂದವರು
ಶಿವಮತಕೆ ಮೆಚ್ಚಿ ಕೈಮುಗಿದು ॥೯೧॥

ಶುದ್ಧೇಕ ದಶ ಮಾಘ, ಸಿದ್ಧಾರ್ಥಿ ವರುಷದೊಳು
ಸಿದ್ಧಸೋಮೇಶ ಭಕ್ತನಿಗೆ । ಸಿಂಘಣನು
ಇದ್ದೂರ ಗಡಿಗಿಡ್ಡೆ ವತನಿತ್ತ ॥೯೨॥

ದೀಪಮಾನೆಯ ಕೊಟ್ಟ, ಧೂಪಮಾನೆಯ ಕೊಟ್ಟ
ಸೋಪಾನಕಟ್ಟೆ ಭೀಮೆಯೊಳು । ಇಳಿಯುದಕೆ
ಸೋಪಾನ ಮಾನೆ ವತನಿತ್ತ ॥೯೩॥

ಸೋಯಿದೇವನ ಕೂಡ, ಜೋಯಿದೇವನು ಕೂಡಿ
ಕಾಯಕದ ಅಮುಗ ಗುರುವೆಂದು । ಊಳಿಗಕೆ
ದಾಯಿ ಮಾನೆಂದು ವತನಿತ್ತ ॥೯೪॥

ಸಿಂಘಣನ ಗುರುಭಕ್ತಿ, ಲಿಂಗವಂತರು ಕೇಳಿ
ಜಂಗುಕಟಗೊಂಡು ಹಾಡಿದರು । ಹೊಸಮತವು
ನುಂಗಿನಾಡನ್ನು ನೀರ್ಕುಡಿದು ॥೯೫॥ *–ನೇ–ಅ–*

ಮಹಾಶಿವಶರಣನಾದ ಅಮುಗಿದೇವನ ಮಹಿಮೆಯನ್ನು ಕೇಳಿದ ದೇವಗಿರಿ ಯಾದವ ಕುಲದ ಜೈತುಗಿಯ ಹಿರಿಯ ಮಗನಾದ ಸಿಂಘಣನು ಗುರುಭಕ್ತಿಯಿಂದ ಹೂಳಜೆಗೆ ಬಂದನು. ಆಗ ಸಿಂಘಣನು ತರದೆವಾಡಿ (ಈಗಿನ ವಿಜಾಪುರ ಜಿಲ್ಲೆಯ ಮೇಲ್ಭಾಗ)ಯನ್ನು ಆಳುತ್ತಿದ್ದನು. ಹೂಳಜೆಯು ಈ ತರದೆವಾಡಿಯಲ್ಲಿದೆ. ಇದು ಹೂಳಜೆಯ ಶಾಸನದಿಂದಲೇ ತಿಳಿದು ಬರುವುದು. ಸಿಂಘಣನು ಲಿಂಗಾಂಗಿ ಯಾದನೆಂಬ ಮಾತು ಸ್ಪಷ್ಟವಾಗಿ ಶಾಸನದಲ್ಲಿ ಬಾರದಿದ್ದರೂ 'ಸರ್ವನಮಶ್ಯವಾಗಿ' ಎಂದು ಬರುವುದರಿಂದ ಅವನು ಅಮುಗಿದೇವನ

ಭಕ್ತನಾಗಿ ಶಿವದೀಕ್ಷೆ ತಕ್ಕೊಂಡು 'ಗುರು'ಎಂದು ಒಪ್ಪಿ ನಡೆದುಕೊಂಡನೆಂದು ವಿಶದವಾಗುವುದು. ಅವನು ಅಮುಗಯ್ಯನಿಗೆ ಅತಿ ಭಕ್ತಿಯಿಂದ 'ಇಡ್ಡೆ' ಗ್ರಾಮವನ್ನು ವತನ ಹಾಕಿ ಕೊಟ್ಟನೆಂದು ಬರುವುದು. "…. ಪ್ರತಾಪ ಚಕ್ರವರ್ತಿ ಶ್ರೀ ಸಂಘಣ ದೇವರಸರು ಸರ್ವ ಸಿದ್ಧಾರ್ಥಿ ಸಂವತ್ಸರದ ಮಾಘ ಶುದ್ಧ ೧೧ ಸೋಮವಾರ ವ್ಯತಿಪಾತದಂದು ಪೂರ್ಣ್ಣಜೆಗೆ ಬಂದಲ್ಲಿ ದೇವಾರ್ಚನೆಯ ಸಮಯದಲು ಶ್ರೀ ಸ್ವಯಂಭು ಸಿದ್ಧ ಸೋಮನಾಥ ದೇವರ್ಗೆಂದಾಯಿದ್ದೆಯವನು ಸರ್ವನಮಶ್ಯವಾಗಿ ಅಮ್ಮುಗಿದೇವರಸರ್ಗೆ ಆಕರ ಪರಿಹಾರವಾಗಿ ಧಾರಪೂರ್ವಕಂ ಮಾಡಿಕೊಟ್ಟರು।" ಸಿಂಘಣನ ದಂಡನಾಯಕರು, ಸೋಯಿದೇವ, ಜೋಯಿದೇವ, ಮೊದಲಾದವರೂ ವತನವಿತ್ತದ್ದು ಬರುವುದು. ಈ ಮಹತ್ವದ ಪ್ರಸಂಗವನ್ನು ಕಣ್ಣಾರೆ ಕಂಡು ಜನಪದವು ಹೆಚ್ಚು ವಿಶದವಾಗುವಂತೆ ಹಾಡಿದೆ. ಜನಪದದಲ್ಲಿ ಅನೇಕ ಮಠ ಮೊದಲಾದುವುಗಳಿಗೆ ಈಗಲೂ, 'ದೀಪಮಾನೆ,' 'ಧೂಪಮಾನೆ'ಗಳು ನಡೆಯುತ್ತ ಬಂದಿವೆ. ಹಾಗೆ ಸಿಂಘಣನು ಕೊಟ್ಟ ಈ ದೇವಸ್ಥಾನದ ದೀಪಮಾನೆ, ಧೂಪಮಾನೆ, ಗುಡಿಯಿಂದ ಭೀಮೆಯೊಳು ಇಳಿಯಲಿಕ್ಕೆ ಸೋಪಾನ ಕಟ್ಟಿಸಿ ಅದರ ವ್ಯವಸ್ಥೆಗಾಗಿ ಕೊಟ್ಟ ಸೋಪಾನ ಮಾನೆಗಳು ಈಗಲೂ ದೇವಸ್ಥಾನಕ್ಕೆ ನಡೆಯುವುವು. ಸಿಂಘಣನ ದಂಡನಾಯಕರು, ಅಮುಗಯ್ಯನ ಭಕ್ತಮಂಡಳಿಯನ್ನು ನೋಡಿ ಅವರ ಉಪಜೀವನಕ್ಕೆ ಹಾಕಿಕೊಟ್ಟ 'ದಾಯಿ ಮಾನೆಯು' ಈಗಲೂ ಅದೆ. ಜಾನಪದ ಕವಿಯು ಇದು ಸಂಭವಿಸಿದ ಶುಭದಿವಸವನ್ನೂ ಹಾಡಿದ್ದಾನೆ. ಈ ಶುಭದಿನವೂ, ಶಿಲಾಶಾಸನದಲ್ಲಿ ಬಂದ ದಿನವೂ ಒಂದೇ ಆಗಿವೆ. ಇದನ್ನು ಕೇಳುವವರಿಗೆ ಸ್ವಲ್ಪ ಸೋಜಿಗವೆನಿಸಬಹುದು. ಇದು ಅನುಮಾನಪಡತಕ್ಕ ಸಂಗತಿಯೇನಲ್ಲ. ಹಳ್ಳಿಗಳಲ್ಲಿ ಹೋಗಿ ನೋಡಿದರೆ ಹಲಕೆಲವು ಹಿರಿಯರು 'ಕಲಿಯುಗ'ವನ್ನು ಸಹಜ ತಮ್ಮ ಬೆರಳಿನ ಮೇಲೆ ಎಣಿಸಿ ಹಲಕೆಲವು ಸಂದರ್ಭಗಳಾದ ದಿವಸಗಳನ್ನು ಸಹಜವೇ ಹೇಳಿಬಿಡುವರು. ಅಲ್ಲದೆ ಆ ಪ್ರಸಂಗಗಳು ಸಂಭವಿಸಿದ ಪ್ರತಿವರುಷದ ದಿನದಲ್ಲಿ ಅವುಗಳ ಸ್ಮಾರಕಕ್ಕಾಗಿ ಜಯಂತ್ಯೋತ್ಸವಗಳನ್ನು, ತೇರನ್ನೂ ಎಳೆಯುವರು. ಹೂಳೆಜೆಯ ಸಿದ್ಧಸೋಮಲಿಂಗನ ರಥೋತ್ಸವವು 'ಶುದ್ಧೇಕದಶ ಮಾಘದಲ್ಲಿ' ಪ್ರತಿವರುಷ ಜರಗುವುದು. ಅದನ್ನೇ ಜಾನಪದ ಕವಿಯು ತನ್ನ ಹಾಡಿನಲ್ಲಿ ಹಾಡಿದ್ದು ಆಶ್ಚರ್ಯವೇನು? ಕಾಲಜ್ಞಾನವನ್ನು ಸಾರುವ ಅಯ್ಯಗಳಿಂದ ಕೇಳಿದ ಜನಪದವು ಶಿವಶರಣರು ಕಲ್ಯಾಣ ಹೊಕ್ಕದ್ದನ್ನೂ, ಕಲಿ ಕೆಟ್ಟು ಶಿವಶರಣರು ಕಲ್ಯಾಣ ಬಿಟ್ಟು ಹೋದ ದಿನವನ್ನೂ ಕೇಳಿದರೆ ಸಹಜ ಹೇಳಿಯೇ ಬಿಡುವುದು. ಇಂತಹದೇ ಇನ್ನೊಂದು ಮಾತನ್ನು ಈ ಜಾನಪದ ಕವಿಯು ಹಾಡಿದ್ದಾನೆ.

ವಿಕ್ರಮಾ ವರುಷದಲಿ, ಹೊಕ್ಕೇವು ಕಲ್ಯಾಣ
ವಕ್ರ ರಾಕ್ಷಸವು ಬರಲಿಂದು । ಕಲಿಕಾಲ
ನಕ್ಕು ನಮ್ಮನ್ನೆ ನುಂಗುವದು ॥೭॥ *–ಮ–ಮಾ–*

ಎಂದು ಮಡಿವಾಳ ಮಾಚಯ್ಯನ ಹಂತಿಯ ಹಾಡಿನಲ್ಲಿ ಬಂದಿದೆ. ಈ ಮಾತುಗಳನ್ನು ಎಲ್ಲ ಕಾಲಜ್ಞಾನಿಗಳ ವಚನಗಳಲ್ಲಿ ಬಹುತರವಾಗಿ ಕಾಣಬಹುದು. ಜನಪದವು ಆಚರಿಸುವ ವೈಶಾಖ ಶುದ್ಧ ಬಿದಗಿಯೂ ಬಸವಜಯಂತಿಯ ದ್ಯೋತಕವಾಗಿದೆ. ಆದುದರಿಂದ ಜಾನಪದ ಕವಿಯು ಹೇಳುವ ಈ ತಿಥಿಮಿತಿಗಳಲ್ಲಿ ಸಂಶಯ ಪಡುವ ಕಾರಣವೇ ಇಲ್ಲ. ಇದರಂತೆ ಇಳಿಹಾಳ ಬೊಮ್ಮಯ್ಯನ ಗುಡಿಯಲ್ಲಿ ಈಗಲೂ ನಡೆಯುವ ದಾಸೋಹದ ದಿನವು, ಬೊಮ್ಮಯ್ಯನು ನೆನಗಡಲೆಯ ಬೀಜಗಳನ್ನು ಕಂಬಿಯ ಪರಸಿಗೆ ಹಂಚಿದ ದಿನವೇ ಇರಬಹುದೇ? ಜಾನಪದ ಕವಿಯು ಶಿವಶರಣ ಅಮುಗಯ್ಯನು ಲಿಂಗದೊಳಗಾದ ಕಾಲವನ್ನೂ ಕೊಟ್ಟಿದ್ದಾನೆ.

ಮಾಗಿಯಾ ಕಾಲದೊಳು, ಬೇಗಿನೊಳು ಶಿವಪೂಜೆ
ಬಾಗಿ ಅಮುಗಯ್ಯ ಮಾಡುತಲೇ । ಲಿಂಗದೊಳು
ಸಾಗಿ ಬಯಲಾಗಿ ಬೆಳಗಾಗಿ ॥೯೩॥ *–ನೇ–ಅ–*

ಅಮುಗಯ್ಯನು ಐಕ್ಯವಾದ ಕಾಲ ಒಂದು ದಿನ ಚಳಿಗಾಲ. ಅಂದು ಬೇಗಿನಲಿ ಲಿಂಗಪೂಜೆಯ ಮಾಡಿದ ಶಿವಶರಣನು ಬೆಳಗಾಗುವುದರೊಳಗೆ ಲಿಂಗದೊಳಗಾದನೆಂದು ಜಾನಪದ ಕವಿಯು ಹೇಳುವನು. ಹೀಗೆ ಈ ಜಾನಪದ ಕವಿಯು ಕಂಡವರಂತೆ ಜನತೆಯ ಪರಂಪರೆಯನ್ನು ಕೇಳಿ, ಚಾಚೂ ತಪ್ಪದೆ ಹೇಳಲು ಹೋಗಿದ್ದಾನೆ.

ಉಗುಳು ನುಂಗದ ಭಜನೆ, ಹಗಲಿರುಳು ಮಾಡುವರು
ಹೊಗಳುವದು ಪರಸಿ ಅಮುಗಯ್ಯ। ಶರಣೆಂದು
ಸೊಗಸಿನೊಳು ಹಾಡಿ ತೇರೆಳೆದು ॥೧೦೩॥ *–ನೇ–ಅ–*

ಎಂದು ಜನರ ಭಕ್ತಿಭಾವವನ್ನು ಹಾಡಿ ಹೊಗಳಿದ್ದಾನೆ.

ಹೂಗಾರ ಮಾದಯ್ಯ

ಕಾಯಕವಾದಿಯಾದ ಹೂಗಾರ ಮಾದಯ್ಯನ ಭಕ್ತಿಗೆ ಹರನು ಮೆಚ್ಚಿ ಕೈಲಾಸಕ್ಕೆ ಬಾ ಎನ್ನಲು,

ಕಾಯಕವೆ ಕೈಲಾಸ, ಮಾಯೆ ಕೊಲ್ಲುವ ಕೆಲಸ
ಆಯು ಬೆಳೆಸುದಕೆ ಸಾಹಸವು । ಜಗದೊಳಗೆ
ಹೇಯ ಸಂಸಾರ ನೀಗುದಕೆ ॥೩೩॥ *–ಹೂ–ಮಾ–*

ಎಂದು ಹೂಗಾರ ಮಾದಯ್ಯನು ಹರನ ಕೈಲಾಸವನ್ನು ಹೀಯಾಳಿಸಿ, ಕಾಯಕದ ಹಿರಿಮೆಯನ್ನು ಸಾರಿದ್ದಾನೆ. ಶಿವಶರಣರ ಸಂಸ್ಕೃತಿಯ ಸಂಪರ್ಕದಿಂದ ಕನ್ನಡಿಗರಿಗೆ ಕಾಯಕವು ಉಚ್ಚ ಜೀವನದ ಪಾರಮಾತ್ಮದ ಹೆದ್ದಾರಿಯಾಯಿತು. ಅನೇಕರು ಅವರ ಮಾರ್ಗವನ್ನು ತುಳಿಯುತ್ತ ಬಂದರು.

ಹೆಚ್ಚಿನದು ಕಾಯಕವು, ಕೆಚ್ಚಿದೆಯ ಶರಣರಿಗೆ
ನೆಚ್ಚಿ ಮಸಣಯ್ಯ ರೇಮಯ್ಯ । ತಂದೆಗಳು
ಬಿಚ್ಚಿ ಕಾಯಕವ ತೋರಿದರು ॥೩೬॥
ಶಿವ ನೀನು ಹರಸಿದರೆ, ಭವದೊಳಗೆ ಹೆಚ್ಚಿನದೆ
ಶಿವಪದಕೆ ಮಿಗಿಲು ಕಾಯಕವು । ಜಗದೊಳಗೆ
ಶಿವಮತಕೆ ಮಾಡೊ ದಾಸೋಹ ॥೩೭॥

ನಿನ್ನ ಸಗ್ಗಕೆ ಹೆಚ್ಚು, ನನ್ನ ಕಾಯಕ ಶಿವನೆ
ನನ್ನೆಯಲಿ ಸೇವೆ ಶರಣರಿಗೆ । ಸಲ್ಲಿಸಲು
ಹೊನ್ನ ಬೆಳೆ ನಿಜವು ಜಗದೊಳಗೆ ॥೩೮॥

ಕೀಳು ಮೇಲೆಂಬುವದು, ವಾಳಿಜನಕಲ್ಲದಲೆ
ಕೇಳು ಶರಣರಿಗೆ ಸಮರಸವು । ಕಾಯಕವು
ಆಳ್ವ ದಂಡಿಗೆಯು ತಳ್ಳುದಕೆ ॥೩೯॥ *–ಹೂ–ಮಾ–*

ಅಂದಿನ ಸಮಾಜದಲ್ಲಿ ಶಿವಶರಣರ ಕಾಯಕವು ಇಂದು ರಾಷ್ಟ್ರ ರಾಷ್ಟ್ರಗಳು ಸಾರುವ ಸಮತಾವಾದ (Socialism) ವನ್ನು ಕರ್ನಾಟಕದಲ್ಲಿ ಎಂದೋ ಪ್ರಚಾರ ಮಾಡಿಬಿಟ್ಟಿದೆ. ಅವರ ತತ್ವವಿಚಾರಗಳ ಓಘವು ಮುಂದುವರಿಯಲ್ಪಟ್ಟಿದ್ದರೆ ವೀರಶೈವ ಧರ್ಮವು ವಿಶ್ವಧರ್ಮವಾಗಿ ಕರ್ನಾಟಕವು ಜಗತ್ತಿಗೆ ಬೆಳಕನ್ನು ತೋರಿಸಬಹುದಾಗಿತ್ತು. ಆದರೆ ಅದೆ ಏನು? ಕನ್ನಡಿಗರ ದುರ್ಭಾಗ್ಯ! ಧರ್ಮ ಧರ್ಮಗಳ ತಿಕ್ಕಾಟದಲ್ಲಿ ಈ ಓಘವು ನಿಂತು ಹೋಯಿತು. ಶಿವಶರಣರ ಯುಗದಲ್ಲಿ ತುಂಬಿದ ಕನ್ನಡಿಗರು ಕಟ್ಟಾಗಿ, ಮತ್ತೆ ಆರಂಭಶೂರರಾಗಿಯೇ ಉಳಿದಿದ್ದಾರೆ.

ಹೂಗಾರ ಮಾದಣ್ಣ, ತೂಗಿದನು ಕಾಯಕವ
ಸಾಗಿ ಶಿವ ಬಂದು ಗಣಪದವ । ಕೇಳೆನಲು
ಬಾಗಿ ಕೈಲಾಸ ಕೆಳಗಾಯ್ತು ॥೪೧॥ *–ಹೂ–ಮಾ–*

ಅಷ್ಟು ಬಲಾಢ್ಯವಾಗಿತ್ತು ಶಿವಶರಣರ ಕಾಯಕವು! ಕಾಯಕವೆಂದರೆ ಜೀವಾತ್ಮವಿಲ್ಲದ ಶಿವಶರಣರ ಮಾದಯ್ಯನ ಕಳೇವರವು ಜೀವಕಳೆ ತುಂಬಿತೆಂದು ಜಾನಪದ ಕವಿಯು ಹಾಡಿದ್ದಾನೆ.

ಏಳೇಳು ಕಾಯಕಕೆ, ಕೇಳಿ ಮಾದನ ಜೀವ
ಗಾಳಿಯೊಳು ಬಂದು ಕಳೆತುಂಬಿ । ಹುಸಿದೇಹ
ತಾಳಿ ಹೊಸ ಬೆಳಕ ಕಣ್ದೆರೆದು ॥೭೮॥ *–ಹೂ–ಮಾ–*

ಕಾಯಕ ದಾಸೋಹವನ್ನರಿಯದ ಮಲೆನಾಡಿನವರನ್ನು ಕಂಡ ಈ ಜಾನಪದ ಕವಿಯು ಬೆಳುವಲ ದಾಸೋಹವನ್ನು ಬಣ್ಣಿಸಿ ಅಣಕವಾಡಿದ್ದಾನೆ.

ಸುಗ್ಗಿ ದಾಸೋಹೆಂದು, ಹಿಗ್ಗು ಬೆಳವಲು ನೋಡು
ಹುಗ್ಗಿ ಹೋಳಿಗೆಯು ನಿನ್ನಾಡು । ಸುಗ್ಸ್ಯೂಟ
ನಗ್ಗೇಡು ಇದಕೆ ಮಲೆನಾಡು ॥೮೮॥ *–ಹೂ–ಮಾ–*

ಶಿವಶರಣರ ಹಂತಿಯ ಹಾಡುಗಳನ್ನು ಹಾಡದೆ, ರಾಶಿಯನ್ನು ಮೂಕಹಂತಿಯ ಕಟ್ಟಿ ಮಾಡುವುದನ್ನು ನೋಡಿ ಮಲೆನಾಡು ನಗ್ಗೇಡು ಎಂದು ಕವಿಯು ಹೇಳಿ ನಕ್ಕಿದ್ದಾನೆ.

ಜಾತಿಗರ ಚೌಡಯ್ಯ

ಕುಣಿಯುವದೆ ಕಾಯಕವು, ತಣಿಸುವದೆ ದಾಸೋಹ
ತಣಿದ ಜಂಗಮರ ಶಿವಕೂಟ । ಚೌಡನಿಗೆ
ಗಣಶಿವನು ಕುಣಿವ ಶಿವ ಲೋಕ ॥೧೯॥

ಜಾತಿಗರ ಚೌಡಯ್ಯನಿಗೆ ಶಿವನ ಬಹುರೂಪಗಳನ್ನು ಹಾಕಿ ಕುಣಿದು ತೋರಿಸುವುದೇ ಒಂದು ಕಾಯಕವಾಗಿತ್ತು. ಕಾಯಕವು ಶಿವಶರಣರ ಪಾರಮಾರ್ಥಿಕ ಹಾದಿಯಾಗಿದ್ದರೂ, ಅವರಿಗೆ ಧರ್ಮವನ್ನು ಪ್ರಸಾರಮಾಡುವ ಬಲವಾದ ಸಾಧನವೂ ಆಗಿದೆ. ಅನೇಕ ಪರಮತವಾದಿಗಳು ಶಿವಶರಣರ ಕಾಯಕಕ್ಕೆ ಸೋತು ಅವರಿಂದ ಶಿವ ದೀಕ್ಷೆ ಹೊಂದಿ ಲಿಂಗಾಂಗಿಗಳಾಗಿದ್ದಾರೆ.

ಕುಣಿದ ರೂಪಗಳುಟ್ಟು, ಮಣಿದು ಹಾಡಿದ ಚೌಡ
ದಣಿವೆ ಕಾಯಕವು ಶರಣರಿಗೆ। ದಿನಮಣಿಗೆ
ಪಣವೆ ಈ ಜಗವ ಬೆಳಗುದಕೆ ॥೩೩॥ *-ಜಾ-ಚೌ-*

ಎಂಧು ಜಾನಪದ ಕವಿಯು ಕಾಯಕದ ಶಕ್ತಿಯನ್ನು ಹೇಳಿದ್ದಾನೆ.

ಕರಗಿ ಹೋಯಿತು ಹೆಮ್ಮೆ, ಮರೆತು ಹೋಯಿತು ಕುನುಸು
ನರಿ ಜಗಿಯ ಸಿಂಹವೆನಬಹುದೆ। ಜಗದೊಳಗೆ
ಹರಭಕ್ತಸೇವೆ ಮಿಗಿಲೆಂದು ॥೩೪॥

ಸೋತ ಅಚ್ಚುತನೆದ್ದು, ನೀತಿಯಲಿ ಮಾತಾಡಿ
ಜ್ಯೋತಿ ನೀ ಗುರುವು ಚೌಡಯ್ಯ। ಕೈ ಮುಗಿದು
ಜೀತೆಂದು ಮೇಳ ಸೇರಿದನು ॥೩೫॥ *-ಜಾ-ಚೌ-*

ಹೀಗೆ ಚೌಡಯ್ಯನು ತನ್ನ ಕಾಯಕ ಮಾಡಿ, ಜನರಿಗೆ ಶಿವದೀಕ್ಷೆಯನ್ನು ಕೊಡುತ್ತ ಅಡ್ಡಾಡಿದ್ದಾನೆ. ಚೌಡಯ್ಯನ ರಾಮರಾಗವನ್ನು ಕೇಳಬೇಕೆಂದು ಶಿವನು ಅವನಲ್ಲಿ ಸೇವಕನಾಗಿ ನಿಂತು ಚೌಡಯ್ಯನಿಗೆ ಮೆಚ್ಚಿ ನಿಜರೂಪ ತೋರಿ ನಿನಗೆ ಕೈಲಾಸ ಕೊಡುವೆ ಬಾ ಎನಲು

ಬೇಡೆನಗೆ ಕೈಲಾಸ, ನೀಡೆನಗೆ ಶಿವಭಕ್ತಿ
ಮಾಡುವೆನು ಸೇವೆ ಶಿವಮತಕೆ। ಶರಣರಿಗೆ
ನಾಡು ಕಾಯಕವೆ ಕೈಲಾಸ ॥೮೨॥ *-ಜಾ-ಚೌ-*

ಎಂದು ಹೇಳಿ ಶಿವನ ಕೈಲಾಸವನ್ನು ನಿರಾಕರಿಸಿ ನಾಡ ಕಾಯಕವನ್ನು ಬೇಡಿದ್ದಾನೆ.

ಕುಂಬಾರ ಗುಂಡಯ್ಯ

ಪರಮ ಶಿವಭಕ್ತನಾದ ಕುಂಬಾರ ಗುಂಡಯ್ಯನು ಕಾಯಕದ ಶಿವಕಣಿಯು

ಪ್ರಾಣಲಿಂಗಿಯು ಗುಂಡ, ಏನೊಂದು ಹೊರಗರಿಯ
ಪ್ರಾಣಲಿಂಗದೊಳು ಶಿವಬೆಳಕು। ಬೀಳುತಲಿ
ತಾಣ ಕಳೆಯೇರಿ ಕಾಯಕವು ॥೮॥

ಮೂರುಲಿಂಗದ ಕಳೆಯ, ಬೀರುತಲಿ ಗುಂಡಯ್ಯ
ತೋರಿ ಆ ಕಳೆಯು ತನ್ನೊಳಗೆ। ಒಡಮೂಡಿ
ಸೂರಿ ಕಾಯಕವೆ ಜನಕಾಯ್ತು ॥೯॥

ಕಾಯಕವೆ ಶಿವಭಕ್ತಿ, ಕಾಯಕವೆ ಶಿವಭಜನೆ
ಕಾಯಕವೆ ಲಿಂಗ ಶಿವಪೂಜೆ। ಶಿವಯೋಗ
ಕಾಯಕವೆ ಕಾಯ್ವ ಕೈಲಾಸ ॥೧೦॥ *-ಕುಂ-ಗುಂ-*

ಎಷ್ಟು ಸಮರಸವಾಗಿದ್ದಾನೆ ಕುಂಬಾರ ಗುಂಡಯ್ಯನು ತನ್ನ ಕಾಯಕದಲ್ಲಿ! ಹೀಗೆ ಹಾಡುವ ಈ ಜಾನಪದ ಕವಿಯ ಕಾಯಕ ಸಂಸ್ಕಾರವು ಎಷ್ಟು ಅಪಾರವಾಗಿರಬಹುದು? ಶಿವಶರಣರು ಕಾಯಕದಲ್ಲಿ ನಿರತರಾದರೆ ಅದರೊಡನೆ ಬೆರೆತು ಒಂದಾಗುವರು. ಅವರಿಗೆ ಬಾಹ್ಯಲೋಕದ ಪರಿವೆಯೇ ಉಳಿಯುವುದಿಲ್ಲ. ಶಿವಭಕ್ತ ಗುಂಡನು ಕಾಯಕದಲ್ಲಿ ಬೆರೆತಿರಲು, ಶಿವನು ಬಂದು ಅವನ ಮುಂದೆ ಕುಣಿದರೂ ಆ ಭಕ್ತನಿಗೆ ಪರಿವೆಯೇ ಇರುವುದಿಲ್ಲ. ಪ್ರಾಣಲಿಂಗದ ಚಿತ್ಕಳೆಯನ್ನು ಶಿವನು ಹಿಡಿದೆತ್ತಲು ಆಗ ಗುಂಡಯ್ಯನು ಶಿವನನ್ನು ಕಾಣುತ್ತಾನೆ. ಶಿವನು ಮೆಚ್ಚಿ ಶಿವಪದವ ಕೊಡುವೆ ಬಾ ಎನಲು,

ಬೇಡೆನಗೆ ಕೈಲಾಸ, ಬಾಡುವದು ಕಾಯಕವು
ನೀಡೆನಗೆ ಶಿವನೆ ಕಾಯಕವ। ಕುಣಿದಾಡಿ
ನಾಡ ಹಂದರಕೆ ಹಬ್ಬಿಸುವೆ ॥೪೯॥ *-ಕುಂ-ಗುಂ-*

ಎಂದು ತಾನು ಕಾಯಕ ತತ್ತ್ವವನ್ನು ಹಬ್ಬಿಸಲು ಹುಟ್ಟಿ ಬಂದಿಹೆನೆಂದೂ ತನಗೆ ಕೈಲಾಸ ಬೇಡೆಂದೂ, ಕಾಯಕವು ಬಾಡುವುದೆಂದೂ, ಸಾರಿಹೇಳುತ್ತಾನೆ. ಕಾಯಕವೇ ಅವನಿಗೆ ಸಮರಸವಾಗಿದೆ. ಇದೇ ಮಾತನ್ನು ಶಿವಶರಣರು ಕೃತಿಯಲ್ಲಿ ತೋರಿಸಿ, ಕಾಯಕವನ್ನು ಜನಪದದಲ್ಲಿ ಹಬ್ಬಿಸುತ್ತ ಬಂದಿದ್ದಾರೆ.

ಮಾದರ ಚೆನ್ನಯ್ಯ

ಮಾದರ ಚೆನ್ನಯ್ಯನು, ಕರಿಕಾಲ ಚೋಳನ ಕಾಲದಲ್ಲಿ ಶಿವಕಾಂಚಿಯಲ್ಲಿ ಆಗಿಹೋದ ಶಿವಶರಣ. ಬಸವಣ್ಣನವರು ತಮ್ಮ ವಚನಗಳಲ್ಲಿ ಇವನಿಗೆ ವಿಶೇಷ ಮಾನಮನ್ನಣೆಯನ್ನು ಕೊಟ್ಟಿದ್ದಾರೆ. "ಮನ್ನಣೆಯ ಚೆನ್ನಯ್ಯನೆನ್ನುವ ಮನ್ನಿಸ, ಉನ್ನತ ಮಹಿಮ ಕೂಡಲ ಸಂಗಮದೇವಾ ಶಿವಧೋ ಶಿವಧೋ." ಅಲ್ಲದೆ "ಅಪ್ಪನು ಡೋಹರ ಕಕ್ಕಯ್ಯನಾಗಿ ಮುತ್ತಯ್ಯ ಚೆನ್ನಯ್ಯನಾದರೆ ಆನು ಬದುಕುವೆನು." ಎಂದೆನ್ನುವ ಬಸವಣ್ಣನವರಿಗೆ ಮಾದರ ಚೆನ್ನಯ್ಯನು ಹಿರಿಯನಾಗಿ ಬಹಳ ಆದರಣೀಯನಾಗಿದ್ದಾನೆ. ಕಾಯಕವಾದಿಗಳಾದ ಶರಣರಿಗೆ ಉಚ್ಚ ನೀಚವೆಂಬ ಕುಲಗಳೇ ಇಲ್ಲ. ಅವರಿಗೆ ಶಿವಾನುಭವವನ್ನರಿತವರೆಲ್ಲರೂ ಕುಲಜರು, ಸಮಾನಸ್ಕಂಧರು. ಚೆನ್ನಯ್ಯನೂ ಸಮರಸ ಕಾಯಕ ಜೀವಿಯಾಗಿದ್ದಾನೆ. ಅವನ ಕಾಯಕಕ್ಕೆ ಮಡದಿ ಗಂಗಾದೇವಿಯು ಸಹಾಯಕಳಾಗಿದ್ದಾಳೆ.

ಗಂಡ ಭಕ್ತನು ಹಣತೆ, ಹೆಂಡತಿಯು ಶಿವಭಕ್ತಿ
ಉಂಡು ಬಾಳುವೆಯು ಹಣತೆಣ್ಣೆ। ಕಾಯಕವು
ಕಂಡು ಶಿವಬೆಳಕು ಜಗದೊಳಗೆ ॥೩೧॥ *–ಮಾ–ಚೆ–*

ಶರಣರಿಗೆ ಕಾಯಕವು ಈ ಲೋಕದಲ್ಲಿ ಕಂಡು ಶಿವಬೆಳಕಾಗಿದೆ. ಹೀಗೆ ಕಾಯಕ ದಾಸೋಹದ ಮಹಿಮೆಯನ್ನು ಜಾನಪದ ಕವಿಯು ಶಿವಶರಣರ ಹಂತಿಯ ಹಾಡುಗಳ ಅನೇಕ ಸಂದರ್ಭಗಳಲ್ಲಿ ಹಿತಮಿತವಾಗಿ ಕೊಟ್ಟಿದ್ದಾನೆ. ಹೀಗೆ ನೂರೊಂದು ಶಿವಶರಣರ ಕಾಯಕ ದಾಸೋಹದ ಪರಿಯನ್ನು ನಾವು ಕಾಣಬಹುದಾಗಿದೆ. ಶಿವಶರಣರ ತತ್ವಗಳು ಹಳ್ಳಿಹಳ್ಳಿಗೆ, ಮನೆಮನೆಗೆ, ಮುಟ್ಟಿ ಶಿವಾನುಭವವನ್ನು ಬೀರಿದುವು. ಶಿವಾನುಭವವು ಜನತೆಯ ದಿನನಿತ್ಯದ ಮಾತಾಯಿತು. ಶಿವಾನುಭವ ಚರ್ಚೆಗಳು ನಡೆದು ಶಿವಾನುಭವ ಸಾಹಿತ್ಯವು ಜಾನಪದ ಸಾಹಿತ್ಯದಲ್ಲಿಯೂ ಬೆಳೆಯುತ್ತ ಬಂತು. ಹೆಣ್ಣು ಮಕ್ಕಳು ಶಿವಶರಣರ ಹಾಡುಗಳನ್ನು ಹಾಡಹತ್ತಿದರು. ಒಕ್ಕಲಿಗನು ತನ್ನ ಹೊಲಗೆಲಸದಲ್ಲಿ ಶಿವಶರಣರ ಹಂತಿಯ ಹಾಡುಗಳನ್ನು ಹಾಡುತ್ತ ಬಂದ. ಹೀಗೆ ಕರ್ನಾಟಕವು ಶಿವಶರಣರ ನೆಲೆವೀಡೆಂಬ ಮಾತುಗಳು ಜನಪದದೆದೆಯಲ್ಲಿ ಕೊರೆಯಲ್ಪಟ್ಟವು. ಅ.ನ.ಕೃಷ್ಣರಾಯರು ಹೇಳುವಂತೆ "ವೀರಶೈವ ಸಾಹಿತ್ಯ ಸಂಸ್ಕೃತಿಗಳೆಂದರೆ ಕನ್ನಡ ಸಾಹಿತ್ಯ ಸಂಸ್ಕೃತಿ; ವೀರಶೈವ ಧರ್ಮವೆಂದರೆ ಕನ್ನಡ ಧರ್ಮವೆನ್ನುವಷ್ಟು ದೂರ ನಮ್ಮ ವಿಚಾರ ಲಹರಿಯು ಮುಂದುವರಿದಿದೆ."[೪] ಅಷ್ಟು ಕನ್ನಡತನವಿದೆ ಈ ಶಿವಶರಣರ ಸಂಸ್ಕೃತಿಯಲ್ಲಿ! ಅನ್ಯಮತಸ್ಥರು ಸಹ ಶಿವಶರಣರ ಸಂಬಂಧ ಅದರ ಭಾವ ತಾಳಿ ಅವರ ಜೀವನವನ್ನು ಅಭ್ಯಾಸ ಮಾಡಿ, ಅದರ ರಹಸ್ಯೆಯನ್ನು ಬೆಳಕಿಗೆ ತರಲು ಯತ್ನಿಸಹತ್ತಿದ್ದಾರೆ.

❐

೪. 'ವೀರಶೈವ ಸಾಹಿತ್ಯ ಮತ್ತು ಸಂಸ್ಕೃತಿ' ಮುನ್ನುಡಿ – ಪು.೧

2. ಕಂಬಿಗಳು

ಪ್ರಯಾಣ ಸೌಕರ್ಯಗಳಿಲ್ಲದ ಪುರಾತನ ಕಾಲದಲ್ಲಿ ಪ್ರವಾಸವು ಪ್ರಾಣಸಂಕಟವಾಗಿತ್ತು. ಜನರು ಗುಂಪುಗಟ್ಟಿಕೊಂಡೇ ಪ್ರವಾಸ ಮಾಡುತ್ತಿದ್ದರು. ಕುದುರೆ, ಎತ್ತು, ಕತ್ತೆ ಮೊದಲಾದುವುಗಳ ಮೇಲೆ ಸಾಗಾಟ ಸಾಗಿತ್ತು. ಯಾಂತ್ರಿಕ ವಾಹನಗಳ ಪರಿಚಯವೇ ಜನತೆಗಿದ್ದಿಲ್ಲ. ಸಕಲ ಸಲಕರಣೆಗಳಿಲ್ಲದ ಆಗಿನ ಕಾಲದಲ್ಲಿ ಕ್ಷೇತ್ರಯಾತ್ರೆಗಳಿಗೆ ಹೋಗುವ ಜನರು ಅನ್ನ, ನೀರು, ಮೊದಲಾದ ಸಾಮಗ್ರಿಗಳನ್ನು ತಮ್ಮ ಸಂಗಡವೇ ಒಯ್ಯುತ್ತಿದ್ದರು. ಜ್ಯೋತಿರ್ಲಿಂಗಗಳೇ ಆಗಿನ ಕಾಲದಲ್ಲೆಲ್ಲರಿಗೂ ಯಾತ್ರಾಸ್ಥಾನಗಳಾಗಿದ್ದುವು. ದಕ್ಷಿಣದಲ್ಲಿಯ ಶ್ರೀಶೈಲ ಮಲ್ಲಿಕಾರ್ಜುನ ಲಿಂಗವು ಮೊದಲಿನಿಂದಲೂ ಮಹಾಕ್ಷೇತ್ರಸ್ಥಾನವಾಗಿದೆ. ಈ ದೇವರ ಭಕ್ತರು ದಕ್ಷಿಣ ಹಿಂದೂಸ್ತಾನದ ಎಲ್ಲ ಭಾಗಗಳಲ್ಲಿರುವರು. ಶಿವರಾತ್ರಿ ಹಾಗೂ ಯುಗಾದಿಯಲ್ಲಿ ಪ್ರತಿ ವರುಷ ಈ ದೇವರ ರಥೋತ್ಸವವು ಆಗುವುದು. ಆ ತಿಂಗಳಲ್ಲಿ ಜನರು ಒಂದೇ ಸವನೆ ಈ ಕ್ಷೇತ್ರಕ್ಕೆ ಬರುವರು. ಗಿರಿಯ ಕಡವಂಡಿಗಳನ್ನೇರಿ ಶಿಖರವನ್ನು ಮುಟ್ಟಿ ಅನೇಕ ತೀರ್ಥಕೊಳ್ಳಗಳಲ್ಲಿ ಮಿಂದು, ಮಲ್ಲಿಕಾರ್ಜುನನ ದರ್ಶನವನ್ನು ತೆಗೆದುಕೊಳ್ಳುವದೆಂದರೆ, ಈಗಲೂ ಸಾಮಾನ್ಯ ಕೆಲಸವಲ್ಲ. ಪ್ರಾಚೀನ ಕಾಲದಲ್ಲಂತೂ ವನ್ಯಪಶುಗಳ ನೆಲೆವೀಡಾದ ಈ ಅರಣ್ಯವನ್ನು ದಾಟಿ ಹೋಗುವುದು ದೊಡ್ಡ ಕುತ್ತೇ ಆಗಿತ್ತು. ಆ ಕಾಲದಲ್ಲಿ ಹಲಕೆಲವು ಜನರು ಮಾತ್ರ ಈ ಗಿರಿಯನ್ನೇರಿ ದೇವರನ್ನು ಕಂಡುಬರುತ್ತಿದ್ದರು. ಕಡಿದಾದ ಈ ಗಿರಿಯನ್ನೇರುವಾಗ ಜನರು ಕಂಬಿಗೆ (ಕೋಲಿಗೆ) ಕಾವಡಿಗಳನ್ನು (ನೆಲುವುಗಳನ್ನು) ತೂಗಬಿಟ್ಟು ಅವುಗಳಲ್ಲಿ ತಮಗೆ ಬೇಕಾಗುವ ಸಾಮಗ್ರಿಗಳನ್ನು ಒಯ್ಯುತ್ತಿದ್ದರು. ಹಾದಿಯಲ್ಲಿ ಪರವುತಲಿಂಗನಿಗೆ ಹೋಗದಾಗದ ಜನರು ತಮ್ಮ ಹರಕೆ, ಮುಡಿಪು ಮೊದಲಾದುವುಗಳನ್ನು ಮಲ್ಲಯ್ಯನಿಗೆ ಮುಟ್ಟಿಸಿರೆಂದು ಪರಸಿಯೊಡನೆ ಪರವುತಕ್ಕೆ ಹೋಗುವ ಯಾತ್ರಿಕರಿಗೆ ಕಳುಹಿಸಿ ಕೊಡುತ್ತಿದ್ದರು. ಆ ಜನರಿಗೆ ಹಾದಿಯಲ್ಲಿ ಆದರ ಸತ್ಕಾರ ಮಾಡಲು ಜನರು ಹಳ್ಳಿಹಳ್ಳಿಗೆ ಅನ್ನ ನೀರಿನ ದಾಸೋಹಗಳನ್ನು ಇಡುತ್ತಿದ್ದರು. ಇಂತಹ ಸ್ಥಳಗಳ ಸ್ಮಾರಕವನ್ನು ಈಗಲೂ ಕಾಣಬಹುದಾಗಿದೆ. ವಿಜಾಪುರ ಜಿಲ್ಲೆಯಲ್ಲಿಯ 'ಇಳಿಹಾಳ,' 'ಗೊಲಗೇರಿ' ಇವು ಮೊದಲಿನಿಂದಲೂ ಇದರ ಸಂಬಂಧ ಪ್ರಸಿದ್ಧ ಇವೆ. ಈ ಜನರು ತಮ್ಮ ಯಾತ್ರೆಯನ್ನು ಮುಗಿಸಿಕೊಂಡು ಊರ ಸೇರಲು, ಊರಿಗೆ ಊರೇ ಇವರ ದರ್ಶನ ತಕ್ಕೊಳ್ಳಲು ಭಕ್ತಿಯಿಂದ ಇದಿರುಗೊಳ್ಳುತ್ತಿದ್ದರು, ಈಗಲೂ ಇದಿರುಗೊಳ್ಳುತ್ತಾರೆ. ಈ ಯಾತ್ರಿಕರು ತಮ್ಮ ಕಂಬಿಗಳಲ್ಲಿಯೇ ಮಲ್ಲಯ್ಯನು ನೆಲಿಸಿ ಪರವುತಗಿರಿಗೆ ಕರೆದೊಯ್ದನೆಂದು ಹೇಳುತ್ತ ಬಂದಿದ್ದಾರೆ. ಬರಬರುತ್ತ ಕೇವಲ ಕೋಲಾದ ಕಂಬಕಾವಡಿಗಳು ಬೇರೆ ರೂಪತೊಟ್ಟು ಇಂದಿನ 'ಕಂಬಿಯ ಮಲ್ಲಯ್ಯ'ನೇ ಆದವೆಂದು ಕಂಡುಬರುವುದು.

ಈಗಿನ ಕಂಬಿಗಳನ್ನು ಪರಿಶೀಲನ ಮಾಡಿ ನೋಡಿದರೆ, ಐದಾರು ಮೊಳ ಬಿದುರಿನ ಪೊಳ್ಳ ಕಂಬಿಯು (ಕೋಲು) ನಡುವೆ ಇದ್ದು ಅದರ ಎರಡೂ ತುದಿಗಳಿಗೆ ಮೂರು ಮೊಳ ಎತ್ತರವಿರುವ ಎರಡು ಟಸಿಲುಗಾಲುಗಳನ್ನು ಜೋಡಿಸಿರುವರು. ಈ ಕಾಲುಗಳಿಗೆ ಕಾಯಕ ಘಂಟೆಗಳನ್ನು ಕಟ್ಟುತ್ತಾರೆ. ಕಂಬಿ (ಕೋಲು) ಹಾಗೂ ಕಾಲುಗಳು ಕೂಡುವ ಮುಂಭಾಗದಲ್ಲಿ ನಂದಿಯನ್ನು ಸ್ಥಾಪಿಸಿ ಅದಕ್ಕೆ ಕಳಸವನ್ನು ಕೂಡ್ರಿಸುವರು. ಹೀಗೆ ತಯಾರಾದ ಈ ಆಕೃತಿಗಳಿಗೆ ಗಲ್ಲೀಪಗಳನ್ನು ಹಾಕಿ ಕಂಬಿಗೆ (ಕೋಲಿಗೆ) ಪತಾಕಿಗಳನ್ನು ಸುತ್ತುವರು. ಅಲ್ಲಲ್ಲಿ ಭಸ್ಮಲೇಪನ ಮಾಡಿ ಜನತೆಯಲ್ಲಿ ಅದಕ್ಕೊಂದು ಪಾವನತೆಯು ಬರುವಂತೆ ಮಾಡುತ್ತಾರೆ. ಕಂಬಿಯ ಮುಂಭಾಗದಲ್ಲಿಯೂ, ಹಿಂಭಾಗದಲ್ಲಿಯೂ, ಈ ಕಂಬಿಯ ಅಯ್ಯಗಳು, ಗಲ್ಲೀಪದ ಹಿಂದೆ ಕಾಲುಗಳ ಮಧ್ಯದಲ್ಲಿ ಕಾವಡಿಗಳನ್ನು (ನೆಲುವುಗಳನ್ನು) ಕಟ್ಟಿ ಅವುಗಳಲ್ಲಿ ತಮಗೆ ಬೇಕಾಗುವ ಹಾದಿಬುತ್ತಿಯನ್ನೂ, ನೀರು ಮೊದಲಾದ ಸಾಮಗ್ರಿಗಳನ್ನೂ ಈಗಲೂ ಇಟ್ಟು ಕೊಳ್ಳುತ್ತಾರೆ. ಅವರು ಪರವುತಕ್ಕೆ ಹೊರಡಲು ಅನೇಕ ಭಕ್ತರೂ ಅವರನ್ನು ಹಿಂಬಾಲಿಸುವರು. ಭಕ್ತರು ಕೊಡುವ ಸಾಮಗ್ರಿಗಳನ್ನು ಅಯ್ಯಗಳು ಪರಸಿಗೆ ದಾಸೋಹ ಮಾಡುತ್ತ ಪರವುತ ಕ್ಷೇತ್ರ ಮುಟ್ಟುವುದನ್ನು ಈಗಲೂ ನೋಡಿ ಮನಗಾಣಬೇಕು. ಬಸವಾದಿ ಪ್ರಮಥರ ಕಾಯಕ ವಾದವು ಜನತೆಯಲ್ಲಿ ಹಬ್ಬಲು ವೀರಶೈವರಲ್ಲಿ ಈ ದೇವರ ಸೇವೆಯು ಒಂದು ಕಾಯಕವೇ ಆಯಿತು. ಅದಕ್ಕೆ 'ಕಂಬಿಯ ಕಾಯಕ'ವೆಂದು ಕರೆಯುತ್ತಾರೆ. ಈ ಕಾಯಕ ಮಾಡುವ ಜನರಿಗೆ 'ಕಂಬಿಯ ಅಯ್ಯ'ಗಳೆಂದೂ, 'ಕಾವಡಿ ಅಯ್ಯ'ಗಳೆಂದೂ ಕರೆಯುವ ವಾಡಿಕೆಯಿದೆ. ಕಲ್ಯಾಣ ಕ್ರಾಂತಿಯಾಗಲು ಅಲ್ಲಮಪ್ರಭು, ಅಕ್ಕಮಹಾದೇವಿ, ರುದ್ರಮುನಿ ಮೊದಲಾದ ಶಿವಶರಣರು ಶ್ರೀಶೈಲವನ್ನು ಸೇರಲು, ಈ ಕಂಬಿಯ ಕಾಯಕವು ವೀರಶೈವ ಧರ್ಮವನ್ನು ಹಬ್ಬಿಸಲು ಅನೇಕ ರೀತಿಯಿಂದ ಸಹಾಯವಾಯಿತು. ರಾ.ಬ.ಪಿ.ಜಿ. ಹಳಕಟ್ಟಿ ಅವರು "ಕರ್ನಾಟಕದಿಂದ ಭಕ್ತ ಜಂಗಮರ ಪರಸೆಗಳು ಅಸಂಖ್ಯಾತವಾಗಿ ಶ್ರೀಶೈಲಕ್ಕೆ ಯಾವಾಗಲೂ ಹೋಗುತ್ತಿದ್ದುದು ಶಿವಶರಣರ ಚರಿತ್ರೆಗಳಿಂದ ತಿಳಿದುಬರುತ್ತದೆ. ಹೀಗೆ

ಕ್ಷೇತ್ರಸ್ಥಾನಗಳಿಗೆ ದೂರ ದೂರ ದೇಶಗಳಿಂದ ಧಾರ್ಮಿಕ ಪುರುಷರು ಬರುತ್ತಿರುವದರಿಂದ ಅವರಲ್ಲಿ ಪರಸ್ಪರ ವಿಚಾರ ವಿನಿಮಯಗಳಾಗಲು ಸಂಧಿಯು ದೊರೆಯುತ್ತದೆ. ಆದ್ದರಿಂದ ಇಂಥ ಸ್ಥಾನಗಳು ಧರ್ಮಪ್ರಸಾರಕ್ಕೆ ಬಹಳ ಅನುಕೂಲವಾದವುಗಳು."[೧] ಎಂದು ಹೇಳಿದ್ದಾರೆ. ಶ್ರೀಶೈಲಕ್ಕೆ ಹೋದ ಈ ಕಂಬಿಯ ಅಯ್ಯಗಳು ಆ ಶಿವಶರಣರಿಗೆ ಭೆಟ್ಟಿಯಾಗಿ, ದೇಶದಲ್ಲಿಯ ವಾರ್ತೆಯನ್ನು ಅವರಿಗೆ ಅರುಹಿ ಅವರಿಂದ ಧರ್ಮ ನಿರೂಪಣೆಗಳನ್ನು ಹೊತ್ತಂದು ವೀರಶೈವ ಶಿವಾಚಾರವನ್ನು ಹಬ್ಬಿಸಲು ಪ್ರಯತ್ನ ಮಾಡಿದ್ದಾರೆ. ಅಂದಿನಿಂದ ವೀರಶೈವರಿಗೆ ಕಂಬಿಯ ಮಹತ್ವ ಬಹಳವಾಗುತ್ತ ಬಂತು. ಈಗ ವೀರಶೈವರಲ್ಲಿ 'ಕಂಬಿ' ಇದಕ್ಕೆ ವಿಶಿಷ್ಟ ಮಹತ್ವವೂ, ಅರ್ಥವೂ ಇದೆ. ಅವರಿಗೆ ಕಂಬಿ ಅಂದರೆ ಕೇವಲ ಕೋಲು ಅಲ್ಲ. ಶ್ರೀಶೈಲ ಮಲ್ಲಿಕಾರ್ಜುನನ ಬೇರೆ ರೂಪಾಂತರವು. ನಿರಾಶ್ರಿತರಾಗಿ ಶಿವಶರಣರು ಶ್ರೀಶೈಲವನ್ನು ಸೇರಲು, ಅವರ ಪರಮಧರ್ಮವನ್ನು ಸುತ್ತಲೂ ಹಬ್ಬಿಸಲು ಕಂಬಿಗಳು ಶಿವಶರಣರಿಗೆ ಬಹಳ ಸಹಾಯವಾಗಿವೆ. ವೀರಶೈವರಲ್ಲಿ ದೊಡ್ಡ ದೊಡ್ಡ ಸಿರಿವಂತರು ಮಲ್ಲಯ್ಯನ ಒಕ್ಕಲುಗಳಾಗಿ, ಕಂಬಿಗಳನ್ನು ತಮ್ಮ ಮನೆಯಲ್ಲಿಟ್ಟು, ದುಡ್ಡು ಕೊಟ್ಟು ಕಂಬಿಯ ಅಯ್ಯಗಳನ್ನು ಪರವುತಕ್ಕೆ ಕಳುಹಿಸಿ, ದೇವರ ದರ್ಶನ ನಿಮಿತ್ತದಿಂದ ಶಿವಶರಣರ ತತ್ವಗಳನ್ನು ಅರಿಯಲಿಕ್ಕೆ ಪ್ರಯತ್ನ ಮಾಡಿದ್ದಾರೆ. ಅನೇಕ ಭಕ್ತರ ಮನೆಗಳಲ್ಲಿ ಈಗಲೂ ಕಂಬಿಗಳಿದ್ದು ಅವರು ವರುಷಕ್ಕೊಮ್ಮೆ ದುಡ್ಡು ಕೊಟ್ಟು ಪರವುತಕ್ಕೆ ಕಂಬಿಯ ಅಯ್ಯಗಳನ್ನು ಕಳುಹಿಸುವದೇ ಇದಕ್ಕೆ ಬಲವಾದ ಸಾಕ್ಷಿ. ಪರವುತಕ್ಕೆ ಹೋದ ಕಂಬಿಗಳು ದೇವರ ದರ್ಶನ ತೆಗೆದುಕೊಂಡು ಮಲ್ಲಯ್ಯನ ವಾಲಗ ಮಾಡುತ್ತ, ಊರ ಸೇರುವ ಮುನ್ನ ಊರ ಮುಂದಿನ ಬನದಲ್ಲಿ ಬಂದು ಇಳಿಯುವುವು. ಆಗ ಊರ ಜನರು ಭಕ್ತಿಯಿಂದ ಇದಿರುಗೊಂಡು ಸಂಭ್ರಮದಿಂದ ಕಂಬಿಗಳನ್ನು ಸಾಲುದೀವಟಿಗೆಗಳ ಬೆಳಕಿನಲ್ಲಿ ಊರೊಳಗೆ ಕರೆದುತರುವರು. ಅವುಗಳ ಪೂಜಾವಿಧಾನಗಳಾದ ಮೇಲೆ ಕಂಬಿಯ ಅಯ್ಯಗಳು ಅವುಗಳನ್ನೆತ್ತಿ ಆಡಿಸುತ್ತ ವಾಲಗ ಮಾಡುವರು. 'ಉಘೆ, ಉಘೆ' ಎಂಬುದು ಮಲ್ಲಯ್ಯನ ವಾಲಗದ ಘೋಷಣೆಯಾಗಿದೆ.

ವಾಲಗ ಮಾಡುವುದೆಂದರೆ, ದೀವಟಿಗೆಗಳನ್ನೆತ್ತಿ, ಮಲ್ಲಿಕಾರ್ಜುನನ ಬಿರುದಾವಳಿಗಳನ್ನು ಕೊಂಡಾಡಿ ಉಗ್ಗಡಣೆಯನ್ನು ಮಾಡುವುದು. ಇದಕ್ಕೆ ಕಂಬಿಯ ಅಯ್ಯಗಳು 'ಉಗ್ಗಳಿಸು' ಎಂದು ಕರೆಯುತ್ತಾರೆ. ಮಲ್ಲಿಕಾರ್ಜುನನ ಬಿರುದಾವಳಿಗಳೂ ಹಾಡುಗಳೂ ಮಂಗಳಾರುತಿಗಳೂ, ಹರಕೆಗಳೂ ಜಾನಪದದಲ್ಲಿ ಹೇರಳವಾಗಿವೆ.

'ಉಗ್ಗಳಿಸುವುದು'

೧. ಶಿವಶಿವೊ ಹಾಲಮಲ್ಲಯ್ಯ, ಓಲಮಲ್ಲಯ್ಯ, ಸಕ್ಕರಿಸಲುಗಾರಮಲ್ಲಯ್ಯ
ಮಹಾಂತ ಮಲ್ಲಯ್ಯ ಉಘೇ ಉಘೇ ॥

೨. ಹಾಲಗಿರಿ, ಮೇಲಗಿರಿ, ಸಿದ್ಧಗಿರಿ ಸಿಂಹಾಸನಗಿರಿ, ಶ್ರೀಪಾದಕೆ
ಮಹಾಂತ ಮಲ್ಲಯ್ಯ ಉಘೇ ಉಘೇ ॥

೩. ಗಂಗಾನ ಪಳಿ ಡೆಂಗ ಮಲ್ಲಯ್ಯ ಶ್ರೀಪಾದಕೆ
ಮಹಾಂತ ಮಲ್ಲಯ್ಯ ಉಘೇ ಉಘೇ ॥

೪. ಕಡೆಬಾಗಿಲ ಕರವೀರಭದ್ರ ಶ್ರೀಪಾದಕೆ
ಮಹಾಂತ ಮಲ್ಲಯ್ಯ ಉಘೇ ಉಘೇ ॥

೫. ಭೀಮನ ಕೊಳ್ಳದ, ಭೀಮೇಶ್ವರ ಶ್ರೀಪಾದಕೆ
ಮಹಾಂತ ಮಲ್ಲಯ್ಯ ಉಘೇ ಊಘೇ ॥

೬. ಅಡಕೇಶ್ವರ, ಶ್ರೀಕೇಶ್ವರ, ಶ್ರೀಪಾದಕೆ
ಮಹಾಂತ ಮಲ್ಲಯ್ಯ ಉಘೇ ಉಘೇ ॥

೭. ಪಂಚದಾರಿ ಪಲ್ಲದಾರಿ ಶ್ರೀಪಾದಕೆ
ಮಹಾಂತ ಮಲ್ಲಯ್ಯ ಉಘೇ ಉಘೇ ॥

೮. ಬಂಗಾರ ಗುಡಿ, ಚೋಳಮಲ್ಲಿಕಾರ್ಜುನ ಶ್ರೀಪಾದಕೆ
ಮಹಾಂತ ಮಲ್ಲಯ್ಯ ಉಘೇ ಉಘೇ ॥

೯. ಪಾತಾಳಗಂಗೆ, ಜ್ಯೋತಿರ್ಲಿಂಗ ಶ್ರೀಪಾದಕೆ
ಮಹಾಂತ ಮಲ್ಲಯ್ಯ ಉಘೇ ಉಘೇ ॥

೧೦. ಅತ್ತೀಕಟ್ಟ ಮುತ್ತ್ಯಾ ಮುದುಮಲ್ಲನ ಶ್ರೀಪಾದಕೆ
ಮಹಾಂತ ಮಲ್ಲಯ್ಯ ಉಘೇ ಉಘೇ ॥

೧೧. ಹಾಲಗಂಗೆ, ನೀಲಗಂಗೆ, ಪಂಚ ಪಾತಾಳಗಂಗೆ, ಶ್ರೀಪಾದಕೆ
ಮಹಾಂತ ಮಲ್ಲಯ್ಯ ಉಘೇ ಉಘೇ ॥

---

೧. 'ಶಿವಶರಣರ ಚರಿತ್ರೆಗಳು – ಭಾಗ–೨ ಪು. ೩೩೫.

೧೨. ಬ್ಯಾಳೀ ಬಸವೇಶ್ವರ ಶ್ರೀಪಾದಕೆ
ಮಹಾಂತ ಮಲ್ಲಯ್ಯ ಉಘೇ ಉಘೇ ॥
೧೩. ಹೆಚ್ಚೆಚ್ಚು ಪೂಜೆ ಮಾಡಲು, ಮೆಚ್ಚುವ ಶ್ರೀಪಾದಕೆ
ಮಹಾಂತ ಮಲ್ಲಯ್ಯ ಉಘೇ ಉಘೇ ॥
೧೪. ಬಂದ ಕಂಟಕ ಬೈಲು ಮಾಡುವ, ಬೋರಾದೇವಿ ಪತಿ ಶ್ರೀಪಾದಕೆ
ಮಹಾಂತ ಮಲ್ಲಯ್ಯ ಉಘೇ ಉಘೇ ॥

ಜಯನಮಃ ಪಾರ್ವತಿ ಪತಿ ಹರಹರ ಮಹಾದೇವ ॥

ಎಂದು ರಾಗವೆತ್ತಿ ಉಗ್ಗಳಿಸುವುದನ್ನು ಕೇಳಿದರೆ, ಕೇಳುವವರ ಮನದಲ್ಲಿ ಭಕ್ತಿಯ ಆವೇಶವು ತುಂಬದಿರಲಾರದು. ಈ ಉಗ್ಗಡಣೆಯು ಶ್ರೀಶೈಲಕ್ಷೇತ್ರದಲ್ಲಿರುವ ದೇವರ ನಾಮಾವಳಿಯೇ ಎಂದು ಹೇಳಬಹುದು. ಈ ಹಾಡಿನಲ್ಲಿ ಶ್ರೀಶೈಲಕ್ಕೆ 'ಸಿದ್ಧಗಿರಿ'ಯೆಂದೂ ಕರೆದಿದ್ದಾರೆ. ರೇವಣಸಿದ್ಧೇಶ್ವರನಿಂದ ಕೊಲ್ಹಾಪುರದಲ್ಲಿ ಭಂಗ ಹೊಂದಿದ ಗೋರಕ್ಷನು, ಬಹುತರವಾಗಿ ಶ್ರೀಶೈಲ ಸಿದ್ಧರ ಆಶ್ರಯಕ್ಕೆ ಬಂದು ನಿಂತಿರಬಹುದು. ಮುಂದೆ ಶಿವಶರಣರು ಶ್ರೀಶೈಲವನ್ನು ತಮ್ಮ ಪೀಠಸ್ಥಾನವನ್ನಾಗಿ ಮಾಡಿಕೊಂಡು ಶಿವಾನುಭವವನ್ನು ಸಾರಹತ್ತಲು ಅಲ್ಲಿದ್ದ ಸಿದ್ಧರೆಲ್ಲರೂ ವೀರಶೈವರಾಗಿ ಹೋಗಿರಬಹುದು. ಯಾಕೆಂದರೆ ಗೋರಕ್ಷನ ನಂತರ ಶ್ರೀಶೈಲದಲ್ಲಿ ಸಿದ್ಧರ ಸುಳಿವೇ ಕಂಡುಬರುವುದಿಲ್ಲ. ಉಗ್ಗಡಣೆಯು ಮುಗಿದ ಕೂಡಲೆ ಮಲ್ಲಿಕಾರ್ಜುನನ ಹಾಡನ್ನು ಹಾಡುತ್ತಾರೆ. ಈ ಹಾಡು ನೂರಾರು ನುಡಿಗೂ ಮಿಕ್ಕುವುದು. ಇದರಲ್ಲಿ ಮಲ್ಲಿಕಾರ್ಜುನನ ಲೀಲೆಗಳೂ, ಭಕ್ತರ ಭಕ್ತಿಯೂ ವಿಶೇಷವಾಗಿ ವರ್ಣಿಸಲ್ಪಟ್ಟಿವೆ. ಚಪ್ಪಾಳಿಗಳ ತಾಳಹಾಕಿ ಗೋಣುಹಾಕುತ್ತ, ಹಿಮ್ಮೇಳ, ಮುಮ್ಮೇಳಗಳು ರಾಗವೆತ್ತಿ ಈ ಹಾಡನ್ನು ಹಾಡಹತ್ತಲು, ಕೇಳಲು ಬಲು ಇಂಪೆನಿಸುವುದಲ್ಲದೆ ಭಕ್ತಿರಸವು ತುಂಬಿ ಹೊರಸೂಸುವುದು. ಮಲ್ಲಯ್ಯನ ಲೀಲೆಗಳನ್ನು ಕೇಳುವ ಎಲ್ಲರಿಗೂ, ಆಗ ಅವನ ಪರಮಭಕ್ತರಾಗಿ ತಮ್ಮ ಬಯಕೆಗಳನ್ನು ಕೈಗೂಡಿಸಬೇಕೆಂದೆನಿಸುವುದು.

ಮಲ್ಲಯ್ಯ ಮಲ್ಲಯ್ಯ ಸಿರಿಗಿರಿ ಮಲ್ಲಯ್ಯನ ನೋಡುವ ಬನ್ನೆ।
ಎಲ್ಲಾ ದೇವರಿಗೆ ಒಡೆಯ ಬಲ್ಲಿದನೊ ಚೆನ್ನಮಲ್ಲ ॥

ಎಂದು ಆರಂಭವಾಗುವ ಹಾಡು ಸಿರಿಗಿರಿ ಮಲ್ಲಯ್ಯನನ್ನು ನೋಡಲು ಕೂಡಿದವರನ್ನು ಶ್ರೀಶೈಲಕ್ಕೆ ಕರೆದೊಯ್ಯುವುದು. ಹಾಡನ್ನು ಕೇಳುತ್ತ ಕೇಳುತ್ತ ಹೋದಂತೆ ಜೀವನ ತತ್ವ ದರ್ಶನವೂ ನಮ್ಮ ಕಿವಿಗೆ ಬೀಳುವುದು.

ಗಂಡಹೆಂಡಿರ ಮನವೊಂದಾದರೆ ನಂದಾದೀಪೊ ಮಲ್ಲಯ್ಯ।
ಗಂಡಹೆಂಡಿರ ಮನವೆರಡಾದರೆ, ದಂಡಾ ಕೊಡಿಸುವ ಮಲ್ಲಯ್ಯ ॥

ಬಾಳಿನ ತಾತ್ಪರ್ಯವೇ ಈ ಪದ್ಯದಲ್ಲಿ ಬಂದುಹೋಗಿಬಿಟ್ಟಿವೆ. ಬಾಳಿನಲ್ಲಿ 'ಗಂಡಹೆಂಡಿರ ಮನವೊಂದಾದರೆ ನಂದಾದೀಪೊ' ಎಂಬ ಮಾತುಗಳು ಪ್ರಪಂಚ ಪ್ರಣತೆಯಲ್ಲಿ ಪ್ರೇಮತೈಲವನ್ನು ಹೀರಿ ಗಂಡಹೆಂಡಿರ ಕೂಡ್ಬತ್ತಿಗಳುರಿದು ಚೆಲ್ಲಿದ ಬೆಳಕೇ ನಾವಿಂದು ತಿಳಿದುಕೊಂಡ ಸಮರಸ ಜೀವನ. ಭಕ್ತರಿಂದ ಮಲ್ಲಯ್ಯನು ಬಯಸಿದ್ದೇ, ಇದು ಅವನ ಹೆಸರಿನ ನಂದಾದೀಪ. ಹೀಗೆ ವೀರಶೈವರ 'ಪ್ರಪಂಚ ಬಿಟ್ಟು ಪಾರಮಾರ್ಥವಿಲ್ಲ' ಎಂಬ ಮಹಾತತ್ವವೂ ಇಲ್ಲಿ ಧ್ವನಿತವಾಗುತ್ತದೆ.

ಬಿತ್ತಲೋದ ನೆನಗಡಲಿಯನೆ, ಮತ್ತೆ ಜಂಗಮಗೆಡೆಮಾಡಿ
ಬಿತ್ತದೆ ಬೆಳೆದ 'ಇಲಾಳ' ಬೊಮ್ಮ ಸತ್ಯರ ಪಾದಕ ಶರಣಯ್ಯ ॥

ಈ ಇಳಿಹಾಳ ಬೊಮ್ಮಯ್ಯನು ಕಾಲ್ಪನಿಕ ಪುರುಷನಲ್ಲ. ಪೆರ್ಮಾಡಿರಾಯನ ಕಾಲದಲ್ಲಿದ್ದ ಮಹಾಶಿವಶರಣ. ಕಾರಣ ಇವನು ಬಸವೇಶ್ವರನಕಿಂತಲೂ ಮುಂಚಿನವ ನೆಂದು ರಾ.ಬ.ಪಿ.ಜಿ. ಹಳಕಟ್ಟಿ ಅವರು ಒಪ್ಪಿದ್ದಾರೆ. "ಕೇಶಿರಾಜ, ಇಳಿಹಾಳ ಬೊಮ್ಮಯ್ಯ, ಬಾಹೂರ ಬೊಮ್ಮಯ್ಯ, ರಾಗದ ಸಂಕಣ್ಣ, ಇವರು ಪೆರ್ಮಾಡಿರಾಯನ ಕಾಲದವರು. ಚಾಲುಕ್ಯರಲ್ಲಿ ಅತ್ಯಂತ ಪ್ರಸಿದ್ಧಿಯನ್ನು ಹೊಂದಿದ, ವಿಕ್ರಮಾದಿತ್ಯನಿಗೆ 'ಪೆರ್ಮಾಡಿ' ಎಂಬ ಹೆಸರಿತ್ತು. ಈ ರಾಜನು ೧೦೭೦ರಿಂದ ೧೧೨೬ರ ವರೆಗೆ ಅಂದರೆ ಬಸವೇಶ್ವರನಕಿಂತಲೂ ಮೊದಲು ರಾಜ್ಯವಾಳಿದನು."[೨] ಅಲ್ಲದೆ, ಇಳಿಹಾಳ ಬೊಮ್ಮಯ್ಯನ ಚರಿತ್ರೆಯಲ್ಲಿ "ಅವನು ತಾನು ತಂದ ಕಡಲೆಯನ್ನು ರಾತ್ರಿಯಲ್ಲಿ ನೆನೆಹಾಕಿ ಬೆಳಗಾದ ಬಳಿಕ ಅವುಗಳನ್ನು ಹೆಡಗೆಯಲ್ಲಿ ತುಂಬಿಕೊಂಡು ಹೊಲದಲ್ಲಿ ಬಿತ್ತಬೇಕೆಂದು ಹೊರಟನು. ಅವನು ಹೊಲಕ್ಕೆ ಹೋಗುವ ಕಾಲದಲ್ಲಿ ಶ್ರೀಶೈಲಕ್ಕೆ ಹೋಗುವ ಒಂದು ಪರಸೆಯು ಅವನ ಸಮೀಪದಲ್ಲಿಯೇ ಹಾಯ್ದು ಹೋಗುತ್ತಿತ್ತು. ಅದರಲ್ಲಿ ಅನೇಕ ಭಕ್ತರೂ, ಜಂಗಮರೂ, ಇದ್ದರು. ಅವರು ಆ ಕ್ಷಾಮದ ಕಾಲದಲ್ಲಿ ಬಹಳ ನೀರಡಿಸಿ ಹಸಿದವರಾಗಿದ್ದರು. ಅವರು ಬೊಮ್ಮಯ್ಯನ ಹತ್ತಿರ ಇದ್ದ ಹೆಡಗೆಯನ್ನು ನೋಡಿ ಅದು ಬುತ್ತಿಯೆಂದು ತಿಳಿದು... ಅದನ್ನು ತಿಂದು ಅವನನ್ನು ಹರಸಿ ಮುಂದೆ ಹೊರಟುಹೋದರು."[೩] ಹೀಗೆ ಬಂದ ಬೊಮ್ಮಯ್ಯನ ಕಥೆಯು ಮೇಲಿನ ಪದ್ಯದಲ್ಲಿ ಅಡಕವಾಗಿದೆ. ಬಿತ್ತಲೋದ ನೆಗಡಯನು' ಶ್ರೀಶೈಲಕ್ಕೆ ಹೊರಟ ಜಂಗಮರಿಗೂ, ಪರಸಿಗೂ, ಹಂಚಿ ಬಿತ್ತದೆ, ಬೆಳೆಯನ್ನು ಕಂಡ ಬೊಮ್ಮಯ್ಯನನ್ನು ಜನಪದವು ಹೇಗೆ ಮರೆಯಬೇಕು? ಒಕ್ಕಲಿಗನಾದ ಬೊಮ್ಮಯ್ಯನನ್ನು ಒಕ್ಕಲಿಗನು ಹಾಡದಿರುವನೇ? ಈಗ ಸಂಕಲಿಸಲಾದ 'ಇಳಿಹಾಳ ಬೊಮ್ಮಯ್ಯ'ನ ಹಂತಿಯ ಹಾಡಿನಲ್ಲಿ ಮೇಲೆ ಹೇಳಿದ ಎಲ್ಲ ಕಥೆಯೂ ಬರುವುದು.

---

೨. 'ಶಿವಶರಣರ ಚರಿತ್ರೆಗಳು – ಭಾಗ-೨ ಪ್ರಸ್ತಾವನೆ-ಪು. ೮.
೩. 'ಶಿವಶರಣರ ಚರಿತ್ರೆಗಳು – ಭಾಗ-೨ ಪು. ೨೭೩.

ಮೆರೆದ ಪೆಮ್ಮಡಿರಾಯ, ತರದೆವಾಡಿಯ ಗೆದ್ದು
ಹಿರಿದಾತು ಹಿಗ್ಗಿನಾ ದಂಡು । ತೆಂಕಣಕೆ
ಹುರಿಯವಗೆ ರೈತ ಬೊಮ್ಮಯ್ಯ ॥೧೩॥

ಬಿಳಿ ಜೋಳ ಕಡಲೆಗಳ, ಬೆಳತನಕ ನೆನೆಬಿಟ್ಟು
ಬೆಳಗಾಗಿ ಬೀಜ ಬುಟ್ಟಿಯೊಳು, ಅವಸರದಿ
ಹೊಲಕೊಯ್ದು ಬೊಮ್ಮ ಬಿತ್ತುದಕೆ ॥೩೬॥

ಬರಗಾಲ ಭೂಮಿಯೊಳು, ಎರುವಾಯ್ತು ನೀರೂಟ
ಪರವುತದ ಕಂಬಿ ಅಯ್ಯಗಳು । ಹಸುವಾಗಿ
ಬರುತಿರುವ ಬುಟ್ಟಿ ಬೊಮ್ಮನಿಗೆ ॥೩೭॥

ಕರುಣಿಸಲೆ ದಯವಂತ, ಕೊರಗುವೆವು ಕಂಗೆಟ್ಟ
ಹರಭಕ್ತರೆಮಗೆ ಊಟಿಲ್ಲ । ನೆರವಾಗು
ಪರವುತದ ಕಂಬಿಕಾಯಕಕೆ ॥೩೮॥

ಶರಣ ಬೊಮ್ಮನ ಕರುಣೆ, ಕರಗಿಹೋಯಿತು ಕೇಳಿ
ಎರಡೊಂದು ಮನಕೆ ಬಗೆಯದಲೆ । ಬೊಮ್ಮಯ್ಯ
ಹರುಷದಲಿ ಬೀಜ ಹಂಚಿದನು ॥೪೦॥ –ಇ–ಬೊ–

ಎಂದು ಜಾನಪದ ಕವಿಯು ಈ ಶಿವಶರಣನನ್ನು ಹಂತಿಯಲ್ಲಿ ಹಾಡಿದ್ದಾನೆ. ಅಂದು ಇಳಿಹಾಳ ಬೊಮ್ಮಯ್ಯನು ನೆನಗಡಲೆ ಬೀಜಗಳನ್ನು ಪರಸೆಗೆ ಹಂಚಲು ಅದು ಸ್ಮಾರಕವಾಗಿ ಇಂದೂ ಬಳಕೆಯಲ್ಲಿದೆ. ಜನರು ಈಗಲೂ ಕಂಬಿಯ ಪರಸೆಗೆ ನೆನಗಡಲೆಯನ್ನು ಮೊದಲು ಹಂಚುವರು. ಆದುದರಿಂದ 'ಕಂಬಿಗಳು' ಇಳಿಹಾಳ ಬೊಮ್ಮಯ್ಯನ ಕಾಲದಲ್ಲಿ ಆಗಲೇ ಮಲ್ಲಿಕಾರ್ಜುನನ ಬೇರೆ ರೂಪಾಂತರಗಳೆಂದು ಬಳಕೆಯಲ್ಲಿ ಬಂದು ಎಷ್ಟೋ ವರುಷಗಳಾಗಿದ್ದವು. ಕಾರಣ ಕಂಬಿಯ ಪರಂಪರೆಯು ಬಲು ಬುನಾದಿಯದೆಂದು ತೋರುತ್ತದೆ. ಈ ಕಂಬಿಯ ಸಂದರ್ಭವು, 'ಗೊಲ್ಲಾಳ'ನ ಚರಿತ್ರೆಯಲ್ಲಿಯೂ ಬರುವುದು. ಗೊಲ್ಲಾಳನು ನವ ಮುಗ್ಧ ಶರಣರಲ್ಲೊಬ್ಬನೆಂದು ವೀರಶೈವ ಪುರಾಣಗಳು ಹೇಳುತ್ತವೆ. 'ವೀರಬೀರೇಶ್ವರಾ' ಎಂಬ ಮುದ್ರಿಕೆಯ ಇವನ ವಚನಗಳು ದೊರೆಯುವದರಿಂದ ಹಳಕಟ್ಟಿ ಅವರು ಗೊಲ್ಲಾಳನು ಐತಿಹಾಸಿಕ ಪುರುಷನೆಂದು ಒಪ್ಪಿದ್ದಾರೆ. ಗೊಲ್ಲಾಳನೂ ಬಸವೇಶ್ವರನಕಿಂತಲೂ ಹಿಂದಿನವನು. ಎಷ್ಟು ವರುಷ ಹಿಂದಿನವನೆಂದು ನಿರ್ಧರಿಸಿ ಹೇಳಲು ಬರುವುದಿಲ್ಲ.

ಹಿಕ್ಕಿಯ ನಂಬಿ ಪೂಜೆಯ ಮಾಡಲು, ಮುಕ್ತಿಯ ಕೊಟ್ಟ ಮಲ್ಲಯ್ಯ।
ಹಿಕ್ಕ್ಯಾಗ ಮೂಡಲು ಗೊಲ್ಲಾಳೇಶ್ವರ ಇಂದಿನ ಜನಕೊ ಮಲ್ಲಯ್ಯ॥

ಇಲ್ಲಿ ಕುರುಬ ಗೊಲ್ಲಾಳನು ಕುರಿಯ ಹಿಕ್ಕಿಯನ್ನು ಪೂಜೆ ಮಾಡಿದ ಕಥೆಯು ಬಂದಿದೆ. ಹಳಕಟ್ಟಿ ಅವರು ಹೇಳುವ ಗೊಲ್ಲಾಳನ ಕಥೆಯಲ್ಲಿ "ಶ್ರೀಶೈಲಕ್ಕೆ ಹೋಗುವ ಒಂದ ಪರಸೆಯು "ಹರಾಹರಾ ಉಘೆ ಉಘೆ' ಎಂದೆನ್ನುತ್ತ ಗೋಲಗೇರೆಯ ಮೇಲೆ ಹಾಯ್ದು ಹೋಗುತ್ತಿದ್ದದ್ದನ್ನು ಕಂಡನು... ಅವರಲ್ಲೊಬ್ಬ ಮುದುಕ ಜಂಗಮನು ಕಾವಡಿಯನ್ನು ಹೊತ್ತುಕೊಂಡು ಬಿಸಿಲಲ್ಲಿ ಬೆವೆತು ಬಾಯಾರಿ ಆಯಾಸಪಟ್ಟು ನಡೆಯುತ್ತಿದ್ದದ್ದನ್ನು ಗೊಲ್ಲಾಳನು ಕಂಡನು... ನಿನಗೆ ನಾನು ಶ್ರೀಶೈಲಗಿರಿಯಿಂದ ಲಿಂಗವನ್ನು ತಂದುಕೊಡುವೆನು"[೪] ಎಂದು ಬಂದಿದೆ. ಇಲ್ಲಿ ಲಿಂಗ ಜಂಗಮಗಳು ನಿರ್ದೇಶಿತವಾಗಿವೆ. ಕಾವಡಿಯನ್ನು ಹೊತ್ತ ಜಂಗಮನು ಬಂದಿದ್ದಾನೆ. ಇಂಥ ಆಶ್ಚರ್ಯಗಳನ್ನು ನೋಡಿ, ಕೇಳಿದ ಜನಪದವು ಗೊಲ್ಲಾಳನನ್ನು ಹಾಡಿದೆ. ಅವನ ಸ್ಮಾರಕವಾಗಿ ಗೋಲಗೇರಿಯಲ್ಲಿ ತೇರಕಟ್ಟಿ ಎಳೆದಿದೆ; ಎಳೆಯುತ್ತಿದೆ. ಒಕ್ಕಲಿಗನೂ ಹಂತಿಯಲ್ಲಿ ಈ ಮುಗ್ಧ ಶರಣರನ್ನು ಹಾಡಿದ್ದಾನೆ.

ಮುಗ್ಧ ಶರಣರ ಹಾಡು, ಸಿದ್ಧಿ ಮಂತ್ರವು ನೋಡು
ಸಿದ್ಧಾಗು ಹಾಡ ಹಾಡುದಕೆ। ಎಲೆ ಜೀವ
ಶುದ್ಧಾಗಿ ಹೊಂದು ಶಿವಪದವ ॥೩॥

ಎಂದು ಗೊಲ್ಲಾಳನ ಕಥೆಯ ಪಾವನತೆಯನ್ನು ರಾಗ ಮಾಡಿದ್ದಾನೆ.

ಪರವುತದ ಕಂಬಿಗಳು, ಬರುತಿರುವ ಹಾದಿಯೊಳು
ಮರೆಯದಲೆ ಹೋಗಿ ಗೊಲ್ಲಾಳ। ಕೇಳಿದನು
ತರಲು ಹೇಳಿರುವ ಗಿರಿಲಿಂಗ ॥೧೫॥

ಮುದುಕ ಜಂಗಮ ತಾನು, ಎದಕೆ ಕುರುಬರಿಗೆಂದು
ಬದಿಯೊಳಗೆ ಬಿದ್ದ ಕುರಿಹಿಕ್ಕಿ। ತಗೆದೆತ್ತಿ
ಇದೊ! ಲಿಂಗ ಕೊಡುವೆ ಗೊಲ್ಲಾಳ ॥೧೬॥

೪. ಶಿವಶರಣರ ಚರಿತ್ರೆಗಳು ಭಾಗ-೨ ಪು. ೧೭೫.

ಹರಹರನೆ ಗಿರಿಲಿಂಗ, ಗುರುಲಿಂಗವೆನಗಾದಿ
ಎರಗಿದನು ಭಕ್ತಗೊಲ್ಲಾಳ। ಹರುಷದಲಿ
ಕುರುಬರೊಡಗೂಡಿ ಕಾಡೊಳಗೆ ॥೧೭॥ *-ಗೊಲ್ಲಾಳ-*

..... ಇಲ್ಲಿ ಗಿರಿಲಿಂಗವು ಬಂದಿದೆ. ಈಗಲೂ ಕಂಬಿಯ ಅಯ್ಯಗಳು ಪರವುತದಿಂದ ಜನರಿಗೆ ತರುವ ಪಾವನ ವಸ್ತುಗಳಲ್ಲಿ ಗಿರಿಲಿಂಗವು ಒಂದಾಗಿದೆ. ಬುನಾದಿಯಿಂದಲೂ ಕಂಬಿಯ ಅಯ್ಯಗಳು ಪರವುತಕ್ಕೆ ಹೋಗಿ ದೇವರ ದರ್ಶನವನ್ನು ತೆಗೆದುಕೊಂಡು, ತಿರುಗಿ ಬರುವಾಗ ಮಲ್ಲಯ್ಯನ ಗುರುತೆಂದು ಆ ಕ್ಷೇತ್ರದಲ್ಲಿಯ 'ಗಿರಿಲಿಂಗ,' 'ಗಿರಿವಿಭೂತಿ,' 'ಇಪ್ಪಿಹೂ,' 'ಗಿರಿದವನ' ಇವು ಮಲ್ಲಯ್ಯನಿಗೆ ಸಂಬಂಧಿಸಿರುವುವು– 'ಗಿರಿಮೊರ,' 'ಗಿರಿಬಳೆ,' 'ಗಿರಿಕುಂಕುಮ,' ಬಾಗಿಣ ಕೊಡಲು ಬೋರಮ್ಮನಿಗೆ ಸಂಬಂಧಿಸಿರುವುವು. ಬೆಲ್ಲದ ಅಚ್ಚು, ಇವೇ ಮುಂತಾದುವುಗಳನ್ನು ತರುವರು. ಗಿರಿಲಿಂಗವನ್ನು ನಂಬಿ ಹಿಕ್ಕಿಯನ್ನೇ ಪೂಜೆಮಾಡಿ ಮುಕ್ತಿಯನ್ನು ಪಡೆದ ಗೊಲ್ಲಾಳನ ಕಾಲದಲ್ಲಿಯೂ ಕಂಬಿಯ ಅಯ್ಯಗಳು ಇದ್ದರೆಂದು ವಿಶದವಾಗುತ್ತದೆ. ಹೀಗೆ ಅವರು ಜನತೆಯಲ್ಲಿ ವೀರಶೈವ ಶಿವಾಚಾರವನ್ನು ಪ್ರಸಾರ ಮಾಡುತ್ತ ಬಂದಿದ್ದಾರೆ.

ಒಂದೊಂದಕ್ಕೆ ಬೋನವ ಮಾಡಿ, ನೀಡಲಾರೆನೆಂದಳು ಪಾಪಿ।
ನೀಡು ಮಾಡುವ ಮನವೊಂದಾದರೆ, ನೋಡುನ್ನಮ್ಮಬಾ ಚೆನ್ನಮಲ್ಲ॥

ಇಲ್ಲಿ 'ದಾಸೋಹ'ವೆಂಬ ಉಚ್ಚ ಭಾವನೆಯಿದೆ. ವಚನಕಾರರ ಪ್ರಭಾವ ಮೂಡಿಬಂದಿದೆ.

ಮೇಲುಗುಡಿಯ ಶಿಖರದ ಒಡೆಯ, ಕೋಲ ಕಡಿದು ಕೈಯಲಿ ಕೊಟ್ಟ।
ಕಾಲು ಜಾರಿತು ಕೋಲು ಮುರಿಯಿತು ಬಿಂದಿಗೆ ಒಡಿಯಿತು ಮಲ್ಲಯ್ಯ॥
ಕಂಬಿಯ ಹೊತ್ತು ಬಿಂದಿಗೆ ಒಡೆದು, ಕುಂಬಾರನ ಮನೆ ಎಲ್ಲಿಂದೆ
ಕುಂಬಾರ ಗುಂಡನ ಭಕ್ತಿಯ ಕೇಳಿ ಶಂಭುಶಂಕರ ಮಹಾದೇವ॥
ಕಂಬಿಕಾವಡಿ ನಂದೀಕೋಲು, ಮುಂದಾಡುವ ಪಾತರಮ್ಯಾಳ।
ಸಾಲದೀವಟ್ಗೆ ಮ್ಹಾಲದಾರಿ ಹೊಯ್ದಾಡು ಪರಿಗಳ ನೋಡ॥

ಇಲ್ಲಿ ಕಂಬಿಯ ಕೊಟ್ಟವನು ಮೇಲು ಶಿಖರದ ಒಡೆಯನು, ಮಲ್ಲಯ್ಯನು. ಕಾವಡಿಯಲ್ಲಿ ನೀರಿನ ಬಿಂದಿಗೆಯನ್ನಿಟ್ಟುಕೊಂಡು ಕಂಬಿಯ ಅಯ್ಯಗಳು ಹೋಗುವುದನ್ನು ಹೇಳಿದೆ. ಈ ಪದ್ಯಗಳಲ್ಲಿ ಬೆಡಗೂ ಇಣಿಕಿ ಹಾಕುವುದನ್ನು ಸೂಕ್ಷ್ಮವಾಗಿ ಕಾಣಬಹುದು. ವೀರಭದ್ರನಂತೆ ಮಲ್ಲಯ್ಯನೂ ಉಗ್ರಮೂರ್ತಿ. ವೀರಶೈವರಲ್ಲಿ ಅವನಿಗೆ 'ಗುಗ್ಗುಳ' ಹೊರುವರು. ಕಂಬಿ, ಕಾವಡಿ, ನಂದಿಯಕೋಲು, ಸಾಲುದೀವಟಿಗೆಗಳೇ ಅವನ ವಾಲಗದ ಮೇಳ. ಇಂಥ ಮಹಾಮಹಿಮೆಯುಳ್ಳ ಈ ಜ್ಯೋತಿರ್ಲಿಂಗವು, ಸುಂದರವಾದ ಬನಗಳ ಸೊಬಗಿನಲ್ಲಿ ನೆಲೆಸಿರುವುದು, ಆ ಚೆಲುವ ಸೃಷ್ಟಿಯಲ್ಲಿ.

ಗಂಗೆ ಚೆಲುವೆ ಪಾತಳಗಂಗೆ, ಲಿಂಗಚೆಲುವ ಪರವುತಲಿಂಗ।
ಸಂಗನ ಬಾಗಿಲ ಮೂಡಲಕಿರುವ ಬಂಗಾರಬಸುವ ಬಲುಚೆಲುವ॥

ಎಂದು ಜನಪದವು ಹಾಡುತ್ತಿವೆ; ಪರವುತ ಲಿಂಗನಭಜನೆಯನ್ನು ಮಾಡುತ್ತಿದೆ. ವೀರಶೈವರಿಗೆ ಶ್ರೀಶೈಲವು, 'ಸಂಗಮ ಶರಣರ ಕೈಲಾಸ.'

ಜಾತುರಿಯಲ್ಲ ಕೇತುರಿಯಲ್ಲ, ಭೂಲೋಕದೊಳಗಿನ ಕೈಲಾಸ।
ಮಾತು ಮಾತಿಗೆ ಹರ ತಾನೊಲಿದರೆ ಪಾಪಲೋಪ ಚೆನ್ನಮಲ್ಲ॥

ಹೀಗೆ ಶ್ರೀಶೈಲವು ಭೂಲೋಕದ ಕೈಲಾಸವೇ ಆಗಿದೆ. ಶಿವಶರಣರು ಹೋಗಿ ಅಲ್ಲಿ ನೆಲೆಸಿದ ಮೇಲಂತೂ ಅದಕ್ಕೆ ಮತ್ತಷ್ಟು ಮಹತ್ವವು ಬಂತು. ಬರಬರುತ್ತ ವೀರಶೈವರಿಗೆ ಅದು 'ಧರ್ಮಪೀಠ'ವೇ ಆಯಿತು. ಅನುಭವ ಮಂಟಪವು ಮಾಯವಾದ ಮೇಲೆ, ಅದರ ಕಾರ್ಯ ಕಲಾಪಗಳನ್ನು ಬಲು ಯಶಸ್ವಿಯಾಗಿ ಮಾಡಿ ಶಿವಾನುಭವವನ್ನುಳಿಸಿ ಇಂದು ಜನತೆಗೆ ತಂದುಕೊಟ್ಟಿತು. ಶ್ರೀಶೈಲದ ಮಹಾತ್ಮೆಯನ್ನು ಎಷ್ಟು ಬರೆದರೂ ಕಡಿಮೆಯೆ!

ಹದಿನಾಲ್ಕನೆಯ ಶತಮಾನದಲ್ಲಿ ಮುಸಲ್ಮಾನರು ದಕ್ಷಿಣದಲ್ಲಿ ದೌಡು ಮಾಡಿ ಪ್ರಬಲರಾಗಹತ್ತಿದರು. ಪಂಚಶಾಹಿಗಳು ತಮ್ಮ ರಾಜ್ಯವನ್ನು ಸ್ಥಾಪಿಸಿದ ಮೇಲೆ, ಸುಮಾರು ಕ್ರಿ.ಶ. ೧೫ನೆಯ ಶತಮಾನದಲ್ಲಿ ಮುಸಲ್ಮಾನರು ರಾಜ್ಯಾಶ್ರಯದ ಬಲದಿಂದ ಈ ಕಂಬಿಯ ಅಯ್ಯಗಳನ್ನು ಪೀಡಿಸಹತ್ತಿದಂತೆ ಕಾಣುತ್ತದೆ. ಆಗ ಶ್ರೀಶೈಲದ ಬಹುಭಾಗವು ಮುಸಲ್ಮಾನರ ವಶವಾಗಿತ್ತು. ಅಲ್ಲದೆ ಜಂಗಮರೂ, ಪರಸಿಯೂ ಮುಸಲ್ಮಾನ ರಾಜ್ಯದೊಳಗೆ ಹಾಯ್ದು ಪರವುತಕ್ಕೆ ಹೋಗಬೇಕಾಗುತ್ತಿತ್ತು. ಮುಸಲ್ಮಾನರು ಈ ಕಂಬಿಯ ಅಯ್ಯಗಳನ್ನು ಧರ್ಮಾಂತರ ಮಾಡಲು ಉಪದ್ರವ ಕೊಡಹತ್ತಿದರು. ಚಾಣಾಕ್ಷರಾದ ಆ ಅಯ್ಯಗಳು ತಮ್ಮ ವರ್ತನೆಯಲ್ಲಿ ಮಾರ್ಪಾಟು ಮಾಡಿಕೊಂಡು ತಾವೂ ಮುಸಲ್ಮಾನ ಧರ್ಮದ ಅನುಯಾಯಿಗಳೆಂದು ತೋರಿಸಿ ಒಂದು ಸೋಗಿನಲ್ಲಿ ವೀರಶೈವ ಧರ್ಮವನ್ನು ಪಾಲಿಸುತ್ತ, ಪ್ರಸಾರ ಮಾಡುತ್ತ ಬಂದಿದ್ದಾರೆ. ಅವರು ಮಾಡಿಕೊಂಡ ಒಡೆದು ಕಂಡುಬರುವ ಮಾರ್ಪಾಟು ಅಂದರೆ, ಈಗಲೂ ವೀರಶೈವರಲ್ಲಿ ಬಳಕೆಯಲ್ಲಿರುವ 'ಚೌಕವು.' ಮೊದಲು ವೀರಶೈವರು ಜಂಗಮ ಕಟ್ಟಿದ ಇಷ್ಟಲಿಂಗವನ್ನು ವಸ್ತ್ರದಲ್ಲಿ ಹುದುಗಿಸಿ ಕೊರಳಲ್ಲಿ ಆಗಲಿ, ರಟ್ಟೆಯಲ್ಲಿ ಆಗಲಿ ಕಟ್ಟಿಕೊಳ್ಳುತ್ತಿದ್ದರು. ಈಗಲೂ ಅನೇಕ ಜನರು ಕಟ್ಟಿಕೊಳ್ಳುತ್ತಾರೆ. ಮುಸಲ್ಮಾನರ ಆಳಿಕೆಯಲ್ಲಿ ತಮ್ಮ ಧರ್ಮವನ್ನುಳಿದುಕೊಂಡು ಅವರ ಕೈಯೊಳಗಿಂದ ಪಾರಾಗಲು ಈ ಅಯ್ಯಗಳು ಯೋಚಿಸಿ ಮಾಡಿದಂತೆ ಕಾಣುತ್ತದೆ. ಆ ಹಂಚಿಕೆಯೇ ಮುಸಲ್ಮಾನರ ಗೋರಿಯ ಆಕಾರದ ಬೆಳ್ಳಿಯ ಪೊಳ್ಳು ಚೌಕ.

ಕರಡಿಗೆಯು; ಅದರ ಮೇಲೆ ಅರ್ಧಚಂದ್ರಾಕೃತಿಯೂ ಇರುವುದು. ಈ ಚೌಕವು ಮೊದಲು ಗಂಧದ ಕಟ್ಟಿಗೆಯದು ಇರುತ್ತಿತ್ತು. ಅದು ಮೊದಲು ಶ್ರೀಶೈಲದಿಂದಲೇ ಹೊರಬಿದ್ದಿರಬಹುದೆಂದು ತಿಳಿದುಬರುವುದು. ಯಾಕೆಂದರೆ ಮುಸಲ್ಮಾನರ ರಾಜ್ಯದಲ್ಲಿ ಅಲೆದಾಡುವ ಕಂಬಿಯ ಅಯ್ಯಗಳಿಗೆ ಅವರ ಕಾಟ ತಪ್ಪಿಸಿಕೊಳ್ಳಲು ಅದು ಅತ್ಯಗತ್ಯವಾಗಿತ್ತು. ಅವರೇ ಶ್ರೀಶೈಲದಲ್ಲಿ ಶಿವಶರಣರ ಅನುಮತಿಯಿಂದ ಮೊದಲು ಅದನ್ನು ಏರ್ಪಾಟುಮಾಡಿ ಕೊರಳಲ್ಲಿ ಹಾಕಹತ್ತಿದರು. ಇಂಥ ಚೌಕದಲ್ಲಿ ಇಷ್ಟಲಿಂಗವನ್ನಿಟ್ಟುಕೊಂಡು, ಕೊರಳಲ್ಲಿ ಹಾಕಿ ಭಯವಿಲ್ಲದೆ ಈ ಜನರು ಮುಸಲ್ಮಾನರ ರಾಜ್ಯದಲ್ಲಿ ಅಲೆದಾಡುತ್ತಿದ್ದರಲ್ಲದೆ ತಮ್ಮ ಧರ್ಮಪ್ರಸಾರದ ಕಾಯಕವನ್ನೂ ಮಾಡುತ್ತ ಬಂದರು. ಯಾರಾದರೂ ಮುಸಲ್ಮಾನರು ಇವರನ್ನು ತರುಬಿ ಕೇಳಿದರೆ, ತಾವು ಮುಸಲ್ಮಾನ ಧರ್ಮವನ್ನು ಮನ್ನಿಸುವವರೆಂದೂ, ಮುಸಲ್ಮಾನ ಸಂಸ್ಕೃತಿಯ ದ್ಯೋತಕವಾದ ಅರ್ಧ ಚಂದ್ರಾಕೃತಿಯನ್ನೂ, ಗೋರಿಯನ್ನೂ ಕೊರಳಲ್ಲಿ ಕಟ್ಟಿಕೊಂಡಿರುವೆವೆಂದೂ ಚೌಕವನ್ನು ತೋರಿಸುತ್ತ ಬಂದರು. ಅವರಿಗೆ, ಹೆಚ್ಚಿನ ಚೌಕಸಿ ಮಾಡಹತ್ತಲು ಈ ಅಯ್ಯಗಳು ಉರ್ದೂಭಾಷೆಯಲ್ಲಿಯ ಕೆಲವು ಶಬ್ದಗಳನ್ನೂ ಬೆರಿಸಿ, ಮಲ್ಲಿಕಾರ್ಜುನ ಲಿಂಗವನ್ನು ಹಾಡುತ್ತಿದ್ದರು. ಈ ಹಾಡುಗಳು ಈಗಲೂ ಬಳಕೆಯಲ್ಲಿವೆ. ಮೊಗಲಾಯಿಯಲ್ಲಿ ಕಂಬಿಯ ಅಯ್ಯಗಳು ಈ ಹಾಡುಗಳನ್ನು ಮೇಲಿಂದ ಮೇಲೆ ಮಲ್ಲಯ್ಯನ ವಾಲಗ ಮಾಡುವ ಕಾಲಕ್ಕೆ ಹಾಡುತ್ತಾರೆ.

ಉರ್ದೂ ಕೂಡಿದ ಮಲ್ಲಯ್ಯನ ಹಾಡು

'ಬೇಬಿಸಿ ಮಿಲ್ಲಾ,' 'ಬೇಬಿಸಿ ಮಿಲ್ಲಾ,' ಲಗು ಬಾರೊ ಪರವುತಮಲ್ಲ।
'ಕ್ಯಾ' 'ಹೂವಾ' ಆಯಿತು 'ಅಕ್ಕೇಲ' ನಿಮ್ಮ ಹೊರ್ತು ಯ್ಯಾರ್‍ಯಾರಿಲ್ಲ ॥೧॥

ಮೂಡುವಲ್ಲಿಗೆ, ಮುಣುಗುವಲ್ಲಿಗೆ ನೀನೇ ಒಬ್ಬನು 'ಬಿಸಿ ಮಿಲ್ಲಾ'।
'ಏಕ್ ಅಲ್ಲಾ ಹಜಾರ್ ನಾವ್' 'ಖಾಸ್' ಹೌದು ಪರವುತಮಲ್ಲ ॥೨॥

'ಕ್ಯಾತಾರೀಪ ಹೋ ಇನ್‌ಕೋ ಮಿಲಾಕರ್' ಕಪ್ಪಡಿ ಸಂಗಮ 'ಬಿಸಿಮಿಲ್ಲಾ'।
ಅಲ್ಲಿಂದ್ಹೋದನು ಭವನ್ನಾಸ್ತಿಗೆ ಪಾದವಿಟ್ಟನು ಪರವುತಮಲ್ಲ ॥೩॥

'ಕಿನಾರಿ ದರವಾಜೆ' 'ಕಡಿಬಾಗಿಲ್ಗೆ' 'ಕರವೀರಹೈ' 'ಕ್ಯಾ ಬಿಸಿಮಿಲ್ಲಾ'।
ಅಂಬುಲಿಹಳ್ಳು ಭೀಮನ ಕೊಳ್ಳು ಭೀಮೇಸೂರ ಬೋಳಮಲ್ಲ ॥೪॥

'ವಂಹಾಂಸೇ, ನಿಕಲೆ ದಸ್ತದ ರೋಜ ಅಡಕೇಸರಕೂ ಬಿಸಿಮಿಲ್ಲಾ।
ಶಿಖರೇಶ್ವರ ಮುಂದೆನಿಸಿದ ಪಂಚದಾರಿ ಪರವುತಮಲ್ಲ ॥೫॥

ಪಲ್ಲದಾರಿಗೆ 'ಅಂಗೇ ಪೀಛೆ ಗುಮ್ ನಹೊ ಸುಣ್‌ಭಯಿ ಬಿಸಿಮಿಲ್ಲಾ।
ಚೆಂಚಿಕೆ ಹೋಗಿ ಧೂಳದರುಶನ, ಭೇಟಕೊಟ್ಟ ಬೋಳಮಲ್ಲ ॥೬॥

'ದಿಯಾ ಉತರ್‌ಕರ್ ಫಿರ್‌ಕರ್ ಆಹೆ,' ಪಾತಾಳ್ ಗಂಗಮ್ ಬಿಸಿಮಿಲ್ಲಾ।
ಚೋಳಂಗ್ಯಾಗಿ ಚರಣಕ ಹೋದರ ಚರಣ ತೋರೊ ಚೆನ್ನಮಲ್ಲ ॥೭॥

'ಬಚ್ಚೆ ಕಚ್ಚೆ' ಬಹು ಅವುರ್ ಬೇಟೆ ಸಬ್ಬ್ ಕೇಲಿಯೆ ಇಲ್ಹಿಲ್ಲಾ।
ಅತ್ತಿಕಟ್ಟ ಮುತ್ತ್ಯಾ ಮುದಿಮಲ್ಲನು ಬ್ಯಾಳಿ ಬಸವನು ಸರುವೆಲ್ಲ ॥೮॥

'ಕ್ಯಾ ಕ್ಯಾ ಬೋಲೆ, ಕಿತನೆ ಖೇಲೆ' ಬೇಲಗಾರನು ಬಿಸಿಮಿಲ್ಲಾ।
ಐದೆಸೆ ಮಾಡಿದ ಹಸುಮಗನಾದರೆ ದೆಸೆಯುಳ್ಳವನು ಪರವುತಮಲ್ಲ ॥೯॥ *–ಕಂ–ಹಾ–*

ಹೀಗೆ ಹಾಡುವ ಈ ಹಾಡು ಕಂಬಿಯ ಅಯ್ಯಗಳು ಸಾಧಿಸಿದ ಮಾರ್ಪಾಟನ್ನು ಡಂಗರ ಸಾರಿಹೇಳುತ್ತದೆ. ಹಾಡಿನಲ್ಲಿ ಬಳಸಿದ ಉರ್ದೂ ಶಬ್ದಗಳು ಅರ್ಥಗರ್ಭಿತವಾಗಿವೆ. 'ಬಿಸಿಮಿಲ್ಲಾ' ಹಾಗೂ 'ಮಲ್ಲ' (ಮಲ್ಲಯ್ಯ) ಈ ಶಬ್ದಗಳ ಉಚ್ಚರವು ಕೇಳುವವರಿಗೆ ಒಂದೇ ಕಾಣುವುದು. ಮುಸಲ್ಮಾನರಿಗೆ, 'ಮಲ್ಲ'ನೆಂದರೆ ವೀರಶೈವರು 'ಮಿಲ್ಹಾ' ಅನ್ನಲು ಬಾರದ ತಮ್ಮ ದೇವರ ಉಚ್ಚಾರ ರೂಪಾಂತರವೆಂದು ಹೊಳೆದು, ಕಂಬಿಯ ಅಯ್ಯಗಳನ್ನು ತಮ್ಮ ರಾಜ್ಯದಲ್ಲಿ ಅಲೆದಾಡಲು ಪರವಾನಿಗೆಯನ್ನಿತ್ತಿದ್ದರು. ಮೇಲೆ ಕೊಟ್ಟ ಹಾಡಿನಲ್ಲಿ ಬರುವ ಉರ್ದೂಶಬ್ದಗಳ ಅರ್ಥವು ಕೆಳಗಿನಂತಿದೆ.

ಬೇ : No; without; second alphabet of Persian language.

ನಿಷೇಧಾರ್ಥಕ ಚಿನ್ಹವು. ಪರ್ಶಿಯನ್ ಭಾಷೆಯ ವರ್ಣಮಾಲೆಯಲ್ಲಿ ಎರಡನೆಯ ಅಕ್ಷರ.

'ಬಿಸಿಮಿಲ್ಲ್ಹಾ : I stand in the name of God ದೇವರ ಹೆಸರಿನಲ್ಲಿ

'ಅಕ್ಕೇಲ' : Alone. ಒಬ್ಬನೇ.

'ಹೂಂವಾ' : has happend; ಸಂಭವಿಸಿತು; ಆಯಿತು.

'ಏಕ್ ಅಲ್ಲ್ಹಾ ಹಜಾರ್ ನಾಮ್' : God is alone but in thousand names. 'ದೇವನೊಬ್ಬ ನಾಮ ಹಲವು.'

'ಖಾಸ್' : Principal; main ಮೂಲ ; ಮುಖ್ಯ
'ಕ್ಯಾ ತಾರೀಫ್ ಹೋ, ಇನ್ ಕೋಮಿಲಾಕರ' what a praise to mingle with him. 'ಸಮರಸವಾಗುವುದು ಎಂಥ ಭಾಗ್ಯ!'
'ಕಿನಾರಿ ದರವಾಜೆ' : The gate on the border. ಹೆಬ್ಬಾಗಿಲು.
'ವಂಹಾಂ' : There; ಅಲ್ಲಿ
'ಸೇ' ; from, ಇಂದ
'ನಿಕಲೆ' : Start or praise, ಹೊರಡು ಅಥವಾ ಸ್ತುತಿಸು.
'ದಸ್ತದ್ ರೋಜ' : On a particular day. 'ದಸ್ತಗಿರಿ' ತಿಂಗಳ ದಿನ.
'ಅಂಗೆ ಪೀಛೇ, ಗುಮ್‌ನ ಹೋ ಸುಣ್ ಭಯಿ' : `do not be forgetful or careless; ನಿಷ್ಕಾಳಜಿಯಾಗಬೇಡ.
'ದಿಯಾ ಉತರ್ ಕರ್' : Get down, ಕೆಳಗಿಳಿ.
'ಫಿರ್ ಕರ್ ಆಹೆ' : Returned, ಮರಳಿ; ತಿರುಗಿ.
'ಬಚ್ಚೆ-ಕಚ್ಚೆ' : Children, ಮಕ್ಕಳು.
'ಬಹು' : Elderly person, ಹಿರಿಯರು.
'ಬೇಟೆ' : Sons, ಗಂಡು ಮಕ್ಕಳು.
'ಇಲ್ಲಿಲ್ಲಾ' : Only God, ದೇವರೊಬ್ಬನೆ.
'ಸಬ್ಬಕೇಲಿಯೆ' : Doer of all : ಎಲ್ಲ ಮಾಡುವವನು. ಸರ್ವಕರ್ತಾ.
'ಕ್ಯಾ ಕ್ಯಾ ಬೋಲೆ ಕಿತನೆ ಖೇಲೆ' : What sayings and what incarnations! ಎಂಥ ನುಡಿದಳು ಎಂಥ ರೂಪಗಳು.

ಇಂಥ ಹಾಡು ಕೇಳಿದ ಮುಸಲ್ಮಾನರು ಕಂಬಿಯ ಅಯ್ಯಗಳನ್ನು ತಮ್ಮವರೆಂದು ನಂಬಿ ಬಿಟ್ಟಿರುವಲ್ಲಿ ಏನು ಸಂದೇಹ? ಅಲ್ಲದೆ ಉತ್ತರ ಕರ್ನಾಟಕದ ಕೆಲವು ಹಳ್ಳಿಗಳಲ್ಲಿದ್ದ 'ಮಲ್ಲಿಕಾರ್ಜುನ' ದೇವರ ಗುಡಿಯನ್ನು, ಮುಸಲ್ಮಾನೀ ಧರ್ಮವನ್ನು ಸ್ವೀಕರಿಸಿದ ಸ್ಥಾನಿಕ ಹಿಂದೂಗಳು, 'ಮಲ್ಲಿಕ್' ಎಂಬ ಮುಸಲ್ಮಾನ ದೇವರ ಗುಡಿ (ಮಸೀದೆ)ಯೆಂದು ಮುಸಲ್ಮಾನ ರಾಜರ ಆಳಿಕೆಯಲ್ಲಿಯೇ ಆಕ್ರಮಿಸಿಕೊಂಡಿದ್ದಾರೆ. ಈ ದೇವರಿಗೆ ಹಿಂದೂಗಳೂ ಮುಸಲ್ಮಾನರೂ ಕೂಡಿಯೇ ನಡೆದುಕೊಳ್ಳುವುದನ್ನು ಕಣ್ಣಾರೆ ನೋಡಿ ಮನಗಾಣಬಹುದು. ಗೋಕಾವಿಗೆ ಹಾಡುಗಳನ್ನು ಸಂಕಲನ ಮಾಡಲು ಹೋದಾಗ ಊರ ಹಿಂದಿನ ಗುಡ್ಡದಲ್ಲಿಯ ಮಲ್ಲಿಕಾರ್ಜುನ ಗುಡಿಯು ನಿದರ್ಶನಕ್ಕೆ ಬಂತು. ಎರಡೂ ಮತಸ್ಥರು ಗುಡಿಯು ತಮ್ಮದೆಂದು ಈಗಲೂ ಬಡಿದಾಡುತ್ತಾರೆ.

ಅನೇಕ ಹರಕೆಯ ನುಡಿಗಳೂ ಉರ್ದೂಭಾಷೆಯಲ್ಲಿರುವುವು.

"ಸಾವೊ ನಿಕಲೆ, ಕಾಸೆ ನಿಕಲೆ, ಹಜಾರ್ ಬಾಕ್, ಹಾಜಾರ್ ಘೋಡೆ, ಪಿಚೇ ಪರಿದಾ, ದಿರಮ್ ಮೈನಾ, ಏಕ್ ಪಾಚ್ಛಾಸೇರಿ, ಮಲೇದೇವರು' ಆಗೆ ಚಿರ್ಚೆ ರಬೆ ಪಂಜೆ, ನಾಟ್ರೇ, ದೌಡ್ತೆ, ಮಾಮಲ್ಲಿಕಾರ್ಜುನ್ ಸಾಹೇಬ್ ಕೂ ಸಲಾಮ್ ॥" ಹೀಗೆ ಕಂಬಿಯ ಅಯ್ಯಗಳು ಬಂದವರಿಗೆ ದೇವರ ಮುಂದೆ ಹರಕೆಯನ್ನು ಹಾಕುತ್ತಾರೆ. ಕಾಲಜ್ಞಾನದಲ್ಲಿ ಖಾನರು (ಮುಸಲ್ಮಾನರು) ಶ್ರೀಶೈಲ ಮುತ್ತಿ ಹಾಳುಮಾಡುವರೆಂದೂ ಬಂದಿದೆ.

> ಮೂಡಗಿರಿಗೆ ಚಂದ್ರದ್ರೋಣಕೆ । ಕೂಡಿನಡೆಯೆ ಖಾನಖಾನರು
> ನೋಡಿ ಶ್ರೀಗಿರಿಮಲ್ಲ ತಿರುಮಲನ ಭಂಡಾರ ಕೀಳುವರು ॥೧೩॥[೫]

ಹೀಗೆ ತುರುಕರ ದಾಳಿಗಳನ್ನು ಸಹಿಸಿ ವೀರಶೈವ ಸಂಸ್ಕೃತಿಯನ್ನು ಉಳಿಸಿಕೊಂಡು ಬಂದಿದ್ದಾರೆ ಕಂಬಿಯ ಅಯ್ಯಗಳು.

ಈಗ ಕಂಬಿಗಳು ಹೆಚ್ಚಾಗಿ, ಜಮಖಂಡಿ, ಬಾಗಲಕೋಟೆ, ಬಿಜಾಪುರ, ಸೋಲ್ಲಾಪುರ, ಗೊಲಗೇರಿ, ಅಕ್ಕಲಕೋಟೆ, ರಾಯಚೂರು ಈ ಭಾಗಗಳಲ್ಲಿವೆ. ಕಂಬಿಯ ಸಡಗರವನ್ನು ಈಗಲೂ ಬಾಗಲಕೋಟೆಯಲ್ಲಿ ಕಾಣಬಹುದಾಗಿದೆ. ದಕ್ಷಿಣ ಕರ್ನಾಟಕದ ಮೈಸೂರು ಮೊದಲಾದ ಭಾಗಗಳಲ್ಲಿ, ಕಂಬಿಗಳನ್ನು ಮನೆಯಲ್ಲಿಯೇ ಸ್ಥಾಪಿಸಿ ಪೂಜೆಮಾಡುತ್ತಾರೆ. ಪ್ರವಾಸದ ಸಲಕರಣೆಗಳಿದ್ದ ಮೂಲಕ ಜನರೇ ಹೆಚ್ಚಾಗಿ ಮಲ್ಲಯ್ಯನ ದರ್ಶನಕ್ಕೆ ಹೋಗುವುದು ಕಂಡುಬರುವುದು. ಮೇಲೆ ಕಾಣಿಸಿದ ಊರುಗಳಲ್ಲಿ ಕಂಬಿಯ ಸಡಗರವು ನೋಡತಕ್ಕಂಥದ್ದಿರುವುದು. ಮಲ್ಲಯ್ಯನಂದರೆ ಅಲ್ಲಿಯ ಜನರಿಗೆ ಭಕ್ತಿಯೂ, ಆದರವೂ, ಬಹಳ. ಪ್ರತಿವರುಷ ಈ ಊರುಗಳಲ್ಲಿ ಮಲ್ಲಯ್ಯನ ಒಕ್ಕಲುಗಳು 'ಮಲ್ಲಯ್ಯನ ಪರ್ವ'ವೆಂದು ಆಚರಿಸಿ, ತಮ್ಮ ಯೋಗ್ಯತಾನುಸಾರವಾಗಿ ಜಂಗಮರಿಗೆ ಪ್ರಸ್ತವನ್ನು (ಅನ್ನಸಂತರ್ಪಣೆ) ಮಾಡಿಸುವರು. ಇದಕ್ಕೆ 'ಕಂಬೀಪ್ರಸ್ತ'ವೆಂದು ಕರೆಯುವ ವಾಡಿಕೆಯಿದೆ. ಮಹಾರಾಷ್ಟ್ರದಲ್ಲಿಯೂ ಕಂಬಿಗಳಿವೆ ಎಂದು ಪ್ರತೀತಿಯಿದೆ. ಕೊಲ್ಹಾಪುರ ಮೊದಲಾದ ಭಾಗಗಳಲ್ಲಿಯ ಕಂಬಿಗಳು ರತ್ನಾಗಿರಿಯ ಸಮೀಪದಲ್ಲಿರುವ ಮಲ್ಲಯ್ಯಗೆ ಹೋಗುವುದೆಂದು ಜನರು ಹೇಳುತ್ತಾರೆ. ಐತಿಹಾಸಿಕ ದೃಷ್ಟಿಯಿಂದಲೂ, ಧಾರ್ಮಿಕ ದೃಷ್ಟಿಯಿಂದಲೂ, ಕಂಬಿಗಳಿಗೆ ವೀರಶೈವ ಸಂಸ್ಕೃತಿಯಲ್ಲಿ ಒಂದು ವಿಶಿಷ್ಟ ಮಹತ್ವದ ಸ್ಥಾನವಿದೆ. ಆದರೆ ಇಂದಿನ ವಿಜ್ಞಾನಯುಗದಲ್ಲಿ ಧರ್ಮದಲ್ಲಿ ನಂಬುಗೆಯು ಕಡಿಮೆಯಾಗಹತ್ತಿದ್ದರಿಂದ ಕಂಬಿ ಮೊದಲಾದ ಸಾಂಸ್ಕೃತಿಕ ಚಿನ್ಹಗಳು ಇಂದು ಮುಗ್ಗಹತ್ತಿವೆ. ಇವುಗಳನ್ನು ಉಳಿಸಿ ನಮ್ಮ ಸಂಸ್ಕೃತಿಯನ್ನು ಕಾಯುವದೇ ನಮ್ಮೆಲ್ಲರ ಜನ್ಮಸಿದ್ಧ ಹಕ್ಕು.

---

೫. ಕಾಲಜ್ಞಾನ ಸಂಗ್ರಹ –೧ ಪು. ೪೫.

೩. ಕಲ್ಯಾಣ ಕ್ರಾಂತಿ

೧೧ನೆಯ ಶತಮಾನದಲ್ಲಿ ಜೇಡರ ದಾಸಿಮಯ್ಯ ಹಾಗೂ ಶಂಕರ ದಾಸಿಮಯ್ಯರಿಂದ ತಲೆಯೆತ್ತಿದ ಲಿಂಗಾಂಗಿಗಳ ಆಂದೋಲನವು ದಿನದಿನಕ್ಕೆ ಬೆಳೆಯುತ್ತ ೧೨ನೆಯ ಶತಮಾನದಲ್ಲಿ ಬಸವಾದಿ ಪ್ರಮಥರ ಕಾಲದಲ್ಲಿ ಲಿಂಗಾಯತ ಮತವು ಊರ್ಜಿತ ಸ್ಥಿತಿಗೆ ಬರಲು, ಕಡೆಗೆ ಕರ್ನಾಟಕದಲ್ಲಿ ಕ್ರಾಂತಿಯಾಗಿ ಸಂಭವಿಸಿತು. ಇದಕ್ಕೆ ಶಿವಶರಣರ ಕ್ರಾಂತಿಯೆಂದೂ ಕಲ್ಯಾಣದಲ್ಲಿ ಸಂಭವಿಸಲು 'ಕಲ್ಯಾಣ ಕ್ರಾಂತಿ'ಯೆಂದೂ ಹೆಸರುವಾಸಿಯಾಗಿದೆ. ಕರ್ನಾಟಕದ ಇತಿಹಾಸದಲ್ಲಿ ಈ ಕ್ರಾಂತಿಯು ಅತಿ ಮಹತ್ವದ್ದಾಗಿದೆ. ಧಾರ್ಮಿಕ, ಸಾಮಾಜಿಕ, ರಾಜಕೀಯ, ಸಾಹಿತ್ಯಕ ಮೊದಲಾದ ಎಲ್ಲ ಅಂಗಗಳಲ್ಲಿಯೂ ಈ ಕ್ರಾಂತಿಯು ಕಾಲಿಟ್ಟು ನಾಡಿಗೆ ಹೊಸ ಬೆಳಕನ್ನು ತಂದುಕೊಟ್ಟಿತು. ಇದು ಸಾಮಾನ್ಯ ಜನರ ಜೀವನವನ್ನು ಸುಧಾರಿಸಿ, ಜಾಗ್ರತೆಯನ್ನುಂಟುಮಾಡಿತು. ಜನಪದವೇ ಜಾಗ್ರತವಾಗಿ ಹೋಯಿತು. ಈ ಕ್ರಾಂತಿಗೆ ಹಿನ್ನೆಲೆಯೇ 'ಶಿವಶರಣರ ಅನುಭವ' ಮಂಟಪವು. ಇದರ ಅಸ್ತಿತ್ವವನ್ನು ನಿರಾಕರಿಸಿ, ಇದು ಕೇವಲ ೧೫ನೆಯ ಶತಮಾನದಲ್ಲಿ ವೀರಶೈವರು ಊಹಿಸಿ ತಮ್ಮ ಕಾವ್ಯಗಳಲ್ಲಿ ಬಳಸಿದ ಕಾಲ್ಪನಿಕ ಮಂದಿರವೆಂದು ಅನೇಕ ಪಂಡಿತರು ಆಕ್ಷೇಪಗಳನ್ನೆತ್ತಿದ್ದಾರೆ. ಅವರನ್ನು ಸಾಹಿತ್ಯ ಕ್ಷೇತ್ರದಲ್ಲಿ ತಡೆದು ಹಾಗಲ್ಲವೆಂದು ಸಿದ್ಧಮಾಡಿ ಹೆಣಗಾಡಿದ ಮಹನೀಯರೂ ಇದ್ದಾರೆ. ಶ್ರೀ ಅ.ನ. ಕೃಷ್ಣರಾಯರು ತಮ್ಮ 'ವೀರಶೈವ ಸಾಹಿತ್ಯ ಹಾಗೂ ಸಂಸ್ಕೃತಿ'ಯೆಂಬ ಹೊತ್ತಿಗೆಯಲ್ಲಿ 'ಅನುಭವ ಮಂಟಪ'ದ ಅಸ್ತಿತ್ವವನ್ನೊಪ್ಪಿ ಅದರ ವಿಸ್ತಾರವಾದ ಕಾರ್ಯಕಲಾಪಗಳಿಂದ ಅದನ್ನು ಸಿದ್ಧಮಾಡಿಯೇ ತೋರಿಸಿದ್ದಾರೆ. "ಹತ್ತೊಂಬತ್ತನೆಯ ಶತಮಾನದಲ್ಲಿ ಪ್ಯಾಂಕಹರ್ಸ್ಟ (Pankharst), ಆನಿ ಬೆಸಂತ, ಮಾರಿ ಸ್ಟೋಪ್ಸ ಮೊದಲಾದ ಮಾನಿನಿಯರು ನಡಸಿದ ಸ್ತ್ರೀ ಮುಕ್ತ ಚಳವಳಿಯನ್ನು 'ಅನುಭವಮಂಟಪ'ದ ಪ್ರಮಥರು ಹದಿಮೂರನೆಯ ಶತಮಾನ ದಲ್ಲಿಯೇ ನಡಸಿದರು."[೧] ಅನುಭವಮಂಟಪದ ಮಹತ್ವವನ್ನು ಕುರಿತು ಅದೇ ಪ್ರಕರಣದಲ್ಲಿ, "ವೀರಶೈವ ಅನುಭಾವಿಗಳು, ತಮ್ಮ ಜೀವನದ ಜೇನುಕೊಡವನ್ನು ಅನುಭವ ಮಂಟಪದಲ್ಲಿ ಸೇಖರಿಸಿ, ಜೇನು ಹೊಂಡವನ್ನೇ ನಿರ್ಮಾಣ ಮಾಡಿಬಿಟ್ಟರು. ಇದರಲ್ಲಿ ಎಲ್ಲ ಪುಷ್ಪಗಳ ಸೌರಭ, ಪರಿಮಳ ಸವಿಗಳು ಬೆರೆತು ಕೊಂಡಿವೆ. ಎಲ್ಲ ಧರ್ಮಗಳೂ ಒಂದೊಂದು ಜಾಡನ್ನು ಹಿಡಿಯಹೋಗಿ ಕಂಡ ಸತ್ಯದ ಕೇಂದ್ರವನ್ನೇ ವೀರಶೈವ ಧರ್ಮವು ಅನಿಸಿತು. ಇದು ಎಲ್ಲ ಧರ್ಮಗಳ ಸಾರವಾಯಿತು. ಅಂತೇ ವಿಶ್ವಧರ್ಮವೆನಿಸಿಕೊಳ್ಳಲು ಪೂರ್ಣ ಅರ್ಹತೆಯನ್ನು ಪಡೆಯಿತು."[೨] ಎಂದು ಅನುಭವ ಮಂಟಪದ ಸಂಘಟನೆಯಿಂದಲೇ ವೀರಶೈವ ಧರ್ಮವು ವಿಶ್ವಧರ್ಮವಾಯಿತೆಂದು ಹೇಳಿದ್ದಾರೆ ಶ್ರೀ ಉತ್ತಂಗಿ ಚನ್ನಪ್ಪನವರು. 'ಅನುಭವ ಮಂಟಪದ ಐತಿಹಾಸಿಕತೆ' ಎಂಬ ಹೊತ್ತಿಗೆಯನ್ನು ಬರೆದು ಅಲ್ಲಗಳೆದವರನ್ನು ತಲೆದೂಗಿಸಿದ್ದಾರೆ. ಅನೇಕರು ಒಡ್ಡಿದ ಆಕ್ಷೇಪಗಳನ್ನು ಇತಿಹಾಸ ಸಂಗತಿಗಳಿಂದ ಹೊಡೆದೋಡಿಸಿ, 'ಅನುಭವ ಮಂಟಪ'ದ ಐತಿಹಾಸಿಕತೆಯನ್ನು ಸಿದ್ಧಮಾಡಿದ್ದಾರೆ. ಅಷ್ಟಾದರೂ ನಂಬದವರಿಗೆ ಉತ್ತಂಗಿಯವರು "ಅನುಭವ ಮಂಟಪವು ಯಾರ ಸೊತ್ತಲ್ಲ. ಯಾರ ಅಭಿಮಾನವೂ ಅದನ್ನು ಉಳಿಸದು. ದುರಭಿಮಾನವು ಅದನ್ನು ಅಳಿಸದು. ಅದು ಐತಿಹಾಸಿಕವಾಗಿದ್ದರೆ ನಿಲ್ಲುವುದು. ಇಲ್ಲವಾದರೆ ಬಿದ್ದು ಹೋಗುವುದು. ಅದ್ಕಕಾಗಿ ಯಾರೂ ವ್ಯಥೆಪಡಬೇಕಾದುದಿಲ್ಲ. ಅನುಭವ ಮಂಟಪದ ಹಿಂದೆ ಒಂದು ದಿವ್ಯ ವ್ಯಕ್ತಿ ಇದೆ. ಆ ವ್ಯಕ್ತಿಯಲ್ಲಿ ದಿವ್ಯವಾದ ಶಕ್ತಿ ಇದೆ. ಆ ಶಕ್ತಿಯು ೧೨ನೆಯ ಶತಮಾನದಲ್ಲಿ ಅದಕ್ಕೆ ಜನ್ಮಕೊಟ್ಟಿದೆ. ಆ ಜೀವಾಳವು ಇಂದಿಗೂ ಅದರಲ್ಲಿದೆ.[೩] ಎಂದು ಹೇಳಿದ್ದಾರೆ.

ವೈದಿಕ ಧರ್ಮಾಚಾರಗಳಿಗೆ ಜನಪದವು ಬೇಸತ್ತಿತ್ತು. ವರ್ಣಾಶ್ರಾಮಗಳು ಜನಪದಕ್ಕೆ ಬೇಸರಾಗಿ ಜನತೆಗೆ ಬೇಡಾಗಿದ್ದವು. ಜನತೆಯನ್ನು ಕತ್ತಲೆಯಲ್ಲಿಟ್ಟು ತಮ್ಮ ಜೀವನವನ್ನು ಸಾಧಿಸಿಕೊಳ್ಳುತ್ತ ಬಂದ ವೇದಾಭ್ಯಾಸಿಗಳಿಗೆ ಧರ್ಮವು ಒಂದು ಕಸಬಾಗಿತ್ತು. ವೇದದ ಹೆಸರಿನಿಂದಲೇ ಅವರು ಉಪಜೀವನವನ್ನು ಸಾಗಿಸುತ್ತಿದ್ದರು. ಈ ಸ್ಥಿತಿಗತಿಯನ್ನು ಓದು ಬರಹವನ್ನರಿಯದ ಹಳ್ಳಿಗರ ಹಾಡುಗಳಲ್ಲಿ ಕಾಣಬಹುದಾಗಿದೆ. ಬೇಡರ ಕನ್ನಯ್ಯನ ಹಂತಿಯ ಹಾಡಿನಲ್ಲಿ

ಹಾರುವನ ಹರಭಕ್ತಿ, ಮಾರುದ್ದ ಮಂತ್ರಗಳು
ಹಾರಾಡಿ ವೇದವೋದುವದು । ಬೇಸಾಯ
ಹಾರುವಗೆ ಹರನು ಮೆಚ್ಚುವನೆ ॥೩೮॥ *–ಬೇ–ಕ–*

---

೧. 'ವೀರಶೈವ ಸಾಹಿತ್ಯ ಮತ್ತು ಸಂಸ್ಕೃತಿ' ಅನುಭವ ಮಂಟಪ, ಪು. ೧೧೪.
೨. 'ವೀರಶೈವ ಸಾಹಿತ್ಯ ಮತ್ತು ಸಂಸ್ಕೃತಿ' ಅನುಭವ ಮಂಟಪ, ಪು. ೧೧೬.
೩. 'ಅನುಭವ ಮಂಟಪದ ಐತಿಹಾಸಿಕತೆ' ಪು. ೧೦೮

ಎಂಬ ಮಾತನ್ನು ಜನತೆಯಲ್ಲಿ ಕೇಳಿದ ಹಳ್ಳಿಯ ಕಬ್ಬಿಗನು ಕನ್ನಯ್ಯನ ಶಿವಭಕ್ತಿಯ ಹೆಚ್ಚಳವನ್ನು ಹಾಡಿದ್ದಾನೆ. ಜನಪದವು ಜನತೆಯನ್ನು ಉದ್ಧಾರಮಾಡುವ ಧರ್ಮದ ಹಾದಿಯನ್ನು ಕಾಯುತ್ತಿತ್ತು. ಬ್ರಾಹ್ಮಣ, ಜೈನ, ಬೌದ್ಧ ಮೊದಲಾದ ಧರ್ಮಗಳ ನೈತಿಕ ಮಾರ್ಗವು ಹದಗೆಟ್ಟಿತ್ತು. ಪ್ರಚಾರವೇ ಬೇರೆ, ಆಚಾರವೇ ಬೇರೆ ಆಗಿ ಜನತೆಯಲ್ಲಿ ಧರ್ಮದ ವಿಷಯವಾಗಿ ಅನಾದರ ಹುಟ್ಟಿ, ಉಮ್ಮಳವು ತುಂಬಿತ್ತು. ಇಂಥ ಸಮಯದಲ್ಲಿ; 'ನುಡಿದಂತೆ ನಡೆದರೆ ಅದೇ ಕೈಲಾಸ' ಎಂಬ ಶಿವಶರಣರ ತತ್ವಗಳು ಜನತೆಯಲ್ಲಿ ಪ್ರಚಾರವಾಗಹತ್ತಿದುವು. 'ಕಲ್ಯಾಣಮಂಟಪ'ದ ಕೂಗೂ ಸುತ್ತಲೂ ಕೇಳಬರಹತ್ತಿತ್ತು. ಜನಪದದಲ್ಲಿ ಎಲ್ಲ ಕಸಬುಗಾರರು ಶಿವಶರಣರ ತತ್ವಗಳನ್ನು ಕೇಳಿ ಅವುಗಳನ್ನು ಸ್ವೀಕರಿಸಿ ಲಿಂಗಾಂಗಿಗಳಾದರು. ಶಿವಶರಣರ ಕೂಗು ದೇಶದೇಶಗಳಿಗೆ ಕೇಳಹತ್ತಲು ಶಿವಾನುಭವವನ್ನು ಶಿವಶರಣರೊಂದಿಗೆ ಚರ್ಚಿಸಿ ಅರಿಯಲು, ರಾಜರೂ, ಸಾಮಂತರೂ, ಪಂಡಿತರೂ ಕಲ್ಯಾಣ ಮಂಟಪವನ್ನು ಸೇರಹತ್ತಿದರು. ಬಸವಾದಿ ಪ್ರಮಥರ ಸನ್ನಿಧಿಯಲ್ಲಿ ವಿಚಾರ ವಿನಿಮಯಗಳು ನಡೆದು, ಶಿವಾನುಭವ ಮಂಟಪವು ಅಸ್ತಿತ್ವದಲ್ಲಿ ಬಂತು. ಅದರ ಬೆಳಕು, ಜ್ಞಾನದೀವಟಿಗೆಯಾಗಿ ಜನತೆಗೆ ಮೋಕ್ಷಮಾರ್ಗವನ್ನು ತೋರಿಸಹತ್ತಿತ್ತು. ಅದರ ಪರಿಣಾಮವಾಗಿ ಶಿವಶರಣರು ವಚನರಾಶಿಯನ್ನು ಸುರಿಸಿದರು. ಕವಿಗಳು ಮಹಾಕಾವ್ಯಗಳನ್ನು ಬರೆದರು. ಆದರೆ ಓದುಬರಹವನ್ನರಿಯದ ಜನಪದವು 'ಅನುಭವಮಂಟಪ'ವನ್ನು ಹಾಡಿ ತಣಿಯುತ್ತ ಬಂತು. ಒಕ್ಕಲಿಗನು ತನ್ನ ಹಂತಿಯ ಹಾಡುಗಳಲ್ಲಿಯೂ ಇದನ್ನು ಹಾಡಿದ್ದಾನೆ. ಈಗ ಸಂಕಲಿಸಲಾದ '**ನೂರೊಂದು ಶಿವಶರಣರ ಹಂತಿಯ ಹಾಡು**'ಗಳಲ್ಲಿ 'ಅನುಭವಮಂಟಪ'ಕ್ಕೆ ಪ್ರತಿಯಾಗಿ ಅದೇ ಅರ್ಥವನ್ನು ಸೂಚಿಸುವ ಅನೇಕ ಶಬ್ದಗಳು ಬಂದಿವೆ. 'ಕಲ್ಯಾಣ ಮಂಟಪ,' 'ಅನುಭಾವ ಮಂಟಪ,' 'ಮಂಟಪ,' 'ನೀತಿ ಮಂಟಪ,' 'ಲಿಂಗ ಮಂಟಪ,' 'ವಚನ ಮಂಟಪ,' 'ಶರಣರ ಮಂಟಪ,' 'ಶಿವ ಮಂಟಪ,' 'ಮಹಾ ಮನೆ' ಮೊದಲಾದ ಶಬ್ದಗಳನ್ನು ಜಾನಪದ ಹಾಡುಗಳಲ್ಲಿ ಕೇಳಬಹುದಾಗಿದೆ. ಅನುಭವ ಮಂಟಪ'ದ ಅಸ್ತಿತ್ವವನ್ನು ಕಣ್ಣಾರೆ ನೋಡಿ, ಕೇಳಿದ ಜನಪದವು ಅದನ್ನು ಮರೆಯಬಹುದೇ? ಜನಪದದಲ್ಲಿದ್ದ ಈ ಎಲ್ಲ ಶಬ್ದಗಳನ್ನು ಜಾನಪದ ಕವಿಯು ಹಂತಿಯ ಹಾಡುಗಳಲ್ಲಿ ಸಂದರ್ಭಕ್ಕೆ ಸರಿಯಾಗಿ ಬಳಸಿದ್ದಾನೆ. ಆಗ ಈ ಮಂಟಪದಲ್ಲಿ ನಡೆಯುತ್ತಿದ್ದ ವಿಚಾರಗಳ ಚರ್ಚೆಯನ್ನು ಈ ಹಳ್ಳಿಯ ಕಬ್ಬಿಗನು ಬಲುಮಾರ್ಮಿಕವಾಗಿ ಹಾಡಿದ್ದಾನೆ. ಅನೇಕ ಶಿವಶರಣರು 'ಶಿವಾನುಭವ'ವನ್ನರಿಯಲು ಅನುಭವ ಮಂಟಪಕ್ಕೆ ಬಂದಿದ್ದಾರೆ. ಅವರಲ್ಲಿ ಮಾತುಮಾತಿಗೆ ವಾದ ನಡೆದಿದೆ. ಅನೇಕರು ವೇದಗಳನ್ನು ಹಿಂಜಿ ಹುರುಳಿಲ್ಲವೆಂದು ಖಂಡಿಸಿದ್ದಾರೆ. ವಚನಶಾಸ್ತ್ರದ ಹಿರಿಮೆಯನ್ನು ತೂಗಿ ಹೇಳಿದ್ದಾರೆ. ವೇದ ಹಾಗೂ ವಚನಗಳ ಸಂಬಂಧ ಬರುವ ಹಂತಿಯ ಹಾಡುಗಳು ಬಲು ಆಕರ್ಷಿತವಾಗಿವೆ.

ನಾಡಜಾಣರು ಎದ್ದು, ಹೂಡುದಕೆ ವಾದಗಳ
ಕೂಡಿ ಕಲ್ಯಾಣ ಮಂಟಪಕೆ। ಮಾಚಯ್ಯ
ನೋಡಿ ಬಂದಲ್ಲಿ ತಲುಪಿದನು ॥೧೭॥

ಈರಾಡಿ ವೇದಗಳು, ಹಾರಾಡಿ ವಾದಗಳು
ಜೋರಾಗಿ ನಡೆದು ನಿಲ್ಲುತಲಿ। ಸಾಗರವ
ಏರಿ ಕಡದಂತೆ ರಕ್ಕಸರು ॥೧೮॥

ಸುರರು ಕಡೆದ್ದಾಂಗೆಲ್ಲ, ವರಮಣಿಗಳುದಿಸಿದವು
ಚಿರಕಾಲ ಉಳಿದು ಭೂಮಿಯೊಳು। ವಚನಗಳು
ಶರಣಗಣ ಕಡೆದ ಮಣಿ ಏನೊ ॥೧೯॥

ವಾದ ಚಕಮುಕಿ ಬೆಂಕಿ, ದೂದಿ[೪] ಕೂಮತ ಸುಡಲು
ವಾದಿಗಳ ಕಾದ ತಲೆಆರಿ। ವಚನಗಳ
ನಾದ ತುಂಬುತಲಿ ಭವಿಗಳಿಗೆ ॥೨೦॥

ಕಲ್ಯಾಣ ಮಂಟಪಕೆ, ಬಲ್ಲವರು ಬಂದಿರಲು
ಅಲ್ಲಗಳೆಯುತಲಿ ಶರಣರನು। ಮಾಚಯ್ಯ
ಎಲ್ಲರೊಳಗಾತ ಮಿಗಿಲಾದ ॥೨೧॥

ಹೀಗೆ ಅನುಭವ ಮಂಟಪದಲ್ಲಿ ನಡೆದ ಚರ್ಚೆಗಳು ಸುತ್ತಲೂ ಸಾರಲ್ಪಡುತ್ತಿದ್ದುವು. ಜನಪದವು ಆಗಲೇ ವೇದಗಳಲ್ಲಿ ಹುರುಳಿಲ್ಲವೆಂದು ಅರಿತು ಅವುಗಳ ಸಂಬಂಧ ಅನಾದರ ತೋರಿಸಹತ್ತಿತ್ತು. ವೇದಗಳ ಬದಲಾಗಿ ಶಿವಶರಣರ ವಚನಗಳು ಅವರ ಮನೆಮಾತಾಗಿ ಜನಪದವು ಅವುಗಳನ್ನು ಬಲು ಆದರದಿಂದ ಬರಮಾಡಿಕೊಂಡಿತಲ್ಲದೆ, ಜನರು ಅವುಗಳರ್ಥವನ್ನು ಅರಿತು ಜೀವನದಲ್ಲಿ ಅದರಂತೆ ವರ್ತಿಸಹತ್ತಿದರು. ಹೀಗೆ ಪರಂಪರೆಯಾಗಿ ಬಂದ ಮಾತುಗಳನ್ನೇ ಜಾನಪದ ಕವಿಯು ಹಂತಿಯ ಹಾಡುಗಳಲ್ಲಿ ಹಾಡಿದ್ದಾನೆ. ಮೇದಾರ ಕೇತಯ್ಯನ ಹಂತಿಯ ಹಾಡಿನಲ್ಲಿ–

ಕಾಡಿನೊಳಗಿರು ಹಾದಿ, ಮೂಡಿ ವೇದಗಳಾಗಿ
ನಾಡನ್ನೆ ನುಂಗಿ ನಗುತಿರಲು। ಶಿವಮತವು
ನಾದ ಮೇಲಿರುವ ಶಿವಲೋಕ ॥೯॥

೪. ದೂದಿ–ಬೆಳವಲದ ಒಕ್ಕಲಿಗನು 'ಚಕಮಕಿ'ಯನ್ನು ಕಟಿಯುವಾಗ ಹಾರಿದ ಕಿಡಿಯನ್ನು ಹಿಡಿಯುವ 'ಕರಕು'

ನಾಡವರು ಹಾರುವರು, ತೋಡಿಹೇಳುತ ವೇದ
ಹೂಡಿಯಾಗವನೆ ಕುರಿತಿಂದು । ಸಾರಿದರೆ
ನಾಡಿಗರು ಹೌದೆ ಶಿವಲಿಂಗ ॥೧೧॥

ವೇದದೊಳು ದಯವಿಲ್ಲ, ವೇದಗಳೇ ಕಾರುತಿವೆ
ಸಾಧಿಸಲು ಹೊಟ್ಟೆ ಹಾರುವರು । ಮೋಡಿಕೆಯು
ವೇದೆಂದು ಹೇಳಿ ಜಗನುಂಗಿ ॥೧೨॥

ಬಸವ ಸಾರಿದನಂದು, ಕುಶಲದಲಿ ವಚನಗಳ
ಮಸಕಿರುಳು ಹರಿದು ನಸುಕಾಯ್ತು । ಜಗದೊಳಗೆ
ಹೊಸಮತದ ಸೂರ್ಯನುದಸಿದನು ॥೧೯॥

ತುಂಬಿ ತುಳಕಿತು ಬೆಳಕು, ಇಂಬ ನೀಯಿತು ಜಗಕೆ
ಕಂಬ ಬಸವೆಂದು ಹೊಸಮತಕೆ । ಕಲ್ಯಾಣ
ಮುಂಬದಿಯ ಬೇರೆ ಮೊಳಗಿದವು ॥೨೦॥

ನಾನು ಬೊಮ್ಮನು ಎಂದು, ತಾನ ಹಿಡಿಯಿತು ವೇದ
ಹೀನೆಂದು ಹೇಳಿ ವಚನಗಳು । ಸಾರಿದವು
ಮಾನ್ಯರಿಗೆ ಎಲ್ಲ ಬೊಮ್ಮೆಂದು ॥೨೧॥

ಮೇದಾರ ಕೇತಯ್ಯ, ವಾದ ಹೂಡದೆ ಕಂಡು
ನಾದವಿಲ್ಲೆಂದು ವೇದದೊಳು । ವಚನಗಳು
ಬೋಧಿಸಲು ಮಿಗಿಲು ಜನಕೆಂದು ॥೨೨॥

ಶಿವಲಿಂಗ ನೆನಸಿದರೆ, ಶಿವಪದವೆ ದೊರಕುವುದು
ಭವದೊಳಗೆ ನೋಡು ವೇದಗಳು । ಹಾರವರು
ರವಿಕೆ ಬಿಗಿದುಟ್ಟ ಗೊಂಬಿಗಳು ॥೨೩॥ -ಮೇ-ಕೇ-

ಎಂದು ಜನತೆಯಲ್ಲಿದ್ದ ವೇದ ಹಾಗೂ ವಚನಗಳ ಸಂಬಂಧದ ಭಾವನೆಗಳನ್ನು ಇಲ್ಲಿ ಕಾಣಬಹುದಾಗಿದೆ. ಶಿವಶರಣರ ವಚನಗಳಲ್ಲಿ 'ವೇದ'ಗಳನ್ನು ಕುರಿತು ಅನೇಕ ಚರ್ಚಾತ್ಮಕ ನುಡಿಗಳೂ ಬಂದಿವೆ. ವಚನಗಳನ್ನು ಕೇಳಿದ ಜನರು ಅವುಗಳನ್ನೇ ತಮ್ಮ ಮಾತುಗಳಲ್ಲಿ ಮುಂದೆ ಬಳಸುತ್ತ ಬಂದಿದ್ದಾರೆ.

ವಚನ ಮಂಟಪದೊಳಗೆ, ವಚನಗಳ ಮಳೆ ಸುರಿದು
ಶುಚಿ ಹೊಂದಿ ಜಗವು ಅನುಭಾವ್ । ಬಿತ್ತಿದರು
ಉಚಿತ ಹೊಸಮತದ ಬೆಳೆ ಬಂತು ॥೬೩॥ -ಮೇ-ಕೇ-

ಎಂದು ಹೊಸಮತವು ಶಿವಾನುಭವದ ಬೆಳೆಯಾಗಿದೆ–

ಕಲ್ಯಾಣ ಹಾಡುತಲಿ, ಎಲ್ಲ ಶರಣರ ವಚನ
ಸೊಲ್ಲಡಗಿ ನಾಲ್ಕು ವೇದಗಳು । ಹೊಸಮತಕೆ
ಹುಲ್ಲಾಗಿ ಬಿದ್ದು ಕೈಮುಗಿದು ॥೬॥ -ಹೂ-ಮಾ-

ಹೀಗೆ ಕಲ್ಯಾಣಮಂಟಪದಲ್ಲಿ ನಡೆದ ವಾದವಿವಾದಗಳು ಸಹೋದರ ಮತಗಳಿಗೆ ಸಹನವಾಗಲಿಲ್ಲ. ಅಲ್ಲದೆ ಹೊಸ ಮತಕ್ಕೆ ಜನತೆಯಲ್ಲಿದ್ದ ಆದರ ಭಾವನೆಯನ್ನು ನೋಡಿ ಅಸೂಯೆಪಟ್ಟು, ಆ ಮತದ ಅನುಯಾಯಿಗಳು ಹೊಸ ಮತವನ್ನು ಮುರಿಯಲಿಕ್ಕೆ ಒಡಕು ಹುಟ್ಟಿಸಲು ಪ್ರಯತ್ನ ನಡೆಸಿದರು – ಅವರು ಕೈಕೊಂಡ ಸಾಹಸಗಳಲ್ಲಿ ಕುಲಕುಲಗಳಲ್ಲಿ ಒಡಕು ಹುಟ್ಟಿಸುವುದೇ ಮೊದಲಾಗಿತ್ತು. ಬಹುತರವಾಗಿ ಭರತ ಖಂಡದಲ್ಲಿ ಕುಲ ಮುಂದುಮಾಡಿ ಕದನ ಹಚ್ಚಿ ಅನ್ಯರು ಲಾಭ ಪಡೆದುದೇ ಹೆಚ್ಚು. ಮಹಾತ್ಮಾ ಗಾಂಧಿಯವರು ತಮ್ಮ ಜೀವಮಾನದವರೆಗೆ ಹೆಣಗಾಡಿದ ಹರಿಜನೋದ್ಧಾರವು ಹನ್ನೆರಡನೆಯ ಶತಮಾನದಲ್ಲಿಯೇ ಬಸವಣ್ಣನವರಿಂದ ಪೂರ್ಣಹೊಂದಿ ಜನತೆಯ ಪ್ರಚಾರದಲ್ಲಿ ಬಂತು. ಕುಲದಲ್ಲಿ ಕೀಳು ಮೇಲೆಂಬ ಕಲ್ಪನೆಯು ಹೋಗಿ ಶಿವಾನುಭವದ ಬೆಳಕಿನಲ್ಲಿ ಎಲ್ಲರೂ ಸಮಾನಸ್ಕಂಧರು, ಎಂಬ ಉಚ್ಚಭಾವನೆಯು ತಲೆ ದೋರಹತ್ತಿತು. ಬಸವಣ್ಣನವರ ವಿಚಾರಗಳಿಗೂ, ಸುಧಾರಣೆಗಳಿಗೂ ಆ ಯುಗವು ಇನ್ನೂ ಪರಿಪಕ್ವವಾಗಿದ್ದಿಲ್ಲ. ಸಹೋದರ ಮತಗಳು ಅವರನ್ನು ಇದುರಿಸಲು ಕಾಲಕಾಯುತ್ತಿದ್ದವಲ್ಲದೆ, ತುಂಟ ನ್ಯಾಯವನ್ನು ಹೂಡಲು, ಯತ್ನನಡೆಸಿದ್ದುವು. ಬಸವಣ್ಣನವರು ಹೊಸಮತದಲ್ಲಿ ಎಲ್ಲರನ್ನೂ ಬರಮಾಡಿಕೊಂಡರು. ಅವರಿಗೆ ಶಿವಾನುಭವವನ್ನು ಅರುಹಿದರು. ಹೊಲೆಯ ಕುಲಜರೆಂಬ ಮಾತುಗಳು ಮಾನವನ ನೀತಿರೀತಿ ಗಳಲ್ಲೆಂಬ ವಿಶಾಲ ಕಲ್ಪನೆಯನ್ನು ಜನತೆಗೆ ತೋರಿಸಿಕೊಟ್ಟರು. ವರ್ಣಾಶ್ರಮ ಧರ್ಮಗಳಿಗೆ ಇದರಿಂದ ಧಕ್ಕೆಯಾಗಹತ್ತಿತ್ತು. ಕೀಳ ಕುಲದವರು ಶಿವಾನುಭವಿಗಳಾಗಿ ಮಾರ್ಗದರ್ಶಕರಾದರು. ಡೋಹರ ಕಕ್ಕಯ್ಯ, ಮಾದರ ಚೆನ್ನಯ್ಯ ಮೊದಲಾದ ಶಿವಾನುಭವಿಗಳು ಜನತೆಗೆ ಆದರ್ಶ ವಾಗಿ ಹೋದರು. ವಚನಕಾರರು ಇವರನ್ನು ವರ್ಣಿಸಿದ್ದಾರೆ. ಜನಪದವು ಇವರನ್ನು ಹಾಡಿ ಹರಿಸಿದೆ. ಜನಸಾಮಾನ್ಯರೂ ಕುಲ-ಹೊಲೆಯ ವಿಷಯವಾಗಿ ಚರ್ಚಿಸಿದ್ದಾರೆ. ಇದನ್ನು ಶಿವಶರಣರ ಹಂತಿಯ ಹಾಡುಗಳಲ್ಲಿ ಕಾಣಬಹುದಾಗಿದೆ. ಹರಳಯ್ಯನ ಹಂತಿಯ ಹಾಡಿನಲ್ಲಿ

ಕುಲದಲ್ಲಿ ಹೊಲೆಯನವ, ಹೊಲಬಿನಲಿ ಹೊಲೆಯಿಲ್ಲ
ಹೊಲೆಯನೆಲೆಬಲ್ಲ ಘನಶರಣ । ಹರಳಯ್ಯ
ನೆಲಸಿ ಕಲ್ಯಾಣಪುರದೊಳಗೆ ॥೭೩॥

ಮುಟ್ಟದಿರು ಬಸವೇಶ, ಕೆಟ್ಟಹೊಲೆಯನು ನಾನು
ಬಟ್ಟ ಬಯಲಾಗಿ ಹೋಗಲೀ । ನಿಮ್ಮಂದೆ
ಸುಟ್ಟು ಬೂದ್ಯಾಗಿ ಬೀಳುತಲಿ ॥೭೪॥

ಹೊಲೆಯಲಲ್ಲದೆ ಲೋಕ, ತಲೆಯಲ್ಲಿ ಹುಟ್ಟುವದೆ
ಹೊಲೆಯ ಎಣಿಸಿದರೆ ಕುಲವುಂಟೆ । ಶರಣರಿಗೆ
ಹೊಲಬಳಿದು ಬೇರೆ ಕುಲವುಂಟೆ ॥೭೫॥ *–ಹರಳಯ್ಯ*

ಎಂಬ ನುಡಿಗಳು ಬಸವಣ್ಣನವರ ನಿಜವಾದ ಧರ್ಮಪರಿಶೀಲನೆಯಾಗಿವೆ; ಹಳ್ಳಿಗರಿಗೆ ಕುಲ, ಹೊಲೆ, ಹೊಲಬು ತಿಳಿಯಲು; ಮೂಲ ಸಾಧನಗಳಾಗಿವೆ.

ಹಿರಿಕುಲದ ಮಧುವರಸ, ಕಿರಿಕುಲಕೆ ಬೀಗಾದ
ಸರಿಏನು ಪಾಪ ಮಾಡಿದನು । ಕೊಂಡಿಗಳು
ಜರೆದು ಅರಸನಿಗೆ ತಿಳಿಸಿದರು ॥೫೩॥ *–ಹರಳಯ್ಯ*

ಹರಳನು ಮಧುವರಸನಿಗೆ ಮರಳು ಮಾಡಿದನೆಂದೂ ಅದಕ್ಕೆ ಬಸವಣ್ಣನವರೇ ಮೂಲ ಕಾರಣರೆಂದೂ ಕೊಂಡೆಯರು ತಿಳುಹಿಸಲು, ಓಲಗದಲ್ಲಿ ಅದರ ಚರ್ಚೆ ನಡೆಯಿತು. ಬಸವಣ್ಣನವರು–

ಹೊಲಬರಿತ ಮನುಜನವ, ಕುಲವಂತ ಜಗದೊಳಗೆ
ನೆಲೆಯುಂಟೆ ಗಂಗೆ ಬಿಜ್ಜಳನ । ಶಿವಮತಕೆ
ಕುಲವೆಣಿಸಲುಂಟೆ ನಡೆನುಡಿಗೆ ॥೫೪॥ *–ಹರಳಯ್ಯ*

ಎಂದು ಬುದ್ಧಿಯ ನುಡಿಗಳನ್ನು ಹೇಳಿದರು. ಆದರೆ ಕೊಂಡೆಯರ ಮಾತು ಕೇಳಿ, ನಂಬದ ಬಿಜ್ಜಳನು ನೀತಿ ಮಾರ್ಗವನ್ನೇ ಬಿಟ್ಟ; ಮಧುವರಸನನ್ನು ಹಿಡಿದು ತರಿಸಿದ. ಬಸವಣ್ಣನವರು ಅನ್ಯಾಯ ನೋಡಲಾರದೆ ವ್ಯಥೆಪಟ್ಟರು.

ಎಲವೊ ಮಧುವರಸಯ್ಯ, ಕುಲದಲ್ಲಿ ಹಾರುವನು
ಹೊಲೆಯನಿಗೆ ಹೆಣ್ಣು ಕೊಡಬೇಕೆ । ಕುಲಗೇಡಿ
ಕಲಿಸುವೆನು ಪಾಠ ನಿನಗದಕೆ ॥೮೧॥ *–ಹರಳಯ್ಯ*

ಎಂದು ಬಿಜ್ಜಳನು ಮಧುವರಸನಿಗನ್ನಲು ಅದಕ್ಕೆ ಅವನು

ಹೊಲಸು ತಿಂಬುವ ಹೊಲೆಯ, ಹೊಲಬಿಲ್ಲದವ ಹೊಲೆಯ
ನೆಲೆಸಲ್ಲುಪಿ ನುಡಿಯು ಎದೆಯೊಳಗೆ । ಹೊಲೆಯರಸ
ಹೊಲೆಯರೆನ್ನುವರೆ ಶರಣರಿಗೆ ॥೮೨॥ *–ಹರಳಯ್ಯ*

ಮಾರುತ್ತರ ಕೊಟ್ಟನು. ಬಿಜ್ಜಳನು ತಪ್ತನಾದ. ಚೆನ್ನದಂಡಾಧಿಪ ಮೊದಲಾದವರು, 'ಪೆಂಗಿ ಬಿಜ್ಜಳ ಬೇಡ, ನುಂಗುವದು ಈ ಕಜ್ಜ'ವೆಂದೂ, ಶಿವಭಕ್ತರನ್ನು ಈ ರೀತಿಯಲ್ಲಿ ಹಿಂಸೆ ಮಾಡುವುದು ತರವಲ್ಲವೆಂದೂ ಅವನಿಗೆ ಸಮ್ಮತಿಸಿದರು. ಆದರೆ ಅರಸ ಕೇಳಲಿಲ್ಲ. ಅಲ್ಲಲ್ಲಿ ಕಿಡಿಗಳೆದ್ದು ವಾತಾವರಣವು ಪ್ರಕ್ಷುಬ್ಧವಾಯಿತು. ಇಷ್ಟಾಗುವುದರೊಳಗೆ ಶಿವಾನುಭವ ಸಮಾಜ ಸಂಘಟನೆಗಳು ದಿನದಿನಕ್ಕೆ ಬಿಗಿಯಾಗಿ ಲಿಂಗಾಯತ ಮತವು ಜನತೆಗೆ ಬೇಕಾದ ಮತವಾಯಿತು. ಜಂಗಮರು ಈ ಮತದ ಸಂದೇಶವನ್ನು (Message) ಸುತ್ತಲೂ ಸಾರಹತ್ತಿದ್ದರು. ಬಸವಾದಿ ಪ್ರಮಥರ ಸಾನ್ನಿಧ್ಯದಲ್ಲಿ ಸಾವಿರಾರು ಜಂಗಮರು ಸಮಾಜ ಸಂಘಟನೆಯಲ್ಲಿ ಹಗಲಿರುಳು ನಿರತರಾಗಿದ್ದರು. ಪರಮತವಾದಿಗಳು ಅದನ್ನೇ ಅರಸನ ಮುಂದೆ ದೂರು ಒಯ್ದರು. ಬಸವೇಶ ಮೊದಲಾದ. ಮಹಾನುಭಾವರು ಅರಸನ ನಡತೆಯನ್ನೂ, ಸಹೋದರ ಮತಗಳ ಅಸೂಯೆಯನ್ನೂ ನೋಡಲಾರದೆ ಕಲ್ಯಾಣ ಬಿಟ್ಟರು. ವಾತಾವರಣವು ಕೈಮೀರುವ ಹಾಗೆ ತೋರಲು ಚೆನ್ನಬಸವಣ್ಣನವರು ತಾಳ್ಮೆಯಿಂದ ಎಲ್ಲವನ್ನೂ ಹಿಡಿತದಲ್ಲಿ ತರಲು ಪ್ರಯತ್ನ ಮಾಡಿದರು. ಆದರೆ ಮಾಡುವುದೇನು? ಹರಳಯ್ಯ ಮಧುವರಸರ ರಕ್ತ ಸಂಬಂಧವು ಅರಸನನ್ನು ಕೆರಳಿಸಿತು. ಆಗವನು ಆ ಶಿವಶರಣರನ್ನು ಹಿಡಿತರಿಸಿ ಕಣ್ಣು ಕೀಳಿಸಿ ಎಳೆ ಹೂಟಿಯೆನ್ನೆಳಿಸಿದ. ಲಿಂಗಾಯತರಿಗೆ, ತಾಳ್ಮೆಯ ಗಡಿಯು ಮೀರಿತು. ದಂಗೆಗಳೆದ್ದು ಬಿಜ್ಜಳನ ವಧೆಯೇ ಆಯಿತು. ಹೀಗೆ ಹದಗೆಟ್ಟ ವಾತಾವರಣವು ಕಲ್ಯಾಣ ಕ್ರಾಂತಿಯಾಗಿಯೇ ಪರಿಣಮಿಸಿತು. ಈ ಎಲ್ಲ ಸಂಗತಿಗಳನ್ನು ಹಳ್ಳಿಯ ಕಬ್ಬಿಗನು ಅಮುಗಯ್ಯನ ಹಂತಿಯ ಹಾಡುಗಳಲ್ಲಿ ಬಲು ಸ್ವಾರಸ್ಯವಾಗಿ ಹಾಡಿದ್ದಾನೆ.

ಮಿದ್ದಿದನು ಶಿವಗೋಷ್ಠಿ, ಬಿದ್ದು ವೇದಗಳಂದು
ಹುದ್ದೆಹೊಂದಿದವು ಜಗದೊಳಗೆ । ವಚನಗಳು
ಸುದ್ದಿನಾಡ್ತುಂಬಿ ಜನ ಹಿಗ್ಗಿ ॥೭॥

ಸೋಸಿ ವಚನದ ತಿರುಳ । ಬೀಸಿದವು ಶಿವಗಾಳಿ
ಮೂಸಿ ಬಂದಂತೆ ಗುಂಗಿಗಳು । ಹೂಗಳಿಗೆ
ರಾಶಿ ಜನ ಬಂತು ಮಂಟಪಕೆ ॥೭೩॥

ವಚನಮಂಟಪ ಬಳ್ಳಿ, ಶುಚಿಮೊಗ್ಗೆ ಹೂ ಬಿಡಲು
ರುಚಿ ಜೇನ ಹುಟ್ಟ ಹೊಸಮತವ । ಕಟ್ಟಿದರು
ವಚನ ಶಾಸ್ತ್ರಕರು ನಾಡೊಳಗೆ ॥೭೪॥

ಕೊಂಡಿಗಳು ಹಾರುವರು, ಕಂಡು ಮಂಟಪ ಕಂಜಿ
ಹಿಂಡುವದು ನಮ್ಮ ಶಿವಮತವು । ನಾಡೊಳಗೆ
ಬಂಡು ಎಬ್ಬಿಸುದೆ ಲೇಸೆಂದು ॥೭೫॥

ಆಳು ಅರಸನೆ ಕೇಳು, ಬೀಳುವದು ನಿಮ್ಮತವು
ತಾಳಿ ದೊರೆತನವ ಶಿವಶರಣ । ರಾಳುವರು
ಗೋಳು ನಿಮ್ಮತಕೆ ನೀವಿದ್ದು ॥೭೬॥

ಕುಲಗೆಡಿಸಿ ಬಸವೇಶ, ಕಲಕುಮಾಡಿದ ನಾಡು
ಚಿಲಕ ಮುರಿದಂತೆ ಬಾಗಿಲಕೆ । ಅರಮನೆಯ
ಮಲಕು ಮುರಿದಂತೆ ಅರಸಿದ್ದು ॥೭೭॥

ಕುಲಹಿಡಿದು ಬಿಜ್ಜಳನು ಹೊಲೆತನದ ಬಲವೆಂದು
ಚಿಲಕಕ್ಕೆ ಬಿಗಿದ ಹರಳಯ್ಯ । ಮಧುವರಗೆ
ಹುಲಿಕೊಂದ ಬತವೊ ಹಾರುವಗೆ ॥೭೮॥

ಕಂಡೆಲ್ಲ ಜಂಗಮರು, ಹುಂಡೆಂದು ಬಿಜ್ಜಳನು
ಕೆಂಡದುರಿಯೊಳಗೆ ಉಗ್ಗಿದರು । ಕಾದೆಣ್ಣೆ
ಮಂಡಿಗುಣ್ಣುದಕೆ ಹಾರುವರು ॥೭೯॥

ಬಿಜ್ಜಳನ ವಧೆಯಾಯ್ತು, ಹೆಜ್ಜೆ ಮೀರಿತು ನಾಡು
ಕಜ್ಜ ಹದಗೆಟ್ಟು ಶಿವಶರಣ । ರೂಳಿಗವು
ಸಜ್ಜುಗೇಡಾಗಿ ಊರ್ಬಿಟ್ಟು ॥೮೦।

ದೂರದೂರವೆ ಸಾಗಿ, ಸೇರಿದರು ಹಳ್ಳಿಗಳ
ಯಾರು ಯಾರೆಂಬ ಗುರುತಳಿದು । ಮರೆಯಾಗಿ
ಆರಿಕೆಂಡದಗಿ ಬೂದಿಯೊಳು ॥೮೧॥

ಮಂಟಪದ ಹೆಜ್ಜೇನ, ಗಂಟೇರು ಕೆಡಿಸಿದರೆ
ಕುಂಟಿತವೆ ಜೇನ ನೊಣಗಳಿಗೆ । ಹುಟ್ಟಿಡಲು
ಬಂಟ ಶರಣರಿಗೆ ಕಂಟಕವೆ ॥೮೨॥

ಶಿವಶರಣ ತುಂಬಿಗಳು, ಭವದೊಳಗೆ ಹಾರ್ಹಾಡಿ
ಶಿವಮತದ ಹುಟ್ಟು ಕಟ್ಟಿದವು । ವಚನಗಳು
ಸವೆಯದುಳಿದಿರುವ ಹೊಸಜೇನು ॥೮೩॥ –ನೇ–ಅ–

ಎಂದು ರಸಭರಿತವಾಗಿ ತನ್ನದೇ ಆದ ಒಂದು ವಿಶಿಷ್ಟ ಶೈಲಿಯ ಹೊಸ ಹಾದಿಯಲ್ಲಿಯೇ ಆಗಿನ ಸ್ಥಿತಿಗತಿಯನ್ನು ಕವಿಯು ಮನ ಮುಟ್ಟುವಂತೆ ಚಿತ್ರಿಸಿದ್ದಾನೆ. ಬಿಜ್ಜಳನ ವಧೆಯಾಗಲು ಕಲ್ಯಾಣದ ತುಂಬೆಲ್ಲ ಕದನ, ದಂಗೆ, ಅಲ್ಲೋಲಕಲ್ಲೋಲ! ಕ್ರಾಂತಿಯ ಕೂಗೇ ಕೂಗು!

ಮಧುವರಸು, ಹರಳಯ್ಯ, ಹೋದದಿನ ಶಿವನಡಿಗೆ
ಬೀದಿಬೀದಿಗಳು ಕಿಡಿಕಾರಿ । ಕಲ್ಯಾಣ
ಹಾದಿ ಹೌಹಾರಿ ತಳಮಳಸಿ ॥೮೩॥ –ಮ–ಮಾ–

ಎಂಬ ಭೀಕರ ಚಿತ್ರವನ್ನೇ ಇಲ್ಲಿ ಕಾಣಬಹುದಾಗಿದೆ. ಒಂದೆಡೆಗೆ ಶಿವಶರಣರೊಂದಿಗೆ ಜಂಗಮರೆದ್ದರು; ಇನ್ನೊಂದೆಡೆಗೆ ಜೈನರು ಅಳಿಯ ಬಿಜ್ಜಳರಾಯನೊಡನೆದ್ದರು. ಶಿವಶರಣರು ಕ್ರಾಂತಿಯಾಗಲು, ದಿಕ್ಕೆಟ್ಟು ಕಲ್ಯಾಣ ಬಿಟ್ಟು ತಮಗನುವು ದೊರೆತಲ್ಲಿ ಹೋಗಹತ್ತಿದರು. ಸಹಾಯವಿಲ್ಲದ ಜಂಗಮರಿಗೆ ಚೆನ್ನಬಸವಣ್ಣ, ಮಡಿವಾಳ ಮಾಚಯ್ಯ, ಕಿನ್ನರಿ ಬೊಮ್ಮಯ್ಯ, ಜಗದೇವ, ಮಲ್ಲಬೊಮ್ಮ, ನೀಲಲೋಚನೆ, ರುದ್ರಮುನಿ, ಹಡಪದಪ್ಪಣ್ಣಗಳೇ ಮೊದಲಾದವರು ಮಾರ್ಗದರ್ಶಕರಾದರು. ಅಳಿಯ ಬಿಜ್ಜಳರಾಯನು ಶಿವಶರಣರನ್ನು ಬೆನ್ನಟ್ಟಿದನು.

ಅಳಿಯ ಬಿಜ್ಜಳರಾಯ, ಕೊಲೆಯ ಕೇಳುತಲೆದ್ದ
ತಳಮಳಿಸಿ ಬಳಗ ಕೂಡಿಸಿದ। ದಂಡೆತ್ತಿ
ಉಳಿವೆ ಬಳಿಯವರ ತೊಡವಿದನು ॥೮೯॥

ತುಂಡು ಜಂಗಮ ದಂಡು, ದಂಡನಾಯಕ ಮಾಚ
ಕಂಡಲ್ಲಿ ಕಡಿದು ವೈರಿಗಳ। ಚೆಲ್ಲಿದರು
ಚಂಡ ಕಳಕೊಂಡ ಮರಿಯರಸ ॥೯೦॥

ಚೆನ್ನಹತ್ತಿದ ವೈರಿ, ತಣ್ಣಗಾಯಿತು ಚೆದರಿ
ಮಣ್ಣಗೂಡಿಸಿದ ಮಾಚಯ್ಯ। ಕೈಯೆತ್ತಿ
ಚಿನ್ನ ಉಳಿಸಿದನು ಲಿಂಗಿಗಳ ॥೯೧॥ -ಮ-ಮಾ

ವೀರಶೈವರಲ್ಲಿ ಕ್ರಾಂತಿಯಾದನಂತರ ಸಂಭವಿಸಿದ ಚಿತ್ರವಿಲ್ಲಿ ಬಂದಿದೆ. ಜೈನರು ಸೋತು ತಣ್ಣಗಾದರೆಂದು ಜಾನಪದ ಕವಿಯು ಹೇಳಿದ್ದಾನೆ. ವೀರಶೈವರಲ್ಲಿ ಮಡಿವಾಳ ಮಾಚಯ್ಯನಿಗೆ 'ಬಿಚ್ಚಗತ್ತಿಯ ಮಾಚ'ನೆಂದೂ, 'ವೀರಭದ್ರ ದೇವರ ಅವತಾರವೆಂದೂ' ಅವನೇ ಕ್ರಾಂತಿಯಲ್ಲಿ ವೀರಶೈವ ಧರ್ಮವನ್ನುಳಿಸಿದನೆಂದೂ ದೃಢವಾದ ನಂಬಿಗೆಯಿದೆ.

ನೂರೊಂದು ತಳಗಳಿಗೆ, ನೂರೊಂದು ಶರಣರನು
ವೀರಮಾಚಣ್ಣ ಕರವಾಳು। ಬಸವನಿಗೆ
ಧೀರಕಾಯಕದ ಹುರಿಯಾಳು ॥೨೨॥ -ಮ-ಮಾ-

ಮಾಚಯ್ಯನನ್ನು ಕುರಿತು ವೀರಶೈವರಲ್ಲಿ ಅನೇಕ ಕಥೆಗಳಿವೆ. ಜಾನಪದ ಕವಿಯು ಹೇಳುವ ಕಥೆಯನ್ನು ಉಳಿದ ಯಾವ ಕವಿಯೂ ಎತ್ತಿಲ್ಲ.

ಮಡಿವಾಳ ಮಾಚಯ್ಯ, ದುಢವುಳ್ಳ ಶಿವಭಕ್ತ
ಮಡದಿಯನು ಕೊಂದು ರಗುತವನ್ನು। ತಕ್ಕೊಂಡು
ಒಡೆಯನೊಸ್ತ್ರರವ ಮಡಿಮಾಡಿ ॥೧॥ -ಮ-ಮಾ-

ಮಾಚನ ಕಾಯಕಕ್ಕೆ ಪಿಸುಣಿಗರು ಅಡ್ಡಬಂದು ಅರಸನಿಗೆ ದೂರು ಹೇಳಿ, ಜಲಾಶಯಗಳನ್ನು ಕಾವಲಿಡಿಸಲು ಶಿವಶರಣೆ, ಮಾಚಯ್ಯನ ಮಡದಿಯು ತನ್ನ ಎದೆ ರಗುತವನ್ನು ಕೊಡಲು, ಅದು ಮಡುಗಟ್ಟಿ ನಿಂತು ಕೆರೆಯಾಯಿತು. ಅವನು ಅದರಲ್ಲಿ ಬಸವಾದಿ ಪ್ರಮಥರ ವಸ್ತ್ರಗಳನ್ನು ತೊಳೆದನೆಂದು ಜಾನಪದದಲ್ಲೊಂದು ಕಥೆಯೂ ಬರುತ್ತದೆ. ಆ ಕಥೆಯನ್ನೇ ಜಾನಪದ ಕವಿಯು ಹಾಡಿದ್ದಾನೆ.

ಹಡದಿ ಹಾಸಿದ ಮಾಚ, ಮಡದಿಯಾ ಎದೆಕೊಯ್ದು
ಒಡನೆ ಬಲು ಚಿಮ್ಮಿ ಬಿಸಿರಗುತ। ಹೊಳೆಯಾಗಿ
ಮಡುಗಟ್ಟಿ ನೀರ ಕೆರೆಯಾಯ್ತು ॥೫೨॥ -ಮ-ಮಾ-

ಆ ಕೆರೆಯು ಈಗ ಮಾಚನಕೆರೆಯೆಂದು ಕಲ್ಯಾಣದಲ್ಲಿ ಪ್ರಸಿದ್ಧವಾಗಿದೆ ಎಂದು ಜಾನಪದ ಕವಿಯು ಹೇಳುತ್ತಾನೆ.

ಹಡದಿ ಹಾಸಿದ ತಳವು, ಮಡದಿನೆತ್ತರ ನಿಂತ
ಮಡುವೆ ಮಾಚಯ್ನ ಕೆರೆಯೆಂದು। ಕಲ್ಯಾಣ
ಪಡುವಣಕೆ ಇಂದು ಮೆರೆಯುವದು ॥೬೩॥ -ಮ-ಮಾ-

ಎಂದು ಆ ಕೆರೆಯ ನಿಜವಾದ ಅಸ್ತಿತ್ವವನ್ನೇ ಕವಿಯು ಕೊಡುತ್ತಾನೆ. ಮುತ್ತೈದಿ ಮರಣ ಹೊಂದಿದ ಮಾಚನ ಮಡದಿಗೆ,

ಮುತ್ತೈದಿ ನಿನ ಮರಣ, ಎತ್ತ ಹೋದರು ಪೂಜೆ
ಕತ್ತೂರಿ ನಾತ ಇದ್ದಂತೆ। ಜಗದೊಳಗೆ
ಉತ್ತಮ ಕಾಯಕ ಬಗೆ ಹೀಗೆ . ॥೬೦॥ -ಮ-ಮಾ-

ಎಂದು ಮುತ್ತೈದಿಯ ಮರಣವನ್ನು ಕವಿಯು ಬಲು ಮಾರ್ಮಿಕವಾಗಿ ಜನರೂಢಿಯ ಮಾತಿನಲ್ಲಿ ಹಾಡಿದ್ದಾನೆ. ಅದು ನಮ್ಮ ಸಂಸ್ಕೃತಿಯ ದ್ಯೋತಕವು. 'ಮುಂಬರುವ ಸ್ಥಿತಿಗತಿಗೆ ಕಂಬ ಮಾಚನೆ ಬೇಕು,' 'ಬಸವನಿಗೆ ನಂಬಿಗೆಯ ಧೀರ' ಮೊದಲಾದ ನುಡಿಗಳು ಮಾಚಯ್ಯನ ಅಪಾರವಾದ ಶೌರ್ಯವನ್ನು ತೋರದಿರವು. ಕಾಲಜ್ಞಾನ ವಚನಗಳಲ್ಲಿ ಮಾಚಯ್ಯನು ಬರುತ್ತಾನೆ. ಅವರ ಸಹಾಯದಿಂದಲೇ ಚೆನ್ನಬಸವಾದಿಗಳು ಉಳಿವೆಯ ಮಹಾಮನೆಯನ್ನು ಮುಟ್ಟಿದರೆಂದೂ ಬರುವುದು. ಇದನ್ನು ಹಳಕಟ್ಟಿಯವರೂ ಒಪ್ಪುತ್ತಾರೆ. ಜನಪದವಾದರೂ ಅದನ್ನೊಪ್ಪಿ ಇಂದು ಉಳಿವೆಯ ಶಿವಶರಣರ ರಥೋತ್ಸವವನ್ನು ಭಾರತ ಹುಣ್ಣಿಮೆಯ ದಿವಸ ಪ್ರತಿವರುಷ ಮಾಡುತ್ತದೆ. ಅಲ್ಲದೆ ಉಳಿವೆಯಲ್ಲಿ ಚೆನ್ನಬಸವಾದಿಗಳ ಸ್ಮಾರಕಗಳಿರುವುವು.

ಹೀಗೆ ಕ್ರಾಂತಿಯಾದ ನಂತರ ಶಿವಶರಣರು ಉಳಿವೆಯ ಮಹಾಮನೆಯನ್ನು ಸೇರಿಕೊಂಡರು.

ಹರಭಜನೆ ಗುರುಸೇವೆ, ಉರುತರದಿ ಮಾಡುತಲಿ
ಶರಣ ಗಣ ಸೇರಿ ಉಳಿವೆಯೊಳು । ಮರುದಿನವೆ
ಮೆರೆಸಿದರು ತತ್ವಮಂಟಪವ ॥೯೨॥

ಚೆನ್ನಬಸವೇಶ್ವರರು, ಉನ್ನತನುಭಾವಿಗಳು
ಚಿನ್ನಮಯವಾಯ್ತು ಉಳಿವೆಯದು । ಲಿಂಗಿಗಳ
ಕನ್ನೆ ಭಕ್ತಿಗದು ಗೂಡಾಯ್ತು ॥೯೩॥ -ಮ-ಮಾ-

ಉಳಿವೆಯಲ್ಲಿ ಶಿವಶರಣರು ಬಂದು ನಿಂತ ಮೇಲೆ ಅವರ ಚಟುವಟಿಕೆಗಳು ಮುಂದೆ ಅಷ್ಟೊಂದು ಭರದಿಂದ ನಡೆಯಲಿಲ್ಲೆಂದು ತೋರುತ್ತದೆ. ಅದೇ ಅವರ ಕೊನೆಗಾಲವಾಗಿ ಸಂಭವಿಸಿರಬಹುದು.

ವೀರಶೈವ ಸ್ತ್ರೀಯರು ಅಕ್ಕಮಹಾದೇವಿಗೆ 'ಆಧ್ಯಾತ್ಮಿಕ' ಪಟ್ಟಗಟ್ಟಿದರೆ ಶಿವಶರಣೆ, ನೀಲಲೋಚನೆಗೆ 'ಕ್ರಿಯಾತ್ಮಕ' ಪಟ್ಟಗಟ್ಟಿ ಮನ್ನಿಸುತ್ತಾರೆ. ಇವಳು ಬಸವಣ್ಣನವರ ಪತ್ನಿ, ಪತಿವ್ರತಾಶಿರೋಮಣಿ. ಬಸವಣ್ಣನವರು ಕ್ರಾಂತಿಯ ಸುಳುವನ್ನರಿತು ಸಂಗಮಕ್ಕೆ ಹೋಗುವಾಗ ರುದ್ರಮುನಿಯ ಮುಖಾಂತರ ತನ್ನನ್ನು ಕೂಡಲು ಇವಳಿಗೆ ಹೇಳಿಕಳುಹಿಸಲು, ಈ ನಾರೀಮಣಿಯು ಅವರನ್ನು ಹಿಂಬಾಲಿಸಲಿಲ್ಲ. ಕ್ರಾಂತಿಯಲ್ಲಿ ಕಲ್ಯಾಣದಲ್ಲಿ ಉಳಿದು, ಶಿವಶರಣರ ಬವಣೆಯನ್ನು ನೋಡಲಾರದೆ ಲಿಂಗದಲ್ಲಿಯೇ ಐಕ್ಯಳಾದಳೆಂದು ಐತಿಹ್ಯವಿರುವುದು ಬಾಗಲಕೋಟೆಯ ಸುತ್ತಮುತ್ತಲಿನ ಹಳ್ಳಿಗಳಲ್ಲಿ ನೀಲಲೋಚನೆಯ ವಿಷಯವಾಗಿ ಹೆಣ್ಣುಮಕ್ಕಳು ಭಕ್ತಿಯಿಂದ ಹಾಡುತ್ತಾರೆ. ಸಂಗಮದ ನೆರೆಯಲ್ಲಿಯ ತಂಗಡಿಗೆಯಲ್ಲಿ ನೀಲಮ್ಮನ ಒಂದು ಗುಡಿಯೂ ಇದೆ. ಇದೇ ಆ ಶಿವಶರಣೆಯ ಸಮಾಧಿಯೆಂದು ಜನರು ತೋರಿಸುವರು.

ನೋಡು ನೋಡು, ನೋಡು, ನೋಡು, ನೋಡು ಲಿಂಗsವೆ।
ನೋಡು ಬಸವಯ್ಯನವರು ಮಾಡಿದಾಟವೂ ॥ಪಲ್ಲವಿ॥

ಹರಳಯ್ಯ ಮಧುವಯ್ಯರವರಿಗೆ ಎಳೆಹೊಟ
ದುರುಳ ಬಿಜ್ಜಳ ಕಟ್ಟಿಸಿದನಂತೆ।
ಇರಲಾಗದಿಲ್ಲೆಂದು ಪ್ರಮಥರಿಗರುಹೇಳಿ
ದೊರೆಯು ಬಸವರಾಜ ಪೋದರಂತೆ ॥೧॥

ನುಡಿಯ ಲಾಲಿಸು ಬೇಗ ಕೆಡುವದು ಕಲ್ಯಾಣ
ಒಡೆಯ ಸಂಗಮನೊಳು ಐಕ್ಯವೆಂದು ।
ತಡಮಾಡದೆ ಪೋಗಿ ಮಡದಿಗೆ ಅರುಹೇಳಿ
ಎಡಬಿಡದಲ್ಲಿಗೆ ಪೋದರಂತೆ ॥೨॥

ಅಪ್ಪಣ್ಣಯ್ಯಗಳೆನ್ನ, ಕರಿಯಲು ಬಂದಾರು
ಕಪ್ಪಡಿ ಸಂಗಮನಾಥ ನೀ ಕೇಳೋ
ಪುಷ್ಪಕ್ಕೆ ಪರಿಮಳವು ಬೆರದಂತಾಯಿತು ಎನ್ನ
ಅಪ್ಪಿ ನೀ ಲಿಂಗವೆ ಮಾತನಾಡೊ ॥೩॥

ಅಲ್ಲಿಗೆ ನಮ್ಮನ್ನು ಬರಹೇಳಿದಾರಂತೆ
ಅಲ್ಲಿರುವ ಸಂಗಮನಿಲ್ಲಿಲ್ಲವೊ
ಅಲ್ಲಲ್ಲಿಗಾಭವು ಉಭಯಸ್ಥಾನಗಳೇಕೆ
ಬಲ್ಲಿದ ಮಹಾತ್ಮರಿಗೆ ಇದು ಗುಣವೆ ॥೪॥

ಸಂಗನ ಬಸವನು ಇಂತೆಂಬು ದೇವರಿಗೆ
ಹಿಂಗೆಂದು ಕರವೆತ್ತಿ ಪೊಗಳುತಿರೆ।
ಸಂಗನ, ಬಸವನು ಆತ ಈತನು ಅಲ್ಲೆ
ಅಂಗೈಯ ಲಿಂಗವೆ ಮಾತನಾಡೊ ॥೫॥

ಈ ಹಾಡಿನಲ್ಲಿ ಕ್ರಾಂತಿಯನ್ನು ಕಂಡ ಬಸವಣ್ಣನು ತಾನು ಕೂಡಲಿಕ್ಕೆ ಹೋದದ್ದನ್ನು ಮಡದಿ ನೀಲಲೋಚನೆಗೆ ತಿಳುಹಿಸೆಂದು ಅವಳಿಗೆ ತನ್ನನ್ನು ಹಿಂಬಾಲಿಸಿ ಸಂಗಮದಲ್ಲಿ ಬಂದು ಕೂಡಲ ಹೇಳೆಂದೂ, ಹಡಪದಪ್ಪಯ್ಯಗಳಿಗೆ ನಿರೂಪಿಸಿದ್ದಾನೆ. ಅಪ್ಪಯ್ಯಗಳು ಈ ಸುದ್ದಿಯನ್ನು ನೀಲಲೋಚನೆಗೆ ತಿಳುಹಿಸಲು, ಆಗ ಲಿಂಗಪೂಜೆ ಮಾಡುವ ಅವಳು ಪೂಜೆ ಮಾಡುತ್ತ ಲಿಂಗದಲ್ಲಿ ಬಯಲಾದಳೆಂದೂ ಬಂದಿದೆ. ಕ್ರಾಂತಿಯಲ್ಲಿ ಅವಳು ಬಸವಣ್ಣನವರನ್ನು ಹಿಂಬಾಲಿಸಿರಲಿಕ್ಕಿಲ್ಲ. ಮೇಲಿನ ಹಾಡಿನಿಂದ ಕಲ್ಯಾಣದಲ್ಲಿಯೇ ಉಳಿದು ಶಿವಶರಣರಿಗೆ ಬಂದ ವಿಪತ್ತನ್ನು ಕೇಳಿ ಮನಸ್ಸಿನಲ್ಲಿ ನೊಂದು ಸಮಾಧಿ ಹೊಂದಿರಬಹುದೆಂದು ಊಹಿಸಬಹುದು.

ಕ್ರಾಂತಿಯಲ್ಲಿ ಕಲ್ಯಾಣವು ಹಾಳಾಯಿತು. ಅನೇಕ ಜೈನರೂ ನಾಶಹೊಂದಿದರು. 'ಹುಟ್ಟು' ಹಾಳಾದ ಜೇನ ಹುಳುಗಳಂತೆ ಅನುಭವ ಮಂಟಪದ ಜಂಗಮರು ಹಳ್ಳಿಹಳ್ಳಿಗಳನ್ನು ಸೇರಿದರು. ಅನೇಕರು ಯುದ್ಧದಲ್ಲಿ ಕಾದು ಮಡಿದರು. ಕೆಲವರು ಉಳುವೆಯ ಕಾಡು ಸೇರಿದರು.

ಹೀಗೆ ಕ್ರಾಂತಿಯು ತನ್ನಷ್ಟಕ್ಕೇ ತಾನೇ ಶಾಂತವಾಯಿತು. ಹೊಸಮತವು ಎಲ್ಲ ಹಿರಿಯರನ್ನು ಕಳೆದುಕೊಂಡಿತು. ಅದರ ಭಾರವು ಅನುಭವ ಮಂಪಟದ ಜಂಗಮರ ಮೇಲೆ ಬಿತ್ತು. "ಮಂಟಪದ ಹೆಜ್ಜೇನು," "ಶಿವಶರಣ ತುಂಬಿಗಳು," 'ಶಿವಮತದ ಹುಟ್ಟು' 'ವಚನಗಳು ಹೊಸ ಜೇನು" ಈ ನುಡಿಗಳು ಜಂಗಮರು, ಹಳ್ಳಿಹಳ್ಳಿಗೊಂದು ಹೊಸ ಜೇನ ಹುಟ್ಟನ್ನೇ ಕಟ್ಟಿದರೆಂದು ಜಾನಪದ ಕವಿಯು ಹಂತಿಯ ಹಾಡುಗಳಲ್ಲಿ ಹಾಡಿದ್ದಾನೆ. ಹಳ್ಳಿಗಳನ್ನು ಸೇರಿದ ಜಂಗಮರು ಸುಮ್ಮನೇ ಕೂಡ್ರಲಿಲ್ಲ. ಹಳ್ಳಿಹಳ್ಳಿಗೆ ಮಠಗಳನ್ನು ಸ್ಥಾಪಿಸಿ, ಚರ್ಚೆಮಾಡಲು ಶಿವಾನುಭವ ಮಂಟಪಗಳನ್ನು ಕಟ್ಟಿದರು. ಶಿವಶರಣರ ತತ್ವಗಳನ್ನು ಜನತೆಗೆ ಸಾರಿದರು. ಈ ಸಂಘಟನೆಯಿಂದ ವೀರಶೈವ ಮತವು ರಾಜಾಶ್ರಯವಿಲ್ಲದೆ ನಾಡ ತುಂಬೆಲ್ಲ, ಹಬ್ಬಿತು. ಶಿವೋಪಾಸಕರಾದ ಪಾಶುಪತ ಕಾಳಾಮುಖರು ಮುಂದೆ ಈ ಪಂಗಡದಲ್ಲಿ ಬೆರೆತು ವೀರಶೈರಾಗಿ ಹೋಗಿರಬಹುದು. ಇವೇ ಮಾತುಗಳನ್ನು ಹಳಕಟ್ಟಿಯವರು, ಜಂಗಮರು ಪಾಶುಪತ ಕಾಳಾಮುಖರನ್ನು ವೀರಶೈವರನ್ನಾಗಿ ಮಾಡಿದರೆಂದು ಹೇಳುತ್ತಾರೆ.[೫] ಜಂಗಮರ ಮಠಗಳಲ್ಲಿ ವಚನಶಾಸ್ತ್ರವು ರಾಶಿರಾಶಿಯಾಗಿ ಬೆಳೆದು ವಿದ್ಯಾಭಂಡಾರವಾಗಿ ಮಠಗಳಲ್ಲಿಯೂ, ಜನರಲ್ಲಿಯೂ ಗುಪ್ತವಾಗಿ ಉಳಿಯಿತು. ವೀರಶೈವ ಮತವು ಕರ್ನಾಟಕ ಮತವಾಗಿ ಬೆಳೆಯುತ್ತ ಬಂದದ್ದು ಇಂದಿಗೂ ಹಾಗೆಯೇ ಸ್ಥಿರವಾಗಿ ನಿಂತಿದೆ. ಇದೆಲ್ಲವೊ ಕಲ್ಯಾಣಕ್ರಾಂತಿಯ ಪ್ರಭಾವವೆಂದೇ ಹೇಳಬಹುದು.

❒

---

೫. ಶಿವಶರಣರ ಚರಿತ್ರೆಗಳು, ಭಾಗ-೩, ಪು. ೩೨೮

4. ಕೊಮರಾಮ

೧೪ನೆಯ ಶತಮಾನದ ಆರಂಭದಲ್ಲಿ ಕರ್ನಾಟಕದ ಮೇಲೆ ಮಾಡಿದ ಮುಸಲ್ಮಾನರ ದಾಳಿಗಳನ್ನು ತಡೆದ ಮೂವರು ರಾಜರಲ್ಲಿ ಕಂಪಿಲರಾಯನ ಹೆಸರನ್ನು ಕರ್ನಾಟಕದ ಇತಿಹಾಸದಲ್ಲಿ ಬಂಗಾರದ ಅಕ್ಷರಗಳಿಂದ ಬರೆದಿಡತಕ್ಕದ್ದಾಗಿದೆ. ಕಂಪಿಲಿಗೆ 'ಕುಮ್ಮಟದುರ್ಗ' ವೆಂಬ ಬೇರೆ ಹೆಸರೂ ಉಂಟು. ಶಿಲಾಶಾಸನಗಳಲ್ಲಿಯೂ ಇತಿಹಾಸಕಾರರ ಬರಹಗಳಲ್ಲಿಯೂ 'ಕುಮ್ಮಟದುರ್ಗ'ವೆಂದೇ ಬರುವುದು. ೮ನೆಯ ಶತಮಾನದಿಂದ ೧೪ನೆಯ ಶತಮಾನದ ಮೊದಲನೆಯ ಭಾಗದವರೆಗಿನ ಕೆಲವು ಶಾಸನಗಳು 'ಕಂಪಿಲ' ಪಟ್ಟಣದ ಸಂಬಂಧ ಹೇಳುವುವು. ಪ್ರಸಿದ್ಧ ಇತಿಹಾಸಕಾರರಾದ 'ಫೆರಿಸ್ತ'[೧] ಅವರು ಮಹಮ್ಮದ ತೊಗಲಘನ ದಕ್ಷಿಣ ದೌಡನ್ನು ಹೇಳುವ ಕಾಲಕ್ಕೆ ಕಂಪಿಲರಾಯನ ಬವಣೆಯನ್ನೂ, ಕಂಪಿಲ ಪಟ್ಟಣದ ಮುತ್ತಿಗೆಯನ್ನೂ ವಿಶದವಾಗಿ ಹೇಳಿದ್ದಾರೆ. 'ನೂನಿಝ'[೨]ರು ಫೆರಿಸ್ತನಂತೆ ಕಥೆಯನ್ನು ಹೇಳಿ 'ಬಿಸ್ನಾಗ' (ವಿಜಯನಗರ), ನೇಗುಂದಿ (ಆನೇಗುಂದಿ)ಯ, ಮುತ್ತಿಗೆಯನ್ನು ಹೇಳಿ ವಿಜಯನಗರ ರಾಜ್ಯಸ್ಥಾಪನೆಗೆ ಬಂದಿದ್ದಾರೆ. ಎಚ್.ಹೆರಾಸರು, ಈ ಎರಡೂ ಸಂಗತಿಗಳನ್ನು ಒರೆಗೆ ಹೆಚ್ಚಿ, 'The Beginnings of Vijayanagar History' ಎಂಬ ಪುಸ್ತಕದಲ್ಲಿ ಒಂದು ಐತಿಹಾಸಿಕ ಸಂಶೋಧನೆಗೆ ಬಂದು ತಲುಪಿದ್ದಾರೆ. ಡಾ. ಸಾಲೇತೂರರು ತಮ್ಮ 'The Social and Political Life in the Vijayanagar Empire' ಎಂಬ ಲೇಖನದಲ್ಲಿ ಕಂಪಿಲ ಪಟ್ಟಣವನ್ನು ಕುರಿತು ವಿಶೇಷ ಚರ್ಚೆ ಮಾಡಿದ್ದಾರೆ. ರಾ.ಬ.ಪಿ.ಜಿ. ಹಳಕಟ್ಟಿ ಅವರು "ವೀರಶೈವರ ರಾಜ ಮನೆತನಗಳ ಚರಿತ್ರೆ" ಎಂಬ ಪುಸ್ತಕದ ೬ನೆಯ ಪ್ರಕರಣದಲ್ಲಿ ಕಂಪಿಲ ಪಟ್ಟಣದ ಇತಿಹಾಸವನ್ನು ಸಂಕ್ಷಿಪ್ತವಾಗಿ ಹೇಳಿದ್ದಾರೆ. ಕುಮಾರ ರಾಮನ ಚರಿತೆಯನ್ನು ಆರು ಮಂದಿ ಕವಿಗಳು ಬರೆದದ್ದು ಕಂಡುಬರುವುದು. ಕವಿ ನಾಗಸಂಗಯ್ಯನ 'ಕುಮಾರ ರಾಮ ಚರಿತೆ'ಯು ಸಾಂಗತ್ಯದಲ್ಲಿದ್ದು ಕಂಪಿಲ ಪಟ್ಟಣದ ಕೊನೆಯ ದಿನಗಳ ಚಿತ್ರವನ್ನು ಸಂಪೂರ್ಣ ಕೊಡುವುದು. ಈ ಚಿತ್ರವು ಮೇಲೆ ಹೇಳಿದ ಇತಿಹಾಸಕಾರರು ಹೇಳುವ ಸಂಗತಿಗಳಿಗೆ ಸರಿಹೊಂದುವವದೆಂದು ಹೇಳಬಹುದಾಗಿದೆ. ಹೀಗೆ ದೊರೆಯುವ ಈ ಸಂಗತಿಗಳು ಜನಪದದಲ್ಲಿಯೂ ಸಿಗಬಹುದೆಂಬ ಸಂಶಯವು ಹೊರಡಬಹುದು. ಅದರಂತೆ ಜನಪದವು ಈ ಪರಂಪರೆಗೆ ಹೊರತಾದಂತೆ ಕಂಡುಬರುವುದಿಲ್ಲ. ಜಾನಪದ ಸಾಹಿತ್ಯವನ್ನು ಹಳ್ಳಿಹಳ್ಳಿಗೆ ಹೋಗಿ ಅಭ್ಯಾಸ ಮಾಡಿನೋಡಿದಲ್ಲಿ ಈ ಸಂಗತಿಗಳು ಸಂಶೋಧಕರ ನೆದರಿಗೆ ಬೀಳದಿರವು.

ಇಂದು ಜನಪದದಲ್ಲಿ ಅನೇಕ ನಾಣ್ಣುಡಿಗಳನ್ನು ನಾವು ಕಾಣಬಹುದು. ಜನಪದವು ಮಹಾವ್ಯಕ್ತಿಗಳ ಸ್ಮಾರಕವಾಗಿ, ಅವರ ಅಂಕಿತ ಗಳನ್ನು ತಮಗೆ ಬೇಕಾದಾಗ ವಿಶೇಷಣಗಳಂತೆ ಬಳೆಸುತ್ತ ಬಂದಿದೆ. 'ರಾಮರಾಜ್ಯ,' 'ಧರ್ಮರಾಜ್ಯ,' 'ಧರ್ಮವಂತ ಧರ್ಮರಾಯ,' 'ದುಷ್ಟ ದುರ್ಯೋಧನ' 'ಕೆಟ್ಟ ಕೀಚಕ' 'ಗಾಂಡೀವಿ ಕೆಲಸ' ಮುಂತಾದ ಅನೇಕ ವ್ಯಕ್ತಿಗುಣ ವಾಚಕಗಳನ್ನು ಬಳಸಿಕೊಂಡು ಜನರು ಮಾತಾಡುತ್ತಾರೆ. ಬೆಳುವಲ ಹಳ್ಳಿಗಳಲ್ಲಿ ಜನರು ಬಣಗಟ್ಟಿ ಬಡಿದಾಡುವ ಕಾಲಕ್ಕೆ ಈರ್ಷೆಯಿಂದ ಮುಂದಾದ ಪುಂಡನಿಗೆ, 'ಏನ್' ದೊಡ್ಡ ಕೊಮರಾಮೇನಿವ್' ಎಂಬ ಮಾತನ್ನು ಸಹಜವಾಗಿ ಅನ್ನುವದನ್ನು ಕೇಳಬಹುದು. ಅಲ್ಲದೆ ಹಾಳಾದ ಒಂದು ಸ್ಥಿತಿಯನ್ನು ನೋಡಿ "ಕಂಪಿಲರಾಯನ ಪಟ್ಣಾಯಿತಲ್ಲ" ಎಂದೆನ್ನುತ್ತ ಜನರು ಉಸುರು ಹಾಕುವುದನ್ನು ಎಷ್ಟೋ ಸಲ ಕೇಳಬಹುದು. ಈ ನುಡಿಗಳನ್ನು ಕೇಳಲು ಈ 'ಕೊಮರಾಮನು' ಯಾರಿರಬಹುದು? ಇವನೇನು ಧರ್ಮ, ದುರ್ಯೋಧನರಂತೆ ಪೌರಾಣಿಕ ಪುರುಷನೊ ಅಥವಾ ಐತಿಹಾಸಿಕ ಪುರುಷನೊ? ಎಂಬ ಪ್ರಶ್ನೆಗಳು ಎಲ್ಲರನ್ನೂ ವಿಚಾರಕ್ಕೆಳಿಸದಿರವು. ಇದರಂತೆ ಈ 'ಕಂಪಿಲ' ಪಟ್ಟಣವು ಯಾವದಿರಬಹುದು? ಇದಕ್ಕೂ ಕಂಪಿಲರಾಯನಿಗೂ ಸಂಬಂಧವಿರಬಹುದೇ? ಎಂಬ ಅನುಮಾನವೂ ಹಗಲೆಲ್ಲ ಬರುತ್ತಿದೆ. ಜಾನಪದ ಹಾಡುಗಳನ್ನು ಸಂಕಲನ ಮಾಡುವಾಗ ಕಂಪಿಲ ಪಟ್ಟಣವನ್ನು ಕುರಿತು ಹಂತಿಯ ಹಾಡಿನ ಕೆಲವು ಬಿಡಿಪದ್ಯಗಳು ನಿದರ್ಶನಕ್ಕೆ ಬಂದುವು. ಕಂಪಿಲರಾಯ ಹಾಗೂ 'ಕೊಮರಾಮ' ಇವರ ಸಂಬಂಧ ಕುತೂಹಲವು ಹೆಚ್ಚಾಗಿ ಜಾನಪದ ಸಾಹಿತ್ಯದಲ್ಲಿ ವಿಶೇಷ ಪರಿಶ್ರಮ ತಕ್ಕೊಂಡು ಹುಡುಕಲು, ಅನೇಕ ಹಾಡುಗಳೂ, ದೊರೆತವು. ಅವುಗಳನ್ನೂ ಸಂಗ್ರಹಿಸಲಾಗಿದೆ.

ಕಂಪಿಲ ಪಟ್ಟಣದ ಹಂತಿಯ ಹಾಡು

ಹಂಪೇಯು ಶರಣರಿಗೆ, ಸಂಪಾದ ಪಟ್ಟಣ
ಕಂಪಲಿಯು ನೆರಳು ಶರಣರಿಗೆ। ತುರುಕರಿಗೆ
ಕಂಪನವು ಕೇಳಿ ಎದೆಯಾಗೊ ॥೧॥

---

೧. 'ಫೆರಿಸ್ತ' ಇವನೊಬ್ಬ ಮುಸಲ್ಮಾನ ಇತಿಹಾಸಕಾರನು. ವಿಜಾಪುರ ಎರಡನೆಯ ಇಬ್ರಾಹಿಮ ಆದಿಲಶಾಹಿಯ ಕಾಲದಲ್ಲಿ ರಾಜಾಶ್ರಯದಲ್ಲಿದ್ದು, ಮುಸಲ್ಮಾನರ ಇತಿಹಾಸವನ್ನು ಬರೆದಿದ್ದಾನೆ.
೨. 'ನೂನಿಝ' ಇವನೊಬ್ಬ ಪೋರ್ಚಗೀಜ ಇತಿಹಾಸಕಾರನು, ವಿಜಯನಗರದ ಸಂಗತಿಗಳನ್ನು ಬರೆದಿಟ್ಟಿದ್ದಾನೆ.

ಕಂಪಲಿ ರಾಯಾಗ, ಹಂಪಿ ವಿರುಪನ ಶಾಪ
ದಂಪತಿಗೆ ಬಂತೊ ವನವಾಸೊ। ಕಂಪಲಿಯು
ಸಿಂಪಾಗಿ ಸಿಡಿದು ಹಾಳಾತೊ ॥೨॥

ಬೆಚ್ಚಪ್ಪ ಲಿಂಗಯ್ಯ, ಹೆಚ್ಚಿನಾ ಮಂತ್ರಿಗಳು
ರೊಚ್ಚಿನಾ ಕತ್ತಿ ರಣಕಚ್ಚಿ। ತುರುಕಾರು
ಹುಚ್ಚೆದ್ದು ಓಡಿ ರಣಬಿಟ್ಟು ॥೩॥

ಮಾನವನೆ ಕಳಕೊಂಡು, ಖಾನರೋಡಿದರಂದು
ಖೂನಿ ಮಾಡುದಕೆ ಮಾತಂಗಿ। ಹೆಣ್ಣಿದೆ
ಮಾನಗೇಡ್ಯಾಗಿ ಒಳಸಂಚು ॥೪॥

ಕೊಂಕಣದ ಮಾತಂಗಿ, ಬಂತು ಮಾದರ ಹುಡುಗಿ
ಕೊಂಕಗುಣಹೆಣ್ಣು ತುರುಕರಿಗೆ। ಮನಸೋತು
ವಂಕಿ ಹಾಕ್ಯಾಳೊ ಕಂಪಲಿಗೊ ॥೫॥

ರಾಮರಾಯನು ಬಿದ್ದ, ನಾಮನಿರ್ನಾಮಾತು
ಧೂಮಧೂಮಾತು ಕಂಪಲಿಯೊ। ನಾಶೀರ
ಹೋಮ ಕೊಂಡಾತೊ ಕಿಚ್ಚಾತೊ ॥೬॥

ಏಳುರಾಯರ ಗಂಡ, ಗಾಳರಿಗೆ ಕಾಟಣ್ಣ
ತಾಳದಲೆ ಕೊಂದ ಮಾತಂಗಿ। ಒಡೆಯಾಗ
ಕಾಳಗದಿ ಕಾದು ರಣಕಾದ ॥೭॥

ಕಂಪಲಿ ಹಾಳಾಗಿ, ಕೊಂಪೆಯಾಯಿತು ನಸಿಬ
ಸಂಪತ್ತು ಹೋತು ತುರುಕರಿಗೆ। ಲಿಂಗಯ್ಯ
ಜಂಪಿಲ್ದ ಮಡಿದ ರಣದಾಗೊ ॥೮॥

ಈ ಎಂಟು ಪದ್ಯಗಳನ್ನು ಓದಿದರೆ, ಅವು ಒಂದು ನಾಡಿನ ಇತಿಹಾಸವನ್ನು ಅನೇಕ ಮುಖ್ಯ ಸಂಗತಿಗಳೊಡನೆ ಹೇಳುತ್ತಿರುವುದು ವಿಶದವಾಗುತ್ತದೆ. ಈ ಪದ್ಯಗಳಲ್ಲಿ ಕೆಳಗೆ ಕೊಟ್ಟ ಐತಿಹಾಸಿಕ ಸಂಗತಿಗಳು ಅಡಕವಾಗಿವೆ.

೧. ಹಂಪೆಯು ಶರಣರಿಗೆ ಸಂಪಾದ ಪಟ್ಟಣ
೨. ಕಂಪಿಲಿಯು ಶರಣರಿಗೆ ನೆರಳು
೩. ಇದನ್ನು ಕೇಳಿ ತುರುಕರ ಎದೆಯೊಳಗೆ ಕಂಪನವು
೪. ಕಂಪಿಲರಾಯನಿಗೆ ಹಂಪೆಯ ವಿರುಪಾಕ್ಷನ ಶಾಪ
೫. ಅರಸು ದಂಪತಿಗಳಿಗೆ ಬಂತು ವನವಾಸ
೬. ಕಂಪಿಲಿಯು ಹಾಳಾಯ್ತು
೭. ಕಂಪಿಲರಾಯನಿಗೆ ಬೆಚ್ಚಪ್ಪ (ಬೇಚೇಯ, ಬೈಚಪ್ಪ, ಎಚ್ಚರಪ್ಪ) ಲಿಂಗಯ್ಯರೆಂಬ ಮಹಾಮಂತ್ರಿಗಳು
೮. ಇವರ ರೊಚ್ಚಿನಾ ಕತ್ತಿ ರಣಕಚ್ಚಲು (ಯುದ್ಧ ಮಾಡಲು) ತುರುಕರು ಹುಚ್ಚೆದ್ದು ರಣಬಿಟ್ಟು ಓಡಿದರು.
೯. ಮಾನಕಳಕೊಂಡು ಓಡಿದ ಖಾನರ ದಂಡಿನ ಪಿತೂರಿ
೧೦. ಮಾನಗೇಡ್ಯಾಗಿ ಮಾತಂಗಿಯು ಖೂನಿಯ ಮಾಡುದಕೆ ಸಜ್ಜಾಗಿ ಮಾಡಿದ ಒಳಸಂಚು
೧೧. ಮಾತಂಗಿ ಕೊಂಕಣದವಳು. ಜಾತಿಯಲ್ಲಿ ಮಾದರಹುಡಗಿ. ಗುಣದಲ್ಲಿ ಕೊಂಕ ನಡೆನುಡಿಯುಳ್ಳವಳು (ಜಾರೆಯು)
೧೨. ಬಿಂಕದವಳಿದ್ದು ತುರುಕರ ರಾಜನಿಗೆ ಮನಸೋತು ಕಂಪಿಲಿ ಪಟ್ಟಣಕ್ಕೆ ಕಂಟಕ ತಂದಳು.
೧೩. ರಾಮರಾಯನು ಬಿದ್ದ (ರಾಜಮನೆತನದ) ನಾಮ ನಿರ್ನಾಮಾಯ್ತು
೧೪. ಕಂಪಿಲಿಯು "ಧೂಮ ಧೂಮಾಯ್ತು" (ಜೋಹರ) ನಾರೆಯರ ಕಿಚ್ಚಾಯ್ತು; ಹೋಮಕೊಂಡಾಯ್ತು.
೧೫. ಏಳುರಾಯರ ಗಂಡ, ವೈರಿಗಳಿಗೆ ಗಾಳಾದ ಕಾಟಣ್ಣನು (ಸೇನಾಪತಿ)
೧೬. (ರಾಮರಾಯನ ಕೊಂದದ್ದನ್ನು) ತಾಳದಲೆ (ಈ ವೀರ ಸೇನಾಪತಿಯು) (ಮಾದರ) ಮಾತಂಗಿಯನ್ನು ಕೊಂದು (ತಾನು) ಒಡೆಯನಿಗೆ ಕಾಳಗದಿ ಕಾದು ರಣಕಾದ.
೧೭. ರಾಜಧಾನಿಯಾದ ಕಂಪಿಲಿಯು ಹಾಳಾಗಿ ಕೊಂಪೆಯಾಯಿತು. (ಇದು) ನಸಿಬ.
೧೮. ಸಂಪತ್ತನ್ನು ತುರುಕರು ಒಯ್ದರು.
೧೯. (ಮಹಾಮಂತ್ರಿ) ಲಿಂಗಯ್ಯನು ನೋಡಿ ಜಂಪಿಲ್ಲದೆ (ಯುದ್ಧಮಾಡಿ) ಕಾಳಗದಲ್ಲಿ ಮಡಿದನು.

ಇಷ್ಟೇ ಸಂಗತಿಗಳು ಕಂಪಿಲಿಯ ಕೊನೆಯ ದಿನದ ಇತಿಹಾಸವನ್ನು ಸ್ಪಷ್ಟವಾಗಿ ಹೇಳುವುದೆಂದು ಹೇಳಬಹುದು. ಇವುಗಳನ್ನು ಮೊದಲು ಹೇಳಿದ ಕೆಲವು ಇತಿಹಾಸ ಆಧಾರಗಳಿಗೆ ಒರೆಹಚ್ಚಿ ನೋಡಬೇಕಾಗಿದೆ.

ನೂನಿಝು ಹಾಗೂ ಫೆರಿಸ್ತ, ಅವರು ತಮ್ಮ ಇತಿಹಾಸಗಳಲ್ಲಿ ಬರೆದಿಟ್ಟ ಸಂಗತಿಗಳಿಗೂ ಜನಪದದಲ್ಲಿ ವಾಡಿಕೆಯಾಗಿ ಬಂದ ಈ ಕೆಲವು ಹಂತಿಯ ಬಿಡಿ ಪದ್ಯಗಳಿಗೂ ಹೋಲಿಸಿ ನೋಡಿದರೆ ಈ ಮೂರರಲ್ಲಿಯೂ ನಿಜವಾಗಿ ಸಂಭವಿಸಿದ ಒಂದು ಐತಿಹಾಸಿಕ ಸಂಗತಿಯನ್ನು ಯಾರೂ ಅಲ್ಲಗಳೆಯಲಾರರು. ಅದಾವುದೆಂದರೆ: ತುರುಕರ ದಕ್ಷಿಣ ದೌಡಿನಲ್ಲಿ ನಡೆದ ಕಂಪಿಲಿ ಪಟ್ಟಣದ ಮುತ್ತಿಗೆಯು. ಇವೇ ಸಂಗತಿಗಳನ್ನು ಕವಿ ನಾಗಸಂಗಯ್ಯನು "ಕುಮಾರ ರಾಮ ಚರಿತೆ" ಎಂಬ ಸಾಂಗತ್ಯದಲ್ಲಿ ಸುದೀರ್ಘವಾಗಿ ಹೇಳಿದ್ದಾನೆ. ಈ ಕವಿಯು ತನ್ನ ಕಾವ್ಯದಲ್ಲಿ ಹೇಳಿದ ಕೆಲವು ಮುಖ್ಯ ಸಂಗತಿಗಳಿಗೂ, ಜನಪದದಲ್ಲಿ ದೊರೆಯುವ ಸಂಗತಿಗಳಿಗೂ ವಿಶೇಷ ಹೋಲಿಕೆಯು ಕಂಡುಬರುವುದು. ಕಾರಣ ಕವಿ ನಾಗಸಂಗಯ್ಯನು ತನ್ನ ಕಾಲದ ಜನಪದ ವಾಡಿಕೆಯಲ್ಲಿರುವ ಕಂಪಿಲ ಪಟ್ಟಣದ ಸಂಗತಿಗಳನ್ನು ಕೇಳಿ ಕಾವ್ಯವನ್ನು ಬರೆದಿರಬೇಕು.

ಹಳಕಟ್ಟಿ ಅವರು "ವೀರಶೈವ ರಾಜ ಮನೆತನಗಳ ಚರಿತೆ" ಎಂಬ ಪುಸ್ತಕದ ೬ನೆಯ ಪ್ರಕರಣದಲ್ಲಿ "ಕಂಪಿಲರಾಯನೂ ಅವನ ಮಗನಾದ ಕುಮಾರ ರಾಮನೂ ಕರ್ನಾಟಕವನ್ನು ಮುಸಲ್ಮಾನರು ಅಭಿಯೋಗಿಸಿದಾಗ ಅವರೊಡನೆ ಅತ್ಯಂತ ಸಾಹಸದಿಂದ ಕಾದಾಡಿ ಅತ್ಯುಜ್ವಲ ಕೀರ್ತಿಯನ್ನು ಸಂಪಾದಿಸಿದ್ದಾರೆ. ಆದರೆ ಈ ಉಭಯತರ ಹೆಸರುಗಳು ಈ ಕಾಲದಲ್ಲಿ ಕನ್ನಡಿಗರ ಸ್ಮರಣೆಯಲ್ಲಿರದೆ ಇರುವದು ಬಹಳ ಶೋಚನೀಯವಾದುದು. ಅವರು ಪೂವಾಲಿ ಕುಲದ ಬೇಡರ ದೊರೆಗಳು. ಕಂಪಿಲರಾಯನು ಕುಮ್ಮಟ ದುರ್ಗವೆಂಬ ಹೆಸರಿನ ಭದ್ರವಾದ ಸ್ಥಳವನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡು ರಾಜ್ಯವಾಳುತ್ತಿದ್ದನು." ಎಂದು ಹೇಳಿದ್ದಾರೆ. ಹಿರಿಯ ಸಾಹಿತಿಗಳೂ, ಸಂಶೋಧಕರೂ ಆದ ಹಳಕಟ್ಟಿ ಅವರಿಗೆ ಕುಮಾರ ರಾಮನ ಮತ್ತು ಕಂಪಿಲರಾಯನ ಸಂಬಂಧ ಜನಪದದಲ್ಲಿಯ ವಾಡಿಕೆಗಳು ನಿದರ್ಶನಕ್ಕೆ ಬಂದಂತೆ ಕಾಣುವದಿಲ್ಲ. ಕಾರಣ ಅವರು ಈ ಉಭಯತರ ಹೆಸರುಗಳು ಈ ಕಾಲದಲ್ಲಿ ಕನ್ನಡಿಗರ ಸ್ಮರಣೆಯಲ್ಲಿರದೆ ಇರುವದು ಬಹಳ ಶೋಚನೀಯವಾದುದು." ಎಂದು ಉದ್ಗಾರ ತೆಗೆದು ಉಸುರು ಹಾಕಿದ್ದಾರೆ. ಆದರೆ ಕರ್ನಾಟಕ ಧರ್ಮಗಳನ್ನುಳಿಸಿ, ಕನ್ನಡ ಹೆಣ್ಣುಮಕ್ಕಳ ಮಾನವನ್ನು ಕಾಯ್ದು ರಣಾಂಗಣಕ್ಕೆ ಆಹುತಿಯಾದ ಈ ವೀರನನ್ನು ಮರೆಯಲು ಜನಪದವು ಅಷ್ಟೊಂದು ಕೃತಘ್ನವೇ? ಕುಮಾರ ರಾಮನ ಶೂರತನಕ್ಕೆ ಜನಪದವು ಶರಣುಹೋಗಿ 'ಕೊಮರಾಮ'ನೆಂಬ ಗುಣವಾಚಕವನ್ನೇ ಬಳಸುತ್ತ ಇಂದಿನವರೆಗೂ ಬಂದಿದೆ. ಕಂಪಿಲರಾಯನ ಅಸಹಾಯ ಸ್ಥಿತಿಯನ್ನು ನೋಡಿ ಮರಮರನೆ ಮರುಗಿ ಜನಪದವು ಇಂದಿನವರೆಗೂ ಏನಾದರೂ ಅಸಹಾಯ ಹಾಳು ಸ್ಥಿತಿಯು ಸಂಭವಿಸಿದರೆ ನೋಡಿ 'ಕಂಪಿಲರಾಯನ ಪಟ್ಟಣವಾಯಿತಲ್ಲ' ಎಂದು ಉಸುರು ಹಾಕುತ್ತ ಬಂದಿದೆ. ಜನಪದವು ಮಾತುಗಳನ್ನು ಬಳಸುತ್ತಿದ್ದರೂ ಕಾಲಮಾನದ ಮೂಲಕ ಯಾರು ಯಾರು? ಯಾವುದು ಯಾವುದು? ಎಂಬುದನ್ನು ಗುರುತಿಸಲು ತಪ್ಪಿದರೆ ಅದನ್ನು ಸಂಶೋಧಕನು ಮಾತ್ರ ಮರೆಯಕೂಡದು. ಮರೆತು ಹೋಗಿದ್ದರೆ ಅದನ್ನು ಗುರುತಿಸಿ ಬೆಳಕಿಗೆ ತರುವುದು. ಅವರ ಕರ್ತವ್ಯ.

ಇಂದು ಜನಪದ ವಾಡಿಕೆಯಲ್ಲಿರುವ ಕಂಪಿಲರಾಯನ ಪಟ್ಟಣವು ತುಂಗಭದ್ರಾನದಿಯ ಉತ್ತರ ದಿಕ್ಕಿನಲ್ಲಿ ಆನೇಗುಂದಿಯಿಂದ ಆರುಮೈಲು ದೂರದಲ್ಲಿದೆ. ಡಾ. ಸಾಲೇತೂರ ಅವರು ವಿಜಯನಗರ ಸ್ಮಾರಕ ಗ್ರಂಥ[3] (Vijayanagar Sexcentenary Commemoration) ದಲ್ಲಿ ಕಂಪಿಲಿಯ ವಿಷಯವಾಗಿ ಕೆಲವು ಶಾಸನಗಳನ್ನು ಹೇಳಿ ನಾಗಲಾಪುರ ಮಯಿಸಂದ್ರ ಹೊಬ್ಳಿ, ತಿಪಟೂರ ತಾಲೂಕದ ವೀರಗಲ್ಲನ್ನು[4] ಉದಹರಿಸುತ್ತಾರೆ. ಇದು ೧೩೨೫ರಲ್ಲಿ ಸಂಭವಿಸಿತೆಂದು ಹೇಳುತ್ತಾರೆ. ಅವರ ಪ್ರಕಾರ ಕಂಪಿಲರಾಯನ ಕೊನೆಯು ೩ನೆಯ ಬಲ್ಲಾಳನಿಂದ ಆಯಿತೆಂದು ಹೇಳಬೇಕಾಗುವುದು. ಇನ್ನು ರಾಯಿಸರು ಸಂಗ್ರಹಿಸಿದ (Epigraphia of Carnataka XII), ಕರ್ನಾಟಕ ಶಿಲಾಶಾಸನಗಳು ಸಂಪುಟ ೧೨ರಲ್ಲಿ, ಡಾ. ಸಾಲೇತೂರರು ಹೇಳಿದ ತಿಪಟೂರ ತಾಲೂಕಿನ ೨೪ನೆಯ ಶಾಸನ (ವೀರಗಲ್ಲು)ವನ್ನು ತೆಗೆದುನೋಡಲು, ಅದು ಪೂರ್ಣವಿರದೆ ಕೆಲವೆಡೆಯಲ್ಲಿ ಅನೇಕ ವಾಕ್ಯಗಳೂ, ಶಬ್ದಗಳೂ ಅಳುಕಿ ಹೋದದು ಕಂಡುಬರುವುದು. ಶಾಸನದ ಕೊನೆಯಲ್ಲಿ "ಬೇಚೇಯ ದಣ್ಣಾಯಕ ಸಿಂಗೇಯ ದಣ್ಣಾಯಕರನು ಮೂದಲಿಸಿ ಕಂಪಿಲ... ಇರಿದುಕೊಂದು..." ಇದ್ದು ಮುಂದೆ ಕೆಲವು ಶಬ್ದಗಳು ಹೋಗಿವೆ. "ಬೇಚೇಯ ದಣ್ಣಾಯಿಕರು ತಾಗಿದಲ್ಲಿ" ಎಂಬಲ್ಲಿಗೆ ಶಾಸನವು ಮುಗಿಯುವುದು. ಹೀಗಿದ್ದ ಈ ಶಾಸನದ ವಾಕ್ಯವನ್ನು ಡಾ. ಸಾಲೇತೂರರು ತಮ್ಮ ಲೇಖನದಲ್ಲಿ ಎತ್ತಿ ಹೇಳುವ ಕಾಲಕ್ಕೆ ಅಲಲ್ಲಿ ಬದಲು ಮಾಡಿ ಹೇಳಿದ್ದು ಕಂಡುಬರುವುದು. ರಾಯಿಸರು ಸಂಗ್ರಹಿಸಿದ Epigraphia of Carnatika XII T.P. 24. p.p. 74ದಲ್ಲಿ 'ಕಂಪಿಲ... ಇರಿದು ಕೊಂದು...' ಎಂದಿದೆ. ಇದನ್ನೇ ಸಾಲೇತೂರರು ತಮ್ಮ "Theories Concerning the Origin of Vijayanagar" ಎಂಬ ಲೇಖನದ ಪುಟ ೧೫೧ರಲ್ಲಿ "ಕಂಪಿಲ ಮೊದಲನಿರಿದು ಕೋದು" ಎಂದು ಉಲ್ಲೇಖಿಸಿ ಅದರ ಅರ್ಥವನ್ನು, ಬೇರೆಯೇ ಮಾಡಿದ್ದಾರೆ. ಹೀಗಿದ್ದ ಪಕ್ಷದಲ್ಲಿ ಮೂರನೆಯ ವೀರಬಲ್ಲಾಳನಿಗೆ ಸಂಗಮನ ಮಕ್ಕಳಾದ ಹುಕ್ಕಬುಕ್ಕ ಮೊದಲಾದವರನ್ನು ಕೂಡಿಸಿಕೊಂಡು ಮುಸಲ್ಮಾನರನ್ನು ದಕ್ಷಿಣದಿಂದ ಓಡಿಸಲು ಜನರಿಂದ ಸಹಾಯ ತಕ್ಕೊಂಡು ವಿಜಯನಗರ ಪಟ್ಟಣವನ್ನು ಬೇರೆ ಕಟ್ಟುವ ಪ್ರಸಂಗವೇ ಬೀಳುತ್ತಿದ್ದಿಲ್ಲ. ಆಯಕಟ್ಟಿನ ಮೆಟ್ಟಲಿನಲ್ಲಿರುವ ಕುಮ್ಮಟ ದುರ್ಗವನ್ನೇ ತಮ್ಮ ರಾಜಧಾನಿಯನ್ನಾಗಿ ಮಾಡಿ ಮುಸಲ್ಮಾನರೊಡನೆ ಹೆಣಗಾಡಬೇಕಾಗಿತ್ತು. ಆದರೆ ವಸ್ತು ಸ್ಥಿತಿಯು ಬೇರೆ ಕಂಡುಬರುವ ಮೂಲಕ ಕಂಪಲಿಯನ್ನು ಇತಿಹಾಸಕಾರರೂ, ಕವಿ ನಾಗಸಂಗಯ್ಯನೂ, ಜನಪದವೂ ಹೇಳುವಂತೆ ಮಹಮ್ಮದ ತೊಗಲಘನೇ ನಾಶಮಾಡಿರಬೇಕು. ಡಾ. ಸಾಲೇತೂರರು ಶಾಸನದಲ್ಲಿಯ ವಾಕ್ಯೆಗೆ ಮಾಡಿದ ಅರ್ಥವು ಸಮಂಜಸವೆನಿಸಲಾರದು. ಶಾಸನದಲ್ಲಿ ಬರುವ ಈ ವಾಕ್ಯವನ್ನು ಹೆಚ್ಚು ಕಡಿಮೆ

3. Vijayanagar Sexcentenary Commemoration p.p. (48-151).
4. Epigraphia of Carnataka, XII T.P. 24 p.p. 130.

ಮಾಡಿ ತಮ್ಮ ಲೇಖನದಲ್ಲಿ ಉದಾಹರಿಸಿದ ಈ ವಾಕ್ಯದ "ಬೇಚೇಯ ದಣ್ಣಾಯಕ ಸಿಂಗೇಯ ದಣ್ಣಾಯಕರನು ಮೂದಲಿಸಿ ಕಂಪಿಲ ಮೊದಲನಿರಿದು ಕೋದು" ಅರ್ಥವನ್ನು ಅವರು "And Singēya dannāyak and Bēchēya dannāyaka pierced and saw Kampil and others." 'ಬೇಚೇಯ ದಣ್ಣಾಯಕ ಸಿಂಗೇಯ ದಣ್ಣಾಯಕರು ಕಂಪಿಲರಾಯ ಮೊದಲಾದವರನ್ನು ತಿವಿದು ಕೊಂದರು'-ಎಂದು ಮಾಡಿ, "This final victory over Kampila terminates the relations between the Hoysalas and the Kummata princes." ಎಂದು ಬರೆದಿದ್ದಾರೆ. ಇದು ಶಾಸನದಲ್ಲಿರುವ ವಾಕ್ಯೆಗೆ ಸರಿಯಾದ ಅರ್ಥವಾಗುವುದೊ ಹೇಗೆ? ಎಂಬುದನ್ನು ವಿಚಾರಿಸೋಣ-ಕನ್ನಡ ವ್ಯಾಕರಣದಲ್ಲಿ ಅಂಕಿತನಾಮಗಳು ಕರ್ತೃಪದವಾದರೆ ಕೆಲಕೆಲವು ಸಾರೆ ಪ್ರಥಮಾವಿಭಕ್ತಿ ಪ್ರತ್ಯಯವನ್ನೊಳಗೊಳ್ಳದೆ ಉಪಯೋಗಿಸಲ್ಪಟ್ಟದ್ದು ಕಂಡುಬರುವುದು. ಉದಾ: ರಾಮ ಬಂದ: ರಾಮ ಹೋದ. ಇಲ್ಲಿ ಭೂತ ಕೃದ್ವಾಚಕವು ಕ್ರಿಯಾಪದದಂತೆ ಉಪಯೋಗಿಸಲ್ಪಟ್ಟಿದೆ. ಕಾರಣ ಮೇಲೆ ಕಾಣಿಸಿದ ಶಾಸನದ ವಾಕ್ಯದಲ್ಲಿ "ಮೂದಲಿಸಿ ಕಂಪಿಲ ಮೊದಲನಿರಿದು ಕೋದು" ಎಂದು ಮೂಲವಾಕ್ಯದಲ್ಲಿಯ ವಾಕ್ಯವನ್ನು ಬೇರೆ ತಕ್ಕೊಂಡರೆ ತಪ್ಪಾಗಲಿಕ್ಕಿಲ್ಲ. 'ಕೋದು' ಈ ಕ್ರಿಯಾಪದಕ್ಕೆ ಯಾರು? ಯಾರನ್ನು? ಎಂದು ಪ್ರಶ್ನೆ ಮಾಡಲು ಕಂಪಿಲ "ಬೇಚೇಯ ದಣ್ಣಾಯಕ-ಸಿಂಗೇಯ "ದಣ್ಣಾಯಕರನು" ಎಂದು ಉತ್ತರ ಹೊರಡುವುದು. ಮೊದಲನೆಯದು 'ಕೋದು' ಕ್ರಿಯಾಪದಕ್ಕೆ ಕರ್ತೃಪದವಾಗಿಯೂ, ಎರಡನೆಯದು ಕರ್ಮಪದವಾಗಿ ನಿಲ್ಲುವುದು. ಒಂದು ವೇಳೆ ಡಾ. ಸಾಲೇತೂರರ ಪ್ರಕಾರ ಎರಡನೆಯದೇ ಕರ್ತೃಪದವಾಗಿದ್ದರೆ, "ಬೇಚೇಯ ದಣ್ಣಾಯಕ ಸಿಂಗೇಯ ದಣ್ಣಾಯಕರು ಮೂದಲಿಸಿ ಕಂಪಿಲ(ನ) ಮೊದಲನಿಂದು ಕೋದು" ಎಂದು ಬೇಕಾಯಿತ್ತು. ಯಾಕಂದರೆ: ರಾಮ+ಲಕ್ಷ್ಮಣ=ರಾಮಲಕ್ಷ್ಮಣರು (ದ್ವಸ) ಎಂಬಂತೆ, ಬೇಚೇಯ ದಣ್ಣಾಯಕ + ಸಿಂಗೇಯ - ದಣ್ಣಾಯಕ=ಬೇಚೇಯ-ದಣ್ಣಾಯಕ-ಸಿಂಗೇಯ ದಣ್ಣಾಯಕರು (ದ್ವಂದಸ) ಎಂದು ಆಗುವುದು. ಆದರೆ ಶಾಸನದಲ್ಲಿ 'ಬೇಚೇಯ ದಣ್ಣಾಯಕ ಸಿಂಗೇಯ ದಣ್ಣಾಯಕರನು" ಎಂದಿದೆ. ಡಾ. ಸಾಲೇತೂರರು ತಿಳಕೊಂಡಂತೆ "ಬೇಚೇಯ ದಣ್ಣಾಯಕ ಸಿಂಗೇಯ ದಣ್ಣಾಯಕರನು" ಇದು ಕರ್ತೃಪದವಿರದೆ, ವ್ಯಾಕರಣದ ಪ್ರಕಾರ ಕರ್ಮಪದವಾಗಿ ನಿಲ್ಲುವುದು. 'ಕಂಪಿಲ' ಇದು ಅಂಕಿತನಾಮವಿದ್ದು ವಾಕ್ಯದಲ್ಲಿ ಕರ್ಮಪದವಿರದೆ ಕರ್ತೃಪದವಿರುವುದು, ಕರ್ಮಪದವಾಗಿದ್ದರೆ 'ಕಂಪಿಲನ' ಎಂದು ಬೇಕಾಗುತ್ತಿತ್ತು. ಆದರೆ ಶಾಸನದಲ್ಲಿ ಹಾಗೆ ಇಲ್ಲ; 'ಕಂಪಿಲ' ಎಂದಿದೆ. ಆದುದರಿಂದ ಡಾ. ಸಾಲೇತೂರರು ಶಾಸನದಲ್ಲಿಯ ಈ ವಾಕ್ಯೆಗೆ ಮಾಡಿದ ಅರ್ಥವು ಸಮಂಜಸವೆನಿಸಲಾರದು. ಅದರ ಅರ್ಥವು "ಬೇಚೇಯ ದಣ್ಣಾಯಕ ಸಿಂಗೇಯ ದಣ್ಣಾಯಕರನು ಮೂದಲಿಸಿ ಕಂಪಿಲ ಮೊದಲನಿರಿದು ಕೋದು" ಎಂದು ಹೇಳುವದೇ ಹೆಚ್ಚು ಸಮಂಜಸವೆನಿಸುವುದು. ಕನ್ನಡದಲ್ಲಿ ಒಮ್ಮೊಮ್ಮೆ ದ್ವಿತಿಯಾ ವಿಭಕ್ತಿ ಪ್ರತ್ಯಯದ (ನ) ಒತ್ತಕ್ಕರದ ಚಿನ್ಹವನ್ನು ಬರೆಯುವಾಗ ಬಿಡುವುದುಂಟು. ಹೀಗಾದಲ್ಲಿ ಕಂಪಿಲರಾಯನು ಈ ಸಾರೆಯೂ ಕಾಳಗದಲ್ಲಿ ಹೊಯ್ಸಳ ವೀರರನ್ನು ಜಯಸಿರುವನೆಂದು ಸಿದ್ಧವಾಗುವುದು. ಇದಕ್ಕೆ ರಾ.ಪಿ.ಜಿ. ಹಳಕಟ್ಟಿ ಅವರ "ದೇವಗಿರಿ, ಬಲ್ಲಾಳರಾಜರ ರಾಜ್ಯವು, ಹಾಳಾದ ಬಳಿಕ ಈ ತಂದೆ ಮಕ್ಕಳು ಬಳ್ಳಾರಿ, ಧಾರವಾಡ ಮತ್ತು ವಿಜಾಪುರ ಈ ಜಿಲ್ಹೆಗಳ ಮೇರೆಗಳು ಕೂಡಿದ ಮಧ್ಯಪ್ರದೇಶದಲ್ಲಿ ಬಹುದೊಡ್ಡ ಭಾಗವನ್ನು ಆಕ್ರಮಿಸಿ ರಾಜ್ಯವಾಳುತ್ತಿದ್ದರು[೫], ಈ ನುಡಿಗಳು ಮೇಲೆ ಹೇಳಿದ ಮಾತಿಗೆ ಪುಷ್ಠೀ ಕೊಡದಿರಲಾರುವು. ಅಲ್ಲದೆ, ನೂನಿಝ ಹಾಗೂ ಫೆರಿಸ್ತ ಇವರ ಇತಿಹಾಸಗಳಲ್ಲಿಯೂ ಕುಮಾರ ರಾಮನ ಚರಿತೆಯಲ್ಲಿಯೂ ಮತ್ತು ಜಾನಪದ ಹಾಡುಗಳಲ್ಲಿಯೂ ಬರುವ, ಕಂಪಿಲ ಪಟ್ಟಣದ ಕೊನೆಯ ಸಂಗತಿಗಳು ಸಂಭವಿಸಿರಬಹುದೆಂದು ಹೇಳಲು ಸಾಧ್ಯವಾಗುವುದು. ಇವಲ್ಲದೆ ಈ ಎಲ್ಲ ವೀರರನ್ನು ಗೆದ್ದ ಕಂಪಿಲರಾಯನ ಶೌರ್ಯವನ್ನು ಕೇಳಿ, ಅಂಜಿ ಎದೆ ನಡುಗಿದ ತುರುಕರ ಅರಸು, ಮಹಮ್ಮದ ತೊಗಲಖನು, ಕಂಪಿಲರಾಯನನ್ನು ಸೆದೆಬಡಿಯುವುದಕ್ಕೆ ದೊಡ್ಡ ದಂಡನ್ನು ಕೂಡಿಸಿಕೊಂಡು ದಂಡೆತ್ತಿ ಬಂದಿರಬಹುದೆಂದು ಕಾಣುತ್ತದೆ. ಇದಕ್ಕೆ ಸಾಕ್ಷಿಯಾಗಿ, "ಇಲ್ಲಿ ಪಂಚ ಪೀರರೆಂಬ ಹೆಸರಿನ ಮಸೀದಿ ಇರುತ್ತದೆ. ಅದಕ್ಕೆ ಮುಸಲ್ಮಾನರೂ ಹಿಂದೂ ಜನರೂ ಸರಿಯಾಗಿ ಮಾನ ಕೊಡುತ್ತಾರೆ. ದಿಲ್ಲಿಯ ದಂಡಿನಲ್ಲಿ ಸರದಾರರಾಗಿದ್ದ ಶೇಖ ಬಡ್ಡುಣ, ಹಸನ, ಹುಸೇನ, ಇಭ್ರಾಹಿಮ, ಕರೀಮ ಯೆಂಬ ಕಲಿಗಳು ತೆಲಗುದೇಶದ ಕುಮಾರ ರಾಮನನ್ನು ಗೆಲ್ಲಲಿಕ್ಕೆ ಹೋಗುವ ಮಾರ್ಗದಲ್ಲಿ ವೊಬ್ಬ ಹೆಂಗಸು ಭೇಟಿಯಾಗಿ ಅವರಿಗೆ ಹೇಳಿದಳೇನಂದರೆ ಕುಮಾರ ರಾಮನು ಬಹು ಸಿಟ್ಟಿನವನಿರುತ್ತಾನೆ; ಅವನ ಧ್ವನಿ ಕೇಳಿದ ಕೂಡಲೇ ಅವನ ಶತ್ರುಗಳ ರುಂಡಗಳು ಕಳಚಿ ಬೀಳುತ್ತವೆ. ಈ ಮಾತು ಕೇಳಿ ಐವರು ಕಲಿಗಳು ಕುಮಾರ ರಾಮನ ರಾಜಧಾನಿಯಲ್ಲಿ ತಮ್ಮ ರುಂಡಗಳನ್ನು ಚೆಲ್ಲಿ ಅವನೆದುರಿಗೆ ನಿಂತು ಯುದ್ಧ ಮಾಡಿ ರುಂಡಗಳಿಲ್ಲದೆ ಹಾಗೇ ತಾಳೀಕೋಟೆಗೆ ಬಂದು ಅದೃಶ್ಯರಾದರು."[೬] ಎಂಬ ಕಥೆಯನ್ನು ವೆಂಕಟರಂಗೊ ಕಟ್ಟೀ ಅವರು ಬರೆದಿದ್ದಾರೆ. ಅತಿಶಯೋಕ್ತಿಯ ಬಣ್ಣವು ಕಥೆಯಲ್ಲಿ ತುಂಬಿದ್ದರೂ, ಕುಮಾರ ರಾಮನ ಶೌರ್ಯವೇನು ಸಾಮಾನ್ಯವಲ್ಲ. ದಿಲ್ಲಿಯ ದಂಡಿನ ಸರದಾರರೆಂದು ಹೇಳಿದ ಈ ಐವರು, ಕಲಿಗಳು ಮಹಮ್ಮದ ತೊಗಲಖನ ದಂಡಿನ ಶೂರ ಸರದಾರರಾಗಿರಬೇಕು. ಬಹುತರವಾಗಿ ಇವರು ಕಂಪಿಲ ಪಟ್ಟಣದ ಮೊದಲನೆಯ ಮುತ್ತಿಗೆಯಲ್ಲಿದ್ದಿರಬಹುದು. ಆಕಸ್ಮಿಕ ಯುದ್ಧದಲ್ಲಿ ಮಡಿಯಲು, ಅವರ ಶವಗಳನ್ನು ತಾಳೀಕೋಟೆಯಲ್ಲಿ ತಂದು ಹೂಳಿ ಅವರ ಸ್ಮಾರಕಕ್ಕಾಗಿ ಆಗ ಒಂದು ಮಸೀದೆಯನ್ನು ಕಟ್ಟಿಸಿರಬೇಕು. ಈಗ ಆ ಮಸೀದೆಗೆ 'ಪಂಚಪೀರ' ಮಸೀದೆಯೆಂದು ಕರೆಯುತ್ತಾರೆ. ಅಲ್ಲಮಪ್ರಭುದೇವರ ಕಾಲಜ್ಞಾನದಲ್ಲಿ "ಅಲ್ಲೆ ಗೋರಿಯನಿಕ್ಕಿ ಲಕ್ಷದ ಮೇಲೆ ತೊಂಬತ್ತಾರು ಸಾವಿರ ಕುದುರೆ ಕುಮ್ಮಟದಲ್ಲಿ ಮಡದೀತು." ಇಲ್ಲಿ ಬಂದ ಕಮ್ಮಟವೇ ಕಂಪಿಲರಾಮನ ಕಂಪಲಿಯು ಅಲ್ಲದೆ ಇದು ಕಂಪಿಲ ಪಟ್ಟಣದ ಭೀಕರ ಕಾಳಗವನ್ನೂ ಹೇಳುತ್ತದೆ.

ಕವಿ ನಾಗಸಂಗಯ್ಯನ ಹೇಳಿಕೆಯಂತೆಯೂ, ಜನಪದ ಹಾಡುಗಳಂತೆಯೂ ವೀರ ಕಂಪಿಲರಾಯನು ಮೊದಲು ಮಹಮ್ಮದೀಯರನ್ನು ಸೋಲಿಸಿ ಓಡಿಸಿರಬಹುದು. ಅಥವಾ ಮಹಮ್ಮದೀಯರಿಗೆ ಕಂಪಿಲರಾಯನನ್ನು ಸೋಲಿಸಲು ಅಸಾಧ್ಯವಾಗಿರಬಹುದು. ಕಾರಣ ಮುಂದೆ ತುರುಕರು ಕೊಂಕಣದ ಮಾದರ ಮಾತಂಗಿಯ ಒಳಸಂಚಿನಿಂದ ಪಿತೂರಿಯ ಮಾಡಿ ಕಂಪಿಲ ಪಟ್ಟಣವನ್ನು ಮುತ್ತಿ, ಸಿಟ್ಟು ತೀರಿಸಿಕೊಳ್ಳುವ

೫. ವೀರಶೈವ ರಾಜ ಮನೆತನಗಳ ಚರಿತ್ರೆ, ಪು. ೩೫.
೬. 'ಕರ್ನಾಟಕ ಗೈಝೇಟಿಯರ್', ಪು-೫೫೫.

ಹೇತುವಿನಿಂದ ಕಂಪಿಲರಾಯನನ್ನು ಸೋಲಿಸಿ ಇಡೀ ಪಟ್ಟಣವನ್ನು ಹಾಳುಮಾಡಿರಬಹುದೆಂದು ಹೇಳಬಹುದು. ಮಾನ ಉಳಿಸಿಕೊಳ್ಳಲು ಅದೇ ಚಿತ್ತೂರ 'ಜೋಹರವನ್ನು ಕೇಳಿದ ಕನ್ನಡ ಹೆಣ್ಣುಮಕ್ಕಳು ಕಿಚ್ಚಿನ ಕುಂಡದಲ್ಲಿ ಹಾರಿಕೊಂಡು ಸತ್ತಿರಬಹುದು. ವೀರರು ಕಾದು ಮಡಿದಿರಬಹುದು.' ಈ ಎಲ್ಲ ಸಂಗತಿಗಳನ್ನು ನೂನಿಝ್, ಫೆರಿಸ್ತ ಇತಿಹಾಸಕಾರರೂ, 'ಕುಮಾರ ರಾಮನ' ಚರಿತೆಯನ್ನು ಬರೆದ ಕವಿ ನಾಗಸಂಗಯ್ಯನೂ, ಹಳ್ಳಿಗರ ಹಂತಿಯ ಹಾಡುಗಳೂ ಚಾಚೂ ಬಿಡದೆ ಪುಷ್ಟೀಕರಿಸುವುವು.

ಮಾನವನೆ ಕಳಕೊಂಡ, ಖಾನರೋಡಿದರಂದು
ಖೂನಿ ಮಾಡುದಕ ಮಾತಂಗಿ । ಹೆಣ್ಣದೆ
ಮಾನಗೇಡ್ಯಾಗಿ ಒಳಸಂಚು ॥
ಕೊಂಕಣದ ಮಾತಂಗಿ, ಬಿಂಕ ಮಾದರ ಹುಡುಗಿ
ಕೊಂಕಗುಣಹೆಣ್ಣು ತುರುಕರಿಗೆ । ಮನಸೋತು
ವುಂಕಿ ಹಾಕ್ಯಾಳೊ ಕಂಪಲಿಗೆ ॥
ರಾಮರಾಯಾ ಬಿದ್ದ ನಾಮ ನಿರ್ನಾಮಾತು
ಧೂಮಧೂಮಾತು ಕಂಪಲಿಯು । ನಾರೇರ
ಹೋಮಕುಂಡಾತು ಕಿಚ್ಚಾತು ॥

ಮಾದರ ಮಾತಂಗಿಯ ಸಂಬಂಧ ನಮಗೆ ವಿಶೇಷ ಏನೂ ಸಿಗುವದಿಲ್ಲ. ಕವಿ ನಾಗಸಂಗಯ್ಯನು ಇವಳೇ ಕುಮಾರ ರಾಮನನ್ನು, ಹೆಣ್ಣೆಂದು ರಾಮನು ಗಣದಲ್ಲಿ ಕ್ಷಮಿಸಲು, ಮೋಸದಿಂದ ಕೊಂದಳೆಂದು ಹೇಳಿದ್ದಾನೆ. ಇವಳು 'ಜಾರೆ'ಯೆಂಬ ಚಿತ್ರವನ್ನು ಜಾನಪದ ಪದ್ಯಗಳು ಚೆನ್ನಾಗಿ ಕೊಡುವುವು. ಕುಮಾರ ರಾಮನು ಬೀಳಲು ಕಂಪಿಲ ಅರಸು ಮನೆತನದ ನಾಮನಿರ್ನಾಮಾಯ್ತೆಂದೂ' ಕಂಪಲಿಯು ಧೂಮಧೂಮಾಗಿ, ಕಂಪಲಿಯ ಹೆಣ್ಣುಮಕ್ಕಳು 'ಜೋಹರ' ಹೋಗಲು ಕಿಚ್ಚಿನ ಕೊಂಡವಾಯಿತೆಂದೂ ಈ ಹಂತಿಯ ಹಾಡು ಭೀಕರ ಚಿತ್ರವನ್ನು ಹೇಳುತ್ತದೆ.

ಏಳುರಾಯರ ಗಂಡ, ಗಾಳರಿಗೆ ಕಾಟಣ್ಣ
ತಾಳದಲೆ ಕೊಂದ ಮಾತಂಗಿ । ಒಡೆಯಾಗ
ಕಾಳಗದಿ ಕಾದು ರಣಕಾದ ॥

ಬಹುಶಃ ಈ ಕಾಟಣ್ಣನು ಕುಮಾರ ರಾಮನಿಗೆ ಮುಖ್ಯಸೇನಾಪತಿಯಾಗಿರಬೇಕೆಂದು ಊಹಿಸಬೇಕಾಗಿದೆ. ಯಾಕೆಂದರೆ ಇವನು ಏಳುರಾಯರ ಗಂಡನೆಂದೂ, ವೈರಿಗಳಿಗೆ 'ಗಾಳ'ನಾಗಿದ್ದನೆಂದೂ ಜಾನಪದ ಪದ್ಯವು ಹೇಳುವುದು. ಕುಮಾರ ರಾಮನನ್ನು ಮೋಸದಿಂದ ಕೊಂದ ಮಾತಂಗಿಯನ್ನು ರಾಮನು ಹೆಣ್ಣೆಂದು ಕ್ಷಮಿಸಿ ಜೀವದಾನ ಬಿಟ್ಟಿದ್ದರೂ, ರಾಜಭಕ್ತನಾದ ಕಾಟಣ್ಣನು ಅವಳ ಕ್ರೂರ ಕೃತ್ಯವನ್ನು ತಾಳಲಾರದೆ ಅವಳನ್ನು ಕೊಂದು, ಒಡೆಯನುಪ್ಪನ್ನು ತೀರಿಸಲು ಕಾಳಗದಲ್ಲಿ ಕಾದು ರಣದಲ್ಲಿಯೇ ಮಡಿದನೆಂದು ಜಾನಪದ ಪದ್ಯವು ಹೇಳುವುದು. ಇವೇ ಮಾತುಗಳನ್ನು ಕವಿ ನಾಗಸಂಗಯ್ಯನು ತನ್ನ ಸಾಂಗತ್ಯದಲ್ಲಿ ಬಳಸಿ ಬರೆದಿದ್ದಾನೆ.

ಕಂಪಿಲರಾಯನ ಕುಲದೇವರು 'ಜಟ್ಟಂಗೇಶ್ವರ' ಅಥವಾ 'ಜಟ್ಟಂಗರಾಮಲಿಂಗ' ವೆಂದು ಕುಮಾರ ರಾಮನ ಚರಿತೆಯಿಂದ ತಿಳಿದುಬರುವುದು.

ಅಂಗವಾ ಕೊಡಬೇಡ, ನಾ ಬರುತನಕ ।
ಸಂಗ್ರಾಮದೊಳು ಓಡಬೇಡ ।
ಕಂಗಳು ಮೂರುಳ್ಳ ಜಟ್ಟಂಗರಾಮ ।
ಲಿಂಗನಾ ಕೃಪೆ ತಪ್ಪಿತೆನಗೆ ॥ *–ಕು–ರಾ–ಚ*

ಎಂದು ಕಂಪಿಲರಾಯನು ತನ್ನ ಕುಲದೇವತೆಯ ಕೃಪೆಯು ತನಗಿಲ್ಲವೆಂದು, ತನ್ನ ಅಸಹಾಯ ಸ್ಥಿತಿಯನ್ನು ತೋಡಿಕೊಂಡಿದ್ದಾನೆ. ತಾನೆಷ್ಟು ಶೂರನಿದ್ದರೇನು? ದೇವರ ಕೃಪೆಯು ತಪ್ಪಿದ ಮೇಲೆ ಎಲ್ಲವೂ ಅಸಾಧ್ಯ. ಕಂಪಿಲರಾಯನು ಹಂಪೆಯ ವಿರುಪಾಕ್ಷನ ಭಕ್ತನಿದ್ದಂತೆ ತೋರುವದಿಲ್ಲ. ಅದಾವ ಕಾರಣ ಮೂಲಕ ಜಾನಪದ ಕವಿಯು 'ಹಂಪೆಯ ವಿರುಪಾಕ್ಷ ಶಾಪದಿಂದ ಕಂಪಲಿಯು ಹಾಳಾಯಿತೆಂದು ಹೇಳುವನೊ ತಿಳಿಯದು.

ಕಂಪಽಲಿ ರಾಯಾಗ, ಹಂಪಿ ವಿರುಪನ ಶಾಪ
ದಂಪತಿಗೆ ಬಂತು ವನವಾಸ । ಕಂಪಲಿ
ಸಿಂಪಾಗಿ ಒಡಿದು ಹಾಳಾತು ॥

ಈ ಮಾತನ್ನು ಕವಿ ನಾಗಸಂಗಯ್ಯನು ತನ್ನ ಸಾಂಗತ್ಯದಲ್ಲಿ ಎಲ್ಲಿಯೂ ಹೇಳಿದಂತೆ ಕಾಣುವದಿಲ್ಲ.

ಬೆಚ್ಚಪ್ಪ ಲಿಂಗಯ್ಯ, ಹೆಚ್ಚಿನಾ ಮಂತ್ರಿಗಳು
ರೊಚ್ಚಿನಾ ಕತ್ತಿ ರಣಕಚ್ಚಿ । ತುರುಕಾರು
ಹುಚ್ಚೆದ್ದು ಓಡಿ ರಣಬಿಟ್ಟು ॥

ಕಂಪsಲಿ ಹಾಳಾಗಿ, ಕೊಂಪೆಯಾಯಿತು ನಸಿಬ
ಸಂಪತ್ತು ಹೋತು ತುರುಕರಿಗೆ । ಲಿಂಗಯ್ಯ
ಜಂಪಿಲ್ದೆ ಮಡಿದ ರಣದಾಗೊ ॥

ಇಲ್ಲಿ ಬರುವ ಈ ಬೆಚ್ಚಪ್ಪನಿಗೆ, ಕವಿ ನಾಗಸಂಗಯ್ಯನು ಬೈಚಪ್ಪನೆಂದು ಕರೆದಿದ್ದಾನೆ. ಬಹುತರವಾಗಿ ಇದೇ 'ಬೇಚೇಯ ದಣ್ಣಾಯಕ'ನೆಂದು ಶಾಸನಗಳಲ್ಲಿ ಬಂದಿದೆ. ಈ 'ಬೆಚ್ಚಪ್ಪ'ವೇ ಈಗ 'ಎಚ್ಚರಪ್ಪ' ಎಂದು ಬಳಕೆಯಲ್ಲಿರಬಹುದು. ಈ ಬೆಚಪ್ಪ ಮತ್ತು ಲಿಂಗಯ್ಯಗಳು ಕುಮಾರ ರಾಮನಿಗೆ ಮಹಾಮಂತ್ರಿಗಳಾಗಿರಬೇಕು. ಇವರು ವೈರಿಗಳ ಮೇಲೆ ಸಿಟ್ಟಾಗಿ ಕತ್ತಿಯನ್ನು ಹಿರಿದು ರಣಕ್ಕೆ ಧುಮಿಕಿದರೆ ಸಾಕು, ತುರುಕರು ಅಂಜಿ ನಡಗುತ್ತ ರಣಬಿಟ್ಟು ಹುಚ್ಚೆದ್ದು ಓಡಿಹೋಗುವರೆಂದು ಜಾನಪದ ಪದ್ಯಗಳು ಹೇಳುವುವು. ಈ ವೀರರು ಎಷ್ಟು ಪ್ರಯತ್ನ ಪಟ್ಟರೂ ಕಂಪಲಿಯು ಹಾಳಾಗಿ ಕೊಂಪೆಯಾಯಿತು. ಇದು ನಸಿಬವೆಂದು ಇಡೀ ಜನಪದವೇ ದುಃಖಿಸಿದೆ. ನಾಡ ಸಂಪತ್ತೆಲ್ಲ ತುರುಕರಿಗೆ ಹೋಯ್ತೆಂದು ನಿರಾಶಯವಾಗಿ ಲಿಂಗಯ್ಯಮಂತ್ರಿಯು ನಿದ್ರೆಯನ್ನು ಮಾಡದೆ ರಣದಲ್ಲಿ ಕಾದು ಮಡಿದನೆಂದು ಅವೇ ಪದ್ಯಗಳಲ್ಲಿ ಹೇಳಿದೆ.

ಹಂಪೆಯು ಶರಣರಿಗೆ, ಸಂಪಾದ ಪಟ್ಟಣ
ಕಂಪಲಿ ನೆರಳು ಶರಣರಿಗೆ । ತುರುಕರಿಗೆ
ಕಂಪನವು ಕೇಳಿ ಎದೆಯಾಗ ॥

ಶಿವಶರಣರಿಗೆ ನೆರಳಾದ ಕಂಪಿಲ ರಾಜ್ಯದಲ್ಲಿ ಮಹಾಮಂತ್ರಿಯಾದ ಲಿಂಗಯ್ಯನು ವೀರಶೈವನಿದ್ದಿರಬಹುದೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಕವಿ ನಾಗಸಂಗಯ್ಯನು ಲಿಂಗಯ್ಯನ ಸಂಬಂಧ ಜನಪದಲ್ಲಿ ಬಂದ ಮಾತುಗಳನ್ನೇ ಹೇಳಿದ್ದಾನೆ. ಬೈಚಪ್ಪನ ಸಂಬಂಧ ಜನಪದವು ಹೆಚ್ಚಿಗೆ ಏನೂ ಹೇಳುವದಿಲ್ಲ. ಮಾತ್ರ ಕವಿ ನಾಗಸಂಗಯ್ಯನು ಹೇಳಿದಂತೆ ಬೆಚ್ಚಪ್ಪ (ಬೈಚಪ್ಪ)ನು ಅರಸನ ರತ್ನಸಿಂಹಾಸನವನ್ನೂ, ಅಗಣಿತ ದ್ರವ್ಯವನ್ನು ಗುಪ್ತಸ್ಥಳಕ್ಕೆ ಒಯ್ದಿರಬೇಕು. 'ನೂನಿಝ', 'ಫೆರಿಸ್ತ' ಮೊದಲಾದವರು ಹೇಳುವಂತೆ ಯುದ್ಧವಾದ ನಂತರ ಮಹಮ್ಮದ ತೊಗಲಖನ ಸರದಾರರ ಕೈಯಲ್ಲಿ ಸಿಕ್ಕ ಆರು ಜನರಲ್ಲಿ ಕಂಪಿಲರಾಯನ ದ್ರವ್ಯ ತೋರಿಸಿದವನು ಈ ಬೆಚ್ಚಪ್ಪನಿರಬಹುದೇ? ಬಹುಶಃ ಅವನೇ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ.

ಈ ಪ್ರಕಾರ ಹಂತಿಯ ಹಾಡಿನ ಪದ್ಯಗಳು ಕಂಪಿಲ ಪಟ್ಟಣದ ಕೊನೆಯ ದಿನಗಳ ಇತಿಹಾಸವನ್ನು ಬಿಚ್ಚಿ ಹೇಳುವುವು. ಹೀಗೆ ಸಂಭವಿಸಿದ ಎಲ್ಲ ಸಂಗತಿಗಳನ್ನು ಜನಪದವು ಹೇಗೆ ಮರೆಯಬೇಕು? ಕಾರಣ; ಇದರ ಪರಿಣಾಮವೇ ಜನಪದ ವಾಡಿಕೆಯಲ್ಲಿರುವ 'ಕೊಮರಾಮ' ಮತ್ತು 'ಕಂಪಿಲರಾಯನ ಪಟ್ಟಣ' ಎಂಬ ನಾಣ್ನುಡಿಗಳು.

ಕರ್ನಾಟ ಕಂದ

ಬೆಳುವಲ ಒಕ್ಕಲಿಗನು ಕುಮಾರ ರಾಮನಿಗೆ 'ಕೊಮರಾಮ'ನೆಂದು ಕರೆದರೆ, ಹೆಣ್ಣುಮಕ್ಕಳು 'ಕರ್ನಾಟ ಕಂದ'ನೆಂದು ಕರೆದು ಹಾಡಿದ್ದಾರೆ. ಇವರು ಹಾಡುವ 'ಕರ್ನಾಟ ಕಂದ' ಈ ಹಾಡು ಎಲ್ಲರೂ ಕನಿಕರ ಪಡುವಂತಹದಾಗಿದೆ. ಇದನ್ನು ಹಾಡಲು, ಕೇಳಿದ ಹೆಣ್ಣುಗರಳು ಮರಮರನೆ ಮರುಗಿ ಕಣ್ಣೀರ ಸುರಿಸಿ ಅತ್ತೇಬಿಡುವುದು. ಹಾಡಿನಲ್ಲಿ ಬಂದ ಕಥೆಯು ಕುಮಾರ ರಾಮನ ಮೇಲೆ, ಅರಮನೆಯಲ್ಲಿ ಬಂದ ಮಹಾಹರಲಿಯ ಒಂದು ದುಃಪ್ರಸಂಗ. ಹಾಡು ಕೇಳಲು ಬಲು ಇಂಪಾಗಿದೆ. ಅದನ್ನು ಉತ್ತರ ಕರ್ನಾಟಕದಲ್ಲಿಯ 'ಮೂಡಲಪಾಯ'ದ 'ಧರತಿ'ಯಲ್ಲಿ ಹಾಡುವದರಿಂದ ಕೇಳವವರಿಗಂತೂ ಬಲುಸೊಗಸೆನಿಸುವುದು. ಶಬ್ದ ಶಬ್ದಕ್ಕೆ ಹಾಡಿನಲ್ಲಿ ತಾಳಲಯಗಳು ತುಂಬುವುದರಿಂದ ಕೇಳುವವರೂ ನಿಂತಲ್ಲಿಯೇ ತಾನ ಹಿಡಿಯುವರು. ಅಷ್ಟು ಮನರಂಜಕವಾಗಿದೆ ಈ ಹಾಡು:

ಕರ್ನಾಟ ಕಂದನ ಹಾಡು

ಹರಲೀಯ ಕೊಡಲಾರೆ ।
ಕರನಾಟಕಂದಗ ॥ಪ॥

ಹರಲೀಯ ಕೊಡಲಾರೆ, ಕರನಾಟ ಕಂದಗ
ವರ ಬೊಲ್ಲ ತಂದ ಕೊಮರಾಗ ॥ಹ॥

ವರಬೊಲ್ಲ ತಂದ ಕೊಮರಾಗ । ರಣದಾಗ
ತುರಕರ ಗೆದ್ದ ವೀರಾಗ ॥ಹ॥ ॥೧॥

ಕಥೆಯ ಕೇಳರಿ ಜನರೆ, ಮತಿಯಿಟ್ಟು ತೂಗುತಲಿ
ಸುತಗ ಮನಸಿಟ್ಟ ಕಲಿಯುಗದ । ಮಲತಾಯಿ
ಬತವ ಹಾಡೇವ ನಿಜಗತೆಯ ॥೨॥

ಹಿರಿಯರಸಿ ಹರಿಯಾಲಿ, ಕಿರಿಯರಸಿ ರತ್ನಾಲಿ
ಅರಸ ಕಂಪೀಲ ರಾಯನಿಗೆ । ಕೊಮರಾಮ
ಅರಸಮಗನಾದ ಹೆಸರಾತು ॥೩॥

ಅರಮನೀ ಕೊಮರಾಮ, ಮರೆಯೂವ ರೂಪೇನ
ಅರಸಿ ರತ್ನಾಲಿ ಮನಸೋತ। ಮನದಾಗ
ಮರಗ್ಯಾಳ ರಾಮ ದೊರೆಯದಕ ॥೪॥

ಅರಸ ಕಂಪಿಲರಾಯ, ಸರಸಬ್ಯಾಟಿಗೆ ಹೋದ
ಅರಸಿರತ್ನಾಲಿ ಮನಿಯಾಗ। ಮೋಹಿಸಿದ
ಎರಕ ಕೊಮರಾಮ ಎದಿಯಾಗ ॥೫॥

ಅಂಗಳದ ಬೈಲಾಗ, ಜೆಂಗಿ ಚೆಂಡಿನ ಆಟ
ದಂಗ ಬಡಿಸ್ಯಾನ ಕೊಮರಾಮ। ರತ್ನಾಲಿ
ಕಂಗೆಟ್ಟು ಸೋತು ನೋಡ್ಯಾಳ ॥೬॥

ಮೇಲ ಮಾಳಗಿ ಮ್ಯಾಲ, ನೀಳದಿಟ್ಟಿಯ ಬಿಟ್ಟು
ಹೋಳಿಯಾಡ್ಯಾಳ ಮೈಮರೆತು। ರತ್ನಾಲಿ
ಸೀಳಕೊಮರಾಮ ಎದೆಹೊಕ್ಕು ॥೭॥

ಸಮಯ ಕಾಯುವ ಕಳ್ಳ, ತಮವ ದೊರಕಿಸಿದ್ದಾಂಗ
ಕೊಮರಾಮ ಚೆಂಡ ಆಡುದಕ। ಪುಟಿಪುಟಿದು
ಚಮಕೀಸಿ ಚೆಂಡು ಒಳಮನಿಗೆ ॥೮॥

ಚೆಂಡು ಬೀಳುತ ನೋಡಿ, ಚೆಂಡಿ ರತ್ನಾಲಿ ಮುಚ್ಚಿ
ಲಂಡಾಗಿ ಚೆಂಡು ಕೊಡಲಿಲ್ಲ। ರಾಮನಿಗೆ
ಚೆಂಡ ತರಲಾಕ ಕಳಿಸ್ಯಾರ ॥೯॥

ರತ್ನಾಲಿ ಹಡದವ್ವ, ಚಿತ್ತರದ ಕೊಡ ಚೆಂಡ
ಕತ್ತಲಾಗೂದ ಆಡುದಕ। ಅರಮನೆಯ
ಹೆತ್ತಾಯಿ ಹಾದಿ ನೋಡ್ಯಾಳ ॥೧೦॥

ಕಂಡು ರಾಮನರೂಪ, ಚೆಂಡಿ ರತ್ನಾಲಿ ಸೋತು
ಹಿಂಡೊ ಕೊಮರಾಮ ಕಾಮೂಟೊ। ಕೂಡಾಡಿ
ಉಂಡು ಹಿಂಗೇನೊ ಮನತಾಪೊ ॥೧೧॥

ಕಾಮನೀ ಕೋಮರಾಮ, ಕಾಮಿಸಿದೆ ನಾನೋಡಿ
ಕಾಮಾಟ ಕೂಡಿ ನೀನಾಡೊ। ಮನದೊರೆಯೆ
ಪ್ರೇಮನಿನ ಮ್ಯಾಲೆ ಕೈಮುಗಿವೆ ॥೧೨॥

ತಾಯೆ! ತಂದೆಯ ಸತಿಯ, ನಾಯಿಮಾಡುವ ಕೆಲಸ
ಮಾಯೆ ನಿನಗ್ಯಾಕ ನನಮ್ಯಾಲೆ। ಹಡದವ್ವ
ಹೇಯ ಇಲ್ಲೇನ ನಿನಗೇಟ ॥೧೩॥

ಕಾಯ ಕಾಮನ ಗುಡಿಯೊ, ಹೇಯಮಾಡಲು ಬೇಡ
ತಾಯೆಂಬ ನುಡಿಯು ಬೇಡೆನಗೊ। ಕೊಮರಾಮ
ಬಾಯೆನಗ ಕಾಮ ಕೈಕೊಟ್ಟು ॥೧೪॥

ಹೇಸಿ ಕೈಬಿಡ ತಾಯಿ, ಸೋಸಿ ನೋಡೀಮಾತ
ಮೂಸಿ ಹೊಲಸುಂಬು ಮನಸೇನ। ಕೊಮರಾಮ
ಹೇಸಿ ಕೈಕೊಸರಿ ಹೊರಹೋದ ॥೧೫॥

ಅರಸ ಹೋದವ ಬರಲಿ, ಹರಲೀಯ ನಾ ಕೊಡುವೆ
ಅರಚಣಕ ರಾಮತಲೆ ಹೊಡಿಸಿ। ಹಾಕಿಸುವ
ಹರಕೆ ನಾ ಹೊತ್ತೆ ದೇವರಿಗೆ ॥೧೬॥

ಕುಣಕಾಲಿ ರತ್ನಾಲಿ, ಕುಣಸಿಟ್ಟು ಮಲಗ್ಯಾಳೊ
ಎಣಿಸೂವರ್‍ಯಾರು ಹೆಣ್ಣೆದೆಯ। ಹೆಣ್ಣುಂದ
ಕುಣಿದಾಡಿ ಹೋದ ಮಾದೇವ ॥೧೭॥

ತಣಿದು ಬ್ಯಾಟೆಯನಾಡಿ, ದಣಿದು ಕಂಪಿಲರಾಯ
ಮನೆಹೊಕ್ಕು ಕಂಡ ಗಜಬಿಜೆಯ । ರತ್ನಾಲಿ
ಕೆಣಕಿ ನುಡಿಸಿದರ ಸುಮ್ಮಿರಲು ॥೧೮॥

ಮನದ ಮೋಹದ ಗಿಣಿಯೆ, ಗಣಿಸದಲೆ ಮಾತಾಡೆ
ಮನನೊಂದ ಕಾರಣವನನಗ್ಹೇಳ । ರತ್ನಾಲಿ
ಚಣದಾಗ ಹೊಡೆವ ಹಣಕರನ ॥೧೯॥

ನಮಿಸಿದೆನು ಕೇಳದಲೆ, ಕೊಮರಾಮ ಕೈಹಿಡಿದ
ಧಮಕೀಯ ಮಾಡಿ ಕಾಮಿಸಿದ । ರಕ್ಕಸ್ನ
ಗಮನಿಸ್ದೆ ಕರೆಸಿ ತಲೆಹೊಡಿಸು ॥೨೦॥

ಕಾದ ಕಂಪಿಲರಾಯ, ಭೇದವೇನರಿಯದಲೆ
ಛೇದಿಸಲು ಶಿರವ ಹೇಳಿಸಿದ । ಮಗ ರಾಮ
ಸಾದು ಶಿವನೆಂದು ತಲೆಗೊಟ್ಟ ॥೨೧॥

ಹರಲೀಯ ರತ್ನಾಲಿ, ಹೊರಿಸಿ ಮಂಚಕ ಮಲಗಿ
ಹರಿಯಾಲಿ ಅತ್ತು ಬೋರಾಡಿ । ಕೂಗ್ಯಾಳೊ
ವರ ಮಂತ್ರಿ ಬೈಚು ತಿಳಿಹೇಳಿ ॥೨೨॥

ಹರಲೀಯ ಕೊಡಲಾರೆ, ಕರನಾಟ ಕಂದಗ
ವರಬೊಲ್ಲ ತಂದ ಕೊಮರಾಗ । ರಣದಾಗ
ತುರಕರ ಗೆದ್ದ ವೀರಾಗ ॥೨೩॥ *–ಜಾ–ಸಂ–*

ಈ ಹಾಡನ್ನು ಪರಿಶೀಲನ ಮಾಡುತ್ತ ಹೋದಂತೆ ಅನೇಕ ಐತಿಹಾಸಿಕ ಸಂಗತಿಗಳು ಹೊಳೆಯಹತ್ತುವುವು.

೧. ಈ 'ಕರನಾಟ ಕಂದ'ನಾರು? 'ವರಬೊಲ್ಲ' ನಾರು?
೨. ಸುತಗ ಮನಸಿಟ್ಟ ಮಲತಾಯಿ ಯಾರು?
೩. ಕಂಪಿಲರಾಯನ ಹೆಂಡರು, ಮಕ್ಕಳು.
೪. ರತ್ನಾಲಿಯು ಕುಮಾರ ರಾಮನನ್ನು ಮೋಹಿಸಿದ್ದು.
೫. ಚೆಂಡಿನ ಆಟ.
೬. ಕುಮಾರ ರಾಮನು ರತ್ನಾಲಿಯ ಅರಮನೆಗೆ ಚೆಂಡನ್ನು ಬೇಡಲು ಹೋದದ್ದು.
೭. ರತ್ನಾಲಿಯು ಸಮಯ ಸಾಧಿಸಿ ಕುಮಾರ ರಾಮನನ್ನು ಕಾಮಿಸಿದ್ದು.
೮. ಅವಳ ಹೀನ ಪ್ರಯತ್ನಗಳು ನಿಷ್ಫಲವಾಗಲು ಮಗನ ಮೇಲೆ ಕುನಸಿಟ್ಟು (ಹರಲಿಯ ಹೊರಿಸಿ) ತಲೆಹೊಡಿಸಲು ಹರಕೆಯ ಹೊತ್ತಳು.
೯. ಕಂಪಿಲರಾಯನು ಬೇಟೆಯಾಡಿ ದಣಿದು ಅರಮನೆಗೆ ಬಂದ. ಸುತ್ತಲೂ ಅರಮನೆಯಲ್ಲಿ ಅವ್ಯವಸ್ಥೆ.
೧೦. ರತ್ನಾಲಿಯು ಮಗನ ಮೇಲೆ ಹರಲಿಯ ಹೊರಸಿದಳು.
೧೧. ವಿಚಾರಿಸದೆ ಕುಮಾರನನ್ನು ತಲೆಹೊಡಿಯಲು ಅರಸನ ಆಜ್ಞೆ.
೧೨. ಹೆತ್ತಾಯಿ ಹರಿಯಾಲೆಯ ಶೋಕ; ಮಂತ್ರಿ ಬೈಚೇಯ ನಾಯಕನ ಸಹಾಯ.

ಇವೇ ಮೊದಲಾದ ಅನೇಕ ಸಂಗತಿಗಳು ಹುದುಗಿಕೊಂಡದ್ದು, ಕಂಪಿಲ ರಾಯನ ಅರಮನೆಯಲ್ಲಿಯ ದುರಂತವನ್ನು ಸೂಚಿಸುತ್ತವೆ. ಈ ಹಾಡಿನಲ್ಲಿ ಬರುವ ಕಂಪಿಲ ರಾಯ, ಹರಿಯಾಲಿ, ರತ್ನಾಲಿ, ಕುಮಾರ ರಾಮ, (ಬೈಚು) ಮಂತ್ರಿ ಬೈಚೇಯ ನಾಯಕ, ಬೊಲ್ಲ ಮೊದಲಾದ ವ್ಯಕ್ತಿಗಳು ಐತಿಹಾಸಿಕ ಪುರುಷರಿದ್ದಾರೆ. ಕಂಪಿಲರಾಯನು ಕುಮ್ಮಟದುರ್ಗದ ಅರಸನೆಂದು ಹಿಂದೆ ಹೇಳಿದೆ. ಇವನಿಗೆ ಏಳು ಮಂದಿ ಹೆಂಡರಿದ್ದರೆಂದು, ಹುಲ್ಲೂರ ಶ್ರೀನಿವಾಸ ಜೋಯಿಸರು ಹೇಳಿದ್ದಾರೆ.[೭] ೧. ಹರಿಯಾಲದೇವಿ, ೨. ಕನ್ನಾಜಿ, ೩. ಹಂಪಾಜಿ, ೪. ಸಿಂಗಾಜಿ, ೫. ಸಿರಾಮಣಿ, ೬. ಕಾಟಮ್ಮ, ೭. ರತ್ನಾಜಿ. ಇವರಲ್ಲಿ ಹರಿಯಾಲದೇವಿಯೇ ಪಟ್ಟದರಸಿಯಾಗಿದ್ದಳು. ಅವಳ ಮಗನೇ ಕುಮಾರ ರಾಮ. ಕಡೆಯವಳಾದ ಚೆಲುವೆ ರತ್ನಾಜಿಯೇ ಕಂಪಿಲರಾಯನ ಮೆಚ್ಚಿದ ಮಡದಿಯಾಗಿದ್ದಳು–ಅಲ್ಲದೆ ಅನೇಕ ಕವಿಗಳು ಈ ಅರಸರ ಹೆಸರನ್ನೆತ್ತಿದ್ದಾರೆ. ಕಾಲಜ್ಞಾನದ ವಚನಗಳಲ್ಲಿಯೂ ಇವರ ಹೆಸರು ಬರುತ್ತದೆ. ಚೆನ್ನಬಸವ ಪುರಾಣ ಕಾಲಜ್ಞಾನ ಕಾಂಡದಲ್ಲಿ–

ಮುಂತೆ ಹೊಸಮಲೆಯಲ್ಲಿ, ಕಂಪಿಲನೆನಿಪ್ಪಭೂ
ಕಾಂತ ನಿಹನವನ ಸುಕುಮಾರಕಂ ರಾಮನಾ
ಥಂತನಿಗೆ ಕುಮ್ಮಟವೆನಿಪ್ಪ ದುರ್ಗವನಿರದೆ ಕಟ್ಟಿಸುವ ನರ್ತಿಯಿಂದೆ ॥೭೭॥

---

೭ 'ಗಂಡುಗಲಿ ಕುಮಾರ ರಾಮ', ಪು. ೪೬

ಅಲ್ಲಿ ತಾನಿರುತೆ ಸುತ್ತಣ ಭೂಮಿಪಾಲಕರ
ನೆಲ್ಲರಂ ಗೆಲ್ದು ಹೊಗಳಿಸಿ ಕೊಳಲದಂ ಕೇಳ್ದು
ದಿಳ್ಳಿಯಿಂದಿರದೆ ಎಕ್ಕದ ಮೇಲೆ ತೊಂಬತಾರ್ಸಾವಿರಂ ಕುದುರೆ ಸಹಿತೆ।

ಬಲ್ಲಿದ ಸುಖಾನರಾ ಕುಮ್ಮಟಕೆ ದಾಳಿಯಂ
ನಿಲ್ಲದೈ ತಂದು ತಾವಿರ್ವರುಂ ಕಾದಿ ಬಳಿ
ಕಲ್ಲಿಯೇ ಬಯಲಪ್ಪರಾಗಲಾ ಕುಮ್ಮಟಂ ಹಾಳಪ್ಪು ದೇನೆಂಬೆನು ॥೭೮॥[೮]

ದಿಲ್ಲಿಯ ಸುಲ್ತಾನನು, ಕಂಪಿಲ ರಾಯನ ಮಗನಾದ ಕುಮಾರ ರಾಮನನ್ನು ಕಾಳಗದಲ್ಲಿ ಸೋಲಿಸಿ ಭೂಮಂಡಲವನ್ನು ಆಳಿದನೆಂದು ಕೆಳದಿಯ ನೃಪವಿಜಯದಲ್ಲಿ ಹೇಳಿದೆ.

ಅವರೊಳ್ಕಂಪಿಲ ರಾಯನ
ಕುವರನೆನಿಪ್ಪ ಕುಮಾರ ರಾಮನ ದಂಡಂ।
ಬವರದೆ ಮುಳುಗಿ ಶೋಭಿಸು
ವವನೀ ಮಂಡಳವ ನಾಳ್ದನಾ ಸುಲತಾನಂ॥

ಈ ಸುಲತಾನನೇ ಮಹಮ್ಮದ ತೊಗಲಖನೆಂದು ಇತಿಹಾಸದಿಂದ ತಿಳಿದುಬರುವುದು. ನಂಜುಂಡ (೧೫೨೫), ನಾಗಸಂಗಯ್ಯ ಮೊದಲಾದ ಕವಿಗಳು 'ಕುಮಾರ ರಾಮ'ನ ಕಾವ್ಯವನ್ನು ಬರೆದಿದ್ದಾರೆ. ಅಲ್ಲದೆ ನಾಗಪ್ಪ ಶೆಟ್ಟರಿಂದ ರಚಿಸಲ್ಪಟ್ಟ 'ಕುಮಾರ ರಾಮ'ನ ಮೂಡಲಪಾಯದ ಬೈಲಾಟವನ್ನು ಉತ್ತರ ಕರ್ನಾಟಕದಲ್ಲಿ ಪ್ರದರ್ಶಿಸುವುದನ್ನು ಮನವಾರೆ ಕಾಣಬಹುದಾಗಿದೆ. ಬೆಳುವಲದಲ್ಲಿ ಗೊಂದಲಿಗರು ಶ್ರಾವಣ ಮೊದಲಾದ ಮಾಸಗಳಲ್ಲಿ ಕುಮಾರ ರಾಮನ ಕಥೆಯನ್ನು ಜನರಿಗೆ ಅನೇಕ ದಿನಗಳವರೆಗೆ ಹಾಡಿ ಒಡೆದು ಹೇಳುತ್ತಾರೆ. ಹಳ್ಳಿಗರೂ ಕುಮಾರ ರಾಮನ ಕಥೆಯನ್ನು ಹಾಡುವರು. ಇಂತಹ ಪ್ರಸಿದ್ಧನಾದ ಕುಮಾರ ರಾಮನನ್ನೇ ಬೆಳುವಲ ಹೆಣ್ಣುಮಕ್ಕಳು 'ಕರ್ನಾಟ ಕಂದ'ನೆಂದು ಬಲುರಸವತ್ತಾಗಿ ಹಾಡುತ್ತಾರೆ. ಈ ಹಾಡಿನ ಕಥಾವಸ್ತು ಹೀಗೆ ಇದೆ. ಕುಮಾರ ರಾಮನು ಓರಗಲ್ಲ ಅರಸರಲ್ಲಿದ್ದ 'ಬೊಲ್ಲ' ಎಂಬ ಕುದುರೆಯನ್ನು 'ಎಪ್ಪಟರಾಯ'ನನ್ನು ಸೋಲಿಸಿ ತಂದನೆಂದು ಇತಿಹಾಸದಿಂದ ತಿಳಿದುಬರುವದು. ಹುಲ್ಲೂರ ಶ್ರೀನಿವಾಸ ಜೋಯಿಸರು 'ಗಂಡುಗಲಿ ಕುಮಾರ ರಾಮ' ಎಂಬ ಪುಸ್ತಕದೊಳಗೆ 'ಕಾಲನಿರ್ಣಯ ಪಟ್ಟಿ'ಯಲ್ಲಿ 'ಬೊಲ್ಲ'ನನ್ನು ಹಿಡಿದು ತಂದುದು ಕ್ರಿ.ಶ. ೧೩೨೪ ಎಂದು ಕೊಟ್ಟಿದ್ದಾರೆ. ಈ ಕುದುರೆಯನ್ನು ಏರಿ ಬರುವ ಮಗನನ್ನು ನೋಡಿ ಕಂಪಿಲರಾಯನು ಹಿರಿಹಿರಿಹಿಗ್ಗಿದ್ದಾನೆ.

ಕುಮಾರ ರಾಮನು ಬಂಟನಿದ್ದನಲ್ಲದೆ ಕಾಮನಂತಹ ಚೆಲುವನೆಂದು ನಾಗಸಂಗಯ್ಯ ಕವಿಯೂ ಹಾಡಿದ್ದಾನೆ. ಅವನ ಚೆಲುವಿಕೆಗೆ ಮೆಚ್ಚದ ಹೆಣ್ಣೇ ಇದ್ದಿಲ್ಲ. ಇವನ ಚೆಲುವಿಕೆಯನ್ನು ಕೇಳಿ ದಿಲ್ಲಿಯ ಸುಲ್ತಾನನ ಮಗಳು ಅವನಲ್ಲಿ ಅನುರಕ್ತಳಾಗಿ ಅವನನ್ನೇ ಮದುವೆ ಯಾಗುವೆನೆಂದು ಹಟತೊಟ್ಟಳು. ಅವಳನ್ನು ಕುಮಾರ ರಾಮನು ನಿರಾಕರಿಸಲು ಅದೇ ಮುಂದೆ ತುರುಕರು ಯುದ್ಧ ಮಾಡಲು ಕಾರಣವಾಗಿರಬಹುದು. ಇಂತಹ ಚೆಲುವನನ್ನು ರಾಜ್ಯದಲ್ಲಿ ಮೋಹಿಸದವರಾರು? ಅರಮನೆಯಲ್ಲಿಯೇ ಅರಸನ ಚಿಕ್ಕ ಹೆಂಡತಿಯಾದ ರತ್ನಾಜಿಯು ಅವನನ್ನು ನೋಡಿ ಮೋಹಿಸಿದ್ದಳು. ಈ ಮಾತನ್ನೇ ಜನಪದವು 'ಸುತಗ ಮನಸಿಟ್ಟ ಕಲಿಯುಗದ ಮಲತಾಯಿ। ಬತವ ಹಾಡೇವ ನಿಜಗತೆಯ॥' ಎಂದು ಹಾಡಿದೆ. 'ನಿಜಗತೆ' ಎಂಬ ಶಬ್ದವು ಈ ಹಾಡು ಕಟ್ಟು ಕಥೆಯಲ್ಲ, ಹಿಂದೆ ಸಂಬಂಧಿಸಿದ ಐತಿಹಾಸಿಕ ಸಂಗತಿ'ಯೆಂದು' ವಿಶದಪಡಿಸುತ್ತದೆ. ಮಲತಾಯಿ ರತ್ನಾಲಿಗೆ, ತನ್ನ ಮನೋ ಬಯಕೆಯನ್ನು ಸಾಧಿಸಲು ತಕ್ಕ ಸಮಯವೇ ಸಿಕ್ಕಿದ್ದಿಲ್ಲ. ಅವಳು ಕಾಲವನ್ನು ಕಾಯುತ್ತಿದ್ದಳು.

ಅರಸ ಕಂಪಿಲರಾಯ, ಸರಸಬ್ಯಾಟಿಗೆ ಹೋದ
ಅರಸಿ ರತ್ನಾಲಿ ಮನಿಯಾಗ। ಮೋಹಿಸಿದ
ಎರಕ ಕೊಮರಾಮ ಎದೆಯಾಗ॥

ಅವಳು ಕಾಯುತ್ತಿದ್ದ ಕಾಲ ಬಂತು. ಅರಮನೆಯಲ್ಲಿ ಅವಳೊಬ್ಬಳನ್ನು ಬಿಟ್ಟು ಅರಸನು ಬೇಟೆಗೆ ಹೋದ ವಿಧಿಯ ಸಂಕಲ್ಪ. ಅಂದೇ ಕುಮಾರ ರಾಮನು ತನ್ನ ಗೆಳೆಯರೊಡನೆ ಚೆಂಡಾಟವನ್ನಾಡಲು ಆ ಅರಮನೆಯ ಮುಂದಿನ ಅಂಗಳಕ್ಕೆ ಬಂದ. ಎಲ್ಲವೂ ಕೂಡಿ ಬಂತು.

ಮೇಲ ಮಾಳಿಗಿ ಮ್ಯಾಲ, ನೀಳದಿಟ್ಟಿಯನಿಟ್ಟು
ಹೋಳಿಯಾಡ್ಯಾಳ ಮೈಮರೆತು। ರತ್ನಾಲಿ
ಸೀಳಿ ಕೊಮರಾಮ ಎದೆಹೊಕ್ಕು॥

ಅಂತಃಪುರದಲ್ಲಿ ನಿಂತುಕೊಂಡು ಕುಮಾರ ರಾಮನನ್ನು ನೋಡ ನೋಡುತ್ತ ನುಂಗುವಳೇನೊ ಎಂಬಂತೆ ಕಣ್ಣು ಪಿಳುಕಿಸದೆ ನಿಂತ ರತ್ನಾಲಿಗೆ ಕಾಮಬಾಧೆಯಾಗಿ ಮೈಮರೆತಳು. ಮನದಲ್ಲಿಯೇ ಹೋಳಿಯಾಡುತ್ತಿರಲು ಮನಸಿಟ್ಟ ಕುಮಾರ ರಾಮನು ಅವಳ ಎದೆ ಸೀಳಿ ಮನಃಪಟಲದ ಮೇಲೆ ಮೂರ್ತಗೊಳ್ಳುವನು. ಕಾಮುಕಿಯಾದ ಹೆಣ್ಣಿನ ಮಾನಸಿಕ ಚಿತ್ರವನ್ನು ಇಲ್ಲಿ ತುಂಬಿ ನೋಡಿ ಅನುಭವ ಪಡಬೇಕಾಗಿದೆ. 'ಸಮಯ ಕಾಯುವ ಕಳ್ಳ ತಮವ ದೊರಕಿಸಿದ್ಹಾಂಗ' ಎಂಬಂತೆ ರತ್ನಾಲಿಗೆ ಸಮಯವು ದೊರಕಿತು. ಅವರಾಡುವ ಚೆಂಡು

೮. ಚೆನ್ನಬಸವ ಪುರಾಣ, ಕಾಲ ಜ್ಞಾನಕಾಂಡ ೫, ಸಂಧಿ ೯

ಪುಟಿದು ಅವಳ ಅಂತಃಪುರವನ್ನು ಸೇರಿತು. ಚೆಂಡು ಬೀಳಬೀಳುತಲಿ ಚೆಂಡಿ ರತ್ನಾಲಿ ಮುಚ್ಚಿಟ್ಟಳೆಂದು ಹಾಡಿನಲ್ಲಿ ಬಂದಿದೆ. ಅವಳು ಭಂಡಳಾಗಿ ಚೆಂಡು ಬೇಡ ಹೋದವರಿಗೆ ಅದನ್ನು ಕೊಡದೆ ಹೋಗಲು, ಕುಮಾರ ರಾಮನೇ ಅದನ್ನು ತರಲು ಅರಮನೆಯ ಪ್ರವೇಶಿಸಿದ. ಅವನು ಬರುವುದೇ ಅವಳಿಗೆ ಬೇಕಾಗಿತ್ತು. ಹಡೆದವ್ವನೆಂದು ಚೆಂಡು ಬೇಡಲು ಹೋದ ಮಗನನ್ನು ಕಾಮಾಂಧಳಾಗಿ ರತ್ನಾಲಿಯು "ಹಿಂಡೊ ಕೊಮರಾಮ ಕಾಮೂಟ । ಕೂಡಾಡಿ । ಉಂಡು ಹಿಂಗೇನೊ ಮನತಾಪ ॥" ಎಂದು ಕಾಮಿಸ ಹೋಗುವಳು. "ಕಾಮನೀ ಕೊಮರಾಮ, ಕಾಮಿಸಿದೆ ನಾ ನೋಡಿ," "ಕಾಮಾಟ ಕೂಡಿ ನೀನಾಡೊ," "ಪ್ರೇಮ ನಿನ ಮ್ಯಾಲೆ ಕೈಮುಗಿವೆ" ಎಂಬೀ ನುಡಿಗಳು ಕಾಮತುಂಬಿದ ಹೆಣ್ಣಿನ ಅಂತರಂಗವನ್ನು ಬಿಚ್ಚಿ ಹೇಳುತ್ತವೆ. ಆದರೆ ಕೊಮರಾಮನು ಸೋತು ಕೂಡುವನೇ? ಇಂತಹ ಹೆಣ್ಣಿನ ಮೋಹದ ಬಲೆಗೆ ಪರವಶನಾಗುವ ಸ್ತ್ರೀ ಮಲತಾಯಿಯಾದ ರತ್ನಾಲಿಗೆ ತಾಯ್ತನದ ಕಲ್ಪನೆಯನ್ನು ತಂದುಕೊಡುವನು. ಆದರೇನು? ಕಾಮವು ಕುರುಡ. "ಕಾಯ ಕಾಮನ ಗುಡಿಯೊ, ಹೇಯ ಮಾಡಲು ಬೇಡ," "ತಾಯೆಂಬ ನುಡಿಯು ಬೇಡೆನಗೆ," "ಬಾಯೆನಗ ಕಾಮ ಕೈಕೊಟ್ಟು" ಎಂದು ರತ್ನಾಲಿಯು ಏನನ್ನೂ ಲಕ್ಷಕ್ಕೆ ತಾರದೆ ಕುಮಾರ ರಾಮನನ್ನು ಆಲಿಂಗಿಸ ಹೋಗುವ ಚಿತ್ರವನ್ನು ಜಾನಪದ ಕವಿಯು ಸನ್ನಿವೇಶಕ್ಕೆ ಯಥಾರ್ಥವಾಗಿ ಚಿತ್ರಿಸಿದ್ದಾನೆ. ತಾಯಿಯ ಆಚರಣೆಗೆ ಹೇಸಿ, ಮಾನವ ಜಾಗ್ರತೆಯಲ್ಲಿದ್ದ ಕುಮಾರ ರಾಮನು

ಹೇಸಿ ಕೈಬಿಡ ತಾಯಿ, ಸೋಸಿ ನೋಡೀ ಮಾತ
ಮೂಸಿ ಹೊಲಸುಂಬು ಮನಸೇನ । ಕೊಮ ರಾಮ
ಹೇಸಿ ಕೈ ಕೊಸರಿ ಹೊರಹೋದ ॥

ಬಂದದ್ದು ಬರಲೆಂದು ಮಗನೆಂಬ ಪಾವನತೆಯನ್ನುಳಿಸಿಕೊಂಡ. 'ಹೆಣ್ಣಿನ ನೆಲೆಯನ್ನರಿತವರಾರು?' ರತ್ನಾಲಿಯು ಮತ್ತಿಷ್ಟು ಸಿಟ್ಟಾದಳು. ಕೆಂಡಕಾರುತ್ತ, ಹರಲಿಯನ್ನು ಹೊರಿಸಿ ಅವನ ರುಂಡ ಕೊಯ್ಯಿಸಲು ದೇವರಿಗೆ ಹರಕೆಯನ್ನೇ ಹೊತ್ತಳು. ಕುನಸಿಟ್ಟು ಮಲಗಿ, ಅರಸನು ಬರುವ ಹಾದಿಯನ್ನೇ ಕಾಯಹತ್ತಿದಳು. ತಣಿದು ಬೇಟೆಯನ್ನಾಡಿ ದಣಿದು ಕಂಪಿಲರಾಯನು ಬಂದ. ಅರಮನೆಯನ್ನು ಹೊಕ್ಕು ನೋಡುತ್ತಾನೆ, ಸುತ್ತಲೂ ಗಜಿಬಿಜಿಯು. ಮಂಚದ ಮೇಲೆ ಮುಸಕಳೆದುಕೊಂಡು ಮಲಗಿರುವ ರತ್ನಾಲಿಯನ್ನು ಕೆಣಕಿ ಮಾತಾಡಿಸಿದರೂ 'ಓ' ಇಲ್ಲ. ಪರಿಪರಿಯಿಂದ ಅವಳನ್ನು ರಮಿಸಿ, ಮನನೋಯಲು ಕಾರಣರಾದವರನ್ನು ಕೂಡಲೇ ತಲೆ ಹೊಡೆಸುವೆನೆನ್ನಲು, ರತ್ನಾಲಿಯು 'ರಕ್ಕಸ, ಕುಮಾರ ರಾಮನು ನೀನಿಲ್ಲದ ಸಮಯ ಸಾಧಿಸಿ ಧುಮಕಿಯ ಮಾಡಿ ನನ್ನನ್ನು ಕಾಮಿಸಿದ, ಎಂದ ಹೇಳಿದಳು. ಕಂಪಿಲರಾಯನು ಕಾದನು. ಪಿತ್ತದ ಬವಣೆ ತಲೆಗೇರಿತು. ಹಿತಾಹಿತವನ್ನರಿಯದಷ್ಟು ಭ್ರಮೆಯಾದ. ಕೂಡಲೇ ಕುಮಾರ ರಾಮನನ್ನು ತಲೆ ಹೊಡೆಯಲು ಹೇಳಿಕಳುಹಿಸಿದ. ಕುಮಾರ ರಾಮನು ನಿರಪರಾಧಿ. ಹೆಣ್ಣಿನ ಹರಲೆ ಬಂತು. ತಂದೆಯ ಆಜ್ಞೆಗೆ "ಸಾದು ಶಿವನೆಂದು ತಲೆಗೊಟ್ಟ।"ನೆಂದು ಜನಪದವು ಒಂದುಸರಿನಲ್ಲಿಯೇ ದುಃಖಿಸಿದೆ. ಹೊತ್ತು ಹಡೆದ ಹೊಟ್ಟೆಯು ಹೊಡಬಡಕೊಂಡು ಬೋರಾಡಿ ಅಳಹತ್ತಿತ್ತು. ಹರಲಿಯನ್ನು ಹೊರಿಸಿ ರತ್ನಾಲಿಯು ಮಲಗಿದಳು. 'ಸಿಟ್ಟಿನ ಕೈಗೆ ಬುದ್ಧಿಯ ಕೊಡುವ ಅರಸನನ್ನು ಮನಗಂಡ ವರಮಂತ್ರಿಯಾದ ಬೈಚೇಯ ನಾಯಕನು ಅರಸು ಮಗನನ್ನು ಅರಸನಿಗೆ ತಿಳಿಯದಂತೆ ಮುಚ್ಚಿಟ್ಟನೆಂದು ತಿಳಿದುಬರುವುದು. ಅಳುತ್ತಿರುವ ಹರಿಯಾಲಿಗೆ ತನ್ನ ಗುಟ್ಟನ್ನು ತಿಳಿಹೇಳಿದನಂದು ಜಾನಪದ ಹಾಡಿನಲ್ಲಿ ಬಂದಿದೆ. 'ವರಮಂತ್ರಿ ಬೈಚು ತಿಳಿಹೇಳಿ," ಈ ವರಮಂತ್ರಿ 'ಬೈಚು' ಕಂಪಿಲರಾಯನ ಪ್ರಸಿದ್ಧ ಮಂತ್ರಿಯಾದ ಬೈಚೇಯ ದಂಡನಾಯಕನು.

ಈ ಹಾಡಿನಲ್ಲಿ ಬರುವ ಸಂಗತಿಗಳು ಐತಿಹಾಸಿಕ ಸಂಗತಿಗಳಿಗೆ ಹೊಂದಿಕೆಯಾಗುವುವು; ಶತಶತಮಾನಗಳಲ್ಲಿ ಹೆಚ್ಚುಕಡಿಮೆಯಾಗಿ ಅತಿಶಯೋಕ್ತಿಯಾಗಿರಬಹುದೆಂದು ಒಪ್ಪಿದರೂ, ಹಾಡಿನಲ್ಲಿ ಬಂದ ಪ್ರಸಂಗಗಳು ಮಾತ್ರ ನಿಜವೆಂದು ಒಪ್ಪಲೇಬೇಕಾಗುವುದು. ಕುಮಾರ ರಾಮನ ಕಥೆಯು ಜನಪದಕ್ಕೆ ಮೆಚ್ಚಿದ ಕಥೆಯಾಗುತ್ತ ಬಂದಿದೆ. ಅನೇಕ ಹಾಡುಗಳು ಕುಮಾರ ರಾಮನನ್ನು ಕುರಿತು ಜನಪದದಲ್ಲಿ ಕಂಡುಬರುವುವು. ಬೆಳುವಲದಲ್ಲಿ ಹರಿಯಾಲಿಯ ಹಾಡನ್ನೂ ಹಾಡುವರು. ಶ್ರೀ ಸದಾಶಿವ ಗರುಡರು, ಇದನ್ನು ಕುರಿತು, ಈ ಶತಮಾನದಲ್ಲಿ ಈ ಕಥೆಯ ಹಿನ್ನೆಲೆಯ ಮೇಲೆ "ವಿಷಮ ವಿವಾಹ ಅರ್ಥಾತ್ ಪಶ್ಚಾತ್ತಾಪ" ಎಂಬ ಸಾಮಾಜಿಕ ನಾಟಕವನ್ನು ಬರೆದು, ರಂಗಭೂಮಿಯ ಮೇಲೆ ತಂದಿದ್ದಾರೆ. ನಿಜಸಂಗತಿಗಳನ್ನರಿತ ಜನಪದವು ಕುಮಾರ ರಾಮನ ಮೇಲೆ ಹರಲಿಯನ್ನು ಹೊರಿಸಲು ಒಪ್ಪಬಹುದೇ? ಅಂತೆಯೇ "ಹರಲೀಯ ಕೊಡಲಾರೆ । ಕರನಾಟ ಕಂದಗ ॥" ಎಂದು ಉದ್ಗಾರ ತೆಗೆದು ಪಲ್ಲವಿಹಾಕಿ ಹಾಡಿದೆ.

❐

5. ಕಿತ್ತೂರು

ಉತ್ತರ ಕರ್ನಾಟಕದ ಸಂಸ್ಥಾನಿಕರ ಇತಿಹಾಸಗಳಲ್ಲಿ ಕಿತ್ತೂರು ಕೈಯೆತ್ತಿದ ಮಾತಾಗಿದೆ. ಅದರ ನಿಜವಾದ ಇತಿಹಾಸವು ಇಂದು ಕನ್ನಡಿಗರಿಗೆ ಗೊತ್ತಿಲ್ಲದಿರುವುದು ಒಂದು ದುರ್ಭಾಗ್ಯದ ಸಂಗತಿಯೇ ಸರಿ. ತೀರ ಇತ್ತೀಚೆಗೆ ಹಲಕೆಲವು ಪ್ರಮುಖರು ಕೂಡಿ 'ಕಿತ್ತೂರ ಚೆನ್ನಮ್ಮ ರಾಣಿ ಇತಿಹಾಸ ಮಂಡಲ, ಬೈಲಹೊಂಗಲ' ಎಂಬ ಹೆಸರಿನ ಸಂಸ್ಥೆಯನ್ನು ಸ್ಥಾಪಿಸಿ ಅದರ ಮುಖಾಂತರ ಕಿತ್ತೂರ ಇತಿಹಾಸ ಸಂಶೋಧನೆಯನ್ನು ನಡೆಸಿರುವುದು ಸ್ತುತ್ಯ. ಇವರು ಕಿತ್ತೂರರಸರ ರಾಜ್ಯಾಡಳಿತೆಯ ಕಾಗದ ಪತ್ರಗಳನ್ನೂ, ಸನದು ಮೊದಲಾದುವುಗಳನ್ನೂ ಕಲೆಹಾಕಹತ್ತಿದ್ದಾರೆ. ಅವುಗಳನ್ನು ಪರಿಶೀಲಿಸಿ ಈಗಾಗಲೇ ಹಲಕೆಲವು ಸಂಗತಿಗಳನ್ನು ಬೆಳಕಿಗೆ ತಂದಿದ್ದಾರೆ. ಆಸ್ಥಾನ ಕವಿಗಳ ಹಲಕೆಲವು ಕಾವ್ಯಗಳನ್ನು ಪ್ರಕಟಿಸಿದ್ದಾರೆ. ಅಲ್ಲದೆ ಕುಂಪಣಿ ಸರಕಾರದವರು ಸಂಸ್ಥಾನದ ಕೂಡ ಪತ್ರವ್ಯವಹಾರ ಮಾಡಿದ ಕಾಗದ ಪತ್ರಗಳ ಒಂದು ದೊಡ್ಡ ರಾಶಿಯೇ 'ಲಂಡನ್ ಮ್ಯೂಜಿಯಮ್'ದಲ್ಲಿದೆ ಎಂದು ತಲ್ಲೂರ ರಾಯನಗೌಡರು ಹೇಳುತ್ತಾರೆ. ಆ ರಾಶಿಯೊಳಗಿನ ಹಲಕೆಲವು ಮಹತ್ವದ ಟಿಪ್ಪಣಿಗಳನ್ನು ಅವರು ಇಂಗ್ಲೆಂಡದ ಪ್ರವಾಸಕ್ಕೆ ಹೋದಾಗ ತಂದಿದ್ದಾರೆ.

ಹೋದಹೋದಲ್ಲಿ ಒಡಕು ಹುಟ್ಟಿಸಿ (Dividing diplomacy) ತಮ್ಮ ಕಾರ್ಯಗಳನ್ನು ಸಾಧಿಸಿಕೊಂಡು ರಾಜ್ಯವನ್ನು ಗಳಿಸಿದ 'ಕುಂಪಣಿ' ಸರಕಾರದವರು ದೂರದರ್ಶಿಗಳಾಗಿ ಬಲು ಚಾಣಾಕ್ಷತೆಯಿಂದ ರಾಜ್ಯವಾಳಿದ್ದಾರೆ. ಅವರು ಸಂಸ್ಥಾನದ ಕೂಡ ಮಾಡಿದ ಕಾಗದ ಪತ್ರಗಳಲ್ಲಿಯ ಸಂಗತಿಗಳಿಗೂ ಜನತೆಯಲ್ಲಿ ಸಂಭವಿಸಿದ ಸಂಗತಿಗಳಿಗೂ ಅನೇಕ ಭಿನ್ನ ಭೇದಗಳು ಕಂಡುಬರುವುವು. 'ಆಡುವದೊಂದು, ಮಾಡುವದೊಂದು ಕಂಪಣಿಯವರ ರಾಜಕಾರಣ (Politics)ದ ಮಹತ್ವದ ಮುದ್ದೆಯೇ ಆಗಿತ್ತು. ಅದೇ ರಾಜ್ಯವನ್ನು ಗಳಿಸಿದ ಅವರು ನಿಜವಾದ ಸಂಗತಿಗಳನ್ನು ಮುಚ್ಚಿ ಜನತೆಗೆ ಬೇಕಾದವರಂತೆ ರಾಜ್ಯವಾಳುತ್ತ ಬಂದಿದ್ದಾರೆ. ಆದುದರಿಂದ ಜನಪದವು ಕಂಡು ದುಃಖಿಸಿದ ಹಲ ಕೆಲವು ಸಂಗತಿಗಳು ತೀರ ಭಿನ್ನವಾಗಿರುವುದರಲ್ಲಿ ಏನು ಸಂದೇಹ? ರಾಜ್ಯವನ್ನು ಯಾರೇ ಆಳಲಿ ಜನತೆಯ ಎದೆಗೆ ತಾಕಿದ ದುಃಖದ ಬರೆಗಳು ಹುಣ್ಣಾಗಿ ಒಂದಿಲ್ಲೊಂದು ಪ್ರಸಂಗದಲ್ಲಿ ಭಾವನಾ ಪ್ರಧಾನವಾಗಿ ಒಡೆಯುವುದು ನಿದರ್ಶನಕ್ಕೆ ಬಾರದಿರಲಾರದು. ಜನಪದವು ಕಿತ್ತೂರ ದುರಂತವನ್ನು ಕಣ್ಣಾರೆ ನೋಡಿ, ಕೇಳಿ ಬೋರಾಡಿ ಅತ್ತಿದೆ. ಆ ದುಃಖವೇ ಹಾಡುಗಳಾಗಿ ಜನತೆಯಲ್ಲಿ ಬಂದಿವೆ. ಇಂದು ಜನರು ಹಾಡುವ ಅಪಾರವಾದ ಕಿತ್ತೂರ ಜಾನಪದ ಸಾಹಿತ್ಯವು ಇತಿಹಾಸ ಸಂಶೋಧಕರಿಗೆ ಒಂದು ದೊಡ್ಡ ಸಹಾಯ ಸಂಪತ್ತು. ಅದನ್ನು ಅವರು ಎಂದೂ ಅಲಕ್ಷಿಸಕೂಡದು. ಅನೇಕ ಐತಿಹಾಸಿಕ ಸಂಗತಿಗಳು ಈ ಹಾಡುಗಳಲ್ಲಿ ಹುದುಗಿಕೊಂಡಿವೆ. ಅವುಗಳನ್ನು ಒರೆಗೆ ಹಚ್ಚಿ ಸಂಶೋಧಕರು 'ಕಿತ್ತೂರ ಇತಿಹಾಸ'ವನ್ನು ಬರೆಯಬೇಕು. ಈಗ ಜನತೆಯಲ್ಲಿ ಕಿತ್ತೂರ ಹಂತಿಯ ಹಾಡುಗಳೂ, ಲಾವಣಿಗಳೂ ದುಂದುಮಿಗಳೂ, ಕೋಲುಪದಗಳೂ, ಕುಟ್ಟುವ ಬೀಸುವ ಹಾಡುಗಳೂ, 'ಸೋ' ಹಾಡುಗಳೂ ಮುಂತಾದುವುಗಳು ನಿದರ್ಶನಕ್ಕೆ ಬರುತ್ತವೆ. ಕೇವಲ ಹಲಕೆಲವುಗಳನ್ನು ಮಾತ್ರ ಮೇಲೆ ಕಾಣಿಸಿದ ಇತಿಹಾಸ ಮಂಡಲದವರು ಬೆಳಕಿಗೆ ತಂದಿದ್ದಾರೆ. ಈಗ ಸಂಕಲಿಸಲಾದ ಹಲಕೆಲವು ಹಂತಿ ಹಾಡುಗಳನ್ನು ಕೆಳಗೆ ಕೊಡಲಾಗಿದೆ.

ಕಿತ್ತೂರ ಹಂತಿಯ ಹಾಡು

ಕಾಡಾನೆ ಕಾಡಯ್ಯ, ಬ್ಯಾಡರ ಬೀಡಯ್ಯ
ನಾಡಾಗಿ ಮಾಡಿ ಮಲ್ಲಣ್ಣ। ಕಿತ್ತೂರ
ಗೂಡೀಗೆ ಗುಡಿಯನೇರಿಸಿದೊ ॥೧॥

ಬಣಜಿಗ ಮಲ್ಲಣ್ಣ, ಜನದಾಗ ಕಣಿಯಾದ
ಕುಣಿಸಿ ಲಕ್ಕಸಮಿ ನಾಡಾಗ। ಕಿತ್ತೂರು
ಕಣಜಾತು ಮುತ್ತು ಮಾಣಿಕದ ॥೨॥

ಕಿತ್ತೂರ ಕಡೆಯರಸ, ಮುತ್ತು ಮಾಣಿಕದೊಡೆಯ
ದತ್ತಕ ಮಗs ಮಲಸಜ್ಜೊ। ಸಮಸೂರ
ಸತ್ತ ಕಿತ್ತೂರ ಮುಟ್ಟುದಕೊ ॥೩॥

ಶಿವಲಿಂಗ ರುದ್ರನಿಗೆ, ಸಾವು ಕೂಡಲೆ ಬಂತು
ಜೀವ ಕಸವೀಸಿ ಚೆನ್ನವ್ವೊ । ಹಾರೂರು
ಹಾವಾಗಿ ಮನೆಗೆ ವಿಷಬಿಟ್ಟೊ ॥೪॥

ಮಡದೇರಿಬ್ಬರು ಹಿಡಿದು, ಕಡದಾಡಿ ಒಡಕ್ಹುಟ್ಟೆ
ತಡಮಾಡ್ದೆ ದತ್ತಕ ತಗೊಂಡು । ಚನ್ನಮ್ಮ
ಒಡತ್ಯಾಗಿ ನಾಡ ಆಳ್ಯಾಳೊ ॥೫॥

ಕನ್ನೂರ ಮಲ್ಲನಿಗೆ, ತನ್ನಿ ಬ್ಯಾನ್ಹತ್ತು
ಚೆನ್ನಮ್ಮ ರಾಜ್ಯ ನುಂಗಾಕೊ । ಥಾಕರೆಗ
ಗುನ್ನೆ ಮಾಡುದಕ ಪುಸಲಿಟ್ಟೊ ॥೬॥

ಕಲ್ಲೂರ ಮಲ್ಲಗ, ಎಲ್ಲಾರು ಒದೆಯಾಲಿ
ಗುಲ್ಲಾ ಗಂಟೇರು ಉಗಳಾರೊ । ಥಾಕರೆಗ
ಸಲ್ಲಾ ಕೊಟ್ಟಾನೊ ಮುತ್ತಾಕೊ ॥೭॥

ಧಾರ್ವಾಡ ವೆಂಕಾಟ, ದಾರೆಳಿವೆ ಸಿರಕೋದ
ಕಾರಭಾರಿಗಳು ಕಿವಿಗೊಟ್ಟೊ ॥ ಕಿತ್ತೂರು
ಚೂರ ಚೂರಾತೊ ಕದನಾತೊ ॥೮॥

ಕಿತ್ತೂರ ಚೆನ್ನಮ್ಮ, ಸುತ್ತೂರ ಒಡತ್ಯಾಗಿ
ಕತ್ತಿ ಕವಚಗಳ ಉಡಪುಟ್ಟೊ । ಅಬ್ಬರದಿ
ಬತ್ತಲ ಗುದರೀಯ ಜಿಗದೇರೊ ॥೯॥

ಗಂಡನ್ನ ಕಳಕೊಂಡು, ಬೆಂಡಾದ ಚೆನ್ನಮ್ಮ
ಗಂಡಾಗಿ ರಣಕ ಇಳಿದಾಳೊ । ನಾಡನ್ನು
ಪುಂಡ ಬಂಡಾಯ ಹಿಂಡಾಕೊ ॥೧೦॥

ಧಾರವಾಡದ ದಂಡು, ವಾರ್‍ಯಾಗ ಬರುತಿರಲು
ಏರೀಯ ಹತ್ತಿ ಸುರಿಸ್ಯಾರೊ । ಕಿತ್ತೂರ
ವೀರರೊಗೆದಾರೊ ಗುಂಡೀಲೊ ॥೧೧॥

ಕೆಂಪು ಮೋರೆಯ ದಂಡು, ಚಿಂಪಾಗಿ ಸಿಡದೀತೊ
ರಂಪರಂಪೆಂದು ಓಡೀತೊ । ಅಮಟೂರ
ಬಾಳು ಗುಂಡಿಟ್ಟೊ ಥಾಕರೆಗೆ ॥೧೨॥

ಬೆಳಗಾಂವಿ ಚಿಪ್ಲಿನ್ನ, ಒಳಹಾದಿಲೆ ದಂಡೆತ್ತಿ
ಬೆಳಗಾಗಿ ದಂಡು ಬೀಡಿಟ್ಟೊ । ಕಿತ್ತೂರು
ತಳಮಳ ನೋಡೊ ಚಣದಾಗೊ ॥೧೩॥

ಜಮಖಂಡಿ ದೇಸಾಯಿ, ಯಮಕೀಲೆ ಕೂಡೀದ
ಸಮಯಕ ಚಿಪ್ಲೀನ ದಂಡೀಗೊ । ಕಿತ್ತೂರ
ಸಮನಾಗ್ಯೆಸೀರಿ ಹೊತ್ತೊಯ್ದೊ ॥೧೪॥

ಕನ್ನೂರ ಕಲ್ಲೂರ, ಮಲ್ಲರದು ಪಿತೂರಿ
ರಾಗಿ ಕೂಡಿಸಿದ ಹುಸಿ ಮದ್ದೊ । ಕಿತ್ತೂರ
ನಸಿಬ ಹಾರ್‍ಯಾವೊ ಹುಸಿಗುಂಡೊ ॥೧೫॥

ಕಿತ್ತೂರ ಕಿಲ್ಲೇಕ, ಹತ್ತು ಕಾಲ್ನಿಚ್ಚಣಕಿ
ಕೊತ್ತ ಕೊತ್ತಲಕ ಕೈಪಂಜು । ಹಿಡಕೊಂಡು
ಸುತ್ತ ಚೆನ್ನವ್ವ ಹುಡುಕ್ಯಾರೊ ॥೧೬॥

ಕಿರಳೀದ ಕೇಸರಣಿ, ಕಿತ್ತೂರ ಬಿಟಗೊಟ್ಟು
ಬತ್ತಲ್ಗುದರೀಯ ಜಿಗದೇರಿ । ಹೊಂಗಲದ
ಗಡಿಯಾಗ್ಹೈರಿಗೆ ಸೆರೆಯಾಗಿ ॥೧೭॥

ಅತ್ತೆ ಸೊಸ್ತರತಂದು, ಮತ್ತ ಹೊಂಗಲದಾಗ
ಸುತ್ತ ಕಾವಲಿಯೊ ಹಗಲಿರುಳೊ । ಜನದಾಗ
ಎತ್ತ ನೋಡಿದರು ತಳಮಳೊ ॥೧೮॥

ಮುಕ್ಕಣ್ಣ ಗತಿಯೆಂದು, ಸಿಕ್ಕು ಸೆರೆಯಾಗಿದ್ದು
ಬಿಕ್ಕಿ ಅಳತಾಳೊ ಈರವ್ವೆ । ರಾಯಣ್ಣ
ಅಕ್ಕ ನಿಮ್ಮುಪ್ಪು ಈ ರಾಯೊ ॥೧೯॥

ಗೆದ್ದು ಕಿತ್ತೂರ ತಂದು, ಉದ್ದ ಬೀಳುವೆ ತಾಯಿ
ಕದ್ದ ಮಾತಲ್ಲ ನಿಮ್ಮಾಣೆ । ಇಲ್ಲದಿರಕ
ಬಿದ್ದ ಹೋಗೂವೆ ರಣದಾಗೊ ॥೨೦॥

ಸಂಗೊಳ್ಳಿ ರಾಯಣ್ಣ, ಹಂಗ್ಹರಿದ ದಳವಾಯಿ
ದಂಗೆ ಎಬ್ಬಿಸಿದ ನಾಡಾಗೊ । ಕಿತ್ತೂರ
ಕಂಗೆಟ್ಟು ಜನರು ಕೂಡ್ಯಾರೊ ॥೨೧॥

ಸುದ್ದಿ ಹಬ್ಬಿತು ಸುತ್ತ, ಎದ್ದು ಕೂಡಿತು ಮಂದಿ
ಗದ್ದಲಕ ಅಂಜಿ ಸರಕಾರ । ಈರವ್ನ
ಕದ್ದಿಲಿ ಕೊಂದಾರೊ ವಿಷಕೊಟ್ಟೊ ॥೨೨॥

ಖಿದಾನ ಪುರದಾಗ, ಹೋದಾನೊ ರಾಯಣ್ಣ
ಭೇದವಿಡುಲಿಲ್ಲೊ ಮನದಾಗೊ । ಲಿಂಗೊಂಡ
ವಾದಿ ರಾಯಣ್ಣ ಮೋಸಾಗಿ ॥೨೩॥

ನಂದಗಡ ಊರಾಗ, ಮಂದ್ಯಾಗ ರಾಯಣ್ಣಾ
ತಂದು ಶೂಲಃಕ ಹಾಕ್ಯಾರೊ । ಕಿತ್ತೂರ
ಗೊಂದಲ ಶೂರಗ ದುರಮರಣ ॥೨೪॥

ಹೊಂಗಲದ ಮಠದಾಗ, ಲಿಂಗಪೂಜೆಯ ಮಾಡಿ
ಭಂಗಾಗುದೆಂದು ಎದೆಗುಂದಿ । ಚೆನ್ನವ್ವ
ಉಂಗರ್ದೋಜ್ಜೇರ ನುಂಗ್ಯಾಳೊ ॥೨೫॥ *–ಜಾ–ಸಂ–*

ಒಕ್ಕಲಿಗನೇನೊ ಈ ಹಂತಿಯ ಹಾಡನುಡಿಗಳನ್ನು ಹಾಡಿದ್ದಾನೆ; ಹಾಡುತ್ತ ಬಂದಿದ್ದಾನೆ. ಇಂದು ಅವುಗಳನ್ನು ಪರಿಶೀಲನ ಮಾಡುತ್ತ ಹೋದ ಹೋದಂತೆ ಕಿತ್ತೂರ ಇತಿಹಾಸವು ಇತಿಹಾಸಕಾರರ ಮುಂದೆ, ರೂಪಹೊಂದಿ ನಿಲ್ಲದಿರಲಾರದು. ಮೇಲೆ ಕೊಟ್ಟ ಹಂತಿಯ ಹಾಡಿನಲ್ಲಿ ಕೆಳಗೆ ಕೊಡುವ ಅನೇಕ ಐತಿಹಾಸಿಕ ಸಂಗತಿಗಳು ಅಡಕವಾಗಿವೆ.

೧. ಕಿತ್ತೂರ ರಾಜ್ಯ ಸ್ಥಾಪನೆ.
೨. ಕಿತ್ತೂರು ಮುತ್ತು ಮಾಣಿಕದ ಕಣಜ.
೩. ಕಿತ್ತೂರ ಕಡೆಯರಸು ಮಲ್ಲಸಜ್ಜ ಸಮಸೇರಜಂಗ (ಪ್ರತಾಪರಾವ್).
೪. ಶಿವಲಿಂಗರುದ್ರ ಅವನ ಅಕಾಲ ಮರಣ.
೫. ಅರಮನೆಯಲ್ಲಿ ಒಡಕು.
೬. ಕಾರಭಾರಿಗಳ ಕೂಡ 'ಥ್ಯಾಕರೆ'ನ ಒಳಸಂಚು.
೭. ಧಾರವಾಡ ವೆಂಕಾಟ (ವೆಂಕಟರಾವ್)ಯ ಕುತಂತ್ರ.
೮. ಕಿತ್ತೂರ ಕದನ.
೯. ರಾಣಿ, ಚೆನ್ನವ್ವನ ಸಾಹಸ.
೧೦. ಥ್ಯಾಕರೆಯು ಕಿತ್ತೂರ ಮುತ್ತಿದ್ದು. ಥ್ಯಾಕರೆಯ ಮರಣ. ಇಂಗ್ಲಿಷರಿಗೆ ಸೋಲು.
೧೧. ಥ್ಯಾಕರೆಯ ಮರಣವಾರ್ತೆ. ಚಿಪ್ಲಿನ್ನನು ಕಿತ್ತೂರ ಮುತ್ತಿದ್ದು.
೧೨. ಜಮಖಂಡಿ ದೇಸಾಯಿಯು ಚಿಪ್ಲಿನ್ನನ ದಂಡು ಕೂಡಿದ್ದು.
೧೩. ಕಾರಭಾರಿಗಳ ಪಿತೂರಿ, ಕಿತ್ತೂರ ಪತನ.
೧೪. ರಾಣಿ ಚೆನ್ನವ್ವನನ್ನು ಸೆರೆಹಿಡಿಯುವ ಸಾಹಸ. ಚೆನ್ನವ್ವನು ಕೈಸೆರೆಯಾದದ್ದು.
೧೫. ಅತ್ತೆ ಸೊಸೆಯರನ್ನು ಕಾವಲಿನಲ್ಲಿಟ್ಟದ್ದು.
೧೬. ಜನರಲ್ಲಿ ತಳಮಳ. ಈರವ್ವನು ದುಃಖಿಸಿದ್ದು. ಅರಸಿಯರಿಗೆ ರಾಯಣ್ಣನು ಭೆಟ್ಟಿಯಾದದ್ದು.

೧೭. ರಾಯಣ್ಣನ ಬಂಡಾಯ. ನಾಡಿನಲ್ಲಿ ಹಾಹಾಕಾರ.
೧೮. ಸರಕಾರವು ಅಂಜಿ ಈರವ್ವನನ್ನು ವಿಷಹಾಕಿ ಕೊಂದದ್ದು.
೧೯. ರಾಯಣ್ಣನನ್ನು ಹಿಡಿಯಲು ಖುದಾನಪುರ ಲಿಂಗೊಂಡ (ಲಿಂಗನಗೌಡ)ನ ಪಿತೂರಿ. ರಾಯಣ್ಣ ನಂಬಿ ಮೋಸಹೋದ.
೨೦. ರಾಯಣ್ಣನ ದುರಂತ.
೨೧. ಕಿತ್ತೂರ ರಾಣಿಯ ದುರ್ಮರಣ.

ಇವೆ ಮೊದಲಾದ ಮಹತ್ವದ ಸಂಗತಿಗಳು ವಿಶದವಾಗಿ ತಿಳಿದುಬರುತ್ತವೆ. ಕಿತ್ತೂರ ರಾಜ್ಯ ಸ್ಥಾಪನೆಯಾಗುವ ಮೊದಲು ಮಲೆನಾಡ ಮೂಲೆಯಲ್ಲಿದ್ದ ಈ ಭಾಗವು ದಟ್ಟಾದ ಅರಣ್ಯಗಳಿಂದ ತುಂಬಿಕೊಂಡಿದ್ದು ಕಾಡಾನೆಗಳ ವಾಸಸ್ಥಾನವಾಗಿತ್ತೆಂದು ತಿಳಿದುಬರುತ್ತದೆ. ಹಾಡಿನಲ್ಲಿ, ಮಲ್ಲಣ್ಣನೆಂಬವನು ಕಿತ್ತೂರ ಸಂಸ್ಥಾನವನ್ನು ಸ್ಥಾಪಿಸಿದನೆಂದು ಬರುತ್ತದೆ. ಈ ವ್ಯಕ್ತಿಯು ಜನರಿಗೆ ಬೇಕಾಗಿ ತನ್ನ ನಾಡನ್ನು ಧನ ಧಾನ್ಯ ಸಮೃದ್ಧಿಯುಳ್ಳದ್ದನ್ನಾಗಿ ಮಾಡಲು ಆ ರಾಜ್ಯವು ಮುತ್ತು ಮಾಣಿಕದ ಕಣಜಾಯಿತೆಂದು ಹಾಡಿನಲ್ಲಿ ಹೇಳಿದೆ. "The founders of this family were two brothers of the name of Hire or elder Malla, and Chikka or the younger Malla, who towards the close of the sixteenth century, came into the district with the Bijapur army as money lenders and settled at Sampgaon. By distinguished services in the field the elder Malla received the little of "Shamsher Jang Bahadur" and obtained a grant of the Sardeshmukhi of the Hubli district."[1] ಮೇಲಿನ ಉಲ್ಲೇಖದಲ್ಲಿ ಹಿರಿಮಲ್ಲಪ್ಪ ಮತ್ತು ಚಿಕ್ಕಮಲ್ಲಪ್ಪ ಇಬ್ಬರೂ ಸಂಪಗಾವಿಯಲ್ಲಿಯೇ ನಿಂತುಕೊಂಡರೂ, ದೇಶಮುಖಿಯಲ್ಲಿರುವ ಕಿತ್ತೂರ ಭಾಗವನ್ನು ಹಸನುಮಾಡಿ ವ್ಯಾಪಾರಕ್ಕೆ ಅನುಕೂಲ ಸ್ಥಳವಾಗುವಂತೆ ತಮ್ಮ ಕಾಲದಲ್ಲಿಯೇ ಮಾಡಿಕೊಂಡಿರಬೇಕು. ಅವರ ಕಾಲದಲ್ಲಿಯೂ ಹುಬ್ಬಳ್ಳಿಯು ಕರ್ನಾಟಕದ ವ್ಯಾಪಾರದ ಪಡಿಮೂಲಿಯಾಗಿತ್ತು. ಸಂಪಗಾವಿಯಿಂದ ಹುಬ್ಬಳ್ಳಿಗೆ ಹೋಗುವ ಹಾದಿಯಲ್ಲಿ ಕಿತ್ತೂರು ಇರುವ ಮೂಲಕ ಅದರ ಮಹತ್ವವು ಹೆಚ್ಚಾಗುತ್ತ ಬಂತು. ಮುಂದೆ ಈ ಮನೆತನದ ಐದನೆಯ ದೇಸಾಯಿಯಾದ ಅಲ್ಲಪ್ಪಗೌಡ ಸರದೇಸಾಯಿಯು ಕಿತ್ತೂರನ್ನೇ ಸಂಸ್ಥಾನದ ರಾಜಧಾನಿಯನ್ನಾಗಿ ಮಾಡಿಕೊಂಡು ರಾಜ್ಯಕಾರಭಾರ ನಡೆಸಿದನು. ಈ ರಾಜಮನೆತನದ ಕೊನೆಯವರೆಗೂ ಕಿತ್ತೂರೇ ರಾಜಧಾನಿಯಾಗಿ ಉಳಿಯಿತು.

ಕಿತ್ತೂರ ರಾಜಮನೆತನದಲ್ಲಿ ಅನೇಕ ವೀರಪುರುಷರು ಆಗಿ ಹೋಗಿದ್ದಾರೆ. ಅವರಲ್ಲಿ ಕಡೆಯವನಾದ. 'ಮಲ್ಲಸರ್ಜ ಪ್ರತಾಪರಾವ್ ಶಮಶೇರ್ ಜಂಗ ಬಹದ್ದೂರ'ನ ಹೆಸರನ್ನು ಜನಪದವು ಹಾಡಿ ಹರಿಸಿದೆ. ಈ ಮಲ್ಲಭೂಪತಿಯು ೩೪ ವರುಷ ಕಿತ್ತೂರ ಸಂಸ್ಥಾನವನ್ನು ಆಳಿದ್ದಾನೆ. ಇವನ ಕಾಲದಲ್ಲಿ ಕಿತ್ತೂರ ಅರಸೊತ್ತಿಗೆಯ ಐಶ್ವರ್ಯವು ಶಿಖರಕ್ಕೆ ಮುಟ್ಟಿತ್ತು. ಸಂಪತ್ತು ಸಮೃದ್ಧಿಯಾದ ಕಿತ್ತೂರ ರಾಜ್ಯದಲ್ಲಿ ಪ್ರಜೆಗಳೂ ಸುಖದಿಂದ ರಾಜಭಕ್ತರಾಗಿದ್ದರು. ಕಿತ್ತೂರ ಆಸ್ಥಾನವು ಕವಿಗಳಿಂದಲ್ಲ. ಪಂಡಿತರಿಂದಲೂ, ಮುತ್ಸದ್ದಿಗಳಿಂದಲೂ, ವೀರಸೇನಾಪತಿಗಳಿಂದಲೂ ತುಂಬಿಹೋಗಿತ್ತು. ಮಲ್ಲಸಜ್ಜನ ಆಶ್ರಯದಲ್ಲಿ ವೆಂಗಿ ಚೆನ್ನಪ್ಪನವರೂ, ಕೊಳಸಿ ರಂಗಾಚಾರ್ಯರೂ, ಮುಳಗುಂದದ ಜವಳಿಶೆಟ್ಟರ ಚೆನ್ನಬಸಪ್ಪನವರೂ ಮೊದಲಾದ ಪಂಡಿತರಿದ್ದರು. ವರರುದ್ರ ಕವಿಯು ಕಿತ್ತೂರ ಸಂಪತ್ತನ್ನು ಹಾಡಿದ್ದಾನೆ. ಇವನು ರಚಿಸಿದ ಹಾಡುಗಬ್ಬಗಳೂ, ಸಾಂಗತ್ಯಗಳೂ, ದುಂದುಭಿಗಳೂ, ಜನತೆಯಲ್ಲಿ ದೊರೆಯುತ್ತವೆ. 'ಕಿತ್ತೂರ ಚೆನ್ನಮ್ಮರಾಣಿ ಐತಿಹಾಸಿಕ ಮಂಡಲ'ದವರು ಅವುಗಳನ್ನು ಸಂಗ್ರಹಮಾಡಹತ್ತಿದ್ದಾರೆ. ಅಲ್ಲದೆ ಈ ಕವಿಯ ಹಲಕೆಲವು ತುಂಡು ಪದ್ಯಗಳನ್ನು ಜನರು ಲಾವಣಿಗೆ ಹೊಂದಿಸಿ ಹಾಡುತ್ತಾರೆ. 'ಸೂಳೆ ಸರ್ಜರ ಪ್ರಣಯ' ಎಂಬ ಶೃಂಗಾರ ಲಾವಣಿಯನ್ನು ಜನರು ಹಾಡುವದನ್ನು ಕೇಳಬಹುದಾಗಿದೆ. 'ಕಿತ್ತೂರ ಬಂಡಾಯ' ಎಂಬ ಪುಸ್ತಕದಲ್ಲಿ ಈ ಲಾವಣಿಯು ಪ್ರಕಟವಾಗಿದೆ. ಅಮೃತೇಶ್ವರನೆಂಬ ಕವಿಯು ಬರೆದ 'ಮಲತರಂಗಿಣಿ' (ಮಲ್ಲೇಂದ್ರ ಮಾನಸೋಲ್ಲಾಸ) ಎಂಬ ಕಾವ್ಯದ ಹಲಕೆಲವು ಭಾಗವು ಈಗ ಉಪಲಬ್ಧವಿದೆ. ಕೆಲವೊಂದನ್ನು ಜನರು ಹಾಡುವುದನ್ನೂ ಕೇಳಬಹುದು. ಮೇಲೆ ಹೇಳಿದ ಪುಸ್ತಕದಲ್ಲಿ ಈ ಕವಿಯ ಕೆಲವು ಗೀತಗಳೂ ಅಚ್ಚಾಗಿವೆ. ಮಲ್ಲಭೂಪನು ಚಿಕ್ಕವನಿರುವಾಗ, ಸಣ್ಣಚೆನ್ನಮಲ್ಲಪ್ಪನವರೂ ಶಿವರುದ್ರಪ್ಪನವರೂ, ರುದ್ರಪ್ಪ ದೊಡವಾಡ ಅವರೂ, ಮಶ್ರೂಲಖಾನರೂ, ಮಡಿವಾಳಪ್ಪ ಕುಂಬಾರ ಅವರೂ, ತಿಗಡಿ ಗುರುನಾಥ ಪಂತ ಮತ್ತು ತಿಮ್ಮಾಜಿ ಪಂತರೂ ಇವರೇ ಮೊದಲಾದ ರಾಜ ಮುತ್ಸದ್ದಿಗಳು ರಾಜ್ಯವನ್ನು ನಡೆಸುತ್ತಿದ್ದರೆಂದು ತಿಳಿದುಬರುತ್ತಿದೆ.[೨] ಟೀಪು ಸುಲ್ತಾನನು ಕಿತ್ತೂರ ಸಂಸ್ಥಾನವನ್ನು ಮುತ್ತಿ ಮಲ್ಲಸರ್ಜ ದೊರೆಯನ್ನೂ ಅವನ ಕೆಲವು ಮುತ್ಸದ್ದಿಗಳನ್ನೂ ಸೆರೆಹಿಡಿದು ಕೊಪ್ಪಳ ಕಿಲ್ಲೆಯಲ್ಲಿ ಒಯ್ದು ಇಟ್ಟದ್ದು ಇತಿಹಾಸ ಪ್ರಸಿದ್ಧವಿದೆ. 'In 1783 Tipu seized Kittur, Nargund, and Ramadurg in Dharwar, and placed a strong Maisur detachment in Kittur."[3] ಈ ಪ್ರಸಂಗವನ್ನು ಕೇಳಿದ ಜನಪದವು ಹಾಡುತ್ತ ಬಂದಿದೆ.

ಕಿತ್ತೂರ ಅರಸರ ಕೋಲು ಪದ

ಕೋಲು ಕೋಲಿನ ಕೋಲ । ಮುತ್ತಿನ ಕೋಲು ಕೋಲಿನ ಕೋಲ
ಕೋಲು ಪದನ ಕೇಳ ಬಾಲಿ । ಕಿತ್ತೂರ ಮಲ್ಲಪ್ಪದೊರೆಗಳ ಮ್ಯಾಲಿ ॥ಪ॥

ಕಿತ್ತೂರ ದೇಸಾಯಿ ಕಿರಿದ । ಅಂವ ಕತ್ತಿಯ ವರಿಯಿಂದ ಹಿರಿದ
ಕಾಲಿಗ್ಹಾಕ್ಯಾನ ಸರಬಿ । ಟೀಪುನ್ನ ಕೈಬೀಸಿ ಜಗಳಕ್ಕ ಕರೆದ ॥೧॥

1. Bombay Gazetteer, Karnatak, Vol. XXI, Kittur and its history
೨. 'ಟೀಪುವಿನ ಬಖರದೊಳಗಿಂದ' ಕಿತ್ತೂರ ಬಂಡಾಯ, ಪು. ೫೫–೫೬
3. Bombay Gazetteer, Karnatak, Vol XXI, ಕಿತ್ತೂರ ಬಂಡಾಯ, ಪು.೪

ಕಿತ್ತೂರ ದೇಸಾಯಿ ಚಿಕ್ಕಪುಟ್ಟ । ಅವಕೈಯಾಗ ಸಿಕ್ಕಬಿಟ್ಟ
ರೈತರಿಗಾದಾವೂ ದುಃಖ । ವೆಂಕಟರಂಗಯ್ಯ ತಾ ಕೂತು ನಕ್ಕ ॥೨॥

ಕಿತ್ತೂರ ದೇಸಾಯಿ ಜೇಲಿನಲ್ಲಿ । ಚೌಥ ಓದರು ತಿರುಗಲಿಲ್ಲ
ಅವರೂಟ ಬೇಡಿದರಿಲ್ಲ । ರಾಗಿ ಬೂದಿಯ ಮೆದ್ದರಲ್ಲಿ ॥೩॥

ಕಿತ್ತೂರ ದೇಸಾಯಿ ತಂದಿ । ತೆಂದಾರು ಟೀಪೂನ ಮಂದಿ
ಹಿಂಬಾಲ ಜನರೆಲ್ಲ ಕಂದಿ । ಎಲ್ಲರು ಕೂಡಿ-ಮುರಿದರೊ ಬಿಂದಿ ॥೪॥

ಕುಂಬಾರ ಮಡಿವಾಳ ಗಟ್ಟಿ । ದೊರೆಬೆನ್ನ ಬಿಡಲಿಲ್ಲ ದಿಟ್ಟ
ತಿರುಗೀದ ಘಟ್ಟ ಬೆಟ್ಟ । ಉಳಿಲಿಲ್ರಿಯಾವ ಮೆಟ್ಟ ॥೫॥

ಊಟ ಬೇಡಿದರ ಇಲ್ಲ । ಹುಣಸಿಯ ತೊಪ್ಪಲ ಮೆದ್ದರಲ್ಲಿ
ಟೀಪುನ ಸೇನೆ ಬೆನ್ನ ಬಿಡಲಿಲ್ಲ । ಹುಡುಕಿದರವರಿಗೆ ಸಿಗಲಿಲ್ಲ ॥೬॥

ಏರಲಾರದ ಗುಡ್ಡ ಏರಿ । ದೊರೆಗಳ ಕಾಲ ಮೇಲೆ ಕಲ್ಲುರುಳಿ
ಪಾದಕ ಬಂದಿತೊ ನೆತ್ತರ । ಮಡಿವಾಳ ಹಿಡಿದ ಕೈಹೊರಳಿ ॥೭॥

ತುಂಬಿದ ಹೊಳೆಯ ಹಾರಿ । ತೇಲಿ ಬರುವ ಕೊಡ್ಡವೇರಿ
ಹರಹರ ಎಂಬದು ಪಾರಾಗಿ । ನಗುನಗುತ ಕಿತ್ತೂರ ಸೇರಿ ॥೮॥

(ಇದೇ ಹಾಡು ವಿಕೃತ ರೂಪದಲ್ಲಿದೆ. 'ಕಿತ್ತೂರ ಬಂಡಾಯ' ಪು. ೧೧೧) ಕಿ.ಕೋ.ಪ.

ಮೇಲೆ ಕಾಣಿಸಿದ ಕೋಲು ಪದದಲ್ಲಿ ಕಿತ್ತೂರ ದೊರೆಯು, ಟಿಪ್ಪು ಸುಲ್ತಾನನ ಕೈಯೊಳಗಿಂದ ಕುಂಬಾರ ಮಡಿವಾಳಪ್ಪನ ಸಹಾಯದಿಂದ ಪಾರಾಗಿ ಬರುವಾಗ, ಸುಲ್ತಾನನ ಸೈನಿಕರಿಗೆ ತಿಳಿಯಲು ಅವರು ಇವರಿಬ್ಬರ ಬೆನ್ನು ಹತ್ತಿದರು. ಮಲ್ಲಸರ್ಜ ದೊರೆಯು ಆ ಸೈನಿಕರ ಕೈಯೊಳಗಿಂದ ಪಾರಾಗಿ, ಉಪವಾಸ, ವನವಾಸ ಭೋಗಿಸಿ ಮಡಿವಾಳಪ್ಪನ ಸಹಾಯದಿಂದ ಕಿತ್ತೂರು ಸೇರಿದನೆಂದು ಹಾಡಿನಲ್ಲಿ ಬಂದಿದೆ. 'ವೆಂಕಟರಂಗಯ್ಯ ತಾ ಕೂತು ನಕ್ಕ' ಎಂಬ ಮಾತಿನಲ್ಲಿಯ ವೆಂಕಟರಂಗಯ್ಯನು ಟಿಪ್ಪು ಸುಲ್ತಾನನು ಕಿತ್ತೂರನ್ನು ಗೆದ್ದು ಅಲ್ಲಿ ನೇಮಿಸಿದ ಒಬ್ಬ ಅಮಲದಾರನಿರಬಹುದೇ? ಜಾನಪದ ಕವಿಯು, ಮಲ್ಲಭೂಪನನ್ನು ಟಿಪ್ಪು ಸುಲ್ತಾನನು ಸೆರೆಹಿಡಿದೊಯ್ಯಲು ಈ ವೆಂಕಟರಂಗಯ್ಯನು ನಕ್ಕನೆಂದೂ ರೈತರಿಗೆ ಅಪಾರ ದುಃಖವಾಯಿತೆಂದೂ ಹಾಡಿದ್ದಾನೆ. ಮಲ್ಲಸರ್ಜನು ಟಿಪ್ಪು ಸುಲ್ತಾನನ ಕೈಯೊಳಗಿಂದ ಪಾರಾಗಿ, ಕಿತ್ತೂರನ್ನು ತಿರುಗಿ ಸಂಪಾದಿಸಿ ಸುಖದಿಂದ ರಾಜ್ಯವಾಳುತ್ತಿರಲು ಅವನಿಗೆ ಪೇಶವಾಯಿಯ ಕಾಟವು ಪ್ರಾರಂಭವಾಯಿತು. ಟೀಪುಸುಲ್ತಾನನ ರಾಜ್ಯವನ್ನು ಇಂಗ್ಲಿಷರೂ, ಮಹಾರಾಷ್ಟ್ರರೂ, ನಿಜಾಮನೂ ಹಂಚಿಕೊಳ್ಳಲು ಕಿತ್ತೂರು ಪೇಶವಾಯಿಯ ಪಾಲಿಗೆ ಬಂತು. ಕಿತ್ತೂರ ಸಂಪತ್ತನ್ನು ಕೇಳಿದ ಮಹಾರಾಷ್ಟ್ರರು, ನಜರಾಣಿಯ ನೆವದಿಂದ ಪ್ರೇಮ ತೋರಿಸಿ ಮಲ್ಲಸರ್ಜನನ್ನು ಪುಣೆಗೆ ಕರೆದುಕೊಂಡು ಹೋಗಿ ಬಂದಿಯಲ್ಲಿಟ್ಟರು. ಇದು ಇತಿಹಾಸದಿಂದ ತಿಳಿದುಬರುತ್ತದೆ. ಇದೇ ಪ್ರಸಂಗವನ್ನು 'ದೊರೆ ಮಲ್ಲಸರ್ಜ ಕಾವ್ಯ'ದಲ್ಲಿ ಕಾಣಬಹುದಾಗಿದೆ. ಸೇಗುಣಸಿ ಗೌಡನು, ಸೇಡು ತೀರಿಸಿಕೊಳ್ಳುವುದಕ್ಕೆ ಪಿತೂರಿಯ ಮಾಡಿ ಪುಣೆಯಲ್ಲಿ ಕಾವಲಿಡಿಸಿದನೆಂದು ಕಾವ್ಯದಲ್ಲಿ ಬಂದಿದೆ. ಗೌಡನಿಗೆ ಗಂಡುಮಾಲೆ ಹುಟ್ಟಲು

ಡೋಲಿಯೊಳಗೆ ಕೂತು ಪೂಣೇವ ಬಿಟ್ಟು ।
ಮಲ್ಲೇಂದ ಭೂಪನ ಪುಣೆದೊಳು ಬಿಟ್ಟು ।
ನಿಲ್ಲದೆ ಸೇಗುಣಶಿ ಪುರಕೆ ತಾ ಹೊರಟು ।
ಗಲ್ಲ ಒಡೆದು ಗೌಡ ಪ್ರಾಣವ ಬಿಟ್ಟ ॥೭೦॥ *-ದೊ-ಮ-ಕಾ-*

ಎಂದು ಬಂದಿದೆ. ಕಿತ್ತೂರರಸನು ಏನು ಪ್ರಯತ್ನ ಮಾಡಿದರೂ ಬಿಡುಗಡೆಯಾಗಲಿಲ್ಲ. "ದೊರೆ ಮಲ್ಲಸರ್ಜನ ದುಂದುಮಿ"ಯಲ್ಲಿ ಕವಿಯು ಇವೇ ಮಾತುಗಳನ್ನು ಆಡುತ್ತಾನೆ.

ಜಾಮೀನಗಳ ಕೊಟ್ಟು । ಶ್ರೀಮಂತರೊಡಗೂಡಿ
ಆ ಮಲ್ಲಸರ್ಜ ಪೋಗುತಲಿ ॥ಹೋಳಿ॥
ಅರವತ್ತು ಸಾವಿರದಳ ಪಟವರ್ಧನರ್ ।
ನೆರೆದು ಶ್ರೀಮಂತ ಸವಾರಿ ಕೂಡಿ ॥ಪುಣೇ॥
ಪುರವ ಪೊಗಲು ರಥತುರಗ ಗಾಡಿ । ಪೊಕ್ಕು ।
ಅರಮನೆಯೊಳು ವಿಸ್ತಾರ ನೋಡಿ ॥
ರಾಜ ರಾಜರು ।
ಮಹಾತೇಜರು ।
ರಾಜಭೋಜರ ॥ಪುಣೇ ॥
ದೂರ ಸುತ್ತ್ವರ ದಾರಿ ಇಳಿಯಲು ದಂಡು । ಕುದುರಿ ।
ಸಾರ್ವಾಟ ನೂಕನುಗ್ಗಂದಿ ಕಂಡು । ಶ್ರೀಮಂ ।

ತರು ಸರದೇಸಾಯಿ ದೇಶ್ಪಾಂಡೆರವರಿಗೆ।
ಹೊರಸಿದರು ಹಣಗಳ ಬೇರಿಜ ಲೆಕ್ಕಮಾಡಿ ॥ ದುಂದುಮೆ ॥
ಆ ಮಲ್ಲಸರ್ಜ ಪೋಗುತಲವನ ಹಿಡಿದು।
ನೇಮಿಸಿದ ಪಾಕಿ ಚೌಕಿಯನು ॥ಹೋಳಿ ॥
ಎಡಬಲ ಕುದುರೆಗಳ ಪಾರ್ಕ್ಯ। ಮಲ್ಲೇಂದ್ರ।
ನಡುಗಿಬಿಟ್ಟನು ತನ್ನ ಧೈರ್ಯ ॥೨೮॥

ಕಿತ್ತೂರ ಭೂಪನು ಪುಣೆಯಲ್ಲಿಯೇ ಉಳಿದನು. ಇತ್ತ

ಕಿತ್ತೂರ ಪುರದೊಳಗೆ ಬತ್ತಿತು ಬಳಗೆಲ್ಲ
ಎತ್ತ ನೋಡಿದರು ಚಿಂತೆಯಲಿ ॥ಹೋ॥

ಎತ್ತ ನೋಡಿದರೂ ಕಿತ್ತೂರಲ್ಲಿ ಅರಸನ ಸಂಬಂಧ ಕಳವಳವೇ ಕಳವಳ! ಮಲ್ಲಸಜ್ಜನಿಗೆ ಮನೆತನದ ನೆನಪಾಗಿ ದಿನವೂ ಕ್ಷೀಣವಾಗುತ್ತ ನಡೆದ. ಅತ್ತ ನೀಲವ್ವನ ಮರಣವಾರ್ತೆಯನ್ನು ಕೇಳಿದ ಮೇಲಂತೂ, ಅರಸನು ಕೈಕಾಲೇ ಕಳೆದುಕೊಳ್ಳಲು, ಪೇಶವಾಯಿಯು ಮಲ್ಲಭೂಪನನ್ನು ಕಿತ್ತೂರಿಗೆ ಕಳುಹಿಸಿಕೊಟ್ಟನು. ಕ್ಷೀಣನಾದ ಅರಸನು ಊರ ಮುಟ್ಟುವವರೆಗೆ ಜೀವ ಹಿಡದಿದ್ದನು. ಕಿತ್ತೂರ ಅರಮನೆಯನ್ನು ಸೇರುವ ಮುನ್ನ ಅರಸನು ಮರಣ ಹೊಂದಿದನು. ಮೇಲೆ ಹೇಳಿದ ಎರಡೂ ಕಾವ್ಯಗಳಲ್ಲಿ ಈ ದುಃಪ್ರಸಂಗಗಳು ಬಲು ವಿಶದವಾಗಿ ವರ್ಣಿಸಲ್ಪಟ್ಟಿವೆ. ಇಂಥ ಪ್ರಸಂಗಗಳನ್ನು ನೋಡಿ, ಕೇಳಿದ ಜನಪದವು ಹಂತಿಯ ಹಾಡುಗಳಲ್ಲಿಯೂ ಹಾಡಿದೆ.

ಕಿತ್ತೂರ ಕಡೆಯರಸು, ಮುತ್ತು ಮಾಣಿಕದೊಡೆಯ
ದತ್ತಕಮಗ ಮಲಸಜ್ಜ। ಸಮಸೂರ
ಸತ್ತ ಕಿತ್ತೂರ ಮುಟ್ಟುದಕೊ ॥

ಈ ಒಂದೇ ಪದ್ಯವು ಮೇಲೆ ಉಲ್ಲೇಖಿಸಿದ ಎಲ್ಲ ಪ್ರಸಂಗಗಳ ಧ್ವನಿಯಿಂದೊಡಗೂಡಿದೆ. ಮಲ್ಲಭೂಪನ ಕೊನೆಗಾಲವು ಕಾರಾಗೃಹದಲ್ಲಿಯೇ ಕಳೆದುಹೋಯಿತು. ಮಾಡುವದೇನು? ಅದು ಕಿತ್ತೂರ ದುರ್ಭಾಗ್ಯವೇ ಸರಿ. ಅರಸನು ತನ್ನ ಸಾವು ನಿಶ್ಚಿತವೆಂದು ತಿಳಿದು ರಾಮಲಿಂಗಪ್ಪನ ಕೈಯಲ್ಲಿ ಕಿತ್ತೂರಿಗೆ ಪತ್ರವನ್ನು ಬರೆದು ಕಳುಹಿಸಿದನೆಂದು "ದೊರೆಮಲ್ಲಸರ್ಜನ ದುಂದುಮಿ"ಯಲ್ಲಿ ಬಂದಿದೆ.

ಚಿಂತಿ ಹತ್ತಲು ದೇಹ। ಕಾಂತಿ ಹೋಗಲು ಮನದ
ಅಂತ ತಿಳಿಸದಲೆ ದೊರೆಯಾಗ ॥ಹೋಳಿ॥
ಸೊರಗಿದ ಮನದಲ್ಲಿ ಮರುಗಿದ ದೇಹವ।
ಕರಗಿದ ಹಿಂವಜ್ವರ ನೆರೆದು ತಾಪ। ಮೂರು।
ವರುಷವಿರಲು ಪುಣೇದಲ್ಲಿ ಭೂಪ। ತರ।
ತರ ರೋಗಾಗಲು ಆದ ನೊಂದರೂಪ ॥
ತಿಳಿದನು ತನ್ನ!
ಮರಣದ ಚಿನ್ಹ।
ಯೋಚನೆಗಳನ್ನು। ಮಾಡಿ
ಹಿರಿಮಗ ಬಾಪು ಸಾಹೇಬಗ ಪಟ್ಟ। ಉಳಿದ।
ತರಳರಿಗ್ಹೊಂಗಲ ತಿಗಡಿ ಕೊಟ್ಟ। ಉತ್ರಾ।
ಬರೆದಾಗ ರಾಮಲಿಂಗಪ್ಪನ ಕಳುಹಲು।
ಬರಲು ಪುರದೊಳು ತಯ್ಯಾರ ಮಾಡಿದರಾಗ ॥ ದುಂದುಮೆ ॥
ಅಂತ ತಿಳಿಸದಲೆ ದೊರೆಯಾಗ ಬೇಕೆನುತ।
ಬರೆದ ಪತ್ರವನು ತೋರಿಸುತೆ ॥ ಹೋಳಿ ॥
ಸುದ್ದಿ ತಿಳಿಯಿರೆಂದು ಪೇಳೆ। ಬಳಗೆಲ್ಲಾ।
ಮುದ್ದ್ಯಾಯಿತಪನನ್ನು ಕೇಳಿ ॥೩॥ *-ದೊ-ಮ-ದುಂ-*

ಎಂದು ಬರೆದ ಪತ್ರವೇ ಕೊನೆಯ ಮೃತ್ಯುಪತ್ರವಾಯಿತು.

ಮಲ್ಲಸರ್ಜನ ಮರಣದ ನಂತರ, ಅವನ ಮಗನು ಶಿವಲಿಂಗರುದ್ರ (ಬಾಪುಸಾಹೇಬ)ನು ಕಿತ್ತೂರ ಪಟ್ಟವನ್ನೇರಿದನು. ಆದರೆ ವಿಧಿಯ ಮನಸ್ಸಿಗೆ ಅದೂ ಬರಲಿಲ್ಲ. 'ಶಿವಲಿಂಗರುದ್ರನಿಗೆ ಸಾವು ಕೂಡಲೆ ಬಂತು' ಎಂದು ಜಾನಪದ ಕವಿಯು ಹಾಡಿದ್ದಾನೆ. ಅವನ ಅಕಾಲ ಮರಣದಿಂದ ಕಿತ್ತೂರ ದುರಂತವೇ ಪ್ರಾರಂಭವಾಯಿತು. ಶಿವಲಿಂಗರುದ್ರನಿಗೆ ಗಂಡುಮಕ್ಕಳಿದ್ದಿಲ್ಲ. ಅವನ ಇಬ್ಬರು ತಮ್ಮಂದಿರು-ವೀರಪ್ಪ ದೇಸಾಯಿ, ಬಾಳಾಸಾಹೇಬರು-ಅರಸನಕಿಂತಲೂ ಮೊದಲೇ ಅಕಾಲ ಮರಣಹೊಂದಿದ್ದರು. ವಿಧವೆಯರಾದ ತಾಯಂದಿರಿಗೆ (ಚೆನ್ನವ್ವ ಹಾಗೂ ರುದ್ರವ್ವ) ಅತಿ ಸಂತಾಪವಾಯಿತು. ಆಗ ಅರಮನೆಯಲ್ಲಿ ಉಳಿದವರೆಂದರೆ ಚಿಂತೆಯ ಚಿತೆಯಲ್ಲಿ ಕುದಿಯುತ್ತಿರುವ ಮೂವರು ವಿಧವೆಯರು. ಹೇಗಾದರೂ ರಾಜ್ಯಕಾರಭಾರವು ಮುಂದೆ ಸಾಗಬೇಕಲ್ಲವೇ? ಶಿವಲಿಂಗರುದ್ರನು ಆಕಸ್ಮಿಕ ಮರಣಹೊಂದಲು, ದತ್ತಕ

ತೆಗೆದುಕೊಳ್ಳುವ ಹವ್ಯಾಸಕ್ಕೆ ಹೋದಂತೆ ಕಂಡುಬರುವುದಿಲ್ಲ. ಆಗಿನ ಕಾರಭಾರಿಗಳೂ ಊರಹಿರಿಯರೂ ಕೂಡಿ ದತ್ತಕದ ಯೋಜನೆಯನ್ನು ಮಾಡಿದಂತೆ ಕಂಡುಬರುವುದು. ಚೆನ್ನವ್ವ ರಾಣಿಯ ಅನುಮತಿಯಂತೆ ಈ ಜನರು ಮಾಸಮರಡಿಯ ಗೌಡರ ಮಗನನ್ನು ದತ್ತಕ ಮಾಡಿಕೊಂಡು ಧಾರವಾಡದಲ್ಲಿಯ ಇಂಗ್ಲಿಷರ ರಾಯಭಾರಿ (Political agent) ಥ್ಯಾಕರೆಗೆ ತಿಳುಹಿಸಿದರು. ಆದರೆ ದತ್ತಕದ ಸಂಬಂಧದೊಡನೆ ವಿಧವೆಯರಲ್ಲಿ ಅಸಂತುಷ್ಟತೆಯೂ ಅರಮನೆಯಲ್ಲಿ ಬೆಳೆಯುತ್ತಲಿತ್ತು:

ಕ್ರಿ.ಶ. ೧೮೧೮ರಲ್ಲಿ ಪೇಶವಾಯಿಯ ರಾಜ್ಯವು ಮುಳಗಿದ ಬಳಿಕ ಕಿತ್ತೂರು ಇಂಗ್ಲಿಷರ ಆಡಳಿತೆಯ ಸಂಸ್ಥಾನವಾಯಿತು. ಇದನ್ನರಿತು ಹಲಕೆಲವರು ಇಂಗ್ಲಿಷರಿಗೆ ಕಿತ್ತೂರ ಸ್ಥಿತಿಗತಿಯನ್ನು ಒಳಒಳಗೆ ತಿಳಿಸಿದರು. ಥ್ಯಾಕರೆಯು ಕೂಡಲೇ ಕಿತ್ತೂರಿಗೆ ಬಂದ. ಅವನು ಬರುವದರಲ್ಲಿಯೇ ಕಿತ್ತೂರ ಅರಮನೆಯಲ್ಲಿ ಸೇರಿದವರು ಆಗಲೇ ವಿಷ ಹರಡಿದ್ದರು. ರುದ್ರಮ್ಮನವರೂ, ಚೆನ್ನಮ್ಮನವರೂ ಸಿಡಿದು ಕಡಿದಾಡಲು ಒಡಕು ಹುಟ್ಟಿತ್ತು. ವೀರ ಚೆನ್ನಮ್ಮ ರಾಣಿಯು ರುದ್ರಮ್ಮನನ್ನೂ, ಸೊಸೆ ಈರವ್ವನನ್ನೂ ಬದಿಗಿಟ್ಟು ಕಾರಭಾರಿಗಳ ಸಹಾಯದಿಂದ ದತ್ತಕ ಮಾಡಿಕೊಂಡು ರಾಜ್ಯಕಾರಭಾರ ಸಾಗಿಸಿದ್ದಳು.

ಮುಂದೆನ್ನ ಗತಿಯೇನೊ ಪುತ್ರಾ। ತಲೆಯಮ್ಯಾಲೆ
ಹಿಡಿಸಲ್ಯಾರಿಗೆ ಇನ್ನು ಛತ್ರಾ॥ *-ದೊ-ಮ-ದುಂ-*

ಎಂದು ದುಃಖಿಸುವ ಚೆನ್ನಮ್ಮನು ಒಡತಿ ಆಗಿ ನಾಡ ಆಳಹತ್ತಿದಳು. ಥ್ಯಾಕರೆ ಸಾಹೇಬನು ಎಷ್ಟು ಪ್ರಯತ್ನ ಪಟ್ಟರೂ ಕಿತ್ತೂರಲ್ಲಿ ಅವನ ಆಟ ನಡೆಯಲಿಲ್ಲ. ಅವನು ಧಾರವಾಡದ 'ವೆಂಕಟರಾಮ'ನೆಂಬ ಬ್ರಾಹ್ಮಣ ಮುತ್ಸದ್ದಿಯ ಸಹಾಯದಿಂದ ಕಿತ್ತೂರಲ್ಲಿ ಒಡಕು ಹುಟ್ಟಿಸಿ ಕಾರಭಾರಿಗಳ ಕೂಡ ಒಳಸಂಚು ಹೂಡಿದಂತೆ ಕಾಣುತ್ತದೆ. "ಕೂಡಲೇ ಥ್ಯಾಕರೇನು ಚೆನ್ನಮ್ಮನ ಹೆಸರಿನಿಂದ ಒಂದು ಪ್ರಕಟನೆಯನ್ನು ತೆಗೆದು ನಮ್ಮ ಕಡೆಯಿಂದ ವೆಂಕಟರಾಮಯ್ಯನು ಬರುತ್ತಾನೆ; ಅವನೂ ಕನ್ನೂರ ಮಲ್ಲಪ್ಪನೂ ಕೂಡಿಯೇ ಯಾವತ್ತು ಲೆಕ್ಕಪತ್ರ, ಬೊಕ್ಕಸಕೋಟಿ, ಇವನ್ನೆಲ್ಲ ತಪಾಸುಮಾಡಿ ಶಿಲ್ಕು ಮೊದಲಾದದ್ದನ್ನು ತಿಳಿಸಬೇಕೆಂದು ಅಪ್ಪಣೆ ಕೊಟ್ಟನು."[೪] ಈ ವೆಂಕಟರಾಮಯ್ಯನಿಗೆ ಹಂತಿಯ ಹಾಡಿನಲ್ಲಿ ಜಾನಪದ ಕವಿಯು "ಧಾರ್ವಾಡ ವೆಂಕಾಟ" ಎಂದು ಕರೆದಿದ್ದಾನೆ. ಅವನೇ ದಾರೆಳಿಲೆ ಸಿರಕೊಯ್ದನೆಂದೂ, ಕಾರಭಾರಿಗಳು ಅವನ ಒಳಸಂಚಿಗೆ ಆಶೆಮಾಡಿ ಮೋಸಹೋಗಿ ಘಾತಕರಾದರೆಂದೂ, ಕಿತ್ತೂರ ಕದನಾಗಿ ಚೂರುಚೂರಾಗಿ ಹೋಯಿತೆಂದು ಉಸುರು ಹಾಕಿದ್ದಾನೆ. ಆ ಒಳಸಂಚಿಗೆ ಕಿವಿಗೊಟ್ಟು ಥ್ಯಾಕರೆ ಸಾಹೇಬನಿಗೆ ಸಮ್ಮತಿಯಿತ್ತ ಕಾರಭಾರಿಗಳಾದ ಕನ್ನೂರ ಹಾಗೂ ಕಲ್ಲೂರ ಮಲ್ಲಪ್ಪ ಅವರಿಗೆ ಜನಪದವು ಶಾಪ ಕೊಟ್ಟಿದೆ. 'ಕನ್ನೂರ ಮಲ್ಲನಿಗೆ ತನ್ನಿ ಬ್ಯಾನ್ಹತ್ತಲಿ,' 'ಕಲ್ಲೂರ ಮಲ್ಲನಿಗೆ, ಎಲ್ಲಾರು ಒದೆಯಲಿ। ಗುಲ್ಲಗಂಟೇರು ಉಗುಳಲಿ।" ಎಂದು ಕಟುತರವಾಗಿ, ಅವರ 'ಗುನ್ನೆ ಮಾಡುದಕೆ ಪುಸಲಿಟ್ಟ,' 'ಸಲ್ಲಕೊಟ್ಟಾನೊ ಮುಕ್ತಾಕೊ' ಈ ಕೃತಿಗಳಿಗೆ ತಳಮಳಿಸಿ, ಸಹಿಸದೆ ದೇಶದ್ರೋಹಿಗಳಿಗೆ ಆಗಬೇಕಾದ ಶಿಕ್ಷೆಯನ್ನು, ಜನಪದವು ಯಥಾರ್ಥವಾಗಿ ಹಾಡಿದೆ.

ಇದಾವುದೂ ಚೆನ್ನಮ್ಮ ರಾಣಿಯ ಮನಸ್ಸಿಗೆ ಬರಲಿಲ್ಲ. ಕೇಸರಣಿಯಂತೆ ಕೆರಳಿದಳು. ನೆಚ್ಚಿನ ನಾಯಕರನ್ನು ಕೂಡಿಸಿಕೊಂಡು ಕಿತ್ತೂರಿಗೆ ಬಂದ ಆಪತ್ತನ್ನು ದೂರ ಮಾಡಲು ತಾನೇ ಟೊಂಕ ಕಟ್ಟಿ ರಣಕ್ಕಿಳಿದಳು. ಗಂಡನನ್ನು ಕಳೆದುಕೊಂಡು ಬೆಂಡಾದ ಆ ಹೆಣ್ಣು ಜೀವವು ಗಂಡೆದೆಯಾಗಿ ಸಂಸ್ಥಾನದಲ್ಲಿಯ ಅರಾಜಕತೆಯನ್ನು ಸರಿಮಾಡಲು, ಮುನ್ನುಗ್ಗಿದಳು. ಕಿತ್ತೂರ ಸಂಸ್ಥಾನವನ್ನೇ ನುಂಗಬೇಕೆಂದು ಸಾಹಸದಲ್ಲಿದ್ದ ಕುಂಪಣಿ ಸರಕಾರವು ಸುಮ್ಮನಿರಬಹುದೇ? ಥ್ಯಾಕರೆಯು ಧಾರವಾಡದಿಂದ ದಂಡನ್ನು ಕೂಡಿಸಿಕೊಂಡು ಕಿತ್ತೂರ ಮುತ್ತಲು ಬಂದ. ತಮ್ಮ ಪೂರ್ವಸಿದ್ಧತೆಯಲ್ಲಿದ್ದ ಕಿತ್ತೂರ ವೀರರು, ಇಂಗ್ಲಿಷರ ದಂಡಿನ ಮೇಲೆ ಬೀಳಲು ಅದು ತಡೆಯದೆ 'ರಂಪರಂಪೆಂದು ಓಡಿಹೋಯಿತು'. 'ಅಮಟೂರ ಬಾಳು' ಎಂಬ ವೀರನಾಯಕನು ಥ್ಯಾಕರೆಗೆ ಗುಂಡಿಟ್ಟ. ಥ್ಯಾಕರೆಯು ರಣದಲ್ಲಿ ಬಿದ್ದು ಮಡಿದ. ಅನೇಕ ಇಂಗ್ಲಿಷ ಸರದಾರರು ಕೈಸೆರೆಯಾದರು. ಕಿತ್ತೂರಿಗೇನೂ ತುರತು ಜಯ ದೊರೆಯಿತು. ಆದರೆ ಬಂಡಾಯ ಮಾತ್ರ ಕುಂದಲಿಲ್ಲ. ಅದು ಮತ್ತಿಷ್ಟು ವಿಕರಾಳ ರೂಪವನ್ನೇ ತಾಳಿತು. ಈ ಸುದ್ದಿಯು ಬೆಳಗಾವಿಯಲ್ಲಿ ಕಮೀಶನರನಾಗಿದ್ದ 'ಚೆಪ್ಲಿನ್' ಸಾಹೇಬರಿಗೆ ತಿಳಿಯಲು, ಕಿತ್ತೂರ ಸಂಸ್ಥಾನವನ್ನೇ ಮುರಿಯಬೇಕೆಂದು ದೊಡ್ಡ ದಂಡನ್ನು ಕೂಡಿಸಿಕೊಂಡು ಮರುದಿನವೇ ಕಿತ್ತೂರನ್ನು ಮುತ್ತಿದ. ಚೆಪ್ಲಿನ್ನನ ದಂಡಿಗೆ ಸಹಾಯ ನೀಡಲು ಜಮಖಂಡಿ ದೇಸಾಯಿಯು ಬಂದು ಕೂಡಿದನೆಂದು ಜನಪದವು ಹಾಡಿದೆ.

ಜಮಖಂಡಿ ದೇಸಾಯಿ ಯಮಕೀಲೆ ಕೂಡೀದ
ಸಮಯಕ ಚೆಪ್ಲೀನ ದಂಡೀಗೊ। ಕಿತ್ತೂರ
ಸಮನಾಗ್ಯೆಸೀರಿ ಹೊತ್ತೊಯ್ದೊ॥

ಎಂದು ಬರುವ ಈ ಪದ್ಯವು ಜಮಖಂಡಿ ದೇಸಾಯಿಯು ಕಿತ್ತೂರ ರಾಜ್ಯವನ್ನು ಹಾಳುಮಾಡಲು 'ಚೆಪ್ಲೀನ'ನ ದಂಡಿಗೆ ಕೂಡಿದನೆಂದು ಸಾರಿ ಹೇಳುತ್ತದೆ. ಈಗಲೂ ಜಮಖಂಡಿ ಸಂಸ್ಥಾನಿಕನ ಖಜಾನಿಯಲ್ಲಿರುವ ಕಿತ್ತೂರ ಚೆನ್ನಮ್ಮನ ವಜ್ರಲಿಂಗವೂ, ಮುತ್ತಿನ ಆಭರಣಗಳೂ ಮಾಣಿಕ ಪಚ್ಚದ ಉಂಗುರುಗಳೇ ಇದಕ್ಕೆ ಬಲವಾದ ಸಾಕ್ಷಿ. ಹೀಗೆ ಸಹಾಯ ದೊರಕಿಸಿದ 'ಚೆಪ್ಲಿನ್' ಸಾಹೇಬನು ಒಳಹಾದಿಯಿಂದ ಕಿತ್ತೂರನ್ನು ಮುತ್ತುವ ಮುನ್ನವೇ 'ವೆಂಕಟರಾಮನು' ಹೂಡಿದ ಒಳಸಂಚು ಫಲಕಾರಿಯಾಗಿತ್ತು. ಕಾರಭಾರಿಗಳನ್ನು ಶಂಕಿಸಿ ಜನರು ಅಗಸಿಯ ಬಾಗಿಲಲ್ಲಿಯೇ ಕಡಿದು ಹಾಕಿದ್ದರು. ಕಿತ್ತೂರ ಬಂಟರಿಗೆ ಈಗ ಮಾರ್ಗದರ್ಶಕರು ಇಲ್ಲದಂತಾಯಿತು. ಅವರ ದುರ್ದೈವವು ಕೂಡಿಬಂತು. ಆರೋ ಪುಣ್ಯಾತ್ಮರು ಮದ್ದಿನಲ್ಲಿ ರಾಗಿಯನ್ನು ಬೆರೆಸಿದ್ದರು.[೫] "ಕಿತ್ತೂರ ನಸಿಬ ಹಾರ್‍ಯಾವೊ ಹುಸಿಗುಂಡೊ।" ಎಂದು ಜನಪದವು

೪. ಕಿತ್ತೂರ ಬಂಡಾಯ, ಪು. ೧೧೫

ಕನಿಕರಬಟ್ಟಿದೆ. ಕಿತ್ತೂರ ಪತನವಾಯಿತು. 'ಚಿಪ್ಲೀನ'ನ ದಂಡು ಕಿತ್ತೂರ ಹೊಕ್ಕು ಚೆನ್ನಮ್ಮ ರಾಣಿಯನ್ನು ಹುಡುಕಲು ಪ್ರಾರಂಭಿಸಿತು. ಹಲಕೆಲವು ವೀರರು ಕಾದು ಮಡಿದರು. ಕಿತ್ತೂರ ಸಂಪತ್ತು ಇಂಗ್ಲಿಷರ ವಶವಾಯಿತು.

ಕಿತ್ತೂರ ಕಿಲ್ಲೇಕ, ಹತ್ತು ಕಾಲ್ನಿಚ್ಚಣಿಕಿ
ಕೊತ್ತ ಕೊತ್ತಲಕ ಕೈಪಂಜು । ಹಿಡಕೊಂಡು
ಸುತ್ತ ಚೆನ್ನವ್ನ ಹುಡಿಕ್ಯಾರೊ ॥

ಹೀಗೆ ಕೈ ಮೀರಲು ಕಿತ್ತೂರ ರಾಣಿಯು ಪರಾರಿಯಾಗಿದ್ದಳು. ಇರುಳೆಲ್ಲ ಹುಡುಕಿದರೂ ಅವರಿಗೆ ಅವಳು ಸಿಗಲಿಲ್ಲ. ಅಸಹಾಯಳಾಗಿ ಬತ್ತಲಗುದುರಿಯನ್ನೇರಿ ಹೋಗುತ್ತಿರಲು ಹೊಂಗಲದ ಗಡಿಯಲ್ಲಿ ಇಂಗ್ಲಿಷರ ದಂಡು ಅವಳನ್ನು ಹಿಡಿಯಿತು. ಇತ್ತ ಕಿತ್ತೂರ ಅರಮನೆಯಲ್ಲಿ ಈರವ್ವನನ್ನು ಕೈಸೆರೆ ಮಾಡಿ ಅವಳನ್ನೂ, ಚೆನ್ನಮ್ಮ ರಾಣಿಯನ್ನೂ ಇಂಗ್ಲಿಷರು ಹೊಂಗಲದ ಕಿಲ್ಲೆಯಲ್ಲಿಟ್ಟು ಸುತ್ತಲೂ ಹಗಲಿರುಳು ಕಾವಲಿಟ್ಟರು. ಇಲ್ಲಿಗೆ ಕಿತ್ತೂರ ಮುತ್ತಿಗೆಯ ಕೊನೆಯಾಯಿತು. ಇಂಗ್ಲಿಷರ ಈ ಕೃತಿಗಳಿಗೆ ಜನವು ಎಳ್ಳಷ್ಟು ಸೇರಲಿಲ್ಲ. ಆಗ ದೇಶದಲ್ಲಿ ಎತ್ತ ನೋಡಿದರೂ ಜನತೆಯಲ್ಲಿ ತಳಮಳವೇ ಕುಣಿದಾಡುತ್ತಿತ್ತು; ಸುತ್ತಲೂ ಅಶಾಂತತೆ, ಅಸಮಾಧಾನ, ಕುನಸು ಮೊದಲಾದವುಗಳೇ ಒಳಗೊಳಗೆ ಹುದುಗಿ ಜನರು ಸಮಯವನ್ನು ಕಾಯಹತ್ತಿದರು.

ಕ್ರಿ.ಶ. ೧೮೨೪ರಲ್ಲಿ ಕೊನೆಗೊಂಡ ಕಿತ್ತೂರ ಬಂಡಾಯದ ಕುದಿಯು ಮತ್ತೊಮ್ಮೆ ೧೮೨೯ರಲ್ಲಿ ಉಕ್ಕಿ ಬಂತು. ಮೊದಲಿನಿಂದಲೂ ದೇಶಗತಿಯು ಅನೇಕ ಬಡವರನ್ನು ಸಾಕಿ ಸಲಹುತ್ತ ಬಂದಿತ್ತು. ದೇಸಗತಿಯನ್ನು ಕುಂಪಣಿ ಸರಕಾರವು ಮುಗ್ಗಿಸಲು, ಅದರ ಉಪ್ಪುಂಡ ಬಂಟರು ಒಳಗೊಳಗೇ ತಪ್ತರಾಗಿದ್ದರು. ಸಂಗೊಳ್ಳಿ ರಾಯಣ್ಣನು ಸಂಗೊಳ್ಳಿಯ ಕುರುಬ; ಕಿತ್ತೂರ ಸಂಸ್ಥಾನದ ಉಪ್ಪುಂಡ ಓಲೆಕಾರ. ಕಿತ್ತೂರ ಪ್ರಕರಣದ ನಂತರ ರಾಜಮನೆತನದ ದುರಂತವನ್ನು ನೋಡಿ, ಮರಮರನೆ ಮರುಗಿದನು. ಗುಪ್ತರೀತಿಯಿಂದ ಕಿತ್ತೂರ ಅರಸಿಯರಿಗೆ ಹೊಂಗಲದಲ್ಲಿ ಭೆಟ್ಟಿಯಾಗಿ ಕಿತ್ತೂರ ರಾಜ್ಯ ಪ್ರತಿಷ್ಠಾಪನೆ ಮಾಡುವೆನೆಂದು ಆಣಿಮಾಡಿ ಹಲಕೆಲವು ಜನರನ್ನು ಕಟ್ಟಿಕೊಂಡು ಕುಂಪಣಿಯವರ ವಿರುದ್ಧ ಬಂಡು ಹೂಡಿದನು.

ಮುಕ್ಕಣ್ಣಗತಿಯೆಂದು, ಸಿಕ್ಕು ಸೆರೆಯಾಗಿದ್ದು
ಚಿಕ್ಕ ಅಳತಾಳೊ ಈರವ್ವ । ರಾಯಣ್ಣ
ಅಕ್ಕ ನಿಮ್ಮುಪ್ಪು ಈ ರಾಯೊ ॥
ಗೆದ್ದು ಕಿತ್ತೂರ ತಂದು, ಉದ್ದು ಬೀಳುವೆ ತಾಯಿ
ಕದ್ದ ಮಾತಲ್ಲ ನಿಮ್ಮಾಣೆ । ಇಲದಿರಕ
ಬಿದ್ದು ಹೋಗುವೆ ರಣದಾಗೊ ॥
ಸಂಗೊಳ್ಳಿ ರಾಯಣ್ಣ, ಹಂಗ್ಹರಿದ ದಳವಾಯಿ
ದಂಗೆ ಎಬ್ಬಿಸಿದ ನಾಡಾಗೊ । ಕಿತ್ತೂರ
ಕಂಗೆಟ್ಟು ಜನರು ಕೂಡ್ಯಾರೊ ॥

ಎಂದು ಸಂಭವಿಸಿದ ಸಂಗತಿಗಳನ್ನು ಜನಪದವು ಹಂತಿಯ ಹಾಡಿನಲ್ಲಿ ಹಾಡಿದೆ.

'ದೊರೆ ಮಲ್ಲಸರ್ಜನ ದುಂದುಮಿ'ಯಲ್ಲಿಯೂ ಈ ಪ್ರಸಂಗವು ಬಲುವಿಶದವಾಗಿ 'ಕವಿ ಹೊಂಗಲದ ಬಸವ'ನಿಂದ ಹೇಳಲ್ಪಟ್ಟಿವೆ.

ಹೊಂಗಲದ ಪುರುದೊಳಗ । ಸಂಗತಿಯತ್ತಿಯು ಸೊಸಿಯು ।
ಅಂಗಜಾರಿಯನು ಭಜಿಸುತಲಿ ॥ ಹೋಳಿ ॥
ಮೂರೆರಡೊರುಷವು । ಅರಮನೆಯೊಳು ಸೊಸೆ ।
ಯರ ಕೂಡಿ ಮನದೊಳು ಮರುಗುತಲಿ । ಪತಿ ।
ದೊರಿ ಮಲ್ಲಸರ್ಜನ ನೆನೆಯುತಲಿ । ಕಿತ್ತೂ
ರರಮನಿ ದವಲತ್ತು ಗಳೆವುತಲಿ ॥
ದುಃಖಿಸಿರುವುತೆ ।
ಮಕ್ಕಳ ಮರೆವುತೆ ।
ತೆಕ್ಕಿ ಸೈಳವುತೆ । ಇಷ್ಟು ।
ಮರಗನೋಡಲು, ರಾಯಣ್ಣನೆಂಬವನು । ತಾಯಿ ।
ಚರಣಕೆರಗಿ ಹಲ್ಲು ತಿಂಬುವನು । ಕುಂಪಣಿ
ಸರದಾರರೆಲ್ಲ ಶಿರ । ಕೊರೆಯದಿರ್ದರೆ ನಾನು ।
ಕುರುಬನಲ್ಲೆನುತಾಗ । ಹಿರಿದ ಖಡ್ಗವನು ॥ ದುಂದುಮೆ ॥
ಅಂಗಜಾರಿಯನು ಭಜಿಸುತಲಿ ನಡದಾನು ।
ಕಂಗಳಲಿ ಕಿಡಿಗಳುದುರಿಸುತೆ ॥ ಹೋಳಿ ॥

೫. ಗೋವಿಂದಭಟ್ಟನು ಸಾಹಸ ಮಾಡಿದನೆಂದು ಜನಪದದಲ್ಲಿ ಪ್ರತೀತಿಯಿದೆ.

ಉಪ್ಪುಂಡಿವರನಿನ್ನು ನೋಡಿ । ಇರಬೇಕೆಂ ।
ದಪ್ಪನೆದೆಯ ಬಡಿದಾಡಿ ॥ ॥೮೫॥ -ದೊ-ಮ-ದುಂ-

ಬಿಚ್ಚಗತ್ತಿಯ ರಾಯಣ್ಣನು ಮುನ್ನುಗ್ಗಿದ. ಬಂಟತನವು ಎದೆ ತುಂಬಿ ಬಂತು. ಅವನ ದಬ್ಬಾಳಿಕೆಯು ಸುತ್ತಲೂ ಹಬ್ಬಿತು.

ಮಂದಿ ಕೂಡಿಸಿ ಜನರ । ಹೊಂದಗೂಡುತೆ ನಡೆದ ।
ದಂದಲವ ನಡಿಸಿ ಲೋಕದೊಳು ॥ ಹೋಳಿ ॥
ಎಡಬಲ ನೋಡುತೆ । ನಡೆದ ಕಿತ್ತೂರ ಪುರ
ದೊಡೆಯ ನಡಿಗಳನ್ನು ಸ್ತುತಿ ಮಾಡುತೆ । ನಂದ ।
ಗಡ ಖಾನಾಪೂರದಿ ದಳವು ಕೂಡೂತೆ । ಅವ
ರೊಡಗೂಡಿ ಊರುಗಳನು ಸುಡುತೆ ॥
ಗಡಬಡಿಸುತೆ ।
ನಾಡ ನಡಗುತೆ ।
ಕೇಡ ಮಾಡುತೆ ॥ ಹೊಂಟ
ರಡವಿ ಊರೋಳು ಮಂದೀ ತಡಿವುತಲಿ । ಬಂದೂ
ಕದರಿ ಸೆದೆಯೊಳ್‌ಮದ್ದು ಜಡಿವುತಲಿ । ನಿಂತು ।
ಹೊಡೆಯಲೊಡಲ ರಕ್ತ । ಸಡಲಿನೆಲದಿ ಬಿದ್ದು ।
ಬಡಕೊಂಡೊದರಿ ಬಾಯಿ । ಬಿಡುತಳಲುತಲ ॥ ದುಂದುಮೆ ॥
ದಂದಲವ ನಡಿಸಿ ಲೋಕದೊಳು ರಾಯಣ್ಣನು ।
ಬಂದಿಯೊಳಗಿರಿಸಿ ಜನರನ್ನು ॥
ಕುಂಪಣಿ ಸರದಾರ್‍ರು ಕೇಳಿ । ಹುಡಕುತೆ ।
ಗುಂಪಾಗ್ಹೋಗಲು ಕೋಪತಾಳಿ ॥ ದುಂದುಮೆ ॥ ॥೮೬॥-ದೊ-ಮ-ದುಂ-

ಹೀಗೆ ರಾಯಣ್ಣನ ಬಂಡಾಯವು ಕಾಡಗಿಚ್ಚಿನಂತೆ ಸುತ್ತು ಹಬ್ಬಿತು.

"In 1829, a widespread rising took plase at Kittur. This rising was headed by one Rayappa, a village watchman of Songoli, a retainer of the Kittur Desai, who had received a pardon for his share in the 1824 out break. Rendered desperate by the confiscation of his service land and exasperated by quarrel with the Clerk of his village, Rayappa gathered many disaffected people round him, and taking the boy who was alleged to have been adopted by the late Desai, attempted to raise a revolt with the object of restoring Kittur independence . The Desais of Kittur had been very popular especially with the poorer classes of their people.[6]" ಅದೇ ಕಿತ್ತೂರನ್ನು ಗೆದ್ದು ತಮ್ಮ ಅಧಿಕಾರವನ್ನು ಇನ್ನೂ ಸ್ಥಿರಗೊಳಿಸಿದ 'ಕುಂಪಣಿ' ಸರಕಾರವು ರಾಯಣ್ಣನ ದಂಗೆಗೆ ಅಂಜಿ ಹೌಹಾರಿತು. ಆ ದಂಗೆಗೆ ಮೂಲ ಕಾರಣರಾದ ಜೀವಂತ ದೇಸಾಯಣಿಯರ ಪ್ರಶ್ನೆಯು ಅವರನ್ನು ಆಗ ಇದಿರಿಸಿತು. ಸರಕಾರವು ಅವರನ್ನು ಹೊಂಗಲದಲ್ಲಿಟ್ಟರೆ, ವಾತಾವರಣವು ಮತ್ತಷ್ಟು ಪ್ರಕ್ಷುಬ್ಧವಾಗುವದೆಂದು ಅಂಜಿ, ಅಗಲಿಸಿ ಹದ್ದು ಪಾರು ಮಾಡಬೇಕೆಂದು ಆಲೋಚಿಸಿ, ಅದರಂತೆ ಹುಕುಮುಗಳನ್ನು ಹೊರಡಿಸಿತು. ಆಗ ಧಾರವಾಡದ ಕಲೆಕ್ಟರನಾದ 'J Nisbet'ನು ತನ್ನ ಮೇಲಾಧಿಕಾರಿಗಳಿಗೆ ಬರೆದ ಪತ್ರದಲ್ಲಿ, "Every day brings to light some fresh disclosure to confirm the belief that the whole province is united in common cause and that the people have by some means been inspired with the ideas that it may be possible to recover their independence." ಮುಂದಿನ ಮತ್ತೊಂದು ಪತ್ರದಲ್ಲಿ "It is with concern that I am forced to think that I am now firmly convinced of the guill of the Kittur Desainee as well as of many servants of the late Desainee and that the people of the country form a strong attachment to their former Government are ready and willing to obey any direction from them which they receive."[7] ಕುಂಪಣಿ ಸರಕಾರವು ಈ ಎಲ್ಲ ಸಂಗತಿಗಳನ್ನರಿತು ಲಗುಬಗೆಯಿಂದ ದೇಸಾಯಣಿಯರನ್ನು ಹದ್ದು ಪಾರುಮಾಡಲು ಹುಕುಮು ಕಳಿಸಿತು. ಮೊದಲು ದೇಸಾಯಣಿ ಈರವ್ವನನ್ನು ಅಹಮ್ಮದ ನಗರಿಗೆ ಕಳುಹಿಸಬೇಕೆಂದೂ, ಅಲ್ಲಿಂದ ಅವಳನ್ನು 'ಮಲ್ಲಿಗಾಂವ' ಕೋಟೆಯಲ್ಲಿ ಬಂದಿಯಾಗಿಡಬೇಕೆಂದೂ ತಿಳಿದುಬರುವುದು.

From the Chief Secretary - Narris to J. Nisbet esq. Prinicipal Collector in Southern Maratha Country, 21st June 1830.

Sir,

With reference to my letter of 18th inst., I am directed by the Hon. Government to inform you that it has been resolved that the ex-Desainee of Kittore shall be confirmed in the fort of Malligaon; you will be prepared to make the requisite communication accordingly through the proper chanel to the officer commanding the party escorting her.[8]

Dhapoore sd. / C. Narris
21st June 1830 Chief Secretary

---

6. Bombay Gazetteer, Karnatak, Vol. XXI, p.p. 404
7.8. Notes drafted by Shri R.L. Patil (Tallur) on his study tour abroad regarding the history of Kittore.

'ಕುಂಪಣಿ' ಸರಕಾರದಿಂದ ಬಂದ ಹುಕುಮನ್ನು ಮನ್ನಿಸಿ ಧಾರವಾಡದ ಕಲೆಕ್ಟರ 'ನಿಸ್‌ಬೇಟ್'ನು ಕೂಡಲೇ ಈರವ್ವ ದೇಸಾಯಿಣಿಯನ್ನು ಹೊಂಗಲ ಕೋಟೆಯಿಂದ ಧಾರವಾಡಕ್ಕೆ ಕರೆಸಿಕೊಂಡನು. ಈ ಸುದ್ದಿಯನ್ನು ಕೇಳಿ ಜನರು ಮತ್ತಷ್ಟು ಹಂಗು ದೊರೆದು, ಸುತ್ತಲೂ ಗದ್ದಲವನ್ನೆಬ್ಬಿಸಿದರು. ಬೆಳಗಾವಿಯ ಹತ್ತಿರ 'ಅನ್ನಗೋಳ'ದಲ್ಲಿ ಸಾವಿರಾರು ಜನರು ಬಂಡೆಬ್ಬಿಸಿ ರಾಯಣ್ಣನನ್ನು ಕೂಡಿದರೆಂದು ಕಂಡುಬರುತ್ತದೆ. "At this time it was deemed advisible to remove to Dharwar, Iravva, the late Desai's widow who was living at Bail Hongal. This nearly excited another rising, a thousand men gathered at Anegol to resist her removal.In receiving a promise of pardon most of them submitted and the rest joined Rayappa. Iravva died at Dharwad in July, it was supposed by poison taken either by herself or adminstered to her[9]." ಹೀಗೆ ರಾಯಣ್ಣನು ದಿನದಿನಕ್ಕೆ ಪ್ರಬಲನಾಗುವದನ್ನು ಕಂಡು ಕಲೆಕ್ಟರನು ಈರವ್ವನನ್ನು 'ಮಲ್ಲಿಗಾಂವ' ಕೋಟೆಗೆ ಕಳುಹಿಸಿದರೆ ದೇಶದಲ್ಲಿ ಇದಕ್ಕೂ ವಿಪರೀತವಾಗಬಹುದೆಂದು ಅಂಜಿ ದೇಸಾಯಿಣಿಯನ್ನು ಧಾರವಾಡದಲ್ಲಿಯೇ ಇಟ್ಟುಕೊಂಡಿರಬಹುದು. ಆ ಸುದ್ದಿಯನ್ನು ಕೇಳಿದ ಜನಪದವು, ಅದನ್ನೂ ಹಾಡಿದೆ.

ಸುದ್ದಿ ಹಬ್ಬಿತು ಸುತ್ತ, ಎದ್ದು ಕೂಡಿತು ಮಂದಿ
ಗದ್ದಲಕೆ ಅಂಜಿ ಸರಕಾರ । ಈರವ್ವ
ಕದ್ದಿಲಿ ಕೊಂದಾರೊ ವಿಷ ಕೊಟ್ಟು ॥

ಎಂದು ಕಿತ್ತೂರ ಹಂತಿಯ ಹಾಡಿನಲ್ಲಿ ಬಂದಿದೆ. 'ದೊರೆ ಮಲ್ಲಸರ್ಜನ ದುಂದುಮಿ'ಯಲ್ಲಿ.

ಬಂಡುನಡೆದಿತುಯೆಂದು ! ದಂಡು ಸರದಾರ ಕೂಡಿ ।
ಕೊಂಡು ಹೊಂಗಲದಿ ಬರುವುತಲಿ ॥ ಹೋಳಿ ॥
ಒಂದ ಕ್ಷಣದೊಳಾಗ । ಹೊಂಡೆಂದೀರವ್ವಗೊಳ್ಳೇ ।
ಚೆಂದ ಮೇಣೇವ ತಂದು ಮುಂದಿಡಲು । ಕುದುರಿ ।
ಹಿಂದು ಮುಂದೆಡಬಲ ಹೊಂದಿರಲು । ಪಾರ ।
ಬಂದೂಕ ಕವಾಯ್ತದ ಬಾರಿರಲು ॥
ಅತ್ತೀ ನೋಡೂಳು ।
ದುಃಖ ಮಾಡೂಳು ।
ಕಿತ್ತೂರನಾಡೊಳು । ಬೇಡಿ ।
ಬಂದೆನ್ಹಿಂತದ ನಾನು ಬಂದಿನೊಳು । ಹೋಗೂ ।
ದೆಂದಳಲುತೆ ಈ ಕಿಷ್ಕಂಧದೊಳು । ಎಷ್ಟು
ಹಿಂದೆ ಮಾಡಿದೆ ಪಾಪ । ಬಂದಿತೆನಗೆ ಭೋ ।
ರೆಂದೆನುತಳುತೆ ತಾ । ಬಂದಳಂಗಣಕೆ ॥ ದುಂದುಮೆ ॥
ಕೊಂಡು ಹೊಂಗಲದಿ, ಬರುವುತಲಿ ಮೇಣೆದೊಳಾಗ ।
ಗಂಡನನು ನೆನೆವುತಡರಿದಳು ॥
ತಿರುಗಿ ನೋಡಿದಳತ್ತೀ ಮುಖವ । ಸೊಸೆಯಾಗಿ ।
ಕಾಣಲಿಲ್ಲೆಳ್ಳಷ್ಟು ಸುಖವ॥೮೭॥ *-ದೊ-ಮ-ದುಂ-*

ಎಂದೂ ಬರುತ್ತದೆ. ಕಿತ್ತೂರ ಸೊಸೆ, ಈರವ್ವನು ಹೊಂಗಲ ಬಿಟ್ಟು ಹೋಗುವಾಗ ದುಃಖಿಸಿದ ಪ್ರಸಂಗವನ್ನು ಇನ್ನೊಂದು ಲಾವಣಿಯಲ್ಲಿ ವಿಶದವಾಗಿ ಕಾಣಬಹುದಾಗಿದೆ.

ಎಷ್ಟು ಮಾಡಿದರೆ ನಮ್ಮನ ಬಿಟ್ಟು ಹೋಗುವದಿಲ್ಲೆಂದು
ಮಾಡಿದಳು ವೀರನ ಸ್ತುತಿ ।
ಅತ್ತಿಯಾ ಮಾವನ ನೆನಸಿ ಹತ್ತಿದಳು ಡೋಲಿಯನ್ನು
ಹೊತ್ತಾರಣ್ಣ ಬೋವೆರು ಎತ್ತಿ ।
ರಾಯನಾಯಕ ಬಂದನೆಂದು ದವಡಮಾಡಿ
ನಡದಾರಣ್ಣ ಎಡಕಬಲಕ ಹಿರಿದ ಕತ್ತಿ ।
ಹಿಂದ ಇನ್ನೂರ ಬಾರಿನ ಮಂದಿ ಮುಂದ ಇನ್ನೂರ ಕುದರಿ
ಮಂದಿ ಮಾಡುತ ನಡಿದರಣ್ಣಾ ಪಾರಗಸ್ತಿ ।
ಜ್ಯಾಸೂದರಿಂದ ದಾರಿಹಿಡಿದು ಧಾರವಾಡಕ್ಕೆ
ತಂದು ಸರದಾರ ಕೇಳ್ಯಾನು ಅವರಸ್ಥಿತಿ ।
ರಾತ್ರಿಲೆ ರಾಯನಾಯಕನ್ಹಚ್ಚಿ ರಂಗಮಾಡಿ
ಸುತ್ತಿನ ಹಳ್ಳಿನೆಲ್ಲಾ ಸುಲಸ್ತಿ ।

9. Bombay Gazetteer, Karnatak, Vol. XXI, P.P. 405-406.

ಕೊಟ್ಟ ಅನ್ನದ ಮೇಲೆ ನೀನು ಬಿಟ್ಟು ಎರಡ್ಡೆ ನೋಡತಿ
ಮಾಡಬೇಕೆ ನಮ್ಮ ಮ್ಯಾಲೆ ಚಾಸ್ತಿ।
ಕೊಲ್ಲಬೇಡರಿ ಇಕಿನ ಕುಸುಗಲ್ಲಿನ ಕಿಲೇದಾಗ
ಒಬ್ಬಳ್ನ ಇಡೆಂದನು ಒಸ್ತಿ॥೧॥

ಹೊತ್ತಾರೊ ಬೋವೆರು ಕುಸುಗಲ್ಲಿಗೆ ತಂದಾರೆ
ಮೆಲ್ಲನೆ ಕಿಲೆವ ಹೋಗುವಾಗ ವೀರವ್ವ।
ಬಲ್ಹಾಂಗ ದುಃಖ ಮಾಡತಾಳೊ।
ತಾಯಿಲ್ಲದ ಮಕ್ಕಳಿಗೆ। ಆಯಿಲ್ಲಾ ಸಿರಿಯಿಲ್ಲಾ
ಕಾಯ ಇಡಬಾರದೆಂದು ಬಾಯ
ಬಿಡುತಲೀರವ್ವ ಸಾವ ಬೇಡಿದಳು ಶಿವನಲ್ಲಿ ॥
ನೀರನ್ನ ಮೀನ ವೈದು। ಬೇರೆ ಹೊರಗೆ ಚೆಲ್ಲಿದಂತೆ
ಆದೆವ್ವೆ ನಾವು ಅನಾವಸ್ತಿ॥೬॥[೧೦]

ಇಷ್ಟು ಅಂಜಿಕೆಯಿತ್ತು ಕುಂಪಣಿಯವರಿಗೆ ರಾಯಣ್ಣನದು. ಇಂಗ್ಲಿಷರು ಕಿತ್ತೂರ ದೇಸಾಯಣಿ, ಈರವ್ವನನ್ನು ಬಲು ಕ್ರೂರತನದಿಂದ ನಡೆಸಿಕೊಂಡರೆಂದು ಈ ಹಾಡಿನಲ್ಲಿ ಧ್ವನಿತವಾಗುತ್ತದೆ. ಅವಳನ್ನು 'ಕುಸೂಗಲ್ಲ' ಕಿಲ್ಲೆಗೆ ಕಳುಹಿಸಿಕೊಟ್ಟರೆಂದು ಹಾಡಿನಲ್ಲಿ ಬಂದಿದೆ. ಇತಿಹಾಸ ಮಂಡಲದವರು 'ಕಿತ್ತೂರ ಬಂಡಾಯ'ದಲ್ಲಿ ಪ್ರಕಟಮಾಡಿರುವ 'ಈರವ್ವನ ದುರಂತ ಮರಣ' ಎಂಬ ಹಾಡಿನಲ್ಲಿ 'ಬೇಬರ ಸಾಹೇಬನು' ಅವಳಿಗೆ ವಿಷವನ್ನು ಹಾಲಿನಲ್ಲಿ ಬೆರಿಸಿ ಕುಡಿಸಿ ಕೊಂದನೆಂದು ಬರುವುದು.

ಕುಂಪಣಿ ಸರಕಾರದ ಕಾಗದ ಪತ್ರಗಳ ಪ್ರಕಾರ ಈರವ್ವನನ್ನು ಸ್ಥಳಾಂತರಿಸಿರಬಹುದೆಂದು ಓದುವವರಿಗೆ ಸ್ಪಷ್ಟವೆನಿಸುವುದು. ಆದರೆ ವಸ್ತುಸ್ಥಿತಿಯು ಹಾಗಾದಂತೆ ಕಂಡುಬರುವುದಿಲ್ಲ. ಅವರು ಅವಳನ್ನು ಧಾರವಾಡಕ್ಕೆ ತರಲು ದಂಗೆಯ ಸ್ವರೂಪವು ಹಿಡಿತ ಮೀರುವ ಸ್ಥಿತಿಗೆ ಬಂದಿರಬಹುದು. ಕಾರಣ ಅವುಗಳನ್ನು ತಾತ್ಪೂರ್ತಿಕವಾಗಿ 'ಕುಸೂಗಲ್ಲ' ಕಿಲ್ಲೆಯಲ್ಲಿಯೇ ಇಟ್ಟಿರಬೇಕು. 'ಕುಸೂಗಲ್ಲು' ಧಾರವಾಡಕ್ಕೆ ತೀರ ಸಮೀಪವಿದೆ. ಕುಸೂಗಲ್ಲಿನ ಜನರು ಕಿತ್ತೂರ ದೇಸಾಯಿಣಿಯು ಕೆಲಕಾಲ ಕಿಲ್ಲೆಯಲ್ಲಿ ಕಳೆದ ಕಾರಾಗೃಹವಾಸದ ಸ್ಥಳವನ್ನು ತೋರಿಸುವರು. ಅಲ್ಲದೆ ದೇಸಾಯಿಣಿಯ ದುರಂತವನ್ನು ದುಃಖದಿಂದ ಹಾಡುವರು. ರಾಯಣ್ಣನ ಬಂಡಾಯಕ್ಕೆ ಅಂಜಿದ ಸರಕಾರದವರು, ಅದಕ್ಕೆ ದೇಸಾಯಿಣಿಯೇ ಕಾರಣಳೆಂದು ನಿರ್ಧಾರಕ್ಕೆ ಬಂದು, ಜನತೆಗೆ ತಿಳಿಯಗೊಡದೆ, ವಿಚಾರಣೆಗೆಂದು, ಧಾರವಾಡಕ್ಕೆ ಕರೆಸಿ ವಿಷಪ್ರಯೋಗ ಮಾಡಿದರೆಂದು ಜನಪದದಿಂದ ತಿಳಿದು ಬರುತ್ತಿದೆ. ಈ ಮಾತನ್ನು ನಂಬಬಹುದಾಗಿದೆ. ಯಾಕಂದರೆ ಕಿತ್ತೂರ ದುರಂತವಾಗಿ ಏನು ಸಾವಿರ ವರುಷಗಳು ಗತಿಸಿ ಹೋಗಿಲ್ಲ. ಕೇವಲ ನೂರಿಪ್ಪತ್ತು ವರುಷಗಳುರುಳಿ ಹೋಗಿವೆ. ಕೇವಲ ಮೂವ್ವತ್ತು ಅಥವಾ ನಾಲ್ವತ್ತು ವರುಷಗಳ ಹಿಂದೆ ಕಿತ್ತೂರ ದುರಂತವನ್ನು ಕಣ್ಣಾರೆ ನೋಡಿದವರೂ, ಕೇಳಿದವರೂ ಅನೇಕರಿದ್ದರು. ಆಗಿಹೋದ ದುರಂತವನ್ನು ಜನಪದವು, ಮಕ್ಕಳು–ಮೊಮ್ಮಕ್ಕಳು ಕೇಳಲೆಂದು ಉಸುರುಹಾಕಿ ಹಾಡುತ್ತ ಬಂದಿದೆ. ಕೇವಲ ನೂರಾರು ವರುಷಗಳ ಹಿಂದಿನ ಮಾತಾದ ಮೂಲಕ ಅತಿಶಯೋಕ್ತಿಯಾಗುವ ಸಂಭವವಿಲ್ಲವೆಂದು ಹೇಳಬಹುದು. ಸರಕಾರದ ಹುಕುಮಿನ ಪ್ರಕಾರ 'ಮಲ್ಲಿಗಾಂವ' ಕಿಲ್ಲೆಯಲ್ಲಿ ದೇಸಾಯಿಣಿಯ ಕಾರಾಗೃಹ ವಾಸವಾಗಿದ್ದರೆ ಜನತೆಗೆ ಗೊತ್ತಾಗದಿರುತ್ತಿತ್ತೇ? ಅಲ್ಲಿಯ ಜನರಾದರೂ ಅದನ್ನು ಕಂಡು ಸುಮ್ಮನಿರುತ್ತಿದ್ದರೇ? ಈ ಎಲ್ಲ ಸಂಗತಿಗಳನ್ನು ವಿಚಾರ ಮಾಡಿನೋಡಿದರೆ ಸರಕಾರವು ಗುಪ್ತವಾಗಿ ಈರವ್ವನಿಗೆ ಧಾರವಾಡದಲ್ಲಿಯೇ ವಿಷಪ್ರಯೋಗಮಾಡಿ ಸ್ವಾಭಾವಿಕವಾಗಿ ಸತ್ತಳೆಂದು ಸುಳ್ಳು ಸುದ್ದಿಯನ್ನು ಹಬ್ಬಿಸಿದ್ದೇ ನಿಜವು. ಅವಳ ದುರಂತವನ್ನು ನೋಡಿ ಬೋರಾಡಿ ಅತ್ತು ಜನಪದವು ಅದನ್ನು ಹಾಡಿದೆ. ಕಿತ್ತೂರ ಭಾಗ್ಯವು ಇಲ್ಲಿಗೆ ಕೊನೆಯಾಯಿತು.[೧೧] ದೇಸಾಯಿಣಿ ಈರವ್ವನನ್ನು ಹೊಂಗಲದಿಂದ ಜೂನ ೧೮೩೦ರಲ್ಲಿ ಸ್ಥಳಾಂತರಿಸಿದರೆಂದು ಕಾಗದ ಪತ್ರಗಳಿಂದ ತಿಳಿದುಬರುತ್ತದೆ. ಮುಂದೆ ತಿಂಗಳೊಪ್ಪತ್ತಿನಲ್ಲಿಯೇ, ಅಂದರೆ ಜುಲೈ ಅಥವಾ ಆಗಸ್ಟ ತಿಂಗಳಲ್ಲಿ ಈರವ್ವ ದೇಸಾಯಿಣಿಯು ಧಾರವಾಡದಲ್ಲಿಯೇ ದುರಂತ ಮರಣವನ್ನು ಹೊಂದಿರಬೇಕು. ಅವಳು ಮರಣ ಹೊಂದಿದಾಗ ರಾಯಣ್ಣನು ದಿನದಿನಕ್ಕೆ ಪ್ರಬಲನಾಗುತ್ತಲಿದ್ದ. ಮುಂಬಯಿ ಗ್ಯಾಝಿಟೀಯರ ಕರ್ನಾಟಕ ಭಾಗ XXIವೂ ಇವೇ ಮಾತುಗಳನ್ನು ಹೇಳುವುದು.

ಇಂಗ್ಲಿಷರು ಎಷ್ಟು ಹೆಣಗಾಡಿದರೂ, ರಾಯಣ್ಣನನ್ನು ಮುರಿಬಡಿಯುವುದಾಗಲಿಲ್ಲ. ರಾಜನೀತಿಯನ್ನು ಪೂರ್ಣ ಮನಗಂಡ ಅವರು ಭೇದಪ್ರಯೋಗಮಾಡಿ ಕಡೆಗೆ ರಾಯಣ್ಣನನ್ನು ಹಿಡಿಸಿದ್ದಾರೆ. ರಾಯಣ್ಣನು ಇಂಗ್ಲಿಷರ ಕಚೇರಿಗಳನ್ನು ಸುಟ್ಟು ಸುಲಿಯುತ್ತ ಬೆಳಗಾವಿಯನ್ನು ಮುತ್ತಿ ಕೈವಶಮಾಡಿಕೊಳ್ಳಬೇಕೆಂಬ ಸಾಹಸದಲ್ಲಿದ್ದನು. ಅದರಂತೆ ಒಂದೆರಡು ಸಾರೆ ಅವನು ಪ್ರಯತ್ನ ಮಾಡಿದನೆಂದೂ ತಿಳಿದು ಬರುವುದು. ಆದರೆ ಕರ್ನಾಟಕದ ದುರ್ಭಾಗ್ಯವೆಂದೇ ಹೇಳಬಹುದು. ಇಂಗ್ಲಿಷರು ಹೂಡಿದ ಭೇದ ನೀತಿಯು ಫಲಕಾರಿಯಾಯಿತು. ಆ ಭಾಗದ ಆಗಿನ ಮಮಲೇದಾರನಾದ ಹಚ್ಚೋಳಿ ಕೃಷ್ಣರಾವನು, ದತ್ತಕ ಪ್ರಕರಣದಲ್ಲಿ ಕಿತ್ತೂರ ಅರಸರ ಮೇಲೆ ಕುರಸಿಟ್ಟ ಖುದಾನಪುರ ಲಿಂಗನಗೌಡನಿಗೆ ಚುಚ್ಚಿ ಕೂತ. ಪುಕ್ಕನಾದ ಗೌಡನು ಹೆದರಿ ಅನುಮಾನಿಸಲು ಅವನಿಗೆ ಆಶೆ ಭರವಸೆಗಳನ್ನಿತ್ತು ನೇಗಿನಹಾಳದ ವೆಂಕನಗೌಡನ ನೆರವು ಕೊಟ್ಟು ರಾಯಣ್ಣನನ್ನು ಹಿಡಿಯಲು ಒಳಸಂಚು ಮಾಡಿದ. ಇಬ್ಬರು ಗೌಡರು ತೋರಿಕೆಗಾಗಿ ರಾಯಣ್ಣನನ್ನು

೧೦. ದೊರೆ ಮಲ್ಲಸರ್ಜನ ದುಂದುಮಿ ಪು. ೮೫.

೧೧. ಧಾರವಾಡ ಹಾವೇರಿ ಪೇಟೆಯಲ್ಲಿರುವ 'ಪಟ್ಟಣದವರು' ಎಂಬ ಮನೆತನದವರು ಕಿತ್ತೂರ ಅರಸರ ಬೀಗರಾಗಬೇಕೆಂದೂ ಸರಕಾರವು, ಅವರ ಮನೆಯಲ್ಲಿಯೇ, ಜನತೆಯನ್ನು ಸಮಾಧಾನ ಮಾಡುವದ ಕ್ಕೋಸ್ಕರ, ಈರವ್ವ ದೇಸಾಯಿಣಿಯನಿಟ್ಟು, ಒಳಗೊಳಗೆ ವಿಷಪ್ರಯೋಗ ಮಾಡಿಸಿ ಕೊಂದರೆಂದೂ, ದೇಸಾಯಿಣಿಯ ಗದ್ದಿಗೆಯು ಧಾರವಾಡದಲ್ಲಿದೆಯೆಂದೂ ಜನರಲ್ಲಿ ಪ್ರತೀತಿಯಿದೆ.

ಕೂಡಿದರು. ರಾಯಣ್ಣನು ಅವರನ್ನು ಪೂರ್ಣ ನಂಬಿದ. ಕೆಲವು ದಿನಗಳೆದ ಮೇಲೆ, ಖುದಾನಪುರದಲ್ಲಿ ರಾಯಣ್ಣನು ಮೋಸವರಿಯದೆ ಶಸ್ತ್ರಾಸ್ತ್ರಗಳನ್ನು ತೆಗೆದಿಟ್ಟು ಬಾವಿಯಲ್ಲಿ ಜಳಕ ಮಾಡುತ್ತಿರಲು, ಗೌಡರು ವಿಶ್ವಾಸಘಾತಮಾಡಿ ಇಂಗ್ಲಿಷರಿಗೆ ರಾಯಣ್ಣನನ್ನು ಹಿಡಿದುಕೊಟ್ಟರು. ರಾಯಣ್ಣನನ್ನು ನಗ್ನಮಾಡಿ ಹೊರಸಿಗೆ ಬಿಗಿಸಿಕೊಂಡು ಇಂಗ್ಲಿಷರು ಧಾರವಾಡಕ್ಕೆ ಹೊರಿಸಿಕೊಂಡು ಹೋದರು. ಅವರು ರಾಯಣ್ಣನನ್ನು ಬಹಳ ಅಮಾನುಷ ರೀತಿಯಿಂದ ನಡೆಸಿಕೊಂಡರೆಂದು ಜನಪದದಲ್ಲಿ ಪ್ರತೀತಿಯಿದೆ. ಆಗ ದಕ್ಷಿಣ ಭಾಗದ ಕಮೀಶನರನಾದ 'ಹೆಂಡರ್‌ಸನ್ನನು' ರಾಯಣ್ಣನ ಬಂಡಾಯ ಪ್ರಕರಣವನ್ನು ವಿಚಾರಿಸಿ, ಅವನು ರಾಜದ್ರೋಹಿಯೆಂದು ಮರಣದಂಡನೆಯನ್ನು ವಿಧಿಸಿದನು. ಅದರಂತೆ ರಾಯಣ್ಣನ ಬಂಡಾಯದ ಆಯಮೆಟ್ಟಾದ ನಂದಗಡದಲ್ಲಿ ಅವನನ್ನು ತಂದು ಗಲ್ಲಿಗೇರಿಸಿದರು.

"The sentence of death I beg to submit it might perhaps be advantagious to direct and should be carried into extension of the town of Nandagad, Talook Bidi, the most populated place in which any of the ...... were committed.[12]"

Sd/ G.U. Handerson
Visiting Commissioner
On Decon Cercuit
Dharwar.

ಹೀಗೆ ರಾಯಣ್ಣನ ದುರಂತವನ್ನು ಕಂಡ ಜನಪದವು ಬೇಕಾದಾಗ ಹಾಡಿ ಉಸುರಗರೆಯುತ್ತ ಬಂದಿದೆ. ರಾಯಣ್ಣನ ಲಾವಣಿಯಂತೂ ಎಲ್ಲ ಕನ್ನಡಿಗರಿಗೆ ಮೆಚ್ಚಿದ ಹಾಡಾಗಿದೆ. ಅದನ್ನು ಕೇಳಿದರೆ ನರನರಗಳಲ್ಲಿ ಬಿಸಿನೆತ್ತರ ಪುಟಿದು ಎದೆಯು ಏನು ಮಾಡಲೆಂದುಬ್ಬುತ್ತಿದೆ. ಈ ವೀರನ ಶೌರ್ಯವನ್ನು ಕಣ್ಣಾರೆ ನೋಡಿದ ಒಕ್ಕಲಿಗನು,

ಖುದಾನಪುರದಾಗ, ಹೋದಾನೊ ರಾಯಣ್ಣ
ಭೇದವಿಡಲಿಲ್ಲೊ ಮನದಾಗೊ । ಲಿಂಗೊಂಡ
ವಾದಿ ರಾಯಣ್ಣ ಮೋಸಾಗಿ ॥
ನಂದಗಡ ಊರಾಗ, ಮಂದ್ಯಾಗ ರಾಯಣ್ಣ
ತಂದು ಶೂಲಕ ಹಾಕ್ಯಾರೋ ಕಿತ್ತೂರ
ಗೊಂದಲ ಶೂರಗ ದುರುಮರಣೊ ॥

ಎಂದು ಹಾಡಿ ದುಃಖಿಸಿದ್ದಾನೆ. ಆಯಿತು, ಕಿತ್ತೂರ ವೀರಕಾಂತಿಯೇ ನಿಸ್ತೇಜವಾಯಿತು. ಕಿತ್ತೂರು ಪೂರ್ಣ ಇಂಗ್ಲಿಷರ ಸ್ವಾಧೀನವಾಯಿತು. ಇಷ್ಟೆಲ್ಲ ದುರಂತವನ್ನು ಕೇಳುತ್ತ ವೀರ ಚೆನ್ನಮ್ಮ ರಾಣಿಯು ಸೊಸೆಯನ್ನಗಲಿ ಹೊಂಗಲದ ಕಾರಾಗೃಹದಲ್ಲಿದ್ದಳು. ಇಂಗ್ಲಿಷರನ್ನು ನಡುಗಿಸಿ ಕಿತ್ತೂರನ್ನಾಳಿದ ಆ ವೀರ ಜೀವನಕ್ಕೆ ಎಷ್ಟು ಆಘಾತವಾಗಿರಬಹುದು? ಈ ಎಲ್ಲ ದುರಂತಗಳನ್ನು ಮಾಡಿದ ಕುಂಪುಣಿ ಸರಕಾರವು ಮುಂದೆ ವೀರ ನಾರೀಮಣಿ, ಚೆನ್ನಮ್ಮ ರಾಣಿಗೆ ಉಪದ್ರವ ಕೊಡಹತ್ತಿತು. ಬದಕುವದಕ್ಕಿಂತ ಮರಣವೇ ಲೇಸೆಂದು ಬಗೆದು ಚೆನ್ನಮ್ಮ ರಾಣಿಯು ವಜ್ಜರ ನುಂಗಿ ಆತ್ಮಹತ್ಯೆ ಮಾಡಿಕೊಂಡಳೆಂದು ಜನಪದದಿಂದ ತಿಳಿದುಬರುತ್ತಿದೆ.

ಹೊಂಗಲದ ಮಠದಾಗ, ಲಿಂಗಪೂಜೆಯಮಾಡಿ
ಭಂಗಾಗುದೆಂದು ಎದೆಗುಂದಿ । ಚೆನ್ನವ್ವ
ಉಂಗರ್‍ವಜ್ಜರ ನುಂಗ್ಯಾಳೊ ॥

ಕಿತ್ತೂರ ರಾಜಮನೆತನವು ಕಾಲಚಕ್ರದಲ್ಲಿ ಸಿಕ್ಕು ನಿರ್ನಾಮಾಗಿ ಹೋಯಿತು. ಅಮ್ಮ ರಾಣಿಯ ಸಮಾಧಿಯು ಬೈಲಹೊಂಗಲದ ಕಲ್ಮಠದಲ್ಲಿಯೇ ಅದೆ. ಇತಿಹಾಸ ಮಂಡಲದವರು ಅದರ ಜೀರ್ಣೋದ್ಧಾರದ ಕೆಲಸವನ್ನು ಕೈಕೊಂಡಿದ್ದಾರೆ.

ಇದು ಜಾನಪದ ಸಾಹಿತ್ಯದಲ್ಲಿ ಕಂಡಬಂದ ಕಿತ್ತೂರು, ಇತಿಹಾಸ ಸಂಶೋಧಕರು ಅಲಕ್ಷ್ಯ ಮಾಡಿ ಇದನ್ನು ನಿರಾಕರಿಸಕೂಡದು. ಐತಿಹಾಸಿಕ ದೃಷ್ಟಿಯಿಂದ ಪರಿಶೀಲಿಸಿ ಅದರ ಮಹತ್ವನ್ನರಿತುಕೊಳ್ಳುವುದೊಳಿತು.

❐

---


12 Extract from the Bombay judicial consultations, 1830

೬. ನರಗುಂದ

ಬೆಳುವಲದ ವಿಸ್ತಾರವಾದ, ಫಲವತ್ತಾದ ಎರೆಯ ಬೈಲಲ್ಲಿ ಸುತ್ತಲೂ ಅನೇಕ ಮೈಲು ದೂರದವರೆಗೆ ಕಾರ್ಗಾಲ ಕಾರ್ಮೋಡದ ಪುಂಜದಂತೆ ದೃಷ್ಟಿ ಗೋಚರವಾಗುವ ಭದ್ರವಾದ ಭವ್ಯಕೋಟೆಯೆಂದರೆ ನರಗುಂದ ಕೋಟೆ. ಒಂಬೈನೂರಡಿ ಎತ್ತರವಾದ ಅದರ ಪೂರ್ವದಿಕ್ಕಿನ ಮೋಕು ಸಿಂಹ ಮುಖದಂತೆ ಹೊರಚಾಚಿ ಬಂದಿರುವುದರಿಂದ ಬಲು ಭಯಾನಕವಾಗಿ ಪ್ರೇಕ್ಷಕರಿಗೆ ಕಾಣದಿರದು. ಕೇವಲ ನೂರು ವರುಷಗಳ ಹಿಂದೆ ನರಗುಂದವು ಒಂದು ಚಿಕ್ಕ ಸಂಸ್ಥಾನವಾಗಿ ಗರಿಯೆತ್ತಿ ಗಗನಾಂಗಣದಲ್ಲಿ ಮೆರೆದು ಹೋಗಿದೆ. ಈ ಕೋಟೆಗೆ ಉಜ್ವಲವಾದ ಇತಿಹಾಸವೂ ಇದೆ. ನಮಗೆ ಇಂದು ಅದು ಗೊತ್ತಿಲ್ಲದಿರುವುದು ಒಂದು ದುರ್ಭಾಗ್ಯ.

ಕ್ರಿ.ಶ. ಸುಮಾರು ೧೬೭೪ರಲ್ಲಿ ಮೊದಲು ಈ ಕೋಟೆಯನ್ನು ಶಿವಾಜಿಯು ಕಟ್ಟಿಸಿದನೆಂದು ಇತಿಹಾಸದಿಂದ ತಿಳಿದುಬರುತ್ತದೆ. ಶಿವಾಜಿಯ ಮರಣದ ನಂತರ ಅಪ್ಪಾಜಿ ಸುರೊ ಎಂಬ ಬ್ರಾಹ್ಮಣನು ಈ ಸಂಸ್ಥಾನವನ್ನು ಉಣ್ಣುತ್ತ ಬಂದನು. ಇವನ ಮರಣದ ನಂತರ ದತ್ತಕ ಮಗ, ಬಳವಂತರಾಯನು ಚಿಕ್ಕವನಿರಲು ಅಪ್ಪಾಜಿಯ ನಂಬಿಗಸ್ತ ಕಾರಭಾರಿಯಾದ ರಾಮರಾವ ದಾದಾಜಿ ಭಾವೆ ಎಂಬ ಕೊಂಕಣಿ ಬ್ರಾಹ್ಮಣನು ದತ್ತಕ ಅರಸು ಮಗನನ್ನು ಬದಿಗಿಟ್ಟು ರಾಜ್ಯ ಕಾರಭಾರವನ್ನು ಮಾಡುತ್ತ ಬಂದನು. ರಾಮರಾಯನ ಮರಣದ ನಂತರ ಅವನ ತಮ್ಮನ ಮಗನಾದ ದಾದಾಜಿಯು ಕಾರಭಾರವನ್ನು ಕೈಕೊಂಡನು. ಆದರೆ ಮುಂದೆ ರಾಮರಾಯನ ಮಗ ಯೋಗಿರಾಯನು ದಾದಾಜಿಯನ್ನು ಕೊಲ್ಲಿಸಿ ತಾನೇ ಕಾರಭಾರವನ್ನು ಮಾಡಹತ್ತಿದನು. ದಾದಾಜಿಯ ಮಗ, ಭಾಸ್ಕರನಿಗೆ ಇದು ಸರಿಬಾರದಿರಲು, ಅವನು ಕದನ ಹೂಡಿದನು. ಇಬ್ಬರಲ್ಲಿ ಹೀಗೆ ಕದನವು ನಡೆಯಲು ಮೂಲ ಅರಸನಾದ ಬಳವಂತರಾಯನು ಸಂಸ್ಥಾನವನ್ನು ತನ್ನ ಕೈಯಲ್ಲಿ ತೆಗೆದುಕೊಂಡು ಮತ್ತೆ ಆಳಹತ್ತಿದನು. ಕೆಲವು ದಿನಗಳ ನಂತರ ಭಾಸ್ಕರರಾಯನು ಸಾಹಸದಿಂದ ಪುಣೆಯ ಪೇಶವಾಯಿ ಮಾಧವರಾಯನ ಪ್ರೀತಿಯನ್ನು ಸಂಪಾದಿಸಿ ಬಳವಂತರಾಯನಿಂದ ಸಂಸ್ಥಾನವನ್ನು ತಿರುಗಿ ಕಸಿದುಕೊಂಡನು. ಬಳವಂತರಾಯನಿಗೆ ನೇಮಣೂಕವಾಗಿ ಹೆಬ್ಬಳ್ಳಿಯು ಜಹಾಗೀರವಾಗಿ ಕೊಡಲ್ಪಟ್ಟಿತು. ಈಗಲೂ ಇವನ ವಂಶಸ್ಥರು ಈ ಜಹಾಗೀರವನ್ನು ಭೋಗಿಸುವರು. ಭಾಸ್ಕರರಾಯನು, ಯೋಗಿರಾಯನಿಗೆ ಉಂಬಳಿಯನ್ನು ಕೊಟ್ಟು, ಪರಾಕ್ರಮದಿಂದ ತಾನೇ ರಾಜ್ಯವನ್ನಾಳುತ್ತ ಬಂದನು. ಈ ಭಾಸ್ಕರರಾಯನ ಮಗ, ವೆಂಕಟರಾಯನ ಕಾಲದಲ್ಲಿ ಟೀಪುಸುಲ್ತಾನನು ನರಗುಂದವನ್ನು ಮುತ್ತಿ ಅರಸುಮನೆತನದವರನ್ನು ಸೆರೆಯೊಯ್ಯಲು, ಯೋಗಿರಾಯನ ಮಗ ರಾಮರಾಯನು ಟೀಪುವಿನ ಕೈಯೊಳಗಿಂದ ತಪ್ಪಿಸಿಕೊಂಡು ಪಾರಾಗಿ ರಾಮದುರ್ಗದಲ್ಲಿ ಬಂದು ನಿಂತನು.

ನರಗುಂದ ಅರಸರ ವಂಶಾವಳಿ



ಮುಂದೆ ಪೇಶವಾಯಿಗಳ ಸಹಾಯದಿಂದ ಅವನು ರಾಮದುರ್ಗದ ಸುತ್ತಮುತ್ತಲಿನ ಹಳ್ಳಿಗಳಿಗೆ ದೊರೆಯಾದದ್ದು ತಿಳಿದುಬರುವುದು. ಕ್ರಿ.ಶ. ೧೭೯೯ರಲ್ಲಿ ಟೀಪುವಿನ ರಾಜ್ಯವು ಹಾಳಾಗಲು, ವೆಂಕಟರಾಯನು ಬಿಡುಗಡೆ ಹೊಂದಿ ಪುನಃ ನರಗುಂದವನ್ನು ಸಂಪಾದಿಸಿ ಪೇಶವಾಯಿಯವರ ಆಧೀನದಲ್ಲಿ ರಾಜ್ಯಭಾರ ಮಾಡುತ್ತ ಬಂದನು. ಆಗ ನರಗುಂದವು ಮಹಾರಾಷ್ಟ್ರದ ವಶದಲ್ಲಿತ್ತು. ಕ್ರಿ.ಶ. ೧೮೧೮ರಲ್ಲಿ ಪೇಶವಾಯಿಯು ಮುಳುಗಲು ನರಗುಂದವು ಇಂಗ್ಲಿಷರ ಸ್ವಾಧೀನವಾಯಿತು. ಈ ಎರಡೂ ಸಂಸ್ಥಾನದವರು ಅಣ್ಣತಮ್ಮಂದಿರಾಗಿ ಕೆಲವು ವರುಷ ರಾಜ್ಯ ಕಾರಭಾರ ಮಾಡುತ್ತ ಬಂದಿದ್ದಾರೆ.

ಈ ಎರಡೂ ಸಂಸ್ಥಾನಿಕರು ಮಹಾರಾಷ್ಟ್ರದ ಅಭಿಮಾನಿಗಳಾಗಿದ್ದರು. ಕಾರಣ ಅವರು ಆ ಭಾಗದ ಜನರಿಗೆ ಆದರಣೀಯವಾಗಿ ಹೋದಂತೆ ಕಂಡುಬರುವುದಿಲ್ಲ. ಇವರಲ್ಲಿ ನರಗುಂದ ರಾಜಮನೆತನದ ಕಡೆಯ ಅರಸನಾದ ಭಾಸ್ಕರರಾವ (ಬಾಬಾಸಾಹೇಬ)ನು ಜನತೆಗೆ ಬೇಕಾಗಿದ್ದನೆಂದು ತಿಳಿದುಬರುತ್ತದೆ. ಇವನು ಕನ್ನಡ ವೀರರ ಮೇಲೆ ಪ್ರೀತಿಯುಳ್ಳವನೂ ಕೊಪ್ಪಳ, ಮುಂಡರಗಿ ಮೊದಲಾದ ಕನ್ನಡ ಸಂಸ್ಥಾನಿಕರಿಗೆ ಸ್ನೇಹಿತನಾಗಿ ಇದ್ದನು. ವಿಷ್ಣು, ರಾಮರಾವ ಮೊದಲಾದ ವೀರ ಸರದಾರರು ಬಾಬಾಸಾಹೇಬನೊಡನೆ ನರಗುಂದವನ್ನು ಕಾಪಾಡಲು ಹೆಣಗಾಡಿದ ಬಂಟರೆಂದು ಜನಪದರಲ್ಲಿ ಪ್ರತೀತಿಯಿದೆ. ಆದರೆ ದುರ್ದೈವ! ನರಗುಂದ ಅರಸನಿಗೆ ಸಂತಾನವಿಲ್ಲದ್ದರಿಂದ ಕುಂಪಣಿ ಸರಕಾರದವರು ಸಂಸ್ಥಾನವನ್ನು ಬಾಂಸಾತು ಮಾಡಿದರೆಂದು ಇತಿಹಾಸದಿಂದ ತಿಳಿದುಬರುತ್ತದೆ.

ಕುಂಪಣಿ ಸರಕಾರದ ಆಧೀನನಾಗಿ ಆಳುತ್ತಿದ್ದ ನರಗುಂದ ಭಾಸ್ಕರ (ಬಾಬಾಸಾಹೇಬ)ನಿಗೆ ಮಕ್ಕಳಾಗದಿರಲು ಕ್ರಿ.ಶ. ೧೮೫೭ರಲ್ಲಿ ದತ್ತಕ ತೆಗೆದುಕೊಳ್ಳಲು ಸರಕಾರವನ್ನು ಕೇಳಿಕೊಂಡನು. ಅದಕ್ಕೆ ಒಪ್ಪಿಗೆ ಸಿಗುವ ಭರವಸೆಯು ತೋರದ ಮೂಲಕ ಅದರ ಸಲುವಾಗಿ ಸರಕಾರದ ಆಗಿನ 'ಕೋರ್ಟ ಆಫ್ ಡಾಯಿರೆಕ್ಟರ್ಸ್'ದ ವರೆಗೂ ಹೋದನು. ಎಷ್ಟು ಪ್ರಯತ್ನ ಮಾಡಿದರೂ ಅವನಿಗೆ ದತ್ತಕ ತೆಗೆದುಕೊಳ್ಳಲು ಪರವಾನಿಗೆಯು ದೊರೆಯಲಿಲ್ಲ. ನಿರಾಶೆಗೊಂಡ ಭಾಸ್ಕರರಾವನು ಸ್ವತಂತ್ರನಾಗಲು ಸರಕಾರದ ವಿರುದ್ಧ ಬಂಡಾಯ ಹೂಡಿದನು. ಆಗ ಸಿಪಾಯಿಗಳ ಬಂಡಾಯವು ಭೀಕರ ರೂಪ ತಾಳಿ ಉತ್ತರ ಹಿಂದೂಸ್ತಾನವನ್ನೆಲ್ಲ ವ್ಯಾಪಿಸಿತ್ತು. ಅದು ದಕ್ಷಿಣ ಹಿಂದೂಸ್ತಾನವನ್ನು ಸೇರಿದರೆ ಪರಿಸ್ಥಿತಿಯು ಕೈಮೀರಬಹುದೆಂದು ಇಂಗ್ಲಿಷರು ಬಹಳ ಅಂಜಿಕೆಯಲ್ಲಿದ್ದರು; ಅದು ಹಾಗಾಗಬಾರದೆಂದು ಬಲು ಜಾಗ್ರತೆಯುಳ್ಳವರಾಗಿದ್ದರು. ನರಗುಂದ ಅರಸನು ಸ್ವತಂತ್ರನಾಗಲು ಗೊಂದಲವೆಬ್ಬಿಸಲು ಧಾರವಾಡದಿಂದ 'ಕರ್ನಲ್ ಮಾನ್ಸನ್' ಎಂಬ ಇಂಗ್ಲಿಷ ಸೇನಾಪತಿಯು ದಂಡು ತೆಗೆದುಕೊಂಡು ವಿಚಾರಣೆ ಬಂದನು. ಹೀಗೆ ಗುಸುಗುಸಿಯಾಗಿ, ನರಗುಂದವು ದುರಂತವೇ ಆಯಿತು. ಈ ಬಂಡಾಯವನ್ನು ಕಣ್ಣಾರೆ ನೋಡಿದ ಜನರು ಕೇವಲ ಹತ್ತೇ ವರುಷದ ಹಿಂದೆ ನರಗುಂದದಲ್ಲಿ ಜೀವಂತರಿದ್ದರು. ಆ ಬಂಡಾಯದಲ್ಲಿ ಭಾಗವಹಿಸಿ, ಕಂಡು ಕೇಳಿದ ಜನಪದವು ಆ ದುರಂತವನ್ನು ಅನೇಕ ಹಾಡುಗಳಲ್ಲಿ ಹಾಡಿದೆ. ನರಗುಂದದ ಲಾವಣಿಯನ್ನು ಕೇಳದ ಬೆಳುವಲದ ಜನರೇ ಇಲ್ಲ. ಬೆಳುವಲದ ಒಕ್ಕಲಿಗನೂ ನರಗುಂದದ ಸ್ಥಿತಿಗತಿಗಳನ್ನೂ ಹಂತಿಯಲ್ಲಿ ಹಾಡಿದ್ದಾನೆ.

ನರಗುಂದ ಹಂತಿಯ ಹಾಡು

ಹೆಸರೀಗೆ ನರಗುಂದ, ಮಸರೀಗೆ ನೀರಿಲ್ಲ
ಕುಸರದ ಸಿಂಬಿ ಬರಿಗೊಡ। ಇಟಗೊಂಡು
ಉಸರಂತ ಬಾಂವಿ ಇಳಿದಾರೊ ॥೧॥

ನರಗುಂದ ಕಾಳಪನ, ಮರಿಗುದರಿ ಸಾಯಾಲೆ
ಚೆದರಂಗ ಮಾಲ ಮುರಿಯಾಲೆ। ಸೊರಟೂರ
ಸದರೀಗೆ ಸುದ್ದಿ ಹರಿಯಾಲೆ ॥೨॥

ನರಗುಂದವೆಂಬೂದು, ಅರಗಿಣೆಯ ಪಟ್ಟಣ
ಕೆರೆ ಕಡಿಸಿ ನೀರ ಕುಡಿಲಿಲ್ಲ। ಬಾಬಣ್ಣ
ತಿರುಗಿ ನರಗುಂದ ಹೊಗಲಿಲ್ಲ ॥೩॥

ಕೆಂಪು ಮಾರಿಯ ದಂಡು, ಗುಂಪಾಗಿ ಮುತ್ಯಾರೊ
ಕಂಪೀಸಿ ಹೋತೊ ನರಗುಂದೊ। ಬಾಬಾಸಾಬ
ಹಂಪಿ ಹೊಳಿಮುಂದ ತಡುವ್ಯಾನೊ ॥೪॥
ಹಂಡ ಬಂಡದ ಕುದುರಿ, ಗೊಂಡೆ ಲಾಗಮನ್ಹಾಕಿ
ದಂಡು ಇಳದೀತೊ ನರಗುಂದೊ। ಬಾಬಸಾಬ
ಗುಂಡಿಲಿಕ್ಯಾನೊ ಗುಡಿಯಾಗೊ । ॥೫॥

ವಿಷ್ಣ್ಯಾತಾಂಡೆದ ಬಂಟ, ಕಣ್ಣಿಟ್ಟ ಸಿರಕೊಯ್ದು
ಮಣ್ಣ ಪಾಲಾದ ಮೆಣಸನ್ನೊ। ನರಗುಂದ
ಅಣ್ಣ ಕೂಗ್ಯಾನೊ ಕಾಳಗೊ ॥೬॥

ಮುಂಡರಗಿ ಭೀಮಣ್ಣ, ಬಂಡಾಯ ಎಬ್ಬಿಸಿದ
ದಂಡ ಕೂಡ್ಯಾನೊ ನರಗುಂದೊ। ಬಾಬಣ್ಣ
ಕೆಂಡ ಕಾರ್‍ಯಾನೊ ಕುಂಪಣಿಗೊ ॥೭॥

ಮಾಲಕಮ ಸಾಹೇಬ, ಕೇಳಿ ಮೆಣಸನ ಸಾವ
ಗಾಳಿಬಂದ್ಹಾಂಗ ಮುತ್ತ್ಯಾನೊ । ನರಗುಂದ
ತಾಳಬಸ್ವಾತೊ ಚಣದಾಗೊ ॥೮॥

ಬಾಪು ಪಂತರ ಸಂಚು, ಘಾತನರಗುಂದಾತೊ
ಹೋತೊ ಹಾಳಾಗಿ ನಿಪ್ಪತ್ತ್ಗಿ । ನರಗುಂದ
ಖ್ಯಾತಿ ಜನದಾಗ ಕಡೆತನಕೊ ॥೯॥

ಹಾರೂರು ಹಾವಾಗಿ, ಕೋರ್‍ಯಾರೊ ಒಳಸಂಚು
ಗಾರಗಾರಾತೊ ನರಗುಂದೊ । ಬಾಬಸಾಬ
ಕಾರ ಮಳಿಯಾಗ ಮನೆವಿಟ್ಟೊ ॥೧೦॥

ಕಾಡೆಲ್ಲ ಕತ್ತರಿಸಿ, ನಾಡೆಲ್ಲ ತತ್ತರಿಸಿ
ಬಾಡುಗಳ್ಳರು ಹಾರೂರು । ತಾ ನಂಬಿ
ಕಾಡಿಗೀಡಾದ ಬಾಬಣ್ಣ ॥೧೧॥

ಮಡದಿ ಮಕ್ಕಳ ಬಿಟ್ಟ, ಹಡದ ತಾಯಿಯ ಬಿಟ್ಟ
ಕಡೆಗಾತ ಬಿಟ್ಟ ನಾಡಾಸೆ । ಬಾಬುಸಾಬ
ಕೇಡೀಗೆ ಬಿಟ್ಟ ನರಗುಂದ ॥೧೨॥

ದೇಶಾವ ಕಡೆಮಾಡಿ, ಆಶೇಗೆ ಈಡಾಗಿ
ಕಾಸು ಕವಡೆಗೆ ಕಡೆಯಾಗಿ । ಹಾರೂರು
ಹಾಸಿ ಬೆಂಕ್ಯಾಗ ಬೂದ್ಯಾಗೋ ॥೧೩॥

ನರಗುಂದ ಅರಸನಿಗೆ, ವನವಾಸ ಬಂದೀತೊ
ತಿರುಗ್ಯಾನೊ ಕಾಡ ಪಾಲಾಗಿ । ಸೂಟರಗ
ತೊರಗಲ ಸೀಮ್ಯಾಗ ಕೈಸಿಕ್ಕೊ ॥೧೪॥

ಮಾಳಿ ಮ್ಯಾಗಿನ ಹುಲ್ಲ, ಗಾಳಿಗ್ಹಾರಿದರೇನ
ಗಾಲ ಮೇಲಾತೊ ನರಗಂದೊ । ಬಾಬಸಾಬ
ಗಾಳೀಗಿ ಬಾಯ ಬಿಡತಾನೊ ॥೧೫॥

ಹೂಲಿಸಾಮಿಯು ಕೊಟ್ಟ, ಕೋಲ ಮಿಂಚಿನ ಸಾಪ
ಗಾಲ ಮೇಲಾತೊ ನರಗುಂದೋ । ಮರುವರುಷ
ಕೂಲಿಕುಂಬಳಿಗೆ ಎರುವಾತೊ ॥೧೬॥ *-ಜಾ-ಸಂ-*

ಮೇಲೆ ಹೇಳಿದ ಪದ್ಯಗಳಲ್ಲಿ ಅನೇಕ ಐತಿಹಾಸಿಕ ಸಂಗತಿಗಳು ಅಡಕವಾಗಿವೆ.

೧ ನರಗುಂದದ ಭೌಗೋಲಿಕ ಸ್ಥಿತಿ.
೨ ನರಗುಂದದ ಕಾಳಪ್ಪನು ಯಾರು?
೩ ಹೊಸಕೆರೆಯನ್ನು ಕಟ್ಟಿಸಿದ ಬಾಬಾಸಾಹೇಬನು ತಿರುಗಿ ನರಗುಂದ ಹೊಗಲಿಲ್ಲ; ಕೆರೆಯ ನೀರನ್ನು ಕುಡಿಯಲಿಲ್ಲ.
೪ ಇಂಗ್ಲಿಷರು ನರಗುಂದವನ್ನು ಮುತ್ತಿದ್ದು.
೫ ಹಂಪಿಹೊಳಿ (ಸೂರಿಬಾನ)ಯ ಯುದ್ಧ.
೬ ವಿಷ್ಣು (ವಿಣ್ಣ್ಯಾ) ಮ್ಯಾನ್ಸನ್ ಸಾಹೇಬನ ಸಿರವನ್ನು ಕೊಯ್ದದ್ದು. ಇಂಗ್ಲಿಷರಿಗೆ ಸೋಲು.
೭ ಮುಂಡರಗಿ ಭೀಮರಾಯನ ಬಂಡಾಯ ಅವನು ನರಗುಂದ ಅರಸನನ್ನು ಕೂಡಿದ್ದು.
೮ ಸರ್ ಜಾನ್ ಮಾಲ್‌ಕಮ್‌ನು ನರಗುಂದವನ್ನು ಮುತ್ತಿದ್ದು.
೯ ನರಗುಂದದಲ್ಲಿ ಒಳಸಂಚು. ಮನ್ಯಾ ಬಾಪು ಹಾಗೂ ಕಷ್ಣಾಜಿಪಂತ ಜೋಶಿ ಅವರ ಕುಟಲ ಕಾರಸ್ಥಾನ. ನರಗುಂದ ಪತನ.
೧೦ ಬಾಬಾಸಾಹೇಬನು ಸೋತು ನರಗುಂದ ಬಿಟ್ಟದ್ದು.
೧೧ ನರಗುಂದವು ಇಂಗ್ಲಿಷರ ವಶವಾಯಿತು.
೧೨ ಬಾಬಾಸಾಹೇಬನು ನಾಡಾಶೆ ಬಿಟ್ಟ.
೧೩ ನರಗುಂದ ಘಾತಕರ ಕೊನೆ.
೧೪ ಬಾಬಾಸಾಹೇಬನ ವನವಾಸ ಹಾಗೂ ಕೊನೆ.
೧೫ ನರಗುಂದದ ಕೊನೆಯ ಅಪಶಕುನ.
೧೬ 'ಹೂಲಿ' ಸ್ವಾಮಿಗಳ ಶಾಪ.

ನೀರಿನ ಅರಬು ನರಗುಂದಕ್ಕೆ ಎಂದೂ ತಪ್ಪಿದಂತೆ ಕಂಡುಬರುವುದಿಲ್ಲ. ಬೆಳೆಯುಳ್ಳ ಆ ಎರೆಯ ಬೈಲಿನಲ್ಲಿ ಪ್ರತಿವರುಷ ಒಂದೆರಡು ದೊಡ್ಡ ಸಳಕುಗಳಾದರೆ ಆ ಜನರ ಭಾಗ್ಯ. ವರುಷದ ನೀರಿನ ಸಂಗ್ರಹವನ್ನು ಮಾಡಬೇಕಾದುದರಿಂದ ನರಗುಂದದಲ್ಲಿ ಮೂರು ದೊಡ್ಡ ಕೆರೆಗಳಿವೆ. ಇದ್ದರೂ ಬೇಸಿಗೆಯಲ್ಲಿ ಬತ್ತಿ ನೀರಿನ ಅಭಾವವಾಗುವುದು. ನರಗುಂದ ಗುಡ್ಡದ ಮೇಲೆ ಒಂದೆರಡು ಸಣ್ಣ ಕೆರೆಗಳಿದ್ದದ್ದನ್ನು ಈಗಲೂ ಕಾಣಬಹುದು. ಗುಡ್ಡದ ಮೇಲೆ ಬೀಳುವ ಮಳೆಯ ನೀರು ಹರಿದು ಈ ಕೆರೆಗಳಲ್ಲಿ ಸಂಗ್ರಹವಾಗುವ ಯೋಜನೆಯನ್ನು ಮಾಡಿದ್ದಾರೆ. ಗುಡ್ಡದ ಮೇಲಿರುವ ಒಂದು ದೊಡ್ಡ ಕೆರೆಯನ್ನು ಬಾಬಾಸಾಹೇಬನು, ಅದೇ ಕಟ್ಟಿಸಿದನೆಂದೂ, ಕಟ್ಟಿಸಿ ನೀರು ಸಹ ಕುಡಿಯಲಿಲ್ಲೆಂದೂ ಜನತೆಯಲ್ಲಿ ಪ್ರತೀತಿಯಿದೆ. ಆ ಕೆರೆಯನ್ನು ಕಟ್ಟಿಸಿದ ವರುಷವೇ ನರಗುಂದ ಕೋಟೆಯು ಇಂಗ್ಲಿಷರ ವಶವಾಯಿತು.

ನರಗುಂದದ ಅಕ್ಕಸಾಲಿಗ ಕಾಳಪ್ಪನು ನರಗುಂದ ರಾಜನಾದ ವೆಂಕಟರಾಯನ ಕಾಲದಲ್ಲಿ ಸೇನಾಪತಿಯಾಗಿದ್ದನು. ಕ್ರಿ.ಶ. ಸುಮಾರು ೧೭೮೦ ಟೀಪು ಸುಲ್ತಾನನು ನರಗುಂದವನ್ನು ಮುತ್ತಿ ಈ ಸರದಾರನನ್ನೂ ಅರಸುಮನೆತನದವರನ್ನೂ ಸೆರೆ ಒಯ್ದನೆಂದು ತಿಳಿದುಬರುತ್ತಿದೆ. "ಕಾಳಪ್ಪ ನರಗುಂದ ಮತ್ತು ಚಿತ್ರದುರ್ಗದ ಅರಸರನ್ನು ಪಿಂಚರದಲ್ಲಿಟ್ಟಿದ್ದನು. ಅವರು ಅಲ್ಲೇ ಸತ್ತರು."[೧] ಜನರು ಹಾಡುವ ಹಾಡಿನಿಂದ ಈ ಸರದಾರ ಕಾಳಪ್ಪನಾಗಲಿ, ಅರಸು ವೆಂಕಟರಾಯನಾಗಲಿ, ಜನತೆಗೆ ಬೇಕಾದಂತೆ ಕಂಡುಬರುವುದಿಲ್ಲ. ಜನರು ಕಾಳಪ್ಪನ ಮರಿಗುದರಿಯು ಸಾಯಲೆಂದೂ, ಚದುರಂಗ ಮಹಾಲು ಮುರಿಯಲೆಂದೂ, ಆ ಸುದ್ದಿಯು 'ಸೊರಟೂರ' ಸದರಿಗೆ ಹರಿಯಲೆಂದೂ ಒಂದು ಬೇಡಾದ ಧ್ವನಿಯಲ್ಲಿ ಹಾಡಿದ್ದಾರೆ. ಟೀಪು ಸುಲ್ತಾನನು ಕಾಳಪ್ಪನನ್ನು ಬಲು ಕ್ರೂರ ರೀತಿಯಿಂದ ಪಂಜರದಲ್ಲಿ ಹಾಕಿ ನಡೆಯಿಸಿಕೊಂಡನು. ಅವನು ಆ ಪಂಜರದಲ್ಲಿಯೇ ಮರಣ ಹೊಂದಿದನೆಂದು ತಿಳಿದುಬರುವುದು.

ನೀರಿಲ್ಲದ ನರಗುಂದಕ್ಕೆ ಅನೇಕ ಕೆರೆಗಳನ್ನು ಕಟ್ಟಿಸಿ ಪ್ರಜೆಗಳ ಹಿತವನ್ನು ಬಗೆಸಿ ಆಳಿದ ನರಗುಂದದ ಕಡೆಯ ಅರಸನಾದ ಭಾಸ್ಕರ (ಬಾಬಾಸಾಹೇಬ)ನು ಬೆಳುವಲದ ಕನ್ನಡಿಗರಿಗೆ ಬೇಕಾದ ಅರಸನಾಗಿದ್ದನು. ಆಗ ನರಗುಂದ ರಾಜಮನೆತನವು ಕನ್ನಡ ತನವನ್ನು ಹೊಂದಹತ್ತಿತ್ತೆಂದು ಹೇಳಬಹುದು. ಭಾಸ್ಕರರಾವನು ನರಗುಂದದ ಸುತ್ತಮುತ್ತಲಿನ ಕನ್ನಡ ಬಂಟರನ್ನೇ ತನ್ನ ಸೇನಾಧಿಕಾರಿಗಳನ್ನಾಗಿ ನೇಮಿಸಿಕೊಂಡಿದ್ದನೆಂದು ತಿಳಿದುಬರುತ್ತದೆ. ಅಂತೆಯೇ ನರಗುಂದವನ್ನುಳಿಸಲು ಕನ್ನಡ ವೀರರು ಹೆಣಗಾಡಿದ್ದಾರೆ. ನರಗುಂದ ಬಂಡಾಯದ ಮೂಲ ಕಾರಣವೆಂದರೆ ದತ್ತಕ ಪ್ರಕರಣವು. ಅದನ್ನು ವಿಚಾರಿಸಲು ಕರ್ನಲ್ ಮ್ಯಾನ್ಸನ್ ಸಾಹೇಬನು ದಂಡಿನೊಡನೆ ಸೋರೇಬಾನದಲ್ಲಿ ಬಂದಿಳಿದ. ಭೇದ ನೀತಿಯನ್ನರಿತು ರಾಜ್ಯವಾಳದ ಇಂಗ್ಲಿಷರು ನರಗುಂದದ ಅಂತರಂಗವನ್ನರಿತುಕೊಳ್ಳಲು ಸಂಚು ಹೂಡಿದರು. ಸಂಸ್ಥಾನದ ಎಲ್ಲ ಗುಟ್ಟುಗಳನ್ನು ಬಲ್ಲ ಬನ್ಯಾ (ಮನ್ಯಾ) ಬಾಪು, ಹಾಗೂ ಕೃಷ್ಣಾಜಿ ಪಂತ ಜೋಶಿ ಎಂಬ ಬ್ರಾಹ್ಮಣರಿಗೆ ಆಶೆ, ಆಕಾಂಕ್ಷೆಗಳನ್ನು ತೋರಿಸಿ, ಗುಪ್ತಪತ್ರ ವ್ಯವಹಾರದಿಂದ ಅರಸನ ಇಂಗಿತವನ್ನು ಇಂಗ್ಲಿಷರು ಆಗಲೇ ಅರಿತಿದ್ದರು. ಅಂತೆಯೇ ಜನಪದವು "ಬಾಪು ಪಂತರ ಸಂಚು, ಘಾತ ನರಗುಂದಾತೊ" ಎಂದು ಹಾಡಿದೆ. ಈ ಹಾಡಿನಲ್ಲಿಯ 'ಬಾಪು' ಅಂದರೆ ಮನ್ಯಾಬಾಪು: 'ಪಂತ' ಅಂದರೆ – ಕೃಷ್ಣಾಜಿಪಂತ ಜೋಶಿ ಅವರೇ ಇರಬೇಕು. ಇಂಗ್ಲಿಷರ ದಂಡು ಸೋರೇಬಾನದಲ್ಲಿ ಬಂದಿಳಿದ ಸುದ್ದಿಯನ್ನು ನರಗುಂದ ವೀರರು ಕೇಳಿ, ಅರಸನ ಮುಂದೆ ಪಂತ ತೊಟ್ಟು ಇಂಗ್ಲಿಷರಿಗೆ ತಕ್ಕ ಶಾಸನ ಕೊಡಲು ಮರುದಿನವೇ ಸಜ್ಜ ಮಾಡಿಕೊಂಡು ಹೊರಟರು. ನರಗುಂದ ಅರಸನ ಹಂಡಬಂಡ ಕುದುರೆಯು ಪ್ರಸಿದ್ಧವಿತ್ತೆಂದು ಜನತೆಯಲ್ಲಿ ಈಗಲೂ ಪ್ರತೀತಿಯಿದೆ. ಅದನ್ನು ಭಾಸ್ಕರರಾಯನು ಹತ್ತಿಕೊಂಡು ತನ್ನ ಸರದಾರರೊಂದಿಗೆ ಸೋರೇಬಾನಕ್ಕೆ ಬಂದನು. ಸೋರೇಬಾನದ ಕೊಳ್ಳದಲ್ಲಿ ತಂಗಿದ ಇಂಗ್ಲಿಷರ ದಂಡು ನರಗುಂದದ ದಂಡು ಬರುವುದನ್ನು ಕೇಳಿ ಅದನ್ನು ತಡೆಯಲು ಕೊಳ್ಳವನ್ನು ಬಿಟ್ಟು ಮುಂದೆ ಹರಿಯುವ ಮಲಪಹಾರಿಯ ದಂಡೆಯ ಮೇಲಿನ 'ಹಂಪಿಹೊಳೆ' ಎಂಬ ಹಳ್ಳಿಯ ದೊಡ್ಡ ಬಯಲಿಗೆ ಬಂದಂತೆ ಕಾಣುತ್ತದೆ. ಎರಡೂ ದಂಡುಗಳ ನಡುವೆ ಅಲ್ಲಿಯೇ ಘೋರವಾದ ಕದನವು ನಡೆದಂತೆ ತೋರುತ್ತದೆ. ಅದನ್ನು ಪ್ರತ್ಯಕ್ಷ ನೋಡಿದ ಜನಪದವು

ಕೆಂಪು ಮಾರಿಯ ದಂಡು, ಗುಂಪಾಗಿ ಮುತ್ಯಾರೊ
ಕಂಪೀಸಿ ಹೋತೊ ನರಗುಂದೊ । ಬಾಬಸಾಬ
ಹಂಪಿ ಹೊಳಿಮುಂದ ತಡುವ್ಯಾನೊ ॥

ಎಂದು ಹಾಡಿದೆ. ಒಟ್ಟಾಗಿ ಬಂದ ನರಗುಂದ ಬಂಟರ ಹೊಡತಕ್ಕೆ ಇಂಗ್ಲಿಷರ ದಂಡು ಚೂರು ಚೂರಾಗಿ ಅಂಜಿ ಚೆದರಿತು. ಮಾನ್ಸನ್ ಸಾಹೇಬನು ಓಡಿಹೋಗಿ ಜೀವ ಉಳಿಸಿಕೊಳ್ಳಲು ಕೊಳ್ಳದಲ್ಲಿಯ ಗುಡಿಯನ್ನು ಹೊಕ್ಕು ಒಳಬಾಗಿಲವನ್ನು ಹಾಕಿಕೊಂಡನು. ನರಗುಂದ ವೀರರು ಅವನನ್ನು ಹುಡುಕಾಡಿ ಗುಡಿಯ ಸಭಾಮಂಟಪಕ್ಕೆ ಬರಲು ಗುಡಿಯ ಬಾಗಿಲವು ಒಳಗಿನಿಂದ ಮುಚ್ಚಿರುವುದನ್ನರಿತು ಮ್ಯಾನ್ಸನ್ನನು ಗರ್ಭಗುಡಿಯಲ್ಲಿಯೇ ಅಡಗಿಕೊಂಡಿರುವನೆಂದು ನಿರ್ಧರಿಸಿ ಬಾಗಿಲ ನೂಕಹತ್ತಿದರು. ವೀರ ಸರದಾರನಾದ 'ವಿಷ್ಣು' ಬಾಗಿಲವನ್ನೊದ್ದು ಒಳನುಗ್ಗಿದನು. ಗರ್ಭಗುಡಿಯ ಕಂಬದ ಬೋದುಗೆಯ ಅಡ್ಡತೊಲೆಗೆ ತೆಕ್ಕೆ ಬಿದ್ದು, ಹಲ್ಲಿಯಂತೆ ಅವಚಿಕೊಂಡಿರುವ ಇಂಗ್ಲಿಷ ಸೇನಾಪತಿಯು ಸುತ್ತಲು ಹುಡುಕಿದರೂ ಕತ್ತಲಲ್ಲಿ ಕಾಣಲಿಲ್ಲವೆಂದು ಅಲ್ಲಿಯ ಜನರು ಈಗಲೂ ಹೇಳುತ್ತಾರೆ. ನರಗುಂದ ವೀರನು (ವಿಷ್ಣು) ತೊಲೆಗೆ ತೆಕ್ಕಿಬಿದ್ದ ಮ್ಯಾನ್ಸನ್ನನ ಸುಳುಹಿಡಿದು ಇಳಿಬಿದ್ದ ಜುಟ್ಟಲ ಹಿಡಿದೆಳೆಯಲು, ಅಧಿಕಾರಿಯು ಜೀವದಾನವನ್ನು ಬೇಡಿದರೂ ಅವನ ರುಂಡವನ್ನು ಕೊಯ್ದೇಬಿಟ್ಟನು, ಎಂದು ಜನರು ಹೇಳುತ್ತಾರೆ. ಮರುದಿನವೇ ಅವನ ರುಂಡವು ನರಗುಂದ ಅಗಸೆಯ ಬಾಗಿಲಿಗೆ ತೂಗಾಡಹತ್ತಿತ್ತು. ಕರ್ನಾಟಕ ಗ್ಯಾಝುಟೀಯರಲ್ಲಿ ಇವೇ ಮಾತುಗಳು ಹೇಳಲ್ಪಟ್ಟಿವೆ. "ಸನ್ ೧೮೫೭ರಲ್ಲಿ ಈ ಸಂಸ್ಥಾನದ ವೊಡಿಯನಾದ ಭಾಸ್ಕರರಾವ ಬಾಬಾಸಾಹೇಬನಿಗೆ ಸರಕಾರದವರು ದತ್ತಕ ಪುತ್ರನನ್ನು ತಕ್ಕೊಳ್ಳಲಿಕ್ಕೆ ಅಪ್ಪಣೆ ಕೊಡದಿದ್ದ ಕಾರಣ ಅವನು ಬಂಡು ಹೂಡಿದನು.

---

೧. 'ಟೀಪುವಿನ ಬಖರದೊಳಗಿಂದ' 'ಚಿತ್ರೂರ ಬಂಡಾಯ', ಪು. ೫೭

ಆರಂಭಕ್ಕೆ ಸರಕಾರದವರು ಕೋಟೆಯ ಮೇಲಿನ ತೋಪುಗಳನ್ನೂ, ಮದ್ದು ಗುಂಡನ್ನೂ, ಧಾರವಾಡಕ್ಕೆ ಕಳಿಸೆಂದು ಭಾಸ್ಕರರಾಯನಿಗೆ ಅಪ್ಪಣೆ ಮಾಡಿದರು. ಆ ಪ್ರಕಾರ ಅವನು ಕೆಲವು ತೋಪುಗಳನ್ನೂ, ಮದ್ದು ಗುಂಡನ್ನೂ, ಧಾರವಾಡಕ್ಕೆ ಕಳಿಸಿದ ಬಳಿಕ ಮುಂಡರಿಗೆಯ ಭೀಮರಾಯನು ಬಂಡಾಯ ಮಾಡಿದ ಸುದ್ದೀ ಕೇಳಿ, ಉಳಿದ ತೋಪುಗಳನ್ನು ಕೋಟೆಯ ಮೇಲೆ, ಸಜ್ಜು ಮಾಡಿ ನಿಲ್ಲಿಸಿ ಭಾಸ್ಕರರಾಯನು ಬಂಡಾಯ ಹೂಡಿದನು. ಅಷ್ಟರೊಳಗೆ ಪೊಲಿಟಿಕಲ್ ಏಜೆಂಟನಾದ ಮ್ಯಾನ್ಸನ್ ಸಾಹೇಬನು ಭಾಸ್ಕರರಾಯನಿಗೆ ಬರಿದದ್ದೊಂದು ಪತ್ರದಿಂದ ಭಾಸ್ಕರರಾಯನು ಸಿಟ್ಟಾಗಿ ಕೆಲವು ದಂಡು ತಕ್ಕೊಂಡು ಸಾಹೇಬನು ಆಗ ಇದ್ದ ಸೋರೀಬಾನವೆಂಬ ಗ್ರಾಮಕ್ಕೆ ಹೋಗಿ ಅದನ್ನು ಸುತ್ತುಗಟ್ಟಿ ಮ್ಯಾನ್ಸನ್ನನ ಕುತ್ತಿಗೆ ಕೊಯಿದು ಅವನ ರುಂಡವನ್ನು ನರಗುಂದದ ಅಗಸೇ ಬಾಗಿಲಿಗೆ ವೈದು ಕಟ್ಟಿದನು."[೨] ಈ ಭೀಕರ ಸ್ಥಿತಿಯನ್ನು ಕಂಡ ಜಾನಪದವು.

ವಿಷ್ಣ್ಯಾ ತಾಂಡೆದಬಂಟ, ಕಣ್ಣೆಟ್ಟು ಸಿರಕೋದ
ಮಣ್ಣ ಪಾಲಾದ ಮೆನಸನ್ನ। ನರಗುಂದ
ಅಣ್ಣ ಕೂಗ್ಯಾನೊ ಕಾಳಗೊ ॥

ಜನತೆಯ ಬಾಯಲ್ಲಿದ್ದ ಈ ವಿಷ್ಣು ಸರದಾರನು ನರಗುಂದಕ್ಕೆ ಸಮೀಪದಲ್ಲಿರುವ ಒಂದು ಲಮಾಣಿ ತಾಂಡೆದ ವೀರಪುರುಷನೆಂದು ತಿಳಿದುಬರುವುದು. ಇವನೇ ಮ್ಯಾನ್ಸನ್ ಸಾಹೇಬನ ರುಂಡವನ್ನು ಕೊಯ್ದವನು. ಮುಂದೆ ನರಗುಂದವು ಹಾಳಾಗಲು ಇವನು ಬಾಬಾಸಾಹೇಬನ ಬೆನ್ನಹಿಂದಲೇ ಇದ್ದನು. ಬಾಬಾ ಸಾಹೇಬನು ಇಂಗ್ಲಿಷರ ಕೈಗೆ ಸಿಕ್ಕರೂ ಇವನು ಸಿಗಲಿಲ್ಲವೆಂದು ಜನಪದದಲ್ಲಿ ಪ್ರತೀತಿಯಿದೆ.

ಇಂಗ್ಲಿಷರಿಗೆ ಸೋಲು ಆಗಿ ನರಗುಂದವು ಜಯವನ್ನು ಸಂಪಾದಿಸಿದರೂ, ಈ ದುಃಪ್ರಸಂಗದ ಕಾಡಗಿಚ್ಚು ಇಂಗ್ಲಿಷರನ್ನು ಮತ್ತೆ ಹೆಚ್ಚಾಗಿ ಕೆರಳಿಸಿತು. ಸರ್ ಜಾನ್ ಮಾಲ್‌ಕಮ್ ಸಾಹೇಬನು ಈ ಸುದ್ದಿಯನ್ನು ಕೇಳಿ ತಪ್ತನಾಗಿ ದೊಡ್ಡ ಸೇನೆಯನ್ನು ಕೂಡಿಸಿಕೊಂಡು ನರಗುಂದ ಮುತ್ತಲು ಸಿದ್ಧನಾದನು. ಅದೇ ಸಮಯದಲ್ಲಿ ಬಾಬಾಸಾಹೇಬನ ಗೆಳೆಯನಾದ ಮುಂಡರಗಿ ಭೀಮರಾಯನು ಇಂಗ್ಲಿಷರ ವಿರುದ್ಧ ಬಂಡೆಬ್ಬಿಸಿ ನರಗುಂದ ದಂಡು ಕೂಡುವೆನೆಂಬ ಪತ್ರವು ಬಾಬಾಸಾಹೇಬನಿಗೆ ಬಂತು.

ಮುಂಡರಗಿ ಭೀಮಣ್ಣ, ಬಂಡಾಯ ಎಬ್ಬಿಸಿದ
ದಂಡು ಕೂಡ್ಯಾನೊ ನರಗುಂದ। ಬಾಬಣ್ಣ
ಕೆಂಡ ಕಾರ್‍ಯಾನೊ ಕುಂಪಣಿಗೊ ॥

ಮುಂಡರಗಿ ಭೀಮರಾಯನ ಪತ್ರವನ್ನೋದಿದ ಬಾಬಾಸಾಹೇಬನಿಗೆ ಮತ್ತಷ್ಟು ಬಲ ಬಂದಂತಾಯಿತು. ಮುಂಡರಗಿಯಿಂದ ಹಲಕೆಲವು ಸಹಾಯವೂ ನರಗುಂದಕ್ಕೆ ತಲುಪಿತು. ಆದರೆ ಇನ್ನೂ ಭೀಮರಾಯನು ಬರುವುದು ಕೆಲವು ದಿನ ತಡವೆಂದು ಬಾಬಾ ಸಾಹೇಬನಿಗೆ ತಿಳಿದುಬಂತು. ಈ ಹದಗೆಟ್ಟ ವಾತಾವರಣವನ್ನು ಕೇಳಿದ ಇಂಗ್ಲಿಷರು ಮೊದಲು ಧಾರವಾಡದ ಕೋಟೆಯನ್ನು ಭದ್ರಮಾಡಹತ್ತಿದರೆಂದು ಇತಿಹಾಸದಿಂದ ತಿಳಿದುಬರುತ್ತದೆ. ಮುಂಡರಗಿ ಭೀಮರಾಯನು ನರಗುಂದ ದಂಡನ್ನು ಬಂದು ಕೂಡುವದರೊಳಗಾಗಿಯೇ ನರಗುಂದವನ್ನು ಮುತ್ತಿ ವಸಪಡಿಸಿಕೊಳ್ಳಬೇಕೆಂದು ಮಾಲ್‌ಕಮ್ ಸಾಹೇಬನು ಒಳಸಂಚಿನ ಧೈರ್ಯದಿಂದ ನರಗುಂದದ ಸಮೀಪಕ್ಕೆ ಬಂದನು. ಕಾರಭಾರಿಗಳಾದ ಬನ್ಯಾಬಾಪು ಹಾಗೂ ಕೃಷ್ಣಾಜಿ ಪಂತ ಜೋಶಿ ಅವರು ನರಗುಂದವನ್ನು ಮಣ್ಣುಗೂಡಿಸಲು ಯಾರಿಗೂ ಗೊತ್ತಾಗದಂತೆ ಆಗಲೇ ಮದ್ದಿನಲ್ಲಿ ಶಗಣಿ, ರಾಗಿ ಮೊದಲಾದುವುಗಳನ್ನು ಕೂಡಿಸಿ, ಸಂಸ್ಥಾನದ ಇಂಗಿತವನ್ನು ಅರಿತುಕೊಂಡು ನರಗುಂದದಿಂದ ಪರಾರಿಯಾಗಿ ಮಾಲ್‌ಕಮ್ ಸಾಹೇಬನನ್ನು ಕೂಡಿದರು. ಅವರ ಹಾದಿಯನ್ನೇ ಕಾಯುತ್ತಲಿದ್ದ ಇಂಗ್ಲಿಷರ ದಂಡು ಧೈರ್ಯದಿಂದ ಮುನ್ನುಗ್ಗಹತ್ತಿತು. ನರಗುಂದದ ಆಯಕಟ್ಟಿನ ಗುಟ್ಟನ್ನರಿತ ವಿಶ್ವಾಸಘಾತಕರಾದ ಆ ಕಾರಭಾರಿಗಳು ಬೆಳಗಾಗುವದರಲ್ಲಿಯೇ ಸೂಚನೆಗಳನ್ನು ಕೊಟ್ಟು ನರಗುಂದ ಮುತ್ತಿಸಿದರು. ಇಂಗ್ಲಿಷರು ಫಿರಂಗಿಗಳನ್ನು ಹಾರಿಸಹತ್ತಿದರು. ನರಗುಂದದ ದೈವ! ಮದ್ದಿನಲ್ಲಿ ಶಗಣಿ, ರಾಗಿ ಮೊದಲಾದುವುಗಳ ಸರಿಬೆರಿಕೆಯಾಗಿದ್ದರಿಂದ ನರಗುಂದ ತೋಪುಗಳು ಹಾರಲಿಲ್ಲ. ಅರಸನು ಗಾಬರಿಯಾದನು. ನರಗುಂದ ವೀರರು ನಡುಗಿದರು. ಒಳಸಂಚು ಸಫಲವಾಯಿತು. ಪಿತೂರಿಗಾರರ (ಕಾರಭಾರಿಗಳ) ಸಹಾಯದಿಂದ ಇಂಗ್ಲಿಷರು ಕೋಟೆಯ ಒಳಹೊಕ್ಕರು. ನರಗುಂದದ ದಂಡು ದಿಕ್ಕಾಪಾಲಾಯಿತು. ವಿಧಿಯ ಸಂಕಲ್ಪ! ಮುಂಡರಗಿ ಭೀಮರಾಯನೂ ಸಮಯಕ್ಕೆ ಬರಲಿಲ್ಲ. ನರಗುಂದವು ನಿಪ್ಪತ್ತಿಗಿ (ನಿಷ್ಪುತ್ರಕ)ಯಾಗಿ ಇಂಗ್ಲಿಷರ ಕೈಸೇರಿತು. ಬಾಬಾಸಾಹೇಬನು ತನ್ನ ನಂಬಿಗಸ್ತ ಸರದಾರರೊಂದಿಗೆ ನರಗುಂದ ಬಿಟ್ಟು ಓಡಿಹೋದನು. ಅನೇಕ ವೀರರು ಕಾದಿ ಮಡಿದರು. ಇಂತಹ ದುರಂತವನ್ನು ಕಂಡು ಜನಪದವು ವಿಧಿಸಂಕಲ್ಪವೆಂದು ಹಾಡಿದೆ.

ಬಾಪು ಪಂತರ ಸಂಚು, ಘಾತನರಗುಂದಾತೊ
ಹೋತೊ ಹಾಳಾಗಿ ನಿಪ್ಪತ್ತಿ। ನರಗುಂದ
ಖ್ಯಾತಿ ಜನದಾಗ ಕಡೆತನಕೊ ॥

ಬಾಬಾ ಸಾಹೇಬನು ಕೈಹಿಡಿದ ಮಡದಿಯನ್ನು ಬಿಟ್ಟ; ಹಡೆದ ತಾಯಿಯಯನ್ನು ಮರೆತ, ನರಗುಂದ ಪ್ರಜೆಗಳನ್ನೂ ಕೈಬಿಟ್ಟ, ಕಟ್ಟಕಡೆಗೆ ನಿರಾಶೆಗೊಂಡು ನಾಡನ್ನೇ ತೊರೆದು ಹೋದ.

---

೨. ಕರ್ನಾಟಕ ಗ್ಯಾಝಿಟೀಯರ್, ಪು. ೪೮೧

ಮಡದಿ ಮಕ್ಕಳ ಬಿಟ್ಟ, ಹಡದ ತಾಯಿಯ ಬಿಟ್ಟ
ಕಡೆಗಾತ ಬಿಟ್ಟ ನಾಡಾಸೆ। ಬಾಬು ಸಾಬ
ಕೇಡಿಗೆ ಬಿಟ್ಟ ನರಗುಂದ ॥

ಜನಪದವು ಅರಸನ ಸ್ಥಿತಿಗತಿಗಳನ್ನವಲೋಕಿಸಿ ಮರಮರನೆ ಮರುಗಿದೆ. ಅವನ ಕುಲದವರೇ ಅವನಿಗೆ ಘಾತಕರಾದರು.

ಹಾರೂರು ಹಾವಾಗಿ, ಕೋರ್‍ಯಾರೊ ಒಳಸಂಚು
ಗಾರಗಾರಾತೊ ನರಗುಂದೊ। ಬಾಬಸಾಬ
ಕಾರಮಳೆಯಾಗ ಮನೆಬಿಟ್ಟ ॥

ಇಲ್ಲಿ ಒಕ್ಕಲಿಗನು ತನ್ನ ಹಾಡಿನಲ್ಲಿ ನರಗುಂದ ಅರಸನು ಅರಮನೆ ಬಿಟ್ಟ ಋತು ಮಾನವನ್ನು ಹಾಡಿದ್ದಾನೆ. ಆ ಕಾಲವು ಅದೇ ಮುಂಗಾರಿಮಳೆ ಪ್ರಾರಂಭಕಾಲ. ಇನ್ನೊಂದು ಪದ್ಯದಲ್ಲಿ, "ಕೆರೆ ಕಡಿಸಿ ನೀರಕುಡಿಲಿಲ್ಲ । ಬಾಬಣ್ಣ । ತಿರುಗಿ ನರಗುಂದ ಹೋಗಲಿಲ್ಲ ॥" ಎಂದು ಬಂದಿವೆ. ಕೋಟೆಯಲ್ಲಿ ಕೆರೆಯನ್ನು ಕಟ್ಟಿಸಿದ ವರುಷವೇ ನರಗುಂದ ಬಂಡಾಯವಾಯಿತೆಂದು ವಿಶದವಾಗುತ್ತದೆ. ಕಟ್ಟಿಸಿದ ಮೇಲೆ ಅರಸನು ಅದರ ನೀರನ್ನು ಕುಡಿಯಲಿಲ್ಲೆಂಬ ಮಾತು ಮಳೆಗಾಲವು ಸುರುವಾಗುವುದರೊಳಗೆ ಬಾಬಾಸಾಹೇಬನು ನರಗುಂದವನ್ನು ಬಿಟ್ಟು ಹೋಗುವ ಕಾಲವು ಬಂತು. ಆ ಕಾಲವು ಮುಂಗಾರಿಯ ಮಳೆಗಾಲವೆಂದು ಮೇಲಿನ ಪದ್ಯದಲ್ಲಿ 'ಕಾರಮಳೆಯಾಗ ಮನೆಬಿಟ್ಟ' ಎಂದು ಹೇಳಿದೆ. ಇಷ್ಟೆಲ್ಲ ಅನಾಹುತಕ್ಕೆ ಹಾರುವರೇ ಕಾರಣವೆಂದು ಜನವು ಬಿಚ್ಚಿ ಹಾಡಿದೆ. ಹಾರುವರು 'ಬಾಡುಗಳ್ಳ'ರೆಂದೂ ಅವರನ್ನು ನಂಬಿ ನರಗುಂದ ಅರಸನು ಕಾಡುಪಾಲಾದನೆಂದೂ ಜನಪದವು ದುಃಖಿಸಿದೆ.

ನರಗುಂದ ರಾಜ್ಯವೇ ತಮ್ಮದಾಗುವುದೆಂದು ನಂಬಿ ಪಿತೂರಿ ಮಾಡಿದ ಕಾರಭಾರಿಗಳ ಗತಿಯೇನಾಯಿತೆಂಬುದನ್ನು ನೋಡಿದ ಜನಪದವು ತಮ್ಮ ಮಕ್ಕಳು ಮೊಮ್ಮಕ್ಕಳದನ್ನರಿಯಲೆಂದು ಹಾಡಿದೆ. ಆಶೆ ಮಾಡಿ ದೇಶವನ್ನು ಕಡೆಮಾಡಿ ಕಾಸುಕವಡೆಗಾಗಿ ನರಗುಂದವನ್ನು ಹಾಳುಮಾಡಲುದ್ಯುಕ್ತರಾದ, ಹಾಳುಮಾಡಿದ ಆ ದೇಶದ್ರೋಹಿಗಳನ್ನು ಪರರಾದರೂ ನಂಬಬಹುದೇ? ಮಾಲ್‌ಕಮ್ ಸಾಹೇಬನು ಅವರ ಸಹಾಯದಿಂದ (ಒಳಸಂಚಿನಿಂದ) ನರಗುಂದವನ್ನು ಪೂರ್ಣ ಕೈವಶಮಾಡಿಕೊಂಡ ಮೇಲೆ ಆ ಘಾತಕರನ್ನು ನಂಬಲು ಹಿಂಜರಿಯಹತ್ತಿದ. ತಮ್ಮವರ ಕತ್ತನ್ನು ಕೊಯ್ದ ಈ ಕಾರಭಾರಿಗಳು ಹೆರವರನ್ನು ಬಿಡುವರೇ? ಎಂದು ನಿರ್ಧರಿಸಿ ಅವರನ್ನು ಕರೆಸಿ ತೋಪಿನ ಬಾಯಿಗೆ ಕಟ್ಟಿಸಿ ಹಾರಿಸಿದನೆಂದು ಜನಪದವು ಈಗಲೂ ಸಾರಿಹೇಳುತ್ತದೆ. ಅದನ್ನೇ ಹಾಡಿನಲ್ಲಿ ಕಾಣಬಹುದಾಗಿದೆ." "ಕಾಸುಕವಡೆಗೆ ಕಡೆಗಾಗಿ । ಹಾರೂರು । ಹಾಸಿ ಬೆಂಕ್ಯಾಗ ಬೂದ್ಯಾಗಿ ॥" ಎಂದು ಬರುವ ಈ ನುಡಿಗಳು ಕಾರಭಾರಿಗಳ ಕೊನೆಯನ್ನು ಸೂಚಿಸದಿರಲಾರವು. ನರಗುಂದ ಪಟ್ಟಣವನ್ನು ಬಿಟ್ಟು ಹೋದ ಬಾಬಾ ಸಾಹೇಬನನ್ನೂ ಹಿಂಬಾಲಿಸಿದ ಹಲ ಕೆಲವು ಸರದಾರರನ್ನು ಹಿಡಿದು ತರಲು ಸರಕಾರವು ಅನೇಕರನ್ನು ಸುತ್ತಲೂ ಹುಡುಕಲು ಕಳುಹಿಸಿತು. ವೇಷ ಬದಲಾಯಿಸಿಕೊಂಡು ಅನ್ನ ನೀರುಗಳಿಲ್ಲದೆ ಅನೇಕ ದಿನಗಳವರೆಗೆ ನರಗುಂದ ಅರಸನು ಸುತ್ತಲೂ ಅಡ್ಡಾಡಿದನು. ಅವನ ಅಣ್ಣ-ತಮ್ಮಂದಿರಾದ ರಾಮದುರ್ಗ ಸಂಸ್ಥಾನದವರು ಬಾಬಾಸಾಹೇಬನಿಗೆ ಯಾವ ಸಹಾಯವನ್ನೂ ನೀಡಲಿಲ್ಲ. ಆಗ ರಾಮದುರ್ಗದ ಅರಸು, ರಾಮರಾವ (ಹರಿಹರರಾಯ)ನು ಬಾಬಾಸಾಹೇಬನ ಖಾಸ ತಮ್ಮನಿದ್ದು ರಾಮದುರ್ಗ ಸಂಸ್ಥಾನಕ್ಕೆ ದತ್ತಕ ಹೋಗಿದ್ದನು. ಸಹಾಯ ಮಾಡುವನೆಂದು ಹೇಳಿ ಕಳುಹಿಸಿದ ಮುಂಡರಗಿ ಭೀಮರಾಯನನ್ನೂ ಸರಕಾರವು ಮುರಿದು ಮೂಲೆಗುಂಪು ಮಾಡಿದ ಸುದ್ದಿಯು ಬಾಬಾಸಾಹೇಬನಿಗೆ ತಿಳಿದುಬಂತು. ಅವನು ಹತಾಶಯನಾಗಿ, ತನ್ನ ಅತಿ ನಂಬಿಗೆಯ ಸರದಾರರಾದ ವಿಷ್ಣು, ರಾಮರಾವ ಮೊದಲಾದವರೊಡನೆ ತೊರಗಲ್ಲ ಗುಡ್ಡಗಾಡಿನಲ್ಲಿ ತಿರುಗಾಡುತ್ತಿರಲು ಜ್ವರ ಬಂದು ಬಳಲುವ ಪರಿಸ್ಥಿತಿಯು ಬಂತು. ಆಗ ತನ್ನ ಗೆಳೆಯನಾದ ತೊರಗಲ್ಲ ಗೌಡನ ಮನೆಗೆ ಬಂದು ಇರಹತ್ತಿದನು. ಈ ಸುದ್ದಿಯು ಇಂಗ್ಲಿಷರಿಗೆ ತಿಳಿಯಲು ಸರ್ ಫ್ರಾಂಕ ಸೂಟರ್‌ನೆಂಬ ಇಂಗ್ಲಿಷ್ ಸೇನಾನಾಯಕನು ತೊರಗಲ್ಲ ಗೌಡನ ಮನೆಯನ್ನು ಒಮ್ಮಿಂದೊಮ್ಮೆ ಮುತ್ತಿ ಬಾಬಾಸಾಹೇಬನನ್ನು ಸೆರೆ ಹಿಡಿದು ಬೆಳಗಾವಿಗೆ ಒಯ್ದನೆಂದು ಆ ಭಾಗದ ಜನರು ಹೇಳುವರು. ಬಾಬಾಸಾಹೇಬನನ್ನು ಹಿಂಬಾಲಿಸಿದ ಸರದಾರರು ಮಾತ್ರ ಕಡೆಯವರೆಗೂ ಇಂಗ್ಲಿಷರ ಕೈಯಲ್ಲಿ ಸಿಗಲಿಲ್ಲವೆಂದು ತಿಳಿದುಬರುತ್ತದೆ.

ನರಗುಂದ ಅರಸನಿಗೆ, ವನವಾಸ ಬಂದೀತೊ
ತಿರುಗ್ಯಾನೊ ಕಾಡ ಪಾಲಾಗಿ। ಸೂಟರಗ
ತೊರಗಲ ಸಿಮ್ಯಾಗ ಕೈಸಿಕ್ಕೊ ॥

ಎಂದು ರೈತನು ಹಂತಿಯಲ್ಲಿ ಹಾಡಿದ್ದಾನೆ. ಕುಂಪಣಿ ಸರಕಾರದವರ ಕಾಗದ ಪತ್ರಗಳ ಪ್ರಕಾರ ಈ ಸಂಗತಿಯು ನಿಜವೆಂದು ಕಂಡುಬರುವುದು. ಮುಂದೆ ಬಾಬಾಸಾಹೇಬನ ವಿಚಾರಣೆಯು ಬೆಳಗಾವಿಯಲ್ಲಿ ನಡೆದು ಅಪರಾಧಿಯೆಂದು ಸಿದ್ಧಮಾಡಿ ಅಲ್ಲಿಯೇ ಗಲ್ಲಿಗೇರಿಸಿದರೆಂದು ಇತಿಹಾಸದಿಂದ ತಿಳಿದುಬರುವುದು. ನರಗುಂದವು ಇಂಗ್ಲಿಷರ ವಶವಾಗುವ ಮುನ್ನವೇ ಬಾಬಾಸಾಹೇಬನ ತಾಯಿ ಯಮುನಾಬಾಯಿಯೂ, ಧರ್ಮಪತ್ನಿ ಸಾವಿತ್ರಿಬಾಯಿಯೂ, ಇಂಗ್ಲಿಷರ ಕೈಗೆ ಸಿಗದೆ ನರಗುಂದವನ್ನು ಬಿಟ್ಟುಗೊಟ್ಟು ಸಂಗಳದ ಮುಂದೆ ಹರಿಯುವ ಮಲಪಹಾರಿಯಲ್ಲಿ ಹಾರಿಕೊಂಡರೆಂದು ಜನರು ಹೇಳುತ್ತಾರೆ. ಅವರ ಪ್ರೇತಗಳು ತೇಲುತ್ತ, ತೇಲುತ್ತ ಬಂದು ರಾಮದುರ್ಗ ಸಂಸ್ಥಾನದಲ್ಲಿಯ ಬೂದೀಹಾಳದ ದಂಡೆಗೆ ತಲುಪಿದವೆಂದೂ, ಜನರು ಅವುಗಳನ್ನು ಗುರುತಿಸಿ ಬೋರಾಡಿ ಅತ್ತು ಅಂತ್ಯವಿಧಿಯನ್ನು ಮಾಡಿದರೆಂದೂ ಅವರ ಸ್ಮಾರಕಗಳನ್ನು ರಾಮದುರ್ಗ ಅರಸನು ಆಗ ಅಲ್ಲಿ ಮಾಡಿಸಿದನೆಂದೂ ಜನಪದದಲ್ಲಿ ವದಂತಿಯಿದೆ. ಅಲ್ಲದೆ ಆ ಭಾಗದ ಹೆಣ್ಣುಮಕ್ಕಳು ನರಗುಂದ ಅರಸಿಯ ಹಾಡನ್ನು ಹಾಡುತ್ತಾರೆ. ಹೀಗೆ ನರಗುಂದ ಸಂಸ್ಥಾನವು 'ನಿಷ್ಪತ್ತ'ಗಿಯಾಗಿ ಹೇಳಲು ಕೂಡ ಹೆಸರಿಲ್ಲದೆ ಹೋಯಿತು.

ನರಗುಂದವು ಹಾಳಾಗುವ ಮುನ್ನ ಅನೇಕ ಅಪಶಕುನಗಳು ರಾಜಮನೆತನದಲ್ಲಿ ಸಂಭವಿಸಿ ಹೋಗಿವೆ. ಆಗ ನರಗುಂದಕ್ಕೆ ಒಂದು ದೊಡ್ಡ ಬಿರುಗಾಳಿಯು ಬೀಸಿ ಮಾಳಿಗೆಯ ಮೇಲೆ ಬೆಳೆದ ಹುಲ್ಲನ್ನು ಸಹ ಸವರಿಕೊಂಡು ಹೋಯಿತೆಂದೂ, ಇದು ಅಶುಭ ಚಿನ್ಹವೆಂದು ರಾಜಮನೆತನದವರು ಹಳಹಳಿಸಿದರೆಂದೂ ಜನಪದವು ಹೇಳುವುದು.

ಮಾಳಿಮ್ಯಾಲಿನ ಹುಲ್ಲ, ಗಾಳಿಗ್ಹಾರಿದರೇನ
ಗಾಲಮೇಲಾತ ನರಗುಂದ। ಬಾಬಾ ಸಾಬ
ಗಾಳೀಗೆ ಬಾಯ ಬಿಡತಾನೊ ॥

ಎಂದು ಆ ಗಾಳಿಯ ಅಪಶಕುನವು ಹಾಡಿನಲ್ಲಿಯೂ ಬಂದಿದೆ. ಅಲ್ಲದೆ ನರಗುಂದದ ಸಮೀಪದಲ್ಲಿರುವ ಹೂಲಿಯ ಮಠದ ಸ್ವಾಮಿ ಅವರಿಗೂ ನರಗುಂದ ಅರಸರಿಗೂ ನೆಟ್ಟಗಿದ್ದಿಲ್ಲವೆಂದು ತೋರುತ್ತದೆ. ನರಗುಂದ ಅರಸರು ಈ ಮಠದ ಸ್ವಾಮಿಯನ್ನು ಹಲಕೆಲವು ಪ್ರಸಂಗಗಳಲ್ಲಿ ಕಾಡಿ ಅವಮಾನ ಮಾಡಿರಬಹುದೆಂದು ಕಾಣುತ್ತದೆ. ಮಹಾಸ್ವಾಮಿಗಳವರು ಈ ಉಪದ್ರವವನ್ನು ತಾಳಲಾರದೆ, ಶಾಪ ಕೊಟ್ಟರೆಂದೂ, ಆ ಶಾಪದಿಂದಲೇ ನರಗುಂದವು ಹಾಳಾಯಿತೆಂದೂ ಹಲಕೆಲವು ಜನರು ಹೇಳುತ್ತಾರೆ.

ಹೂಲಿಸಾಮಿಯು ಕೊಟ್ಟ, ಕೋಲಮಿಂಚಿನ ಸಾಪ
ಗಾಲ ಮೇಲಾತ ನರಗುಂದೊ। ಮರುವರುಷ
ಕೂಲಿ ಕುಂಬಳಿಗೆ ಎರವಾತೊ ॥

ಇಲ್ಲಿ ಬರುವ 'ಮರುವರುಷ' ಶಬ್ದದ ಮೇಲಿಂದ ಬಾಬಾ ಸಾಹೇಬನೇ ಹೂಲಿಯ ಸ್ವಾಮಿಗಳ ಮನಸ್ಸನ್ನು ನೋಯಿಸಿರಬಹುದು. ಆ ಮಹಾಸ್ವಾಮಿಗಳು ಅವನಿಗೆ ಶಾಪವನ್ನು ಕೊಟ್ಟಿರಬಹುದು. ಅಲ್ಲದೆ, ಬಾಬಾಸಾಹೇಬನಿಗೆ ಮಕ್ಕಳಾಗಬಾರದೆಂದು ಹೂಲಿಯ ಸ್ವಾಮಿಗಳ ಶಾಪವಿತ್ತೆಂದೂ ಜನಪದದಿಂದ ತಿಳಿದುಬರುವುದು. ಅದು ಏನೇ ಇರಲಿ ಎಲ್ಲವೂ ಮಾತ್ರ ಕೂಡಿಬಂತು. ನಸೀಬದಾಟ, ಮಾಡುವದೇನು? ನರಗುಂದವು ಪತನವಾಯಿತು. ಅರಸುಮನೆತನವು ಮುಳುಗಿ ಹೋಯಿತು. ಎಲ್ಲವೂ ಮರೆತು ಹೋಗಿದೆ. ಆದರೆ ಜನಪದದೆದೆಯಲ್ಲಿ ಕೊರೆದ ಪ್ರಸಂಗಗಳು ಅಲ್ಲೊಂದು ಇಲ್ಲೊಂದು ಹಾಡಿನ ರೂಪದಲ್ಲಿ ಉಳಿದಿವೆ. ಇಂದಿನ ಯಾಂತ್ರಿಕ ಯುಗದಲ್ಲಿ ಅವೂ ಬರಬರುತ್ತ ಮರೆತು ಹೋಗಬಹುದು. ಎಲ್ಲವೂ ವಿಧಿಯ ಸಂಕಲ್ಪ!

❐

೭. ಸುಗ್ಗಿಯ ಸಂಪ್ರದಾಯಗಳು

ಸಂಪ್ರದಾಯಗಳು ಎಲ್ಲ ಜನಾಂಗಗಳಲ್ಲಿಯೂ ಕಂಡುಬರುವುವು. ಜನರ ನಡೆನುಡಿಗಳ ವಿಶಿಷ್ಟ ರೀತಿಗಳನ್ನೂ, ಪೌರಾಣಿಕ, ಐತಿಹಾಸಿಕ, ಧಾರ್ಮಿಕ, ಸಾಮಾಜಿಕ ಸಂಗತಿಗಳನ್ನೊಳಗೊಂಡು ಎಲ್ಲ ದೇಶಗಳಲ್ಲಿ ಸಂಪ್ರದಾಯಗಳಿರುವುವಲ್ಲದೆ ಅವುಗಳಲ್ಲಿ ಜನಾಂಗದ ಸಂಸ್ಕೃತಿಯು ತುಂಬಿ ಬಿಂಬಿತವಾಗಿರುವುದು. ಸಂಪ್ರದಾಯವು (tradition) ಸುಧಾರಣೆ (reformation)ಯಲ್ಲ. ಅದೊಂದು ಜನ ರೂಢಿಯಲ್ಲಿರುವ ವಿಶಿಷ್ಟವಾದ ಆಚರಣೆ. ಅದು ಇಂದು ಹುಟ್ಟಿ ಇಂದೇ ಬೆಳೆದು ಜನಾಂಗದಲ್ಲಿ ಬಂದಿಲ್ಲ. ಅದಕ್ಕೆ ದೊಡ್ಡ ಪರಂಪರೆಯುಂಟು. ಬುನಾದಿಯಿಂದಲೂ ಜನಾಂಗದಲ್ಲಿ ಬಂದಿದೆ. ಅದರ ಮಹತ್ವವನ್ನರಿತು ಜನಾಂಗವು ಅದನ್ನುಳಿಸಿಕೊಂಡು ಬಂದಿದೆ; ಆಚರಿಸುತ್ತ ಬಂದಿದೆ. ಅಂತೆಯೇ ಅದು ಹೇಗಿದ್ದರೂ ಅದನ್ನು ಜನರು ಆಚರಿಸುತ್ತಾರೆ; ಅದರ ಸಂಬಂಧ ಅಭಿಮಾನ ತಾಳುತ್ತಾರೆ. ಸಂಪ್ರದಾಯದ ಬೇರುಗಳು ಜನಾಂಗದ ರಕ್ತರಕ್ತದಲ್ಲಿ ದೂರ ಹೋಗಿವೆ. ಒಮ್ಮೊಮ್ಮೆ ಜನರು ಧರ್ಮವನ್ನು ಮರೆಯಬಹುದು, ಆದರೆ ಬಂದ ಸಂಪ್ರದಾಯವನ್ನು ಮರೆಯುವುದು ಕಠಿಣವಾಗುತ್ತದೆ. ಹಲಕೆಲವು ಸಂಪ್ರದಾಯಗಳಿಗೆ ಪೌರಾಣಿಕ ಸಂದರ್ಭಗಳೂ, ಬೇರೆ ಕೆಲವುಗಳಿಗೆ ಧಾರ್ಮಿಕ ಭಾವನೆಯೂ, ಕೆಲವುಗಳಿಗೆ ಮಾತ್ರ ಐತಿಹಾಸಿಕ ಮಹತ್ವವೂ, ಇನ್ನೂ ಕೆಲವುಗಳಿಗೆ ಸಾಮಾಜಿಕ ಅಸ್ತಿತ್ವವೂ, ಉಳಿದ ಕೆಲವುಗಳಿಗೆ ಈ ಎಲ್ಲ ಸಂದರ್ಭಗಳಿದ್ದದ್ದು ನಿದರ್ಶನಕ್ಕೆ ಬರುವುದು.

ಒಕ್ಕಲುನಾಡಾದ ಕರ್ನಾಟಕವು ಇದಾವುದಕ್ಕೂ ಹೊರತಾಗಿರುವುದಿಲ್ಲ. ನಮ್ಮ ಜನಪದದಲ್ಲಿ ಅನೇಕ ಸಂಪ್ರದಾಯಗಳು ಕಂಡುಬರುವುವು. ಕನ್ನಡ ಸಂಸ್ಕೃತಿಯನ್ನೊಳಗೊಂಡ ನಮ್ಮ ನಾಡಿನ ಸಂಪ್ರದಾಯಗಳು ಇಂದು ನಮಗೆ ತಿಳಿಯದಿರುವುದು ನಮ್ಮ ಸಂಸ್ಕೃತಿಯ ಅವನತಿಯೇ ಸರಿ. ಕಳೆದ ಹತ್ತು ವರ್ಷಗಳಿಂದ ಜಾನಪದ ಗೀತೆಗಳನ್ನು ಸಂಕಲನ ಮಾಡುತ್ತ ಅಲೆದಾಡುವಾಗ ಅನೇಕ ಸಂಪ್ರದಾಯಗಳು ಈ ಹಾಡುಗಳಲ್ಲಿ ಅಡಕವಾಗಿದ್ದುದು ನಿದರ್ಶನಕ್ಕೆ ಬಂದಿದೆ. ಸೂಕ್ಷ್ಮವಾಗಿ ಇವುಗಳನ್ನು ಪರಿಶೀಲಿಸಿ ನೋಡಲು ಅವುಗಳ ಗೂಢಾರ್ಥಗಳು ತಿಳಿಯಹತ್ತಿದುವು. ಅವುಗಳನ್ನು ಬೆಳಕಿಗೆ ತರಬೇಕೆಂದು ಇಲ್ಲಿ ಪ್ರಯತ್ನ ಮಾಡಲಾಗಿದೆ.

ಸಂಪ್ರದಾಯಗಳಲ್ಲಿ ಎರಡು ದೊಡ್ಡ ಭಾಗಗಳನ್ನು ಮಾಡಬಹುದು.

೧. ಸುಗ್ಗಿಯ ಸಂಪ್ರದಾಯಗಳು

೨. ಜನಪದ ಸಂಪ್ರದಾಯಗಳು

ಕನ್ನಡ ನಾಡಿನ ಒಕ್ಕಲತನಕ್ಕೆ ಸಂಬಂಧಿಸಿದ ಎಲ್ಲ ಸಂಪ್ರದಾಯಗಳನ್ನು ಒಂದೆಡೆಗೆ ಶೇಖರಿಸಿ 'ಸುಗ್ಗಿಯ ಸಂಪ್ರದಾಯಗಳು' ಎಂದು ಕರೆಯಲಾಗಿದೆ. ಇವು ಹೆಚ್ಚಾಗಿ ಶಿವಶರಣರ ಹಂತಿಯ ಹಾಡುಗಳಲ್ಲಿ ಹುದುಗಿಕೊಂಡಿರುವುವು.

ಕಾಡು, ಬೀಡಾಗಿ ನಾಡಾಗಿ ಮಾನವನು ಮನೆ ಕಟ್ಟಿಕೊಂಡು ಇರಹತ್ತಿದ ಮೇಲೆ ಅವನಿಗೆ ಆಗಲೇ ಜನಾಂಗದ ಅರಿಕೆಯಾಗಿತ್ತು. ಕಾಡಸ್ಥಿತಿಯು ಕಣ್ಮರೆಯಾಗಿ ಉಳುವುದೊಕ್ಕುವುದನ್ನರಿತು, ಕೃಷಿ ಕರ್ಮವು ಮೂಲವೆಂಬ ದೊಡ್ಡ ತತ್ವವನ್ನು ತಿಳಿದುಕೊಂಡ ಮಾನವನು ದಿನದಿನಕ್ಕೆ ಅದರ ಪ್ರಗತಿಯ ಹಾದಿಯನ್ನೇ ಕಾಯುತ್ತಿದ್ದ. ಹೊಲಗೆಲಸವನ್ನು ಕೈಕೊಂಡ ಮೇಲೆ ಅವನಿಗೆ ಹೊಸ ಹೊಸ ಯೋಜನೆಗಳು ಹೊಳೆಯಹತ್ತಿದುವು. ಒಕ್ಕಲತನಕ್ಕೆ ಬೇಕಾಗುವ ಸಲಕರಣೆಗಳನ್ನೂ, ಉಪಕರಣಗಳನ್ನೂ, ತಯಾರಿಸಿ ಭೂ ಸಾಗುವಳಿಯನ್ನು ಮುಂದುವರಿಸಿ ಅದರ ಹುಟ್ಟುವಳಿಯನ್ನು ಹೆಚ್ಚಿಸಿ ಜನಾಂಗದ ಜೀವನಕ್ಕೆ ಮೂಲಸಾಧನ ಮಾಡಿಕೊಂಡ ಒಕ್ಕಲತನವು ಮಾನವ ಜನಾಂಗಕ್ಕೆ ಮುಖ್ಯ ಬೇಸಾಯವಾಯಿತು.

ಆರ್ಯರು ಅಲೆದಾಡುತ್ತ ಏಶಿಯಾದ ಮಧ್ಯಪ್ರದೇಶದಿಂದ ಸಂದು ದಕ್ಷಿಣಕ್ಕೆ ಭರತಖಂಡವನ್ನು ಸೇರಿದಾಗ ಅಲ್ಲಿಯ ಮೂಲನಿವಾಸಿಗಳಾದ ದ್ರಾವಿಡರು ಒಕ್ಕಲುತನವನ್ನು ತಮ್ಮ ಮುಖ್ಯ ಉದ್ಯೋಗವನ್ನಾಗಿ ಮಾಡಿಕೊಂಡು ಒಕ್ಕಲಾಗಿದ್ದರು. ದ್ರಾವಿಡರು ಆರ್ಯರ ಉಪಟಳಕ್ಕೆ ಅಂಜಿ ಸಾಗುಮಾಡಿದ ಭೂ ಭಾಗವನ್ನು ಬಿಟ್ಟುಕೊಟ್ಟು ವಿಂಧ್ಯದ ಕೆಳಗೆ ಸರಿಯುತ್ತ ಭೂಸಾಗುವಳಿಯನ್ನು ಮಾಡಿ ಅಲ್ಲಿ ಕಾಲೂರಿ ನಿಂತರು. ದ್ರಾವಿಡ ಭಾಷೆಗಳನ್ನಾಡುವ ಈಗಿನ ಭೂಪ್ರದೇಶವು ಫಲವತ್ತಾದ ಅನೇಕ ನದಿಗಳ ಕೊಳ್ಳವಾಗಿದೆ. ಮೊದಲಿನಿಂದಲೂ ಈ ಭಾಗದಲ್ಲಿಯ ಮೂಲಬೇಸಾಯವು ಒಕ್ಕಲುತನವು. ಕೃಷಿಕರ್ಮಕ್ಕೆ ಸಂಬಂಧಿಸಿದ ಎಲ್ಲ ಪ್ರತ್ಯೇಕ ಶಬ್ದಗಳು ಎಲ್ಲ ದ್ರಾವಿಡ ಭಾಷೆಗಳಲ್ಲಿ ಕಂಡುಬರುವುವು.

ದ್ರಾವಿಡರು ತಮ್ಮ ಮನೆಗೆಲಸಗಳಿಗೆ ಆರ್ಯರ ಮೇಲೆ ಅವಲಂಬಿಸಿಲ್ಲ. ದ್ರಾವಿಡರ ಅನೇಕ ಕಸುಬುಗಳನ್ನು ಆರ್ಯರು ಕಲಿತುಕೊಂಡರೆಂದು, ಕೃಷಿಕರ್ಮವನ್ನು ದ್ರಾವಿಡರಿಂದಲೇ ಕಲಿತಿರಬಹುದೆಂದೂ 'ಮೊಹಂಜದಾರೊ ಹರಪ್ಪ'ಗಳ ಸಂಶೋಧಕರು ನಿರ್ಧಾರಕ್ಕೆ ಬಂದಿದ್ದಾರೆ. ಕೃಷಿಕರ್ಮಕ್ಕೆ ಬೇಕಾಗುವ ಅನೇಕ ದ್ರಾವಿಡ ಶಬ್ದಗಳು ಸಂಸ್ಕೃತದಲ್ಲಿ ಎಂದೊ ಬಳಸಲ್ಪಟ್ಟಿವೆ. ಮೇಳೆ, ಕುಂಟೆ, ಕೂರಿಗೆ, ಮಡಿಕೆ ಮೊದಲಾದ ಭೂಮಿಯನ್ನೂಳುವ ಸಲಕರಣೆಗಳೂ, ಅವಕ್ಕೆ ಜೋಡಾಗಿ ಬೇಕಾಗುವ ಕುಡಮುಂಜಿ, ತಾಳ ಮೊದಲಾದ ಲೋಹದ ಸಾಮಾನುಗಳೂ, ಗುದ್ದಲಿ, ಸಲಿಕ ಮೊದಲಾದ ಅಗಿಯುವ ಹಾಗೂ ಕೊಯ್ತ, ಕುಡಗೋಲು ಮೊದಲಾದ ಕೊಯ್ಯುವ, ಕೊರೆಯುವ ಉಪಕರಣಗಳು ಬೆಳಕಿಗೆ ಬಂದುವು. ಉತ್ತುವ, ಬಿತ್ತುವ, ಅಗಿಯುವ, ಹಸನಗೈಯುವ, ಕೊಯ್ಯುವ, ಕೊರೆಯುವ, ರಾಸಿ ಮಾಡುವ ಸಲಕರಣೆಗಳೇ ಬೇರೆ. ಇವೆಲ್ಲವುಗಳಿಗೂ ಎಲ್ಲ ದ್ರಾವಿಡ ಭಾಷೆಗಳಲ್ಲಿ ಅಚ್ಚಗನ್ನಡ ಶಬ್ದಗಳಿವೆ.

ಒಕ್ಕಲಿಗನು ತನ್ನ ಬೇಸಾಯದಲ್ಲಿ ಕಾಲಮಾನಕ್ಕೆ ತಕ್ಕಂತೆ ಅನೇಕ ಸಂಪ್ರದಾಯಗಳನ್ನು ಆಚರಿಸುತ್ತ ಬಂದಿದ್ದಾನೆ. ವಿಶೇಷವಾಗಿ ಈ ಸಂಪ್ರದಾಯಗಳು ಕರ್ನಾಟಕದಲ್ಲಿ ಶತಶತಮಾನಗಳಲ್ಲಿ ಬದಲಾಗುತ್ತ ಬಂದು ಮುಂದೆ ೧೨ನೆಯ ಶತಮಾನದಲ್ಲಿ ಶಿವಶರಣರ ಕಾಲಕ್ಕೆ ವಿಶಿಷ್ಟ ರೂಪಗಳನ್ನು ತಾಳಿ ಈಗಲೂ ಕರ್ನಾಟಕದ ಬಹುಭಾಗಗಳಲ್ಲಿ ಬಳಕೆಯಲ್ಲಿದ್ದದ್ದು ಕಂಡುಬರುವುವು. ಹನ್ನೆರಡನೆಯ ಶತಮಾನವು ಎಲ್ಲ ಕ್ಷೇತ್ರಗಳಲ್ಲಿಯೂ ಕ್ರಾಂತಿಯ ಕಾಲ. ಇದು ತನ್ನ ಪ್ರಭಾವವನ್ನು ಕೃಷಿಕರ್ಮ ಕ್ಷೇತ್ರದಲ್ಲಿಯೂ ತೋರಿಸಿರುವುದು. ಆ ಕಾಲದಲ್ಲಿ ಹೊಸಮತವಾದ ಲಿಂಗಾಯತ ಮತವು ತನ್ನ ಭೇರಿಯನ್ನು ಹೊಡೆಯಹತ್ತಿತ್ತು. ದೇಶದೊಳಗಿನ ಅನೇಕ ಜನರು ಇದನ್ನು ಕೇಳಿ ಈ ಮತಕ್ಕೆ ಸೇರಿದರು. ಈ ಮತವು ಎಲ್ಲ ಕಸುಬುಗಳಿಗೆ ಸ್ಥಾನಕೊಟ್ಟು ಶಿವಾಚಾರವನ್ನು ಬೀರಿದ ಮೂಲಕ ಮಾನವನು ತನ್ನ ಕಾಯಕ ಮಾಡಿ ಬಿಡುವೇಳೆಯಲ್ಲಿ ಸಮಾಜದಲ್ಲಿ ಸಮಾನಸ್ಕಂದನಾಗಿ, ಧಾರ್ಮಿಕ, ಆರ್ಥಿಕ, ಶಾರೀರಿಕ ಸಂಪತ್ತುಗಳನ್ನು ಬೆಳೆಸಿ ಊರ್ಜಿತ ಸ್ಥಿತಿಗತಿಗೆ ಬಂದನು. ಈ ಸಮಾಜವು ಉದ್ಯೋಗ ದೃಷ್ಟಿಯಿಂದ ಸ್ವಯಂ ಪೂರ್ಣವಾಯಿತು. ಆರ್ಥಿಕ ದೃಷ್ಟಿಯಿಂದ ಆಗಿನ ಕಾಲದಲ್ಲಿ ವ್ಯಾಪಾರ ಕ್ಕಿಂತಲೂ ಒಕ್ಕಲುತನವು ಮಿಗಿಲೆಂದು ಹೇಳಬಹುದು. ಆಗ ಮಾನವನ ಭೌಗೋಳಿಕ ವಿಜ್ಞಾನವು ಅಷ್ಟೊಂದು ಬೆಳೆದಿದ್ದಿಲ್ಲ. ವಿಜ್ಞಾನಶಾಸ್ತ್ರವು ಪ್ರಗತಿಯನ್ನು ಹೊಂದಿದ್ದಿಲ್ಲ. ಪ್ರವಾಸವು ಪ್ರಾಣಸಂಕಟವಾಗಿತ್ತು. ಜನರು ಒಕ್ಕಲತನದಲ್ಲಿಯೇ ಅಭಿರುಚಿಯುಳ್ಳವರಾಗಿದ್ದರು.

ಒಕ್ಕಲುತನದಲ್ಲಿ ಮೂರು ಕ್ರಮಭಾಗಗಳನ್ನು ಕಾಣಬಹುದು. ೧. ಉತ್ತುವುದು, ೨. ಬಿತ್ತುವುದು, ೩. ಒಕ್ಕುವುದು. ಈ ಮೂರರಲ್ಲಿಯೂ ಒಕ್ಕಲಿಗನು ಕೆಲವು ವಿಶಿಷ್ಟ ಸಂಪ್ರದಾಯಗಳನ್ನು ನೇಮನಿತ್ಯದಿಂದ ಪಾಲಿಸುವುದು ಕಂಡುಬರುವುದು. ಇವುಗಳಲ್ಲಿ ಸುಗ್ಗಿಯ ಕಾಲದ ಸಂಪ್ರದಾಯಗಳು ಸಂಶೋಧಕರ ಮನಸ್ಸನ್ನು ಸೆಳೆಯದೆ ಬಿಡವು. ಅವುಗಳನ್ನು ನೋಡಿ ಮನಸ್ಸು ಚಕಿತವಾಗಿ ಸಂಶೋಧನೆಗೆ ಧುಮುಕುವುದು. ಅವುಗಳನ್ನರಿಯಬೇಕಾದರೆ ಅಗತ್ಯವಾದ ಸಹಾಯವು ಜಾನಪದ ಸಾಹಿತ್ಯ. ಇದು ನಿತ್ಯಜೀವನದ ವಾಸ್ತವ ಚಿತ್ರ, ಅಲ್ಲದೆ ಸರಳ ಸ್ವಭಾವದ ಹಳ್ಳಿಗರ ಹೃದಯದಿಂದ ಉಕ್ಕಿಬಂದುದು; ಬಹುತರವಾಗಿ ನಂಬಲರ್ಹವಾದುದು. ಮೇಲೆ ಕಾಣಿಸಿದ ಮೂರೂ ಸಮಯಗಳಲ್ಲಿ ದಣಿವನ್ನಾರಿಸಲಿಕ್ಕಾಗಲಿ, ಮನೋಲಹರಿಗಾಗಲಿ, ಒಕ್ಕಲಿಗನು ಅನೇಕ ಹಾಡುಗಳ ಹಾಡುವುದನ್ನು ಕೇಳಬಹುದು. ಇವುಗಳನ್ನು ಕೂಲಂಕುಷವಾಗಿ ಅಭ್ಯಾಸ ಮಾಡಿ ನೋಡಿದರೆ ಈ ಸಂಪ್ರದಾಯಗಳು ಬೆಡಗಿನ ರೂಪದಿಂದ ಸೂಕ್ಷ್ಮವಾಗಿ ಹೇಳಲ್ಪಟ್ಟಿರುವುವು. ಬಸವಾದಿ ಪ್ರಮಥರು ಹೊಸ ಮತವನ್ನು ಹಬ್ಬಿಸಿದರು. ಎಲ್ಲರೂ ಉದ್ಯೋಗಿಗಳಾಗಿ ಜೀವನ ಸಾಗಿಸುತ್ತ ಧರ್ಮವಂತರಾಗಿ ಬಾಳುತ್ತಿದ್ದರು. ಈ ಮತದ ಘೋಷಣೆಗೂ, ಪೋಷಣೆಗೂ, ಎಲ್ಲ ಕಸಬುಗಾರರು ಈ ಧರ್ಮವನ್ನು ಸ್ವೀಕರಿಸಿದ ಮೇಲೆ ತಮ್ಮ ಕಾಯಕ ಮುಖಾಂತರ ನೆರವಾಗುತ್ತಿದ್ದರು. ಅವರಲ್ಲಿ ಒಕ್ಕಲಿಗನು ಮಾತ್ರ ಎಲ್ಲರ ಸ್ತುತಿಗೆ ಪಾತ್ರನಾಗಿದ್ದಾನೆ. ಪ್ರಮಥರಲ್ಲಿ ಅನೇಕರು ಒಕ್ಕಲಿಗರಿದ್ದಾರೆ. ಇಳಿಹಾಳ ಬೊಮ್ಮಯ್ಯ, ಏಲೇಶ ಕೇತಯ್ಯ, ಮಾರಗೌಡ, ಮೊದಲಾದ ಶಿವಶರಣರು ಹೊಲಗೆಲಸವು ತಮ್ಮ ಕಾಯಕವೆಂದು ಮಾಡಿ ಅದರಲ್ಲಿಯೇ ಕೈಲಾಸ ಹೊಂದಿದ್ದಾರೆ.

ಹಗಲಿರುಳು ಹೊಲದಲ್ಲಿ ದುಡಿಯುವ ಒಕ್ಕಲಿಗನಿಗೆ ಶಿವಕೂಟ, ಶಿವಗೋಷ್ಠಿಗೆ ಬರಲು ಬಿಡುವು ದೊರೆಯದು. ಅವನು ಶಿವಾನುಭವವನ್ನು ತನ್ನ ಕಾಯಕದಲ್ಲಿಯೇ ಅರಿತು ಮನಗಾಣಬೇಕು. ಕಾರಣ ಶಿವಶರಣರಾದ ಈ ಒಕ್ಕಲಿಗರು ಕೃಷಿಕರ್ಮದ ಅನೇಕ ಪ್ರಸಂಗಗಳಲ್ಲಿ ವಿಶಿಷ್ಟವಾದ ಕೆಲವು ಸಂಪ್ರದಾಯಗಳನ್ನು ಹಾಕಿಕೊಂಡು ಅವುಗಳನ್ನು ತಮ್ಮ ನಡೆನುಡಿಗಳಲ್ಲಿ ಬೆಳಕಿಗೆ ತಂದರು. ಈ ಒಕ್ಕಲಿಗರಿಗೆ ಹೊಲಗೆಲಸವೇ ಕಾಯಕವು; ಸುಗ್ಗಿಯೇ ದಾಸೋಹ; ರಾಶಿಯ ದಿನವೇ ಕೊನೆಯ ಆರಾಧನೆಯ ದಿನ. ಆ ದಿನ ರಾತ್ರಿಯಲ್ಲಿಯೇ ಒಕ್ಕಲಿಗನು ತನ್ನ ಬೇಸಾಯದ ಸಲಕರಣೆಗಳನ್ನು ಕುರಿತು ಶಿವಗೋಷ್ಠಿಯನ್ನು ಹಾಡಿ ಶಿವಾನುಭವವನ್ನು ತಿಳಿಯಲು ಪ್ರಯತ್ನ ಮಾಡುವುದು ಕಂಡುಬರುವುದು. ಈ ಎಲ್ಲ ಪ್ರಸಂಗಗಳಲ್ಲಿ ಅವನು ಶಿವಾನುಭವ ಗೋಷ್ಠಿಯಿಂದ ಕೆಲವು ಸಂಪ್ರದಾಯಗಳನ್ನೆತ್ತಿಕೊಂಡು ಅದಕ್ಕೆ ತನ್ನ ಕಾಯಕದಲ್ಲಿ ಪಾವನತೆಯನ್ನಂಟಿಸಿ ಆಚರಿಸುತ್ತ ಬಂದನು. ಇವುಗಳಲ್ಲಿ ಸುಗ್ಗಿಯ ಸಂಪ್ರದಾಯಗಳು ಅತಿ ಮಹತ್ವದವುಗಳಾಗಿವೆ.

ಸುಗ್ಗಿಯ ಸಾಹಿತ್ಯ

೧. ಕಣವ ಮಾಡುವುದು, ೨. ಮೇಟಿಯ ನಾಟುವುದು, ೩. ತೆನೆ ಮುರಿಸಿ ಹಂತಿಯ ಕಟ್ಟುವುದು, ೪. ಮೆದ ಕಂತಿಗಳನ್ನು ವಿಂಗಡಿಸುವುದು, ೫. ತೂರಿ ರಾಶಿಯನ್ನು ಮಾಡುವುದು, ೬. ಮೇಟಿಯ ರಾಶಿ; ಬುದ್ಧಿವಂತಲಿಂಗನ (ಬೂದ)ರಾಶಿ, ೭. ಕರಿಬಂಟ; ಬಿಳಿಬಂಟ, ೮. ಗೋಪಾಳ; ದಾನಧರ್ಮ ಮಾಡುವುದು. ಇವುಗಳಲ್ಲಿ ಅವನು ಕೆಲವೊಂದು ಸಂಪ್ರದಾಯಗಳನ್ನು ಪಾಲಿಸುತ್ತಾನೆ. ಆದರೆ ನಮ್ಮ ದುರ್ದೈವದ ಮೂಲಕ ಅವುಗಳ ಅರ್ಥವನ್ನು ಅವನು ಇಂದು ಬಿಡಿಸಿ ಹೇಳಲಾರ. ಜ್ಞಾನದ ತಿಳಿ ಬೆಳಕನ್ನರಿಯದ ಅವನು ಇದನ್ನರಿಯ. ಹೆಚ್ಚಿಗೆ ಕೇಳಹೋದರೆ ತಮ್ಮ ಹಿರಿಯರು ಮಾಡುತ್ತ ಬಂದ ಕಾರಣ ತಾನೂ ಮಾಡುವೆನೆಂದು ಹೇಳಿಬಿಡುವನು. ಶಿವಶರಣರ ಕಾಲದ ನಂತರ ಒಕ್ಕಲಿಗನ ಜೀವನವು ಪರತಂತ್ರವಾಗಿ ದಾಸ್ಯದಲ್ಲಿ ಉಳಿಯಿತು. ಜ್ಞಾನಭಂಡಾರವು ಅವನಿಗೆ ದೂರದಲ್ಲಿ ಕಾಣುವ ಕ್ಷಿತಿಜವೇ

ಆಯಿತು. ಸರಳ ಸ್ವಭಾವಿಯಾಗಿ ತನ್ನ ಕಾಯಕ ಮಾಡುತ್ತ ಬಂದ. ವ್ಯವಹಾರದ ಅನುಭವವು ಅವನಿಗೆ ದೂರಾಯಿತು. ಆದುದರಿಂದ ಪ್ರಪಂಚದಲ್ಲಿ ಇಂದಿಗೂ ಅವನು ತೊಳಲಬೇಕಾಗಿದೆ.

ಒಕ್ಕಲಿಗನು ಶುಭದಿನದಲ್ಲಿ ಕಣಕೆತ್ತಿ, ನಿರ್ಗೊಡೆದು 'ಕರೆಗಣ'[೧] ಕಟ್ಟಿ ಮೇಟಿಯ ನಾಟಲು ಕುಣಿಯನ್ನು ತೆಗೆಯುತ್ತಾನೆ. ಆ ಕುಣಿಯ ಹಸಿಮಣ್ಣನ್ನೊಯ್ದು ಹೊಲದ ಸಮೀಪದ ಹಾದಿಯ ಮೇಲೆ ಹಾಕುವ ಸಂಪ್ರದಾಯವು ಈಗಲೂ ಕಣ್ಣಿಗೆ ಬೀಳುವುದು. ಸಂಪ್ರದಾಯಗಳ ಗೂಢಾರ್ಥಗಳು ಈಗ ಮರೆತು ಹೋಗಿವೆ. ಆದರೆ ಅವು ಬಳಕೆಯಲ್ಲಿ ಉಳಿದು ಬಂದಿರುವುದೇ ಕನ್ನಡಿಗರ ಸುದೈವವೆಂದು ಹೇಳಬೇಕಾಗಿದೆ. ಇವುಗಳನ್ನು ಆಳವಾದ ಅಭ್ಯಾಸದಿಂದ ಪರಿಶೀಲಿಸಿ ನೋಡಿದರೆ ಗೂಢಾರ್ಥವು ತಿಳಿದುಬರುವುದು. ಕಣದ ಮೇಟಿಯ ಕುಣಿಯ ಐದು ಬೊಗಸಿ ಹಸಿಮಣ್ಣನ್ನು ಹಾದಿಗೆ ಹಾಕುವುದೆಂದರೆ ಹಾದಿಗೆ ಔತಣ ಕೊಟ್ಟಂತೆ. ಸುಗ್ಗಿಯು (ದಾಸೋಹ) ನಡೆದಿದೆ. ಕೊನೆಯ ರಾಶಿಯ (ಆರಾಧನೆ) ದಿನಗಳು ಶುರುವಾದವು. ಜೋಗಿ, ಜಂಗಮ, ದಾಸ, ಬಡವರು, ಪರದೇಶಿಗಳು, ಭಿಕ್ಷುಕರು ಮೊದಲಾದವರು ಒಕ್ಕಲಿಗನ ಕಣಕ್ಕೆ ಬಂದು, ಅವನು ಕೊಡುವ ದಾನವನ್ನು ಒಯ್ಯಬೇಕೆಂದು ಹಾದಿಗೆ ಹಾಕಿದ ಈ ಹಸಿಮಣ್ಣು ಸೂಚಿಸುತ್ತದೆ. ಆ ಹಸಿಮಣ್ಣನ್ನು ಗುರುತಿಸಿ ಮೇಲೆ ಸೂಚಿಸಿದ ಎಲ್ಲ ಜನರೂ ಸುಗ್ಗಿಯ ಕಣಕ್ಕೆ ಭಿಕ್ಷಕ್ಕೆಂದು ಹೋಗುವುದನ್ನು ಬೆಳುವಲದ ಎಲ್ಲ ಹಳ್ಳಿಗಳಲ್ಲಿಯೂ ಪ್ರತ್ಯಕ್ಷ ಕಾಣಬಹುದು. ಸಮಾಜದಲ್ಲಿ ಒಕ್ಕಲಿಗನು ತನ್ನ ಗಳಿಕೆಯನ್ನು ಹೇಗೆ ಬಳಸುತ್ತಿದ್ದನೆಂಬುದು 'ಇಳಿಹಾಳ ಬೊಮ್ಮಯ್ಯ'ನ ಹಂತಿಯ ಹಾಡಿನಲ್ಲಿ ಬಂದಿದೆ.

ಇಳಿಹಾಳ ಬೊಮ್ಮಯ್ಯ ಹೊಲಗೆಲಸ ಕಾಯಕವ
ನಲುಮೆಯಲಿ ಸುಗ್ಗಿ ದಾಸೋಹ। ಹರಸೇವೆ
ಸಲಿಸಿ ಲಿಂಗದೊಳು ಬಯಲಾದ ॥೧॥ *–ಇ–ಬೊ–*

ಒಕ್ಕಲಿಗನಿಗೆ ಹೊಲಗೆಲಸವೇ ಕಾಯಕ. ಸುಗ್ಗಿಯೇ ದಾಸೋಹ, ಹರಸೇವೆ. ಹಂಗಿಲ್ಲದ ಉದ್ಯೋಗವೆಂದರೆ ಒಕ್ಕಲತನ. ನಿಸರ್ಗವು ದಯೆಮಾಡಿದರೆ ಸಾಕು, ಒಕ್ಕಲಿಗನ ಹನ್ನೆರಡು ತಿಂಗಳ ಕಾಯಕ–ದಾಸೋಹವೇ ದಾಸೋಹ. ಅವನು ಸದಾ ಕೊಡುಗೈಯು.

ಮೂತಾಳ ಕೂರಿಗಿಗೆ, ಯಾತರದು ಹಂಗಿಲ್ಲ
ಭೂತಾಯಿ ಬೆಳೆಯೆ ಒಕ್ಕಲಿಗ। ಜಗದೊಳಗೆ
ಕೋತುಳ್ಳ ಮೇಳಿ ಬಲಗೊಂಡು ॥೩॥

ಕಡೆಯ ಬಲಕಿನ ತಾಳ, ಎಡೆಯಾಯ್ತು ಅರಸನಿಗೆ
ಎಡಗಡೆಯ ತಾಳ ಪಶುಪಕ್ಕಿ। ಜೀವನಕೆ
ನಡುವಿನಾ ತಾಳ ರೈತನಿಗೆ ॥೪॥

ಒಂದು ತಾಳದ ಬೆಳೆಯ, ಬಂದವರಿಗಿಲ್ಲೆನ್ನ
ಮುಂದು ಕೊಡುಗೈಯು ಒಕ್ಕಲಿಗ। ನಾಡೊಳಗೆ
ಹೊಂದಿ ದಾಸೋಹ ಶಿವಮತಕೆ ॥೫॥ *–ಇ–ಬೊ–*

ಹೀಗೆ ಒಕ್ಕಲಿಗನ ಗಳಿಕೆಯು ಎಲ್ಲರಿಗೂ ಹಂಚಿಹೋಗುವುದು. ಅವನು ಜಿಪುಣನಾದರೆ ಜೀವರಾಶಿಯು ಬದುಕುವ ಬಗೆ ಹೇಗೆ?

ಅವನಿಗೆ ಸುಗ್ಗಿಯ ಕಣವೇ ಮಂಟಪವು. ಮೇಟಿಯೇ ಚೆನ್ನಬಸವೇಶ. ಆರಾಧನೆಯ ಮಾಡಿಸುವವನೇ ಹೊಣೆಗಾರ ರೈತ–ಬಸವೇಶ. ಇದಕ್ಕೆ ಗಣಿಯಾದ ಗುರು ಪ್ರಭುದೇವ, ಕಣದೊಳಗಿನ ಬುದ್ಧಿವಂತಲಿಂಗ, (ಬೂದ).

ಕಣವೆ ಮಂಟಪವಾತೊ, ಗುಣವಂತ ಬಸವೇಶ
ಹೊಣೆಗಾರ ರೈತ ದಂಡೇಶ। ಕಣಮೇಟಿ
ಗಣಿ ಗುರುವು ಕಣಕೆ ಪ್ರಭುಲಿಂಗೊ ॥ *–ಜಾ–ಸಂ–*

ಮೂರುಕಾಲಿನ 'ಮೆಟ್ಟು'[೨] ತ್ರಿವಿಧ ಲಿಂಗಗಳು ತೂರುವ ಜೀವ ಚಿತ್ಕಳೆ (ಪರಮಾತ್ಮಲಿಂಗ) ತೂರಿದ ರಾಶಿ ವಚನರಾಶಿ.

ಮೂರುಕಾಲಿನ ಮೆಟ್ಟು, ಮೂರು ಲಿಂಗಗಳೇನೊ
ತೂರುವನು ಜೀವ ಚಿತ್ಕಳೆಯ। ವಚನಗಳು
ತೂರಿದಾರಾಶಿ ಶಿವಮತಕೆ ॥ *–ಜಾ–ಸಂ–*

ಮಹಾಶಿವಶರಣ 'ಡೋಹರ ಕಕ್ಕಯ್ಯ'ನವರೇ ಈ ವಚನರಾಶಿಗೆ 'ಸೆಳ್ಳಾ'ದ. ವಚನಗಳೇ ಚೊಕ್ಕ ಮುತ್ತಿನ ರಾಶಿ. ಎಂಟ ಕಟ್ಟಿನ ಇಕ್ಕಲಿಯೇ ಅಷ್ಟಾವರಣ ಬದ್ಧವಾದ ಲಿಂಗಾಯತ ಮತ. ಇದರಿಂದ ಹುಲುಸಾಗಿ ಉಕ್ಕಿದ ರಾಶಿಯೇ ವಚನ ಶಾಸ್ತ್ರವು.

---

೧. 'ಕರೆಗಣ': 'ಕರೆಗಣ'ವು ಬರೆಗಣವು ಎಂಬರ್ಥ. ಕಣವನ್ನು ಮಾಡುವಾಗ ನೀರುಗ್ಗಿ ಬೊಗೆದು ಮೇಟಿಯಿಲ್ಲದೆ ನೆಲವನ್ನು ತುಳಿಸುವುದಕ್ಕೆ 'ಕರೆಗಣ'ವೆಂದು ಕರೆಯುವರು.
೨. 'ಮೆಟ್ಟು' : ರಾಶಿಯನ್ನು ಮಾಡುವಾಗ ಮೆದವನ್ನು ತೂರಲು ಉಪಯೋಗಿಸುವ ಎತ್ತರವಾದ 'ತಿವುಟಿಗೆ' (stand) ಅದಕ್ಕೆ ಮೂರು ಕಾಲುಗಳಿದ್ದು ಮೇಲೆ ನಿಲ್ಲಲು ಒಂದು ಹಲಗೆಯನ್ನು ಜೋಡಿಸುವರು.

ಕಕ್ಕಯ್ಯ ಸೆಳ್ಯಾಗಿ, ಚೊಕ್ಕ ಮುತ್ತಿನರಾಶಿ
ಇಕ್ಕಲಿಯ ಎಂಟು ಕಟ್ಟುಗಳು । ಹುಲುಸಾಗಿ
ಉಕ್ಕಿದವು ರಾಶಿ ವಚನಗಳು ॥ *–ಜಾ–ಸಂ–*

ಹಂತಿಗಣ್ಣೆಯು ಚೆನ್ನ, ಚಿಂತೆಯಿಲ್ಲದ ರಾಶಿ
ಬಂತು ಮಹಮನೆಗೆ ಬಸವಣ್ಣ । ಉಣಸಿದನು
ನಿಂತು ಶಿವಮತವ ಅಂಬಲಿಯ ॥ *–ಮಾ–ಚೆ–*

ಈ 'ಮಹಮನೆ'ಯು ಬಸವಣ್ಣನವರ ಪ್ರಸಾದ ನಿಲಯವಿರಬೇಕು. ಈ ಪ್ರಕಾರ ಅನೇಕ ಹಂತಿಯ ಪದ್ಯಗಳನ್ನು ಹಂತಿಯ ಹಾಡುಗಬ್ಬಗಳಲ್ಲಿ ಕಾಣಬಹುದು.

ತೂರುವ 'ಮೆದ'ಕ್ಕೆ 'ಬಳಿಬಂಟ'ನನ್ನೂ, ರಾಶಿಗೆ 'ಕರಿಬಂಟ' ಅಥವಾ 'ಬಿಳಿಬಂಟ'ನನ್ನೂ ಕಟ್ಟುವ ಸಂಪ್ರದಾಯವು ಸುಗ್ಗಿಯ ಕಣದಲ್ಲಿ ಉಂಟು. ಈ ಕರಿಬಂಟ, ಬಿಳಿಬಂಟರು ಯಾರು? ಎಂಬುದನ್ನು ವಿಚಾರಮಾಡಬೇಕಾಗಿದೆ. ಒಕ್ಕಲಿಗನು ತನ್ನ ಹಂತಿಯ ಹಾಡುಗಳಲ್ಲಿ ಎಲ್ಲ ಶರಣರಿಗೆ ಶಿವ ಮೆಚ್ಚಿದ ಬಂಟರೆಂದು ಕರೆದಿದ್ದಾನೆ. ಅನುಭವ ಮಂಟಪವೆಂದು ಕರೆಯುವ ಸುಗ್ಗಿಯ ಕಣದೊಳಗೆ ಒಕ್ಕಲಿಗನು ನೂರೊಂದು ಸ್ಥಳಗಳಿಗೆ, ನೂರೊಂದು ಶರಣರನ್ನು ಪ್ರತ್ಯೇಕವಾಗಿ ತೋರಿಸಲಾಗಿದೆ. ಮುಖ್ಯವಾಗಿ ಅವರ (ಶರಣರ)ವತಿಯಿಂದ ಇಬ್ಬರು ಬಂಟ ಶರಣರನ್ನು ಆರಿಸಿಕೊಂಡು ಅವರಿಗೆ ತನ್ನ ಕಣದಲ್ಲಿ ವಿಶೇಷ ಮಹತ್ವದ ಸ್ಥಳವನ್ನು ಕೊಟ್ಟಿದ್ದಾನೆ. ಕಣದ ರಾಶಿಯೇ ವಚನರಾಶಿಯು. ಅದನ್ನು ಕಾಯಲು ಉಗ್ರವೀರ–'ಬಂಟ,' 'ವೀರಘಂಟೆಯ ಮಡಿವಾಳ'ನಿಗೆ ಒಕ್ಕಲಿಗನು 'ಕರಿಬಂಟ'ನೆಂದೂ ಮತ್ತು ಪಾವನಭಕ್ತಿಯುಳ್ಳ ಮಹಾಶರಣ 'ಹರಳಯ್ಯ'ನಿಗೆ 'ಬಳಿಬಂಟ'ನೆಂದೂ ಕರೆದಿರುವನು. ಕರಿಬಂಟನೆಂದರೆ ಈಗಿನ ಒಕ್ಕಲಿಗನಿಗೆ 'ಕಂಕಿಯ ಸುಟ್ಟ ಕರುಕಾಗಿದೆ;' ಬಿಳಿಬಂಟನೆಂದರೆ 'ಕಣದ ದಂಡೆಯಮೇಲಿರುವ ಒಲೆಯಲ್ಲಿಯ ಬೂದಿಯಾಗಿದೆ.' ಅವನು ಈಗ ಈ ಬಂಟರ ಮಹತ್ವವನ್ನರಿಯ. ಬಂಟರನ್ನು ರಾಶಿಗೆ ಕಟ್ಟುವುದರಿಂದ 'ಸಂಕದೇವ'ನ ಬಲವಾಗಿ ರಾಶಿಯು ಹುಲುಸಾಗುವದೆಂದು ಹೇಳುವನು.

ನೂರೊಂದು ಶರಣಾರು, ನೂರೊಂದು ಬಂಟಾರು
ಸಾರಿ ಹೇಳ್ಯಾನೊ ಒಕ್ಕಲಿಗೊ । ಹೊಲಸುಗ್ಗಿ
ಧೀರ ಕಾಯಕದ ದಿನವೆಂದು ॥ *–ಜಾ–ಸಂ–*

ಶರಣ ಮಡಿವಾಳಾದ, ಕರಿಬಂಟ ಕಣದಾಗ
ಹರಳಾದ ಕಣಕ ಬಳಿಬಂಟ । ಪ್ರಭುಲಿಂಗ
ಗುರುಬುದ್ಧಿವಂತ ಲಿಂಗಾದ ॥ *–ಜಾ–ಸಂ–*

ಈ ಕಡೆಯ ಸಾಲು ಜನರಿಗೆ ಸುಗ್ಗಿಯ ಕಣದಲ್ಲಿಯ ಇನ್ನೊಂದು ಸಂಪ್ರದಾಯವನ್ನು ಸೂಚಿಸುವುದು. ಅಲ್ಲಮಪ್ರಭುದೇವರೇ ಕಣದಲ್ಲಿ ಪೂಜೆಗೊಳ್ಳುವ 'ಬುದ್ಧಿವಂತಲಿಂಗ' ಈಗ ಅದು 'ಬೂದ' ಎಂದು ಕಣದಲ್ಲಿ ಕರೆಯಲ್ಪಡುತ್ತದೆ.

ಬಹುತರವಾಗಿ ಕರ್ನಾಟಕದ ಒಕ್ಕಲಿಗರು ಮೊದಲಿನಿಂದಲೂ ಶಿವೋಪಾಸಕರು. ಅವರು ತಮ್ಮ ಕಾಯಕದಲ್ಲಿ ಅನ್ಯದೇವತೆಗಳನ್ನು ಪೂಜಿಸ ದಿರುವುದೇ ಬಲವಾದ ದೃಷ್ಟಾಂತ: 'ರಾಶಿದೇವ'ನೇ 'ಸಂಕದೇವ'ನು. ಈ 'ಸಂಕದೇವ'ನಿಗೆ 'ಸಂಕಪ್ಪ'ನೆಂದೂ ಅನ್ನುತ್ತಾರೆ. 'ಸಂಕಪ್ಪ' ಇದು 'ಶಂಕರಪ್ಪ' ಈ ಶಬ್ದದ ವಿಕೃತರೂಪ; ಶಂಕರ–ಶಂಕರಪ್ಪ–ಸಂಕ್ರಪ್ಪ–'ಸಂಕಪ್ಪ' ಎಂದು ಆಗಿದೆ. ಕ್ರಿ.ಶ. ೧೨ನೆಯ ಶತಮಾನದಲ್ಲಿ ಶಿವಶರಣರ ಪ್ರಭಾವದಿಂದ ವೀರಶೈವ ಮತವು ಕರ್ನಾಟಕದ ತುಂಬೆಲ್ಲ ಹಬ್ಬಿತು. ಕಾಯಕದ ತಳಹದಿಯ ಮೇಲೆ ಕಟ್ಟಿದ ಈ ಮತಕ್ಕೆ ಎಲ್ಲ ಕಸಬುಗಾರರು ಅನುಯಾಯಿಗಳಾದರು. ಶಿವೋಪಾಸಕರಾದ ಒಕ್ಕಲಿಗರು ಈ ಮತವನ್ನು ಎತ್ತಿ ಹಿಡಿದು ಪೋಷಕರಾದರು. ಅನೇಕರು ಪ್ರಸಿದ್ಧ ಶಿವಶರಣರಾಗಿ ಶಿವಗೋಷ್ಠಿಯನ್ನು ತಮ್ಮ ಕಾಯಕದಲ್ಲಿ ಹಾಡಿದ್ದಾರೆ. ಸುಗ್ಗಿಯ ಹಾಡುಗಳಲ್ಲಂತೂ ಅನೇಕ ಮಹತ್ವದ ಸಂಗತಿಗಳು ನಿದರ್ಶನಕ್ಕೆ ಬರುತ್ತವೆ. ಅವುಗಳಲ್ಲಿ ಈಗಲೂ ಬಳಕೆಯಲ್ಲಿರುವ ಸುಗ್ಗಿಯ 'ಬೂದ'ನು ಸಂಶೋಧಕರ ಮನಸ್ಸನ್ನು ಹಿಡಿಯದಿರನು. ಹಾಗಾದರೆ ಈ 'ಬೂದನು' ಯಾರು?

'ಬುದ್ಧಿವಂತಯ್ಯ,' 'ಬುದ್ಧಯ್ಯ,' 'ಬೂದಯ್ಯ' ಎಂಬ ಹೆಸರುಗಳು ವೀರಶೈವರಲ್ಲಿ ಹೆಚ್ಚಾಗಿ ಈಗಲೂ ಕಂಡುಬರುವುವು ಈ ಹೆಸರುಗಳು ಅನ್ಯಮತಗಳಲ್ಲಿ ಕಡಿಮೆ; ಇಲ್ಲವೆಂದರೂ ಸಲ್ಲುವುದು. ಮಹಾಜ್ಞಾನಿಯಾದ ಅಲ್ಲಮಪ್ರಭುದೇವರು ವೀರಶೈವರಿಗೆ ಭೂ ಲೋಕದಲ್ಲಿ ಶಿವನ ಪರಮ ಚಿತ್ಕಳೆಯೆಂದು ಗ್ರಹಿಕೆಯುಂಟು. ಹರಿಹರ, ಷಡಕ್ಷರಿ ಮೊದಲಾದ ವೀರಶೈವ ಕವಿಗಳು ಈ ಮಾತನ್ನು ತಮ್ಮ ಕಾವ್ಯಗಳಲ್ಲಿ ತುಂಬ ಬಳಸಿಕೊಂಡಿದ್ದಾರೆ. ಆದುದರಿಂದ ವೀರಶೈವರಲ್ಲಿ ಅಲ್ಲಮನಿಗೆ ಮೊದಲನೆಯ ಸ್ಥಾನವುಂಟು. ಒಕ್ಕಲಿಗರಾದ ವೀರಶೈವರು ಇದಾವುದಕ್ಕೂ ಹೊರತಾಗಿಲ್ಲ. ಅವರೂ ತಮ್ಮ ಕಾಯಕದಲ್ಲಿ ಅಲ್ಲಮಪ್ರಭುದೇವರಿಗೆ ಮುಖ್ಯಸ್ಥಾನವನ್ನಿತ್ತು ಕಣದಲ್ಲಿ ಬುದ್ಧಿವಂತಲಿಂಗನೆಂದು ಪೂಜೆ ಮಾಡಿದ್ದಾರೆ. ಈ ಬುದ್ಧಿವಂತಲಿಂಗವೇ ಬೆಳುವಲದ ಎರೆಯಲ್ಲಿ 'ಸುಗ್ಗಿಯ ಲಿಂಗಯ್ಯ'ನಾಗಿದ್ದಾನೆ. ಬೆಳುವಲದ ಮಸಾರಿಯಲ್ಲಿ ಒಕ್ಕಲಿಗರು ಈ ಬುದ್ಧಿವಂತ ಲಿಂಗನಿಗೆ 'ಬುದ್ಧಯ್ಯ'ನೆಂದೂ 'ಬೂದಯ್ಯ'ನೆಂದೂ ಕಣದಲ್ಲಿ ಪೂಜಿಸುವರು. ಇದೇ ಈಗ ಒಂಟಿ ಹೆಸರಾಗಿ ಕಣದಲ್ಲಿ ಬೂದನೆಂದು ಉಳಿದದೆ. ಎಲ್ಲ ಒಕ್ಕಲಿಗರೂ ಕುಲಜಾತಿಗಳ ಭಿನ್ನಭೇದವಿರದೆ, ಉತ್ತರ ಕರ್ನಾಟಕದಲ್ಲಿ 'ಬೂದ'ನನ್ನು ಸುಗ್ಗಿಯ ಕಣದಲ್ಲಿ ಆದರದಿಂದ ಪೂಜಿಸುತ್ತಾರೆ.

ಬೂದನಿಗೆ ಬಾಸಿಂಗ, ಭೂಮಿ ತಾಯಿಗೆ ದಂಡೆ
ಸಾಲಶರಣರಿಗೆ ಸರಮಾಲೆ । ಕಟಗೊಂಡು
ಮಾದಯ್ಯ ಗೆದ್ದ ಕೈಲಾಸ ॥ *-ಜಾ-ಸಂ-*

ಈ ಮಾದಯ್ಯನು ಶಿವಶರಣ ಹೂಗಾರ ಮಾದಯ್ಯನು. ಜೀರರಿಗೂ (ಹೂಗಾರ) ಒಕ್ಕಲಿಗನ ಕಣದಲ್ಲಿ ರಾಶಿಗೆ ಪತ್ರಿ, ಹೂದಂಡೆಗಳನ್ನು ಕೊಡುವ ಬಾಬಿದೆ. ಇಲ್ಲಿ ಬಾಸಿಂಗವೆಂದರೆ ಎಲೆಪತ್ರಿಗಳ ಮುಕುಟ. ಅದನ್ನು ಒಕ್ಕಲಿಗರು ರಾಶಿಯ ದಿವಸ 'ಬೂದನ' ರಾಶಿಗೆ ಏರಿಸುವರು. ಹೂದಂಡೆಯನ್ನು ಮೇಟಿಗೆ ಕಟ್ಟಿ, ಉಳಿದ ಉಪಕರಣಗಳಿಗೆ ಸಾಲುಶರಣರೆಂದು ಹೂಮಾಲೆಗಳನ್ನು ಹಾಕಿ ಪೂಜೆ ಮಾಡುವರು. ತುಂಬುವ ರಾಶಿಯಲ್ಲಿ ತಟ್ಟಿಯ ತುಂಬ ಜೋಳವನ್ನು ಒಕ್ಕಲಿಗನು ಹೂಗಾರನಿಗೆ 'ಬಾಬು' ಎಂದು ಕೊಡುವ ವಾಡಿಕೆಯು ಈಗಲೂ ಇರುವುದು. ಈ ಕಾಯಕವನ್ನು ಶಿವಶರಣರ ಕಾಲದಲ್ಲಿ ಹೂಗಾರ ಮಾದಯ್ಯನು ಮಾಡುತ್ತಿದ್ದನೆಂದು ಅವನ ಚರಿತ್ರದಿಂದ ತಿಳಿದುಬರುವುದು.

ಬುದ್ಧಯ್ಯ, ಬೂದಯ್ಯ, ಎದ್ದು ತೂರಿದ ಮೆದವ
ಬಿದ್ದರಾಶೆಲ್ಲ ವಚನಗಳೊ । ಅಲ್ಲಮಗ
ಹುದ್ದೆ ಕಲ್ಯಾಣ ಗದ್ದಿಗೆಯೊ ॥ *-ಜಾ-ಸಂ-*

ಇಲ್ಲಿ ಬುದ್ಧಯ್ಯನೇ ಬೂದಯ್ಯನು, ಅವನೇ ಅಲ್ಲಮನು, 'ಕಲ್ಯಾಣ ಗದ್ದಿಗೆಯು' ಶಿವಾನುಭವ ಮಂಟಪದ ಸಿಂಹಾಸನವನ್ನು ಸೂಚಿಸುವುದು. ಈ ಸಿಂಹಾಸನದ ಹುದ್ದೆಯನ್ನು ಪಡೆದವನೇ ಅಲ್ಲಮಪ್ರಭುದೇವರೆಂದು, ಐತಿಹಾಸಿಕ ಸಂಗತಿಯನ್ನು ಈ ಪದ್ಯ ಒಳಗೊಂಡಿದೆ.

ಸುಗ್ಗೀಯ ಲಿಂಗಯ್ಯ, ಸಗ್ಗದ ದೊರೆಯಾದ
ಬಗ್ಗಿ ಶಿವಗಣ ಕೈಮುಗಿದೊ । ಒಕ್ಕಲಿಗ
ಉಗ್ಗಡಿಸಿ ರಾಶಿ ಒಕ್ಯಾನೊ ॥ *-ಜಾ-ಸಂ-*

ಎಂಬ ಬಿಡಿ ಪದ್ಯಗಳು ಒಕ್ಕಲಿಗರು ಅಲ್ಲಮಪ್ರಭುದೇವರನ್ನು ತಮ್ಮ ಸುಗ್ಗಿಯ ಕಣದಲ್ಲಿ 'ಬುದ್ಧಿವಂತಲಿಂಗ' (ಬೂದ)ನೆಂದು ತಿಳಿದು ಪೂಜಿಸುವರೆಂದು ನಿರ್ಧರಿಸಿ ಹೇಳುವುವು.

ವೀರಶೈವ ಪಂಚಾಚಾರ ಮಠಗಳಲ್ಲಿ, ವಿರಕ್ತಜಂಗಮ ಮಠವು ಹಳ್ಳಿಗಳಲ್ಲಿ ಈಗಲೂ ಧರ್ಮ-ದಾಸೋಹ-ಸಮಾಜ ಕಾರ್ಯಗಳ ಸ್ಥಾನವಾಗಿದೆ. ಇದರ ಪೋಷಣೆಗೆ ಹೊಸ ಮತದ ಎಲ್ಲ ಕಸುಬುಗಾರರು ಶಿವಶರಣ (ಬಸವಾದಿ ಪ್ರಮಥ) ರ ಕಾಲದಿಂದ ಮುಡುಪುಗಳನ್ನು ಕಳಿಸುತ್ತ ಬಂದಿದ್ದಾರೆ. ಈ ಮುಡುಪುಗಳಲ್ಲಿ ಬಹುಭಾಗವು ಒಕ್ಕಲಿಗನ ಕಡೆಯಿಂದ ಬರುತ್ತಿತ್ತು; ಈಗಲೂ ಬರುತ್ತದೆ.

ರಾಶಿಗಾಳಿಯು ಬೀಸಿ, ಸೂಸಿ ಹರಿಯಿತು ಕಣವು
ಕೂಸ ಕೋಳೂರ ಕಡೆಗಾಳಿ । ಬೀಸಿಂದು
ಮೀಸಲೀರಾಶಿ ಜಂಗಮಕೆ ॥೬೭॥ *-ಕೋ-ಕೋ-*

ಹಿಂಗಾರಿ ಬೆಳಸಾಗಿ, ಮುಂಗಡವೆ ಬೆಳೆ ಬಂದು
ಟೆಂಗ ಬಿಳಿಜೋಳ ಒಕ್ಕುವದು । ಬೆಳವಲವು
ಜಂಗಮಗೆ ಎಡೆಯು ಹೊಸ ಬೆಳನು ॥೫೮॥ *-ಕುಂ-ಗುಂ-*

ಕಣದೊಳಗೆ ಒಕ್ಕಲಿಗ, ದನಿಯೆತ್ತಿ ಬೆಳತನಕ
ಧನಿಯೆಂದು ಹಾಡಿ-ಬೆಳಕೊಂಡು । ಒಕ್ಕುವನು
ಕಣರಾಸಿ ಉಣಿಸಿ ಜಂಗಮಕೆ ॥೩॥ *-ಮಾ-ಚೆ-*

ಪೂರ್ವಕಾಲದಲ್ಲಿ ಎಲ್ಲ ಬೆಳಸುಗಳ ಮೊದಲನೆಯ ಬೀಡನ್ನು ಒಕ್ಕಲಿಗನು ಇಂತಹ ಮಠಗಳಿಗೆ ಭಕ್ತಿಪೂರ್ವಕವಾಗಿ ತಂದುಕೊಡುತ್ತಿದ್ದ. ಈಗಲೂ ಈ ಪರಿಪಾಠನ್ನು ಹಳ್ಳಿಯ ಒಕ್ಕಲಿಗರಲ್ಲಿ ಕಾಣಬಹುದಾಗಿದೆ. ಆದರೆ ಕೊಡುವ ಪ್ರಮಾಣವು ಈಗ ಅಳತೆ ಮಾಪುಗಳಲ್ಲಿ ಮಾತ್ರ ಮೊದಲಿಗಿಂತಲೂ ಸ್ವಲ್ಪ ಹೆಚ್ಚು ಕಡಿಮೆಯಾಗಿರಬಹುದು. ಮೊದಲಿನ ಕಾಲದಲ್ಲಿ ಮೇಟಿಯ ರಾಶಿಯ ಹೊಂದಿಗೆ ಅದಕ್ಕೆ ಒಂದು ಪ್ರಮಾಣದಲ್ಲಿ 'ಬುದ್ಧಿವಂತಲಿಂಗ' (ಬೂದ)ನ ರಾಶಿಯೆಂದು ಒಕ್ಕಲಿಗನು ತನ್ನ ಗುರುಮಠಕ್ಕೆ ಬೇರೆ ರಾಶಿಯನ್ನೇ ಇಡುತ್ತಿದ್ದನು. ಈ ರಾಶಿಗೆ ಯಾರದೂ ಹಕ್ಕಿದ್ದಿಲ್ಲ. ಅದು ಸಮಾಜಸೇವೆಗೆ ಗುರುಮಠಕ್ಕೆ ನೇರವಾಗಿ ಸಲ್ಲುತ್ತಿತ್ತು.

ಸುಗ್ಗಿಯ ದಾಸೋಹದ ಆರಾಧನೆಯ ಪೀಠದ ಗುರುವೆಂದರೆ 'ಬುದ್ಧಿವಂತಲಿಂಗ' (ಬೂದ). ಇರುಳೆಲ್ಲ ಹಂತಿಯ ಹೊಡೆದು, ಸುಂಕರಾಸಿಯು ಹುಲುಸಾಗಲೆಂದು ಶಿವಶರಣರ ಹಾಡುಗಳನ್ನು ಹಾಡಿ, ಒಕ್ಕಲಿಗನು ಕಣದ ಹುಲುಸನ್ನು ದನದ ಶಗಣಿಯ ಕೂಡ ಹೊರಗೆ ಒಗೆಯಬಾರದೆಂದು ಹಂತಿಯ ಕಡೆಯೆತ್ತಿನ ಶಗಣಿಯನ್ನು ತಗೆದಿಟ್ಟು ಹಂತಿಯು ನುರಿತ ಮೇಲೆ, ಬಿಡುವ ಕಾಲಕ್ಕೆ ಆ ಶಗಣಿಯಿಂದ ಇಷ್ಟಲಿಂಗಾಕೃತಿಯನ್ನು ಮಾಡಿ ಕಡೆಯೆತ್ತಿನ ಬಾಲದ ನಾಲ್ಕಾರು ಜವೆಗಳನ್ನು ಕಿತ್ತು ಆ ಮಾಡಿದ ಲಿಂಗದ ನೆತ್ತಿಯೊಳು ಚುಚ್ಚಿ ಜ್ಞಾನಭಾಂಡಾರದ ಶ್ರೇಷ್ಠ ಚಿನ್ಹವೆನ್ನುತ್ತ, ಸೆಳ್ಳು, ಜಂತೆಗುಂಟಿ, ರಾಫೋಲು ಮೊದಲಾದ ಉಪಕರಣಗಳನ್ನು ಹೊತ್ತು; ಎಲ್ಲ ಶರಣರಿಗೆ ಹುಲುಸನ್ನು ನೀಡಿರೆಂದು ಉಡಿಯೊಡ್ಡಿ ಬೇಡಿಕೊಳ್ಳುವ ರೂಢಿಯು ಉತ್ತರ ಕರ್ನಾಟಕದ ಬಹುತರ ಎಲ್ಲ ಭಾಗಗಳಲ್ಲಿ ಉಂಟು. ಈಗ

ಸಂಕಲನ ಮಾಡಿದ ಶಿವರಣರ ಹಂತಿಯ ಹಾಡುಗಬ್ಬಗಳಲ್ಲಿ ಈ ಬೇಡಿಕೆಯ ಪದ್ಯಗಳು ಕಂಡುಬರುವುವು. ಕೆಲವನ್ನು ಮಾತ್ರ ಕೆಳಗೆ ಉದಹರಿಸಲಾಗಿದೆ.

ಗುಂಡ ತಿಗರಿಯ ತಿರುವಿ, ರುಂಡಧಾರಿಯು ಕುಣಿದು
ಥಂಡಿ ಬೀಳುತಲಿ ಬೆಳವಲಕೆ। ಕುಂಬಾರ
ಗಿಂಡಿ ರಸಗಾಳಿ ಬೀಸುತಲಿ ॥೫೭॥ *-ಕುಂ-ಗುಂ*

ಬೆಳುವಲದಲ್ಲಿ ಕುಂಬಾರ ಗಾಳಿಯು ಬೀಸಹತ್ತಲು ಥಂಡಿ ಬೀಳುವುದು. ಥಂಡಿಗೆ ಹಿಂಗಾರಿ ಬೆಳೆಗಳು ಬೆಳೆದು ಹುಲುಸಾಗುವುದೆಂಬ ಭಾವನೆಯು ಒಕ್ಕಲಿಗರಲ್ಲಿರುವುದು. 'ರಾಶಿ ಗಾಳಿ' 'ಕೋಳೂರ ಗಾಳಿ'ಗಳು ಬೀಸಿದರೆ ಆ ರಾಶಿಗೆ ಮತ್ತಷ್ಟು ಹುಲುಸು ತುಂಬುವುದು. ಆ ಗಾಳಿಗಳು ಬೀಸಲು ಅವನು ತೂರಿ ರಾಸಿಯನ್ನು ಮಾಡುವನು.

ರಾಶಿಗಾಳಿಯು ಬೀಸಿ, ಸೂಸಿ ಹರಿಯಿತು ಕಣವು
ಕೂಸಕೋಳೂರ ಕಡೆಗಾಳಿ। ಬೀಸಿಂದು
ಮೀಸಲೀರಾಶಿ ಜಂಗಮಕೆ ॥೬೭॥

ಹರಿಚಂದಗಾಳಿಗಳು, ಭರದೆ ಬೈಲಿಗೆ ಬೀಸಿ
ಸುರಿಮಳೆಯು ನಮ್ಮ ಬೆಳವಲಕೆ। ಕೋಳೂರ
ಬರಿಗಾಳಿ ಬೀಸಿ ಹಗೆತುಂಬಿ ॥೬೮॥

ಜಂತೆಗುಂಟಲಿ ಎಳೆದ, ನಿಂತ ಕಣಕದರಾಸಿ
ಬಂತು ನಿನ್ನಾಡ ಹಾಡುತಲಿ। ಬೆಳತನಕ
ಚಿಂತಿಲ್ಲದೆಡೆಯು ಶಿವನಡಿಗೆ ॥೬೯॥ *-ಕೋ-ಕೊ-*

ಹೀಗೆ ಬೀಸುವ ಗಾಳಿಗಳನ್ನು ಒಕ್ಕಲಿಗನು ಹಂತಿಯಲ್ಲಿ ಹಾಡಿದ್ದಾನೆ.

ಸುಂಕರಾಶಿಯ ಕಣಕೆ, ಸಂಕದೇವನ ಬಲವು
ಕಂಕಿಯಾ ಕಣಕೆ ನಿನ ಬಲವು। ಮಾದೇವಿ
ಸೊಂಕಿದರೆ ರಾಸಿ ಕಣತುಂಬಿ ॥೮೮॥ *-ಬ-ಮಾ-*

ಒಕ್ಕಲಿಗನ 'ಸುಂಕರಾಶಿಯ ಕಣಕೆ ಸಂಕದೇವನ ಬಲವು' ಇದ್ದರೂ, ಬಿಜ್ಜಮಹಾದೇವಿಯ ಹಾಡನ್ನು ಹಾಡಲು ರಾಶಿಯು ಉಕ್ಕಿಬರುವುದೆಂದು ಅವನ ಮುಗ್ಧ ಭಾವನೆಯಿದೆ.

ಅಡವಿ ಪೂಜೆಯ ಮಾಡಿ, ಎಡೆಮಾಡಿ ಕೂರಿಗಿಗೆ
ಒಡೆಯಗೊಲ್ಲಾಳ ಬಿತ್ತಿದರೆ। ಮಳೆಯಾಗಿ
ಕಡೆರಾಶಿ ತುಂಬಿ ಕೈ ಸೋತು ॥೭೫॥ *-ಗೊಲ್ಲಾಳ-*

ಈ ಪದ್ಯವು ಬಿತ್ತುವ ಸಮಯದಲ್ಲಿಯ ಒಂದು ವಿಶಿಷ್ಟ ಸಂಪ್ರದಾಯವನ್ನು ಸೂಚಿಸುತ್ತದೆ. ಬೆಳುವಲದೊಳಗೆ, ಅಷ್ಟೇಕೆ ಇಡೀ ಉತ್ತರ ಕರ್ನಾಟಕದಲ್ಲಿ ಅಡವಿಯ ಪೂಜೆ ಮಾಡುವವರು ಕುರುಬರು. ಗೊಲ್ಲಾಳೇಶ್ವರನ ಮುಗ್ಧಭಕ್ತಿಗೆ ಶಿವನು ಕುರಿಯ ಹಿಕ್ಕಿಯಲ್ಲಿ ಮೂಡಿದ. ಬಿತ್ತದಲೆ ಅಡವಿಯೆಲ್ಲ ಬೆಳೆ ಬಂದುಬಿಟ್ಟಿತು. ಕಾರಣ ಒಕ್ಕಲಿಗರು ಈ ಮುಗ್ಧ ಶರಣನ ಹೆಸರಿಗೆ ಪಾವನತೆಯನ್ನು ಅಂಟಿಸಲು, ಅಂದಿನಿಂದಲೂ ಊರ ಕುರುಬರಿಗೆ ಅಡವಿಯ ಪೂಜೆ ಮಾಡುವ ಹಕ್ಕು ಬೆಳುವಲದಲ್ಲಿ ಚ್ಯಾಜಾಗಿ ಬಂದಿರುವದೆಂದು ಆ ಭಾಗದ ಹಿರಿಯ ಒಕ್ಕಲಿಗರೆಲ್ಲ ಹೇಳುವರು. ಈಗಲೂ ಈ ಸಂಪ್ರದಾಯವನ್ನು ಎಲ್ಲ ಹಳ್ಳಿಗರು ಮುಗ್ಧಭಕ್ತಿಯಿಂದ ತಪ್ಪದಲೆ ಆಚರಿಸುವರು.

ಬೆಚ್ಚು ಗಡಿಗೆಯು ಗುಂಡ, ನುಚ್ಚು ಜೋಕನು ಚೆರಗ
ಬೆಚ್ಚ್ಯಾಕಿ ಹೊಲಕೆ ಒಕ್ಕಲಿಗ। ಚರಗೊಗೆದ
ಬಚ್ಚಿಡಲು ಹುಲುಸ ಹೊಲದೊಳಗೆ ॥೪॥

ಬೆಚ್ಚು ಹಾಕಿದ ಗಡಿಗಿ, ಮುಚ್ಚಿಟ್ಟ ಬನಹುಲಸು
ಬಚ್ಚಾದ ಬೆಳೆಯ ಕಣವುಕ್ಕಿ। ಗುಂಡಯ್ಯಾ
ಹೆಚ್ಚಾಯ್ತು ನಿನ್ನ ಶಿವಭಕ್ತಿ ॥೫॥ *-ಕುಂ-ಗಂ-*

ಮಹಾಶಿವಶರಣ, ಗುಂಡಯ್ಯನ ಸಮರಸ ಶಿವಭಕ್ತಿಯು ಅಮರವಾಗಿ ಉಳಿಯಲೆಂದು ಒಕ್ಕಲಿಗನು ತನ್ನ ಕಾಯಕದಲ್ಲಿ ಅದಕ್ಕೆ ಹೆಚ್ಚಿನ ಪಾವನತೆಯನ್ನು ಅಂಟಿಸಿದ್ದಾನೆ. ಭೂಮಿಯ ಬಿತ್ತಿದ ಮೇಲೆ ಸಸಿಯೆದ್ದು ಹೊಡೆಹೊರುವ ಸಮಯದಲ್ಲಿ ಹೊಲದ ಹುಲುಸು ಹೊಡೆಯಿಂದ ಹಾರಿಹೋಗಬಾರದೆಂದೂ, ಬನದ ಹುಲುಸೆಲ್ಲ ಸಮರಸವಾಗಿ ಹೊಲದ ಬೆಳೆಯಲ್ಲಿಯೇ ಅಡಗಲೆಂದೂ ಗುಂಡಯ್ಯನ ಮಡಕೆಯನ್ನು ಪೂಜೆಮಾಡಿ, ಜೋಕುಮಾರನ ಅಳಕಅಂಬಲಿ (ಹುಳಿನುಚ್ಚು) ಚರಗವನ್ನು ಹೊಲದ ತುಂಬೆಲ್ಲ ಸೂಸಾಡಿ ಹೊಲದ

ಮಧ್ಯದಲ್ಲಿ ಆ ಮಡಕೆಯನ್ನು ಬೆಚ್ಚೆಂದು ದಬ್ಬುಹಾಕುವ ರೂಢಿಯು ಒಕ್ಕಲಿಗರಲ್ಲಿ ಉಂಟು. ಮೊದಲು 'ಬೆಚ್ಚು' ಈ ಶಬ್ದವು 'ಬೈಚು' ಅಂದರೆ 'ಮುಚ್ಚಿಡು' ಎಂಬ ಅರ್ಥವನ್ನೊಳಗೊಂಡು ಬಳಕೆಯಲ್ಲಿರಬಹುದೇ? ಶಿಲಾಶಾಸನಗಳಲ್ಲಿಯ 'ಬೈಚೇಯ ದಂಡನಾಯಕ' ಜನಪದದಲ್ಲಿಯ 'ಬೈಚಪ್ಪ,' 'ಬೆಚ್ಚಪ್ಪ,' 'ಎಚ್ಚರಪ್ಪ' ಎಂಬ ಹೆಸರುಗಳು ಇದೇ ಶಬ್ದದ ಬೇರೆ ರೂಪಾಂತರಗಳು. ವಚನಶಾಸ್ತ್ರದಲ್ಲಿ ಈ ಶಬ್ದವನ್ನು ವಚನಕಾರರು ಹೇರಳವಾಗಿ ಬಳಸಿದ್ದಾರೆ. "ಉದಕದೊಳಗೆ ಬೈಚಿಟ್ಟ ಬಯಕೆಯ ಕಿಚ್ಚಿನಂತಿದ್ದೀತು" ಎಂಬ ಪ್ರಯೋಗವು ಬಸವಣ್ಣನವರ ವಚನಶಾಸ್ತ್ರದಲ್ಲಿ (ಷಟ್‌ಸ್ಥಲ ವಚನ) ಅದೇ ಅರ್ಥದಲ್ಲಿ ಬಂದಿದೆ. ಆದರೆ ಈ 'ಬೆಚ್ಚು' ಈಗ ಹೊಲದಲ್ಲಿ ಕೇವಲ 'ಬೆದರು' ಎಂಬರ್ಥದಲ್ಲಿ ಉಪಯೋಗಿಸಲ್ಪಡುವುದು. ಬನದ ಹುಲುಸನ್ನು ಕುಂಬಾರ ಗುಂಡಯ್ಯನ ಸಮರಸ ಶಿವಭಕ್ತಿಯ ಮಡಕೆಯಲ್ಲಿ ಮುಚ್ಚಿಟ್ಟರೆ, ಅದು ಹೊಲ ಬಿಟ್ಟು ಹಾರಿಹೋಗಲಾರದೆಂಬ ಮುಗ್ಧ ಭಾವನೆಯಿಂದ ಹೊಲದಲ್ಲಿ ಶಿವಶರಣನ ಹೆಸರಿಲೆ ದಬ್ಬು ಹಾಕುವ ಮಡಕೆಗೆ ಒಕ್ಕಲಿಗನು 'ಬಿಚ್ಚು' ಎಂದು ಕರೆದಿರಬಹುದು. ಈ 'ಬೆಚ್ಚ' ಗಡಿಗೆಯೇ ಗುಂಡನೆಂದೂ, 'ನುಚ್ಚು' (ಅಂಬಲ) 'ಜೋಕನು.' ಹೊಲಕ್ಕೆ ಚೆಲ್ಲುವ ಚರಗವೆಂದೂ ಒಕ್ಕಲಿಗರು ಕುಂಬಾರ ಗುಂಡಯ್ಯನ ಹಂತಿಯ ಹಾಡಿನಲ್ಲಿ ಹಾಡಿದ್ದಾರೆ. ಹೀಗೆ ಭಕ್ತಿಯಿಂದ ಶಿವಶರಣ ಗುಂಡಯ್ಯನನ್ನು 'ಬೆಚ್ಚೆ'ಂದು ಪೂಜೆ ಮಾಡಿದ ಮೇಲೆ ಬೆಳೆಯು ಬಚ್ಚಾದರೇನು? ಕಣವುಕ್ಕಿ ದೊಡ್ಡ ರಾಶಿಯಾಗುವುದೆಂದು ಹೇಳಿ ಕಡೆಗೆ ಗುಂಡಯ್ಯನ ಶಿವಭಕ್ತಿಯೇ ಮಿಗಿಲೆಂದು ಜನಪದ ಕವಿಯು ಹೇಳಿದ್ದಾನೆ.

ನಿನ್ನ ಹೆಸರಿಲೇ ಹಂತಿ, ಹೊನ್ನ ಮುತ್ತಿನ ರಾಸಿ
ಹಣ್ಣಾದ ಮನಸಿನೊಕ್ಕಲಿಗ । ಒಕ್ಕುವನು
ಕನ್ನೆ ಶಿವಭಕ್ತ ದಾಸೋಹ ॥೭೩॥ -ಇ-ಬೊ-

ನೇಗಿಹೂಡಿದ ಜೇಡ, ನೇಗಲಿಯ ಒಕ್ಕಲಿಗ
ಹಾಗಿನಲಿ ಹಾಡಿ ಹುಲುಸಾಗಿ । ಭೂಲೋಕ
ತೂಗಿ ತೊನೆಯುವದು ಬೆಳೆತುಂಬಿ ॥೧೦೪॥ -ನೇ-ಅ-

ಚಿಕ್ಕ ಮಾದನ ಹಾಡು, ಉಕ್ಕಿಸಿತು ತೆನಿರಾಶಿ
ಒಕ್ಕುದಕೆ ಸೋತು ಒಕ್ಕಲಿಗ । ಜಂಗಮಕೆ
ತೆಕ್ಕೆ ತೆಕ್ಕೆಯಲಿ ಉಡಿತುಂಬಿ ॥೯೪॥ -ಹೂ-ಮಾ-

ಹಾಡುತಲಿ ಒಕ್ಕಲಿಗ ಮಾಡುವನು ಸುಗ್ಗಿಯನು
ನೀಡು ಚೆನ್ನಯ್ಯ, ನೀ ಹುಲುಸ । ಕಾಡೊಳಗೆ
ನಾಡು ತುಂಬಿರಲಿ ಶಿವಭಕ್ತಿ ॥೯೪॥ -ಮಾ-ಚೆ-

ಹೀಗೆ ಒಕ್ಕಲಿಗನು ತನ್ನ ಬೆಳೆಯು ಹುಲುಸಾಗಲೆಂದು ಭಕ್ತಿಭಾವದಿಂದ ಶಿವಶರಣರನ್ನು ಪೂಜಿಸಿ ಹಾಡುತ್ತಾನೆ. ಅಂತೆಯೇ ಅವನು ಶರಣರನ್ನು ಹುಲುಸನ್ನೀಯುವ 'ಶಿವಬಂಟ'ರೆಂದು ಹೊಗಳಿದ್ದಾನೆ.

ಸುಗ್ಗಿಯಾ ಕಣಕೇಳೊ, ಸಗ್ಗವದು ರೈತರಿಗೆ
ಹಿಗ್ಗು ಹಾಡುದಕೆ ಬೆಳವಲವು । ಚೌಡಯ್ಯ
ಬುಗ್ಗೆ ಕುಣಿಯsದಕೆ ಶಿವರೂಪ ॥೨॥

ಕುಣಿಕುಣಿದು ಚೌಡಯ್ಯ, ಮಣಿಮಣಿದು ಹಾಡಿದರೆ
ಕಣ ತುಂಬಿ ರಾಶಿ ಹೊರಸೂಸಿ । ಒಕ್ಕಲಿಗ
ಮಣಿದು ದಾಸೋಹ ಹೊಸಮತಕೆ ॥೩॥

ಸುಂಕರೂಪವ ಹಾಕಿ, ಕಂಕರಿಯ ಬಾರಿಸುತ
ಕಂಕಣವ ಕಟ್ಟಿ ಚೌಡಯ್ಯ । ಕುಣಿಯುದಕೆ
ಕಂಕಿ ಹುಲುಸಾಗಿ ಕಣತುಂಬಿ ॥೪॥

ಗೆಜ್ಜೆ ಕಟ್ಟಿದ ಕಾಲು, ಹೆಜ್ಜೆ ಹಾಕುತ ಕುಣಿದು
ಸಜ್ಜೆ ನಿನ್ನಾಡು ಬೆಳವಲಕೆ । ಚೌಡಯ್ಯ
ನುಜ್ಜೆ ಕಣದೊಳಗೆ ಬೆಳತನಕ ॥೫॥

ನೆನಸಿ ಕುಣಿ ಕುಣಿದಾಡಿ, ತೆನಿರಾಸಿ ಹಂತಿಯೊಳು
ಬನದ ಹುಲುಸೆಲ್ಲ ಕಣಕೆರಗಿ । ಚೌಡಯ್ಯ
ಉಣಿಸೊ ಬೆಳವಲದ ಬೆಳೆಹೊಕ್ಕು ॥೬॥

ಚೌಡ ಕುಣಿಯುವ ಹಾಡು, ಹಾಡಿ ಹೊಲ ಹದ ಮಾಡಿ
ಮೋಡ ಮಳೆಗರೆಯೆ ಒಕ್ಕಲಿಗ । ಬಿತ್ತಿದರೆ
ನಾಡೆಲ್ಲ ಬೆಳಸು ಹುಲುಸಾಗಿ ॥೭॥ -ಜಾ-ಚೌ-

ಬೆಳುವಲದ ರೈತರು ಹಂತಿಯಲ್ಲಿ ಚೌಡಯ್ಯನ ಹಾಡನ್ನು ಹಾಡಿ, ದಪ್ಪ ಬಾರಿಸಿ, ಕುಣಿದು ಹೆಜ್ಜೆಯ ಹಾಕುವರು. ಅವನ ಹಾಡು ಅವರಿಗೆ 'ಬೆಳೆಗೆ ಬಳುವಲಿಯು.'

ಸುಗ್ಗಿ ದಾಸೋಹೆಂದು, ಹಿಗ್ಗು ಬೆಳವಲು ನೋಡು
ಹುಗ್ಗಿಹೋಳಿಗೆಯು ನಿಸ್ವಾಡು । ಸುಗ್ಯೂಟ
ನಗ್ಗೇಡು ಇದಕೆ ಮಲೆನಾಡು ॥೮೮॥

ಹಾರಿ ಬರುವದು ಹುಲುಸು, ಏರಿಮಾದನ ಪತ್ರಿ
ಸೂರಿಹಾಡುವೆನು ನಿಸ್ವಾಡ । ಬೆಳತನಕ
ಯಾರು ಕೈ ತಟ್ಟ ನಿಲ್ಲುವರು ॥೮೯॥ –ಹೂ–ಮಾ–

ಬೆಳುವಲ ಒಕ್ಕಲಿಗರಿಗೆ ಸುಗ್ಗಿಯು ದಾಸೋಹ. ಈ ಸಂದರ್ಭದಲ್ಲಿ ಮಲೆನಾಡು ನಗ್ಗೇಡು. ಬನದ ಹುಲುಸು ಹಾರಿಬಂದು ತನ್ನ ರಾಶಿಯಲ್ಲಿ ಬೆರೆಯಲೆಂದು ಪತ್ರಿ–ಪುಷ್ಪಗಳನ್ನು ರಾಶಿಗೆ ಏರಿಸಿ ಒಕ್ಕಲಿಗನು ಕಣತುಂಬಿ ಸೂಸಾಡುವನು.

ಶರಣು ಶರಣೆಂಬುವೆವು, ಹರಣ ಹಾಕುವ ತನಕ
ಕರುಣಿಸಲಿ ಶರಣ ಬೊಮ್ಮಯ್ಯ । ನಮಗಿನ್ನು
ಹರಸರಿ ಹುಲುಸು ಹುಲ್ಲುಲ್ಲಿಗೊ ॥

ಎಂಬ ಬೇಡಿಕೆಯ ಪದ್ಯವು ಎಲ್ಲ ಶಿವಶರಣರ ಹಂತಿಯ ಹಾಡುಗಳ ಕೊನೆಯನ್ನು ಹೇಳುವ ಪದ್ಯವಾಗಿದೆ. ಈ ಪ್ರಕಾರ ಈ ಹಂತಿಯ ಹಾಡುಗಬ್ಬಗಳ ಕೊನೆಯಲ್ಲಿ ಒಕ್ಕಲಿಗನು ಶರಣರಿಗೆ (ಶಿವಬಂಟರಿಗೆ) ಹುಲುಸನ್ನು ಕೊಡಿರೆಂದು ಭಕ್ತಿಯಿಂದ ಬೇಡಿಕೊಂಡಿದ್ದಾನೆ.

ಕನ್ನಬೇಟೆಯನಾಡಿ, ಹೊನ್ನ ಬೆಟ್ಟವ ತಿರುಗಿ
ಪನ್ನಂಗ ಧರಗೆ ಎಡೆಮಾಡಿ । ನರಿ ಕೂಗಿ
ಸಣ್ಣ ರಾಸ್ಯುಕ್ಕಿ ಕಣತುಂಬಿ ॥೮೭॥ –ಬೇ–ಕ–

ಇಲ್ಲಿ ರಾಶಿಯನ್ನು ತುಂಬುವ ಕಾಲದಲ್ಲಿಯ ಇನ್ನೊಂದು ಸಂಪ್ರದಾಯವು ಅಡಕವಾಗಿದೆ. ಒಕ್ಕಲಿಗನು ರಾಶಿಬುತ್ತಿಯ ಮಾಡಿ ಕಣದಲ್ಲಿ ಶಿವಶರಣರಿಗೆ ಪೂಜೆ ಮಾಡಿ ಭೂತಾಯಿಗೆ ಕಡೆಯ ಚೆರಗವನ್ನೊಗೆದು ಬಂದವರೊಡನೆ ಆನಂದದಿಂದುಂಡು ರಾಶಿಯನ್ನು ಕಾಯಲು ಇರುಳೆಲ್ಲ ಜಾಗರಣೆ ಮಾಡುವನು. ಬೆಳಗಿನ ಜಾವದಲ್ಲಿ, ನರಿಯು ಕೂಗಲು ರಾಶಿಯನ್ನು ತುಂಬುವ ಸಂಪ್ರದಾಯವು ವಾಡಿಕೆಯಲ್ಲಿರುವುದು. ಶಿವಶರಣ ಕನ್ನಯ್ಯನು, ಶಿವನಿಗೆ ಪೂಜೆ ಮಾಡಿ ಬೆಳಗಿನ ಜಾವದಲ್ಲಿ ತಾನು ತಂದ ಮಾಂಸವನ್ನು ಕುಚ್ಚಿ ಎಡೆಮಾಡುವ ಕಾಲಕ್ಕೆ ನರಿಯು ಕೂಗಲು ಶಿವನು ಪ್ರತ್ಯಕ್ಷನಾಗಿ ಕನ್ನಯ್ಯನ ಭಕ್ತಿಗೆ ಮೆಚ್ಚಿ ಶಿವಪದವನ್ನು ಕೊಟ್ಟನೆಂಬ ಕಥೆಯನ್ನು ಕೇಳಿದ ಒಕ್ಕಲಿಗನು, ಕನ್ನಯ್ಯನ ಕನ್ನೆ ಭಕ್ತಿಗೆ ಮೆಚ್ಚಿದ್ದಾನೆ. ಆ ಶಿವಶರಣನು ಶಿವಪದ ಹೊಂದಿದ ಸಮಯವು ಶುಭವೆಂದು, ಬೆಳಗಿನ ನರಿಯು ಕೂಗುವಾಗ, ತನ್ನ ರಾಶಿಯು ಹುಲುಸಾಗಲೆಂದು ಕನ್ನಯ್ಯನನ್ನು ನೆನಿಸಿ ರಾಶಿಯನ್ನು ತುಂಬುವನು. ಹೀಗೆ ಮಾಡುವದರಿಂದ ರಾಶಿಯು ಹುಲುಸಾಗುವದೆಂದು ಒಕ್ಕಲಿಗರು ಹೇಳುತ್ತಾರೆ. ಇಷ್ಟು ಪ್ರಭಾವವಾಗಿದೆ ಶಿವಶರಣರದು ಒಕ್ಕಲಿಗನ ಮೇಲೆ!

ಶಿವಶರಣರ ಕಾಲದಲ್ಲಿ ಒಕ್ಕಲಿಗನ ಕಣದಲ್ಲಿ 'ಗೋಪಾಳ' ವಿದ್ದಿಲ್ಲ. **'ಗೋಪಾಳ'ವು ವೈಷ್ಣವದಾಸರ ಗುರುತಿದ್ದು ದಾಸರ ಕಾಲದಲ್ಲಿ ಅದು ಒಕ್ಕಲಿಗನ ಸುಗ್ಗಿಯ ಕಣದಲ್ಲಿ ಕಾಲಿಟ್ಟಿತು. ಬುದ್ಧಿವಂತಲಿಂಗನು 'ಬೂದಾ'ದನು.** ಇದು ಹೇಗೆ? ಎಂಬ ಪ್ರಶ್ನೆಯು ಸಂಶೋಧಕರ ಮಿದುಳನ್ನು ಕಿವುಚದೆ ಬಿಡದು.

ಕ್ರಿ.ಶ. ೧೨ನೆಯ ಶತಮಾನವು–ಲಿಂಗಾಯತ ಮತದ ಏಳಿಗೆಯ ಕಾಲವಾದರೂ, ಕೊನೆಯು ಈ ಮತಕ್ಕೆ ಸಂಕಟಕಾಲವಾಗಿ ಸಂಭವಿಸಿತು. ರಾಜ್ಯದಲ್ಲಿ ಅನಾಚಾರವು ಹೆಚ್ಚಾಯಿತು. ಸಹೋದರ ಮತಗಳು ಅಸೂಯೆ ಪಟ್ಟು ಈ ಮತದ ಮೇಲೆ ಸೇಡು, ಕುನಸು ತೀರಿಸಲು ಪ್ರಾರಂಭ ಮಾಡಿದುವು. ಲೋಕವು ಹದಗೆಟ್ಟು ಪಾಪವು ಹೆಚ್ಚಾಗಹತ್ತಿತ್ತು. ಭಕ್ತಿಭಂಡಾರಿ ಬಸವಣ್ಣನವರು ಇದನ್ನೆಲ್ಲ ನೋಡಲಾರದೆ ಕಲ್ಯಾಣ ಬಿಟ್ಟು ತನ್ನ ಗುರುವಿನ ಏಕಾಂತ ಸ್ಥಳವಾದ ಕಪ್ಪಡಿ ಸಂಗಮಕ್ಕೆ ತೆರಳಿದರು. ಮುಂದೆ ವಾತಾವರಣವೇ ಬದಲಾಯಿತು. ಭರದಿಂದ ಹಬ್ಬುವ ಲಿಂಗಾಯತ ಮತಕ್ಕೆ ಸಹೋದರ ಮತಗಳು ಕಂಟಕವಾದುವು. ಕಾಯಕವೇ ಹೆದ್ದಾರಿಯಾದ ಹೊಸ ಮತವು ಸಂಪತ್ತುಳ್ಳದ್ದಾಗಿ ಆಗ ಬೆಳಕಿಗೆ ಬಂದಿತ್ತು. ಧನ, ಧಾನ್ಯ ಸಂಪನ್ನರಾದ ಈ ಮತದ ಅನುಯಾಯಿಗಳನ್ನು ನೋಡಿ, ಸಹೋದರ ಮತಗಳು ಅಸೂಯೆಪಟ್ಟು ಇದನ್ನು ಬಗ್ಗು ಬಡಿಯುವ ಸಮಯವನ್ನು ಕಾಯಹತ್ತಿದುವು. ಈ ಪ್ರಸಂಗದಲ್ಲಿ ಬ್ರಾಹ್ಮಣಮತವು ಹೂಡಿದ ಕುಟಿಲ ತಂತ್ರವು ಲಿಂಗಾಯತ ಮತದ ಇತಿಹಾಸದಲ್ಲಿ ಮಹಾಕಾರಸ್ಥಾನವೆಂದು ಹೇಳಬಹುದು. ಬ್ರಾಹ್ಮಣರು ಕೊಂಡೆಯರಾಗಿ ಬಿಜ್ಜಳರಾಯನಿಗೆ ದೂರು ಹೇಳಿದರು. ಜೈನರು ಅದಕ್ಕೆ ಬೆಂಬಲವಿತ್ತರು. ಹರಳಯ್ಯ ಹಾಗೂ ಮಧುವಯ್ಯರ ಬೀಗತನದ ಪ್ರಸಂಗವು ರಾಜ್ಯದಲ್ಲಿ ಗೊಂದಲವೆಬ್ಬಿಸಿತು. ರಾಜ್ಯ ಕ್ರಾಂತಿಯಾಗಿ ಬಿಜ್ಜಳನ ವಧೆಯಾಯಿತು. ಅನೇಕ ಜಂಗಮರು ಕಾದು ಮಡಿದರು. ಕೆಲವರು ತುಂಡು ತುಂಡಾಗಿ ಉಳಿವೆಯ ಕಾಡು ಸೇರಿದರು. ಬೇರೆ ಕೆಲವರು ಶ್ರೀಶೈಲ ಸೇರಿದರು. ಉಳಿದವರು ಕರ್ನಾಟಕ ಹಳ್ಳಿಗಳನ್ನು ಸೇರಿ ಗುಪ್ತವಾಗಿ ಇರಹತ್ತಿದರು. ಲಿಂಗಾಯ ಮತಕ್ಕೆ ಎಲ್ಲ ಕಡೆಯಿಂದಲೂ ಸಹಾಯವು ತಪ್ಪಿತು. ಶಿವಶರಣರು ದಿಕ್ಕಾಪಾಲಾದರು. ಇಷ್ಟಾಗುವದರೊಳಗೆ ಬ್ರಾಹ್ಮಣ ಧರ್ಮಾಧಿಕಾರಿಗಳು ರಾಜಾಶ್ರಯದಲ್ಲಿ ಹುದ್ದೆ ಹೊಂದಿದ್ದರು. ರಾಜ್ಯದಲ್ಲಿ ಒಕ್ಕಲಿಗನ ಸಂಪತ್ತನ್ನು ಕಂಡು ಇವರು ತಮ್ಮ ಉದರಪೋಷಣೆಗೆ ಅವನ ಗಳಿಕೆಯಲ್ಲಿ ಕೈಹಾಕಿದಂತೆ ಕಾಣುತ್ತದೆ.

ರಾಜಬಲದಿಂದ ಒಕ್ಕಲಿಗನ ಉದ್ಯೋಗದಲ್ಲಿ ಅನೇಕ ಬದಲಾವಣೆಗಳನ್ನು ಮಾಡಿ ಅವುಗಳನ್ನು ಸ್ವೀಕರಿಸಲು ಜುಲುಮೆ-ಒತ್ತಾಯಗಳನ್ನೂ ಮಾಡಿದ್ದಾರೆ. ಅಸಹಾಯಕರಾದ ಅನೇಕ ಒಕ್ಕಲಿಗರು ಬ್ರಾಹ್ಮಣರು ಮಾಡಿದ ಅನೇಕ ಬದಲಾವಣೆಗಳಿಗೆ ಶರಣು ಹೋಗಬೇಕಾಯಿತು ಮಾತ್ರ, ಅವರು ತಮ್ಮ ಕಾಯಕ ಧರ್ಮವಾದ ವೀರಶೈವ ಧರ್ಮವನ್ನು ಕಡೆಯವರಿಗೂ ಬಿಡಲಿಲ್ಲ. ಬ್ರಾಹ್ಮಣರಿಗೆ ಬೇಕಾದದ್ದು ಒಕ್ಕಲಿಗನ ಧರ್ಮವಲ್ಲ, ತಮ್ಮ ಉದರಪೋಷಣೆ. ಅವನು ತಮ್ಮ ದಾಸನಾಗಿ ಬೇಡಿದ್ದನ್ನು ದುಡಿದು ಕೊಟ್ಟರೆ ಸಾಕಾಗಿತ್ತು. ಅದು ಅವರಿಗೆ ಒಕ್ಕಲಿಗನಿಂದ ಸಹಜವಾಗಿ ದೊರೆಯಲು ಅವರು ಅವನ ಧರ್ಮದಲ್ಲಿ ಕೈಹಾಕಿದಂತೆ ಕಾಣುವುದಿಲ್ಲ. ಕಾರಣ ಕರ್ನಾಟಕದ ಯಾವ ಭಾಗದಲ್ಲಿಯೂ ಬ್ರಾಹ್ಮಣರು ಒಕ್ಕಲತನವನ್ನು ಮಾಡುವುದು ಕಂಡುಬರುವುದಿಲ್ಲ. ಅರಸರಿಂದ ದತ್ತಿ ದೇಣಿಗೆಗಳನ್ನು ಪಡೆದು ಜಮೀನದಾರರಾಗಿ ಬಹಳ ಜನರಿರುವುದು ಎಲ್ಲರ ನಿದರ್ಶನಕ್ಕೆ ಬಂದರೆ ಸಾಕು. ಇವರು ತಮ್ಮ ಕೈನಡೆಯುವಾಗ ಮಾಡಿದ ಮುಖ್ಯ ಬದಲಾವಣೆಯೇ ಸುಗ್ಗಿಯ ಕಣದಲ್ಲಿ ಈಗ ನಮಗೆ ಕಂಡುಬರುವ 'ಬೂದ.'

ಶಿವಶರಣರ ನಂತರ, ಬ್ರಾಹ್ಮಣರು, ಅರಸರ ಬಲದಿಂದ ಸುಗ್ಗಿಯು ಒಕ್ಕಲಿಗನು ಮಾಡುವ 'ಯಜ್ಞ'ವೆಂದು ಒಕ್ಕಲಿಗರಿಗೆ ಒತ್ತಾಯ ತಂದರು. ಸುಗ್ಗಿಯೇ 'ದಾಸೋಹ'ವೆಂದೂ ಅದರ ಆರಾಧನೆಗೆ, ಗುರುವು (ಪ್ರಭುದೇವ) 'ಬುದ್ಧಿವಂತ ಲಿಂಗ'ವೆಂದೂ ಒಕ್ಕಲಿಗರು ಶಿವಶರಣರ ಕಾಲದಿಂದ ಆಚರಿಸುತ್ತ ಬಂದ ಸಂಪ್ರದಾಯವನ್ನು ಕಿತ್ತೊಗೆದು ತಾವು ಮಾಡಿದ ಹೊಸ ಬದಲಾವಣೆಯನ್ನು ಪ್ರತಿಪಾದಿಸ ಹತ್ತಿದರು. 'ಬುದ್ಧಿವಂತಲಿಂಗ'ವನ್ನು ಬದಲುಮಾಡಿ ಅದರ ಬದಲಾಗಿ ಅದನ್ನು 'ಬೂದ'ನೆಂದು ಕರೆದು, ಈ ಬೂದಾಚಾರ್ಯನು ಸುಗ್ಗಿಯೆಂಬ ಯಜ್ಞ ಮಾಡುವ ಪುರೋಹಿತನೆಂದೂ, ವೀರಶೈವ ವಿರಕ್ತ ಮಠ ದಾಸೋಹಕ್ಕೆ ಸಲ್ಲತಕ್ಕ ಈ 'ಬುದ್ಧಿವಂತಲಿಂಗ'ನ ರಾಶಿಯು ಈಗ ಬ್ರಾಹ್ಮಣರಿಗೆ ಸಲ್ಲತಕ್ಕದ್ದೆಂದೂ ಬಲಾತ್ಕಾರ ನಡೆಸಿ ಅದನ್ನು ಕಸಿದುಕೊಂಡು ಕೆಲಕಾಲ ಭೋಗಿಸಿದಂತೆ ಕಂಡುಬರುವುದು. ಕರ್ನಾಟಕದಲ್ಲಿ ಈಗಲೂ ಕಂಡುಬರುವ ಈ ಸಂಪ್ರದಾಯದ ನಿಜ ಸ್ಥಿತಿಗತಿಗಳೇ ಇದಕ್ಕೆ ಬಲವಾದ ಸಾಕ್ಷಿ. ಎಲ್ಲರ ಆಶ್ರಯ ತಪ್ಪಿದ ವೀರಶೈವ ಒಕ್ಕಲಿಗರು ಅರಸನ ಬಲದ ಮೂಲಕ ಬ್ರಾಹ್ಮಣರಿಗೆ ಅಂಜಿ 'ಬುದ್ಧಿವಂತಲಿಂಗ'ನ ರಾಶಿಯನ್ನು 'ಬೂದಾಚಾರ್ಯ'ನ ರಾಶಿಯೆಂದು ಅವರಿಗೆ ಕೊಡಹತ್ತಿದರು. ಕೆಲಕಾಲ 'ಬುದ್ಧಿವಂತಲಿಂಗ'ನ ರಾಶಿಯು ಹಳ್ಳಿಯ ದಾಸೋಹ ಮಠಕ್ಕೆ ತಪ್ಪಿತು. ವೀರಶೈವರ ಮಠಗಳು ತಮ್ಮ ಕಾಲಮೇಲೆಯೇ ನಿಲ್ಲಬೇಕಾಯಿತು. ಇಷ್ಟಕ್ಕೆ ಬ್ರಾಹ್ಮಣರು ತೃಪ್ತಿಯಾದಂತೆ ಕಾಣುವದಿಲ್ಲ. ಶಿವಶರಣರ ನಂತರ ವೈಷ್ಣವ ಧರ್ಮವನ್ನು ಜನಪದದಲ್ಲಿ ಹಬ್ಬಿಸಬೇಕೆಂದು ಅವರ ಹೆಜ್ಜೆಯಲ್ಲಿಯೇ ಕಾಲಿಟ್ಟ ವೈಷ್ಣವದಾಸರು, ದಾಸಕೂಟಗಳನ್ನು ಸ್ಥಾಪಿಸಿ, ತಮ್ಮ ಸೇವೆಗೆ 'ದಾಸ'ರೆಂಬ ಕೀಳಜನರ ಪಂಗಡವನ್ನೇರ್ಪಡಿಸಿದ್ದು ದಾಸಕೂಟದ ಇತಿಹಾಸದಿಂದಲೂ, ಜನಪದದಿಂದಲೂ ತಿಳಿದುಬರುವುದು. ಈ ಪಂಗಡದ ಪೋಷಣೆಗೆ, ತಾವು ಕೊಡದೆ, ಬ್ರಾಹ್ಮಣರು ಒಕ್ಕಲಿಗನ ಕೈಯಿಂದ ಧನ-ಧಾನ್ಯವನ್ನು ಕೊಡಿಸಿದ್ದು ಎಲ್ಲರಿಗೂ ಕಂಡುಬರುವುದು. ಅಂದಿನಿಂದ ದಾಸರ ಗೋಪಾಳವು ಒಕ್ಕಲಿಗನ ಕಣದಲ್ಲಿ ಕಾಲಿಟ್ಟಿತು. ಬೂದನ ರಾಶಿಯಲ್ಲದೆ ಒಕ್ಕಲಿಗನು ತನ್ನ ಗಳಿಕೆಯಲ್ಲಿ ದಾಸರ ಗೋಪಾಳವನ್ನೂ ತುಂಬಬೇಕಾಯಿತು. ಶಿವಶರಣರು ಬುದ್ಧಿವಂತಲಿಂಗನ ರಾಶಿಗೆ ಸಮಾಜಸೇವೆಯ ಸಂಬಂಧ ಪಾಲುಗಾರರಾದರೆ, ಬ್ರಾಹ್ಮಣರು ಬೂದನರಾಶಿಯನ್ನೂ, ಗೋಪಾಳವನ್ನೂ ಒಕ್ಕಲಿಗನ ಗಳಿಕೆಯಿಂದ ಎತ್ತಿದ್ದು ವಿಶದವಾದ ಸಂಗತಿಯಾಗಿದೆ.

ಈ ಸಂಪ್ರದಾಯಗಳನ್ನು ಯಾರು ಮಾಡಿದರು? ಇವು ಎಲ್ಲಿ ಕಂಡುಬರುವುವು? ಇವುಗಳನ್ನು ಈಗ ಪಾಲಿಸುವವರ್‍ಯಾರು? ಎಂಬೀ ಪ್ರಶ್ನೆಗಳನ್ನು ಚರ್ಚಿಸುವುದು ಅತ್ಯಗತ್ಯ. ಒಕ್ಕಲಿಗನು ಸುಗ್ಗಿಯ ಕಾಲದಲ್ಲಿ ಕಣದೊಳಗೆ ಪಾಲಿಸುವ ಸಂಪ್ರದಾಯಗಳು ಕರ್ನಾಟಕ ಬಿಟ್ಟು ಭರತ ಖಂಡದ ಉಳಿದ ಯಾವ ಭಾಗಗಳಲ್ಲಿಯೂ ಕಂಡುಬರುವುದಿಲ್ಲ. ಕರ್ನಾಟಕದಲ್ಲಿಯೂ ಕೂಡ ಕನ್ನಡ ಮಾತಾಡುವ ಎಲ್ಲ ಭಾಗಗಳಲ್ಲಿ ಗೋಚರವಾಗದಿರುವುದು ಬಹಳೇ ಆಶ್ಚರ್ಯಕರವಾದ ಸಂಗತಿಯು. ಒಂದು ವೇಳೆ ಮೇಲೆ ಹೇಳಿದ ಎಲ್ಲ ಸಂಪ್ರದಾಯಗಳು ಆರ್ಯ ಸಂಸ್ಕೃತಿಯ ಸಂಪ್ರದಾಯಗಳಾಗಿದ್ದರೆ ಭಾರತದ ತುಂಬೆಲ್ಲ ಕಂಡುಬರಬೇಕಾಗಿತ್ತು. ಆದರೆ ಈಗಿರುವ ನಿಜಸ್ಥಿತಿಯು ಇವು ಆರ್ಯ ಸಂಪ್ರದಾಯಗಳಲ್ಲವೆಂದು ಸ್ಪಷ್ಟವಾಗಿ ಹೇಳಿಬಿಡುವುದು. ಹಾಗಾದರೆ ಇವು ದ್ರಾವಿಡ ಸಂಸ್ಕೃತಿಯ ಸಂಪ್ರದಾಯಗಳೇ? ಎಂಬ ಪ್ರಶ್ನೆ ಹೊರಡುವುದು. ಹಾಗಿದ್ದ ಪಕ್ಷದಲ್ಲಿ ಕರ್ನಾಟಕ ಹಾಗೂ ಉಳಿದ ದ್ರಾವಿಡ ಜನಾಂಗಗಳ ಎಲ್ಲ ಒಕ್ಕಲಿಗರೂ ಇವುಗಳನ್ನು ಆಚರಿಸಬೇಕಾಗಿತ್ತು. ಆದರೆ ವಸ್ತುಸ್ಥಿತಿಯು ಹಾಗಿಲ್ಲ. ತಮಿಳು ನಾಡಿನಲ್ಲಿಯೂ, ಮೈಸೂರ ದಕ್ಷಿಣ ಭಾಗಗಳಲ್ಲಿಯೂ, ಕಾರವಾರ, ಬೆಳಗಾವಿ ಜಿಲ್ಲೆಗಳ ಬೆಟ್ಟದ ಭಾಗಗಳಲ್ಲಿಯೂ, ಆಂಧ್ರದ ಪೂರ್ವೋತ್ತರ ಭಾಗಗಳಲ್ಲಿಯೂ ವೀರಶೈವ ರೈತರನ್ನು ಬಿಟ್ಟು ಉಳಿದ ಯಾವ ಒಕ್ಕಲಿಗರೂ ಈ ಸಂಪ್ರದಾಯಗಳನ್ನು ಪಾಲಿಸುವದಿಲ್ಲೆಂದು ತಿಳಿದುಬರುವುದು. ೨೫೦೦ ವರುಷಗಳಿಂದ ಕರ್ನಾಟಕದಲ್ಲಿ ವಸಹಾತು ಮಾಡಿಕೊಂಡು ನಿಂತು, ಕನ್ನಡಿಗರೆಂದು ಹೆಮ್ಮೆ ಪಡುವ ಜೈನ ಒಕ್ಕಲಿಗರೂ ಈ ಯಾವ ಸಂಪ್ರದಾಯಗಳನ್ನೂ ಸುಗ್ಗಿಯ ಕಣದಲ್ಲಿ ಪಾಲಿಸುವುದಿಲ್ಲ. ಕಾರಣ ಇವು ಇಡೀ ದ್ರಾವಿಡ ಜನಾಂಗದ ಸಂಪ್ರದಾಯಗಳಿರದೆ ಆ ಜನಾಂಗದ ದೊಡ್ಡ ಪಂಗಡವಾದ ಲಿಂಗಾಯತ ಮತಕ್ಕೆ ವಿಶಿಷ್ಟವಾಗಿ ಸಂಬಂಧಿಸಿರುವುದೆಂದು ಸಾಧಾರವಾಗಿ ಹೇಳಬಹುದು. ಕರ್ನಾಟಕದಲ್ಲಿ ಎಲ್ಲ ಲಿಂಗಾಯತ ಒಕ್ಕಲಿಗರು ತಪ್ಪದೆ ಈ ಎಲ್ಲ ಸಂಪ್ರದಾಯಗಳನ್ನು ಪಾಲಿಸುವದನ್ನು ನೋಡಿದರೆ **ಈ ಸಂಪ್ರದಾಯಗಳು, ಕೇವಲ ವೀರಶೈವರಿಗಷ್ಟೇ ಸಂಬಂಧಿಸಿದ್ದು ಶಿವಶರಣರೇ ಇವುಗಳನ್ನು ಬಸವಾದಿ ಪ್ರಮಥರ ತರುವಾಯ ಒಕ್ಕಲಿಗರಿಗೆ ಹಾಕಿಕೊಟ್ಟಿರಬಹುದೆಂದು ನಮ್ಮೆಲ್ಲರಿಗೆ ಅನಿಸದಿರದು**. ಇದಕ್ಕೆ ನಿದರ್ಶನವಾಗಿ ಬಸವಾದಿ ಪ್ರಮಥರ ಕಾಲದಲ್ಲಿಯೂ, ಅವರ ನಂತರ ಬಂದ ಶಿವಶರಣರ ಕಾಲದಲ್ಲಿಯೂ ಅನೇಕ ಶಿವಶರಣರು ಒಕ್ಕಲಿಗರಿದ್ದು ಶಿವಾನುಭವಿಗಳಾಗಿದ್ದರೆಂದು ವೀರಶೈವರ ಇತಿಹಾಸವೇ ಕೂಗಿ ಹೇಳುವುದು. ಹೊಲಗೆಲಸವೇ ಅವರ ಕಾಯಕವಾಗಿತ್ತು; ಸುಗ್ಗಿಯೇ ದಾಸೋಹ. ಈ ಎರಡರ ಮುಖಾಂತರ ಅವರು ಶಿವಾನುಭವ ಗೋಷ್ಠಿಯನ್ನು ಮಾಡುತ್ತಿದ್ದರು. ಹಳ್ಳಿಗಳಲ್ಲಿ ವೀರಶೈವ ಸಮಾಜ ಘಟನೆಯನ್ನು ಮಾಡುವುದಕ್ಕೋಸ್ಕರ 'ಕಲ್ಯಾಣ ಮಂಟಪ'ದ ಅನುಕರಣ ಮಾಡಿ ಅದಕ್ಕೆ ಪಾವನತೆಯನ್ನಂಟಿಸಿ ಶಿವಶರಣರಾದ ಒಕ್ಕಲಿಗರು ಅದನ್ನು (ಕಲ್ಯಾಣ ಮಂಟಪವನ್ನು) ಸುಗ್ಗಿಯ ಕಣದಲ್ಲಿ ಸ್ಥಾಪಿಸಿರಬಹುದು. ನೂರೊಂದು ಪುರಾತರ ಹಂತಿಯ ಹಾಡುಗಬ್ಬಗಳನ್ನು ಹಾಡಿ,

ಶಿವಾನುಭವ ಗೋಷ್ಠಿಯನ್ನು ಮಾಡುತ್ತಿರಬಹುದು. ಇದೇ ಮುಂದೆ ಹೆಚ್ಚಾಗಿ ಬಳಕೆಯಲ್ಲಿ ಬಂದು, ಪರಿಪಾಠ ಬಿದ್ದು ಜನಸಾಮಾನ್ಯರಿಗೆ ಈಗ ಕೇವಲ ಸಂಪ್ರದಾಯಗಳಾಗಿ ಉಳಿದಿರಬಹುದೆಂದು ಹೇಳಬಹುದಾಗಿದೆ.

೧೨ನೆಯ ಶತಮಾನದಿಂದ ಇಲ್ಲಿಯವರೆಗೂ ಕರ್ನಾಟಕದಲ್ಲಿ ಬಹುಸಂಖ್ಯಾತರ ಮತವೆಂದರೆ ಲಿಂಗಾಯತ ಮತವು. ರಾಜಕೀಯ, ಸಾಮಾಜಿಕ ಮೊದಲಾದ ಮಹತ್ವದ ಒಂದಿಲ್ಲೊಂದು ಭಾಗದಲ್ಲಿ ಇದರ ಕೈವಾಡು ಇದ್ದೇ ಇರಬೇಕೆಂದು ಸಂಶೋಧಕರಿಗೆ ಅನಿಸದಿರದು. ಆದರೆ ಸಹೋದರ ಮತಗಳ ಅಸೂಯೆಯ ಮೂಲಕವಾಗಲಿ, ಅಥವಾ ಕಾಯಕವಾದಿಗಳಾದ ಲಿಂಗಾಯತರ ಸೌಜನ್ಯದ ಮೂಲಕವಾಗಲಿ ನಿಜಸ್ಥಿತಿಯು ಬೆಳಕಿಗೆ ಬಂದಿಲ್ಲ. ಈ ಎಲ್ಲ ಸಂಪ್ರದಾಯಗಳು ಕಲ್ಯಾಣದ ಸುತ್ತಮುತ್ತಲೂ, ಕಲ್ಯಾಣದ ನೆರೆಯ ಆಂಧ್ರಪ್ರದೇಶದಲ್ಲಿಯೂ, ಮೈಸೂರ ಉತ್ತರ ಭಾಗದಲ್ಲಿಯೂ, ಕೊಡಗಿನ ಕೆಲವು ಭಾಗಗಳಲ್ಲಿಯೂ, ಬಿಜಾಪುರ, ಧಾರವಾಡ ಮತ್ತು ಬೆಳಗಾವಿ ಜಿಲ್ಲೆಯ ಬಹುಭಾಗಗಳಲ್ಲಿಯೂ ಬಳಕೆಯಲ್ಲಿರುವುವು. ಇನ್ನುಳಿದ ದ್ರಾವಿಡ ನಾಡುಗಳಲ್ಲಿ ಈ ಸಂಪ್ರದಾಯಗಳನ್ನು ಗೊತ್ತುಳ್ಳ ಎಲ್ಲ ಲಿಂಗಾಯತ ಒಕ್ಕಲಿಗರು ಇಂದಿನವರೆಗೆ ಸುಗ್ಗಿಯ ಕಾಲದಲ್ಲಿ ತಪ್ಪದೆ ಪಾಲಿಸುವರು. ಈ ಎಲ್ಲ ಕಾರಣಗಳ ಮೂಲಕ ಇವುಗಳನ್ನು ಬಸವಾದಿ ಪ್ರಮಥರ ನಂತರ ಬಂದ ಶಿವಶರಣರೇ ಹಾಕಿಕೊಟ್ಟಿರಬಹುದು. ಇವು ಕರ್ನಾಟಕದಲ್ಲಿ ಲಿಂಗಾಯತರಿದ್ದ ಎಲ್ಲ ಭಾಗಗಳಲ್ಲಿ ಬಳಕೆಯಲ್ಲಿವೆ.

೧೩ನೆಯ ಹಾಗೂ ೧೪ನೇ ಶತಮಾನಗಳಲ್ಲಿ ಬ್ರಾಹ್ಮಣರು ಮಾಡಿದ ಬದಲಾವಣೆಗಳು ಮುಂದೆ ಹಾಗೆಯೆ ಉಳಿಯಲಿಲ್ಲ. ಅವರ ಪ್ರಯತ್ನಗಳು ನಿಷ್ಫಲವಾದಂತೆ ಕಂಡುಬರುವುವು. ಲಿಂಗಾಯತ ಮತವು ೧೫ನೆಯ ಶತಮಾನದಲ್ಲಿ ಮತ್ತೆ ವಿಜಯನಗರದ ಪ್ರೌಢದೇವರಾಯ (ಕ್ರಿ.ಶ. ೧೪೮೯-೧೪೪೬)ನ ಆಳಿಕೆಯಲ್ಲಿ ಪ್ರಸಿದ್ಧಿಗೆ ಬಂತು. ಇವನ ಕಾಲದಲ್ಲಿ ಲಕ್ಕಣ್ಣದಂಡೇಶ ಮತ್ತು ಜಕ್ಕಣಾಚಾರ್ಯರೆಂಬ ಪ್ರಸಿದ್ಧ ಮಂತ್ರಿಗಳು ಲಿಂಗಾಯತ ಮತವನ್ನು ಹಬ್ಬಿಸಲು ಅನೇಕ ರೀತಿಯಿಂದ ಸಹಾಯ ಮಾಡಿದರು. ಇವರ ಬಲದಿಂದ ಕಲ್ಲಮಠ ಪ್ರಭುದೇವ ಮೊದಲಾದ ನೂರೊಂದು ವಿರಕ್ತರು ಬ್ರಾಹ್ಮಣರು ಕಿತ್ತೊಗೆದ ಬುದ್ಧಿವಂತಲಿಂಗದ ಸ್ಥಾಪನೆಯನ್ನು ಮತ್ತೆ ಬಳಕೆಯಲ್ಲಿ ತರಲು ಪ್ರಯತ್ನ ಮಾಡಿದ್ದು ತಿಳಿದುಬರುತ್ತದೆ. ವಿರುಪಾಕ್ಷದೇವ (೧೪೬೭-೧೪೭೮)ನ ಕಾಲದಲ್ಲಿ ತೋಂಟದ ಸಿದ್ಧಲಿಂಗಯತಿಯು ಮತ್ತೆ ದೊಡ್ಡ ಹೋರಾಟವನ್ನು ನಡೆಸಿದಂತೆ ಕಂಡುಬರುವುದು. ಈ ಯತಿಯ ಸಹಾಯದಿಂದ, ಸಾರುವ ಅಯ್ಯಗಳು, ಜಂಗಿನ ಅಯ್ಯಗಳು, ಶಂಖಯ್ಯಗಳು, ಘಂಟೆಯ ಅಯ್ಯಗಳು, ಕಾಯಕದಯ್ಯ ಮೊದಲಾದವರು ಸುಗ್ಗಿಯ ಕಣದಲ್ಲಿ ಬ್ರಾಹ್ಮಣರು ಮಾಡಿದ ಬೂದುವೆಂಬ ಬದಲಾವಣೆಯನ್ನು ತೆಗೆದು, ಮೊದಲಿದ್ದ 'ಬುದ್ಧಿವಂತಲಿಂಗ'ವನ್ನು ಮತ್ತೆ ಸ್ಥಾಪಿಸಲು ಹೆಣಗಾಡಿದ್ದಾರೆ. ಆದರೆ ಎರಡುನೂರು ವರುಷಗಳ ರೂಢಿಯ ಬಲದಿಂದ ಬ್ರಾಹ್ಮಣರು ಮಾಡಿದ ಬದಲಾವಣೆಯಾದ 'ಬೂದನು' (ಬುದ್ಧಿವಂತಲಿಂಗ) ಮಾತ್ರ ಬೂದನೆಂದೇ ಉಳಿದನು. ಕೆಲವೊಂದು ಭಾಗಗಳಲ್ಲಿ ಮಾತ್ರ ಈ ಬೂದನು ಬದಲಾಗಿರಬಹುದೆಂದು ಕಂಡುಬರುವುದು. ಯಾಕೆಂದರೆ ಕೆಲವು ಭಾಗಗಳಲ್ಲಿ (ಬೆಳುವಲದಲ್ಲಿ) 'ಬೂದ'ನಿಗೆ ಸುಗ್ಗಿಯ ಲಿಂಗಯ್ಯನೆಂದು ಕರೆಯುವ ಪರಿಪಾಠವು ಈಗಲೂ ಕಂಡುಬರುವುದು. ಮೇಲೆ ಹೇಳಿದ ಅಯ್ಯಗಳ ಹೆಣಗಾಟದಿಂದ ಬುದ್ಧಿವಂತಲಿಂಗನ ರಾಶಿಯು (ಬೂದನ ರಾಶಿಯು) ಮಠದವರಿಗಾಗಲಿ, ಬ್ರಾಹ್ಮಣರಿಗಾಗಲಿ ಕೊಡುವುದು ನಿಂತುಹೋಯಿತು. ಸ್ತ್ರೀಯರ ಸರಿಸಮಾನ್ಯತೆಗೆ ಮನ್ನಣೆಯಿತ್ತ ಈ ಅಯ್ಯಗಳು, ಮನೆಯ ಹೆಣ್ಣುಮಕ್ಕಳಾದ ಅಕ್ಕತಂಗೆಯರಿಗೆ ತಂದೆಯ ಗಳಿಕೆಯಲ್ಲಿ ಪಾಲುಂಟೆಂಬ ಸಂಪ್ರದಾಯವನ್ನು ಹಾಕಿ ಈ 'ಬುದ್ಧಿವಂತ ಲಿಂಗದ ರಾಶಿಯು' ಹೆಣ್ಣುಮಕ್ಕಳಿಗೆ ಸಲ್ಲಬೇಕೆಂದು ಒಕ್ಕಲಿಗರಿಗೆ ತಿಳಿಹೇಳಿ ಕಟ್ಟು ಮಾಡಿ ಕೊಡಿಸಿರಬಹುದು. ಕಾರಣ ಅಂದಿನಿಂದ ಇಂದಿನವರೆಗೂ ಬುದ್ಧಿವಂತ ಲಿಂಗ (ಬೂದ)ದ ರಾಶಿಯು ಮನೆಯ ಹೆಣ್ಣುಮಕ್ಕಳಿಗೆಡೆಯಾಗಿದೆ. ಇನ್ನೂ ಬೆಳುವಲದ ಹಲಕೆಲವು ಹಳ್ಳಿಗಳಲ್ಲಿ ಈ ರಾಶಿಯು ಊರ ದಾಸೋಹ ಮಠಕ್ಕೂ ಕ್ವಚಿತ್ತಾಗಿ ಹಳ್ಳಿಯ ಪುರೋಹಿತರಿಗೂ ಸಲ್ಲುತ್ತಿರುವುದು. ಕೆಲವು ಹಳ್ಳಿಗಳಲ್ಲಿ ಊರ ಮುಂದಿನ ಹನುಮನ ಹರಿಸೇವೆಗೆಂದು ಈ ರಾಶಿಯನ್ನು ಒಕ್ಕಲಿಗರು ಕೊಡಲು ಆ ಹಳ್ಳಿಗಳ ಪುರೋಹಿತನು ಆ ಬೂದನ ರಾಶಿಯನ್ನು ತನ್ನ ಮನೆಗೆ ಒಯ್ಯುತ್ತಾನೆ. ಇಷ್ಟೆಲ್ಲ ಬದಲಾವಣೆಗಳಾದರೂ 'ಗೋಪಾಳ'ವು ಮಾತ್ರ ಒಕ್ಕಲಿಗನ ಕಣದಲ್ಲಿ ಹಾಗೆಯೇ ಉಳಿಯಿತು. ಈ ಪ್ರಕಾರ ಅನೇಕ ಸಂಪ್ರದಾಯಗಳು ಸಂಶೋಧಕರ ನಿದರ್ಶನಕ್ಕೆ ಬರುವುವು. ಅಲ್ಲದೆ ಎಷ್ಟೋ ಸಂಪ್ರದಾಯಗಳು ಅವರ ದೃಷ್ಟಿಗೆ ಬೀಳದೆ ಹಾಗೆಯೇ ಉಳಿದಿರಬಹುದು; ಅಥವಾ ಅಳಿದು ಹೋಗಿರಬಹುದು. ಪಂಡಿತರೂ, ತಜ್ಞ ಸಾಹಿತಿಗಳೂ, ಸಂಶೋಧಕರೂ, ಹಾಸುಹೊಕ್ಕಾದ ಜಾನಪದ ಸಾಹಿತ್ಯವನ್ನು ಕೂಲಂಕುಷವಾಗಿ ಅಭ್ಯಾಸಮಾಡಿ ಸತ್ಯವನ್ನು ಬೆಳಕಿಗೆ ತಂದು ಅಜ್ಞಾನದಲ್ಲಿ ಬಳಲುವ ಕನ್ನಡ ಒಕ್ಕಲಿಗರಿಗೆ ಬೆಳಕು ನೀಡಲು ಮುಂದೆ ಬರಬೇಕಾಗಿದೆ. ಅಪಾರವಾದ ಜಾನಪದ ಸಾಹಿತ್ಯರಾಶಿಯನ್ನು ಮಣ್ಣುಗೂಡಿಸದೆ ಬೆಳಕಿಗೆ ತರುವ ಸಾಹಸವನ್ನು ಎಲ್ಲರೂ ಮಾಡಬೇಕು. ಇದೊಂದು ತಲೆಮಾರು ದಾಟಿದರೆ ಇದನ್ನು ಹಾಡುವ, ಹೇಳುವ ಜನರು ಕಣ್ಮರೆಯಾಗುವರು. ಈ ಕೆಲಸವನ್ನು ಇನ್ನುಳಿದ ಸಹೋದರರಿಗೆ ಬಿಟ್ಟಿದ್ದೇನೆ.

ಮೇಲೆ ಹೇಳಿದ ಎಲ್ಲ ಸಂಪ್ರದಾಯಗಳನ್ನು ಒಕ್ಕಲಿಗರು ಪವಿತ್ರವಾದುವುಗಳೆಂದು ಪಾಲಿಸುವರು. ಈ ಸಂಪ್ರದಾಯಗಳು ವೀರಶೈವ ಸಂಸ್ಕೃತಿಯ ಹೆಚ್ಚಳವನ್ನು ಹೇಳದಿರಲಾರವು. ಈಗ ಮಾಡಲಾದ ಪ್ರಯತ್ನವು ಬಾಂಧವರಾದ ಒಕ್ಕಲಿಗರಿಗೆ ತಿಳಿದರೆ ಸಾರ್ಥಕವಾಯಿತೆಂದು ಭಾವಿಸುವೆ.

❒

೮. ಜನಪದ ಸಂಪ್ರದಾಯಗಳು

ಜನಪದವು ಸಂಪ್ರದಾಯಗಳನ್ನು ಅಂಧಶ್ರದ್ಧೆಯಿಂದ ನಂಬಿಕೊಂಡು ಬಂದಿದೆ; ಕಾಲಕಾಲಕ್ಕೆ ಅವುಗಳನ್ನು ಆಚರಿಸಿ ಜನಾಂಗದ ಪೀಳಿಗೆಗೆ ತಾ ತಂದ 'ಬ್ಯಾಜ'ವೆಂದು ಕೊಡುತ್ತ ಬಂದಿದೆ. ಅಂತೆಯೇ ಈ ಸಂಪ್ರದಾಯಗಳ ಅರ್ಥಗಳು ತಿಳಿಯದಿದ್ದರೂ ನಮಗಿಂದು ಉಳಿದುಬಂದಿವೆ. ಈ ಸಂಪ್ರದಾಯಗಳು ಋತುಮಾನಕ್ಕನುಸಾರವಾಗಿ ನಮ್ಮ ಜನಾಂಗದಲ್ಲಿ ಬಂದಿವೆ ಎಂದನಿಸದಿರದು. ಕೆಲವು ಸಂಪ್ರದಾಯಗಳನ್ನು ಮಳೆಗಾಲದಲ್ಲಿಯೂ, ಕೆಲವು ಮಾತ್ರ ಚಳಿಗಾಲದಲ್ಲಿಯೂ, ಉಳಿದುವುಗಳನ್ನು ಬೇಸಿಗೆಯಲ್ಲಿಯೂ ಜನರು ಆಚರಿಸುತ್ತಾರೆ. ವಿಶೇಷವಾಗಿ ಮಳೆಗಾಲದಲ್ಲಿ 'ಮಣ್ಣ ಪೂಜೆಗೆ' ಸಂಬಂಧಿಸುವ ಎಲ್ಲ ಸಂಪ್ರದಾಯಗಳನ್ನು ನಾವು ಕಾಣಬಹುದಾಗಿದೆ. ಚಳಿಗಾಲದಲ್ಲಿ ಜನತೆಗೆ ಸಾಕಷ್ಟು ಬಿಡುವು ದೊರೆಯದ್ದರಿಂದಲೂ, ಸುಗ್ಗಿ ಮೊದಲಾದ ದೊಡ್ಡ ಕೆಲಸ ಬೊಗಸೆಗಳು ಮಾಗಿಯಲ್ಲಿಯೇ ಬರುವುದರಿಂದಲೂ, ಇಲ್ಲವೆ ನಿಸರ್ಗವು ಚಳಿಯಿಂದ ಜೀರ್ಣವಾಗಿ ಹಣ್ಣೆಲೆಗಳನ್ನುದುರಿಸಿ 'ಪರಕಿ'ಯಾಗಿ ಸೊಬಗನ್ನು ಕಳೆದುಕೊಳ್ಳುವುದರಿಂದಲೂ, ಜನರು ಗುಂಪುಗೂಡಿ ಹೌಸಿನಿಂದ ಸಂಪ್ರದಾಯಗಳನ್ನು ಈ ಕಾಲದಲ್ಲಿ ಆಚರಿಸುವುದು ತೀರ ಕಡಿಮೆ. ಕಾರಣ, ಸುಗ್ಗಿಯ ಸಂಪ್ರದಾಯಗಳನ್ನೊಂದು ಬಿಟ್ಟು, ಒಡೆದು ಕಂಡುಬರುವ ಯಾವ ಸಂಪ್ರದಾಯಗಳೂ ಈ ಕಾಲದಲ್ಲಿ ಕಂಡುಬರುವುದಿಲ್ಲ. ಮಾಗಿಯು ಮುಗಿದು ಬೇಸಗೆಯು ಬರಲು ಆಗ ಎಲ್ಲರಿಗೂ ಬಿಡುವು. ಸುಗ್ಗಿ ಮುಗಿದುದರಿಂದ ಜನತೆಯ ಕೈಯಲ್ಲಿ ಸಾಕಷ್ಟು ರೊಕ್ಕವೂ ಆಡುವುದು. ಅದೇ ಸಮಯಕ್ಕೆ ವಸಂತನು ಬರಲು ಸೃಷ್ಟಿಯು ಚಿಗಿತು ಕೊನರಾಗಿ ಮಿಟ್ಟಿ, ಮೊಗ್ಗೆ, ಹೂವು, ಮಿಡಿಗಳನ್ನು ಹೊತ್ತು ನಿಲ್ಲುವುದು. ತುಂಬಿಗಳು ಝೇಂಕರಿಸಿ ಮೊಗ್ಗೆ ಹೊಗಲೊಡನೆ ಆಟವಾಡುವುವು. ಕೋಗಿಲೆಯ ಚಿಗುರು ಮೇದು ಕಂಠ ಪರಿಶುದ್ಧಿಯಾಗಿ ಪಂಚಮ ಸರದಲ್ಲಿ ಹಾಡುವುದು. ಹಕ್ಕಿಗಳು ಹೊಸದುಪ್ಪಳ ಧರಿಸುವುವು. ಪಶುಗಳ ಹೊಸ ಮೈ ಮಿಂಚು ತುಂಬಹತ್ತುವುದು. ಸಕಲ ಸೃಷ್ಟಿಯೇ ಪ್ರಾಯ ತುಂಬಿ ಕುಲುಕುಲು ನಗುವುದು. ಪ್ರಾಯ ತುಂಬಿ ನಗುವ ಈ ಕಾಡ ಸೊಬಗು ಬೀದಿಗೆ ಬಾರದಿರುವುದೇ? ಸುಳಿಗಾಳಿಯು ಸುಳಿದು ಹೂಗಂಪಿನೊಡನೆ ತೀಡಿ ತಿದ್ದುವುದು. ಈ ಸೊಬಗನ್ನು ಕಂಡು ಮಾನವನು ನವಚೈತನ್ಯ ತುಂಬಿ ನಿಸರ್ಗದ ಸಡಗರದೊಡನೆ ಆಡಲು ಬಯಸುವನು. ಆಗ ಹುಮ್ಮಸದಿಂದ ಜನರು ಶಿವರಾತ್ರಿ, ಹೋಳಿ, ಯುಗಾದಿ, ಕಾರಹುಣ್ಣಿಮೆ, ನಾಡ ದೇವದೇವತೆಗಳ ರಥೋತ್ಸವ ಮೊದಲಾದ ಮೋಜು ಮಜಲಿನ ಸಂಪ್ರದಾಯಗಳನ್ನು ಆಚರಿಸುವರು.

ಅರಳೆಲೆ ಬಸವ (ಮಣ್ಣ ಪೂಜೆ)

ಮಣ್ಣ ಪೂಜೆಯು ಭೂತಾಯಿಯ ಪೂಜೆಯು. ಈ ಪೂಜೆಯು ಮಳೆಗಾಲದಲ್ಲಿ ಅನೇಕ ರೂಪಗಳಲ್ಲಿ ದೃಷ್ಟಿಗೋಚರವಾಗುವುದು. ಅದೇ ಮಳೆಗಾಲವು ಪ್ರಾರಂಭವಾಗಲು ಒಕ್ಕಲಿಗನು ಭೂಮಿಯನ್ನು ಬಿತ್ತುತ್ತಾನೆ. ಸಸಿಯು ಎಡೆಗೆ ಬರಲು ಭೂಮಿಯು ಹಸಿರು ತುಂಬಿ ನೋಡಲು ಬಲು ರಮ್ಯ ಕಾಣುವುದು. ಆಗ ಎಲ್ಲರಿಗೂ ಆನಂದ. ಹೆಣ್ಣುಮಕ್ಕಳಿಗೆ ಸಾಕಷ್ಟು ಬಿಡುವು ಇರುವುದರಿಂದ ಆನಂದ ಉಕ್ಕಿ ಅವರು ಪೂಜೆ ಪುನಸ್ಕಾರಕ್ಕೆ ಕೈ ಹಾಕುವರು. ಸಕಲ ಜೀವರಾಶಿಗೆ ಅನ್ನ ಹಾಕುವ ಭೂತಾಯಿಗೂ, ಬಸವಣ್ಣನಿಗೂ ತಮ್ಮ ಕೃತಜ್ಞತೆಗಳನ್ನರ್ಪಿಸಲು ಜನರು ಅವುಗಳ ಪೂಜೆಗಳನ್ನು ಕೈಕೊಳ್ಳುವರು. ಜನಪದವು ವರುಷದಲ್ಲಿ ಒಟ್ಟು ಐದು ಮಣ್ಣ ಪೂಜೆಗಳನ್ನು ಆಚರಿಸುವುದೆಂದು ಕಾಣುತ್ತದೆ. ಉತ್ತರ ಕರ್ನಾಟಕದಲ್ಲಿ ಜ್ಯೇಷ್ಠ ಬಹುಳ ಅಮಾವಸ್ಯೆಗೆ 'ಮಣ್ಣೆತ್ತಿನ ಅಮಾವಸ್ಯೆ' ಎಂದು ಕರೆಯುತ್ತಾರೆ. ಅಂದು ಜನರು ಮಣ್ಣುಬಸವನ ಮಾಡಿ ಪೂಜೆ ಮಾಡುವರು. ಇದೇ ಮಣ್ಣಿನ ಮೊದಲನೆಯ ಪೂಜೆಯು. ಅಂದೇ ನಮ್ಮ ಹಳ್ಳಿಯ ಹೆಣ್ಣುಮಕ್ಕಳು ಅರಳೆಲೆ ಬಸವನನ್ನು ಎಲೆಯ ಮಂಟಪದಲ್ಲಿ ಸಿಂಗಾರ ಮಾಡಿ ಹಾಡುತ್ತ ಊರ ಮುಂದಿನ ಕೆರೆಯಿಂದಾಗಲಿ ಇಲ್ಲವೆ ಜಲಾಶಯದಿಂದಾಗಲಿ ತಂದಿಟ್ಟು ಪೂಜೆ ಮಾಡುವರು. ಬೆಳುವಲದಲ್ಲಿ ಈ 'ಅರಳೆಲೆ ಬಸವ'ನನ್ನು ಊರ ಮಠದಲ್ಲಿಡುವ ವಾಡಿಕೆಯಿದೆ. ಎಲ್ಲರೂ ಕೂಡಿ ಹಾಡಿ ಈ ಬಸವನಿಗೆ ಆರುತಿ ಬೆಳಗುವರು. ಈ ಬಸವನ ಸಂಬಂಧ ಅನೇಕ ಕೋಲು ಹಾಡುಗಳನ್ನೂ, ಬೇರೆ ಹಾಡುಗಳನ್ನೂ ಜನರು ಹಾಡುವರು.

ಅರಳೆಲೆ ಬಸವ

ಒಂದು ಸುತ್ತಿನ ಕ್ವಾಟ
ಅದರೊಳು ಹೊಂದಿ ನಿಂತನು ಬಸವ
ಬಸವಕ ಬಸವನ್ನಿರೆ
ಬಸವನ ಪಾದಕ ಶರಣನ್ನಿರೆ ॥೧॥

ಎರಡು ಸುತ್ತಿನ ಕ್ವಾಟಿ
ಅದರೊಳು ಸೊಡರು ತೂಗುವ ಬಸವ
ಬಸವಕ ಬಸವನ್ನಿರೆ
ಬಸವನ ಪಾದಕ ಶರಣನನ್ನಿರೆ ॥೨॥

ಮೂರು ಸುತ್ತಿನ ಕ್ವಾಟಿ
ಅದರೊಳು ಮೂರ್ತಗೊಂಡನ ಬಸವ
ಬಸವಕ ಬಸವನ್ನಿರೆ
ಬಸವನ ಪಾದಕ ಶರಣನ್ನಿರೆ ॥೩॥

ನಾಲ್ಕಸುತ್ತಿನ ಕ್ವಾಟಿ
ಅದರೊಳು ನ್ಯಾಯ ಮೂರ್ತಿಯು ಬಸವ
ಬಸವಕ ಬಸವನ್ನಿರೆ
ಬಸವನ ಪಾದಕ ಶರಣನ್ನಿರೆ ॥೪॥

ಐದು ಸುತ್ತಿನ ಕ್ವಾಟಿ
ಅದರೊಳು ಐಕ್ಯಮೂರ್ತಿಯು ಬಸವ
ಬಸವಕ ಬಸವನ್ನಿರೆ
ಬಸವನ ಪಾದಕ ಶರಣನ್ನಿರೆ ॥೫॥

ಆರುಸುತ್ತಿನ ಕ್ವಾಟಿ
ಅದರೊಳು ಅರಳಿ ನಿಂತಾನ ಬಸವ
ಬಸವಕ ಬಸವನ್ನಿರೆ
ಬಸವನ ಪಾದಕ ಶರಣನ್ನಿರೆ ॥೬॥

ಏಳುಸುತ್ತಿನ ಕ್ವಾಟಿ
ಅದರೊಳು ಜಗವ ನಾಳುವ ಬಸವ
ಬಸವಕ ಬಸವನ್ನಿರೆ
ಬಸವನ ಪಾದಕ ಶರಣನ್ನಿರೆ ॥೭॥

ಎಂಟಸುತ್ತಿನ ಕ್ವಾಟಿ
ಶಿವನಿಗೆ ಕಂಟಲೆತ್ತೇನೊ ಬಸವ
ಬಸವಕ ಬಸವನ್ನಿರೆ
ಬಸವನ ಪಾದಕ ಶರಣನ್ನಿರೆ ॥೮॥

ಒಂಬತ್ತು ಸುತ್ತಿನ ಕ್ವಾಟಿ
ಅದರೊಳು ತುಂಬಿ ಬಂದಾನೊ ಬಸವ
ಬಸವಕ ಬಸವನ್ನಿರೆ
ಬಸವನ ಪಾದಕ ಶರಣನ್ನಿರೆ ॥೯॥

ಹತ್ತು ಸುತ್ತಿನ ಕ್ವಾಟಿ
ಅದರೊಳು ಸುತ್ತ ನೋಡಲು ಬಸವ
ಬಸವಕ ಬಸವನ್ನಿರೆ
ಬಸವನ ಪಾದಕ ಶರಣನ್ನಿರೆ ॥೧೦॥ *–ಜಾ–ಸಂ–*

ನಮ್ಮ ಹಳ್ಳಿಯ ಹೆಣ್ಣುಮಕ್ಕಳು ಬಸವನಿಗೆ ಇಲ್ಲಿ ಕೋಟೆಯ ಕಟ್ಟಿದ್ದಾರೆ. ಒಂದೊಂದು ಕೋಟೆಯಲ್ಲಿ ಬಸವನ ಮಹಾರೂಪವನ್ನು ನೋಡಬಹುದು. ಹೀಗೆ ಹಾಡಿ ಈ ಬಸವನ ಪೂಜೆ ಮಾಡುವುದನ್ನು ಈಗಲೂ ಕಣ್ಣಾರೆ ಕಾಣಬಹುದು.

ಗುಳ್ಳವ್ವ

ಇದೇ ಆಷಾಢಮಾಸದಲ್ಲಿ ಜನಪದವು ಇನ್ನೊಂದು ಮಣ್ಣಿನ ಪೂಜೆಯನ್ನು ಮಾಡುತ್ತದೆ. ಇದೇ ಜನಪದದಲ್ಲಿ ರೂಢಿಯಲ್ಲಿರುವ 'ಗುಳ್ಳವ್ವ.' ಇದನ್ನು ಮಣ್ಣಿನ ಎರಡನೆಯ ಪೂಜೆಯೆಂದು ಕರೆಯಬಹುದು. 'ಗುಳ್ಳವ್ವ ದೇವರಲ್ಲ ಉಡಕಿ ಗಂಡಲ್ಲ' ಎಂಬ ಗಾದೆಯ ಮಾತು ಜನಪದದಲ್ಲಿದ್ದರೂ ಉತ್ತರ ಕರ್ನಾಟಕದ ಎಲ್ಲ ಭಾಗಗಳಲ್ಲಿ ಬಹುತರ ಎಲ್ಲ ಜನರು 'ಗುಳ್ಳವ್ವ'ನ ಆಡಿ ಪೂಜೆ ಮಾಡುತ್ತಾರೆ. ಈ ಸಂಪ್ರದಾಯವು ಕರ್ನಾಟಕ ಬಿಟ್ಟು ಮತ್ತೆ ಯಾವ ಭಾಗದಲ್ಲಿಯೂ ಆಚರಣೆಯಲ್ಲಿಲ್ಲ. ಇದು ಹೆಣ್ಣು ಮಕ್ಕಳಿಗೆ ಆಡಲು ಸಮಯ ಒದಗಿಸಿಕೊಡುವ ಒಂದು ಸಂಪ್ರದಾಯವೆನ್ನಬಹುದು. ನಿಸರ್ಗದ ತುಂಬಿದ ಬಯಲಲ್ಲಿ ಆಡಿ ತಣಿಯಲು ಹೆಣ್ಣುಮಕ್ಕಳಿಗೆ ಇದೊಂದು

ಸುಸಂಧಾನ. ಆಷಾಢಮಾಸದ ಪ್ರತಿ ಮಂಗಳವಾರವು ಗುಳ್ಳವ್ವನ ವಾರವೆಂದೆನ್ನುತ್ತಾರೆ. ಚಿಕ್ಕ ದೊಡ್ಡ ಹೆಣ್ಣುಮಕ್ಕಳು ಬನದ ಊಟ ಮಾಡುವರು. ಊಟವಾದ ಮೇಲೆ ಇಳುಹೊತ್ತಿನಲ್ಲಿ ಕೂಡಿದ ಹೆಣ್ಣುಮಕ್ಕಳು 'ಗುಳ್ಳವನ' ಆಡುವಾಗ ತಳಾರನನ್ನು ಕರೆದು ಬೈಯುತ್ತಾರೆ.

ಗುಳ್ಳವ್ವ ಗುಳ್ಳವ್ವ, ಗುಳ್ಳಪ್ಪ ರಾಯ
ವಣ್ಕೆಮಿಂಡ, ತಳವಾರ ತಾಟಿ
.... ತಳವಾರ ॥

ಮೊದಲಾದ ಅಶ್ಲೀಲ ನುಡಿಗಳನ್ನು ಊರ ತಳಾರನಿಗೆ ಆಡುತ್ತಾರೆ. ಈ ಸಂಪ್ರದಾಯವು ಬಹಳ ಬುನಾದಿಯದೆಂದು ಕಂಡುಬರುವುದು. ತಳಾರನು ಗ್ರಾಮ ರಕ್ಷಣೆಯ ಒಂದು ಅಂಗವಾಗಿ ಹಳ್ಳಿಗಳಲ್ಲಿ ಬಂದೋಬಸ್ತಿಯ ಮಾಡುವ ಕೆಲಸವನ್ನು ಮಾಡುತ್ತಿದ್ದನು. ಆಗಿನ ಕಾಲದಲ್ಲಿ ಈ ತಳಾರನು ಈಗಿನ ಪೋಲಿಸರಂತೆ ಹಳ್ಳಿಗಳಲ್ಲಿರುತ್ತಿದ್ದನೆಂದು ಹೇಳಬಹುದು. ಅವನು ಊರ ಹೊರಗೆ ಆಡಲು ಹೋದ ಹೆಣ್ಣುಮಕ್ಕಳಿಗೆ ಬಂದೋಬಸ್ತಿಯ ಸಲುವಾಗಿ ತ್ರಾಸು ಕೊಡುತ್ತಿರಬಹುದು. ಅಲ್ಲದೆ ಅವರನ್ನು ಪೀಡಿಸಿ ತಿನಿಸು ಮೊದಲಾದುವುಗಳನ್ನು ಎತ್ತುತ್ತಿರಬಹುದು. ಅಂತೆಯೇ ಹೆಣ್ಣುಮಕ್ಕಳು "ಗುಳ್ಳವ್ವ... ಗುಗ್ಗರಿ ಬಿದ್ದಾವು । ಆಕೊಂಡು ತಿನ್ನೊ ತಳವಾರ ॥" ಎಂದು ಹಾಸ್ಯವಾಡಿ ಈಗಲೂ ನುಡಿಯುತ್ತಾರೆ. ಹೀಗೆ ಮನಬಂದಂತೆ ಆಡಿ ಮನೆಗೆ ಬಂದು, ಗುಳ್ಳವನನ್ನು ಇಟ್ಟು ಪೂಜೆ ಮಾಡುವರು. ಅಗಸಿಯ ಕಂಬಗಳಂತೆ ಹದಮಾಡಿದ ಮಣ್ಣಿನ ಎರಡು ಕಂಬಗಳನ್ನು ಮಾಡಿ ಮುಂಭಾಗದಲ್ಲಿಯೂ, ಎರಡು ಕಂಬಗಳನ್ನು ಹಿಂಭಾಗದಲ್ಲಿಯೂ ಮಣಿಯ ಮೇಲೆ ಕೆಲವೊಂದಂತರದಲ್ಲಿ ನಿಲ್ಲಿಸಿ, ಮುಂದಿನ ಕಂಬಗಳ ಮಧ್ಯದಲ್ಲಿ ಮಣ್ಣಿನ ಹಲಗೆಯನ್ನು ಕೂಡಿಸಿ, ತಿದ್ದಿ ಗೋಟುಗಳನ್ನೇರಿಸಿ, ಕುಂಬಿಯ ಕಟ್ಟಿದಂತೆ ಮೇಲ್ಭಾಗದಲ್ಲಿ ಮಾಡುವರು. ಏಣುಏಣುಗಳಲ್ಲಿ ಗುಲಗಂಜಿ, ಕುಸುಬೆ, ಜಾಲಿಯ ಮೊಗ್ಗಿ, ಹೂ ಮೊದಲಾದುವುಗಳನ್ನು ಚುಚ್ಚಿ ಅಲಂಕಾರ ಮಾಡುವವರಲ್ಲದೆ ಹಲಕೆಲವರು ಜರತಾರೆಯ ಹೂವಿನ 'ಬಣ'ಗಳನ್ನು ಛತ್ರರಿಗೆಯಂತೆ ಮಾಡಿ ಚೆಂದ ಕಾಣುವಂತೆ ಏರಿಸುವರು. ಈ ಪ್ರಕಾರ ನಾಲ್ಕು ವಾರಗಳವರೆಗೆ ಒಂದರ ಮೇಲೊಂದು ಕಂಬಗಳನ್ನೇರಿಸುತ್ತ ನಾಲ್ಕನೆಯ ವಾರಕ್ಕೆ ನಾಲ್ಕು ಕಂಬಗಳ ಎತ್ತರ ಗುಳ್ಳವ್ವನ ಗೋಪುರ ಮಾಡಿ ಅದಕ್ಕೆ ಬಹಳ ಶೃಂಗಾರ ಮಾಡುವರು. ಅಲ್ಲದೆ ಗುಳ್ಳವ್ವನ ಮುಂದೆ ಎಡಭಾಗಕ್ಕೆ ಒಂದು ಮಣ್ಣಿನ ಕಂಬವನ್ನು ನಿಲ್ಲಿಸಿ ಅದಕ್ಕೆ ಮನುಷ್ಯಾಕೃತಿಯ ಕುತ್ತಿಗೆಯನ್ನು ಹಚ್ಚಿ 'ಗೊಗ್ಗವ್ವ'ನೆಂದು ಕರೆಯುವರು. ಈ ಗೊಗ್ಗವ್ವನು ಮೊದಲು ಗುಳ್ಳವ್ವನ ಮುಂದೆ ಪಣತಿಯನ್ನಿಡುವ ದೀವಟಿಗೆಯಾಗಿರಬಹುದು. ಈಗ ಮನುಷ್ಯಾಕೃತಿಯನ್ನು ತಾಳಿ 'ಗೊಗ್ಗವ್ವ'ವಾಗಿದೆ. ಹಳ್ಳಿಗಳಲ್ಲಿ ಕುರೂಪಿಯಾದ ಹೆಣ್ಣನ್ನು ನೋಡಿ ಜನರು 'ದೀಪದ ಗೊಗ್ಗವ್ವ'ನೆಂದು ಈಗಲೂ ಉಪಹಾಸ್ಯ ಮಾಡುವರು. ವೀರಶೈವರಲ್ಲಿ 'ಗೊಗ್ಗವ್ವೆ' ಎಂಬ ಶಿವಶರಣೆಯೂ ಆಗಿಹೋಗಿದ್ದಾಳೆ. ಅವಳ ನೆನಪಿಗಾಗಿ ಗುಳ್ಳವ್ವನ ಮುಂದಿನ ದೀಪದ ಗೊಗ್ಗೆಯು (ದೀವಟಿಗೆ) ಮನುಷ್ಯಾಕೃತಿಯನ್ನು ತಾಳಿದ ಮೇಲೆ ಗೊಗ್ಗವ್ವ ದೇವರಾಗಿರಬಹುದೇ? ಗೊಗ್ಗವ್ವನೂ, ಗುಳ್ಳವ್ವನೊಡನೆ ಪೂಜೆಗೊಳ್ಳುತ್ತಾಳೆ. ಈ ಮಣ್ಣ ಪೂಜೆಯ ವಿಧಾನವು ಕನ್ನಡ ಹೆಣ್ಣುಮಕ್ಕಳಿಗೆ ಬಹಳ ಮಹತ್ವದ್ದು. ಅವರು ಪ್ರೇಮದಿಂದ ಗುಳ್ಳವ್ವನ ಅನೇಕ ಹಾಡುಗಳನ್ನು ಹಾಡುತ್ತಾರೆ.

ಗುಳ್ಳವ್ವ ಮಣ್ಣ ತರಲೇ ಇಲ್ಲ
ಗುಲಗಂಜಿ ಹಚ್ಚಿ ಆಡಲಿಲ್ಲ
ಈ ವರುಷ ನಾಗರಪಂಚಮಿನಾರಿ । ಸುವ್ವನಾರಿ ॥ಪ॥

ಕರಿಯ ಸೀರಿಯನುಟ್ಟು, ಕರಿಯ ಕುಪ್ಪುಸ ತೊಟ್ಟು
ಕರನಾಟದವರು ನಮ್ಮವರು ॥ ನಾರಿ ॥ ಗುಳ್ಳವ್ವ
ಕರಕೀಯ ಮುಯ್ಯ ತಂದರ ॥ ನಾರಿ ॥ ॥೧॥

ಬಿಳಿಯ ಸೀರಿಯನುಟ್ಟು, ಬಿಳಿಯ ಕುಪ್ಪುಸ ತೊಟ್ಟು
ಬೆಳವಲದವರು ನಮ್ಮವರು ॥ ನಾರಿ ॥ ಗುಳ್ಳವ್ವ
ಬೆಳ್ಳನ್ನ ಮುಯ್ಯತಂದರ ॥ ನಾರಿ ॥ ॥೨॥

ಕೆಂಪ ಸೀರಿಯನುಟ್ಟು, ಕೆಂಪ ಕುಪ್ಪಸ ತೊಟ್ಟು
ಮಲ್ಲಾಡದವರು ನಮ್ಮವರು ॥ ನಾರಿ ॥ ಗುಳ್ಳವ್ವ
ಸಂಪಿಗಿ ಮುಯ್ಯ ತಂದರ ॥ ನಾರಿ ॥ ॥೩॥ *–ಜಾ–ಸಂ–*

ಗಂಡನ ಮನೆಯಲ್ಲಿರುವ ಹೆಣ್ಣುಮಗಳನ್ನು ತವರವರು ಕಡೆಯ ಗುಳ್ಳವ್ವ ಬರುವುದರೊಳಗಾಗಿ ಕರೆಯಲು ಹೋಗುತ್ತಾರೆ. ಅಲ್ಲದೆ ಆ ಹೆಣ್ಣು ಮಕ್ಕಳ ಗುಳ್ಳವ್ವನಿಗೆ ಮುಯ್ಯವನ್ನೊಯ್ಯುವ ಪದ್ಧತಿಯೂ ಉಂಟೆಂದು ಕಾಣುತ್ತದೆ. ಈ ಪದ್ಧತಿಯನ್ನು ಈಗಲೂ ಬೆಳುವಲದಲ್ಲಿ ಕಾಣಬಹುದು. 'ಕರನಾಟದವರು,' 'ಬೆಳುವಲದವರು,' 'ಮಲ್ಲಾಡದವರು' ಬೀಗಬೀಗರಾಗಿ ತಮ್ಮ ಹೆಣ್ಣುಮಕ್ಕಳಿಗೆ ಮುಯ್ಯವನ್ನು ಈ ಹಾಡಿನಲ್ಲಿ ಒಯ್ದಿದ್ದಾರೆ. ಕರ್ನಾಟಕದಲ್ಲಿ ಮೊದಲಿನಿಂದಲೂ ಆಯಾ ಭಾಗದವರು ದೂರ ದೂರದವರೆಗೆ ಬೀಗತನವನ್ನು ಮಾಡುತ್ತಿದ್ದರೆಂದು ಇದರ ಮೇಲಿಂದ ವಿಶದವಾಗುವುದು.

ಆಷಾಢ ಮಾಸ ಬಂದಿತವ್ವ
ಖಾಸ ಅಣ್ಣ ಬರಲಿಲ್ಲ
ಎಷ್ಟು ನೊಡತಿ ಅಣ್ಣನ ದಾರಿ । ಸುವ್ವನಾರಿ ॥ಪ॥

ಹೊತ್ತು ಮುಳಗು ವ್ಯಾಳೆದೊಳಗ
ದೀಪ ಹಚ್ಚು ವ್ಯಾಳೆದೊಳಗ
ಅಣ್ಣ ಕರಿಯಾಕ ಬಂದಾನ ನಾರಿ ॥೧॥

ರೊಟ್ಟಿ ಬುತ್ತಿ ಮಾಡಿಕೊಂಡು
ಎತ್ತಿನ ಮ್ಯಾಲೆ ಹೇರಿಕೊಂಡು
ಎಂದು ಹೋದೆನ ತವರಿಗೆ ನಾರಿ ॥೨॥

ಹಿಂದಿನೆತ್ತ ಹಿಂದ ಇರಲಿ
ಮುಂದಿನೆತ್ತ ಮುಂದ ಇರಲಿ
ಎಂದು ಕಂಡೆನವ್ವ ತಾಯಿ ಮಾರಿ ॥೩॥

ತಾಯಿ ಬಂದು ನೀರು ಕೊಟ್ಲು
ತಾಯಿ ಮಾರಿ ಕಂಡೇನವ್ವ
ಹಸಿದ ಹೊಟ್ಟೆ ಉಂಡ್ಹಾಂಗಾತ ನಾರಿ ॥೪॥ *-ಜಾ-ಸಂ-*

ಗುಳ್ಳವ್ವ ಮುಗಿಯಲು ಮುಂದೆ ಕೆಲವೇ ದಿನಗಳಲ್ಲಿ ನಾಗರಪಂಚಮಿಯು. ಅತ್ತೆಯ ಮನೆಗೆ ಅದೇ ನಡೆಯಲು ಹೋದ ಹೆಣ್ಣು ಕಡೆಯ ಗುಳ್ಳವ್ವ ನನ್ನಾದರೂ ಆಡಲು ತವರಿಗೆ ಬರಲು ಹಂಬಲಿಸುವುದು. ಆಗ ಅಣ್ಣನು ಕರೆಯಬರಲು, ಅವನ ದಾರಿಯನ್ನೇ ಕಾಯುತ್ತಿರುವ ಅವಳು ಆತುರಳಾಗಿ ಪಂಚಮಿಯ ನೆವಮಾಡಿ ತವರ ಮನೆಯನ್ನು ಸೇರುವಳು. ಅದೇ ಹೊಸ ಮೊದಲಗಿತ್ತಿಯಾಗಿ ಹೋದವಳು ಆಷಾಢಮಾಸವು 'ಸಣ್ಣ ಮಣ್ಣ'ವೆಂದೂ, ಗಂಡಹೆಂಡರು ಆ ತಿಂಗಳು ಕೂಡಿ ಇದ್ದರೆ ಕೆಡೆಕೆಂದೂ ತಿಳಿದು ಆಷಾಢ ಆರಂಭವಾಗುವ ಮುನ್ನವೇ ತವರಿಗೆ ಬರುವಳು. ಕಡೆಯ ಗುಳ್ಳವ್ವವು ಮುಗಿದ ಮೇಲೆ ಆಷಾಢ ಬಹುಳ ಅಮಾವಸ್ಯೆಗೆ ಹಳ್ಳಿಯ ಹೆಣ್ಣುಮಕ್ಕಳು 'ಅರಳೆಲೆ ಬಸವ'ನನ್ನು ಕಳಿಸುವರು. ಆಗ ವಿಶೇಷವಾಗಿ ಬನದ ಊಟ ಮಾಡಿಕೊಂಡು ಊರ ಮುಂದಿನ ಜಲಾಶಯಕ್ಕಾಗಲಿ ಇಲ್ಲವೆ ಸೊಬಗು ತುಂಬಿದ ನಿಸರ್ಗದ ಬಯಲಲ್ಲಾಗಲಿ, ಹೋಗಿ ಬಸವನ ಪೂಜೆ ಮಾಡಿ ಬನದೂಟವನ್ನುಂಡು ಆಡಿ ಮನೆಗೆ ಬರುವರು. ಇದಕ್ಕೆ ಆ ಹೆಣ್ಣುಮಕ್ಕಳು 'ಅಲ್ಲೀಕೇರಿ'ಯೆಂದು ಕರೆಯುತ್ತಾರೆ. ಉತ್ತರ ಕರ್ನಾಟಕದಲ್ಲಿ ಹೆಣ್ಣುಮಕ್ಕಳು ಒಟ್ಟು ಮೂರು ಅಲ್ಲಿಕೇರಿ (ಬನದೂಟ)ಗಳನ್ನು ಮಾಡುವರು. ಅವುಗಳಲ್ಲಿ ಇದೇ ಮೊದಲನೆಯ 'ಅಲ್ಲಿಕೇರಿ'ಯೆಂದೆನ್ನಬಹುದು.

ಹುತ್ತಪ್ಪ

ಶ್ರಾವಣವು ಆರಂಭವಾಗುತ್ತಲೆ ಪಂಚಮಿಯ ಹಬ್ಬವು ಬರುವುದು. ಇದು ದ್ರಾವಿಡರ ಹಬ್ಬವೆಂದೇ ಹೇಳಬಹುದು. ಇದರ ಆಡಂಬರವು ದಕ್ಷಿಣ ಹಿಂದುಸ್ತಾನದಲ್ಲಿಯೇ ಹೆಚ್ಚು. ಈ ಹಬ್ಬದ ದಿವಸ ಹುತ್ತಪ್ಪನಿಗೆ (ನಾಗಪ್ಪ) ಪೂಜೆಮಾಡಿ ಹಾಲು ಹೊಯ್ಯುವ ಸಂಪ್ರದಾಯವಿದೆ. ಇದೇ ಮೂರನೆಯ ಮಣ್ಣಪೂಜೆ. ಇದು ಹೆಣ್ಣುಮಕ್ಕಳ ಹಬ್ಬ. ಎಲ್ಲ ಹೆಣ್ಣುಮಕ್ಕಳು ಸಿಂಗಾರಾಗಿ ಸಡಗರದಿಂದ ನಾಗಪ್ಪನಿಗೆ ಹಾಲುಹೊಯ್ದು ಸುಖಭೋಜನ ಮಾಡಿ ಸಂಜೆಯ ಮುಂದೆ ಜೋಕಾಲಿ ಜೀಕುವರು. ಈ ಜೋಕಾಲಿ ಜೀಕುವಾಗ ಎದಿರು ಬದಿರಾಗಿ ನಿಂತು ಜೀಕುವವರು ಸರಾಗವಾಗಿ ಹಾಡುವುದನ್ನು ಕೇಳಬಹುದು.

ನಾಗಪ್ಪಗ್ಹಾಲ ಹೊಯ್ಯೋಣ
ನಾಗರ ಹೆಡಿಯ್ಹಾಂಗ ಆಡೋಣ ॥ಪ॥

ನಾಗರಪಂಚಮಿ, ನಾಡಹೆಣ್ಣಿಗೆ ಹಬ್ಬ
ನಾಗಪ್ಪಗ್ಹಾಲ ಎರಿಯೋಣ । ನನಗೆಣತಿ
ನಾಗರ ಹೆಡಿಯ್ಹಾಂಗ ಆಡೋಣ ॥೧॥

ಗುರುದೇವ ನಿಮಪಾಲ, ಹರಹರನೆ ನಿಮಪಾಲ
ಶರಣರಿಗೆ ಹಾಲು ಹಿರಿಯರಿಗೆ । ಎರಿಯೋಣ
ಕಿರಿಯರಿಗೆ ಹಾಡಿ ಹರಿಸೋಣ ॥೨॥

ಅಳ್ಳಿಟ್ಟು ತಂಬಿಟ್ಟು, ಮಾಡಿಟ್ಟ ಎಳ್ಳುಂಡಿ
ದಳ್ಳೂರಿ ಕಣ್ಣ ಹಣೆಯವನ । ಕೊರಳಾನ
ನಾಗ ನಿನಗೆಡೆಯೊ ಕೈಮುಗಿದೊ ॥೩॥

ವಾರೀಗಿ ಗೆಳೆತೇರ, ಕೇರೀಯ ಕೆಳದೇರ
ಸೇರಿ ಒಂದೆಡೆ ಕೂಡೋಣ । ಜೋಕಾಲಿ
ತೂರಿ ಜೀಕವ ಆಡೋಣ ॥೪॥

ಚಂದ್ರಕಾಳಿಯ ಸೀರಿ, ಚಂದ್ರಕುಪ್ಪಸತೊಟ್ಟು
ಬಂದ ಹಬದಾಗ ನಲಿಯೋಣ । ನಕ್ಕಾಡಿ
ಒಂದಾಗಿ ಇದ್ದು ಅಗಲೋಣ ॥೫॥

ಸಾಕಾಗುತನ ಕೂಡಿ, ಜೋಕಾಲಿ ಜೀಕೋಣ
ನಾಗರ ಮಿಡಿಯಾಗಿ ಆಡೋಣ। ವರುವರುಷ
ನಾಗರಪಂಚಮಿಗೆ ಕೂಡೋಣ ॥೬॥

ಗಂಡನ ಮನಿಯಾನ, ಕಂಡಬಾಳುವೆ ಹಾಡಿ
ಉಂಡು ಓಡ್ಯಾಡಿ ಆಡೋಣ। ಮನೆಮಾತ
ಹಿಂಡಿ ನಾಗಾಡಿ ಮರೆಯೋಣ ॥೭॥

ಪಂಚಮಿ ಬರಲೆವ್ವ, ಮಂಚಕಟ್ಟಲಿ ಮನೆಗೆ
ಕೆಂಚಿ ಗೆಳತೇರು ಕೂಡಾಲಿ। ನಮಜೇಕ
ಮಿಂಚಿ ಮುಗಲೀಗೆ ಏರಾಲಿ ॥೮॥ *-ಜಾ-ಸಂ-*

ಎಂದು ಹೆಣ್ಣುಮಕ್ಕಳು ಸಂಪ್ರದಾಯವನ್ನೇ ಹಾಡಿಬಿಟ್ಟಿದ್ದಾರೆ. ಇದೊಂದು ಕಾವ್ಯದ ತಿರುಳುಳ್ಳ ಜಾನಪದ ಹಾಡೆನ್ನಬಹುದು. 'ನಾಗರಹೆಡಿಯ್ಹಾಂಗ ಆಡೋಣ,' 'ದಳ್ಳೂರಿ ಕಣ್ಣ ಹಣೆಯವನ। ಕೊರಳಾನ। ನಾಗನಿನಗೆಡಿಯೊ ಕೈಮುಗಿದು ॥', 'ನಾಗರಮಿಡಿಯ್ಹಾಂಗ ಆಡೋಣ।' ಮೊದಲಾದುವುಗಳಂತೂ ಸಂದರ್ಭಕ್ಕೆ ಸರಿಯಾಗಿ ಭಾವಸ್ವಾರಸ್ಯವನ್ನು ತುಂಬಿಬಿಡುತ್ತವೆ.

ಗಂಡನ ಮನಿಯಾನ, ಕಂಡ ಬಾಳುವೆ ಹಾಡಿ
ಉಂಡು ಓಡ್ಯಾಡಿ ಆಡೋಣ। ಮನೆಮಾತ
ಹಿಂಡಿ ನಾಗಾಡಿ ಮರೆಯೋಣ ॥

ಎಂಬ ಪದ್ಯವಂತೂ ಗಂಡನ ಮನೆಯಲ್ಲಿ ನಡೆದುಬಂದ ಹೆಣ್ಣು ಆ ಮನೆಯ ಭಾರವನ್ನು ತವರೂರ ಗೆಳತಿಯರೊಡನೆ ಜೀಕವಾಡಿ ಹಾಡಿ ಹಗುರು ಮಾಡಿಕೊಂಡು ಮತ್ತೆ ಹೊಸಬಳಾಗುವಳೆಂದು ಸೂಚಿಸುತ್ತದೆ. 'ಪಂಚಮಿ ಬರಲೆವ್ವ, ಮಂಚಕಟ್ಟಲಿ ಮನೆಗೆ' ಎಂದು ವರುವರುಷ ಪಂಚಮಿ ಬರಲೆಂದು ಹಾರೈಸುತ್ತದೆ. ಇವುಗಳ ಜೊತೆಗೆ ಹಾಡುವ ಹೆಣ್ಣುಮಕ್ಕಳ ಇಂಚರವೂ, ಧಾಟಿಯೂ, ಮನೋಹರವಾಗಿ ಮಾನವನ ಜಾಡ್ಯತೆಯನ್ನಳಿಸುವುದು.

ಕಡೆಗುಳ್ಳವ್ವನನ್ನು ಗೆಳತಿಯರೊಡಗೂಡಿ ಆಡಲು ತವರಿಗೆ ಬಾರದ ಹೆಣ್ಣು ಪಂಚಮಿಯ ಹಬ್ಬಕ್ಕಾದರೂ ಹೋಗಬೇಕೆಂದು ಹಾತೊರೆಯುತ್ತದೆ. ಅವಳು ಹಬ್ಬದ ಹಗಲುಗನಸಿನಲ್ಲಿ ನಲಿಯುತ್ತಾಳೆ. ತನ್ನನ್ನು ಕರೆಯಲು ಬರುವುದಕ್ಕೆ ಆತಂಕರಾದವರನ್ನು ಕಲ್ಪಿಸಿ ಬೈಯ್ಯುತ್ತಾಳೆ, ಶಪಿಸುತ್ತಾಳೆ. ಹೋಗಬೇಕೆಂಬ ಆತುರತೆಯು ಮಿಗಿಲಾಗಿ ಮನೆಯಲ್ಲಿ ಮನಸಿಲ್ಲದವಳಂತೆ ಹೌಹಾರಿ ನಿಲ್ಲುತ್ತಾಳೆ. ಆಗವಳೆದುರಿಗೆ ಗೆಳತಿಯರ ಸವಿನೆನಸುಗಳ ಚಿತ್ರಗಳೇ ಚಿತ್ರಗಳು.

ನಾಗರಪಂಚಮಿ

೧ನೆಯ ಚೌಕು

ಪಂಚಮಿ ಮುಂದ ಇರಟ್ಟೆಗಾಗಿ
ಹಂಚಿಕಿ ಮಾಡತಾಳ
ಸಂಜೀಕಿ ನಮ್ಮವರು ಬರತಾರೊ
ಏನು ಮಾಡತಾರೋ।
ಗೊಂಡ್ಯಾದ ಹಣೆಪಟ್ಟಿನ
ಹಂಡಹೋರಿ ನನಗಾಗಿ
ಕೊಂಡಾರ ನಮ್ಮವರು ತರತಾರೊ।
ಇಂದ ಬರತಾರೋ ॥

ನಾಗರ ಪಂಚಮಿ
ನಾಡೀಗಿ ದೊಡ್ಡದು
ನಾಗೇಶಿಗ್ಹಾಲಾ ಎರೆಯುವದು।
ಒಂದತ್ತ ಇರುವsದು ॥

ಎಂದಿದ್ದರ ನಮ್ಮವರು
ಮುಂದಾಗಿ ಬರುದಿಲ್ಲ
ಸಂಜೀಗಿ ನನ್ನ ಎರೆಯುವದು।
ಅಳ್ಳ ಹುರಿಯುವದು ॥
ಹಬ್ಬದ ದಿನ ಹರೆಹೊತ್ತಿಲಿ
ಜತ್ತಾಗಿ ಗೆಳತ್ಯಾರು
ಹೊತ್ತೇರಿ ನೀರಾ ತರುವsದ।
ಭಾಳ ಮರೆಯುವದು ॥

ಇಳಿಹೊತ್ತಿನ ಕಡಿದಿಂದ
ಗೆಳತ್ಯಾರ ಕೂಡ ಹೋಗಿ
ಜೋಕಾಲಿ ಆಡಿ ಬಂದು ದಣಿಯುವದು।
ಭಾಳ ಉಣ್ಣುsವುದು ॥

ಹಸರಡವಳಾ। ಸೀರಿಪಪ್ಪಳಾ
ಜರಕಾಟೀ।
ನಿತ್ತನಿಲಗಿ ತೀಡಕ್ಕಿ ತುದಿಗಟ್ಟಿ॥

ಮಗ್ಗಿ ತಗಿಸಿ ಒಗೆಸೀದ ಕುಬಸಾ
ಕರವತ್ತ ಕಾಟಿ।
ಹಂಗೆ ಇಟ್ಟಿದನವ್ವ ಗಂಟಿನಾಗ ಕಟ್ಟಿ॥

ಚಂದ ಚಂದ ಒಂದೆ ವಾರೀಗಿ ಗೆಳತ್ಯಾರು
ಹೊಸಧಾಟಿ।
ಅದರಾಗ ಒಬ್ಬಾಕಿ ನನ್ನ ಸವತಿ ಖೊಟ್ಟಿ॥

ಜೋಡಿಯವರು ಗೆಳತ್ಯಾರು
ನೋಡುವರು ನನ್ನ ದಾರಿ
ನಾನಾತರದ ಸೀರಿ ಉಡುವುವರ।
ನನ್ನ ಕರೆಯುವರು ॥

ಗೊಂಡ್ಯಾದ ಹಣಿಪಟ್ಟಿನ
ಹಂಡಹೋರಿ ನನಗಾಗಿ
ಕೊಂಡಾರ ನಮ್ಮವರು ತರತಾರೋ।
ಇಂದ ಬರತಾರೊ ॥ –ಜ–ಸಂ–ಪು.೪೮

ಎಂದು ಹೆಣ್ಣಿನ ಪಂಚಮಿ ಹಬ್ಬದ ಆಶೆ ಆಕಾಂಕ್ಷೆಗಳು ಕಣ್ಣ ಮುಂದೆ ಕುಣಿದಾಡುತ್ತವೆ. 'ಗೊಂಡ್ಯಾದ ಹಣೆಪಟ್ಟಿನ ಹಂಡಹೋರಿ'ಯ ಚಿತ್ರವು ಎತ್ತು ಹತ್ತಿ ತವರಿಗೆ ಹೋಗುವ ಹೆಣ್ಣುಮಕ್ಕಳ ಮುಂದೆ ಧುತ್ತೆಂದು ನಿಲ್ಲುವುದು. ಗಂಡನ ಮನೆಯ ಸುಖದುಃಖವನ್ನು ತಾಯಿಯ ಮುಂದೆ ಹೇಳಬೇಕೆನ್ನುವ ಹೆಣ್ಣಿಗೆ ಆತುರತೆಯು ಮಿಗಿಲಾಗಿ ತವರೂರ ದಾರಿಯನ್ನು ನೋಡುತ್ತಾಳೆ. ಯಾರಾದರೂ ಮನೆಯ ಬಾಗಿಲಕ್ಕೆ ಬಂದರೆ ತನ್ನನ್ನು ಕರೆಯಲು ಬಂದರೆಂದು ಮೋಸಹೋಗುತ್ತಾಳೆ. 'ಸನಿಯಾಕ ಬಂದ್ಹಾಂಗ ಬೂನ ಹತ್ತಿತ್ತೆ ನಮ್ಮದಲ್ಲಾ। ಎದಿ ಒಡದು ಬಡಿದ್ಹಾಂಗ ದೊಡ್ಡಕಲ್ಲಾ॥' ಎಂದು ಗಾಬರಿಯಾಗುತ್ತಾಳೆ.

ಹೋದಬಾರಿ ಪಂಚಮ್ಯಾಗ
ಬೇಕಾದ್ದು ಮಾಡಿದೆನವ್ವ
ನೆನಪಾಗಿ ಕಡುತ್ಯೆತಿ ನನ್ನ ಹೊಟ್ಟಿ।
ಅದು ಏನು ಸುಟ್ಟಿ ॥

ಅಣ್ಣತಮ್ಮರ ಒಳಗ ನಮ್ಮ
ಸಣ್ಣ ತಮ್ಮನ ಹೇಣತಿ
ಪಣತಿ ಮಾರಿಯಕ್ಕಿ ಆಕಿ ಖೊಟ್ಟಿ।
ನಿಂದರಸ್ಯಾಳ ಗಟ್ಟಿ॥

ತಾಯಿತಂದಿ ಇವರು
ನಾಯಿ ಮಾರಿಯವರು
ಮಾಯಾ ಇಲ್ಲದೆ ಮರತಾರ ಬಿಟ್ಟಿ।
ಹೊಡಿಸಬೇಕ ಕಟ್ಟಿ॥ –ಜ–ಸಂ–ಪು.೫೨

ಎಂದು ಸಿಟ್ಟಾಗಿ ತನ್ನನ್ನು ಕರೆಯಲು ಕಳುಹಿಸದ್ದಕ್ಕೆ ಹಡೆದವರನ್ನು ನಿಂದಿಸುವಳು. ಅವಳಿಗೆ ಆಡುವ ಜೋಕಾಲಿ, ಓಣಿಯ ಗೆಳತಿಯರು ಪಂಚಮಿಗೆ ಬಂದಿರಬಹುದೆಂದು ನೆನಪಾಗಿ

ಚಂದರ ಗೊಂಬಿ ನಿನ್ನ
ಎಂದಾರ ಕಂಡೇನೇನ
ಬಂದ ಬಂದ ಹೋಗಿರಬೇಕು ಬಸಲಿಂಗಿ।

ಜಾಡರ ಶಿವಲಿಂಗಿ?
ಬೆಳದಿಂಗಳ ಆಡಲಾಕ
ಬ್ಯಾಸರಕಿ ಇಲ್ಲದಾಕಿ
ಬಂದ ಬಂದ ಕರಿಯಾಕಿ ನಮ್ಮ ರಂಗಿ।
ಆರ್ಯಾರ ಗಂಗಿ॥

ಗುಳ್ಳವ್ವನ ಇಡುವಾಗ
ಅರ್ತಿಲೆ ಗೆಳತ್ಯಾರು
ಬರತಿದ್ರು ಬಟ್ಟ ಗುಲಗಂಜೇಗಿ।
ಕೊಡತಿದ್ದೇನ ಹೋಗಿ।
ಮೂರುs ಸಂಜೇಲಿ
ಗುಳ್ಳವ್ವನ ಬೆಳಗಲಾಕ
ಮನಿಮನಿಕರೆಯಕ್ಕಿ ನಮ್ಮ ಸಂಗಿ।
ಮಾಲಗಾರ ನಿಂಗಿ॥

ಎಲ್ಲಾ ಗ್ವಾಳೆ ಆಗವರ ಬಾಳಿ ಬಸಿ।
ಪಂಚಮಿಗೊಮ್ಮೆ ಕೊಡುವರ ಪುರಮಾನ್ಸಿ॥
ಮೇಲ ಮಾಳಿಗಿ ಏರಾಕಿ ನನ್ನ ರೌಸಿ।
ಕೈಯ ಬೀಸಿ ಕರಿಯಾಕಿ ಹುಬ್ಬ ಹಾರ್ಸಿ॥

ನನ್ನ ಮಾತು ಮೀರವಳಲ್ಲವ್ವ ಕುಂಬಾರ ಶೇಷಿ।
ಇಬ್ಬರು ಮುಂದ ಇರುವವರ ನೇಮsಸಿ॥

ಆಡಲಿಲ್ಲ ಗೆಳತಾರೆ ಒಳಗ
ನೋಡಲಿಲ್ಲ ಒಂದಿನ
ಮಾಡಲಿಲ್ಲದಾದ ನನಗ ನಮ್ಮ ತವರವರು।
ಯಾಕ ಮರತಿದಾರು॥ –ಜೀ–ಸಂ–ಪು. ೫೩

ಎಂದು ತನ್ನ ಎಳೆಗಾಲದ ನೇಹದ ಗೆಳತಿಯರನ್ನು ನೆನಿಸಿ, ತವರವರು ತನ್ನನ್ನು ಮರೆತರೇ? 'ದಾದ' (ಗಣನೆಗೆ) ಮಾಡುವುದಿಲ್ಲವೇ? ಎಂದು 'ಗೇಣಿ' (ಧ್ಯಾನಿ)ಸುತ್ತಿರಲು.

ಬರೂದಿದ್ರ ಬರೂದಿಂದ
ಹೋಗೂದಿದ್ರ ಹೋಗೂದಿಂದ
ಬರದಿದ್ದರ ನನ್ನ ಅದೃಷ್ಟಾ।
ಇದು ಭಾಳ ಕೆಟ್ಟಾ।
ಹೀಂಗ ಅಂದು ನಿಂದ್ರೂದ್ರೊಳಗ
ಆಕೀ ಅಣ್ಣ ಬಂದಿದಾನ
ಹಂಡಹೋರಿಗ್ಯಾಕಿ ದಾನ ಮಗ್ಗಿ ಮುಟ್ಟಾ।
ಹಿಗ್ಗಿದಾಳ ಎಷ್ಟಾ॥ –ಜೀ–ಸಂ–ಪು.೫೪

ಹಾತೊರೆಯುವ ಆ ಹೆಣ್ಣಿಗೆ ಅಣ್ಣನನ್ನು ಕಾಣಲು ಹೇಗಾಗಿರಬಹುದು? ನೋಡಿ ಅವಳು ಮೈ ಮರೆತಳು. ಅತ್ತೆ ಮಾವಂದಿರಗೆ 'ನಾ ಮಾತ್ರ ಹೋಗತೀನಿ! ನೀವು ಮಾತ್ರ ಕಳುಹಬೇಕ ಸಂಶಾ ಬಿಟ್ಟ। ಮನದಾನ ಸಿಟ್ಟಾ॥' ಎಂದು ಹಟತೊಟ್ಟು ಹೊರಟೇ ಬಿಟ್ಟಳು. ಇಷ್ಟು ಮೈಯುಂಡಿದೆ ಈ ಪಂಚಮಿಯ ಹಬ್ಬ ನಮ್ಮ ಹೆಣ್ಣುಮಕ್ಕಳಲ್ಲಿ! ಹೀಗೆ ಬಂದ ಈ ಹಬ್ಬವು ಕನ್ನಡಿಗರಿಗೆ ಬುನಾದಿಯಿಂದ ಸಂಪ್ರದಾಯವಾಗಿ ಬಂದಿದೆ. ಕನ್ನಡ ಹೆಣ್ಣುಮಕ್ಕಳು ಪಂಚಮಿಯನ್ನು ಮರೆಯಬಹುದೇ? ಕನ್ನಡನಾಡಿನ ಸ್ತ್ರೀ ಜೀವನದ ಈ ಜನ್ಮಸಿದ್ಧ ಹಕ್ಕನ್ನು ಆರು ಕಡಿಮೆ ಮಾಡಬಲ್ಲರು? ಇದನ್ನು ಬಲ್ಲ, ಜಾನಪದ ಕವಿಯು ಲಾವಣಿಯನ್ನು ಕಟ್ಟಿ ಹಾಡಿದ್ದಾನೆ; ಈ ಸಂಪ್ರದಾಯವನ್ನುಳಿಸಿ ಮುಂದಿನ ಪೀಳಿಗೆಗೆ ಕೊಡಲು ಆಶೆ ಮಾಡಿದ್ದಾನೆ.

ಶಿರಿಯಾಳ ಚೆಂಗಳಿ

ಶ್ರಾವಣ ಮಾಸದಲ್ಲಿ ಜನಪದವು 'ಶಿರಿಯಾಳ ಚೆಂಗಳೆ'ಯರ ಪೂಜೆಯನ್ನೂ ಮಾಡುವುದು. 'ಶಿವಕಾಂಚೆ'ಯ ಈ ಶರಣಶರಣೆಯರನ್ನು ಮಹಾನುಭಾವ ಬಸವಣ್ಣನು 'ಸೆಟ್ಟಿಯಂಬನೆ ಶಿರಿಯೊಳಗೆ' ಎಂದು ತನ್ನ ವಚನದಲ್ಲಿ ಹೇಳಿದ್ದಾನೆ. ಜನಪದವು ಈ ಶರಣನನ್ನು ಹಾಡಿ ಕೊಂಡಾಡುವುದು. ಕೆಲವು ಭಾಗಗಳಲ್ಲಿ ಈ ಸತ್ಪುರುಷನ ವಿಕಾರ ರೂಪಮಾಡಿ ಹೊಗೆಸೊಪ್ಪನ್ನು ಸೇದೀಸಿ ಹೊಗೆ ಬಿಡುವ ಹಾಗೆ ತೋರಿಸುವುದನ್ನು ನೋಡಿದರೆ ಜನತೆಯು ಈ ಮಹಾಶಿವಭಕ್ತನಿಗೆ ಕುಂದು ತಂದಂತೆ. ಸಡಗರದಿಂದ ಡೊಳ್ಳು ಮೊದಲಾದುವುಗಳನ್ನು ಬಾರಿಸಿ ಹಾಡುವರು. ಕರ್ನಾಟಕವನ್ನು ಬಿಟ್ಟು ಹಲಕೆಲವು ಮಹಾರಾಷ್ಟ್ರ ಭಾಗಗಳಲ್ಲಿಯೂ ಈ ಶಿರಿಯಾಳ ಸೆಟ್ಟಿಯನ್ನಿಡುವ ಸಂಪ್ರದಾಯವು

ನಿದರ್ಶನಕ್ಕೆ ಬರುವುದು. ಪುಣೆಯಲ್ಲಿಯೂ ಜನರು ಈ ಸಂಪ್ರದಾಯವನ್ನು ಆಚರಿಸುವರು. ಅದಕ್ಕೆ ಅವರು 'ಶಿರಾಳಸೇಟ' ಎಂದು ಕರೆಯುತ್ತಾರೆ. ಬಸವಣ್ಣನವರ ಕಾಲದಲ್ಲಿ ಆಗಿಹೋದ ಈ ಶಿವಶರಣನ ಮಹಿಮೆಯನ್ನು ಗಡಿನಾಡಿಗರು ಕೇಳಿರಬೇಕು; ಅಲ್ಲದೆ ಅವನಿಗೆ ಮಾನ ಮನ್ನಣೆಯನ್ನೀಯಲು ಈ ಸಂಪ್ರದಾಯವನ್ನು ಆಚರಿಸುವರೆಂದೇ ಹೇಳಬಹುದು.

'ಚೆಂಗಳೆಯು' ಶಿವಭಕ್ತನಾದ ಶಿರಿಯಾಳ ಸೆಟ್ಟಿಯ ಧರ್ಮಪತ್ನಿ. ಶಿವನು ಅವಳ ಭಕ್ತಿಯನ್ನು ಒರೆಗೆ ಹಚ್ಚಲು ಬಂದು ಅವಳಿಗೆ ಇದ್ದೊಬ್ಬ ಮಗನನ್ನು ಕೊಯ್ದು ಉಣಿಸೆಂದು ಹೇಳಿದನು. ಆ ಶಿವಶರಣೆಯು ಜಂಗಮರೂಪದಲ್ಲಿ ಬಂದ ಶಿವನಿಗೆ ತನ್ನ ಮಗನನ್ನು ಕೊಯ್ದು ಅಡಿಗೆಯನ್ನು ಮಾಡಿ ಉಣಿಸಲು ಶಿವನು ಅವಳ ಭಕ್ತಿಗೆ ಮೆಚ್ಚಿ ಪ್ರತ್ಯಕ್ಷನಾಗಿ ಕೈಲಾಸಕ್ಕೆ ಬರಹೇಳಿ ಹೋದನು. ಇತ್ತ ಚಂಗಳೆಯು ಶಿವನ ಬಾಗಿಲಗೆ ಬಂದು ಒಳಗೆ ಹೋಗುವಾಗ ದ್ವಾರಪಾಲಕರು ತಡೆಯಲು –

೬ನೆಯ ಚೌಕು : ಶಿವ ಹೋದ ತನ್ನ ಕೈಲಾಸಕ; ಶಿವದೂತರನಿಟ್ಟು ಬಾಗಿಲ ಕಾಯದಕ।
ಬಂದ ಮಂದಿ ಪರವಾನಿಗಿ ತಗೊಂಡ; ಬಿಟಕೊಡ್ತ್ರಿ ಅಂದನೊಳಿಯಾಕ॥
ಚೆಂಗಳವ್ವ ಹೋದಳು ಆಚಣಾಕ ದೂತರು ನಿಂತರೊ ಬಾಗಿಲ ಕಾಯುದಕ।
ಶಿವನಪ್ಪಣೆಯಿಲ್ಲದೆ ಬಿಡುದಿಲ್ಲ ಒಳಿಯಾಕ; ಸರಿಯೆಂದರ ಚೆಂಗ್ಯವ್ವ ಹಿಂದಾಕ॥
ಕೋಪ ಬಂತು ಚೆಂಗ್ಯವ್ವ ಮನಕ; ಸರಿಯಂದಿಲ್ಲ ಯಾರು ಇಲಿತನಕ।
ಮಗನ ಕೋದು ಉಣಿಸಿದ ಉಪಕಾರಕ : ಶಿವತೀರಿಸಿದ ನಾ ಇಲಿ ಬಂದುದಕ॥
ಶಿವದೂತ್ರು ಹೋದ್ರು ಶಿವನ್ಹಂತ್ಯಾಕ ; ಚೆಂಗ್ಯವ್ವ ಬೈತಾಳ್ರಿ ತರುಬಿದಕ।
ಉಣಿಸಿದ ಮಾತ ಹಂಗಿಸಿದಳೀ ಚಣಕ; ಬಂದೀವ್ರಿಸಾಮಿ ನಿಮಗ್ಹೇಳುದಕ॥

ಚಾಲ್ ಅಲಲಲಲಾ ಶಿವ ಆದ ಸಿಟ್ಟ
ಚೆಂಗ್ಯವ್ವ ಮಾರಿನೋಡುದಿಲ್ಲ ಎಷ್ಟ
ಸಿಟ್ಟಿಗೆದ್ದ ಶಿವ ಕೊಟ್ಟಸ್ರಾಪ
ಶಿಸು ಹತ್ಯ ಸ್ತ್ರೀಯಿಂದ ಹತ್ತಿತೊಸ್ರಾಪ.
ಶಿವನ ಸ್ರಾಪಕ ತೋಳಬಾವಲ್ಯಾಯ್ತು
ಬಾಯಿಲಿ ತಿಂದು ಬಾಯಿಲ್ಯಾಕಿ ಕಕ್ಕುದಾಯ್ತು.
ಮಾನವ ಜಲ್ಮಕ ಬಂದರು ಇಲ್ಲದೆ ಹೋಯ್ತು
ಮಾಡಿದ ಪುಣ್ಯದು ವ್ಯರ್ಥಾಯ್ತು;
ಚೆಂಗ್ಯವ್ವ ಭಕ್ತಿಯು ಹಿಂಗಾಯ್ತು
ಭರಮಣ್ಣ ಮಾಡಿದ ಪದಸಣ್ಣವ। ತಿಳಿದು ನೋಡರಿ ಇದರ ಗುಣವ।
ದುಢಭಕ್ತಿಯ ಭಾಂವ, ನೋಡಾಕ ಬಂದನೊ ಮಹಾದೇವ॥ *–ಜಾ–ಸಂ–*

ಎಂದು ಚೆಂಗಳೆಯು ತಾನು ಶಿವನಿಗೆ ಉಣಿಸಿದ್ದನ್ನು ಹಂಗಿಸಲು, ಶಿವನ ಶಾಪದಿಂದ ತೋಳ ಬಾವುಲಿಯಾಗಿ ಈ ಜನ್ಮದಲ್ಲಿ ಜಗದೊಳಗೆ ಈಗ ತಿರಗುವಳೆಂದು ಹಾಡಿನಲ್ಲಿ ಬಂದಿದೆ. ತನಗಾದ ಶಾಪವನ್ನು ತಿಳಿದ ಚೆಂಗಳಿಯು ಶಿವನಿಗೆ ಕೈಜೋಡಿಸಿ ಬೇಡಿಕೊಳ್ಳಲು ಶಿವನು 'ರತಿಯಕಿಂತಲೂ ಚೆಲುವೆಯಾದ' ನಿನ್ನ ರೂಪ ಚಿತ್ರವನ್ನು ಜನರಿಟ್ಟು ಪೂಜಿಸಲೆಂದು ಮತ್ತೆ ಆಶೀರ್ವದಿಸಲು, ಅವಳು ಜನಪದದಲ್ಲಿ ಈಗಲೂ ಪೂಜೆಗೊಳ್ಳುತ್ತಾಳೆ. ಇಂತಹ ಮಹಾ ಶಿವಶರಣೆಯನ್ನು ಜನಪದವು ಮರೆಯುವದಾದರೂ ಹೇಗೆ? ಹಳ್ಳಿಯ ಹೆಣ್ಣುಮಕ್ಕಳು ಊರು ಮಠದಲ್ಲಿ ಚೆಂಗಳವ್ವನನ್ನಿಟ್ಟು ವಿಶೇಷ ಮಾನಮನ್ನಣೆಯಿಂದ ಪೂಜೆ ಮಾಡುತ್ತಾರೆ. ಆಕೆಯ ಚೆಲುವಿಕೆಯನ್ನು ಕೇಳಿದ ಹೆಣ್ಣುಮಕ್ಕಳು ಮಾತಾಡುವಾಗ 'ಚೆಲುವಿ ಚೆಂಗಳಿ' ಎಂದು ಚೆಲುವಿಕೆಯನ್ನು ಅವಳಿಗೆ ಹೋಲಿಸಿ ಮಾತಾಡುವುದನ್ನು ನಾವು ಕೇಳಬಹುದು. ಈಗ ಜನಪದದಲ್ಲಿ ಇದೊಂದು ಚೆಲುವಿಕೆಯ ಚಿನ್ಹ ತೋರಿಸುವ ದೇವತೆಯಾಗಿದೆ. (Goddess of Beauty)

ಗಣಪತಿ

ಶ್ರಾವಣವು ಉರುಳಿ ಭಾದ್ರಪದ ಮಾಸವು ಬರಲು 'ಗಣಪತಿ' ಸಂಪ್ರದಾಯವು ಬರುವುದು. ಇದು, ಗಜಾನನ ಮಹೋತ್ಸವವೆಂದು ಭರತಖಂಡದಲ್ಲೆಲ್ಲ ಆಚರಿಸಲ್ಪಡುವುದು. ಗಣಪತಿಯು ಆರ್ಯ ಹಾಗೂ ದ್ರಾವಿಡ ಸಂಸ್ಕೃತಿಗಳು ಸಂಘರ್ಷವಾಗಿ ಕರಗಿ ಒಂದಾಗಿ ಇಳಿದ ಎರಕವೆಂದು ಹೇಳಬಹುದಾಗಿದೆ. 'ಆರ್ಯ' ಇದು ಒಂದು ಜನಾಂಗದ ಹೆಸರು. ಆರ್ಯರು, ಆರ್ಯಜನಾಂಗದವರು. ಅವರು ಭರತ ಖಂಡಕ್ಕೆ ಬಂದ ಮೇಲೆ ತಮ್ಮ ಪಂಗಡವೊಂದನ್ನು ಬಿಟ್ಟು ಉಳಿದ ಯಾವುದೇ ಪಂಗಡವಿದ್ದರೂ ಅದಕ್ಕೆ ಅನಾರ್ಯ (ಆರ್ಯರಲ್ಲ ದವರು)ರೆಂದು ಕರೆದಿದ್ದಾರೆ.[೧] ಮೊಟ್ಟ ಮೊದಲು ಹೀಗೆ ಕರೆಯುವಾಗ, ಆರ್ಯರೆಂದರೆ ಸುಸಂಸ್ಕೃತರೂ ಅನಾರ್ಯರೆಂದರೆ ಅಸಂಸ್ಕೃತರು ಎಂಬ ಅರ್ಥವಾಗಲಿ, ಇಲ್ಲವೆ ಭಾವನೆಯಾಗಲಿ ಇದ್ದಿರಲಿಕ್ಕಿಲ್ಲ. ಹೀಗೆ ಕರೆಯುವ ಉದ್ದೇಶವು ಕೇವಲ ಜನಾಂಗಗಳನ್ನು ವಿಂಗಡಿಸಿ ತೋರಿಸಲಾಗಿರಬಹುದು. ಈ ಕಲ್ಪನೆಯು ಮುಂದೆ ಅನೇಕ ವರುಷಗಳ ನಂತರ ಆರ್ಯರು ಬಲಾಢ್ಯರಾದ ಮೇಲೆ ಬಂದಿರಬೇಕು. ಆರ್ಯರು ಭರತಖಂಡಕ್ಕೆ ಬರುವ ಮುನ್ನ ದ್ರಾವಿಡ ಜನಾಂಗವು ಒಕ್ಕಲಾಗಿ ಊರು, ಪಟ್ಟಣಗಳನ್ನು ಕಟ್ಟಿಕೊಂಡು ಇದ್ದರೆಂಬುವುದಕ್ಕೆ

---

೧. ಆರ್ಯರಂತೆ ಮುಸಲ್ಮಾನರು ಹಿಂದೂಸ್ತಾನವನ್ನು ಸೇರಿ ನಿಂತ ಮೇಲೆ, ಮುಸಲ್ಮಾನರಲ್ಲದವರಿಗೆ 'ಕಾಫರ' ರೆಂದು ಕರೆದಿದ್ದಾರೆ.

'ಮಹಂಜದಾರೊ,' 'ಹರಪ್ಪ' ಈ ಪಟ್ಟಣಗಳ ಸಂಶೋಧನೆಯಿಂದ ತಿಳಿದುಬರುವುದು. ಈ ದ್ರಾವಿಡರು ಬಲಾಢ್ಯರೂ, ಒಕ್ಕಲಾಗಿ ನಿಂತವರೂ ಆಗಿದ್ದರಲ್ಲದೆ, ಒಕ್ಕಲತನ (Agriculture) ವನ್ನು ತಮ್ಮ ಮುಖ್ಯ ಉದ್ಯೋಗವನ್ನಾಗಿ ಮಾಡಿಕೊಂಡು ಹೊಲಸಾಗುವಳಿಯನ್ನು ಮಾಡುತ್ತಿದ್ದರೆಂದು ತಿಳಿದುಬರುವುದು. ಆಗಲೇ ಅವರಿಗೆ ಒಕ್ಕಲತನದ ಅನುಭವವು ಬಂದು ಹೋಗಿತ್ತು; ಅಲ್ಲದೆ ಒಕ್ಕಲತನಕ್ಕೆ ಬೇಕಾಗುವ ಸಲಕರಣೆ, ಉಪಕರಣಗಳನ್ನು ತಯಾರಿಸುವ ಕಸಬುಗಳನ್ನೂ ಅವರು ಅರಿತವರಾಗಿದ್ದರು. ಇವರು ಹೀಗಿದ್ದ ಕಾಲದಲ್ಲಿ 'ಆರ್ಯರು' ಹುಲ್ಲುಗಾವಲುಗಳಿದ್ದಲ್ಲಿ ಅಲೆದಾಡುತ್ತ ಆಕಳು ಮೊದಲಾದ ಪಶುಗಳನ್ನು ಸಾಕಿಕೊಂಡು ಒಂದೆಡೆಗೆ ಒಕ್ಕಲಾಗಿ ನಿಲ್ಲದೆ ಬೇಟೆ ಮೊದಲಾದುವುಗಳನ್ನಾಡಿ ಹೊಟ್ಟೆ ಹೊರಕೊಳ್ಳುತ್ತ ಮಧ್ಯ ಏಸಿಯಾದ ಕೊಳಚು ಭೂಭಾಗದಿಂದ ಕೆಳಗಿಳಿಯುತ್ತ ಭಾರತವರ್ಷವನ್ನು ಪ್ರವೇಶಿಸಿದರು. ಅಲ್ಲಿಯ ಒಕ್ಕಲುಗಳನ್ನೂ, ಭೂಸಾಗುವಳಿಯನ್ನೂ, ಬೆಳಸನ್ನೂ ನೋಡಿ, ಆಶಾಭರಿತರಾಗಿ ಹೇಗಾದರೂ ಮಾಡಿ ಅಲ್ಲಿಯ ಒಕ್ಕಲಾದ ಜನರನ್ನು (ದ್ರಾವಿಡರನ್ನು) ಗೆದೆಯಲು ಯತ್ನಿಸಿದಂತೆ ಕಾಣುತ್ತದೆ. ಯಾಕೆಂದರೆ ಪುರಾಣ ಮೊದಲಾದುವುಗಳಲ್ಲಿ ಈ ಆರ್ಯ ದ್ರಾವಿಡರ ತಿಕ್ಕಾಟಗಳು ಮೇಲಿಂದ ಮೇಲೆ ಬರುವುವು. ಒಕ್ಕಲಾಗಿ ನಿಂತ ದ್ರಾವಿಡರು ಬಲಾಢ್ಯರೂ ಶ್ರಮಸಹಿಷ್ಣುಗಳೂ ಆಗಿರಬೇಕು. ಈ ಹೆಣಗಾಟಗಳಲ್ಲಿ ದ್ರಾವಿಡರ ಶಕ್ತಿಸಾಮರ್ಥ್ಯವನ್ನು ಕಂಡು ಆರ್ಯರು ಅವರಿಗೆ ರಾಕ್ಷಸ, ಅಸುರ, ಮತ್ಸ್ಯ, ಋಕ್ಷ, ನಾಗ ಮುಂತಾದ ಹೆಸರುಗಳಿಂದ ಕರೆದಿರಬೇಕು. ಇವೇ ಮುಂದೆ ದ್ರಾವಿಡ ಜನಾಂಗದ ಅನೇಕ ಪಂಗಡಗಳಾಗಿ ಬಂದಿರಬಹುದು.

ಒಕ್ಕಲಾಗಿನಿಲ್ಲದೆ ಊರಿಂದೂರಿಗೆ ಅಲೆದಾಡುವ ಜನಾಂಗ (Nomadic Race)ಗಳಲ್ಲಿ ಕಲೆಗಳ ನಾದವು ಒಡೆದು ಕಂಡುಬರುವುದು. ಹಾಡುವುದು, ಬಾರಿಸುವುದು, ಕುಣಿಯುವುದು, ಬೇರೆ ಹಲಕೆಲವು ಕೈಗಾರಿಕೆಗಳನ್ನು ಮಾಡುವುದು ಮೊದಲಾದ ಬುದ್ಧಿ ನೈಪುಣ್ಯದ ಕಲೆಗಳನ್ನು ಇಂತಹ ಜನರಲ್ಲಿ ಈಗಲೂ ಕಾಣಬಹುದಾಗಿದೆ. ಅಲೆದಾಡುತ್ತ ಬಂದ ಆರ್ಯಜನಾಂಗಗಳಲ್ಲಿಯೂ ಈ ತೆರದ ಕಲೆಗಳು ಇರುವುದರಲ್ಲಿ ಸಂದೇಹವೇನು? ಅಂತೆಯೇ ಆ ಜನಾಂಗಗಳಲ್ಲಿಯ ಪಂಗಡಗಳಿಗೆ ದೇವ, ಕಿನ್ನರ, ಯಕ್ಷ, ಗಂಧರ್ವ ಮೊದಲಾದ ಹೆಸರುಗಳು ಬಂದಿವೆ. ಈ ಒಂದೊಂದು ಪಂಗಡವು ಒಂದೊಂದು ಕಲೆಯಲ್ಲಿ ನೈಪುಣ್ಯತೆಯನ್ನು ತೋರಿಸುವುದು. ಗಂಧರ್ವರು ಸಂಗೀತ ನೃತ್ಯವನ್ನು ಸಂಪೂರ್ಣ ಬಲ್ಲವರಾಗಿದ್ದರು. ಈ ಕಲೆಗಳ ಸಂಬಂಧ ಇವರಲ್ಲಿ ಬುದ್ಧಿಯು ಬೆಳೆಯುತ್ತ ಬಂದಿತ್ತು. ಇವರು ತಮ್ಮ ಬುದ್ಧಿಚಾತುರ್ಯದಿಂದ ದ್ರಾವಿಡರನ್ನು ಗೆದೆಯಲು ಹೂಡಿದ ಪ್ರಯತ್ನಗಳು ನಿಷ್ಫಲವಾಗಲು ಸಾಮೋಪಾಯದಿಂದ ಅವರೊಡನೆ ಕೂಡಿ ರಕ್ತಸಂಬಂಧವನ್ನು ಬೆಳೆಸಬೇಕೆಂದು ಬೇರೆ ಯೋಜನೆಯನ್ನು ಮಾಡಿದಂತೆ ಕಾಣುತ್ತದೆ. ಇದು ಫಲಕಾರಿಯಾಗಬೇಕಾದರೆ ಎರಡೂ ಪಂಗಡಗಳಲ್ಲಿಯ ದೇವದೇವತೆಗಳಲ್ಲಿ ಸಂಯೋಗ ತರಬೇಕೆಂದು ಆಯಾ ಪಂಗಡಗಳ ಪ್ರಮುಖರು ಪ್ರಯತ್ನ ಮಾಡಿದಂತೆ ಕಂಡುಬರುವುದು. ಆಗ ಭಾರತ ವರ್ಷದಲ್ಲಿ ಒಕ್ಕಲಾದ ದ್ರಾವಿಡರು ಶಿವನನ್ನು ಪೂಜೆ ಮಾಡುತ್ತಿದ್ದರು. ಶಿವನೇ ಆ ಜನಾಂಗದ ಮುಖ್ಯದೇವ ನಾಗಿದ್ದನು. ಸೂಕ್ಷ್ಮ ದೃಷ್ಟಿಯಿಂದ ಅಭ್ಯಾಸಿಸಿ ನೋಡಿದರೆ ಶಿವನ ಭೀಕರತೆಯೂ, ಲೀಲೆಗಳೂ ದ್ರಾವಿಡರ ಶಕ್ತಿ ಸಾಮರ್ಥ್ಯಗಳನ್ನು ಸೂಚಿಸದಿರುವು. ಆರ್ಯರು ಸೂರ್ಯನಾರಾಯಣನ ಪೂಜೆಯನ್ನು ಮಾಡುತ್ತಿದ್ದರು. ಇಬ್ಬರಲ್ಲಿಯೂ ಸಂಘಟನೆಯನ್ನು ತರಲು ಆ ಪಂಗಡಗಳ ಹಿರಿಯರು ಆರ್ಯಪಂಗಡದ 'ದಕ್ಷ ಪ್ರಜಾಪತಿ'ಯ ಮಗಳಾದ 'ಸತಿ'ಯೊಡನೆ 'ಶಿವ'ನ ವಿವಾಹವನ್ನು ಮಾಡಿದಂತೆ ಪುರಾಣ ಕಥೆ ಮೊದಲಾದುವುಗಳಿಂದ ತಿಳಿದುಬರುವುದು. ಆದರೂ ಆರ್ಯ ದ್ರಾವಿಡ ಜನಾಂಗಗಳ ಪ್ರೇಮ ಸಂಬಂಧವು (ಬೀಗತನವು) ಬಂಧುರವಾಗಲಿಲ್ಲೆನ್ನಬಹುದು. ಮುಂದೆ ದಕ್ಷ ಶಿವರೊಳಗೆ ನಡೆದ ಸಂಘರ್ಷಣೆಯೇ ಇದಕ್ಕೆ ಬಲವಾದ ಸಾಕ್ಷಿಯಾಗಿದೆ.

ಬೇಟೆಯಾಡಿ ದನಕರುಗಳನ್ನು ಸಾಕಿಕೊಂಡು ಹುಲ್ಲುಗಾವಲುಗಳಲ್ಲಿ ಅಲೆದಾಡುತ್ತ ಬಂದ ಈ ಆರ್ಯರಿಗೆ, ಭಾರತ ವರ್ಷಕ್ಕೆ ಬಂದ ಮೇಲೂ ಮಾಂಸದ ರುಚಿಯನ್ನು ಮರೆಯುವುದಾಗಲಿಲ್ಲವೆಂದು ಕಾಣುತ್ತದೆ. ದ್ರಾವಿಡರ ಸಂಪರ್ಕದಿಂದ ಆರ್ಯರು ಒಕ್ಕಲುತನವನ್ನು ಕಂಡರೂ, ಮಾಂಸದ ಆಸೆಗಾಗಿ ದೇವದೇವತೆಗಳ ಹೆಸರಿನಲ್ಲಿ ಯಜ್ಞಯಾಗ ಹೂಡಿ ಪಶುಬಲಿಯನ್ನು ಕೊಟ್ಟು ಮಾಂಸವನ್ನು ತಿಂದು ಸೋಮರಸವನ್ನು ಕುಡಿಯುತ್ತ ಬಂದರು. ಅಲೆದಾಡುವ ಇಂಥ ಕಲೆಗಾರರಲ್ಲಿ ಈಗಲೂ ಈ ಗುಣಗಳನ್ನು ಕಾಣಬಹುದು. ಕಲೆಗಾರನಾದವನು ಯಾವ ಕುಲದವನೇ ಇರಲಿ ಬಹುತರವಾಗಿ ಅವನಿಗೆ ತಿನ್ನಲು ಮಾಂಸ ಮೊದಲಾದ ಭಕ್ಷ್ಯ ಬೇಕು; ಕುಡಿಯಲು ಮದ್ಯಪಾನ ಮೊದಲಾದ ಪಾನಗಳು ಬೇಕು. ಕಲೆಯು ಅನುಭವವನ್ನು ಬೆಳಸದೆ ಬುದ್ಧಿಯನ್ನು ಬೆಳೆಸುವುದು. 'ಅಹಿಂಸೆಯು' ಮೊದಲು ಆರ್ಯರ ಧರ್ಮದ ಮೂಲ ತತ್ವವಿದ್ದಂತೆ ಕಂಡುಬರುವುದಿಲ್ಲ. ಅವರು ಯಜ್ಞಯಾಗಾದಿಗಳನ್ನು ಮಾಡುತ್ತ ಬಂದಿದ್ದೇ ಇದಕ್ಕೆ ಬಲವಾದ ಸಾಕ್ಷಿ. ಸಸ್ಯಾದಿಗಳನ್ನು ಹುಡುಕಿ ಅವುಗಳನ್ನು ಬೆಳಸಿ ಬೆಳೆಸುಂಬುವ ಒಕ್ಕಲಾದ ದ್ರಾವಿಡರಿಗೆ ಪ್ರಾಣಹಿಂಸೆಯ ಅರಿವು ತಿಳಿದು, ಒಕ್ಕಲತನವನ್ನು ಕೈಕೊಂಡ ಅವರು 'ಅಹಿಂಸೆ'ಯನ್ನು ತಮ್ಮ ಧರ್ಮದ ಮೂಲತತ್ವವನ್ನಾಗಿ ಆರ್ಯರಿಗಿಂತಲೂ ಮುಂಚಿತವೇ ಮಾಡಿಕೊಂಡಿರಬಹುದು. ತಮ್ಮ ಉದ್ಯೋಗಗಳಲ್ಲಿ ದಯಾಳು ಭಾವ ತಾಳಿದ ದ್ರಾವಿಡರಿಗೆ 'ಅನುಭವ'ವು ಹೆಚ್ಚಾಯಿತು. ಚಾತುರ್ಯತನವನ್ನು ತಾಳಿದ ಆರ್ಯರಿಗೆ ಬುದ್ಧಿಯು ಹೆಚ್ಚಾಯಿತು. ಅನುಭಾವಕ್ಕೂ ಬುದ್ಧಿಗೂ ಮಹದಂತರವಿದೆ. ಅನುಭಾವಕ್ಕೆ ಸುಖದುಃಖಗಳ ಕಣ್ಣಿವೆ; ಬುದ್ಧಿಗೆ ಕೇವಲ ಚಾಣಾಕ್ಷತೆಯ ಬಾಯಿಯದೆ. ಇದನ್ನರಿತ ದ್ರಾವಿಡರು ಮಾತುಮಾತಿಗೆ ಆರ್ಯರ ಕೂಡ ಹೆಣಗಾಡಲು ಬೇಸತ್ತು ದೊಡ್ಡ ಮನಸು ಮಾಡಿ ತಾವು ಸಾಗುಮಾಡಿದ 'ಸಿಂಧು' ಹಾಗೂ ಗಂಗಾ-ಯಮುನಾ ನದಿಗಳ ನಡುವಿನ ಬೆಳೆಯುಳ್ಳ ಪ್ರದೇಶವನ್ನು ಬಿಟ್ಟುಗೊಟ್ಟು ದಕ್ಷಿಣಕ್ಕೆ ಸರಿದಿರಬಹುದು. ಈ ಗುಣಗಳು ಮುಂದೆ ಪರಿಪಕ್ವವಾಗಿ ಕರ್ನಾಟಕದಲ್ಲಿ ಅನುಭಾವಿಗಳಾದ ಅನೇಕ ಶಿವಶರಣರೇ ಉದ್ಭವಿಸಿಹೋದರು. ಈಗಲೂ ಉತ್ತರ ಹಿಂದೂಸ್ತಾನದವನಕಿಂತ ದಕ್ಷಿಣ ಹಿಂದೂಸ್ತಾನದವನು ಉದಾರಿಯೂ, ಕನಿಕರವುಳ್ಳವನೂ, ಆದರ ಸತ್ಕಾರಿಯೂ, ಇರುವುದನ್ನು ಕಣ್ಣಾರೆ ಕಂಡು ಮನಗಾಣಬಹುದು. ಉತ್ತರದವನು ಅಲ್ಲಲ್ಲಿ ಸ್ವಲ್ಪ ವಂಚಕನಾಗಿಯೇ ಉಳಿದಿದ್ದಾನೆ.

ದಕ್ಷನು ತಾನು ಹೂಡಿದ ಯಜ್ಞದಲ್ಲಿ ಅಳಿಯನಾದ ಶಿವನಿಗೆ ಹವಿರ್ಭಾಗ ಕೊಡದೆ ಅವಮಾನಗೊಳಿಸಲು ಶಿವನ ಸಿಟ್ಟಿಗೆದ್ದು ತನ್ನ ಗಣದೊಡನೆ ದಕ್ಷನ ಯಜ್ಞವನ್ನು ನಾಶ ಮಾಡಿದನೆಂದು ಪುರಾಣ ಕಥೆಗಳಲ್ಲಿ ಬರುವುದು. ಹೀಗೆ ಎರಡೂ ಪಂಗಡಗಳಲ್ಲಿ ಸಂಘರ್ಷಣಗಳು

ನಡೆದಿರುವಾಗ ಎರಡೂ ಪಂಗಡದ ಪ್ರಮುಖರು ಪರಸ್ಪರ ಐಕ್ಯತೆಯನ್ನು ತರಲು ಪ್ರಯತ್ನಿಸುತ್ತಿದ್ದರೆಂದು ಪುರಾಣಗಳಿಂದ ತಿಳಿದು ಬರುವುದು. ಅವರ ಆ ಪ್ರಯತ್ನದ ಫಲವೆಂದರೆ ಅವರು ಕಲ್ಪಿಸಿದ 'ಸಂಯೋಗಿ ದೇವತೆ.' ಅವರ ವಿಚಾರದಂತೆ ಶಿವಸತಿಯರ ಮಾನಸಪುತ್ರನಾದ 'ಗಣಪತಿ'ಯೇ ಈ 'ಸಂಯೋಗಿ ದೇವತೆ'ಯು. ಆರ್ಯರು ತಮ್ಮ ವೈದಿಕ ದೇವತೆಗಳ ಗುಣಗಳನ್ನೂ, ದ್ರಾವಿಡರು ಶಿವಾಚಾರ್ಯರ ಸೂಚನೆಗಳನ್ನೂ ಈ ಮಾನಸಪುತ್ರನಲ್ಲಿ ಸೇರಿಸಿ 'ಓಂಕಾರ' ಸ್ವರೂಪಿಯನ್ನಾಗಿ ಮಾಡಿ ಎಲ್ಲ ಮಂಗಲಕಾರ್ಯಗಳ ಆರಂಭ ಪೂಜೆಯನ್ನು ಸಲಿಸುವ ಗೌರವವನ್ನು ಈ 'ಗಣಪತಿ'ಗೆ ಕೊಟ್ಟರು. ಅಂದಿನಿಂದ ಗಣಪತಿಯು ಎರಡೂ ಜನಾಂಗಕ್ಕೆ ದೇವರಾದನು. ಮುಂದೆ ಆರ್ಯದ್ರಾವಿಡರ ಸಂಯೋಗವಾಗಲು ಅವರ ಸಂಸ್ಕೃತಿಯು ಒಂದಾಗಿ ಈಗ ಭಾರತ ಸಂಸ್ಕೃತಿಯೆಂದು ಉಳಿದಿದೆ. ಇಷ್ಟು ಬುನಾದಿಯದಿದೆ ಈ ಗಣಪತಿಯ ಸಂಪ್ರದಾಯವು! ಹೀಗೆ ಉದ್ಭವಿಸಿದ ಗಣೇಶನ ಪ್ರಭಾವವು ಸುತ್ತಮುತ್ತಲಿನ ದೇಶಗಳ ಮೇಲೆ ಬೀಳಲು, ಅವರೂ ಗಣೇಶನನ್ನು ತಮ್ಮಲ್ಲಿಗೆ ಬರಮಾಡಿಕೊಂಡರು. ಗಣೇಶನು ಸಂಪ್ರದಾಯಕ ದೇವನಾಗಿ ತುರ್ಕಸ್ತಾನ, ಟೀಬೇಟ, ಚೀನಾ, ಜಪಾನ, ಸಿಲೋನ, ಜಾವಾ, ಸುಮಾತ್ರಾ, ಬೋರ್ನಿಯೊ, ಬ್ರಹ್ಮದೇಶ, ಶ್ಯಾಮ ಮೊದಲಾದುವುಗಳಲ್ಲಿ ವಿದೇಶಯಾತ್ರೆ ಮಾಡಿದ್ದು ಅಲ್ಲಿ ದೊರೆಯುವ ಗಣಪತಿಗಳ ಮೂರ್ತಿಗಳಿಂದ ತಿಳಿದುಬರುವುದು.[೨] ಭರತಖಂಡದಲ್ಲಂತೂ ಈ ದೇವತೆಯು 'ಮಂಗಲಮೂರ್ತಿ'ಯಾಗಿ ಎಲ್ಲ ಭಾಗಗಳಲ್ಲಿಯೂ ಪೂಜೆಗೊಳ್ಳುತ್ತದೆ. ಆದರೆ ಒಕ್ಕಲಿಗನು ಮಾತ್ರ ಸುಗ್ಗಿಯ ಕಣದಲ್ಲಿ ಗಣಪತಿಯನ್ನು ಪೂಜೆ ಮಾಡುವುದಿಲ್ಲ.[೩] ಅಲ್ಲದೆ, ಗಣಪತಿ ಪೂಜೆಯು ಭಾದ್ರಪದ ಮಾಸದಲ್ಲಿ ಬಂದರೂ ಮಣ್ಣಿನ ಪೂಜೆಯೆಂದು ಎಣಿಸಲ್ಪಡುವದಿಲ್ಲ. ತೀರ ಇತ್ತೀಚೆಗೆ ಲೋಕಮಾನ್ಯ ಟಿಳಕರು ಈ ದೇವರ ಮಹತ್ವವನ್ನರಿತು ಸ್ವಾತಂತ್ರ್ಯದ ಆಂದೋಲನೆಗೆ ಸಾರ್ವಜನಿಕ ಗಣೇಶೋತ್ಸವವನ್ನಾರಂಭಿಸಿದರು. ಈ ಉತ್ಸವವು ನಮ್ಮ ಜನತೆಯಲ್ಲಿ ನವಚೇತನವನ್ನು ಹುಟ್ಟಿಸಿ ಪ್ರಭಾವಕಾರಿಯಾರಿ ರಾಷ್ಟ್ರಸಂಘಟನೆಗೆ ಕಾರಣಭೂತವಾಯಿತೆಂದು ಹೇಳಬಹುದು. ಈ ದೇವರ ಸಂಬಂಧ ನಮ್ಮ ಹಳ್ಳಿಗರಲ್ಲಿಯೂ ಅನೇಕ ಹಾಡುಗಳಿವೆ. ಹಳ್ಳಿಯ ಹೆಣ್ಣುಮಕ್ಕಳು ಹಾಡುವಾಗ–

ಎಳ್ಳುಹೊಲದಾಗಿರುವ, ಡೊಳ್ಳುಹೊಟ್ಟೆಯ ಬೆನವ
ಎಳ್ಳಿನುಂಡೀಯ ಪನಿವಾರ । ತಂದೀನಿ
ಎಳ್ಳಷ್ಟ ಮತಿಯ ಕೊಡು ನಮಗ ॥

ಕಡಲಿ ಹೊಲದಾಗಿರುವ ಕಟದ ಹೊಟ್ಟೆಯಬೆನವ
ಕಡಲಿ ಉಂಡೀಯ ಪನಿವಾರ । ತಂದೀನಿ
ಒಡಲೊಂದು ನುಡಿಯ ಒಡಕೊಡ ॥ *–ಜಾ–ಮ–ಭಾ–*

ಎಂದು ಗಣಪತಿಯನ್ನು ಬಲಗೊಳ್ಳುತ್ತಾರೆ. ಅವರಿಗೂ ಗಣಪತಿಯು ವಿಘ್ನನಾಶಕನೆಂದು ಅರಿಕೆ ಇದೆ. ಇಡೀ ಭರತಖಂಡದಲ್ಲಿಯೂ ಈ ದೇವರ ಉತ್ಸವವು ಬಲು ವಿಜೃಂಭಣೆಯಿಂದ ನಡೆಯುವುದು. ಭಾದ್ರಪದ ಶುದ್ಧ ಚತುರ್ಥಿಗೆ ಬಂದ ಗಣೇಶನು ಐದು ದಿನಗಳವರೆಗೆ ಪೂಜೆಗೊಂಡು ಮೋದಕಾನ್ನಗಳನ್ನುಂಡು ಅಷ್ಟಮಿಯ ದಿವಸ ಕೊನೆಯಾಗುವನು. ಈ ಸಂಪ್ರದಾಯದ ಸಂಬಂಧ ಅನೇಕ ಜಾನಪದ ಕಥೆಗಳೂ ಉಂಟು.

ಜೋಕುಮಾರ

ಭಾದ್ರಪದ ಶುದ್ಧ ಅಷ್ಟಮಿಯ ದಿವಸ 'ಅಷ್ಟಮಿಯ ಕೊಡ'ದಲ್ಲಿ 'ಜೋಕುಮಾರ'ನು ಜನಪದದಲ್ಲಿ ಹುಟ್ಟಿ ಬರುತ್ತಾನೆ. ಈ ಸಂಪ್ರದಾಯವು ಕರ್ನಾಟಕ ಬಿಟ್ಟು ಉಳಿದ ಯಾವ ಭಾಗಗಳಲ್ಲಿಯೂ ಕಂಡುಬರುವುದಿಲ್ಲ. ಉತ್ತರ ಕರ್ನಾಟಕದ ಎಲ್ಲ ಹಳ್ಳಿಗಳಲ್ಲಿಯೂ ಕಂಡುಬರುವುದು. ಇದು ಕನ್ನಡಿಗರ ಸಂಪ್ರದಾಯ. ಭಾದ್ರಪದ ಮಾಸದಲ್ಲಿ ಬೆಳುವಲದಲ್ಲಿ ಮಳೆಯು ಆಗದೆ ಪೈರುಗಳು ಒಣಗಹತ್ತುತ್ತವೆ. ಅಲ್ಲಿಯ ರೈತರು ಜೋಕುಮಾರನು ಹುಟ್ಟಿದ ಮೇಲೆ ಮಳೆಯಾಗಬಹುದೆಂದು ಆಶೆ ಮಾಡಿ ಜೋಕುಮಾರನನ್ನು ಬಹಳ ಆದರದಿಂದ ಬರಮಾಡಿಕೊಳ್ಳುವರು. ಒಕ್ಕಲಿಗನು ಈ ಜೋಕುಮಾರನ ಪೂಜೆಯನ್ನು ಮಣ್ಣ ಪೂಜೆಯೆಂದು ನಂಬುತ್ತಾನೆ. ಇದು ನಾಲ್ಕನೆಯ ಮಣ್ಣ ಪೂಜೆಯೆನ್ನಬಹುದು. ಇದು ಕೇವಲ ಒಕ್ಕಲಿಗನಿಗೆ ಬೇಕಾದ ಸಂಪ್ರದಾಯವಾಗಿದೆ. ಉತ್ತರ ಕರ್ನಾಟಕದಲ್ಲಿ ಸುಣ್ಣಗಾರರಾಗಲಿ, ಅಂಬಿಗರಾಗಲಿ, ಮಣ್ಣಿನಿಂದ ಈ ಜೋಕುಮಾರನನ್ನು ಮಾಡಿ ಬಾಯಿಗೆ ಬೆಣ್ಣೆಯನ್ನೊರಿಸಿ, ಬೇವಿನ ತೊಪ್ಪಲವನ್ನು ಹೊಚ್ಚಿ ಬುಟ್ಟಿಯಲ್ಲಿಟ್ಟುಕೊಂಡು ಓಣಿಓಣಿಗಳಲ್ಲಿ ಮನೆಮನೆಗೆ ತಿರುಗಾಡುವುದನ್ನು ಎಲ್ಲ ಹಳ್ಳಿಗಳಲ್ಲಿಯೂ ನೋಡಬಹುದು. ಮನೆಯಲ್ಲಿ ತಗಣಿ, ಚಿಕ್ಕಾಡು ಮೊದಲಾದ ಕ್ರಿಮಿಕೀಟಕಗಳ ಕಾಟ ಹೋಗಲೆಂದು ಹೆಣ್ಣುಮಕ್ಕಳು ಉಪ್ಪು, ಮೆಣಸಿನಕಾಯಿ, ಎಣ್ಣೆ, ಬೆಣ್ಣೆ, ಅಂಬಲಿ (ಹುಳಿನುಚ್ಚು) ಮೊದಲಾದುವುಗಳನ್ನು ನೀಡುವರಲ್ಲದೆ ಕಾಳುಕಡಿಗಳನ್ನೂ ಬೇರೆ ಕೊಡುವರು. ಆಗ ಜೋಕುಮಾರನನ್ನು ಹೊತ್ತು ತಂದವರು ಒಕ್ಕಲಿಗನಿಗೆ ಅಂಬಲಿ (ಹುಳಿನುಚ್ಚು)ಯನ್ನು ಬೆಳಸಿಗೆ ಚರಗವೆಂದು ಕೊಡುವರು. ಬೆಳುವಲದಲ್ಲಿಯ ರೈತನಿಗೆ ಈ ಜೋಕುಮಾರನ ಅಂಬಲಿಯು ಬಹಳ ಮಹತ್ವದ್ದು. ಅವನು ಈ ಅಂಬಲಿಯನ್ನೊಯ್ದು ತನ್ನ ಬೆಳಸು ಹುಲುಸಾಗಲೆಂದು ಅದನ್ನು ಚರಗೊಗೆದು ಪೂಜೆಮಾಡಿ ಬೆಚ್ಚು ಹಾಕುವನು.[೪] ಅವನು ತನ್ನ ಬೆಳಸು ಮನೆಗೆ ಬರುವುದರೊಳಗೆ ಒಟ್ಟು ಮೂರು ಚರಗಗಳನ್ನು ಭೂಮಿಗೆ ಒಗೆಯುತ್ತಾನೆ. ಜೋಕುಮಾರನ ಚರಗವೇ ಅವನು ಒಗೆಯುವ ಚರಗಗಳಲ್ಲಿ ಮೊದಲನೆಯ ಚರಗವೆನ್ನಬಹುದು. ಹಳ್ಳಿಗಳಲ್ಲಿ ಪಟಿಂಗನನ್ನು ಉದ್ದೇಶಿಸಿ ಮಾತಾಡುವಾಗ

---

೨. 'ಶ್ರೀ ಅಲಾಯಿಸ್ ಗೆಟ್ಟಿ' ಅವರು ಬರೆದ 'ಗಣೇಶ' ಎಂಬ ದೊಡ್ಡ ಪುಸ್ತಕವನ್ನು ನೋಡಿರಿ.
೩. 'ಜನ ಜೀವನ' ಭಾಗ–೧: "ಸುಗ್ಗಿಯ ಹಾಡುಗಳು" ನೋಡಿರಿ.
೪. 'ಐತಿಹಾಸಿಕ ಸಂಗತಿಗಳು' ಭಾಗ–೨ : 'ಸುಗ್ಗಿಯ ಸಂಪ್ರದಾಯಗಳು' ನೋಡಿರಿ.

'ಊರಾಗ ಜೋಕುಮಾರಾಗ್ಯಾನ್' ಎಂದು ಆ ಪಟಿಂಗನನ್ನು ಜೋಕುಮಾರನಿಗೆ ಹೋಲಿಸುವರು. ಅಲ್ಲದೆ ಗುಳ್ಳವ್ವ ಹಾಗೂ ಜೋಕುಮಾರನ ಸಂಬಂಧ ಹಲಕೆಲವು ಅಶ್ಲೀಲ ನುಡಿಗಳನ್ನೂ ನುಡಿಯುವರು. ಇಂತಹ ಜೋಕುಮಾರನು ಯಾರು? ಜನಪದದಲ್ಲಿ ಇವನಿಗೆ ಆದರವು ಹೇಗೆ ದೊರೆಯಿತು? ಒಕ್ಕಲಿಗನು ಇವನ ಹೆಸರಿಲೆ ಅಂಬಲಿಯನ್ನು ಚರಗ ಒಗೆಯುವನೇಕೆ? ಇವೇ ಮೊದಲಾದ ಪ್ರಶ್ನೆಗಳು ನಮ್ಮೆಲ್ಲರ ಮುಂದೆ ನಿಲ್ಲದಿರುವು. ಪುರಾಣಕಥೆಗಳಲ್ಲಿ ಜೋಕುಮಾರನು ಜೋಕಮುನಿಯ ಮಗನೆಂದು ಒಂದು ಕಥೆಯೂ ಬರುವುದು. ಆದರೆ ಜಾನಪದದಲ್ಲಿ ಬರುವ ಕಥೆಯು ಬೇರೆ ರೂಪಾಂತರದಲ್ಲಿ ಕಾಣುವುದು. ಇವನನ್ನು ಹೊತ್ತುಕೊಂಡು ತಿರುಗುವ ಹೆಣ್ಣುಮಕ್ಕಳು ಅವನ ಕಥೆಯನ್ನೇ ಹಾಡುವರು.

ಜೋಕುಮಾರನ ಹಾಡು[೫]

ಅಡ್ಡಡ್ಡ ಮಳೆ ಬಡಿದ, ದೊಡ್ಡೊಡ್ಡ ಕೆರಿತುಂಬಿ
ಗುಡ್ಡಗಳೆಲ್ಲ ಹೈನಾಗಿ । ಜೋ । ಗೌಡರ
ಸೆಡ್ಡಿಯ ಮ್ಯಾಲೆ ಸಿರಿಬಂದು ॥ ಜೋ ॥ ॥೧॥

ಹಾಸ್ಯಾಸಿ ಮಳೆ ಬಡಿದು, ಬೀಸ್ಬೀಸಿ ಕೆರೆ ತುಂಬಿ
ಬಾಸಿಂಗದಂತ ತೆನಿಬಾಗಿ । ಗೌಡರ
ರಾಸಿಯ ಮ್ಯಾಲೆ ಸಿರಿ ಬಂದು ॥೨॥

ಕರಣುಳ್ಳ ಕೊಮರಾನ, ಕೆರೆ ನೋಡ ಹೋದಾರ
ಕರದು ಕಾರ್ಗಲ ಮಳೆಬಂದು । ಗೌಡರು
ಕರೆದು ಹಚ್ಚಡ ಹೊಚ್ಚ್ಯಾರ ॥೩॥

ಕೆಂಚನಮ ಕೊಮರಾ, ಬೆಂಚೀಯ ನೋಡಹ್ವಾದ
ಮಿಂಚ್ಯಾವ ಕಾರ ಮಳೆಬಂದ । ಗೌಡರು
ಕೆಂಪು ಹಚ್ಚಡ ಹೊಚ್ಚ್ಯಾರ ॥೪॥

ಹುಟ್ಟಿದೇಳು ದಿವಸಕ, ಪಟ್ಣಾವ ತಿರುಗ್ಯಾನ
ದಿಟ್ಲಾದೇವಿ ನಿನ ಮಗನ । ಕೊಮರಾಗ
ಕೊಟ್ರವ್ವೇಳು ದಿನಗಳ ॥೫॥

ಪುಂಡಿಯ ಪಲ್ಲೆನಂಜು, ಕೊಂಡುತಾನುಣಲಿಲ್ಲ
ದಂಡನಾಳವನ ಬಂಕ್ಯಾಗ । ನಮದೇವಿ
ಹೊಂಬಳಿ ಸರವ ಬಗಿಸ್ಯಾಳ ॥೬॥

ಚಕ್ಕೋಚಿ ರಸಪಲ್ಲೆ, ಇಕ್ಕೊಂಡು ಉಣಲಿಲ್ಲ
ದಿಕ್ಕನಾಳವನ್ ಬಂಕ್ಯಾಗ । ನಮದೇವಿ
ಚೊಕ್ಕ ಮುತ್ತಿನ ಸರಬಗಿಸೆ ॥೭॥

ಅರಕೊಂಬ ಅರಿಷಿಣವ, ದರಬಟ್ಲ ಒಳ್ಳೆಣ್ಣೆ
ನರನಮ್ಮ ದೇವಿ ಕುಲಿಹೊಕ್ಕು । ಎರಕೊಂಡ
ತೆರೆ ಬಂದ ನೀರು ಬಾಗಿಲಕ ॥೮॥

ಬಾಲ ಹುಟ್ಟಿದನಂತ, ಬನಕ ತೊಟ್ಟಿಲ ಕಟ್ಟಿ
ಬಾಲಗನ್ನೇರು ನೆರದಾರ । ಹಾಡುತಲಿ
ಕೋಲೆನ್ನು ಜನಕ ಜಯಜಯವೊ ॥೯॥

ಕಬ್ಬುಳ್ಳ ತ್ವಾಟ್ದಾಗ, ಇಬ್ಬನ್ನಿಮರದ್ವಾಂಗ
ಇಬ್ಬರು ತೂಗಲು ಮಲಗಾನ । ನಮದೇವಿ
ಹೆಬ್ಬೂಲಿ ಮಗನ ಹಡೆದಾಳ ॥೧೦॥

ಹಾರೂರ ಕೇರ್ಯಾಗ, ಹಾರಿ ಚೆಂಡಾಡ್ಯಾನ
ನಾರಿ ನಿನಮಗ ಕೊಮರಯ್ಯ । ಚೆಂಡಾಡಿ
ಊರಭೂಮೆಲ್ಲ ಬೆಳೆಬಂದ ॥೧೧॥

---

೫. ಉತ್ತರ ಕರ್ನಾಟಕದಲ್ಲಿ 'ಜೋಕುಮಾರ'ನನ್ನು ಹೊತ್ತುಕೊಂಡು ಹಳ್ಳಿ ಹಳ್ಳಿಗಳನ್ನು ತಿರಗುವ ಎಲ್ಲ ಹೆಣ್ಣು ಮಕ್ಕಳು ಈ ಹಾಡನ್ನು ಹಾಡುವರು.

ಒಕ್ಕಲಗೇರಿ ತಾಸೇರಿ, ಹೊಕ್ಕು ಚೆಂಡಾಡ್ಯಾನ
ಅಕ್ಕನ ಮಗನು ಕೊಮರಯ್ಯ। ಆಡಿದರ
ಅಕ್ಕಿ ನಾಡೆಲ್ಲ ಬೆಳೆದಾವ ॥೧೨॥

ಹಾಲ್ಬೇಡಿ ಹಲ್ಬ್ಯಾನ, ಕೆನೆಬೇಡಿ ಕುಣಿದಾನ
ಮೊಸರಬೇಡಿ ಕೆಸರ ತುಳಿದಾನ। ಕೊಮರಾನ
ಕುಸುರಾದ ಗೆಜ್ಜಿ ಕೆಸರಾಗ್ಯೊ ॥೧೩॥

ಸಂದೀಯಮನೆಯನ್ನ, ಗೋಂದೀಯ ಮನೆಯನ್ನ
ಗೊಂಜಾಳದನ್ನ ಕೆಸರನ್ನ। ನಮ ಕೊಮರ
ಸಂದಿಯ ಹೊಕ್ಕನು ನಡುಗೇರಿ ॥೧೪॥

ಹಾದೀಯ ಮನೆಯನ್ನ, ಬೀದೀಯ ಮನೆಯನ್ನ
ಬಾಜರದನ್ನ ಮೊಸರನ್ನ। ನಮ ಕೊಮರ
ಗೌಳೇರೋಣಿ ಹೊಕ್ಕಾನ ॥೧೫॥

ಹಳ್ಳಕ ತಾಹೋಗಿ, ಸಣ್ಣವ್ನ ಇಟ್ಟಾರ
ಕನ್ನಡಿ ತೆಗೆದು ಮೊಕನೋಡೊ। ಕೊಮರಾಮ
ಕಣ್ಣು ಮೂಗಿಲೆ ಕರಚೆಲುವ ॥೧೬॥

ಅಳಕೂತ ಬಳಕೂತ, ಬಂದಾಳ ಗುಳಕವ್ವ
ಬಂದುನಿಂತಾಳ ಅಗಸ್ಯಾಗ। ಗೌಡರು
ತಂದು ಇಳಸ್ಯಾರ ಸೆಳಿಮಂಚ ॥೧೭॥

ಕೊಮರಾ ತಾ ಒರ್ತಾನಂತ, ಕೋಣೇಯ ಸಾರೀಸಿ
ಜಣ ಒಕ್ಕಲಗಿತ್ತಿ ಚದರೀಯ। ಮನಿಯಾಗ
ಒಂದಾರ ಜ್ಯಾವ ಇರಲಿಲ್ಲ ॥೧೮॥

ಹೋಗತ ಹೊನ್ನಿ ಮುರಿದ, ಬರತ ಬನ್ನಿಯ ಮುರಿದ
ಕಂಡ ಕಂಡಲ್ಲಿ ಕರಿಬೇವ। ಮುಡುವಂತ
ಪುಂಡನ್ನ ದೇವಿ ಹಡೆದಾಳ ॥೧೯॥

ಅಕ್ಕ ಹಡೆದಾಳಂತ, ಏನೊಯ್ದೊ ಬನವಯ್ಯ
ಮುತ್ತಿನಚೆಂಡ ಕಾರ್ಮುಗಿಲ। ಸುರಿಮಳೆಯ
ಅರತೀಲೊಯ್ದ ಹರಳೆಲೆಯ ॥೨೦॥

ಬೆಣ್ಣೀಯ ತಾ ಮುದ್ದಿ, ಕನ್ಯುಳ್ಳಕುಮರಾಗ
ಹೊನ್ನ ಮಾಳಿಗೆಯ ಮನೆಯವ್ವ। ಕೆನೆಮೊಸರ
ಬಿನ್ನಾಯ ಹೇಳ ಕೊಮರಾಗ ॥೨೧॥

ಹಾಲತ ಮಗಿತುಂಬಿ, ಬಾಲನಮ್ಮ ಕೊಮರಾಗ
ಮೇಲಮಾಳಿಗೆಯ ಮನೆಯವ್ವ। ನೀ ಕೊಟ್ರ
ಮೇಲಾಗಿ ಬೆಳಲಿ ಸಿರಿಭೂಮಿ ॥೨೨॥

ಅಳುವುತಲಿ ಸಿರಿ ತಾನು, ಬಳಲುತಲಿ ಬಂದಾಳು
ಅಳಕಾದಂಬಲಿ ತಡೆದಾವು। ನಮ ಕೊಮರ
ಕಳೆದೇಳು ದಿನಕ ಮರಣವ್ವ ॥೨೩॥

ಹುಟ್ಟೀದಾ ಏಳ್ದಿನಕ, ಪಟ್ಟಾ್ವ ತಿರಗ್ಯಾನ
ದಿಟ್ಟಾದೇವಿ ನಿನ ಮಗನ। ಕೊಮರಾಗ
ಬರೆದಾಳ ಸೆಟವಿ ಏಳ್ದೀನ ॥೨೪॥

ಪುಂಡಾನ ಪುಂಡಾಟ್ಕ, ಹಿಂಡುಮಂದಿ ಕೂಡ್ಯಾರ
ಕಂಡಲಿ ಕಲ್ಲಿಗೆ ಬಡಿದಾರ। ರಾತ್ರ್ಯಾಗ
ಅಗಸರ ಕಲ್ಲಾಗ ಹುರಿಕ್ಯಾರ ॥೨೫॥

ಜಂಗಮ ನಾನಲ್ಲ, ಜೋಗಯ್ಯ ನಾನಲ್ಲ
ತಿಂಗಳ್ಗೆ ಬರುವ ತಿರುಕಲ್ಲ। ತಾಯವ್ವ
ತುಂಬಿ ಮೊರಜೋಳ ನೀಡವ್ವ ॥೨೬॥

ಕಲ್ಲಳಿಗಿ ಕಬ್ಬಿಣದ, ಮೆಟ್ಟುತ್ತಿ ಏರ್ಯಾಳ
ಬಳಕುತ ಬಳತ ತಗೆದಾಳ। ತಾಯವ್ವ
ಬಳಿಎಳ್ಳು ತುಂಬಿ ನೀಡ್ಯಾಳ ॥೨೭॥

ಜಯಜಯ ಕೊಮರಾಗ, ಜಯಜಯ ಹಾಡೀರೆ
ಜಯಜಯ ಭೂಮಿ ಬೆಳಸೀಗೆ। ಹಡದವ್ವ
ಜಯಜಯ ಇರಲಿ ಜಗದಾಗ ॥೨೮॥ *-ಜಾ-ಸಂ-*

ಜೋಕುಮಾರನು ದಿಟ್ಣಾದೇವಿಯ ಮಗನು. ಹುಟ್ಟಿದ ಏಳುದಿನಗಳಲ್ಲಿ ಪಟಿಂಗನಾಗಿ ಊರೆಲ್ಲ ಅಳುವಾಡಿ ಹಳ್ಳದಲ್ಲಿರುವ ಅಗಸರ ಹುಡುಗಿಯರಿಗೆ ಬೆನ್ನು ಹತ್ತಲು ಇವನ ಪುಂಡಾಟಕ್ಕೆ ಊರು ಬೇಸತ್ತು, ಹಿಂಡುಗಟ್ಟಿ ಕೂಡಿ ಕಂಡಕಂಡಲ್ಲಿ ಕಲ್ಲಿಗೆ ಬಡಿದು ರಾತ್ರಿಯಲ್ಲಿ ಅಗಸರ ಕಲ್ಲ ಬುಡದಲ್ಲಿಟ್ಟರೆಂದು ಹಾಡಿನಲ್ಲಿ ಬಂದಿದೆ. 'ಜೋಕುಮಾರ'ನ ತಲೆಯನ್ನು ಹೊಡೆಯುವಾಗ ಅವನು ಉಂಡದ್ದು ಅಂಬಲಿಯಾಗಿ ಸೂರಾಡಲು ಭೂಮಿ ಭೂಮೆಲ್ಲ ಬೆಳೆ ಬಂದಿತಂತೆ! ಕೋಲ್ಮಿಂಚು, ಕಾರ್ಮುಗಿಲು ಸುರಿದು ಗುಡ್ಡಗಳೇ ಹೈನಾದವಂತೆ! ಒಕ್ಕಲಿಗನ ಸೆಡ್ಡೆಯ ಮೇಲೆ ಸಿರಿಬರಲು ಅವನು ಜೋಕುಮಾರನನ್ನು ಹೇಗೆ ಮರೆಯಬೇಕು? ಅಲ್ಲದೆ, ಉಂಬದೆ, ಉಡದೆ, ತಲೆಹೊಡಿಸಿ ಕೊಂಡು ಹೋದ ಜೋಕುಮಾರನು ಶಿವನ ಮುಂದೆ ಲೋಕದ ದುಃಖದ ಕಥೆಯನ್ನು ಹೇಳಿದನಂತೆ! ಮೋದಕಾನ್ನಗಳನ್ನು ಭುಂಜಿಸಿ ಮರೆದು ಹೋದ ಗಣಪತಿಯು ಶಿವನ ಮುಂದೆ ಜಗತ್ತಿನಲ್ಲಿ ಎಲ್ಲಿ ನೋಡಿದರೂ ಸುಖವೇ ಉಂಟೆಂದೂ ಆ ಸುಖವನ್ನುಂಡು ತಾನು ತೇಗಿ ತೊನೆದು ಉಬ್ಬಿ ಬಂದೆನೆಂದೂ ಮುಂಚಿತವಾಗಿ ಹೇಳಿರಲು ಶಿವನು ತನ್ನ ಕಣ್ದೆರೆಯದೆ ಇದ್ದನು. ಜೋಕುಮಾರನ ದುಃಖವನ್ನು ಕೇಳಿ ಕಣ್ದೆರೆದು ನೋಡಲು, ಮಳೆಯಾಗದೆ ಬೆಳೆಗಳು ಒಣಗಿ ಲೋಕದಲ್ಲೆಲ್ಲ ಗೋಳಾಟದ ಹಾಹಾಕಾರವೇ ಅವನ ಕಣ್ಣಿಗೆ ಬಿತ್ತಂತೆ! ಆಗ ಶಿವನು ಕರುಣಿಸಿ ಕಣ್ದೆರೆಯಲು ಬೀಸಿ ಬೀಸಿ ಮಳೆಯಾಗಿ ಜಲಾಶಯಗಳು ತುಂಬಿದವಂತೆ! ಬೆಳೆ ಬಂದು ಸುಖಕಾಲವು ಬಂತೆಂದು ಜನಪದ ಕಥೆಯೊಂದೂ ಅದೆ. ಏಳುದಿನದ ಈ ಹುಡುಗನ ಸಾಹಸ, ಶಕ್ತಿ ಸಾಮರ್ಥ್ಯ ಮೊದಲಾದುವುಗಳನ್ನು ನೋಡಿ ಅವನು ಹೇಗಿದ್ದರೂ ಅವನಿಗೆ ಸತ್ಕಾರಮಾಡಲು, ಅವನ ಜೀವನವೇ ಜನತೆಗೆ ಉಳಿಯಲೆಂದು ಜನಪದವು ಅವನ ಸಂಪ್ರದಾಯವನ್ನು ಆಚರಿಸುತ್ತ ಬಂತು. ಅದು ಇಂದಿನವರೆಗೆ ಕನ್ನಡಿಗರಿಗೆ ಉಳಿದುಬಂದಿದೆ. ಜೋಕುಮಾರನ ಪ್ರಭಾವವನ್ನು ಕಂಡು ಒಕ್ಕಲಿಗನು ಅವನಿಗೆ ಅಂಬಲಿಯುಣಿಸಿ ಅವನ ಹೆಸರಿಲೆ ಅಂಬಲಿಯನ್ನು ಸೂರಾಡಿ ತನ್ನ ಭೂಮಿಯು ಬೆಳೆಯಲೆಂದು ಈಗಲೂ ಚರಗವನ್ನೊಗೆಯುವನು. ಜೋಕುಮಾರನು ಹುಟ್ಟಿ ಸಾಯುವದರೊಳಗಾಗಲಿ, ಸತ್ತ ಮೇಲಾಗಲಿ ಮುಂಗಾರಿಯ ದೊಡ್ಡ ಮಳೆಗಳು ಕೂಡಿ ಮಳೆಯಾಗುವುದು. ಇದೆಲ್ಲವೂ ಜೋಕುಮಾರನ ಫಲವೆಂದು ನಂಬಿ, ಜನಪದವು ಅವನನ್ನು ಆದರದಿಂದ ಬರಮಾಡಿಕೊಳ್ಳುತ್ತದೆ. ಇಹಲೋಕದ ದುಃಖವನ್ನು ಶಿವನಿಗೆ ತಿಳಿಸಲೆಂದು ಜನರು ಜೋಕುಮಾರನ ಮೈಯೊಳಗೆ ತಗಣಿ ಚಿಕ್ಕಾಡು ಮೊದಲಾದ ಕ್ರಿಮಿಕೀಟಕಗಳನ್ನು ಬಿಡುತ್ತಾರೆ; ಮೋದಕಾನ್ನಗಳನ್ನು ನೀಡದೆ, ಉಪ್ಪು ಮೆಣಸಿನಕಾಯಿ, ಅಂಬಲಿ ಮೊದಲಾದ ಬಡತನ ಸಾಮಗ್ರಿಗಳನ್ನು ನೀಡುತ್ತಾರೆ; ಘಾಯ ಮಾಡಿಸಿ ಬೇವಿನ ತೊಪ್ಪಲಲ್ಲಿ ಹಾಕಿ ಬಾಧೆ ಕೊಟ್ಟು ಕಡೆಗೆ ತಲೆ ಹೊಡಿಸಿ ಅಗಸರ ಕಲ್ಲಲ್ಲಿಡುವರು. ಈ ಎಲ್ಲ ಬಾಧೆಗಳನ್ನು ತಾಳಲಾರದೆ ಕಲ್ಲು ಬುಡದಲ್ಲಿ ಜೋಕುಮಾರನು ನರಳುತ್ತ ಮರಣಹೊಂದುವನು. ಆದುದರಿಂದ ಈಗಲೂ ಅಗಸರು ಜೋಕುಮಾರನು ಸತ್ತ ಮೂರುದಿನಗಳವರೆಗೆ ಅವನು ನರಳುವನೆಂದು ಭಾವಿಸಿ ತಮ್ಮ ಕೆಲಸಕ್ಕೆ ತಡೆ ಹಾಕುವರು. ಈ ಲೋಕದ ದುಃಖವನ್ನು ಶಿವನ ಮುಂದೆ ತೋಡಿಕೊಳ್ಳುವ ಜೋಕುಮಾರನು ಜನತೆಗೆ ಆದರಣೀಯವಾಗುವುದರಲ್ಲಿ ಆಶ್ಚರ್ಯವೇನು?

ಗುರ್ಚಿ

ಭಾದ್ರಪದ ಆಶ್ವಜಮಾಸಗಳಲ್ಲಿ ಉತ್ತರ ಕರ್ನಾಟಕ (ವಿಶೇಷವಾಗಿ ಬೆಳುವಲ)ದಲ್ಲಿ ಮಳೆಯಾಗದಿರಲು 'ಗುರ್ಚಿ'ಯು ಊರೂರ ತಿರುಗುವುದು ದೃಷ್ಟಿಗೋಚರವಾಗುವುದು. ಆಗ ಈ ಸಂಪ್ರದಾಯವನ್ನು ಬಹುತರವಾಗಿ ಎಲ್ಲ ಹಳ್ಳಿಗರು ಆಚರಿಸುವರು. ಕೊರುವರಾಗಲಿ, ಇಲ್ಲವೆ ಊರಲ್ಲಿಯ ಹುಡುಗರಾಗಲಿ ಈ ಗುರ್ಚಿಯನ್ನು ಹೊತ್ತು ತಿರುಗುತ್ತಾರೆ. ಮಲೆನಾಡಿನ ಗಡಿಭಾಗಗಳಲ್ಲಿ ಊರ ಹುಡುಗರೇ ಈ ಗುರ್ಚಿಯನ್ನು ಹೊತ್ತು ತಿರುಗಿ ದೇವರಿಗೆ ಕಾಯಕುಪ್ಪುರ ಬೆಳಗಿ ಮಳೆಯಾಗಲೆಂದು ಬೇಡಿಕೊಳ್ಳುವರು. ಬೆಳುವಲದಲ್ಲಿ ಕುಂಚಿ ಕೊರುವರ ಮಕ್ಕಳು ಗುರ್ಚಿಯನ್ನು ಹೊತ್ತು ತಿರುಗುತ್ತಾರೆ. ಲಿಂಗದಾಕೃತಿಯ ಸೆಗಣಿಯ ಉಂಡಿಯನ್ನು ಮಾಡಿ ಅದಕ್ಕೆ ನೆತ್ತಿಯ ಮೇಲೆ ಕರಕಿಯ ಪತ್ರಿಗಳನ್ನು ಚುಚ್ಚಿ ಕಜ್ಜಾಯ (ರೊಟ್ಟಿ) ಬೇಯಿಸುವ ಕೊಪ್ಪರಿಗೆಯನ್ನು ದಬ್ಬುಮಾಡಿ ಅದರ ಮೇಲೆ ಅದನ್ನು ಸ್ಥಾಪಿಸುವರು. ಈ ಕರಕಿಯ ಪತ್ರಿಯನ್ನು ಹೊತ್ತ ಸಗಣಿಯ ಲಿಂಗದಾಕೃತಿಯೇ ಒಕ್ಕಲಿಗರಿಗೆ ಮಳೆಕೊಟ್ಟ, ಕೊಡುವ 'ಗುರ್ಚಿಯು.' ಈಗ ಗುರ್ಚಿಯು ಒಕ್ಕಲಿಗನಿಗೆ ಕರ್ನಾಟಕದಲ್ಲಿ ಮಳೆಯನ್ನು ತರುವ ಸಂಪ್ರದಾಯಕ ದೇವರಾಗಿದೆ. ಹೀಗೆ ಸ್ಥಾಪಿಸಿದ ಕೊಪ್ಪರಿಗೆಯ ಮೇಲಿನ ಗುರ್ಚಿಯನ್ನು ಏಳು ಅಥವಾ ಎಂಟು ವರುಷದ ಹುಡುಗನಾಗಲಿ, ಹುಡುಗಿಯಾಗಲಿ ಹೊರುತ್ತಾರೆ. ಅವರ ಬೆನ್ನ ಹಿಂದೆ ಹಲಕೆಲವು ಹುಡುಗರು ಬೆನ್ನು ಹತ್ತಿ ಮನೆಮನೆಗೆ ಹೋಗಿ 'ಗುರ್ಚಿ' ಬಂದಿಹುದೆಂದು ಹಾಡುವರು. ಮನೆಯವರು ತಂಬಿಗೆ ನೀರನ್ನು ತಂದು ಗುರ್ಚಿಯ ಮೇಲೆ ಸುರನಲು ಆ ಗುರ್ಚಿಯನ್ನು ಹೊತ್ತ ಹುಡುಗನಾಗಲಿ, ಹುಡುಗಿಯಾಗಲಿ ಒಂದೆಡೆ ನಿಲ್ಲದೆ ತಮ್ಮ ಸುತ್ತು ತಿರುಗುವರು. ನೀರೆರಿದ ಮೇಲೆ ಮನೆಯವರು ಮೊರತುಂಬಿ ಜೋಳ ಹಾಕುವರಲ್ಲದೆ ದುಡ್ಡನ್ನೂ ಕೊಟ್ಟು ಕಳುಹಿಸುವರು. ಹೀಗೆ ಓಣಿ ಓಣಿಯ ತಿರುಗಿ ಊರೆಲ್ಲ ಅಡ್ಡಾಡಿ ಮುಗಿದ ಮೇಲೆ ಮಳೆ ಬರಲೆಂದು ಆ ಗುರ್ಚಿಯನ್ನು ಪೂಜೆ ಮಾಡಿ ಬೇಡಿಕೊಳ್ಳುತ್ತಾರೆ. ಗುರ್ಚಿಯನ್ನು ಹೊತ್ತು ತಿರುಗುವಾಗ ಹಾಡುವ ಹಾಡು ಎಲ್ಲರ ಮನಸ್ಸನ್ನು ಹಿಡಿಯದಿರದು.

ಗುರ್ಜಿಯ ಹಾಡು[೬]

೧ನೆಯ ಚೌಕು :

ಗುರ್ಜೀ ಗುರ್ಜೀ ಎಲ್ಲ್ಯಾಡಿ ಬಂದಿ
ಹಳ್ಳಾಕೊಳ್ಳಾ ತಿರುಗಾಡಿ ಬಂದೆ
ಕಾರಮಳೆಯೇ ಕಪ್ಪತ ಮಳೆಯೇ
ಸುರಿಮಳೆಯೇ ಸುರಿಮಳೆಯೇ.
ಸುರಿಮಳೆಯಾದರ ಒಕ್ಕಲಿಗ ಒಕ್ಕಲಿಗ
ಒಕ್ಕಲಿಗಣ್ಣ ಬಿತ್ತೊ ಹೊನ್ನ
ಸುತ್ತ ಸುರಿಯಿತು ಸುರಿ ಮಳೆಯೋ ಸುರಿಮಳಿಯೋ
ಹಸರ ಬೆಳೆಯು ಭೂತಾಯೀ ಭೂತಾಯೀ
ಮಗಿ ಮಳಿಯಾಗಿ ಹೂಬೆಳಿಸೀ ಹೂಬೆಳಸೀ
ಹಕ್ಕಿಯ ಹಬ್ಬ ಹೊಲದಾಗ ಹೊಲದಾಗ
ಕಾರಮಳಿಯೇ ಕಪ್ಪತ ಮಳಿಯೇ
ಸುರಿಮಳಿಯೇ ಸುರಿಮಳಿಯೇ

೨ನೆಯ ಚಾಕು :

ಆಯ್ಯಾರಣ್ಣಾ ಆಯಾಬೇಡೊ
ಕದರಸಾಲೀ ಕಂಬಾರಾ ಕಂಬಾರಾ
ಬಿದರ ಸಾಲೀ ಮ್ಯಾದಾರಾ ಮ್ಯಾದಾರಾ
ಆಯ್ಯಾಗ್ರ್ನ ಹೆಂಡತಿ ಗಂಡ ಹಡೆದಾಳೊ
ನೆತ್ತಿಗೆ ಎರಿಯಾಕ ನೀರಿಲ್ಲ ನೀರಿಲ್ಲ
ಕರೆಗಂಬಳಿಯ ಗುರುಸಿದ್ಧ ಗುರುಸಿದ್ಧ
ಕಂಬಳಿ ಬೀಸೋ ಸುರಿಮಳೆಯೋ ಸುರಿಮಳೆಯೋ
ಕರಮಳಿಯೇ ಕಪ್ಪತ ಮಳಿಯೇ
ಹಳ್ಳಾಕೊಳ್ಳಾ ತುಂಬಿಸು ಮಳಿಯೇ
ಸುಣ್ಣಾ ಕೊಡತಿನಿ ಸುರಿಯಲೆ ಮಳೆಯೇ
ಬಣ್ಣಾ ಕೊಡತಿನಿ ಬಾರೆಲೆ ಮಳೆಯೇ
ಸುರಿಮಳಿಯೇ ಸುರಿಮಳೆಯೇ *–ಜಾ–ಸಂ–*

ಇಷ್ಟೊಂದು ಹೆಸರುವಾಸಿಯಾದ ಈ 'ಗುರ್ಜಿ'ಯು ಯಾರಿರಬಹುದು? ಜನಪದವು ಇಷ್ಟೊಂದು ಆದರ ಸತ್ಕಾರದಿಂದ ಪೂಜೆ ಮಾಡಿ ಬರಮಾಡಿಕೊಳ್ಳುವದೇಕೆ? 'ಮಳೆಕೊಡು' ಎಂದು ಜನಪದವು 'ಗುರ್ಜಿ'ಗೆ ಸೆರಗೊಡ್ಡಿ ಬೇಡಿಕೊಳ್ಳುವದೇಕೆ? ಇವೇ ಮೊದಲಾದ ತೊಡಕುಗಳು ನಮ್ಮೆಲ್ಲರನ್ನು ಎದುರಿಸದಿರವು. ಅಲ್ಲದೆ ಈ ಗುರ್ಜಿಯು ಆಡಿ ಹೋದ ಏಳೆಂಟು ದಿನಗಳಲ್ಲಿಯೇ ಮಳೆಯಾಗುವುದೆಂದು ಜನರಲ್ಲಿ ಈಗಲೂ ದೃಢವಾದ ನಂಬಿಗೆಯು.

ಮೇಲಿನ ಹಾಡನ್ನು ಹಿಂಜಿ ಅಭ್ಯಾಸಮಾಡಿ ನೋಡಿದರೆ ಹಲಕೆಲವು ಸಂಗತಿಗಳು ತಿಳಿದುಬರುವುದು.

೧. 'ಗುರ್ಜಿ'ಯು 'ಕರೆಗಂಬಳಿ ಗುರಸಿದ್ಧ' ಎಂಬ ಪುಣ್ಯ ಪುರುಷನ ಸ್ಮಾರಕವು.
೨. ಈ ಪುಣ್ಯಪುರುಷನು ಮಹಾಮುಗ್ಧ ಪಾವನ ಪುರುಷನಿದ್ದನಲ್ಲದೆ ಅವನ ಪೂಜ್ಯತೆಗೆ ನಿಸರ್ಗವೇ ತಲೆ ಬಾಗಿತ್ತು, ಬಾಗುತ್ತ ಬಂದಿದೆ.
೩. ಇವನ ಕಾಲದಲ್ಲಿ ಒಮ್ಮೆ ದೊಡ್ಡ ಬರಗಾಲ ಬಿದ್ದಾಗ, ಇವನ ಪೂಜ್ಯತೆಯನ್ನು ಮನಗಂಡು ಜನವು ಮಳೆಕೊಡು ಎಂದು ಭಕ್ತಿಯಿಂದ ಕೇಳಿಕೊಂಡಿದೆ.
೪. ಈ ಶಿವಶರಣನು ಜನರ ಗೋಳನ್ನು ಕೇಳಲಾರದೆ ತಾನು ಹೊತ್ತ ಕರೆಗಂಬಳಿಯನ್ನು ಬೀಸಲು ಮೋಡಿಲ್ಲದ ಮುಗಿಲು ಕೂಡಲೇ ಬಿರುಮಳೆಯನ್ನು ಸುರುವ ಹತ್ತಲು, ಹಳ್ಳಕೊಳ್ಳಗಳು ತುಂಬಿ ನಾಡೆಲ್ಲ ಬೆಳಸಾಯಿತು ಎಂದು ಹಾಡಿನಲ್ಲಿ ಬಂದಿದೆ.

ಇಂದು 'ಗುರ್ಜಿ'ಯನ್ನು ಆಚರಿಸುವ ರೀತಿಯನ್ನು ನೋಡಿದರೆ, ಅದರಿಂದ ಆ ಪುಣ್ಯ ಪುರುಷನ ಚಿತ್ರವನ್ನು ಸಹಜವಾಗಿ ಕಲ್ಪಿಸಬಹುದು. ಗುರ್ಜಿಗೆ ನೆತ್ತಿಯ ಮೇಲೆ ಕರಕಿಯ ಪತ್ರಿಯನ್ನು ಚುಚ್ಚುತ್ತಾರೆ. ಈ ಪತ್ರಿಯು ಆ ಪುಣ್ಯ ಪುರುಷನ ಪೂಜ್ಯತೆಯನ್ನು ತೋರಿಸುವುದು. ಲಿಂಗದಾಕ್ರತಿಯ ಗುರ್ಜಿಯು, ಆ ಪುಣ್ಯ ಪುರುಷನು ವೀರಶೈವನಿದ್ದಿರಬಹುದೆಂದು ಸೂಚಿಸುವುದು. ಇದೇ ಆಕಾರದ ಇನ್ನೊಂದು ಪೂಜೆಗೊಳ್ಳುವ ಮೂರ್ತಿಯನ್ನು ಉತ್ತರ ಕರ್ನಾಟಕದ ಎಲ್ಲ ಒಕ್ಕಲಿಗರ ಸುಗ್ಗಿಯ ಕಣದಲ್ಲಿ ನೋಡಬಹುದು. ಅದಕ್ಕೆ ನೆತ್ತಿಯಲ್ಲಿ ಕರಕಿಯ ಪತ್ರಿಯು ಇರದೆ ಜುಟ್ಟಗಳಿರುವುವು. ಜುಟ್ಟಗಳು ಜ್ಞಾನಭಂಡಾರದ ಗುರುತನ್ನು ತೋರಿಸುವುವು. ಇದೇ ಆ 'ಸುಗ್ಗಿಯಲಿಂಗಯ್ಯ,' 'ಬುದ್ಧಿವಂತಲಿಂಗ' ಅಥವಾ ಈಗ ಕಣದಲ್ಲಿ ರೂಢಿಯಲ್ಲಿರುವ ಬೂದು.[೭] ದುಬ್ಬು ಹಾಕಿದ ಕಜ್ಜಾಯ ಬೇಯಿಸುವ ಕೊಪ್ಪರಿಗೆಯು (ಹಂಚು)

---

೬. ಹಲವೆಡೆಯಲ್ಲಿ ಈ ಹಾಡಿನ ಒಂದೆರಡು ಅರ್ಧಮರ್ಧ ಬೇರೆ ರೂಪಾಂತರಗಳು ಕಂಡರೂ ಮೇಲೆ ಕೊಟ್ಟ ಹಾಡು ಪರಿಪೂರ್ಣವಿದ್ದುದರಿಂದ ಇಲ್ಲಿ ಎತ್ತಿಕೊಳ್ಳಲಾಗಿದೆ.
೭. 'ಐತಿಹಾಸಿಕ ಪ್ರಸಂಗಗಳು' ಭಾಗ – ೨ 'ಸುಗ್ಗಿಯ ಸಂಪ್ರದಾಯಗಳು' ನೋಡಿರಿ–

ಆ ಪುಣ್ಯಪುರುಷನು ತನ್ನ ಶಿವಪೂಜೆಯ ಕಾಲದಲ್ಲಿ ಹಾಸಿಕೊಳ್ಳುವ ಕರೆಗಂಬಳಿಯ ಗದ್ದಿಗೆಯನ್ನು ಸೂಚಿಸುವುದು ಅಥವಾ ಅವನು ಉಳಿದ ವೇಳೆಯಲ್ಲಿ ಹೊರುವ ಕರೆಗಂಬಳಿಯನ್ನೂ ಸೂಚಿಸದಿರದು. ಲಂಗೂಟಿ ಹಾಕಿ ಬತ್ತಲೆಯಾಗಿ ಗುರ್ಚಿಯನ್ನು ಹೊರುವ ಹುಡುಗರು ಕೋಪಣಧರಿಸುವ ವಿರಕ್ತ ಮೂರ್ತಿಯನ್ನು ಕಣ್ಮುಂದೆ ಚಿತ್ರಿಸದಿರುವು. ಏಳು ಅಥವಾ ಎಂಟು ವರುಷದ ಹುಡುಗರೇ ಈ ಗುರ್ಚಿಯನ್ನು ಹೊರುವುದರಿಂದ ಆ ಮುಗ್ಧ ಮಕ್ಕಳು ಆ ಪುಣ್ಯ ಪುರುಷನ ಪಾವನವಾದ ಮುಗ್ಧಭಕ್ತಿಯನ್ನು ಸೂಚಿಸುತ್ತವೆ. ಇದರ ಮೇಲಿಂದ ಆ 'ಕರೆಗಂಬಳಿಯ' ಗುರುಸಿದ್ಧನು ಮಹಾಮುಗ್ಧ ವಿರಕ್ತನಿದ್ದನೆಂದೂ ಅವನಿಗೆ ನಿಸರ್ಗವೇ ಅಧೀನವಾಗಿತ್ತೆಂದೂ, ಕೋಪಣಧಾರನಾಗಿ ಯಾವಾಗಲೂ ಕರೆಗಂಬಳಿಯನ್ನು ಹೊರುತ್ತಿದ್ದನೆಂದೂ ಆ ಪಾವನ ಮೂರ್ತಿಯ ಚಿತ್ರವನ್ನು ಸಾಧಾರವಾಗಿ ಚಿತ್ರಿಸಬಹುದು. ಹಳ್ಳಿಗಳಲ್ಲಿ ಈಗಲೂ ಜನರು 'ಗುರುಸಿದ್ಧ'ನೆಂದು ಹೆಸರಿಡುತ್ತಾರೆ. ಒಮ್ಮೊಮ್ಮೆ ಬಳಕೆಯಲ್ಲಿ ಮಾತಾಡುವಾಗ ಹಳ್ಳಿಗರು ಈ ಹೆಸರನ್ನು ಕೆಡಿಸಿ 'ಗುರ್ಸ್ಯಾ' ಎಂದೂ ಕರೆಯುವರು. ಪ್ರಸಂಗ ಬಂದಾಗ ಪ್ರೇಮದಿಂದ ಅಣುಕಿಸಿ ಈ ಹೆಸರನ್ನು 'ಗುರ್ಚಿ'ಯೆಂದೂ ಕರೆಯುತ್ತಾರೆ. ಹಾಗೆಯೇ ಈ 'ಗುರುಸಿದ್ಧ,' ಪುಣ್ಯಪುರುಷನ ಹೆಸರನ್ನು ಅವನ ಮುಗ್ಧ ಪಾವನತೆಗೆ ಜನಪದವೇ ಶರಣು ಹೋಗಿ ಅತಿಭಕ್ತಿಯಿಂದ 'ಗುರ್ಚಿ' ಎಂದು ಕರೆದು ಆ ವಿರಕ್ತನ ಸ್ಮಾರಕವನ್ನು ಮಾಡುತ್ತ ಬಂದಿರಬೇಕು. ಮಳೆ ಹೋದಾಗ ಜನರು ಅವನನ್ನು ಪೂಜಿಸಲು ಗುರ್ಚಿಯನ್ನು ಮಾಡಿ (ಲಿಂಗದಾಕೃತಿ ಮಾಡಿ) ಮಳೆಬೆಳೆಗಳ ಶಕುನವನ್ನು ಕೇಳ ಹತ್ತಿದರಲ್ಲದೆ ಅದನ್ನು ಹೊತ್ತುಕೊಂಡು 'ಮಳೆಕೊಡು' ಎಂದು ಮನೆ ಮನೆಗೆ ಅಡ್ಡಾಡಿ ಊರೂರ ತಿರಗಹತ್ತಿದರು. ಬರಗಾಲದಲ್ಲಿ ಮಳೆತಂದ ಈ ಪುಣ್ಯಪುರಷನನ್ನು ಜನಪದವು ಹೇಗೆ ಮರೆಯಬೇಕು? ಅಂತೆಯೇ ಇಂದು 'ಗುರ್ಚಿ'ಯು ಸಂಪ್ರದಾಯವಾಗಿ ಬಂದಿದೆ.

ಇನ್ನು, ಈ ವಿರಕ್ತ ಪುರುಷನು ನಿಜವಾದ ಐತಿಹಾಸಿಕ ಪುರಷನಿರಬಹುದೇ? ಇವನ ಕಾಲದಲ್ಲಿ ದೊಡ್ಡ ಬರಗಾಲವು ಕರ್ನಾಟಕದಲ್ಲಿ ಬಿದ್ದಿರಬಹುದೇ? ಎಂಬ ಸಂಗತಿಗಳನ್ನು ಈ ಸಂದರ್ಭದಲ್ಲಿ ತಿಳಿದುಕೊಳ್ಳುವುದು ಬಹಳ ಮಹತ್ವವಾದುದು.

ವೀರಶೈವ ಶಿವಾಚಾರದ ಹಾಡುಗಬ್ಬಗಳನ್ನು ಹಾಡಿದ ಮುಪ್ಪಿನ ಷಡಕ್ಷರಿಯು ಆಧ್ಯಾತ್ಮೋನ್ನತಿಯ ಮೇಲ್ಪಟ್ಟದಲ್ಲಿ ಒಬ್ಬ ಶ್ರೇಷ್ಠ ವಿರಕ್ತ ಕವಿಯು. ಈ ಕವಿಯು ತನ್ನ ಹಾಡಿನಲ್ಲಿ 'ಎರಗಂಬಳಿಯ ಸಿದ್ಧವರ ಲಿಂಗನಾಮದಿಂ' ತನಗೆ ದೀಕ್ಷೆಯಾಯಿತೆಂದು ಗುರುಕುಲವನ್ನು ಹೇಳಿದ್ದಾನೆ.

ಸಕಲಕೆಲ್ಲಕೆ ನೀನೆ,
ಅಕಳಂಕ ಗುರುವೆಂದು
ನಿಖಿಳ ಶಾಸ್ತ್ರವು ಪೇಳುತಿರಲರಿದೆನು ॥ಪ॥

ಎರಗಂಬಳಿಯ ಸಿದ್ಧ
ವರಲಿಂಗ ನಾಮದಿಂ
ಹರನೆ! ನೀನೆನಗೆ ದೀಕ್ಷೆಯ ಮಾಡಿದೆ ॥
ವರಷಡಕ್ಷರಿಯ ದೇ–
ವರ ನಾಮದಿಂದೆನಗೆ
ಅರುಹಿದಿರಿ ಶಿವಶಾಸ್ತ್ರದನುಭವವನು ॥

ಇದರ ಮೇಲಿಂದ "ಎರೆಗಂಬಳಿ ಮಠವು' ಮುಪ್ಪಿನ ಷಡಕ್ಷರಿಗೆ ಗುರುಕುಲವೆಂದು ವಿಶದವಾಗುವುದು. ಆ ಮಠದ 'ಸಿದ್ಧವರಲಿಂಗ' (ಗುರುಸಿದ್ಧಲಿಂಗ)ನ ಹೆಸರನ್ನು 'ಶಿವನೇ ನೀನೆನಗೆ ತಿಳಿಸಲು (ಜ್ಞಾಪಿಗೆ ತರಲು) ಅಥವಾ ಉಪದೇಶಿಸಲು ದೀಕ್ಷೆಯಾದಂತಾಯಿತು, ಎಂದು ಕವಿಯು ಹೇಳಿಕೊಂಡಿದ್ದಾನೆ. ಈ 'ಎರಗಂಬಳಿ ಮಠದ ಗುರುಸಿದ್ಧಲಿಂಗನು ಮುಪ್ಪಿನ ಷಡಕ್ಷರಿಯಕಿಂತಲೂ ಎಷ್ಟೋ ವರುಷ ಮುಂಚಿನವರೆಂದು ಮೇಲಿನ ಹಾಡಿನಿಂದ ಸ್ಪಷ್ಟವಾಗುವುದು. ಅಥವಾ ಈ 'ಗುರುಸಿದ್ಧನೇ' ಎರಗಂಬಳಿಮಠದ ಮೂಲ ಗುರುವಾಗಿದ್ದರೂ ಇರಬಹುದು. ಅಂದರೆ ಮುಪ್ಪಿನ ಷಡಕ್ಷರಿಯಗಿಂತ ಇವನು ನೂರಾರು ವರುಷಗಳ ಹಿಂದೆ ಇದ್ದಿರಬಹುದು. ಮುಪ್ಪಿನ ಷಡಕ್ಷರಿಯು ನಿಜಗುಣಶಿವಯೋಗಿಗಳ ಸಮಕಾಲಿಗನೆಂದು ಕೆಲವು ಪಂಡಿತರು ಅಭಿಪ್ರಾಯಪಡುತ್ತಾರೆ. ಕವಿಚರಿತೆಕಾರರು ನಿಜಗುಣಶಿವಯೋಗಿಗಳ ಕಾಲವು ಸುಮಾರು ಕ್ರಿ.ಶ. ೧೫೦೦ ಎಂದು ನಿಶ್ಚಯಿಸಿದ್ದಾರೆ. ಶ್ರೀ ಇ.ಪಿ. ರೈಸ್‌ಅವರು ೧೭ನೆಯ ಶತಮಾನವೆಂದು ಹೇಳುತ್ತಾರೆ. ಆದರೆ ಪುರಂದರದಾಸ, ಕನಕದಾಸರ ಹಾಡುಗಳಲ್ಲಿ ನಿಜಗುಣ ಶಿವಯೋಗಿಗಳ ಆಧ್ಯಾತ್ಮ ಪದಗಳ ಛಾಯೆಯು ಕಂಡುಬರುವುದರಿಂದ ನಿಜಗುಣ ಶಿವಯೋಗಿಗಳು ೧೬ನೆಯ ಶತಮಾನದ ಆರಂಭದಲ್ಲಿ ಆಗಿ ಹೋದರೆಂದು ಹೇಳಬಹುದು. ಇದರ ಮೇಲಿಂದ ಮುಪ್ಪಿನ ಷಡಕ್ಷರಿಯು ಹೊಗಳಿದ ಗುರುಕುಲದ 'ಎರಗಂಬಳಿಸಿದ್ಧನು' ಸುಮಾರು ಕ್ರಿ.ಶ. ೧೪ನೆಯ ಶತಮಾನದಲ್ಲಿದ್ದಿರಬಹುದು. ಅಲ್ಲದೆ, ಈ ಎರಗಂಬಳಿ 'ಗುರುಸಿದ್ಧ'ನ ಹೆಸರು ಶಿವಶರಣರ ಮಾಲೆಯಲ್ಲಿ ಬರುವುದಿಲ್ಲ. ನೂರೊಂದು ವಿರಕ್ತರ ಮಾಲೆಯಲ್ಲಿಯೂ ಇಲ್ಲ. ಆದುದರಿಂದ ಈ ಮಹಾಪುರುಷನು ಶಿವಶರಣರ ಮತ್ತು ನೂರೊಂದು ವಿರಕ್ತರ ನಡುವಿನ ಕಾಲದಲ್ಲಿ ಆಗಿ ಹೋಗಿರಬಹುದು. ಅಲ್ಲದೆ ಜನಪದದಲ್ಲಿಯ 'ಗುರ್ಚಿ'ಯ ಹಾಡಿನಲ್ಲಿ ಅವನ ಕಾಲದಲ್ಲಿಯ ಒಂದು ದೊಡ್ಡ ಬರಗಾಲದ ಸೂಚನೆಯಿದೆ. ಈ ಬರಗಾಲವು ಕ್ರಿ.ಶ. ೧೩೯೬ರಲ್ಲಿ ಪ್ರಾರಂಭವಾಯಿತೆಂದು ಇತಿಹಾಸದಿಂದ ತಿಳಿದುಬರುವುದು. ಅಂದರೆ ಈ ಗುರುಸಿದ್ಧಲಿಂಗಯತಿಯು ಕ್ರಿ.ಶ. ೧೪ನೆಯ ಶತಮಾನದ ತುತ್ತತುದಿಯ ಭಾಗದಲ್ಲಿ ಆಗಿಹೋಗಿರಬಹುದು.

ವೀರಶೈವರಲ್ಲಿ ಕಂಬಳಿಯ ಮಠ, ಎರಗಂಬಳಿ ಮಠ ಎಂಬ ಹೆಸರಿನ ಮಠಗಳೂ ಆಗಿ ಹೋಗಿವೆ; ಈಗಲೂ ಅವೆ. ಮೇಲೆ ಹೇಳಿದ ಈ ಐತಿಹಾಸಿಕ ಎರಗಂಬಳಿಯ ಸಿದ್ಧಲಿಂಗನೇ 'ಗುರ್ಚಿ'ಯ ಸಂಪ್ರದಾಯದ 'ಕರೆಗಂಬಳಿಯ ಗುರುಸಿದ್ಧ'ನಿರಬೇಕು. ಈ ಸಿದ್ಧಲಿಂಗ ವಿರಕ್ತನು ಮಠದ ಗುರುವು ಆದುದರಿಂದ, ಜನಪದವು ಅವನಿಗೆ ಕೇವಲ 'ಸಿದ್ಧಲಿಂಗ' ಎಂಬ ಒಂಟಿ ಹೆಸರನ್ನು ಕರೆಯದೆ, 'ಗುರು' ಎಂಬ 'ಭಕ್ತಿ

ವಾಚಕ' ಉಪಪದವನ್ನು ಹಚ್ಚಿ, 'ಗುರುಸಿದ್ಧಲಿಂಗ' ಎಂದು ಕರೆದಿರಬೇಕು. ಮುಂದೆ ಕಾಲಾಂತರದಿಂದ ಈ ಹೆಸರು 'ಗುರುಸಿದ್ಧ'ವೆಂದಾಗಿ ಕಡೆಗೆ 'ಗುರ್ಚಿ'ಯಾಗಿರಬಹುದು. ಕನ್ನಡದಲ್ಲಿ 'ಕರೆ' ಇದರರ್ಥವು 'ಕಪ್ಪು' ಎಂದಾಗುವುದು; 'ಎರೆ' ಇದರರ್ಥವಾದರೂ 'ಕಪ್ಪು' ಎಂದಾಗುವುದು. ಕಪ್ಪು ಭೂಮಿಗೆ 'ಎರೆಭೂಮಿ'ಯೆಂದು ಈಗಲೂ ವಾಡಿಕೆಯಲ್ಲದೆ. ಆದುದರಿಂದ ಈ 'ಎರಗಂಬಳಿ ಗುರುಸಿದ್ಧ'ನನ್ನೇ ಜನಪದವು 'ಕರೆಗಂಬಳಿ ಗುರುಸಿದ್ಧ'ನೆಂದು ಕರೆದಿರಬೇಕು.

ಆಯ್ಯಾಗ್ರನ್ನಹೆಂಡತಿ, ಗಂಡುಹಡೆದಾಳೊ
ನೆತ್ತಿಗೆ ಎರಿಯಾಕ ನೀರಿಲ್ಲ ನೀರಿಲ್ಲ
ಕರೆಗಂಬಳಿಯ ಗುರುಸಿದ್ಧ ಗುರುಸಿದ್ಧ
ಕಂಬಳಿ ಬೀಸೊ ಸುರಿಮಳೆಯೋ ಸುರಿಮಳೆಯೋ

ಎಂದು ಹಾಡಿನಲ್ಲಿ ಬರುವ ಈ ನುಡಿಗಳು ನೀರಿಲ್ಲದ ಒಂದು ಕಾಲವನ್ನು ಸೂಚಿಸುತ್ತವೆ. ಈ ನೀರಿಲ್ಲದ ಕಾಲವು ಕರ್ನಾಟಕದಲ್ಲಿ ಯಾವುದಿರಬಹುದು?

ಕ್ರಿ.ಶ. ಪೂ. ೨೦ ವರುಷಗಳ ಹಿಂದೆ ಉತ್ತರ ಹಿಂದುಸ್ತಾನದಲ್ಲಿ ಭೀಕರವಾದ ಹನ್ನೆರಡು ವರುಷದ ಬರವು ಬೀಳಲು ಜೈನಧರ್ಮದ ಗುರುವಾದ 'ಭದ್ರಬಾಹು' ತನ್ನ ಶಿಷ್ಯರೊಡಗೂಡಿ ಮಳೆ ಬೆಳೆ ಸಮೃದ್ಧವಾದ ಕರ್ನಾಟಕದ ಬೆಳಗುಳಕ್ಕೆ ಬಂದನೆಂದು ಇತಿಹಾಸವು ಹೇಳುತ್ತದೆ. ದ್ರಾವಿಡರು ದಕ್ಷಿಣ ತಪ್ಪಲು ಭೂಮಿ (ದಂಡಕಾರಣ್ಯದ ಕೊಳ್ಳ)ಯನ್ನು ಸಾಗುವಳಿ ಮಾಡಿದಾಗಿನಿಂದ ಕ್ರಿ.ಶ. ಹದಿನಾಲ್ಕನೆಯ ಶತಮಾನದವರೆಗೆ ಕರ್ನಾಟಕದಲ್ಲಿ ಬರವೆಂಬುದೇ ಗೊತ್ತಿದ್ದಿಲ್ಲವೆನ್ನಬಹುದು. ಸಾಗುಮಾಡಿದ ಫಲವತ್ತಾದ ಗಂಗಾ ಯಮುನಾನದಿಗಳ ಪ್ರದೇಶವನ್ನು ಆರ್ಯರಿಗೆ ಬಿಟ್ಟುಗೊಟ್ಟು ದಕ್ಷಿಣಕ್ಕೆ ಬಂದ ದ್ರಾವಿಡರು ತಮಗೆ ಬರಬಿತ್ತೆಂದು ಉತ್ತರಕ್ಕೆ ಹೋದದ್ದು ಎಲ್ಲಿಯೂ ಉಲ್ಲೇಖವಿಲ್ಲ. ಚಾಲುಕ್ಯ, ಕದಂಬ, ರಾಷ್ಟ್ರಕೂಟ ಮೊದಲಾದ ಕನ್ನಡ ಅರಸರ ಅರಸೊತ್ತಿಗೆಯಲ್ಲಿ ಮಳೆಬೆಳೆ ಸಮೃದ್ಧ ಕರ್ನಾಟಕವಿತ್ತೆಂದು ಪರದೇಶದವರೂ ಬರೆದಿಟ್ಟಿದ್ದಾರೆ. ಪಂಪಮೊದಲಾದ ಮಹಾಕವಿಗಳು ಕರ್ನಾಟಕ ಮಳೆಬೆಳೆ, ಸಮೃದ್ಧಿ-ಸಂಪತ್ತನ್ನು ಹಾಡಿದ್ದಾರೆ. ಬಸವಾದಿ ಪ್ರಮಥರ ಕಾಲದಲ್ಲಿ ಎಲ್ಲಿಯೂ ಬರಗಾಲದ ಸುಳುವೇ ಇಲ್ಲ. ಅಲ್ಲದೆ ಕರ್ನಾಟಕದ ಬೈಲುಪ್ರದೇಶಗಳ ಮಳೆಬೆಳೆಗಳ ಸಮೃದ್ಧಿಯನ್ನು ಕಂಡು ಕೇಳಿ ಮುಸಲ್ಮಾನ ಶಾಹಿಗಳು ಕರ್ನಾಟಕದ ಬೈಲುಗಳಲ್ಲಿಯೇ ತಮ್ಮ ರಾಜ್ಯಗಳನ್ನು ಕಟ್ಟಿದ್ದಾರೆ. ಇಂತಹ ಸಮೃದ್ಧಿಯಾದ ಕನ್ನಡ ನಾಡಿಗೆ ಪುಣ್ಯ ಪುರುಷರ ಬಲವು ತೀರಿತೋ ಅಥವಾ ದುರ್ದೈವವೋ ಏನೋ ಅನ್ನುವಂತೆ ಕ್ರಿ.ಶ. ೧೪ನೆಯ ಶತಮಾನದಲ್ಲಿ ಒಮ್ಮೆ ಭೀಕರ ಬರವು ಬಂತು. ಈ ಬರವೇ ಇತಿಹಾಸ ಪ್ರಸಿದ್ಧವಾದ 'ದುರ್ಗಾದೇವಿ' ಎಂಬ ಬರವು. ಈ ಬರವು ಕ್ರಿ.ಶ. ೧೩೯೬ನೆಯ ವರುಷ ಆರಂಭವಾಗಿ ಹನ್ನೆರಡು ವರುಷಗಳವರೆಗೆ ಒಂದೇ ಸವನೆ ಭೀಕರವಾಗಿ ದಕ್ಷಿಣ ದೇಶಗಳಲ್ಲೆಲ್ಲ ಹಬ್ಬಿತೆಂದು ಐತಿಹ್ಯವಿದೆ.

ದ್ರಾವಿಡರು ದಕ್ಷಿಣ ತಪ್ಪಲಭೂಮಿ (ದಂಡಕಾರಣ್ಯ)ಯನ್ನು ಕಡಿದು ಸಾಗು ಮಾಡಿದ ಮೇಲೆ ಈ ಫಲವತ್ತಾದ ಕೊಳ್ಳವು ಸಂಪತ್ತು ತುಂಬಿ ರಾಜ್ಯ ವೈಭವದಿಂದ ಮೆರೆಯುತ್ತ ಬಂತು. ಬರಬರುತ್ತ ಒಕ್ಕಲಾದ ನಿವಾಸಿಗಳು ಪ್ರಪಂಚದ ಉಪಯೋಗಕ್ಕೆ ಈ ತಪ್ಪಲ ಭೂಮಿಯನ್ನು ಕಡಿಯಲು ಪೂರ್ಣಬಯಲಾಯಿತು. ಹೇಗೆ ಈ ಭಾಗವು ಬಯಲಾಗಹತ್ತಿತೋ ಹಾಗೆ ಮಳೆಯು ಕಡಿಮೆಯಾಗಿ ಬರಬರುತ್ತ ಮಳೆಯ ನಿಯಮಿತ ತನವೇ ತಪ್ಪ ಹತ್ತಿತು. ಹೀಗಾಗಿ ಕ್ರಿ.ಶ. ೧೩೯೬ರಲ್ಲಿ ಭೀರಕ ಬರಗಾಲದ ದವಡೆಯಲ್ಲಿ ದೇಶವು ಬೀಳಬೇಕಾಯಿತು. ಈ ಬರಗಾಲ ಬಿದ್ದ ಕಾಲವೂ ಮತ್ತು 'ಕರೆಗಂಬಳಿ ಗುರುಸಿದ್ಧ' ನಿದ್ದ ಕಾಲವೂ ಸರಿಹೋಗುತ್ತವೆ. ಆದುದರಿಂದ ಈ ವಿರಕ್ತನು ಕರ್ನಾಟಕದಲ್ಲಿ ಮೊದಲನೆಯ ಭೀಕರ ಬರಗಾಲದಲ್ಲಿ ಇದ್ದನು. ಇಂದು ಮಳೆಬರಬಹುದು, ನಾಳೆ ಮಳೆ ಬರಬಹುದು ಎಂದು ಜನರು ದಾರಿ ನೋಡಿ ನೋಡಿ, ನಿರಾಶ್ರಿತರಾಗಿ ಬರಗಾಲ ಭೀಕರತೆಯಲ್ಲಿ ಈ ವಿರಕ್ತನಿಗೆ ಭವಿಷ್ಯ ಕೇಳಿರಬಹುದು. ಲೀಲಾ ಮೂರ್ತಿಯಾದ ಈ 'ಗುರುಸಿದ್ಧಲಿಂಗ' ವಿರಕ್ತನು ಜನರ ಗೋಳನ್ನು ಕೇಳದೆ ಕರೆಕಂಬಳಿಯನ್ನು ಬೀಸಲು ಅವನ ಆಜ್ಞೆಗೆ ನಿಸರ್ಗವು ತಲೆಬಾಗಿ ಒಂದೇ ಸವನೆ ಮೋಡಿಲ್ಲದ ಮಳೆ ಸುರಿಸಿತು. ಕ್ಷಾಮವು ಕಣ್ಮರೆಯಾಗಿ ದೇಶದ ತುಂಬೆಲ್ಲ ಸುಭಿಕ್ಷೆಯು ತೋರಲು ಜನರು ಭಕ್ತಿಯಿಂದ ಈ ವಿರಕ್ತನನ್ನು ಹಾಡಿ ಕೊಂಡಾಡಿದರು. ಅವನ ಮರಣದ ನಂತರ ಮಳೆಯಾಗದಿರಲು, ಲಿಂಗದಾಕೃತಿಯನ್ನು ಮಾಡಿ ಅದರ ನೆತ್ತಿಯಲ್ಲಿ ಕರಕಿಯ ಪತ್ರಿಯನ್ನಿಟ್ಟು, ಗುರುಸಿದ್ಧಲಿಂಗವೆಂದು ಅವನ ಸ್ಮಾರಕವನ್ನು ಮಾಡಹತ್ತಿದರು. ಮುಂದೆ ಈ ಸ್ಮಾರಕವು ಸಂಪ್ರದಾಯವಾಗಿ ಜನಪದದಲ್ಲಿ ಬಂದಿರಬಹುದು. ಈಗಲೂ ಮಳೆಯಾಗದಿರಲು ಜನರು ಈ ಸಂಪ್ರದಾಯವನ್ನು ಭಕ್ತಿಯಿಂದ ಆಚರಿಸುತ್ತಾರೆ. (ಉತ್ತರ ಕರ್ನಾಟಕದಲ್ಲಿ ಮಳೆಬೆಳೆಗಳನ್ನು ಹೇಳುವ ಹಲಕೆಲವು ಮಠಗಳುಂಟು. ಮಳೆ ಹೋದರೆ ಜನರು ಈ ಮಠಗಳಿಗೆ ನಡೆದು ಕೊಳ್ಳುತ್ತಾರೆ. ಈ ಮಠಗಳ ಸ್ವಾಮಿಗಳು ಮಳೆಯನ್ನು ತರುವೆವೆಂದು ಕರೆಗಂಬಳಿಯ ಕುಂಚಿಗೆ ಹೊತ್ತು ಆವಿಗೆ ಮೆಟ್ಟಿ, ಕೈಯಲ್ಲಿ ಬೆತ್ತವನ್ನು ಹಿಡಿದು, ಕಣಿ, ದಿಮ್ಮ ಮೊದಲಾದ ವಾದ್ಯಗಳನ್ನು ನುಡಿಸುತ್ತ ಮಳೆಯ ಭವಿಷ್ಯವನ್ನು ಜನಪದದಲ್ಲಿ ಸಾರುವುದನ್ನು ನೋಡಿ ಮನಗಾಣಬಹುದು. ಬಬಲಾದಿ ಹಾಗೂ ಕೊಡೆಕಲ್ಲ ಮಠದಸ್ವಾಮಿಗಳು ಈಗಲೂ ಈ ರೀತಿಯಲ್ಲಿ ಮಳೆಬೆಳೆಗಳನ್ನು ಸಾರುತ್ತಾರೆ. ಕರೆಕಂಬಳಿ ಗುರುಸಿದ್ಧನಿಂದಲೇ ಈ ಸ್ವಾಮಿಗಳು ಕರೆಕಂಬಳಿಯನ್ನು ಹೊರುತ್ತಿರಬಹುದೇ?)

ಈ ಬರಗಾಲ ಬಿದ್ದಾಗ ವಿಜಯನಗರ ರಾಜ್ಯವನ್ನು ಇಮ್ಮಡಿ ಹರಿಹರ ದೇವನು ಆಳುತ್ತಿದ್ದನು. ಅವನು ಈ ಭೀಕರ ಬರಗಾಲದಲ್ಲಿಯೇ ತುಂಗಭದ್ರಾ ನದಿಗೆ ಒಡ್ಡು ಹಾಕಿಸಿ ಕಾಲುವೆ ಕಟ್ಟಿಸಿ ಜನರಿಗೆ ನೀರಿನ ಅನುಕೂಲತೆಯನ್ನು ಮಾಡಿಕೊಟ್ಟನೆಂದು ಇತಿಹಾಸಹೇಳುವುದು. ಇದೇ ಕನ್ನಡ ಅರಸರು ಕೈಕೊಂಡ ಮೊದಲನೆಯ ನೀರಾವರಿಯ ಯೋಜನೆಯೆಂದು ಹೇಳಬಹುದು. ಮುಂದೆ ಬರಗಾಲಗಳು ಮೇಲಿಂದ ಮೇಲೆ ಕರ್ನಾಟಕದಲ್ಲಿ ಬೀಳಹತ್ತಿದುವು. ಅಂದಿನಿಂದಲೂ ಗುರ್ಚಿಯ ಸಂಪ್ರದಾಯವನ್ನು ಜನರು ಆಚರಿಸುತ್ತ ಬಂದಿದ್ದಾರೆ.

ಬನ್ನಿಯ ಹಬ್ಬ

ಇದೊಂದು ಭರತಖಂಡದ ಎಲ್ಲ ಭಾಗಗಳಲ್ಲಿಯೂ ಕಂಡುಬರುವ ಸಂಪ್ರದಾಯ. ಗುಡಿಸಲವೂ, ಅರಮನೆಯೂ ಉತ್ಸಾಹದಿಂದ ಮಾಡುವ ಹಬ್ಬ. ಕನ್ನಡಿಗರು ಇದಕ್ಕೆ ಬನ್ನಿಯ ಹಬ್ಬವೆಂದು ಕರೆದಿದ್ದಾರೆ. ಭರತಖಂಡದ ಉಳಿದ ಎಲ್ಲ ಭಾಗಗಳಲ್ಲಿ ಇದು 'ವಿಜಯದಶಮಿ' ಎಂದು ಹೆಸರುವಾಸಿಯಾಗಿದೆ. ಬೆಳಸುತುಂಬಿದ ಭೂಸಿರಿಯು ಕಾಡನ್ನು ಬಿಟ್ಟು ಕೆಲವೇ ದಿನಗಳಲ್ಲಿ ನಾಡನ್ನು ಸೇರುವದೆಂದು ಸೂಚಿಸುವ ಶುಭದಿನವಿದು. ಈ ಹಬ್ಬದಲ್ಲಿ ಮನೆಯಲ್ಲಿ ಪೂಜೆಯಾಗುವುದು ತುಂಬಿದ ಬೆಳಕು. ಒಕ್ಕಲಿಗನು ತನ್ನ ಸಂಪತ್ತು ಹೆಚ್ಚಾಗುವುದೆಂದು ಆನಂದಭರಿತನಾಗುತ್ತಾನೆ. ಒಕ್ಕಲುತನದ ಸಾಮಗ್ರಿಗಳನ್ನೆಲ್ಲ ಭಕ್ತಿಯಿಂದ ಪೂಜೆ ಮಾಡಿ ತುಂಬಿದ ಭೂಬೆಳಸನ್ನು ತಂದು ಪೂಜೆಗೆ ಏರಿಸಿ ಕೈಮುಗಿಯುತ್ತಾನೆ. ಮುಂಬರುವ ಹೊಸಬೆಳಸು ವ್ಯಾಪಾರಕ್ಕೆ ನವಚೇತನ ತರಲೆಂದು ವ್ಯಾಪಾರಿಯು ತನ್ನ ತೂಕಮಾಪುಗಳನ್ನು ಐಶ್ವರ್ಯದಿಂದ ಪೂಜೆ ಮಾಡಿ ಹೊಸ ಬೆಳಸನ್ನು ಏರಿಸುತ್ತಾನೆ; ಆನಂದದಿಂದ ಸರಕುಗಳ ಸಾರಿಗೆ ಸಾಗಿಸಲು ಸಜ್ಜಾಗುತ್ತಾನೆ. ಈ ಸಂಪತ್ತನ್ನು ನೋಡಿ ರಾಜ್ಯಶ್ರೀಯು ಬಲಗೊಳ್ಳುವಳು. ರಾಜನು ದಿಗ್ವಿಜಯದ ಸಜ್ಜುನಡೆಸುವನು. ಇಷ್ಟು ಪರಿಣಾಮಕಾರಿಯಾಗಿದೆ ದೇಶದಲ್ಲಿ ಈ ಸಂಪ್ರದಾಯವು! ಅರಸರು ಮಾಡುವ ಈ ಪೂಜೆಗೆ ಖಂಡೆಯ ಪೂಜೆಯನ್ನುತ್ತಾರೆ. ಇದನ್ನು ಆಶ್ವಿನಶುದ್ಧ ನವಮಿಯ ದಿನ ಆಚರಿಸುವರು. ಆಗ ದೇವರು ಮುಂದೆ ಸಸಿ ಬೆಳೆಯಿಸುವುದರಿಂದ ಇದು ಒಂದು ಮಣ್ಣು ಪೂಜೆಯೆಂದೂ ಕೆಲವರು ತಿಳಿದುಕೊಳ್ಳುತ್ತಾರೆ. ಶಾತವಾಹನರಲ್ಲಿ ಭೂದೇವಿಯ ಪೂಜೆಯಿದ್ದಿತು. ಭೂಮಿತಾಯಿಯ ಮೂರ್ತಿಗಳು ಭೂಸಂಶೋಧನದಲ್ಲಿ ದೊರೆತಿವೆ. ಆ ಮೂರ್ತಿಯ ಕೈಯಲ್ಲಿ ಬತ್ತದ ಸೂಡು ಇರುತ್ತದೆ. ಬಹುತರವಾಗಿ ಶಾತವಾಹನರು ಈ ಭೂತಾಯಿಯನ್ನು ಈ ಹಬ್ಬದ ದಿನ ಪೂಜೆ ಮಾಡುತ್ತಿರಬಹುದೇ?

ಈ ಹಬ್ಬದ ಐಶ್ವರ್ಯವನ್ನು ಕಾಣಬೇಕು ರಾಜಾಂಗಣದಲ್ಲಿ. ಅರಸರು ದಿಗ್ವಿಜಯಕೈಕೊಳ್ಳಲು ಸಜ್ಜುಮಾಡುವ ಪೂಜೆಯ ಮೊದಲನೆಯ ದಿನವಿದು. ಭೇರಿಗಳು ಮೊಳಗುವುವು. ದುಂದುಭಿಗಳು ಎಲ್ಲದಿಕ್ಕುಗಳನ್ನು ತುಂಬುವುವು. ದಂಡು ಸಜ್ಜಾಗಿ ನಿಲ್ಲವುದು. ಕಾಳಗ ಸನ್ನಾಹ ಸಾಮಗ್ರಿಗಳನ್ನು ಬಯಲಿಗೆ ತಂದು ಉಜ್ಜಿ ಸಂಭ್ರಮದಿಂದ ಪೂಜೆ ನಡೆಯುವುದು. ಚತುರ್ಬಲಗಳು ಸಿಂಗಾರಾಗಿ ರಾಜಾಂಗಣದಿಂದ ಹೊರಬೀಳಲು ಸಂಜೆಗೆ ಇದು ಊರ ಉತ್ಸವವೇ ಆಗಿ ಬಿಡುವುದು. ಊರ ಜನರೇ ಕೂಡುವರು. ವೀರರು ಒರೆಗತ್ತಿಗಳನ್ನು ಹಿಡಿದುಕೊಂಡು ರಾಜ್ಯವೈಭವದಿಂದ ಮೆರವಣಿಗೆಗೆ ಹೊರಡುವರು. ಊರದೇವದೇವತೆಗಳ ಪಲ್ಲಕ್ಕಿಗಳು ಒಂದೆಡೆ ಕೂಡಿ ಊರ ಮುಂದಿನ ಸೀಮೆಯ ಬನ್ನಿಯ ದಿಬ್ಬಕ್ಕೆ ಎಲ್ಲರೂ ಸಾಗಿಬರುವರು. ಇಂತಹ ಬನ್ನಿಯ ದಿಬ್ಬಗಳು ಕನ್ನಡ ರಾಜ್ಯಗಳಲ್ಲಿದ್ದವೆಂದು ಈಗುಳಿದ ಅವುಗಳ ಸ್ಮಾರಕಗಳಿಂದ ತಿಳಿಯದಿರದು. ಹಾಳಾದ ವಿಜಯನಗರದಲ್ಲಿ ಇಂಥ 'ಬನ್ನಿಯ ದಿಬ್ಬ'ವನ್ನು ನಾವು ಈಗಲೂ ಕಾಣಬಹುದು. ಅಲ್ಲದೆ ಪ್ರತಿಯೊಂದು ಕನ್ನಡ ಹಳ್ಳಿಯಲ್ಲಿ ಬನ್ನಿಯ ಮುಡಿಯಲು ಊರ ಸೀಮೆಯಲ್ಲಿ ಬನ್ನಿಯ ಕಟ್ಟೆಗಳಿದ್ದದ್ದು ಎಲ್ಲರ ನಿದರ್ಶನಕ್ಕೆ ಬಾರದಿರದು. ಹೀಗೆ ಸಾಗಿ ಬಂದ ಮೆರವಣಿಗೆಯು ಮೋಜುಮಜಲಿನೊಂದಿಗೆ ಹಾಡಿ, ಕುಣಿದಾಡಿ ಬನ್ನಿಯ ಮುಡಿದು ಕತ್ತಲಾಗಲು ಊರ ಸೇರುವುದು. ಮುಂದೆ ಊರಿಗೆ ಊರೇ ಬನ್ನಿಯ ಮುಡಿಯುವುದು. ಈ ಹಬ್ಬಕ್ಕೆ ಬಹಳ ಬುನಾದಿಯ ಪರಂಪರೆಯುಂಟೆಂದು ಪುರಾಣಗಳಲ್ಲಿ ಬರುವುದು. ಅಜ್ಞಾತವಾಸಕ್ಕೆ ಹೋದ ಪಾಂಡವರು ಅದನ್ನು ಮುಗಿಸಿಕೊಂಡು 'ಶಮೀವೃಕ್ಷ'ದಲ್ಲಿಟ್ಟ ತಮ್ಮ ಶಸ್ತ್ರಾಸ್ತ್ರಗಳನ್ನು ಇಳುಹಿಕೊಂಡದಿನವಿದು. ಅಂತೆಯೇ ಜನರು ಈಗಲೂ ಶಸ್ತಾಸ್ತ್ರಗಳನ್ನು ಮೆರೆಸುತ್ತ ಬನ್ನಿಯ ಮುಡಿದು ಊರ ಸೇರುವರು. ವನವಾಸಕ್ಕೆ ಹೋದ ಪಾಂಡವರು ಶಸ್ತ್ರಾಸ್ತ್ರಧಾರಿಗಳಾಗಿ ಅಂದೇ ಊರನ್ನು ಸೇರಿದರೆಂದು ಒಂದು ಪೌರಾಣಿಕ ಕಥೆಯೂ ಉಂಟು. ಈ ಕಥೆಯನ್ನೇ ನಂಬಿದರೆ ವಿರಾಟರಾಜ್ಯದಲ್ಲಿದ್ದು ತಮ್ಮ ಅಜ್ಞಾತ ವಾಸವನ್ನು ಮುಗಿಸಿದ ಪಾಂಡವರು ಕನ್ನಡಿಗರಿಗೆ ಚಿರಪರಿಚಿತರು. ವಿರಾಟನಗರವು (ಹಾನಗಲ್ಲು) ಕರ್ನಾಟಕದಲ್ಲಿದೆ. ಅಲ್ಲದೆ ಹಲಕೆಲವು ಕನ್ನಡಿಗರಂತೂ ಪಾಂಡವರನ್ನು ದೇವರೆಂದು ಭಕ್ತಿಯಿಂದ ಪೂಜಿಸುತ್ತಾರೆ. ತಮ್ಮ ಮಕ್ಕಳಿಗೆ ಅವರ ಹೆಸರುಗಳನ್ನಿಟ್ಟು ಪ್ರೀತಿಯಿಂದ ಕರೆಯುತ್ತಾರೆ; ಮತ್ತು ಒಕ್ಕಲಿಗನು ಪಾಂಡವರು ಅಜ್ಞಾತವಾಸದಲ್ಲಿರುವಾಗ ಅವರನ್ನುಣಿಸಲು ತನ್ನ ರಾಶಿಬುತ್ತಿಗೆ ಬರಮಾಡಿಕೊಂಡದ್ದು ಈಗ ಸಂಪ್ರದಾಯವಾಗಿ ಸುಗ್ಗಿಯ ಕಣದಲ್ಲಿ ಕಂಡುಬರುವುದು. ಒಕ್ಕಲಿಗನು ಪಾಂಡವರನ್ನು ಸುಗ್ಗಿಯ ಕಣದ ದಂಡೆಯ ಮೇಲೆ, ಹೊಟ್ಟಿನ ಕುಟ್ಟರಿಯ ಎಡಭಾಗದಲ್ಲಿಟ್ಟು, ಪೂಜೆ ಮಾಡಿ ರಾಶಿಬುತ್ತಿಯ ಊಟವನ್ನು ಎಡೆಮಾಡುವನು. ಅವರಿಗೆ ಕಣದೊಳಗೆ ಸ್ಥಾನವಿಲ್ಲ.

ಪಾಂಡವರ ಅಜ್ಞಾತವಾಸವು ಆರಂಭವಾದದ್ದೂ ಬನ್ನಿಯ ಹಬ್ಬದ ದಿವಸ. ಅದನ್ನು ಒಕ್ಕಲಿಗನು ಕರಳು ಕರಗುವಂತೆ ಮನವು ಮಿಡುಕುವಂತೆ ಹಾಡಿದ್ದಾನೆ–

ಕಲ್ಲು ಕಡುಬ ಮಾಡಿ, ಮುಳ್ಳಸಾಂವಿಗೆ ಮಾಡಿ
ಬನ್ನಿ ಎಲಿಯಾಗ ಎಡಿಮಾಡಿ, ಪಾಂಡುವರು
ಉಂಡುಹೋಗ್ಯಾರೊ ವನವಾಸೊ ॥ –ಜಾ–ಸಂ–

ಅವರು ಕಡಬು ಮಾಡಿ ಉಂಡದ್ದುಕಲ್ಲು; ಸಾವಿಗೆ ಮಾಡಿ ಬಸಿದದ್ದು ಮುಳ್ಳು, ಎಂದು ಹಾಡಿ ಒಕ್ಕಲಿಗನು ಪಾಂಡವರಿಗೆ ಬಂದ ವನವಾಸವನ್ನು ಎರಡೇ ಶಬ್ದಗಳಲ್ಲಿ ಹೇಳಿಬಿಟ್ಟಿದ್ದಾನೆ. ಈ ಊಟವನ್ನು ಅವರುಂಡು ಹೋದದ್ದು ಬನ್ನಿಯ ಎಲೆಯಲ್ಲೆಂದು ಹೇಳುವುದರಲ್ಲಿ ಬನ್ನಿಯ ಪತ್ರಿಯ ಮಹತ್ವವು ಪಾಂಡವರ ಕಾಲದಲ್ಲಿಯೂ ಇತ್ತೆಂದು ಅನುಮಾನಬರುವುದು. ಅಲ್ಲದೆ ಪಾಂಡವರು ಈ ಬನ್ನಿಮಹಾಕಾಳಿಗೆ ತಮ್ಮ ಶಸ್ತ್ರಾಸ್ತ್ರ ಗಳನ್ನು ತಾವು ಅಜ್ಞಾತವಾಸ ಮುಗಿಸಿಕೊಂಡು ಬರುವವರೆಗೆ ಕಾಯೆಂದು ಬೇಡಿಕೊಳ್ಳುವುದನ್ನು ನೋಡಿದರೆ ಪಾಂಡವರಕಾಲ ದಲ್ಲಿಯೂ ಬನ್ನಿಯಹಬ್ಬವು ಇರಬಹುದೆಂದು ಶಂಕಿಸಬಹುದು. ಮುಂದೆ ಪಾಂಡವರ ಪ್ರಸಂಗದ ನಂತರ ಈ ಹಬ್ಬವು ಜನತೆಗೆ ಹೆಚ್ಚು ಆದರವಾಗಿ ಜನಾಂಗದಲ್ಲಿ ಸಂಪ್ರದಾಯವಾಗಿ ಬಂದಿರಬಹುದು. ಆದುದರಿಂದ ಇದು ಭರತಖಂಡದಲ್ಲಿ ಬುನಾದಿಯಿಂದಲೂ ಬಂದ ಸಂಪ್ರದಾಯ ವೆಂದು ಹೇಳಬಹುದಾಗಿದೆ.

ಮುಸಲ್ಮಾನರ ದೌಡಿನಲ್ಲಿ ರಾಜ್ಯ ಕಳೆದುಕೊಂಡ ಕನ್ನಡ ಬಂಟರೂ, ಕನ್ನಡ ಧರ್ಮವನ್ನುಳಿಸಬೇಕೆಂದು ಹೆಣಗಾಡಿದ ಶಿವಶರಣ ಸಾಧು ಸತ್ಪುರುಷರೂ, ಮುಸಲ್ಮಾನರ ದಬ್ಬಾಳಿಕೆಯ ಅತ್ಯಾಚಾರಗಳನ್ನು ತಡೆಯಲು ಹಂಪೆಯಲ್ಲಿ ಕೂಡಿ ವಿಜಯನಗರ ರಾಜ್ಯ ಪ್ರತಿಷ್ಠಾಪನೆಯನ್ನು ಮಾಡಿದ ದಿನವೂ ಇದೇ ಎಂದು ಜನಪದದಿಂದ ತಿಳಿದುಬರುವುದು. 'ವಿಜಯದಶಮಿ'ಯ ದಿವಸ ಹಂಪಿಯ ಹತ್ತಿರ ಕಟ್ಟಿಸಿದುದರಿಂದ ಆ ಹೊಸಪಟ್ಟಣಕ್ಕೆ 'ವಿಜಯನಗರ'ವೆಂದು ಕರೆದಿರಬಹುದೇ?

ಬನ್ನೀಯಗಿಡಹುಟ್ಟಿ, ಹೊನ್ನೀನ ಮಳೆಗರೆದು
ಚಿನ್ನಪಟ್ಟಣಕೆ ಹೊಳಿಹರಿದು । ಹಂಪ್ಯಾಗ
ಬನ್ನಾಣ ವೀರ ಗುಟ್ಟಾಗಿ ॥ *–ಜಾ–ಸಂ–*

ಎಂಬ ವಿಜಯನಗರವನ್ನು ಕುರಿತು ದೊರೆಯುವ ಅನೇಕ ಹಂತಿಯ ಬಿಡಿಪದ್ಯಗಳು ಮೇಲಸೂಚಿಸಿದ ಮಾತುಗಳನ್ನು ವಿಶದ ಮಾಡುವುವು. ಇದನ್ನು 'ಜಾನಪದ ಸಾಹಿತ್ಯದಲ್ಲಿ ವಿಜಯನಗರ ಸ್ಥಾಪನೆ' ಎಂಬ ಬಿಡಿಲೇಖನದಲ್ಲಿ ವಿಸ್ತರಿಸಿ ಹೇಳಲಾಗಿದೆ. ಅಂತೆಯೇ ವಿಜಯನಗರದ ಅರಸರು ಈ ಹಬ್ಬವನ್ನು ಬಲು ಸಡಗರದಿಂದ ಆಚರಿಸುತ್ತಿದ್ದರು. ಈಗಲೂ ಮೈಸೂರು ಅರಸರು ಈ ಹಬ್ಬವನ್ನು ನಾಡಹಬ್ಬವೆಂದು ಆಚರಿಸಿ ನಾಡದೇವಿಯ ತೇರನ್ನೆಳೆಯುವರು. ಹೀಗೆ ಈ ಹಬ್ಬವು ವಿಜಯನಗರದ ಅರಸರ ಕಾಲದಿಂದ ಕನ್ನಡಿಗರಿಗೆ ನಾಡಹಬ್ಬವಾಗಿದೆ. ಈ ಹಬ್ಬದ ಇಷ್ಟೊಂದು ಸೊಬಗನ್ನು ಹಿಂದುಸ್ತಾನದ ಯಾವ ಭಾಗಗಳಲ್ಲಿಯೂ ಕಾಣಲಾರೆವು. ಆದುದರಿಂದ ಈ ಹಬ್ಬವು ಕನ್ನಡಿಗರಿಗೆ ಒಂದು ವಿಶಿಷ್ಟ ರೀತಿಯಲ್ಲಿ ಬಂದಿದೆ ಎಂದು ಹೇಳಬಹುದು. ಕನ್ನಡನಾಡಿನ ಹಳ್ಳಿಗಳಲ್ಲಿ ಮೋಜುಮಜಲುಗಳನ್ನು ಕಟ್ಟುತ್ತಾರೆ. ಹಲಕೆಲವು ಭಾಗಗಳಲ್ಲಿ ಹಾಡಿಕುಣಿಯುತ್ತಾರೆ. ಬೆಳದಿಂಗಳದಲ್ಲಿ ಬನ್ನಿಯ ಮುಡಿದು ಜನರು ತಿಳ್ಳಿ ಮೊದಲಾದ ಆಟಗಳನ್ನೂ ಆಡುವರು. ಒಕ್ಕಲಿಗನಿಗೆ ಈ ಹಬ್ಬವನ್ನು ಮಾಡಲು ಮನೆಯಲ್ಲಿ ಎಲ್ಲ ಬಳಗವೂ ಬೇಕು. ಅವನು ಈ ಹಬ್ಬವನ್ನು ಆಚರಿಸುವ ವೈಶಿಷ್ಟ್ಯವೇ ಬೇರೆ.

ಬನ್ನಿಯ ಹಬ್ಬದ ಹಾಡು

ಬನ್ನಿ ಮುಡಿಯೋಣಬಾರ ಕೋಲು ಕೋಲ ।
ಚಿನ್ನ ತರುವೋಣ ಬಾರಕೋಲು ಕೋಲ ॥ಪ॥

ಊರಸೀಮೆಯದಾಟ, ಕಾಡಗಡಿಯನುಸೇರಿ
ಕಾಡಸಂಪತ್ತ ತರಬನ್ನಿ ॥೧॥

ಬೆಳದ ಬೆಳಸಿಗೆ ಬನ್ನಿ, ಭೂಮಿತಾಯಿಗೆ ಬನ್ನಿ
ನಾಡಸಂಪತ್ತ ಬೆರಿ ಬನ್ನಿ ॥ ಕೋ ॥ ॥೨॥

ಅರಸನ ಅಂಗಳಕ, ಸರಸರಂಗಾ ಹೊಯ್ದು
ಹೊರಿಸಿ ತಂದಾರ ಸಿರಿಬನ್ನಿ ॥ ಕೋ ॥ ॥೩॥

ದೇವದೇವರಬನ್ನಿ, ದೈವದೈವದ ಬನ್ನಿ
ನಾವು ಮುಡೀವುದು ನಮ ಬನ್ನಿ ॥ ಕೋ ॥ ॥೪॥

ಹಡೆದ ತಾಯಿಗೆ ಬನ್ನಿ, ಹಡೆದ ತಂದಿಗೆ ಬನ್ನಿ
ಪಡೆದ ಗಂಡನಿಗೆ ನಮ ಬನ್ನಿ ॥ ಕೋ ॥ ॥೫॥

ಚಿನ್ನದ ಕೈಗಡಗ, ಚಿನ್ನೇರು ಇಟಗೊಂಡು
ಚಿನ್ನದಾಭರಣ ನಡಬಾಗಿ ॥ ಕೋ ॥ ॥೬॥

ಗೆಜ್ಜೆಹೆಜ್ಜೇ ಹಾಕಿ, ಗುಜ್ಜೇರು ಕುಣಿದಾರ
ವಜ್ಜರ ವಡ್ಡ್ಯಾಣ ಫಿಲಫಿಲ ॥ ಕೋ ॥ ॥೭॥

ನಾವು ಕುಣಿಯೋಣ ಬನ್ನಿ, ಹ್ಯಾಂವ ಮರಿಯೋಣಬನ್ನಿ
ಜೀವ ಒಂದಾಗಿ ಇರಬನ್ನಿ ॥ ಕೋ ॥ ॥೮॥

ಇಂದು ಮುಡಿಯುವ ಬನ್ನಿ, ಮುಂದೆಮಗ ಹೊನ್ನಾಗಿ
ಕುಂದಣದಾರೂತಿ ಬೆಳಗುದಕ ॥ ಕೋ ॥ ॥೯॥ *–ಜಾ–ಸಂ–*

ಎಷ್ಟು ಸಾತ್ವಿಕವಿದೆ ನಮ್ಮ ಜೀವನಕ್ಕೆ ಈ ಹಾಡು! ಬನ್ನಿಯ ಮುಡಿಯುವುದೆಂದರೆ ಕಾಡ ಸಂಪತ್ತನ್ನು ನಾಡಿಗೆ ತರುವುದು! ಒಕ್ಕಲಿಗನು ಬೆಳೆದ ಬೆಳಸಿಗೆ ಬನ್ನಿಯ ಮುಡಿಯುತ್ತಾನೆ; ಭೂತಾಯಿಗೂ ಬನ್ನಿಯ ಮುಡಿಯುತ್ತಾನೆ; ಎಲ್ಲವೂ ನಾಡ ಸಂಪತ್ತಾಗಲೆಂದೂ ಬನ್ನಿಯ ಮುಡಿಯುತ್ತಾನೆ. ಅವನಿಗೆ ಅರಸನೆಂಬ ಭಕ್ತಿಯಿದೆ. ಅರಸನಂಗಳದಿಂದ ಬನ್ನಿಯನ್ನು ಹೊರಿಸಿ ತರುವುದೆಂದರೆ ಅವನು ಅರಸನಿಗೆ ತೋರಿಸಿದ ರಾಜಭಕ್ತಿ. ಅವನಿಗೆ, ದೇವದೇವರೂ ಬನ್ನಿಯ ಮುಡಿಯುತ್ತಾರೆ; ದೈವಸಂಕಲ್ಪವೂ ಬನ್ನಿಯ ಮುಡಿಯುತ್ತದೆ. ಅವೆಲ್ಲವುಗಳೊಂದಿಗೆ ತಾನೂ ಬನ್ನಿಯ ಮುಡಿಯುವನು. ಮಕ್ಕಳು ಹೆತ್ತವರಿಗೆ ಮೊದಲು ಬನ್ನಿಯ ಮುಡಿಯುವುದು ಹುಟ್ಟಿದ ಕೃತಜ್ಞತೆಗಳನ್ನರ್ಪಿಸಿದಂತೆ. ಪಡೆದ ಗಂಡನಿಗೆ ಬನ್ನಿಯ ಮುಡಿಯುವುದು ಹೆಂಡತಿಯ ಧರ್ಮ. ಕನ್ನಡ ಹೆಣ್ಣುಮಕ್ಕಳಿಗೆ ಬನ್ನಿಯ ಹಬ್ಬವು ಒಂದು ಆನಂದ. ವೇಷಭೂಷಿತರಾಗಿ ಗೆಜ್ಜೆಯ ಹೆಜ್ಜೆಯ

ಹಾಕಿ ಕನ್ನಡ 'ಗುಜ್ಜೆಯರು' ಥಿಲಥಿಲಿಸಿ ಕುಣಿಯುವದನ್ನು ನೋಡಲು ಯಾರು ಬಯಸಲೊಲ್ಲರು? ಅವರು ಕುಣಿಯುವುದು ಏತಕ್ಕೆ? ತಮ್ಮ ತಮ್ಮೊಳಗಿನ ಸಿಟ್ಟು, ಕುನಸು, ಹಗೆತನ, ಅಸೂಯೆ ಮೊದಲಾದವುಗಳನ್ನು ಮರೆತು ಒಂದಾಗಿ ಒಕ್ಕಟ್ಟಿನಿಂದಿರಲು. ಬನ್ನೀ ಮುಡಿಯುವ ದಾದರೂ ಏತಕ್ಕೆ? ಇಂದು ಮುಡಿಯುವ ಕನ್ನಡ ಗಡಿಗಳ ಬನ್ನಿಯ ಪತ್ರಿಗಳು ನಾಡಹೊನ್ನಾಗಿ ಕನ್ನಡಿಗರು ಕುಂದಣದಾರುತಿಯನ್ನು ಬೆಳಗಲೆಂದು! ಎಂಥ ಸಂದೇಶವಿದೆ ಕನ್ನಡ ಕುಲಕ್ಕೆ ಈ ಹಾಡಿನಲ್ಲಿ! ಎಂಥ ಹಾರೈಕೆಯಿದೆ ಕನ್ನಡಿಗರಿಗೆ ಈ ಹಬ್ಬದಲ್ಲಿ! ಕನ್ನಡಿಗರಾಚರಿಸುವ ಈ ಹಬ್ಬದಲ್ಲಿ ಧಾರ್ಮಿಕ, ಸಾಮಾಜಿಕ, ಪೌರಾಣಿಕ, ಐತಿಹಾಸಿಕ, ಕೌಟುಂಬಿಕ ಕಲ್ಪನೆಗಳ ಪ್ರೇಮ ಸಮ್ಮಿಲನವಾಗಿದೆ.

ಹಾಡಿನಲ್ಲಂತೂ ಕನ್ನಡನಾಡಿನ ಉಚ್ಚ ಸಂಸ್ಕೃತಿಯ ತಿರುಳು ತೇಲಿ ತೇಲಿ ಧ್ವನಿಗತವಾಗಿ ವಿಕಾಸವಾಗಿಯೇ ಬಿಟ್ಟಿದೆ. ಈ ಹಾಡನ್ನು ಹಾಡುವ ಧಾಟಿಯಂತೂ ಯಾವ ಕನ್ನಡಿಗನ ಮನಸ್ಸನ್ನರಳಿಸಿ ವಿಕಾಸಗೊಳಿಸಲಿಕ್ಕಿಲ್ಲ?

ಕಣ್ಣು ಮೂಗಿಲೆ ನನ್ನ, ಹೆಣ್ಣು ಮಗಳು ಚೆಲುವಿ
ಬಣ್ಣಕ ನನ್ನ ಸೊಸಿ ಚೆಲುವಿ। ದಸರೇಕ
ಬನ್ನಿ ಮುಡಿವಾಗ ಮಗಚೆಲುವ॥ *–ಗ–ಹಾ–ಪು–೫೨*

ಎಂದು ಒಕ್ಕಲಗಿತ್ತಿಯು ಬೀಸಿ ಹಾಡಿದ್ದಾಳೆ. ದಸರೆಯ ಹಬ್ಬದಲ್ಲಿ ಮಗನ ವೇಷಭೂಷಣಗಳನ್ನು ಕಂಡ ಹಳ್ಳಿಯ ತಾಯಿಗೆ ಮಗನ ಚೆಲುವಿಕೆಯು ಕಾಣುವುದರಲ್ಲಿ ಏನು ಸಂದೇಹ? ಬನ್ನಿಯ ಹಬ್ಬದ ದಿವಸ ಸಣ್ಣ ಸೊಸೆಯು ಮನೆಯಲ್ಲಿದ್ದರೆ ಒಂದು ಸಡಗರ.

ಬನ್ನೀಯ ಮುಡಿಯಾಕ, ಸಣ್ಣಸೊಸೆ ಮನಿಯಾಗ
ಕನ್ನ್ಯಾಳ ಮಗ ಮಂದ್ಯಾಗ। ಮುಡಿದಾರ
ಹೊನ್ನ ತುಂಬ್ಯಾರ ಉಡಿಯಾಗ॥ *–ಜಾ–ಸಂ–*

ಎಂದು ಈ ಚಿಕ್ಕ ಜೀವಿಗಳು (ದಂಪತಿಗಳು) ಸಿರಿವಂತರಾಗಿ ಬಾಳಲೆಂದು ಮನೆಯಲ್ಲಿ ಹಿರಿಯರು ಆಶೀರ್ವದಿಸುತ್ತಾರೆ.

ದಸರೇಕ ತವರೀಗೆ, ಕುಸಲದಿನಾಹೋದೆ
ಸೊಸಿ ನೋಡಿ ಕೊಟ್ಟೆ ಹಿಡಿಬನ್ನಿ। ಅಣ್ಣಯ್ಯ
ಖುಸಿಲಿಂದ ಬೊಟ್ಟ ಸೊಸಿಗಿಟ್ಟೆ॥ *–ಜಾ–ಸಂ–*

ಎಂದು ಹೆಣ್ಣು ಮಗಳು ತವರಿಗೆ ಹೋಗಿ ಬನ್ನಿಯ ಹಬ್ಬದಲ್ಲಿ ಅಣ್ಣನಿಗೆ ಹಿಡಿಬನ್ನಿಯನ್ನು ಕೊಟ್ಟು ಅಣ್ಣನ ಮಗಳಿಗೆ ಕುಂಕುಮವಿಟ್ಟು ಸೊಸೆಯನ್ನಾಗಿ ಮಾಡಿಕೊಂಡೇ ಬರುವಳು. ಹೀಗೆ ಈ ಬನ್ನಿಯ ಹಬ್ಬವು ಸಂಪ್ರದಾಯವಾಗಿ ಬಂದರೂ ಜನಜೀವನದ ಮಾಸದ ಚಿತ್ರವನ್ನು ಚಿತ್ರಿಸುವುದು. ಕನ್ನಡಿಗರಿಗೆ ಉಜ್ವಳ ಸಂದೇಶವನ್ನೂ, ಆಶಾಭರಿತವಾದ ಹಾರೈಕೆಯನ್ನೂ ಕೋರುವ ಈ ಹಬ್ಬವು ಮುಂಬರುವ ಕರ್ನಾಟಕ ಏಕೀಕರಣದ ಶುಭ ದಿನವಾಗಿ ಮತ್ತು ಕನ್ನಡ ಕುಲವನ್ನು ಉದ್ಧಾರ ಮಾಡಲಿ.

ಶೀಗೆ

ಆಶ್ವಿನ ಶುದ್ಧ ಹುಣ್ಣಿಮೆಯೇ ಶೀಗೆಯ ಹುಣ್ಣಿಮೆ. ಆಗ ಮುಂಗಾರಿ ಮಳೆಗಳು ಮುಗಿದು ಹಿಂಗಾರಿ ಮಳೆಗಳು ಪ್ರಾರಂಭವಾಗುವುವು ಮುಂಗಾರಿ ಬೆಳಸು ಬಾರವಾಗಿ ಬಂದು ತುಂಬಿ ನಿಲ್ಲುವುದು. ಹುರಿಗಾಳಿಗೆ ಬಂದ ಆ ಬೆಳಸು ಮುಂದೆ ಕೆಲವೇ ದಿನಗಳಲ್ಲಿ ಮಾಗಿ ಭೂಮಿಯ ಸೊಬಗೇ ಹೋಗುವುದೆಂದರಿತ ಒಕ್ಕಲಿಗನು 'ಶೀಗೆ ಹುಣ್ಣಿಮೆಗೆ' ಬನದೂಟವನ್ನು ತನ್ನ ಬಳಗದ ಕೂಡ ಹೊಲಕ್ಕೆ ಒಯ್ಯುವನು. ಹೊಲದ ಬೆಳಸನ್ನು ಪೂಜೆ ಮಾಡಿ ಹುಲುಸಾಗಲೆಂದು ಒಯ್ದ ಊಟವನ್ನು ಭೂಮಿಗೆ ಎಡೆಮಾಡಿ ಬೆಳಸಿಗೆ ಸೂರೆ ಮಾಡುವನು. ಈ ಚರಗವೇ ಒಕ್ಕಲಿಗನು ಬೆಳಸಿಗೆ ಮಾಡುವ ಎರಡನೆಯ ಚರಗ (ಮುಂದೆ ಅವನು ರಾಶಿಯ ಕಾಲಕ್ಕೆ ರಾಶಿ ಬುತ್ತಿಯ ಮಾಡಿ ರಾಶಿಗೆ ಎಡೆಮಾಡಿ ಚೆಲ್ಲುವ ಚರಗವು ಮೂರನೆಯ ಚರಗವಾಗಿದೆ). ದಾನವಂತನೂ, ದಯವಂತನೂ ಆದ ರೈತನು ಕೇವಲ ಈ ಹುಣ್ಣಿಮೆಯ ಐದೇ ದಿನಗಳ ಹಿಂದೆ ಅಜ್ಞಾತವಾಸಕ್ಕೆ ಹೋದ ಪಾಂಡವರನ್ನು ಬನದಲ್ಲಿ ಹೇಗೆ ಮರೆಯಬೇಕು? ಆದುದರಿಂದಲೇ ಬನಕೆ ಒಯ್ದ ಊಟವನ್ನು ಅವನು ವನವಾಸದಲ್ಲಿರುವ ಪಾಂಡವರುಣ್ಣವೆಂದು ಭಾವಿಸಿ ಅವರ ಹೆಸರಿಲೆ ಎಡೆಮಾಡಿ ನಂತರ ತಾನು ಊಟಮಾಡುವನು. ಇದು ಅವನ 'ದಾಸೋಹ' ಭಾವನೆಯನ್ನು ಸೂಚಿಸದಿರದು. ಈ ಹುಣ್ಣಿಮೆಯಲ್ಲಿ ಎಲ್ಲ ಹಳ್ಳಿಗರೂ ಪಾಂಡವರನ್ನು ಹೊಲದಲ್ಲಿ ಪೂಜಿಸಿ ಎಡೆಮಾಡುವುದನ್ನು ಈಗಲೂ ಎಲ್ಲ ಹಳ್ಳಿಗಳಲ್ಲಿ ಕಾಣಬಹುದು. (ಮುಂದೆ ಇದೇ ಪಾಂಡವರು, ಇನ್ನೂ ಅಜ್ಞಾತವಾಸದಲ್ಲಿರುವ ಮೂಲಕ ರಾಶಿಬುತ್ತಿಯ ಊಟಕ್ಕೆ ಸುಗ್ಗಿಯ ಕಣದ ದಂಡೆಯ ಮೇಲೆ ಬರುವರು).

ಹಳ್ಳಿಯ ಹೆಣ್ಣು ಮಕ್ಕಳು ಈ ಶೀಗೆ ಹುಣ್ಣಿಮೆಯ ಊಟವನ್ನು ಬೆಳತನಕ ಸಾರಿಸುವರು. ಬೆಳಗಾದ ಮೇಲೆ ಮಾಡಿದ ಸಾಮಗ್ರಿಗಳನ್ನು ಹೆಡಿಗೆಗೆ ತುಂಬಿ ಸಿಂಗಾರಾಗಿ ಹಳ್ಳಿಗರೆಲ್ಲರೂ ಹೊಲಕ್ಕೆ ಹೋಗುವರು. ಈ ಹುರುಳಿಲ್ಲದ ಆಡಂಬರವನ್ನು ಕಂಡ ಆಧ್ಯಾತ್ಮಯೋಗಿ ಶಿಸುನಾಳ ಸರೀಫನು ಶೀಗೆ ಹುಣ್ಣಿಮೆಯನ್ನು ಅಣಕಿಸಿ ಹಾಡಿದ್ದಾನೆ.

ಶೀಗೆ ಹುಣ್ಣಿಮೆದಿನ ಉಣ್ಣಲಿಕ್ಕೆ ಕರೆಯುವರೇನಲ್ಲಾ
ಕರೆದರೆ ಹೋಗು ಬಿಡಲಿಲ್ಲಾ ॥ಪ॥

ಹುರುಳಕ್ಕಿ ಹೋಳಿಗೆ ಹೂರಣ ಗಡುಬು
ಕಡಲಿ ಪಚ್ಚಡಿ ಕಟ್ಟನಾಂಬರಾ

ಉಂಡಿಗಡಬು ಪುಂಡಿಯಪಲ್ಲೆ ಬುಟ್ಟಿಯೊಳಿಟ್ಟಿಲ್ಲ।
ಬುಟ್ಟಿಗೆ ಕೆಮ್ಮಣ್ಣ ಬಡಿದೆಲ್ಲ
ಅದರ ಅನುಭವ ತಿಳಿಯಲಿಲ್ಲ ॥೧॥

ಇಂದು ಅಂದು ಬಂದು ಬಹುದಿನ ಹೊಲದೊಳು ಕುಂತೆಲ್ಲಾ
ಮನಸಿನ ಮೈಲಿಗೆ ತಿಳಿಲಿಲ್ಲ
ಗಂಧದ ಬಟ್ಟ ಗಮಕಿಲೆ ಇಟ್ಟು ಹಂಗನೂಲ ಹಾಕಿ ಎಷ್ಟು।
ಬಟ್ಟನಕಲ್ಲಿಗೆ ಸುಣ್ಣಾತೊಟ್ಟ ಕಣ್ಣಲಿ ಕಂಡೆಲ್ಲಾ
ಆ ಕಲ್ಲೇನುಣಲಿಲ್ಲ ಎಡಿಮಾಡಿ ನೀನೇ ಉಂಡೆಲ್ಲಾ ॥೨॥
ಮಂಗಳಾತ್ಮ ಶಿಸುನಾಳಧೀಶನಲ್ಲೆ
ಬಲ್ಲವರು ನೀವೆಲ್ಲ ಕೂಡಿರಲ್ಲೆ
ಶೃಂಗಾರನಾರೇರೆಲ್ಲಾ ರಂಗಿನಿಂದ ಕೋಲುಪಿಡುದು।
ಯೋಗದಿಂದ ತ್ಯಾಗಮಾಡಿ ರಾಗದಲ್ಲೆ
ಶಿವಶರಣರಲ್ಲೆ ಶೀಗಿ ಕರೆದಾರಲ್ಲೆ ॥೩॥

ಎಂದು ಯೋಗಾನುಭವವನ್ನು ಹಾಡಿದ್ದಾನೆ. ಬನದೂಟವನ್ನು ಮುಗಿಸಿಕೊಂಡು ಬಂದ ಹೆಣ್ಣುಮಕ್ಕಳು ಮನೆಗೆ ಬಂದಮೇಲೆ ಹಿಟ್ಟ ಚೆಲ್ಲಿದ ಬೆಳದಿಂಗಳಿನಲ್ಲಿ ಆಡಿ ಹಾಡಿ 'ಶೀಗೆ'ಯನ್ನು ತಂದು ಇಡುವರು. ಇದೇ ಒಕ್ಕಲಿಗನ ಐದನೆಯ ಅಥವಾ ಕಡೆಯ ಮಣ್ಣಪೂಜೆಯೆನ್ನ ಬಹುದು. ಹೆಣ್ಣುಮಕ್ಕಳು ಈ ಶೀಗೆಗೆ ಆರುತಿಯನ್ನು ಬೆಳಗಿ ಆಡುವರು. ಮುಂದೆ ಐದನೆಯ ದಿನಕ್ಕೆ ಈ ಸೀಗೆಯನ್ನು ಕಳುಹಿಸಲು ಊಟವನ್ನು ಕಟ್ಟಿಕೊಂಡು ಹೋಗಿ ಕೆರೆಯದಂಡೆಯ ಮೇಲಾಗಲಿ, ದೊಡ್ಡ ಜಲಾಶಯಗಳ ಸಮೀಪಕ್ಕಾಗಲಿ ಕೂತು ಉಂಡು ಶೀಗೆಯನ್ನು ಕಳುಹಿಸಿ ಆಟವಾಡುವರು. ಈ ಊಟವೇ ಎರಡನೆಯ ಅಲ್ಲೀಕೇರಿಯಂದು ಕರೆಯಬಹುದು. ಶೀಗೆಯ ಹುಣ್ಣಿಮೆಯ ಚರಗವನ್ನು ಚಲ್ಲಿದ ಒಕ್ಕಲಿಗನು ಶುಭದಿನವನ್ನು ನೋಡಿ ಭೂಮಿಗೆ ಕುಡಗೋಲು ಹಾಕುವನು.

"ಹಟ್ಟಿಹಬ್ಬ" (ದೀವಳಿಗೆ)

ಹಿಂಗಾರಿಮಳೆಯು ಪ್ರಾರಂಭವಾಗಿ ಬಿತ್ತುಗೆಗಳೆಲ್ಲ ಮುಗಿದು ಸಸಿಗಳು ತಲೆಯೆತ್ತಿ ಗರಿಬಿಡುತ್ತಿರಲು ಬರುವ ಇನ್ನೊಂದು ದೊಡ್ಡ ಸಂಪ್ರದಾಯ ಹಬ್ಬವೆಂದರೆ 'ಹಟ್ಟಿಹಬ್ಬ' (ದೀವಳಿಗೆ). ಇದಕ್ಕೆ ಹೆಣ್ಣುಮಕ್ಕಳು ನೀರು ತುಂಬುವ ಹಬ್ಬವೆಂದೂ ಕರೆಯುವರು. ಆಗ ಮನೆಯಲ್ಲಿ ದೀಪಾರಾಧನೆ ಯಾಗುವುದು. ಹೆಣ್ಣುಮಕ್ಕಳು ಆರುತಿಯೆತ್ತುವರು. ಪಾಂಡವರು ತಮ್ಮ ಅಜ್ಞಾತವಾಸ ಮುಗಿಸಿಕೊಂಡು 'ವಿಜಯದಶಮಿ'ಯಾದ ನಂತರ ದಕ್ಷಿಣ ಭರತಖಂಡವನ್ನು ಬಿಟ್ಟು ಉತ್ತರಕ್ಕೆ ಹಸ್ತಿನಾವತಿಯನ್ನು ಸೇರುವರೆಂದು ಪೌರಾಣಿಕ ಕಥೆಯುಂಟು. ಅಂತೆಯೇ ಒಕ್ಕಲಿಗನು ಪ್ರತಿಪದೆಯ ದಿವಸ ಶೆಗಣಿಯ ಪಾಂಡುವರನ್ನು ಮಾಡಿ ಅವರನ್ನು ಊರಲ್ಲಿ ಬರಮಾಡಿಕೊಳ್ಳುವನು. ಆಗ ಅವನ ಮನೆಯಲ್ಲಿಯೂ, ಹಟ್ಟಿಯಲ್ಲಿಯೂ ಪಾಂಡವರೇ ಪಾಂಡವರು; ತಿಪ್ಪಿಯ ಮೇಲೆ ಸಹ ಅವನು ಪಾಂಡವರನ್ನಿಡುವನು. ಹೀಗೆ ಸುತ್ತಮುತ್ತಲು ಪಾಂಡವರ ಹೆಜ್ಜೆಗಳೇ ಹೆಜ್ಜೆಗಳು.

ಹಾಸುಗಲ್ಲಿನ ಮೇಲೆ, ಹಾದುಹೋದವರ್ಯಾರ
ಪಾದ ಮೂಡ್ಯಾವ ಪರಿಪರಿ। ಪಾಂಡೂರು
ಹಾದು ಹೋಗ್ಯಾರ ಜಳಕಕ॥ –ಜಾ–ಸಂ–

ಎಂದು ಪಾಂಡವರು ಊರು ಸೇರಿದ ಮೇಲೆ ಜಳಕಕ್ಕೆ ಹಾಯ್ದುಹೋಗಲು ಪರಿಪರಿಯಾಗಿ ಹೆಜ್ಜೆಗಳು ಮೂಡಿದುವು. ಅವುಗಳನ್ನು ಒಕ್ಕಲಿಗನು, ತನ್ನ ಮನೆ ಮತ್ತು ಹಟ್ಟಿಯ ತುಂಬೆಲ್ಲ ಮೂಡಿಸಿಬಿಡುವನು.

ಬೆಳುವಲದ ಹಳ್ಳಿಗಳಲ್ಲಿ ಮುಂಬರುವ ಚಳಿಯನ್ನೆದುರಿಸಲು, ವನವಾಸದೊಳಗೆ ಪಾಂಡವರು ಚಳಿಯನ್ನು ತಡೆದ ಸಾಮರ್ಥ್ಯವು ದನಕರಗಳಿಗೆ ಬರಲೆಂದು ಒಕ್ಕಲಿಗನು ಹಟ್ಟಿಯ ಬಾಗಿಲದ ಮುಂದೆ ಸೊಪ್ಪಿಯ ಕಿಚ್ಚು ಮಾಡಿ ಅದರಲ್ಲಿ ತುರುಬಿ, ತುಂಬಿ, ಗಣಜಲಿ, ಹೆಬ್ಬೇವು ಮೊದಲಾದ ತಪ್ಪಲುಗಳನ್ನು ಚೆಲ್ಲಿ ಹೊಗೆ ಏಳಲು ಹಟ್ಟಿಯಲ್ಲಿಯ ದನಗಳನ್ನು ಬಿಚ್ಚಿ ಹೊಡೆದು ಕಿಚ್ಚು ಹಾಯಿಸುವನು. ಪಾಂಡವರು ಮನೆಯನ್ನು ಸೇರುವ ಆ ದಿವಸದಲ್ಲಿ ಆ ಹೊಗೆಯೂ, ಜಳವೂ ದನಕರುಗಳಿಗೆ ತಾಕಿದರೆ ಚಳಿಯು ಹತ್ತುವುದಿಲ್ಲೆಂದು ಅವನ ನಂಬಿಗೆ ಇದೆ. ದನಕರುಗಳನ್ನು ಕಟ್ಟಿಕೊಂಡು ಮುಂಬರುವ ಸುಗ್ಗಿಯಲ್ಲಿ ಕಾಡೊಳಗೆ ಚಳಿಯನ್ನು ತಡೆಯಲು ಅವನು ಈ ಕಿಚ್ಚನ್ನು ದನಕರುಗಳಿಗೆ ಮೂಢನಂಬಿಗೆಯಿಂದ ಹಾಯಿಸುವನೆಂದು ಹೇಳಬಹುದು.

ಈ ಹಬ್ಬವು ಹೆಣ್ಣುಮಕ್ಕಳಿಗೆ ದೊಡ್ಡ ಹಬ್ಬ. ಭರತಖಂಡದ ಎಲ್ಲ ಭಾಗಗಳಲ್ಲಿಯೂ ಈ ಹಬ್ಬವು ಕಂಡುಬರುವುದು. ಹೆಣ್ಣುಮಕ್ಕಳು ಈ ಹಬ್ಬಕ್ಕೆ ತವರಮನೆಗೆ ಬರುವ ವಾಡಿಕೆಯಿದೆ.

ಕಾರ್ಹುಣವಿ ಹಬ್ಬಕ, ಕರಿಲಾಕ ಬರಬ್ಯಾಡ
ಕಾಲಬಾಡೀಗಿ ಕೊಡಬ್ಯಾಡ। ನನ್ನಣ್ಣ
ಹೊನ್ನ ದೀವಳಿಗಿ ಮರಿಬ್ಯಾಡ॥ –ಗು–ಹಾ–ಪು–೧೯

ಎಂದು ತಂಗಿಯು ಅಣ್ಣನಿಗೆ ಹೊನ್ನ ದೀವಳಿಗಿಗೆ ಕರೆಯಲು ಬರುವುದನ್ನು ಮರೆಯಬೇಡೆಂದು ಎಚ್ಚರಿಸಿದ್ದಾಳೆ. ವರುಷದ ಗಳಿಕೆಯ ಲೆಕ್ಕವು ಈ ಹಬ್ಬದಲ್ಲಿ ಆಗುವುದರಿಂದಾಗಲಿ ಅಥವಾ ಲಕ್ಷ್ಮೀಪೂಜೆಯು ನಡೆಯುವದರಿಂದಾಗಲಿ ಹೆಣ್ಣುಮಕ್ಕಳು ಇದನ್ನು ಹೊನ್ನದೀವಳಿಗೆಯೆಂದು ಕರೆದಿದ್ದಾರೆ. ಜಾನಪದ ಸಾಹಿತ್ಯದಲ್ಲಿ ಹಬ್ಬಗಳ ಹಾಡುಗಳಲ್ಲದೆ, ಲಾವಣಿಗಳೂ ಅವೆ. ಮೈಸೂರ ಲಾವಣಿಗಳಲ್ಲಿ ಬರುವ 'ದೀವಳಿಗೆ ಲಾವಣಿಯು' ದುರಂತದ ಪ್ರಾಯಶ್ಚಿತ್ತ ತುಂಬಿದ ಹಾಡಾದರೂ 'ದೀವಳಿಣಿಗೆ ಹೆಣ್ಣಿಗೆ ತವರುಮನೆ ಬೇಕು,' ಎಂದು ಬಂದಿದೆ.

ನಾಲ್ಕು ದಿಕ್ಕಿಗೆ ಹಬ್ಬ ಬಂದಿತು ಒಳ್ಳೇ ದೀವಳಿಗೆ
ನಾಚುತ ನಲಿಯುತ ಹೆಣ್ಣಳು ಬಂದರು ತಮ್ಮ ತವರ ಮನೆಗೆ ॥ಪ॥

ಎಂದು ನಾಡಹೆಣ್ಣಿನ ಈ ಹಬ್ಬದ ಮನದಾಶೆಯನ್ನು ಹಾಡಿದ್ದಾನೆ ಲಾವಣಿಗಾರ. ದೀವಳಿಗೆಯ ಪಂಚಮಿಯು ಮುಗಿದ ಮೇಲೆ ಈ ಹಬ್ಬವು ಮುಗಿಯುವುದು. ಈ ಪಂಚಮಿಗೆ 'ಕಡೆಪಂಚಮಿ'ಯೆಂದೂ ಕರೆಯುವರು. ಇದೇ ಮೂರನೆಯ ಇಲ್ಲವೆ ಕಡೆಯ ಅಲ್ಲೀಕೇರಿಯೆಂದು ಜನಪದದಲ್ಲಿ ಹೆಸರುವಾಸಿಯಾಗಿದೆ. ಕಡೆಗುಳ್ಳವ್ವನ್ನಾಡಲು ತವರನ್ನು ಸೇರಿದ ಹೆಣ್ಣು ಈ ಕಡೆ ಪಂಚಮಿಯನ್ನು ಮುಗಿಸಿಕೊಂಡೇ ಗಂಡ ಮನೆಯನ್ನು ಸೇರುವುದು. ಈ ಅಲ್ಲೀಕೇರಿಯ ಸಂಭ್ರಮವನ್ನು ಬೆಳುವಲದಲ್ಲಿ ಕಾಣಬೇಕು. ಹೆಣ್ಣುಮಕ್ಕಳು ಬನದೂಟವನ್ನು ಸೌರಿಸುವರು. ಎಲ್ಲರೂ ಕೂಡಿಕೊಂಡು ಅಲ್ಲೀಕೇರಿಯನ್ನು ಮಾಡಿ ಸಂಜೆಯ ಮುಂದೆ ಹಾಡುತ್ತ ಮನೆಯನ್ನು ಸೇರುವರು.

ಅಲ್ಲೀಕೇರಿಗೆ ಹೋಗುನು ಬರತೀರೇನ್ರೀ
ಒಲ್ಲದಿದ್ದರೆ ಇಲ್ಲೆ ನೀವು ಇರತೀರೇನ್ರೀ ॥ಪ॥

ಕಲ್ಲೌ ಮಲ್ಲೌ ಕೂಡಿಕೊಂಡು, ದೀವಳಿಗೆಯ ಹಬ್ಬದೊಳು
ಉಲ್ಹಾಸದಿಂದ ಅಲ್ಲಮಪ್ರಭುವಿನ ಮರತೀರೇನ್ರೆ ಇಲ್ಲೆ ಇರತೀರೇನ್ರಿ ॥ಅ.ಪ॥

ಮಡಿಯನುಟ್ಟು ಮೀಸಲ ಅಡಗಿ ಮಾಡಬೇಕ್ರೆ
ಅದಕೆ ತಡವು ಆದರ ನಿಮಗೊಡವಿ ನಮಗಸಾಕ್ರೆ
ವಡಿಯಗಾರಿಗಿ ಹೂರಣಗಡಬು ಕಡಲಿಪಚ್ಚಡಿಕಟ್ಟಿ ನಾಂಬ್ರಾ
ಚಟಗಿ ಮುಚ್ಚಳ ಗಡಿಗಿ ಬಾನದ ಹೆಡಗಿ ಜೋಕ್ರೆ
ನೀವು ದೃಢದಿ ಹೋಗಿ ದೇವರಗುಡಿಗೆ ಧೂಪಾಹಾಕ್ರೆ ॥೧॥

ಊರಹೊರಗೆ ಸಾರಿ, ಮೀರಿದ ಸ್ಥಳವ ನೋಡ್ರೆ
ಅದನು ಸೇರದಿದ್ದರೆ ನಿಮ್ಮ ಸ್ನೇಹನಮಗ ಬ್ಯಾಡ್ರೆ
ಮೂರುಗಿರಿಯ ಬದಿಯೋಳಿರುವ ನೀರು ತರುವ ಕೆರೆಯ ಬದಿಯೋಳ
ಚಾರುತೆರದ ಬುರುಜಿನೋಳು ಬಾಜಾರ ಹೂಡ್ರೆ
ಮುಂದೆ ಪಾರುಗಾಣುವಂಥಾ ವಸ್ತು ತಂದು ಇಡ್ರೆ ॥೨॥ *–ಶಿಸುನಾಳ*

ಎಂದು ಶಿಸುನಾಳ ಷರೀಫನು ಈ ಅಲ್ಲೀಕೇರಿಯನ್ನು ತತ್ವರೂಪವಾಗಿ ಹಾಡಿದ್ದಾನೆ. ಮಾನವನು ತನಗೆ ನಿಸರ್ಗ ಸಂಪರ್ಕವಿರಬೇಕೆಂದು ಈ ಸಂಪ್ರದಾಯಗಳನ್ನು ಹಾಕಿಕೊಂಡಿದ್ದಾನೆ. ಮಳೆಗಾಲವು ಮುಗಿಯುತ್ತಲೇ ಚಳಿಯು ಸುತ್ತಲೂ ಆವರಿಸಹತ್ತುವುದು.

ಗೌರಿ

ಮಳೆಗಾಲದ ಕೊನೆಯ ಸಂಪ್ರದಾಯವೆಂದರೆ ಗೌರಿಯ ಹುಣ್ಣಿಮೆ. ಬಹುತರ, ಈ ಹುಣ್ಣಿಮೆಯಾದನಂತರ ಹಿಂಗಾರಿಯ ಮಳೆಯ ಅವಸಾನವೂ ಕಡಿಮೆಯಾಗಿ ಚಳಿಯ ಆವೇಶವು ತುಂಬುವುದು. ಗೌರಿಯ ಪೂಜೆಯು ನಮ್ಮ ಜನತೆಯಲ್ಲಿ ಅನೇಕ ವಿಧಾನಗಳಲ್ಲಿ ಬಂದಿದೆ. ಮಂಗಲ ಗೌರಿಯ ಪೂಜೆ, ಸಂಪತ್ತ ಗೌರಿಯಪೂಜೆ, ಗಜಗೌರಿಯ ಪೂಜೆ ಮೊದಲಾದುವುಗಳು ಕಂಡುಬರುವುವು. ಕರ್ನಾಟಕ ಹಳ್ಳಿಗಳಲ್ಲಿ ಗೌರಿಯ ಆಡದ ಹೆಣ್ಣು ಮಕ್ಕಳಿಲ್ಲ. ಹತ್ತು ಮನೆಗಳುಳ್ಳ ಹಳ್ಳಿಗಳಲ್ಲಿ ಎರಡು ಬನಗಳಾಗಿ ಗೌರಿಯ ಆಟದಲ್ಲಿ ಕಡಿದಾಡಿದ್ದುಂಟು. ಅಷ್ಟು ಬೇರೂರಿ ಬಿಟ್ಟಿದೆ ಗೌರಿಯ ಆಟವು ನಮ್ಮ ಹಳ್ಳಿಯ ಹೆಣ್ಣುಮಕ್ಕಳಲ್ಲಿ!

ಗೌರಿಯ ಹುಣ್ಣಿಮೆಯು ಐದು ದಿನವಿರುವಾಗಲೇ ಹಳ್ಳಿಯ ಹೆಣ್ಣುಮಕ್ಕಳು ಬೆಳದಿಂಗಳದಲ್ಲಿ ಆಡಲು ಪ್ರಾರಂಭಮಾಡುವರು. ಗೌರಿಗೆ ದಿನವೊಂದು ತರದ ಆರತಿಯನ್ನೆತ್ತಿ ಹೂಗಳನ್ನೇರಿಸುವರು. ಸಣ್ಣಮಕ್ಕಳು ಅನೇಕ ಹಾಡುಗಳನ್ನು ಹಾಡುತ್ತ ಆರುತಿ ಬೆಳಗುವರು.

ಗೌರಿ ಗೌರಿ, ಗಾಣಾಗೌರಿ, ಮ್ಯಾಣಾಗೌರಿ, ಕುಳ್ಳೀಗೌರಿ, ಕುಂಕುಮಗೌರಿ
ಅವರಿಯಂತ ಅಣ್ಣನ ಕೋಡ ಅಣ್ಣನ ಕೋಡ।
ತೊಗರಿಯಂತ ತಮ್ಮನ ಕೋಡ ತಮ್ಮನ ಕೋಡ।
ನಿಲ್ಲನಿಲ್ಲ ಗೌರವ್ವ ಗೌರವ್ವ।
ನಿಲ್ಲಿಸಿಕೋರೊ ಬಸಪ್ಪ ಬಸಪ್ಪ।
ವರುಷಕ್ಕೊಮ್ಮೆ ಕರಿಸೇನ ಕರಿಸೇನ।
ಅರಿಷಣ ಪತ್ತಲ ಉಡಿಸೇನ ಉಡಿಸೇನ।
ಹಸರಬಳಿಯ ಇಡಿಸೇನ ಇಡಿಸೇನ।
ಉಡಿಯಕ್ಕಿ ಹಾಕಿ ಕಳಿಸೇನ ಕಳಿಸೇನ।

ಅಗಸಿಮಟ ಕಳಿಸೇನ ಕಳಿಸೇನ ॥
ಆಡಲಾರಿನೇ ಗೌರಿ, ಪಾಡಲಾರಿನೇ ಗೌರಿ, ಚಿನ್ನದ ಚಿಟಗಾಳೇ ಗೌರಿ।
ಬಣ್ಣದ ಬಾಚುಣಿಕೆ ಗೌರಿ ದಾಳಿಂಬ್ರೋ ॥ –ಜಾ–ಸಂ–

ಎಂದು ಹಾಡಿ ಆರುತಿ ಬೆಳಗುವರು. ಅವರು 'ಅವರಿಯಂತೆ ಅಣ್ಣನು ಬೇಕು,' 'ತೊಗರಿಯಂತ ತಮ್ಮನು ಬೇಕು' ಎಂದು ಗೌರಿಗೆ ಬೇಡಿಕೊಂಡಿದ್ದಾರೆ. ಗೌರಿಯು ಮನೆಮಗಳೆಂದು ವರುಷಕ್ಕೊಮ್ಮೆ ಕರೆಸಿ, ಆದರದಿಂದ ಹಸಿರುಬಳೆ, ಕುಂಕುಮ ಅರಿಷಿಣ ಪತ್ತಲ ಮೊದಲಾದ ಮಂಗಳ ವಸ್ತುಗಳನ್ನು ಇಡಿಸಹೋಗಿದ್ದಾರೆ ನಮ್ಮ ಹೆಣ್ಣುಮಕ್ಕಳು.

ಕಣಕದಾರೂತಿ ಮಾಡೇನಗೌರಿ
ಭಾಳದೀವಿಗೆ ಹಚ್ಚೇನಗೌರಿ
ಹಾರೂರಾಡುದು ಹಾದೀ ಬೀದ್ಯಾಗ
ಸೆಟ್ಟರಾಡುದು ಪಟ್ಟಣಸಾಲ್ಯಾಗ
ಏಕದಾರೂತೆ ಗೌರಿಗೆ ಬೆಳಗೀರಾರೂತಿ ॥

ಹೀಗೆ ದಿನ ಒಂದಕ್ಕೂ ಬೇರೆ ಬೇರೆ ಆರುತಿಯನ್ನೂ ಮಾಡಿ ಹಾಡುತ್ತಾರೆ. 'ಹಾರೂರಾಡುದು ಹಾದೀ ಬೀದ್ಯಾಗ' ಇದು ಬ್ರಾಹ್ಮಣರ ಭಿಕ್ಷಾಟನೆಯನ್ನು ಸೂಚಿಸಬಹುದೇ? 'ಸೆಟ್ಟರಾಡುದು ಪಟ್ಟಣ ಸಾಲ್ಯಾಗ' ಎಂಬೀನುಡಿಯು ವೀರಶೈವರ ಕಾಯಕವನ್ನು ಸೂಚಿಸಬಹುದೇ? ಗೌರಿಯ ಹುಣ್ಣಿಮೆಯ ದಿವಸ ಆನೆಗೆ ಅಂಬಾರಿಯನ್ನು ಕಟ್ಟಿ ಬಹಳ ಸಂಭ್ರಮದಿಂದ ಹೆಣ್ಣುಮಕ್ಕಳು ಕೂಡಿ ಗೌರಿಯನ್ನು ಕಳಿಸುವರು. 'ಗೌರಿಯು' ತನ್ನ ಗಂಡನ ಮನೆಗೆ ನಂದಾದೀವಿಗೆಯ ಬೆಳಕಿನಲ್ಲಿ ಹೋಗಲೆಂದು ಕೊಂಗೊಡ ಬತ್ತಿಗಳನ್ನು ಸಿಂಗಾರಮಾಡಿ ಊರ ಮುಂದಿನ ದೊಡ್ಡ ಜಲಾಶಯಗಳಲ್ಲಿ ಬಿಡುವುದನ್ನು ಉತ್ತರ ಕರ್ನಾಟಕದ ಎಲ್ಲ ಹಳ್ಳಿಗಳಲ್ಲಿಯೂ ಕಾಣಬಹುದು. ಈ ಸಮಯದಲ್ಲಿ ಹೆಣ್ಣುಮಕ್ಕಳು ಗೌರಿಗಂಗೆಯರ ಸಂವಾದ, ಮಹಾದೇವರಿಗೆ ಇಬ್ಬರ್ಹೆಂಡಿರ ಕಾಟ, ಸವತಿ ಮತ್ಸರ ಮೊದಲಾದುವುಗಳನ್ನು ಕುರಿತು ಜಿದ್ದಿಗೆ ಬಿದ್ದು ಹಾಡುಗಳನ್ನು ಹಾಡುವರು. ಹಲಕೆಲವರು ಕೋಲು ಹಾಕುವರು. ಗೌರಿಗಂಗೆಯರ ಸಂವಾದದ ಹಾಡು ಕರ್ನಾಟಕದ ಎಲ್ಲ ಭಾಗಗಳಲ್ಲಿಯೂ ಕಂಡುಬರುವುದು. ಈ ಹಾಡು 'ಮಲ್ಲಿಗೆ ದಂಡೆ,' 'ಹಳ್ಳಿಯ ಪದಗಳು' ಎಂಬ ಪುಸ್ತಕಗಳಲ್ಲಿ ಈಗಾಗಲೆ ಅಚ್ಚಾಗಿ ಬಂದಿದೆ. ಈಗ ಸಂಕಲನ ಮಾಡಿದ 'ಜಾನಪದ ಸಂಭಾರ' ಎಂಬ ಮುಂಬರುವ ಹೊತ್ತಿಗೆಯಲ್ಲಿಯೂ ಈ ಹಾಡನ್ನು ಅದರ ವೈವಿಧ್ಯತೆಯ ಮೂಲಕ ಶೇಖರಿಸಲಾಗಿದೆ. ಜನಪದ ಸಾಹಿತ್ಯವನ್ನು ಸಂಕಲನ ಮಾಡುವಾಗ ಈ ಹಾಡಿನ ಅನೇಕ ರೂಪಾಂತರಗಳು ನಿದರ್ಶನಕ್ಕೆ ಬಂದಿವೆ. ಎಲ್ಲವುಗಳಲ್ಲಿಯೂ ಬರುವ ಕಥೆಯು 'ಗೌರಿಯು ಮುಟ್ಟಾದದ್ದು,' 'ಗಂಗೆಯು ಜಗಳಮಾಡಿ ಮಾಯವಾದದ್ದು,' ಬೆಳುವಲದಲ್ಲಿ ಸಂಕಲಿಸಲಾದ ಹಾಡಿನಲ್ಲಿ ಗಂಗೆಯು ಪಾತಾಳ ಲೋಕದಲ್ಲಿ ಆಲದ ಮರದ ಬುಡದಲ್ಲಿ ಅಡಗಿರುವಳೆಂದು ಅಲ್ಲಿಯೇ ಹಸುರನ್ನು ಮೇಯುವ ಕತ್ತೆಯು ಹೇಳಲು ಹುದುಗಿದ ಗಂಗೆಯು ಪಾತಾಳದಿಂದ ಹೊರಬಿದ್ದು ಕತ್ತೆಯ ಮೂಗನ್ನು ಸೀಳಿದಳೆಂದು ಹಾಡಿನಲ್ಲಿ ಬಂದಿದೆ. ಆದುದರಿಂದಲೇ ಕತ್ತೆಯ ಮೂಗಿನ ಸೆಂಬೆಗಳು ಹರಿದು ಇಂದಿನವರೆಗೂ ಜೋತಾಡುವುವು.

ಮೇಲಲೋಕ ಹುಡುಕಿ, ನಡುವಿನ ಲೋಕ ಹುಡುಕಿ
ಪಾತಾಳ ಲೋಕಾಕ ಇಳಿದಾರ ॥ ಕೋ ॥
ಎಲ್ಲೆಲ್ಲಿ ಹುಡುಕಿದರ, ಸಿರಿಗಂಗಿ ಸಿಗವಳ್ಳ
ಆಲದ ಮರದಾಗ ಅಡಗ್ಯಾಳ ॥ ಕೋ ॥
ಅಲ್ಲೊಂದು ವರ್ತ್ಯಾಗಿ, ಸುತ್ತೆಲ್ಲ ಹಸುರಾಗಿ
ಹಸುರಾಗನಿಂತು ಒದರೀತ। ಹಿರಿಗತ್ತಿ
ಸಿರಿಗಂಗಿ ಇಲ್ಲಿ ಅಡಗ್ಯಾಳ ॥ ಕೋ ॥
ಆಲದ ಮರಬಿಟ್ಟು, ಹೊರಗ ಹರಿದಾಳ ಗಂಗಿ
ಕತ್ತೆಯ ಮೂಗ ಸೀಳ್ಯಾಳ ॥ ಕೋ ॥
ನೆನೆಯಕ್ಕಿ ನನೆಗಡಲಿ, ಗೊನೆಯ ಬಾಳೇಹಣ್ಣು
ತನುವೇರಿದಡಕಿ ಬಿಳಿಯಲೆ ॥ ಕೋ ॥ ತಗೊಂಡು
ಗಂಗವ್ವ ಪೂಜೆ ಗೈದಾರ ॥ ಕೋ ॥ –ಜಾ–ಸಂ–

ಅನೇಕ ವಾದ ಸಂವಾದಗಳನ್ನೊಳಗೊಂಡ ಈ ಹಾಡು ಕನ್ನಡ ಎಲ್ಲ ಹೆಣ್ಣುಮಕ್ಕಳ ಮೆಚ್ಚಿನ ಹಾಡಾಗಿದೆ. ಆದುದರಿಂದ ಈ ಹಾಡು ಎಲ್ಲ ಭಾಗಗಳಲ್ಲಿಯೂ ದೊರೆಯುವುದು. ಮಳೆಗಾಲಸಂಪ್ರದಾಯಗಳು ಇಲ್ಲಿಗೆ ಮುಕ್ತಾಯವಾಗಲು ಸುಗ್ಗಿಯು ಕಾಲಿಡುವುದು. ಜನಪದವೇ ಕೆಲಸದಲ್ಲಿ ನಿರತವಾಗುವುದು. ಆ ಕಾಲದಲ್ಲಿ ಸುಗ್ಗಿಯ ಸಂಪ್ರದಾಯಗಳನ್ನು ಬಿಟ್ಟರೆ ವಸಂತೋದಯದವರೆಗೆ ಜನಪದವು ಮತ್ಯಾವ ಸಂಪ್ರದಾಯವನ್ನೂ ಆಚರಿಸುವುದಿಲ್ಲ.

ಗುಡಿಯ ಹುಣ್ಣಿಮೆ

ಭಾರತ ಹುಣ್ಣಿಮೆಗೆ ಚಳಿಯು ಕುಂದಿ ವಸಂತೋದಯವಾಗುವುದು. ಹಿಂಗಾರಿಯ ಬೆಳಸು ಮಾಗಿ ಆಗ ಪೂಜೆಗೊಳ್ಳಲ್ಪಡುತ್ತದೆ. ಹಳ್ಳಿಗಳಲ್ಲಿ ಈ ಹುಣ್ಣಿಮೆಗೆ ಗುಡಿಯ ಹುಣ್ಣಿಮೆಯೆಂದು ಕರೆಯುತ್ತಾರೆ. ಆ ದಿವಸವೇ ಕರ್ನಾಟಕದಲ್ಲಿ ದೇವರ ಕರಕೊಳ್ಳುವ

ಸಂಪ್ರದಾಯವಾಗಿದೆ. ಈ ಹುಣ್ಣಿಮೆಯ ಹಿಂದಿನ ಹುಣ್ಣಿಮೆಯ ದಿವಸ ಮನೆಯದೇವರು 'ಉಂಡಗಡಬು ತಿಂದು ಚೆಂಡಾಡಲು ಹೊರಗೆ ಹೋಗಿರುವ'ನೆಂಬ ಭಾವನೆಯು ಹಳ್ಳಿಗರಲ್ಲಿ ಉಂಟು. ಹಾಗೆ ಹೋದ ದೇವರು ಬನಬನಗಳನ್ನು ತಿರುಗಿ ಭಾರತಹುಣ್ಣಿಮೆಯ ದಿವಸ ಮನೆಗೆ ಬರಲು ಜನರು ಆದರಿಂದ ಬರಗೊಳ್ಳುತ್ತಾರೆ. ಆಗ ಬಿಳಿಜೋಳ, ಗೋಧಿಯ ಹೊಸತೆನೆಗಳನ್ನೂ, ಕಡಲಿ, ಅಗಸಿ, ಕುಸುಬೆಗಳ ಗೊಂಚಲುಗಳನ್ನೂ ಮಾವಿನ ತಳಿರುಗಳೊಡನೆ ತೋರಣ ಮಾಡಿ ಬಾಗಿಲಿಗೆ ಕಟ್ಟುವರು. ಗಂಟೆ, ಜಾಂಗಟೆ, ಮೊದಲಾದವುಗಳನ್ನು ಬಾರಿಸಿ 'ಒಳಗಿನ ದೇವರು ಹೊರಗೆ ಹೋಗಲಿ, ಹೊರಗಿನ ದೇವರು ಒಳಗೆ ಬರಲಿ' ಎಂದು ದೇವರನ್ನು ಕರೆದುಕೊಳ್ಳುವರು. ಪ್ರಶಾಂತವಾದ ಹಿಟ್ಟು ಚೆಲ್ಲಿದ ಬೆಳದಿಂಗಳು ಹೆಣ್ಣುಮಕ್ಕಳ ಮನಸ್ಸನ್ನು ಆಕರ್ಷಿಸುವುದು. ಆ ಸೊಬಗನ್ನು ಕಣ್ಣಾರೆ ನೋಡದೆ ಉತ್ತರ ಕರ್ನಾಟಕದ ಹಳ್ಳಿಯ ಹೆಣ್ಣುಮಕ್ಕಳು ಬೆಳದಿಂಗಳ ಹೊಯ್ಯುವರು. ಇದು ಬೆಳುವಲದಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಬೆಳದಿಂಗಳ ಹೊಯ್ಯುವದೆಂದರೆ ಸುಣ್ಣದ ಚಿಕ್ಕೆಗಳಿಂದ ಸುಳುವಿನ ಚಿತ್ರಗಳನ್ನು ತೆಗೆಯುವುದು. ಹುಣ್ಣಿಮೆಯು ಐದು ದಿನಗಳಿರುವ ಮುನ್ನವೆ ದಿನನಿತ್ಯ ಈ ಬೆಳದಿಂಗಳನ್ನು ಮನೆಯ ಮುಂದಿರುವ ಕಟ್ಟೆಗಳ ಹಾಸುಗಲ್ಲಿನ ಮೇಲಾಗಲಿ, ಇಲ್ಲವೆ ಹೆಬ್ಬಾಗಿಲದ ಎರಡೂ ಮಗ್ಗಲಿನ ತೋಳಗೋಡೆಗಳ ಮೇಲಾಗಲಿ ಹಾಕುವರು. ಹುಣ್ಣಿಮೆಯ ದಿವಸ ಗೋಡೆಯ ಮೇಲೆ ತೇರನ್ನು ಹೊಯ್ಯುತ್ತಾರೆ. ಬೆಳುವಲದ ಹಳ್ಳಿಗಳಲ್ಲಿ ಹೋದರೆ ಈ ಗೋಡೆಯ ಮೇಲಿನ ಚಿತ್ರಗಳು ನಿದರ್ಶನಕ್ಕೆ ಬರುತ್ತವೆ. ಉತ್ತರ ಕರ್ನಾಟಕದಲ್ಲಿ ಅನೇಕ ದೊಡ್ಡ ಜಾತ್ರೆಗಳು ಈ ಹುಣ್ಣಿಮೆಯ ದಿವಸ ಜರಗಿ, ಜನರು ಅಂದೇ ತೇರುಗಳನ್ನೆಳೆಯುವರು. ಈ ಎಲ್ಲ ದೇವರುಗಳ ಜಾತ್ರೆಗೆ ಹೋಗಿ ತೇರುಗಳನ್ನೆಳೆಯಲಾಗದೆ ಒಕ್ಕಲಿಗನು ಹುಣ್ಣಿಮೆಯ ದಿವಸ ಮನೆಯಂಗಳದಲ್ಲಿ, ಬೆಳದಿಂಗಳ ತೇರನ್ನು ಹೊಯ್ಯಿಸಿ ಪೂಜೆ ಮಾಡಿ ಕೈ ಮುಗಿಯುವನು. ವರುಷದಲ್ಲಿ ಬೆಳದಿಂಗಳ ಸೊಬಗನ್ನು ಕಾಣಬೇಕು ಇದೇ ಹುಣ್ಣಿಮೆಯಲ್ಲಿ. ಅಂತೆಯೇ ಒಕ್ಕಲಿಗನು ಈ ಹುಣ್ಣಿಮೆಗೆ ಮನೆಮಾರು ಬಿಟ್ಟು ಕೊಟ್ಟು ಜಾತ್ರೆ, ಮಹೋತ್ಸವಗಳನ್ನು ಮಾಡಲು ಹೊರಬೀಳುವನು. ನಿಸರ್ಗದ ಸೊಬಗುಣ್ಣಲು ಎಲ್ಲರಿಗೂ ಇದೊಂದು ಸುಸಮಯವೆಂದೇ ಹೇಳಬಹುದು.

ಶಿವರಾತ್ರಿ

ಇದು ಶಿವಯೋಗದ ಪುಣ್ಯದಿನ. ಭರತಖಂಡದ ಎಲ್ಲ ಭಾಗಗಳಲ್ಲಿಯೂ ಆಚರಿಸಲ್ಪಡುವ ಹಬ್ಬ. ಅಂದು ಶಿವನಿಗೆ ಅಭಿಷೇಕ ಮಹೋತ್ಸವಗಳು ನಡೆಯುವುವು. ಶಿವನಿಗೆ 'ಕೊಕ್ಕಾಬತ್ತಿ'ಗಳ ಸರಮಾಲೆಯನ್ನು, ಶಿವಪೂಜೆಮಾಡಿ ಜನರು ಬೆಳಗುವರು.

ಕೊಕ್ಕಾಬತ್ತಿ ಕ್ವಾಡಾಬತ್ತಿ
ನಾಡಿಗೆಲ್ಲಾ ಒಂದೇ ಬತ್ತಿ ॥

ಇದೇ ಆ ಜನರು ಬೆಳಗುವ ಶಿವದೀಪ. ದೇವರೆಂಬುವುದು ಒಂದು 'ದಿವ್ಯಜ್ಯೋತಿ' ಎಂಬ ತತ್ವವೂ ಅಡಗಿದೆ ಇದರಲ್ಲಿ. ಸುತ್ತೆಲ್ಲ ಶಿವಭಜನೆ ನಡೆದು ನಾಡೇ 'ಶಿವಲೋಕ'ವೆಂಬ ಭಾವನೆ ಬರುವುದು. ಶಿವಯೋಗದ ದಿವಸ ಶಿವಪೂಜೆ ಮಾಡಿ ಕೈಲಾಸವನ್ನು ಪಡೆದ ಶಿವಶರಣರ ಕಥೆಯನ್ನು ಕೇಳಿದ ಕನ್ನಡನಾಡಿನ ಒಕ್ಕಲಿಗನು ಆ ಶಿವಶರಣರನ್ನು ಹಾಡಿದ್ದಾನೆ.

ಬೇಡ ಬೇಟೆಗೆ ಹೋಗಿ, ಬೆಲ್ಲಪತ್ತರಿ ಕೊಯ್ದ
ಬೇಡ ಕನ್ನಯ್ಯ ಶಿವಪೂಜೆ। ಮಾಡಿದರ
ನಾಡೊಳಗೆ ನೋಡು ಶಿವರಾತ್ರಿ ॥೧॥ *-ಬೇ-ಕ-*

ಇಂತಹ ಶಿವಶರಣರ ಪ್ರಭಾವದಿಂದಲೇ ನಾಡೊಳಗೆ ಬೇಗು ಬೆಳಗಾಗಿ ವರುಷವರುಷಕ್ಕೆ ಶಿವರಾತ್ರಿಯು ಜನಪದಕ್ಕೆ ಬರುವುದೆಂದು ಅವನು ಹಂತಿಯಲ್ಲಿ ಹಾಡಿದ್ದಾನೆ. ಬೇಡರ ಕನ್ನಯ್ಯನು ಪಡೆದ ಶಿವಯೋಗವನ್ನೂ, ಬಿಲ್ವಪತ್ರಿಯ ಮಹತ್ವವನ್ನೂ ಹಾಡಿನಲ್ಲಿ ತೋರಿಸಿದ್ದಾನೆ. ಈ ಹಬ್ಬಕ್ಕೆ ಧಾರ್ಮಿಕ ಮಹತ್ವವೂ ಇದೆ. ಹಳ್ಳಿಗರಲ್ಲಿ ದೇವರೆಂಬ ಭಾವನೆಯು ಇಂಥ ಸಂಪ್ರದಾಯಗಳಿಂದ ಮತ್ತಷ್ಟು ಬೇರೂರಿ ನಿಲ್ಲುವುದು. ಒಕ್ಕಲಿಗನ ದೇವರೆಂಬ ಕಲ್ಪನೆಯು ದಿನದಿನಕ್ಕೆ ದೃಢವಾಗಿ ಅವನು ದೇವಭಕ್ತ (ಆಸ್ತಿಕ)ನಾಗಿ ಉಳಿದಿದ್ದಾನೆ. ದೇವರಿಲ್ಲದೆ ಅವನ ಕೆಲಸ ಬೊಗಸೆಗಳು ಸಾಗುವುದಿಲ್ಲ. ಬೆಳುವಲದ ಬಯಲಲ್ಲಿ ಬೇಸಗೆಯು ದಿನದಿನಕ್ಕೆ ಬೆಳೆಯ ಹತ್ತಲು ಅವನು ಬಿಸಲಲ್ಲಿ ದುಡಿಯಲಾರದೆ ಶಿವಶಿವನೆಂದು ಊಟ ಮಾಡಿ ಮನೆಯಲ್ಲಿಯೇ ಉಳಿಯುವನು.

ಹೋಳಿ

ಇದಕ್ಕೆ ಕಾಮನ ಹಬ್ಬವೆಂದೂ ಕರೆಯುತ್ತಾರೆ. ಭಾರತದ ಎಲ್ಲ ಭಾಗಗಳಲ್ಲಿಯೂ ಕಂಡುಬರುವ ಸಂಪ್ರದಾಯ. ಭಾರತದಲ್ಲಿ ಆಚರಿಸಲ್ಪಡುವ ಹಬ್ಬಗಳು ಹೆಚ್ಚಾಗಿ ಹೆಣ್ಣುಮಕ್ಕಳ ಹಬ್ಬಗಳಾಗಿವೆ. ಹೋಳಿಯು ಮಾತ್ರ ಗಂಡುಮಕ್ಕಳ ಕೇವಲ ಒಂದೇ ಒಂದು ದೊಡ್ಡ ಹಬ್ಬವೆಂದು ಎಣಿಸಲ್ಪಡುತ್ತದೆ. ಹಲಕೆಲವು ಭಾಗಗಳಲ್ಲಿ ಹೆಣ್ಣುಮಕ್ಕಳೂ ಈ ಹಬ್ಬದಲ್ಲಿ ಭಾಗವಹಿಸುವರು. ಹಬ್ಬಹುಣ್ಣಿಮೆಗಳಲ್ಲಿ ಹೆಣ್ಣು ಆನಂದ ಪಡುವುದನ್ನು ಕಂಡಗಂಡು ದುಡಿಯುವ ತನಗೆ ಹಬ್ಬವಿಲ್ಲೆಂದು ದೇವರ ಮುಂದೆ ದೂರಿಕೊಂಡನಂತೆ. ಆಗ ದೇವರು ಆ ದೂರನ್ನು ಕೇಳಿ ಗಂಡು ಒಮ್ಮೆಯಾದರೂ ವರುಷದಲ್ಲಿ ನಕ್ಕಾಡಿ ಪ್ರಪಂಚ ಭಾರವನ್ನು ಮರೆಯಲೆಂದು ಆಡಲು ಹೋಳಿಯನ್ನು ನಿರ್ಮಿಸಿದನೆಂದು ಜನಪದದಲ್ಲಿ ಒಂದು ಕಥೆಯೂ ಬರುತ್ತದೆ. ನಮ್ಮ ಸಂಸ್ಕೃತಿಯಲ್ಲಿ ಈ ಹಬ್ಬಕ್ಕೆ ದೊಡ್ಡ ಪರಂಪರೆಯೂ, ಪುರಾಣ ಕಥೆಯೂ ಇದೆ. ಕಾಮನ ವಿಚಾರವಾಗಿ ಋಗ್ವೇದ, ಅಥರ್ವಣವೇದಗಳಲ್ಲಿಯೂ ಉಲ್ಲೇಖವಿದೆ. ಸ್ಕಂದ ಪುರಾಣದಲ್ಲಿಯೂ, ಶಿವಪುರಾಣದಲ್ಲಿಯೂ ಕಾಮದಹನ ಬರುತ್ತದೆ. ಬುದ್ಧನು ಕಾಮನನ್ನು ಗೆದ್ದ ವರ್ಣನೆಗಳು ಬೌದ್ಧ ಸಾಹಿತ್ಯದಲ್ಲಿವೆ. ಜೈನರೂ, ಬೌದ್ಧರೂ ಹೋಳಿಯನ್ನಾಚರಿಸುವರು. ಪ್ರಸಿದ್ಧ ಸಂಸ್ಕೃತ ನಾಟಕಕಾರರಾದ

ಕಾಳಿದಾಸ ಮೊದಲಾದ ಕವಿಗಳು ತಮ್ಮ ಕಾವ್ಯಗಳಲ್ಲಿ ಹೋಳಿಯನ್ನು ಉಲ್ಲೇಖಿಸಿದ್ದಾರೆ. 'ಶಾಬರ ಭಾಷ್ಯ'[೧]ದಲ್ಲಿಯೂ ಈ ಹೋಲಿಕಾ ವೃತ್ತವು ಪ್ರಾಚ್ಯರಲ್ಲಿ ಮಾತ್ರ ವಾಡಿಕೆಯಲ್ಲಿದ್ದಿತ್ತು ಎಂದು ಹೇಳಿದೆ. ಹೀಗೆ ಹೋಳಿಯು ಬುನಾದಿಯಿಂದ ನಮಗೆ ಸಂಪ್ರದಾಯವಾಗಿ ಬಂದಿದೆ.

ಹೋಳಿಯು ಹದಿನೈದು ಅಥವಾ ಇಪ್ಪತ್ತು ದಿನಗಳವರೆಗೆ ಆಡುವ ಆಟವಾಗಿದೆ. ಇದರ ಉತ್ಸವವು ಹೋಳಿಯ ಹುಣ್ಣಿಮೆಯಿಂದ ಪ್ರಾರಂಭವಾಗಿ 'ರಂಗ ಪಂಚಮಿಯ'ವರೆಗೆ ನಡೆಯುವುದು. ಭರತಖಂಡದಲ್ಲಿ ಕಾಮನಕಟ್ಟೆಗಳಿಲ್ಲದ ಹಳ್ಳಿಗಳೇ ಇಲ್ಲ. ಕಾಮನು ಬಲು ಚೆಲುವನೆಂಬ ನಂಬಿಕೆಯೂ ನಮ್ಮಲ್ಲಿದೆ. ಗಂಡು ಮಕ್ಕಳ ಚೆಲುವಿಕೆಯನ್ನು ಕಾಮನಿಗೆ ಹೋಲಿಸುವುದುಂಟು. ಈ ಹಬ್ಬ ಬರುವುದು ಬೇಸಗೆಯಲ್ಲಿ. ಆಗ ಅದೇ ವಸಂತಾಗಮನ. ಬನಬನಗಳು ಚಿಗಿತು ಕೊನರಿಟ್ಟು ಹೂತುಂಬಿ ನಿಲ್ಲುವುವು. ಪಕ್ಷಿಗಳಿಗೆ ಹೊಸ ದುಪ್ಪಳ ಬಂದು ಅಂದವಾಗಿ ಕಾಣುವುವು. ನಿಸರ್ಗದೆಲ್ಲೆಡೆಗಳಲ್ಲಿಯೂ ನವಚೈತನ್ಯವು ಉಕ್ಕಿಬರುವುದು. ಈ ಚೈತನ್ಯವು ನಿಸರ್ಗದಿಂದ ಮಾನವ ಕುಲಕ್ಕೂ ಉಕ್ಕಿಬಾರದಿರುವುದೇ? ಆಗ ಮಾನವನಿಗೆ ಇಲ್ಲದ ಹರೆಯುಕ್ಕಿ ಬರುವುದು. ಹೌಸ–ಹವ್ಯಾಸಗಳ ರೆಕ್ಕೆಗಳನ್ನು ಬಿಗಿದುಕೊಂಡು ಮಾನವನ ಈ ಹರೆಯು ವಸಂತಮಾಸದಲ್ಲಿ ಮೋಜು ಮಜಲನೊಡನೆ ಸುಳಿದಾಡ ಹತ್ತುವುದು. ಇದೇ ಹೋಳಿಯಾಗಿ ಜನತೆಯಲ್ಲಿ ಪರಿಣಮಿಸಿದೆ ಎಂದು ಹೇಳಬಹುದು. ನಡುಹರೆ ಕಳೆದುಕೊಂಡ ಮುದುಕರು ಸಹ ನವತರುಣರಾಗಿ ಬಲುಹುರುಪಿನಿಂದ ಹೋಳಿಯನ್ನಾಡಲು ಮನೆಬಿಟ್ಟು ಹೊರಬೀಳುವರು. ಹೋಳಿಯ ಹುಣ್ಣಿಮೆಯ ದಿವಸ ಕಾಮನ ಸುಂದರವಾದ ಪ್ರತಿಮೆಯನ್ನು ಮಾಡಿಸಿ, ಶೃಂಗಾರ ಮಾಡಿ ಊರಕಾಮನ ಕಟ್ಟೆಯ ಚಾವಣಿಯ ಹಂದರದಲ್ಲಿ ಬಲು ಡೌಲಿನಿಂದ ಕಾಮನನ್ನಿಡುವ ವಾಡಿಕೆಯಿದೆ. ಹಲಕೆಲವು ಭಾಗಗಳಲ್ಲಿ ಕಾಮನ ಎಡಭಾಗಕ್ಕೆ ರತಿದೇವಿಯ ಹೆಣ್ಣುಗೊಂಬೆಯನ್ನೂ ಇಡುವರು. ಕೆಲವು ಹಳ್ಳಿಗಳಲ್ಲಿ 'ಸರಕಾರ ಕಾಮ'ನೆಂತಲೂ 'ದೈವದ ಕಾಮ'ನೆಂತಲೂ, 'ಓಣಿಯ ಕಾಮ'ನೆಂತಲೂ ಕಾಮಣ್ಣನನ್ನಿಡುತ್ತಾರೆ. ಮೊದಲು ರಾಜಾಂಗಣದಲ್ಲಿ ಕಾಮನನ್ನಿಟ್ಟು ಆಡುವ ವಾಡಿಕೆಯಿತ್ತು. ಆ ಕಾಲದಲ್ಲಿ ಭರತಖಂಡದ ರಾಜಮನೆತನಗಳು ಆಡಿದ ಹೋಳಿಯ ಹಬ್ಬದ ಚಿತ್ರಗಳನ್ನು ಸಂಸ್ಕೃತ ಕವಿಗಳ ನಾಟಕಗಳ 'ವಸಂತ ಮಹೋತ್ಸವ' ವರ್ಣನೆಗಳಲ್ಲಿ ಕಾಣಬಹುದಾಗಿದೆ. ಕರ್ನಾಟಕದಲ್ಲಿ ಆಗಿಹೋದ ರಾಜಮನೆತನಗಳಲ್ಲಿ ವಿಜಯನಗರದ ಅರಸರು ಇದನ್ನು ಪಾಲಿಸುತ್ತ ಬಂದಿದ್ದಾರೆ. ಈಗಲೂ ಹಳ್ಳಿಗಳಲ್ಲಿರುವ 'ಸರಕಾರ ಕಾಮ'ನಿಗೆ ಸರಕಾರದಿಂದ ಮಾನ ಮನ್ನಣೆಯು ಬರುತ್ತದೆ. 'ದೈವದ ಕಾಮ'ನಿಗೆ ಊರ ದೈವದಿಂದ ಮಾನಮನ್ನಣೆಯು ದೊರೆಯುತ್ತದೆ. ಕಾಮನ ಮುಂದೆ ಮಂಗಲ ವಾದ್ಯಗಳನ್ನು ಬಾರಿಸುವ, ಊದುವ ಸನಾದಿ ಕೊರುವರಿಗೆ 'ಕಾಮನ ಮಾನೆ'ಗಳೆಂಬ ಭೂಮಿಗಳೂ ಕೊಡಲ್ಪಟ್ಟಿದ್ದು ನಿದರ್ಶನಕ್ಕೆ ಬರುವುದು. ಹಲಕೆಲವು ಹಳ್ಳಿಗಳಲ್ಲಿ ಇತ್ತೀಚೆಗೆ ಹೋಳಿಯ ಆಟದಲ್ಲಿ ಪಕ್ಷಪಂಗಡಗಳಾಗಿ ಓಣಿಓಣಿಗೆ ಸಹ ಕಾಮನನ್ನಿಡುತ್ತ ಬಂದಿದ್ದಾರೆ. ಇವೇ 'ಓಣಿಯ ಕಾಮ'ಗಳಾಗಿವೆ.

ಕಾಮನಿಟ್ಟ ಹಂದರದಲ್ಲಿ ಜನರು ತಂದಿಟ್ಟುಕೂಡಿ, ಹಾಡಿ, ಬಾರಿಸಿ ಆಡುವುದುಂಟು. ಹೋಳಿಯ ಆಟವು ಇದೇ ತರದ್ದಿರಬೇಕೆಂಬ ನೇಮನಿತ್ಯವಿಲ್ಲ. ಅಶ್ಲೀಲ, ಅಸಹ್ಯವಾದ ಮಾತುಗಳನ್ನಾಡಿ ಜನರು ಕಾಡಸ್ಥಿತಿಯ ಪ್ರವೃತ್ತಿಗಿಳಿಯುವುದುಂಟು. ವಿಕಾರ ರೂಪತಾಳಿ ಒಬ್ಬರಿಗೊಬ್ಬರು ಬೈದಾಡುವುದೂ, ಹೊಲಸು ಪದಾರ್ಥಗಳನ್ನು ಒಬ್ಬರ ಮೇಲೊಬ್ಬರು ಸೂರಾಡುವುದೂ, ಅಣಕಿಸಿ ಗೇಲಿಮಾಡುವುದೂ ಕಂಡುಬರುವುದು.

ಹೋಳಿಹುಣ್ಣಿಮೆ ಬಂತು, ಹೊಯ್ಕೊಳ್ಳುದು ಬಂತು
ಹೋಳ್ಗಿ ತುಪ್ಪುಣ್ಣುದು ಬಂತೊ ॥

ಎಂದು ಹಾಡಿ ಮನೆಮನೆಯ ಮುಂದೆ ನಿಂತು ಹೊಯ್ಕೊಂಡು ಹೋಳಿಗೆ ಮೊದಲಾದುವುಗಳನ್ನು ಕದ್ದೂ ತಿನ್ನುವರು. "ಢುಂಢು, ಅಥವಾ ಹೋಲಿಕಾ ಎಂಬ ರಾಕ್ಷಸಿಯ ತೃಪ್ತಿಗಾಗಿ ತುಚ್ಛ ಭಾಷಣಗಳನ್ನುಚ್ಚರಿಸಬೇಕು ಎಂದು ಪುರಾಣ ಕಥೆಯಿದೆ."[೨] ಹೀಗೆ ಪುರಾಣದಿಂದ ಬಂದ ಈ ಹಕ್ಕು ಈಗ ಜನತೆಯಲ್ಲಿ ಸಂಪ್ರದಾಯವಾಗಿಬಿಟ್ಟಿದೆ.

ಕಾಮಣ್ಣ ಕಟ್ಟುತಲಿ, ಗೊನೆಮುಳ್ಳ ಸುರಿಯುತಲಿ
ಸೀತಾಳ ಬಾಂವಿ ತಗೆಸುತಲಿ । ನಮಕಾಮ
ಜೀತಹೋಗ್ಯಾನ ಶಿವನಲ್ಲ ॥ *–ಹೋ–ಹಾ–*

ಎಂದು ಕಾಮನು ಶಿವನಸೇವೆಗೆ ಹೋದನೆಂದು ಹಾಡುವರು. ಕೆಲವು ಭಾಗಗಳಲ್ಲಿ ಓಕುಳಿಯಾಡಿ ಸೋಗುಗಳನ್ನು ಕಟ್ಟಿಕೊಂಡು ಹಗಲಿರುಳು ಜನರು ಹಾಡಿ ಕುಣಿಯುವುದು ಗೋಚರವಾಗುವುದು. ಈ ಹಬ್ಬದ ವಿಶೇಷ ಉತ್ಸವವನ್ನು ಉತ್ತರ ಕರ್ನಾಟಕದೊಳಗೆ ಬಾಗಲಕೋಟೆಯಲ್ಲಿ ಕಾಣಬಹುದಾಗಿದೆ.

ಹಳ್ಳಿಗಳೊಳಗೆ ಕಾಮನ ಸದರಿನಲ್ಲಿ ಸಭೆ ಕೂಡಿ ಜನರು ಹಾಡುತ್ತಾರೆ. ಹಳ್ಳಿಯ ಹೊಲತಿಯರು ನುರಿತವರಾಗಿ ಹೋಳಿಯ ಹಾಡುಗಳನ್ನು ಊರ ಗಂಡಸರ ಕೂಡ ಹಾಡಲು ತೋಡಿಯ ಒಡ್ಡುವರು. ಹೋಳಿಯ ಹಾಡುಗಳು ಲಾವಣಿಗಳಿರಬಹುದು, ದುಂದುಮಿಗಳಿರಬಹುದು. ದುಂಡಮಲ್ಲಿಗೆಯ ಪಲ್ಲವಿಯನ್ನೊಳಗೊಂಡಿರಬಹುದು, ಕೇವಲ ತ್ರಿಪದಿಗಳಿರಬಹುದು, ಸೋಬಾನದಲ್ಲಿಯೂ ಇರಬಹುದು; ಹೆಜ್ಜೆ ಕುಣಿತಗಳಲ್ಲಿರುವುವಲ್ಲದೆ, ಕೋಲಿನಲ್ಲಿಯೂ ಕಂಡುಬರುವವು. ಉತ್ತರ ಕರ್ನಾಟಕದಲ್ಲಿ ಜನರು ಕಾಮನನ್ನು ಬೇವಿನ ಹೂವಿನಿಂದ ಸಿಂಗಾರ ಮಾಡುವರಲ್ಲದೆ ತಾವೂ ಸಿಂಗಾರ ಮಾಡಿಕೊಳ್ಳುವರು. ಭರತಖಂಡದಲ್ಲಿಯ ಪ್ರಾಚೀನ ಋಷಿಗಳಿಗೆ ಕರ್ನಾಟಕದಲ್ಲಿ ಬೆಳೆಯುವ ಬೇವಿನ ಹೂವು (ಕಾಮನಹೂ) ದೃಷ್ಟಿಗೆ ಬಿದ್ದಂತೆ ಕಂಡುಬರುವುದಿಲ್ಲ. ಬಿದ್ದಿದ್ದರೆ, ಪಂಚಪುಷ್ಪಬಾಣಗಳ ಕಾಮನು ಷಡ್ಪುಷ್ಪ

---

೧. 'ಶಾಬರ ಭಾಷ್ಯ', ಆನಂದಾಶ್ರಮದ ಮುದ್ರಣ, ಪುಟ ೨೫೦.
೨. 'ಕರ್ನಾಟಕ ಸಂಸ್ಕೃತಿ', ಪುಟ ೪೪, ದೇವುಡು.

ಬಾಣಗಳುಳ್ಳವನಾಗುತ್ತಿದ್ದನೇನೊ? ಹೋಳಿಯಲ್ಲಿ, ಸುಂದರ, ಸುವಾಸಿಕವಾದ ಬೇವಿನ ಹೂವನ್ನು ಮುಡಿಯದ ಹಳ್ಳಿಗನಿಲ್ಲ. ಹೀಗೆ ಸಿಂಗಾರಾಗಿ, ಹೋಳಿಯ ಹಾಡನ್ನು ಹಾಡಲುನಿಂತ ಹಳ್ಳಿಯ ಹೊಲತಿಯರೂ, ಗಂಡಸರೂ ತೋಡಿಯನ್ನು ಬೇಸರಾಗುವತನಕ ಹಾಡುತ್ತಾರೆ. ಹಾಡು ಮುಗಿಯಲು ಅವರಿಗೆ ಊರವರು ಕೂಡಿ ಉಡುಪು ಮೊದಲಾದುವುಗಳನ್ನು ಕೊಡುವ ಪದ್ಧತಿಯೂ ಉಂಟು.

ಮಜಲೀಗೆ ಬಂದೀವಿ, ಮಾರಿಮಾರಿ ನೋಡಬ್ಯಾಡ್ರೆ
ತೋಡೀಗೆ ತೋಡಿ ಹಾಡಬೇಕ್ರೆ। ಹುಡಗೇರ
ಓಡೋಡಿ ಮುಂದ ಹೋಗಬ್ಯಾಡ್ರೆ॥ —ಹೋ—ಹಾ—
ಮಲ್ಲಿಗೆ ದುಂಡ ಮಲ್ಲೀಗೆ ॥ಪ॥

ಹೋಳೀಯ ಹಬ್ಬಕ ಮೇಳಾಗಿ ಹಾಡೂನ
ವಾಳ್ಯಾಗ ಬ್ಯಾಡ ನನ ಗೆಣತಿ ॥ ಮಲ್ಲಿಗೆ ॥
ವಾಳ್ಯಾಗ ಬ್ಯಾಡ ನನ ಗೆಣತಿ। ಬಂದಾರ
ಕೇಳಾರ ಮಂದಿ ನಮ್ಹಾಡ ॥ ಮಲ್ಲಿಗೆ ॥ —ಹೋ—ಹಾ

ಹೀಗೆ ಮೊದಲು ಕೆಣಕೆಣಕಿ ಪಣಕಟ್ಟಿಕೊಳ್ಳುವರು. ಹಾಡನ್ನು ಆರಂಭ ಮಾಡುವ ಮುನ್ನ ಎರಡೂ ಪಂಗಡದವರು ಗಣಪತಿಯನ್ನು ಸ್ತೋತ್ರ ಮಾಡಿಯೇ ತಮ್ಮ ಹಾಡುಗಳನ್ನು ಆರಂಭಿಸುವರು. ಓದುಬರಹವನ್ನರಿಯದ ಈ ಜನರ ಹಾಡುಗಳನ್ನು ಕೇಳಿದರೆ ವಾಗ್ದೇವಿಯು ಇವರ ಕವಿತ್ವಕ್ಕೆ ಮೆಚ್ಚಿ ನಾಲಿಗೆಯ ತುದಿಯಲ್ಲಿ ತನ್ನ ವೀಣೆಯನ್ನು ನುಡಿಸುವಳೇನೊ ಎಂಬಂತೆ ಭಾಸವಾಗುವುದು. ಶೀಘ್ರ ಕವಿಗಳಾಗಿ ಬಾಯಿಯಲ್ಲಿ ಬಂದದ್ದನ್ನೇ ಹಾಡುವದನ್ನು ನೋಡಿದರೆ, ಕಲಿತವರೆಂದು ಹೆಮ್ಮೆಕೊಚ್ಚಿಕೊಳ್ಳುವ ಪಂಡಿತರೂ ತಲೆತಗ್ಗಿಸಬಹುದು.

ಗಣಪತಿ ನಾನಿನ್ನ, ಚಣಚಣಕ ನೆನದೇನೊ
ಅಣಅಣಕ ಆಡು ಜನಕೆಲ್ಲ। ಬಾಯಾಗ
ತುಣ ತುಣಕು ಬೆಲ್ಲ ಒಗೆದ್ಹಾಂಗೊ ॥೧॥

ಅಕ್ಕ ಪಾರ್ವತಿಮಗನು, ಚಿಕ್ಕವನು ಗಣಪತಿಯೊ
ನೆಪ್ಪಮಾಡಿ ನಿನ್ನ ನೆನದೇನೂ। ಗಣನಾಥ
ತಪ್ಪಿದಲ್ಲೆನಗ ಬೆಸನಾಗೊ ॥೨॥

ಬುದ್ಧಿಗಣಪತಿ ಮುಂದ, ಭೂಮೀಗೆ ಫಲಮುಂದ
ಗುಡ್ಡಕಮುಂದ ಹುಲಿಯಪ್ಪ। ಮುಂದಿರುವ
ಗುದ್ದೀಗೆ ಮುಂದ ನರಿಯಪ್ಪ ॥೩॥

ಬೆನಕ ನಾಲಿಗಿಮ್ಯಾಲೆ, ನೆನಿಬಾರೊ ಹಾಡುದುಕ
ಕಣಕಟ್ಟಿ ಮಂದಿ ಕೂಡ್ಯೆತೊ। ಕೇಳುದಕ
ಮನಕ ಬೆಸನಾಗೊ ನುಡಿನುಡಿಗೊ ॥೪॥

ಕೂತೀರು ಸಭದವರ, ನಿಂತೀರು ಸಭದವರ
ಚಿತ್ತಿಟ್ಟು ಕೇಳ್ರಿ ನಮ್ಹಾಡ। ಸಭದವರ
ಕೈಮುಗಿದು ನಾವು ಹೇಳ್ತೇವ್ರಿ ॥೫॥ —ಹೋ—ಹಾ—

ಎಂದು ಕೂಡಿದ ಜನದಲ್ಲಿ ಗಣಪತಿಯನ್ನು ನಮಸ್ಕರಿಸಿ ಜನರಿಗೆ ತಮ್ಮ ಹಾಡನ್ನು ಕೇಳಲು ಬೇಡಿಕೊಳ್ಳುವರು. ಇಷ್ಟಾದ ಮೇಲೆ, ಅವರು ಪ್ರಾರಂಭಮಾಡುವುದು ಹೋಳಿಯ ಹಾಡು.

ಆನಿಗಂಬಾರಿ ಚೆಂದ, ಕುದುರೀಗೆ ತಡಿಚೆಂದ
ಸದರೀಗೆ ಚೆಂದ ಕಾಮಣ್ಣ। ಬಗಲಾಗ
ರೂಪಕ ಚೆಂದ ರತಿದೇವಿ ॥ —ಹೋ—ಹಾ—

ಹೀಗೆ ಕಾಮನ ಸದರನ್ನು ಹಾಡಿ ಹೋಳಿಯ ಸಂಪ್ರದಾಯವು ಜನಪದದಲ್ಲಿ ಹೇಗೆಬಂತೆಂಬುದನ್ನು ಬಲು ಮಾರ್ಮಿಕವಾಗಿ ಹಾಡುತ್ತಾರೆ. ಸ್ಕಂದ ಪುರಾಣದಲ್ಲಿಯೂ ಶಿವಪುರಾಣದಲ್ಲಿಯೂ ಕಾಮದಹನವು ಬರುತ್ತದೆ. ಬಹುತರವಾಗಿ ಸಂಸ್ಕೃತ ಕವಿಗಳಾಗಲಿ, ಕನ್ನಡ ಕವಿಗಳಾಗಲಿ, ಈ ಪ್ರಸಂಗವನ್ನು ತಮ್ಮ ಕಾವ್ಯಗಳಲ್ಲಿ ಈ ಗ್ರಂಥಗಳಿಂದಲೇ ಆಯ್ದುಕೊಂಡಿದ್ದಾರೆ. ಕಾಳಿದಾಸನು ತನ್ನ ಕುಮಾರಸಂಭವದಲ್ಲಿ ಇದನ್ನು ಪ್ರಸಂಗಕ್ಕೆ ಒಪ್ಪುವ ಶೃಂಗಾರಮಯ ಶೈಲಿಯಲ್ಲಿ ಹೇಳಿದ್ದಾನೆ. ಹರಿಹರನು 'ಗಿರಿಜಾಕಲ್ಯಾಣ'ದಲ್ಲಿಯೂ ಈ ಪ್ರಸಂಗವನ್ನೇ ಬರೆದಿದ್ದಾನೆ. ಯಾರೇ ಹೇಳಲಿ, ಪೌರಾಣಿಕ ಪರಂಪರೆಗೆ ಶರಣುಹೋಗಿ ಈ ಪ್ರಸಂಗವನ್ನು ಹಾಡಿದ್ದಾರೆ. ಆದರೆ ಜನಪದವು ಈ ಸಂದರ್ಭದಲ್ಲಿ ಪೌರಾಣಿಕ ಪುರುಷರನ್ನೆತ್ತಿಕೊಂಡಿದ್ದರೂ ಅವರಿಗೆ ಲೌಕಿಕವನ್ನಂಟಿಸಿದೆ; ದೇವರಿದ್ದರೇನು? ದೇವತೆಗಳಿದ್ದರೇನು? ಮನೋಭಾವನೆಗಳ ತಾಕಲಾಟದ ವ್ಯಾಪಾರಗಳನ್ನು ಅವರಲ್ಲಿ ಒಡಮೂಡಿಸಿ ಮಾನವರಂತೆ ಮಾತಾಡಲು ಹಚ್ಚಿದೆ.

ಪಾರೋತಿ ಮಾದೇವ, ಏರಿಸಭದಾಗಿರಲು
ಪಾರೋತಿ ಹೇಳಚೆಲುವ್ಯಾರ । ಕೇಳುದಕ
ತೀರ ಚೆಲುವಾನ ಕಾಮಣ್ಣ ॥
ಸಿಟ್ಟಿಗೇಳುತ ಶಿವನು, ಬಿಟ್ಟಾನೊ ಉರಿಗಣ್ಣ
ಸುಟ್ಟು ಬೂದ್ಯಾದೊ ಕಾಮಣ್ಣ । ರತಿದೇವಿ
ಹೊಟ್ಟೆ ಬಡಕೊಂಡು ಅಳತಾಳೊ ॥ *–ಹೋ–ಹಾ–*

ಎಷ್ಟು ಪ್ರಪಂಚದ ಮಾತಾಗಿದೆ ಕಾಮದಹನವು ನಮ್ಮ ಜಾನಪದ ಸಾಹಿತ್ಯದಲ್ಲಿ! ಕೂಡಿದ ಸಭೆಯಲ್ಲಿ 'ನಾ ಚೆಲುವ, ನೀ ಚೆಲುವ'ನೆಂದು ವಾದವಿವಾದ ನಡೆಯುತಂತೆ! ಶಿವನು ಜಗತ್ತಿನಲ್ಲಿ ಯಾರು ಚೆಲುವನೆಂದು ಪಾರ್ವತಿಯನ್ನು ಕೇಳಲು ಅವಳು ಏಕೋಭಾವದಿಂದ 'ಕಾಮ ಚೆಲುವನೆಂದು' ಅಂದಳಂತೆ! ಗಂಡನಿಗೆ ಸಿಟ್ಟು ಬರದೇನು ಮಾಡೀತು? ಹೆಂಡತಿಯು ಮನೆಯ ಗಂಡನ ಚೆಲುವಿಕೆಯನ್ನೊಪ್ಪದೆ ಅನ್ಯಪುರುಷನು ಚೆಲುವನೆಂದು ಸಭೆಯಲ್ಲಿ ಅಂದರೆ ಗಂಡನಿಗೆ ಹೇಗಾಗಬಹುದು? ಹಾಗೆ ಮಹಾದೇವನಿಗಾಗಿದೆ ಪಾರ್ವತಿಯ ಮಾತಿಗೆ! ಸಿಟ್ಟು ಬಾರದ ಶಿವನು, ಮಡದಿ ಪಾರ್ವತಿಯ ಮಾತನ್ನು ಕೇಳಿ ಕೆರಳಿದ; ತನ್ನ ಉರಿಗಣ್ಣನ್ನೇ ಕಾಮನ ಮೇಲೆ ಬಿಟ್ಟು ಬಿಟ್ಟ! ಮುಂದೇನು? ಹಣೆಗಣ್ಣಿನ ದಳ್ಳುರಿಗಳು ನಾಲಗೆಯನ್ನು ಚಾಚಿ ಚಾಚಿ ಲೋಕಚೆಲುವ (ಕಾಮ)ನನ್ನು, ಹಾ! ಅನ್ನುವುದರೊಳಗೆ ನುಂಗಿಯೇ ಬಿಟ್ಟವು. ಕಾಮನು ಸುಟ್ಟು ಬೂದಿಯಾದ; ರತಿಯ ವಿಲಾಪವೇ ವಿಲಾಪ! ಜನರಲ್ಲಿ ಕಳವಳವೇ ಎದ್ದಿತು. ಇಷ್ಟೆಲ್ಲ ಅನಿಷ್ಟಕ್ಕೆ ತಾನೇ ಕಾರಣಳೆಂದು ಪಾರ್ವತಿಗನಿಸಲು, ಅವಳೂ ಶೋಕ ಮಾಡಹತ್ತಿದಳು. ಶಿವನ ಕರಳೂ ಕರಗಿತು.

ಅಳುವ ಬಾಲಿಯ ಕಂಡು, ಕಳವಳವೊ ಸಭದಾಗೊ
ಅಳಬ್ಯಾಡ ರತಿಯೆ ಮನಿಸೊಸಿಯೆ । ಕಾಮಣ್ಣ
ಮನದಾಗ ಮೂಡಿ ಬರತಾನ ॥
ಹೊರಳಾಡಿ ಅಳಬ್ಯಾಡ; ಎರವಾದ ಕಿಚ್ಚೀಗಿ
ಕರೆದಾಗ ಬರುವ ರತಿದೇವಿ । ಮನದಾಗ
ಚಿರವಂತ ಕಾಮನೆನದಾಗ ॥ *–ಹೋ–ಹಾ–*

ಎಂದು ಮಹಾದೇವನು ರತಿಯನ್ನು ಸಮಾಧಾನ ಮಾಡುವನು. ಕಾಮದಹನದ ಪೌರಾಣಿಕ ಕಥೆಯ ನಿಮಿತ್ತವು ಬಲು ದೊಡ್ಡದಾಗಿದೆ. ಅದಕ್ಕೆ ಲೌಕಿಕದ ಮಾತೇ ಇಲ್ಲ. ತಾರಕಾಸುರನ ವಧೆಯೇ ಮೂಲ ಮಾತಾಗಿದೆ. ಅದಾಗಬೇಕಾದರೆ ಶಿವಪಾರ್ವತಿಯರು ಕೂಡಿ ಷಣ್ಮುಖನನ್ನು ಹಡೆಯಬೇಕು. ಇದಾಗಬೇಕಾದರೆ, ಹಿಮಾಲಯದಲ್ಲಿ ತಪಸ್ಸಿನಲ್ಲಿದ್ದ ಶಿವನನ್ನು, ಕಾಮನು ತಡವಿ ಅವನ ತಪೋಭಂಗ ಮಾಡಬೇಕು. ಆಗ ಶಿವನು ಸಿಟ್ಟಿಗೆದ್ದು ಕಾಮನನ್ನು ಸುಡುತ್ತಾನೆ. ಜನಪದ ಕಥೆಯಲ್ಲಿರುವ ಸಹಜತೆಯು ಇಲ್ಲಿ ಕಂಡುಬರುವುದಿಲ್ಲ. ಮಾನವ ಭಾವನೆಗಳು ತೀವ್ರ ಒಡಮೂಡುವುದಿಲ್ಲ. ಕಾಮದಹನವು ಪುರಾಣದಲ್ಲಿ ಅಸಂಬದ್ಧ, ಅಸಮಂಜಸ ಕಾಣದಿದ್ದರೂ ಅದರಲ್ಲಿ ಮಾನವೀಯತೆ ಕಂಡುಬರುವುದಿಲ್ಲ. ಆದರೆ ಜಾನಪದ ಕಾಮದಹನವು ಮಾನವ ಮನೋವ್ಯಾಪಾರಗಳ ಪರಿಜ್ಞಾನದ ಪ್ರತಿಬಿಂಬವಾಗಿದೆ. ಅಂದ ಮೇಲೆ ಜನಸಾಮಾನ್ಯವು ಅದಕ್ಕೆ ತಲೆದೂಗದಿರುವುದೇ?

ಮಳಲ ಬಿಂದಿಗಿ ಮಾಡಿ, ಜುಳಕು ಹಾವಿನ ಸಿಂಬಿ
ಹೊಳೆಯ ತೆರಿಹೊಡೆದು ತುಂಬ್ಯಾರೊ । ಎಳದೇರು
ತುಳಿತುಳಿದು ಹಾದಿ ಬರುವಾಗ ॥
ಮಳಲ ಬಿಂದಿಗಿ ಕರಗಿ, ಸುಳಿದು ಸಿಂಬಿಯ ಹಾವು
ಜಳತಾಕಿ ಕಾಮ ಸುಡುತಿರಲು । ಎಳದೇರು
ಅಳುಅಳುಕಿ ಕಳಚಿ ಕೈಬಿಟ್ಟು ॥ *–ಹೋ–ಹಾ–*

ಹೀಗೆ ಹಾಡಿದ ಈ ಬೆಡಗಿನ ಹಾಡಿನಲ್ಲಿ ಹರೆಯದ ಹುಡುಗಿಯರ ಕಾಮವು, ತುಂಬಿದ ಮಳಲ ಬಿಂದಿಗಿಯಾಗಿದೆ. ಹಾದಿಯನ್ನು ತುಳಿದು ಬರುವಾಗ ಕಾಮದಹನದ ಜಳತಾಕಲು ಜುಳುಕು ಹಾವಿನ ಸಿಂಬಿ ಸುಳಿದು ಮಳಲ ಬಿಂದಿಗಿಯೇ ಕರಗಲು ಎಳದೆಯರ ತುಂಬಿದ ಕಾಯಕೊಡವು, ಕಾಮಸುಳಿದಾಡಿ ಕಳಚದಿರುವುದೇ? ಇಂತಹ ಕಾಮನ ಸ್ಮಾರಕವೇ ಇಂದು ಹೋಳಿಯಾಗಿದೆ; ಸಂಪ್ರದಾಯವಾಗಿ ಉಳಿದು ಬಂದಿದೆ.

ಹೋಳಿಯನ್ನು ಶಿವಶರಣರೂ ಹರಿದಾಸರೂ ಆಡಿ–ಹಾಡಿದ್ದಾರೆ. ಬಸವಾದಿ ಪ್ರಮಥರು ಆಡಿದ 'ಕಲಿಕಾಲ ಹೋಳಿ'ಯೇ ಇದಕ್ಕೆ ಸಾಕ್ಷಿ. ಬೆಡಗನ್ನೊಳಗೊಂಡ ಶಿವಶರಣರ ಈ ಕಲಿಕಾಲ ಹೋಳಿಯ ಅರ್ಥವನ್ನು ಮಾಡುವುದೇ ಬಲು ಕಠಿಣವಾಗಿದೆ.

ದುಂದುಮೆ ಎಂತೆಂದು ಪಾಡೀರಿ ಜನರು
ದುಂದುಮೆ ಬಸವಂತನ ಹಬ್ಬ ದುಂದುಮೆ ॥ಪ॥

ಅಂಬರದಂಡೀಗಿ ಆಟಾವ ತಗಿದಾರು
ಕುಂಬಾರ ತಿಗರೀಯ ಸುಟ್ಟಾರುಮಾ ।

ಇಂಬು ಇಲ್ಲೆಂದೆಂಬೂತ ಕಾಮತನ್ನ
ಅಂಬು ಬಿಟ್ಟದನರಿಯದು ಹರಳ ॥ದುಂ॥ *–ಕಲಿಕಾಲ ಹೋಳಿ–*

ಎಂದು ಬಸವಣ್ಣನವರು ಹರಳನಿಗೆ ಈ ಕಾಲಜ್ಞಾನದ ದುಂದುಮಿಯನ್ನು ಹೇಳಿದ್ದಾರೆ. ಇದನ್ನು ಕೇಳಿದ 'ಗುದ್ದಲಿ ಮಲ್ಲಪ್ಪನು' ಈ ಹಾಡನ್ನು ಸಾರಿದನೆಂದು ಆ ಚಿಕ್ಕಪುಸ್ತಕದಲ್ಲಿ ಬಂದಿದೆ. ಈ 'ಗುದ್ದಲಿ ಮಲ್ಲಪ್ಪನು' ಆರು ಎಂಬುವುದು ಇನ್ನೂ ಗೊತ್ತಾಗಿಲ್ಲ. ಶಿವಶರಣರಿಗೆ ಹೋಳಿಯ ಪರಸಿಯು ತಮ್ಮ ತತ್ವವಿಚಾರಗಳನ್ನು ತಿಳಿಸುವುದಕ್ಕಾಗಲಿ, ಇಲ್ಲವೆ ಕಾಲಜ್ಞಾನ ವಚನಗಳನ್ನು ದುಂದುಮಿಯಲ್ಲಿ ಸಾರವುದಕ್ಕಾಗಲಿ ಅನಕೂಲವಾಗಿರಬೇಕು. ಆದುದರಿಂದ ಶಿವಶರಣರು ಹೋಳಿಯಲ್ಲಿ ದುಂದುಮಿ ಗಳೊಡನೆ ಕಾಲಜ್ಞಾನವನ್ನು ಸಾರುವ ಸಾಹಸವನ್ನು ಮಾಡಿದಂತೆ ಕಂಡುಬರುವುದು. ವಿಜಯನಗರದ ಪ್ರೌಢದೇವರಾಯನ ಕಾಲದಲ್ಲಿಯ ಕರಸ್ಥಲದ ವೀರಣ್ಣೊಡೆಯರ ಶಿಷ್ಯನಾದ, ಕರಸ್ಥಲದ ನಾಗಲಿಂಗನು ಹೋಳಿಯಲ್ಲಿ ಕಾಲಜ್ಞಾನವನ್ನು ಹಾಡುತ್ತಿದ್ದನೆಂದು ಕಾಣುತ್ತದೆ.

ದಿಮ್ಮಿಸಲೆನ್ನಿರೊ, ನಮ್ಮವರೆಲ್ಲ ದಿಮ್ಮಿಸಲೆನ್ನಿರೊ ।
ದಿಮ್ಮಿಸಲೆಂದು ಬಿದ್ದಾದೆ ಸತ್ಯವುಳ್ಳ ಶರಣರೆಲ್ಲ ॥ ದಿ ॥ ॥ಪ॥[೩]

ಎಂಬ ಹೋಳಿಯ ದುಂದುಮಿ ಪಲ್ಲವಿಯನ್ನು ತನ್ನ ಕಾಲಜ್ಞಾನದಲ್ಲಿ ಬಳಸಿದ್ದಾನೆ. ಹರಿದಾಸರಲ್ಲಿ ಪ್ರಸಿದ್ಧನಾದ ವಾದಿರಾಜನೂ ಈ ಹೋಳಿಯ ಪದಗಳನ್ನು ಹಾಡಿದ್ದಾನೆ.

ದಿಮ್ಮಿಸಲೆನ್ನಿ ಚಿಕ್ಕತಮ್ಮಗಳಿರಗೊಲ್ಲತರ ।
ಹರ್ಮ್ಯಪೊಕ್ಕು ಅವರ ಮುಡಿ ಪೆರ್ಮೆಯಿಂದ ಭಸ್ಮಪೂಸಿ ॥
ವಾದಿರಾಜ ಗೊಲಿದು ಬಂದು ಸೋದೆಯ ಪುರದಲಿನಿಂದು ।
ತೋದಿ ಹಯವದನ ಮೇಲೆ ಪರಿದುಸೂಸಿ ಭಸ್ಮವಾ ॥

ಪಾಮರನನ್ನು ಪಾರಮಾರ್ಥಕಕ್ಕೆ ಎಳೆಯುವ ಸೂಕ್ಷ್ಮವಾದ ಬೆಡಗಿನೊಡನೆ ಕವಿಯು ಹೋಳಿಯನ್ನು ಹಾಡಿದ್ದಾನೆ. ಈ ಹಾಡುಗಳು ಬೆಡಗಿನ ಗಡುಚಾದ ಹಾಡುಗಳಾಗಿವೆ.

'ಕಾಮನ ಕರಿ'ಯಲ್ಲಿ ಒಕ್ಕಲಿಗನಿಗೆ ಬಲವಾದ ನಂಬಿಗೆಯಿದೆ. ಅವನು ಅದರಲ್ಲಿ ತನ್ನ ಭಾಗದ ವರುಷದ ಮಳೆ ಬೆಳೆಗಳನ್ನರಿತು ಕೊಳ್ಳುವನು. ಕಾಮನ ಬೂದಿಯು ಸುಡುವ ಕಾಲಕ್ಕೆ ಯಾವ ದಿಕ್ಕಿಗೆ ಹಾರುವುದೊ, ಆ ಭಾಗವು ಮಳೆ ಬೆಳೆಯಿಂದ ಸಮೃದ್ಧಿಯಾಗುವುದೆಂದು ನಂಬುವನು. ಕಾಮನ ಬೂದಿಯನ್ನು ತೂರಿದ ಮರುದಿವಸ ಮಳೆಯಾಗಿ ಬೂದಿಯು ಭೂಮಿಯಲ್ಲಿ ಬೆರತರೆ ಲೋಕಕ್ಕೆ ರೋಗಾದಿಗಳ ಭಯವಿಲ್ಲೆಂದೂ, ಬೆಳಸು ಚೆನ್ನಾಗಿ ಬಂದು ಲೋಕವು ಸುಖದಿಂದ ಬಾಳುವುದೆಂದೂ ತಿಳಿಯುವನು. ಅಲ್ಲದೆ ಕಾಮನ ಬೂದಿಯನ್ನು ತಂದು ಬಿತ್ತುವ ಬೀಜಗಳಲ್ಲಿಯೂ ಬೀಜಗೊಬ್ಬರವೆಂದು ಕೂಡಿಸಿ ಬಿತ್ತುವನು. ಹೀಗೆ ಮಾಡಿದರೆ ಬೀಜವು ಹುಸಿಹೋಗದೆ ನಾಟಿ ದೊಡ್ಡ ಬೆಳಸೂ ಬರುವುದೆಂಬ ನಂಬಿಗೆಯೂ ಅವನಿಗಿದೆ. ಕಾಮನಕರಿ (ಬೇವಿನ ಹೂ–ಚಿಗಿರು)ಯನ್ನು ತಂದು ಕಣಜಗಳಲ್ಲಿಯೂ, ಕಾಳುತುಂಬುವ ಹಗೆ–ಬಳತಗಳಲ್ಲಿಯೂ, ಚೀಲಗಳಲ್ಲಿಯೂ ಚೆಲ್ಲುವನು. ಅವನ ರಾಶಿ ಹುಲುಸಾಗಿ ಈ ಭಂಡಾರಗಳು ತುಂಬಲೆಂದೇ ಅವನ ಮುಗ್ಧ ಭಾವನೆ. ಅವನು ಹೋಳಿಯನ್ನಾಡುವನು. ಮೋಜು–ಮಜಲಿಗೆ ದುಡ್ಡು ಕೊಟ್ಟು ಹಾಡಿ ಕುಣಿಯುವನು.

ಹೋಳಿಯಾಡದನಾಡು, ನಾಳೆನದೆ ಕಾಡಾತೊ
ಗೋಳಾತೊ ಜನಕ ಮೂಲಾತೊ । ಮಳೆಹೋಗಿ
ಹಾಳಾತೊ ಪಿಡುಗೆದ್ದು ದಿನದಿನಕೊ ॥ *–ಹೋ–ಹಾ–*

ಎಂದು ಹಾಡಿದ್ದಾನೆ ರೈತ. ಇಷ್ಟೊಂದು ದೃಢವಾದ ನಂಬಿಗೆಯಿದೆ ಅವನಿಗೆ ಹೋಳಿಯಲ್ಲಿ. ಅಂತೆಯೇ ಅವನು ಹಾಡಿದ, ಮೇಲಿನ ಪದ್ಯವು ಜನಪದಕ್ಕೆ ಹೋಳಿಯ ಭವ್ಯ ಸಂದೇಶ. ಇದನ್ನು ಅವನು ಮರೆಯಬಹುದೇ? ಪಟ್ಟಣಿಗರು ಈಗ ಹೋಳಿಯೆಂದರೆ ತಾತ್ಸಾರಭಾವ ತಾಳ ಹತ್ತಿದ್ದಾರೆ. ಇದಕ್ಕೆ ಪುಷ್ಟಿಯಾಗಿ ಇಂದಿನ ರಾಜಕಾರಣದ ಅಲ್ಲೋಲಕಲ್ಲೋಲ ವಾತಾವರಣ ಬಂದಿದೆ. ಸರಕಾರವು ಅದಕ್ಕಂಜಿ ಹೋಳಿಗೆ ನಿರ್ಬಂಧ ಹಾಕಹತ್ತಿದೆ. ಹಲಕೆಲವು ಭಾಗಗಳಲ್ಲಿ ತಡೆಯನ್ನೂ ಅಮಲಿನಲ್ಲಿ ತಂದಿದೆ. ಆದರೆ ಹಳ್ಳಿಗರು ಮಾತ್ರ ಈ ಸಂಪ್ರದಾಯವನ್ನು ಹುಮ್ಮಸದಿಂದಲೇ ಮಾಡುತ್ತ ಬಂದಿದ್ದಾರೆ. ಇದು ಕನ್ನಡಿಗರ ಸುದೈವವೆಂದೇ ಹೇಳಬಹುದಾಗಿದೆ. ಹೋಳಿಯ ಸಂಪ್ರದಾಯವಾದರೂ ನಮ್ಮ ಪೂರ್ವಜರು ಉಳಿಸಿತಂದು ಗಂಡಸಿಗೆ ಉಚಿತವಾಗಿ ಕೊಟ್ಟ ಜನ್ಮಸಿದ್ಧ ಹಕ್ಕು. ಅದನ್ನು ಗಂಡಸು ಕಳೆದು ಕೊಳ್ಳಬಹುದೇ?

ಯುಗಾದಿ

ಹೋಳಿಯು ಮುಗಿದ ಹದಿನೈದು ದಿವಸಕ್ಕೆ ಹಿಂದುಗಳ ವರುಷ ಮುಗಿಯುವುದು. ಈ ದಿನವೇ ಯುಗಾದಿಯ ಅಮಾವಸ್ಯೆಯು. ಮರುದಿನ ಪ್ರತಿಪದೆಯೇ 'ಯುಗಾದಿ,' ವರುಷದ ಹೊಸದಿನ. ಹಿಂದುಧರ್ಮದ ಪ್ರಕಾರ ಯುಗಾದಿಯು ಒಂದು ದೊಡ್ಡ ಸಂಪ್ರದಾಯ ಹಬ್ಬ. ಹಿಂದೂಸ್ತಾನದಲ್ಲಿ ಎಲ್ಲ ಬಡಬಗ್ಗರು ಸಹ ಈ ಹಬ್ಬವನ್ನು ಮಾಡುತ್ತಾರೆ. ಇದು ಎಲ್ಲರ ಹಬ್ಬವಾಗಿದೆ. ಉತ್ತರ ಕರ್ನಾಟಕದಲ್ಲಿ ಬೇವು ಬೆರಸಿ ಎರಕೊಳ್ಳುವರು, ಊಟದೊಡನೆ ಬೇವು ಕಚ್ಚುವರು. ಬಾಳಿನಲ್ಲಿ ಸುಖದುಃಖ ಸಮಾನವೆಂದು ತಿಳಿದುಕೊಳ್ಳುವುದೇ ಬೇವು–ಬೆಲ್ಲ ಕಚ್ಚುವುದರ ತಾತ್ಪರ್ಯ. ಒಕ್ಕಲತನ ಮನೆಯಲ್ಲಿ ಅಂದು ಎಲ್ಲವೂ ಹೊಸದೇ ಕಾಣುವುದು. ಹೊಸ ಉಡುಗರೆ, ಹೊಸ ಊಟ ಮೊದಲಾದ

೩. 'ಕಾಲಜ್ಞಾನ ಸಂಗ್ರಹ' ಭಾಗ–೧, ಪುಟ. ೭೫, ಸಂ. ಶ್ರೀ ಶಿವಬಸವ ಸ್ವಾಮಿಗಳು

ಆದರಾತಿಥ್ಯಗಳು ಅವನ ಮನೆಯಲ್ಲಿ ನಡೆಯುವುವು. ಎತ್ತಿಗೆ ಹೊಸ ಬಾಸಿಂಗ, ಹಣೆಕಟ್ಟು, 'ಮಗಡ' (ಮಗುಡ), ಸರಹಗ್ಗಗಳ ಸಂಭ್ರಮವಾಗುವುದು. ಒಕ್ಕಲಿಗನು ಹೊಸ ಮುಹೂರ್ತದಲ್ಲಿ ಉತ್ತುವುದಕ್ಕೆ ಅಂದೇ ಭೂಮಿಯ 'ಮಜುಲು'[೪] ಮಾಡುವುದು. ಅಂದೇ ಅವನಿಗೆ ಹೊಸ ಮಳೆಗಳು ಕೂಡುವುವು. ಹೀಗಾಗಿ ಅವನಿಗೆ ಸುತ್ತಲು ಜಗತ್ತೇ ಹೊಸದಾಗಿ ಕಾಣುವುದು. ಹೆಣ್ಣುಮಕ್ಕಳು ಹೊಸವರುಷ ಹೊಸ ಆರುತಿಯನ್ನೆತ್ತುವರು. ಮನೆಗೆ ಗುಡಿಯಿಟ್ಟು ತೋರಣ ಕಟ್ಟುವರು. ಹೆಣ್ಣಿಗೆ ವರುಷದ ಹೊಸತನವು ಅಂದೇ ತುಂಬಿಬಿಡುವುದೇನೊ ಎಂಬಂತೆ ಅವಳು ಹಸಮುಖಿಯಾಗಿ ಹೊಸತನವನ್ನು ಮನೆತುಂಬುವಳು. ಹೊಸತನವು ನಾಡ ಮೂಲಿಮೂಲಿಗೆ ಹರಿದು ಬರುವುದೇನೊ ಎಂಬಂತೆ ಭಾಸವಾಗಿ ಹೊಸವರುಷವೇ ಬಂದು ಬಿಡುವುದು. ಆಗ ಹಳ್ಳಿಗರ ಹೊಸ ಹುರುಪು ಮೋಜುಮಜುಲುಗಳನ್ನು ಮಾಡಿಸಲು, ಎಲ್ಲರೂ ಹಾಡಿ, ಕುಣಿದು ತಣಿಯುವರು. ಈ ಹಬ್ಬದಲ್ಲಿ ಮಲೆನಾಡಿನೊಳಗೆ ಎತ್ತುಗಳನ್ನು ಸಿಂಗರಿಸಿ ಬಲು ಸಡಗರದಿಂದ ಮೆರೆಸುತ್ತಾರೆ. ಹಲಕೆಲವು ಭಾಗಗಳಲ್ಲಿ ಎತ್ತುಗಳ ಶಕ್ತಿ ಪ್ರದರ್ಶನವೂ ನಡೆಯುವುದು. ಜನರು ಕುಸ್ತಿ, ಕಸರತ್ತು ಮೊದಲಾದುವುಗಳಲ್ಲಿ ತಮ್ಮ ಹೊಸತನವನ್ನು ಹೊಮ್ಮಿಸುವರು. ಈ ಸಡಗರವನ್ನು ಬೆಳಗಾವಿಯಲ್ಲಿ ಮನವಾರೆ ಕಾಣಬಹುದು. ಬೆಳುವಲದ ಬಯಲುಗಳಲ್ಲಿ 'ಕಂಬಿಗಳ' (ಮಲ್ಲಯ್ಯ) ಉತ್ಸವವೂ ನಡೆಯುವುದು. ಹೀಗೆ ನಾಡು ಉತ್ಸವಗಳ ಸೊಬಗಿನಿಂದ ತುಂಬಿ ತುಳುಕುವುದು.

ಕನ್ನಡ ಜಾನಪದ ಸಾಹಿತ್ಯದಲ್ಲಿ ಯುಗಾದಿಯನ್ನು ಕುರಿತು ಅನೇಕ ಲಾವಣಿಗಳಿವೆ; ಒಕ್ಕಲಿಗನು ಸುಗ್ಗಿಯಲ್ಲಿ ಯುಗಾದಿಯನ್ನು ಹಾಡಿದ್ದಾನೆ; ಹೆಣ್ಣುಮಕ್ಕಳೂ 'ಸೋ' ಹಾಡಿದ್ದಾರೆ; ದಂತಕಥೆ ಮೊದಲಾದುವುಗಳನ್ನೂ ಹೇಳಿದ್ದಾರೆ. ಅವರ ಹಾಡುಗಳಲ್ಲಿ ಯುಗಾದಿಯ ಚಿತ್ರವು ಪರಿಪೂರ್ಣವಾಗಿ ಮೂಡಿದೆ.

ಗುಡಿಯ ತೋರಣಕಟ್ಟಿ, ಸಡಗರವು ಹೊಸದಿನವು
ಉಡುಗರೆಯ ನಾಡು ಬೆಳವಲವು। ಹೊಸತನವ
ಎಡೆಮಾಡಿ ಉಂಡು ಶಿವನೆಂದು ॥
ಹೊಸ ದಿನಕೆ ಹೊಸತನವು, ಹೊಸಮಳೆಯು ಹೊಸಬೆಳೆಯು
ಹೊಸದೀಪ ಹಚ್ಚಿ ಬೆಳವಲವು। ಎಳೆಯುವದು
ಬಸವಣ್ಣ ನಿಮ್ಮ ಹೊಸತೇರ ॥
ಅಂಬಲಿಯ ನೀಡುತಲಿ, ಎಂಬಲವ ಹಾಕುತಲಿ
ಕಂಬಿಗಳ ಹೊತ್ತು ಮೆರೆಸುತಲಿ। ಹೊಸದಿನಕೆ
ಶಂಭುಹರನೆಂದು ಬೆಳವಲವು ॥ *–ಜಾ–ಸಂ–*

ಎಂದು ಬೆಳುವಲದ ಒಕ್ಕಲಿಗನು ಹಂತಿಯಲ್ಲಿ ಹಾಡುತ್ತಾನೆ. ಬೆಳುವಲವು ಫಲವತ್ತಾದ ದೊಡ್ಡ ಎರೆ ಬಯಲು; ದೊಡ್ಡ ಬೆಳಸನ್ನೊಕ್ಕುವ ಬೆಳುವಲದವರು ಈ ಹಬ್ಬವನ್ನು ಬಲು ಸಡಗರದಿಂದ ಮೊದಲಿನಿಂದಲೂ ಮಾಡುತ್ತ ಬಂದಿರುವರೆಂದು ಈ ಪದ್ಯಗಳಿಂದ ವಿಶದವಾಗುತ್ತದೆ. ಇಲ್ಲಿ ಬರುವ ಬೆಳುವಲದ ಚಿತ್ರವು ಬಲು ಯಥಾರ್ಥವಾಗಿದೆ. ಬೆಳುವಲವು ಉಡುಗರೆಯ ನಾಡೂ ಅಹುದು. ಬಿಳಿಚಾಯದ ಉಡುಪಿನೊಡನೆ ಜರದ ರುಮಾಲವನ್ನು ಸುತ್ತದ ಬೆಳುವಲದ ಕೆಂಚ (ಚೆಲುವ) ನಿಲ್ಲವೆಂದರೆ ಅತಿಶಯೋಕ್ತಿಯಾಗದು. ಹೊಸತನವು ಬೆಳುವಲದಲ್ಲಿ ಯಾವಾಗಲೂ ದೇವರಿಗೆ ಮೀಸಲು. ಬೆಳುವಲದ ಭಕ್ತಿ ಬಸವಣ್ಣನ ಮೇಲೆ ವಿಶೇಷವಾಗಿದೆ. ಬೆಳುವಲದಲ್ಲಿಯೇ ಬಸವಣ್ಣನ ಜಾತ್ರೆಗಳು ಬಹಳ ಎತ್ತುಗಳನ್ನು ಮೆರಿಸಿ ಉತ್ಸವ ಮಾಡಿ ಹೊಸ ದೀಪ (ಆರುತಿ) ಬೆಳಗುವರು. ಬೇಸಗೆಯಲ್ಲಿ ಅಂಬಲಿಯ ದಾನವು ಬಲುದೊಡ್ಡದೆಂದು ಬೆಳುವಲದವರ ಭಾವನೆ. ಅಂಬಲಿಯು ಎಂಬಲಿಯ ಪ್ರಭಾವವು. ಅಂಬಲಿಯಾಗಬೇಕಾದರೆ (ಎಂಬಲಿ) ಹುಳಿ ಮಜ್ಜಿಗೆಬೇಕು. ಅದು ಹಾಲಿಗೆ ಮಜ್ಜಿಗೆಯ ಹೆಪ್ಪು ಇದ್ದಂತೆ. ಬೆಳುವಲದ ದೊಡ್ಡ ರೈತರ ಮನೆಯಲ್ಲಿ ಅಂಬಲಿ ಹಾಗೂ ಎಂಬಲಿಯ ದಾನವು ಈಗಲೂ ಕಂಡುಬರುವುದು. ಆ ಒಕ್ಕಲಿಗರ ಅಡಿಗೆಯ ಮನೆಯಲ್ಲಿ ಒಂದು ದೊಡ್ಡ ಅಂಬಲಿ ಗಡಿಗೆಯು ಕುದಿಯುತ್ತಿದ್ದರೆ ಇನ್ನೊಂದು ದೊಡ್ಡ ಎಂಬಲ ಗಡಿಗೆಯು ಎಲ್ಲ ಸಾಮಗ್ರಿಗಳೊಡನೆ ಸಜ್ಜಾಗಿರುವುದು. ಬೇಸಗೆಯ ಬಿಸಲಿನಲ್ಲಿ ನಡೆದು ಬಾಯಾರಿ ಬಂದವನು ಅಂಬಲಿಯ ಹಿತವನ್ನು ಹೇಳಬಲ್ಲ. ಅಂಬಲಿಯು ಒಕ್ಕಲಿಗನ ಮನೆಯಲ್ಲಿ ತಪ್ಪಲಾರದು. ತುಂಡಭೂಮಿಯ ಗುಡ್ಡಗಾಡಾದ ಮಲೆನಾಡಿನವರಿಗೆ ಈ ಸಂಭ್ರಮವೆಲ್ಲಿಂದ ದೊರೆಯಬೇಕು? ಮಲೆನಾಡೂ ಈ ಹಬ್ಬವನ್ನು ಮಾಡಿದರೂ ಅದಕ್ಕೆ ಬೆಳುವಲದ ಸಡಗರವು ಹೇಗೆ ಬರಬೇಕು? ಬೆಳುವಲದವರಿಗೆ ಸಾಕಷ್ಟು ಬಿಡುವು ಈ ಹಬ್ಬದ ಕಾಲದಲ್ಲಿರುವುದರಿಂದ ಅವರು ಈ ಹಬ್ಬವನ್ನು ಬಲು ಹುಮ್ಮಸದಿಂದ ಮಾಡುವರು. ಈಗ ಬೆಳುವಲದಲ್ಲಿ ಮಳೆಗಾಲವು ಅನಿಯಮಿತವಾಗಿರುವುದರಿಂದ ಅದು ಬರಗಾಲದ ತುತ್ತಾಗಿದೆ. ಆದರೂ ಬೆಳುವಲವು ಈ ಸಂಪ್ರದಾಯಗಳನ್ನು ತಪ್ಪದೇ ಆಚರಿಸುತ್ತ ಬಂದಿದೆ.

ಕಾರಹುಣ್ಣಿಮೆ

ಉತ್ತರ ಕರ್ನಾಟಕದಲ್ಲಿ ಕಾರಹುಣ್ಣಿಮೆಯು ದನಗಳ ಹಬ್ಬ. ಅಂದು ಒಕ್ಕಲಿಗರು 'ಹೊನ್ನುಗ್ಗಿ'ಯನ್ನು ಮಾಡಿ, ದನಗಳನ್ನೂ, ಬಂಡಿ, ರಂಟೆ, ಕುಂಟೆ ಮೊದಲಾದ ಸಾಮಗ್ರಿಗಳನ್ನು ತೊಳೆದು ಪೂಜೆ ಮಾಡುತ್ತಾರೆ. ಒಕ್ಕಲತನದ ಕೆಲಸ ಬೊಗಸೆಗಳು ಸುರುವಾಗಲೆಂದು ಹಾರೈಸುತ್ತಾರೆ; ಎತ್ತು ಮೊದಲಾದುವುಗಳಿಗೆ ಹುಗ್ಗಿಯನ್ನುಣಿಸುತ್ತಾರೆ. ಒಕ್ಕಲಿಗನು ಅವುಗಳನ್ನು ಸಿಂಗಾರ ಮಾಡಿ ಮೋಜು ಮಜುಲು ಕಟ್ಟಿ ಮೆರೆಸುತ್ತಾನೆ. ಹುಣ್ಣಿಮೆಯ ದಿವಸ ಸಂಜೆಯ ಮುಂದೆ ಎತ್ತುಗಳ 'ಕರಿಹರಿದು' ಮಳೆಬೆಳೆಗಳನ್ನರಿತು ಕೊಳ್ಳುತ್ತಾನೆ. ಕೆಂದೆತ್ತು ಕರಿಹರಿದರೆ, ಕೆಂಜೋಳ ಬೆಳೆಯುವುದೆಂದೂ, ಬಿಳಿಯೆತ್ತು ಕರಿಹರಿದರೆ ಬಿಳಿಜೋಳ ಬೆಳೆಯುವುದೆಂದೂ, ಎರಡೂ ಕೂಡಿ ಹರಿದರೆ ಸಮಕಾಲವೆಂದೂ, ಬೆಳೆಗಳ

೪. 'ಮಜುಲು' : ಭೂಮಿಯನ್ನು ಹೊಸವರುಷದಲ್ಲಿ ಉತ್ತುವುದಕ್ಕೆ ಮುಹೂರ್ತ ಮಾಡುವುದು.

'ಬಲಕಾಣ' (ಬಲಕಾಲ)ವನ್ನು ತಿಳಿದು ಭೂಮಿಯಲ್ಲಿ ಬೀಜವನ್ನು ಚೆಲ್ಲಲುದ್ಯುಕ್ತನಾಗುವನು. ಎತ್ತಿನ ಕರಿ (ಬೇವಿನ ತೊಪ್ಪಲ)ಯನ್ನು ತಂದು ಕಣಜಗಳಿಗೆ, ಬಳತ, ಹಗೆ ಮೊದಲಾದುವುಗಳಲ್ಲಿ ಚೆಲ್ಲುವನು. ರಾಶಿಯು ಹುಲುಸಾಗಿ ಈ ಎಲ್ಲ ಭಂಡಾರಗಳು ತುಂಬಲೆಂದೇ ಇದರ ಉದ್ದೇಶವಾಗಿದೆ.

ಕಾರಹುಣ್ಣಿಮೆಯು ಹಬ್ಬಗಳನ್ನು ಕರೆಯುತ್ತ ಬರುವುದೆಂದು ಜನರಲ್ಲಿ ಒಂದು ಪರಂಪರೆಯ ಮಾತೂ ಉಂಟು. ಆದರೆ ಒಕ್ಕಲಿಗನಿಗೆ ಈ ಕಾರಹುಣ್ಣಿಮೆಯೇ ಮಂಗಲ ಮಹೋತ್ಸವದ ಕಡೆಯ ದಿನವಾಗಿದೆ. ಜಾತ್ರೆ ಮೊದಲಾದ ಮಹೋತ್ಸವಗಳಾಗಲಿ, ಮದುವೆ ಮೊದಲಾದ ಮಂಗಲ ಕಾರ್ಯಗಳಾಗಲಿ, ಈ ಹುಣ್ಣಿಮೆಯಾದ ಮೇಲೆ ಬರುವುದಿಲ್ಲ. 'ಕಾರಹುಣ್ಣಿಮೆಯಾದ ಮೇಲೆ ಕತ್ತೆ ಸಹ ಬಾಸಿಂಗ ಕಟ್ಟುವುದಿಲ್ಲ,' ಎಂಬ ಗಾದೆಯ ಮಾತನ್ನೂ ಅವನು ಆಡುವನು. ಬಹುತರವಾಗಿ ಎಲ್ಲ ಸಂಪ್ರದಾಯಗಳು ಇಲ್ಲಿಗೆ ಕೊನೆಗೊಳ್ಳುತ್ತವೆ. ಅವನಿಗೆ ಮುಂದೆ ಬಿಡುವೇ ದೊರೆಯುವುದಿಲ್ಲ. ಮುಂಗಾರಿಯ ಮಳೆಯು ಆಗಲೇ ಆರಂಭವಾಗಿರಲು ಉತ್ತಿದ ಭೂಮಿಯನ್ನು ಹದಮಾಡಿ ಬಿತ್ತಿ ತನ್ನ ಉದ್ಯೋಗದಲ್ಲಿ ನಿರತನಾಗುವನು.

ಹೀಗೆ ಸಂಪ್ರದಾಯಗಳು ಹಳ್ಳಿಗರ ಜೀವನದಲ್ಲಿ ಒಂದಾಗಿ ಹೋಗಿಬಿಟ್ಟಿವೆ. ಒಂದು ವೇಳೆ ಅವರು ಸರಕಾರದ ಕಾಯ್ದೆ ಕಾನೂನುಗಳನ್ನು ಉಲ್ಲಂಘಿಸಬಹುದು, ಆದರೆ ಈ ಸಂಪ್ರದಾಯಗಳನ್ನು ಮರೆಯದಲೇ ಪಾಲಿಸುತ್ತಾರೆ. ಇವು ಅವರ ಜೀವನವನ್ನು ಹದಮಾಡಿ ಸಜ್ಜುಗೊಳಿಸುತ್ತವೆ. ಆದುದರಿಂದ ಅವರು ತಮ್ಮ ಕೈಕೆಲಸ ಬೊಗಸೆಗಳನ್ನೂ ಬಿಟ್ಟು ಆಚರಿಸುತ್ತ ಬಂದಿದ್ದಾರೆ; ಪ್ರಸಂಗ ಬಂದರೆ ಅವುಗಳ ಸಲುವಾಗಿ ತಲೆಗೊಡಲು ಸಹಸಿದ್ಧರಾಗುತ್ತಾರೆ. ಇಷ್ಟು ಅನುವಂಶಕವಾಗಿ ಬಿಟ್ಟಿವೆ ಸಂಪ್ರದಾಯಗಳು ನಮ್ಮ ಹಳ್ಳಿಗರಿಗೆ!

❒

೯. ಚಿತ್ರವಿಚಿತ್ರಗಳು

ಜಾನಪದ ಸಾಹಿತ್ಯಾಭ್ಯಾಸಿಗೆ ಅದನ್ನು ಅಭ್ಯಾಸ ಮಾಡುತ್ತ ಹೋದಂತೆ ಅನೇಕ ಚಿತ್ರವಿಚಿತ್ರಗಳು ಅವನ ತಲೆಗೆ ಅಂಟಿಕೊಳ್ಳುವುವು. ಸಂಶೋಧನ ದೃಷ್ಟಿಯಿಂದ ಅವುಗಳನ್ನು ಪರಿಶೀಲನ ಮಾಡುತ್ತ ಹೋದಂತೆ ಒಂದು ತೊಡಕಾದರೆ ಮತ್ತೊಂದು ಕಂಟಕ; ಮಗುದೊಂದು ಹೇಳದ ಪೇಚಾಟ; ಇನ್ನೊಂದು ಬಗೆಹರಿಯದ ಸಮಸ್ಯೆ. ಹೀಗೆ ಸಾಹಿತ್ಯಕನು ಇಂದು ಅವುಗಳನ್ನೆದುರಿಸಬೇಕಾಗುವುದು. ಜಾನಪದ ಸಾಹಿತ್ಯದಲ್ಲಿ ಶ್ರದ್ಧೆ, ಒಲವು, ಭರವಸೆಯಿಲ್ಲದ ಇಂದಿನ ಜನತೆಯ ಮುಂದೆ ಇವುಗಳನ್ನು ವಿಚಾರಿಸಿ ಇಡುವುದೆಂದರೆ ಬಲುದೊಡ್ಡ ಸಾಹಸದ ಮಾತೂ ಆಗಿದೆ. ಶಾಸನಗಳಾಗಲಿ, ಉಲ್ಲೇಖಗಳಾಗಲಿ, 'ಸನದು'ಗಳಾಗಲಿ ಸಾಕಷ್ಟು ಸಿಗದ ಪ್ರಸಂಗದಲ್ಲಂತೂ ಹೇಳುವ ಸಾಹಿತಿಯು ಗಾಳಿಗೆ ಧೂಳಿಯಾಗುವನು. ಅವನು ಹೇಳುವ ಮಾತುಗಳನ್ನು ಆದರ ಭಾವದ ಸೂಕ್ಷ್ಮದೃಷ್ಟಿಯಿಂದ ಪರಿಶೀಲಿಸಿ ನೋಡಿದರೆ ಅಲ್ಲಗಳೆದ ಮಾತುಗಳಿಗೆ ಅಹುದೆಂದು ತಲೆಹಾಕಬೇಕಾಗುವುದು. ಕೇಳುವವನಾಗಲಿ, ಹೇಳುವವನಾಗಲಿ, ಓದಿತಿಳಿದುಕೊಳ್ಳುವವನಾಗಲಿ ಸಹೃದಯಿಯಾಗಿದ್ದರೆ ಮಾತ್ರ ಒಳಿತು. ಆಗ ಅವನಿಗೆ ಎಲ್ಲಿ ಏನೆಂಬುವುದು ವಿಶದವಾಗದಿರದು. ಧರ್ಮಾಧರ್ಮಗಳ ತಿಕ್ಕಾಟದಲ್ಲಿ ಅನೇಕ ಸಂಗತಿಗಳು ವಿಕಾರವಾಗಿ ರೂಪಾಂತರ ಹೊಂದಿವೆ; ಇದ್ದ ಶಾಸನ, ಉಲ್ಲೇಖಗಳು ನಾಶಹೊಂದಿ ಮಾಯವಾಗಿ ಹೋಗಿವೆ. ಕೈನಡೆಯುವ ಕಾಲದಲ್ಲಿ ಬಲವಂತರು ತಮ್ಮ ಧರ್ಮಕ್ಕನುಕೂಲವಾಗುವಂತೆ ಅನೇಕ ಶಾಸನ, ಲೇಖನಗಳನ್ನು ಬರೆದಿದ್ದಾರೆ; ಬರೆಯಿಸಿದ್ದಾರೆ. ತಮ್ಮ ಧರ್ಮಸಾಧಿಸಲು ಅವುಗಳನ್ನು ಪೌರಾಣಿಕ ಕಥೆಗಳಿಗೆ ಅಂಟಿಸುವ ಮಹಾ ಸಾಹಸವನ್ನೂ ಮಾಡಿದ್ದಾರೆ. ಮಾಡಬಾರದ, ಆಗಬಾರದ ಅನೇಕ ಕೃತಿಗಳು ಆಗಿಹೋಗಿವೆ ಎಂದು ಅಭ್ಯಾಸದಿಂದ ತಿಳಿದೇಬರುವುದು. ಓದುಬರಹವನ್ನರಿಯದ ಜನಪದವು ಈ ಸಂಗತಿಗಳನ್ನು ಲ್ಲೇಖಿಸದಿದ್ದರೂ, ಅವುಗಳನ್ನು ಮರೆಲಿಲ್ಲ. ಸರಳ ಹೃದಯಿಗಳಾದ ನಮ್ಮ ಹಳ್ಳಿಗರು ಬಲವಂತರ ಒತ್ತುವಿಕೆಗೆ ಬಾಗಿ ಬಂದಿದ್ದರೂ ಅಲ್ಲದ ಮಾತಿಗೆ ಅಹುದೆನ್ನದೊಪ್ಪದ ಅವರ ಮನಸು ಜಾನಪದ ಹಾಡುಗಳಲ್ಲಿ ಅಲ್ಲೊಮ್ಮೆ ಇಲ್ಲೊಮ್ಮೆ ಉಸಿರು ಹಾಕುತ್ತ ಹೋಗಿದೆ. ಈಗಲೂ ಅವರು ಈ ಮೋಸದ ಮುಚ್ಚುಮರೆಗೆ ಆಸ್ಪದ ಕೊಡುವುದಿಲ್ಲ. ಕಟಪವನ್ನವರು ಸೇರುವುದಿಲ್ಲ. ಅದು, ಅವರಿಗೆ ಪರಂಪರೆಯ ಜನ್ಮಗುಣವಾಗಿದೆ.

ಯಲ್ಲವ್ವ

ಯಲ್ಲವ್ವ ದೇವತೆಯ ಕಥೆಯು ಜನಪದದಲ್ಲಿ ಒಂದು ಚಿತ್ರವಿಚಿತ್ರ. ಈ ದೇವತೆಯನ್ನು ಕುರಿತು ಅನೇಕ ದಂತಕಥೆಗಳೂ, ಹಾಡುಗಳೂ, ಕರ್ನಾಟಕದ ತುಂಬೆಲ್ಲ ದೊರೆಯುವುವು. ಕರ್ನಾಟಕದಲ್ಲಿ ಅತಿ ಪ್ರಸಿದ್ಧವಾದ 'ಯಲ್ಲವ್ವ' ದೇವತೆಯ ಭಕ್ತರು ಹಿಂದುಸ್ತಾನದ ಅನೇಕ ಭಾಗಗಳಲ್ಲಿಯೂ ಇರುವರು. ಈ ದೇವತೆಯ ಮಹಾರಥೋತ್ಸವವು ಈಗ ವರುಷದಲ್ಲಿ 'ಹೊಸ್ತಿಲ ಹುಣ್ಣಿಮೆ' ಹಾಗೂ 'ಬನದ ಹುಣ್ಣಿಮೆ' ಯಲ್ಲಿ ವಿಶೇಷ ಜರಗುವುದು. ಪ್ರತಿ ಹುಣ್ಣಿಮೆಯ ದಿವಸ ಇಲ್ಲಿ ಕೂಡುವ ಪರಸೆಯನ್ನು ನೋಡಿದರೆ ಪ್ರತಿ ಹುಣ್ಣಿಮೆಯ ದಿವಸವೂ ಈ ದೇವತೆಯ ಜಾತ್ರೆಯಾಗುವುದೆಂದು ಗೊತ್ತಿಲ್ಲದವರು ತಿಳಿದುಕೊಳ್ಳಬಹುದು. ಜನರು ಈ ದೇವತೆಯು ಪಾರ್ವತಿಯ ಅವತಾರವೆಂದು ಈಗ ತಿಳಿದುಕೊಳ್ಳುತ್ತಾರೆ. ಇಂಥ ಪ್ರಸಿದ್ಧವಾದ ಈ ದೇವತೆಯನ್ನು ಕುರಿತು ಕನ್ನಡ ಸಾಹಿತ್ಯದಲ್ಲಿ ಪ್ರಾಚೀನ ಪುರಾಣಗಳಾಗಲಿ, ಕಾವ್ಯಗಳಾಗಲಿ, ಎಲ್ಲಿಯೂ ಕಂಡುಬರುವುದಿಲ್ಲ. ಬೇರೆ ಕನ್ನಡ ಕಾವ್ಯಗಳಲ್ಲಿಯೂ ಈ ದೇವತೆಯನ್ನು ಯಾವ ಕವಿಯೂ ಉಲ್ಲೇಖಿಸಿಲ್ಲ. ಆಗ ಬಹುತರವಾಗಿ ಈ ದೇವತೆಯ ಖ್ಯಾತಿಯು ಇದ್ದಿರಲಿಕ್ಕಿಲ್ಲವೇ? ಇದ್ದಿದ್ದರೆ ಈ ದೇವತೆಯ ಸಂಬಂಧ ಕನ್ನಡದಲ್ಲಿ ಪುರಾತನ ಕಾಲದ ಸಾಹಿತ್ಯವೇಕಿಲ್ಲ? ಎಂಬ ಪ್ರಶ್ನೆಗಳು ನಮ್ಮನ್ನೆದುರಿಸುವುವು. ಈ ದೇವಸ್ಥಾನವು ಅತಿ ಪ್ರಾಚೀನಕಾಲದಿದ್ದರೂ, ಅದರ ಹೆಚ್ಚಳವು ಕ್ರಿ.ಶ. ಸುಮಾರು ೧೩ನೆಯ ಶತಮಾನದಿಂದ ಹೆಚ್ಚುತ್ತ ಬಂತೆಂದು ಗರ್ಭಗುಡಿಯಲ್ಲಿ ಕಂಬದ ಮೇಲೆ ಕೊರೆಸಿದ ಶಿಲಾಶಾಸನದಿಂದ ತಿಳಿದು ಬರುವುದು. ಕ್ರಿ.ಶ. ೧೩ನೆಯ ಶತಮಾನಕ್ಕಿಂತ ಹಿಂದೆ ಬಲುಹಿಂದುಳಿದ ದ್ರಾವಿಡ ವರ್ಗದ ಜನರು ಈ ದೇವತೆಯನ್ನು ಬಲು ಭಯ-ಭಕ್ತಿಯಿಂದ ಆರಾಧಿಸುತ್ತ ಬಂದಿದ್ದಾರೆ. ಈ ದೇವತೆಯ ಪ್ರಭಾವವು ದಿನದಿನಕ್ಕೆ ಹೆಚ್ಚಾಗಲು ಅನೇಕ ಜನರು ಅವಳ ಭಕ್ತರಾಗುತ್ತ ಬಂದರು; ಅವಳ ಮಹಿಮೆಯನ್ನು ಕೊಂಡಾಡ ಹತ್ತಿದರು. ಅವಳ ಮಹಿಮೆಯು ಕನ್ನಡ ಗಡಿಗಳನ್ನು ದಾಟಿ ಪರನಾಡುಗಳಲ್ಲಿ ಸುತ್ತಲೂ ಹಬ್ಬಿ, ಅಲ್ಲಿಯ ಜನರನ್ನು ತನ್ನಲ್ಲಿಗೆ ಬರಮಾಡ ಕೊಳ್ಳಹತ್ತಿತ್ತು. ಆಗ ದೇಶದಲ್ಲಿ ಎಲ್ಲೆಲ್ಲಿಯೂ ಜನರು 'ಯಲ್ಲವ್ವ'ನ ಭಕ್ತರಾದರು. ದಿನದಿನಕ್ಕೆ ಅವಳ ಭಕ್ತರು ಹೆಚ್ಚಾಗಿ ಸಂಪತ್ತು ಸಮೃದ್ಧಿ ಯಾಗಲು ಸುಮಾರು ೧೩ನೆಯ ಶತಮಾನದಿಂದ ಸುಧಾರಿಸಿದವರೆಂದೆನ್ನಿಸಿಕೊಳ್ಳುವ ಜನರೂ ಈ ದೇವತೆಗೆ ನಡೆದುಕೊಳ್ಳ ಹತ್ತಿದರು. ಮುಂದೆ ಈ ದೇವತೆಯ ಸಂಪತ್ತನ್ನು ನೋಡಿ ಈ ದೇವತೆಯು 'ನಮ್ಮದು, ನಿಮ್ಮದು' ಎಂದು ಕದನವೂ ಎದ್ದಂತೆ ತಿಳಿದುಬರುವುದು.

ಜನಪದದಲ್ಲಿ ಈ ದೇವತೆಯ ಸಂಬಂಧ ಮಹತ್ವದ ಎರಡು ಕಥೆಯ ರೂಪಾಂತರಗಳು ಕಂಡುಬರುತ್ತವೆ. ೧. ಬುನಾದಿಯಿಂದಲೂ ಈ ದೇವತೆಯು 'ಯಲ್ಲವ್ವ'ನೆಂದು ಹೇಳುವ ಕಥೆಯು. ಇದು ಈಗ ವಿಶೇಷ ವೀರಶೈವರಿಗೆ ಹೆಚ್ಚು ಸಂಬಂಧಿಸಿರುವುದು. ೨. ಕ್ರಿ.ಶ. ೧೪ನೆಯ ಅಥವಾ ೧೫ನೆಯ ಶತಮಾನದಲ್ಲಿ 'ಯಲ್ಲವ್ವನು' 'ರೇಣುಕಾದೇವಿ'ಯಾದ ಕಥೆಯು. ಈ ಕಥೆಯು ಕೇವಲ ಬ್ರಾಹ್ಮಣರಿಗೆ ಸಂಬಂಧಿಸಿದೆ.

ಈ ಎರಡು ಕಥೆಗಳಲ್ಲಿ ಮೊದಲನೆಯ ಕಥೆಯ ಪ್ರಕಾರ, ಯಲ್ಲವ್ವನು 'ಉಗುರಗೊಳ್ಳ'ದಲ್ಲಿಯ ಒಂದು ದೊಡ್ಡ ಮನೆತನದ ಮಗಳು. ಅವಳು ಅತಿ ರೂಪವತಿಯಾಗಿದ್ದಳು. ವಯಸ್ಸಿಗೆ ಬರುವುದರೊಳಗಾಗಿ ಅವಳಿಗೆ 'ಗಿನ್ನಿತನ್ನಿ' ರೋಗಹತ್ತಲು ಅವಳನ್ನು ಯಾರೂ ಮದುವೆಯಾಗದೆ ಹೋದರು. ಮಗಳ ಈ ಸ್ಥಿತಿಯನ್ನು ಕಣ್ಣಾರೆ ಕಂಡು ಅವಳ ತಂದೆಗೆ ಬಹಳ ವ್ಯಥೆಯಾಗಿ ಅವನು ಚಿಂತೆಗೊಳಗಾದನು. ಉಗುರಗೊಳ್ಳವು ಬುನಾದಿಯಿಂದಲೂ ಕರ್ನಾಟಕದಲ್ಲಿ ಪ್ರಸಿದ್ಧವಾದ ಸಿದ್ಧರಗಿರಿಯಾಗಿದೆ. ಆಗಿನ ಕಾಲದಲ್ಲಿ ಈ ಸಿದ್ಧರಗಿರಿಯಲ್ಲಿ ಪ್ರಸಿದ್ಧ ಸಿದ್ಧ ಶರಣರಾದ, 'ಯಕ್ಕಯ್ಯ,' 'ಜೋಗಯ್ಯ'ರೆಂಬ ಮಹಾ ಸಿದ್ಧಪುರುಷರು ವಾಸಮಾಡಿಕೊಂಡಿದ್ದರು. ಇವರು ಮಂತ್ರ ಯಂತ್ರ ಶಕ್ತಿಯಿಂದ ಸಿದ್ಧಾಟಿಕೆಯನ್ನು ಬಲ್ಲವರಾಗಿದ್ದರಲ್ಲದೆ, ತ್ರಿಕಾಲಜ್ಞಾನಿಗಳಾಗಿದ್ದರು. ಆ ಕೊಳ್ಳದ ಮಾಮರದ ಬುಡದಲ್ಲಿ ಒಂದು ಕಿಚ್ಚಿನ ಕುಂಡವನ್ನು ಹಾಕಿ ತಮ್ಮ ಮಂತ್ರಸಾಧನೆ ಯನ್ನು ಮಾಡುತ್ತ ಬಂದಿದ್ದರು. ತಮ್ಮ ವಿದ್ಯಾಬಲದಿಂದ ಅವರು ಜನತೆಯಲ್ಲಿಯೂ ಹೆಸರುವಾಸಿಯಾಗಿಹೋಗಿದ್ದರು. ಹೀಗಿರುತ್ತಿರಲು, ಯಲ್ಲವ್ವನ ತಂದೆಯ ಕನಸಿನಲ್ಲಿ ಈ ಸಿದ್ಧಪುರುಷರು ಬಂದು ತಮ್ಮ ಕೊಂಡದಲ್ಲಿಯ ಬೂದಿಯನ್ನು 'ಯಲ್ಲವ್ವ'ನ ಮೈತುಂಬ ಹಚ್ಚಿದರೆ ಅವಳ ಮಹಾರೋಗವು ವಾಸಿಯಾಗುವುದೆಂದು ನುಡಿದಂತಾಗಲು ಅವನು ಅವರ ಹೇಳಿಕೆಯ ಪ್ರಕಾರ ಮಾಡಲು ಯಲ್ಲವ್ವನ ಮೈಬಣ್ಣವು ಲಿಂಬಯ ವರ್ಣತಾಳಿ ಅವಳ ರೋಗವೇ ವಾಸಿಯಾಗಿಹೋಯಿತು. ಆದುದರಿಂದ ಅಂದಿನಿಂದಲೂ ಯಲ್ಲವ್ವನ ಸಾನ್ನಿಧ್ಯದಲ್ಲಿ ಹಳದಿಯ ಬಣ್ಣವುಳ್ಳ ಈ ಬಂಡಾರಕ್ಕೆ[೧] ಅಷ್ಟು ಪಾವನತೆಯು ಬಂದಿದೆ.

ಇದನ್ನರಿತ ಯಲ್ಲವ್ವನು ಈ ಸಿದ್ಧಶರಣರ ಪರಮಭಕ್ತಳಾಗಿ ಅವರನ್ನು ಪ್ರತ್ಯಕ್ಷ ಕಾಣಲು ಮನೆಬಿಟ್ಟು ಹೊರಹೊಂಟಳು. ಅವರ ಹೆಸರುಗಳನ್ನು ಜೋಡಿಸಿ 'ಯಕ್ಕಯ್ಯಾ, ಜೋಗಯ್ಯಾ' ಎಂದು ವಾಲಗ ಮಾಡುತ್ತ ಏಳುಕೊಳ್ಳಗಳನ್ನು ದಿನನಿತ್ಯ ತಿರಗಹತ್ತಿದಳು. (ಈ ವಾಲಗವೇ ಈಗ 'ಯಕ್ಕಲಿಗೊ ಜೋಗಯಾ' ಎಂದು ರೂಪಾಂತರ ಹೊಂದಿದೆ). ಅವಳ ಮನಸ್ಸನ್ನು ಪರೀಕ್ಷೆ ಮಾಡಬೇಕೆಂದು ಆ ಸಿದ್ಧರು ತಮ್ಮ ಮಂತ್ರದ ಬಲದಿಂದ ಅವಳಿಗೆ ಕಾಣಿಸಿಕೊಳ್ಳದೆ ಆ ಕಿಚ್ಚಿನ ಕುಂಡದ ಸಮೀಪದ ಮಾಮರದ ಮೇಲೆ ವಾಸ ಮಾಡಹತ್ತಿದರು. ಕೊಳ್ಳಕೊಳ್ಳಗಳನ್ನೆಲ್ಲ ತಿರುಗಿದರೂ ಅವರನ್ನು ಕಾಣದೆ ಯಲ್ಲವ್ವನು, ಆ ಸಿದ್ಧರ ಕಿಚ್ಚಿನ ಕೊಂಡದ ಗಿಡದಡಿಯಲ್ಲಿದ್ದು ಆ ಸಿದ್ಧರ ವಾಲಗ ಮಾಡುತ್ತ ಕಾಲ ಕಳೆಯ ಹತ್ತಿದಳು. ಹೀಗೆ ಕೆಲಕಾಲ ಗತಿಸಿಹೋದ ಮೇಲೆ, ಆ ಯಲ್ಲವ್ವನ ಸುದೈವದ ಮೂಲಕ ಒಂದು ದೊಡ್ಡ ಮಳೆಯಾಗಲು ಮರದ ಮೇಲೆ ವಾಸ ಮಾಡಿದ ಆ ಸಿದ್ಧ ಶರಣರ ಮೈಮೇಲೆ ಬಿದ್ದ ಮಳೆಯ ನೀರು ಗಿಡದ ಬುಡದಲ್ಲಿ ಕುಳಿತ ಯಲ್ಲವ್ವನ ಮೇಲೆ ಬೀಳಲು ಅವಳಿಗೆ ಜ್ಞಾನೋದಯವಾಗಿ ಗಿಡದಲ್ಲಿದ್ದ ಸಿದ್ಧರನ್ನು ನೋಡಿದಳು. ಸಿದ್ಧರು ಅವಳ ಭಕ್ತಿಗೆ ಮೆಚ್ಚಿ ಅವಳಿಗೆ ಮಂತ್ರ ಯಂತ್ರ ಮೊದಲಾದ ಸಿದ್ಧಾಟಿಕೆಗಳನ್ನು ಕಲಿಸಿ, ತಮ್ಮ ವಿದ್ಯೆಯ ಮೂಲಗುಟ್ಟನ್ನೇ ತಿಳಿಸಿಕೊಟ್ಟರು. ಅವಳು ಈ ವಿದ್ಯೆಯ ಬಲದಿಂದ ಮಾಯಕಾರಳಾಗಿ ಜನತೆಯ ರೋಗಾದಿಗಳನ್ನು ಕಳೆಯಹತ್ತಿದಳು. ಜನರು ಹಿಂಡುಗಟ್ಟಿ ಅವಳಲ್ಲಿಗೆ ಬರಹತ್ತಿದರು. ಮುಂದೆ ಇರುತಿರುತ ಆ ಸಿದ್ಧ ಪುರುಷರಿಗೆ ಅವಸಾನ ಕಾಲ ಬರಲು ಅವರು ತಮ್ಮ ಜ್ಞಾನಬಲದಿಂದ ಯಲ್ಲವ್ವನು ಪಾರ್ವತಿಯ ಅಂಶವೆಂದರಿತು ಅವಳನ್ನು ತಮ್ಮ ಬಳಿಗೆ ಕರೆದು 'ನೀನು ಮಾಯಕಾರಳಾಗು, ಜನವು ಜಗಹೊತ್ತು ಕುಣಿಯುತ್ತ ವಾಲಗ ಮಾಡಿ ನಿನ್ನಲ್ಲಿಗೆ ಬರಲಿ' ಎಂದು ಆಶೀರ್ವಾದ ಮಾಡಿ ಆ ಕೊಳ್ಳದಲ್ಲಿಯೇ ಮಾಯವಾಗಿ ಹೋದರು. ಆಮೇಲೆ ಅವರ ಆಶೀರ್ವಾದದ ಬಲದಿಂದ ಯಲ್ಲವ್ವನ ಹೆಸರು ಜನತೆಯಲ್ಲಿ ದಿನದಿನಕ್ಕೆ ಹೆಚ್ಚು ಹಬ್ಬಿ, ಜನರು ರೋಗಾದಿಗಳನ್ನು ಅವಳಿಗೆ ತೋರಿಸಿ ಗುಣಹೊಂದ ಹತ್ತಿದರು. ಹೀಗೆ ಅವಳ ಹೆಸರು ಸುತ್ತಲೂ ಹಬ್ಬಲು ಜನರು ಅವಳನ್ನು ದೇವತೆಯೆಂದು ಪೂಜೆ ಮಾಡುತ್ತ ಬಂದರು. ಮುಂದೆ ಯಲ್ಲವನು ಕಾಲಗತವಾಗಲು ಜನರು ಅವಳ ಸ್ಮಾರಕ ಮಾಡಿಸಿ ನಡೆದುಕೊಳ್ಳ ಹತ್ತಿದರು. ಅವಳು ಸತ್ತ ಮೇಲೆಯೂ ಅವಳು ಮಾಯಕಾರಳೆಂದು ಜನರು ಅವಳ ವಾಲಗ ಮಾಡುತ್ತ 'ಜಗ'ವನ್ನು ಹೊತ್ತು ಹಾಡಿ ಅವಳ ಮುಂದೆ ವಾಲಗ ಮಾಡಿ ಕುಣಿಯಹತ್ತಿದರು. ಅವಳು ಸಿದ್ಧರಿಗೆ ಮಾಡಿದ ವಾಲಗವೇ ಇಂದೂ ಬಳಕೆಯಲ್ಲಿದೆ. 'ಯಕ್ಕಲಿಗೊ ಜೋಗಯಾ' ಎಂಬುದೇ ಜನರು ಈಗ ಅವಳಿಗೂ ಮಾಡುವ ವಾಲಗವಾಗಿದೆ. ಆ ಸಿದ್ಧರಿದ್ದ ಸ್ಥಾನದಲ್ಲಿಯ ಕಿಚ್ಚಿನ ಕುಂಡವೇ ಇಂದು ಜೋಗಳ ಬಾವಿಯಾಗಿದೆ. ಹೀಗೆ ಈ ಕಥೆಯು ಜನಪದದಲ್ಲಿ ಪರಂಪರೆಯಿಂದ ಬಂದಿದೆ.

ಕಥೆಯ ಎರಡನೆಯ ರೂಪಾಂತರವು ಸಂಭವಿಸಿದ್ದು, ತೀರ ಇತ್ತೀಚೆಗೆ, ಕ್ರಿ.ಶ. ೧೪ನೆಯ ಅಥವಾ ೧೫ನೆಯ ಶತಮಾನದಲ್ಲಿ. ಆ ಸಮಯಕ್ಕೆ ಈ ದೇವತೆಯು ಎಲ್ಲರಿಗೂ ಬೇಕಾದ ದೇವತೆಯಾಗಿತ್ತು. ಕಾರಣ ಆ ದೇವಸ್ಥಾನದ ಸಂಪತ್ತು ಹಾಗೂ ಸಂಭ್ರಮಗಳನ್ನು ಕಂಡ ಬ್ರಾಹ್ಮಣರ ಒಲವು ಇತ್ತ ಕಡೆಗೆ ಒಲಿಯಿತು. ಆಗ ಅವರು ಈ ದೇವತೆಯು ತಮ್ಮದೆಂದು ಕುಂಟಜಗಳವನ್ನು ಹೂಡಿದರು. ಶಾಸ್ತ್ರಪುರಾಣಾದಿಗಳನ್ನು ಬಲ್ಲ, ಈ ಜನರು ಜನತೆಯ ಮೇಲೆ ಪರಿಣಾಮವಾಗುವಂತೆ ಈ ಯಲ್ಲವ್ವನಿಗೆ 'ಸ್ಕಂದ ಪುರಾಣ'ದ 'ರೇಣುಕಾ–ಜಮದಗ್ನಿ'ಯರ ಕಥೆಯನ್ನು ಅಂಟಿಸಿ 'ಯಲ್ಲವ್ವ'ನೆಂದರೆ 'ರೇಣುಕೆ'ಯೆಂದೂ, ಮಹಾಋಷಿ ಜಮದಗ್ನಿಯ ಧರ್ಮಪತ್ನಿಯೆಂದೂ ಹೇಳಿ ಅದಕ್ಕೆ ಪ್ರಾಚೀನತೆಯನ್ನೂ, ಪಾವನತೆಯನ್ನೂ ಅಂಟಿಸಿದರು. ಏನೂ ತಿಳಿಯದೆ, ಅಂಧಶ್ರದ್ಧೆಯಿಂದ ನಡೆದುಕೊಳ್ಳುತ್ತ ಬಂದ ಹಲಕೆಲವು ಪಂಗಡಗಳ ಜನರು ಈ ವಿದ್ಯಾವಂತರ ಮಾತನ್ನು ಮನಃಪೂರ್ವಕವಾಗಿಯೂ ಒಪ್ಪಿಕೊಂಡರು, ಎಂದು ಜನಪದವು ಹೇಳುತ್ತದೆ. ಆದರೂ ಮೊದಲಿನಿಂದ ಬಂದ ಹೆಸರನ್ನು ಅವರು ಮರೆಯಲಿಲ್ಲ. ಈಗಲೂ ಬ್ರಾಹ್ಮಣರನ್ನೂ, ಹಲಕೆಲವು ಪಂಗಡದವರನ್ನೂ ಬಿಟ್ಟರೆ ಉಳಿದ ಎಲ್ಲ

---

೧. ವೀರಶೈವರು ಈ ಬಂಡಾರವನ್ನು ಸ್ವೀಕರಿಸುವುದಿಲ್ಲ. ಕಾರಣವೆಂದರೆ ಈ ಬಂಡಾರವಾದದ್ದು ಸಿದ್ಧರ ಕಿಚ್ಚಿನ ಕುಂಡದ ಭಸ್ಮ (ಬೂದಿ)ದ ಪ್ರಭಾವದಿಂದ. ಸದಾ ಭಸ್ಮಧಾರಿಗಳಾದ ಇವರು ಭಸ್ಮವು ಬಂಡಾರಕ್ಕಿಂತ ಹೆಚ್ಚಿನದೆಂದು ತಿಳಿಯುತ್ತಾರೆ. ಈಗಿರುವ ಪೂಜಾರಿಗಳು ಲಂಗಾಯತರಿದ್ದು ಈ ದೇವತೆಗೆ ಕೊರಳಿಗೆ ಲಿಂಗವನ್ನು ಹಾಕಿ ಪೂಜೆ ಮಾಡುತ್ತಾರೆ.

ಜನರು ಈ ದೇವತೆಗೆ ಮೂಲ ಹೆಸರಾದ 'ಯಲ್ಲವ್ವ' ಎಂಬ ಹೆಸರನ್ನೇ ಕರೆಯುವರು. ಅಲ್ಲದೆ ತಮ್ಮ ಮಕ್ಕಳಿಗೆ 'ಯಲ್ಲಪ್ಪ,' 'ಯಲ್ಲವ್ವ' ಎಂದು ಭಕ್ತಿಯಿಂದ ಹೆಸರಿಟ್ಟು ಕರೆಯುವುದನ್ನು ನಾವು ಈಗಲೂ ನೋಡುತ್ತೇವೆ. 'ಯಲ್ಲವ್ವ'ನಿಗೆ 'ರೇಣುಕಾ'ದೇವಿಯೆಂದು ಕರೆದು ಇವರು ಆ ದೇವತೆಯ ಪೂಜಾ ವಿಧಾನದ ಕಾಲಕ್ಕೆ ರುದ್ರ ಮೊದಲಾದ ಅಭಿಷೇಕಾದಿಗಳನ್ನು ಮಾಡಬೇಕಾಗುವುದರಿಂದ, ಅದನ್ನು ಮಾಡಲು ತಾವೇ ಅರ್ಹರೆಂದೂ, ಯಲ್ಲವ್ವ (ರೇಣುಕಾ)ನು ತಮ್ಮ ದೇವರೆಂದೂ, ಮೊದಲಿದ್ದ ಅರ್ಚಕರು ಈ ದೇವಿಯ ಪೂಜಾವಿಧಾನವನ್ನು ಬಿಟ್ಟು ಕೊಡಬೇಕೆಂದೂ ನ್ಯಾಯ ಹೂಡಿದರು. ಅನೇಕ ವರುಷಗಳವರೆಗೆ ಈ ತಿಕ್ಕಾಟವು ನಡೆದು ಕಡೆಗೆ ಕ್ರಿ.ಶ. ೧೬ನೆಯ ಶತಮಾನದ ಆರಂಭದಲ್ಲಿ ತಮ್ಮ ಕೈ ನಡೆಯುವ ಕಾಲಕ್ಕೆ ಈ ಜನರು ನ್ಯಾಯವನ್ನು ವಿಜಯನಗರದ ಕೃಷ್ಣರಾಯನ ಆಸ್ಥಾನಕ್ಕೆ ಒಯ್ದರು. ಕೃಷ್ಣದೇವರಾಯನು ಆ ನ್ಯಾಯವನ್ನು 'ಸಾರಾಸಾರ ವಿಚಾರಿಸಿ ಈ ಯಲ್ಲವ್ವ ದೇವತೆಯು ಎಲ್ಲರಿಗೂ ತಾಯಿ, ಆದುದರಿಂದ ಎಲ್ಲರಿಗೂ ಬೇಕಾದ ದೇವತೆಯಾಗಿದ್ದಾಳೆ.' ಎಲ್ಲರಿಗೂ ಅವ್ವ, 'ಯಲ್ಲವ್ವ' ಎಂದೇ ಆರಾಧಿಸಿರೆಂದು ಬಂದ ಜನರಿಗೆ ಸಮಾಧಾನ ಹೇಳಿ ಕಳುಹಿಸಿಕೊಟ್ಟನೆಂದು ಜನಪದದಲ್ಲಿ ಒಂದು ಕಥೆಯೂ ಇದೆ. ಅಲ್ಲದೆ ಅರಸನು ಭಕ್ತಿಯಿಂದ ತಾನೇ ಈ ದೇವಸ್ಥಾನಕ್ಕೆ ಹೆಬ್ಬಾಗಿಲ ಕಟ್ಟಿಸಿ ಅದನ್ನು ಜೀರ್ಣೋದ್ಧಾರ ಮಾಡಿಸಿದನೆಂದು ಹೆಬ್ಬಾಗಿಲದ ಒಳ ಮಗ್ಗಲ ಗೋಡೆಯ ಹಾಸುಗಲ್ಲಿನ ಮೇಲೆ ಎರಡು ಅಥವಾ ಮೂರು ಸಾಲಿನ ಶಿಲಾಶಾಸನವೂ ಇರುವುದು. ಶ್ರೀ ವೆಂಕಟ ರಂಗೊ ಕಟ್ಟಿ ಅವರು ಕರ್ನಾಟಕ ಗ್ಯಾಝೆಟೀಯರ್‌ದಲ್ಲಿ "ನಗರಖಾನೆಯನ್ನು ವಿಜಯನಗರದ ಕೃಷ್ಣ ಮಹಾರಾಜನ ಆಳಿಕೆಯಲ್ಲಿ ಬಾಗೀ ಬೊಮ್ಮಪ್ಪ ನಾಯಕನೆಂಬುವನು, ಶಕೆ-೧೬೩೬ರಲ್ಲಿ ಕಟ್ಟಿಸಿದನೆಂಬುದಾಗಿ ಆ ನಗರಖಾನೆಯಲ್ಲಿಯೇ ಇರುವದೊಂದು ಲಿಪಿಯು ಹೇಳುತ್ತದೆ. ಆ ಲಿಪಿಯಲ್ಲಿ ಯಲ್ಲಮ್ಮನಿಗೆ 'ಜತ್ತಕ ಮಹಾಮಾಯೆ'ಯೆಂಬ ಹೆಸರು ಇರುತ್ತದೆ."[೨] ಎಂದು ಯಲ್ಲವ್ವನ ಗುಡ್ಡದಲ್ಲಿಯ ದೊಡ್ಡಗುಡಿಯ ಎದುರಿನಲ್ಲಿರುವ ನಗರಖಾನೆಯ ಅಸ್ತಿತ್ವವನ್ನು ಬರೆದಿದ್ದಾರೆ. ಕೃಷ್ಣದೇವರಾಯನು ಈ ಪ್ರಕಾರ ನ್ಯಾಯ ತೀರ್ಪುಕೊಟ್ಟ ನಂತರ ಈ ದೇವತೆಯ ಪೂಜಾವಿಧಾನ ಮೊದಲಾದುವುಗಳನ್ನು ಮತ್ತೆ ಲಿಂಗಾಯತರೇ ಮಾಡುತ್ತ ಬಂದರು. ಮುಂದೆ ಕ್ರಿ.ಶ. ೨೦ನೆಯ ಶತಮಾನದ ಆರಂಭದಲ್ಲಿ ಮತ್ತೆ ಈ ದೇವತೆಯ ಪೂಜಾವಿಧಾನದ ಸಂಬಂಧ ಕದನವೆದ್ದು, 'ಪ್ರಿವ್ಹಿಕೌನ್ಸಿಲ್ಲದವರೆಗೆ ನಡೆದು ಇಪ್ಪತ್ತು ಅಥವಾ ಇಪ್ಪತ್ತೈದು ವರುಷಗಳ ಹಿಂದೆ ನ್ಯಾಯ ಮುಗಿದು, ಮೊದಲಿನಿಂದ ಈ ದೇವತೆಯ ಪೂಜೆ ಮಾಡುತ್ತ ಬಂದ ಲಿಂಗಾಯತರೇ ಈ ದೇವತೆಯ ಪೂಜಾ ವಿಧಾನಕ್ಕೆ ಹಕ್ಕುದಾರರೆಂದು ತೀರ್ಪುಬಂತು. ಈಗಲೂ ಈ ದೇವತೆಯ ಪೂಜಾ ವಿಧಾನವನ್ನು ಲಿಂಗಾಯತರೇ ಮಾಡುತ್ತಾರೆ. ಮಲ್ಲವ್ವನು, ಕುಹುಂಡಿ (ಸವದತ್ತಿ) ರಟ್ಟರಕಾಲದಲ್ಲಿ 'ಪದ್ಮಾವತಿ'ಯಾದ ಇನ್ನೊಂದು ಕಥೆಯೂ ಅದೆ.

ಈ ಎಲ್ಲ ನಿಜವಾದ ಸಂಗತಿಗಳನ್ನು ಕೇಳುತ್ತ ಬಂದ ಜನಪದವು ಎಂಥ ಬಲಾತ್ಕಾರವಾದರೇನು? ಅವುಗಳನ್ನು ಮರೆಯುವ ಬಗೆ ಹೇಗೆ? ಕಾರಣ, ಬೇಡೆಂದರೂ ಈ ಸಂಗತಿಗಳು ಸೂಕ್ಷ್ಮರೀತಿಯಿಂದ ಜಾನಪದ ಹಾಡುಗಳಲ್ಲಿ ಮೂಡಿಬಂದಿವೆ.

ಯಲ್ಲವ್ವ ಗ್ಹೋಗುವಾಗ, ಎಳ್ಳು ಬೆಲ್ಲವ ನೊಯ್ರೆ
ಮಲ್ಲೀಗೆ ಒಯ್ರೆ ತುರುಬೀಗೆ। ವಾಲಗದ
ಸಿದ್ಧರಿಗೆ ಒಯ್ರೆ ಸರದೀಪ॥ —ಜಾ-ಸಂ-

ಎಂದು ಒಕ್ಕಲಿಗನು ಹಾಡಿ ಹಂತಿಯನ್ನು ಹೊಡೆಯುತ್ತಾನೆ. ಈ ಪದ್ಯದ ಇನ್ನೊಂದು ರೂಪಾಂತರವೂ ಜನಪದದಲ್ಲಿ ಸಿಗುವುದು.

ಯಲ್ಲವ್ವ ಹೋಗುವಾಗ, ಎಳ್ಳು ಬೆಲ್ಲವನೊಯ್ರೆ
ಮಲ್ಲೀಗೆ ಒಯ್ರೆ ತುರುಬೀಗೆ। ಪರಸನ
ಬಿಲ್ಲೀಗೆ ಒಯ್ರೆ ಬಿಡಿಮುತ್ತ॥ —ಜಾ-ಸಂ-

ಎಂದು ಹಾಡುತ್ತಾರೆ. ಈ ಹಾಡು ಎರಡನೆಯ ಕಥೆಯು ರೂಪಾಂತರ ಹೊಂದಿ ಜನಪದದಲ್ಲಿ ಬಂದ ನಂತರ, ಮೊದಲು ಕೊಟ್ಟ ಪದ್ಯದ ರೂಪಾಂತರವಾಗಿ ಬಂದಿರಬಹುದೆಂದು ತರ್ಕಿಸಲಾಗಿದೆ. ಸಾಧು ಸತ್ಪುರುಷನಾದ ಅಡವಿಸ್ವಾಮಿಯ ಹಾಡಿನಲ್ಲಿ, "ಗುಡ್ಡದ ಯಲ್ಲವ್ವ, ದೊಡ್ಡಾಕಿ-ಸಿದ್ಧಶರಣರ ವರುವ ಪಡೆದಾಕಿ" ಎಂದು ಬೆಳುವಲದ ಹೆಣ್ಣುಮಕ್ಕಳು ಹಾಡುತ್ತಾರೆ. ಈ ಸಿದ್ಧಶರಣರೆಂದರೆ ಯಲ್ಲವ್ವ ದೇವತೆಯ ವಾಗಲದಲ್ಲಿ ಬರುವ 'ಯಕ್ಕಯ್ಯ' ಹಾಗೂ 'ಜೋಗಯ್ಯ'ರೆಂಬ ಸಿದ್ಧ ಪುರುಷರು. ಇಂತಹ ಸಿದ್ಧ ಶರಣರ ಚರಿತೆಯನ್ನು ಜನಪದವು ಮರೆಯಬಹುದೇ?

ಕಾಲಮಾನದಲ್ಲಿ ಧರ್ಮಾಧರ್ಮಗಳ ದಬ್ಬಾಳಿಕೆಯು ಈ ಯಲ್ಲವ್ವ ದೇವತೆಯ ಮೇಲೆ ಮೇಲಿಂದ ಮೇಲೆ ಆದಂತೆ ಜಾನಪದ ದಂತ ಕಥೆಗಳಿಂದಲೂ, ಹಾಡುಗಳಿಂದಲೂ ತಿಳಿದುಬರುವುದು. ಆದರೂ ಮುಚ್ಚಿ ಮರೆತು ಹೋದ 'ನಿಜಗತೆ'ಯನ್ನು ಜನಪದವು ಮರೆತಂತೆ ಕಾಣುವುದಿಲ್ಲ. ಈ ಸಂಗತಿಗಳು ಮಾಸಿ, ಅಳುಕಿಸಿ ಹೋಗದೆ ಹಳ್ಳಿಗರ ಹಾಡುಗಳಲ್ಲಿ ಕತ್ತಲೆಯೊಳಗೆ ಮಿಣುಕುವ ಚಿಕ್ಕೆಗಳಂತೆ ಅಲ್ಲಲ್ಲಿ ಮಿಣಕಿ, ಹೊಳೆದು ಸಂಶೋಧಕರಿಗೆ ಮಾರ್ಗದರ್ಶಕವಾಗುವುದನ್ನು ಪರಿಶೀಲಿಸಿ ನೋಡಿದಾಗ ಎಲ್ಲರಿಗೂ ಆಶ್ಚರ್ಯವೆನಿಸದಿರದು. ಇದರ ಸಂಬಂಧ ಲಿಪಿಗಳಾಗಲಿ, ಲೇಖನಗಳಾಗಲಿ ದೊರೆಯದ ಮೂಲಕ ಸಂಶೋದಕರು ಇಂದು ಸಮಗಣ್ಣಿನಿಂದ ಹುಡುಕಿ ಜನತೆಯ ಮುಂದೆ ತೂಕಮಾಡಿ ಈ ಸಂಗತಿಗಳನ್ನು ಹೇಳಬೇಕಾಗಿದೆ.

ಮೇಲೆ ಹೇಳಿದ (ವಿವರಿಸಿದ) ಜನಪದದಲ್ಲಿ ದೊರೆಯುವ ಈ ಎರಡೂ ಕಥೆಗಳ ರೂಪಾಂತರಗಳನ್ನು ಅಭ್ಯಾಸಿಸಿ ನೋಡಿದರೆ ಮೊದಲನೆಯ ಕಥೆಯೇ ಲೋಕರೂಢಿಗೆ ಹೆಚ್ಚು ಸಮಂಜಸವೆನಿಸುವುದು. ಎರಡನೆಯ ಕಥೆಯು ಲೋಕರೂಢಿಗೆ ಅಸಂಬದ್ಧವಾಗಿ

೨. ಕರ್ನಾಟಕ ಗ್ಯಾಝೀಟೀಯರ್, ಪು-೫೧೬

ಕೃತ್ರಿಮವಾಗಿದೆ. ಈ ದೇವತೆಯನ್ನು ಕುರಿತು ಜನಪದದಲ್ಲಿ ದೊರೆಯುವ ಹಾಡುಗಳಲ್ಲಿ ಒಂದನೆಯ ಹಾಗೂ ಎರಡನೆಯ ಕಥೆಗಳಿಗೆ ಸಂಬಂಧಿಸಿದ ಹಾಡುಗಳಲ್ಲಿ 'ಸಿದ್ಧರು' ಬರುವರು. ಮೊದಲನೆಯ ಕಥೆಯ ಹಾಡುಗಳಲ್ಲಿ ಈ ಸಿದ್ಧ ಪುರುಷರು ಪೂಜ್ಯರಾಗಿ ಬಂದಿದ್ದಾರೆ. ಯಲ್ಲವ್ವ ದೇವತೆಯೇ ಅವರನ್ನು ಪ್ರತ್ಯಕ್ಷ ಕಾಣಲು ಅವರ ವಾಲಗ "ಯಕ್ಕಲಿಗೋ ಜೋಗಯಾ" ಮಾಡುತ್ತ ಕೊಳ್ಳ ಕೊಳ್ಳಗಳನ್ನು ತಿರುಗುತ್ತಿದ್ದಳೆಂದು ಬರುತ್ತದೆ. ಆದರೆ ಎರಡನೆಯ ಕಥೆಯಲ್ಲಿ ಈ ಸಿದ್ಧರ ಆಶೀರ್ವಾದದಿಂದ 'ಯಲ್ಲವ್ವ'ನು ಶಾಪಮುಕ್ತಳಾದರೂ ಅವಳು ಅವರನ್ನು ಗಣನೆಗೆ ತರುವುದಿಲ್ಲ. ಅಲ್ಲದೆ ಅವರೇ ಅವಳಿಗೆ ಕೈಮುಗಿದು ಬೇಡಿಕೊಳ್ಳುತ್ತ ಅವಳ ಆರಾಧನೆಯನ್ನು ಮಾಡುತ್ತಾರೆ. ಇಷ್ಟೇ ಅಲ್ಲದೆ, ಕೆಲಕೆಲವು ಹಾಡುಗಳಲ್ಲಿ ಈ ಸಿದ್ಧರಿಗೆ ವಿಕೃತ ರೂಪಗಳೂ ಕಂಡುಬರುವುವು. ಹೀಗೆ ಈ ಹಾಡುಗಳಲ್ಲಿ ಕೃತ್ರಿಮತೆಯು ತುಂಬಿ, ಕಲ್ಪನೆಗಳು ಲೋಕರೂಢಿಯನ್ನು ಮೀರಿ ಏನೋ ವಿಚಿತ್ರವಾಗಿಯೇ ಕಂಡು ಬರುವುವು. ಇದು ಮಾತ್ರ ನಿಜ; ಎರಡೂ ಕಥೆಗಳಲ್ಲಿ 'ಸಿದ್ಧರು' ಬರುವರು. ಹೀಗೆ ಈ ಎರಡೂ ಕಥೆಗಳಲ್ಲಿ ಬರುವ ಈ ಸಿದ್ಧರು ಯಾರಿರಬಹುದು? ಎಂಬುದನ್ನು ವಿಚಾರ ಮಾಡುವುದು ಅತ್ಯಗತ್ಯ.

ಈ ಸಿದ್ಧರು ಮಲಯ ಪರ್ವತದಲ್ಲಿ ವಾಸ ಮಾಡುತ್ತಿದ್ದ ಒಂದು ಉಚ್ಚವರ್ಗದ ದ್ರಾವಿಡ ನಿವಾಸಿಗಳೆಂದೇ ಹೇಳಬಹುದು.[೩] ಇವರು ಮಂತ್ರಯಂತ್ರವಾದಿಗಳಾಗಿ ಜನತೆಯ ಮೇಲೆ ತಮ್ಮ ಸಿದ್ಧಾಟಿಕೆಯ ಪ್ರಯೋಗ ಮಾಡುತ್ತ ಕರ್ನಾಟಕದ ತುಂಬೆಲ್ಲ ಅಲೆದಾಡುತ್ತಿದ್ದರೆಂದು ಕಂಡುಬರುವುದು. ಇವರ ಸಿದ್ಧಾಟಿಕೆಗೆ ಜನರು ಸೋತು ಶರಣಾಗುತ್ತಿದ್ದರೆಂದು ಜಾನಪದದಲ್ಲಿರುವ ಕಥೆಗಳಿಂದಲೂ, ದೇವ ಕವಿಯ 'ಮರುಳಸಿದ್ಧೇಶ್ವರ' ಕಾವ್ಯದಿಂದಲೂ ತಿಳಿದುಬರುವುದು. ಮಲಯ ಪರ್ವತದ ಹಲಕೆಲವು ಪ್ರಸಿದ್ಧ ಗಿರಿಗಳಲ್ಲಿ ಈ ಸಿದ್ಧರು ವಾಸಮಾಡಿಕೊಂಡಿದ್ದರು. ಮಲಯ ಪರ್ವತದ ಗಿರಿಕೊಳ್ಳಗಳ ಅಭ್ಯಾಸವನ್ನು ಮಾಡುತ್ತ ಹೋದಂತೆ ಕರ್ನಾಟಕದಲ್ಲಿ ಒಟ್ಟು ಐದು ಮಹತ್ವದ ಸಿದ್ಧರಗಿರಿಗಳು ಎಲ್ಲರ ನಿದರ್ಶನಕ್ಕೆ ಬರುತ್ತವೆ.

೧. ಕೊಲ್ಹಾಪುರ ಸಿದ್ಧರಗಿರಿ
೨. ಗೋಕಾವಿಯ ಸಿದ್ಧರಗಿರಿ (ಕೊಣ್ಣೂರ ಸುತ್ತಲು)
೩. ತೊರಗಲ್ಲ ಸಿದ್ಧರಗಿರಿ
೪. ಉಗರಗೊಳ್ಳ ಸಿದ್ಧರಗಿರಿ
೫. ಪಟ್ಟದಕಲ್ಲು ಐಹೊಳೆಯ ಸಿದ್ಧರಗಿರಿ (ಬಾದಾಮಿಯ ಸುತ್ತಲು)

ಎಂದು ಮೊದಲಿನಿಂದಲೂ ಈ ಸಿದ್ಧರ ವಾಸಸ್ಥಾನಗಳು ಜನತೆಯಲ್ಲಿ ಪ್ರಸಿದ್ಧವಾಗಿವೆ.

ಕರ್ನಾಟಕದ ಪ್ರಸಿದ್ಧ ಸಿದ್ಧರಾದ 'ಕಾಡಸಿದ್ಧ' 'ಮರುಳಸಿದ್ಧ'ರು ಕರ್ನಾಟಕದಲ್ಲಿ ಅಲೆದಾಡುತ್ತ ಕೊಲ್ಹಾಪುರ ಸಿದ್ಧರ ಗಿರಿಗೆ ಹೋದದ್ದು ಎಲ್ಲರಿಗೂ ಗೊತ್ತಿದ್ದ ಮಾತು. ಕೊಲ್ಹಾಪುರದಲ್ಲಿ 'ಮಾಯವ್ವ' (ಅಂಬಾಬಾಯಿ) ಎಂಬವಳು ತನ್ನ ಮಂತ್ರಶಕ್ತಿಯಿಂದ ಗಂಡಸರನ್ನು ಗೆದ್ದು ತನ್ನ ವಶದಲ್ಲಿಟ್ಟುಕೊಂಡು ಬಲು ಕ್ರೂರತನದಿಂದ ನಡೆಸಿಕೊಳ್ಳುತ್ತಿದ್ದಳೆಂದು ಐತಿಹ್ಯವಿದೆ. ಈ ಬಲಾಢ್ಯಕಾಯರಾದ ಸಿದ್ಧಪುರುಷರು ಅಲ್ಲಿಗೆ ಹೋಗಲು ಅವಳ ದೃಷ್ಟಿಯು ಈ ಸಿದ್ಧರ ಮೇಲೆ ಬಿತ್ತು. ಅವಳು ಅವರ ಮೇಲೆ ತನ್ನ ಸಿದ್ಧಾಟಿಕೆಯ ಪ್ರಯೋಗ ಹೂಡಿದಳು. ಆದರೆ ಅವಳಾಟವು ಆ ಸಿದ್ಧರ ಮೇಲೆ ನಡೆಯಲಿಲ್ಲ. ಅವರು ಅವಳನ್ನು ಏಕದಾರಿ (ಮಾಯಾಕಿನ್ನರಿ)ಯನ್ನಾಗಿ ಮಾಡಿ ಕೈಯಲ್ಲಿ ಹಿಡಿದುಕೊಂಡು ಬಾರಿಸುತ್ತ, ಹಾಡುತ್ತ ಕೊಲ್ಹಾಪುರವನ್ನು ಬಿಟ್ಟು 'ಎಡೂರ' ವೀರಭದ್ರನಿಗೆ ತಮ್ಮ ಭಕ್ತಿಯನ್ನರ್ಪಿಸಿ ಅಲೆದಾಡುತ್ತ ಬಂದರು. ಮುಂದೆ ಇವರು 'ಚಿಂಚಲಿ'ಯ ಗಡಿಯನ್ನು ದಾಟಿ ಗೋಕಾವಿಯ ಗಡಿಯನ್ನು ಸೇರುವಾಗ ಕೈಯಲ್ಲಿಯ ಏಕದಾರೆಯು 'ನಮೋ ನಮೋ' ಎಂದು ಆ ಸಿದ್ಧರಿಗೆ ಕ್ಷಮಿಸೆಂದು ಬೇಡಿಕೊಂಡದ್ದಲ್ಲದೆ ತನ್ನ ಸೀಮೆಯ ಹದ್ದು ಮೀರಿದರೆ ಪರವಶಳಾಗುವೆನೆಂದು ಅಂಗಲಾಚಿ ಬೇಡಿಕೊಳ್ಳಹತ್ತಿತ್ತು. 'ಏಕದಾರಿ'ಯು ನುಡಿಯುವುದನ್ನು ಕೇಳಿದ ಸಿದ್ಧರಿಗೆ ಕರುಣೆ ಬಂದು ತಮ್ಮ ಕೈಯೊಳಗಿನ ಆ ಏಕದಾರಿಯನ್ನು ಬಿಡಲು ಅದು ಕೂಡಲೇ ಮಾಯಾಸ್ವರದಿಂದ ನುಡಿಯುತ್ತ ಚಿಂಚಲಿಗೆ ಬರಲು, ಆ ಮಂತ್ರಶಕ್ತಿಯ ಕಾಲವು ಮುಗಿಯಲು, ಏಕದಾರಿಯು ಸ್ತ್ರೀರೂಪವನ್ನು ತಾಳಿ ಅಲ್ಲಿಯೇ ನೆಲಸಿ ಬಿಡಲು (ವಾಸ ಮಾಡಲು) ಚಿಂಚಲಿಯ ಮಾಯವ್ವವಾದಳೆಂದೂ ಒಂದು ಜನಪದ ಕಥೆಯೂ ಇದೆ. ಆಧುದರಿಂದ ಈ ಮಾಯವ್ವ ದೇವತೆಯ ಪ್ರಭಾವವು ಚಿಂಚಲಿಯಿಂದ ಕೊಲ್ಹಾಪುರದ ಭಾಗದಲ್ಲಿ ಬಹಳ ಇರುವುದು. ಬೆಳುವಲದಲ್ಲಿ ಮಾಯವ್ವನ ಹೆಸರು ಕೇಳಬರುವುದಿಲ್ಲ. ಈ ಮಾಯವ್ವನ ಹಾಡುಗಳು ಜನಪದದಲ್ಲಿ ಹೇರಳವಾಗಿವೆ. ಅವುಗಳ ಸಂಕಲನ ಮಾಡುವ ಕೆಲಸವನ್ನು ಮುಂಬರುವ ಜಾನಪದ ಸಾಹಿತಿಗಳಿಗೆ ಬಿಟ್ಟು ಕೊಡಲಾಗಿದೆ.

ಇತ್ತ ಆ ಸಿದ್ಧ ಪುರುಷರು ಗೋಕಾವಿಯ ಗಿರಿಗೆ ಬಂದು ಅಲ್ಲಿ ಕೆಲಕಾಲ ನಿಂತಿದ್ದಾರೆ. ಈ ಗಿರಿಯಲ್ಲಿ ಹಲಕೆಲವು ಸಿದ್ಧರಗವಿಗಳೂ ಗುಡಿ ಗುಂಡಾರಗಳೂ ಈಗಲೂ ಇವೆ. ಅಲ್ಲದೆ ಸಮೀಪದಲ್ಲಿರುವ ಕೊಣ್ಣೂರಲ್ಲಿ ಸಿದ್ಧರ ಒಂದು ಪ್ರಸಿದ್ಧ ಮಠವು ಈಗಲೂ ಅಸ್ತಿತ್ವದಲ್ಲಿರುವುದು. ಈ ಮಠದಲ್ಲಿಯೇ 'ಕಾಡಸಿದ್ಧ'ನ ಸಮಧಿಯಿದೆ. ಈ ಕಾಡಸಿದ್ಧನು ವಚನಕಾರನಾಗಿದ್ದಾನೆ. ಅವನ ಬೆಡಗಿನ ವಚನಗಳು ಅತಿಗಹನವಾಗಿರುವುವು.

ಬುನಾದಿಯಿಂದ 'ತೊರಗಲ್ಲೂ' ಒಂದು ಪ್ರಸಿದ್ಧವಾದ ಸಿದ್ಧರಗಿರಿಯು. ಪಂಚ ಮಹಾಸಿದ್ಧರ ಸ್ಥಾನವೆಂದು ಇದು ಈಗಲೂ ಆ ಭಾಗದಲ್ಲಿ ಹೆಸರುವಾಸಿಯಾಗಿದೆ. ಸ್ಕಂದ ಪುರಾಣ ಪಶ್ಚಿಮಕಾಂಡ ರೇಣುಕಾಮಹಾತ್ಮೆ ಪಂಚಮೋಧ್ಯಾಯದಲ್ಲಿ –

೩. ಡಾ. ಎ.ಎನ್. ಉಪಾಧ್ಯ ಅವರು ಸಂಪಾದಿಸಿದ 'ಕುಊಹಲ ಲೀಲಾವಈ' ಎಂಬ ಪ್ರಾಕೃತ ಕಾವ್ಯದಲ್ಲಿ ಈ ಸಿದ್ಧರ ಸಂಬಂಧ ವಿಶೇಷ ವರ್ಣನೆಗಳು ಬರುವುವು. ಅಲ್ಲಿಯೂ ಈ ಸಿದ್ಧರು ಮಲಯಪರ್ವತದ ನಿವಾಸಿಗಳೆಂದೇ ಹೇಳಿದೆ. ಈ ಕವಿಯ ಕಾಲ ಕ್ರಿ.ಶ. ಸುಮಾರು ೮ನೆಯ ಶತಮಾನವೆಂದು ಅವರು ನಿರ್ಧರಿಸಿದ್ದಾರೆ.

तत्रनीत्वाचतांरात्रीं प्रातःकालेययौमुदा ।
रामश्रृंगस्यमध्यस्थं तुरणाडंददउहि ॥६०॥

मलापहारीतीरस्यं सर्वत्रध्वनिशोभितं ।
वसंतितत्रसित्थाश्च सित्थाश्रममसुंविदुः ॥६१॥

कर्मसित्थाःसत्यसित्थाः ज्ञानसित्थास्तथैवच ।
भक्तिसित्थाःकामसित्था इत्येतेपंचसिस्थकाः ॥६२॥

अदृश्येनचवर्ततेसित्थाः सर्वत्रचारिणः ।
तत्रस्नात्वाविधानेनरेणुकश्चातिहर्षितः ॥६३॥

ಮೇಲಿನ ಶ್ಲೋಕಗಳಲ್ಲಿ ಬರುವ ಮಲಪಹಾರೀ ತೀರದ 'ತುರಣಾಡು' ಅಂದರೆ ಈಗಿನ ತೊರಗಲ್ಲು(ನಾಡು). ಜನಪದವು ಹೇಳುವ ಪಂಚಸಿದ್ಧರ ಹೆಸರುಗಳೂ ಇಲ್ಲಿ ಬಂದಿವೆ. ಕರ್ಮಸಿದ್ಧ, ಸತ್ಯಸಿದ್ಧ, ಜ್ಞಾನಸಿದ್ಧ, ಭಕ್ತಿಸಿದ್ಧ, ಕಾಮಸಿದ್ಧರು ಪ್ರಸಿದ್ಧವಾದ ಈ ತೊರಗಲ್ಲ ಸಿದ್ಧರಗಿರಿಯಲ್ಲಿ ಆಗಿಹೋಗಿದ್ದಾರೆ. ತೊರಗಲ್ಲ ಸುತ್ತಮುತ್ತಲಿರುವ ಭವ್ಯಾರಣ್ಯದಲ್ಲಿ ಈಗಲೂ ಉಳಿದಿರುವ ಅವರ ಸ್ಮಾರಕಗಳೂ, ಗವಿಗಳೂ ಮೊದಲಾದುವುಗಳೇ ಇದಕ್ಕೆ ಬಲವಾದ ಸಾಕ್ಷಿ.

ಐಹೊಳೆ-ಪಟ್ಟದಕಲ್ಲು ಪರಂಪರೆಯಿಂದ ಬಂದ ದೊಡ್ಡ ಸಿದ್ಧರಗಿರಿ. ಮೊದಲು ಮತ್ಸ್ಯೇಂದ್ರನಾಥನೆಂಬ ಮಹಾಸಿದ್ಧನು ಇಲ್ಲಿ ವಾಸಮಾಡುತ್ತಿದ್ದನು. ಇವನ ಶಿಷ್ಯನಾದ ಕಾಯಸಿದ್ಧಿಹೊಂದಿದ ಗೋರಕ್ಷನಾಥನ ಜನ್ಮಭೂಮಿಯೇ ಪಟ್ಟದಕಲ್ಲು. ಈ ಗೋರಕ್ಷನಾಥನನ್ನು ಕುರಿತು ಅನೇಕ ದಂತಕಥೆಗಳು ಪರಂಪರೆಯಿಂದ ಆ ಭಾಗದ ಜನರಲ್ಲಿ ಬಂದಿವೆ. ಈ ಕಥೆಗಳನ್ನು ಪರಿಶೀಲನ ಮಾಡಿ ನೋಡಿದರೆ ಬುನಾದಿಯಿಂದಲೂ ಪಟ್ಟದಕಲ್ಲು-ಐಹೊಳೆಯ ಸಿದ್ಧರಗಿರಿಗೂ ಕೊಲ್ಹಾಪುರ ಸಿದ್ಧರಗಿರಿಗೂ ನಿಕಟ ಸಂಬಂಧವಿತ್ತೆಂದು ತೋರುತ್ತದೆ. ಈ ಗಿರಿಗಳಲ್ಲಿಯ ಸಿದ್ಧರು ಸಿದ್ಧಾಟಿಕೆಯ ವಿದ್ಯೆಯನ್ನರಿತುಕೊಳ್ಳಲು ಬೇಕಾದಾಗ ಸ್ಥಳಾಂತರ ಮಾಡಿದ್ದೂ ಉಂಟು. ಪಟ್ಟದಕಲ್ಲಿನ ಗೋರಕ್ಷನಾಥನು ಕೊಲ್ಹಾಪುರಕ್ಕೆ ಹೋಗಿ ಸಿದ್ಧಾಟಿಕೆಯ ಮದತುಂಬಿರಲು, ರೇವಣಸಿದ್ಧನಿಂದ ಗರ್ವಭಂಗವಾಗಿ ಶ್ರೀಶೈಲಸೇರಿದ ಕಥೆಯೂ ಬರುವುದು.[೪] ಈ ಸಿದ್ಧನ ಸಂಬಂಧ ಜನತೆಯಲ್ಲಿ ಹಾಡುಗಳೂ ಕಥೆಗಳೂ ಹೇರಳವಾಗಿವೆ. ಕರ್ನಾಟಕದ 'ಬುಡಬುಡುಕಿಗಳು' ಗೋರಕ್ಷನಾಥನು ತಮ್ಮ ವಿದ್ಯಾಗುರುವೆಂದು ಬಲುಭಕ್ತಿ ಭಾವದಿಂದ ಅವನನ್ನು ಸ್ಮರಿಸುತ್ತಾರೆ. ಗೋರಕ್ಷನಾಥನು ವಚನಕಾರನೂ ಆಗಿದ್ದಾನೆ.

ಬಲುದೊಡ್ಡದೂ, ಅತಿ ಪ್ರಾಚೀನಕಾಲದ್ದೂ ಆದ ಇನ್ನೊಂದು ಸಿದ್ಧರಗಿರಿಯೆಂದರೆ ಏಳುಕೊಳ್ಳದ 'ಉಗುರಗೊಳ್ಳ.' ಆರ್ಯರು ಇದಕ್ಕೆ 'ರಾಮಶೃಂಗ'ವೆಂದು ಕರೆದಿದ್ದಾರೆ. ಒಂದಾನೊಂದು ಕಾಲದಲ್ಲಿ ಇಲ್ಲಿ ಜಮದಗ್ನಿಯ ಆಶ್ರಮವಿತ್ತೆಂದು ಪ್ರತೀತಿಯಿದೆ. ಈ ಜಮದಗ್ನಿಯ ಕಥಾಸಂದರ್ಭದಲ್ಲಿ ಸಿದ್ಧರ ಕಥೆಗಳು ಬರುವುದರಿಂದ ಈ ಉಗುರಗೊಳ್ಳವು, ಜಮದಗ್ನಿಯು ತನ್ನ ಆಶ್ರಮವನ್ನು ಅಲ್ಲಿ ಸ್ಥಾಪಿಸುವುದಕ್ಕಿಂತ ಮುನ್ನವೇ, ಸಿದ್ಧರ ಸ್ಥಾನವಾಗಿತ್ತು. ಈ ಸಿದ್ಧರಗಿರಿಯಲ್ಲಿ ವಾಸಮಾಡಿ ಹೋದ 'ಯಕ್ಕಯ್ಯ', 'ಜೋಗಯ್ಯ'ರೆಂಬ ಪ್ರಸಿದ್ಧ ಸಿದ್ಧಪುರುಷರು ಜಮದಗ್ನಿಯು ತನ್ನ ಆಶ್ರಮವನ್ನು ಅಲ್ಲಿ ಮಾಡಿಕೊಂಡಿರುವ ಮುನ್ನವೇ ಆ ಗಿರಿಯಲ್ಲಿ ಆಗಿಹೋಗಿದ್ದಾರೆ. 'ಯಲ್ಲವ್ವ' ದೇವತೆಯಾದದ್ದು ಅವರ ಆಶೀರ್ವಾದಬಲದಿಂದ. ಜಮದಗ್ನಿಯು ಅಲ್ಲಿರುವಾಗ ಈ ಯಲ್ಲವ್ವ ದೇವತೆಯು ಸುತ್ತಮುತ್ತಲಿನ ಜನತೆಗೆ ಬೇಕಾದ ದೇವತೆಯಾಗಿದ್ದಳು. 'ಯಕ್ಕಯ್ಯ' 'ಜೋಗಯ್ಯ' ಸಿದ್ಧರನಂತರ ಬಂದ ಸಿದ್ಧರು ಈ ದೇವತೆಯನ್ನು ಮನ್ನಿಸುತ್ತ ಬಂದಿದ್ದಾರೆ.[೫]

ಮೊದಲು ದ್ರಾವಿಡ ಜನಾಂಗದಲ್ಲಿ ಕೆಳಗಿನ ಪಂಗಡದವರು ಆರಾಧಿಸುತ್ತ ಬಂದ ಯಲ್ಲವ್ವ ದೇವತೆಯ ಪ್ರಭಾವವು ಸುತ್ತಲೂ ಬೀಳಹತ್ತಲು ಸುಧಾರಿಸಿದವರೆಂದು ಹೇಳಿಕೊಳ್ಳುತ್ತಿದ್ದ ಆರ್ಯಪಂಗಡದವರು ಆ ದೇವತೆಗೆ 'ಯಲ್ಲವ್ವ' ಎಂದು ಕಾಡಹೆಸರನ್ನು ಕರೆಯಲೊಪ್ಪದೆ ಅದೇ ಗಿರಿಯಲ್ಲಿ ವಾಸಮಾಡಿ ಹೋದ 'ಜಮದಗ್ನಿ'ಯ ಕಥೆಯ ಪ್ರಸಂಗದ ಉಚಿತ ಲಾಭವನ್ನು ಪಡೆಯಲು ಈ 'ಯಲ್ಲವ್ವ' ದೇವತೆಗೆ 'ರೇಣುಕಾ' ಎಂದು ನಾಮಾಂತರಿಸಿ ತಮ್ಮ ದೇವತೆಯೆಂದು ಸಾಧಿಸಲು ತೀರ ಇತ್ತೀಚೆಗೆ ಕರೆದಿರಬಹುದು. ಪುರಾಣ ಮುಖಾಂತರ ರೇಣುಕೆಯ ಮಹಾತ್ಮೆಯನ್ನು ಕೇಳಿದ ಜನರು, ಒಪ್ಪಿಕೊಂಡು ಆ ಕಥೆಯಂತೆ 'ಯಲ್ಲವ್ವ'ನ ಉತ್ಸವವನ್ನು ಮಾಡುತ್ತ ಬಂದಿರಬಹುದು. ಆದರೆ ಪರಂಪರೆಯಿಂದ ಬಂದ ಯಲ್ಲವ್ವನಿಗೆ ಮಧ್ಯದಲ್ಲಿ 'ರೇಣುಕಾ' ಎಂದು ನಮಾಂತರವಾದರೂ ಜನರು ಇಲ್ಲಿಯವರೆಗೆ 'ಯಲ್ಲವ್ವ'ನೆಂದೇ ಕರೆಯುತ್ತ ಬಂದಿದ್ದಾರೆ. ಮಾತ್ರ; ರೇಣುಕಾಮಹಾತ್ಮೆಯ ಪೂಜಾವಿಧಾನಗಳನ್ನೆಲ್ಲರೂ ಆಚರಿಸುತ್ತ ಬಂದಿದ್ದಾರೆ. ಈಗಲೂ ಅವುಗಳನ್ನೇ ಆಚರಿಸುತ್ತಾರೆ. ಅಲ್ಲದೆ ಪರಶುರಾಮನ ಗುಡಿ ಮೊದಲಾದುವುಗಳನ್ನು ನೋಡಿದರೆ ಅವುಗಳಲ್ಲಿ ಉಪಯೋಗಿಸಿದ ಶಿಲ್ಪಕಲೆಯು ತೀರ ಇತ್ತೀಚಿನದೆಂದು ಸ್ಪಷ್ಟ ಕಂಡೇ ಬರುವುದು. ಯಲ್ಲವ್ವನೇ ರೇಣುಕೆಯೆಂದು ಹೇಳಲು ರೇಣುಕೆಯ ಮಗನಾದ ಪರಶುರಾಮನ ಗುಡಿಯನ್ನು ಜನರು ತೀರ ಇತ್ತೀಚೆಗೆ ಕಟ್ಟಿಸಿರಲೇಬೇಕು. ಈ ಗುಡಿಯನ್ನು ಬಹುತರವಾಗಿ ಕ್ರಿ.ಶ. ಸುಮಾರು ೧೬ನೆಯ ಶತಮಾನದೀಚೆಗೆ ಕಟ್ಟಿಸಿರುವರೆಂದು ಹೇಳಬಹುದು. "ಈ ಯಾವತ್ತು ಇಮಾರತಿನಲ್ಲಿ ನೋಡತಕ್ಕಂಥ ಸೌಂದರ್ಯವೇನೂ ಇಲ್ಲ. ಕೆಲವು ಭಾಗಗಳು

---

೪. ಇವೇ ಮಾತುಗಳನ್ನು ರಾ-ಬ-ಪಿ.ಜಿ.ಹಳಕಟ್ಟಿ ಅವರು 'ಶಿವಶರಣರ ಚರಿತ್ರೆಗಳು' ಭಾಗ -೧. ಪು-೬೮-೭೨ರಲ್ಲಿ ಹೇಳಿದ್ದಾರೆ.
೫. ಈ ಯಲ್ಲವ್ವ ದೇವತೆಯ ಕಥೆಗಳನ್ನೂ, ಕೊಲ್ಹಾಪುರದ ಅಂಬಾಬಾಯಿಯ ಕಥೆಗಳನ್ನೂ ಹೋಲಿಸಿ ನೋಡಬಹುದು.

ನೂರಾರು ವರ್ಷಗಳ ಈಚೆಯಲ್ಲಿ ಕಟ್ಟಿದಂಥವಿರುತ್ತವೆ; ಬೇರೆ ಕೆಲವು ಐದಾರು ನೂರು ವರ್ಷದ ಹಿಂದೆ ಕಟ್ಟಿಸಿದಂಥವಿರುತ್ತವೆ. ಇದಕ್ಕೂ ಹಳೆ ಇಮಾರತು ಗುಡಿಯಲ್ಲಿ ಯೆಲ್ಲಿಯೂ ಇಲ್ಲ."[೬] ಎಂದು ವೆಂಕಟರಂಗೊ ಕಟ್ಟಿ ಅವರು ಬರೆದಿದ್ದಾರೆ.

'ಯಲ್ಲವ್ವ' ಈ ಶಬ್ದವು ಅಚ್ಚಗನ್ನಡ ಶಬ್ದ. ಕಲ್ಮೇಶ್ವರ, (ಕಲ್ಲಪ್ಪ), ಅಲ್ಲಮ (ಅಲ್ಲಪ್ಪ), ಮಲ್ಲಯ್ಯ ಮೊದಲಾದ ಶಬ್ದಗಳಂತೆ, 'ಯಲ್ಲವ್ವ' ಶಬ್ದವಾದರೂ ಕನ್ನಡ ಜನಾಂಗದಲ್ಲಿ ಬಳಕೆಯಲ್ಲಿದೆ. ಒಂದು ವೇಳೆ 'ರೇಣುಕಾ' ಈ ಹೆಸರು ಪುರಾತನ ಕಾಲದಿಂದ ಬಂದಿದ್ದರೆ ಜನರು ಅಂತಹ ಹೆಸರನ್ನು ಬಿಟ್ಟು 'ಯಲ್ಲವ್ವ'ನೆಂದು ಕರೆಯುವ ಪ್ರಸಂಗವೇ ಬರುತ್ತಿದ್ದಿಲ್ಲ. ಆದುದರಿಂದ ಯಲ್ಲವ್ವನಿಗೂ, ಈ ರೇಣುಕೆಗೂ ಯಾವ ಸಂಬಂಧವೇ ಇಲ್ಲ. 'ರೇಣುಕಾ' ಇದು ಯಲ್ಲವ್ವ ದೇವತೆಯ ಮೂಲ ಹೆಸರಿರದೆ ಮಧ್ಯದಲ್ಲಿ ಆರ್ಯಪಂಗಡದವರು ಸ್ವಾರ್ಥಸಾಧನೆಗಾಗಿ ಈ ದೇವತೆಯನ್ನು 'ಯಲ್ಲವ್ವ'ನೆಂದು ಕರೆಯಲು ಮನಸ್ಸು ಮಾಡದೆ ತಮ್ಮದೆಂದು ಸಾಧಿಸಿಕೊಳ್ಳಲು ಪೌರಾಣಿಕ 'ರೇಣುಕಾ' ಎಂದು ಕರೆದಂತೆ ತೋರುತ್ತದೆ.

ಮೇಲೆ ಸೂಚಿಸಿದ ಸಿದ್ಧರಗಿರಿಗಳ ಸುತ್ತಮುತ್ತಲು ಈಗಲೂ ಸುಡಗಾಡಸಿದ್ಧರೂ, ಗಿಡಮೂಲಿಕೆ ಸಿದ್ಧರೂ, ಬುಡಬುಡಕಿಗಳೂ, ಶಂಬಯ್ಯಗಳೂ, ಹೆಳವಯ್ಯಗಳು, ಕೌಲೆತ್ತಿನಯ್ಯಗಳು ಇವೇ ಮೊದಲಾದ ಪಂಗಡದವರು ವಾಸಮಾಡುತ್ತಾರೆ. ಈ ಜನರಲ್ಲಿ ಕಂಡುಬರುವ ಮಂತ್ರಯಂತ್ರಸಾಧನಗಳನ್ನು ನೋಡಿದರೆ, ಇವರು ಸಿದ್ಧರ ವಂಶಸ್ಥರಿರಬಹುದೆಂದು ಕಾಣುತ್ತದೆ. ಅಲ್ಲದೆ ಈ ಜನರಲ್ಲಿ 'ಸಿದ್ಧ' ಎಂಬ ನಾಮಾಂಕಿತವುಳ್ಳ ಹೆಸರನ್ನು ಬಹಳ ಮಂದಿ ಇಟ್ಟುಕೊಳ್ಳುತ್ತಾರೆ. ಸಿದ್ಧರು 'ಶಕ್ತಿಶಿವೋಪಾಸಕ'ರಿದ್ದರು. ಇವರು ಗೋದಾವರಿಯ ತೀರದಲ್ಲಿಯ 'ಭೀಮೇಶ್ವರ' ಲಿಂಗವನ್ನು ಪೂಜೆಮಾಡುತ್ತಿದ್ದರೆಂದೂ ಶಕ್ತಿಯ ಅವತಾರಗಳನ್ನು ಆರಾಧಿಸುತ್ತಿದ್ದರೆಂದೂ ತಿಳಿದುಬರುವುದು.[೭] ಇವರೇ ಮುಂದೆ ಕರ್ನಾಟಕದಲ್ಲಿ ಆಗಿಹೋದ ಪಾಶುಪತ, ಕಾಳಾಮುಖ ಪಂಗಡದವರಿರಬಹುದೇ? ಮುಂದೆ ವೀರಶೈವ ಶಿವಾಚಾರ ಮತವು ಪ್ರಚಾರವಾಗಹತ್ತಲು ಈ ಜನರು ಆ ಮತದಲ್ಲಿ ವಿಲೀನವಾಗಿ ಹೋಗಿದ್ದಾರೆಂದು ಪಂಡಿತರ ಮತವುಂಟು.[೮] ಅನೇಕ ಸಿದ್ಧಶರಣರೂ ವೀರಶೈವರಾಗಿ ಹೋಗಿದ್ದಾರೆ. ಹಲಕೆಲವು ಸಿದ್ಧರು ಶಿವಶರಣರಿಂದ ಶಿವದೀಕ್ಷೆಯನ್ನು ತೆಗೆದುಕೊಂಡ ಉದಾಹರಣೆಗಳೂ ಉಂಟು. – ಸೊನ್ನಲಿಗೆಯ ಸಿದ್ಧರಾಮ; ಗೋರಕ್ಷನಾಥ. ಈಗಲೂ ವೀರಶೈವರು ಈ ಸಿದ್ಧರ ಹೆಸರುಗಳನ್ನು ತಮ್ಮ ಮಕ್ಕಳಿಗಿಟ್ಟು ಕರೆಯುವ ವಾಡಿಕೆಯೂ ಉಂಟು. ಅನೇಕ ಸಿದ್ಧರ ಸ್ಮಾರಕಗಳು ಲಿಂಗಾಯತರಿಗೆ ಯಾತ್ರಾಸ್ಥಾನಗಳಾಗಿವೆ. ಹೀಗೆ, ಸಿದ್ಧರಿಗೆ 'ಯಲ್ಲವ್ವ' ದೇವತೆಯು ನಿಕಟಸಂಬಂಧ ವಾಗಿದ್ದಾಳೆ. ಇವರು ಮುಂದೆ ಲಿಂಗಾಂಗಿಗಳಾಗಲು ಈ ದೇವತೆಯ ಅರ್ಚಕರೂ ಲಿಂಗಾಯತರಾದರು. ಆದುದರಿಂದ ಈಗಲೂ ದೇವಸ್ಥಾನದಲ್ಲಿ ಲಿಂಗಾಯತರೇ ಈ ದೇವತೆಯ ಪೂಜೆಪುನಸ್ಕಾರಗಳನ್ನು ಮಾಡುತ್ತಾರೆ. ಜನರು ಈ ದೇವತೆಗೆ ಜಯಕಾರಮಾಡುವಾಗ 'ಉಧೋ ಉಧೋ' ಎಂದೆನ್ನುವುದನ್ನು ಈಗಲೂ ಕೇಳುತ್ತೇವೆ. ಇದು ಬಹುತರವಾಗಿ ಸಿದ್ಧರ ಸಿದ್ಧಾಟಿಕೆಯ ಜಯಘೋಷವಾಗಿರ ಬಹುದು. ಈಗಲೂ ಮಂತ್ರವಾದಿಗಳು ಮಂತ್ರ ಪ್ರಯೋಗ ಮಾಡುವ ಕಾಲಕ್ಕೆ 'ಧೋ' ಎಂಬ ಅಕ್ಷರವನ್ನು ಮೇಲಿಂದ ಮೇಲೆ ಉಚ್ಚರಿಸುತ್ತಾರೆ. ಇದು, ತಮ್ಮೊಳಗೆ ಎಚ್ಚರಿಕೆಯನ್ನು ತುಂಬಲೆಂದು ಅವರು ಹೇಳುವರು. ವೀರಶೈವರಲ್ಲಿ 'ಶಿವಧೋ–ಶಿವಧೋ' 'ಉಘೇ ಉಘೇ' ಎಂಬ ಅನೇಕತರದ ಜಯಘೋಷಗಳು ಈಗಲೂ ಬಳಕೆಯಲ್ಲಿವೆ. ಕಂಬಿಯ ಅಯ್ಯಗಳು ಕಂಬಿಯ ವಾಲಗವನ್ನು ಆರಂಭ ಮಾಡುವಾಗಲೂ, ಮುಗಿಸುವಾಗಲೂ, 'ಉಘೇ, ಉಘೇ' ಎಂದು ಘೋಷವನ್ನು ಮಾಡುತ್ತಾರೆ. ಕವಿ ಹರಿಹರನು ತನ್ನ ರಗಳೆಗಳಲ್ಲಿ 'ಶಿವಧೋ, ಶಿವಧೋ' ಎಂಬ ಘೋಷವನ್ನು ಮೇಲಿಂದ ಮೇಲೆ ಬಳಸಿದ್ದಾನೆ. ವಾದಗಳನ್ನು ಹೂಡುವ ಸಿದ್ಧರು ತಾವು ಗೆದೆಯಲು ಈ ಘೋಷಗಳನ್ನು ಮಾಡುತ್ತಿದ್ದರು. ಸಿದ್ಧರು ಶಿವಶರಣರುಪದೇಶದಿಂದ ಲಿಂಗಾಂಗಿಗಳಾದ ಮೇಲೆ ಇವೇ ಶಬ್ದಗಳನ್ನು ಘೋಷಿಸುತ್ತ ಬಂದಿರಬೇಕು. ಅಂತೆಯೇ ಅವು ವೀರಶೈವರಲ್ಲಿ ಈಗಲೂ ಬಳಕೆಯಲ್ಲಿವೆ. ಇದಕ್ಕೆ ವಿರುದ್ಧವಾಗಿ ಬ್ರಾಹ್ಮಣ ಮೊದಲಾದ ಯಾವ ಪಂಗಡದವರೂ ತಮ್ಮ ದೇವರ ವಾಲಗ ಮಾಡುವ ಕಾಲಕ್ಕೆ ಈ ಜಯಘೋಷಗಳನ್ನು ಉಪಯೋಗಿಸುವುದಿಲ್ಲ. ಬ್ರಾಹ್ಮಣ ಮೊದಲಾದವರಲ್ಲಿ 'ಸಿದ್ಧರೆಂಬ' ನಾಮಾಂಕಿತಗಳೇ ಇಲ್ಲ. ಅವರು ತಮ್ಮ ಹೆಣ್ಣುಮಕ್ಕಳಿಗೆ 'ಯಲ್ಲವ್ವ' ಎಂದು ಹೆಸರೂ ಇಡುವುದಿಲ್ಲ. ಆದುದರಿಂದ ಈ ಜನರಿಗೆ 'ಯಲ್ಲವ್ವ' ದೇವತೆಯು ಸಂಬಂಧಿಸಿದರುವುದಿಲ್ಲ. ಶ್ರೀ ವೆಂಕಟ ರಂಗೊ. ಕಟ್ಟಿ ಅವರು "ಪರಶುರಾಮನ ತಾಯಿಯಾದ ರೇಣುಕೆಯೇ 'ಯಲ್ಲಮ್ಮ'ನೆಂತಲೂ, ಈ ದೇವಸ್ಥಾನವು ೨೦೦೦ ವರ್ಷಕ್ಕಿಂತ ಪುರಾತನದ್ದೆಂತಲೂ ಹೇಳುತ್ತಾರೆ. ಆದರೆ "ಯಲ್ಲಮ್ಮ" "ಜತ್ತಕ"ಯೆಂಬ ಹೆಸರುಗಳಿಂದ ಇದು ದ್ರಾವಿಡ ದೇವತೆಯೆಂದು ತೋರುತ್ತದೆ. ದೇವತೆಯ ಪ್ರತಿಮೆಯು ಬೇರೆ ಹಿಂದೂ ಗುಡಿಗಳಲ್ಲಿಯ ಪ್ರತಿಮೆಗಳಂತೆ ಅಚ್ಚಮೂರ್ತಿಯ ರೂಪವಾಗಿ ಇರುವದಿಲ್ಲ. ಒಂದು ಹಲಚಿಗಲ್ಲಿನ ಮೇಲೆ ಹೆಂಣುಗೊಂಬೆಯ ಆಕಾರವನ್ನು ಹುಟ್ಟಿಸಿದ್ದಾರೆ. ಈ ದೇವತೆಯ ಕೈಗಳಲ್ಲಿ ಹಿಂದೂ ದೇವತೆಯ ಕೈಗಳಲ್ಲಿ ಇರುವ ಆಯುಧಗಳೂ ಇಲ್ಲ,"[೯] ಎಂದು 'ಯಲ್ಲವ್ವ' ದೇವತೆಯು ಆರ್ಯರ ದೇವತೆಯಲ್ಲೆಂದೂ, ಅದು ದ್ರಾವಿಡ ದೇವತೆಯೆಂದೂ ಒಪ್ಪಿಕೊಂಡಿದ್ದಾರೆ. ಈ ಸಂಗತಿಗೂ, ಜನಪದದಲ್ಲಿ ಬರುವ ಪರಂಪರೆಯ ಕಥೆಗಳಿಗೂ ಹೋಲಿಕೆಯಿದೆ. ಆದುದರಿಂದ 'ಯಲ್ಲವ್ವ' ದೇವತೆಯು 'ರೇಣುಕೆ'ಯಾದದ್ದು ತೀರ ಇತ್ತೀಚೆಗೆ. ಬುನಾದಿಯಿಂದ 'ಯಲ್ಲವ್ವ' ಎಂದೇ ಈ ದೇವತೆಯ ಹೆಸರಿತ್ತೆಂದು ನಿಸ್ಸಂದೇಹವಿಲ್ಲದೆ ಹೇಳಬಹುದು.

ಈಗ ಈ ಸಿದ್ಧರ ಗಿರಿಗಳ ಸುತ್ತುಮುತ್ತಲಿರುವ ಸುಡುಗಾಡಸಿದ್ಧ ಮೊದಲಾದ ಜನರು, ಕಾಯಕ ವಾದಿಗಳಾಗಿದ್ದು ಶಕ್ತಿ ಶಿವೋಪಾಸಕರಿರುವರು. ಯಲ್ಲವ್ವನು ಇವರಿಗೆ ಬುನಾದಿಯಿಂದಲೂ ಕುಲದೇವತೆಯಾಗಿದ್ದಾಳೆ. ಯಲ್ಲವ್ವ ದೇವತೆಯ ಸಂಬಂಧ

---

೬. 'ಕರ್ನಾಟಕ ಗ್ಯಾಝೆಟೀಯರ್, ಪು. ೫೧೬'
7. Introduction to the book 'कुऊहुल विरदुल विरदुद – लीलावइ' by Dr. A.N. Upadhye.
೮. 'ಶಿವಶರಣರ ಚರಿತ್ರೆಗಳು' ಭಾಗ ೩, ಪು–೩೨೮.
೯. ಕರ್ನಾಟಕ ಗ್ಯಾಝೆಟೀಯರ್, ಪು–೫೧೬

ಜನಪದದಲ್ಲಿ ಕಂಡುಬರುವ ಅನೇಕ ಸಂಗತಿಗಳನ್ನು ಜನತೆಯ ಮುಂದೆ ಇದ್ದಂತೆ ಇಡಲು ಪ್ರಯತ್ನ ಮಾಡಲಾಗಿದೆ. ಇತಿಹಾಸ ಸಂಶೋಧಕರಿಗೆ ಈ ಎಲ್ಲ ಸಂಗತಿಗಳನ್ನು ಸಹೃದಯದಿಂದ ಇತಿಹಾಸ ದುರ್ಬಿನವನ್ನು ಹಚ್ಚಿನೋಡಲು ಬಿಟ್ಟುಕೊಟ್ಟಿರುವೆ.

ಮಲ್ಲಯ್ಯ

ಕರ್ನಾಟಕದಲ್ಲಿ 'ಮಲ್ಲಯ್ಯ'ನದು ಜನತೆಗೆ 'ಯಲ್ಲವ್ವ'ನಂತೆ ಇನ್ನೊಂದು ಚಿತ್ರವಿಚಿತ್ರ ಸಂಗತಿ. ಜನಪದದಲ್ಲಿ 'ಯಲ್ಲವ್ವ'ನು ಮಂತ್ರಸಿದ್ಧಾಟಿಕೆಗಳಿಗೆ ಕಾರಣಳಾಗಿದ್ದರೆ, ಮಲ್ಲಯ್ಯನು ಶಕ್ತಿ 'ಮಲ್ಲಾಟಿಕೆ'ಗಳಿಗೆ ಕಾರಣನಾಗಿದ್ದಾನೆ. ಸಿದ್ಧರಗಿರಿಗಳಂತೆ ಕರ್ನಾಟಕದಲ್ಲಿ ಐದು ಮಲ್ಲರಗಿರಿಗಳೂ ಕಂಡುಬರುವುವು.

೧. ಶ್ರೀಶೈಲ (ಮಲ್ಲಿಕಾರ್ಜುನ ಲಿಂಗ)–ಪರವುತ ಮಲ್ಲಯ್ಯ
೨. ಜೆಜೂರಿ (ಖಂಡೋಬ)–ಮಲ್ಹಾರಿ
೩. ಮಂಗಸೂಳಿ–ಮಲ್ಲಯ್ಯ
೪. ಗುಡ್ಡ ಗುಡ್ಡಾಪುರ–ಮೈಲಾರ ಲಿಂಗ
೫. ಕಾರೀಮನಿ ಮಲ್ಲಯ್ಯ (ಬೈಲಹೊಂಗಲ)

ಈ ಐದೂ ಗಿರಿಗಳು ಮಲ್ಲಯ್ಯನ ಪ್ರಸಿದ್ಧ ದೇವಸ್ಥಾನಗಳಾಗಿವೆ. ಶ್ರೀಶೈಲವು ಈಗ ಆಂಧ್ರ ಕನ್ನಡಿಗರ ಗಡಿಯಾಗಿದೆ. ಜೇಜೂರಿಯ ಮಹಾರಾಷ್ಟ್ರದಲ್ಲಿ ಸೇರಿಹೋಗಿಬಿಟ್ಟಿದೆ. ಉಳಿದ ಮೂರು ಗಿರಿಗಳು ಈಗಿನ ಕರ್ನಾಟಕದಲ್ಲಿವೆ. ನೃಪತುಂಗನ ಕಾಲದ ಕರ್ನಾಟಕವನ್ನು ತಕ್ಕೊಂಡರೆ ಈ ಐದೂ ಗಿರಿಗಳು ಅಚ್ಚಕನ್ನಡ ನಾಡಿನಲ್ಲಿದ್ದವೆಂದು ತಿಳಿದುಬರುವುದು. ಶ್ರೀಶೈಲ ಒಂದನ್ನು ಬಿಟ್ಟು ಉಳಿದ ನಾಲ್ಕೂ ದೇವಸ್ಥಾನಗಳಲ್ಲಿ ಕಂಡುಬರುವ ವಿಧಾನಗಳು ಒಂದಕ್ಕೊಂದು ವಿಶೇಷಹೋಲುತ್ತವೆ. 'ಜೇಜೂರಿ'ಯ ಮಲ್ಲಯ್ಯನು ಮಹಾರಾಷ್ಟ್ರದೇಶದಲ್ಲಿ 'ಮಲ್ಹಾರಿ' ಅಥವಾ 'ಖಂಡೋಬ' ಎಂದು ಪ್ರಸಿದ್ಧಯಾಗಿದ್ದಾನೆ. ಆ ದೇಶದಲ್ಲಿ ಈ ದೇವರ ಭಕ್ತರು ಸುತ್ತಲೂ ಇದ್ದದ್ದು ಕಂಡುಬರುವುದು. ಎಲ್ಲ ಜಾತಿಯ ಜನರೂ ಈ ದೇವರಿಗೆ ನಡೆದುಕೊಳ್ಳುತ್ತಾರೆ. ಅಲ್ಲದೆ ಈ ದೇವರ ಸಾನ್ನಿಧ್ಯದಲ್ಲಿ ಅನೇಕ ಭಕ್ತರು ಪ್ರತಿಜ್ಞೆಯನ್ನು ತೆಗೆದುಕೊಂಡು ಅವನ ಸೇವಕರಾಗಿ ಭಿಕ್ಷಾಟನ ಮಾಡುತ್ತಾರೆ. ಅವರು ಅವನ ಸಂಬಂಧ ಅನೇಕ ಹಾಡುಗಳನ್ನು ಮರಾಠಿಯಲ್ಲಿ ಹಾಡುವರು. ಈ ಜನರ ವೇಷಭೂಷಣ, ಭಿಕ್ಷಾಟನ ಮೊದಲಾದುವುಗಳು ಕರ್ನಾಟಕದಲ್ಲಿಯ ಮಲ್ಲಯ್ಯನ ವಿಶೇಷ ಭಕ್ತರಾದ 'ವಗ್ಗಯ್ಯ'ಗಳಂತೆ ಕಂಡುಬರುವುವು. ಜೇಜೂರಿಯಲ್ಲಿಯೂ 'ಖಡ್ಗ' ಮೊದಲಾದುವುಗಳನ್ನೆತ್ತುವ ಶಕ್ತಿ ಪ್ರದರ್ಶನವು ಈಗಲೂ ನಡೆಯುವುದು. ಈ 'ಮಲ್ಹಾರಿ' ದೇವರ ಎತ್ತಲಾರದ ಬಹಳೇ ದೊಡ್ಡದಾದ ಒಂದು ಖಡ್ಗವಿದೆ. ಈ ಖಡ್ಗದಿಂದ ಮಲ್ಹಾರಿಯು ತನ್ನ ವೈರಿಗಳನ್ನು ಗೆದ್ದು 'ಬಾನಾಬಾಯಿ' ಎಂಬವಳನ್ನು ಲಗ್ನವಾದನೆಂದು ಈ ಜನರು ಒಂದು ಕಥೆಯನ್ನೂ ಹೇಳುವರು. ಆ ಕಥೆಯಲ್ಲಿ 'ಮಲ್ಹಾರಿ'ಯು ಕುರಿಗಳನ್ನು ಸಾಕಿಕೊಂಡಿದ್ದನೆಂದು ಬರುವುದು. 'ಬಾನಾಬಾಯಿ'ಯಲ್ಲದೆ 'ಮಲ್ಹಾರಿ'ಗೆ 'ಮಾಸಾಬಾಯಿ'ಯೆಂಬ ಇನ್ನೊಬ್ಬ ಹೆಂಡತಿಯೂ ಇದ್ದಳೆಂದು ಈ ಜನರು ಹಾಡುವ ಹಾಡಿನಲ್ಲಿ ಬರುವುದು. ಇವರಿಂದಲೇ ಸವತಿ ಮತ್ಸರವು ಜಗತ್ತಿನಲ್ಲಿ ಬೆಳೆಯಿತೆಂದು ಈ ಜನರು ತಿಳಿದುಕೊಳ್ಳುತ್ತಾರೆ.

ಐನಾಪುರ ಭಾಗದಲ್ಲಿಯ ಕುರುಬರು ಕೊಲ್ಹಾಪುರ ಮಹಾರಾಜರ ಕುರಿಗಳನ್ನು ಬೆಳುವಲದಲ್ಲಿ ಮೇಯಿಸಲು ಬಂದಾಗ ಹಾಡಿದ ಹಂತಿಯ ಹಾಡಿನ ಒಂದು ಪದ್ಯವು ಈ ಮಲ್ಹಾರಿಯ ಒಂದು ಕಥೆಯನ್ನು ಸೂಚಿಸುವುದು.

ಜೇಜೂರಿ ಮಲ್ಲನಿಗೆ, ಹೂಜೂರು ಕುರುಬರದು
ತೇಜಿಯೇರ್ಯಾನೊ ಮಲ್ಲಯ್ಯ। ಸವತೇರ
ಮೋಜು ಮುಂದಾತೊ ಜಗದಾಗೊ ॥ *–ಜಾ–ಸಂ–*

ಈ ಜೇಜೂರಿಯೇ ಈಗ ತಿಳಿದು ಬಂದ ಮಹಾರಾಷ್ಟ್ರದಲ್ಲಿಯ ಪ್ರಸಿದ್ಧ ದೇವಸ್ಥಾನ 'ಜಜೂರಿ.' ಈ ದೇವಸ್ಥಾನವು ಅತಿ ಪ್ರಾಚೀನ ಕಾಲದ್ದೆಂದು ತಿಳಿದುಬರುವುದು. ಈ ದೇವರ ಸೇವೆಯ ಮಾಡಲು ಭಿಕ್ಷಾಟನ ಮಾಡುವ ಜನರನ್ನು ಬೆಳಗಾವಿಯಲ್ಲಿಯೂ ಕಾಣಬಹುದು! ಒಂದು ಸಣ್ಣಗಂಟೆಯನ್ನು ನುಡಿಸುತ್ತ ಒಬ್ಬನು ಮುಂದೆ ಮುಂದೆ ಹಾಡುತ್ತ ಹೋಗುತ್ತಾನೆ, ಇನ್ನೊಬ್ಬನು ಅವನ ಹಿಂದೆ ತಾನ ಹಿಡಿದು ಸೂರುಕೊಡುತ್ತಾನೆ. ಅವರ ಬಂಡಾರದ ಚೀಲವು 'ವಗ್ಗಯ್ಯ'ಗಳಂತೆ ಚಿಗರಿಯ ಚರ್ಮದ್ದು. ಇವರೂ ಕಂಬಳಿಕೋರಿಯನ್ನು ಹೊತ್ತು ಉಣ್ಣಲು ದುಬ್ಬದ ಹಿಂದೆ ಒಂದು ಡೋಣಿಯ ಆಕಾರದ ಪಾತ್ರೆಯನ್ನು ಹಾಕಿರುತ್ತಾರೆ. ಈ ದೇವರ ಸೇವೆಯನ್ನು ಗಂಡಸರಲ್ಲದೆ ಹೆಂಗಸರೂ ಮಾಡುವಂತೆ ತೋರುತ್ತದೆ.

ಕರ್ನಾಟಕದಲ್ಲಿರುವ ಮಂಗಸೂಳಿ, ಗುಡ್ಡಾಪುರ, ಕಾರೀಮನಿ, ದೇವಸ್ಥಾನಗಳಲ್ಲಿರುವ ಮಲ್ಲಯ್ಯ ದೇವರ ಪೂಜೆ ಪುನಸ್ಕಾರ ಮೊದಲಾದ ವಿಧಾನಗಳು ಒಂದೇ ಆಗಿರುವುವು. ಈ ಮೂರೂ ದೇವರ ವಿಶೇಷ ಭಕ್ತರಿಗೇ (ಸೇವಕರಿಗೆ) ವಗ್ಗಯ್ಯ (ಮಲ್ಲಯ್ಯ)ಗಳೆಂದು ಕರೆಯುತ್ತಾರೆ. ಈ ವಗ್ಗಯ್ಯಗಳು ಬೆಳುವಲು, ಮಲೆನಾಡುಗಳಲ್ಲಿ ಈ ಮಲ್ಲಯ್ಯ ದೇವರ ಒಕ್ಕಲುಗಳಿದ್ದಲ್ಲಿ ಭಿಕ್ಷಾಟನೆಗೆ ಅಲೆದಾಡುವರು. 'ಎಳಕೋಟ್ಗೋ, ಎಳಕೋಟ್ಗೋ' ಎಂಬುವದೇ ಇವರ ಘೋಷಣೆಯಾಗಿದೆ. ಇದನ್ನು ಕುರಿತು ಜಾನಪದದಲ್ಲಿ ಒಂದು ದಂತಕಥೆಯೂ ಬರುವುದು. "ವೆಂಕಟಗಿರಿಯ ವೆಂಕಟರಮಣನ ಪತ್ನಿಯು, ಲಕ್ಷ್ಮಿಯು ಅವನೊಡನೆ ಕಡದಾಡಿ ಅವನನ್ನು ಬಿಟ್ಟು ಕೊಲ್ಹಾಪುರವನ್ನು ಸೇರಿದಳಂತೆ. ಆಗ ವೆಂಕಟರಮಣನು ಮತ್ತೊಬ್ಬಳನ್ನು ಮದುವೆಯಾಗಲು ನಿಶ್ಚಯ ಮಾಡಿದ. ಲಕ್ಷ್ಮಿಯೇ ಅವನನ್ನು ತ್ಯಜಿಸಿ ಹೋಗಲು ಅವನ ಹತ್ತಿರ ಕಾಸೂ

ಇಲ್ಲದಂತಾಯಿತು. ಹೆಣ್ಣು ಹುಡುಕುತ್ತ ಅಲೆದಾಡುವಾಗ ವೆಂಕಟರಮಣನು ಈ ಮಲ್ಲಯ್ಯನನ್ನು ಕಂಡು ಏಳುಕೋಟಿ ಹೊನ್ನ ಸಾಲತೆಗೆದು ಕೊಂಡ. ಮುಂದೆ ಮಲ್ಲಯ್ಯನು ಆ ಹೊನ್ನನ್ನು ಕೇಳಹೋದಾಗ ವೆಂಕಟರಮಣನು ಇಲ್ಲೆಂದು ಕೈಯೆತ್ತಲು ಏಳುಕೋಟಿ ಹೊನ್ನುಕಳಕೊಂಡ ಮಲ್ಲಯ್ಯನು ಭ್ರಮೆಯಾಗಿ ದೇಶದಲ್ಲೆಲ್ಲ 'ಏಳುಕೋಟಿ, ಏಳುಕೋಟಿ' ಎಂದಲೆದಾಡಹತ್ತಿದ. ಅದೇ ಮುಂದೆ 'ಏಳಕೋಟ್ಗೋ, ಎಳಕೋಟ್ಗೋ' ಎಂದು ಆಗಿದೆ." ಈ ವಗ್ಗಯ್ಯಗಳು ಒಂಟಿಗರಾಗಿ ಭಿಕ್ಷಾಟನೆ ಮಾಡದೆ, ಗುಂಪಾಗಿ ಹೊರಬಿದ್ದು ಗುಂಪಾಗಿಯೇ ದೇವಸ್ಥಾನವನ್ನು ಸೇರುವರು. ಕರಿಕಂಬಳಿ, ಬಂಡಾರಚೀಲ, ಬೆತ್ತ, ಜೋಳಿಗೆ, ಬೆಳ್ಳಿ ದುಂಡು ಕಾವಿನ ಚೌರಿ, ಕಪನಿ, ಟೊಪ್ಪಿಗೆ, ಡಮರುಗ, ಒಂದೆರಡು ಸಣ್ಣಗಂಟೆ ಉಣ್ಣಲು ಕಟ್ಟಿಗೆಡೋಣಿ, ತ್ರಿಶೂಲ ಇವೇ ಮೊದಲಾದ ಸನ್ನಾಹಗಳು (Parapharnelia) ಸದಾ ವಗ್ಗಯ್ಯನಿಗೆ ಬೇಕು. ಈ ವಗ್ಗಯ್ಯಗಳನ್ನು ಕಂಡ ಶಿಸುನಾಳ ಶರೀಫನು, ಹೀಗೆ ಹಾಡಿದ್ದಾನೆ.

ಮುದಡಿ ಮಹಿಮರೂಪ। ಇದರಿಗೆ ಬಂದಾರು
ಕುದರಿ ಕಾರರು ಕಾಲಕೆದರುತಲಿ।
ಒಂದು ವಿಧದಿ ತಮ್ಮೊಳು ತಾವು ಸದರಿನಲಿ
ಹೊಂದಿ ಒದಗಿ ಒಬ್ಬರಿಗೊಬ್ಬರು ಹೊಡತದಲಿ॥
ಬಹಳ ಕುಣಿಸುವರು। ನೆಲ ಅಣಿಸುವರು
ಸ್ಥೂಲ ದಣಿಸುವರು।
ಸಲ್ಲು ವಾಕ್ಯವೆಂದು ಒದರುತ ನಾಯಿಗಳು
ತರದಿಂದ ಕಾಯಿ ಹಣ್ಣು, ಡೋಣಿಗೆ ನೀಡೆಂಬುತಿಹರು॥ ಮಲ್ಲಿಗೆ॥ ॥೭॥

ಇದರಲ್ಲಿ ವಗ್ಗಯ್ಯಗಳ ವಾಲಗದ ಆಟವು ಬಂದಿದೆ. 'ಕುದರಿಕಾರರು ಕಾಲಕೆದರುತಲಿ' ಇದು, ಮಲ್ಲಯ್ಯನು ಹತ್ತಿಹೋದ ಕುದುರೆಯ ಅನುಕರಣವು. ಇದನ್ನು ಈ ವಗ್ಗಯ್ಯಗಳು ಆಡಿ ತೋರಿಸುವರು. ಜೇಜೂರಿ ಮಲ್ಲಯ್ಯನು, 'ತೇಜಿಯೇರಿದನು ಮಲ್ಲಯ್ಯ'ನೆಂದು ಹಿಂದೆ ಹೇಳಿದ ಪದ್ಯದಲ್ಲಿಯೂ ಬಂದಿದೆ. ಶಿಸುನಾಳನು, ಇದೇ ಹಾಡಿನ ಇನ್ನೊಂದು ಪದ್ಯದಲ್ಲಿ ಈ ವಗ್ಗಯ್ಯಗಳು ಉಳುವೆಯ ಮನೆಯ ಸೇರಿದ ಚೆನ್ನಬಸವೇಶ್ವರರಿಗೆ ನೆರುವಾಗಲು ಅವರನ್ನು ಕೂಡಿಕೊಂಡರೆಂದು ಹೇಳಿದ್ದಾನೆ.

ತೆಗ್ಗಿನೊಳಡಗಿರ್ಪ, ಉಳವೀಯ ಲೋಕಕ್ಕೆ
ಸ್ವರ್ಗದ ಬಾಗಿಲಾ ಶ್ರೀವನಕೆ।
ಹೋಗಿ ವಗ್ಗಲೆ ಗಣ ಸಮೂಹದ ಘನಕೆ
ಬಾಗಿ ಬಗ್ಗಿ ಭಜಿಸಿ ಭಕ್ತಸಂಧನಕೆ।
ಕೊಡಬೇಕೆಂದು, ನೋಡಬೇಕೆಂದು, ಗಡಬಾಯೆಂದು
ತನ್ನ ಅಗ್ಗದ ಬೀಗ ಅಗ್ರ ಪ್ರಧಾನಿ ಹೆಗ್ಗನಮಂದೆ।
ಹಿಗ್ಗುತ ಮಾತಾಡಿ ಕುಳಿತ ಮೌನದಲಿ॥ ಮಲ್ಲಿಗೆ॥ ॥೮॥

ಇಂದಿಗೆ ಪರಿವಾರ ನೆರದಿಹೆ ಇದರೊಳು
ಸುಂದರ ಹೊನಕೇರಿ ಮಲ್ಲಭೂಪ ಅದರ ಹೊಂದಿಗಿರುವನು।
ಚೆಂದಯ್ಯ ನೃಪ ನಮ್ಮ ತಂದಿಗಳವರ ಮೇಲೆ ಕೃಪಾ
ಚೆಂದ ಶೂರನು ಕೊಂದವೀರನು, ಬಲುಬಂಧುರನು।
ಅವರ ಹೊಂದಿಗೆ ಕರೆದೊಯ್ಯಬೇಕೆಂಬು ಸಮಯದಿ
ಬಂದು ನಿಂತಾರೊ ನಿಜ ಮಂದಿರದೊಳಗೆ॥ ಮಲ್ಲಿಗೆ॥ ॥೯॥

ಮಲಹರಿ (ವಗ್ಗಯ್ಯಗಳ ದೇವರು ಮಲ್ಲಯ್ಯ)ಯು[೧೦] ಹೀಗೆಂದು ಹೊರಡಲುದ್ಯಕ್ತ ನಾದನು.

ಹೊಡಿಸೊ ತಮ್ಮಟ, ಭೇರಿ, ಕಾಳಿ, ಹಿಡಿಸೊ ಮಾರ್ಗದಿ ಸೈನ್ಯ
ಪರಮಡಿಸಿ ಗಡಹೊಡಿಸೊ ಡಂಗುರಸಾರಿ।
ತಡಮಾಡದೆ ರಥ ಹಿಡಿಸೊ ಮಾರ್ಗದಿ ತೇಜಗಳ ಹೂಡಿಸಿ।......

ಹೀಗೆ ವಗ್ಗಯ್ಯಗಳ ಸೇನೆಯು ಶಿವಶರಣರ ಸಹಾಯಕ್ಕೆ ಉಳುವಿಗೆ ಹೊರಡುತ್ತದೆ. ಮಲ್ಲಯ್ಯನು 'ಗಂಗಿಮಾಳಿ'ಯನ್ನು ಕರೆಸಿಕೊಂಡು ಚೆನ್ನಬಸವಣ್ಣನವರ ಹತ್ತರ ಹೋಗುವನು. ಹೀಗೆ ಈ ವಗ್ಗಯ್ಯಗಳು ಶಿವಶರಣರಿಗೆ ನೆರವಾದಂತೆ ತಿಳಿದುಬರುತ್ತದೆ.

ಸಂಗನ ಬಸವನ ಕಾಲಜ್ಞಾನದಲ್ಲಿ
ಅಳಿಯ ಬಿಜ್ಜಳರಾಯ ದಾಳಿಯ ಹರಿದಾನು
ಕಾದರ ಹೊಳೆಯಲ್ಲಿ ಕಾದ್ಯಾರು
ತಡಗೋಡಿಯಲ್ಲಿ ತಡೆದಾರು

---

೧೦. ವಗ್ಗಯ್ಯರಲ್ಲಿ ಹಿರಿಯವನಾದವನಿಗೆ ಮಲಹರಿ (ಮಲ್ಹಾರಿ)ಯಂದೂ ಅನ್ನುವರು.

ಮುರಗೋಡಿಯಲ್ಲಿ ಮುರಿದಾರು...
ಉಳಿವೆಯ ಮಹಾಮನೆಗೆ ಚಿತ್ತೈಸ್ಯಾರು ॥[೧೧]

ಎಂದು ಅಳಿಯ ಬಿಜ್ಜಳನ ಸೇನೆಗೂ, ಶಿವಶರಣರಿಗೂ ಕಾದರೊಳ್ಳಿಯಲ್ಲಿ ಕದನವೆಸಗಿ ಶಿವಶರಣರು ಅವನನ್ನು ಹಿಮ್ಮೆಟ್ಟಲು ಅವನು ಮುರಗೋಡ (ಕಾರೀಮನೆ)ದವರೆಗೆ ಓಡಿ ಹೋದನೆಂದೂ ಅಲ್ಲಿ ಮಹಾ ಕಾಳಗವಾಗಿ, ಶಿವಶರಣರು ಅಳಿಯ ಬಿಜ್ಜಳನ ದಂಡನ್ನು ಮುರಿದರೆಂದೂ ಮೇಲಿನ ಕಾಲಜ್ಞಾನದಿಂದ ವಿಶದವಾಗುವುದು. ಕಲ್ಯಾಣದಿಂದ ಶಿವಶರಣರು ಸಹಾಯಕ್ಕೆ ಅಲೆದಾಡುತ್ತ ತಡಗೋಡಿ ನಲ್ಲಿರಲು, ಅಳಿಯ ಬಿಜ್ಜಳನು ಅವರನ್ನು ಮುತ್ತಿದನು. ಆಗ ಅವರು ಅವನನ್ನು ಅಲ್ಲಿ ತಡೆದಿದ್ದಾರೆ. ಹಳಕಟ್ಟಿ ಅವರೂ ಈ ಮಾತುಗಳನ್ನು ಒಪ್ಪಿದ್ದಾರೆ. ಮುರಗೋಡದ ಬಳಿಯಲ್ಲಿಯ 'ಕಾರಿಮನಿ'ಯಲ್ಲಿ 'ಮಡಿವಾಳ ಮಾಚನ' ಸಮಾಧಿಯಿದೆ. ಈ ಸಮಾಧಿಯು ಮೊದಲು ಮುಳಗಳ್ಳಿಯಲ್ಲಿ ಮುಚ್ಚಿಹೋಗಿತ್ತು. ಈ ಸಮಾಧಿಯಿದ್ದ ಭಾಗವನ್ನು ಕಳ್ಳಿಯಿದ್ದುದರಿಂದ ಅಯ್ಯಗೋಳ ಕಳ್ಳಿಯೆಂದು ಜನರು ಕರೆಯುತ್ತಿದ್ದರು. ಈಗ ಕಳ್ಳಿಯು ಹೋಗಿ ಬಯಲಾಗಿದೆ. ಇಲ್ಲಿಯೇ ಒಂದು ಹಳೇ ಗದ್ದಿಗೆಯಿದೆ. ಇದೇ ಮಡಿವಾಳ ಮಾಚಯ್ಯನ ಗದ್ದಿಗೆಯೆಂದು ಜನರು ಈಗಲೂ ನಡೆದು ಕೊಳ್ಳುವರು. ಕಾದರೊಳ್ಳಿಯ ಪಶ್ಚಿಮಕ್ಕೆ ನಾಲ್ಕು ಅಥವಾ ಐದು ಮೈಲಿನ ಮೇಲೆ ಮಲಪಹಾರಿಯ ದಂಡೆಯ ಮೇಲಿರುವ ಚಿಕ್ಕಹಟ್ಟಿಹೊಳೆಯ ವೀರಭದ್ರ ದೇವರ ಗುಡಿಯ ಹಿಂದೆ ಹೊಳೆಯಲ್ಲಿ ಮಡಿವಾಳ ಮಾಚಯ್ಯನ ಒಂದು ಸ್ಮಾರಕವೂ ಇದೆ. ಈ ಊರಿಗೆ ಮಾಚಿದೇವರು ಬಂದು ಹೋದಂತೆ ಕಂಡುಬರುವುದು. ಈ ಚಿಕ್ಕಹಟ್ಟಿಹೊಳಿಯು ಮಲೆನಾಡ ಸೆರಗಿನಲ್ಲಿದೆ. ಇಲ್ಲಿಯ ವೀರಭದ್ರ ಗುಡಿಯೇ ಕನ್ನಡ ಗಡಿಗಳಲ್ಲಿಯ ಮಲೆನಾಡಗಡಿಯ ಕಡೆಯ ವೀರಭದ್ರ ದೇವರೆನ್ನಬಹುದು. ಮುಂದೆ ಮಲೆನಾಡನ್ನು ಸೇರಲು ವೀರಭದ್ರ ದೇವರ ಗುಡಿಗಳೇ ಕಂಡುಬರುವುದಿಲ್ಲ. ಮಾಚಿದೇವರು, ವೀರಭದ್ರ ದೇವರ ಅವತಾರವೆಂದು, ವೀರಶೈವವರಲ್ಲಿ ಗ್ರಹಿಕೆಯಿದೆ. ಆದುದರಿಂದ, ಅವರ ಸ್ಮಾರಕಕ್ಕಾಗಿ ಜನರು ಇಲ್ಲಿ ವೀರಭದ್ರ ದೇವರ ಗುಡಿಯನ್ನು ಕಟ್ಟಿಸಿರಬಹುದೇ? ಹಳಕಟ್ಟಿ ಅವರು 'ಶಿವಶರಣರ ಚರಿತ್ರೆಗಳು' ಭಾಗ ಇರಲ್ಲಿ 'ಕಾದರಹೊಳೆಯ' ಕದನದ ನಂತರ ಶಿವಶರಣರದಂಡು ಎರಡು ಭಾಗಾಗಿ 'ಮೆಲುಗೈಯಲ್ಲಾಪುರ'ದಲ್ಲಿ ಬಂದು ಕೂಡಿದುವೆಂದು ಹೇಳಿದ್ದಾರೆ. ಈ ಶಿವಶರಣರ ಒಂದು ತಂಡವು 'ಮೈಲಾರಲಿಂಗ' ದೇವಸ್ಥಾನದ ಮೇಲೆ ಹಾಯ್ದು ವಗ್ಗಯ್ಯಗಳ ಸಹಾಯವನ್ನು ತಕ್ಕೊಂಡು 'ಮೆಲುಗೈಯಲ್ಲಾಪುರ'ಕ್ಕೆ ಬಂದು ಎರಡನೆಯ ತಂಡನ್ನು ಕೂಡಿರುವುದು.

..................ಏಳುಕೋಟಿಯೆಂದು ನಾಳಿಗೆ ಎಲ್ಲರು ನಡಿಯ ಬೇಕೆನುತಾ ।
ಬಾಳ ವಿಲಾಸದಲಿ ಮೇಳಗೊಂಡು ನಡಿದಾರು ।
ಮೆಲಗೈಯಲ್ಲಾಪುರಕೆ ವಸ್ತಿಮಾಡಿ ಮುಂದೆ
ಕಾಲಬಲ ಕೂಡಿ ಕಾನನದಿ ॥ *–ಶಿಸುನಾಳ–*

ವಗ್ಗಯ್ಯಗಳ ಸೇನೆಯಲ್ಲಿ ಬಂದ 'ಹೊನಕೇರಿ ಮಲ್ಲಭೂಪ' 'ಚಂದಯ್ಯ ನೃಪ' ಮೊದಲಾದ ವೀರರು ವಗ್ಗಯ್ಯಗಳ ಮಲ್ಲಾಟಿಕೆಯ ಬಲದಿಂದ, ಶಿವಶರಣರನ್ನು ಬೆನ್ನಟ್ಟಿ ಬರುತ್ತಿರುವ ಜೈನರ ದಂಡನ್ನು ಈ ಮೆಲುಗೈಯಲ್ಲಾಪುರದಲ್ಲಿ ತಡೆದರು. ವಗ್ಗಯ್ಯಗಳಿಗೂ, ಜೈನರಿಗೂ ಅಲ್ಲಿ ಯುದ್ಧವಾಗಿದೆ. ವಗ್ಗಯ್ಯಗಳು ಅಳಿಯ ಬಿಜ್ಜಳನ ದಂಡನ್ನು ಇಲ್ಲಿ ಪೂರ್ಣ ಸೋಲಿಸಿದ್ದಾರೆ. ಅವರ ಬಲದಿಂದ ಚೆನ್ನಬಸವಾದಿ ಶಿವಶರಣರು ಅರಣ್ಯವನ್ನು ದಾಟಿ ಉಳವಿಯನ್ನು ಸೇರಿರಬೇಕೆಂದು ಹೇಳಬಹುದು.

ಗುಡ್ಡ ಗುಡ್ಡಾಪುರದ 'ಮೈಲಾರಲಿಂಗ' ದೇವಸ್ಥಾನವು ಅತಿಪ್ರಾಚೀನಕಾಲದ್ದು. ಅದರ ಪರಂಪರೆಯ ಪ್ರಭಾವವು ಜನತೆಯ ಮೇಲೆಬಿದ್ದು ಭಕ್ತರು ಬೆಳೆದು 'ಮಂಗಸೂಳಿ' ಯಲ್ಲಿಯೂ, 'ಕಾರೀಮನಿ'ಯಲ್ಲಿಯೂ ಈ ಮಲ್ಲಯ್ಯನನ್ನು ಸ್ಥಾಪಿಸಿರಬಹುದು. ಈಗ ಈ ಎರಡೂ ದೇವಸ್ಥಾನಗಳು ಮೈಲಾರಲಿಂಗನಿಂದ ಸಿಡಿದು ಬಿದ್ದ ಎರಡು ಬೇರೆ ಟಿಸಿಲುಗಳೆಂದೇ ಹೇಳಬಹುದು. ಮೈಲಾರಲಿಂಗನಿಗೆ ನಡೆದುಕೊಳ್ಳುವ ಕೆಳಗಿನ ಪಂಗಡದ ಜನರು, 'ಮಂಗಸೂಳಿ' ಹಾಗೂ 'ಕಾರೀಮನಿ' ಮಲ್ಲಯ್ಯನಿಗೆ ನಡೆದುಕೊಳ್ಳುವ ಕೆಳಗಿನ ಕುಲದ ಜನರೊಂದಿಗೆ ರಕ್ತ ಸಂಬಂಧ ಮಾಡುವದಿಲ್ಲ. ಅವರಿಗಿಂತ ತಾವು ಶ್ರೇಷ್ಠರೆಂದು ಹೇಳಿಕೊಳ್ಳುತ್ತಾರೆ.

ಕರಿಮನಿ ಮಲ್ಲಯ್ಯ, ಊರು ಪಾದಕ ಬಿತ್ತು
ವಾರಿವಾರ್‍ಯಾಗ ಕೂಗಾಟೊ । ಮಲ್ಲಯ್ಯ
ಹೇರಕತ್ತೀಯ ಹೊತ್ತಾನೊ ॥ *–ಜಾ–ಸಂ–*

ಎಂದು ಮುರಗೋಡದ ಜನರು ಹಂತಿಯಲ್ಲಿ ಹಾಡುತ್ತಾರೆ. ಗುಡ್ಡ ಗುಡ್ಡಾ ಪುರ ಮೈಲಾರ ಲಿಂಗನ ಗುಡಿಯಲ್ಲಿ ಈಗಲೂ ಎತ್ತಲಾರದ ಬಿಲ್ಲು ಬತ್ತಳಿಕೆಗಳ ಪೂಜೆಯಾಗುವುದು. 'ಕಾರೀಮನಿ'ಯಲ್ಲಿ ಮಲ್ಲಯ್ಯನ 'ಕತ್ತಿ'ಯು ಪೂಜೆಗೊಳ್ಳುವುದು. ಈ ಎಲ್ಲ ವಿಧಾನಗಳು 'ಜೇಜೂರಿ' ಮಲ್ಹಾರಿಯ ದೇವಸ್ಥಾನದಲ್ಲಿಯ ಆಚರಣೆಗಳು ಹೋಲುವುವು. ಆದುದರಿಂದ ಈ ದೇವಸ್ಥಾನಗಳು ಮಲ್ಲಯ್ಯನ ವಾಸಸ್ಥಾನಗಳಿದ್ದು ಮೊದಲಿನಿಂದಲೂ ಮಲ್ಲಾಟಿಕೆಯ ಪ್ರದರ್ಶನದ ಸ್ಥಾನಗಳಾಗಿರಬಹುದೆಂದು, ಅಲ್ಲಿ ಈಗಲೂ ನಡೆಯುವ 'ಮಲ್ಲಾಟಿಕೆ'ಯನ್ನು ಕಣ್ಣಾರೆ ನೋಡಿ ಹೇಳಲಾಗಿದೆ.

ವಗ್ಗಯ್ಯಗಳು : (ಮಲ್ಲಯ್ಯಗಳು) ಜೋಗತಿ ಜೋಗಯ್ಯಗಳು ಯಲ್ಲವ್ವ ದೇವತೆಗಿದ್ದಂತೆ–ವಗ್ಗಯ್ಯಗಳು ಮಲ್ಲಯ್ಯನ ಪರಮಭಕ್ತ ರಾಗಿರುವರು. ಇವರು ಈ ದೇವರ ರೂಪವನ್ನು ತೊಟ್ಟು ಭಕ್ತರ ಮನೆಮನೆಗೆ ಹೋಗಿ ದೇವರ ಹೆಸರಿನಲ್ಲಿ ಭಿಕ್ಷೆ ಬೇಡುವರು. ಪ್ರಸಂಗ ಬಂದರೆ

೧೧. 'ಕಾಲಜ್ಞಾನ ಸಂಗ್ರಹ' ಭಾಗ ೧, ಪು. ೨, ಸಂ.: ಶ್ರೀ ಶಿವಬಸವಸ್ವಾಮಿಗಳು.

ರೌಸು ತುಂಬಿ ಹಲಕೆಲವು ಮಲ್ಲಾಟಿಕೆಗಳನ್ನು ಜನರು ಕೂಡಿದಾಗ ತೋರಿಸುವರು. ಈ ಕೃತಿಗಳು ಅಮಾನುಷವಾಗಿ ಕಂಡುಬಂದರೂ ಆ ಜನರ ದೃಢ ಭಕ್ತಿಯನ್ನು ತೋರಿಸದಿರವು. ಅಖಂಡ ಕಬ್ಬಿಣ ಸರಪಳಿಯನ್ನು ಗೂಟಗಲ್ಲಿಗೆ ತೊಡಕಿಸಿ ಮೈಯಲ್ಲಿ ತ್ರಾಣ ತುಂಬಿಸಿ ಉಮರಾಡಿ ಹರಿಯುವುದೂ, ಮೀನಗಂಡದಲ್ಲಿ ಹದನವಾದ ತ್ರಿಶೂಲದಿಂದ ಚುಚ್ಚಿಕೊಂಡು ತೂತುಮಾಡಿ, ಅದರಲ್ಲಿ ಗೂಟವನ್ನು ಸೇರಿಸಿ ಪಾರುಮಾಡಿ ಜಗ್ಗುವುದೂ, ಇವೇ ಮೊದಲಾದುವುಗಳನ್ನು ವಗ್ಗಯ್ಯಗಳು ಮಾಡುವುದನ್ನು ಈಗಲೂ ಈ ದೇವರ ಜಾತ್ರೆಯಲ್ಲಿ ಕಾಣುತ್ತೇವೆ. ವಗ್ಗಯ್ಯನಾಗಲು ಬಯಸುವವನಿಗೆ ಯಾವ ನಿರ್ಬಂಧವೂ ಇಲ್ಲ. ದೇವರ ಗುಡಿಯಲ್ಲಿ ಮಲ್ಲಯ್ಯನ ಎದುರಿನಲ್ಲಿ ಬಂಡಾರ ಚೀಲವನ್ನು ಕಟ್ಟಿಕೊಂಡು, ಆ ದೇವರ ಸಾನ್ನಿಧ್ಯದಲ್ಲಿ ಪ್ರತಿಜ್ಞೆ ಮಾಡಿ ಭಿಕ್ಷಾಟನೆಗೆ ಹೊರಬೀಳಬಹುದು. ಇದಕ್ಕೆ ಜಾತಿ ಕುಲಗಳ ಭೇದವಿಲ್ಲ. ಶ್ರೀ ವೆಂಕಟ ರಂಗೊ ಕಟ್ಟಿ. ಅವರು, ವಗ್ಗಯ್ಯಗಳ ಸಂಬಂಧ ಕೆಳಗಿನಂತೆ ಬರೆದಿದ್ದಾರೆ. "ಬ್ರಾಹ್ಮಣರಿಂದ ಹೊಲಯರವರೆಗೆ ಬೇಕಾದ ಜಾತಿಯವರು ವಗ್ಗಯ್ಯಗಳಾಗಬಹುದು. ಅವರ ಆಚರಣೆಗಳು ಅವರವರ ಜಾತಿ ರಿವಾಜಿನ ಪ್ರಕಾರ ಇರುವವು. ವಗ್ಗಯ್ಯನಾಗತಕ್ಕವನು ದೇವರಗುಡಿಗೆ ಹೋಗಿ ಪೂಜಾರಿಯ ಕೈಯಿಂದ ಬಂಡಾರತಕ್ಕೊಂಡು ದೇವರಿಗೆ ನಮಸ್ಕಾರ ಮಾಡಿ ಅದನ್ನು ಮೈಗೆ ಹಚ್ಚಿಕೊಂಡು, ವಗ್ಗಯ್ಯಗಳಂತೆ ಉಡುಗೆ ಮುಂತಾದವುಗಳನ್ನು ಧರಿಸುವನು. ಅವುಹ್ಯಾಗಂದರೆ ಲಂಗೋಟಿ, ಹೆಗಲಮೇಲೆ ಕಂಬಳಿ, ತಲೆಗೆ ರುಮಾಲ, ಕೊರಳಲ್ಲಿ ಕವಡಿಯಸರ, ನಡುವಿಗೆ ಹುಲಿದೊಗಲಿನ ಮೇಲೆ ಗಂಟೆಗಳು, ಹೆಗಲಿಗೆ ಬಂಡಾರದ ಚೀಲ ಚಿಗರೆಯ ಚರ್ಮದ್ದು, ಕೈಯಲ್ಲಿ ಕಟ್ಟಿಗೆಯ ಭಿಕ್ಷಾಪಾತ್ರೆ, ಮೈಲಾರ ಲಿಂಗನದರ್ಶನಕ್ಕೆ ಹೋಗುವ ಯಾತ್ರಿಕರ ಮೇಲೆ ವಗ್ಗಯ್ಯಗಳು ನಾಯಿಗಳಂತೆ ಬೊಗಳಿ, ಅವರ ಕೈಯಿಂದ ಭಿಕ್ಷೆ ತಕ್ಕೊಳ್ಳುವರು. ದಸರೆಯ ದಿವಸ ಮೈಲಾರ ಲಿಂಗನ (ಮಲ್ಲಾರಿಯ) ಉತ್ಸವವಾಗುತ್ತದೆ. ಆಗ ಬಹುಜನ ಯಾತ್ರಿಕರು ಕೂಡುತ್ತಾರೆ. ಆ ಉತ್ಸವದಲ್ಲಿ ವಗ್ಗಯ್ಯಗಳು ಕೈಯಲ್ಲಿ ಲಡ್ಡು ತಕ್ಕೊಂಡು ಕುದುರೆಯ ಹಾಗೆ ಹೀಯಾಳಿಸುತ್ತ ಕುಣಿಯುತ್ತ ಲಡ್ಡುಗಳನ್ನು ಮೈಗೆ ಒಡೆದುಕೊಳ್ಳುವರು. ನೆತ್ತರಹಾದರೆ, ಮಲ್ಲಾರಿಯ ಹೆಸರಿನಿಂದ ಬಂಡಾರ ಹಚ್ಚುವರು. ಕೆಲ ವಗ್ಗಯ್ಯಗಳು ಗಡುತರವಾದ ಸರಪಣಿಯನ್ನು ಕಂಬಕ್ಕೆ ಗಟ್ಟಿಯಾಗಿ ಕೂಡ್ರಿಸಿ, ಅದನ್ನು ಕೊರಳಿಗೆ ಸುತ್ತಿಕೊಂಡು, ಜಂಜಾಡಿಸಿ ಹರಿಯುವರು. ಗುಡ್ಡ ಗುಡ್ಡಾಪುರದಲ್ಲಿ ಕೆಲವರು ಹೊಲಿಯ ಜಾತಿಯ ವಗ್ಗಯ್ಯಾಗಳುಂಟು. ಅವರು ಬೊಟ್ಟು ಗಡುತರ ಕಬ್ಬಿಣದ ಸಲಾಕಿಯ ತುದಿಯನ್ನು ಹದಮಾಡಿ, ಉತ್ಸವದಲ್ಲಿ, ಆ ತುದಿಯನ್ನು ತಮ್ಮ ಹಿಮ್ಮಡಿಯ ಹಿಂದಿನ ನರದೊಳಗೆ ಚುಚ್ಚಿ ಸಲಾಕಿಯನ್ನು "ಆ ತೂತಿನೊಳಗಿಂದ ಯೆಳೆದು ತಗೆಯುವರು. ಆಮೇಲೆ ಅದೇ ತೂತಿನೊಳಗೆ ಕಟ್ಟಿಗೆಯ ಗೂಟವನ್ನು ಹಾಸಿ ತೆಗೆದು ತೂತಿಗೆ ಬಂಡಾರ ಹಾಕಿ ಅರಿವೆ ಸುತ್ತುವರು."[೧೪] ಇಷ್ಟು ಕಠೋರವಾದ ಹಟಯೋಗಿಗಳಾಗಿದ್ದಾರೆ ಈ ವಗ್ಗಯ್ಯಗಳು! ಇವರು ಶಿವೋಪಾಸಕರಿದ್ದು ಸ್ಥಾವರ ಲಿಂಗಗಳನ್ನು ಪೂಜಿಸುತ್ತಾರೆ. ಸ್ಥಾವರ ದೇವತೆಗಳ ಪೂಜೆಯನ್ನು ಕುರಿತು ರಾ.ಬ.ಪಿ.ಜಿ. ಹಳಕಟ್ಟಿ ಅವರು "ಶಿವಶರಣರ ತತ್ವಗಳ ಪ್ರಕಾರ ಸ್ಥಾವರಲಿಂಗಗಳನ್ನೂ ಇತರ ದೇವತೆಗಳನ್ನೂ ವೀರಶೈವರು ಎಂದೂ ಪೂಜಿಸಕೂಡದು. ಆದರೆ ಉಳವಿಯ ಸಂಗ್ರಾಮದ ತರುವಾಯ ಜಂಗಮರು ಜನತೆಯಲ್ಲಿ ದೊಡ್ಡ ಪ್ರಚಾರಕಾರ್ಯ ಮಾಡಿದ್ದರಿಂದ, ಬಹುಜನರು ವೀರಶೈವರಾದರು. ಅವರಲ್ಲಿ ಮೊದಲಿನ ಪಾಶುಪತರೂ, ಕಾಳಾಮುಖರೂ, ದೇವಾಲಯಗಳ ಅರ್ಚಕರೂ ಕೂಡ ಇದ್ದರು. ಇವರು ತಮ್ಮ ಮಹತ್ವದ ದೇವಾಲಯಗಳಲ್ಲಿ ಅರ್ಚನೆ, ಪೂಜೆ ಮೊದಲಾದವುಗಳನ್ನು ಕೂಡಲೇ ಬಿಟ್ಟು ಕೊಡುವದು ಅವರಿಗೆ ಆಗಲಿಲ್ಲ. ಅವರಂತೆ ಸಾಮಾನ್ಯ ಜನರೂ ಕೂಡ ವರ್ತಿಸಹತ್ತಿದರು. ಅವರೂ ಸ್ಥಾವರ ದೇವರನ್ನು ಬಿಡಲಿಲ್ಲ. ಹೀಗೆ ಸ್ಥಾವರ ಲಿಂಗಗಳ ಹಾಗೂ ಇತರ ದೇವತೆಗಳ ಪೂಜೆಯು ಪುರಾತನಕಾಲದಿಂದ ಈವರೆಗೂ ದೇಶದಲ್ಲಿ ನಡೆದಿರುತ್ತದೆ."[೧೫] ಎಂದು ಬರೆದಿದ್ದಾರೆ. ಈ ಕಾಳಾಮುಖರ ಮಠಗಳು ಉತ್ತರ ಕರ್ನಾಟಕದಲ್ಲಿ ವಿಜಾಪುರ, ಮುತ್ತಗಿ, ರೂಢಗಿ, ಲೋಕಾಪುರ, ಸಿರಸಂಗಿ, ಕಿತ್ತೂರು, ಬಳ್ಳೇಗಾವಿ ಮೊದಲಾದ ಸ್ಥಳಗಳಲ್ಲಿದ್ದವೆಂದು ಐತಿಹ್ಯವಿದೆ. ಅವರು ಆರಾಧಿಸುತ್ತಿದ್ದ ಸ್ಥಾವರಲಿಂಗಗಳು : ಮುತ್ತೇಶ್ವರ (ಮುತ್ತಪ್ಪ), ಕಲ್ಮೇಶ್ವರ (ಕಲ್ಲಪ್ಪ), ಮಲ್ಲಯ್ಯ, ಜಟ್ಟಿಂಗೇಶ್ವರ (ಜಟ್ಟೆಪ್ಪ)– ಈಗಲೂ ಸ್ಮಾರಕಗಳಾಗಿ ನಿಂತಿವೆ. ಅಲ್ಲದೆ ವೀರಶೈವರು ತಮ್ಮ ಮಕ್ಕಳಿಗೆ ಭಕ್ತಿಯಿಂದ ಈ ಹೆಸರುಗಳನ್ನಿಟ್ಟು ಈಗಲೂ ಈ ದೇವರಿಗೆ ನಡೆದುಕೊಳ್ಳುವುದನ್ನು ನೋಡುತ್ತೇವೆ. ಮಲ್ಲಯ್ಯನ ಭಕ್ತರಾಗಿ ಮಲ್ಲಾಟಿಕೆಯನ್ನು ಪ್ರದರ್ಶಿಸುವ ಈ ವಗ್ಗಯ್ಯಗಳು ಕರ್ನಾಟಕದಲ್ಲಿ ಉಳಿದಿರುವ ಕಾಳಾಮುಖರ ಅವಶೇಷವಿರಬಹುದೇ?

ಈ ವಗ್ಗಯ್ಯಗಳು ಮಲ್ಲಯ್ಯನ ಸಂಬಂಧ ಅನೇಕ ಹಾಡುಗಳನ್ನು ಹಾಡುವರು. ಮಲ್ಲಯ್ಯನ ಹಾಡುಗಳು ಜನಪದದಲ್ಲಿ ರಾಶಿರಾಶಿಯಾಗಿವೆ. ಇವುಗಳನ್ನು ಕಲೆಹಾಕುವುದು ಒಂದು ದೊಡ್ಡ ಸಾಹಸದ ಕೆಲಸ. ಆ ಕೆಲಸವನ್ನು ಮುಂಬರುವ ಜಾನಪದ ಸಾಹಿತಿಗಳಿಗೆ ಬಿಟ್ಟುಕೊಡಲಾಗಿದೆ. ವಗ್ಗಯ್ಯಗಳು ಗಂಟೆಯ ನಾಲಗೆಯನ್ನು ಗತ್ತಿನೊಡನೆ ನುಡಿಸಿ ತಾಳತಾನದೊಂದಿಗೆ ರಾಗವೆತ್ತಿ ಹಾಡಲು ಕೇಳುವವರಿಗೆ ಈ ಹಾಡುಗಳು ಬಲುಇಂಪಾಗಿರುವುವು. ಇವರು ಹಿಮ್ಮೇಳ–ಮುಮ್ಮೇಳಗಳ ಜೋಡಣೆಯೊಡನೆ ಹಾಡುವುದರಿಂದ ವಿಜಾಪುರ ಜಿಲ್ಲೆಯಲ್ಲಿ ಡೊಳ್ಳು ಬಡಿದು ಹಾಡುವ ಕುರುಬರ ಮೇಳದವರನ್ನು ಹೋಲುತ್ತಾರೆ. ವಗ್ಗಯ್ಯಗಳು ಹಾಡುವ ಹಾಡುಗಳು ಮೈಲಾರಲಿಂಗ ಹಾಗೂ 'ಗಂಗಿಮಾಳಿ'ಯರ ಸಂಬಂಧ ಇರುವುವು.

ಮಲ್ಲರ ಐದುಗಿರಿಗಳಲ್ಲಿ ಜೇಜೂರಿಯನ್ನು ಮಹಾರಾಷ್ಟ್ರದವರು ಆಕ್ರಮಣ ಮಾಡಿಕೊಂಡರು. ಉಳಿದ ನಾಲ್ಕೂ ಗಿರಿಗಳಲ್ಲಿ 'ಮಂಗಸೂಳಿ' ಒಂದನ್ನು ಬಿಟ್ಟು ಉಳಿದ ಮೂರು ಗಿರಿಗಳು ಒಂದಿಲ್ಲೊಂದರಲ್ಲಿ ಶಿವಶರಣರಿಗೆ ಸಂಬಂಧಿಸಿವೆ. ಬಿಜ್ಜಳನ ವಧೆಯಾದನಂತರ ಶಿವಶರಣರು ಕಲ್ಯಾಣವನ್ನು ಬಿಟ್ಟು ತೊರಗಲ್ಲನಾಡನ್ನು ಸೇರಿದ್ದಾರೆ. ಅವರನ್ನು ಬೆನ್ನಟ್ಟಿ ಬಂದ ಅಳಿಯ ಬಿಜ್ಜಳನ ದಂಡು ಅಲ್ಲಲ್ಲಿ ಅವರನ್ನು ತಡೆದಿದೆ. ಕಾರೀಮನೆಯಲ್ಲಿ ಶಿವಶರಣರಿಗೂ ಅಳಿಯ ಬಿಜ್ಜಳನಿಗೂ ಯುದ್ಧವಾಗಿದೆ. ಇಲ್ಲಿ ಮಾಚಯ್ಯನ ಸಮಾಧಿಯಿದೆ. ವಗ್ಗಯ್ಯಗಳ

---

೧೩. 'ಶಿವಶರಣರ ಚರಿತ್ರೆಗಳು' ಭಾಗ ೩, ಪು. ೩೧೦.
೧೪. 'ಕರ್ನಾಟಕ ಗ್ಯಾಝೇಟೀಯರ್', ಪು – ೨೧೫.
೧೫. 'ಶಿವಶರಣರ ಚರಿತ್ರೆಗಳು', ಭಾಗ ೩, ಪು–೩೨೮.

ಸಹಾಯದಿಂದ ಶಿವಶರಣರು ಉಳವಿಯನ್ನು ಸೇರಿದರೆಂದು ಹಿಂದೆ ಹೇಳಿದೆ. ಶಿವಶರಣರ ಸಂಪರ್ಕವಾದರೂ ಇವರು ಬುನಾದಿಯಿಂದ ಬಂದ ತಮ್ಮ ಮಲ್ಲಾಟಿಕೆಯನ್ನು ಬಿಡಲಿಲ್ಲ. ಇವರ ಅಮಾನುಷ ಶಕ್ತಿ ಪ್ರದರ್ಶನವು ಈಗಲೂ ಕಂಡುಬರುವುದು. ಇದರ ಕಾರಣವೆಂದರೆ, ಶಿವಶರಣರು ಈ ಮಲ್ಲರೊಡನೆ ಗುಡ್ಡಾಪುರದಲ್ಲಿಯೇ ಉಳಿಯಲಿಲ್ಲ. ವಗ್ಗಯ್ಯಗಳಿಗೆ ಶಿವಶರಣರ ಸಂಪರ್ಕವು ಹಾದಿಯ ಮೇಲಿನ ಭೇಟಿಯಾದಂತೆ ಆಗಿಹೋಯಿತು. ಅಲ್ಲದೆ ಕಲ್ಯಾಣಬಿಟ್ಟ ಶಿವಶರಣರು ಸ್ಥಾನಭ್ರಷ್ಟರಾಗಿ ಆಗ ನಿರಾಶ್ರಿತರಾಗಿದ್ದರು. ತಾವು ಉಳಿಯಬೇಕೆಂಬುದೇ ಅವರ ಮೂಲ ಧೇಯವಾಗಿತ್ತು. ಸಿದ್ಧರನ್ನು ಕಂಡ ಶಿವಶರಣರು ಅವರಿಗೆ ಶಿವಾಚಾರವನ್ನುಪದೇಶಮಾಡಿ ಶಿವಾನುಭವವನ್ನು ತಿಳಿಸಿಕೊಟ್ಟರು. ಅನೇಕ ಸಿದ್ಧರು ವೀರಶೈವರಾದರು. ಆದರೆ ಮಲ್ಲರನ್ನು (ವಗ್ಗಯ್ಯರನ್ನು) ಕಂಡಾಗ ಶಿವಶರಣರ ಪರಿಸ್ಥಿತಿಯು ಅಲ್ಲೋಲಕಲ್ಲೋಲವಾಗಿ ಹೋಗಿತ್ತು. ಅಂತೆಯೇ ಅವರು ಇವರಿಗೆ ಉಪದೇಶ ಮಾಡುವ ಗೊಡವೆಗೆ ಹೋಗಿಲ್ಲ. ವಗ್ಗಯ್ಯಗಳು ಶಿವೋಪಾಸಕರಾಗಿದ್ದರೂ ಶಿವಾನುಭವಿಗಳಾಗದೆ ಹಾಗೆಯೇ ಉಳಿದುಕೊಂಡರು. ಈ ಕೆಲಸವನ್ನು ಮುಂದೆ ಕಲ್ಯಾಣ ಮಂಟಪದಿಂದ ಕದಡಿದ ಜಂಗಮರು ಮಾಡಿದ್ದಾರೆ.[೧೬]

ಶ್ರೀಶೈಲ-ಮಲ್ಲರಗಿರಿಯ ಸ್ಥಿತಿಗತಿಯು ಈ ಎಲ್ಲ ಮಲ್ಲರ ಗಿರಿಗಳಿಗಿಂತ ತೀರ ಭಿನ್ನವಾಗಿದೆ. ಬುನಾದಿಯಿಂದಲೂ ಶ್ರೀಶೈಲವು ಒಂದು ಜ್ಯೋತಿರ್ಲಿಂಗವಿದ್ದು ವೀರಶೈವ ಪಂಚಾಚಾರ್ಯರಲ್ಲಿ ಒಬ್ಬರ ಸಿಂಹಾಸನ ಸ್ಥಾನವಾಗಿದೆ. ವೀರಶೈವರಿಗೆ ಇದು ಕೈಲಾಸ ಬಾಗಿಲವು. ಈ ಗಿರಿಯ ದೇವರಿಗೆ ಜನಪದವು 'ಪರವುತ ಮಲ್ಲಯ್ಯ,' 'ಮಲ್ಲಿಕಾರ್ಜುನ' ಎಂದು ಕರೆಯುತ್ತ ಬಂದಿದೆ. ಮೈಲಾರಲಿಂಗನಿಗೆ ವಗ್ಗಯ್ಯಗಳಿದ್ದಂತೆ ಪರವುತಮಲ್ಲಯ್ಯನಿಗೆ 'ಕಂಬಿಯ' ಅಯ್ಯ[೧೭]ಗಳಿರುವರು. ಕಂಬಿಯ ಅಯ್ಯಗಳು ಕಂಬಿಯ ಕಾಯಕ ಮಾಡುತ್ತ ಹಳ್ಳಿಹಳ್ಳಿಗೆ ಮಲ್ಲಯ್ಯನ ಒಕ್ಕಲುಗಳಿದ್ದಲ್ಲಿಗೆ ಭಿಕ್ಷಾಟನಕ್ಕೆ ಹೋಗುವರು. 'ಉಘೇ ಉಘೇ' ಎಂಬುವುದೇ ಇವರು ಮಾಡುವ ಮಲ್ಲಯ್ಯನ ವಾಲಗದ ಘೋಷವಾಗಿದೆ. ಇವರಾದರೂ ಮೊದಲು ವಗ್ಗಯ್ಯಗಳಂತೆ ಇದ್ದಿರಬಹುದು. ಜನಸಂದಣಿ ಕೂಡಿದಾಗ ವಾಲಗ ಮಾಡುವ ಸಮಯದಲ್ಲಿ ಕಂಬಿಯನ್ನೆತ್ತಿ ಆಡಿಸುವಾಗ ಇವರ ರೌಸು, ರೌದ್ರತೆಯನ್ನು ನಾವು ಈಗಲೂ ಕಾಣಬಹುದಾಗಿದೆ. ಆದರೆ ಇವರ ಮಲ್ಲಾಟಿಕೆಯು, ಶ್ರೀಶೈಲಪೀಠದಿಂದ ವೀರಶೈವ ಶಿವಾನುಭವವನ್ನರಿತ ಮೇಲೆ ಮಾಯವಾಗಿ ಕಾಯಕ ವಾದಿಗಳಾಗಿ ಇವರೂ ವೀರಶೈವರಾದರು.

ಮುಂದೆ ಕಲ್ಯಾಣಕ್ರಾಂತಿಯಾಗಲು ಮಂಟಪದ ಶಿವಶರಣರ ಒಂದು ತುಂಡು 'ರುದ್ರಮುನಿಯನ್ನು' ಮುಂದಾಳನ್ನಾಗಿ ಮಾಡಿಕೊಂಡು ಶ್ರೀಶೈಲವನ್ನು ಸೇರಿದರು. ಶ್ರೀಶೈಲವು ಶಿವಶರಣರ ನೆಲವೀಡಾಯಿತು. ಅವರು ಅದನ್ನು ತಮ್ಮ ಕೇಂದ್ರವನ್ನಾಗಿ ಮಾಡಿಕೊಂಡು ಸುತ್ತಮುತ್ತಲಿನ ಪ್ರದೇಶಗಳಲ್ಲಿ ವೀರಶೈವ ಧರ್ಮವನ್ನು ವಿಸ್ತರಿಸಿದರು. ಜ್ಯೋತಿರ್ಲಿಂಗಸ್ಥಾನವೂ, ಪಂಚಾಚಾರ್ಯ ಪೀಠಸ್ಥಾನವೂ ಆದ ಶ್ರೀಶೈಲವು ಬರಬರುತ್ತ ವೀರಶೈವರ ಮುಖ್ಯ ಕ್ಷೇತ್ರಸ್ಥಾನವೂ ಆಯಿತು. ಈ ದೇವರ ಭಕ್ತರು ದ್ರಾವಿಡ ಎಲ್ಲ ಜನಾಂಗಗಳಲ್ಲಿಯೂ ಇರುವರು.

ಪರವುತ ಮಲ್ಲಯ್ಯನ ಮಹಿಮೆಯನ್ನರಿತ ಕನ್ನಡ ಒಕ್ಕಲಿಗನೂ ಅವನನ್ನು ಹಂತಿಯಲ್ಲಿ ಹಾಡಿದ್ದಾನೆ.

ಗುಡ್ಡದ ಮಲ್ಲಯ್ಯ, ಗುಡಿಯೆಲ್ಲ ಭಂಗಾರ
ಹಾಸಗಲ್ಲೆಲ್ಲ ಹವಳಾವೊ। ಮಲ್ಲಯ್ನ
ಬೀಸಣಿಕೆಗೆಲ್ಲ ಬಿಡಿಮುತ್ತೊ॥
ಗುಡ್ಡದ ಮಲ್ಲಯ್ನ, ಗರುಡುಗಂಬದ ಮ್ಯಾಲೆ
ಯಾರ ಹಚ್ಯಾರ ಸರದೀಪೊ। ನಮ್ಮನೆಯ
ಬಾಲ ಹಚ್ಯಾನೊ ನಿಜದೀಪೊ॥
ನಂಬಿದರ ನಂಬೇನ, ನಂಬಿಗುಳ್ಳಯ್ಯಾನ
ಕಂಬಿ ಕಾವಡಿಯೊಡಿಯಾನ। ಪರುತಮಲ್ಲ
ನಂಬೀನಿ ಬಹಳ ದುಢದಿಂದೊ॥
ಏಳೂತ ನೆನೆದೇನ, ಏಳೆಂಟು ದೇವರನ
ಏಳು ಬಾಗಿಲದ ಒಡಿಯಾನ। ಗಿರಿಮಲ್ಲ
ಏಳೂತ ಮೊದಲು ನೆನದೇನ॥ -ಜಾ-ಸಂ-

ಎಂದು ಹಾಡಿ ಕೈಮುಗಿದಿದ್ದಾನೆ. ಪಂಡಿತರೂ, ಮಹಾಕವಿಗಳೂ ಮಲ್ಲಯ್ಯನನ್ನು ಕುರಿತು ಮಹಾಕಾವ್ಯಗಳನ್ನು ಬರೆದಿದ್ದಾರೆ; ಹೆಣ್ಣುಮಕ್ಕಳು ಮಂಗಳಾರುತಿಯನ್ನೆತ್ತಿದ್ದಾರೆ. ಹೀಗೆ ಜನಪದವು ಮಲ್ಲಯ್ಯನನ್ನು ಅನೇಕ ರೀತಿಯಿಂದ ಹಾಡಿ ಕೊಂಡಾಡಿದೆ.

ಕರ್ನಾಟಕವು ಮಲ್ಲವಿದ್ಯೆಯ ತವರೂರೂ ಅಹುದು. 'ಮಲ್ಲ' ಈ ಶಬ್ದವು ಅಚ್ಚಗನ್ನಡ ಶಬ್ದ.[೧೮] 'ಮಲ್ಲಕಂಬ' (ಮಲಗಂಬ) ಸಾಧಕವು ಮೊದಲು ಕರ್ನಾಟಕದಿಂದಲೇ ಹೊರಬಿತ್ತು. ಕೀಚಕನ ಗರಡಿಯಲ್ಲಿ 'ಮಲ್ಲಕಂಬ'ವಿತ್ತೆಂದು ಜಾನಪದದಲ್ಲಿ ಬರುತ್ತದೆ. 'ಮಲಗಂಬ' ಶಬ್ದವೇ ಅದರ ಕನ್ನಡ ಉಗಮವನ್ನು ಸೂಚಿಸದಿರದು. ಹಿಂದುಸ್ತಾನದ ಎಲ್ಲ ಭಾಗಗಳಲ್ಲಿಯೂ 'ಮಲಗಂಬ' ಶಬ್ದವೇ ಬಳಕೆಯಲ್ಲಿದೆ. (ಕಂಪಿಲರಾಯನ ಕಾಲದಲ್ಲಿ ಈ 'ಮಲಗಂಬ' ಸಾಧಕವನ್ನು ಡೊಂಬರು ಮಾಡುತ್ತಿದ್ದರೆಂದು ಕುಮಾರ ರಾಮನ ಚರಿತೆಯಿಂದ ತಿಳಿದುಬರುವುದು. ಅಲ್ಲದೆ ಚೆಲುವಿ, ರತ್ನಾಲಿಯು ಡೊಂಬರವಳೆಂದೂ ಬಂದಿದೆ.) ಕರ್ನಾಟಕದಲ್ಲಿ ಡೊಂಬರೇ ಈ ಸಾಧಕದ ಕೈಗಳನ್ನು

---

೧೬ 'ಐತಿಹಾಸಿಕ ಸಂಗತಿಗಳು', ಭಾಗ ೨, 'ಕಲ್ಯಾಣ ಕ್ರಾಂತಿ' ಈ ಪ್ರಕರಣ ನೋಡಿರಿ.

೧೭ 'ಐತಿಹಾಸಿಕ ಸಂಗತಿಗಳು', ಭಾಗ ೨, 'ಕಂಬಿಗಳು' ಈ ಪ್ರಕರಣ ನೋಡಿರಿ.

೧೮. ಈ ಶಬ್ದವನ್ನು 'ಸಂಸ್ಕೃತ'ದಲ್ಲಿ ಆರ್ಯರು, ದ್ರಾವಿಡಭಾಷೆಗಳಿಂದ ಎತ್ತಿಕೊಂಡಿರಬೇಕು.

(Exercises) ಕಲಿತು ಜನತೆಯ ಮುಂದೆ ಪ್ರದರ್ಶಿಸುತ್ತ ಈ ವಿದ್ಯೆಯನ್ನುಳಿಸಿ ತಂದಿದ್ದಾರೆ. ಮಲ್ಲರ ಎಲ್ಲ ಗರಡಿಗಳಲ್ಲಿಯೂ ಈ 'ಕಂಬ'ವು ಕಂಡುಬರುವುದು. ಮಲ್ಲವಿದ್ಯೆಯಲ್ಲಿ ದುಡಿದು, ನಿಪುಣರಾದ 'ಗರಡಿಗಳಿಗೆ' ಕನ್ನಡದಲ್ಲಿ ಜಟ್ಟಿಗಳೆಂದೂ ಕರೆಯುವರು. 'ಜಟ್ಟಿಂಗೇಶ್ವರ'[೧೯] ಇದು ಮಲ್ಲರ ದೇವರೆಂದು ಕಾಣುತ್ತದೆ. 'ಜಟ್ಟಿ' ಎಂಬೆರಡಕ್ಷರಗಳೇ ಅದನ್ನು ಸೂಚಿಸುವುವು. ಜಯದೊರಕಿದಾಗ ಮೊದಲಿನ ಕಾಲದಲ್ಲಿ ಜಟ್ಟಿಗಳು ಈ ದೇವರನ್ನೇ ಘೋಷ ಮಾಡುತ್ತಿರಬಹುದು. ಹಲಕೆಲವು ಭಾಗಗಳಲ್ಲಿ ಜಟ್ಟಿಗಳು ಈಗಲೂ 'ಜೈಬಲಭೀಮ, 'ಜೈ ಜಟ್ಟಿಂಗೇಶ್ವರ' ಎಂದು ಘೋಷಣೆ ಮಾಡುತ್ತಾರೆ.

ಮುಸಲ್ಮಾನರು ಕರ್ನಾಟಕವನ್ನು ಗೆದ್ದ ಬಳಿಕ ಕನ್ನಡ ಮಲ್ಲವಿದ್ಯೆಯಲ್ಲಿಯೂ ಕೈಯಿಟ್ಟರು. ಅವರ ಆಳ್ವಿಕೆಯಲ್ಲಿ 'ಜೈ! ಜಟ್ಟಿಂಗೇಶ್ವರ!' ಎಂದು ಪರಂಪರೆಯಿಂದ ಬಂದ ಗರಡಿಯ ಮನೆಯ ಜಯಘೋಷವು ಮಾಯವಾಗಿ 'ಅಲಿ ಮೌಲಾಲಿ' ಅಥವಾ 'ಮೌಲಾಲಕೀ ದೋಸ್ತರಹೋ ಧಿನ್' ಎಂಬ ಬೇರೆ ಪಾರಿಭಾಷಿಕ ಜಯಘೋಷಣೆಯು ಬಳಕೆಯಲ್ಲಿ ಬಂತು. 'ಅಲಿಮೌಲಾ' ಅಥವಾ 'ಮೌಲಾಲಿಕಿ' ಈ ಶಬ್ದವು ಪೈಗಂಬರ ನಂತರ ಬಂದ ೧ನೆಯ ಖಲೀಫ 'ಅಲೀಮೌಲಾ' ಅವರಿಗೆ ಸಂಬಂಧಿಸಿದೆ. ಮೌಲಾ (Masier); ಉಸ್ತಾದ ಅಲಿ; ಇವನು ಮೊದಲನೆಯ ಖಲೀಫನು. ಇವನು ಬಲಾಢ್ಯ ಕಾಯನೆಂದು ಮುಸಲ್ಮಾನರ ನಂಬಿಗೆಯಿದೆ. ಮುಸಲ್ಮಾನರು ಶಕ್ತಿ ಮೊದಲಾದ 'ಕಸರತ್ತು'ಗಳ ಪ್ರದರ್ಶನದಲ್ಲಿ ಈಗಲೂ 'ಅಲಿಮೌಲಾ' ಇಲ್ಲವೇ 'ಮೌಲಾಲಿ' ಎಂದು ಘೋಷಣೆಯನ್ನು ಮಾಡುತ್ತಾರೆ. ಈಗ ಇದೇ ಶಬ್ದವನ್ನೇ ಗರಡಿಯ ಮನೆಯಲ್ಲಿ 'ಧಿನ್' ಹಾಕುವರು. 'ಮಲ್ಲ,' 'ಜಟ್ಟಿ'ಗಳು ಮಾಯವಾಗಿ ಪಾರಭಾಷಿಕ 'ಉಸ್ತಾದ್,' 'ಪೈಲ್‌ವಾನ್' ಎಂಬ ಶಬ್ದಗಳು ಬಳಕೆಯಲ್ಲಿ ಬಂದುವು. ಈಗ ಗರಡಿಯ ಮನೆಯಲ್ಲಿ ಎಲ್ಲವೂ ಪಾರಿಭಾಷಿಕವಾಗಿ ಕೇಳುವವರಿಗೆ ಈ ಮಲ್ಲವಿದ್ಯೆಯನ್ನು ಮುಸಲ್ಮಾನರೇ ಹಿಂದುಸ್ತಾನಕ್ಕೆ ತಂದರೇನೋ ಎಂದು ಭಾಸವಾಗುವುದು.

ನತ್ತು

ಒಕ್ಕಲಿಗನ ಹಲ ಕೆಲವು ಹಾಡುಗಳನ್ನು ಪರಿಶೀಲಿಸಿ ನೋಡಿದರೆ ಅವನ ಸಂಶೋಧನೆಯೂ, ನಿಸರ್ಗ ನಿರೀಕ್ಷಣೆಯೂ ಕಂಡುಬರುವುದು. ನಿಸರ್ಗದಲ್ಲಿ ಹಗಲಿರುಳು ದುಡಿದು ಜನಾಂಗದಲ್ಲಿ ಬಾಳಿ ಬದುಕುವ ಅವನಿಗೆ ಜನಾಂಗದಲ್ಲಿ ಬರುವ ವೇಷ ಭೂಷಣಗಳ ಅನುಕರಣಗಳಾಗಲಿ, ಪದ್ಧತಿಗಳಾಗಲಿ ಅವನೆದುರಿಗೆ ಬೀಳದಿರವು. ಅವುಗಳಲ್ಲಿ 'ನತ್ತು' ಎಂಬ ಮೂಗಿನ ಆಭರಣವು ಅವನ ಮನಸ್ಸನ್ನು ಹಿಡಿದಂತೆ ಕಾಣುತ್ತದೆ.

ನತ್ತು ಮುಗದಾಣ್ಹೌದು, ಮುತ್ತೈದಿ ಮೂಗೀಗೆ
ಬಿತ್ತೂವ ಸೆಡ್ಡಿ ಭೂಮೀಗೆ। ಕಣದಾಗ
ಉತ್ತಾಣಿ ಸೆಳ್ಳುರಾಶೀಗೆ॥ –ಜಾ–ಸಂ–

ಎಂದು ಮುತ್ತೈದಿಗೆ 'ನತ್ತು' 'ಮುಗದಾಣ' (Nose string) ಎಂದು ಹಾಡಿದ್ದಾನೆ. 'ನತ್ತು' ಮುಗದಾಣವೆಂದು ಕರೆಯುವುದರಲ್ಲಿ ಔಚಿತ್ಯವೇನಿರಬಹುದೆಂದು ಅನುಮಾನವು ಎಲ್ಲರಿಗೂ ಬಾರದಿರದು. ಸುಧಾರಿಸಿದವರು ಈ ಮಾತನ್ನು ಕೇಳಿ ಹಾಸ್ಯವಾಡಿ ನಕ್ಕರೂ ನಗಬಹುದು. ಆದರೆ ಒಕ್ಕಲಿಗನು ಮಾತ್ರ ಈ ಮಾತನ್ನು ವ್ಯರ್ಥವಾಗಿ ಬಳಸಿರಲಿಕ್ಕಿಲ್ಲವೆಂದು ತೋರುತ್ತದೆ. ಅವನ ಈ ಮಾತಿನಲ್ಲಿ ಸತ್ಯತೆಯಿರಬಾರದೇಕೆ? ಈ ಸಂದರ್ಭದಲ್ಲಿ 'ನತ್ತಿ'ನ ಇತಿಹಾಸವನ್ನು ಮೊದಲು ಅರಿತುಕೊಳ್ಳುವುದು ಒಳಿತು. 'ನತ್ತು' ಇದು ಕನ್ನಡ ಶಬ್ದವೇ? ಕನ್ನಡ ಹೆಣ್ಣು ಮಕ್ಕಳ ಮೂಗಿನ ವಸ್ತುವೇ (ಆಭರಣವೇ)? ಅದರ ರೂಪ ರೂಪಾಂತರಗಳ ಬಗೆ ಹೇಗೆ? ಎಂಬ ಪ್ರಶ್ನೆಗಳನ್ನು ಈ ಸಂದರ್ಭದಲ್ಲಿ ಚರ್ಚಿಸುವುದು ಅಗತ್ಯ

ಕನ್ನಡಿಗರಲ್ಲಿ ಈಗ ಬಳಕೆಯಲ್ಲಿರುವ 'ನತ್ತಿ'ನ ಆಕಾರವು ಪೂರ್ಣಚಂದ್ರಾಕೃತಿಗೆ ಸಮೀಪವಿರುವ ಮುಸಲ್ಮಾನ ಹೆಣ್ಣುಮಕ್ಕಳು ಧರಿಸುವ ನೇತಾಡುವ ಬುಲಾಕಿಗೆ ಸಮೀಪವಾಗಿದೆ. ಇದರಲ್ಲಿ ಕಡಿಮೆ ಕಡಿಮೆ ಎಂದರೆ ಇಪ್ಪತ್ತೈದು ಮುತ್ತುಗಳಿದ್ದು ಎರಡು ಅಥವಾ ಮೂರು ಕೆಂಪು ಹಾಗೂ ಹಸರು ರತ್ನ ಮಾಣಿಕ ಪಚ್ಚದ ಹರಳುಗಳಿದ್ದದ್ದು ಕಂಡುಬರುವುದು. ಹಲಕೆಲವು ನತ್ತುಗಳಲ್ಲಿ ಹೆಚ್ಚು ಮುತ್ತುಗಳೂ ಇರುವುವು. ನತ್ತಿನ ವುಂಕಿಯನ್ನು ಮೂಗಿನ ಎಡ ಹೊರಳೆಯ ತೂತಿನಲ್ಲಿ ಪೋಣಿಸಿ, ಮುಂಭಾಗಕ್ಕೆ ಜಗ್ಗಿ, ನತ್ತಿನ ಇನ್ನೊಂದು ತುದಿಯಲ್ಲಿಯ ಕೊಂಡಿಗೆ ಹಾಕುವರು. ಅದು ಮೂಗಿನ ಮುಂಭಾಗದ ಎಡ ಹೊರಳಿಯ ಮೇಲಿಂದ ಇಳಿಬಿದ್ದು ಮೂಗನ್ನು ಅಲಂಕರಿಸುವುದು. ಈ ನತ್ತಿನಲ್ಲಿ 'ಸಾದಾನತ್ತು,' 'ಗಾಡಿನತ್ತು' ಎಂದು ಎರಡು ಪ್ರಕಾರಗಳಿವೆ. ಇವೆರಡೂ ಕರ್ನಾಟಕದಲ್ಲಿ ಕಂಡುಬರುವ ನತ್ತಿನ ರೂಪಾಂತರಗಳೆಂದೇ ಹೇಳಬಹುದು. ಗಾಡಿನತ್ತಿನಲ್ಲಿ ಬಲುಬೆಲೆಯುಳ್ಳ ದೊಡ್ಡ ಮುತ್ತುಗಳನ್ನು ಪೋಣಿಸುತ್ತಾರೆ. ಈ ನತ್ತಿನ ಆಕಾರವು ಗೋಡಂಬಿಯ ಹಾಗೆ ಇರುವುದರಿಂದ ಉಳಿದ ನತ್ತಿಗಿಂತಲೂ ಬಲು ಡೌಲಾಗಿ ಚೆಂದ ಕಾಣುವುದು. ಆದುದರಿಂದ ಕನ್ನಡಿಗರು ಇದಕ್ಕೆ ಗಾಡಿ (ಚೆಲುವ)ನತ್ತು ಎಂದು ಕರೆದಿರುವರು. ಮಹಾರಾಷ್ಟ್ರದಲ್ಲಿಯೂ ಇದೇ ಶಬ್ದವು ರೂಢಿಯಲ್ಲಿದೆ. ಈ ನತ್ತುಗಳ ಬೆಲೆಯು ಸಾವಿರಗಟ್ಟಲೆ ಇಡುತ್ತದೆ. ಇಂಗ್ಲಿಷರು ದಕ್ಷಿಣ ಸಂಸ್ಥಾನಗಳನ್ನು ರದ್ದು ಮಾಡಿ ವಶಪಡಿಸಿಕೊಳ್ಳುವ ಕಾಲಕ್ಕೆ ಆಗಿನ ಸೇನಾಧಿಕಾರಿಗಳು ಸಂಸ್ಥಾನಿಕರ ಅಪಾರವಾದ ಸಂಪತ್ತನ್ನು ಹೊತ್ತೊಯ್ದಿದ್ದಾರೆ. ಅದರಲ್ಲಿ ಅಮೌಲ್ಯವಾದ ಈ ಮೂಗು ವಸ್ತುಗಳನ್ನು ನಾನಾಪರಿಯಿಂದ ವರ್ಣಿಸಿ ತಮ್ಮ ದಿನಚರಿಯಲ್ಲಿ ಬರೆದೂ ಇಟ್ಟಿದ್ದಾರೆ. ಈಸ್ಟ ಇಂಡಿಯಾ ಕಂಪನಿಯ ಸೇನಾಧಿಕಾರಿಯಾದ ಲೆಫ್ಟನಂಟ ಎಡ್ವರ್ಡ ಮೂರನು ಮಹಾರಾಷ್ಟ್ರ ಸೇನೆಗೆ ಸಹಾಯಕನಾಗಿ ಟೀಪುಸುಲ್ತಾನನ್ನು ಸೆದೆಬಡಿಯಲು (೧೭೯೦–೧೭೯೨) ಕರ್ನಾಟಕದ ಮೇಲೆ ದಂಡೆತ್ತಿಬಂದಾಗ ಅಲ್ಲಿಯ ಹೆಣ್ಣುಮಕ್ಕಳ ಮೂಗು–ವಸ್ತುಗಳನ್ನು ನೋಡಿ ಕೆಳಗಿನಂತೆ ಬರೆದಿದ್ದಾನೆ.

---

೧೯. 'ಜಟ್ಟಿಂಗೇಶ್ವರನು' ಕಂಪಿಲ ದೇವರಾಯನ ಕುಲದೇವತೆಯಾಗಿದೆ.

"In common with most other sects of Hindoos, the women wear an ornamental ring or jewel in their nose, called in Hindi Natt. A great deal of money is some times expended and a great deal of taste sometimes displayed, in the execution and design of this favourite appendage, which what ever mere Europeans may think, must be allowed a very becoming and almost irregistible addition to the nose of a pretty face. This ornament is sometimes, but here not very frequently, affixed to the septum of the nose, but it then assumes a different name and form, and we think, loses all its effect, there not being an equal opportunity of displaying either taste or judgement, as in the circular trinket suspended in the usual style."[20] 'ನತ್ತು' ಈ ಆಭರಣದ ಸಂಬಂಧ ಅನೇಕ ಪಂಡಿತರು ಈಗಾಗಲೇ ತಮ್ಮ ಮತಗಳನ್ನು ಲೇಖನಗಳಲ್ಲಿ ವಿಶದಪಡಿಸಿದ್ದಾರೆ. ಶ್ರೀ ವ್ಹಿನ್ಸೆಂಟ ಸ್ಮಿಥ್ತ ಅವರು, "I have at present no references with me to the nose ornament in India, earlier than 1000 A.D."[21] ಹೇಳಿದ್ದಾರೆ. ಶ್ರೀ ಎಮ್.ಎನ್. ದಾಸಗುಪ್ತರು ಕ್ರಿ.ಶ. ೧೧ನೆಯ ಶತಮಾನದ ಹಿಂದೆ ಹಿಂದೂ ರಾಜ್ಯದಲ್ಲಿ ಮೂಗಿನ ಆಭರಣವಿತ್ತೆಂದೂ ಅದನ್ನು ಪರದೇಶದಿಂದ ಮುಸಲ್ಮಾನರು ತಂದಿಲ್ಲವೆಂದೂ ಸಿದ್ಧಮಾಡಿದ್ದಾರೆ.[೨೨] ಶ್ರೀ ಪಿ.ಕೆ. ಗೋಡೆ ಅವರು ಶ್ರೀ ದಾಸಗುಪ್ತರ ಮಾತನ್ನು ಸಂಶಯಾತ್ಮಕವೆಂದು ಹೇಳಿ 'ನತ್ತು' ಪರದೇಶದಿಂದ ಬಂದ ಅಲಂಕಾರವಿದ್ದು ಅದನ್ನು ಮುಸಲ್ಮಾನರೇ ಹಿಂದುಸ್ತಾನಕ್ಕೆ ತಂದರೆಂದು ಹೇಳಿದ್ದಾರೆ.[೨೩] ಡಾ. ಎ.ಎಸ್. ಅಲ್ತೇಕರ ಅವರು ನತ್ತನ್ನು ಕುರಿತು ಬಲು ಚರ್ಚಾತ್ಮಕವಾದ ಲೇಖನವನ್ನು ಬರೆದಿದ್ದಾರೆ.[೨೪] ಈ ಎಲ್ಲ ಪಂಡಿತರ ಹೇಳಿಕೆಯ ಬೆಳಕಿನಲ್ಲಿ ಕರ್ನಾಕದಲ್ಲಿರುವ ನತ್ತನ್ನು ಚರ್ಚಿಸಬೇಕಾಗಿದೆ.

'ನತ್ತ'ನ್ನು ಕನ್ನಡ ಕವಿಗಳು ತಮ್ಮ ಕಾವ್ಯಗಳಲ್ಲಿ ಎಲ್ಲಿಯೂ ಉಪಯೋಗಿಸದಿದ್ದರೂ, ಕನ್ನಡ ಕುಲಕ್ಕೆ ಪುರಂದರದಾಸರು ಆದದ್ದು ಅವರ ಹೆಂಡತಿಯ ನತ್ತೇ ಮೂಲಕಾರಣ ವೆಂದು ಇತಿಹಾಸವು ಹೇಳುತ್ತದೆ. ಈ ಮಹಾಪುರುಷರು ವಿಜಯನಗರದ ಕೃಷ್ಣರಾಯನ ಕಾಲದಲ್ಲಿ ಆಗಿ ಹೋಗಿದ್ದಾರೆ (೧೪೮೪-೧೫೬೪). ಅಂದರೆ ಕ್ರಿ.ಶ. ೧೬ನೆಯ ಶತಮಾನದ ಆರಂಭದಲ್ಲಿ 'ನತ್ತು' ಕನ್ನಡ ಹೆಣ್ಣುಮಕ್ಕಳಿಗೆ ಮೂಗುತಿಯಲ್ಲಿದೆ; ಆಗಲೇ ಮೂಗಿನ ಆಭರಣವಾಗಿ ಬಳಕೆಯಲ್ಲಿ ಬಂದು ಹೋಗಿತ್ತು. ಆಗ ಹೆಣ್ಣುಮಕ್ಕಳು ಮೂಗುತಿಯ ಬದಲಾಗಿ 'ನತ್ತು' ಸೌಭಾಗ್ಯ ಚಿನ್ಹವೆಂದಿಟ್ಟು ಕೊಳ್ಳುತ್ತಿದ್ದರೆಂದು ವಿಶದವಾಗುತ್ತದೆ. ಕನ್ನಡ ಸಾಹಿತ್ಯವನ್ನು ಪರಿಶೋಧಿಸಿ ನಿಘಂಟನ್ನು ಬರೆದ ಶ್ರೀ ಕೆಟಲ್ಲರು ಅದರಲ್ಲಿ 'ನತ್ತು' ಇದು 'ನಥ್' ಎಂಬ ಮರಾಠಿ ಶಬ್ದದಿಂದ ಬಂದಿದೆ ಎಂದು ಹೇಳಿದ್ದಾರೆ. ಆದರೆ ಮರಾಠಿಯಲ್ಲಿಯೂ 'ನಥ್' ಈ ಶಬ್ದವು ಪಾರಿಭಾಷಿಕ ಶಬ್ದವಾಗಿದೆ. ಇಜಿಪ್ತದಲ್ಲಿಯೂ, ಅರಬಸ್ತಾನದಲ್ಲಿಯೂ, ಪರ್ಶಿಯದಲ್ಲಿಯೂ ಈ ಶಬ್ದವಿದ್ದು, ಇದು ಮುಸಲ್ಮಾನ ಹೆಣ್ಣುಮಕ್ಕಳು ಹಾಕಿಕೊಳ್ಳುವ ಆಭರಣವೆಂದಿದೆ. ಈ ಆಭರಣವನ್ನು ಕ್ರಿ.ಶ. ೧೫ನೆಯ ಶತಮಾನದಲ್ಲಿ ಮುಸಲ್ಮಾನರು ದಕ್ಷಿಣಕ್ಕೆ ತಂದರು. ದಕ್ಷಿಣದಲ್ಲಿ ಪಂಚಶಾಹಿಗಳು ರಾಜ್ಯವನ್ನು ಸ್ಥಾಪಿಸಿ ಆಳಹತ್ತಿದ ಮೇಲೆ ಈ ಅಲಂಕಾರದ ಪ್ರಭಾವವು ಜನತೆಯ ಮೇಲೆ ಆಗಿ, ಮಹಾರಾಷ್ಟ್ರರೂ, ಕನ್ನಡಿಗರೂ, ಉಳಿದ ದ್ರಾವಿಡ ಪಂಗಡದವರೂ ಈ ಆಭರಣವನ್ನು ಮೂಗಿನಲ್ಲಿ ಇಟ್ಟುಕೊಳ್ಳಹತ್ತಿದರು. ಮಹಾರಾಷ್ಟ್ರರಿಗೆ ಬರಬರುತ್ತ ಈ ಆಭರಣವು ಬಹಳ ಮಹತ್ವದ್ದಾಗಿ, ಅದು ಇಲ್ಲದೆ ಈಗ ಮದುವೆ ಮೊದಲಾದ ಮಂಗಲ ಕಾರ್ಯಗಳೂ ಜರಗುವುದಿಲ್ಲ. ದಕ್ಷಿಣದಲ್ಲಿ ಉಳಿದ ಜನರು ಅದನ್ನು ಕೇವಲ ಅಲಂಕಾರವೆಂದು ಇಡುತ್ತಾರೆ.

ಕನ್ನಡ ಜಾನಪದ ಸಾಹಿತ್ಯದಲ್ಲಿ 'ನತ್ತು' ಇದು ಹೇರಳವಾಗಿ ಬಳಸಲ್ಪಟ್ಟಿದೆ. ಒಕ್ಕಲಿಗನು 'ನತ್ತು ಮುಗದಾಣ್ಣೌದು, ಮುತ್ತೈದಿ ಮೂಗೀಗೆ' ಎಂದು ಹಾಡಿದ್ದಾನೆ.

> **ಆರಸೇರಿನಸರಣಿ, ಅರಗಿಲ್ಲದ ಕಟ್ಟಾಣಿ**
> **ನತ್ತು ಬೇಡಿದರ ನಗುವಂಥ। ರಾಯರನ**
> **ನಿಂತು ಬೇಡೀನೆ ಶಿವನಲ್ಲೆ॥** *-ಗ-ಹಾ-ಪು. ೩೨-*

ಎಂದು ಹೆಣ್ಣು ತನ್ನ ಸೌಭಾಗ್ಯವನ್ನು (ಗಂಡನನ್ನು) ಹಾಡಿದೆ.

> **ಸರಿದು ನಾ ಮಲಗಟಿಗೆ, ಸರಗೀಯ ಕೊಂಡ್ಯೊತ್ತಿ**
> **ಕಾಲುಂಗರೊತ್ತಿ ಬಳಿಯೊತ್ತಿ। ರಾಯರ**
> **ನತ್ತೊತ್ತಿ ನಿದ್ದಿ ಬಾರದ॥** *-ಜಾ-ಸಂ-*

ಎಂದು ಹೆಣ್ಣಿಗೆ 'ನತ್ತು' ರಾಯರದೆಂದು ಜ್ಞಾಪಕವಾಗಲು, ರಾಯರ ನೆನಪಾಗಿ ನಿದ್ದೆ ಬಾರದೆಂದು ಉಮ್ಮಳವನ್ನು ಹಾಡಿದೆ. ಮದುವೆಯಾದ ಹೆಣ್ಣಿಗೆ ರಾಯರ 'ನತ್ತು' ಮೂಗಿಗೆ ಅಲಂಕಾರವಾಗಿದೆ ಅಲ್ಲದೆ, ಗಂಡ ಹೆಂಡರೆಂಬ ಬಂಧನವನ್ನು ಸೂಚಿಸುತ್ತದೆ. ಹಂದರದಲ್ಲಿ ಮದುಮಕ್ಕಳಿಗೆ ಎಣ್ಣೈರಿಷಣವನ್ನು ಹಚ್ಚುವಾಗ-

---

20. 'Narrative of the operations of captain littles detachment, chapter xxi `Historical and descriptive particulars of Canara and the Canarese, p.p. 288-289.
21. 'Oxford History of India, 1923 - p.p. 190.
22. `Nose ornament.' Calcatta Review, May 1937 p.p. 142-144.
23. 'Dresser and ornaments of Hindu women' J.B. H.U. Vol. II 1938. p.p. 399-422:
24. 'Antiquity of Hindoo nose ornament called `Nath', Annals of the Bhandarkar Oriental Research Institute, R.I. Vol. XIX part IV p.p. 323 - 332.

ಗಂಜೇಯ ಸೀರ್ಯುಟ್ಟು, ಗಂದಽದ ಬೊಟ್ಟಿಟ್ಟು
ಪಿಲ್ಲಿಕಾಲುಂಗರಿಟ್ಟಽ ॥ಸೋ॥
ಮುಡಿಸಣ್ಣ ಮುತ್ತಿಽನ ನತ್ತ ನಿಟ್ಟವರೆಲ್ಲ
ಎಣ್ಣೆಹಚ್ಚೊನು ಬನ್ನಿಽರೆ ॥ ಸೋ॥ —ಮ–ದಂ–ಪು. ೫೪

ಹೀಗೆ ಹಾಡುತ್ತ ಮಂಗಲ ಕಾರ್ಯಕ್ಕೆ ನತ್ತಿಟ್ಟ ಮುತ್ತಯ್ದೆಯರನ್ನು ಮದುಮಕ್ಕಳ ಎಣ್ಣ್ಯೆರಿಷಣವನ್ನು ಹಚ್ಚಲು ಕರೆಯುತ್ತಾರೆ. ಇಂತಹ ಶುಭ ಕಾರ್ಯಗಳನ್ನು ಮಾಡಲು ನತ್ತಿಟ್ಟ ಮುತ್ತೈದೆಯರೇ ಹಕ್ಕುಳ್ಳವರು. ಮದುಮಕ್ಕಳ ಪ್ರೇಮವು ಇಮ್ಮಡಿಯಾಗಲೆಂದು ಕೂಡಿದ ಹೆಣ್ಣುಮಕ್ಕಳು ಅವರಿಗೆ ಸರಸ ಸಲ್ಲಾಪಗಳಾಟಗಳನ್ನಾಡಿಸುವರು.

ಆರೂರ ರಾಜ್ಯ ನಿಮತಮ್ಮ ಆಳಿದರೇನ।
ನತ್ತಿಗಿ ನಮಕಾಲಽ ತೊಳೆಽದೆಲ್ಲ ॥ಸೋ॥
ನತ್ತೀಗಿ ನಿಮಕಾಲ ನಾವ್ಯಾಕ ತೊಳೆಯುನು ಧೊರಿಯೆ।
ಮುತ್ತೈದಿ ತನಽ ಪಡಽ ದೇವ ॥ಸೋ॥ —ಮ–ದಂ–ಪು–೫೮

ಎಂದು ಹೆಣ್ಣಿಗೆ 'ನತ್ತು; ಮುತ್ತೈದಿತನದ ಮಾಂಗಲ್ಯದ ಚಿನ್ಹವಾಗಿದೆ, ಶೃಂಗಾರದ ಪದಗಳನ್ನು ಹಾಡುವ ಹಳ್ಳಿಯ ಲಾವಣಿಗಾರನು,

ಗಿಡ್ಡಪೋರಿ, ಮಡ್ಡಹರಿ ಮಕಽರ್।
ಕಣ್ಣ ತಿರವಿ ಚಕ್ಕಽರ್।
ನಿಂತ ನೀ ನಕ್ಕಽರ್।
ಉಳ್ಳತಾವ ಮುತ್ತಾ ॥
ವಸ್ತಕಾರಿ ಪಟ್ಟಿ, ವಾಲೀಗಂಟಿ ಮೂಗನಾಗ ಸರಜಾಮ ನತ್ತಾ।
ಶ್ರೀ ಸಾನಿಧಪ, ಪಧನಿಸ, ಸರಿಗಮ, ನಾರಿ ನಿನಗತ್ತಾ।
ನಮ್ಮ ಕಂಡು ಹೋಗಬ್ಯಾಡ ಚದಽರಿ।
ಓಡಿದ್ಹಾಂಗ ಬೆದಽರಿ ಕಾರ್ಹುಣಿವಿ ಎತ್ತಾ ॥ —ಜೀ–ಸಂ–ಪು.೬೬

ಎಂದು 'ಸರಜಾಮನತ್ತ'ನ್ನು ಧರಿಸಿದ 'ಗಿಡ್ಡಪೋರಿ'ಯ ಸಿಂಗಾರವನ್ನೂ, ಒಯ್ಯಾರವನ್ನೂ ಬಣ್ಣಿಸಿದ್ದಾನೆ. ಅಲ್ಲದೆ 'ನತ್ತು' ಕನ್ನಡ ಹೆಣ್ಣುಮಕ್ಕಳ ಮಾತಾಗಿ ಒಗಟು, ಗಾದೆ ಮೊದಲಾದವುಗಳಲ್ಲಿಯೂ ಇಳಿದು ಬಿಟ್ಟಿದೆ. 'ನತ್ತು ಇಲ್ಲವೆಂದು ಸತ್ತು ಹುಟ್ಟುವೆನೆಂದರೆ ಮತ್ತೆ ಬಂದೀತೇ? ಹೆಣ್ಣುಮಕ್ಕಳ ಕೋಲುಪದಗಳಲ್ಲಿಯೂ ನತ್ತು ಬಂದಿದೆ.

ಹತ್ತೂರ ಕೊಟ್ಟಽರ, ನತ್ತೀನ ಬೆಲೆಯಿಲ್ಲ
ಅತ್ತೀಯ ಮನಿಯಾಗ ಅರ್ಜುಽನೊ ॥ ರನ್ನಾದ ಕೋಲು ಕೋಲ ॥

ಹೀಗೆ ಬಂದ 'ನತ್ತು' ಕನ್ನಡ ನಾಡೊಳಗೆ 'ಯಲ್ಲವ್ವ' 'ದ್ಯಾಮವ್ವ' 'ದುರಗವ್ವ' ಮೊದಲಾದ ಪ್ರಸಿದ್ಧ ದೇವತೆಗಳ ಮೂಗನ್ನು ಅಲಂಕಾರ ಮಾಡಹತ್ತಿದೆ. ಬುನಾದಿಯಿಂದಲೂ ಮೂಗುತಿಯನ್ನು ಧರಿಸುತ್ತ ಬಂದ ಈ ದೇವತೆಗಳಿಗೆ ಈಗ 'ನತ್ತನ್ನು' ಇಡಿಸಹತ್ತಿದ್ದಾರೆ. ಹೀಗಿದ್ದ ಪಕ್ಷದಲ್ಲಿ ಒಕ್ಕಲಿಗನು ಈ 'ನತ್ತಿಗೆ' ಮುತ್ತೈದೆಯ ಮೂಗಿಗೆ ಮುಗದಾಣವೇಂದೇಕೆ ಕರೆದಿರಬೇಕು?

ಮಾನವನು, ತನ್ನ ಪ್ರಪಂಚವು ಸುರಳಿತ ಸಾಗಲೆಂದು ಅನೇಕ ಪಶುಗಳನ್ನು ಸಾಕಿ ಸಲಹುತ್ತ ಬಂದಿದ್ದಾನೆ; ಅವುಗಳನ್ನು ತನ್ನ ಅಧೀನದಲ್ಲಿಟ್ಟುಕೊಳ್ಳಲು ಅವುಗಳ ಮೂಗಿಗೆ ಮುಗದಾಣ ಹಾಕಿದ್ದಾನೆ. ಬಹುತರವಾಗಿ ಎಲ್ಲ ಪಶುಗಳಿಗೆ ಮುಗದಾಣ ಪೋಣಿಸಿದ್ದು ಅವುಗಳ ಮೂಗಿನ ಸೆಂಬೆಯೊಳಗಿಂದ. ಒಂಟಿಯೊಂದನ್ನು ಬಿಟ್ಟು ಉಳಿದ ಪಶುಗಳಿಗೆ ಮುಗದಾಣ ಹಾಕುವ ರೀತಿಯು ಒಂದೇ ಆಗಿರುವುದು. ಒಂಟೆಗೆ ಮಾತ್ರ ಕೇವಲ ಮುಗದಾಣ nose-string ವಿರದೆ ಎರಡು ಇಂಚು ತ್ರಿಜ್ಯವುಳ್ಳ ನತ್ತಿನಾಕಾರದ ಮೂಗಬಳೆಯು ಇರುವುದು. ಈ ಬಳೆಯನ್ನು ಒಂಟೆಯ ಮೂಗಿನಲ್ಲಿ ಹಾಕಿ ಎಡಬಲದ ಕೊಂಡಿಗಳಲ್ಲಿ ಹಗ್ಗಗಳನ್ನು ಪೋಣಿಸಿಕೊಂಡು, ಉಸಕಿನ ಭೂಮಿಯಲ್ಲಿ ಜನರು ತಮಗೆ ಬೇಕಾದಲ್ಲಿಗೆ ಮೊದಲು ಸಾಗಾಟ ಸಾಗಿಸುತ್ತಿದ್ದರು. ಇಜಿಪ್ತದ ನಾಗರೀಕತೆ (civilization)ಯು ಅತಿ ಪ್ರಾಚೀನದ್ದೆಂದು ಇತಿಹಾಸ ಪ್ರಸಿದ್ಧವಿದೆ. ಯಂತ್ರ ಸಲಕರಣೆಗಳಿಲ್ಲದ ಅಂದಿನ ಕಾಲದಲ್ಲಿ ಮರುಭೂಮಿಯಲ್ಲಿ ನಾಗರಿಕತೆಯ ಪಟ್ಟವನ್ನು ಕಟ್ಟಿದ ಈ ದೇಶವು ತನ್ನ ವ್ಯಾಪಾರ ಮೊದಲಾದ ಸಾಗಾಟಗಳಿಗೆ ಕೇವಲ ಒಂಟೆಯ ಮೇಲೆಯೇ ಅವಲಂಬಿಸಿಕೊಂಡು ಬಂದಿರುತ್ತದೆ. ಇದಕ್ಕೆ ಸಾಕ್ಷಿಯಾಗಿ, "Camel is the ship of the desart" ಒಂಟೆಯು ಮಳಲುಗಡಲಿನ ಹಡಗವೆಂದು ಪಾಶ್ಚಿಮಾತ್ಯದಲ್ಲಿ ವಾಡಿಕೆಯಿದೆ. ಯಾಂತ್ರಿಕ ಸಲಕರಣೆಗಳಿಲ್ಲದ ಈ ಮರುಭೂಮಿಯ ಹಲಕೆಲವು ಭಾಗಗಳಲ್ಲಿ ಒಂಟೆಯು ಸಾಗಾಟಕ್ಕೆ ಈಗಲೂ ಮುಖ್ಯ ವಾಹನವಾಗಿದೆ. ಇಜಿಪ್ತದಲ್ಲಿ ಒಂಟೆಗೆ ಹಾಕುವ ಈ ಮುಗದಾಣಕ್ಕೆ 'ನಾಧಿಯಾ' ಎಂದು ಕರೆಯುತ್ತಾರೆ. ಅರಬಸ್ಥಾನದಲ್ಲಿ 'ನಕೀಲ' ಎಂದೂ, ಪರ್ಶಿಯನ್ ಮತ್ತು ಉರ್ದೂ ಭಾಷೆಗಳಲ್ಲಿ 'ನಥನೀ' ಎಂದೂ ಅದೇ ಅರ್ಥವನ್ನು ಸೂಚಿಸುವ ಶಬ್ದಗಳಿವೆ. ಆದುದರಿಂದ 'ನತ್ತು' ಹೀಗೆ ಅರ್ಥವಾಗುವ ಇಂತಹ ಶಬ್ದಗಳಿಂದ ಬಂದಿರಬಹುದೇ? ಎಂಬ ಅನುಮಾನವೂ ಬಾರದಿರದು. ಮುಸಲ್ಮಾನರು ವಸಹಾತು ಮಾಡಿಕೊಂಡಿರುವ ಬಹುತರ ಎಲ್ಲ ದೇಶಗಳಲ್ಲಿಯೂ 'ನತ್ತು' ಆ ಹೆಣ್ಣುಮಕ್ಕಳ ಮೂಗಿಗೆ ಅಲಂಕಾರವಾಗಿದೆ. ಅದಕ್ಕೆ ಲಗ್ನದಲ್ಲಿ ವಿಶೇಷ ಮಹತ್ವವೂ, ಮಾಂಗಲ್ಯವೂ, ಆ ಜನಾಂಗದಲ್ಲಿ ಬುನಾದಿಯಿಂದಲೂ ಬಂದಿದೆ. ಮುಸಲ್ಮಾನ ಹೆಣ್ಣುಮಕ್ಕಳು 'ನಥ' ಇದನ್ನು ಮೂಗಿನ ಸೆಂಬೆಯೊಳಗೆ ಚುಚ್ಚಿಸಿಕೊಳ್ಳುತ್ತಾರೆ.

ಇದು ಪಶುಗಳ ಮೂಗಿನ ಸೆಂಬಿಗೆ ಚುಚ್ಚಿ ಮುಗದಾಣ ಹಾಕುವ ರೀತಿಗೆ ಬಹಳ ಹೋಲುತ್ತದೆ. ಅಲ್ಲದೆ ಇಜಿಪ್ತದಲ್ಲಿ ಈ ಮುಗದಾಣಕ್ಕೆ 'ನಾಥಿಯಾ' ಎಂದು ಕರೆಯುತ್ತಾರೆ. ಕಾರಣ 'ನಥ್' ಈ ಶಬ್ದವು 'ನಾಥಿಯಾ' ಈ ಶಬ್ದದಿಂದಲೇ ಬಂದಿರಬೇಕು. ಅದು 'ನಥ್' ಎಂದು ರೂಪಾಂತರವನ್ನು ಹೇಗೆ ಹೊಂದಿ ಬಂದಿತೆಂದು ಹೇಳಲು ಸಾಕಷ್ಟು ಆಧಾರಗಳಿಲ್ಲ.

ಇಜಿಪ್ತದ ನಿವಾಸಿಗಳು ನಾಗರೀಕತೆಯನ್ನು ಹೊಂದುವ ಮುನ್ನ, ಆ ಉಸಕಿನ ಮಹಾ ಅರಣ್ಯದಲ್ಲಿ ಒಂಟೆಗೆ ಮುಗದಾಣ ಹಾಕಿಕೊಂಡು ಪ್ರವಾಸದಲ್ಲಿ ಅದನ್ನು ಮುಗದಾಣದ ಮುಖಾಂತರ ತಮ್ಮ ಸ್ವಾಧೀನದಲ್ಲಿಟ್ಟು ಕೊಳ್ಳುತ್ತಿದ್ದರು. ಒಂಟೆಯು ಆ ಮರುಭೂಮಿಯನ್ನು ದಾಟಲು ಹೇಗೊ ಹಾಗೆ 'ಹೆಣ್ಣು' ಈ ಪ್ರಪಂಚವೆಂಬ ಮರುಭೂಮಿಯನ್ನು ದಾಟಲು ಎಂದು ಅವರು ಕಲ್ಪಿಸಿರಬಹುದು. ಹೆಣ್ಣಿನ ನೆಲೆಯನ್ನರಿಯದ ಮನುಷ್ಯನು ಎಲ್ಲ ಜನಾಂಗಗಳಲ್ಲಿಯೂ, ಹೆಣ್ಣನ್ನು ಒಂದಿಲ್ಲೊಂದು ಬಗೆಯಿಂದ ತನ್ನ ಸ್ವಾಧೀನದಲ್ಲಿಟ್ಟುಕೊಳ್ಳಲು ಪ್ರಯತ್ನ ಮಾಡುತ್ತ ಬಂದಿದ್ದಾನೆ. ಕಾಡುಸ್ಥಿತಿಯಲ್ಲಿದ್ದಾಗ ಇಜಿಪ್ತದ ನಿವಾಸಿಗಳು ಒಂಟೆಯ ಮುಗದಾಣದ ಪ್ರಯೋಗವನ್ನು ಹೆಣ್ಣಿನ ಮೇಲೆ ಮಾಡಿ, ಅವಳು ಮದುವೆಯಾದಳೆಂದು ಸೂಚಿಸಲು ಮೊದಲು ಮಾಡಿರಬಹುದು. ಮುಗದಾಣ ಪ್ರಯೋಗವಾದ ಹೆಣ್ಣು, ಮದುವೆಯಾದವಳೆಂದೂ, ಓರ್ವ ಪುರುಷನ ಅಂಕಿತದಲ್ಲಿರುವಳೆಂದೂ ಆ ಜನರ ಆಗಿನ ಕಲ್ಪನೆಯಿದ್ದರೂ ಇರಬಹುದು. ಬರಬರುತ್ತ ಸುಧಾರಣೆಯು ಮೈದೋರಿ ನಾಗರೀಕತೆಯು ಬೆಳೆಯಹತ್ತಲು, ಅತಿ ಕ್ರೂರವೂ, ಅಸಹನವೂ, ಆದ ಈ ವಿಧಾನವು ಆಭರಣರೂಪವನ್ನು ತಾಳಿರಬಹುದೇ? ಅಂತೆಯೇ 'ನಥ್' ಈ ಶಬ್ದೋತ್ಪತ್ತಿಯು 'ನಾಥಿಯಾ' ಶಬ್ದದಿಂದ ಬಂದಿರಬಹುದೇ? ಹೀಗೆ 'ನಥ್' ಶಬ್ದವು ರೂಪಾಂತರ ಹೊಂದಿ ಬಳಕೆಯಲ್ಲಿ ಬಂದಿರಬಹುದು. ಆದರೂ ಪಶುವಿನಂತೆ ಹೆಣ್ಣಿನ ಮೂಗಿನ ಸೆಂಬೆಯನ್ನು ಚುಚ್ಚುವುದು ಮಾತ್ರ ಯಾವ ರೂಪಾಂತರವನ್ನೂ ಹೊಂದಲಿಲ್ಲ. ಅದು ಇಲ್ಲಿಯವರೆಗೆ ಹಾಗೆಯೇ ಉಳಿದಿದೆ.

ಮೇಲಿನ ಊಹೆಯು ಸತ್ಯವೇನೊ ಅನ್ನುವಂತೆ ಮುಸಲ್ಮಾನರಲ್ಲಿ ಈಗಲೂ ಮದುವೆಯ ಕಾಲದಲ್ಲಿ ಮದು ಮಗಳು ಚಿಕ್ಕವಳಿದ್ದರೆ, ಮದುಮಗನು ಅವಳನ್ನು ತನ್ನ ಬಲದೊಡೆಯ ಮೇಲೆ ಕುಳ್ಳಿರಿಸಿಕೊಂಡು ಮೂಗಿನ ಬಲಹೊರಳೆಯಲ್ಲಿ ನತ್ತನ್ನು ಚುಚ್ಚುವನು. ಜಾನಪದ ಸಾಹಿತ್ಯವನ್ನು ಸಂಕಲನ ಮಾಡುವ ಕಾಲಕ್ಕೆ ತೊರಗಲ್ಲಿನಲ್ಲಿ ಈ ವಿಧಾನವು ನಿದರ್ಶನಕ್ಕೆ ಬಂತು. ಅದನ್ನು ನೋಡಿ ಆಶ್ಚರ್ಯಗೊಂಡು ಅಲ್ಲಿಯ ಜನರನ್ನು ವಿಚಾರಿಸಲು ಅವರು ಮುಸಲ್ಮಾನೀ ಧರ್ಮದ ಪ್ರಕಾರ ಇದೊಂದು ಲಗ್ನಕಾಲದಲ್ಲಿ ಆಚರಿಸಲ್ಪಡುವ ಮಹತ್ವದ ವಿಧಾನವೆಂದು ಹೇಳಿದರು. ಆದರೆ ಇತ್ತೀಚೆಗೆ ಹಲಕೆಲವರು ಸುಧಾರಿಸಿದವರೆಂದು ಇದನ್ನು ಆಚರಿಸುವುದಿಲ್ಲ. ಅಲ್ಲದೆ ಅವರಲ್ಲಿಯೂ ಈಗ ಬಾಲಕನ್ನೆಯರ ಲಗ್ನಗಳಾಗುವುದೂ ಕಡಿಮೆಯಾಗಹತ್ತಿದೆ ಎಂದು ಹೇಳಿದರು. ಹೀಗೆ ಮೂಗು ಚುಚ್ಚುವುದು ಲಗ್ನದ ಚಿನ್ಹವೆಂದು ಮುಸಲ್ಮಾನರಲ್ಲಿ ಬಂದಿದೆ. ಹಲಕೆಲವರಲ್ಲಿ ಈಗಲೂ ಬಳಕೆಯಲ್ಲಿದೆ.

ಉತ್ತರ ಹಿಂದುಸ್ತಾನದ ಹಿಂದುಳಿದ ಜನಾಂಗಗಳಲ್ಲಿ ಹೆಣ್ಣು ತದ್ರೂಪ, ಒಂಟೆಯ ಮೂಗಿಗೆ ಹಾಕುವ ಬಳೆಯ ಆಕಾರದ ಒಂದು ಚಿನ್ನದ ಅಥವಾ ಬೆಳ್ಳಿಯ ಬಳೆಯನ್ನು, ನಡುವೊಂದು ಗುಂಡುಪೋಣಿಸಿ, ಅಲಂಕಾರವೆಂದು ಮೂಗಿನ ಎಡಹೊರಳೆಯಲ್ಲಿಟ್ಟುಕೊಳ್ಳುತ್ತದೆ. ಇದು ಈಗ ನಮಗೆ ಕಂಡುಬರುವ ಸುಧಾರಿಸಿದ 'ನತ್ತಿ'ನ ಸುಂದರವಾದ ಆಕಾರದ ಮೂಲರೂಪವೆಂದು ಹೇಳಬಹುದು. ಒಂಟೆಯ ಮೂಗ ಬಳೆಯಾಕಾರದ ಈ ಮೂಗಿನ ಅಲಂಕಾರವು ನತ್ತಿನ ಮೂಲ ಉಗಮವನ್ನು ಸೂಚಿಸಲಾರದೇ? ಇಜಿಪ್ತದ ನಾಗರೀಕತನವು ದಿನದಿನಕ್ಕೆ ಬೆಳೆದು ಅರಬಸ್ತಾನ, ಪರ್ಶಿಯಾ ಮೊದಲಾದ ದೇಶದ ಜನಾಂಗಗಳ ಮೇಲೆ ತನ್ನ ಪ್ರಭಾವವನ್ನು ಚೆಲ್ಲಿರಬಹುದು. ಮೂಗಿನ ಸುಂದರವಾದ ಅಲಂಕಾರವನ್ನು ಕಂಡ ಈ ದೇಶಗಳ ಜನರಾದರೂ ಅದನ್ನು ಅನುಕರಣಮಾಡಿ ತಮ್ಮಲ್ಲಿಯೂ ಉಪಯೋಗಿಸುತ್ತ ಬಂದಿರಬಹುದು. ಮುಂದೆ ಮುಸಲ್ಮಾನರು ಹಿಂದುಸ್ತಾನವನ್ನು ಗೆದ್ದು ಆಳಹತ್ತಿದ ಮೇಲೆ 'ನತ್ತೂ' ಅವರ ಬೆನ್ನಹತ್ತಿ ಹಿಂದುಸ್ತಾನಕ್ಕೆ ಬಂತು. ಧರ್ಮವಂತರಾದ ಹಿಂದೂ ಜನರು ಕಾಲಾಂತರದಲ್ಲಿ ಈ ನತ್ತನ್ನು ತಮಗೂ ಮೂಗಿನ ಅಲಂಕಾರವೆಂದು ಒಪ್ಪಿರಬಹುದು. ಕ್ರಿ.ಶ. ಸುಮಾರು ೧೧ನೆಯ ಶತಮಾನದ ನಂತರ ಈ 'ನತ್ತು' ಹಿಂದೂ ಹೆಣ್ಣುಮಕ್ಕಳ ಮೂಗಿಗೆ ಅಲಂಕಾರವಾಯಿತು.[೨೫]

ಪ್ರಾಕೃತ ನಿಘಂಟದಲ್ಲಿ 'णत्था' ಎಂಬ ಶಬ್ದಕ್ಕೆ 'ನಾಸಾರಜ್ಜು' (नासारज्जु), ಮುಗದಾಣವೆಂಬ ಅರ್ಥವಿದೆ. ಇದು 'ದೇಶಿ'ಯ ಶಬ್ದವೆಂದು ನಿಘಂಟುಕಾರರು ಹೇಳಿದ್ದಾರೆ. ಬಹುತರವಾಗಿ ನಿಘಂಟುಕಾರರು 'णत्था' ಎಂಬ ಶಬ್ದಕ್ಕೆ ಪ್ರತಿಯಾಗಿ ಅದೇ ಅರ್ಥವನ್ನು ಸೂಚಿಸುವ 'ಏಕಶಬ್ದವು' ಸಂಸ್ಕೃತದಲ್ಲಿ ದೊರೆಯದ ಮೂಲಕ ಅದನ್ನು ಹುಡುಕಿ ಹೇಳುವ ಗೋಜಿಗೆ ಹೋಗದೆ 'ದೇಶಿ' ಶಬ್ದವೆಂದು ಕರೆದಿರಬಹುದು. ಪ್ರಾಕೃತದಲ್ಲಿ 'ದೇಶಿನಾಮ ಮಾಲಾ' ಎಂಬ ಗ್ರಂಥವನ್ನು ಬರೆದ ಹೇಮಚಂದ್ರನು ಕ್ರಿ.ಶ. ೧೩ನೆಯ ಶತಮಾನದಲ್ಲಿ ಆಗಿಹೋಗಿದ್ದಾನೆ. ಈ ಮುಂಚೆಯೇ 'ನಥ್' ಎಂಬ ಶಬ್ದವು ಬಳಕೆಯಲ್ಲಿ ಬಂದು ಹೋಗಿತ್ತು. ಪ್ರಾಕೃತದಲ್ಲಿಯ 'णत्था' ಎಂಬ ಶಬ್ದವು ಇಜಿಪ್ತ ದೇಶದಲ್ಲಿಯ 'ನಾಥಿಯಾ' ಎಂಬ ಶಬ್ದದಿಂದಲೇ ಬಂದಿರಬೇಕು. ಯಾಕೆಂದರೆ ಈ ಎರಡೂ ಶಬ್ದಗಳ ಅರ್ಥವು ಒಂದೇಯಾಗಿದ್ದು ಉಚ್ಚಾರವೂ ಒಂದಕ್ಕೊಂದು ಹೋಲಿಕೆಯಲ್ಲಿ ತೀರ ಸಮೀಪವಾಗಿವೆ. ಹೀಗೆ 'ನತ್ತು' ಪರದೇಶದ ಆಭರಣವಿದ್ದು ಮುಸಲ್ಮಾನರೇ ಅದನ್ನು ಹಿಂದುಸ್ತಾನಕ್ಕೆ ತಂದಿರಬಹುದು.

ಕನ್ನಡಿಗರಿಗೆ 'ನತ್ತು' ಹೆರವರು ತಂದ ಅಲಂಕಾರ. ಮೂಗುತಿಯು 'ನತ್ತು' ಬರುವುದಕ್ಕಿಂತ ಮುಂಚೆಯೇ ಕನ್ನಡ ನಾಡಿನಲ್ಲಿ ಹೆಣ್ಣುಮಕ್ಕಳಿಗೆ ಸೌಭಾಗ್ಯ ಚಿನ್ಹವಾಗಿತ್ತು. ಮೂಗುತಿಯು ಅಚ್ಚಗನ್ನಡ ಶಬ್ದ. ನತ್ತಿಗೂ ಇದಕ್ಕೂ ಯಾವ ಸಂಬಂಧವೇ ಇಲ್ಲ.

---

25. The 'Antiquity' of the Hindoo nose ornament called 'Nath' by P.K. Gode, Annals of the Bhandarkar Oriental Research Institute, vol. xix, part iv, p.p. 313-333

ಸಂಸ್ಕೃತಕೋಶದಲ್ಲಿ ನತ್ತೆಂಬ ಅಲಂಕಾರದ ಹೆಸರೇ ಇಲ್ಲ. ಇದರ ಮೇಲಿಂದ ಆರ್ಯಜನಾಂಗದ ಹೆಣ್ಣುಮಕ್ಕಳಿಗೆ ಮೊದಲಿನಿಂದ ಮೂಗಿಗೆ ಅಲಂಕಾರವಿದ್ದಿಲ್ಲವೆಂದೇ ಹೇಳಬಹುದು.[೨೬] ಅಲ್ಲದೆ, ಅವರಿಗೆ 'ನತ್ತು' ಲಗ್ನದಲ್ಲಿ ಅಷ್ಟೊಂದು ಮಹತ್ವದ ಅಲಂಕಾರವೂ ಅಲ್ಲ. ಆದುದರಿಂದ ಅವರಿಗೆ ಮೂಗಿಗೆ ಅಲಂಕಾರ ಬಂದದ್ದು ಮುಸಲ್ಮಾನರು ಹಿಂದುಸ್ತಾನವನ್ನು ಹೊಕ್ಕನಂತರವೆಂದೇ ಹೇಳಬಹುದು.

ಕನ್ನಡ ಯಾವ ಕವಿಯೂ ತನ್ನ ಕಾವ್ಯಗಳಲ್ಲಿ 'ನತ್ತು' ಶಬ್ದವನ್ನು ಉಪಯೋಗಿಸಿರುವುದಿಲ್ಲ. ಅದರ ಬದಲು ಎಲ್ಲ ಕವಿಗಳು 'ಮೂಗುತಿ' ಎಂಬ ಶಬ್ದವನ್ನು ಉಪಯೋಗಿಸುತ್ತ ಬಂದಿದ್ದಾರೆ. ಮೂಗುತಿಯನ್ನು ಕರ್ನಾಟಕದಲ್ಲಿ ಅತಿ ಪ್ರಾಚೀನ ಕಾಲದಿಂದಲೂ ಕಾಣಬಹುದಾಗಿದೆ. ಮೂಗುತಿಯು ಕನ್ನಡ ಹೆಣ್ಣುಮಕ್ಕಳಿಗೆ ಲಗ್ನ ಮೊದಲಾದ ಶುಭಕಾರ್ಯಗಳಲ್ಲಿ ಮಾಂಗಲ್ಯದ ಗುರುತಾಗಿದೆ. ಕನ್ನೆಯರೂ, ಮದುವೆಯಾದ ಮುತ್ತೈಯ್ದೆಯರೂ 'ಮೂಗುತಿಯು' ಸೌಭಾಗ್ಯ ಲಕ್ಷಣವೆಂದು ಧರಿಸುತ್ತ ಬಂದಿದ್ದಾರೆ. ಕನ್ನಡ, ಮಲಿಯಾಳ, ತೆಲುಗು ಮೊದಲಾದ ಎಲ್ಲ ದ್ರಾವಿಡ ಜನಾಂಗಗಳಲ್ಲಿ ಮೂಗುತಿಯು ಮೊದಲಿನಿಂದಲೂ ಬಂದಿದೆ. ಹೀಗಿದ್ದು ಅಜಂತಾ, ಎಲ್ಲೋರ, ಬಾದಾಮಿ ಮೊದಲಾದ ಸ್ಥಳಗಳಲ್ಲಿ ಕೊರೆಯಿಸಿದ ಕಲ್ಲನೆಗಳ ಹೆಣ್ಣುಗೊಂಬೆಗಳಿಗೆ ಮೂಗಿನಲ್ಲಿ ಮೂಗುತಿಯು ಕಂಡುಬರುವುದಿಲ್ಲ. ಕಲ್ಮನೆಗಳ ಗೋಡೆಗಳ ಮೇಲೆ ಬರೆಸಿದ ಬಣ್ಣದ ಚಿತ್ರಗಳಲ್ಲಿಯೂ (mural paintings) ಈ ಮೂಗುತಿಯು ಕಾಣದಿರುವುದು ಸೋಜಿಗದ ಮಾತಾಗಿದೆ. ಇದಕ್ಕೆ ಸಂಶೋಧಕರು ಗಾಬರಿಯಾಗುವ ಕಾರಣವೇ ಇಲ್ಲ. ಆರ್ಯರಿಗೆ ಮೂಗಿನ ಅಲಂಕಾರವೇ ಇಲ್ಲ. ದ್ರಾವಿಡರಿಗೆ ಈ ಮೂಗಿನ ಅಲಂಕಾರವು ಮೊದಲಿನಿಂದಲೂ ಇತ್ತೆಂದು ಕಂಡುಬರುವುದು. ಆರ್ಯರನ್ನು ಅನುಕರಣ ಮಾಡದೆ ಎಲ್ಲ ದ್ರಾವಿಡರು ಈ ಮೂಗುತಿಯನ್ನು ಹಾಕುತ್ತ ಬಂದಿದ್ದಾರೆ. ಆರ್ಯರ ಸಂಪರ್ಕದಿಂದ ಅವರ ಸಂಸ್ಕೃತಿಯನ್ನನುಕರಣಮಾಡಿದ ದ್ರಾವಿಡರು, ಮೂಗಿನ ಅಲಂಕಾರವಿಲ್ಲದ ಆರ್ಯಸ್ತ್ರೀಯರನ್ನು ನೋಡಿ, ತಾವು ಹಾಕುತ್ತ ಬಂದ ಮೂಗುತಿಯನ್ನು ಕಾಡಪದ್ಧತಿಯೆಂದು ಬಿಟ್ಟು ಕೊಟ್ಟಿರಬಹುದು. ಈ ಜನರೇ ರಾಜ್ಯಕಾರಣದಲ್ಲಿ ಮುಂದೆ ಬಂದು ಶಿಲ್ಪಕಲೆ ಮೊದಲಾದುವುಗಳಿಗೆ ಪ್ರೋತ್ಸಾಹ ಕೊಟ್ಟಿದ್ದರಿಂದ ಈ ಕಲ್ಲನೆಗಳಲ್ಲಿ ಕೆತ್ತಿಸಿದ ಹೆಣ್ಣು ಗೊಂಬೆಗಳಿಗಾಗಲಿ, ಗೋಡೆಯ ಮೇಲೆ ಬರೆಸಿದ ಚಿತ್ರಗಳಾಗಲಿ, ಮೂಗಿಗೆ ಈ ಅಲಂಕಾರವು ಅನಾಗರೀಕತೆಯ ಗುರುತೆಂದು ಅದನ್ನು ಬಿಟ್ಟಿರಬಹುದೆಂದು ಅನುಮಾನಿಸಬಹುದಾಗಿದೆ. ದ್ರಾವಿಡ ಎಲ್ಲ ಭಾಷೆಗಳಲ್ಲಿಯೂ 'ಮೂಗುತಿ' ಎಂಬ ಶಬ್ದವಿದೆ. ಮಲಯಾಳ ಭಾಷೆಯಲ್ಲಿ ಈ 'ಮೂಗುತಿಗೆ' 'ಮುಕ್ಕೂತಿ' ಎಂಬ ಶಬ್ದವಿದೆ. ಮುಕ್ಕು+ಕುತ್ತಿ=ಮೂಗು+ಗುದ್ದಿ ಎಂದು ಕನ್ನಡದಲ್ಲಿ ಆಗುವುದು. ಮೂಗುತಿಯು, ಹೆಣ್ಣಿಗೆ ಗಂಡನೆಂಬ ಬಲವಂತ 'ಗುದ್ದಿಗೆ' ಯುಂಟೆಂದು ಸೂಚಿಸಬಹುದೇ? ಒಕ್ಕಲಿಗನು ಅನ್ನುವ 'ನತ್ತು ಮುಗದಾಣ್ಣೌದು' ಎಂಬುದನ್ನು ಇದಕ್ಕೆ ಹೋಲಿಸಿನೋಡಿರಿ. ಮೂಗುತಿ ಹಾಗೂ ಗೂಟ ಮೂಗುತಿಗಳ ಹಿಂದೆ ಇದೇ ಅರ್ಥ ಗರ್ಭಿತ ಧ್ವನಿಯಿರಬಹುದೇ? ಮಲಿಯಾಳ ಸಾಹಿತ್ಯದಲಿ 'ಮುಕ್ಕುತ್ತಿ' ಎಂಬ ಶಬ್ದವು ಕ್ರಿ.ಶ. ೮ನೆಯ ಶತಮಾನದಿಂದಲೂ ಬಳಕೆಯಲ್ಲಿದೆ. ಶ್ರೀ ಶಂಕರಾಚಾರ್ಯರು ಬರೆದಿರಬಹುದೆಂದು ಅನುಮಾನಿಸಿದ 'ತ್ರಿಪುರಸುಂದರೀ ಮಾನಸ ಪೂಜಾಸ್ತೋತ್ರ'ದಲ್ಲಿ 'मध्यस्यारुणरत्नकांतिरुचिरां मुक्तामुगोद्भासितां । ಇದನ್ನು ಶಂಕರಾಚಾರ್ಯರೇ ಬರೆದದ್ದಾದರೆ, ದ್ರಾವಿಡ ದೇಶದಲ್ಲಿ ಹುಟ್ಟಿ ಬೆಳೆದ ಈ ಮಹಾಪುರುಷನಿಗೆ ಮೂಗುತಿಯ ಅಪರಿಚಿತವಲ್ಲ. 'मुक्तामुगोद्भासितां' ಎಂಬ ಸಮಾಸಪದದಲ್ಲಿ 'मुक्तामुग' ಎಂಬ ಶಬ್ದವು ಕನ್ನಡಿಗರಿಗೆ ಚಿರಪರಿಚಯವಿರುವ ಮುತ್ತಿನ ಮೂಗಬಟ್ಟ (ಮೂಗ್‌ಮುತ್ತು)ನ್ನೇ ನಿಸ್ಸಂದೇಹವಾಗಿ ಸೂಚಿಸುವುದು. ಈ ಮೂಗಬಟ್ಟಿನ ಮಧ್ಯದಲ್ಲಿ ಒಂದು ಕೆಂಪು ರತ್ನವಿದ್ದು ಅದರ ಸುತ್ತಲು ಇಳಿಬಿಟ್ಟ ಮುತ್ತಿನ ಜಲ್ಲರಿಯಿರುವುದನ್ನು ಕರ್ನಾಟಕದಲ್ಲಿ ಈಗ ಸಹ ನೋಡಬಹುದು. ಶ್ರೀ ಪಿ.ಕೆ. ಗೋಡೆ ಅವರು, "The Antiquity of the Hindoo nose-ornament called nath" ಎಂಬ ಲೇಖನದಲ್ಲಿ, ಪು. ೩೩೦ ಕೆಳಗಿನ ಟಿಪ್ಪಣಿಯಲ್ಲಿ 'मुग' ಎಂಬ ಶಬ್ದಾರ್ಥವನ್ನು ಪೂರ್ಣ ತಿಳಿದುಕೊಳ್ಳದೆ ಮರಾಠಿಯಲ್ಲಿಯ 'मूग' ಎಂಬ ಧಾನ್ಯವೆಂದು ಊಹಿಸಿದ್ದಾರೆ. ಕರ್ನಾಟಕದಲ್ಲಿ ಮೂಗುತಿಯು ಮದುವೆಯ ಸೌಭಾಗ್ಯದ ಗುರುತೆಂದು ಬುನಾದಿಯಿಂದಲೂ ರೂಢಿಯಲ್ಲಿ ಬಂದಿದೆ. ಇದರ ಮಹತ್ವವನ್ನರಿತ ಕನ್ನಡ ಚಿಕ್ಕಹೆಣ್ಣು ಮಕ್ಕಳು 'ಗುಜಗುಜಮಾಪುರಿ'ಎಂಬ ಆಟದ ಹಾಡಿನಲ್ಲಿ ಹೆಣ್ಣುಗಂಡಿನ ಕೊಡತಕ್ಕೊಳ್ಳುವ ಸಮಸ್ಯೆ ಬಂದಾಗ

ಬೇಡಿದ್ದ ಕೊಡತಿವಿ, ಬೇಡಿದ್ದ ಇಡತಿವಿ
ಹೆಣ್ಣ ಕೋಡತಿಗೆ ಹೆಣ್ಣಕೊಡತಿಗೆ ।
ಕುಲಶುದ್ಧ ಮನಿಯಾಗ
ವರಶುದ್ಧ ಗಂಡಪ್ಪ
ತಾಳ್ಯೊಂದು ಮೂಗುತಿ
ಮಂದ್ಯಾಗ ಮನಿಮುಂದ .
ಮದುವೆಯ ಮಾಡಿದರ
ಹೆಣ್ಣೈತಲೆಗೆ ಹೆಣ್ಣೈತಲೆಗೆ । *-ಜಾ-ಸಂ-*

ಎಂದು 'ತಾಳಿ' ಮತ್ತು 'ಮೂಗುತಿ'ಗಳು ಮದುವೆಗೆ ಬೇಕಾಗುವ ಮುಖ್ಯ ಆಭರಣಗಳೆಂದು ಹಾಡಿದ್ದಾರೆ. 'ಮೂಗುತಿ' ಹಾಗೂ 'ಗುಳದಾಳ' (ಮಂಗಳಸೂತ್ರ)ಗಳು ಮದುಮಗಳಿಗೆ ಇಡತಕ್ಕ ಮುಖ್ಯ ಅಲಂಕಾರಗಳಾಗಿವೆ. ಕರ್ನಾಟಕದಲ್ಲಿ ಹಲಕೆಲವು ಜಾತಿ ಪಂಗಡಗಳಲ್ಲಂತೂ ಈ ಎರಡೂ ಆಭರಣಗಳಿಲ್ಲದೆ ಮದುವೆಯೇ ಆಗುವುದಿಲ್ಲ. ದ್ಯಾಮವ್ವ ದುರುಗವ್ವ ಮೊದಲಾದ ಗ್ರಾಮದೇವತೆಗಳಿಗೆ ಮೂಗುತಿಯನ್ನಿಡಿಸುತ್ತ ಬಂದಿದ್ದಾರೆ. ಇಷ್ಟು ಮಹತ್ವವಿದೆ ಈಗಲೂ ಮೂಗುತಿಗೆ ಕನ್ನಡ ಜನಾಂಗದಲ್ಲಿ!

---

೨೬. 'ತಾಳಿ' (ಮಂಗಳಸೂತ್ರ)ಯೂ ಆರ್ಯರ ಅಲಂಕಾರವಲ್ಲ. ಅದನ್ನು ಅವರು ದ್ರಾವಿಡದಿಂದ ಲಗ್ನವಿಧಾನದ ಚಿಹ್ನವೆಂದು ತೆಗೆದುಕೊಂಡಿದ್ದಾರೆ.

ಕನ್ನಡ ಸಾಹಿತ್ಯದಲ್ಲಿ ಮೊಟ್ಟ ಮೊದಲು ಮೂಗುತಿಯು ಉಪಯೋಗಿಸಲ್ಪಟ್ಟಿದ್ದು ನಾಗವರ್ಮನ ಛಂದೋಂಬುಧಿಯಲ್ಲಿ

ಗಂಡರ ಮೂಕುತಿಯೆನಿಸಿದ
ಮಂಡಳಿಕರ ಮಂತ್ರಿ ಸಂಧಿ ವಿಗ್ರಹರಾಯಂ।
ಕೊಂಡಾಡಿ ಪೊರೆದನೆನೆ ಧರೆ
ಕೊಂಡಾಡದೆ ಕೊಂಡು ಕೊನೆಯದೇ ನಾಗಿಕನಂ॥ –*ಕ-ಕ-ಚ. ಭಾಗ-೧ ಪು.೫೨*

ಎಂದು ನಾಗವರ್ಮನು ತನ್ನ ಪೋಷಕನಾದ ರಾಯನನ್ನು 'ಗಂಡರ ಮೂಕುತಿ' ಎಂದನ್ನುವುದರಲ್ಲಿ ಒಂದು ಔಚಿತ್ಯವೂ ಇದೆ. ಮೂಗುತಿ ಇಟ್ಟು ಗಂಡರಾದ (ಶೂರರಾದ)ವರಿಗೆ ತನ್ನ ಪೋಷಕರಾಯನು ಮೂಗುತಿ (ಅಲಂಕಾರ) ಎಂದು ಹೇಳುವುದರಲ್ಲಿ ಆ ಅರಸನ ಶೌರ್ಯವನ್ನು ತೋರಿಸಿರುವನಲ್ಲದೆ, ಮೂಗುತಿಯು ಮದುವೆಯ ಗುರುತೆಂದು ಆ ಶಬ್ದದ ಹಿಂದೆ ಧ್ವನಿಯನ್ನೂ ಇಟ್ಟಿರುವನು. ಶ್ರೀ ಆರ್. ನರಸಿಂಹಾಚಾರ್ಯರು, ನಾಗವರ್ಮನು ಕ್ರಿ.ಶ. ಸುಮಾರು ೯೯೦ರಲ್ಲಿದ್ದನೆಂದು ಅವನ ಕಾಲಮಾನವನ್ನು ನಿರ್ಧರಿಸಿದ್ದಾರೆ. ಅಂದಮೇಲೆ ಮೂಗುತಿಯು ನಾಗವರ್ಮನಕಿಂತ ಮುಂಚೆಯೇ ಎಷ್ಟೋ ವರುಷಗಳ ಹಿಂದೆ ಕನ್ನಡಿಗರಿಗೆ ಪರಿಚಿತವಾದ ಅಲಂಕಾರವಾಗಿತ್ತಲ್ಲದೆ ಗಂಡಹೆಂಡರ ಸಂಬಂಧ ಸೂಚಿಸುವ, ಜನತೆಯಲ್ಲಿ ಮಹತ್ವದ ಮೂಗಿನ ಅಲಂಕಾರವಿತ್ತೆಂದು ತಿಳಿದುಬರುತ್ತದೆ. ನಾಗವರ್ಮನ ನಂತರ ಹರಿಹರನು 'ಗಿರಿಜಾ ಕಲ್ಯಾಣ'ದಲ್ಲಿ ಈ ಮೂಗುತಿಯನ್ನುಪಯೋಗಿಸಿದ್ದಾನೆ. ಈ ಕಾವ್ಯದ ೩ನೆಯ ಅಶ್ವಾಸ, 'ಹೈಮವತ ಶೈಶವ' ವರ್ಣನೆಯಲ್ಲಿ ಹರನ ಪೂಜೆಗೆ ಹೊರಟ ಗಿರಿಜೆಯನ್ನು ೯೧ನೆಯ ಪದ್ಯದ ನಂತರ ಮುಂಬರುವ ವಚನದಲ್ಲಿ "ಮೂಗುತಿಯ ಮುಗುಳ್ಗೆ" ಎಂದು ಕರೆದಿದ್ದಾನೆ. ಅದೇ ಕಾವ್ಯದ ೧೦ನೆಯ ಅಶ್ವಾಸ "ಪಾರ್ವತಿ, ಪರಮೇಶ್ವರ ವಿವಾಹ" ವರ್ಣನೆಯಲ್ಲಿ–

ಜಳ ಜಾನನೆಯರ್ ವಿನಯೋ
ಜ್ಜ್ವಳ ಮುಖಿಯರ್ ಸಖಿಯರೊಲ್ದು ಗಿರಿಜಾನನದೊಳ್।
ನಳಿನಳ ಪಚ್ಚ ಮುಗುಳ್‌ನಗೆ
ಮೊಳೆತುದೆನಲ್ ಮೆರೆವ ಮೂಗುತಿಯ ನೊಸದಿತ್ತರ್ ॥೩೮॥

ಎಂದು ಲಗ್ನವಾಗುವ ಗಿರಿಜೆಗೆ ಅವಳ ಸಖಿಯರು ಪ್ರೇಮದಿಂದ ಮೂಗುತಿಯನಿಡಿಸಿದರೆಂದು ಕವಿಯು ಹೇಳಿದ್ದಾನೆ. ವೀರಶೈವರು ಮೂಗುತಿಯನ್ನು ಮೊದಲಿನಿಂದಲೂ ಮಾಂಗಲ್ಯವೆಂದು ಧರಿಸುತ್ತ ಬಂದಿದ್ದಾರೆ. ಅಲ್ಲದೆ ಹರಿಹರನು ಗಿರಿಜಾ ಕಲ್ಯಾಣವನ್ನು ಬರೆಯುವಾಗ ವೀರಶೈವನಾಗಿದ್ದಲ್ಲವೆಂದು ಹಲವು ಪಂಡಿತರ ಮತವಿದೆ. ಹಾಗಿದ್ದ ಪಕ್ಷದಲ್ಲಿ ಕರ್ನಾಟಕ ಬ್ರಾಹ್ಮಣರೂ ಮೂಗುತಿಯನ್ನು ಮೂಗಿನ ಸೌಭಾಗ್ಯಾಲಂಕಾರವೆಂದು ಇಟ್ಟುಕೊಳ್ಳುತ್ತಿದ್ದರೆಂದು ಹೇಳಲು ಏನೂ ಸಂದೇಹವಿಲ್ಲ. ಹಳ್ಳಿಗಳಲ್ಲಿ ವಾಸಮಾಡುವ ಹಳೆಯ ಪದ್ಧತಿಯ ಬ್ರಾಹ್ಮಣ ಹೆಣ್ಣು ಮಕ್ಕಳು ಈಗಲೂ ಗೂಟ ಮೂಗುತಿಯನ್ನಿಟ್ಟುಕೊಳ್ಳುವುದನ್ನು ನೋಡಿ ಮನಗಾಣಬಹುದಾಗಿದೆ. ಹರಿಹರನ ನಂತರ ಬಂದ ಅನೇಕ ವೀರಶೈವ ಕವಿಗಳು – ರಾಘವಾಂಕ, ಭೀಮಕವಿ, ವಿರುಪಾಕ್ಷಪಂಡಿತ, ಷಡಕ್ಷರದೇವ, ಮೊದಲಾದವರು – ಈ ಮೂಗುತಿಯೆಂಬ ಶಬ್ದವನ್ನು ತಮ್ಮ ಕಾವ್ಯಗಳಲ್ಲಿ ಹೇರಳವಾಗಿ ಉಪಯೋಗಿಸಿದ್ದಾರೆ. 'ಭರತೇಶ ವೈಭವ' ಎಂಬ ಕಾವ್ಯದಲ್ಲಿ ರತ್ನಾಕರವರ್ಣಿಯೂ, 'ಜಯ ನೃಪ ಕಾವ್ಯ'ದಲ್ಲಿ ಮಂಗರಸ ಕವಿಯೂ ಈ ಶಬ್ದವನ್ನು ಬಳಸಿದ್ದಾರೆ. ಜೈನರೂ ಮೂಗುತಿಯನ್ನಿಟ್ಟುಕೊಳ್ಳುವರು. ಜನಪದಕ್ಕೆ ಚಿರಪರಿಚಿತವಾದ ಈ ಅಲಂಕಾರವು 'ಒಗಟ,' 'ಗಾದೆ' ಮೊದಲಾದುವುಗಳಲ್ಲಿಯೂ ಉಪಯೋಗಿಸಲ್ಪಟ್ಟಿದೆ. "ಮೂಗಿಗಿಂತ ಮೂಗುತಿ ಭಾರ"; "ಮೂಗಿಲ್ಲದವಳಿಗೆ ಮೂಗುತಿಯಾತಕ್ಕೆ" ಎಂಬ ಮಾತುಗಳನ್ನು ನಮ್ಮ ಹಳ್ಳಿಗರು ಪ್ರಸಂಗ ಬಂದಾಗ ಸಹಜವೇ ಮಾತಾಡಿ ಬಿಡುತ್ತಾರೆ.

ಮೂಗಿನಾಗ ಮೂಗುತಿ, ನಕ್ಕರೆ ಕರೆಕಲ್ಲ
ಅಕ್ಕನಿನ್ಯಾರ ಮಗಳವ್ವಾ। ಹಲಸಂಗಿ
ಗಚ್ಚೀನ ಗುಡಿಯ ಚಿಕ್ಕವ್ವ॥ –*ಗ-ಹಾ-ಪು-೩*

ಎಂದು ಮೂಗುತಿಯನ್ನಿಟ್ಟ ಗ್ರಾಮದೇವತೆಯನ್ನು ಒಕ್ಕಲಿಗನು ಸ್ತುತಿಸಿದ್ದಾನೆ.

ಸಕಲೇಶ ಮಾದರಸು, ಭಕುತ ಮಾದಯ್ಯನಿಗೆ
ನಿಕಟ ಗುರುಲಿಂಗ ಜಂಗಮನು। ಕಾಯಕದ
ನಿಕಸ ಮಂಟಪಕೆ ಮೂಗುತಿಯು ॥೧೦॥ –*ಹೂ-ಮಾ-*

ಎಂದು ಒಕ್ಕಲಿಗನು ಬಸವಾದಿ ಪ್ರಮಥರ ಕಾಲದಲ್ಲಿಯ 'ಗುರುಸಕಲೇಶ ಮಾದರಸು' 'ಕಾಯಕ ಮಂಟಪಕೆ' ಮೂಗುತಿಯೆಂದು ಹಂತಿಯಲ್ಲಿ ಹಾಡಿದ್ದಾನೆ.

ಹಣಿಗೆ ಕುಂಕುಮಚೆಂದ, ಕೊರಳ ಕರಿಮಣಿಚೆಂದ
ಮೂಗೀಗೆ ಚೆಂದ ಮೂಗೂತಿ। ಮುತ್ತೈದಿ
ಉಡಿಯಾಗ ಚೆಂದ ಉಡಿಯಕ್ಕಿ॥ –*ಜಾ-ಸಂ-*

ಹೀಗೆ ಹಳ್ಳಿಯ ಹೆಣ್ಣು, ಹೆಣ್ಣಿನ ಸೌಭಾಗ್ಯವನ್ನು ಹಾಡಿ ಬೀಸಿದೆ. ಹೀಗೆ ಮೂಗುತಿಯು, ಕನ್ನಡಿಗರಿಗೆ ಬುನಾದಿಯಿಂದಲೂ ಬಂದ ಮೂಗಿನ ಸೌಭಾಗ್ಯಲಂಕಾರ, 'ನತ್ತು' ಇದು ಇತ್ತೀಚೆಗೆ ಕನ್ನಡಿಗರಲ್ಲಿ ಬಳಕೆಯಲ್ಲಿ ಬಂದಿದ್ದರೂ, ಮೂಗುತ್ತಿಯಷ್ಟೇ ಮಹತ್ವವು ಅದಕ್ಕೀಗಿದ್ದರೂ ಅದು ಕನ್ನಡ ಹೆಣ್ಣುಮಕ್ಕಳ ಅಲಂಕಾರವೇ ಅಲ್ಲ. ಅದನ್ನು ಮುಸಲ್ಮಾನರು ಕ್ರಿ.ಶ. ೧೪ನೆಯ ಶತಮಾನದಲ್ಲಿ ಕರ್ನಾಟಕಕ್ಕೆ ತಂದರೆಂದು ಹೇಳಬಹುದು.

ಹೀಗೆ ಕನ್ನಡ ಜಾನಪದ ಸಾಹಿತ್ಯದಲ್ಲಿ ಬರುವ ಕಾಲುಂಗುರ, ಸುತ್ತುಂಗುರ, ಪಿಲ್ಲೆ, ಮಿಂಟೆ, ರುಳಿ, ವಡ್ಯಾಣ, ಕಡಗ, ತೋಡೆ, ಸರಗಿ, ಚಿಂತಾಕ, 'ಕಟಾಣಿಸರ' ವಾಲ, ಬುಗುಡಿ, ಮಿಂಚು, ಬಾವುಲಿ ಮುಂತಾದ ಸೌಭಾಗ್ಯ ದ್ಯೋತಕರವಾದ ಕನ್ನಡ ಹೆಣ್ಣುಮಕ್ಕಳ ಆಭರಣಗಳನ್ನೆತ್ತಿ ಹುಡುಕಿ ಬರೆಯಬಹುದು. ಇದನ್ನು ಮುಂಬರುವ ಜಾನಪದ ಸಾಹಿತಿಗಳಿಗೆ ಬಿಟ್ಟು ಕೊಡಲಾಗಿದೆ.

ಮಲಪ್ರಭೆ

ಮಲಯ ಪರ್ವತಗಳ ಗಿರಿಶೃಂಗಗಳ ಕೊಳ್ಳಗಳ ಸರುವಿನಲ್ಲಿ ಹರಿಯುವ ಹೊಳೆಗಳಲ್ಲಿ ಮಲಪ್ರಭೆಯ ಉಗಮವು ಜಾನಪದದಲ್ಲಿ ಒಂದು ಸೋಜಿಗದ ಕಥೆಯಾಗಿದೆ. ಇದರ ಉಗಮಸ್ತಾನವು ಅತಿ ರಮಣೀಯವಾಗಿದ್ದು, 'ಕುಳಕುಂಬ' ದೇವಸ್ಥಾನವೆಂದು ಆ ಭಾಗದಲ್ಲಿ ಪ್ರಸಿದ್ಧವಾಗಿದೆ. ಈ ದೇವಸ್ಥಾನದಲ್ಲಿ ಎರಡು ಗುಡಿಗಳಿವೆ. ಆ ಗುಡಿಗಳಿಗೆ ಹೊಂದಿ ಎರಡು ಬಾವಿಗಳಿವೆ. ಈ ಎರಡೂ ಗುಡಿಗಳು ಒಂದೆರಡು ಕೈಗಲ್ಲಿನ ಅಳತೆಯಲ್ಲಿದ್ದು ಮೆಲ್ಭಾಗದ ಗುಡಿಯು ಪ್ರಾಚೀನಕಾಲದ್ದಿದ್ದು, ಗರ್ಭಗುಡಿಯಲ್ಲಿ ಶಿವಲಿಂಗವನ್ನು ಸ್ಥಾಪಿಸಿದ್ದಾರೆ. ಗುಡಿಯ ಮಂಟಪದ ಪಡಸಾಲೆಯಲ್ಲಿ 'ಶಿವಲಿಂಗ' ಪೀಠದೆದುರಿನಲ್ಲಿ ಒಂದು ದೊಡ್ಡ ಬಸವಣ್ಣವಿದೆ. ಗುಡಿಯ ಮುಂದೆ ಅವಾರದಲ್ಲಿ ಒಂದು ಕಟ್ಟೆಯ ಮೇಲೆ ಗರುಡಗಂಬವೂ ನಿಂತಿರುವುದು. ಈ ಗುಡಿಯ ಎಡಗಡೆಯ ಪಕ್ಕದಲ್ಲಿಯೇ ತಿಳಿನೀರಿನ ಬಾವಿಯಿದೆ. ಇಲ್ಲಿಯೇ ಮಲಪ್ರಭೆಯು ಉಗಮ ಹೊಂದಿರುವಳೆಂದು ಕುಳಕುಂಬಿಯ ಜನರು ಈಗಲೂ ತೋರಿಸುತ್ತಾರೆ. ಈ ಗುಡಿಯು ಕೊಳ್ಳದ ಸರುವಿನಲ್ಲಿಲ್ಲ; ಬಯಲು ಭೂಮಿಯಲ್ಲಿದೆ; ಸುತ್ತಲೂ ಭತ್ತದ ಗದ್ದೆಗಳಿವೆ. ಈ ಗುಡಿಯ ಎಡೆಗಡೆಗಿರುವ ಬಾವಿಯಿಂದ ಮಲಪ್ರಭೆಯು ಗುಪ್ತವಾಹಿನಿಯಾಗಿ ಹರಿದು ಕೆಳಗಿರುವ ಎರಡನೆಯ ಗುಡಿಯ ಮುಂದೆ ಬಲಮಗ್ಗಲು ಕಾಣಿಸಿಕೊಂಡಿದ್ದಾಳೆ. ಅಲ್ಲಿಯೇ ಒಂದು ಬಾವಿಯನ್ನು ಕಟ್ಟಿಸಿರುವರು. ಮೇಲಿನ ಬಾವಿಯಲ್ಲಿ ತೇಲುಬಿಟ್ಟ ಬಾಗಿಣದ ಸಾಮಾನುಗಳು ಕೆಲವು ಹೊತ್ತಿನ ಮೇಲೆ ಕೆಳಗಿನ ಬಾವಿಯಲ್ಲಿ ತೇಲಹತ್ತುವುವು. ಬೇಕಾದವರು ಈಗಲೂ ಇದನ್ನು ಪ್ರಯೋಗ ಮಾಡಿ ನೋಡಬಹುದಾಗಿದೆ.[೨೭] ಕೆಳಗಿನ ಗುಡಿಯು ತೀರ ಇತ್ತೀಚಿನದೆಂದು ಕಾಣುತ್ತದೆ. ಇದು ಆಕಾರದಲ್ಲಿ ಮೇಲ್ಗುಡಿಕ್ಕಿಂತಲೂ ದೊಡ್ಡದಿದೆ. ಗರ್ಭಗುಡಿಯಲ್ಲಿ 'ಮಲ್ಲಿಮಾಯೆ' ಎಂಬ ದೇವತೆಯನ್ನು ಸ್ಥಾಪಿಸಿದ್ದಾರೆ. ಇದಕ್ಕೆ ದೊಡ್ಡ ಆವಾರದ ಪಡಸಾಲೆಯಿರುವುದು. ಒಂದು ಹೋಳುಗಲ್ಲಿನ ಮೇಲೆ ಕಟೆಯಲ್ಪಟ್ಟ ಈ ದೇವತೆಯ ಮೂರ್ತಿಯು 'ಉಗುರುಗೊಳ್ಳದ,' 'ಯಲ್ಲವ್ವ' ದೇವತೆಯನ್ನು ಹೋಲುತ್ತದೆ. ಈ ದೇವತೆಯ ಸಂಬಂಧ ಜನಪದದಲ್ಲಿ ಅನೇಕ ಕಥೆಗಳೂ, ಹಾಡುಗಳೂ ಕಂಡುಬರುವುವು.

ಕಥೆ : ಕುಳಕುಂಬಿಯಲ್ಲಿ ಒಬ್ಬ ದೊಡ್ಡ ಒಕ್ಕಲಿಗನಿದ್ದ. ಅವನು ಊರ ಮುಂದಿನ ತನ್ನ ಹೊಲದಲ್ಲಿ ಒಂದು ಶಿವಾಲಯವನ್ನು ಕಟ್ಟಿಸಿ ನೆರೆಯಲ್ಲಿಯೇ ಒಂದು ಬಾವಿಯನ್ನು ಕಡಿಸಿದನು.[೨೮] ಆದರೆ ಆ ಬಾವಿಗೆ ನೀರೇ ಬೀಳಲಿಲ್ಲ. ಅವನು ರಮಲು ಹೊತ್ತಿಗೆಯನ್ನು ತಗೆಸಿ ಕೇಳಲು ಹಿರಿಯ ಸೊಸೆ 'ಮಲ್ಲವ್ವ'ನನ್ನು ಬಾವಿಗೆ 'ಹಾರ' ಕೊಡಬೇಕೆಂದು ಬಂತು. ಮನೆಗೆ ಮಂಗಳೆಯಾದ ಅವಳನ್ನು ಹಾರಕೊಡಲೊಪ್ಪದೆ, ಅವನು ತಾನೇ ಹೊಲದಲ್ಲಿ ನಿಂತುಕೊಂಡ. ಹಿರಿಯ ಸೊಸೆ ಮಲ್ಲವ್ವನು ಆ ಬಾವಿಯ ಸಮೀಪಕ್ಕೆ ಬಾರದಂತೆ ನೋಡುತ್ತ ಬಂದ. ಆದರೆ ವಿದಿಯು ತಪ್ಪಲಿಲ್ಲ. ಒಂದು ದಿನ, ಮನೆಯಲ್ಲಿ ಎಲ್ಲರೂ ರೋಗಪೀಡಿತರಾಗಿ, ಹಾಸಿಗೆ ಹಿಡಿದರು. ಮನೆಗೆಲಸದ ಎಲ್ಲ ಭಾರವು ಮಲ್ಲವ್ವನ ಮೇಲೆ ಬಿತ್ತು. ಅವಳು ಮನೆಗೆಲಸವನ್ನು ಮುಗಿಸಿಕೊಂಡು ಲಗುಬಗೆಯಿಂದ ಹೊಲದಲ್ಲಿ ಮಾವನು ಹಸಿದುಕೊಂಡನೆಂದು ಬುತ್ತಿಯ ಕೊಡಲು ಹೋದಳು. ತುಂಬೊಯ್ದ ನೀರಿನ ಕೊಡವನ್ನಿಟ್ಟು, ಮಾವನಿಗೆ ಊಟವನ್ನು ಕೊಡುವ ಸಮಯದಲ್ಲಿ ಎತ್ತು ನೀರಡಿಸಿ, ಹಗ್ಗಹರಿದುಕೊಂಡು ನೀರಿನ ಕೊಡವನ್ನುರುಳಿಸಿತು. ಊಟಕ್ಕೆ ಕೂತ ಮಾವನಿಗೆ ನೀರು ತರಬೇಕೆಂದು ಮಲ್ಲವ್ವನು ಏನೂ ಅರಿಯದೆ ಹೊಲದಲ್ಲಿಯ ಬಾವಿಯನ್ನಿಳಿಯಲು ನೀರು ಉಕ್ಕೇರಿ ಬಂದು ಮಲ್ಲವ್ವನನ್ನು ಕೊಚ್ಚಿಕೊಂಡು ಹೊಳೆಯಾಗಿ ಹರಿಯಹತ್ತಲು, ಊಟಕ್ಕೆ ಕೂತ ಮಾವನು ಗಾಬರಿಯಾಗಿ ಸೊಸೆಯನ್ನು ಕರೆಯುತ್ತ ಬೆನ್ನು ಹತ್ತಿದ. ಆದರೆ ಎಲ್ಲವೂ ವ್ಯರ್ಥವಾಯಿತು. ಮಲ್ಲವ್ವನು ಹೊಳೆಯೊಡನೆ ಕೂಡಲಕ್ಕೆ ಕೂಡಿದಳು. ಮಾವನು ಅಳುತ್ತ ಊರ ಸೇರಿದ. ಅದೇ ಈಗ ಮಲಪ್ರಭಾ ನದಿಯಾಗಿದೆ. ಅವಳ ಸ್ಮಾರಕವೇ ಇಂದು ಕುಳಕುಂಬಿಯಲ್ಲಿ 'ಮಲ್ಲಿಮಾಯೆ'ಯ ದೇವಸ್ಥಾನವಾಗಿದೆ. ಕರ್ನಾಟಕ ಗ್ಯಾಝೇಟಿಯರದಲ್ಲಿ ಶ್ರೀ ವೆಂಕಟ ರಂಗೊ ಕಟ್ಟಿ ಅವರು ಈ ನದಿಯ ಸಂಬಂಧ ಒಂದು ಕಥೆಯನ್ನೂ ಹೇಳಿದ್ದಾರೆ. ಆದರೆ ಈ ಕಥೆಯು ಕುಳಕುಂಬಿಯಲ್ಲಿ ಯಾವ ಜನರಿಗೊ ಗೊತ್ತಿದ್ದಂತೆ ಕಂಡುಬರುವುದಿಲ್ಲ. ಅಲ್ಲದೆ ಈ ಕಥೆಯು ನದಿಯ ಉಗಮಸ್ಥಾನಕ್ಕೆ ಸಮಂಜಸವೆನಿಸುವುದಿಲ್ಲ. ಇಂತಹ ಕಥೆಗಳಲ್ಲದೆ ಬೆಳಗಾವಿಯ ಸಮೀಪದಲ್ಲಿರುವ ವಡಗಾವಿಯಲ್ಲಿ ಮೇಲಿನ ಕಥೆಯನ್ನು ಹೇಳುವ ಒಂದು ದೊಡ್ಡ ಹಾಡೂ ನಿದರ್ಶನಕ್ಕೆ ಬಂತು. ಅದನ್ನೂ ಸಂಕಲಿಸಲಾಗಿದೆ.

ಮಲಪರಿತಾಯಿ

ಮಲಪರಿತಾಯಿ ನೀನು
ಕರುಣsದಿ ಕಾಯೇ ಎನ್ನನು ॥ಪ॥

ಕರುಣದಿ ಕಾಯೆ ನೀನು, ಮೊರೆಹೊಕ್ಕೆ ನಾನು
ಚರಣ ಕಮಲದೊಳು ಭ್ರಮರನಾದೆನು
ಜಲಧಿ ಕೂಡಿ ನೀ ಮೆರೆದಸತ್ತೇವನು
ಪರಮಗಾತ್ರಳೆ ನಿನಗ, ಕರವ ಮುಗಿವೆ ನಾ ॥ಅ.ಪ.॥

---

೨೭. ಇದು, ಈ ನದಿಯು ಗುಪ್ತವಾಹಿನಿಯಾಗಿ ಮೇಲಿನ ಬಾವಿಯಿಂದ ಹೊಲಗಳ ಬುಡದಲ್ಲಿ ಝುರಿಯಾಗಿ ಹರಿದು, ಕೆಳಗಿನ ಬಾವಿಯಲ್ಲಿ ಕೊಡುವುದೆಂದು ತೋರಿಸುತ್ತದೆ.
೨೮. ಈಗಿರುವ ಶಿವಾಲಯ ಹಾಗೂ ಬಾವಿಗಳೇ ಅವು ಎಂದು ಜನರು ತೋರಿಸುವರು.

ಕುಳಕುಂಬೀ ಎಂಬ ಊರಾಗ
ಬಂಧು ಬಳಗದಾಗ।
ಎಲ್ಲಾರು ಪ್ರೀತಿ ಮಲ್ಲವ್ವಗ
ಹಿರಿತಾನ ಮನಿಯಾಗ॥
ಮಾವದೊಡ್ಡದೊಂದು ಬಾಂವಿಯ ಕಡಿಸಿದ
ಸಾವಧಾನ ಸಂಪಾದಿಸಿದ।
ಸಾವಿರ್ಹಣಗಳ ಖರ್ಚು ಮಾಡಿದ
ದೇವರವನ ಮೊರೆ ಕೇಳವೊಲ್ಲನು ॥೧॥

ಝರಿ ಹತ್ತಲಿಲ್ರೀ ಬಾಂವಿಗೆ
ಘೋರುಬಂತ್ರಿ ಅವಗೆ।
ರಮಲ ತಗಿಸೀದ ಹೊತ್ತಿಗೆ
ಹಾರಬೇಡಿತು ಹಿರಿಸೊಸೆಗೆ॥
ಭಾವಚಲೋಗುಣವುಳ್ಳ ಸೊಸೆಯನು
ಜೀವದಾನ ಕೊಡುದಿಲ್ಲೆಂದು।
ಬಾಂವಿ ಹುಗಸತೀನಂತ ಮಾವ
ಹ್ಯಾಂವತೊಟ್ಟು ಹೊಲದಾಗ ನಿಂತನು ॥೨॥

ಜ್ವರಬಂದು ಮನಿಯಾಗೆಲ್ಲರಿಗೆ
ಹೊರವು ಮಲ್ಲವ್ವನಿಗೆ।
ಹಾಲುಕಾಸಿ ಮಾಡ್ಯಾಳ್ರಿ ಅಡಗಿ
ತುಂಬ್ಯಾಳ ಬಿದಿರ ಹೆಡಗಿ॥
ಸಕಲ ಸಾಹಿತ ಮಾಡಿ. ಹೊಂಟಳ್ರಿಮಲ್ಲವ್ವ
ಹೊಲದೊಳು ಮಾವ ಹಸಗೊಂಡಿಹನು।
ನೆಲಕ ಎತ್ತು ತುಳಿದೊಡೆಯಿತು ಕೊಡುವನು
ನೀರಿಲ್ರಿ ಇದಕ್ಯಾಂಗ ಮಾಡಲಿನ್ನು ॥೩॥

ಮಾವಗ್ಹೇಳಿ ಮಲ್ಲವ್ವ ಹೊಂಟಳು
ನೀರ್ನಿಮಗ ತರುವೇನು।
ಕೊಡಹೊತ್ತುಬಾಂವಿ ಇಳಿದಳು
ಒಂಬತ್ತು ಪಾವುಟಗೆ ಒಳಗು।
ಗಂಗವ್ವ ಉಕ್ಕಲೇರಿದಳು
ಹೊಳಿಯಾಗಿ ಮುಂದ ಹರಿದಳು॥
ಜಲಧಿಯ ಕೂಡಿ ಹೋಗ್ರಾಳ್ರಿ ಮಲ್ಲವ್ವ
ಹಲಬುತಕರೆಯುತ ಹೊಂಟಮಾವನು
ಹಲವು ಹಂಬಲ್ಸಿಹರಳ ಒಗೆದನು
ನೆಲೆಯಿಲ್ಲದೆ ಗುಡಿ ಕಳಸವನು ॥೪॥

ಬೆಳವಲದ ದಾರಿ ಹಿಡಿದಳು
ನವಿಲು ಕೂಗಿತುನಿವಳು।
ಹಳುಕಂಜಿ ಗಂಗಿ ಓಡ್ತಾಳು
ಧನಿಕೇಳಿ ತಿರಗಿದಳು॥
ಹಳಿಬಂಡಿ ಬರ್ತಾವ್ರಿ ಸಾವಿರ
ಕಾಳಿ ಕರಡಿ ರೌಸ॥
ಬೆಟ್ಟಹತ್ತಿ ಗುಡ್ಡ ಒಡಿದಾಳ್ರಿ ಮಲ್ಲವ್ವ
ನಿಂತ ನವಿಲಿಬ್ಬಾಗಾಗೀ।
ಒಡೆದು ಗುಡ್ಡ ದಾರಿ ಹಿಡಿದು ಕೂಡ್ಯಾಳ್ರಿ
ಮುಂದ ಕೂಡಲಸಂಗಮಗ ॥೫॥

ಕಾಯಿಕಪ್ಪುರ ಸೀರಿಕುಬುಸ
ಉಳಿಲ ಲ್ಯಾವದೇಶ॥

ಅರಿಸಿಣ ಕುಂಕುಮ ನೆನಗಡಲಿಯನಿಧಿ
ಗಂಧ ಮಲ್ಲಿಗೆ ಬಡಿದಂಡಿ।
ಉಡಿಯ ತುಂಬಿ ಉಣಿಸುವ ರೈ ದೇರ್ನ
ಮಡಿವಾಳ್ನ ಪಾದಕ ಹೊಂದುವೆ ನಾ ॥೬॥[೨೯] -ಜಾ-ಸಂ-

ಈ ಹಾಡನ್ನು ಗರಗದ ಮಡಿವಾಳಪ್ಪ ಸತ್ಪುರುಷರ ಕಾಲದ ಅವರ ಭಕ್ತಳಾದ ಒಬ್ಬ ಚೆಲುವಾದೆಯು ಹಾಡಿದಳೆಂದು ಹಾಡುವ ಜನರು ಹೇಳುತ್ತಾರೆ.

ಈ ಹಾಡಿನಲ್ಲಿ ಬರುವ 'ಬೆಳವಲದ ದಾರಿ ಹಿಡಿದಳು' ಈ ಪದ್ಯವು ಸೊಗಲದ ಮುಂದಿರುವ 'ನವಿಲ ತೀರ್ಥ'ವನ್ನು ಕಣ್ಮುಂದೆ ತಂದುಕೊಡುತ್ತದೆ. ಜನಪದದಲ್ಲಿ ಈ 'ನವಿಲ ತೀರ್ಥ'ದ ಒಂದು ಕಥೆಯೂ ಇದೆ. ಕುಳಕುಂಬಿಯಿಂದ ಗಂಗೆಯು ಮಲ್ಲವ್ವನನ್ನು ನುಂಗಿ ಬಲು ರಭಸದಿಂದ ಹರಿಯುತ್ತ ಬೆಳುವಲ ಸೇರಲು ಸೊಗಲದ ಮುಂದಿರುವ ಗುಡ್ಡವನ್ನು ಸುತ್ತು ಹಾಕಿ ಹೋಗುತ್ತಿದ್ದಳಂತೆ. ಹಾಗೆ ಹೋಗುವುದನ್ನು ಬೆಟ್ಟದ ಮೇಲೆ ನಿಂತ ನವಿಲು ನೋಡಿ ಬೆಟ್ಟಕ್ಕೆ ಅಂಜಿ 'ಗಂಗೆ ಹೋಳಾಗಿ ಹೋಗುವಳೆಂದು ಕೂಗಲು, ಅವಳು ಮರಳಿ ಪಾತ್ರ ಬದಲು ಮಾಡಿ; ನವಿಲು ಸಹಿತ ಬೆಟ್ಟವನ್ನು ಸೀಳಿ ಇಬ್ಭಾಗ ಮಾಡಿ ಹರಿದು ಹೋದಳೆಂದೂ, ಅದೇ 'ನವಿಲತೀರ್ಥ' ಈಗಾಗಿದೆ ಎಂದೂ ಜನರು ಈಗಲೂ ಹೇಳುತ್ತಾರೆ. ಅಲ್ಲಿ ಹೋಗಿ ನೋಡಲು ನದಿಯ ಹಳೆಯ ಪಾತ್ರವು ತಿಳಿದು ಬರುವುದು. ಬೆಟ್ಟವನ್ನು ಕೊರೆದು ಸರವಾರ ನಳ್ಳಕೊಳ್ಳ (Narrow valley)ದಲ್ಲಿ ಮಲಪ್ರಭೆಯು ದೃಢಪಡಿಸಿ ಪೂರ್ವಕ್ಕೆ ಹರಿದು ಹೋಗುವುದನ್ನು ಈಗಲೂ ಕಣ್ಣಾರೆ ಕಾಣಬಹುದಾಗಿದೆ. ಮಲಪ್ರಭೆಯು 'ನೆರೆ' ಬಂದಾಗ ಕರ್ನಾಟಕದಲ್ಲಿ ಬಲು ರಭಸದಿಂದ ಹರಿಯುವ ಹೊಳೆಯಾಗಿದೆ. ಈ ನದಿಯ ಉಗಮದಿಂದ ಕೂಡಲದವರೆಗೆ, ದಂಡೆಯ ಮೇಲಿರುವ ಬಹುತರ ಎಲ್ಲ ಹಳ್ಳಿಗಳಲ್ಲಿ ಒಂದಿಲ್ಲೊಂದು ಶಿವಾಲಯವು ಇದ್ದೇ ಇದೆ. ಈ ನದಿಗೆ ಮೊದಲು 'ಮಲೆವೆರಿ' ಎಂಬ ಹೆಸರಿತ್ತೆಂದು ತಿಳಿದುಬರುವುದು. ಅದೇ ಈ ಹಾಡಿನಲ್ಲಿ 'ಮಲಪರಿತಾಯಿ'ಯಾಗಿದೆ.

ಚಂದ್ರಗುತ್ತಿಯ ಅರಸು

ಉತ್ತರ ಕರ್ನಾಟಕದಲ್ಲಿ ಬಹುತರ ಎಲ್ಲ ಭಾಗಗಳಲ್ಲಿಯ ಹೆಣ್ಣುಮಕ್ಕಳು 'ಚಂದ್ರಗುತ್ತಿಯ ಅರಸು' ಎಂಬ ಹಾಡನ್ನು ಹಾಡುತ್ತಾರೆ. ಚಂದ್ರಗುತ್ತಿಯ ಅರಸು ಮಗಳ ಮೇಲೆ ಮೋಹಮಾಡಿದ್ದೇ ಹಾಡಿನ ಕಥೆಯಾಗಿದೆ. ಇಂಥ ಅಸಂಭವನೀಯ ಪ್ರಸಂಗವನ್ನು ಕಂಡ, ಕೇಳಿದ ಕಾಲಜ್ಞಾನ ವಚನಕಾರರು 'ಕಲಿಕೆಟ್ಟಿತೆಂದು' ತಮ್ಮ ಕಾಲಜ್ಞಾನಗಳಲ್ಲಿ ಹಾಡಿ ಸಾರಿದ್ದಾರೆ. ಬೆಳುವಲದಲ್ಲಿ ಆಗಲಿ, ಗಡಿನಾಡಿನಲ್ಲಿ ಆಗಲಿ, ಮಲೆನಾಡಿನಲ್ಲಿ ಆಗಲಿ ಹೆಣ್ಣುಮಕ್ಕಳು ಹಾಡುವ ಈ ಹಾಡಿನಲ್ಲಿ ಬೇರೆ ಬೇರೆ ರೂಪಾಂತರಗಳೇನೂ ಕಂಡುಬರುವುದಿಲ್ಲ. ಎಲ್ಲದರಲ್ಲಿಯೂ ಕಥೆಯು ಒಂದೇ ಆಗಿದೆ. ಹಾಡು ಹಾಡುತ್ತ ನುಡಿಗೊಮ್ಮೆ ಹಿಂದೆ ಎತ್ತುವ "ತೂಗತೂಗನ್ನಿರೆ । ತೂಗಿರೆ ಮನವ ವಿಚಾಣದಲಿ" ॥ (ವಿಚಾರದಲಿ), ಎಂಬ ಪಲ್ಲವಿಯ ಸೊಲ್ಲೂ ಒಂದೇ ಆಗಿದೆ. ಜನತೆಯ ಮನಸ್ಸನ್ನು ಇಷ್ಟೊಂದು ಆಕರ್ಷಿಸಿದ ಚಂದ್ರಗುತ್ತಿಯು ಯಾವದಿರಬಹುದು? ಅಲ್ಲಿ ಯಾವ ಅರಸರು ಆಳಿಹೋದರು? ಅವರ ಕಾಲಮಾನ, ಸ್ಮಾರಕಗಳು ಸಿಗುವುವೇ? ಎಂಬಿವೇ ಮೊದಲಾದ ಸಂಗತಿಗಳನ್ನು ಮೊದಲು ತಿಳಿದುಕೊಳ್ಳುವುದು ಅತ್ಯಗತ್ಯ. 'ಎಮ್ಮೆ ಬಸವಣ್ಣ'ನ ಕಾಲಜ್ಞಾನದಲ್ಲಿ

"ಗುತ್ತಿಯ ಸೀಮೆಯಲ್ಲಿ ಕಣಿಯ ಕೇಳಿರೊ–ಅವರು
ಸತ್ಯವ ಮರೆವಾರು ಕಣಿಯ ಕೇಳಿರೊ" ॥೧೩॥[೩೦]

ಅದೇ ಕಾಲಜ್ಞಾನದ ಇನ್ನೊಂದೆಡೆಯಲ್ಲಿ

"ಚಂದ್ರಗುತ್ತಿಯನೊತ್ತಿ ತೆಗೆವಾಳು ಭಾಗ್ಯವ ನೋಡಿ ನೋಡಿ – ಅಲ್ಲಿ
ಮಾನವ ರರಿಯಾದ ಮಂಟಪ ಕಿತ್ತಾಳು ನೋಡಿ ನೋಡಿ" ॥೧೪॥[೩೧]

ಎಂದು ಬರುತ್ತವೆ. ಈ 'ಕಾಲಜ್ಞಾನ ಸಂಗ್ರಹ'ದ ಸಂಪಾದಕರು ಅದರ ಪ್ರಸ್ತಾವನೆಯಲ್ಲಿ ಈ ಕಾಲಜ್ಞಾನಿಯು ಕ್ರಿ.ಶ. ಸುಮಾರು ೧೫೪೩ರಲ್ಲಿದ್ದನೆಂದು ಊಹಿಸಿದ್ದಾರೆ. ರುದ್ರಮುನಿಯ ಕಾಲಜ್ಞಾನದಲ್ಲಿ ಚಂದ್ರಗುತ್ತಿಯ ಅರಸನು ಶಾಪ ಮುಕ್ತನಾಗಿ, ಉದ್ಧಾರಾದದ್ದು ಬರುವುದು.

ಪ್ರತಿ ಸೂರ್ಯ ಕಿರಣಂಗಳು ಬದ್ದೀತು ಹುಯ್ಯಲೊ ಡಂಗುರವ।
ಪಾತಾಳ ಗಂಗೆಯ ಜಲಬತ್ತಿ ಹೊಯಿತು ಹುಯ್ಯಲೊ ಡಂಗುರವ ॥೧॥

ಶೀತಳದೊಳಗಿದ್ದ ಚಂದ್ರಗುಪ್ತರಾಜ ಹುಯ್ಯಲೊ ಡಂಗುರವ।
ಆತನು ಬೈಲಿಗೆ ಬಂದಾನು ಕೇಳೆಂದು ಹುಯ್ಯಲೊ ಡಂಗುರವ ॥೨॥

ಚಲುಮೆಯ ತಗೆದಾನು ಚೆನ್ನಬಸವರಾಜ ಹುಯ್ಯಲೊ ಡಂಗುರವ।
ಕಲ್ಲೇಳುಗಜವಾದ ರಾಜನು ಮೇಲಕ್ಕೆ ಹುಯ್ಯಲೊ ಡಂಗುರವ ॥೩॥

೨೯. ಮೈಸೂರವರು ಸಂಕಲಿಸಿದ 'ಕಿರಿಗೆ ಹಾರ' ಎಂಬ ಕೋಲುಪದಕ್ಕೆ ಈ ಹಾಡನ್ನು ಹೋಲಿಸಿ ನೋಡಿರಿ.
೩೦. ಕಾಲಜ್ಞಾನ ಸಂಗ್ರಹ, ಭಾಗ ೧, ಪು. ೧೩೯ – ಸಂ. ಶ್ರೀ ಶಿವಬಸವಸ್ವಾಮಿಗಳು
೩೧. ಕಾಲಜ್ಞಾನ ಸಂಗ್ರಹ, ಭಾಗ ೧, ಪು. ೧೪೫ – ಸಂ. ಶ್ರೀ ಶಿವಬಸವಸ್ವಾಮಿಗಳು

ಉಲ್ಲಾಸದಿಂದಲಿ ಪವಾಡ ಮೆರೆವಾನು ಹುಯ್ಯಲೊ ಡಂಗುರವ।
ನಿಲ್ಲದೆ ಹೋಯಿತು ಶಾಪ ನಿಶ್ಚಯವಾಗಿ ಹುಯ್ಯಲೊ ಡಂಗುರವ ॥೪॥[೩೨]

ಜಾನಪದ ಹಾಡಿನಲ್ಲಿ, ಮಗಳ ಶಾಪಹತ್ತಿ 'ಚಂದ್ರಗುತ್ತಿಯ ಅರಸು' ಶಿಲೆಯಾಗಿ ಪಾತಾಳ ಗಂಗೆಯಲ್ಲಿ ಬಿದ್ದನೆಂದು ಬರುವುದು. ಅಲ್ಲಿಗೆ ಹಾಡೇ ಕೊನೆಯಾಗುವುದು. ಈ ಕಾಲಜ್ಞಾನ ಸಂಪಾದಕರು, 'ರುದ್ರಮುನಿ'ಯೇ ಈ ಕಾಲಜ್ಞಾನವನ್ನು ಬರೆದನೆಂದು ಹೇಳಲು ಸಾಕಷ್ಟು ಆಧಾರವಿಲ್ಲ. ಬೇರೊಬ್ಬ ಕವಿಯು ರುದ್ರಮುನಿಯು ನಿರೂಪಿಸಿದ್ದನ್ನು ಬರೆದಿರಬಹುದೆಂದು ಸಂಶಯಪಟ್ಟಿದ್ದಾರೆ. ಆದರೂ ರುದ್ರಮುನಿಯು ನಿರೂಪಿಸಿದ ಕಾಲಜ್ಞಾನವೆಂದು ಬರುವುದರಿಂದ ಬಸವಾದಿ ಪ್ರಮಥರ ಕಾಲದಲ್ಲಿ ಶಿವಶರಣರಿಗೆ ಈ ಚಂದ್ರಗುತ್ತಿಯ ಅರಸನ ಕಥೆಯ ಪ್ರಸಂಗವು ಗೊತ್ತಿತ್ತೆಂದು ವ್ಯಕ್ತವಾಗುವುದು. ಇದೇ ಕಥೆಯು ನೀಲಮ್ಮನವರ ಕಾಲಜ್ಞಾನದಲ್ಲಿಯೂ ಬಂದಿದೆ.

ಚಂದ್ರಗುತ್ತಿಯರಾಯ, ಅಂದಿನ ಪಾಪವು
ಸಂದು ಹೋದಾನು ಗಂಗೆಯೊಳಗೆ ಸುವ್ವಿ।
ಸಂದು ಹೋದವನ ಪಾಪವ ಕಳೆಯುದಕ
ಬಂದನು ಚೆನ್ನಬಸವಣ್ಣ ಸುವ್ವಿ ॥೧೩॥[೩೩]

ಹೀಗೆ ಚಂದ್ರಗುತ್ತಿಯ ಅರಸನು 'ಶಿಲೆಯಾದದ್ದು' ತಿಳಿದ ಶಿವಶರಣರು ಅವನು ಮುಂದೆ ಚೆನ್ನಬಸವಣ್ಣನವರ ಪಾದಧೂಳಿಯಿಂದ ಉದ್ಧಾರಾಗಿ ಶಾಪಮುಕ್ತನಾಗುವನೆಂದು ತಮ್ಮ ಕಾಲಜ್ಞಾನಗಳಲ್ಲಿ ಸೂಚಿಸಿದ್ದಾರೆ. ಜನಪದದಲ್ಲಿ ಬಂದ 'ಚಂದ್ರಗುತ್ತಿಯ ಅರಸ' ಇದರ ಬದಲು ಕಾಲಜ್ಞಾನಕಾರರು ಮೇಲಿನ ಪದ್ಯಗಳಲ್ಲಿ 'ಚಂದ್ರಗುಪ್ತರಾಜ,' 'ಚಂದ್ರಗುತ್ತಿಯರಾಯ' ಎಂದು ಉಪಯೋಗಿಸಿದ್ದಾರೆ. ಇದರಲ್ಲಿ ಸಂಶಯ ಹುಟ್ಟಿಸುವ ಯಾವ ತರದ ಹೆಚ್ಚು ಕಡಿಮೆಯೇನೂ ಕಂಡು ಬರುವುದಿಲ್ಲ.

ಗುತ್ತರಸರು ಅಚ್ಚಕನ್ನಡಿಗರು. ತುಂಗಭದ್ರೆಯ ತೀರದಲ್ಲಿಯ 'ಚೌಡದಾನಪುರ'ದಲ್ಲಿ ಈ ಅರಸರು ಅಚ್ಚಗನ್ನಡದಲ್ಲಿ ಕೊರೆಸಿದ ಶಿಲಾಶಾಸನಗಳಿವೆ.[೩೪] ಈ ಶಾಸನಗಳಾಧರ ದಿಂದ ಹಳಕಟ್ಟಿ ಅವರು ಈ ಗುತ್ತರಸರಾಳಿದ 'ಗುತ್ತಲುನಾಡ'ನ್ನು ಗುರುತಿಸಿದ್ದಾರೆ. "ಈಗಿನ ಹಾವೇರಿ ತಾಲಕಿನಲ್ಲಿ ಗುತ್ತಲವೆಂಬ ಹೆಸರಿನ ಗ್ರಾಮವಿದೆ. ಅದರ ಪುರಾತನ ಹೆಸರು 'ಗುತ್ತವೊಳಲ್' ಎಂದಿತ್ತು. ಗುತ್ತ ವಂಶದ ರಾಜರು ಆಳಿದ ಪಟ್ಟಣವೆಂದು ಇದಕ್ಕೆ ಈ ಹೆಸರು ಬಂದಿದೆ. ಗುತ್ತರಸರ ಬಿರುದುಗಳಲ್ಲಿ 'ಚಂದ್ರಗುಪ್ತಾನ್ವಯ,' 'ಉಜ್ಜಯನಿ ಪುರವರಾಧೀಶ್ವರ,' 'ಪನ್ನಿರ್ಬರ ಗಂಡ,' ಎಂಬವುಗಳಿವೆ. 'ಚಂದ್ರಗುಪ್ತಾನ್ವಯ' ಇದರಿಂದ ಇವರು 'ಪಾಟಲಿಪುತ್ರ'ವನ್ನು ಬಿಟ್ಟು ಮೈಸೂರ ಸೀಮಿಗೆ ಬಂದು ಶ್ರವಣ ಬೆಳ್ಗೊಳದಲ್ಲಿ ವಾಸಮಾಡಿದ ಚಂದ್ರಗುಪ್ತನ ವಂಶದವರಿರಬಹುದೆಂದು ಊಹಿಸಲ್ಪಟ್ಟಿದೆ. ಇವರು ಕಲಚೂರ್ಯ ರಾಜವಂಶದವರ ಸಮಕಾಲೀನರಿದ್ದು ಮುಂದೆ ದೇವಗಿರಿಯಾದವ ರಾಜರಿಗೆ ಮಾಂಡಲಿಕರಾಗಿ ಕಡೆಗೆ ಹೊಯ್ಸಳರಿಂದ ಗೆಲ್ಲಲ್ಪಟ್ಟರು. ಅವರು ಧಾರವಾಡ ಜಿಲ್ಲೆಯ ದಕ್ಷಿಣಭಾಗ ಅಂದರೆ ಹಾವೇರಿ, ರಾಣೀ ಬೆನ್ನೂರು, ಹಾನಗಲ್ಲ ಈ ತಾಲೂಕಗಳಿದ್ದ ಭಾಗಗಳನ್ನಾಳಿದ್ದಾರೆ.... ಇವರಲ್ಲಿ ೨ನೆಯ ವಿಕ್ರಮಾದಿತ್ಯನಿಂದ ಅಂದರೆ (೧೧೮೨) ೧೨ನೆಯ ಶತಮಾನದ ಮಧ್ಯದಿಂದ ಮೂರು ತಲಾಂತರದವರೆಗೆ ಈ ರಾಜರು ವೀರಶೈವ ಧರ್ಮಾನುಯಾಯಿಗಳಾಗಿದ್ದರು"[೩೫] ಎಂದು ಬರೆದಿದ್ದಾರೆ. ಜಾನಪದ ಮಹಾಭಾರತದಲ್ಲಿ 'ಗುತ್ತಲು ಮಲೆನಾಡಿ'ನಲ್ಲಿ ಪಾಂಡವರಿದ್ದರೆಂದೂ ಬರುತ್ತದೆ.

ಜನತೆಯು ಹಾಡುವ ಮಗಳ ಮೋಹಿಸಿದ ಚಂದ್ರಗುತ್ತಿಯ ಅರಸು, ಹಳಕಟ್ಟಿ ಅವರು ಕೊಟ್ಟ ಗುತ್ತರಸರ ವಂಶವೃಕ್ಷದಲ್ಲಿ ಆಗಿ ಹೋಗಿರಬಹುದೇ? ಇವನೇ ಎಂದು ಗುರುತಿಸಿ ಹೇಳಲು ಶಿಲಾಶಾಸನಗಳಾಗಲಿ, ಉಲ್ಲೇಖಗಳಾಗಲಿ, ನಮಗೆ ಎಲ್ಲಿಯೂ ದೊರೆಯುವುದಿಲ್ಲ; ಅಲ್ಲದೆ ಬೇರೆ ಯಾವ ಆಧಾರಗಳೂ ಇಲ್ಲ. ಜಾನಪದದ ಹಾಡಿನಲ್ಲಿಯೂ ಮಗಳ ಮೋಹಿಸಿದ ಚಂದ್ರಗುತ್ತಿಯ ಅರಸನ ಹೆಸರೂ ಬರುವುದಿಲ್ಲ. ಆದರೆ ಇಷ್ಟು ಮಾತ್ರ ನಿಜ; ಜಾನಪದ ಹಾಡಿನ ಸಂದರ್ಭದ ಮೇಲಿಂದಲೂ, ಶ್ರೀಶೈಲಗಿರಿಯ ಪಾತಳಗಂಗೆಯಲ್ಲಿಯ ಅರಸನ ಸ್ಮಾರಕದ ಮೇಲಿಂದಲೂ, ಚಂದ್ರಗುತ್ತಿಯ ಅರಸರು ಮೊದಲಿನ ತಮ್ಮ ಜೈನ ಧರ್ಮವನ್ನು ಬಿಟ್ಟು ವೀರಶೈವರಾದ ಮೇಲೆ ಈ ಕಥೆಯು ಸಂಭವಿಸಿತೆಂದು ಹೇಳಬಹುದು. ಜಾನಪದದಲ್ಲಿಯೂ, ಕಾಲಜ್ಞಾನದಲ್ಲಿಯೂ ಬರುವ ಈ ದುರಂತದ ಕಥೆಗೆ ಈ ಅರಸರಲ್ಲಿ ಒಬ್ಬನು ಮಾತ್ರ ಕಾರಣನಾಗಿರಲೇಬೇಕು. ಪ್ರಜೆಗಳನ್ನು ಮಕ್ಕಳಂತೆ ಪರಿಪಾಲನೆಯ ಮಾಡುವ ದೊಡ್ಡ ವ್ಯಕ್ತಿ, ಅರಸನು ಮಗಳ ಮೋಹಿಸಿ, ಮಾಡಿದ ಈ ಅಸಂಭವ ಕೃತಿಯನ್ನು ಜನರು ಮರೆಯಬಹುದೇ? ಅದು ಅಮಾನುಷ ಕೃತಿಯೆಂದು ಜನಪದವು ಜನತೆಗೆ ಹೇಳಲು ಹಾಡುತ್ತ ಬಂದಿದೆ.

ಚಂದ್ರಗುತ್ತಿಯ ಅರಸನ ಹಾಡು

ತೂಗತೂಗನ್ನಿರೆ।
ತೂಗಿರಿ ಮನವ ವಿಚಾರದಲಿ ॥ಪ॥

ಚಂದ್ರಗುತ್ತಿ ಅರಸ। ಅವ ತನ್ನ ಮಗಳ ಮ್ಯಾಗಿನ ಮನಸ
ದೇವ ಧರುಮದ ಮಾತ। ಹಿರಿಯರೆ ಕುಂತ ಕೇಳಿರಿ ನೀವು ॥ಅ.ಪ॥

---

೩೨. ಕಾಲಜ್ಞಾನ ಸಂಗ್ರಹ, ಭಾಗ ೧, ಪು. ೧೮೯ – ಸಂ. ಶ್ರೀ ಶಿವಬಸವಸ್ವಾಮಿಗಳು
೩೩. ಕಾಲಜ್ಞಾನ ಸಂಗ್ರಹ, ಭಾಗ ೧, ಪು. ೧೪೯ – ಸಂ. ಶ್ರೀ ಶಿವಬಸವಸ್ವಾಮಿಗಳು
೩೪. ರಾ.ಬ. ಪಿ.ಜಿ. ಹಳಕಟ್ಟಿ ಅವರು ಈ ಶಿಲಾಶಾಸನಗಳನ್ನು 'ಶಿವಾನುಭವ' ಸಂಪುಟ–೪, ಸಂಚಿಕೆ–೩, ಪು–೧೬೫, ಇದರಲ್ಲಿ ಪ್ರಕಟ ಮಾಡಿದ್ದಾರೆ.
೩೫. 'ವೀರಶೈವ ರಾಜಮನೆತನಗಳ ಚರಿತ್ರೆಗಳು' ೨ನೆಯ ಪ್ರಕರಣ, ಪು. ೫–೬ 'ಗುತ್ತರಸರು'

ತೊಟ್ಟ ಕುಬುಸವ ಕಳೆದು । ಬಾಲಿ ಹಾಕ್ಯಾಳ ಬಾಗಿಲೆದುರು ।
ತಂದಿ ಕಚೇರಿಲಿ ಬಂದ । ಕುಬುಸದರಂಗ ಏನ ಚಂದ ।
ಕುಬುಸ ಯಾರದಂದ । ಮಡದಿನ ಕೇಳತಾನ ಬಂದ ॥೧॥ ॥ತೊ॥

ಮುತ್ತೊಂದು ನನ ಮಗಳ । ಮುತ್ತಿನ ಅಟಕೋಲ ।
ಬಚ್ಚಲೇರುತ ಬಾಲಿ । ಆ ಮಾತನಿಂತ ಕೇಳುತಲಿ ॥೨॥ ॥ತೊ॥

ಸುಬಕ ಸೂವರಣಿ । ನಿನ ಮುಕವ ಬಂಗಾರವರಣಿ ।
ಕೇಳ ನೀನು ಪತಿವರತಿ । ಬಿಡುದಿಲ್ಲ ನಿನ್ನ ಭಾಗಿರತಿ ॥೩॥ ॥ತೊ॥

ನಷ್ಟ ಕರಮದ ಅರಸ । ಅಕಿ ನಿನ್ಹೊಟ್ಟೆಲ್ಹುಟ್ಟಿದ ಮಗಳ ।
ಕರುಮದ ಮಾತೀವು । ನಿನ ಧರುಮದಾವಲ ಬಿಟ್ಟ ॥೪॥ ॥ತೊ॥

ಪರವುತ ಮಲ್ಲಯ್ಯ । ಅಕಿಭಾವ ಕೊಲಿದನಲ್ಲ ।
ಬಚ್ಚಲ ಮೋರ್‍ಯಾಗ । ಬಾಲಿನ ಪಾರ ಮಾಡಿ ಬಿಟ್ಟ ॥೫॥ ॥ತೊ॥

ಗಿರಿಯನೇ ರ್‍ಯಾಳ ಬಾಲಿ । ತಿರುಗಿ ನೋಡ್ಯಾಳ ಹೊರಳಿ ।
ನಷ್ಟ ಕರುಮದ ತಂದಿ । ನನ್ನ ಬೆನ್ನಹತ್ತಿ ನೀನು ಬಂದಿ ॥೬॥ ॥ತೊ॥

ಬೋರವ್ವನಮ ತಂಗಿ । ಇವನ ಬೆನ್ನಿಲಿ ಬಿರಿಯವ್ವ ।
ತುಂಬಿದ ಬಾಗಿಣವ । ತಂದು ಚ್ಯಾಜವ ಕೊಡುವೆ ॥೭॥ ॥ತೊ॥

ಶಿವಗುತ್ತಿ ನೀ ಅರಸ । ನಾ ಕೊಡುವೆ ನಿನಗ ಸರಾಪ ।
ಪಾತಾಳ ಗಂಗ್ಯಾಗೆ । ನೀ ಕಲ್ಲಿನ ಶಿಲೆಯಾಗೊ ।
ಕಂಚಿನ ಕೊಳ್ಯಾಗೊ । ಹಗಲು ರಾತುರಿ ಕೂಗೊ ॥೮॥ ॥ತೊ॥

ಚಂದ್ರುಗುತ್ತಿ ಅರಸ । ಹಿಡಿ ಕೊಡುವೆ ನಾ ಸರಾಪ ।
ಪಾತಾಳ ಗಂಗ್ಯಾಗ । ನೀ ಕಲ್ಲಿನ ಶಿಲೆಯಾಗೊ ।
ಕಂಚಿನ ಕೋಳ್ಯಾಗೊ । ಹಗಲು ರಾತುರಿ ಕೂಗೊ ॥೯॥ ॥ತೊ॥ *–ಜಾ–ಸಂ–*

ಹಾಡಿನಲ್ಲಿ ಬರುವ ಕಥೆಯು 'ಚಂದ್ರಗುತ್ತಿ' ಅರಸನದು. ಅವನ ಮಗಳು ಬಲು ರೂಪವಂತಿ. ಒಂದಾನೊಂದು ದಿನ ಅವಳು ಜಳಕವನ್ನು ಮಾಡಬೇಕೆಂದು ತೊಟ್ಟ ಕುಬುಸವ ಕಳೆದು ಮನೆಯೊಳಗೆ ಬಾಗಿಲದೆದರು ಹಾಕಿ ಒಳಗೆ ಬಚ್ಚಲ ಮನೆಗೆ ಹೋಗಿದ್ದಳು. ಕಚೇರಿಗೆ ಹೋದ ತಂದೆಯು ಮನೆಗೆ ಬಂದು ಆ ಕುಬಸದಲ್ಲಿ ತುಂಬಿದ, ತೊಟ್ಟವಳ ಮೈಕಟ್ಟನ್ನು ನೋಡಿ ಮೋಹಿಸಿದನು. ಮಡದಿಯನ್ನು ವಿಚಾರಿಸಲು, ಅವಳು ಹೊಟ್ಟೆಲ್ಹುಟ್ಟಿದ ಮಗಳೆಂದು ಹೇಳಿದರೂ, ಮೋಹಾಂಧನಾಗಿ, ನಂಬದೆ ಜಳಕ ಮಾಡುವ ಮಗಳನ್ನು ಹಿಡಿಯಹೋದನು. ಪರವುತ ಮಲ್ಲಯ್ಯನ ಪರಮಭಕ್ತಳಾದ ಅವಳು ದೇವರನ್ನು ಮೊರೆಹೋಗಲು ಬಚ್ಚಲ ಮೋರೆಯು ದೊಡ್ಡದಾಗಿ ಹೊರಗೆ ಹೋಗಲು ಹಾದಿಯನ್ನು ಕೊಟ್ಟಿತು. ಮಗಳು 'ಮಲ್ಲಿಕಾರ್ಜುನನೇ ಗತಿಯೆಂದು ಶ್ರೀಶೈಲಗಿರಿಗೆ ಓಡ ಹತ್ತಿದಳು. ತಂದೆಯು ಕಾಮಾಂಧನಾಗಿ ಅವಳನ್ನು ಹಾಗೆಯೇ ಬೆನ್ನು ಹತ್ತಿದ. ಗಿರಿಯನೇರಿದ ಬಾಲಿ ತಿರುಗಿ ನೋಡಲು ತಂದೆಯು ಇನ್ನೂ ಬೆನ್ನ ಹತ್ತಿಯೇ ಬರುತ್ತಲಿದ್ದ. ಅವಳು 'ಮಲ್ಲಯ್ಯನ ಮಡದಿ, ಬೋರಮ್ಮ'ನಿಗೆ 'ಬೋರಮ್ಮ ನಮ ತಂಗಿ' ರಕ್ಷಿಸೆಂದು ಮೊರೆಹೋಗಲು, ಆ ಬೋರಮ್ಮನು ಅವನನ್ನು ಬೆನ್ನಿಲೆ ಬಿರಿದಳು. ಆಗ ಅರಸನು, ಅಲ್ಲಿಯೇ ಪಾತಾಳ ಗಂಗೆಯಲ್ಲಿ ಬಿದ್ದ. ಶಿಲೆಯಾಗಿ, ಕಂಚಿನ ಕೋಳಿಯಾಗಿ ಕೂಗೆಂದು ಶಾಪಕೊಟ್ಟಳು. ಆದುದರಿಂದ ಅವನು ಅಲ್ಲಿಯೇ ಬಿದ್ದಿರುವನೆಂದು ಶ್ರೀಶೈಲ ಯಾತ್ರೆಗೆ ಹೋಗಿ ಬರುವವರು, ಎಲ್ಲರೂ ಆ ಕೊಳ್ಳವನ್ನು ನೋಡಿ ಬಂದು ಹೇಳುತ್ತಾರೆ. ಈ ಕಥೆಯು ಜನಪದ ದೊಳಗೆ ಎಲ್ಲರೂ ಕೇಳಿದ ಕಥೆಯಾಗಿದೆ. ಕಾಲಜ್ಞಾನಕಾರರು ಈ ಕಥೆಯನ್ನು ಕೇಳಿರಬೇಕು; ಇಲ್ಲವೆ ಶ್ರೀಶೈಲಕ್ಕೆ ಹೋಗಿ ನೋಡಿಕೊಂಡು ಬಂದಿರಬೇಕು. ತಮ್ಮ ಕಾಲಜ್ಞಾನದ ಬಲದಿಂದ ಕಾಲಜ್ಞಾನ ವಚನಗಳಲ್ಲಿ, ಈ ಅರಸನಿಗೆ ಎಂದು ಮುಕ್ತಿಯಾಗುವುದೆಂಬುದನ್ನು ಸೂಚಿಸಿ ಜನಪದಕ್ಕೆ ಸಾರಿದ್ದಾರೆ.

ಜಾನಪದ ಹಾಡಿನಲ್ಲಿ ಹಳ್ಳಿಗರು 'ಚಂದ್ರಗುತ್ತಿಗೆ,' 'ಶಿವಗುತ್ತಿ'ಯೆಂದೂ ಕರೆದಿದ್ದಾರೆ. 'ಶಿವಗುತ್ತಿ'ಯೆಂಬ ಹೆಸರು ಬಹುತರವಾಗಿ ಗುತ್ತರಸರು ವೀರಶೈವರಾದ ಮೇಲೆ ಬಂದಿರಬಹುದೆಂದು ತೋರುತ್ತದೆ. ಹೀಗೆ ಹೆಸರಿಡುವುದರಲ್ಲಿ 'ಶಿವಕಾಂಚಿ'ಯ ಅನುಕರಣವಾಗಿರ ಬಹುದೇ? ಹಾಡಿನಲ್ಲಿ ನಿರೂಪಿಸಿದ ಕಥೆ, ಹಾಡಿಗೆ ಅನುರೂಪವಾದ ಪಲ್ಲವಿಯ ಸೊಲ್ಲೂ, ಸರಾಗದಿಂದ ಹಾಡುವ ರೀತಿಯೂ ಮೊದಲಾದುವು ಈ ಹಾಡಿಗೆ ಅಮೂಲ್ಯವಾದ ಅಲಂಕಾರಗಳಾಗಿ, ಕೇಳುವವರಿಗೆ ಹಾಡು ಬಲು ರಮ್ಯಾವಾಗಿದೆ. ಜಾನಪದ ಸಾಹಿತ್ಯದಲ್ಲಿ ಇದೊಂದು ಮಾದರಿಯ ಐತಿಹಾಸಿಕ ಸೋಜಿಗದ ಕಥೆಯೆಂದೇ ಹೇಳಬಹುದು.

ಹಕ್ಕಿಪಕ್ಕಿಗಳು

ನಿಸರ್ಗದ ತೋಳತೆಕ್ಕೆಯಲ್ಲಿ ಹಗಲಿರುಳು ದುಡಿಯುವ ಒಕ್ಕಲಿಗನಿಗೆ, ನಿಸರ್ಗವೇ ಒಂದು ದೊಡ್ಡ ಪ್ರಯೋಗಶಾಲೆ (Laboratary). ಅವನ ನಿಸರ್ಗ (Nature) ನಿರೀಕ್ಷಣೆ (Observation) ಯು ಬಲು ಚುರುಕಿದ್ದು ಮೊದಲಿನಿಂದಲೂ ಒಂದೇ ಸವನೆ ನಡೆದಿದೆ. ಅವನು ಸಸ್ಯಾದಿಗಳ ಹಾಗೂ ಪಶುಪಕ್ಷಿಗಳ ಜೀವನವನ್ನು ನೋಡಿ ಕಥೆಗಳನ್ನು ಕಟ್ಟಿ ಹಾಡಿದ್ದಾನೆ. ಮಾತಿಗೆ 'ಮಲಕು' ತುಂಬಿ ಅರ್ಥಗರ್ಭಿತವಾಗಿ ಬೇಕಾದಾಗ ಒಗಟಗಳನ್ನೊಡೆಯುತ್ತಾನೆ.

೧. **ಹುತ್ತು ಹುತ್ತಿನ ಮೇಲೆ ಚೆತ್ತ।**
ಚೆತ್ತ ಚೆತ್ತದ ಮೇಲೆ ಮುತ್ತು॥ (ಜೋಳದ ತೆನಿ)

೨. **ಅಟ್ಟಂಬಟ್ಟಂಬಾರ‍್ಯಾಣದಾಗ।**
ಚಟಗುಬ್ಬೀ ತಲಿ ಒಡದೈತಿ॥ (ಹತ್ತಿತೊಳಿ)

೩. **ನಕ್ಕೇನಂದ್ರ ನಗೀ ಬರವೊಲ್ದು**
ಪಂಚಕ ಬಂದು ಮೂರ್ ದಿನಾ ಆಯ್ತು
ಅಣ್ಣಗ ಬಂದು ನೋಡಿ ಹೋಗನ್ನು
ಅಕ್ಕಗ ಬಂದು ಕರಕೊಂಡು ಹೋಗನ್ನು॥ (ಹತ್ತಿತೊಳೆ)

೪. **ಸೆಡ್ಡಿ ಹಿಡಿದು ಬಿತ್ತುಹಂಗಿಲ್ಲ।**
ಕುಡಗೋಲ್ಹಿಡಿದು ಕೊಯ್ಯು ಹಂಗಿಲ್ಲ।
ಅದು ಇಲ್ಲದಿದ್ರ ಬಾಳ್ವೆ ಸಾಗುಹಂಗಿಲ್ಲ॥ (ಉಪ್ಪು)

೫. **ಮುದಕೀ ಮುದಕೀ ಮರಿ ಎಷ್ಟು ಅಂದ?**
ಗಿರಪಾವು ಕಡಿಮೆ ಗಿದ್ನ ಅಂದೆ!
ಯಾರಾದ್ರೂ ತುಡಿಗ್ಗೆ ಬಂದ್ರ?
ಸುತ್ತಲು ಬೇಲಿ ಕಟ್ತೇನು!
ಬೇಲಿ ಮುರಿದು ಹೊಕ್ರ?
ಒಪ್ಪತ್ತಿನ ಗುಡ್ಡ ದಕೂತಿ ಹಿಡಿತೀನಿ!॥ (ಜೇನಹುಳ)

ಹೀಗೆ ಅವನ ಪ್ರಯೋಗ ಶಾಲೆಯ ಅನುಭವ ಚಿತ್ರಗಳು ನಮ್ಮೆಲ್ಲರ ಕಣ್ಮುಂದೆ ಒಲ್ಲೆಂದರೂ ನಿಲ್ಲುವುವು. ಇವಲ್ಲದೆ ಅವನ 'ಕವಡ ಕಂಟಕ ಲೆಕ್ಕಗಳು' (ಜಾನಪದ ಗಣಿತು), 'ಚಾಣಾಕ್ಷ ನುಡಿಗಳು' ನಮ್ಮೆಲ್ಲರ 'ಬುದ್ಧಿ ಚಾಣಕ್ಷತೆಯನ್ನು (General Knowlegde) ಒರೆಗೆ ಹಚ್ಚಿಯೇ ಬಿಡುವುವು. ಅವು ತಿಳಿಯಲಾರದೆ, ಈಗಿನ ಪಂಡಿತರೆಂಬವರು ಪೇಚಾಡಬೇಕಾಗುವುದು. ಇಂತಹ ಲೆಕ್ಕಗಳ, ಮುತ್ತು ನುಡಿಗಳ ಸಂಗ್ರಹ ಮಾಡಿದರೆ ದೊಡ್ಡ ಸಂಗ್ರಹವೇ ಆಗುವುದು. ಈ ಭಾಗದಲ್ಲಿ ಇಲ್ಲಿಯವರೆಗೆ ಯಾರೂ ಧೈರ್ಯಮಾಡಿ ಕೈಯನ್ನು ಹಾಕಿಲ್ಲ. ಇದನ್ನು ಪ್ರಯತ್ನ ಮಾಡಿದಲ್ಲಿ 'ಬುದ್ಧಿ ಚಾಣಾಕ್ಷತೆ ಪರೀಕ್ಷೆ (General Knowledge test) ಗೆ' ಬಹಳ ಅನುಕೂಲವಾಗುವುದು. ಈ ಕೆಲಸವನ್ನು ಮುಂಬರುವ ಜಾನಪದ ಸಾಹಿತಿಗಳಿಗೆ ಬಿಟ್ಟುಕೊಟ್ಟಿದೆ.

ಹಕ್ಕಿಗಳ ಜೀವನವನ್ನು ಪರಿಶೀಲನ ಮಾಡಿದ ಅವನು ಅವುಗಳ ಸಂಬಂಧ ತನ್ನ ಅನುಭವವನ್ನು ಹಾಡಿದ್ದಾನೆ. ಹಕ್ಕಿಗಳಲ್ಲಿ ಗೂಗೆಗಳ ಸಂಖ್ಯೆಯು ತೀರ ವಿರಳ. ಇದರ ಕಾರಣವೇನು? ಎಂಬುದನ್ನು ಅವನು ಹುಡುಕಿ ತೆಗೆದು ತನ್ನ ನಿರೀಕ್ಷಣೆಯನ್ನು ಹೇಳಿದ್ದಾನೆ.

ಗೂಗೀಯ ಗೂಡಾಗ, ಪರುಸದ ಹರಳsವೊ
ಮಾಗಿ ಬಂದಾಗ ಮರಿಗsಳೊ। ತತ್ತೆಲ್ಲ
ಪರುಸ ಮುಟ್ಟಿದರ ಮರಿಗsಳೊ॥ *–ಜಾ–ಸಂ–*

ಎಂದು ಹಾಡಿದ್ದಾನೆ. ಅವನ ಮಾತು ನಿಜವೇನೊ ಎಂಬಂತೆ, ಹಕ್ಕಿಗಳಲ್ಲಿ ಅತಿ ವಿರಳವಾಗಿರುವ ಹಕ್ಕಿಯೆಂದರೆ 'ಗೂಗೆ'. ಈ ಹಕ್ಕಿಯು ಊರಲ್ಲಿ ಕಾಣುವುದು ಕ್ವಚಿತ. ಹಗಲಿನಲ್ಲಂತೂ ಕಾಣುವುದೇ ಇಲ್ಲ. ಊರ ಮುಂದಿನ ಸುಡಗಾಡದಲ್ಲಿ ಆಗಲಿ, ಪಡಭೂಮಿಯ ಮಾಮರದ ತೋಪುಗಳಲ್ಲಿ ಆಗಲಿ, ಬೆಟ್ಟದ ಕೊಳ್ಳಗಳಲ್ಲಿ ಆಗಲಿ, ರಾತ್ರಿಯಲ್ಲಿ ಅಲ್ಲೊಂದು ಇಲ್ಲೊಂದು ಕೂಗುವುದನ್ನು ಕೇಳಬಹುದು. ಗೂಗೆಯು ತನ್ನ ಗೂಡಿನಲ್ಲಿಯೇ ತತ್ತಿಗಳನ್ನು ಹಾಕುವುದು. ಆದರೆ ಅವು ಮರಿಗಳಾಗಬೇಕಾದರೆ 'ಪರುಷ' ಮಣಿಯ ಸ್ಪರ್ಶಬೇಕೆಂದು ಒಕ್ಕಲಿಗನು ಹಾಡುತ್ತಾನೆ. ಈ ಪರುಷದ ಹರಳುಗಳು ದೊರೆಯುವುದು ಬಲು ದುರ್ಲಭ. ಅದರ ಸಲುವಾಗಿ ಗೂಗೆಯು ರಾತ್ರಿಯಲ್ಲಿ ವನಾಂತರಿಸಿ, ಹಲಕೆಲವು ಹರಳುಗಳನ್ನು ಹುಡುಕಿ ತಂದು ತನ್ನ ಗೂಡಿನಲ್ಲಿ ಹಾಕಿ ಪ್ರಯೋಗ ಮಾಡಿನೋಡುತ್ತದೆ. ಗೂಗೆಯ ಗೂಡನ್ನು ಪರೀಕ್ಷೆ ಮಾಡಿ ನೋಡಲು ಹಲಕೆಲವು ಸಣ್ಣಕಲ್ಲುಗಳೂ, ಹರಳುಗಳೂ ನಿದರ್ಶನಕ್ಕೆ ಬರುವುವು. ಈ ಹರಳುಗಳು ಗೂಡಿನಲ್ಲೇಕೆ? ಅವುಗಳ ಉಪಯೋಗವೇನಿರಬಹುದು? ಎಂಬ ಪ್ರಶ್ನೆಗಳು ಎಲ್ಲರನ್ನೂ ಎದುರಿಸುವುವು. ಪರುಷ ಮಣಿಗಳು ಗೂಗೆಗೆ ದೊರೆಯದಿರಲು ಅದರ ತತ್ತಿಗಳು ಮರಿಗಳಾಗದೆ ಹಾಗೆಯೇ ಬಿದ್ದು ಹೋಗುವುವೆಂದು ಒಕ್ಕಲಿಗರು ಹೇಳುವರು. ಮಾವಿನ ತೋಪಿನೊಳಗೆ ಗೂಗೆಯ ಗೂಡಿನಲ್ಲಿಯ ತತ್ತಿಗಳು ನಾಲ್ಕಾರು ತಿಂಗಳವರೆಗೆ ಮರಿಯಾಗದಿದ್ದು ಕೆಳಗೆಬಿದ್ದು ಒಡೆದು ಹೋದದ್ದನ್ನು ಒಕ್ಕಲಿಗರು ನೋಡುವೆನೆಂದು

ಹೇಳುತ್ತಾರೆ. ಒಂದು ಗೂಗೆಯು ಪರುಷ ಮಣಿಯನ್ನು ತಂದು ತತ್ತಿಗಳನ್ನೊಡೆದು ಮರಿಮಾಡಲು ಅದನ್ನು ಕಾಯುತ್ತ ಕೂತ ಮತ್ತೊಂದು ಗೂಗೆಯು ಅದರ ಗೂಡಿನಲ್ಲಿಯ ಎಲ್ಲ ಹರಳುಗಳನ್ನು ಹಗಲು ಸಹಿತ ಒಯ್ಯುವುದನ್ನು ನೋಡಿದ್ದೇವೆಂದು ಅವರು ಹೇಳುತ್ತಾರೆ. ಈ ಪರುಷಮಣಿಯು ಸಿಗದಿರಲು, ಗೂಗೆಯ ತತ್ತಿಗಳು ಮರಿಗಳಾಗದೆ, ಹಾಳಾಗಿ ಹೋಗುವುದೇ ಬಹಳ. ಕಾರಣ ಅದರ ಸಂಖ್ಯೆಯು ಹಕ್ಕಿಗಳಲ್ಲಿ ಬಹಳ ವಿರಳ. ಅಲ್ಲದೆ ರಾತ್ರಿಯಲ್ಲಿ ಓಣಿಯೊಳಗೆ ಮನೆಯ ಮುಂದೆ ಗೂಗೆಯು ಕೂತು ಕೂಗಿದರೆ ಅಪಶಕುನವೆಂದೂ, ಅದಕ್ಕೆ ಕಲ್ಲೊಗೆದರೆ ಅದು ತಿರುಗಿ ಕಲ್ಲೊಗೆಯುವುದೆಂದೂ ಜನರಲ್ಲಿ ಒಂದು ಮೂಢನಂಬಿಕೆಯು ಇದೆ. ಈ ವಿಚಿತ್ರವನ್ನು ಪಕ್ಷಿ ಶಾಸ್ತ್ರಜ್ಞರು ಒರೆಗೆ ಹಚ್ಚಿನೋಡಬೇಕು.

ಹಲಕೆಲವು ಹಕ್ಕಿಗಳ ಜೀವನವನ್ನು ಕಂಡ ಒಕ್ಕಲಿಗನು, ಅವುಗಳ ಇಂದಿನ ಜೀವನವು ಹಿಂದಿನ ಜನ್ಮದ ಕರ್ಮಫಲವೆಂದು, ನಂಬಿ ಅವುಗಳ ಕಥೆಗಳನ್ನು ಹೇಳುತ್ತಾನೆ. ಯಾವುದೊ ಒಂದು ಶಾಪದ ನಿಮಿತ್ತ ಹಕ್ಕಿಗಳಾಗಿ ಕೂಗುವವೆಂದು ಕಲ್ಪಿಸುತ್ತಾನೆ. ಇಂಥ ಹಕ್ಕಿಗಳಲ್ಲಿ ಕೋಗಿಲೆ, ತೊಗಲ ಬಾವುಲಿ, ಕೆಕ್ಕರಹಕ್ಕಿ, ಮೊದಲಾದುವುಗಳ ಸಂಬಂಧ ಜನಪದದಲ್ಲಿ ಹಾಡುಗಳೂ ಇರುವುವು.

ಹಪ್ಪಿ ಹೂವಿಗಾಗಿ, ಹೆತ್ತ ತಾಯಿನ ಕೊಂದು
ಮತ್ತ ಕೋಗಿಲ ಮರನೇರಿ। ಕೂಗಿದರ
ಹೆತ್ತವ್ವ ಎಲ್ಲ ದೊರೆತಾಳ ॥ *–ಗ–ಹಾ–ಪು–೬೬*

ಎಂದ ರೈತನು ತಾಯಿಯ ಕಳಕೊಂಡ ಕೋಗಿಲೆಯನ್ನೂ ಹಾಡಿದ್ದಾನೆ. 'ತಾಯಿಗಿಂತ ಬಂಧು ಇಲ್ಲ' ಎಂಬ ದೊಡ್ಡ ಮಾತೂ ಈ ಪದ್ಯದ ಹಿಂದೆ ಧ್ವನಿತವಾಗುತ್ತದೆ. ಅಲ್ಲದೆ ಜನಪದದಲ್ಲಿ ಈ ಕೋಗಿಲೆಯ ಸಂಬಂಧ ಒಂದು ಕಥೆಯೂ ಕಂಡುಬರುವುದು. "ಕೈಲಾಸ ಗಿರಿಯಲ್ಲಿ ಗಂಧರ್ವ ತಾಯಿ ಮಕ್ಕಳಿಬ್ಬರಿದ್ದರು. ತಂದೆಯಿಲ್ಲದ ಮಗುವನ್ನು ತಾಯಿಯು ತಾನೇ ದುಡಿದು ತಂದು, ಬಲು ಜೋಕೆ ಮಾಡಿಕೊಂಡು ಬಂದಿದ್ದಳು. ಮಗನು ದೊಡ್ಡವನಾಗಲು, ತ್ರೈಲೋಕಗಳಲ್ಲಿ ಸಂಚಾರ ಮಾಡಿ ಎಲ್ಲ ತರದ ಹೂಗಳನ್ನು ತಂದು ಕೈಲಾಸದಲ್ಲಿ ಕೂಡಹಾಕಿದನು. ಸೂರ್ಯನ ಬಿಸಲಿಗೆ ಮರುದಿವಸ, ಭೂಲೋಕ ಶ್ರೀಶೈಲಗಿರಿಯಿಂದೊಯ್ದ 'ಇಪ್ಪಿ'[೩೬]ಹೂಗಳು ಬಾಡಿದ್ದನ್ನು ಕಂಡು ಕೈಲಾಸಗಿರಿಯಲ್ಲಿ ಎಲ್ಲಿ ಹುಡುಕಿದರೂ ಅವು ಸಿಗದಿರಲು, ತಾಯಿಗೆ 'ನೀನೇ ಈ ಹೂಗಳನ್ನು ಬಾಡಿಸಿದಿ' ಎಂದು ಆರೋಪ ಹೊರಿಸಿ ನೆತ್ತಿಯನ್ನು ಕುಕ್ಕಿ ಕೊಂದನು. ಮಗನ ಈ ಕ್ರೂರ ಕೃತಿಯನ್ನು ತಾಳಲಾರದೆ, ಆ ಗಂಧರ್ವ ತಾಯಿಯು 'ಮುಂದಿನ ಜನ್ಮದಲ್ಲಿ ನೀನು ಕೋಗಿಲೆಯಾಗಿ ಬನಬನಗಳನ್ನು ತಿರುಗಿ ಅತ್ತು ಕೊರಗಿದರೂ ಹೆತ್ತವ್ವ ನಿನಗೆ ಸಿಗದಿರಲೆಂದು' ಶಾಪ ಕೊಟ್ಟಳು. ಆ ಶಾಪದ ಪರಿಣಾಮವೇ ಆ ಗಂಧರ್ವ ಮಗನು ಈಗ ಕೋಗಿಲೆಯಾಗಿ 'ಕುವೊ' 'ಕುವ್ವೋ' ಎಂದು ಬನಬನಗಳಲ್ಲಿ ತಾಯಿಯನ್ನು ಕೂಗುತ್ತ ತಿರುಗುತ್ತದೆ. ಹಿಂದಿನ ಜನ್ಮದಲ್ಲಿ ಗಂಧರ್ವ ಕುಮಾರನಾದ ಕೋಗಿಲೆಯು ತಾಯಿಯ ಕರೆದು ಅತ್ತರೂ, ಪಂಚಮಸ್ವರದಲ್ಲಿ ಹಾಡುವುದೆಂದು ಜನರ ಭಾವನೆಯಿದೆ." ಎಂದು ಒಕ್ಕಲಿಗನು ಕಥೆಯನ್ನು ಹೇಳುತ್ತಾನೆ. ಭರತಖಂಡದ ಅನೇಕ ಕವಿಗಳು ಕೋಗಿಲೆಯ ಇಂಚರವನ್ನು ಬಣ್ಣಿಸುತ್ತಾರೆ. ಇಷ್ಟೇ ಅಲ್ಲ. ತಾಯಿ ಕೋಗಿಲೆಯು ಈಗಲೂ ತತ್ತಿಗಳನ್ನು ತನ್ನ ಗೂಡಿನಲ್ಲಿ ಹಾಕಿ ಮರಿಗಳನ್ನು ಮಾಡುವುದಿಲ್ಲ. ಕಾಗೆಯ ಗೂಡಿನಲ್ಲಿ ಹಾಕಿ ಹಾರಿಹೋಗುವುದು. ಮಕ್ಕಳಿಗೆ ತಾಯಿ ಕೋಗಿಲೆಯು ತನ್ನ ಮುಖವನ್ನು ಸಹ ತೋರಿಸದಿರುವುದೇ ಇದರ ಮೂಲ ಉದ್ದೇಶವಾಗಿದೆ. ಕಾಗೆಯ ಗೂಡಿನಲ್ಲಿ ಕೋಗಿಲೆಯ ಮರಿಗಳಾದ ಮೇಲೆ, ಕಾಗೆಯು ಅವುಗಳಿಗೆ ಗುಟ್ಟಿಯ ಕೊಟ್ಟು ಬೆಳೆಸುವುದು. ಮುಂದೆ ಅವು ತನ್ನ ಮರಿಗಳಿಗಿಂತ ತೀರ ಭಿನ್ನ ಕಾಣಹತ್ತಲು, ಕಾಗೆಯು ಅವುಗಳ ನೆತ್ತಿಯನ್ನು ಕುಕ್ಕ ಹತ್ತುವುದು. ಆಗ ಆ ಮರಿಗಳು, ಅದನ್ನು ತಾಳಲಾರದೆ ಬನದಲ್ಲಿ 'ಕುವ್ವೊ' 'ಕುವ್ವೋ' ಎಂದು ಕೂಗುತ್ತ ಹಾರಿ ಹೋಗುವುವು. ಈಗಲೂ ಕಾಗೆಯ ಹಿಂಡಿನಲ್ಲಿ ಕೋಗಿಲೆಯು ಸಿಕ್ಕರೆ ಕಾಗೆಗಳು ಅದನ್ನು ಕುಕ್ಕಿ ಕೊಂದೇ ಬಿಡುವುವು.

ಶಾಪ ಹೊಂದಿ, ಹಕ್ಕಿಯಾಗಿ ಹಾರುವ ಇನ್ನೊಂದು ಜೀವವೆಂದರೆ ತೊಗಲಬಾವುಲಿಯು, 'ಶಿರಿಯಾಳ ಚೆಂಗಳಿಯು' ಶಿವನಿಗೆ ಉಣಿಸಿದ್ದನ್ನು ಹಂಗಿಸಲು, ಶಿವನು ಸಿಟ್ಟಾಗಿ 'ಬಾಯಿಲೆತಿಂದು, ಬಾಯಿಲೆ ಕಕ್ಕು' ಎಂದು ಶಾಪಕೊಡಲು, ಶಿರಿಯಾಳ ಚೆಂಗಳೆಯು 'ತೊಗಲಬಾವುಲಿಯಾಗಿ' ಈ ಲೋಕದಲ್ಲಿ ಹಾರಾಡುವಳೆಂದು ಜನಪದವು ಹಾಡುತ್ತದೆ. ಅದು ರಾತ್ರಿಯಲ್ಲಿ ಮರದ ಟೊಂಗೆಗಳಿಗೆ ಬಾವುಲಿಯಂತೆ ನೇತಾಡಿ ಬಾಯಿಲೆ ತಿಂದು ಬಾಯಿಲೆ ಕಕ್ಕುವುದನ್ನು ಎಲ್ಲರೂ ನೋಡಿ ಮನಗಾಣಬಹುದು.

ಯಾವುದೊ ಕಾರಣ ನಿಮಿತ್ತ, ಅಣ್ಣನನ್ನು ಕಳೆದುಕೊಂಡು, ಹೊಟ್ಟೆಗಾಗಿ ನೆತ್ತಿಯ ಮೇಲೆ ಭಾರಹೊತ್ತು ಈ ಜನ್ಮದಲ್ಲಿ ಅಣ್ಣನನ್ನು ಹುಡುಕುತ್ತ ಹಾರಾಡುವ 'ಕೆಕ್ಕರ ಹಕ್ಕಿಯು' 'ನೆತ್ತುರ್ತೆತೊ ಕೆಕ್ಕರಾ' ಎಂದು ಗುಡ್ಡ ಗುಡ್ಡಗಳಲ್ಲಿ ಕಟ್ಟಿಗೆಯ ಟೊಂಗೆಗಳನ್ನು ಈಗಲೂ ಆರಿಸುತ್ತ ಹಾರಾಡುವುದೆಂದು ಒಕ್ಕಲಿಗನು ಹೇಳುತ್ತಾನೆ. ಇಂತಹ ಅನೇಕ ಹಾಡುಗಳನ್ನೂ, ಕಥೆಗಳನ್ನೂ ಸಂಕಲಿಸಬಹುದು. ಅದೊಂದು ಮಹಾಸಾಹಸದ ಕೆಲಸವೇ ಆಗುವುದು. ಹೀಗೆ ಚಿತ್ರವಿಚಿತ್ರವಾದ ಜಾನಪದ ಸಾಹಿತ್ಯವು ರಸಿಕರ ಮನವನ್ನು ತುಂಬಲಿ. ಹುದುಗಿಕೊಂಡಿದ್ದ ಜಾನಪದ ಚಿತ್ರವಿಚಿತ್ರಗಳು ಬೆಳಕಿಗೆ ಬರಲಿ. ಮುಂಬರುವ ಜಾನಪದ ಸಾಹಿತಿಗಳು ಇದಕ್ಕೆ ಟೊಂಕಕಟ್ಟಿ ನಿಲ್ಲಲಿ.

❐

೩೬. 'ಇಪ್ಪಿ' ಹೂಗಳು ಶ್ರೀ ಶೈಲಗಿರಿಯಲ್ಲಿ ಬಹಳ. ಯಾತ್ರಿಕರು ಗಿರಿಯಿಂದ ತರುವ ಪಾವನ ವಸ್ತುಗಳಲ್ಲಿ ಈಗಲೂ 'ಇಪ್ಪಿ' ಹೂ ಒಂದಾಗಿದೆ.

ಭಾಗ–೩

ವಿಮರ್ಶೆ

ಪರಿವಿಡಿ

1. ಹಂತಿಯ ಕಥನ ಕವನಗಳು

ಸಂಸ್ಕೃತಿ

'ಜನಜೀವನ ಪ್ರತಿಬಿಂಬವೇ ಸಾಹಿತ್ಯ' ಎಂಬ ಮಾತು ಅಪುರಶಃ ಸತ್ಯವಾದುದು. ನೂರಕ್ಕೆ ತೊಂಬತ್ತೈದು ಹಳ್ಳಿಗಳುಳ್ಳ ನಮ್ಮ ದೇಶದಲ್ಲಿ ಜನಜೀವನವೆಂದರೆ ನಮ್ಮ ಹಳ್ಳಿಗರ ಜೀವನವೆಂದೇ ಒಪ್ಪಬೇಕಾಗುವುದು. ಪಟ್ಟಣಿಗರ ಜೀವನವನ್ನು ಮಹಾಕವಿಗಳ ಕಾವ್ಯಗಳಲ್ಲಿಯೂ, ಶಾಸನ–ವಾಸ್ತವಶಿಲ್ಪ ಕಲೆಗಳಲ್ಲಿಯೂ ಕಾಣಬಹುದು. ಅವರ ಸಂಸ್ಕೃತಿಯೇ ಅವೆಲ್ಲವುಗಳಲ್ಲಿ ಒಡಮೂಡಿ ಬಿಟ್ಟಿದೆ. ಒಕ್ಕಲತನವೇ ಮೂಲ ಬೇಸಾಯವಾದ ನಮ್ಮ ದೇಶದ ಹಳ್ಳಿಗಳ ಆಧಾರಸ್ತಂಭವೆಂದರೆ ರೈತನು. ಅವನ ಜೀವನವೇ ಹಳ್ಳಿಯ ಜೀವನ. ಅವನ ಸಂಸ್ಕೃತಿಯೇ ಆ ಜೀವನದಲ್ಲಿ ಒಡಮೂಡಿದ ಹಳ್ಳಿಯ ಸಂಸ್ಕೃತಿ. ಅದೇ ಭರತಖಂಡದ ಸಂಸ್ಕೃತಿಯೆಂದು ಧಾರಾಳವಾಗಿ ಹೇಳಬಹುದು.

ಹಲಕೆಲವು ಸಂಗತಿಗಳಲ್ಲಿ ರೈತನಿಗೆ ಜಾತಿ ಧರ್ಮಗಳ ಅರಿವಿದ್ದರೂ, ಕುಲವೆಂಬ ಭಾವನೆಯೇ ಅವನಲ್ಲಿರುವುದಿಲ್ಲ. ಅವನಿಗೆ ನಾಡ ಮೇಲಿನ ಎಲ್ಲ ಶರಣರಲ್ಲಿ ಭಕ್ತಿಯಿದೆ; ಅವನ ರೀತಿ ನೀತಿಗಳಲ್ಲಿ ಹೊಲವಿದೆ; ಶಿವಶರಣರ ಹೆದ್ದಾರಿಯಾದ ಕಾಯಕದಲ್ಲಿ ದೃಢವಾದ ಶ್ರದ್ಧೆಯಿದೆ. ಅಂತೆಯೇ ಅವನು ನಮ್ಮ ದೇಶದ ಬೆನ್ನಮೂಳೆಯಾಗಿದ್ದಾನೆ; ಜನಾಂಗದ ಜೀವಾಳವಾಗಿದ್ದಾನೆ. ಅವನ ಹೊಲಬನಲ್ಲಿಯೇ ಇಂದು ಬೆಳೆದುಬಂದಿದೆ, ನಮ್ಮ ಹಳ್ಳಿಯ ಸಂಸ್ಕೃತಿ!

ಅನುಕರಣವು ಸಂಸ್ಕೃತಿಯಾಗಲಾರದು. ಅದು ಹಿನ್ನೆಲೆಯಿಲ್ಲದ ಪೊಳ್ಳ ತಳಹದಿಯ ಮೇಲೆ ನಿಂತ ಭವ್ಯ ಮಂದಿರದಂತೆ ಮಾತ್ರ ಒಮ್ಮಿಕ್ಕೊಮ್ಮೆ ಕುಸಿದುಬಿದ್ದೇ ಹೋಗುವುದು. 'ಹಿಂದೆ ಬುನಾದಿಯಿಂದ ಬಂದದ್ದು ನಾಗರೀಕತೆ (Civilization)ಯಾದರೆ, ಇಂದು ಇದ್ದದ್ದು ಸಂಸ್ಕೃತಿಯು' ಎಂದೊಪ್ಪುವ ನಮ್ಮ ಪಂಡಿತರು ತಮಗೆ ಬಂದದ್ದನ್ನು ಕಡೆಗಾಣಿಸ ಹತ್ತಿದ್ದಾರೆ; ಇದ್ದದ್ದನ್ನು ಅಲ್ಲಗಳೆದು ತಿರಸ್ಕರಿಸಹತ್ತಿದ್ದಾರೆ. ಹೀಗಾಗಿ ನಮ್ಮ ಸಂಸ್ಕೃತಿಯ ಬೆಳವಣಿಗೆಯು ಕುಂಠಿತವಾಗಹತ್ತಿದೆ ಎಂದು ಉಸುರುಗಳೆಯ ಬೇಕಾಗಿದೆ. ಪಾಶ್ಚಿಯಾತ್ಯರು ಭರತಖಂಡದಲ್ಲಿ ನೂರಿನ್ನೂರು ವರುಷ ರಾಜ್ಯ ಕಾರಣಮಾಡಿ ಭಾರತ ಸಂಸ್ಕೃತಿಯನ್ನು ಹೊಗಳಿದರೂ ಅದನ್ನು ಅವರಾರೂ ಅನುಕರಣ ಮಾಡಲಿಲ್ಲ. ಅವರು ಈ ಸಂಸ್ಕೃತಿಗೆ ಹೊಂದಿಕೆಯಾಗಿ ತಮ್ಮದನ್ನು ಮರೆಯದೆ ಅದನ್ನು ಮತ್ತಿಷ್ಟು ಬೆಳಸಿಕೊಂಡೇ ಹೋದರೆಂದು ಹೇಳಬಹುದು. ಈ ಮಾತನ್ನು ನಾವೆಲ್ಲರೂ ಅವರಿಂದ ಅಗತ್ಯ ಕಲಿಯಬೇಕಾಗಿದೆ. ಎಲ್ಲಿದ್ದರೇನು? ಜನ್ಮವಿತ್ತ ತಾಯಿಯನ್ನು ಅಲ್ಲಗಳೆದು ಬೇರೊಬ್ಬಳನ್ನು ಅಪ್ಪಲು ಹೋದರೆ ಅವಳು ತಾಯಿಯಾಗಬಲ್ಲಳೇ? ಹಾಗೆ ಆಗಿದೆ ನಮ್ಮ ಸದ್ಯದ ಪರಿಸ್ಥಿತಿ. ಪಾಶ್ಚಿಮಾತ್ಯ ಸಂಸ್ಕೃತಿಗೆ ಮನಸೋತು ಕಲಿತವರೆಂದು ಜಂಬ ಕೊಚ್ಚಿಕೊಳ್ಳುವ ನಾವು ಅನುಕರಣೆಯನ್ನೇ ಪ್ರತಿಪಾದಿಸಿದರೆ, ಅದಕ್ಕೆ ವಿಪರೀತ ಪ್ರತಿಕ್ರಿಯೆಯೇ ಕಂಡುಬರುವುದಲ್ಲದೆ ಹೊಂದಿಕೆಯಾಗ ಲಾರದು. ಹಳ್ಳಿಗಳೇ ಆಧಾರಸ್ತಂಭಗಳಾದ ನಮ್ಮ ದೇಶದಲ್ಲಿ, ತಳಬುಡವಿಲ್ಲದ ಈ ಅನುಕರಣವು ಗಾಳಿಗೋಪುರವಾಗಿ ಬಿಡುವುದು. ನಮ್ಮದನ್ನು ಬಿಟ್ಟುಕೊಟ್ಟು, ಅದನ್ನು ಮರೆಯಹತ್ತಿದ ನಾವು 'ತ್ರಿಶಂಕು'ವಿನ ಗತಿಯನ್ನು ಹೊಂದಬೇಕಾಗುವುದು. ಹಾಗೆ ಮಾಡದೆ ಹೊಂದಿಕೆಯಾಗುವ ಹಿತಕರವಾದ ಮಾರ್ಪಾಟುಗಳನ್ನು ಸ್ವೀಕರಿಸಿ ನಮ್ಮದರಲ್ಲೊಂದುಗೂಡಿಸಿ, ನಮ್ಮದನ್ನು ಪುಷ್ಟೀಕರಣ ಮಾಡಿದಲ್ಲಿ, ನಮ್ಮ ಸಂಸ್ಕೃತಿಯು ಜಗತ್ತಿನ ಎಲ್ಲ ಸಂಸ್ಕೃತಿಗಳ ಸಾರವಾಗಿ ಎಲ್ಲರಿಗೂ ಆದರಣೀಯವಾಗಿ ನಿಲ್ಲಬಲ್ಲುದು.

ನಮ್ಮ ಹಳ್ಳಿಗರ ಸಂಸ್ಕೃತಿಯು ಒಡಮಾಡಿದ್ದು ಪಂಡಿತರ ಕಾವ್ಯಗಳಲ್ಲಲ್ಲ; ಶಿಲಾಶಾಸನ, ಶಿಲ್ಪಕಲೆಯಲ್ಲಲ್ಲ; ಪಾಮರರೆಂದು ಕರೆಯಲ್ಪಡುವ ಹಳ್ಳಿಗರ ಹಾಡುಗಳಲ್ಲಿ, ಜಾನಪದ ಸಾಹಿತ್ಯದಲ್ಲಿ. ಜೀವನ ವಿವಿಧ ನೈಜ ಚಿತ್ರಗಳನ್ನು ಚಿತ್ರಿಸುವ ಈ ಹಾಡುಗಳು ರೈತನಿಗೆ ಆನಂದವಾದಾಗಲಿ, ಇಲ್ಲವೆ ದಿನದ ದುಡಿಮೆಯ ದಣಿವನ್ನಾರಿಸಿಕೊಳ್ಳುವುದಕ್ಕಾಗಲಿ ಹೊರಹೊಮ್ಮಿದುವುಗಳು. ಅವನಿಗೆ ಮನತುಂಬಿ ಹೌಸಾದರೆ ಚಿಮ್ಮಿಚಿಮ್ಮಿ ರಾಗವು ಹರಿದೇಬಿಡುವುದು. ಅವನ ಸಹಜತೆಯು ಶಾಸ್ತ್ರೋಕ್ತದ ಕಟ್ಟುನಿಟ್ಟುಗಳಿಲ್ಲದೆ ತನ್ನದೇ ಆದ ಒಂದು ರಸವಾಣಿಯಲ್ಲಿ ನಾದ ಮಾಡುಹತ್ತುವುದು. ಆ ರಸವಾಣಿಗೆ ಯಾರು ಮನಸೋಲಲಿಕ್ಕಿಲ್ಲ? ಅವನ ಹಾಡಿನಲ್ಲಿ ಸ್ಫೂರ್ತಿ ಇದೆ; ಸ್ವಾತಂತ್ರವಿದೆ; ತಿರುಳ್ಗನ್ನಡತೆಯಿದೆ; ತಾಳಲಯಾಲಾಪದ ಕರ್ನಾಟಕ ಸಂಗೀತವಿದೆ. ಎಲ್ಲವೂ ಕನ್ನಡವಾಗಲು ಅದರ ಹಿರಿಮೆಯನ್ನೊಪ್ಪದವರಾರು? ಅಂತೆಯೇ ಜಾನಪದ ಸಾಹಿತ್ಯವು ಪಾಮರರ ಉಸಿರಾದರೂ ಅದನ್ನು ರಸಿಕರೆಲ್ಲರೂ ಹೊತ್ತು ಕುಣಿದಾಡುತ್ತಾರೆ. ಜಾನಪದವು ನಿರಾಭರಣ ಸುಂದರಿ; ಅದಕ್ಕೆ ಅಲಂಕಾರದ ಭಾರವಿಲ್ಲ, ಪರಂಪರೆಯ ಗುಲಾಮತನವಿಲ್ಲ; ಸಮಯಾದಿಗಳ ಜೊಂಜಾಟವಿಲ್ಲ; ಅನುಕರಣ ಮೊದಲಾದುವುಗಳ ಮುರವತ್ತಿಲ್ಲ; ನಿತ್ಯ ನಿಸರ್ಗಕ್ಕೆ ಅದು ಸದಾ ಕಣ್ಣು ತೆರೆದಿದೆ. ಅಲ್ಲಿ ಬಂದುದು ಎಲ್ಲವೂ ಅಚ್ಚ ಹೊಸದೇ, ಅದರಲ್ಲಿ ಸುಳಿದಾಡುತ್ತಿರುವುದು ಜನವಾಣಿ, ಕುಣಿದಾಡುತ್ತಿರುವುದು ಜನಜೀವನ; ಉಸಿರಾಡುತ್ತಿರುವುದು ನಮ್ಮ ಸಂಸ್ಕೃತಿ. ಅಷ್ಟೇ ಏಕೆ? ಅದು ನಮ್ಮ

ಪ್ರಪಂಚ ಸಂಭಾರವೇ ಆಗಿದೆ. ಆ ಸಂಭಾರ ಸಾಮಗ್ರಿಗಳ ಸೌರಭವು ಒಟ್ಟುಗೂಡಿದಾಗೊಂದು; ಬಿಡಿಬಿಡಿಯಾದಾಗೊಂದು. ಹೀಗೆ ಹೇಗಿದ್ದರೂ ಅದು ರಸಿಕರನ್ನು ರಸಸಾಗರದಲ್ಲಿ ತೇಲಿಸಿ ಬಿಡುವುದು. ಅದನ್ನು ಗಂಡು ಕಟ್ಟಿ (ರಚಿಸಿ) ಹಾಡಿದರೇನು? ಹೆಣ್ಣು ಕಟ್ಟಿ ಹಾಡಿದರೇನು? ಅದರಿಂದ ಸೂಸಿಬರುವ ಸೌರಭವು ಒಂದೇ.

ಶಿವಶರಣರ ಹಂತಿಯ ಹಾಡುಗಳು

ಹಂತಿಯ ಹಾಡುಗಳನ್ನು ಕೇಳಬೇಕು ಬೆಳುವಲದಲ್ಲಿ. ಬಯಲು ನಾಡಾದ ಬೆಳುವಲವು ಬಲುಫಲವತ್ತಾದ ಭೂಮಿ. ಅಲ್ಲಿಯ ಒಕ್ಕಲಿಗನ ಸಂಪತ್ತನ್ನು ಬಣ್ಣಿಸಲಸಾಧ್ಯ:

ಸುಗ್ಗಿದಾಸೋಹೆಂದು, ಹಿಗ್ಗು ಬೆಳವಲುನೋಡು
ಹುಗ್ಗಿ ಹೋಳಿಗೆಯು ನಿನ್ನಾಡು। ಸೂಗ್ಯೂಟ
ನಗ್ಗೇಡು ಇದಕೆ- ಮಲೆನಾಡು ॥೮೮॥ *ಹೂ–ಮಾ*

ಎಂದು ಒಕ್ಕಲಿಗನು ಬೆಳುವಲದ ಹಿರಿಮೆಯನ್ನು ಹೂಗಾರ ಮಾದಯ್ಯನ ಹಂತಿಯ ಹಾಡಿನಲ್ಲಿ ಹಾಡಿದ್ದಾನೆ. ಒಕ್ಕಲಿಗನು ಹಗಲಿರುಳು ಸೃಷ್ಟಿ ಸೌಂದರ್ಯದಲ್ಲಿ ತೇಲಾಡುವುದರಿಂದ ಅವರ ಜೀವನವು ಕಾವ್ಯಮಯವಾಗುವುದು ಸಹಜ. ಅವನು ಭಾವನಾ ಪರವಶನಾಗಲು ಕಾವ್ಯ ಸೃಷ್ಟಿಯ ಒಂದೊಂದು ಕುಸುರುಗಳು ರೂಪಹೊಂದಿ ಜಾನಪದದಲ್ಲಿ ಮಿಣಗಹತ್ತುವುವು. ಅವರ ಹೃದಯ ಸದಾ ನಿಸರ್ಗಕ್ಕೆ ಮೈದೆರಿದಿದೆ. ಎದೆಗಣ್ಣು ದೂರದೂರ ದೃಷ್ಟಿಯ ಬಿಟ್ಟು ಸುತ್ತಮುತ್ತಲಿನ ಹರಿದಾಟಗಳನ್ನು ನೋಡುತ್ತಿರುತ್ತವೆ. ಅವನು ತನ್ನ ಹೊಲಗೆಲಸದಲ್ಲಿ ತನ್ನ ಜೀವನವನ್ನೇ ಹಾಡುತ್ತ ಬಂದಿದ್ದಾನೆ. ಆಸ್ಥಾನ ಕವಿಗಳಂತೆ ಅವನದು ಕಾಲ್ಪನಿಕ ಸೃಷ್ಟಿಯಲ್ಲ. ಕಂಡದ್ದನ್ನರಗಿಸಿ ಸುಖವಿದ್ದರೆ ಹಾಡುತ್ತ ನಕ್ಕಿದ್ದಾನೆ; ದುಃಖವಿದ್ದರೆ ಹಾಡುತ್ತ ಅತ್ತಿದ್ದಾನೆ: ಅವನ ಹಾಡುಗಳು ಪ್ರಪಂಚದ ಬಗೆಹರಿಯದ ಸಮಸ್ಯೆಗಳಿರಬಹುದು; ಕೈಗೂಡದ ಪ್ರಣಯಲೀಲೆ ಇರಬಹುದು; ಅಸಹಾಯ ಸ್ಥಿತಿಯ ಐತಿಹಾಸಿಕ ಪ್ರಸಂಗವೂ ಇರಬಹುದು; ನಗೆತುಂಬಿದ ಹಾಸ್ಯವೂ ಇರಬಹುದು; ಪ್ರೇಮಿಗಳ ಪ್ರೇಮ ಸಲ್ಲಾಪವಿರಬಹುದು; ಧರ್ಮದ ಆಂದೋಲನವಿರಬಹುದು: ಇಲ್ಲವೆ ಮಹಾಪುರುಷರ ಸ್ಮಾರಕ, ಚರಿತ್ರವಿರಬಹುದು. ಹೀಗೆ ಇವೆಲ್ಲವುಗಳೂ ಅವನ ಹಾಡುಗಳ ಮುಖ್ಯ ವಿಷಯಗಳಾಗಿ ಆವರಿಸಿಕೊಳ್ಳಬಹುದು. ಈ ಎಲ್ಲ ಹರಿದಾಟಗಳಲ್ಲಿ ಅವರು ಧರ್ಮಕ್ಕೆ ತೀವ್ರ ಅಂಟಿಕೊಳ್ಳುವುದು ಅವನಲ್ಲಿ ಒಡೆದು ಕಂಡುಬರುವ ಗುಣವಾಗಿದೆ. ತಾ ಕಂಡು ಹಾಡುವ ಅವನ ಅನುಭಾವಗಳು ಕೇವಲ ಬಿಡಿ ಪದ್ಯಗಳಿರಬಹುದು; ಇಲ್ಲವೆ ದೊಡ್ಡ ಹಾಡುಗಳೂ ಇರುಬಹುದು. ಅವನು ಹಾಡುವ ಶಿವಶರಣರ ಹಂತಿಯ ದೊಡ್ಡ ಹಾಡುಗಳನ್ನು ಸಂಕಲಿಸಿ ಕೆಳಗೆ ಚರ್ಚಿಸಲು ಪ್ರಯತ್ನ ಮಾಡಲಾಗಿದೆ.

ಶಿ ಶರಣರ ಕಲ್ಯಾಣವು ಬೆಳುವಲದ ಒಳಗಡಿಯಲ್ಲಿದೆ. ಅವರ ಅನೇಕ ಕಾರ್ಯ ಕಲಾಪಗಳು ಬೆಳುವಲದ ಅನೇಕ ಭಾಗಗಳಲ್ಲಿ ನಡೆಯುತ್ತಿದ್ದುವು. ಕಲ್ಯಾಣ ಕ್ರಾಂತಿಯಲ್ಲಿ ಬೆಳುವಲದ ಅನೇಕ ಶಿವಶರಣರೂ, ಜಂಗಮರೂ ಭಾಗವಹಿಸಿದ್ದರು. ಅನೇಕರು ಶಿವಮತ ವುಳಿಸಲು ಕಾದುಮಡಿದದ್ದು ಶಿವಶರಣರ ಚರಿತ್ರೆಗಳಿಂದ ತಿಳಿದುಬರುತ್ತದೆ. ಕ್ರಾಂತಿಯಲ್ಲಿ 'ಕಲ್ಯಾಣಮಂಟಪವು' ಕಣ್ಮರೆಯಾಗಿ ಆಂದೋಲನವು ಶಾಂತವಾಗಲು ಆ ಮಂಟಪದ ಅನೇಕ ಜಂಗಮರೂ, ಶಿವಶರಣರೂ, ಕಲ್ಯಾಣದ ನೆರೆಯಲ್ಲಿರುವ ಈ ಬೆಳುವಲ ನಾಡಿನಲ್ಲಿಯೇ ನಿಂತಂತೆ ಕಾಣುತ್ತದೆ. ಕಲ್ಯಾಣಕ್ಕೆ ತೀರ ಸಮೀಪವಾದ ಬೆಳುವಲವು, ಕ್ರಾಂತಿಯಾಗುವ ಮುನ್ನ ಶಿವಶರಣರ ತತ್ವಗಳನ್ನರಿತು ಅವುಗಳ ಹಿರಿಮೆಗೆ ಮೆಚ್ಚಿ ಲಿ ಯುತ ಮತವನ್ನು ಸ್ವೀಕರಿಸಿತ್ತು. ಕ್ರಾಂತಿಯಾದ ನಂತರ ಬೆಳುವಲವು ಶಿವಶರಣರನ್ನೂ, ಜಂಗಮರನ್ನೂ ಆದರದಿಂದ ಬರ ಡಿಕೊಂಡು ಎಲ್ಲ ಸಹಾಯ ಸನ್ನಾಹಗಳನ್ನೊದಗಿಸಿ ಕೊಟ್ಟಿತು.

ಬೆಳವಲವು ಬೆಳೆಯಾಗಿ, ಬಳುವಲಯು ಹೊಸಮತಕೆ
ಬೆಳತನಕ ಚೌಡ ನಿನ್ನಾಡು। ಕಣದೊಳಗೆ
ಬೆಳೆಗೆ ಬಳುವಲಿಯು ಹುಲುಸಾಯ್ತು ॥೯೧॥ *–ಜಾ–ಚೌ*

ಎಂದು ಜಾತಿಗರ ಚೌಡಯ್ಯನ ಹಂತಿಯಹಾಡಿನಲ್ಲಿ ಬಂದಿವೆ. ಇಲ್ಲಿ ಬೆಳುವಲವು ಹೊಸಮತಕ್ಕೆ ಬಳುವಲಿಯಾಗಿದೆ.

ಹಿಂಗಾರಿ ಬೆಳಸಾಗಿ, ಮುಂಗಡವೆ ಬೆಳೆಬಂದು
ಟೆಂಗ ಬಿಳಿ ಜೋಳ ಒಕ್ಕುವದು। ಬೆಳವಲವು
ಜಂಗಮಕೆ ಎಡೆಯು ಹೊಸ ಬೆಳಕು ॥೫೮॥ *ಕುಂ–ಗುಂ–*

ಅಂತೆಯೇ ಜಂಗಮರು ಮಠಾದಿಗಳನ್ನು ಸ್ಥಾಪಿಸಿ ತಮ್ಮ ಕಾಯಕವನ್ನು ಸಾಗುಮಾಡುತ್ತ ಬಂದರು. ಲಿಂಗಾಯತ ಮತವು ಮತ್ತಿಷ್ಟು ಹಬ್ಬುತ್ತ ಬಂತು. ಬೆಳುವಲದಲ್ಲಿ ವೀರಶೈವ ಶಿವಾಚಾರ ಮಠವಿಲ್ಲದ ಹಳ್ಳಿಯಿಲ್ಲದಿರುವುದೇ ಇದಕ್ಕೆ ಬಲವಾದ ಸಾಕ್ಷಿ. ಹನ್ನೆರಡನೆಯ ಶತಮಾನ ದವರೆಗೆ ೭ ಳೆದುಬಂದ ಕನ್ನಡ ಸಂಸ್ಕೃತಿ ಮಂದಿರಕ್ಕೆ ಚಿನ್ನದ ಕಳಸವನ್ನಿಟ್ಟು ಅದನ್ನು ಬೆಳಗಿಸಿದ ಶ್ರೇಯಸ್ಸು ಈ ಜಂಗಮರಿಗೆ ಸಲ್ಲುವುದು. ಓದು ಬರ ವನ್ನರಿಯದ ಹಳ್ಳಿಗರಿಗೆ ಓದುಬರಹವನ್ನು ಕಲಿಸಿದರು. ವಚನ ಭಂಡಾರವು ಬೆಳೆದು ಹಳ್ಳಿಗರ ದಿನನಿತ್ಯದ ಮಾತಾಯಿತು. ಹಳ್ಳಿಗಳಲ್ಲಿ ಈಗಲೂ ಕಂಡುಬರುವ ಸಾಲೀಮಠಗಳೇ ಇದಕ್ಕೆ ನಿದರ್ಶನ. ತಾಡೋಲೆಗಳ ರಾಶಿಯು ಈ ಮಠಗಳಲ್ಲಿ ಈಗಲೂ ದೊರೆಯುವುದು. ಹಳ್ಳಿಗರ ಜೀವನೋದ್ಧಾರವಾದದ್ದು ಈ ಮಠಗಳಿಂದಲೇ. ಕನ್ನಡ ಕುಲವೇ ಇದಕ್ಕೆ ಚಿರಋಣಿ. ಆಗ ಹಳ್ಳಿಗರಿಗೆ ಜ್ಞಾನೋದ ಯಾಯಿತು. ವೀರಶೈವ ಸಂಸ್ಕೃತಿಯೇ ಕನ್ನಡ ಸಂಸ್ಕೃತಿಯೆನ್ನುವಷ್ಟು, ಅದು ಕರ್ನಾಟಕದಲ್ಲಿ, ವಿಶೇಷವಾಗಿ ಉತ್ತರ ಕರ್ನಾಟಕದಲ್ಲಿ ಸಮಬೆರಕೆಂ ಒಂದಾಗಿ ಹೋಗಿದೆ. ಶಿವಶರಣರ ವಿಶಾಲವಾದ ತತ್ವಗಳನ್ನರಿತು, ಬಸವನ ಅಗಾಧವಾದ ಮಹಿಮೆಯನ್ನು ಕೇಳಿದ ಹೆಣ್ಣು ಬಳಗವೂ ಅವರನ್ನು ಭಕ್ತಿಯಿಂದ ಹಾಡಿ ಭಜಿಸಿದೆ.

ಸಾಗಿಸದ್ಗುರು ಯೋಗಿ ಬಂದರ।
ಹೋಗಿ ನೋಡುಣ ಗುರು।
ಮೋಕ್ಷವ ಬೇಡೋಣ ॥ಪ॥
ಕಲ್ಯಾಣ ಪಟ್ಟಣಕ್ಹೋಗಿ, ಎಲ್ಲ ದೇವರ ಕಂಡೆ
ಬಲ್ಲಿದನ ಕಂಡೆ ಬಸವಣ್ಣನ ಗುರುವೆ ॥ ಪಾದಕ
ಚೆಲ್ಲ್ಯಾಡಿ ಬಂದೆ ನನಮನವ ॥ಗುರುವೆ॥ *–ಬಸವಣ್ಣನವರ ಹಾಡು*

ಎಂದು ಹೆಣ್ಣುಮಕ್ಕಳು ಈಗಲೂ ಬೆಳುವಲದಲ್ಲಿ ಹಾಡುತ್ತಾರೆ. ಕಲ್ಯಾಣದ ಕ್ರಾಂತಿಯಾಗಲು, ಮಂಟಪವನ್ನು ಬಿಟ್ಟೆದ್ದು ದಿಕ್ಕಾಪಾಲಾಗಿ ಬಂದ ಶಿವಶರಣರನ್ನು, ಜಂಗಮರನ್ನೂ ಕಾಣಿಸಿಕೊಂಡು ಅವರಿಗೆ ಮೋಕ್ಷ ಬೇಡಲು ಹೊರಟಿದೆ ಜನವು ಈ ಹಾಡಿನಲ್ಲಿ. "ಪಾದಕ। ಚೆಲ್ಲಾಡಿ ಬಂದೆ ನನ ಮನವ॥" ಎಂಬ ಮಾತು, ಆ ಜನರ ಭಕ್ತಿಯ ಅರ್ಪಣೆಯನ್ನೂ, ಬಂದ ಸಂಕಟವನ್ನೆದುರಿಸಲು ಅವರ ಸಿದ್ಧತೆಯನ್ನೂ ತೋರದಿರದು. ಅಲ್ಲದೆ ಅನೇಕ ಒಕ್ಕಲಿಗರು ಶಿವಶರಣರಾದುದರಿಂದ ಕಲ್ಯಾಣ ಶರಣರ ಚರಿತೆಗಳನ್ನು ತಮ್ಮ ಬೇಸಾಯದಲ್ಲಿ ಹಾಡುತ್ತ ಬಂದಿದ್ದಾರೆ. ಈ ಹಾಡುಗಳು ಬೆಳುವಲದ ತುಂಬೆಲ್ಲ ಹೇರಳವಾಗಿ ಸಿಗುವುವು. ಮನೆಯಲ್ಲಿ ನನ್ನ ತೀರ್ಥರೂಪರೇ ಈ ನೂರೊಂದು ಶಿವಶರಣರ ಹಾಡುಗಳನ್ನು ಹಂತಿಯನ್ನು ಹಾಡುತ್ತಿದ್ದದರಿಂದ ಅವುಗಳಲ್ಲಿ ಹಲಕೆಲವು ಹಾಡುಗಳನ್ನು ಕೂಡಹಾಕಲು ಪ್ರಯತ್ನ ಮಾಡಲಾಗಿದೆ.

ಈ ಎಲ್ಲ ಶಿವಶರಣರ ಹಂತಿಯ ಹಾಡುಗಳು ಅಚ್ಚಗನ್ನಡ ಛಂದಸ್ಸು 'ತ್ರಿಪದಿ'ಯಲ್ಲಿವೆ. ಇವುಗಳನ್ನು ರಚಿಸಿ ಹಾಡಿದ ಕವಿಯು ಒಕ್ಕಲಿಗನಾದುದರಿಂದ ಕರ್ನಾಟಕದಲ್ಲಿ ಕಂಡುಬರುವ ಒಕ್ಕಲುತನದ ಎಲ್ಲ ಸಂಪ್ರದಾಯಗಳನ್ನು ಯಥಾರ್ಥವಾಗಿ ಹಾಡಿದ್ದಾನೆ.[೧] ಯಾವ ಪಂಡಿತ ಕವಿಯೂ ಈ ಸಂಪ್ರದಾಯಗಳನ್ನು ಹೇಳುವ ಹವ್ಯಾಸಕ್ಕೆ ಹೋಗಿಲ್ಲ. ಕವಿ 'ಹಾರುವನು' (ಕ್ರಿ.ಶ.೧೭೦೦) ತನ್ನ 'ಬಸವಶಿಖಾಮಣಿ' ಎಂಬ ಗ್ರಂಥದಲ್ಲಿ ಹಲಕೆಲವುಗಳನ್ನು ಹೇಳಹೋದರೂ ಅವು ಆಚರಣೆಗೆ ಸಮಂಜಸವೆನಿಸುವುದಿಲ್ಲ. ಸುಗ್ಗಿಯ ಸಂಪ್ರದಾಯಗಳನ್ನು ಹೇಳುವ ಈ, ಶಿವಶರಣರ ಹಂತಿಯ ಹಾಡುಗಳು ಸಂಸ್ಕೃತಿಯ ದೃಷ್ಟಿಯಿಂದ ಕನ್ನಡ ಜನಾಂಗಕ್ಕೆ ಅತಿ ಮಹತ್ವವಾದುವುಗಳೆಂದೇ ಹೇಳಬಹುದು. ಅಲ್ಲದೆ ಹಲಕೆಲವುಗಳಲ್ಲಿ ಐತಿಹಾಸಿಕ ಸಂಗತಿಗಳು ಹುದುಗಿಕೊಂಡಿರುವುದರಿಂದ ನಮ್ಮ ಜನತೆಯ ಇತಿಹಾಸವನ್ನು ತಿಳಿದುಕೊಳ್ಳಲು, ಅನೇಕ ರೀತಿಯಿಂದ ಸಹಾಯ ಸಾಧನಗಳಾಗುವುವು. ರಸಋಷಿಯಾಗಿ ಹಾಡಿದ ಈ ಜಾನಪದ ಕವಿಯು ಈ ಹಾಡುಗಳು ಅಮರವಾಗಿ ಯುಗಯುಗದಲ್ಲಿಯೂ ಮಾಸದೆ ಹೊಸದಾಗಿ ಉಳಿಯುವಂತೆ ಹಾಡಿದ್ದಾನೆ.

ಚಿತ್ರಣ ಶಕ್ತಿ

ಈ ಜಾನಪದ ಕವಿಗೆ ಹಾಡುವ ಹಿಡಿತವಿದೆ. ಹಿತಮಿತ ಶಬ್ದಗಳ ತೂಕವಿದೆ. ಕಂಡದ್ದನ್ನು ಚಿತ್ರಿಸುವ ದೊಡ್ಡ ಕವಿಯಲ್ಲಿರುವ ಒಂದು ಅಸಾಧಾರಣವಾದ ಶಕ್ತಿಯಿದೆ. ಈ ಚಿತ್ರಣ ಶಕ್ತಿಯು ಅವನ ಎಲ್ಲ ಹಾಡುಗಳಲ್ಲಿಯೂ ತುಂಬಹೋಗಿದೆ. ಹೇಳುವ ವಿಷಯವು ರೂಪತಾಳಿ ಕಣ್ಮುಂದೆ ಕುಣಿಯ ಹತ್ತುವುದು.

ನುಡಿಸಿದನು ಡಮರಿಯನು, ಹೆಡೆಯೆತ್ತಿ ನಾಗಾಡಿ
ಜಡೆಯೊಳಗೆ ಗಂಗೆ ನೀರ್ಕಾಂ। ಶೂಲ್ಹಿಡಿದು
ಬಿಡದೆತ್ತಿ ಶಂಖ ಊದಿದನು ॥೬೮॥ *ಗೊಲ್ಲಾಳ*

ಇಲ್ಲಿ ಶಂಕರನ ಭವ್ಯ ಮೂರ್ತಿಯು ಹೇಗೆ ನಮ್ಮ ಕಣ್ಣುತುಂಬುತ್ತದೆಂಬುದನ್ನು ಅನುಭವಿಸಿ ನೋಡಬೇಕು. ಇದೊಂದು ಭವ್ಯ ಪರಿವರ್ತನ ದೃಶ್ಯ (Transfer scene) ವೆಂದೇ ಹೇಳಬಹುದು. ಇಂತಹ ಅನೇಕ ದೃಶ್ಯಗಳನ್ನು ಈ ಹಂತಿಯ ಹಾಡುಗಳಲ್ಲಿ ಕಾಣಬಹುದು. ಶಿವಲಿಂಗವು ಹಾಲನ್ನು ಕುಡಿಯದೇ ಹೋಗಲು ಕೊಡಗೂಸು

ಅನ್ನುತಲಿ ಕೊಡಗೂಸು, ಮುನ್ನ ತಂದೆಯ ಮುಂದೆ
ಚೆನ್ನಕಂಬಕನೆ ತಲೆಗೊಡುವ। ಮುನ್ನವೇ
ಹೊನ್ನು ಕಂಬೊಡೆದು ಶಿವನೆದ್ದು ॥೨೪॥
ಎತಿ ಮಗಳೆ ಕೊಡುಗೂಸೆ, ಸಲಸಿದೆನು ಹಾಲನ್ನು
ನಿಲಕುವದೆ ನಿನ್ನ ಶಿವಭಕ್ತಿ। ಭಕ್ತರಿಗೆ
ಕಲಿಸುವರು ಯಾರು ಶಿವಪಾಠ ॥೨೫॥

ಎಂದನ್ನುವಷ್ಟರಲ್ಲಿ ಕೊಡಗೂಸು ಕಣ್ದೆರೆದು ನೋಡುವಳು.

ಎಚ್ಚತ್ತು ನೋಡಿದಳು, ಮೆಚ್ಚಿರುವ ಶಿವನನ್ನು
ತುಚ್ಛಮಾಡದಲೆ ಹಾಲನ್ನು। ಶಿವಲಿಂಗ
ಇಚ್ಛೆಯಲಿ ಕುಡಿದು ನಗಲಿದ್ದ ॥೨೬॥ *ಕೋ–ಕೊ–*

---

೧. ಭಾಗ ೨: 'ಐತಿಹಾಸಿಕ ಸಂಗತಿಗಳು' – 'ಸುಗ್ಗಿಯ ಸಂಪ್ರದಾಯಗಳು' ನೋಡಿರಿ.

ಎಂದು ಬರುವೀಚಿತ್ರವು ಓದುಗರ ಮನವನ್ನು ಒಮ್ಮೆಲೇ ಹಿಡಿದುಬಿಡುವುದು. ಈ ಪರಿವರ್ತನ ದೃಶ್ಯದಲ್ಲಿ ಸಹಜತೆಯು ತುಂಬಿದೆ. ಕೋಳೂರ ಕೊಡಗೂಸು, ನಿಂತಲ್ಲಿಯೇ ಇದಿರಿಗಿರುವ ಕಂಬಕ್ಕೆ ಹಾಯಲು ಕಂಬವು ಒಡೆದು ಶಿವನು ಪ್ರತ್ಯಕ್ಷನಾಗುವನು. ಇದೇ ಹಾಡಿನಲ್ಲಿ ಬರುವ ಇನ್ನೊಂದು ಚಿತ್ರವು ಬಹಳ ಸಹಜವಾಗಿದೆ.

............। ಕೊಡಗೂಸು
ತಲೆಯ ಹಾಯ್ಸಿದಳು ಲಿಂಗಕ್ಕೆ ॥೬೦॥
ಲಿಂಗ ಏಬ್ಬಾಗಾಗಿ, ನುಂಗಲಾ ಕೊಡಗೂಸ
ಮುಂಗೈಯ ಚಾಟಿ ಚುಲುಪೆಗಳ। ಜಗ್ಗಿದನು
ಮುಂಗಂಡು ತಂದೆ ಮಗಳೆಂದು ॥೬೧॥
ಬಿಚ್ಚಲಿಂಗದ ಪೀಠ ಮುಚ್ಚಿಕೊಂಡಿತು ಕೂತು....... *ಕೋ–ಕೊ–*

ಹೀಗೆ ಬರುವ ಈ ಎರಡೂ ಪರಿವರ್ತನ ದೃಶ್ಯಗಳು ನಾಟಕೀಯತೆಯಿಂದ ತುಂಬಿವೆ. 'ಹೊನ್ನ ಕಂಬೊಡೆದು ಶಿವನೆದ್ದು', 'ಲಿಂಗವಿಬ್ಬಾಗಾಗಿ, ನುಂಗಲಾ ಕೊಡಗೂಸು' ಈ ಎರಡೂ ದೃಶ್ಯಗಳು ಓದುವವರ ಮನಸ್ಸನ್ನು ಹಿಡಿದುಬಿಡುವುವು. ಹಲಕೆಲವು ನಿಮಿಷಗಳವರೆಗೆ ಓದುವವರು ಆ ಚಿತ್ರದ ಅದ್ಭುತತೆಯಲ್ಲಿಯೇ ಮೈಮರೆಯುವರು. ವೀರಶೈವ ಕವಿಗಳಲ್ಲಿ ಅನೇಕ ಕವಿಗಳು ಇವೇ ಸನ್ನಿವೇಶಗಳನ್ನು ತಮ್ಮ ಕಾವ್ಯಗಳಲ್ಲಿ ಚಿತ್ರಿಸಿದ್ದಾರೆ. ಭೀಮ ಕವಿಯಾಗಲಿ, ಷಡಕ್ಷರ ದೇವನಾಗಲಿ ಈ ಹಳ್ಳಿಯ ಕಬ್ಬಿಗನು ಸಾಧಿಸಿದ ನಾಟಕೀಯತೆಯನ್ನು ಸಾಧಿಸಿಲ್ಲ. ಕಾರಣ ಅವರು ಚಿತ್ರಿಸಿದ ಈ ಚಿತ್ರಗಳಲ್ಲಿ ಕೃತ್ರಿಮತೆಯು ಕಂಡುಬರುವುದು. ಭೀಮಕವಿಯು

ಎಂದು ಶಿವನೊಳು ತನ್ನ ತಲೆಯಂ
ನಿಂದು ತಾಟಿಸಿ ಕೊಳುವ ವಿತರಲಿ
ನಂದನೆಯ ನಾಗಳೆ ಹಿಡಿದು ದರಹಸಿತ ಮುಖನಾಗಿ।[2] ॥೨೧॥

ಇಲ್ಲಿ ಸೋತುಬಂದಿದೆ ಹೇಳತಕ್ಕ ಅಸನ್ನಿವೇಶದ ಮಾತು! ಶಿವನಿಗೆ ಹಾಲುಕುಡಿಸುವೆನೆಂದು ತಂದೆಯೊಡನೆ ಶಿವಾಲಯಕ್ಕೆ ಹೋದ ಕೊಡಗೂಸು, ಶಿವನು ಹಾಲನ್ನು ಕುಡಿಯದೆ ಅವಳ ಶಿವಭಕ್ತಿಯನ್ನು ಜಗತ್ತಿಗೆ ಬೆಳಗಬೇಕೆಂದು ಸುಮ್ಮಿರಲು, ಮುಗ್ಧ ಭಕ್ತಳಾದ ಕೊಡಗೂಸು, ತನ್ನ ಜೀವವನ್ನು ಶಿವನಿಗೆ ಅರ್ಪಿಸುವ ಸನ್ನಿವೇಶವನ್ನು ಭೀಮ ಕವಿಯು,

ಕೈಯ ಬಟ್ಟಲ ಹಾಲಿಗಂ ತಾ।
ಕೈಯ ನೀಡುತ್ತೀಂಟೆ ಬಾಲಕಿ।
ಯಯ್ಯನಂ ಬಿಟ್ಟೋಡಲೋಹೋ ಅಂಜಬೇಡೆನುತ॥
ಮೈಯನೊಸಸುತ್ತಪ್ಪಿ ಯಭಯದ।
ಕೈಯ ನೀಡುತ್ತುದರವಂಬಗಿ।
[3]ದೊಯ್ಯನೊಯ್ಯನೆತತ್ತ ರುಣಿಯಂ ವುಗಿಸುತಿರಲೊಡನೆ ॥೩೨॥

ಹೀಗೆ ಹೇಳಿದೀ ಮಾತುಗಳು ಜಾನಪದ ಕವಿಯು ಹಾಡಿದ ಇದೇ ಸನ್ನಿವೇಶದ ಪದ್ಯಗಳಿಗೆ ಒರೆಹತ್ತಬಹುದೇ? ಜಾನಪದ ಕವಿಯ ಸಹಜತುಂಬಿದ ಸನ್ನಿವೇಶದ ಭಾವನೆಯು ಇಲ್ಲೆಲ್ಲಿ ಬರಬೇಕು? ಉದ್ದಾಮ ಕವಿಯಾದ ಷಡಕ್ಷರ ದೇವನ ಇದೇ ಸನ್ನಿವೇಶದ್ದಲ್ಲಿಯ ಕೆಳಗಿನ ಪದ್ಯದೊಳಗೆ ಜಾನಪದ ಕವಿಯ ಸೊಗಸು ಕಂಡುಬರುವುದೇ?

ಆ ಕೊಡಗೂಸಂ ಕರುಣಾ
ಲೋಕನದಿಂ ನೋಡಿ ತೆಗೆದುಬಿಗಿಯಪ್ಪುತೆ ಶೌ॥
ರೀಕಾಂತಂ ತನ್ನೊಡಲೋ
[4]ಳ್ಳೋಕೆಯನೊಳ ಪೊಗಿಸೆ ಪೊಗುವ ಮಗಳಂ ಜನಕಂ ॥೯೫॥

ಸನ್ನಿವೇಶಗಳನ್ನು ಚಿತ್ರಿಸುವ ಒಂದು ಬಲವಾದ ಮೋಡಿಯು ಈ ಹಳ್ಳಿಯ ಕಬ್ಬಿಗನಲ್ಲಿ ಆತ್ಮೀಯದಾಗಿ ಕಂಡುಬರುವುದು. ಕಿನ್ನರಿ ಬೊಮ್ಮಯ್ಯನ ಹಾಡಿನಲ್ಲಿ ತ್ರಿಪುರಾಂತಕ ಲಿಂಗವು, ಬೊಮ್ಮಯ್ಯನು ನಿರಪರಾಧಿಯೆಂದು ಏಳುದಿನಗಳವರೆಗೆ ಕೂಗಾಡಿ ಸಾಕ್ಷಿ ಹೇಳಿತೆಂದು ಕವಿಯು ಬಲುಹೃದಯಂಗಮವಾಗಿ ಚಿತ್ರಿಸಿದ್ದಾನೆ.

ಏಳುದಿನ ಹಗಲೆಲ್ಲ, ಏಳುದಿನ ಇರುಳೆಲ್ಲ
ಹೇಳಿತಾಲಿಂಗ ಸಾಕ್ಷಯನೆ। ಹೌಹಾರಿ
ಕೇಳುತಲಿ ಬಂದ ಜನವೆಲ್ಲ ॥೫೬॥

---

೨. 'ಬಸವಪುರಾಣ' ಹದಿನಾಲ್ಕನೆಯ ಸಂಧಿ' ಪದ್ಯ ೨೧.
೩. 'ಬಸವಪುರಾಣ' ಸಂಧಿ ೧೪, ಪದ್ಯ ೩೨.
೪. 'ವೃಷಭೇಂದ್ರ ವಿಜಯ', ಆಶ್ವಾಸ–೯ – ಪದ್ಯ ೬೫.

ನಡುನಡುಗಿತಾ ಭೂಮಿ, ತಡೆತಡೆದವಾಗಾಳಿ
ಕಡಲುಗಳು ಉಕ್ಕಿ ಒದರಿದವು । ಆಕಾಶ
ಕಥಲೆಂದು ಒಡಿದು ಮಾಯಾಗಿ ॥೫೭॥ -ಶಿ-ಬೊ-

'ಮುಂಗಡವೆ ನುಡಿಯಿತಾ, ಲಿಂಗವದು ಗುಡಿಯೊಳಗೆ' ಎಂದು ಹೇಳುವ ಈ ಕವಿಯು ಆ ಸನ್ನಿವೇಶದ ಚಿತ್ರವನ್ನು ಕಣ್ಮುಂದೆ ತಂದುಬಿಡುವನು. 'ತ್ರಿಪುರಾಂತಕ ಲಿಂಗವು ಸಾಕ್ಷಿಯನ್ನು ನುಡಿಯಲು ನಿಸರ್ಗವೆಲ್ಲ ಗಡಚಿಕ್ಕಿಸುವೆಂದು ಹೇಳಬೇಕೆಂದ ಕವಿಯು ಜಗತ್ಪ್ರಳಯದ ಚಿತ್ರವನ್ನೇ ಪಂಚ ಮಹಾಭೂತಗಳ ಪ್ರತಿಕ್ರಿಯೆಯಲ್ಲಿ ತೋರಿಸಿಬಿಟ್ಟಿದ್ದಾನೆ. ಈ 'ಶಿವನಾಟ'ವು ಜನತೆಗೆ ಅದ್ಭುತವೆನಿಸುವುದರಲ್ಲಿ ಆಶ್ಚರ್ಯವೇನು? ಇದೇ ಸನ್ನಿವೇಶವನ್ನು ಭೀಮಕವಿಯೂ, ಷಡಕ್ಷರಿಯೂ ಸುದೀರ್ಘವಾಗಿ ಹೇಳಿದ್ದಾರೆ. ಅವರು ಹೇಳಿದ್ದನ್ನು ಸ್ವಲ್ಪದರಲ್ಲಿ ಹೇಳುವ ಚಿತ್ರಮಯವಾದ ಕುಶಲತೆಯು ಈ ಜಾನಪದ ಕವಿಯ ವೈಶಿಷ್ಟ್ಯವೆಂದೇ ಹೇಳಬಹುದು.

ಶಿವನು ಮಾದರ ಚೆನ್ನಯ್ಯನೊಡನೆ ಉಂಡ ಚಿತ್ರವನ್ನು ಈ ಕವಿಯೂ ಚಿತ್ರಿಸಿದ್ದಾನೆ. ಒಮ್ಮೆ ಓದಿದರೆ ಸಾಕು ಚಿತ್ರವು ಮನಃಪಟಲದ ಮೇಲೆ ಚಿರಂತನವಾಗಿ ಮೂಡಿಬಿಡುವುದು. ಮರೆಯಲು ಎಷ್ಟು ಪ್ರಯತ್ನ ಮಾಡಿದರೂ ಅದು ಮತ್ತಿಷ್ಟು ಸ್ಫುಟವಾಗಿ ಕುಣಿಯಹತ್ತುವುದು.

ಕಂಡು ಬಾಯೆಂಜಲವ, ರುಂಡಧಾರಿಯು ಮಾಡಿ
ಉಂಡ ಶಿವಭಕ್ತ ಅಂಬಲಿಯ, ಚೆನ್ನಯ್ಯ
ಕೆಂಡ ಗಣ್ಣನಿಗೆ ಕೈ ಮುಗಿದ ॥೪೧॥ -ಮಾ-ಚೆ-

ಚೆನ್ನಯ್ಯನು ಅಂಬಲಿಯನ್ನು ಶಿವಲಿಂಗಕ್ಕೆ ಅರ್ಪಣೆ ಮಾಡುವನು. ಶಿವನು ಅದನ್ನು ಬಾಯೆಂಜಲ ಮಾಡಿ: ಆ ಶಿವಭಕ್ತ, ಅಂಬಲಿಯನ್ನುಂಡಿದ್ದರೂ ತೃಪ್ತಿಯಾಗಿರಲಿಲ್ಲ. ಉಳಿದುದನ್ನು ಶಿವಶರಣ ಚೆನ್ನಯ್ಯನು ಲಿಂಗಾರ್ಪಿತ ಪ್ರಸಾರವೆಂದು ಸ್ವೀಕರಿಸಿ ಸೇವಿಸಲು ದ್ಯುಕ್ತನಾಗುವನು.

ಉಳಿದ ಅಂಬಲಿ ಚೆನ್ನ, ತುಳಿಗೆಯನೆ ಬಾಯ್ಗಿಡಲು
ತಳಿಗೆಯೊಳು ಶಿವನು ಕೈಹಾಕಿ, ಸುರಕೊಂಡ
ಒಳೆಸುಖವು ಮಿಗಿಲೆ ಶಿವಲೋಕ ॥೪೨॥ -ಮೊ-ಚೆ-

ಮರೆಯಲಸಾಧ್ಯವಾದ ಚಿತ್ರವಿದು! ಶಿವಭಕ್ತ ಚೆನ್ನಯ್ಯನು ಅಂಬಲಿಯನು ಕುಡಿಯಲು ಬಾಯಿಗೆ ತಳಿಗೆಯನ್ನೊಯ್ಯುತ್ತಾನೆ; ಕುಡಿಯಲು ಪ್ರಾರಂಭಿಸಲು, ಶಿವನು ಆ ತಳಿಗೆಯಲ್ಲಿ ಕೈಹಾಕಿ ಅಂಬಲಿಯನ್ನು ಸುರಿದುಕೊಳ್ಳುವ ಚಿತ್ರವು, ಭಕ್ತಿರಸವು ಹೆಪ್ಪಾಗಿ ಇಲ್ಲಿ ಚಿತ್ರಿತವಾಗಿ ಎಂದೇ ಹೇಳಬಹುದು. ಕವಿಯು ಆ ಚಿತ್ರವನ್ನು ಕಂಡು ಭಕ್ತಿಭಾವದಲ್ಲಿ ಮೈಮರೆತು

ಅಂಬಲೆಯೊ, ಅಮೃತವೊ, ತಂಭುರಹ ನೆಂಜಲವೊ
ಹಂಬಲಿಸಿ ಹರನು ಉಣ್ಣುವುದೋ ಶರಣನಿಗೆ
ನಂಬಿ ಶಿವ ಕೊಟ್ಟ ಶಿವಪದವೊ ॥೪೩॥ -ಮಾ-ಚೆ-

ಎಂದು ಶಿವೋದ್ಗಾರವನ್ನೇ ತಗೆದುಬಿಟ್ಟಿದ್ದಾನೆ. ಇಲ್ಲಿ ಎಲ್ಲವೂ ಶುಚಿಯಾಗಿ ಬಂದಿದೆ.

ಮುಂದಿಟ್ಟ ಅಂಬಲಿಯ, ಹೊಂದಿ ಶಿವ ಕುಡಿಯುತಲಿ
ವಂದಿಸುತ ಚೆನ್ನ ಲೋಲಾಡಿ, ದಿನಗಳೆದ
ಅಂದದಲಿ ಉಂಡು ಶಿವನೊಡನೆ ॥೪೪॥ -ಮಾ-ಚೆ-

ಚೆನ್ನಯ್ಯನು ಶಿವನೊಡನೆ ಉಂಡು ಶಿವಪ್ರಸಾದದಲ್ಲಿ ಲೋಲಾಡಿದನೆಂದು ಕವಿಯು ಆ ಪ್ರಸಾದದ ಮಹತ್ವವನ್ನು ಹಾಡಿದ್ದಾನೆ. ಅಮರ ಕವಿ ಹರಿಹರನು ಈ ಸನ್ನಿವೇಶವನ್ನೂ ಚಿತ್ರಿಸಿದ್ದಾನೆ:

ಲಿಂಗಾರ್ಪಿತಂ ಮಾಡಿ, ಚೆನ್ನಯ್ಯನೊಲವಿಂದೆ
ಅಂಗೈಸಿ ಲಿಂಗ ಪ್ರಸಾದಕ್ಕೆ ನಲವಿಂದೆ
ಮನವಿಟ್ಟು ಕಯ್ಯಿಟ್ಟು ಮೊಗದನಾನಂದದಿಂ
ಮನಮೊಲ್ದು ಭಕ್ತಿರಸಮಮಂ ಮೊಗೆವ ಚಂದದಿಂ
ಮೊಗೆದು ಕೈಕೊಳ್ವಲ್ಲಿ ಸವಿಜಿಹ್ವೆಯಂ ಮುತ್ತಿ
ಬಗೆಯೊಳ್ಳಿವಾರ್ಪಿತಂ ಒಡನೊಡನೆ ಬೆಂಬತ್ತೆ
ಮಧುರಾಮ್ಲರುಚಿಯ ಸುಖ ಶಿವಲಿಂಗಮಂ ತಾಗೆ
ಸುಧೆಯ ಕಡು ಸವಿಯಿಂದೆ ನೂರ್ಮಡಿಸಿ ಸವಿಯಾಗೆ
ಸವಿದು ತಣಿವೆಯ್ದಿಸಲೆ ಗುರುಮೂರ್ತಿಯುರವಣಿಸಿ
ಸವಿಸಹಿತ ವಂಬಿಕಳವೆಲ್ಲವಂ ಲವಲವಿಸಿ
ಕೊಂಡನೇನೆಂಬೆನಾಂ ಚೆನ್ನಯ್ಯನೊಂದಾಗಿ
ಉಂಡನಭವಂ ಸ್ವರ್ಗ ಮರ್ತ್ಯಕ್ಕೆ ಪೊಸತಾಗಿ ॥"

ಎಂದು ತನ್ನ ಸ್ಫಟಿಕ ಶೈಲ (Crystal like style)ಯಲ್ಲಿ ಹೇಳಿದ್ದಾನೆ. ಹೀಗೆ ಗುಪ್ತ ಭಕ್ತನನ್ನು, ಜಗಕ್ಕೆ ತಿಳಿಸಲು ಶಿವನು ತನ್ನೆಡೆಗೆ ಬರಮಾಡಿಕೊಳ್ಳುವನು. ಕರಿಕಾಲ ಚೋಳನು, ಶಿವನಿಂದ ಮಾದರ ಚೆನ್ನಯ್ಯನ ಗುಪ್ತ ಭಕ್ತಿಯನ್ನರಿತ ಸನ್ನಿವೇಶವನ್ನಂತೂ ಜಾನಪದ ಕವಿಯು ಬಲುಹೃದಯಂಗಮವಾಗಿ ಚಿತ್ರಿಸಿದ್ದಾನೆ. ಚೋಳನು ಮೃಷ್ಟಾನ್ನ ಮಾಡಿಸಿ ಶಿವನಿಗೆ ಉಣಬಡಿಸಲು, ಅವನು ಉಣ್ಣದೆ ಸುಮ್ಮನಿರಲು, ಚೋಳನು ತನ್ನ ಪ್ರಾಣವನ್ನರ್ಪಿಸಹೋಗಲು ಶಿವನು ಪ್ರತ್ಯಕ್ಷನಾಗುವನು. ಈ ದೃಶ್ಯವನ್ನು ಈ ಹಳ್ಳಿಯ ಕಬ್ಬಿಗನು ಬಲು ಕುಶಲತೆಯಿಂದ ಚಿತ್ರಿಸಿದ್ದಾನೆ.

ಒರೆಯ ಕತ್ತಿಯ ಚೋಳ, ಹಿರಿದು ಕತ್ತಿಗೆ ಇಡಲು
ಕೊರಳ ಶಿವಲಿಂಗ ಕೈಹಿಡಿದು । ಎಲೆಚೋಳ
ತರವಲ್ಲ ಹತ್ಯ ಭಕ್ತನಿಗೆ ॥೫೯॥ -ಮಾ-ಚೆ-

ದೇವರು 'ಸರ್ವವ್ಯಾಪಿ' (Omni present) ಎಂಬದನ್ನರಿತ ಈ ಕವಿಯು ಶಿವಭಕ್ತಿಯ ಸತ್ವಪರೀಕ್ಷೆಯನ್ನು ತೋರಿಸುವಲ್ಲಿಯೇ ನಾಟಕೀಯತೆಯ ನಿಪುಣತೆಯಿಂದ ಪರಿವರ್ತನ ದೃಶ್ಯವನ್ನು ಹುಟ್ಟಿಸಿ ಶಿವನನ್ನು ಕೊರಳ ಲಿಂಗದಲ್ಲಿ ಎದ್ದುನಿಲ್ಲಿಸುತ್ತಾನೆ. ಕಾಂಚಿಯ ಶಿವಲಿಂಗದ ಗುಡಿಯಲ್ಲಿ ಶಿವಲಿಂಗದ ಎದುರಿನಲ್ಲಿ ಈ ಪ್ರಸಂಗ ಸಂಭವಿಸುವುದು. ಶಿವಲಿಂಗ ಪೀಠದಿಂದ ಶಿವನು ಎದ್ದುಬರುವುದು ತಡವಾಗುವುದೆಂದು ಕವಿಯು ತಿಳಿದು ಕತ್ತಿಗೆ (Neck), ಕತ್ತಿ (Sword)ಯನ್ನಿಟ್ಟ ಕರಿಕಾಲ ಚೋಳನ ಕೊರಳಲಿಂಗವೇ ಶಿವರೂಪ ತೊಟ್ಟು ನಿಲ್ಲುವಂತೆ ಮಾಡಿದ್ದಾನೆ. ಅಷ್ಟು ತ್ವರಿತನಿದ್ದಾನೆ ಕವಿ ದೃಂಶ್ಯಾಂತರಗಳನ್ನು ಚಿತ್ರಿಸುವುದರಲ್ಲಿ !

ಹೀಗೆದ್ದ ಶಿವನು:

ತಡೆಚೋಳ ಭಿಡೆಬೇಡ; ಒಡಲೂಟ ಉಂಡಿಹೆನು
ಬಡವ ಚೆನ್ನಯ್ಯನೊಡ ಗೂಡಿ । ಅಂಬಲಿಯ
ಕಡುಮಾತು ಹಸಿವೆ ಹಿಂಗಿಹುದು ॥೬೧॥ --ಮಾ-ಚೆ-

'ಶಿವನುಂಡ ಚೆನ್ನಯ್ಯ ಶಿವಭಕ್ತ ನೆಲ್ಲಿಹನು' ಎಂದ ಚೋಳನು ಮಾದರ ಚೆನ್ನಯ್ಯನನ್ನು ಹುಡುಕಿಸಿ, ಭಕ್ತಿಯಿಂದವನಿಗೆ ಸಾಷ್ಟಾಂಗವೆರಗಲು

ನಡುಗುತಲಿ ಚೆನ್ನಯ್ಯ, ಉಡುಗುಡುಗಿ ಮನದೊಳಗೆ
ಬಿಡುಅರಸಕಾಲ ನಿನ್ನಾಣೆ, ಎನ್ನಾಣೆ
ಹಡದಪ್ಪನಾಣೆ ಶಿವನಾಣೆ ॥೬೯॥ -ಮಾ-ಚೆ-

ಎಂದು ಹಸನ ಮನಸ್ಸಿನ ಭಕ್ತನು ಅರಸನಿಗೆ ಬೇಡಿಕೊಳ್ಳುತ್ತಾನೆ.

ಗುಪ್ತ ಭಕ್ತಿಯು ಶಿವನೆ, ಮುಕ್ತಿಗಾರುತಿ ಬೆಳಕು
ಚಿತ್ತ ಮನಗಂಡು ಕಾಣುದಕೆ । ಮುನ್ನವೇ
ಎತ್ತ ಬಯಲಾತೊ ಶಿವಶಿವನೆ ॥೭೨॥ -ಮಾ-ಚೆ-

ಹೀಗೆ ಚೆನ್ನಯ್ಯನು ಚಿಂತಾಕ್ರಾಂತನಾಗುವನು. ಶಿವಲಿಂಗ ಗುಡಿಯನ್ನು ಹೊಕ್ಕ ಮಾದರ ಚೆನ್ನಯ್ಯನು ಉದ್ವಿಗ್ನನಾಗಿ,

ಶಿವಲಿಂಗ ಕಾಣುತಲಿ, ಶಿವನೆಂದು ಚೆನ್ನಯ್ಯ
ಅನಸರದಿ ಹೊಕ್ಕ ಗುಡಿಯನ್ನು । ಕೇಳಿದನು
ಶಿವ ನಿನಗೆ ತರವೆ ಈ ಆಟ ॥೮೧॥

ಹಿಡಿಸೆನ್ನತರಿಸಿದರಿ, ಒಡೆಯ ಚೋಳನ ಗೂಡ
ಕಡುಮಾತು ಕೇಳು ಮಾಡಿರುವ । ಅಪರಾಧ
ಬಡಭಕ್ತನಾಗಿ ನಾನಿದ್ದೆ ॥೮೨॥

ಬೇಡಿಲ್ಲ ಪದವಿಯನು, ಕಾಡಿಲ್ಲ ಕೊಡದಿರಲು
ಮಾಡಿ ಶಿವಭಕ್ತ ಅರಿಯದಲೇ । ನಾನಿದ್ದೆ
ಕೇಡು ಜನಕೇಳಿ ನಾನಿರಲೆ ॥೮೩॥
ಉಡಗುವದೆ ಶಿವಭಕ್ತಿ, ಅಡಗುವದೆ ಶಿವ ಬೆಳಕು
ನಡಗುವನೆ ಹೇಳು ಶಿವಶರಣ । ಧರೆನಡುಗಿ
ಮಡುಗಿದರೆ ಇರುವ ಶಿವಲಿಂಗ ॥೮೪॥

ಇದೆ ಕೊಳ್ಳು ಶಿವನನ್ನ, ಹದವಾದ ಶಿವಭಕ್ತಿ
ಎದೆ ಮಾತು ಎಂದು ಕಂಬಕ್ಕೆ । ತಲೆಗೊಡಲು
ಸದರು ಝುಗಝುಗಿಸಿ ಶಿವನೆದ್ದು ॥೮೫॥ -ಮಾ-ಚೆ-

---

೫. ಹಳಕಟ್ಟಿಯವರ 'ಹರಿಹರನ ರಗಳೆಗಳು', ಭಾಗ ೩, ಮಾದರ ಚೆನ್ನಯ್ಯ ಪು. ೩೪.

ಎಂದು ಜಾನಪದ ಕವಿಯು ಶಿವಶರಣ ಮಾದರ ಚೆನ್ನಯ್ಯನ ಅಸಮಾನ್ಯ ಶಿವಭಕ್ತಿಯನ್ನು ಕುಂದುಬಾರದಂತೆ ಚಿತ್ರಿಸಿದ್ದಾನೆ. ಕವಿಗೆ ತನ್ನ ಮಾತಿನಲ್ಲಿ ಮನೋವ್ಯಾಪಾರದ ಆಳವಾದ ಅನುಭವವಿದೆ. ಆ ಅನುಭವಕ್ಕೆ ಹೊಂದಿ ಭಾವ ಭಾಷೆಗಳ ಜೋಡಣೆಯು ಬಂಗಾರಕ್ಕೆ ಕುಂದಣ ವಿಟ್ಟಂತೆ ದೇದೀಪ್ಯ ಮಾನವಾಗಿದೆ. ಹೀಗೆ ಹಾಡುವುದರಲ್ಲಿ ಕವಿಯು ಶಿವಭಕ್ತರು ಡಾಂಭಿಕರಲ್ಲೆಂಬ ಧ್ವನಿಯನ್ನೂ ಇಲ್ಲಿಟ್ಟಿದ್ದಾನೆ. ಶಿವಶರಣರನ್ನು ಒರೆಗೆ ಹಚ್ಚುವ ಇದೇ ಮಾದರಿಯ ಇನ್ನೊಂದು ಸನ್ನಿವೇಶವನ್ನು ಈ ಜಾನಪದ ಕವಿಯ 'ಮೇದಾರ ಕೇತಯ್ಯ'ನ ಹಾಡಿನಲ್ಲಿ ಕಾಣಬಹುದಾಗಿದೆ. ಶಿವನು ಶಿವಭಕ್ತರನ್ನು ಒರೆಗೆ ಹಚ್ಚಲು ಪರಿಪರಿಯಿಂದ ಕಾಡುವುದನ್ನು ಕಂಡ ಪಾರ್ವತಿಯು ಶಿವನಿಗೆ

ನೋಡಲಾರದೆ ಭಕ್ತಿ, ಕಾಡುವಿರಿ ಶರಣರನು
ಈಡೇನು ನಿಮ್ಮ ಶರಣರಿಗೆ। ಜಗದೊಳಗೆ
ಪೀಡಿಸಲು ಪೀಕಹೊಂದುವರು ||೪೬|| *-ಮೇ-ಕೇ-*

ಹೊನ್ನುಕಾಸಲು ಮತ್ತೆ, ಕನ್ನೆ ಕಳೆ ತುಂಬುವದು
ಚಿನ್ನ ಕಾದಂತೆ ಶಿವಭಕ್ತಿ। ಕರೆಯುವದೆ
ಕನ್ನಡಿಯು ಜನಕೆ ನೋಡೆಂದು ||೪೭|| *-ಮೇ-ಕೇ-*

ಎಂಬೀ ಮಾತುಗಳು ಲೋಕಾನುಭವದ ತಿರುಳೇ ಆಗಿವೆ.

ಹರಿಹರನು ತನ್ನ ಮಾದರ ಚೆನ್ನಯ್ಯನ ರಗಳೆಯಲ್ಲಿ ಜಾನಪದ ಕವಿಯು ಚಿತ್ರಿಸಿದ ಚಿತ್ರವನ್ನೂ ಚಿತ್ರಿಸಿದ್ದಾನೆ:

ಕಂಡು ಚೆನ್ನಯ್ಯನಭವಂಗೆ, ನೆರೆಮುಳವುತುಂ
ಕಂಡಯ್ಯ ನೀನಿಂತು ದೂರುವರೆ ಪೇಳುತುಂ
ಚೋಳನಿಂ ಪಿಡಿಸಿ ತರಿಸಿಲ್ತಪ್ಪು ಮಾಡಿದೆನೆ
ಪೇಳಯ್ಯ ನಿಮ್ಮಲ್ಲಿ ಪದವಿಯಂ ಬೇಡಿದೆನೆ
ಅರಿಯ ದಂಬಲಿಯ ನರ್ಪಿಸಿ ದೊಡಂತಿರಿವರೇ
ಹೆರೆಸೂಡಿದನೆ ತೋರಿ ಮಾರಿ ನೆರೆದೂರುವರೆ
ಮೇದಿನಿಗೆ ಬೀರಿ ಗರುವಾಯಿತೆನ್ನಯ ಭಕ್ತಿ
ವಾದಕ್ಕೆ ಹರವೆಯಂ ತಂದಿಕ್ಕಿತೀ ಭಕ್ತಿ
ಇನ್ನಿಳೆಯೊಳರೆನೆನುತ್ತಲೆ ಭಾಷೆಯಂ ಮಾಡೆ
ಚನ್ನಯ್ಯನಂ ದಂಗ ತಿಳ್ತು ಕೊರಳೊಲ್ಪೊಡೆ
ಶಿವಲಿಂಗದಿಂದ ಶಿವ ಬಂದು ಕರವಂ ಪಿಡಿದು
[೬]ಅವಿಚಾರದಿಂದಿಂತು ಮೊಳ್ಪರೇ ನೀನರಿದು *-ಹ-ಮಾ-ಚ*

ಇಲ್ಲಿ ಶಿವಭಕ್ತನಾದ ಚೆನ್ನಯ್ಯನು ಅಲಗಿನಿಂದ ಕೊರಳನ್ನು ಕೊಯ್ದುಕೊಳ್ಳುವುದು ಶಿವಭಕ್ತನಿಗೆ ಉಚಿತವೆನಿಸುವುದಿಲ್ಲ. ಜಾನಪದ ಕವಿಯು ಈ ಪ್ರಸಂಗವನ್ನು ಭಕ್ತನ ಮೈಯ್ಯಲ್ಲಿ ಭಕ್ತಿಯ ಆವೇಶವನ್ನು ತುಂಬಿಸಿ ಶಿವಾಲದಯ ಕಂಬಕ್ಕೆ ಚೆನ್ನಯ್ಯನು ತಲೆಯನ್ನು ಹಾಯಿಸಿದನೆಂದು ಹೇಳಿದ್ದಾನೆ. ಹರಿಹರನ ಕೆಲವು ವಿಚಾರಗಳೂ, ಜಾನಪದ ಕವಿಯ ಕೆಲವು ವಿಚಾರಗಳೂ ಈ ಸಂದರ್ಭದಲ್ಲಿ ಒಂದಕ್ಕೊಂದು ಹೋಲಿಕೆ ಯಾಗುವುವು. "All great men think alike" ಎಂಬಂತೆ ಈ ಜಾನಪದ ಕವಿಯ ವಿಚಾರಗಳು ಹರಿಹರನ ವಿಚಾರಗಳನ್ನು ಹೋಲುವುದರಲ್ಲಿ ತಪ್ಪೇನು?

ಈ ಜಾನಪದ ಕವಿಯ ಬಿಜ್ಜಮಹಾದೇವಿಯ ಹಾಡನ್ನೋದಿದ ತಾಯಿಯು ಆದರ್ಶ ತಾಯಿಯಾಗುವಳು. ಹಾಡಿನಲ್ಲಿ ಬರುವ ತಾಯಿಮಕ್ಕಳ ಲಾಲನ-ಪಾಲನ ಚಿತ್ರಗಳು ಹೊನ್ನಮ್ಮನ ಹಡಿಬದೆಯ ಧರ್ಮವನ್ನು ಮಿಕ್ಕುವುವು. ಬಿಜ್ಜಮಹಾದೇವಿಗೆ, ಶಿವನು ಪರದೇಶಿ ಎಂಬದನ್ನು ಕೇಳಿ ಅವನ ತಾಯಿಯಾಗಬೇಕೆಂಬ ಬಯಕೆಯು ಹೆಚ್ಚುತ್ತದೆ. ಅವನು ಅವಳ ಮನಸ್ಸನ್ನು ಪರೀಕ್ಷಿಸಲು ಶಿಸುವಾಗಿ ಅವಳ ತೊಡೆಯ ಮೇಲೆ ಚೀರ ಹತ್ತಲು:

ಏಳುಸೂರರ ಬೆಳಕ, ಹೇಳಿ ಹೀಯಾಳಿಸಿತು
ಭಾಳ ಲೋಚನನ ಶಿಸುರೂಪ। ಶಿವಶರಣೆ
ತಾಳಿ ತಾಯ್ತನವ ಹಾಲುಣಿಸಿ ||೨೬|| *-ಬಿ-ಮಾ-*

ಅವಳಿಗೆ ತಾಯ್ತನವು ತುಂಬುತ್ತದೆ. 'ಭವಹರನ ಎತ್ತಿ ಮುದ್ದಾಡಿ', 'ತಪ್ಪದಲೆ ಶಿವನ ಮುದ್ದಿಟ್ಟು', 'ಕಪ್ಪು ಕಾಡಿಗೆ ಮಾಡಿ, ಅಪ್ಪಿ ಮಗುವಿಗೆ ಹಚ್ಚಿ' ಮೊದಲಾದ ನುಡಿಗಳು ತಾಯ್ತನದ ಬೆಳ್ನುಡಿಗಳಲ್ಲವೇ? ಕೂಸಿಗೆ ನಾಮಕರಣ ಮಾಡುವ ವಿಧಾನವು ವೀರಶೈವ ಶಿವಾಚಾರದಂತೆ ಇಲ್ಲಿ ವರ್ಣಸಲ್ಪಟ್ಟಿದೆ. ವಿಶೇಷವಾಗಿ ಬ್ರಾಹ್ಮಣರನ್ನು ಬಿಟ್ಟು ಬಹುಜನ ಹಳ್ಳಿಗರು ಇದನ್ನೇ ಪಾಲಿಸುತ್ತ ಬಂದಿದ್ದಾರೆ. ಕೂಸಿಗೆ ಹೆಸರಿಡಲು ಕರೆಯಲು, ಬಂದ ಹೆಣ್ಣುಮಕ್ಕಳನ್ನು ಕವಿಯು ಸನ್ನಿವೇಶಕ್ಕೆ ಬಲು ಒಪ್ಪುವಂತೆ ವರ್ಣಿಸಿದ್ದಾನೆ. ಸೌಂದರ್ಯ ಪ್ರಿಯನಾದ ಕವಿಯು

---

೬. ಹಳಕಟ್ಟಿಯವರ 'ಹರಿಹರನ ರಗಳೆಗಳು'. ಭಾಗ ೩, ಪು. ೪೦.

ವರ್ಣನೆಗಳೌಚಿತ್ಯವನ್ನರಿತು ಅವು ಬೇಕಾದಾಗ ಮಾತ್ರ ಅವುಗಳನ್ನು ತರುತ್ತಾನೆ. ವರ್ಣನೆಗಳು ಕೇವಲ ಪದ್ಧತಿಯಂತೆ ಬಂದರೆ ಅವನು ನಿಜವಾದ ಕವಿಯಾಗಲಾರ. ಈ ಜಾನಪದ ಕವಿಗೆ ನಿಸರ್ಗಸೌಂದರ್ಯದಲ್ಲಿ ನಿಜವಾದ ಪ್ರೇಮವಿದೆ; ಆ ಸೌಂದರ್ಯವನ್ನು ಮನಸೆಳೆಯುವ ರೀತಿಯಲ್ಲಿ ಚಿತ್ರಿಸುವ ಒಂದು ಭವ್ಯಶಕ್ತಿಯೂ ಅದೆ:

ಸಿಂಗಾರವುಟಗೊಂಡು, ಸಿಂಗಾರವಿಟಗೊಂಡು
ಹೆಂಗಳೆಯರಾಗ ನಲಿನಲಿದು, ಅರಮನೆಯ
ಸಿಂಗಾರ ಸಾಲೆ ತುಂಬಿದರು ॥೩೫॥ –ಬಿ–ಮ–

ಕಥೆಯೋಟವನ್ನರಿತ ಆ ಕವಿಯು ಹೆಣ್ಣುಮಕ್ಕಳ ಅವಯವಗಳ ವರ್ಣನೆ ಮಾಡದೆ, ವಿವಿಧಾಲಂಕಾರಗಳನ್ನೂ, ಸಿಂಗಾರಗಳನ್ನು ಬಣ್ಣಿಸುವ ಗೋಜಿಗೆ ಹೋಗದೆ ಹೇಳಬೇಕಾದದ್ದನ್ನು ಪರಿಪೂರ್ಣವಾಗಿ ಒಂದೆರಡು ಮಾತಿನಲ್ಲಿಯೇ ಹೇಳಿಸಾಧಿಸಿದ್ದಾನೆ. ರನ್ನ ಮುತ್ತಿನ ಹಗ್ಗದ ಹೊನ್ನ ತೊಟ್ಟಿಲ ಕಟ್ಟಿ ನೆರೆಮನೆಯ ರಮಣಿಯರು, ಹಿರಿಮನೆಯ ಚೆನ್ನೆಯರು, ಊರ ಮುತ್ತೈಯ್ದೆ ಮುದುಕಿಯರು ರನ್ನಗಂಬಳಿಗೆ ಶಾಸಕ್ಕಿಯನ್ನು ಬರೆದು ತಾಯಿ ಮಹಾದೇವಿಯನ್ನು ಆ ಕಂಬಳಿಯ ಮೇಲೆ ಕೂಡ್ರಿಸಿ ಶಾಸಕ್ಕಿ ಎತ್ತುವ ಚಿತ್ರವನ್ನು ತಾಯಾಗುವ ಯಾವ ಹೆಣ್ಣು ಬಗೆಸಲಿಕ್ಕಿಲ್ಲ? ಅವಳಿಗೆ ರನ್ನಗಳಸದ ಚಿನ್ನದಾರುತಿಯ ಮಂಗಲವನ್ನೆತ್ತಿ, ಕೂಡಿದವರು ಕೂಸನ್ನು ಸಿಂಗಾರ ಮಾಡುತ್ತಾರೆ. ಮುದ್ದು ಕೂಸಿನ ಸಿಂಗಾರವು ತಾಯಿಗೆ ಎಷ್ಟು ಮಾಡಿದರೂ ಕಡಿಮೆಯೆ! ಅವಳು ಸಕಲವನ್ನು ಮರೆತು ಆ ಮಗುವಿನ ಸಡಗರದಲ್ಲಿಯೇ ಲೀನಳಾಗುವಳು. ಕೂಡಿದ ಹೆಂಗಳೆಯರಿಗೆ ಮಗುವನ್ನು ಮತ್ತಿಷ್ಟು ಸಿಂಗಾರ ಮಾಡುವ ಆನಂದ.

ಬೆರಳಿಗುಂಗರವಿಡಿಸಿ, ಕೊರಳಪದಕವ ಹಾಕಿ
ಸಿರಪೇಟು ತಲೆಗೆ ವಜ್ರದು। ಉಡದಾರ
ವರಮುತ್ತಿನೆಳೆಯ ಕಟ್ಟಿದರು ॥೪೦॥ –ಬಿ–ಮ–

ಹೀಗೆ ಸಿಂಗಾರ ಮಾಡಿದ ಕೂಸನ್ನು ನಾನಾ ರೀತಿಯಿಂದ ಕರೆಕರೆದು ಮುದ್ದಿಟ್ಟು ತೊಟ್ಟಿಲಕ್ಕೆ ಹಾಕುವ ಹೆಣ್ಣುಮಕ್ಕಳು ಸುತ್ತಲೂ ನಿಂತು ಜೋಯಂದು ಜಕ್ಕಲಿಸುತ್ತಿರಲು ಕೂಸು ತೊಟ್ಟಲಿನಲ್ಲಿ ಆಡುವುದನ್ನು ಕವಿಯು ದಿಟ್ಟಿಯು ನಡುವಂತೆ ಚಿತ್ರಿಸಿದ್ದಾನೆ:

ತೊಟ್ಟಿಲದ ಸರಪಳಿಯ, ಬೊಟ್ಟು ಕುಂಕುಮದವರು
ಒಟ್ಟಾಗಿನಿಂತು ಜೋಯೆಂದು, ಗಲ್ಲಿಸಲು
ಬೊಟ್ಟೆತ್ತಿ ಶಿವನು ಆಡಿದನು ॥೪೨॥ –ಬಿ–ಮ–

'ಬೊಟ್ಟೆತ್ತಿ ಶಿವನು ಆಡಿದನು' ಎಂಬ ಮಾತುಗಳು ಎಷ್ಟು ಉಚಿತವಾದ ಕೂಸಿನ ಚಿತ್ರವಾಗಿದೆ! ಕವಿಯು ಬಾಲಲೀಲೆಯನ್ನನುಭವಿಸಿ ಕಣ್ಣಾರೆ ಕಂಡದ್ದನ್ನು ಈ ಚಿತ್ರದ ಮುಖಾಂತರ ಒಡನುಡಿಸಿದಂತೆ ಕಾಣುತ್ತದೆ.

ಮುತ್ತಿನಾಕುಂಚಿಗಿಗೆ, ಒತ್ತಿಕುಸುರನು ತಗೆದು
ಸುತ್ತ ಮಣಿಕಟ್ಟ ಹೆಣದಿರುವ। ಹೊದಿಕೆಯೊಳು
ಬತ್ತಲೆಯ ಚಂದ್ರ ಕೂಸೇನೊ ॥೪೧॥ –ಬ–ಮ–

ಏನು ರಮ್ಯವಾದ ಕೂಸಿನ ಚಿತ್ರ! ಏನು ಉದಾತ್ತವಾದ, ಉಚಿತವಾದ ಕವಿಯ ಕಲ್ಪನೆ! ಒತ್ತಿ ಕುಸುರನ್ನು ತೆಗೆದ ಮುತ್ತಿನ ಕುಂಚಿಗೆಯನ್ನು ಕಟ್ಟಿಕೊಂಡು ಸುತ್ತು ಮಣಿಕೆಚ್ಚಿ ಹೆಣದಿರುವ ಹೊದಿಕೆಯಲ್ಲಿ ಕೂಸು ಮಲಗಿದೆ. ಆ ಕೂಸನ್ನು ಕಂಡು ಕವಿಯು, ತಾರೆ, ನಕ್ಷತ್ರ, ಗ್ರಹಗಳ ಗುಂಪಿನಲ್ಲಿ ಬೆಳೆಯುವ ಬತ್ತಲೆಯ ಚಂದ್ರೆಂದು ಅನುಮಾನಿಸಿದ್ದಾನೆ. ಕೂಸನ್ನು 'ಬತ್ತಲೆಯ ಚಂದ್ರ'ನೆಂದು ಕರೆಯುವುದು ಎಷ್ಟು ಯಥಾರ್ಥವಾಗಿದೆ? ಜಾನಪದ ಕಾವ್ಯಮಾಲೆಯ 'ನಾಲ್ಕು ನಾಡಪದಗಳು' ಎಂಬ ಸಂಕಲನದ ಮುನ್ನುಡಿಯಲ್ಲಿ, ಪ್ರೊ. ವ್ಹಿ.ಜಿ. ಕುಲಕರ್ಣಿ ಅವರು ಈ ಪದ್ಯವನ್ನು ಕುರಿತು "ಈ ಪದ್ಯವನ್ನು ಕುರಿತು ನಾವು ವಿಚಾರ ಮಾಡುತ್ತ ಹೋದಂತೆ ಅದರ ಅರ್ಥದ ವಿಶಾಲತೆಯೂ, ಸುಭಗತೆಯೂ ನಮ್ಮ ಮನಸ್ಸಿಗೆ ಹೆಚ್ಚುಹೆಚ್ಚು ಹೊಳೆಯುತ್ತ ಹೋಗುತ್ತದೆ. ಪದ್ಯದ ರಮಣೀಯತೆಯ ವಿವಿಧ ಸ್ವರೂಪಗಳನ್ನುಎತ್ತಿ ತೋರಿಸುವ ಗೋಜಿಗೆ ಹೋಗದೆ ವಾಚಕರೇ ಅದರ ಅರ್ಥವನ್ನು ನಿದಿಧ್ಯಾಸ ಮಾಡಿ ಪದ್ಯವನ್ನು ಮೆಲಕು ಹಾಕುತ್ತ ಅದರ ಸೌಂದರ್ಯವನ್ನು ಸವಿಯಬೇಕೆಂದು ಬೇಡಿಕೊಳ್ಳುತ್ತೇನೆ" ಎಂದು ನುಡಿದಿದ್ದಾರೆ. ಚಿತ್ರಣ ಶಕ್ತಿಯ ಇಷ್ಟು ಪಳಗಿದ ಕೈಯಾಗಿದೆ ಈ ಜಾನಪದ ಕವಿಯದು :

ತಾಯಿ ಬಳ್ಳಿಗೆ ಹೇಳು, ಕಾಯಿ ಹೂಗಳ ಭಾರೆ
ಭಾಯೆ ನಿನಭಾರ ನನಗುಂಟೆ। ಮಗುವಾಗು
ತಾಯಾಗಿ ನಗುವೆ ಶಿವಲಿಂಗ ॥೧೯॥ –ಬಿ–ಮ–

ಎಂಬ ಮಹಾ ತತ್ವದರ್ಶನವನ್ನರಿತ ಕವಿಯು ತಾನೇ ತಾಯಾಗಿ ಹಾಡಿದ್ದಾನೆ. ಹಾಡಿನಲ್ಲಿ ತಾಯಿಯು ಕೂಸನ್ನು ಮಾದಾರಿಯ ತಾಯಿ ಆಗಿ ಆರೈಕೆ ಮಾಡಿದ್ದಾಳೆ. 'ತಾಯಿಯ ಮಾಯೆ ದೊಡ್ಡದೆಂಬಂತೆ' ಕೂಸೇ ತನ್ನ ಸಕಲ ಸಂಪತ್ತೆಂದೂ, ಜೀವಾಳವೆಂದೂ, ಜೋಕೆ ಮಾಡಿದ್ದಾಳೆ. ಕವಿಯ ಈ ಚಿತ್ರವನ್ನು ಆಧುನಿಕ ಸ್ತ್ರೀಯರು ನೋಡಿ ಕಲಿಯಬಹುದಾಗಿದೆ.

ಕಣ್ಣದಿಟ್ಟಿಯುನಟ್ಟು, ಸಣ್ಣಾಗಿ ಸೊರಗುವನು
ಮಣ್ಣ ಮೂದಾರಿ ಎಣ್ಣೆಯಲಿ। ಬಿಡದೆರಚಿ
ಕಣ್ಣ ಬಿಡಕೊಂಡು ಇಳದೊಗೆದು ॥೫೯॥

ಮುಟಗಿ ಮೆಣಸಿನಕಾಯಿ, ಚಿಟಗುಪ್ಪ ಕೈಯೊಳಗೆ
ವಟಗುಡುತ ದಿಟ್ಟ ಇಳಿದೊಗೆದು । ಬೆಂಕಿಯಲಿ
ಕಟುಗಾಗಿ ಕಮರಿಹಾರೆಂದು ॥೬೦॥ -ಬಿ-ಮಾ-

ಇಂದು ಸಹ ಕಾಣಬಹುದಾಗಿದೆ ನಾವು ಈ ಚಿತ್ರವನ್ನು. ತಾಯ್ತನ ತುಂಬಿದೀ ಚಿತ್ರವು ತಾಯಿಯು ಮಗನ ಮೇಲೆ ತಾಳಿದ ಮಾಯೆಯನ್ನು ಬೀರದಿರದು. ಕೂಸಾದ ಶಿವನು ಬಿಜ್ಜ ಮಹಾದೇವಿಯ ಮುಗ್ಧ ಭಕ್ತಿಯನ್ನು ಒರೆಗೆ ಹಚ್ಚಬೇಕೆಂದು "ನೆವ ತೊಟ್ಟ ನೊಮ್ಮೆ ಬಳಲುತಲಿ" ಎಂದು ಕವಿಯು ಹಾಡಿದ್ದಾನೆ.

ಆರು ತಿಂಗಳ ಕೂಸು, ಚೀರೆ ಬದಲಾಯಿಸಿತು
ಚೀರಿ ಮೈ ಸೆಟಿಸಿ ಕಳೆಗುಂದಿ । ಸೆಟೆ ಬೇನೆ
ತೋರಿಸಿತು ಗುಡ್ಡಿ ಮೇಲೇರಿ ॥೬೧॥
ಕಟವಾಯಿಯೊಳು ಜೊಲ್ಲು, ತಟ ತಟನೆ ಬಲು ಸೋರಿ
ಸೆಟೆ ಬೇನೆ ಹೆಚ್ಚಿ ಹೊಟ್ಟುಬ್ಬಿ । ಒಡೆಯುವದೊ
ಪಟನೆಂದು ಭೀತಿ ತೋರಿಸಿತು ॥೬೫॥ -ಬಿ-ಮ-

ಓಡೋಡುತ್ತ ರೋಗದ ಕೂಸು ಕಣ್ಮುಂದೆ ಬಳಲುವುದೇನೊ ಎಂಬಂತೆ ಉದ್ವಿಗ್ನತೆಯು ಹೆಣ್ಣು ಕರುಗಳಿಗೆ ಕೂಡಲೇ ತುಂಬುವುದು. ಗುಡ್ಡಿ ಮೇಲೇರುವುದೂ ಕಟವಾಯಿಯೊಳು ಜೊಲ್ಲು ತಟತಟನೆ ಸೋರುವುದೂ ಕವಿಯು ಕಂಡು ದುಃಖಿತನಾಗಿ ಚಿತ್ರಿಸಿದ ಚಿತ್ರ, ಭೀಮ ಕವಿಯಾಗಲಿ, ಷಡಕ್ಷರಿಯಾಗಲಿ ಈ ಸನ್ನಿವೇಶವನ್ನು ಹೇಳಿದ್ದರೂ ಅದು ಅಷ್ಟೊಂದು ಚಿತ್ತಾಕರ್ಷಕವಾಗಿಲ್ಲ. ಮಗುವಿಗೆ ಮಾಡಿದ ಔಷಧೋಪಚಾರಗಳನ್ನು ಜಾನಪದ ಕವಿಯು ಬಣ್ಣಿಸಿದಂತೆ ಈ ಕಥೆಯನ್ನು ತಮ್ಮ ಕಾವ್ಯಗಳಲ್ಲಿ ಹೇಳಿದ ಉಳಿದ ಯಾವ ವೀರಶೈವ ಕವಿಯೂ ಪರಿಪೂರ್ಣವಾಗಿ ಹೇಳಿಲ್ಲ.

ಮಂತ್ರಗಾರರು ಊದಿ, ಯಂತ್ರಗಾರರು ಕಟ್ಟಿ
ತಂತ್ರಿಗಳು ಸಲಹೆ ನೀಡಿದರು । ಕೂಸಿಗೆಲೆ
ಮಂತ್ರ ತಂತ್ರಗಳು ಹುಸಿಯಾಗಿ ॥೬೮॥

ಕಾಡಸಿದ್ಧರ ಕೂಡ, ನಾಡ ಬುಡ ಬುಡಕಿಗಳು
ನಾಡಿ ಪರಿಕಿಸಲು ತಿಳಿಯದಲೆ । ಆರೋಗ
ಕಾಡ ಸೇರಿದರು ಹೇಳಿದಲೆ ॥೬೯॥ -ಬಿ-ಮ-

'ರೋಗವರಿಯದೆ ವೈದ್ಯಮಂ ಕಾಗಿಯಾದನು ನೋಡಿ'
'ಸೆಟವಿ ದೇವಿಯ ನೆನೆದು, ಮುಡುಪು ಕಟ್ಟಿದಳೆಂದು'।

ಹೇಗೆ ಮಾಡಿದರೂ ರೋಗವು ಹೆಚ್ಚಾಯಿತು. ಏನೂ ತೋಚದೆ ತಾಯಿಯು ಹೌಹಾರಿದಳು. ಬಿಜ್ಜಮಹಾದೇವಿಯು ಕೂಸಿಗಾಗುವ ಗೋಳನ್ನು ನೋಡಿ ಸಹಿಸಲಾರದೆ, ಎಲ್ಲ ಪ್ರಯತ್ನಗಳು ನಿಷ್ಫಲವಾದ ತಾಯಿಯಂತೆ ಉದ್ವಿಗ್ನಳಾಗಿ ದಿಗ್ಮೂಢಳಾದಳು. ಅವಳಿಗೆ ಇಹಲೋಕದ ಪರಿವೆಯೇ ತಪ್ಪಿತು. ಮಾತಾಡಲು ಸಹ ಬಾರದಷ್ಟು ಅವಳಿಗೆ ದುಃಖವಾಗಿ ಹೋಗುವುದು. ಈ ಸನ್ನಿವೇಶವನ್ನು ಜಾನಪದ ಕವಿಯು ಯಶಸ್ವಿಯಾಗಿ ಚಿತ್ರಿಸಿದಷ್ಟು ಹರಿಹರನಾಗಲಿ ಮತ್ತಾವ ವೀರಶೈವ ಕವಿಯಾಗಲಿ ಚಿತ್ರಿಸಿಲ್ಲ.

ಗೋ! ಹಾರಿದೆನು ಶಿವನೆ, ಛೀ! ಹೋಗಲೀ ಜೀವ
ಭೋ! ಹೇಳೆಂದು ಉಪ್ಪರಗಿ । ಮೇಲಿಂದ
ಹಾ! ಹೋಕಾಲವೆ ಶಿವಲಿಂಗ ॥೭೮॥ -ಬಿ-ಮ-

ಜಾನಪದ ಕವಿಯು ನಿರಕ್ಷರಿಯಿದ್ದರೂ, ಅವನಿಗೆ ಲೋಕಾನುಭಾವವು ತುಂಬ ಇದೆ. ಹೆಣ್ಣಿನ ಮಾನಸಿಕ ಪರಿಣಾಮವನ್ನು ಕವಿಯು ಮಾನಸ ಶಾಸ್ತ್ರಜ್ಞನಂತೆ ಪೂರ್ಣ ಅರಿತುಕೊಂಡು ಅಸಹಾಯ ಸ್ಥಿತಿಯಲ್ಲಿ ಹೌಹಾರಿದ ಹೆಣ್ಣಿನ ಹೃದಯವನ್ನು ಅತಿ ಮಾರ್ಮಿಕವಾಗಿ, ಅರ್ಥಗರ್ಭಿತವಾಗಿ ಚಿತ್ರಿಸಿದ್ದಾನೆ. ಜಾನಪದ ಕಾವ್ಯ ಮಾಲೆಯ 'ನಾಲ್ಕು ನಾಡಪದಗಳು' ಎಂಬ ಸಂಕಲನದ ಮುನ್ನುಡಿಯಲ್ಲಿ ಮುನ್ನುಡಿಗಾರರು "ಇಲ್ಲಿ ಗೋ! ಛೀ! ಭೋ! ಹಾ! ಎಂಬ ಉದ್ಗಾರಗಳನ್ನು ಎಂಥ ಸಮುಚಿತ್‌ವಾದ ರೀತಿಯಲ್ಲಿ ಉಪಯೋಗ ಮಾಡಿದ್ದಾನೆಂಬುದನ್ನು ನಾವು ಗಮನಿಸಬೇಕು. ಈ ಒಂದು ಪದ್ಯದಿಂದ ಆ ತಾಯಿ ಶರಣೆಯ ಉದ್ವಿಗ್ನತೆಯೂ, ಗಾಬರಿಯೂ, ಹೇಗೆ ನಮ್ಮ ಮನಸ್ಸನ್ನು ತಟ್ಟಿ ಚುಚ್ಚುತ್ತವೆ ಎಂಬುದನ್ನು ನೋಡಬೇಕು" ಎಂದು ಹೇಳಿದ್ದಾರೆ. ಇಂಥ ಚಿತ್ರಗಳನ್ನು ನಾವು ಈ ಕವಿಯ ಎಲ್ಲ ಹಾಡುಗಳಲ್ಲಿಯೂ ಕಾಣಬಹುದು. ಕವಿಯು ಬೇಡರ ಕನ್ನಯ್ಯನ ಹಾಡಿನಲ್ಲಿ ಕನ್ನಯ್ಯನ ಭವ್ಯ, ಭಯಾನಕ ರೂಪವನ್ನು ಮೂರೇ ಸಾಲುಗಳಲ್ಲಿ ಚಿತ್ರಿಸಿ ನಮ್ಮೆದುರು ನಿಲ್ಲಿಸುತ್ತಾನೆ.

ಕಣ್ಣುಗುಲಗಂಜೇಸ, ಬಣ್ಣ ಕಾರ್ಮೋಡೇನ
ಚಿನ್ನ ಮೈಕಟ್ಟು ಹುರಿಯೇನು ಕಣ್ಣನಿಗೆ
ಸುಣ್ಣನ್ನು ಮೀಸಿ ಬೇಡಗೇನು ॥೧॥ -ಬೇ-ಕ-

ಹೀಗೆ ಬಂದ ಕನ್ನಯ್ಯನ ರೂಪ ಚಿತ್ರವು ಹೇಗೆ ಅಳಿಸಿಹೋಗಬೇಕು? ಕುಂಬಾರ ಗುಂಡಯ್ಯನ ಹಾಡಿನಲ್ಲಿ ಗುಂಡಯ್ಯನ ಕುಣಿಯುವ ಚಿತ್ರವನ್ನು ನೋಡಿರಿ.

ಮಡಿಕೆಗಳ ಬಾರಿಸುತ, ತೊಡಗಿದ್ದ ಕುಣಿತದೊಳು
ಹೆಡೆಯೆತ್ತ ನಾಗಮಣಿದಂತೆ। ಗುಂಡಯ್ಯ
ತಡೆತಡೆದು ಹೆಜ್ಜೆ ಹಾಕುತಲಿ ॥೩೦॥ *-ಕುಂ-ಗುಂ-*

ಎಷ್ಟು ಸುಂದರವಾಗಿದೆ ಗುಂಡನ ಈ 'ತೋಮಧಿತ್ತಯ್ಯ' ಕುಣಿತದ ಚಿತ್ರ! 'ಹೆಡೆಯೆತ್ತಿ ನಾಗಮಣಿದಂತೆ!' ಎಂಬ ಮಾತಂತೂ ಕುಣಿತದಲ್ಲಿ ಗುಂಡನು ಮಣಿಯುವುದನ್ನು ತಾಳಲಯದೊಡನೆ ತೋರಿಸುವುದು. ಹೀಗೆ ಈ ಕವಿಯ ಎಲ್ಲ ಹಂತಿಯ ಹಾಡುಗಳಲ್ಲಿ ಅಸಾಧಾರಣವಾದ ಚಿತ್ರಣಶಕ್ತಿಯು ಪ್ರದರ್ಶಿಸಲ್ಪಟ್ಟಿದೆ. ಅದನ್ನೋದಿಯೇ ತಣಿಯಬೇಕು.

ರಸಿಕತೆಯು ಮಾನವನ ಒಂದು ಪರಿಪಕ್ವ ಗುಣಧರ್ಮ, ಇದು ಪೋಷಣೆಯಾಗಿ ಬೆಳಗುವುದು ಮಹಾಕಲೆಗಳಿಂದ. ಕವಿಯೂ ಒಬ್ಬ ಮಹಾಕಲೆಗಾರ. ಅವನ ಮಹಾಕಲೆಯೆಂದರೆ ರಸಭರಿತವಾದ ಕಾವ್ಯ. ಕವಿಯು ತನ್ನ ಸ್ವಭಾವ ಜನ್ಯ ಪ್ರತಿಭೆಯಿಂದ ಕಾವ್ಯವನ್ನು ಕಟ್ಟುತ್ತಾನೆ. ಸಕಲಕಲಾ ಸಂಪೂರ್ಣತೆಯು ಅವನಲ್ಲಿ ತುಂಬಿದ್ದರೆ ಕಾವ್ಯವು ಪರಿಪೂರ್ಣತೆ ಹೊಂದುವುದು. ಶಿಲ್ಪಿಗನಾಗಲಿ, ಚಿತ್ರಕಾರನಾಗಲಿ, ಚಿತ್ರವನ್ನು ಕೊರೆಯಬೇಕಾದರೆ, ಇಲ್ಲವೆ ಬರೆಯಬೇಕಾದರೆ, ಕಲೋಪಾಸಕನಾಗಿ ಆ ಚಿತ್ರದ ನಿದಿಧ್ಯಾಸ ಮಾಡಿ, ಅದರ ರೂಪರೇಷಗಳು ತನ್ನ ಅಂತಃಪಟಲದಲ್ಲಿ ಮೂಡಿದ ಮೇಲೆ ಅದನ್ನು ಅವನು ಮೂಡಿಸಬೇಕಾದಲ್ಲಿ ಮೂಡಿಸಬಲ್ಲ; ಚಿತ್ರಿಸಬೇಕಾದಲ್ಲಿ ಚಿತ್ರಿಸಬಲ್ಲ. ರವಿ ಕಾಣದ್ದನ್ನು ಕವಿ ಕಾಣುವನೆಂಬುದನ್ನು ನಾವು ಗಮನಿಸಿದರೆ, ಕವಿಯೂ ಕಲೋಪಾಸಕನಾಗಿ ತನ್ನ ಮಯ್ಯಗಣ್ಣುಗಳನ್ನೆಲ್ಲ ತೆಗೆದು, ನಿಸರ್ಗವನ್ನು ಕಣ್ಣಿಟ್ಟು ನೋಡಿ ಮನನವಾದ ಮೇಲೆ ಅದನ್ನು ತನ್ನ ಕಾವ್ಯದಲ್ಲಿ ಸೃಷ್ಟಿಸುವನು. ನಿಸರ್ಗಕ್ಕೆ ಕಣ್ದೆರದ ಕವಿಗೆ ಮಾತ್ರ ಇಂತಹ ದಿವ್ಯಚಿತ್ರಗಳನ್ನು ಬರೆಯಲು ಸಾಧ್ಯ.

ಭಕ್ತಿಯ ಆವೇಶ

ಶಿವಶರಣರ ಅಗಾಧ ಚರಿತೆಗಳನ್ನು ಕೇಳಿದ ಈ ಹಳ್ಳಿಯ ಕಬ್ಬಿಗನು ಭಕ್ತಿಯಿಂದ ಅವರ ಹಿರಿಮೆಯನ್ನು ಹಂತಿಯ ಹಾಡುಗಳಲ್ಲಿ ಹಾಡಿದ್ದಾನೆ. ಶಿವಭಕ್ತನಾದ ಈ ಕವಿಯು ಅವರ ಚರಿತೆಗಳಲ್ಲಿ ತಲ್ಲೀನನಾದುದರಿಂದ ಹಾಡುಗಳಲ್ಲಿ ಭಕ್ತಿಯ ಆವೇಶವು ತುಂಬೆಲ್ಲ ಹರಿದಿದೆ. ಭಕ್ತಿಯು ಹುಟ್ಟಬೇಕಾದರೆ ನಂಬಿಗೆಯು ಮೊದಲು ಬೇಕು. ನಂಬಿಗೆಯು ಬೆಳೆದು ಅರ್ಪಣೆಯಿಂದ ಪರಿಪಕ್ವವಾಗಿ ಪೂಜ್ಯವಾದರೆ ಭಕ್ತಿಯಾಗುವುದು. ಭಕ್ತಿಯು ತ್ರಿಕರಣಾರ್ಪಿತ ವಿಶ್ವಾಸಪ್ರೇಮ 'ಭಕ್ತಿ', ಇದು ದೇವದೇವತೆಗಳಿಗಷ್ಟೇ ಸಂಬಂಧಿಸಿದ ಶಬ್ದವಲ್ಲ. ಅದು ಬಹುತರವಾಗಿ ಪೂಜ್ಯ ಹಾಗೂ ಮಾನ್ಯ ಶಬ್ದಗಳೊಡನೆ ಕೂಡಿ, ಬಳಕೆಯಲ್ಲಿರುವುದು. ದೇವಭಕ್ತಿ, ಗುರುಭಕ್ತಿ, ದೇಶಭಕ್ತಿ, ರಾಜಭಕ್ತಿ, ಪಿತೃಭಕ್ತಿ, ಮಾತೃಭಕ್ತಿ ಮೊದಲಾದ ಕೂಡುಶಬ್ದಗಳು ಶ್ರೇಷ್ಠ ಉದಾಹರಣೆಗಳು. ಭಕ್ತಿಯು ಅನುಭಾವ ಭಕ್ತಿಯಿರಬಹುದು; ಇಲ್ಲವೆ ಮುಗ್ಧಭಕ್ತಿಯಿರಬಹುದು. ಎರಡೂ ಭಕ್ತಿಗಳ ಗುರಿಯು ಒಂದೇ-ಮೋಕ್ಷಪದವನ್ನು ದೊರಕಿಸುವುದು. ಭಕ್ತಿಯೂ ಒಂದು ಸ್ಥಾಯೀ ಭಾವವೆಂದೇ ಹೇಳಬಹುದು. ಇಲ್ಲಿಯವರೆಗೆ ಲಾಕ್ಷಣಿಕರಾಗಲಿ, ಅಲಂಕಾರಿಕರಾಗಲಿ, ಸ್ಥಾಯೀಭಾವಗಳು ಎಂಟು ಅಥವಾ ಒಂಬತ್ತು ಎಂದು ಒಪ್ಪಿಕೊಳ್ಳುತ್ತ ಬಂದಿದ್ದಾರೆ. ನವರಸಗಳಲ್ಲಿ ಶಾಂತಿರಸವೇ ಕಡೆಯದು. ರಸವಿಮೋಚನೆಯಲ್ಲಿ 'ಭಕ್ತಿರಸದ' ಮಾತನ್ನು ಯಾವ ಅಲಂಕಾರಿಕರೂ ಎತ್ತಿದಂತೆ ಕಂಡು ಬರುವುದಿಲ್ಲ. ಅದನ್ನು ಅವರು ಶಾಂತರಸದಲ್ಲಿ ಅಡಕ ಮಾಡಿಕೊಂಡಿರುವರೆಂದು ತಿಳಿದುಬರುವುದು. ನಮಗೆ ಭಕ್ತಿರಸವೆಂದು ಕನ್ನಡದಲ್ಲಿ ಒಡೆದು ಕಂಡುಬರುವುದು ವಿಶೇಷವಾಗಿ ಹರಿಹರನ ರಗಳೆಗಳಲ್ಲಿ. ಅನೇಕ ವೀರಶೈವ ಕವಿಗಳು ಶಿವಭಕ್ತರಾಗಿ ಶಿವಶರಣರ ಚರಿತ್ರೆಗಳನ್ನು ಬರೆದುದರಿಂದ ಭಕ್ತಿರಸದ ಸೊತ್ತಾಗಿದ್ದಾರೆ. ವಚನಕಾರರಲ್ಲಿಯೂ, ಹರಿದಾಸರಲ್ಲಿಯೂ ಈ ಭಕ್ತಿರಸದ ಆದೇಶವು ಹೆಜ್ಜೆಹೆಜ್ಜೆಗೆ ಕಂಡುಬರುತ್ತದೆ.

ವೀರಶೈವ ನವಮುಗ್ಧ ಶರಣರಲ್ಲಿ ಈ ಜಾನಪದ ಕವಿಯು ಹಾಡಿದ ನಾಲ್ವರು ಮುಗ್ಧ ಶಿವಶರಣರ-ಬಿಜ್ಜಮಹಾದೇವಿ, ಬೇಡರ ಕನ್ನಯ್ಯ, ಕೋಳೂರ ಕೊಡಗೂಸು, ಗೊಲ್ಲಾಳ – ಹಾಡುಗಳನ್ನು 'ನಾಲ್ಕು ನಾಡಪದಗಳು' ಎಂಬ ಪುಸ್ತಕರೂಪದಲ್ಲಿ ಈಗಾಗಲೆ ಬೆಳಕಿಗೆ ತಂದಿದೆ. ಈ ಪುಸ್ತಕವು ಈಗಾಗಲೇ ಜಾನಪದ ಸುಭಗತೆಯನ್ನು ಜನತೆಯಲ್ಲಿ ಹರಡಹತ್ತಿದೆ. ಜಯಂತಿಯ ಸಂಪಾದಕರು ನನಗೆ ಬರೆದ ಒಂದು ಪತ್ರದಲ್ಲಿ 'ನಮ್ಮ ಸಂಗ್ರಹದಲ್ಲಿರುವ ಈ ನಾಲ್ಕೂ ಕವನಗಳೂ ನನ್ನ ಹೃದಯವನ್ನು ಸೆರೆಹಿಡಿದುಬಿಟ್ಟುವು. ಸುಲಿದ ಬಾಳೆಹಣ್ಣಿನಂತಹ ಸುಲಭ ಕನ್ನಡನುಡಿ; ಜೇನ ಸವಿಯಂತಹ ಮಧುರಶೈಲಿ; ಭಕ್ತಿರಸವನ್ನುಕ್ಕೇರಿಸುವಂತಹ ಶರಣರ ಕಥೆ. ಕೊನೆಯ ಕಥೆಯ ಕುರುಬ ಗೊಲ್ಲಾಳನಂತೂ ನನ್ನ ಎದೆಯಲ್ಲಿಯೇ ನೆಲೆನಿಂತುಕೊಂಡ" ಎಂದು ಬರೆದಿದ್ದಾರೆ. ಇದೇ ಮಹನೀಯರು ಪ್ರತಿಯೊಂದು ಕವನದಲ್ಲಿ ಭಕ್ತಿಯು ಸ್ಥಾಯೀಭಾವ ವಾಗಿ ನಿಂತಿರುವದು. ವಾತ್ಸಲ್ಯ, ಕರುಣ, ಅದ್ಭುತ, ಮುಗ್ಧತೆಗಳು ಸಂಚಾರಿಗಳಾಗಿ ಭಕ್ತಿಭಾವವನ್ನು ಉದ್ದೀಪಿಸುವವು. ಒಂದೊಂದು ಕಥನ ಕವನವನ್ನು ಒಂದೊಂದು ಜಾನಪದ ಖಂಡಕಾವ್ಯವೆಂದು ಹೇಳುವಂತೆ, ಇವು ಲಕ್ಷಣ ವಿಶುದ್ಧವಾಗಿವೆ"[೭] ಎಂದು ವಿಮರ್ಶಿಸಿದ್ದಾರೆ. ಈ ಜಾನಪದ ಕವಿಗೆ ಈ ಮುಗ್ಧ ಶರಣರ ಹಾಡೆಂದರೆ ಪಂಚಪ್ರಾಣ. ಪ್ರಪಂಚದಲ್ಲಿ ತೊಳಲಾಡುವ ಮಾನವನಿಗೆ ಶಿವಭಕ್ತಿಯು ಸಾಧಿಸುವುದು ಅಸಾಧ್ಯ. ಆದುದರಿಂದ ಕವಿಯು ಮುಗ್ಧ ಶರಣರ ಹಾಡನ್ನಾದರೂ ಈ ಜೀವವು ಹಾಡಿ ಮುಕ್ತಿಯನ್ನು ಹೊಂದಲೆಂದು ಹಾಡಿದ್ದಾನೆ:

ಮುಗ್ಧ ಶರಣರ ಹಾಡು, ಸಿದ್ಧಿಮಂತ್ರವು ನೋಡು
ಸಿದ್ಧಾಗು ಹಾಡಹಾಡುದಕೆ। ಎಲೆಜೀವ
ಶುದ್ಧಾಗಿ ಹೊಂದು ಶಿವಪದವ ॥೨॥ *-ಗೊಲ್ಲಾಳ-*

ಇಲ್ಲಿ ಕನ್ನಡ ಪಡೆಮಾತಿನ ಬೆಡಗನ್ನು ಕಾಣಬಹುದು. ಇಂತಹ ಬೆಡಗು ಈ ಕವಿಯ ಎಲ್ಲ ಹಾಡುಗಳಲ್ಲಿಯೂ ಕಂಡುಬರುವುದು. ಜಂಗಮರು ಹಾಡುವ ಲಿಂಗಮಹಿಮೆಯನ್ನು ಕೇಳಿದ ಗೊಲ್ಲಾಳನಿಗೆ ಆ ಲಿಂಗವನ್ನು ದೊರಕಿಸಬೇಕೆಂದು ದಿನದಿನಕ್ಕೆ ಭಕ್ತಿಯು ಹೆಚ್ಚಾಗುತ್ತದೆ.

---

೭. 'ಜಯಂತಿ' ಸಂಪುಟ – ೧೫, ಸಂಚಿ-೩, 'ಪುಸ್ತಕ ವಿಮರ್ಶೆ'

ಜಂಗಮರ ಶಿವಪೂಜೆ, ಲಿಂಗವನೆ ನೆನೆಸಿದನು
ಹಿಂಗಿಸೀ ಆಶೆ ಶಿವಲಿಂಗ। ನನಗೊಲಿದು
ಲಿಂಗಾಗಿ ಕೂತು ಕೈಯೊಳಗೆ ॥೯॥ *-ಗೊಲ್ಲಾಳ-*

ಹೀಗೆ ಹುಟ್ಟಿದ ಶಿವಭಕ್ತಿಯು ದಿನದಿನಕ್ಕೆ ಬೆಳೆದು ಕೊನರಿಟ್ಟು ಮುಗ್ಧತೆಯ ಹೂವನ್ನೇ ಬಿಡುವುದು. ಲಿಂಗವೇ ಗತಿಯೆಂದು ಅವನ ಎದೆಯು ತುಂಬುವುದು.

ಲಿಂಗವೇ ಗತಿಯೆಂದು, ಪೆಂಗಕುರುಬರಿಗಂದ
ಲಿಂಗಯ್ಯ ಮೆಚ್ಚಿ ಹರಿಸಿದರೆ। ಕುರುಬರಿಗೆ
ಗಂಗ್ಯಾಗಿ ಹೊನ್ನು ಹರಿಯುವದು ॥೧೯॥ *-ಗೊಲ್ಲಾಳ-*

ಇಲ್ಲಿ ಭಕ್ತಿಯೊಡನೆ ಭಾವಭಾಷೆಗಳ ಹೊಂದಿಕೆಯಿದೆ. 'ಪೆಂಗ' ಇದು ಅಚ್ಚ ಜಾನಪದ ಶಬ್ದವಿದ್ದು ಅರ್ಥೋಚಿತವಾಗಿ ಬಂದಿದೆ. ಉಳಿದ ಕುರುಬರಿಗೆ ಭಕ್ತಿಯು ಒಡಮೂಡಲು, ಪದ್ಯದಲ್ಲಿ 'ಗಂಗ್ಯಾಗಿ ಹೊನ್ನು ಹರಿಯುವದು' ಎಂಬ ಮಾತು ಧ್ವನಿಹಿಡಿಯುತ್ತದೆ. ಕಡೆಗೊಮ್ಮೆ ಗೊಲ್ಲಾಳನು ಕಂಬಿಯ ಅಯ್ಯಗಳಿಗೆ ಲಿಂಗವನ್ನು ಕೊಡಿರೆಂದೇ ಕೇಳಿಬಿಡುವನು. ಕುರುಬನಿಗೇತಕ್ಕೆಂದು ಜಂಗಮರು ಕುರಿಯ ಹಿಕ್ಕಿಯನ್ನೇ ಲಿಂಗೆಂದು ಕೊಡುವರು. ಲಿಂಗದ 'ಹಳವಂಡ'ದಲ್ಲಿದ್ದ ಮುಗ್ಧಭಕ್ತನಾದ ಗೊಲ್ಲಾಳನಿಗೆ, ಅದು ಕುರಿಯ ಹಿಕ್ಕಿಯೆಂಬರಿಕೆ ಯಾಗುವ ಬಗೆ ಹೇಗೆ? ಅದೊ ಜಂಗಮನು ಲಿಂಗವೆಂದು ಕೊಟ್ಟ ಮೇಲೆಯೇ?

ಹರಹರನೆ ಗಿರಿಲಿಂಗ, ಗುರುಲಿಂಗವೆನಗಾದಿ
ಎರಗಿದನುಭಕ್ತ ಗೊಲ್ಲಾಳ। ಹರುಷದಲಿ
ಕುರುಬರೊಡಗೂಡಿ ಕಾಡೊಳಗೆ ॥೧೮॥ *-ಗೊಲ್ಲಾಳ-*

ತುಂಬಿತು ಭಕ್ತಿಯ ಆವೇಶ! ಕವಿಯು ತಾನೇ ಗೊಲ್ಲಾಳನಾಗಿದ್ದಾನೆ.

ಮಳಲದಿನ್ನಿಯಮಾಡಿ, ಹೊಳೆವ ಹಿಕ್ಕಿಯನಿಟ್ಟು
ಹೊಳಲಲಿಂಗಿಲ್ಲಿ ನೆನೆವೆಂದು। ಭಕ್ತಿಯಲಿ
ತಿಳಿಗೊಳಲ ನೀರ ಸಿಂಪಡಿಸಿ ॥೧೯॥
ಕಾಡಪತ್ರಿಯನೆತ್ತಿ, ಕಾಡಹೂಗಳ ಕೊಯ್ದು
ಓಡ್ಯಾಡಿ ತಂದು ಶಿವಪೂಜೆ। ಮಾಡಿದರು
ನೋಡಿ ನಗುತಿದ್ದ ಶಿವಲಿಂಗ ॥೨೦॥
ನೊರೆಬಂದ ಕುರಿಹಾಲ, ಹರನೆಂದು ಎಡೆಮಾಡಿ
ಕುರಿಹಿಕ್ಕಿಗಂದ ಲಿಂಗಯ್ಯ। ಬೆಳಗಿದರೆ
ಧರೆಗೆಲ್ಲ ಬೆಳಕು ಹರಿಯುವದು ॥೨೧॥ *-ಗೊಲ್ಲಾಳ-*

ಮುಗ್ಧಭಕ್ತಿಯ ಬೆಳಕು ಸುತ್ತಲೂ ಕಾಡಿನಲ್ಲಿ ಬಿತ್ತು. ಶಿವಲಿಂಗ ಭಜನೆಯ ಕೇಳದ ಕಾಡು, ಕಾಡಿಗೆ ಕಾಡೇ ಕಿವಿಗೊಡುತ್ತದೆ. ತಂಪು ತುಂಬಿದ ಗಾಳಿ ಟೆಂಗಾಟ ನೆಡಿಸಿದೆ; ಕೌಜಗವು ಕೂಗುತಿದೆ; ನವಿಲುಗಳು ಮೋಜಿನಲಿ ಕುಣಿದಾಡುತಿವೆ; ಕೋಗಿಲೆಯು ಕೋಚೆತ್ತಿ ಪಂಚಮಸ್ವರದಲ್ಲಿ ಹಾಡುತಿದೆ; ಗುಂಗಿಗಳು ಗುಂಯೆಂದು ಸಂಗಜೋಡಣೆ ಮಾಡಿ ಹಾಡುತಿವೆ; ಪಶುಪಕ್ಷಿಗಳು ಉಲಿಉಲಿದು ಮಣಿದಾಡಿ ಭಕ್ತಿಯ ಹುಮ್ಮಸವನ್ನು ಹೊರಪಡಿಸುತ್ತವೆ. ಗೊಲ್ಲಾಳನ ಮುಗ್ಧಭಕ್ತಿಯು ಎತ್ತನೋಡಿದರೂ ಕಾಣಹತ್ತುತ್ತದೆ.

ಹಿಂಡಿನೊಳಗಿರುನಾಯಿ, ಹಿಂಡುಗಲಿಕೇಳುವವು
ಚೆಂಡ ಮೇಲೆತ್ತಿ ಶಿವಭಜನೆ। ತೊರೆಬಿಟ್ಟು
ಹಿಂಡುವದು ನಿಂತು ಕುರಿಹಿಂಡು ॥೨೮॥ *-ಗೊಲ್ಲಾಳ*

ಇಲ್ಲಿ ಭಕ್ತಿಯ ಆವೇಶದೊಡನೆ ಸೃಷ್ಟಿಯೊಳಗಿನ ಎಲ್ಲ ವಸ್ತುಗಳು ಭಕ್ತಿ-ಭಾವ ತುಂಬಿ ಹೋದವು. ಈ ಚಿತ್ರಣ ಶಕ್ತಿಯು ಭಾವ ಭಾಷೆಗಳ ಮುದ್ರಿಕೆಯಾಗಿ ಬಂದಿದೆ. ಭಕ್ತನು ಭಕ್ತಿಯ ಆವೇಶದಿಂದ ಜಗತ್ತಿನಲ್ಲಿ ಎಲ್ಲವನ್ನೂ ಸಾಧಿಸಿದ್ದಾನೆ. ಶಿವಭಕ್ತನಿಗೆ ಅವನ ಭಕ್ತಿಯೇ ಶ್ರೇಷ್ಠ. ಅದಕ್ಕೆ ಕುಂದುಬಂದರೆ ಅವನು ಅದನ್ನು ಎಂದೂ ಸಹಿಸಲಾರ; ಎಂಬ ಮಾತನ್ನು ಈ ಹಾಡುಗಳಲ್ಲಿ ಜಾನಪದ ಕವಿಯು ವಿಶದಪಡಿಸಿದ್ದಾನೆ. ಗೊಲ್ಲಾಳನನ್ನು ಹುಡುಕುತ್ತ ಬಂದ ಆತನ ತಂದೆ ಆತನು ಪೂಜಿಸುತ್ತಿದ್ದ ಲಿಂಗವನ್ನೊದೆಯಲು;

ಹರನೊದ್ದ ನರಪಾಪಿ, ಇರಲಾರಿ ಬದುಕಿನ್ನು
ಕರೆಯಲಾರಿನ್ನು ತಂದೆಂದು । ಸಹಿಸುವೆನೆ
ಹರನಿಂದೆ ಎಂದಗೊಲ್ಲಾಳ ॥೨೨॥ *-ಗೊಲ್ಲಾಳ*

ಎಂದು ಅಂದ ಗೊಲ್ಲಾಳನ ಮುಗ್ಧ ಭಕ್ತಿಯು ತಂದೆಯಾದರೇನು?

ಕಡುಪಾಪಿ ಬಿಡೆನಾನು, ಕಡಿದು ಚೆಲ್ಲುವೆ ನಿನ್ನ
ಕೊಡಲಿಯನ್ನೆತ್ತಿ ತಲೆಗಿಡಲು। ಕುರಿಹಿಕ್ಕಿ
ದಢಲೆಂದು ಒಡೆದು ಶಿವನೆದ್ದು ॥೨೨॥ *-ಗೊಲ್ಲಾಳ*

ಇಲ್ಲಿ ಬಂದದ್ದು ವಿಕೋಪವಲ್ಲ; ಹುಂಬತನವಲ್ಲ, ಮುಗ್ಧಭಕ್ತಿಯ ಪರಿಪಾಕ! ಮಾನವನ ಮನೋವ್ಯಾಪಾರದ ಪರಿಜ್ಞಾನವುಳ್ಳ ಈ ಕವಿಯು ಸ್ವಭಾವನಿರೂಪಣ ಸಾಮರ್ಥ್ಯದಿಂದ ಹದವಾದ ಬೇಕಾದ ಮಾತುಗಳಲ್ಲಿ ಸಂಶಯ–ಸಂಕೋಚ ಹುಟ್ಟದಂತೆ ಮೇಲಿನ ಸನ್ನಿವೇಶವನ್ನು ಹಿತಮಿತವಾಗಿ ಹೇಳಿಬಿಟ್ಟಿದ್ದಾನೆ. ಭಕ್ತಿಯ ಆವೇಶವು ವೀರಾವೇಶಕ್ಕೆ ಧುಮುಕಿ ರೌದ್ರತೆಯಲ್ಲಿ ತೇಲುತ್ತಿದ್ದರೂ, ಅದು ಹಸನಾದ ಕನ್ನೆಭಕ್ತಿ; ಲೋಕವೇ ಅದ್ಭುತವೆಂದು ಕಿವಿಗೊಟ್ಟು ಕೇಳುವ ಶಿವಭಕ್ತಿ; ಕಣ್ಣಿಟ್ಟು ನೋಡಿ ಚಕಿತವಾಗುವ ಮುಗ್ಧಭಕ್ತಿ. ಇಂಥ ಸನ್ನಿವೇಶಗಳನ್ನು ಚಿತ್ರಿಸುವುದು ಮಹಾಕವಿಗೆ ಮಾತ್ರ ಸಾಧ್ಯ. ಇನ್ನುಳಿದ ಮುಗ್ಧಶರಣರ ಹಾಡುಗಳಲ್ಲಿಯೂ ಕವಿಯ ಈ ತರದ ರಸನಿರೂಪಣೆಯ ಚಮತ್ಕಾರಿಕೆಯು ತುಂಬ ಒಡೆದು ಕಂಡುಬರುವುದು.

ಶಿವಶರಣೆ ನಿನ್ಹಾಡ, ಭವದೊಳಗೆ ಹಾಡುವದು
ಶಿವಪದಕೆ ಮಿಗಿಲು ನಿತ್ಯದಲಿ। ಕೊನೆಯುಂಟೆ
ಶಿವಭಕ್ತಿ ಸಾರ ತಿಳಿಸುದಕೆ ॥೨॥ *–ಬಿ–ಮ–*

ಇಲ್ಲಿ ಶಿವಶರಣೆ ಬಿಟ್ಟ ಮಹಾದೇವಿಯ ಹಾಡು ಶಿವಪದಕ್ಕೆ ಮಿಗಿಲಾಗಿದೆ. ಶಿವಭಕ್ತಿ ಸಾರ ತಿಳಿಸುವುದಕ್ಕೆ ಕೊನೆಯೇ ಇಲ್ಲವೆಂದು ಕವಿಯು ಹೇಳಿಬಿಟ್ಟಿದ್ದಾನೆ. ಹೀಗೆ ಹೇಳಿದ ಕವಿಯು ಹಾಡಿನ ತುಂಬೆಲ್ಲ ತನ್ನ ಮಾತುಗಳನ್ನು ಬಲು ಎಚ್ಚರಿಕೆಯಿಂದ ನೋಡಿಕೊಂಡು ಹೋಗಿದ್ದಾನೆ.

ಬಾಡದೀ ಹೂಹಾಡ, ಕಾಡ ಮಲ್ಲಿಗೆಯೆಂದು
ಕಾಡಗಾಳಿಗಳು ಪರಿಮಳವ। ಹೊತ್ತೊಯ್ದು
ನಾಡೊಳಗೆ ಸುಳಿದು ಬೀಸುವವು ॥೩॥ *–ಕೋ–ಕೊ–*

ಇಲ್ಲಿ ಹಾಡು, ಬಾಡದ ಹೂವು. ಹೇಳುವ ರೀತಿಯಲ್ಲಿ ಸೌಂದರ್ಯವಿದೆ; ನಯವಿದೆ. ಮುಗ್ಧಭಕ್ತಿಯಿದೆಂಬುದನ್ನರಿತ ಈ ಕವಿಯು ಸೃಷ್ಟಿಯ ಸಹಜ ಮುಗ್ಧತೆಯಲ್ಲಿ ಅದನ್ನು ತೇಲಿಸಿಬಿಟ್ಟಿದ್ದಾನೆ. ಆ ಹೇಳುವ ಬೆಡಗು ಹೊಸದೇ ಕಾಣಿಸುವುದು.

ನೆಚ್ಚಿ ಬಂದೆನು ಶಿವನೆ, ಮೆಚ್ಚಿ ಉಣ್ಣಲು ಬೇಕು
ಕುಚ್ಚಿರುವ ಮಾಂಸ ರುಚಿ ನೋಡು। ನೋಡದಲೆ
ಹುಚ್ಚು ನಾನಲ್ಲ ಉಣಿಸುದಕ ॥೪೩॥

ಕೆಂಪು ಬರುತನ ಕಾಸಿ, ಕೆಂಪುನೆತ್ತಿರಸಾರ
ತಂಪು ಮಾಡದಲೆ ನೀಡುವೆನು। ಉಂಡೊಡನೆ
ಜೆಂಪು ಹತ್ತುವದು ಬೆಳತನಕ ॥೪೪॥ *–ಬೇ–ಕ–*

ಇಲ್ಲಿ ಕಂಡು ಬರುವುದು ಮುಗ್ಧ ಭಕ್ತಿಯ ಕಾಡ ಕುಸುಮ. ಭಕ್ತಿಗೆ ಎಂಜಲವಿಲ್ಲ; ಜಾತಿ ಕುಲಪಂಗಡವಿಲ್ಲ; ಅದು ಒಂದೇ ಎಂಬ ಮಾತನ್ನು ಇಲ್ಲಿ ಮನಗಾಣಬಹುದಾಗಿದೆ. ಹೀಗೆ ಈ ನಾಲ್ಕೂ ಹಾಡುಗಳಲ್ಲಿ ಮುಗ್ಧಭಕ್ತಿಯು ತೆರತೆರವಾಗಿ ತುಂಬಿಬಂದಿದೆ.

ಲೋಕಾನುಭವಕ್ಕೆ ಭಕ್ತಿಯು ಜೋಡಾದರೆ ಅದು ಪ್ರಪಂಚಕ್ಕೆ ಮಾರ್ಗದರ್ಶಕವು. ಈ ಅನುಭಾವ ಭಕ್ತಿಯೇ ಪ್ರಪಂಚದಲ್ಲಿದ್ದು ಪಾರಮಾತ್ಮನನ್ನು ಗೆದೆಯುವ ಬಲವಾದ ಸಾಧನ. ವೀರಶೈವ ಶಿವಶರಣರನ್ನು ಬಿಟ್ಟರೆ ಯಾರೂ ಈ ಮಾರ್ಗವನ್ನು ಕೈಕೊಂಡಿಲ್ಲ. ಶಿವಶರಣರು ಅನುಭಾವದೊಡನೆ ಸಮರಸ ಜೀವಿಗಳಾಗಿ ಹೋಗಿದ್ದಾರೆ; ಕೆಲವರು ಲೋಕಕ್ಕೆ ಕಾಯಕದ ಶಿವಬೆಳಕನ್ನು ತೋರಿಸಿ ಹೋಗಿದ್ದಾರೆ; ಹಲವರು ಸಮಯಕ್ರಾಂತಿಯನ್ನು ಹೂಡಿ ಲೋಕೋದ್ಧಾರ ಮಾಡಿದುದಲ್ಲದೆ ಜನತೆಗೆ ಹೊಸಹಾದಿಯನ್ನೇ ಹಾಕಿಕೊಟ್ಟಿದ್ದಾರೆ. ಹೀಗೆ ಮೈದೋರಿದ ಅನುಭಾವ ಭಕ್ತಿಯು ಸಮರಸ ಭಕ್ತಿಯಿರಬಹುದು; ಕಾಯಕ ಭಕ್ತಿಯಿರಬಹುದು; ಇಲ್ಲವೆ ಕ್ರಾಂತಿ ಭಕ್ತಿಯೂ ಇರಬಹುದು. ಈ ಮೂರರಲ್ಲಿಯೂ ಕಾಯಕವು ಜೀವಾಳವಾಗಿ ಹರಿದಾಡುತ್ತದೆ. ಇವೆಲ್ಲವುಗಳೂ ಶಿವಶರಣರ ಹಂತಿಯ ಹಾಡುಗಳಲ್ಲಿ ಹಾಸುಹೊಕ್ಕಾಗಿ ಶಬ್ದಶಬ್ದಗಳಲ್ಲಿ ಉಸಿರು ತುಂಬಿ ವಾಚಕರೊಡನೆ ಮಾತಾಡುತ್ತವೆ. ಜಾನಪದ ಕವಿಯು ಅನುಭಾವವನ್ನುಂಡ ಶಿವಭಕ್ತ. ಆದುದರಿಂದ ಈ ಅನುಭಾವವನ್ನು ಭಕ್ತಿರಸದೊಡನೆ ತನ್ನ ಹಾಡಿನಲ್ಲಿ ಯಥೋಚಿತವಾಗಿ ಒಂದು ಹೊಸ ರೀತಿಯಲ್ಲಿ ಹೇಳಿದ್ದಾನೆ.

ಇಳಿಹಾಳ ಬೊಮ್ಮಯ್ಯ, ನೇಗಿಯ ಅಮುಗಯ್ಯ, ಹೂಗಾರ ಮಾದಯ್ಯ, ಮೇದರ ಕೇತಯ್ಯ, ಕುಂಬಾರ ಗುಂಡಯ್ಯ, ಜಾತಿಗರ ಚೌಡಯ್ಯ, ಮಾದರ ಚೆನ್ನಯ್ಯ ಮೊದಲಾದ ಶಿವಶರಣರ ಹಾಡುಗಳಲ್ಲಿ ಶಿವಪದ ಸಮರಸವು ದೊರಕಿದ್ದು ಕಾಯಕದಿಂದ. ಎಲ್ಲ ಶಿವಶರಣರೂ ದೇವರನ್ನು ತಮ್ಮ ಕಾಯಕದಲ್ಲಿ ಕಂಡಿದ್ದಾರೆ. ಇದನ್ನರಿತ ಜಾನಪದ ಕವಿಯು ಅವರ ಹಿರಿಮೆಯನ್ನು ಜನತೆಗೆ ಹಾಡಿದ್ದಾನೆ.

ಜನಕೆ ನಿನ್ನೀ ಹಾಡು, ಕಿನೆಹಾಲು ಇದ್ದಂತೆ
ತೆನೆಹಾಲು ನಿನಗೆ ಒಕ್ಕಲಿಗ। ಇಂಪಾಗಿ
ಮನಸೋತು ಮಲಗೆ ಶಿವಲೋಕ ॥೧॥ *–ಇ–ಬೊ–*

ಅಮುಗಯ್ಯ ನಿನ್ಹಾಡು, ನಮಗಾಯ್ತು ಶಿವಮಂತ್ರ
ಯಮಗಾಯ್ತು ಕುತ್ತು ಶಿವಜೀವ। ಎತ್ತುದಕೆ
ಅಮರಾಯ್ತು ಜನಕೆ ಹೊಸಮತವು ॥೨॥ *–ನೇ–ಅ–*

ನಿನ್ನ ಭಜನೆಯ ಹಾಡು, ಹೊನ್ನಮಳೆ ಸುರಿದಂತೆ
ಹಣ್ಣಾದ ಎದೆಯ ಒಕ್ಕಲಿಗ। ಮಣ್ಣೊಳಗೆ
ಚಿನ್ನ ಬೆಳಕೊಂಡ ಒಣಬಿತ್ತಿ ॥೩॥ –ಮೇ–ಕೇ–

ಗೆಜ್ಜೆ ಕಟ್ಟಿದಕಾಲು, ಹೆಜ್ಜೆ ಹಾಕುತ ಕುಣಿದು
ಸಜ್ಜು ನಿನ್ನಾದು ಬೆಳವಲಕೆ। ಚೌಡಯ್ಯ
ಗುಜ್ಜೆ ಕಣದೊಳಗೆ ಬೆಳತನಕ ॥೪॥ –ಜಾ–ಚೌ–

ಎಂಥ ಪಡೆಮಾತಿನ ಬೆಡಗಿನಲ್ಲಿ ಜಾನಪದ ಕವಿಯು ಶಿವಶರಣರ ಅನುಭಾವಭಕ್ತಿಯ ಹಿರಿಮೆಯನ್ನು ಹಾಡಿದ್ದಾನೆ! ಹಾಡಿನ ಪ್ರಾರಂಭದಲ್ಲಿಯೇ ಬರುವ ಈ ಪದ್ಯಗಳು ಚಿತ್ತಾಕರ್ಷಕವಾಗಿ ಎಲ್ಲರನ್ನು ಭಕ್ತರಸದಲ್ಲಿ ಧುಮುಕಿ ಬಿಡುವುವು. ಇಳಿಹಾಳ ಬೊಮ್ಮಯನ ಹಾಡು ಜನಕ ಕೆನೆಹಾಲು, ರೈತನಿಗೆ ತೆನೆಹಾಲು ಎಂದು ಹೇಳುವ ಕವಿಯ ಹೃದಯವು ಅನುಭಾವ ಭಕ್ತಿರಸತುಂಬಿ ಸೂಸುವ ಹೆಜ್ಜೇನು ಕೊಡದಂತೆ! ಅಮುಗಯ್ಯನ ಹಾಡು ಜನಕ ಶಿವಮಂತ್ರ; ಯಮನಿಗೆ ಕುತ್ತು. ಮೇದರ ಕೇತಯ್ಯನ ಹಾಡು 'ಹೊನ್ನ ಮಳೆ ಸುರಿದಂತೆ' ಎಂದು ಕವಿಯು ಹೇಳುತ್ತಾನೆ. ಅನುಭಾವವೇ ಶಿವಶರಣರೆದೆಯಲ್ಲಿ ನೆಲೆಗೊಂಡಿರಲು ಅವರು ಅದನ್ನು ಸಾಧಿಸಲು ಹಲಕೆಲವು ಸಾಧನಗಳನ್ನು ಹುಡುಕುತ್ತಾರೆ. ಮೇದಾರ ಕೇತಯ್ಯನಿಗೆ ಸಮರಸ ಹೊಂದಲು 'ಬಿದಿರೇ' ಮೂಲ ಸಾಧನವಾಯಿತು.

ನಿತ್ಯದಲಿ ಕೇತಯ್ಯ, ಕೆತ್ತುವನು ಬಿದಿರೆಳೆಯ
ಚಿತ್ತರದ ಬುಟ್ಟಿ ಮೊರ ಹೆಣೆದು। ಮಾರುವನು
ಉತ್ತಮರ ನಾಡು ಬೆಳವಲಕೆ ॥೧೩॥

ಬತ್ತೀಸ ರಾಗದೊಳು, ಸುತ್ತು ಹಾಡಿದ ಬಿದಿರು
ಹೊತ್ತೊಯ್ವ ಕಂಬಿ ಪರವುತಕೆ। ಮಾಗಡದ[೮]
ಸತ್ಯುಳ್ಳ ತೇರು ಬೆಳವಲಕೆ ॥೧೪॥

ವೀರಭದ್ರನ ಮುಂದೆ, ಊರಿನಂದೀಕೋಲ
ಹಾರಾಡಿ ಕುಣಿದು ಕಡೆಹೇಳಿ। ಜಗದೊಳಗೆ
ಸಾರುವುದು ಬಿದಿರು ಶಿವಮತವ ॥೧೫॥

ಬಿದಿರು ಶಿವಮತಹೇಳ್ವ, ಚದುರಸಾಹಸವೆಂದು
ಉದರೆಂದು ತನ್ನ ಕಾಯಕವೆ। ನಡೆಸುದಕೆ
ನೆದರ ನಿಚ್ಚಣಿಕೆ ಶಿವಪುರಕೆ ॥೧೬॥

ಹರಮತದ ಹಾಡುಗಳ, ಮೊರದೊಳಗೆ ಹೆಣೆ ಹೆಣೆದು
ಕರಡಿಗೆಯ ತುಂಬಿ ಕಲ್ಯಾಣ। ಪೇಟೆಯೊಳು
ಶರಣರಿಗೆ ಮಾರಿ ದಾಸೋಹ ॥೩೬॥

ಶಿವನ ಬುಟ್ಟಿಯ ಮಾಡಿ, ಭುವನ ಕಳಸಕೆ ಕಟ್ಟಿ
ಶಿವದೀಪ ಹಚ್ಚಿ ಕಲ್ಯಾಣ। ಪುರದೊಳಗೆ
ಶಿವಬೆಳಕ ಕಂಡ ಕೇತಯ್ಯ ॥೧೦೫॥ –ಮೇ–ಕೇ–

ಈ ಪದ್ಯಗಳಲ್ಲಿ ಬಂದದ್ದು ಕವಿಯು ಕಂಡ ಲೋಕಾನುಭವ. 'ಬಿದಿರು ಶಿವಮತ ಹೇಳ್ವ ಚದುರ ಸಾಹಸ'ವೆಂದು ಕವಿಯು ಕರೆದಿದ್ದಾನೆ. 'ಬತ್ತೀಸರಾಗದೊಳು ಸುತ್ತು ಹಾಡಿದ ಬಿದಿರು,' 'ಹೊತ್ತೊಯ್ವ ಕಂಬಿ ಪರವುತಕೆ,' 'ನೆದರ ನಿಚ್ಚಣಿಕೆ ಶಿವಪುರಕೆ' ಮೊದಲಾದುವುಗಳಂತೂ ಇಂದು ಲಿಂಗಾಯತರದಲ್ಲಿ ಬಳಕೆಯಲ್ಲಿರುವ ಬಿದಿರಿನ ಪೂಜ್ಯತೆಯನ್ನು ಸಾರುತ್ತವೆ. ಕಡೆಗೆ ಕೇತಯ್ಯನು ಬಿದರಿನ ಶಿವನ ಬುಟ್ಟಿ[೯]ಯನ್ನು ಮಾಡಿ ಶಿವದೀಪವನ್ನು ಹಚ್ಚಿ ಕಲ್ಯಾಣದಲ್ಲಿಯೇ ಶಿವಬೆಳಕನ್ನು ಕಂಡನೆಂದು ಕವಿಯು ಸೂಚಕವಾಗಿ ಹೇಳಿಬಿಟ್ಟಿದ್ದಾನೆ. ನೇಗಿಯ ಅಮುಗಯ್ಯನಿಗೆ ನೇಗಿಯೇ ಸಮರಸ ಹೊಂದಲು ಸಾಧನವಾಯಿತು. ಅದರ ಮುಖಾಂತರವೇ ಅವನು ಶಿವಮತವನ್ನು ಅನುಭಾವ ಭಕ್ತಿಯ ಬೆಳಕಿನಲ್ಲಿ ಸಾರಿದನೆಂದು ಜಾನಪದ ಕವಿಯು ಹಾಡಿದ್ದಾನೆ.

ನೇಗಿಕಾಯಕವಯ್ಯ, ತಾಗು ಬಾಗಿನಜೇಡು
ಬೀಗದಾಕೈಯು ಕಾಯಕಕೆ। ಜಗದೊಳಗೆ
ಹಾಗುಳ್ಳ ಕಸಬು ಜನಪದಕೆ ॥೬॥ –ನೇ–ಅ–

ಕಸಬಿನ ಹಿರಿಮೆಯನ್ನು ಹೇಳಿ ಕವಿಯು ನೇಗಿಯ ಒಂದೊಂದು ಸಾಮಗ್ರಿಯನ್ನು ಶಿವಮತದ ಸಾಧನಮಾಡಿ ಬಲು ರಮ್ಯವಾಗಿ ಹಾಡಿದ್ದಾನೆ.

---

೮. 'ಮಾಗಡ'ವೇ ಮಹಾಕೂಟ ಕ್ಷೇತ್ರಸ್ಥಾನವು; ದಕ್ಷಿಣದ ಕಾಶಿಯೆಂದು ಜನಪದದಲ್ಲಿ ಹೆಸರು ವಾಸಿಯಾಗಿದೆ.
೯. ದೀವಳಿಗೆಯ ಹಬ್ಬದಲ್ಲಿ ಮನೆಯ ಕಳಸಕ್ಕೇರಿಸುವ ದೀಪದ ಬುಟ್ಟಿ (ಶಿವನಬುಟ್ಟಿ)ಯು ಮೇದರ ಕೇತಯ್ಯನು ಶಿವಬೆಳಕನ್ನು ಕಂಡ ದ್ಯೋತಕವಿರಬಹುದೇ?

ಜೋಡು ಹಣಿಗೆಯು ಕಾಣೊ, ಜೋಡುಕಣ್ಣಿನ ನೋಟ
ಜೋಡಾಗಿ ಮಡದಿ ಕಾಯಕಕೆ । ಕೈಗೂಡೆ
ಮೂಡಿ ಶಿವಭಕ್ತಿ ಹೂಬಿಟ್ಟು ॥೧೩॥

ಟಾಣ ಕೋಲುಗಳೆರಡು, ಕಾಣಿಮಗ್ಗದೊಳೇನೊ
ತಾಣ ಹೊಂದಿಹುದು ಜಗದೊಳಗೆ । ಹೊಸಮತಕೆ
ಕಾಣಿ ದಾಸೋಹ ಕಾಯಕವು ॥೧೪॥

ಕಾಲ ಪವಡಿಗಳೆತ್ತಿ ಕೋಲ ಕಂಬಿಗಳೆಳೆದು
ನೂಲೆಳೆದು ಲಾಳಿ ಶಿವಸೂತ್ರ । ಪೋಣಿಸಲು
ಸೀಲ ಪಾವಡವ ಲಿಂಗುಟ್ಟ ॥೧೫॥

ಒಂದಣಿಯು ಹಾರಿದರೆ, ಮುಂದಣಿಗಳ್ಹಾರುವವು
ಹೊಂದುವದು ಕಷ್ಟ ಶಿವಪದವ । ಹೊಸಮತವು
ಹೊಂದಿ ದಣಿಯುಳ್ಳ ಪಾವಡವು ॥೧೬॥

ಅಣಿಸೆಳ್ಳು ಬಜಗೋಲು, ಮನಿಮನಿಯೊಳೆಳೆಯೆಳೆದು
ಗಿಣಿಲಿಂಗ ಪೇಠೆ ಜೋಲ್ಬಿಟ್ಟು । ಅಮುಗಯ್ಯ
ಎಣಿ ಎಣಿಸಿ ನೇದ ಶಿವನುಡಿಯ ॥೧೭॥ *–ನೇ–ಅ–*

ಕವಿಯ ಕಲ್ಪನೆಯು ಅನುಭಾವಕ್ಕೆ ಹೊಂದಿ ಶಿವಮತವನ್ನು ಧ್ವನಿತವಾಗಿ ಸಾರುತ್ತದೆ. ಇದರಲ್ಲಿ ಭಾವಕ್ಕೆ ಬೇಕಾಗುವ ಶಬ್ದ ಜೋಡಣೆಯಿದೆ. ಮನೋವ್ಯಾಪಾರಗಳಿಗೆ ಅನುಭಾವದ ಬಂಧವಿದೆ. ಮತದರ್ಶನದ ಭಕ್ತಿರಸವು ಸುಪಾಕವಾಗಿದೆ. ಕವಿಯು ಎಲ್ಲ ಸಾಮಗ್ರಿಗಳಿಗೆ ಪಾವನತೆಯನ್ನಂಟಿಸುವುದರಿಂದ ಕಸಬುಗಾರನಿಗೆ ಕಾಯಕದಲ್ಲಿ ಪೂಜ್ಯ ಭಾವನೆಯು ಹುಟ್ಟುವುದು. ಹೆಂಡತಿಯು ಗಂಡನಿಗೆ ಕಾಯಕಕ್ಕೆ ಜೋಡಾದರೆ 'ಮೂಡಿ ಶಿವಭಕ್ತಿ ಹೂಬಿಟ್ಟು' ಎಂದು ಕವಿಯು ಅದರ ಪರಿಮಳವನ್ನೇ ಸೂಸುತ್ತಾನೆ. 'ನೂರೆಳೆಯ ತಾಳಿ ಶಿವಸೂತ್ರ । ಪೋಣಿಸಲು' । 'ಹೊಸಮತವು । ಹೊಂದಿದಣಿಯುಳ್ಳ ಪಾವಡವು,' 'ಗಿಣಿಲಿಂಗಪೇಠೆ,' 'ಸೀಲ ಪಾವಡವ ಲಿಂಗುಟ್ಟ,' 'ಅಮುಗಯ್ಯ । ಎಣಿ ಎಣಿಸಿ ನೇದ ಶಿವನುಡಿಯ' ಎಂಬೀ ನುಡಿಗಳು ನೇಗಿಯ ಜೀನಸುಗಳೊಡನೆ ಯಥಾ ಯೋಗ್ಯವಾಗಿ ಬಳಸಲ್ಪಟ್ಟಿವೆ. ಇಲ್ಲಿ ಕವಿಯ ಚಮತ್ಕಾರವಾದ ಹೇಳಿಕೆಯು ಮನನೀಯವಾಗಿದೆ. ಈ ಹಳ್ಳಿಯ ಕಬ್ಬಿಗನು ಹೂಗಾರ ಮಾದಯ್ಯನ ಹಾಡಿನಲ್ಲಿ ಒಂದು ಹೆಜ್ಜೆ ಮುಂದು ಹೋಗಿ ಬಲು ಸಮಂಜಸವಾಗಿ ಹೊಸಮತದ ಹಿರಿಮೆಯನ್ನು ಹಾಡಿದ್ದಾನೆ.

ತುಂಬಿದರು ಉಕ್ಕುವದು, ಇಂಬು ಬೇಡಲು ಕಡಲು
ತುಂಬಿರುವ ಶರಣ ಉಕ್ಕುವನೆ । ಹುಂಬಾಗಿ
ತುಂಬಿರುವ ಕೊಡವು ಹೊಸಮತವು ॥೨೧॥ *–ಹೂ–ಮಾ–*

'ತುಂಬಿದ ಕೊಡವು ತುಳಕುವದಿಲ್ಲ', ಎಂಬ ಗಾದೆಯ ಮಾತಿನ ಅರಿಕೆಯೂ ಅದೆ ಕವಿಗೆ. (ಪದ್ಯದ ಬೆಡಗನ್ನು ಪಡೆಮಾತಿನಲ್ಲಿ ಹೆಣದ ಈ ಜಾನಪದ ಕವಿಯೇ ಧನ್ಯ! ವೀರಶೈವ ಮತಕ್ಕೆ ಕವಿಯು ಕಾವ್ಯದ ತುಂಬ 'ಹೊಸಮತ'ವೆಂದು ಬಳಸಿಕೊಂಡಿದ್ದಾನೆ. 'ಹೊಸಮತ'ವೆಂದು ಕರೆಯುವುದರಲ್ಲಿ ಔಚಿತ್ಯವಿದೆ. ಅದು ಎಲ್ಲದರಿಂದಲೂ ಪರಿಪೂರ್ಣವಾದ ಮತ; ವಿಶ್ವಧರ್ಮವಾಗಿ 'ಕಾಯಕ ದಾಸೋಹ' ದಲ್ಲಿ ಜಗತ್ತಿಗೆ ಮಾರ್ಗದರ್ಶಕವಾಗುವ ಮತವೆಂಬ ಕಲ್ಪನೆಗಳಿಂದ ಕವಿಯು ಆ ಮತಕ್ಕೆ 'ತುಂಬಿರುವ ಕೊಡವು ಹೊಸಮತವು' ಎಂದು ಕರೆಯುವದರಲ್ಲಿ ಏನು ಸಂದೇಹ? ಹೊಸಮತದ ಶಿವಗಾಳಿಯೇ ಬೀಸಿ ಜಗತ್ತನ್ನು ಜಾಗ್ರತ ಮಾಡಿತು.) ಶಿವಶರಣರು ಶಿವಮತದ ಗುಟ್ಟನ್ನು ಜಗತ್ತಿಗೆ ಬೀರ ಹತ್ತಿದರು. ಕವಿಯು ಇದನ್ನು ಸಮಂಜಸವಾಗಿ ಹಾಡಿದ್ದಾನೆ.

ಶಿವನ ಬೈರವರೂಪ, ಶಿವಶರಣ ನೀ ಕುಣಿಯೆ
ಶಿವಗಾಳಿ ಬೀಸಿ ಜಗನಡುಗಿ । ಹೊಸಮತದ
ಶಿವನುಡಿಯ ಕೇಳಿ ಜನವೆದ್ದು ॥೬॥ *–ಜಾ–ಚೌ–*

ಆಡಿ ಸೋತರು ರೂಪ, ಬೇಡಿದರು ಕೈ ಮುಗಿದು
ಚೌಡ ಶಿವಶರಣ ಊದಿದನು । ಶಿವಮಂತ್ರ
ನಾಡ ನಾಡೆಲ್ಲ ಹೊಸಮತವು ॥೧೧॥ *–ಜಾ–ಚೌ–*

ಇಲ್ಲಿ ಶಿವಗಾಳಿ, ಶಿವಮಂತ್ರ, ಶಿವನುಡಿಗಳ ಪರಿಣಾಮವನ್ನು ಕವಿಯು ಜನಪದಕ್ಕೆ ಹಾಡಿದ್ದಾನೆ. ಈ ಕವಿಗೆ ಕುಣಿತ ತಾಳಗಳ ಪರಿಜ್ಞಾನವು ಚೆನ್ನಾಗಿರುವ ಮೂಲಕ ಅವುಗಳನ್ನು ಭಕ್ತಿಭಾವದಲ್ಲಿ ಸಾಧಿಸಿದ್ದಾನೆ. ಅವುಗಳೊಂದಿಗೆ ಭಕ್ತಿರಸದ ಸೌರಭವನ್ನು ಸುತ್ತಲೂ ಸೂಸಿದ್ದಾನೆ.

ಧಿಮ್ಮಯ್ಯ ಧಿತ್ತಯ್ಯ, ದಮ್ಮಡಿಯು ಥಂಮ್ಮೆಂದು
ದಿಮ್ಮ ಕಣಕಣಿಸಿ ಕುಣಿತದೊಳು । ಚೈಯಾಕ
ಝುಮ್ಮೆಂದು ನುಡಿಯೆ ಜನತುಂಬಿ ॥೩೧॥

ಕುಣಿದ ರೂಪಗಳುಟ್ಟು, ಮಣಿದು ಹಾಡಿದ ಚೌಡ
ದಣಿವೆ ಕಾಯಕವು ಶರಣರಿಗೆ । ದಿನಮಣಿಗೆ
ಪಣವೆ ಈ ಜಗವ ಬೆಳಗುದಕೆ ॥೩೨॥ -ಜಾ-ಚೌ-

ಶಬ್ದಗಳು ಕಿವಿಯ ಮೇಲೆ ಬೀಳಲು ಚೌಡಯ್ಯನು ಮನಃಪಟಲದ ಮೇಲೆ ಕುಣಿದಂತಾಗುತ್ತದೆ. ಕಾಯಕವು ಶರಣರಿಗೆ ಸಹಜವೆಂದು ಹೇಳಲು ಕವಿಯು ಉತ್ಪ್ರೇಕ್ಷಿಸಿದ 'ದಿನಮಣಿಗೆ । ಪಣವೆ ಈ ಜಗವ ಬೆಳಗುದಕೆ' ॥ ಎಂಬೀ ಮಾತು ಕವಿಯ ಉಜ್ವಲವಾದ ಅನುಭಾವ ನಿರೂಪಣೆಯಾಗಿದೆ.

ಶಿವಭಕ್ತ ಶಿವಶರಣ, ಶಿವಕಳೆಯು ಶಿವಲೀಲೆ
ಶಿವರೂಪವೆಂದು ಶಿವಗಣವು । ಚೌಡನಿಗೆ
ಶಿವಲೋಕದೊಳಗೆ ಭಜಿಸಿದರು ॥೬೧॥ -ಜಾ-ಚೌ-

ಎಂದು 'ಚೌಡ'ನನ್ನು ಭಕ್ತಿರಸದಲ್ಲಿ ಕವಿಯು ಕೊಂಡಾಡಿದ್ದಾನೆ. ಕುಂಬಾರ ಗುಂಡಯ್ಯನ ಹಾಡಿನಲ್ಲಿ ಕವಿಯು ಕುಣಿತದ ರೀತಿ ಹಾಗೂ ಗತ್ತುಗಳನ್ನು ಭಕ್ತಿಗೆ ಹೊಂದಿಕೆಯಾಗುವಂತೆ ಆವೇಶ ತುಂಬಿ ಹಾಡುವುದು ಗಮನಾರ್ಹವಾಗಿದೆ. ಗುಂಡಯ್ಯನು 'ತೋಮಧಿತ್ತಯ್ಯ ಹೆಜ್ಜೆ'ಯೊಳು ಕುಣಿದನೆಂದು ಕವಿಯು ಹೇಳುತ್ತಾನೆ.

ಕಣಕಣಿಸಿ ಕರಡಿಗಳು, ಝಣ ಝಣಿಸಿ ತಾಳಗಳು
ದಣ ಧಣ್ಣ ಧಿತ್ತ ಮದ್ದಲೆಯು । ಕಿವಿಯೊಳಗೆ
ಘನ ಸೂರು ಹಿಡಿಯೆ ಗುಂಡನಿಗೆ ॥೧೬॥ -ಕುಂ-ಗುಂ-

ಹೀಗೆ ಶಿವಶರಣರ ಈ ಹಂತಿಯ ಹಾಡುಗಳಲ್ಲಿ ಅನುಭಾವ ಭಕ್ತಿಯನ್ನು ಕವಿಯು ಅವರ ಕಾಯಕಗಳಲ್ಲಿ ಹೊರಹೊಮ್ಮಿಸಿದ್ದಾನೆ.

ಅನುಭಾವ ಭಕ್ತಿಯು ಹಲಕೆಲವು ಹಾಡುಗಳಲ್ಲಿ ಕ್ರಾಂತಿಯಲ್ಲಿ ಕೊನೆಯಾಗಿದೆ. ಮಡಿವಾಳ ಮಾಚಯ್ಯ, ಹರಳಯ್ಯ, ಕಿನ್ನರಿ ಬೊಮ್ಮಯ್ಯ ಮೊದಲಾದ ಶಿವಶರಣರ ಹಾಡುಗಳಲ್ಲಿ ಇದನ್ನು ತುಂಬ ಕಾಣಬಹುದು. ಕವಿಯು ಈ ಹಾಡುಗಳಲ್ಲಿ ಭಕ್ತಿಯ ಆವೇಶವನ್ನು ಕ್ರಾಂತಿಯಲ್ಲಿ ಕೊನೆಗಾಣಿಸಿ ಜಯಶಾಲಿಯಾಗಿದ್ದಾನೆ. ಮಾಚಯ್ಯನು ಕ್ರಾಂತಿಕಾರ, ವೀರಭದ್ರನೆಂದು ಕವಿಯು ಕರೆದಿದ್ದಾನೆ. ಅನ್ಯಮತಸ್ಥರೂ ಮಾಚನಿಗೆ ಅಂಜಿ ನಡೆದುಕೊಂಡರೆಂದು ಕವಿಯು ಹಾಡಿದ್ದಾನೆ.

ಹಿಪ್ಪರಗಿ ಹಾರುವರು, ಕಪ್ಪು ಕಾಣಿಕೆ ಹೊತ್ತು
ತಪ್ಪದೆ ಮಾಚಗೆ ಬರುತಿಹರು । ಕೈ ಮುಗಿದು
ಅಪ್ಪನಿನ ಭಕ್ತರಾಗುವೆವು ॥೧೪॥ -ಮ-ಮಾ-

ಅಂತಹ ಭೀಕರ ಶಿವಶರಣನಿದ್ದ ಮಾಚಯ್ಯ! ಕವಿಯು ಅವನಿಗೆ 'ಬಿಚ್ಚಗತ್ತಿಯ ಮಾಚ,' 'ವೀರ ಮಾಚಣ್ಣ ಕರುವಾಳು,' 'ಧೀರ ಕಾಯಕದ ಹುರಿಯಾಳು' ಎಂದು ಕರೆದಿದ್ದಾನೆ.

ಉಘೆ ಗುರುಪ್ರಭುದೇವ, ಉಘೆ ಭಕ್ತನಿಧಿ ಬಸವ
ಉಘೆ ಜ್ಞಾನಿ ಚೆನ್ನಬಸವನೆ । ಉಘೆ ಲಿಂಗ
ಉಘೆ ಶರಣರೆ ಲಿಂಗವಂತರೆ ॥೪೦॥ -ಮ-ಮಾ-

ಹೀಗೆ ಗುಟ್ಟಿಲೆ 'ಉಘೆ ಮಂತ್ರ'ವನ್ನು ಜಪಿಸಿದ ಮಾಚಯ್ಯನು ಭಕ್ತಿಯಿಂದ ಕ್ರಾಂತಿಯನ್ನೆಬ್ಬಿಸಿದ್ದಾನೆ. ಇದನ್ನು ಚಿತ್ರಿಸುವುದರಲ್ಲಿ ಕವಿಯು ತನ್ನ ಜಾಣತನವನ್ನೂ ತೋರಿಸಿದ್ದಾನೆ.

ಆಚಾರ ಹೊರಗಾಡಿ, ಆರುಬಡಕಿಯರೊಳಗೆ
ನಾಚದಲೆ ಇರುವ ಜಗವುಂಟು । ಉತ್ತಣ್ಣ
ಬಾಚಿ ಹೊತ್ತಿರುವೆ ನಾನದಕೆ ॥೮೭॥ -ಮೇ-ಕೇ-

ಎಂದಾಡಿದ ಮಾಚಯ್ಯನು ಕ್ರಾಂತಿಕಾರನಾಗುವುದರಲ್ಲಿ ಸಂದೇಹವೇನು? ಕೇತಯ್ಯನು ಅಕಾಲ ಮರಣವನ್ನು (Immatured death) ಕೇಳಿ ಬಸವನು ಪ್ರಾಣನೀಗಲು ಈ ದುರಂತವನ್ನು ಕೇಳಿದ ಮಾಚಯ್ಯನು 'ಹರನಿಗಾಯಿತೆ ಎದೆಯು ಶರಣರಸು ಒಯ್ಯುದಕೆ,' 'ಹರನ ಉಪ್ಪರಿಗೆ ಉರುಳಿಸುವೆ' ಎಂದು

ಆಕಾಶ ಘಂಟೆಗಾ, ಏಕಗುಣಿ ಕಾಯಕವ
ಸಾಕೆನ್ನದೆ ಮಾಚ ಬಾರಿಸಲು । ಗಡಚಿಕ್ಕಿ
ತಾಕಿ ದಿಕ್ಕುಗಳು ಶಿವಗೆದ್ದು ॥೧೦೨॥

ನೂಕುವನು ಶಿವಲೋಕ, ತೂಕ ಹಿಡಿಯಲು ಕಷ್ಟ
ಸಾಕು ಮಾಚಯ್ಯ ತಡೆನಿಲ್ಲು । ಅನ್ನುದಕೆ
ತೂಕಡಿಸಿ ಬಸವ ಕೇತೆದ್ದು ॥೧೦೩॥ -ಮೇ-ಕೇ-

ಇಂತಹ ವೀರ ಶಿವಶರಣ ಮಾಚನು ಮಾಡಿದ ಕ್ರಾಂತಿಯು ಅವನ ಚರಿತೆಯಲ್ಲಿ ಎಲ್ಲ ವೀರಶೈವ ಪುರಾಣಗಳಲ್ಲಿ ಬಂದಿದೆ. ಕಿನ್ನರಿ ಬೊಮ್ಮಯ್ಯಗಳೂ ಅಸಮಾನ್ಯ ಶೂರರೆಂದು ಕವಿಯು ಹಾಡಿದ್ದಾನೆ; 'ಅಸಮಾನ್ಯ ಬೊಮ್ಮಯ್ಯ, ನೊಸಲಗಣ್ಣನ ಭಕ್ತ'ನೆಂದು ಕರೆದಿದ್ದಾನೆ. ಕಿನ್ನರಿ ಬೊಮ್ಮಯ್ಯನು ತಾನು ನಿರಪರಾಧಿಯೆಂದು ಶಿವಲಿಂಗದ ಸಾಕ್ಷಿಯನ್ನು ಏಳುದಿನ ಹಗಲಿರುಳುನುಡಿಸಲು ಕೋಪಿಸಿದ ಬಿಜ್ಜಳನು ಶರಣಾಗತನಾಗಿ ಕ್ಷಮಿಸೆಂದು ಬೊಮ್ಮಯ್ಯನಿಗೆ ಬೇಡಿಕೊಂಡನೆಂದು ಕವಿಯು ಹೇಳುತ್ತಾನೆ.

ಬಿದ್ದ ಬಿಜ್ಜಳರಾಯ, ಎದ್ದು ಹರಹರ ಎಂದು
ಉದ್ಧಾರವಾದೆ ನಿಮ್ಮಿಂದ। ಬೊಮ್ಮಯ್ಯ
ಸಿದ್ಧಿ ಶಿವಮಂತ್ರ ಊದಿದನು ॥೬೧॥ *-ಕಿ-ಬೊ-*

ಎಂದು ಬೊಮ್ಮಯ್ಯನ ಕ್ರಾಂತಿಯು, ಭಕ್ತಿಯೆಂದು ಹಾಡಿದ್ದಾನೆ.

ಈ ಹಳ್ಳಿಯ ಕಬ್ಬಿಗನು ಶಿವಶರಣರ ಹಂತಿಯ ಹಾಡುಗಳಲ್ಲಿ ಉಪಯೋಗಿಸಿದ ಶಿವಶಬ್ದ ಕೋಶವು ಅವನ ಭಕ್ತಿಯ ಆವೇಶದ ಒಂದು ದ್ಯೋತಕವು. 'ಶಿವ' ಈ ಶಬ್ದವನ್ನು ಅನ್ಯಶಬ್ದಗಳೊಡನೆ ಸಮಾನ ಪದವನ್ನಾಗಿ ಮಾಡಿ ಹಿರಿದಾದ ಅರ್ಥವಾಗುವಂತೆ ಸಮಯೋಚಿತವಾಗಿ ಹಾಡುಗಳಲ್ಲಿ ಕವಿಯು ಧಾರಾಳವಾಗಿ ಬಳಸುತ್ತ ಬಂದಿದ್ದಾನೆ. ಈ ಶಬ್ದಗಳು ಸಂದರ್ಭಕ್ಕೆ ಸರಿಯಾಗಿ ಬಲು ಹಿತಮಿತವಾಗಿ ಬಳಸಲ್ಪಟ್ಟಿವೆ. ತಾನು ಬಳಸುವ ಶಬ್ದಗಳ ವಿಶಿಷ್ಟ ಅರ್ಥವನ್ನು ಕವಿಯು ಮುಂಚಿತವೇ ಅರಿತುಕೊಂಡು ಸಂದರ್ಭಕ್ಕೆ ಹೊಂದಿಕೆಯಾಗಿ, ಅರ್ಥವು ತುಂಬಿ ಬರುವಂತೆ ಬಳಸಿರುವುದರಿಂದ ಈ ಶಬ್ದಗಳು ಓದುಗರ ಮನಸ್ಸನ್ನು ಹಿಡಿಯುವುವು. ಈ 'ಶಿವಶಬ್ದ ಕೋಶ'ದ ಕೆಲವು ಶಬ್ದಗಳನ್ನು ಕೆಳಗೆ ಕೊಡಲಾಗಿದೆ.

ಶಿವ ಅಂಗಿ ; ಚಿರ್ಚದ ಚರ್ಮ
ಶಿವ ಎಡೆ ; ರಾಶಿಬುತ್ತಿ, ದಾಸೋಹ
ಶಿವಕಳೆ ; ದಿವ್ಯಕಾಂತಿ
ಶಿವಕಾಣಿ ; ಸರಿಸಮಾನ್ಯತೆ ; ಸಮತೆ
ಶಿವಕಾಂಚಿ ; ಊರ ಹೆಸರು
ಶಿವಕುಲ ; ವೀರಶೈವ ಕುಲ
ಶಿವಕೂಟ ; ಜಂಗಮರ ಓಲಗ
ಶಿವಕೂಸು; ಬಿಜ್ಜಮಹಾದೇವಿಯ ಮಗ
ಶಿವಕೊಡತಿ ; ಗುಂಡನ ಕೊಡತಿ
ಶಿವಕೋಲು ;ಗುಂಡನ ತಿಗರಿಯ ಕೋಲು
ಶಿವಗಣ ; ಶಿವನ ಪರಿಚಾರಕರು
ಶಿವಗತಿ ; ಮೋಕ್ಷ
ಶಿವಗಂಗೆ ; ಶಿವನ ಎರಡನೆಯ ಹೆಂಡತಿ
ಶಿವಗಾಳಿ ; ಶಾಂತ ಗಾಳಿ
ಶಿವಗಾಡಿ ; ಶಿವನ ಚೆಲುವಿಕೆ
ಶಿವಗುಡಿ ; ಶಿವಾಲಯ
ಶಿವಗುಣಿತ ; ತಾಂಡವ
ಶಿವಗೇರಿ ; ಕುಣಿಗೇರಿ ; ಸುಡಗಾಡ
ಶಿವಗೋಷ್ಠಿ ; ಶಿವಾಚಾರ
ಶಿವಗೊಂಬಿ ; ಶಿವನ ಮೂರ್ತಿ
ಶಿವಜ್ಞಾಣಿ ; ಶಿವಜ್ಞಾನಿ; ಪ್ರಭುದೇವ
ಶಿವಜೀವ ; ಶಿವಭಕ್ತ, ವೀರಶೈವ
ಶಿವಜಡೆ ; ನಿವುಡುಗಟ್ಟಿದ ಕೂದಲು
ಶಿವತತ್ವ ; ಅಷ್ಟಾವರ್ಣ, ಷಟ್‌ಸ್ಥಲಗಳು
ಶಿವತಾಯಿ ; ಬಿಜ್ಜಮಹಾದೇವಿ
ಶಿವತೂಕ ; ಪಾವನತೆ
ಶಿವ ತಳಿಗೆ ; ಪ್ರಸಾದ ಪಾತ್ರೆ; ಗಂಗಾಳ
ಶಿವದಾರ ; ಕರಡಿಗೆಯ ದಾರ
ಶಿವದಾನ ; ಮಜ್ಜಿಗೆ
ಶಿವದೀಪ; ಅಮರದೀಪ ; ಮಂಗಲದೀಪ
ಶಿವದೀಕ್ಷೆ ; ಅಯಾಚಾರ ; ವೀರಶೈವದೀಕ್ಷೆ
ಶಿವಧೋ ; ಶಿವನಿಗೆ ಜಯಕಾರ
ಶಿವನಡಿ ; ಪೂಜ್ಯಪಾದ; ಜಂಗಮನಪಾದ
ಶಿವನಾಣೆ ; ಮಹಾಪ್ರತಿಜ್ಞೆ
ಶಿವನಾಟ ; ಪ್ರಪಂಚ
ಶಿವನಿಷ್ಠೆ ; ನಿರ್ದಿಷ್ಟ ಭಕ್ತಿ
ಶಿವನುಡಿ ; ಶುಭನುಡಿ ; ವಚನಶಾಸ್ತ್ರ
ಶಿವನಾದ ; ಶಿವಗುಂಗು ; ಅರಿವು
ಶಿವಪದ ; ಮೋಕ್ಷ
ಶಿವಪಾಠ ; ಶಿವನಸ್ತುತಿ
ಶಿವಪೀಠ ; ಮೋಕ್ಷ
ಶಿವಪುರ ; ಶಿವಲೋಕ ; ಸ್ವರ್ಗ; ಕಾಂಚಿ
ಶಿವಪುತ್ರ ; ವೀರಭದ್ರ ; ಮಾಚಯ್ಯ
ಶಿವಪೂಜೆ ; ಲಿಂಗಪೂಜೆ
ಶಿವಬಸವ ; ನಂದಿ
ಶಿವಬತ್ತಿ ; ಶುಚಿರ್ಭೂತವಾದ ಬತ್ತಿ; ಕೊಕ್ಕಾಬತ್ತಿ
ಶಿವಬುಟ್ಟಿ ; ಆಕಾಶಬುಟ್ಟಿ ; ದೀಪಬುಟ್ಟಿ
ಶಿವಬೆಳಕು ; ದಿವ್ಯಬೆಳಕು
ಶಿವಬೋಧೆ ; ಶಿವೋಪದೇಶ
ಶಿವಭಕ್ತಿ ; ಆದರ್ಶಭಕ್ತಿ
ಶಿವಭಜನೆ ; ಶಿವಸ್ತುತಿ, ನೂರೊಂದು ನಾಮ
ಶಿವಭೇರೆ ; ಶಂಖನಾದ ; ಮಂಗಲನಾದ
ಶಿವಮತ ; ಲಿಂಗಾಯತ ಮತ
ಶಿವಮನೆ ; ಕುಣಿಗೇರಿ ; ಸುಡಗಾಡ
ಶಿವಮಂತ್ರ ; ಓಂ ನಮಃ ಶಿವಾಯ; ವೀರಶೈವ ದೀಕ್ಷೆ.
ಶಿವಮಂಗಲ ; ಶುಭ
ಶಿವಮಾಸ ; ಶ್ರಾವಣ
ಶಿವಮಠ ; ಹಿರೇಮಠ
ಶಿವಮಂಟಪ ; ಕಲ್ಯಾಣ ಮಂಟಪ
ಶಿವಮಂದಿರ ; ಶಿವಾಲಯ
ಶಿವ ಮುಕುಟ ; ಜಡೆ
ಶಿವರಸ ; ಎಂಬಲ : (ಮಜ್ಜಿಗೆ)
ಶಿವರಾತ್ರಿ ; ಶಿವಯೋಗದ ರಾತ್ರಿ
ಶಿವರೂಪ ; ಆನಂದರೂಪ
ಶಿವಯೋಗ ; ಸಮರಸ ; ಮೋಕ್ಷ (ಶಿವನ ಹಬ್ಬ)
ಶಿವಲೋಕ ; ಕೈಲಾಸ

ಶಿವಲೆಂಕ ; ಶಿವಭಕ್ತ
ಶಿವಲೀಲೆ ; ಶಿವನ ೨೫ ಲೀಲೆಗಳು
ಶಿವಲಿಂಗ ; ಪರಮಾತ್ಮ
ಶಿವಾಲಯ ; ದೇವರಗುಡಿ
ಶಿವವಾಸ ; ಸುಡುಗಾಡ
ಶಿವವುಂಡಿಗೆ ; ಲಿಂಗಮುದ್ರೆ
ಶಿವಶರಣ ; ಶಿವನಪ್ರೀತಿಯ ಭಕ್ತ
ಶಿವಶರಣೆ ; ಪ್ರೀತಿಯ ಶಿವಭಕ್ತಳು
ಶಿವಶಂಖ ; ಮಂಗಳ ಸ್ವರ
ಶಿವಶಿಖರ ; ಗೌರಿಶಂಕರ; ಶ್ರೀಶೈಲ; ಜಡೆ
ಶಿವಸಂಗತಿ ; ಶಿವಗಥೆ
ಶಿವಸುಖ ; ಮೋಕ್ಷ
ಶಿವಸಿಸು ; ಬಿಜ್ಜಮಹಾದೇವಿಯ ಮಗ
ಶಿವಸಸಿ ; ಲಿಂಗಾಯತ ಮತ
ಶಿವಸಾಕ್ಷಿ ; ಸತ್ಯ
ಶಿವಸದರು ; ಕೈಲಾಸ
ಶಿವಸೇವೆ ; ಶಿವಭಕ್ತಿ
ಶಿವಸೂತ್ರ ; ಪಂಚಾಚಾರ್ಯ ಸೂತ್ರಗಳು

ಹೀಗೆ ಅನೇಕ ಶಿವಶಬ್ದಗಳು ಈ ಹಂತಿಯ ಹಾಡುಗಳಲ್ಲಿ ಓದುಗರ ದೃಷ್ಟಿಗೆ ಬೀಳುವುವು. ಹಲಕೆಲವುಗಳ ಅರ್ಥವೇ ವಿಚಿತ್ರವಾಗಿರುವುದು. ಈ ಎಲ್ಲ ಶಬ್ದಗಳಲ್ಲಿ 'ಶಿವಬೆಳಕು,' 'ಶಿವಗಾಳಿ' ಈ ಎರಡೂ ಶಬ್ದಗಳನ್ನು ಕವಿಯು ಅತಿ ಸುಂದರವಾಗಿ ತನಗೆ ಬೇಕಾದಾಗ ಉಪಯೋಗಿಸಿದ್ದಾನೆ. ಈ ಶಬ್ದ ಜೋಡಿಸುವ ಕುಶಲತೆಯು ಅನ್ಯಾದೃಶವಾಗಿದೆ ಎಂದು ಹೇಳಬಹುದು. ಹೀಗೆ ಶಬ್ದಗಳನ್ನುಪಯೋಗಿಸುವುದು ವರಕವಿಗಳಿಗೆ ಮಾತ್ರ ಸಾಧ್ಯ.

ವರ್ಣನೆಗಳು

ವಾರಿಧಿ ಪರ್ವತಂ ಪುರಮಧೀಶ್ವರನುದ್ವಹನಂ ಕುಮರನಂ
ಭೋರುಹ – ವೈರಿಮಿತ್ರ ರುದಯಂ ಋತು ನಂದನ ಮಂಬು ಸೀಧುಕಾಂ ॥
ತಾರತಿ ಚಿಂತೆ ಮಂತ್ರ ಚರಯಾನ ವಿರೋಧಿ–ಜಯಂಗಳೆಂಬಿವಂ
ಸೂರಿಗಳಂಗಮೆಂದು ಕೃತಿಯೊಳ್ ಪದಿನೆಂಟು ಮನೆಯ್ದು ಬಣ್ಣಿಪರ್ ॥

ಮಲ್ಲಿಕಾರ್ಜುನನ 'ಸೂಕ್ತಿ ಸುಧಾರ್ಣವ' –

ಹದಿನೆಂಟು ವರ್ಣನೆಗಳಿಂದ ಕೂಡಿದುದೇ ಮಹಾಕಾವ್ಯವೆಂದು ಶಾಸ್ತ್ರಕಾರರು ಸಾರುತ್ತ ಬಂದಿದ್ದಾರೆ. ಕನ್ನಡದಲ್ಲಿ ಮೊದಲನೆಯ ಗ್ರಂಥವಾದ ನೃಪತುಂಗನ 'ಕವಿರಾಜ ಮಾರ್ಗವು' ಮಹಾಕಾವ್ಯವಾಗಿರದೆ ಒಂದು ಲಾಕ್ಷಣಿಕ ಗ್ರಂಥವಾಗಿದೆ. ಆದುದರಿಂದ ಇದಕ್ಕಿಂತಲೂ ಹಿಂದೆ ಕಾವ್ಯಗಳು ಕನ್ನಡದಲ್ಲಿದ್ದರಲೇ ಬೇಕು. ಅವನು ತನ್ನ 'ಕವಿರಾಜ ಮಾರ್ಗ'ದಲ್ಲಿ ಗದ್ಯಪದ್ಯಗಳಲ್ಲಿ ಕಾವ್ಯ ರಚಿಸಿದ ತನ್ನಕಿಂತಲೂ ಹಿಂದಿನ ಕೆಲವು ಕವಿಗಳನ್ನು ಹೇಳಿದ್ದಾನೆ. ಆತನಿಗೆ ಹಿಂದೆ ಇದ್ದ ಆವುದೋ ಜೈನರಾಮಾಯಣದೊಳಗಿನ ಕೆಲಪದ್ಯಗಳನ್ನೂ ತನ್ನ ಗ್ರಂಥದಲ್ಲಿ ಉದಾಹರಿಸಿದ್ದಾನೆ. ಇವನ ಹಿದಿನ ಕವಿಗಳೆಲ್ಲರೂ ಸಂಸ್ಕೃತ ಪದ್ಧತಿಯನ್ನೇ ಅನುಕರಿಸಿ ಕಾವ್ಯ ಬರೆದಿದ್ದರೆಂದು ತಿಳಿದುಬರುವುದು. ಯಾಕಂದರೆ ನೃಪತುಂಗನ ನಂತರ ಬಂದ ಎಲ್ಲ ಕನ್ನಡ ಕವಿಗಳು ಅದೇ ಪದ್ಧತಿಯನ್ನನುಸರಿಸಿ 'ಚಂಪೂ ಶೈಲಿ'ಯಲ್ಲಿ ಹನ್ನೆರಡನೆಯ ಶತಮಾನದವರೆಗೆ ಕನ್ನಡದಲ್ಲಿ ಕಾವ್ಯಗಳನ್ನು ಬರೆದಿದ್ದಾರೆ. ಸಂಸ್ಕೃತ ಸಂಪ್ರದಾಯವು ಕನ್ನಡಿಗರ ಮೇಲೆ ಪ್ರಭಾವವನ್ನು ಬೀರುವ ಮುನ್ನ ಶುದ್ಧ ಕನ್ನಡ ಸಂಪ್ರದಾಯವು ಕರ್ನಾಟಕದಲ್ಲಿದ್ದರಲೇಬೇಕು. ನೃಪತುಂಗನು ತನ್ನ ಗ್ರಂಥದಲ್ಲಿ ಹೇಳಿದ 'ಚಿತ್ತಾಣ,' 'ಬೆದಂಡೆಗಬ್ಬ'ಗಳೂ, ನಾಗವರ್ಮನು ತನ್ನ 'ಕಾವ್ಯಾವಲೋಕನ'ದಲ್ಲಿ ಹೇಳಿದ, ಪದ, ಮೇಲ್ವಾಡು, ಪಾಡು, ಪಾಡುಗಬ್ಬ, ಬಾಜನೆಗಬ್ಬ ಮೊದಲಾದುವುಗಳೂ ಇದಕ್ಕೆ ಬಲವಾದ ಸಾಕ್ಷಿ. ಇವೆಲ್ಲವುಗಳೂ ಈ ಕವಿಗಳ ಕಾವ್ಯದಲ್ಲಿ ಕನ್ನಡ ಸಂಪ್ರದಾಯದಂತೆ ಗ್ರಂಥಸ್ಥವಾದ ಕನ್ನಡ ಕಾವ್ಯಗಳಿರಬಹುದೆಂದು ಹೇಳಬಹುದು. ಈ ಹಾಡುಗಳಲ್ಲಿ ಬಳಸಿದ ಛಂದಸ್ಸನ್ನು ನೋಡಿದರೆ ಇವುಗಳ ಹಿಂದೆ ಗ್ರಂಥಸ್ಥವಾಗದ ಜನತೆಯ ಸಾಹಿತ್ಯವೂ ಒಂದು ಇರಬೇಕೆಂದು ಅನಿಸದಿರದು. ಅದನ್ನೇ ನಾವು ಇಂದು ಜಾನಪದ ಸಾಹಿತ್ಯವೆಂದು ಕರೆಯುತ್ತೇವೆ.

ಕಾವ್ಯವು ಯಾವುದೇ ಇರಲಿ ವರ್ಣನೆಯಿಲ್ಲದೆ ಶೋಭಿಸಲಾರದು. ಈಗ ದೊರೆಯುವ ಜಾನಪದ ಸಾಹಿತ್ಯದಲ್ಲಿ ಕಂಡುಬರುವ ವರ್ಣನೆಗಳಂತೆ ಹಿಂದಿನ ಜಾನಪದ ಸಾಹಿತ್ಯದಲ್ಲಿಯೂ ವರ್ಣನೆಗಳಿದ್ದಿರಬಹುದು. ಅವೆಲ್ಲವುಗಳನ್ನು ಪರಿಶೀಲನ ಮಾಡಿದ ಲಾಕ್ಷಣಿಕರು, ಅವೆಲ್ಲವುಗಳು ಒಂದೆಡೆ ಬಂದರೆ ಮಾತ್ರ 'ಮಹಾಕಾವ್ಯ'ವಾಗುವುದೆಂದು ಬಂಧನ ಮಾಡಿದರು. ಅದು ಮುಂದೆ ಸಂಪ್ರದಾಯವಾಗಿ ಸಾಹಿತ್ಯದಲ್ಲಿ ತಲೆಯೆತ್ತಿ ನಿಂತಿತು. ಹಿಂದಿನ ಕವಿಗಳು ಸಂಪ್ರದಾಯವಾಗಿ ಬಂದ ಈ ವರ್ಣನೆಗಳನ್ನು ಪ್ರಸಂಗೋಚಿತವಾಗಿಯೊ, ಒಮ್ಮೊಮ್ಮೆ ಅಪ್ರಾಸಂಗಿಕ ವಾಗಿಯೊ ತಮ್ಮ ಕಾವ್ಯಗಳಲ್ಲಿ ತುಂಬುತ್ತ ಬಂದಿದ್ದಾರೆ. ಜಾನಪದ ಸಾಹಿತ್ಯ ಈ ಕಟ್ಟುನಿಟ್ಟುಗಳಿಗೆ ಒಳಗಾಗಲಿಲ್ಲ. ಹಗಲಿರುಳು ಸೃಷ್ಟಿ ಸೌಂದರ್ಯದಲ್ಲಿ ಜೀವನವನ್ನು ಕಳೆಯುವ ಜಾನಪದ ಕವಿಗಳು ಸಹಜ ಸೌಂದರ್ಯ ಪ್ರಿಯರು. ಕಾರಣ ಔಚಿತ್ಯವರಿತು ಈ ವರ್ಣನೆಗಳನ್ನು ಅವರು ತಮ್ಮ ಹಾಡಿನಲ್ಲಿ ತರುತ್ತಾರೆ. ಹಾಡುಗಳಲ್ಲಿ ಬರುವ ವರ್ಣನೆಗಳು ತೀರ ಸಣ್ಣವಿದ್ದರೂ ಬಲು ಚುರುಕಾಗಿರುತ್ತವೆ. ಕೇವಲ ಪದ್ಧತಿಯೆಂದು ಅವರು ವರ್ಣಿಸುವುದಿಲ್ಲ. ನಿಸರ್ಗ ಸೌಂದರ್ಯದಲ್ಲಿ ಆಳವಾದ ಪ್ರೇಮವುಳ್ಳ ಅವರು ಅದನ್ನು ಮನಸೆಳೆಯುವ ರೀತಿಯಲ್ಲಿ ಹೇಳುತ್ತಾರೆ. ಹೇಳುವಲ್ಲಿ ಸಹಜತೆಯಿಂದ ಹೊಸತನವು ತುಂಬಿ ಬರುವುದರಿಂದ ಅವರ ವರ್ಣನೆಗಳು ಬಲು ರಸವತ್ತಾಗಿ ಚಿತ್ತಾಕರ್ಷಕವಾಗುವುವು.

ಶಿವಶರಣರ ಹಂತಿಯ ಹಾಡುಗಳಲ್ಲಿ ಬರುವ ವರ್ಣನೆಗಳು ನವೀನವಾಗಿಯೂ, ಅತ್ಯಂತ ಹೃದಯಂಗಮವಾಗಿಯೂ ಇವೆ. ಹಾಡಿದ ಕವಿಯು ಒಕ್ಕಲಿಗನಾದುದರಿಂದ, ನಿಸರ್ಗವನ್ನುಂಡ ಅವನ ಸರಳ ಹೃದಯವು ಅದನ್ನು ಬಣ್ಣಿಸುವುದರಲ್ಲಿ ಹಿಗ್ಗಿನ ಬುಗ್ಗಿಯಾಗಿದೆ. ಬಣ್ಣಿಸಿದ ಸೌಂದರ್ಯವು ರೂಪವನ್ನು ತಾಳಿ ಓದುಗರ ಮುಂದೆ ನಿಂತೇ ಬಿಡುವುದು. ತನ್ನ ಜೀವನದಲ್ಲಿ ಸಾವಿರಾರು ಉದಯಾಸ್ತಗಳನ್ನು ಕಂಡು ಈ ಜಾನಪದ ಕವಿಯು ಅವುಗಳನ್ನು ತನ್ನ ಸುತ್ತಮುತ್ತಲಿನ ಬೇರೆ ಬೇರೆ ರಂಗಗಳಲ್ಲಿ ಹೊಂದಿಕೆಯಾಗುವಂತೆ ಪೋಣಿಸಿದ್ದಾನೆ.

ಕಸುಕಾದ ದಾಳಿಂಬ, ರಸತುಂಬಿ ಒಡೆದಂತೆ
ನಸುಗೆಂಪು ಒಡೆದು ಮೂಡಲವು । ಶಿವಭಕ್ತಿ
ಹಸುಗಂಪು ಹರಿದು ಜಗತುಂಬಿ ॥೮೪॥ *–ಬ–ಮ–*

ಎಷ್ಟು ಹದನವಾಗಿದೆ ಈ ಹಳ್ಳಿಯ ಕಬ್ಬಿಗನ ನಿಸರ್ಗ ನಿರೀಕ್ಷಣೆ! ಅಲಂಕಾರಾದಿಗಳನ್ನರಿಯದ ಈ ಕವಿಯು ಸಹಜತೆಯಲ್ಲಿಯೇ ಅಲಂಕಾರ ಯುಕ್ತವಾಗಿ ಹಾಡಿದ್ದಾನೆ. 'ಕಸುಕಾದ ದಾಳಿಂಬವು ರಸತುಂಬಿ ಒಡೆದಂತೆ' ಇರುಳು ಕಳೆಕಳೆದು ಮೂಡಲದಲ್ಲಿ ತುಂಬು ಬಿಚ್ಚಿ ನಸುಕೆಂಪಿನೊಡನೆ ಬೆಳಗಾಗುವುದೆಂದು ಹೇಳುವ ಕವಿಯೇನು ಸಾಮಾನ್ಯನೇ? 'ನಾಲ್ಕು ನಾಡಪದಗಳು' ಎಂಬ ಶಿವಶರಣರ ಹಂತಿಯ ಹಾಡುಗಳ ಸಂಕಲನದ ಮುನ್ನುಡಿಯಲ್ಲಿ ಈ ವರ್ಣನೆಯನ್ನು ಕುರಿತು "ಇದು ಒಂದು ಪ್ರಭಾತ ವರ್ಣನೆಯ ಅತ್ಯಂತ ಹೃದಯಂಗಮವಾದ ಒಂದು ರೀತಿ. ಪ್ರಭಾತ ವರ್ಣನೆಯನ್ನು ಅನೇಕ ಕವಿಗಳು ಅನೇಕ ರೀತಿಯಾಗಿ ಮಾಡಿದ್ದಾರೆ. ಆದರೆ ಇಲ್ಲಿ ಬರುವ ಅಲಂಕಾರವು ಎಷ್ಟು ನವೀನವೂ ಹೃದಯಂಗಮವೂ ಆಗಿದೆ ಎಂಬುದನ್ನು ನಾವು ಗಮನಿಸಬೇಕು.

'ಕಸುಕಾದ ದಾಳಿಂಬ ರಸತುಂಬಿ ಒಡೆದಂತೆ
ನಸುಗೆಂಪು ಒಡೆದು ಮೂಡಲವು'।

ಎಂದು ಹೇಳುವ ಕವಿಯ ಹೃದಯ, ಸೌಂದರ್ಯ ದೃಷ್ಟಿ ಏನು ಸಾಮಾನ್ಯವಾದುವಲ್ಲ. ಇಂಥ ಒಂದೆರಡು ಸೌಂದರ್ಯಲಹರಿಗಳನ್ನು ಹರಿಯಿಸಬಲ್ಲ ಕವಿ ನಿಜವಾಗಿ ಧನ್ಯನು." ಎಂದು ಮುನ್ನುಡಿಗಾರರು ಬರೆದಿದ್ದಾರೆ. ಈ ಸೃಷ್ಟಿ ಸೌಂದರ್ಯವನ್ನು ಹೇಳಿ ಕವಿಯು ಅಷ್ಟಕ್ಕೆ ತಟಸ್ಥನಾಗಿಲ್ಲ. ಶಿವಭಕ್ತನಾದುದರಿಂದ ಶಿವಭಕ್ತಿಯ 'ಹಸುಗಂಪು' ಮೂಡಲದ ನಡುಗಂಪಿನಂತೆ ಸುತ್ತಲೂ ಹರಿದು ಜಗ ತುಂಬಿತೆಂದು ಅದರೊಡನೆ ಮತದರ್ಶನವನ್ನೂ ಸಾಧಿಸಿದ್ದಾನೆ. ಹೇಳುವ ಮಾತಿನ ಸುತ್ತ ಮುತ್ತಲು ದಿವ್ಯ ವಾತಾವರಣ (Divine atmosphere) ವನ್ನು ಹುಟ್ಟಿಸಿ ಅದರೊಡನೆ ವಿಷಯದಲ್ಲಿ ಪಾವನತೆಯನ್ನು ತುಂಬಿಬಿಡುತ್ತಾನೆ. ಬಹುತರವಾಗಿ ಈ ಕವಿಯ ಸೂರ್ಯೋದಯದ ಎಲ್ಲ ವರ್ಣನೆಗಳಲ್ಲಿ ಇದು ಕಂಡುಬರುವುದು. ಹಲ ಕೆಲವುಗಳನ್ನು ಕೆಳಗೆ ಚರ್ಚಿಸಲಾಗಿದೆ.

ತುಂಬಿ ಜಗ ಬೆಳಗಿದನು, ಜಂಬದಲಿ ದಿನಮಣಿಯು
ಚುಂಬಿಸಿತು ದಿನವು ಶಿವಭಕ್ತಿ । ಶಿವನಡಿಯ
ಶಂಭುಹರ ಶಿವನೆ ಶರಣೆಂದು ॥೩೦॥ *–ಕೋ–ಕೊ–*

ಬೆಳಗು ಬೇಗನೆ ಬಂತು, ತಿಳಿಸಲೀ ಜಗಕೆಲ್ಲ
ಸುಳಿಸುಳಿದು ಬೀಸೆ ಶಿವಗಾಳಿ । ಶಿವಗಣಕೆ
ಕಳಿಸುವದೊ ಸುದ್ದಿ ಕೋಳೂರ ॥೪೬॥ *–ಕೋ–ಕೊ–*

ಹೀಗೆ ಕವಿಯು ದಿವ್ಯಸಂದೇಶ (Divine message)ಗಳನ್ನು ನಿಸರ್ಗದ ದಿವ್ಯ ಸಂಚಲನಗಳ ಮುಖಾಂತರ ಶುಭ್ರತೆಯನ್ನು ಹುಟ್ಟಿಸಿ ಹರಡಿಸಿದ್ದಾನೆ. ಬೆಳಗಾಯಿತು ಎಂಬುದನ್ನು ಕವಿಯು ಶಿವಭಕ್ತಿಯ ಸಾರವೆಂದು ಹಾಡಿದ್ದಾನೆ.

ಹಾಡಿದವು ದಿಕ್ಕುಗಳು, ಬೇಡಿದವು ಕಾಡುಗಳು
ಹಾಡು ಗೊಲ್ಲಾಳ ಬೆಳತನಕ । ಶಿವಲೋಕ
ನೋಡು ನೋಡುತಲೆ ಬೆಳಗಾಯ್ತು ॥೫೩॥

ಮೂಡಲಕೆ ದಿನವೊಡೆದು, ತೀಡಿ ಸುಳಿದವು ಗಾಳಿ
ಕಾಡು ಕಳೆತುಂಬಿ ಹಿಕ್ಕಿಯೊಳು । ಶಿವಲಿಂಗ
ಮೂಡಿ ಹೂಬಿಸಿಲ ಸೂಸಿದನು ॥೫೪॥ *–ಗೊಲ್ಲಾಳ*

ಶಿವಲಿಂಗವೇ ಹಿಕ್ಕಿಯಲ್ಲಿ ಮೂಡಲು ಹೂಬಿಸಿಲು ಬಿತ್ತೆಂದು ಸೂರ್ಯೋದಯಕ್ಕೆ ಹೊಂದಿಸಿ ಹಾಡಿದ್ದಾನೆ. ಕವಿಯು ದಿವ್ಯಸೃಷ್ಟಿ (Supernatural atmosphere)ಯನ್ನು ಕಲ್ಪಿಸಿ ಅದರ ಮುಖಾಂತರ ಬಣ್ಣಿಸತಕ್ಕದ್ದನ್ನು ಸಂಕೋಚಬಾರದಂತೆ ಬಣ್ಣಿಸಿ ಓದುಗರಿಗೆ ಬಿಟ್ಟು ಗೂಡುತ್ತಾನೆ. ಕೇತಯ್ಯನ ಚಿತ್ಕಳೆಯು ಅಕಾಲವಾಗಿ ಶಿವಲೋಕ ಸೇರಲು 'ಶಿವಲೋಕ । ಚೇತನೆಯ ತುಂಬಿ ಬೆಳಗಾಯ್ತು' ಎಂದು ಕವಿಯು ಹೇಳುತ್ತಾನೆ. ಹೀಗೆ ಶಿವಲೋಕವು ಬೆಳಗಾಗಲು ಆ ಸುದ್ದಿಯನ್ನು ನರಲೋಕಕ್ಕೆ ಕಳುಹಿಸಲು ಸೂರ್ಯೋದಯವಾಗಿ ಬೆಳಕು ಮನೆ ಮನೆ ಹೊಕ್ಕು ಬೆಳಗಿತೆಂದು ಕವಿಯು ಹಾಡಿದ್ದಾನೆ.

ಬೆಳಕು ಮನೆಮನೆ ಹೊಕ್ಕು, ಕಳಕಳಿಯು ಬರುವಂತೆ
ತಿಳಿಸುವದೊ ಸುದ್ದಿಯೆಂಬಂತೆ । ರವಿಕಿರಣ
ಹೊಳಪಿಳಿದು ಚೆದರಿ ಚೆಲ್ಲಿದವು ॥೭೫॥ *–ಮೇ–ಕೇ–*

ಎಷ್ಟು ಯಥಾರ್ಥವಾಗಿದೆ ಕವಿಯ ಸೂರ್ಯೋದಯದ ಕಲ್ಪನೆಯಲ್ಲಿ! ಶಿವಶರಣ ಹೂಗರ ಮಾದಯ್ಯನು, ಅಕಾಲ ಮೃತ್ಯುವಿಗೆ ಈಡಾಗಲು ಅವನ ಗುರು, ಸಕಲೇಶ ಮಾದರಸು ಇರುಳೆಲ್ಲ ತನ್ನ ಶಿವಭಕ್ತಿಯ ಸಾಮರ್ಥ್ಯದಿಂದ ಮಾದಯ್ಯನಿಗೆ ಚಿತ್ಕಳೆಯನ್ನು ತರಲು ಯತ್ನಿಸಿದ್ದಾನೆ. 'ಏಳೇಳು ಕಾಯಕಕೆ ಎಂಬ ಅವನ ನುಡಿಗಳನ್ನು ಕೇಳಿದ ಮಾದಯ್ಯನ ಚಿತ್ಕಳೆಯು ಶಿವನ ಸನ್ನಿಧಿಯಿಂದ ಮಾದನ ಕಳೇಬರವನ್ನು ತುಂಬುವುದು. ಇದು ಸಂಭವಿಸಿದ್ದು ಇರುಳಿನಲ್ಲಿ.

ಮರೆತು ಜಗಮಲಗಿರಲು, ಅರಿಯಲಾ ಸೋಜಿಗವ
ಇರುಳಗಣ್ಣರಳಿ ನಗುತಿರಲು । ನರಲೋಕ
ಅರಳಿ ಹೂವಾಯ್ತು ಶಿವನಡಿಗೆ ॥೮೧॥ -ಹೂ-ಮಾ-

ಈ ಸಂಗತಿಯನ್ನರಿಯದೇ ಸುಪ್ತಾವಸ್ಥೆಯಲ್ಲಿ ನರಲೋಕ ವಿರಲು ಇರುಳುಗಣ್ಣ (ಚಂದ್ರ)ರಳಿ ನಗುತ್ತಿರಲು ನರಲೋಕವೇ ಅರಳಿ ಶಿವನಡಿಗೆ ಹೂವಾಯಿತೆಂದು ಕವಿಯು ಉತ್ಪ್ರೇಕ್ಷಿಸಿದ್ದಾನೆ. ರಾತ್ರಿಯಲ್ಲಿ ಸಂಭವಿಸಿದ ಈ ಸಂಗತಿಯನ್ನು ನೋಡಲು ಚಂದ್ರನೊಬ್ಬನಿಗೆ ಸಾಧ್ಯ. ಅದನ್ನು ನೋಡಿ ಅವನು ನಗಲು ಅವನ ನಗೆಯೇ ಬೆಳದಿಂಗಳಾಯಿತೆಂಬ ಧ್ವನಿಯೂ ಇದರ ಹಿಂದೆ ಇದೆ. ಬೆಳದಿಂಗಳು ಬೀಳಲು ಸೃಷ್ಟಿಯು ಅರಳಿ ಹೂವಾಯಿತೆಂಬ ಮಾತು ಎಷ್ಟು ಸಮರ್ಪಕವಾಗಿದೆ. ಇದೊಂದು ಚಂದ್ರೋದಯದ ಅಸಾಮಾನ್ಯ ಸೌಂದರ್ಯದ ವರ್ಣನೆಯೆನ್ನಬಹುದು. ಜಾತಿಗರ ಚೌಡನಿಗೆ ಶಿವಮೆಚ್ಚಿ ಆಶೀರ್ವದಿಸಲು ಅವನಿಗೆ ಬೆಳಗು ಬಂದಂತೆ ಶಿವಬೆಳಕು ಬಂತು ಎಂದು ಕವಿಯು ಅದನ್ನು ಸೂರ್ಯೋದಯಕ್ಕೆ ಹೋಲಿಸಿದ್ದಾನೆ.

ನಸುನಕ್ಕು ಶಿವಕೇಳಿ, ಮುಸುಕಿನಲಿ ಮರೆಯಾದ
ಹೊಸ ಬೆಳಕು ಬಂತು ಚೌಡನಿಗೆ । ಮೂಡಣವು
ನಸುಕಿನಲಿ ಕೆಂಪು ಹರಿದಂತೆ ॥೮೩॥ -ಜಾ-ಚೌ-

ಬೇಡರ ಕನ್ನಯ್ಯನು ಇರುಳೆಲ್ಲ ಶಿವನ ಮುಂದೆ ಭಕ್ತಿಯಿಂದ ಕುಣಿದಾಡಿ ಶಿವಾನಂದದಲ್ಲಿ ಮುಣಗಿರಲು; ಬೆಳಗು ಹರಿಯುವುದನ್ನು ಈ ಜಾನಪದ ಕವಿಯು ಬಲು ರಮ್ಯವಾಗಿ ಬಣ್ಣಿಸಿದ್ದಾನೆ.

ಕೋಳಿ ಕೂಗಿತು ಕೂಗಿ, ಹೇಳುತಲಿ ಜಗಕೆಲ್ಲ
ಇಳೆ ಬೆಳಗುವೊಡೆಯ ಬಂದೆಂದು । ಗುಂಗಿಗಳ
ಬಳಗೆದ್ದು ಹಾಡಿ ಬನದೊಳಗೆ ॥೮೪॥

ಜೊನ್ನನಾ ಹೊನ್ನುರಿಯು, ನಿಮ್ನ ಸಾಗರ ಮುಳುಗಿ
ಬೆನ್ನೊಳಗೆ ಬಿಡಲು ಹೊಗೆಮಂಜು । ಹೂಬಿಸಿಲ
ಬನ್ನ ಬಡಿಸುವದು ಚಣತನಕ ॥೮೯॥

ಮೂಡಲದ ಕೆಂಪಿನೊಳು, ಹಾಡಿದವು ಹಕ್ಕಿಗಳು
ನಾಡ ನಂಗುತಲಿ ಹೂ ಬಿಸಿಲು । ಕತ್ತಲೆಯು
ಓಡಿಪಡುವಣಕೆ ದಿನಕಂಜೆ ॥೯೦॥

ಮೂಡಲದ ಹೆಣ್ಣೊಡನೆ; ಆಡಿ ಓಕಳಿಯುಗ್ಗಿ
ಹೂಡಿ ರಥವೇರಿ ಹೊಡೆಯುತಲಿ । ಹೆಣ್ಣೊಡನೆ
ಜೋಡಾಗಿ ಬರುವ ಬಂಟ್ಯಾರೊ ॥೯೧॥ -ಚೇ-ಕ-

ಸೃಷ್ಟಿ ಸೌಂದರ್ಯದಲ್ಲಿ ಕಂಡುಬರುವ ಅತಿ ರಮ್ಯವಾದ ಸೂರ್ಯೋದಯದ ಸೂಚನೆಗಳು ಈ ಪದ್ಯಗಳಲ್ಲಿ ತುಂಬಿ ಬಂದಿವೆ.ಕೋಳಿ ಕೂಗುವುದು ಮೊದಲನೆಯ ಸೂಚನೆಯಾಗಿದೆ. ಬನಬನಗಳಲ್ಲಿ ಮಲಗಿದ ಗುಂಗಿಗಳು ಸೂರ್ಯೋದಯ ವಾಯಿತೆಂದು ಗುಂಯೆಂದು ಹಾಡುಹತ್ತುವುವೆಂದು ಕವಿಯು ಹೇಳುತ್ತಾನೆ. ಹೂ ಬಿಸಲನ್ನು ಪ್ರತಿಬಂಧಿಸುವ ಬಿದ್ದ ಹೊಗೆ ಮಂಜನ್ನು ಕಂಡ ಕವಿಯು ಚಂದ್ರಾಸ್ತ ಸೂರ್ಯೋದಯ ಕಾಲದಲ್ಲಾಗುವ ಒಂದು ರಮಣೀಯವಾದ ಬದಲಾವಣೆಯೆಂದು ಉತ್ಪ್ರೇಕ್ಷಿಸಿದ್ದಾನೆ. ಚಂದ್ರನ ಹೊನ್ನುರಿಯು ನಿಮ್ನ ಸಾಗರವನ್ನು ಸೇರಲು ಚೊರ್‍ರೆಂದು ನೀರಿನ ದುಬ್ಬ (ಮೇಲ್ಭಾಗ)ದಿಂದ ಬಂದ ಹೊಗೆಯೇ ಹೊಗೆ ಮಂಜಾಯಿತೆಂದು ಉಚಿತವಾಗಿ ಉತ್ಪ್ರೇಕ್ಷಿಸಿದ್ದಾನೆ. ಮೂಡಲವು ಕೆಂಪಾಗುವುದನ್ನು, ಆ ಕೆಂಪಿನಲ್ಲಿ ಹಕ್ಕಿಗಳು ಸುರುಗಿ ಹಾಡುವುದನ್ನೂ, ಪಶ್ಚಿಮದ ಕಡೆಗೆ ಕತ್ತಲೆಯ ಮಬ್ಬು ಹರಿಯುತ್ತ ಹೋಗುವುದನ್ನೂ ಕವಿಯು ನಿಸರ್ಗಾನುಸಾರವಾಗಿ ವರ್ಣಿಸಿದ್ದಾನೆ. ಮೂಡಲದ ಹೆಣ್ಣೊಡನೆ ಓಕಳಿಯಾಡಲು ಆಕಾಶವು ಲಾಲಾಯಿತೆಂದೂ, ಹೀಗೆ ರಥವನ್ನೇರಿ ಗಗನಾಂಗಣದೊಳಗೆ ಬರುವ ಬಂಟನಾರಿರಬಹುದೆಂದು ಕವಿಯು ತರ್ಕಿಸಹೋಗಿದ್ದಾನೆ.

ಸೂರ್ಯೋದಯಗಳಂತೆ ಸೂರ್ಯಾಸ್ತಗಳನ್ನೂ ಈ ಕವಿಯು ಜಾನಪದ ವಿವಿಧ ರೀತಿಯಲ್ಲಿ ಬಣ್ಣಿಸಿದ್ದಾನೆ. ಕಥಾ ಸಂದರ್ಭಕ್ಕೆ ಹಾಗೂ ಭಾವಕ್ಕೆ ಸರಿಯಾಗಿ ಇವುಗಳನ್ನು ಕವಿಯು ಬಳಸಿದ್ದಾನೆ. ಕೇತಯ್ಯನಿಗೆ ತನ್ನ ಕಾಯಕದಲ್ಲಿ ಕೂರಲಗು ನಟ್ಟು ಘಾಯವಾಗಲು, ತನ್ನ ಕೆಲಸವು ತಡೆದು ದಾಸೋಹವು ನಿಲ್ಲುವುದೆಂದು ಆಕುಲಿತನಾಗಿ

ಹಾರದಿರು ಪಡುಗಡಲ, ಏರಿ ಇಳಿಯುವ ರವಿಯೆ
ಮಾರ ಹರನಾಣೆ ಎನ್ನಾಣೆ । ಶಿವಶರಣ
ಧೀರ ಕಾಯಕದ ಮನದಾಣೆ ॥೯೯॥ -ಮೇ-ಕೇ-

ಎಂದು ತನ್ನ ದಾಸೋಹ ಸಾಧಿಸಲು ಸೂರ್ಯನಿಗೆ ಮುಳಗ ಬೇಡೆಂದು ಆಣೆಯನ್ನು ಹಾಕುವನು. ಎದೆಯೊಳಗೆ ನಟ್ಟು, ಮುರಿದ ಕೂರಲಗನ್ನು ಶಿವನೆಂದು ಕೇತಯ್ಯನ ಮಡದಿಯು ಕಿತ್ತೊಗೆಯಲು ಕೇತನ ಚಿತ್ಕಳೆಯು ಶಿವನ ಸನ್ನಿಧಿಗೆ ಹೋಯಿತು. ಕವಿಯು ಈ ಸಂಧಿಯನ್ನು ಹೊತ್ತು ಮುಣುಗಿತೆಂದು ಸಾಧಿಸಿದ್ದಾನೆ.

ಶಿವನೆಂದು ಎದೆನೋಡಿ, ತವಕದಲಿ ಕಿತ್ತೊಗೆಯೆ
ಶಿವಶಿವನೆ ಮುಗಿತು ಕಾಯಕವು । ಎಂದೆನುತ
ಶಿವಯೋಗ ರವಿಯು ಮುಳುಗಿದನು ॥೬೬॥

ನೋಡಲಾರದೆ ರವಿಯು, ಪಾಡು ಶಿವಶರಣರಿಗೆ
ಹೂಡುವದು ಆಟ ಕತ್ತಲೆಯು । ತಂದೆಂದು
ಬಾಡಿತಾಕಾಶ ಕಣ್ಮುಚ್ಚಿ ॥೬೭॥ –ಮೇ–ಕೇ–

ಕೂರಲಗು ನಟ್ಟರೂ ತನ್ನ ಕಾಯಕ ದಾಸೋಹಗಳನ್ನು ಮುಗಿಸಿ ಶಿವಶಿವನೆಂದು ಕೇತಯ್ಯನು ಮರಣ ಹೊಂದಲು, ಅದನ್ನೇ ಸೂರ್ಯಾಸ್ತಕ್ಕೆ ಎಷ್ಟು ಸಹಜವಾಗಿ ಹೋಲಿಸಿದ್ದಾನೆ ಕವಿ!

ಈ ಹಂತಿಯ ಹಾಡುಗಳಲ್ಲಿ ಈ ಜಾನಪದ ಕವಿಯು ಶಿವಶರಣರ ಪ್ರಭಾವವನ್ನು ನಿಸರ್ಗದ ಮೇಲೆಯೂ ಚೆಲ್ಲಿದ್ದಾನೆ. ಇರುಳಿನಲ್ಲಿ ಹಂತಿಯ ಕಟ್ಟಿ ಪ್ರಶಾಂತವಾದ ಆ ವಾತಾವರಣದಲ್ಲಿ ಒಕ್ಕಲಿಗನು ಈ ಹಂತಿಯ ಹಾಡುಗಳನ್ನು ಹಾಡುತ್ತ ಹಂತಿಯ ಹೊಡೆಯ ಹತ್ತಲು ಆ ಹಾಡುಗಳ ಸೋಂಕಿನಿಂದ ನಿಸರ್ಗದ ಕಾರ್ಯ ಕಲಾಪಗಳು ತಮ್ಮಿಂದ ತಾವೇ ಆಗುವುವೆಂದು ಈ ಹಳ್ಳಿಯ ಕಬ್ಬಿಗನು ಹಾಡಿದ್ದಾನೆ.

ನಿನ್ನ ಹಾಡವು ಸೋಂಕಿ, ಹೊನ್ನವರಿ ಬೆಟ್ಟರಳಿ
ಹೊನ್ನುರಿಯು ಹೊತ್ತಿ ಜಗಬೆಳಗಿ । ಬೆಳತನಕ
ಸಣ್ಣಾಗಿ ಸುರಿಯೆ ಇಬ್ಬನ್ನಿ ॥೨॥

ಹಾಡುದಕೆ ಕಾಡೆದ್ದು, ಮಾಡುವದು ಶಿವಪೂಜೆ
ಕೂಡಿ ಇಬ್ಬನ್ನಿ ಝುರೆಯಾಗಿ । ಶಿವನಡಿಗೆ
ಮೂಡಲವು ಬೆಳಗಿ ಹೂಬಿಸಿಲ ॥೩॥

ಇಬ್ಬನ್ನಿ ಮುತ್ತುಗಳ, ಮಬ್ಬು ಹಸರಿನ ಸೀರಿ
ದಿಬ್ಬೆಂದು ಹಾಡಿ ಹೊಲ ಕುಡಿಸಿ । ಒಕ್ಕಲಿಗ
ಹಬ್ಬೆಂದು ಸುಗ್ಗಿ ಮಾಡುವನು ॥೪॥ –ಹೂ–ಮಾ–

ಬೆಳುವಲದ ದಿಬ್ಬ–ದರಿಗಳಲ್ಲಿ ಹೊನ್ನವರಿಯ ಗಿಡಗಂಟೆಗಳೇ ಹೆಚ್ಚು. ಬಂಗಾರ ವರ್ಣದ ಇದರ ಹೂ, ನೋಡಲು ಅತಿಸುಂದರವಾಗಿ ಕಾಣುವುದು. ಶಿವಶರಣರ ಹಾಡಿನ ಪ್ರಭಾವದಿಂದ 'ಹೊನ್ನವರಿ ಬೆಟ್ಟರಳಿ', 'ಹೊನ್ನುರಿಯು ಹೊತ್ತಿ ಜಗಬೆಳಗಿ' ಎಂಬ ನಿಸರ್ಗ ಬದಲಾವಣೆಗಳು ಬಲು ಸುಂದರವಾಗಿವೆ. ಇದೊಂದು ಅಪ್ರತಿಮ ಬೆಳದಿಂಗಳ ರಾತ್ರಿ. ಮಾಗಿಯ ಕಾಲ (ಸುಗ್ಗಿಯ ಕಾಲ)ವಾದುದರಿಂದ ಬೆಳುವಲದಲ್ಲಿ ಇಬ್ಬನ್ನಿಯೂ ಬೀಳುವುದು. ಆ ಬೆಳದಿಂಗಳ ರಾತ್ರಿಯಲ್ಲಿ ಇಬ್ಬನ್ನಿಯು ಬೀಳಲು ಕಾಡೇ ಚೇತರಿಸಿ, ಎದ್ದು ಶಿವಪೂಜೆ ಮಾಡುವುದೆಂದೂ ಶಿವಗೆರದ ಆ ನೀರು ಇಬ್ಬನ್ನಿ ಹನಿಗಳಾಗಿ ಹರಿದವೆಂದೂ ಕವಿಯು ಆ ಸೊಬಗನ್ನು ಸೃಷ್ಟಿಸಿದ್ದಾನೆ. ಹೀಗೆ ಬೆಳತನಕ ನಡೆದ ಶಿವಪೂಜೆಯ ಮುಕ್ತಾಯ ಮಂಗಳಾರುತಿಯ ಬೆಳಕಾಗಿ ಮುಂಜಾನೆ ಶಿವನಡಿಗೆ ಹೂ ಬಿಸಿಲು ಬಿತ್ತೆಂದು ಹೀಗೆ ಹೇಳುತ್ತ ಕವಿಯು ಸೂರ್ಯೋದಯದ ವರ್ಣನೆಯನ್ನೂ ಇಲ್ಲಿ ಸಾಧಿಸಿದ್ದಾನೆ. ಇಂಥ ಸಿರಿಸೊಬಗಿನಲ್ಲಿಯ ಸುಗ್ಗಿಯು ಒಕ್ಕಲಿಗನಿಗೆ ಹಬ್ಬವಾಗುವುದರಲ್ಲಿ ಏನು ಆಶ್ಚರ್ಯ? ಅಂತೆಯೇ ಕವಿಯು 'ಇಬ್ಬನ್ನಿ ಮುತ್ತುಗಳ, ಮಬ್ಬು ಹಸರಿನ ಸೀರಿ' ಈ ಮಾತುಗಳು ಕಾಲಮಾನಸರಿಯಾಗಿ, ಭಾವ ಹಾಗೂ ಬೆಡಗಿಗೆ ಬಲು ಹೊಂದಿಕೆಯಾಗಿ ಜಾನಪದ ಬಿಡಿ ಮುತ್ತುಗಳಾಗಿ ಬಂದಿವೆ. ಇದೇ ಹಂತಿಯ ಹಾಡಿನಲ್ಲಿ ಬರುವ ಚಳಿಗಾಲದ ವರ್ಣನೆಯು ಚಿತ್ತಾಕರ್ಷಕವಾಗಿದೆ.

ವರುಷ ಮಾಸಗಳುರುಳಿ, ಉರಿಸಿಕಾಯಕ ಬತ್ತಿ
ಮೆರಸುದಕೆ ಬಂತು ಚಳಿಗಾಲ । ಕಾಯಕವು
ಕೆರಿಯಾಯ್ತು ಶರಣ ಮಾದನಿಗೆ ॥೨೧॥ –ಹೂ–ಮಾ–

ಮಾದಯ್ಯನು 'ಕ್ರಿಯಾಕಾಯಕ'ವಾದಿಯೆಂದು ಕೇಳಿದ ಜಾನಪದ ಕವಿಯು ಚಳಿಗಾಲವು ಮಾದಯ್ಯನ ಕಾಯಕವನ್ನು ಮೆರೆಸುವುದಕ್ಕೆ ಬಂತೆಂದು ಹಾಡಿದ್ದಾನೆ. ಎಲೆಗಳು ಹಣ್ಣಾಗಿ ಉದುರಿ, ಕೊನರಿಟ್ಟು ಚಿಗಿರು ಬರುವ ಮಾಗಿಯು ಬಲುರಮ್ಯವಾಗಿ ಸಂದರ್ಭೋಚಿತವಾಗಿ ಬಂದಿದೆ.

ತಳಿರು ತೋರಣವೇನೊ, ಎಳೆಚಿಗಿರು ಮರಬಳ್ಳಿ
ಹೊಳೆವ ಮಂಟಪವು ಕಾಡೇನೊ । ಗುಗ್ಗಳದ
ಸುಳಿವ ಹೊಗೆಯೇನೊ ಚಳಿಗೊಳವು ॥೨೨॥

ಒಳ್ಳೆ ಬಿದ್ದಿಬ್ಬನ್ನಿ, ಬೆಳ್ಳನ್ನ ಮುತ್ತಗಳು
ಚೆಲ್ಲಿರಲು ಪತ್ರಿ ಪುಷ್ಪಗಳು, ಬನಲಿಂಗ
ಮಳ್ಳಾಗಿ ಪೂಜೆಗೈಯುವನೊ ॥೨೩॥

ಹೊತ್ತು ಮೇಲೇರಿದರು, ಚಿತ್ತದಲೆ ಸುಡುಬಿಸಿಲ
ಸುತ್ತ ಹೂಬಿಸಿಲು ದೀಪಾಗಿ। ಬೆಳಗುವದು
ಎತ್ತ ನೋಡಿದರು ತಂಬೆಳಕು ॥೨೪॥ –ಹೂ–ಮಾ

ಇಂಥ ಮಾಗಿಯ ಕಾಲದಲ್ಲಿ ಹೂ ಪುತ್ರಿಗಳನ್ನು ಎತ್ತಲು ಹೋದ ಮಾದಯ್ಯನಿಗೆ ನಿಸರ್ಗವೇ ಮಾತಾಡಿದೆ.

ಬಾಬಾರೊ ಮಾದಯ್ಯ, ಬೇರೊಂದು ಬಗೆಯದಲೆ
ಹಾರಗುಂಗಿಗಳು ಮುಟ್ಟಲ್ಲ। ಹೊನ್ನವರಿ
ಭೂರಿ ಕೊಯ್ದಿತ್ತು ಶರಣರಿಗೆ ॥೨೭॥ –ಹೂ–ಮಾ–

ಎಂಬ ಪದ್ಯಗಳು ಕವಿಯ ಕುಶಲತೆಯನ್ನು ಬೀರದಿರಲಾರವು. ಇಳಿಹಾಳ ಬೊಮ್ಮಯ್ಯನ ಹಾಡಿನಲ್ಲಿ ಬರಗಾಲ ಬಿದ್ದ ನೈಜ ಚಿತ್ರ ಬಂದಿದೆ. ಲೋಕದಲ್ಲಿ ಪಾಪವು ಹೆಚ್ಚಾಗಿ ಹರನ ಸಿಟ್ಟೇ ನರಲೋಕದಲ್ಲಿ ಬರಗಾಲವಾಯಿತೆಂದು ಕವಿಯು ಹೇಳುತ್ತಾನೆ.

ಕೂಳಿಲ್ಲದೆ ಜನಬಿದ್ದು, ಹಾಳಾತು ಇಳಿಹಾಳ
ಗೂಳೇವ ಕಟ್ಟ ಹೊರಗಡಿಯ। ಸೇರಿದರು
ಗೋಳುಂಡು ಸೊರಗಿ ನರಲೋಕ ॥೩೦॥

ತುಂಬ ಹರಿಯುವ ಹೊಳೆಯು, ಸಿಂಬಿಯಾಯಿತು ಬತ್ತಿ
ಕಂಬನಿಯ ಸುರಿಸಿ ನೀರಡಿಸಿ। ಪಶುಪಕ್ಕಿ
ಇಂಬು ಬೇಡಿದವು ಮುಖವೆತ್ತಿ ॥೩೧॥ –ಇ–ಬೊ–

ಇಲ್ಲಿ ಬಂದದ್ದು ನಿಸರ್ಗ ನಿರೀಕ್ಷಣೆಯ ಅನುಭಾವ ಸಾರ. ವರ್ಣನಾ ವೈಖರಿಯು ಜಾನಪದ ರೀತಿಯಲ್ಲಿದ್ದರೂ, ಅದರ ಸುಂದರತೆಗೂ, ರಸಭತೆಗೂ, ಭಾವಾದಿಗಳ ಚಲನ ವಲನೆಗೂ, ಎಲ್ಲೆಲ್ಲಿಯೂ ಕುಂದು ಬಂದಿಲ್ಲವೆಂದು ಹೇಳಬಹುದು. ಇಂತಹ ವರ್ಣನೆಗಳು ಈ ಹಂತಿಯ ಹಾಡುಗಳ ತುಂಬೆಲ್ಲ ಬಂದಿವೆ. ಈ ದೃಷ್ಟಿಯಿಂದ ಈ ಹಾಡುಗಳು ಒಂದೊಂದು ಜಾನಪದ ಖಂಡ ಕಾವ್ಯವೆಂದೇ ಹೇಳಬಹುದು.

ಶೈಲಿ

ವಿಷಯಗಳ ಆಯ್ಕೆ, ಭಾಷೆ, ಕಥಾಸರಣಿ ಮೊದಲಾದುವುಗಳನ್ನೊಳಗೊಂಡಿದೆ ಶೈಲಿ. ಕವಿಯು ಹೇಳುವ ಶಕ್ತಿಯೇ ಪ್ರತಿಭೆ. ಆ ಪ್ರತಿಭೆಗೆ ಜೋಡಾಗಿ ಕಾವ್ಯದಲ್ಲಿ ಹೊರಹೊಮ್ಮಿ ಮೂಡಿದ್ದೇ ಅವನ ಶೈಲಿ. ಆಯಾ ಕವಿಗಳ ಶೈಲಿಯು ಅವರನ್ನು ಕೂಡಿಕೊಂಡಿದೆ. 'Style is the main' ಎಂದು ಆಂಗ್ಲ ಭಾಷಾತಜ್ಞರು ಅನ್ನುವಂತೆ, 'ವ್ಯಕ್ತಿತ್ವವೇ ಶೈಲಿಯಾಗಿ ನಿಲ್ಲುವುದು. ಪ್ರತಿಭೆಯಿಂದೊಡ ಮೂಡಿದ ಕಾವ್ಯವಿದ್ದರೆ ಅದು ಜಾನಪದ ಕಾವ್ಯವಾದರೂ ಸರಿಯೇ, ಮಹಾಕಾವ್ಯವಾದರೂ ಸರಿಯೇ ಅದಕ್ಕೆ ಮಹತಿ ಉಂಟಾಗುತ್ತದೆ. ಪ್ರತಿಭೆಯು ಕಾವ್ಯದ ಒಳ ಉಸುರಾಗಿದ್ದರೆ ಶೈಲಿಯು ಕಾವ್ಯಕ್ಕೆ ಹೊರಗೆ ಮಂಗಲ ತಿಲಕವಿದ್ದಂತೆ.

ನಮ್ಮ ಜಾನಪದ ಸಾಹಿತ್ಯವನ್ನು ಪರಿಶೀಲನ ಮಾಡಿ ನೋಡಿದಾಗ ನಿಜವಾಗಿಯೂ ಮಹಾಕಾವ್ಯಗಳೆಂದು ಹೇಳಬಹುದಾದ ಕೆಲವೊಂದು ಭಾಗಗಳು ನಮ್ಮ ಕಣ್ಣಿಗೆ ಬೀಳುತ್ತವೆ. ಗ್ರಂಥಸ್ಥ ಸಾಹಿತ್ಯಕ್ಕಿಂತ ಭಿನ್ನವಾದ ಕೆಲವು ವಿಶಿಷ್ಟ ಲಕ್ಷಣಗಳೂ ಎದ್ದು ತೋರುವುವು. ಸಾಮಾನ್ಯ ಜನತೆಗಾಗಿ ರಚಿತವಾದ ಈ ಸಾಹಿತ್ಯವು ಜನತೆಯ ಜೀವನದಿಂದ ಬೆಳೆದು ಬಂದುದರಿಂದ ಜನಜೀವನಕ್ಕೂ, ಈ ಸಾಹಿತ್ಯಕ್ಕೂ ನಿಕಟ ಸಂಬಂಧವಿದೆ. ಜನಜೀವನದ ವಿವಿಧ ಮುಖಗಳ ಪ್ರತಿಬಿಂಬವು ಇದರಲ್ಲಿ ಮೂಡಿರಲಿಕ್ಕೆ ಸಾಕು. ಸಾಮಾನ್ಯ ಜನತೆಯ ಸುಖ, ದುಃಖ, ಆಶೆ–ಆಶೆಯ, ಗೆಳೆತನ, ಹಗೆತನ, ಜೀವನದ ಅನೇಕ ತೆರನಾದ ಪ್ರಸಂಗ ಮೊದಲಾದುವುಗಳು ಈ ಸಾಹಿತ್ಯದಲ್ಲಿ ವಿಷಯಗಳಾಗಿರುವುವಲ್ಲದೆ ಶಿವಶರಣರ ಚರಿತೆಗಳೂ, ಪುರಾಣ ಕಥೆಗಳೂ, ಮಹಾಭಾರತ ಮೊದಲಾದುವುಗಳೂ ಇದರಲ್ಲಿ ಚಿತ್ರಿತವಾಗಿವೆ. ಬಿಡಿ ಪದ್ಯಗಳ ರಾಶಿ ಮುತ್ತುಗಳಲ್ಲದೆ ವಿಷಯ ಭಾವಗಳ ಸೃಂಖಲೆಯುಳ್ಳ ದೊಡ್ಡ ಹಾಡುಗಳೂ ಇದರಲ್ಲಿವೆ.

ಈ ಸಾಹಿತ್ಯವನ್ನು ಆಳವಾಗಿ ಅಭ್ಯಾಸಿಸಿ ನೋಡಲು ವಿಷಯಳ ಆಯ್ಕೆಯು ಕಾಲಮಾನಕ್ಕೆ ಸರಿಯಾಗಿ ಬದಲಾಗುತ್ತ ಬಂದಿದೆ. ಜಾನಪದ ಸಾಹಿತ್ಯದಲ್ಲಿ ವಿಷಯಗಳ ಆಯ್ಕೆಯ ಕಾಲಮಾನ ಪಟ್ಟಿಯನ್ನು ನಿರ್ಧರಿಸಿಕೊಡಲು ಬಾರದದಿದ್ದರೂ ಅದನ್ನು ಸಾಧಾರಣವಾಗಿ ಹೇಳಬಹುದು.

೧. ಲೌಕಿಕವನ್ನು ಹೇಳುವ ಬಿಡಿಪದ್ಯಗಳು ಬಲು ಪ್ರಾಚೀನ ಕಾಲದಿಂದ ಜನತೆಯ ಬಾಯಿಂದ ಬಾಯಿಗೆ ಬಂದವುಗಳಾಗಿರಬೇಕು. ಲೋಕಾನುಭವವು ಬೆಳೆದಂತೆ ಆಗೊಂದು ಈಗೊಂದು ಬಿಡಿ ಪದ್ಯಗಳೂ ಇದರಲ್ಲಿ ಸೇರಿರಬಹುದು. ಅಥವಾ ಅನೇಕ ಪದ್ಯಗಳು ಮರೆತೂ ಹೋಗಿರಬಹುದು.

೨. ಶಿವಶರಣರ ಕ್ರಾಂತಿಯ ನಂತರ ದೊಡ್ಡ ಹಾಡುಗಳು ಜಾನಪದ ಸಾಹಿತ್ಯದಲ್ಲಿ ಬಂದವೆಂದು ಕಾಣುತ್ತದೆ. ಶಿವಶರಣರ ಚರಿತೆಗಳೇ ಅವುಗಳಿಗೆ ಮಹಾವಿಷಯಗಳಾಗಿವೆ. ಇವುಗಳಲ್ಲಿ ಕೆಲವು ಐತಿಹಾಸಕ ಪುರುಷರ (ಕಂಪಿಲರಾಯ, ಕುಮಾರ ರಾಮ) ಹಾಡುಗಳನ್ನು ಸೇರಿಸಬಹುದು.

೩. ಕುಮಾರ ವ್ಯಾಸನು ಭಾರತವನ್ನು ಬರೆದ ನಂತರ ಅದನ್ನು ಮೆಚ್ಚಿ ಆದರದಿಂದ ಪಂಡಿತರು ಹಾಡಹತ್ತಲು ಜನತೆಯ ಮನಸ್ಸು ಅತ್ತಕಡೆ ಹರಿದಂತೆ ಕಂಡುಬರುತ್ತದೆ. ಮುಂದೆ ಸಾಮಾನ್ಯ ಜನರೂ ಭಾರತವನ್ನೂ, ರಾಮಾಯಣವನ್ನೂ ತಮ್ಮ ಹಾಡುಗಳಿಗೆ ಮೂಲ ವಿಷಯಗಳನ್ನಾಗಿ ಆಯ್ದುಕೊಂಡು ಅವುಗಳನ್ನೂ, ಭಗವದ್ಭಕ್ತರ ಕಥೆಗಳನ್ನೂ ಹಾಡುತ್ತ ಬಂದರು.

೪. ಹದಿನೆಂಟನೆಯ ಶತಮಾನದಿಂದ ಕರ್ನಾಟಕದಲ್ಲಿ ರಾಜಕೀಯ ವಾತಾವರಣವು ಪ್ರಕ್ಷುಬ್ಧವಾಗಲು ಅನೇಕ ಸಂಸ್ಥಾನಗಳಲ್ಲಿಯೂ, ದೇಸಗತಿಗಳಲ್ಲಿಯೂ ಅವುಗಳನ್ನುಳಿಸಲು ಹೋರಾಟ ನಡೆಯಿತು. ಅದರ ಸಂಬಂಧ ಹೆಣಗಾಡಿದ ವೀರರ ಕಥೆಗಳನ್ನು ಜನಪದವು ಹಾಡುಗಳನ್ನು ಕಟ್ಟಿ ಹಾಡುತ್ತ ಬಂದಿದೆ. ಈಗ ನಮಗೆ ದೊರೆಯುವ ಕೆಳದಿಯ ನೃಪವಿಜಯದಂತಹ ಕಿತ್ತೂರು, ನರಗುಂದ, ಶ್ರೀರಂಗಪಟ್ಟಣ ಮೊದಲಾದ ಸಂಸ್ಥಾನಿಕರ ದುಂದುಮಿಗಳೂ, ಲಾವಣಿಗಳೂ, ಹಂತಿಯ ಹಾಡುಗಳೂ ಇದಕ್ಕೆ ಬಲವಾದ ಸಾಕ್ಷಿ.

೫. ಇಪ್ಪತ್ತನೆಯ ಶತಮಾನದಿಂದ ಕೆಲವು ಲೌಕಿಕ ಹಾಡುಗಳೂ, ಶೃಂಗಾರ ಲಾವಣಿಗಳೂ, ಸಾಮಾಜಿಕ ಲಾವಣಿಗಳೂ, ಗಾಂಧಿ ಚಳವಳಿಯ ಹಾಡುಗಳೂ, ಅನೇಕ ರೂಪತೊಟ್ಟು ಜಾನಪದ ಸಾಹಿತ್ಯದಲ್ಲಿ ಬಂದುವು. ಹೀಗೆ ಸಾಧಾರಣವಾಗಿ ಜಾನಪದ ಸಾಹಿತ್ಯದ ವಿಷಯಗಳ ಆಯ್ಕೆಯ ಕಾಲಮಾನವನ್ನು ಕೊಡಬಹುದು.

ಇಲ್ಲಿ ಕಾಣುವ ಭಾಷೆಯು ನಮ್ಮ ಹಳ್ಳಿಗರು ಬಳಸುವ ಪಾಂಡಿತ್ಯಭಾರವಿಲ್ಲದ ಸಾರವತ್ತಾದ ಕನ್ನಡ. ಕನ್ನಡದಲ್ಲಿ ಬೇರೆ ಬೇರೆ ದೇಶಿಗಳಿವೆಯೆಂದು ನೃಪತುಂಗನು ತನ್ನ ಕವಿರಾಜ ಮಾರ್ಗದಲ್ಲಿ ಹೇಳಿದ್ದಾನೆ. ಹಾಗೆಯೇ ಜಾನಪದ ಸಾಹಿತ್ಯದಲ್ಲಿ ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆ ದೇಶಿಗಳನ್ನು ಬಳಸಿ ಕೊಂಡಂತೆ ಗೋಚರವಾಗುತ್ತದೆ. ಜನತೆಯು ಆಡುವ ಭಾಷೆಗೂ ಹಾಡುವ ಭಾಷೆಗೂ ಸಂಬಂಧವು ಜಾನಪದ ಸಾಹಿತ್ಯದಲ್ಲಿ ತೀರ ಸಮೀಪವಿದೆ. ಅಲ್ಲಿ ಬಳಸಲ್ಪಟ್ಟ ಭಾಷೆಯು ಜನಸಾಮಾನ್ಯರ 'ಭಾಷೆಯೆಂದೇ ಹೇಳಬಹುದು. ವಿಶೇಷವಾಗಿ ವಿಷಯ ಕಥಾಸರಣಿಯು (Narration of storics) ಸರಳವಾಗಿ ಜನತೆಗೆ ತಿಳಿಯುವಷ್ಟು ಸುಲಭವಿರುತ್ತದೆ. ಒಮ್ಮೊಮ್ಮೆ ಪುನರುಕ್ತಿಗಳು (Repetations) ಕಂಡು ಬಂದರೂ ಕಥೆಗೆ ಕುಂದುಬಾರದೆ ನಿರರ್ಗಳವಾಗಿ ಕಥೆಯು ಸಾಗಿ ಕೊನೆಯಾಗುತ್ತದೆ. ಇಂತಹ ಹಾಡುಗಳಲ್ಲಿ ಕಥೆಯೇ ಬಹಳ ಮಹತ್ವವಾದುದು.

ಪುರಾತನ ಕಾಲದಲ್ಲಿ ಮಹಾಕವಿಗಳು ರಾಜಾಶ್ರಯ ಪಡೆದು ಪಂಡಿತರಿಗಾಗಿ ಮಹಾಕಾವ್ಯಗಳನ್ನು ರಚಿಸಿದರು. ಅವು ಸಾಮಾನ್ಯ ಜನರಿಗೆ ತಿಳಿಯದಂತಾಗಲು ಸಾಹಿತ್ಯವು ಪಂಡಿತರಿಗೇನೇ ಮೀಸಲಾಯಿತು. ಹನ್ನೆರಡನೆಯ ಶತಮಾನದಲ್ಲಿ ಶಿವಶರಣರ ಕಾಲದಲ್ಲಿ ಸಾಹಿತ್ಯ ಕ್ರಾಂತಿಯೂ ಆಯಿತು. ಸಂಸ್ಕೃತ ಪದ್ಧತಿಯ ಅನುಕರಣವು ಆಗಾಗಲೆ ಜನತೆಗೆ ಬೇಸರಾಗಿತ್ತು. ಕವಿಗಳೂ ಕನ್ನಡ ಶೈಲಿಗೆ ಮನಸ್ಸನ್ನು ತಿರುಗಿಸಿ ಜಾನಪದ ಪದ್ಧತಿಯಲ್ಲಿ ಹಲಕೆಲವು ಮಾರ್ಪಾಟುಗಳನ್ನೇರ್ಪಡಿಸಿ ಜನತೆಗೆ ತಿಳಿಯುವಂತೆ ಕಾವ್ಯಗಳನ್ನು ಬರೆಯಹತ್ತಿದರು. ಜಾನಪದ ಪದ್ಧತಿಗೆ ಚೇತನೆಯ ತುಂಬಿದಂತಾಯಿತು. ಇದರ ಪರಿಣಾಮವಾಗಿ 'ವರ್ಣಕ' ಎಂಬ ಕಾವ್ಯಭೇದವೇ ಕನ್ನಡ ಬಳಕೆಯಲ್ಲಿ ಬಂತು. ಮಹಾಕವಿಗಳು ಶಿವಶರಣರನ್ನು ಕುರಿತು ಸಾಮಾನ್ಯ ಜನರಿಗೆ ತಿಳಿಯುವಂತೆ ಮಹಾಕಾವ್ಯಗಳನ್ನು ರಚಿಸಿದರು. ಜನತೆಯು ಅದನ್ನು ಮೆಚ್ಚಿತು. ಶಿವಶರಣರ ಚರಿತ್ರೆಗಳು ಎಲ್ಲರಿಗೂ ಬೇಕಾದ ವಿಷಯವಾಯಿತು. 'ಬಸವಾದಿ ಪ್ರಮಥರ ಹೆಸರುಗಳು ಹಳ್ಳಿಗಳ ಮೂಲೆ ಮೂಲೆಗೆ ಹಬ್ಬಿದ್ದವಲ್ಲದೆ ಜನಪದವು ಶಿವಶರಣರಿಗೆ ಭಯಭಕ್ತಿಯಿಂದ ನಡೆದುಕೊಳ್ಳುತ್ತ ಬಂತು. ಸಮಯೋಚಿತವಾಗಿ ಅವರ ಸಂಬಂಧ ಹಾಡುಗಳನ್ನು ಕಟ್ಟಿ ಜನಪದಕ್ಕೆ ಹಾಡುತ್ತ ಬಂತು. ಜಾನಪದ ಹಾಡುಗಳಿಗೆ ವಿಷಯಗಳ ಆಯ್ಕೆಯು ವಿಸ್ತಾರಗೊಂಡು ಕಲ್ಯಾಣ ಕ್ರಾಂತಿಯಾದ ನಂತರ ಅದಕ್ಕೆ ಮತ್ತಷ್ಟು ಕಳೆತುಂಬಿ ಜಾನಪದ ಸಾಹಿತ್ಯದಲ್ಲಿ 'ಶಿವಶರಣರ ಹಾಡುಗಳು' ಎಂಬ ಭಾಗಮಾಡುವಷ್ಟು ಆ ಸಾಹಿತ್ಯವು ಅತಿಭರದಿಂದ ಬೆಳೆಯುತ್ತ ಬಂತು. ಈಗ ಸಂಕಲನ ಮಾಡಿದ ಕಥನ ಕವನಗಳಾದ ಶಿವಶರಣರ ಹಂತಿಯ ಹಾಡುಗಳಿಗೆ ಶಿವಶರಣರ ಚರಿತ್ರೆಗಳೇ ಮೂಲ ವಿಷಯಗಳಾಗಿವೆ. ಉತ್ತರ ಕರ್ನಾಟಕದಲ್ಲಿ ಬಹುತರ ಎಲ್ಲ ಹಳ್ಳಿಗರು ಈ ಹಾಡುಗಳನ್ನು ಹಾಡುತ್ತಾರೆ. ಈ ಹಾಡುಗಳು ನಾಲ್ಕಾರು ನುಡಿಗಳುಳ್ಳ ಮಂಗಳಾರುತಿಗಳಾಗಿರಬಹುದು, ಭಜನೆಯ ಹಾಡುಗಳಾಗಿರಬಹುದು, ಸೋಬಾನ ಹಾಡುಗಳಾಗಿರಬಹುದು, ಕಥೆಯನ್ನು ಹೇಳುವ ದೊಡ್ಡ ಹಾಡುಗಳಾಗಿರಬಹುದು, ಇಲ್ಲವೆ ಹಂತಿಯ ಹಾಡುಗಳೂ ಆಗಿರಬಹುದು: ಹೀಗೆ ಅವು ಅನೇಕ ಮುಖವಾಗಿವೆ.

ಈಗ ಸಂಕಲಿಸಲಾದ ಶಿವಶರಣರ ಹಂತಿಯ ಹಾಡುಗಳಲ್ಲಿ ಕಥೆ ಹೇಳುವ ರೀತಿಯು ಅತ್ಯಂತ ಮಾರ್ಮಿಕವಾಗಿದೆ. ಕಥೆಯು ಸರಾಗವಾಗಿ ತುಂಬಿದ ಹಳ್ಳವು ಹರಿಯುವಂತೆ ತಡೆಯಿಲ್ಲದೆ ಕೊನೆಯವರೆಗೂ ಓಡುತ್ತದೆ. ವರ್ಣನೆಗಳಾಗಲಿ, ಇತರ ಸನ್ನಿವೇಶಗಳಾಗಲಿ ಕಥೆಯ ಓಟಕ್ಕೆ ಯಾವ ಕಥೆಯಲ್ಲಿಯೂ ಕುಂದನ್ನು ತಂದಿಲ್ಲ. ಈ ಹಾಡುಗಳಲ್ಲಿ ಈಗ ಬೆಳಕಿಗೆ ತಂದ 'ನಾಲ್ಕು ನಾಡಪದಗಳು' ಎಂಬ ಪುಸ್ತಕವನ್ನು 'ಸುಕುಮಾರ' ಸಂಪಾದಕರು ವಿಮರ್ಶೆ ಮಾಡುತ್ತ ಕೆಳಗಿನಂತೆ ಬರೆದಿದ್ದಾರೆ. "ಶ್ರೀ ಗದ್ದಗಿಮಠ ಅವರು ಸಂಗ್ರಹಿಸಿರುವ ಈ 'ನಾಲ್ಕು ನಾಡಪದಗಳು' ಉಚ್ಚಮಟ್ಟದ ಕಾವ್ಯಗಳ ಶ್ರೇಣಿಯಲ್ಲಿ ಬರುತ್ತವೆ. ಇವುಗಳಲ್ಲಿ ಕಥಾ ಸಂದರ್ಭ, ವರ್ಣನೆ ಎಲ್ಲವೂ ಕಾವ್ಯದ ಧಾಟಿಯಲ್ಲಿ ಬಳಸಿವೆ. ಇದರಲ್ಲಿಯ ಭಾಷೆ ಅಚ್ಚ ಕರುನಾಡ ಭಾಷೆ... ಇಲ್ಲಿಯ ಕವಿತೆಯು ಹರಿಹರನ ರಗಳೆಯ ಓಟದಲ್ಲಿ ಓದುಗರ ಮನ ಸೆಳೆಯುತ್ತದೆ. ಈ ಪದ್ಯಗಳಲ್ಲಿರುವ ಭಾಷೆಯ ಬೆಡಗು, ಭಾವ ಸೌಷ್ಟವ, ಅಲಂಕಾರ ಪ್ರಯೋಗ, ಭಕ್ತಿಯ ಆವೇಶ, ಭಾವ ಭಾಷೆಗಳ ಸಮ್ಮಿಲನ ಎಲ್ಲವೂ ಮೋಹಕವಾಗಿವೆ. ಪ್ರತಿ ಪದದಲ್ಲಿಯೂ ಕತೆಯು ಸರಾಗವಾಗಿ ಸಾಗುತ್ತದೆ."[೭] ಕಥೆಯನ್ನು ಹೇಳುವುದೂ, ಕೇಳುವುದೂ ಜನಪದದಲ್ಲಿ ಒಂದು ವೈಶಿಷ್ಟ್ಯ. ಜಾನಪದ ಕವಿಯು ಇದರ ಪರಿಪಕ್ವತೆಯನ್ನು ತನ್ನ ಎಲ್ಲ ಶಿವಶರಣರ ಹಂತಿಯ ಹಾಡುಗಳಲ್ಲಿ ಸಾದಿಸಿದ್ದಾನೆ. ಕಥೆಯನ್ನು ಹೇಳುವ ಚೆಲುವಿಕೆಯು (ಡೌಲು) ಈ ಹಾಡುಗಳಲ್ಲಿ ವಿಶಿಷ್ಟ ತರದಲ್ಲಿ ಬಂದಿದೆ. ಕಥೆಯ ಹೇಳುವಿಕೆಯು ಕೇವಲ ಒಣದಾಗಿರದೆ ರಸವತ್ತಾಗಿ ಪದ್ಯಪದ್ಯಗಳ ಶಬ್ದಗಳಲ್ಲಿ ಹೆಪ್ಪಾಗಿನಿಂತಿದೆ. "ನಾಲ್ಕು ನಾಡ ಪದಗಳು" ಎಂಬ ಸಂಕಲನವನ್ನು ವಿಮರ್ಶೆ ಮಾಡುತ್ತ ಜಯಂತಿ ಸಂಪಾದಕರು ಕೆಳಗಿನಂತೆ ಬರೆದಿದ್ದಾರೆ. "ಬೇಡರ ಕನ್ನಯ್ಯ, ಗೊಲ್ಲಾಳ, ಇವರ ಕಥನ ಕವನಗಳಂತೂ ರಸಘಟ್ಟಿಗಳು ಇವುಗಳನ್ನು ಸಂಪೂರ್ಣವಾಗಿ ಓದಿಯೇ [illegible]ಯನು ಸವಿಯಬೇಕು."[೮] ಇದನ್ನು ಈ ಜಾನಪದ ಕವಿಯ ಎಲ್ಲ ಹಾಡುಗಳಲ್ಲಿಯೂ ಕಾಣಬಹುದಾಗಿದೆ.

ಶಿವಶರಣರ ಈ ಹಾಡುಗಳನ್ನು ಅವಲೋಕಿಸಿನೋಡಿದರೆ ಈ ಹಳ್ಳಿಯ ಕಬ್ಬಿಗನ ಕಥೆಯ ನಿರೂಪಣೆಯಲ್ಲಿ ಒಡೆದು ಕಾಣುವ ಮೂರು ಭಾಗಗಳನ್ನು ಮಾಡಬಹುದು. ೧. ಕಥಾರಂಭವು, ೨. ಕಥಾಗರ್ಭವು, ೩. ಕಥಾಸಮಾಪ್ತಿಯ. ಕವಿಯು ಈ ಎಲ್ಲ ಹಾಡುಗಳ ಪ್ರಾರಂಭದಲ್ಲಿ ಕಥೆಯಸಾರವನ್ನೊಳಗೊಂಡ ಕಥಾಸೂಚಕ ಪದ್ಯದಿಂದ ಹಾಡಲು ಆರಂಭಿಸುತ್ತಾನೆ...

ಕುರಿಯ ಹಿಕ್ಕಿಯು ನಂಬಿ, ಹರನೆಂದು ಪೂಜಿಸಿದ
ಕುರುಬ ಶಿವಭಕ್ತ ಗೊಲ್ಲಾಳ। ಹರಮೆಚ್ಚಿ
ಕರೆದೊಯ್ದ ನವನ ಶಿವಪುರಕೆ ॥೧॥ *–ಗೊಲ್ಲಾಳ*

ಇಳಿಹಾಳ ಬೊಮ್ಮಯ್ಯ, ಹೊಲಗೆಲಸ ಕಾಯಕವ
ನಲುಮೆಯಲಿ ಮಾಡಿ ದಾಸೋಹ। ಹರಸೇವೆ
ಸಲಿಸಿ ಲಿಂಗದೊಳು ಬಯಲಾದ ॥೧॥ *–ಇಳಿಹಾಳ–ಬೊ–*

ನೇಗಿಯದೆ ಕಾಯಕವ, ಚಾಗಿ ಅಮುಗನು ಮಾಡಿ
ಯೋಗ ಹೊಂದಿದನು ಹೊಳಜಿಯ। ಜನಭಜಿಸಿ
ತೂಗಿ ದಾಸೋಹ ತೇರೆಳೆದು ॥೧॥ *–ನೇ–ಅ–*

ಹೀಗೆ ಈ ಕವಿಯ ಪ್ರತಿಯೊಂದು ಹಾಡು ಸೂಚಕ ಪದ್ಯದಿಂದ ಪ್ರಾರಂಭವಾಗುವುದು. ತದನಂತರ ಕವಿಯು ಶಿವಶರಣರ ಹಿರಿಮೆಯನ್ನೂ, ಅವರ ಹಾಡಿನ ಪಾವನತೆಯನ್ನೂ ಪೂಜ್ಯಭಕ್ತಿಯಿಂದ ಹಾಡಿದ್ದಾನೆ.

ಜನಕೆ ನಿನ್ನೀ ಹಾಡು, ಕೆನೆಹಾಲು ಇದ್ದಂತೆ
ತೆನೆಹಾಲು ನಿನಗೆ ಒಕ್ಕಲಿಗ। ಇಂಪಾಗಿ
ಮನಸೋತು ಮಲಗೆ ಶಿವಲೋಕ ॥೨॥ *–ಇ–ಬೊ–*

ನಿನ್ನ ಭಜನೆಯ ಹಾಡು, ಹೊನ್ನ ಮಳೆಸುರಿದಂತೆ
ಹಣ್ಣಾದ ಎದೆಯ ಒಕ್ಕಲಿಗ। ಮಣ್ಣೊಳಗೆ
ಚಿನ್ನ ಬೆಳಕೊಂಡ ಒಣಬಿತ್ತಿ ॥೪॥ *–ಮೇ–ಕೇ–*

ಹೀಗೆ ಪ್ರತಿಯೊಂದು ಹಾಡಿನ ಪ್ರಾರಂಭದಲ್ಲಿ ಇಂತಹ ಪದ್ಯಗಳನ್ನು ಕಾಣಬಹುದಾಗಿದೆ. ಒಂದೆರಡು ಹಾಡುಗಳನ್ನು ಬಿಟ್ಟರೆ ಉಳಿದ ಹಾಡುಗಳಲ್ಲಿ ಬರುವ ಕಥಾ ಸಾರಾಂಶವು ಪ್ರಖ್ಯಾತ ವೀರಶೈವ ಕವಿಗಳಾದ ಹರಿಹರ, ಭೀಮಕವಿ, ವಿರುಪಾಕ್ಷ ಪಂಡಿತ, ಷಡಕ್ಷರಿ ಮೊದಲಾದ ಕವಿಗಳ ಕಾವ್ಯಗಳಲ್ಲಿ ಬರುವ ಶಿವಶರಣರ ಕಥಾ ಸಾರಾಂಶದಂತೆಯೇ ಬರುತ್ತದೆ. ಆದರೆ ಹೇಳುವ ರೀತಿಯು ಮಾತ್ರ ಭಿನ್ನವಾಗಿದೆ. ಈ ಜಾನಪದ ಕವಿಯ ರೀತಿಯು ಅವನದೇ ಆದ ಒಂದು ವೈಶಿಷ್ಟ್ಯವನ್ನೊಳಗೊಂಡಿದೆಯಲ್ಲದೆ, ಜಾನಪದ ಸಾಹಿತ್ಯದ ವೈಶಿಷ್ಟ್ಯಗಳನ್ನೂ ಒಳಗೊಂಡಿದೆ. 'ಬೇಡರಕನ್ನಯ್ಯ,' ಮಡಿವಾಳ ಮಾಚಯ್ಯ' ಈ ಕಥೆಗಳಲ್ಲಿ ಕವಿಯು, ಹಲಕೆಲವು ಮಾರ್ಪಾಟುಗಳನ್ನು ಮಾಡಿದ್ದಾನೆ.

ಬೇಡ ಬೇಟೆಗೆಹೋಗಿ, ಬೆಲ್ಲಪತ್ತರಿ ಕೊಯ್ದ
ಬೇಡ ಕನ್ನಯ್ಯ ಶಿವಪೂಜೆ। ಮಾಡಿದರ
ನಾಡೊಳಗೆ ನೋಡು ಶಿವರಾತ್ರಿ ॥೧೧॥ *–ಬೇ–ಕ–*

ಹೀಗೆ ಯಾವ ವೀರಶೈವ ಕವಿಯೂ ಬೇಡರ ಕನ್ನಯ್ಯನ ಕಥಾಸಂದರ್ಭದಲ್ಲಿ ಹೇಳಿಲ್ಲ. ಶಿವಯೋಗದ ಶ್ರೇಷ್ಠತೆಯನ್ನೂ, ಬಿಲ್ವಪತ್ರಿಯ ಮಹತ್ವವನ್ನೂ ಜನಪದಕ್ಕೆ ಹೇಳುವ ಉದ್ದಿಶ್ಯವಾಗಿ ಜಾನಪದ ಕವಿಯು ಬೇಡರಕನ್ನಯ್ಯನ ಹಾಡನ್ನು ಹೀಗೆ ಮಾರ್ಪಾಟು ಮಾಡಿರಬಹುದೆಂದು ಹೇಳಬಹುದು.

ಮಡಿವಾಳ ಮಾಚಯ್ಯ, ದುಢವುಳ್ಳ ಶಿವಭಕ್ತ
ಮಡದಿಯನು ಕೊಂದು ರಗುತದಲಿ। ತಾತೊಳೆದ
ಒಡೆಯನೊಸ್ತಿರವ ಭಕ್ತಿಯಲಿ ॥೧॥ *–ಮ–ಮಾ–*

ಈ ಪ್ರಸಂಗವನ್ನು ಉಳಿದ ಯಾವ ವೀರಶೈವ ಕವಿಗಳೂ ಹೇಳಿಲ್ಲ; ಜಾನಪದ ಕವಿಯು ಮಾಚಯ್ಯನ ಕಟುತರ ಭಕ್ತಿಯನ್ನು ಜನಪದಕ್ಕೆ ಅರುಹಲು ಈ ಪ್ರಸಂಗವನ್ನು ನಿರೂಪಿಸಿಕೊಂಡಿರಬೇಕು. ಇಲ್ಲವೆ ಈ ಕಥೆಯು ಜನಪದದಲ್ಲಿ ಮಾಚಯ್ಯನನ್ನು ಕುರಿತು ಎಲ್ಲಿಯಾದರೂ ಇದ್ದದ್ದನ್ನು ಕವಿಯು ಕೇಳಿಕೊಂಡು ತನ್ನ ಹಾಡಿನಲ್ಲಿ ಹಾಡಿರಬೇಕೆಂದು ಹೇಳಬಹುದು.

ಈ ಹಾಡುಗಳ ಕಥಾಗರ್ಭದಲ್ಲಿ ಕವಿಯು ಶಿವಭಕ್ತಿಯ ಮಹತ್ವವನ್ನು ಹೇಳಲು ಹೋಗಿ ಅದನ್ನು ಸಾಧಿಸಲು ಕಾಯಕ, ದಾಸೋಹ, ಮೊದಲಾದ ಸಾಧನಗಳನ್ನು ರಸಭರಿತವಾಗಿ ಹಾಡಿದ್ದಾನೆ. ಬೇಕಾದಲ್ಲಿ ತತ್ವದರ್ಶನ, ಮತದರ್ಶನ, ಜಗತ್ ನಿರ್ಮಾಣ, ಶಿವಾಚಾರ ಮೊದಲಾದುವುಗಳ ಸಂಬಂಧ ಚರ್ಚಾತ್ಮಕವಾಗಿ ಹೇಳಿ ತನ್ನ ಗುರಿಯನ್ನು ಸಾಧಿಸಿದ್ದಾನೆ. ಈ ವಿಷಯಗಳನ್ನು ಮೇದಾರಕೇತಯ್ಯ,

---

೭. ಸುಕುಮಾರ, ಸಂಪುಟ–೨, ಸಂಚಿಕೆ ೯ ಪು. ೪೪೩

೮. 'ಜಯಂತಿ' ಸಂಪುಟ–೧೫, ಸಂಚಿಕೆ ೩, ಪು. ೧೧೩

ಮಡಿವಾಳ ಮಾಚಯ್ಯ, ಹೂಗಾರ ಮಾದಯ್ಯ, ನೇಗಿಯ ಅಮುಗಯ್ಯ, ಮಾದರಚೆನ್ನಯ್ಯ ಮೊದಲಾದ ಶಿವಶರಣರ ಹಾಡುಗಳಲ್ಲಿ ನಾವು ಕಾಣಬಹುದಾಗಿದೆ.

ಬತ್ತಲೆಯ ಜಗಬೈಲು, ಎತ್ತನೋಡಲು ಬೈಲು
ಸುತ್ತಾಡಿ ನಾದ ಬಿಂದೊಡೆದು । ಕಲೆಯಾಗಿ
ಚಿತ್ಕಳೆಯು ತುಂಬಿ ಜಗಹುಟ್ಟಿ ॥೩೦॥

ನಾದವೇ ಬೀಜಾಗಿ, ಭೇದಿಸಲು ಬಂದೊಡೆದು
ಸಾಧಿಸಲು ಕಲೆಯು ಮಳೆಯಾಗಿ । ಹೊಸಮತವು
ಪಾದೂರಿನಿಂತ ಶಿವಸಸಿಯು ॥೩೧॥

ಲಿಂಗವೆಂಬುದು ಕೇಳೊ, ಸಂಗಡಿಸಿ ಮೂಡಡವೆ
ಭಂಗಾಗಿ ಹುಟ್ಟಿ ಚಿತ್ಕಳೆಯು । ಪರಮಾತ್ಮ
ಕಂಗೊಳಿಸಿ ಬೆಳಗಿ ಜಗ ತುಂಬಿ ॥೩೨॥

ನಾದ ಬಿಂದು ಕಲೆಗಳ, ಹಾದಿ ಹೇಳಲು ಗಣಕೆ
ಮೇಧಾವಿ ಚೆನ್ನಬಸವಣ್ಣ । ಸಾರಿದನು
ಮೇದಾರ ಕೇತಬಂಟೆಂದು ॥೩೩॥ *–ಮೇ–ಕೇ–*

ಇಲ್ಲಿ ವೀರಶೈವ ತತ್ವದರ್ಶನದ ಪ್ರಕಾರ ಜಗತ್ ನಿರ್ಮಾಣವನ್ನು ಕವಿಯು ಜನಪದಕ್ಕೆ ರೂಪಕದಲ್ಲಿ ತಿಳಿಯುವಂತೆ ಹಾಡಿದ್ದಾನೆ.

ಆಚಾರ ಐದರೊಳು, ನೀಚೆಂಬ ಮಾತಿಲ್ಲ
ತೋಚುವದು ಜನಕೆ ಲಿಂಗಮತ । ಮಂದಿರವು
ಊಚೆಂಬ ಸದರು ಪರಮತಕೆ ॥೨೧॥ *–ಇ–ಬೊ–*

ಹೀಗೆ ವೀರಶೈವ ಶಿವಾಚಾರವನ್ನು ಕವಿಯು ಹಾಡುಗಳಲ್ಲಿ ಎತ್ತಿ ತೋರಿಸಿದ್ದಾನೆ.

ಮಣ್ಣಿನೀ ಕಾಯವಿದು, ಮಣ್ಣಾಗಿ ಹೋಗುವದು
ಸಣ್ಣಾಗಿ ಸವಿಸಿ ಜಂಗಮಕೆ । ದಾಸೋಹ
ಕಣ್ಣೊಂದೆ ಸಾಕು ಕಾಯಕಕೆ ॥೨೫॥ *–ಇ–ಬೊ–*

ಇಲ್ಲಿ ಬಂದದ್ದು ವೀರಶೈವ ತತ್ವದರ್ಶನ (Philosophy). ಅದನ್ನು ಕವಿಯು ರೂಪಕದಲ್ಲಿ ಚರ್ಚಾತ್ಮಕವಾಗಿ ಹೇಳಿದ್ದಾನೆ. 'ಮಣ್ಣಿನೀ ಕಾಯುವಿದು, ಮಣ್ಣಾಗಿ ಹೋಗುವದು' ಎಂದು ಹಾಡಿದ ಈ ಜಾನಪದ ಕವಿಯ ಕಾಯಾತ್ಮ ವಿಚಾರದ ಕಲ್ಪನೆಗಳನ್ನು ಆಂಗ್ಲಕವಿ, H.W. Long fellow ಈತನು "A psalm of Life." ಎಂಬ ತನ್ನ ಕವನದಲ್ಲಿ ಕಾಯಾತ್ಮವನ್ನು ಕುರಿತು "Dust thouart to dust returnest." ಎಂದು ಬರೆದಿದ್ದಾನೆ. ಈ ದರ್ಶನವು ಎಲ್ಲ ಮತಗಳಲ್ಲಿಯೂ ಕಂಡುಬರುವುದು.

ಕಥಾಸಮಾಪ್ತಿಯಲ್ಲಿ ಕವಿಯು ಶಿವದರ್ಶನವನ್ನು ತಂದು ಶಿವನ ವರಗಳನ್ನು ಭಕ್ತರು ನಿರಾಕರಿಸುವುದನ್ನು ಜಾಣ್ಮೆಯಿಂದ ಹೇಳಿ ಜಯಶಾಲಿಯಾಗಿದ್ದಾನೆ.

ನಡೆಚೌಟ ಹೋಗೋಣ, ಕೊಡೆ ನಿನಗೆ ನಾಹಿಡಿವೆ
ದುಢ ಭಕ್ತ ನಿನಗೆ ಸರಿಯಾರು । ಹೊಸ ಮತಕೆ
ಹೊಡೆಯಾದಿ ಬೆಳಸು ಹುಲುಸಾಯ್ತು ॥೮೧॥

ಬೇಡೆನಗೆ ಕೈಲಾಸ, ನೀಡೆನಗೆ ಶಿವಭಕ್ತಿ
ಮಾಡುವೆನು ಸೇವೆ ಶಿವಮತಕೆ । ಶರಣರಿಗೆ
ನಾಡಕಾಯಕವೆ ಕೈಲಾಸ ॥೮೨॥ *–ಜಾ–ಚೌ–*

[illegible]ನಾಡ ಕಾಯಕವೆ ಕೈಲಾಸ'ವೆಂದು ಜಾತಿಗರ ಚೌಡಯ್ಯನು ಶಿವನು ಪ್ರತ್ಯಕ್ಷನಾಗಿ, ಕೊಡುವೆನೆನ್ನುವ ಶಿವಪದವನ್ನು ನಿರಾಕರಿಸಿದ್ದಾನೆ. [illegible] ಈ ಮಾತುಗಳನ್ನು ಜಾನಪದ ಹೊದಿಕೆಯಲ್ಲಿಯೇ ಹೇಳಿದ್ದಾನೆ. 'ಕೊಡೆ,' 'ಹೊಡೆ,' 'ಬೆಳಕು,' 'ಹುಲುಸು' ಮೊದಲಾದ ಜಾನಪದ ಶ[illegible]ಗಳು ಉಚಿತವಾಗಿ ಬಳಸಲ್ಪಟ್ಟಿವೆ.

ಈ ಮೂರುಲೋಕದೊಳು, ಹೂಮಾಲೆ ನಿನಗೀವೆ
ಭೂಮಿಯೊಳು ನಿನಗೆ ಮೆಚ್ಚಿದೆನು । ಎಲೆಗುಂಡ
ಸೀಮೆ ಮೀರಿಹುದು ಶಿವಭಕ್ತಿ ॥೪೭॥

ಶಿವಲೋಕದೊಳು ನಿನಗೆ, ಶಿವಪದವ ಉಣಿಸುವೆನು
ಶಿವಗಣಕೆ ಸಾರಿ ಹೇಳುವೆನು । ಗುಂಡಯ್ಯ
ಶಿವಶರಣನೆಂದು ನಡೆ ಮೊದಲು ॥೪೮॥

ಬೇಡೆನಗೆ ಕೈಲಾಸ, ಬಾಡುವದು ಕಾಯಕವು
ನೀಡೆನಗೆ ಶಿವನೆ ಕಾಯಕವ । ಕುಣಿದಾಡಿ
ನಾಡ ಹಂದರಕೆ ಹಬ್ಬಿಸುವೆ ॥೪೯॥

ಮಡಿಕೆಯನು ನುಡಿಸುವೆನು, ನುಡಿಯು ಕೇಳಲಿ ನಿಮಗೆ
ಮಿಡಿಯುದಕೆ ಕೊಡತಿ ಬೆರಳಾಗಿ । ವರನೀಡು
ಮಿಡಿದು ಶಿವನಾದ ಬೆರೆಯುದಕೆ ॥೫೦॥

ತೊಂಡಲವು ಶಿವಗಣಕೆ, ಗುಂಡಯ್ಯನೀನಾದಿ
ಇಂಡೆ ಕೊರಲೊಳಗೆ ಶಿವನಾದಿ । ಶಿವಭಕ್ತ
ಗುಂಡ ನೀನೆಂದು ಜನಭಜಿಸಿ ॥೫೨॥ –ಕುಂ–ಗುಂ

ಹೀಗೆ ಗುಂಡಯ್ಯನು ಶಿವಪದವನ್ನು ನಿರಾಕರಿಸಿ ಕಾಯಕವನ್ನು ನೀಡೆಂದು ಶಿವನಿಗೆ ಕೇಳಿಕೊಂಡಿದ್ದಾನೆ. ಕಥಾರಂಭದಂತೆ ಕೊನೆಯಲ್ಲಿಯೂ ಕವಿಯು ಶಿವಶರಣರ ಹಿರಿಮೆಯನ್ನು ಹಾಡುವ ಹಲಕೆಲವು ಪದ್ಯಗಳನ್ನು ಹೇಳಿದ್ದಾನೆ. ಅಲ್ಲದೆ, ಸುಗ್ಗಿಯ ಸಂಪ್ರದಾಯಗಳನ್ನೊಳಗೊಂಡ ಅನೇಕ ಪದ್ಯಗಳನ್ನು ಹಾಡಿನ ಆರಂಭಕ್ಕೂ, ಕೊನೆಗೂ, ಬಲು ಸಮೃದ್ಧಿಯಾಗಿ ಹೇಳಿದ್ದಾನೆ. ಹಳ್ಳಿಗರ ವೈಶಿಷ್ಟ್ಯವು ಈ ಎಲ್ಲ ಪದ್ಯಗಳಲ್ಲಿ ಕಂಡುಬರುವುದು. ಈ ಸಂಪ್ರದಾಯಗಳ ಮಹತ್ವವನ್ನು ಎಷ್ಟು ಬರೆದರೂ ಕಡಿಮೆಯೆ.[೯] ಕೊನೆಯಲ್ಲಿ ಹಂತಿಯ ಹಾಡುಗಳೆಂದು ಎರಡು ನುಡಿಗಳಲ್ಲಿ ಹಾಡಿ ಕವಿಯು ಕಥೆಯನ್ನು ಮುಗಿಸುತ್ತಾನೆ.

ಭಾಷೆಯ ಬೆಡಗನ್ನು ಈ ಜಾನಪದ ಕವಿಯ ಪ್ರತಿಯೊಂದು ಪದ್ಯದಲ್ಲಿಯೂ ಕಾಣಬಹುದಾಗಿದೆ. ತಿರುಳಗನ್ನಡವನ್ನುಂಡ ಈ ಕವಿಯ ಕನ್ನಡ ನುಡಿಗಳು ಮುತ್ತು–ಮಾಣಿಕದಂತೆ ಅವನ ಹಾಡಿನಲ್ಲಿ ಪೋಣಿಸಲ್ಪಟ್ಟಿವೆ. ಈ ಹಳ್ಳಿಯ ಕಬ್ಬಿಗನಿದ್ದುದು, ಹಾಡ ರಚಿಸಿದ್ದುದು ಬಾದಾಮಿಯ ಸಮೀಪದಲ್ಲಿಯ 'ಕೆರೂರು' ಎಂಬ ಹಳ್ಳಿಯಲ್ಲಿ. ನೃಪತುಂಗನು ತಿರುಳ್ಗನ್ನಡ ನಾಡಿನ ಸೀಮೆಯನ್ನು ಹೇಳುವಾಗ ಉಲ್ಲೇಖಮಾಡಿದ 'ಕಿಸುವೊ ಟಲ್ಲಿಗೆ' ಅಂದರೆ ಪಟ್ಟದಕಲ್ಲಿಗೆ ಈ ಹಳ್ಳಿಯು ತೀರ ಸಮೀಪವಾಗಿದೆ. ಎಂದ ಮೇಲೆ ಇಲ್ಲಿ ಬರುವ ಭಾಷೆಯು ತಿರುಳ್ಗನ್ನಡ ಭಾಷೆಯ ಪರಂಪರೆಗೆ ಸೇರಿದ್ದೆಂದು ಹೇಳಬಹುದು. ಈ ಭಾಷೆಯಲ್ಲಿ ಕನ್ನಡದ ಅಂತಃಸತ್ವವನ್ನು ನೋಡಬಹುದು. ನಾವು ಕನ್ನಡವೆಂದು ಕರೆಯಬಹುದಾದ ಕನ್ನಡವೇ ಈ ಕವಿಯ ಹಾಡುಗಳಲ್ಲಿದೆ. ಇಲ್ಲಿ ಕೆಲವೊಂದು ಶಬ್ದಗಳೂ, ವಾಕ್ಪ್ರಚಾರಗಳೂ, ರೂಢಿಯ ಬೆಳ್ನುಡಿಗಳೂ, ಅಚ್ಚಕಟ್ಟಿನ ನುಡಿಗಳೂ ಕರ್ನಾಟಕದ ಎಲ್ಲ ಭಾಗಗಳಲ್ಲಿ ತಿಳಿಯಲಿಕ್ಕಿಲ್ಲ. ಇದು ಸಹಜವೇ. ಏಕೆಂದರೆ 'ದೇಶಿಯು ಬೇರಾದುದರಿಂದ' ಒಂದು ಭಾಗದ ದೇಶಿಯು ಮತ್ತೊಂದು ಭಾಗದವರಿಗೆ ತಿಳಿದುಕೊಳ್ಳಲಿಕ್ಕೆ ಕಠಿಣವಾಗುತ್ತದೆ. ಆದರೂ ಇದು ಕನ್ನಡವೇ, ಒಳ್ಗನ್ನಡವೇ ಎಂಬುದನ್ನು ನಾವು ಯಾವ ಕಾಲಕ್ಕೂ ಮರೆಯಬಾರದು. ಈ ಕವಿಯ ಹಾಡುಗಳಲ್ಲಿ ಬರುವ ಪದಗಳ ಹೊಸ ಪ್ರಯೋಗ, ಜಾನಪದ ಶಬ್ದಗಳ ಸಂಪತ್ತು ಬಹಳ ಸಮೃದ್ಧಿಯಾಗಿವೆ. ಶಬ್ದ ಜೋಡಣೆಯಲ್ಲಿ ಆಗಲಿ, ಪದ ಪ್ರಯೋಗದಲ್ಲಿ ಆಗಲಿ, ಹೆರವರ ಎಂಜಲವಿಲ್ಲ, ಅನುಕರಣವಿಲ್ಲ. ಹಾಡುಗಳಲ್ಲಿ ಬಂದದ್ದೆಲ್ಲ ಈ ಜಾನಪದ ಕವಿಯ ಮೀಸಲವೆಂದೇ ಹೇಳಬಹುದು. ಅವನ ಶೈಲಿಯು 'ಹಸಿಯ ಗೋಡೆಯಲ್ಲಿ ಹರಳು ನಟ್ಟಂತೆ' (Epigramatic style) ಕಥೆಯ ಮುಂದೋಟ ನಿರರ್ಗಳವಾದ ಶೈಲಿಯಲ್ಲಿ ತಡೆಯಿಲ್ಲದೆ ತುಂಬಿ ಹರಿದಿದೆ. ಅವನ ಈ ತರದ ಶೈಲಿಯಲ್ಲಿ ಅನುಭವವು ನಿತ್ಯ ಪುಟಿಯುವ ಹೊಸ ಕಾರಂಜಿ.

ಈ ಕವಿಯು ಬಳಸಿದ ಜಾನಪದ ಶಬ್ದಗಳನ್ನೆಲ್ಲ ಒಂದೆಡೆಯಲ್ಲಿ ಶೇಖರಿಸಿದರೆ ಅದು ಒಂದು ಜಾನಪದ 'ಮಹಾ ಶಬ್ದಕೋಶವೇ' ಆಗಬಹುದು. ಆ ಕೆಲಸವನ್ನು ಮುಂಬರುವ ಸಂಶೋಧಕರಿಗೆ ಬಿಟ್ಟು ಕೊಟ್ಟಿದ್ದೇನೆ. ಮಾದರಿಗಾಗಿ ಹಲಕೆಲವುಗಳನ್ನು ಮಾತ್ರ ಅರ್ಥಛಾಯೆಯೊಡನೆ ಇಲ್ಲಿ ಕೊಡಲಾಗಿದೆ.

ಅಡಕ ; ಗುಪ್ತ
ಇಕ್ಕರ ; ಭೂಮಿ
ಇಂಡೆ ; ಹಾರ ; ಮಾಲೆ
ಉಸಾಬರಿ ; ಗೊಡವೆ
ಈರಾಡಿ ; ಜಗಳಾಡಿ ; ಮೇಲೆ ಏರಿ
ಕವಡ ; (ಕಪಟ) ; ಕೆಟ್ಟ
ಕಕ್ಕಸ ; ಕಷ್ಟ
ಕಸ ; ಹೊಲಸು
ಕಾಟ ; ಉಪದ್ರ
ಕಿರಬು ; ಒದರು
ಕೋತು ; ಶಕ್ತಿ, ಬಲ, ತ್ರಾಣ

ಕೋರು ; ೧/೨ ಪಾಲು
ಗಸನೆ ; ಕೂಡಲೇ
ಗುಳೇವು ; ಊರುಬಿಡುವಾಗ ಗಂಟು ಕಟ್ಟಿದ ಜೀನಸು
ಚರಗಿ ; ತಂಬಿಗೆ
ಚೇರೆ ; ಲಕ್ಷಣ
ಜಲ್ಲೆಂದು ; ಗಾಬರಿಯಾಗಿ
ಜಿಬ್ಬ ; ಒಡಕ
ಜೀತ ; ದುಡಿತ
ಜಂಬುಳಿ ; ಹಾಸಿಗೆ
ಜೊಂಡು ; ಹೊಲಸು
ಜೋಲಿ ; ಕಾಣಿ

೯. 'ಐತಿಹಾಸಿಕ ಸಂಗತಿಗಳು', ಭಾಗ–೨, 'ಸುಗ್ಗಿಯ ಸಂಪ್ರದಾಯಗಳು' ನೋಡಿರಿ.

ತಗತಿ ; ವಾಗಾತಿ, ಸಿಸ್ತು
ತಟಕು ; ಅಲ್ಪ, ಸ್ವಲ್ಪ
ತಳ್ಳು ; ದೂಡು
ತುರಸು ; ಹ್ಯಾಂವ
ತೇದುಂಡ ; ಅನುಭವಿಸಿದ
ತೋಚು ; ತಿಳಿ
ದಗದ ; ಕೆಲಸ, ಬೊಗಸೆ
ದಿಟ ; ಸತ್ಯ
ದೂದಿ ; ಬೆಂಕಿಯ ಹಿಡಿಯುವ 'ಹಿಂಜರ'
ಪೀಜ ; ಸಣ್ಣ (insignificant)
ಬರಸು ; ಬಿರಸು
ಬಾಡುಗಳ್ಳ ; ಬ್ರಾಹ್ಮಣ, ಹಳ್ಳಿಯನ್ನು ಸುಲಿಯುವವ
ಬಿಟ್ಟಿ ; ಪುಕ್ಕಟೆ ಸಾರಿಗೆ ಅಥವಾ ದುಡಿಮೆ
ಮಡ್ಡು ; ಗುಂಗು
ಮಾಜಿ ; ಹಳೆ
ಮಾಜು ; ಮಾಯು
ಮಾಟ ; ಚೆಂದ
ಮಾಪ ; ಕ್ಷಮೆ
ಮಾಳ ; ಬಯಲು
ಮಾನೆ ; ವತನ (ಹೊಲ)
ಮುಕ್ಕು ; ಸಣ್ಣಬೊಗಸಿ, ಮುಷ್ಟಿ, ತುಸು
ಮುಂಗಡ ; ಮುಂಚಿತ (advance)
ಸಡ್ಡು ; ಬಂಟತನ (challange)
ಸೆಳಕು ; ಮಳೆಯ ಸರು
ಸಾಪು ; ನೆಲಸಮ
ಹಾಗು ; ಹಿಡಿತ
ಹದ ; ಪಕ್ವಸ್ಥಿತಿ
ಹಿಕ್ಕಿ ; ಬಾಚಿ
ಹುಂಡ ; ಹೆಡ್ಡ
ಹೋನಾರ ; ಹಂಚಿಕೆ, ಅರಿವು
ಹೊಳು ; ಬಯಲು
ಹೋಳು ; ಭಾಗ
ಹೇರು ; ಭಾರ, ಬೇಕಾಗು
ಹೂಟಿ ; ಎಳಿಸಲು ಹೂಡುವಿಕೆ
ವಾಳಿ ; ಹೀನ, ನೀಚ

ಹೀಗೆ ಅನೇಕ ಶಬ್ದಗಳನ್ನು ಕೊಡಬಹುದು. ಅಲ್ಲದೆ ಒಕ್ಕಲುತನಕ್ಕೆ ಸಂಬಂಧಿಸಿದ ಅನೇಕ ಶಬ್ದಗಳನ್ನು ಕವಿಯು ಒಕ್ಕಲಿಗನಾದುದರಿಂದ ಅರ್ಥಪೂರಿತವಾಗಿ ಉಪಯೋಗಿಸಿ ಕೊಂಡಿದ್ದಾನೆ. 'ಹೊಲಗೆಲಸ , ಸುಗ್ಗಿ, ಹಂತಿ, ಮೇಟಿ, ಕಣ, ಕೂರಿಗೆ, ಮೇಳಿ, ಹಂತಿಗಣ್ಣಿ, ಕೋಳೂರಗಾಳಿ, ಹರಿಚಂದ ಗಾಳಿ, ಕುಂಬಾರಗಾಳಿ, ರಾಶಿಗಾಳಿ, ಸುಂಕರಾಶಿ, ತೆನಿರಾಶಿ, ಕಡೆರಾಶಿ, ರಾಶಿಬುತ್ತಿ (ಶಿವ ಎಡೆ) ಚರಗ, ಹುಲುಸು, ಹುಲ್ಲುಲ್ಲಿಗೊ, ಮೊದಲಾದ ಶಬ್ದಗಳು ಹಾಡುಗಳಲ್ಲಿ ಸಂದರ್ಭಕ್ಕೆ ಸರಿಯಾಗಿ ಬಂದಿವೆ. 'ಬತ್ತಲೆಯ ಜಗ,' 'ಕಿನ್ನರಿಯ ವೇಗ' ಮೊದಲಾದ ಸಮಾಸ ಪದಗಳನ್ನು ಬೇಕಾದಾಗ ಅರ್ಥಸಮಂಜಸವಾಗುವಂತೆ ಈ ಜಾನಪದ ಕವಿಯು ಉಪಯೋಗಿಸಿದ್ದಾನೆ. ಅಲ್ಲದೆ ಜಾನಪದ ಬಳಕೆಯಲ್ಲಿರುವ ಶಬ್ದಗಳನ್ನೇ ಉಪಯೋಗಿಸಿ, ಶಿವಶರಣರನ್ನು ತನ್ನ ಹಾಡುಗಳಲ್ಲಿ ಕರೆದಿದ್ದಾನೆ. ನೇಗಿಯ ಅಮುಗಯ್ಯ, ಜಾತಿಗರ ಚೌಡಯ್ಯ, ಹೂಗಾರ ಮಾದಯ್ಯ, ಎಂದು ಹಾಡುಗಳಲ್ಲಿ ಕರೆಯಲ್ಪಟ್ಟ ಈ ಶಿವಶರಣರನ್ನು ಉಳಿದ ವೀರಶೈವ ಕವಿಗಳು, 'ಅಮುಗಿದೇವ, ಬಹುರೂಪಿ ಚೌಡಯ್ಯ, ಚಿಕ್ಕ ಮಾದಯ್ಯ ಎಂದು ತಮ್ಮ ಕಾವ್ಯಗಳಲ್ಲಿ ಕರೆದಿದ್ದಾರೆ. ಈ ಜಾನಪದ ಕವಿಯು ಜನತೆಯ ಮಾತುಗಳಲ್ಲಿಯೇ ಹಾಡುಗಳಲ್ಲಿ ಸೌರಭವನ್ನು ತುಂಬಿದ್ದಾನೆ; ಅಲ್ಲದೆ ಜನಪದದಲ್ಲಿ ಕಂಡುಬರುವ ಅನೇಕ ಗಾದೆಯ ಮಾತುಗಳನ್ನು ಹೇರಳವಾಗಿ ಬಳಸಿದ್ದಾನೆ.

೧. ತಾಯಿ ಬಳ್ಳಿಗೆ ಹೇಳು ಕಾಯಿ ಹೂಗಳ ಭಾರೆ।
೨. ಮುತ್ತೈದಿ ನಿನ ಮರಣ, ಎತ್ತ ಹೋದರು ಪೂಜೆ।
೩. ಕರೆಯುವದೆ। ಕನ್ನಡಿಯು ಜನಕೆ ನೋಡೆಂದು।
೪. ಇದ್ದು ಬೀಳ್ವರು ಜನರು, ಬಿದ್ದು ಗೆದ್ದವನೊಬ್ಬ।
೫. ಬೋರಗಲ್ಲಿನ ಮೇಲೆ, ನೀರು ಎರೆದಂತಾಯ್ತು।
೬. ಒಡೆದು ಹಾಡುವೆನೆಂದು, ಎಡವಿ ಬೀಳುವರೆಷ್ಟೊ।
೭. ಕೋಣೋಡಿ ಬಲು ದಣಿದು, ಊನಾಗಿ ಬೀಳ್ವಂತೆ।

ಇಂಥ ಅನೇಕ ಗಾದೆಯ ಮಾತುಗಳನ್ನು ಶಿವಶರಣರ ಈ ಹಂತಿಯ ಹಾಡುಗಳಲ್ಲಿ ಕಾಣಬಹುದು. ಜಾನಪದ ಶಬ್ದಗಳ ಜೋಡಣೆಯ ರಸಭರಿತವಾದ ಈ ಹಾಡುಗಳಲ್ಲಿ ಪ್ರೌಢಭಾಷೆಯ ಹಲಕೆಲವು ಶಬ್ದಗಳೂ ಕಂಡುಬರುವುವು. ಅದು ಕಾರಣ ಇದು ಒಂದು ಅಸಂಬದ್ಧ ಭಾಷಾ ಮಿಶ್ರಣವೆಂದು ಯಾರೂ ಶಂಕಿಸಲಾಗದು. ಏಕೆಂದರೆ ಉತ್ತರಕರ್ನಾಟಕದ ಹಳ್ಳಿಯವರೊಡನೆ ಸಂಪರ್ಕ ಬಂದವರಿಗೆಲ್ಲರಿಗೂ ಅವರ ಸಹಜ ಭಾಷೆಯೇ ಈ ತೆರನಾಗಿದೆ ಎಂಬುದು ಪ್ರತೀತಿಗೆ ಬರುತ್ತದೆ. ಕವಿಯು ಎಂಥ ಶಬ್ದಗಳನ್ನೇ ಉಪಯೋಗ ಮಾಡಲಿ, ಅವೆಲ್ಲವುಗಳಿಗೂ ಜಾನಪದದ ಹೊದಿಕೆ ಇದೆ; ಒಳಗೆ ಜಾನಪದದ ಉಸಿರಿದೆ; ಓದುಗರೊಡನೆ ಅವು ಜಾನಪದವನ್ನೇ ಮಾತಾಡುತ್ತವೆ. ಕಾರಣ ಈ ಕವಿಯ ಶೈಲಿಯು ಜಾನಪದ ವಿಶಿಷ್ಟ ಶೈಲಿಯೆಂದೇ ಹೇಳಬಹುದು.

ಶಿವಶರಣರ ಹಂತಿಯ ಹಾಡುಗಳು ಕಾವ್ಯಸೃಷ್ಟಿಯಲ್ಲಿ 'ಸರ್ವಜ್ಞ'ನ ತ್ರಿಪದಿಗಳನ್ನು ಮೀರಿವೆ. ಸರ್ವಜ್ಞನ ತ್ರಿಪದಿಗಳು ಲೋಕಾನುಭವದ ಖಂಡ ತುಂಡ ಮಾತುಗಳಾಗಿವೆ. ಸಂಬಂಧಿಸಿದವರು ಅವುಗಳನ್ನು ಕೇಳಿ ಕೆಂಡಾಗಬಹುದು. ವಸ್ತು ನಿರೂಪಣೆಯು ಒಣದಾಗಿರುವುದರಿಂದ

ಬಹಳ ನೀರಸವೆನಿಸುವುದು. ಆದರೆ ಹೇಳುವ ಚಾತುರ್ಯತೆಯು ಓದುಗರ ಅಂತರಂಗವನ್ನು ಮುಟ್ಟಿ ಮಾತುಮಾತಿಗೆ ಅಲ್ಲಾಡಿಸಿ ಬಿಡುವುದು. ಸರ್ವಜ್ಞನು ಮಹಾಜಾನಪದ ಕವಿ. ಅವನ ಹೆಸರು ಕನ್ನಡಿಗರ ನಾಲಗೆಯ ಮೇಲೆ, ಅಜರಾಮರವಾಗಿ ನಲಿದಾಡುತ್ತದೆ. ಅವನ ಹೆಸರು ಕೇಳದ ಕನ್ನಡಿಗರೇ ಇಲ್ಲ. ಇದಕ್ಕೆ ಕಾರಣ ಅವನು ಕಂಡದ್ದನ್ನು ಹಾಡುತ್ತ ಯತಿಯಾಗಿ ಕರ್ನಾಟಕ ತುಂಬೆಲ್ಲ ಅಲೆದಾಡಿದ್ದು. ಸರ್ವಜ್ಞನಂತೆ ಅಚ್ಚಗನ್ನಡ ತ್ರಿಪದಿಗಳನ್ನು ಸಾವಿರಗಟ್ಟಲೆ ರಸವತ್ತಾಗಿ ಹಾಡಿದ, ಕನ್ನಡಿಗರಿಗೆ ಗೊತ್ತಿಲ್ಲದ ಇನ್ನೊಬ್ಬ ಜಾನಪದ ಮಹಾಕವಿಯೆಂದರೆ ನೂರೊಂದು ಶಿವಶರಣರ ಹಂತಿಯ ಹಾಡುಗಳನ್ನು ಹಾಡಿದ, ಇನ್ನೂ ಮೊನ್ನೆ ಮೊನ್ನೆ ಕೈಲಾಸವಾಸಿಯಾದ ನಿರಕ್ಷರ ಕವಿ 'ಸಾವಳಗೇಶ್ವರ'ನೆಂದೇ ಹೇಳಬಹುದು. ಕವಿಯು ನಿರಕ್ಷರಿಯಾಗಿ ಹಾಡಿದ್ದು ನಿರಕ್ಷರಿಗಳಾದ ತನ್ನ ಒಕ್ಕಲಿಗರ ಬಳಗಕ್ಕೆ ಅದೂ ಹಂತಿಯಲ್ಲಿ, ಸುಗ್ಗಿಯಕಾಲದ ಇರುಳುಗಳಲ್ಲಿ. ಅಂದ ಮೇಲೆ ಕವಿಯ ಹೆಸರಾದರೂ ಕಲಿತವರಿಗೆ ಗೊತ್ತಾಗದಿರುವುದರಲ್ಲಿ ಆಶ್ಚರ್ಯವೇನು?

ಈ ಹಳ್ಳಿಯ ಕಬ್ಬಿಗನು ಯಾರು?

ನೂರೊಂದು ಶಿವಶರಣ ಹಂತಿಯ ಹಾಡುಗಳನ್ನು ಹಾಡಿದವರು ಕೈ॥ ಸಾವಳಗಯ್ಯರವರು. ಇವರು ನಮ್ಮ ಭಾಗದಲ್ಲಿ ಹಂತಿಯ ಹಾಡುಗಾರರೆಂದು ಪ್ರಸಿದ್ಧರಾಗಿ ಹೋದರು. ಇವರು ಹಾಡಿದ ಹಲಕೆಲವು ಹಂತಿಯ ಹಾಡುಗಳನ್ನು ಆ ಭಾಗದ ರೈತರು ಈಗಲೂ ಹರಕು-ಮುರುಕಾಗಿ ಹಾಡುತ್ತಾರೆ. ಈ ಕವಿಯು ಈ ಹಾಡುಗಳನ್ನು ಹಾಡಲು ಪ್ರತಿಭೆಯನ್ನೂ ಸಂಸ್ಕೃತಿ ಮೊದಲಾದುವುಗಳನ್ನೂ ಹೇಗೆ? ಎಲ್ಲಿ? ದೊರಕಿಸಿದನೆಂಬುದನ್ನು ಈಗ ಸಂಕಲಿಸಿ ಬೆಳಕಿಗೆ ತಂದ 'ನಾಲ್ಕು ನಾಡಪದಗಳು' ಎಂಬ ಪುಸ್ತಕದ 'ಕೋರಿಕೆ'ಯಲ್ಲಿ ವಿಶದ ಮಾಡಿದೆ. ಇವರಿಗೆ ಓದುಬರಹ ಬರುತ್ತಿದ್ದಿಲ್ಲ. ಇವರು ನೃಪತುಂಗನು ಹೇಳುವಂತೆ. "ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತಮತಿಗಳ್," ಈ ವರ್ಗಕ್ಕೆ ಸೇರಿದ ಕವಿಗಳೆಂದೇ ಹೇಳಬೇಕಾಗಿದೆ.

ಈ ಹಳ್ಳಿಯ ಕಬ್ಬಿಗನು ನೂರೊಂದು ಶಿವಶರಣರ ಹಾಡುಗಳನ್ನು ಹಾಡುತ್ತಿದ್ದನು. ಅವುಗಳಲ್ಲಿ ಕೆಲವೊಂದನ್ನು ಮಾತ್ರ ಸಂಗ್ರಹಿಸಲಾಗಿದೆ. ಉಳಿದವುಗಳನ್ನು ಸಂಗ್ರಹ ಮಾಡಲು ಆಗದ್ದಕ್ಕೆ ನನ್ನ ದುರ್ದೈವವೆಂದು ಬರೆಯಬೇಕಾಗಿದೆ. ಈ ಕವಿಯ ಶಿವಶರಣರ ಹಾಡುಗಳಲ್ಲಿ ಅವನ ವ್ಯಕ್ತಿ್ವ ಸಂಬಂಧ ಹಲಕೇ್ವು ಪದ್ಯಗಳು ಬರುತ್ತವೆ.

ಸುಗ್ಗಿ ದಾಸೋಹೆಂದು, ಹಿಗ್ಗು ಬೆಳವಲುನೋಡು
ಹುಗ್ಗಿ ಹೋಳಿಗೆಯು ನಿನ್ನಾಡು । ಸುಗ್ಯೂಟ
ನಗ್ಗೇಡು ಇದಕೆ ಮಲೆನಾಡು ॥೮೮॥

ಹಾರಿ ಬರುವದು ಹುಲುಸು, ಏರಿಮಾದನ ಪತ್ರಿ
ಸೂರಿ ಹಾಡುವೆನು ನಿನ್ನಾಡ । ಬೆಳತನಕ
ಯಾರು ಕೈ ತಟ್ಟ ನಿಲ್ಲುವರು ॥೮೯॥

ಒಡೆದು ಹಾಡುವೆನೆಂದು, ಎಡವಿ ಬೀಳುವರೆಷ್ಟೊ
ಜಡ ಮತಿಗಳೆಲ್ಲ ತಡಪಡಿಸಿ । ನಿನ್ನಾಡ
ಮಿಡಿಯುದಕೆ ಬಾಯಿ ಕಳಕೊಂಡು ॥೯೦॥

ರಾಚಯ್ಯ ನಿನ ಮಗನು, ಊಚ ಸಾವಳಗೇಶ
ಕೋಚೆತ್ತಿ ಕಣಕೆ ಹಾಡಿದನು । ಬೆಳತನಕ
ನಾಚಿ ಕತ್ತಲೆಯು ಬೆಳಗಾಯ್ತು ॥೯೧॥

ನನ್ನ ಕಾಯಕ ಕೇಳೊ, ನನ್ನಿಯಲಿ ಹಾಡುವದು
ಕುನ್ನಿನಾ ಜನಕೆ ಅಕ್ಕರವ । ಕಲಿತಿಲ್ಲ
ಸುನ್ನಿ ಬರೆಯುದಕೆ ಕೈಯಲ್ಲಿ ॥೯೨॥

ಸೊನ್ನಿಯಲಿ ಹಾಡುದಕೆ, ನನ್ನವ್ವ ಕಲಿಸಿದಳು
ಬಿನ್ನಾಣ ವೆನಗೆ ಹಾಡುದಕೆ । ಹಡದವ್ವ
ಸನ್ನುತದ ಶರಣೆ ಶಿವಪದಕೆ ॥೯೩॥ -ಹೂ-ಮಾ-

ಬುದ್ಧಿ ಇಲ್ಲದೆ ನಾವು, ಕದ್ದು ಹಾಡುವೆವೆಂದು
ಎದ್ದು ಎದೆಯೊಳಗೆ ಮೈತುಂಬು । ಗೊಲ್ಲಾಳ
ಹುದ್ದೆ ಬೇಡೆಮಗೆ ಜಗದೊಳಗೆ ॥೨॥ -ಗೊಲ್ಲಾಳ-

ಅಗಿದು ನೋಡುವವರಾರು, ನಗೆಯಲ್ಲ ನಿನ್ನಾಡು
ನಗ ನೋಡು ಬಾಳಚಕ್ಕಡಿಗೆ । ಶಿವಮತಕೆ
ಬಿಗಿನೋಡು ಸುತ್ತ ಹಬ್ಬುದಕೆ ॥೫॥ -ನೇ-ಅ-

ಬಾಡದೀಹೂಹಾಡ, ಕಾಡಮಲ್ಲಿಗೆಯೆಂದು
ಕಾಡ ಗಾಳಿಗಳು ಪರಿಮಳವ । ಹೊತ್ತೊಯ್ದು
ನಾಡೊಳಗೆ ಸುಳಿದು ಬೀಸುವವು ॥೩॥ -ಕೋ-ಕೊ-

ಮೇಲೆ ಎತ್ತಿಕೊಂಡ ಪದ್ಯಗಳನ್ನು ಕೂಲಂಕಷವಾಗಿ ಹಿಂಜಿ ನೋಡಲು ಕವಿಯ ಸಂಬಂಧ ಅನೇಕ ಸಂಗತಿಗಳೂ, ಅವನ ಮನೋಗತವೂ ಅವುಗಳಲ್ಲಡಕವಾಗಿದ್ದುದು ಎಲ್ಲರಿಗೂ ತಿಳಿಯದಿರದು. ಕವಿಯು ತಾನು ಯಾರು? ತನ್ನ ತಂದೆ ಯಾರು? ತನಗೆ ಹಾಡುವುದಕ್ಕೆ ಕಲಿಸಿದವರಾರು? ಎಂಬ ಸಂಗತಿಗಳನ್ನು ಬಿಚ್ಚಿ ಹೇಳಿದ್ದಾನೆ. 'ರಾಚಯ್ಯ ನಿನ ಮಗನು, ಊಚ ಸಾವಳಿಗೇಶ' ಎಂಬ ಮಾತಿನಿಂದ ಕವಿಯ ಹೆಸರು ಶ್ರೀ ಸಾವಳಿಗೇಶ್ವರನೆಂದೂ ಅವನ ತಂದೆಯ ಹೆಸರು ಶ್ರೀ ರಾಚಯ್ಯನೆಂದೂ ವಿಶದವಾಗುವುದು. ಕವಿಯ ತಾಯಿಯೇ ಅವನಿಗೆ ಹಾಡಲಿಕ್ಕೆ ಕಲಿಸಿದ್ದಾಳೆ. 'ಸೊನ್ನಿಯಲಿ ಹಾಡುದಕೆ, ನನ್ನವ್ವ ಕಲಿಸಿದಳು' ಆದುದರಿಂದ ಈ ಹಂತಿಯ ಹಾಡುಗಳನ್ನು ಹಾಡುವುದಕ್ಕೆ ತನಗೆ ಬಿನ್ನಾಣವೆಂದೂ, ತನ್ನ ಹಡದವ್ವನು ಸನ್ನುತದ ಶಿವಶರಣೆಯಾಗಿ ಶಿವಪದವನ್ನು ಹೊಂದಿದಳೆಂದೂ ಕವಿಯು ಹೇಳಿದ್ದಾನೆ. ಇದರ ಹೊರತಾಗಿ ಅವನು ತನ್ನ ಮನೆತನದ ಸಂಬಂಧ ಯಾವ ಮಾತುಗಳನ್ನೂ ಎತ್ತಿಲ್ಲ.

ಕವಿಯು ಬೆಳುವಲದವನಾದುದರಿಂದ, ಬೆಳುವಲದ ಹಿರಿಮೆಯನ್ನು ಗುಣಗಾನ ಮಾಡಿದ್ದಾನೆ. 'ಸುಗ್ಗಿ ದಾಸೋಹೆಂದು, ಹಿಗ್ಗು ಬೆಳುವಲು ನೋಡು' 'ಹಿಗ್ಗು ಹಾಡುದಕೆ ಬೆಳವಲವು,' 'ಸಜ್ಜು ನಿನ್ನಾಡು ಬೆಳವಲಕೆ,' 'ಉಣಸೊ ಬೆಳವಲವ ಬೆಳೆಹೊಕ್ಕೊ,' 'ಟೆಂಗ ಬಿಳಿಜೋಳ ಒಕ್ಕುವದು ಬೆಳವಲವು,' 'ಉತ್ತಮರನಾಡು ಬೆಳವಲಕೆ' – ಹಾಡಿನಲ್ಲಿ ಬರುವ ಇವೇ ಮೊದಲಾದ ಮಾತುಗಳು ಕವಿಯು ಬೆಳುವಲದವನೆಂದು ಸಿದ್ಧ ಮಾಡುತ್ತವೆ. ಮೂಕ ಹಂತಿಯನ್ನು ಹೊಡೆಯುವ ಮಲೆನಾಡಿನವರನ್ನು ನೋಡಿದ ಕವಿಯು 'ನಗ್ಗೇಡು ಇದಕೆ ಮಲೆನಾಡು' ಎಂದು ನಕ್ಕಿದ್ದಾನೆ. ಬೆಳುವಲದಲ್ಲಿ ಸುಗ್ಯೂಟ (ರಾಶಿಬುತ್ತಿ)ವೆಂದರೆ, ಹುಗ್ಗಿ, ಹೋಳಿಗೆಯಂತೆ ಶಿವಶರಣರ ಹಾಡುಗಳು ಎಂದು ಕವಿಯು ಬೆಳುವಲದ ಹಂತಿಯ ಸೊಬಗನ್ನು ನೋಡಿ ಹಾಡಿ ಆನಂದ ಬಟ್ಟಿದ್ದಾನೆ.

ಕವಿಯು ತನ್ನ ಕಾಯಕವು, ನನ್ನಿಯಲಿ ಶಿವಶರಣರ ಹಾಡುಗಳನ್ನು ಹಾಡುವುದೆಂದೂ ತಾನು ಓದು ಬರಹವನ್ನು ಕಲಿಯದ ಮೂಲಕ ಜನಕೆ 'ಕುನ್ನಿ' ಮಹತ್ವವಲ್ಲದ್ದು (insignificant) ಆದನೆಂದೂ ಕಾರಣ 'ಸುನ್ನಿ ಬರೆಯುವದಕ್ಕೆ ಕೈಯೆಲ್ಲಿ' ಎಂದು ಬಲು ವ್ಯಥೆ ಪಟ್ಟಿದ್ದಾನೆ. ಕವಿಯು ನಿರಕ್ಕರಿಯಾದರೂ ಅವನೇನು ಸಾಮಾನ್ಯ ಕವಿಯು ಅಲ್ಲವೆಂದು ಅವನ ಹಂತಿಯ ಹಾಡುಗಳನ್ನೋದಿದವರು, ಕೇಳಿದವರು ಒಪ್ಪಲೇಬೇಕಾಗುವುದು. 'ನಾಲ್ಕು ನಾಡಪದಗಳು' ಎಂಬ ಸಂಕಲನದ ಮುನ್ನುಡಿಯಲ್ಲಿ ಮುನ್ನುಡಿಗಾರರು ಈ ಜಾನಪದ ಕವಿಯನ್ನು ಕುರಿತು ಕೆಳಗಿನಂತೆ ಬರೆಯುತ್ತಾರೆ. "ಕವಿ ನಿರಕ್ಷರಿಯೆಂದು ಹೇಳಿಕೊಂಡಿದ್ದರೂ ಆತನ ಸಂಸ್ಕಾರಕ್ಕೂ ನಯಕ್ಕೂ ಏನೂ ಕಡಿಮೆಯಿಲ್ಲ. ನಮ್ಮ ಭರತ ಭೂಮಿಯ ಸಂಸ್ಕೃತಿಯಲ್ಲಿ ಇದೊಂದು ಲಕ್ಷಿಸತಕ್ಕ ಮಾತಾಗಿದೆ. ನಮ್ಮ ಸಾಮಾನ್ಯ ಜನತೆ ನಿರಕ್ಷರಿಗಳಾಗಿದ್ದರೂ ಉಚ್ಚ ಸಂಸ್ಕಾರವನ್ನು ಹೊಂದಿದವರಾಗಿದ್ದಾರೆ. ಈ ಹಾಡುಗಳನ್ನು ರಚಿಸಿದ ಕವಿ ಅಕ್ಷರ ಜ್ಞಾನವಿಲ್ಲದೆಯೂ ನಮ್ಮ ಪ್ರಾಚೀನ ಸಂಸ್ಕೃತಿಯ ಸಾರವನ್ನುಂಡಿದ್ದಾನೆ; ಅದನ್ನು ಅರಗಿಸಿ ಕೊಂಡಿದ್ದಾನೆ. ನಮ್ಮ ಪುರಾಣಗಳು, ಭಕ್ತರ ಕಥೆಗಳು, ವಚನಗಳು, ತತ್ವಪದಗಳು ಇವೆಲ್ಲವುಗಳಲ್ಲಿಯೂ ಆತನಿಗೆ ತೀವ್ರವಾದ ಗತಿಯಿದೆ. ಆದುದರಿಂದ ಅಲ್ಲಿಯ ಭಾಷೆಯ ಪ್ರಭಾವವೂ ಈ ಹಾಡುಗಳಲ್ಲಿ ಸ್ವಾಭಾವಿಕವಾಗಿ ಕಂಡುಬರುತ್ತದೆ. ತಾನು ಅನುಭವಿಸಿದ್ದನ್ನು, ಕೇಳಿದ್ದನ್ನು, ಕಂಡದ್ದನ್ನು ಅರಗಿಸಿಕೊಂಡು ತನ್ನ ಕಾವ್ಯಕ್ಕಾಗಿ ಉಪಯೋಗಮಾಡಿಕೊಳ್ಳುವದು ನಿಜವಾದ ಕವಿಯ ಲಕ್ಷಣ."[೧೦] "ಇವನ್ನು ರಚಸಿದ ಕವಿ ನಿರಕ್ಷರಿಯೆಂದು ಹೇಳಿಕೊಂಡಿದ್ದರೂ, ಛಂದಸ್ಸಿನ ದೃಷ್ಟಿಯಿಂದ ದೋಷಗಳು ಕಾಣಬರದೇ ಇರುವದು ಆಶ್ಚರ್ಯವನ್ನುಂಟು ಮಾಡುತ್ತದೆ. ನಮ್ಮ ಛಂದೋಲಕ್ಷಣ ಕಾರರು ಅತಿ ಮುಖ್ಯವೆಂದು ಪರಿಗಣಿಸಿದ ದ್ವಿತಿಯಾಕ್ಷರ ಪ್ರಾಸವನ್ನು ಕವಿಯು ಎಲ್ಲಿಯೂ ತಪ್ಪಿಸಿಲ್ಲ. ಇಂಥ ಛಂದಸ್ಸು ಹಾಗೂ ಭಾಷೆಯ ಮೇಲಿನ ಪ್ರಭುತ್ವವು ಪಾಂಡಿತ್ಯದಿಂದಲ್ಲದೆ ನೈಸರ್ಗಿಕ ಪ್ರತಿಭೆಯಿಂದ ಬಂದುದು."[೧೧] "ಒಟ್ಟಿನಲ್ಲಿ ಒಂದೇ ಮಾತಿನಲ್ಲಿ ಹೇಳಬೇಕಾದರೆ ಇವನ್ನು ರಚಿಸಿದ ಜನಪದ ಕವಿ ನಿಜವಾದ ಕವಿಯೆಂಬುದು ಸ್ಪಷ್ಟವಿದೆ.[೧೨] ಕವಿಯು ದೊಡ್ಡ ಕವಿಯೆಂಬ ಹುದ್ದೆಯನ್ನು ಪಡೆಯಬೇಕೆಂಬ ಆಶೆಯು ತನಗಿಲ್ಲವೆಂದು ಹಾಡಿದ್ದಾನೆ. 'ಹುದ್ದೆ ಬೇಡೆಮಗೆ ಜಗದೊಳಗೆ' ಎಂದೂ, 'ಬುದ್ಧಿಇಲ್ಲದೆ ನಾವು, ಕದ್ದು ಹಾಡುವೆವೆಂದು' ಎಂದು ತಾನು ಪಂಡಿತನಲ್ಲವೆಂದೂ, ಕೇಳಿದ್ದನ್ನು ಜನಕ್ಕೆ ಕದ್ದು ಹಾಡುವೆನೆಂದೂ (ಅಂಜಿ, ಅಳುಕಿ ಹಾಡುವೆನೆಂದೂ) ಆದುದರಿಂದ 'ಎದ್ದು ಎದೆಯೊಳಗೆ ಮೈತುಂಬು । ಗೊಲ್ಲಾಳ', ಶಿವಶರಣರು ಎದ್ದು ಎದೆಯೊಳಗೆ ಮೈತುಂಬಿ ಹಾಡಿಸಲೆಂದೂ, ಅವರನ್ನು ಭಕ್ತಿಯಿಂದ ಪ್ರಾರ್ಥಿಸಿದ್ದಾನೆ. ಕವಿಯು ಹೀಗೆ ಹಾಡಿದ್ದರೂ, ತನ್ನ ಪ್ರತಿಭೆ, ಸ್ಫೂರ್ತಿ, ಕವಿತಾಶಕ್ತಿಯಲ್ಲಿ ನಿರತನಾಗಲು ಮೈಮರೆತು ಹಲಕೆಲವು ಪದ್ಯಗಳಲ್ಲಿ ತನ್ನ ಕವಿತಾ ಸಾಮರ್ಥ್ಯದ ಹುಮ್ಮಸವನ್ನು ಒಡನುಡಿಸಿದ್ದಾನೆ. ಶಿವಶರಣರ ಹಾಡುಗಳನ್ನು ನಾನು ಹಾಡುವೆನು, ನೀನು ಹಾಡು, ಎಂದು ಎಷ್ಟೋ ಜಡಮತಿಗಳು ತಡಪಡಿಸಿ ಬೀಳುವರೆಂದೂ 'ಅ' ಎಂದು ಬಾಯಿ ತಗೆಯಲಾರದೆ, ಬಾಯಿ ಕಳಕೊಂಡರೆಂದೂ, ಊಚುಕವಿಯಾದ ತಾನು ಬೆಳಬೆಳತನಕ ಸರಾಗದೊಡನೆ ಹಂತಿಯ ಕಣಕ್ಕೆ ಹಾಡಲು, ಕೇಳಿ ಕೇಳಿ ಕತ್ತಲೆಯು ನಾಚಿ ಬೆಳಗಾಯಿತೆಂದೂ ಬಲು ಮನೋಹರವಾಗಿ ಹೇಳಿಕೊಂಡಿದ್ದಾನೆ.

ಗಂಟಲ ದನಿಕೇಳ, ಗಂಟಿ ಬಾರಿಸಿದ್ಹಾಂಗ
ಎಂಟು ಕಿನ್ನೂರಿ ನುಡಿದ್ಹಾಂಗ'।

ಎಂದೆನ್ನುವಂತೆ ಈ ಕವಿಯು ಕೋಚೆತ್ತಿ ಹಾಡುವ ರೀತಿಯು ಪ್ರಶಾಂತವಾದ ರಾತ್ರಿಯಲ್ಲಿ ಸುತ್ತುಮುತ್ತಲಿನ ಎಲ್ಲ ಒಕ್ಕಲಿಗರನ್ನು ಬರಮಾಡಿ ಕೊಂಡದ್ದನ್ನು ಕಣ್ಣಾರೆ ಕಂಡು ಮನಗಂಡಿದ್ದೇನೆ. ಹೂಗಾರ ಮಾದಯ್ಯನ ಪತ್ರಿ ಪುಷ್ಪಗಳೊಡನೆ ಹುಲುಸು ಏರಿ, ಹಂತಿಯ ಕಣಕ್ಕೆ ಹಾರಿಬರುವಂತೆ, ತಾನು ಬಲು ಹುಲುಸಾಗಿ (ಸೂರಿ) ಶಿವಶರಣರ ಹಾಡುಗಳನ್ನು ಹಾಡಿದರೆ, ತನ್ನ ಕೈತಟ್ಟಿ ಯಾರೂ ನಿಲ್ಲಲಾರರೆಂದು

---

೧೦. 'ನಾಲ್ಕು ನಾಡಪದಗಳು', ಮುನ್ನುಡಿ, ಪು. ೯.
೧೧. 'ನಾಲ್ಕು ನಾಡಪದಗಳು', ಮುನ್ನುಡಿ, ಪು. ೭
೧೨. 'ನಾಲ್ಕು ನಾಡಪದಗಳು', ಮುನ್ನುಡಿ, ಪು. ೧೩.

ಕವಿಯು ತನ್ನ ಆತ್ಮ ಭರವಸೆಯನ್ನೂ ಕವಿತಾ ಸಾಮರ್ಥ್ಯವನ್ನೂ ಇಲ್ಲಿ ಹೊಗಳಿಕೊಂಡಿದ್ದಾನೆ. ನೇಗಿಯ ಅಮುಗಯ್ಯನ ಹಾಡಿನಲ್ಲಿ 'ಅಗಿದು ನೋಡುವರಾರು, ನಗೆಯಲ್ಲ ನಿನ್ಹಾಡು' ಎಂದೂ, ಆ ಹಾಡು 'ನಗ ನೋಡು ಬಾಳಚಕ್ಕಡಿಗೆ' ಎಂದೂ ಹಾಡಿನಲ್ಲಿ ಹೇಳಿದ ಸಂಗತಿಗಳು 'ಶಿವಮತಕೆ । ಬಿಗಿನೋಡು ಸುತ್ತ ಹಬ್ಬುದಕ' ॥ ಎಂದೂ ಬಲು ಅಭಿಮಾನದಿಂದ ಹಾಡಿದ್ದಾನೆ. ಈ ಪದ್ಯದ ಹಿಂದೆ 'ಮತ ದರ್ಶನ,' 'ಪ್ರಪಂಚ ದರ್ಶನ'ಗಳು ಧ್ವನಿತವಾಗುತ್ತವೆ. ಹೀಗೆ ಹಾಡಿದಂತೆ ಈ ಕವಿಯ ಹಾಡುಗಳಿರುವುದರಿಂದ ಅದು ಕನ್ನಡಿಗರಿಗೆ ಹೆಮ್ಮೆಯಮಾತಾಗಿದೆ. ಕೋಳೂರ ಕೊಡಗೂಸಿನ ಹಾಡಿನಲ್ಲಿ 'ಬಾಡದೀ ಹೂ ಹಾಡ, ಕಾಡ ಮಲ್ಲಿಗೆಯೆಂದು' ಕವಿಯು ಕರೆಯುವುದರಲ್ಲಿ ಒಂದು ಔಚಿತ್ಯವಿದೆ. ಕವಿಯು ತನ್ನ ಹಾಡುಗಳು ಬಾಡದ ಹೂ ಗಳೆಂದೂ, ಆ ಹೂ ಗಳು ಕಾಡಮಲ್ಲಿಗೆ ಯಾದ್ದದರಿಂದ ಅವುಗಳ ಪರಿಮಳವನ್ನು ನಾಗರಿಕರು ಅರಿಯಿರೆಂದೂ ಧ್ವನಿಯಿಟ್ಟು ಹೇಳಿದ್ದಾನೆ. ಅಲ್ಲದೆ, ಕಾಡ ಗಾಳಿಗಳು (ಒಕ್ಕಲಿಗರು) ಈ ಕಾಡಮಲ್ಲಿಗೆಯ ಪರಿಮಳವನ್ನು ಹೊತ್ತೊಯ್ದು ನಾಡೊಳಗೆ ಸುಳಿದು ಬೀಸುವುವೆಂದು ಆಶಾವಾದಿಯಾಗಿ ಹಾಡಿದ್ದಾನೆ. ಕಾಡಮಲ್ಲಿಗೆಯ ಸುವಾಸನೆಯ ಶ್ರೇಷ್ಠತೆಯನ್ನು ಅನುಭೋಗಿಸಿ ತಿಳಿಯುವುದು ಶ್ರೇಯಸ್ಕರವಿದ್ದಂತೆ ಈ ಹಾಡುಗಳಿವೆ. ಇನ್ನು ಮೇಲಾದರೂ ಈ ಹಾಡುಗಳ ಸೌರಭವನ್ನು ಕನ್ನಡಿಗರು ಮನಗಾಣಲಿ.

ಪ್ರತಿಯೊಂದು ಹಾಡಿನ ಕೊನೆಯ ಎರಡೂ ಪದ್ಯಗಳಲ್ಲಿ ಕವಿಯು ಹಂತಿಯ ಹಾಡುಗಳೆಂದು ಹೇಳಿ ಶಿವಶರಣರಿಗೆ ಹುಲುಸು ಕೊಡಿರೆಂದು ಉಡಿಯೊಡ್ಡಿ ಬೇಡಿಕೊಂಡಿದ್ದಾನೆ.

ಹಂತಿಯದು ಹಾಡೆಂದು, ಪಂತ ಕಟ್ಟಲು ಬೇಡ
ಕಂತಿ ಕರಗುವುದು ನಿಂತಲ್ಲೆ । ಗೊಲ್ಲಾಳ
ಕುಂತು ಎದೆಯೊಳಗೆ ಹಾಡಿಸಿದ ॥
ಶರಣು ಶರಣೆಂಬುವೆವು, ಹರಣ ಹಾರುವ ತನಕ
ಕರುಣೆಸರಿ ಶರಣ ಗೊಲ್ಲಾಳ । ನಮಗಿನ್ನು
ಹರಸರಿ ಹುಲುಸು ಹುಲ್ಹುಲ್ಲಿಗೊ ॥

ಯಾರಾದರೂ ಪಂಡಿತರು ಹೆಮ್ಮೆಯಿಂದ ಕೊಬ್ಬಿ, ಇದೇನು? ಹಂತಿಯ ಹಾಡೆಂದು ಕಡೆಗಂಡು, ಹೀಯಾಳಿಸಿ ಪಂತಕಟ್ಟಿದರೆ, ನಿಂತಲ್ಲಿಯೇ (on the spot) ಅವರ 'ಕಂತಿ' (ಸಾಮರ್ಥ್ಯ) ಕರಗಿ ಹೋಗುವುದೆಂದು ಕವಿಯು ಹೇಳುತ್ತಾನೆ. ಶಿವಶರಣರೇ ತನ್ನ ಎದೆಯೊಳಗೆ ಕೂತು ಹಾಡಿಸಿದುದೇ, ಈ ಪರಿಣಾಮದ ಮೂಲ ಕಾರಣವಾಗಿದೆ ಎಂದು ಕವಿಯು ಹಾಡಿದ್ದಾನೆ. ಆದುದರಿಂದ ಇಂಥ ಶರಣರಿಗೆ ಕವಿಯು ಪೂಜ್ಯ ಭಕ್ತಿಯಿಂದ 'ಶರಣು ಶರಣೆಂಬುವೆವು, ಹರಣ ಹಾರುವ ತನಕ' ಎಂದೂ, ಕರುಣೆಸರಿ ಎಂದೂ ಮೊರೆಹೊಕ್ಕಿದ್ದಾನೆ; ಒಕ್ಕಲಿಗನಾದುದರಿಂದ ಹುಲುಸನ್ನು ಕೊಡಿರೆಂದು ಶಿವಶರಣರಿಗೆ ಉಡಿ ಯೊಡ್ಡಿಬೇಡಿದ್ದಾನೆ.

ಈ ಕವಿಯು ತನ್ನ ಹಾಡುಗಳಲ್ಲಿ ಬಳಸಿದ ಛಂದಸ್ಸು 'ತ್ರಿಪದಿ'ಯು. ಕೇವಲ ತ್ರಿಪದಿಗಳಲ್ಲಿಯೇ ಕಾವ್ಯಗಳನ್ನು ಬರೆದವರು 'ನಿಜಗುಣ ಶಿವಯೋಗಿ' (ಕ್ರಿ.ಶ. ೧೫೦೦), 'ಸರ್ವಜ್ಞ' (ಕ್ರಿ.ಶ. ೧೬೦೦) ಇವರಿಬ್ಬರೆಂದೇ ಹೇಳಬಹುದು. ೭೭ ಪದ್ಯಗಳುಳ್ಳ ನಿಜಗುಣ ಶಿವಯೋಗಿಗಳ 'ಪುರಾತನರ ತ್ರಿವಿಧಿಯು' ವೀರಶೈವರಿಗೆ ಮಾನ್ಯವಾದ ಗ್ರಂಥ. ಶ್ರೀ ಉತ್ತಂಗಿ ಅವರು ಸಂಗ್ರಹಿಸಿದ ಸಾವಿರಾರು ಸರ್ವಜ್ಞ ವಚನಗಳು ಜನಪ್ರಿಯವಾದ ಗ್ರಂಥ. ಜಾನಪದ ಕವಿ ಶ್ರೀ ಸಾವಳಿಗೇಶ್ವರನು ಹಾಡಿದ ಸಾವಿರಾರು ಪದ್ಯಗಳುಳ್ಳ ಶಿವಶರಣರ ಹಂತಿಯ ಹಾಡುಗಳು ಕನ್ನಡ ದೇವಿಯ ಉಡಿಯಲ್ಲಿಯ ರಸಭರಿತವಾದ ಜಾನಪದ ಕಾವ್ಯವೆಂದೇ ಹೇಳಬಹುದು. ಕನ್ನಡಿಗರು ಅವುಗಳನ್ನೋದಿ ಜಾನಪದವನ್ನರಿತು ಕೊಳ್ಳುವುದು, ಕನ್ನಡ ಸಂಸ್ಕೃತಿಯ ದೃಷ್ಟಿಯಿಂದಲೂ, ಜಾನಪದ ಸಾಹಿತ್ಯದೃಷ್ಟಿಯಿಂದಲೂ ಹಿತಕರವಾದುದು. ಇಂತಹ ಹಾಡುಗಳನ್ನು ಹಾಡಿದ ಜಾನಪದ ಕವಿಯು ಧನ್ಯನಲ್ಲವೇ? ಅವನ ರಸವಾಣಿ ಅಮರವಾಗಲೆಂದೇ ದೇವರಲ್ಲಿ ನಮ್ಮೆಲ್ಲರ ಬೇಡಿಕೆ.

❐

2. ಜಾನಪದ ಛಂದಸ್ಸು

ಛಂದಸ್ಸು ಪದ್ಯ ರಚನಾಗಣ ಪರಿಮಿತಿಯನ್ನು ಹೇಳುವ ರೀತಿ. ಯಾವುದೇ ಪದ್ಯವಾಗಲಿ ಅದು ಛಂದವಿಲ್ಲದೆ ಇರಲಾರದು. ವ್ಯಾಕರಣ ಸೂತ್ರಗಳಿಂದ ಬಂಧವಾದ ಗದ್ಯವನ್ನು ಪದ್ಯವಾಗಿ ಮಾಡುವ ಶಕ್ತಿಯು ಛಂದದಲ್ಲಿದೆ. ಕನ್ನಡ ಕವಿಗಳ ಕಾವ್ಯರಚನೆಗೆ ಎರಡು ಛಂದಗಳು ಬಳಸಲ್ಪಟ್ಟಿವೆ. ಸಂಸ್ಕೃತ ಅನುಕರುಣಮಾಡಿ ಬಳಸಿಕೊಂಡ ಸಂಸ್ಕೃತ ಛಂದಸ್ಸು ಒಂದು; ಕನ್ನಡದಲ್ಲಿಯೇ ಹುಟ್ಟಿ ಬೆಳೆದು ಬಂದ ದ್ರಾವಿಡ ಭಾಷೆಗಳ ಛಂದಸ್ಸು ಮತ್ತೊಂದು. ಆದಿಯಲ್ಲಿ ಕನ್ನಡ ಕವಿಗಳು ತಮ್ಮ ಸಂಸ್ಕೃತ ಪಾಂಡಿತ್ಯದ ಮೂಲಕ ತಮ್ಮ ಕಾವ್ಯಗಳಲ್ಲಿ ಸಂಸ್ಕೃತ ಛಂದಸ್ಸಿಗೆ ಮುಖ್ಯಸ್ಥಾನವನ್ನು ಕೊಟ್ಟರು. ಸಂಸ್ಕೃತದಲ್ಲಿ ವೈದಿಕ ಛಂದಸ್ಸೆಂದೂ, ಲೌಕಿಕ ಛಂದಸ್ಸೆಂದೂ ಎರಡು ಛಂದಗಳಿರುವುವು. ವೈದಿಕ ಛಂದಸ್ಸನ್ನು ಯಾವ ಕನ್ನಡ ಕವಿಯೂ ಗಮನಿಸಿಲ್ಲ. ಇದರಲ್ಲಿ ತಾಳದ ಕಲ್ಪನೆಯೇ ಇಲ್ಲ. ಅವನು ಮೆಚ್ಚಿದ್ದು ಲೌಕಿಕ ಛಂದಸ್ಸು. ಅದನ್ನೇ ಹಿನ್ನೆಲೆಯಾಗಿಟ್ಟುಕೊಂಡು ಚಂಪೂಶೈಲಿಯನ್ನು ನಿರ್ಮಿಸಿ, ಕನ್ನಡ ಕವಿಗಳು ತಮ್ಮ ಕಾವ್ಯಗಳನ್ನು ಬರೆದಿದ್ದಾರೆ. ಸಂಸ್ಕೃತ ಛಂದಸ್ಸು 'ವರ್ಣ ಛಂದಸ್ಸು.' ಅಲ್ಲಿ ಅಕ್ಷರಗಣಗಳ ಎಣಿಕೆಯೊಡನೆ ವೃತ್ತಗಳ ಬಂಧ.

ಸಂಗೀತ ತಾಳಗಳಲ್ಲಿ ಸಮೃದ್ಧವಾದ ಕಲೆ ದ್ರಾವಿಡರದು. ಐದು ಜಾತಿಯ ಸಪ್ತ ತಾಳಗಳನ್ನು ಎಂದರೆ ಮೂವತ್ತೈದು ಪ್ರಕಾರದ ತಾಳಗಳನ್ನೂ, ಅನೇಕ ರಾಗ-ರಾಗಿಣಿಗಳನ್ನೂ ಪರಿಶೀಲಿಸಿದರೆ ಕರ್ನಾಟಕ ಸಂಗೀತದ ಮಹತಿ ಮತ್ತು ವಿಸ್ತಾರ ತಾನೇ ಹೊಳೆಯುತ್ತದೆ. ಹನ್ನೆರಡನೆಯ ಶತಮಾನಕ್ಕಿಂತ ಪೂರ್ವದಲ್ಲಿ ಕರ್ನಾಟಕದಲ್ಲಿ ಸಂಗೀತವು ಶಾಸ್ತ್ರೀಯವಾಗಿ ಬೆಳೆದು ಹೋಗಿತ್ತು. ಅದರ ಅನುಭವ ನಮಗೆ ಹರಿಹರನ ರಗಳೆಗಳಲ್ಲಿ, ರಾಘವಾಂಕನ ಷಟ್ಪದಿಗಳಲ್ಲಿ ದೊರೆಯುತ್ತದೆ. ವಚನಕಾರರ ಷಟ್ಪದಿಗಳಲ್ಲಿಯೂ ಅದು ಅನುಭವಕ್ಕೆ ಬರುತ್ತದೆ. ಇದರಿಂದ ಷಟ್ಪದಿ, ಅಕ್ಕರ, ಚೌಪದಿ, ತ್ರಿಪದಿ ಮುಂತಾದ ಛಂದಸ್ಸುಗಳನ್ನು ಜಾನಪದ ಸಾಹಿತ್ಯದಲ್ಲಿ ಉಪಯೋಗಿಸಹತ್ತಿದ್ದರಿಂದ ನಾಗವರ್ಮನು ತನ್ನ ಕಾಲದಲ್ಲಿ ಅವುಗಳಿಗೆ ಮೆಚ್ಚಿ ಅವುಗಳನ್ನು ತನ್ನ ಛಂದೋಂಬುಧಿಯಲ್ಲಿ ಸೇರಿಸಿಕೊಂಡಿದ್ದಾನೆ.

ಮಾತ್ರಾಗಣ ಬಂಧಗಳು ಪ್ರಾಕೃತ ಛಂದಸ್ಸಿನ ವೈಶಿಷ್ಟ್ಯವೆಂದು ಪಂಡಿತರ ಮತ. ಸ್ವರಪರಿಮಾಣವುಳ್ಳ ಸರಿಮಾತ್ರೆಗಳ ಚರಣಗಳೂ, ಗೇಯವಾದ ಲಯವೂ, ತಾಳವೂ, ಮಾತ್ರಾಗಣ ಬಂಧಗಳ ಸಾಮಾನ್ಯ ಲಕ್ಷಣಗಳಾಗಿವೆ. ತಾಳದ ಕಲ್ಪನೆಯು ಪ್ರಾಕೃತದಲ್ಲಿ ಬಂದರೂ ದ್ರಾವಿಡರ ಛಾಯೆ ಬಿದ್ದಿರಬಹುದು. ತಾಳಲಯಗಳ ಪ್ರಾಧಾನ್ಯತೆಯು ಕನ್ನಡ ಛಂದಗಳಿಗಿರುವುದರಿಂದ ಮಾತ್ರಾಗಣ ಬಂಧಗಳು ಕನ್ನಡ ಛಂದಗಳಾಗಿರ ಬಹುದೇ? ಅಲ್ಲದೆ ಅಚ್ಚಗನ್ನಡ ಛಂದಗಳೆಂದು ಗಣಿಸಲ್ಪಡುವ ಷಟ್ಪದಿ, ರಗಳೆ, ಅಕ್ಕರ, ತ್ರಿಪದಿ, ಸಾಂಗತ್ಯ ಮೊದಲಾದುವುಗಳು ಅಂಶಗಣ ಬಂಧಗಳಾಗಿದ್ದರೂ ಮಾತ್ರಾಗಣ ಬಂಧಗಳಾಗಿ ತಿರುಗಿವೆ. ಈ ಬಂಧಗಳು ೧೨ನೆಯ ಶತಮಾನದಿಂದ ವೀರಶೈವ ಕವಿಗಳ ಕಾಲದಿಂದ ಬಳಕೆಯಲ್ಲಿ ಬಂದಿವೆ.

ಅಂಶಗಣ ಬಂಧಗಳೇ ಅಚ್ಚಗನ್ನಡ ಛಂದ. ಇವು ಅಕ್ಷರ ಹಾಗೂ ಮಾತ್ರಾಗಣ ಬಂಧಗಳಿಂದ ತೀರ ಭಿನ್ನವಾಗಿವೆ. ಈ ಕ್ರಮವು ದ್ರಾವಿಡ ಭಾಷೆಗಳಿಗೆ ವಿಶಿಷ್ಟವಾದ ಛಂದ. ಇಲ್ಲಿ ಅಕ್ಷರಗಳ ಎಣಿಕೆಗಾಗಲಿ, ಮಾತ್ರೆಗಳ ಎಣಿಕೆಗಾಗಲಿ, ಪ್ರಾಧಾನ್ಯತೆಯಿಲ್ಲ. ತಾಳಲಯದೊಡನೆ ಹಿಗ್ಗಿಸಿಯೊ, ಕುಗ್ಗಿಸಿಯೊ ಹಾಡುವ ರೀತಿಯೇ ಇಲ್ಲಿ ಸ್ಪಷ್ಟವಾಗಿ ಕಾಣುತ್ತದೆ. 'ಗುರು' ಒಮ್ಮೆ ಕುಗ್ಗಬಹುದು, 'ಲಘು' ಒಮ್ಮೆ ಹಿಗ್ಗಬಹುದು. ಹಿಗ್ಗಿದಾಗ ಅದರ ಮಾತ್ರೆಗಳು ಇಷ್ಟೇ ಎಂದು ನಿರ್ಧರಿಸಲಾಗದು. ಅದು, ಅದನ್ನು ಕೋಚೆತ್ತಿ ಹಾಡುವುದರ ಮೇಲೆ, ಪೂರ್ಣ ಅವಲಂಬಿಸಿದೆ. ಹೀಗೆ ಹೆಚ್ಚು ಕಡಿಮೆ ಮಾತ್ರೆಗಳು ಸೇರುವುದರಿಂದ ಈ ಬಂಧಗಳನ್ನು ಪರಿಗಣಿಸಲು ಲಾಕ್ಷಣಿಕರು ಬೇರೆ ಯೋಜನೆಯನ್ನೇ ಕೈಕೊಂಡಿದ್ದಾರೆ. ಅದಕ್ಕಾಗಿಯೇ ಬ್ರಹ್ಮ, ವಿಷ್ಣು, ರುದ್ರ ಗಣಗಳ ಕಲ್ಪನೆಗೆ ಅವಕಾಶವಾಯಿತು. ಈ ತ್ರಿಮೂರ್ತಿಗಣಗಳೇ ಕನ್ನಡ ಛಂದದ ಮೂಲ ಸೆಲೆಯಾಗಿವೆ. ಈವರೆಗೆ ತಿಳಿದ ಪ್ರಕಾರ ತ್ರಿಮೂರ್ತಿಗಣಗಳ ಯೋಜನೆಯನ್ನು ಮೂರ್ತಸ್ವರೂಪಕ್ಕೆ ತಂದ ಶ್ರೇಯಸ್ಸು ನಾಗವರ್ಮನಿಗೆ ಸಲ್ಲತಕ್ಕದ್ದು. ಅವನು ತನ್ನ ಛಂದೋಂಬುಧಿಯ ಪಂಚಮಾಶ್ವಾಸದ ಪ್ರಾರಂಭ ಪದ್ಯದಲ್ಲಿ "ಕರ್ನಾಟಕ ಭಾಷೆಯಂದಮಂ ಕೇಳ್ ಪೇಳ್ವೆಂ" ಎಂದು ಸೂಚಿಸಿ,

> ಎರಡುಂ, ಮೂರುಂ, ನಾಲ್ಕುಂ
> ಗುರುವಿಂ ಪ್ರಸ್ತರಿಸಲಂಬು ನಿಧಿಗಜಧರಣೀ ।
> ಕ್ಷರ ಗಣ ಮೊಗೆಗುಮವರ್ಕಂ
> ಸರಸಿಜಭವ, ವಿಷ್ಣು, ರುದ್ರ ಸಂಜ್ಞೆಗಳಕ್ಕುಂ ॥

ಎಂದು ಬ್ರಹ್ಮ, ವಿಷ್ಣು, ರುದ್ರಗಣಗಳ ಮೂಲಾಂಶಗಳನ್ನು ಹೇಳಿ ಅವುಗಳ ನಾಮ ನಿರ್ದೇಶ ಮಾಡಿದ್ದಾನೆ. ಅವನು ತನ್ನ ಕಾಲದಲ್ಲಿ ಜನತೆಯಲ್ಲಿದ್ದ ಛಂದಸ್ಸನ್ನಿಲ್ಲಿ ಸೂಚಿಸಿರಬಹುದು. ಭಾವದಂತೆ ಹಾಡಿರಿ ಎಂಬುದೇ ಅಂಶಗಣ ಛಂದಸ್ಸು. ಛಂದಸ್ಸು 'ಸ್ವಚ್ಛಂದ ವೃತ್ತಿ' ಎಂಬರ್ಥವನ್ನೇ ಸೂಚಿಸುವುದು. ಛಂದಸ್ಸಿನ ಡೌಲು ಹಾಡುವುದರಲ್ಲಿ. ಅಂಶಗಣ ಛಂದದಲ್ಲಿ ಮಾತ್ರೆಗಳನ್ನು ಹಿಗ್ಗಿಸುವ, ಕುಗ್ಗಿಸುವ ಯೋಜನೆಯಿಂದ ಲಘು ಗುರುವಿನ ಪ್ರಶ್ನೆಯು ಹೋಗಬಹುದು. ಅಲ್ಲಿ ಮಹತ್ವವಾಗಿ ಬಂದದ್ದು ಲಯದೊಂದಿಗೆ ತಾಳ.
ನಾಗವರ್ಮ ಮೊದಲಾದ ಛಂದಃ ಶಾಸ್ತ್ರಕಾರರು 'ದುಂದುಭಿ' ಹಾಗೂ 'ದುಂದುಮಿ'ಗಳ ಮಾತನ್ನು ತಮ್ಮ ಗ್ರಂಥಗಳಲ್ಲಿ ಎಲ್ಲಿಯೂ ಎತ್ತಿಲ್ಲ. ಇವು ಕೇವಲ ಜಾನಪದ ಛಂದಸ್ಸುಗಳಲ್ಲಿಯೇ ಮೊದಲಿನಿಂದಲೂ ಇದ್ದಿರಬೇಕು. 'ದುಂದುಭಿಗಳು' ಚೌಪದಿಯಲ್ಲಿವೆ. ಮಾತ್ರ ದುಂದುಮಿಯ ಒಂದೇ ಚೌಕಿನಲ್ಲಿ ತ್ರಿಪದಿ, ಚೌಪದಿ, ರಗಳೆ ಮೊದಲಾದುವುಗಳ ಜೋಡಣೆಯಿದ್ದದ್ದು ಕಂಡುಬರುವುದು. ಆದುದರಿಂದ ಹಾಡುವಾಗ ಬೇರೆ ಬೇರೆ ತಾಳಗಳೊಂದಿಗೆ ಬೇರೆ ಬೇರೆ ರಾಗಗಳನ್ನೆತ್ತಿ ಹಾಡಬೇಕಾಗುವುದು. ಈ ರೀತಿಯು ಜನರ ಚಿತ್ತವನ್ನಾಕರ್ಷಿಸುವು ದಲ್ಲದೆ ಮೇಳದ ವಾದ್ಯಗಳು ಮೋಡಿ-ಮಂತ್ರಗಳಾಗಿ ಜನರನ್ನು ಮೂಕರನ್ನಾಗಿ ಮಾಡುವುವು. ಇಷ್ಟಾದ ಮೇಲೆ ಹಾಡುಗಾರರು ಜನರನ್ನು ತಣಿಸುವುದರಲ್ಲೇನಸಾಧ್ಯ? ದುಂದುಮಿಯು ಈಗ ದೊರೆಯುವ ಹಾಡುಗಬ್ಬವಾದುದರಿಂದ ನಾಗವರ್ಮನು 'ಕಾವ್ಯಾವಲೋಕ'ನದಲ್ಲಿ ಹೇಳಿದ 'ಹಾಡುಗಬ್ಬವು' ಇದೇ ಇರಬಹುದೇ? ದುಂದುಭಿ, ಹೆಚ್ಚಾಗಿ ದುಂದುಮಿಗಳು ಬೆಳಕಿಗೆ ಬಂದದ್ದು ಕಿತ್ತೂರ 'ಮಲ್ಲಸರ್ಜ ಪ್ರತಪ ರಾವ' ಅವರ ಕಾಲದಲ್ಲಿ. ಕಿತ್ತೂರ ಆಸ್ಥಾನ ಕವಿಗಳು ಕನ್ನಡ ಕಾವ್ಯಗಳನ್ನು 'ದುಂದುಭಿ' ಹಾಗೂ 'ದುಂದುಮಿ'ಯಲ್ಲಿ ಬರೆದು ಸಾಹಿತ್ಯದಲ್ಲಿ ಬೇರೊಂದು ಕ್ರಾಂತಿಯನ್ನೇ ಮಾಡಿದರೆಂದು ಹೇಳಬಹುದು. ಹರಿಹರ, ರಾಘವಾಂಕರು ಕನ್ನಡ ಕಾವ್ಯಶ್ರೀಗೆ ರಗಳೆ, ಷಟ್ಪದಿಗಳ ಉಡುಪನ್ನುಡಿಸಿದಂತೆ ಕಿತ್ತೂರ ಆಸ್ಥಾನ ಕವಿಗಳು ದುಂದುಭಿ ಹಾಗೂ ದುಂದುಮಿಗಳಲ್ಲಿ ಕಾವ್ಯಗಳನ್ನು ಬರೆದು ಕನ್ನಡ ಸಾಹಿತ್ಯ ದೇವಿಗೆ ಜಾನಪದದ ಬೆಡಗು ಮಾಡಿ ಸಾಹಿತ್ಯದಲ್ಲಿ ಸಾಮಾನ್ಯರಿಗೆ ಹಕ್ಕು ತಂದು ಕೊಟ್ಟಿದ್ದಾರೆ. ಇವುಗಳನ್ನೊಳಗೊಂಡ ಕನ್ನಡ ಸಾಹಿತ್ಯ ದೇವಿಯು ಎಲ್ಲದರಿಂದಲೂ ಮೈತುಂಬಿದವಳಾಗಿದ್ದಾಳೆ. ದುಂದುಭಿ-ದುಂದುಮಿಗಳು ಕಿತ್ತೂರನಾಡ ಸಾಹಿತ್ಯದ ವೈಶಿಷ್ಟ್ಯವೆಂದೇ ಹೇಳಬಹುದು.

ಜಾನಪದ ಎಲ್ಲ ಹಾಡುಗಳು, ಅಂಶಗಣ ಬಂಧಗಳಲ್ಲಿವೆ. ಅವುಗಳ ಪ್ರಸ್ತಾರವನ್ನು ತಾಳದೊಂದಿಗೆ ಪರೀಕ್ಷಿಸಿ ಹಾಕಬೇಕಾಗುವುದು. ಈ ಹಾಡುಗಳನ್ನು ಕಟ್ಟಿ (ರಚಿಸಿ) ಹಾಡುವ ಹಳ್ಳಿಗನಿಗೆ ಛಂದದ ಯಾವ ಅರಿಕೆಯೂ ಇರುವುದಿಲ್ಲ. ಅವನಿಗೆ ಸಂಗೀತದ ಜ್ಞಾನವೂ ಇರುವುದಿಲ್ಲ. 'ಲಟಕಿ'ಯೊಡನೆ 'ಹುಸಿಪೆಟ್ಟು'ಗಳ ಗತ್ತು ಹಾಗೂ ತಾಳಗಳು ಮಾತ್ರ ಅವನಿಗೆ ತನ್ನ ತನದಲ್ಲಿ ಗೊತ್ತಿರುವುವು. ಈ ಹುಸಿ-ಪೆಟ್ಟುಗಳನ್ನೇ ಲಾಕ್ಷಣಿಕರು ಅಂಶಗಣಗಳೆಂದು ಕರೆದಿದ್ದಾರೆ. ಹಳ್ಳಿಗರು ಹಾಡುವಾಗ ಹುಸಿಬಿದ್ದಲ್ಲಿ ತಾಳವಿಲ್ಲ; ಪೆಟ್ಟು ಬಿದ್ದಲ್ಲಿ ತಾಳಬಿದ್ದೇ ತೀರುವುದು. ಆ ತಾಳಬಿದ್ದಲ್ಲಿಯೇ ಒಂದು ಅಂಶಗಣವಾಗುವುದು.

ವಿ ವಿ ವಿ ವಿ
ಓಂ ಎಂದು । ಕುಟ್ಟೋಣ । ಸೋಂ ಎಂದು । ಬೀಸೋಣ ।
ಬ್ರ ಬ್ರ ರು ಬ್ರ ವಿ ಬ್ರ
ಓಂ ಸೋಂ । ಎರಡು । ತಿಳಿಯ ಬೇಕ । ನಾರಿ । ಹಾಕವ್ವ । ಏರಿ । ॥ಪ॥
ಬ್ರ ಬ್ರ ವಿ ವಿ
ಓಂ ಸೋಂ । ಎರಡು । ಅಕ್ಷರ । ತಿಳಿದರ
ವಿ ಬ್ರ ವಿ ಬ್ರ
ಗುರುಮನೆ । ಕೀಲ । ದೊರಕಿತ । ನಾರಿ । ॥೧॥ *-ಜಾ-ಸಂ-*

ಇಲ್ಲಿ ಹಾಡುವಾಗ ತಾಳಬಿದ್ದಲ್ಲಿಗೆ ಪ್ರಸ್ತಾರ ಹಾಕಿ ಅಂಶಗಣಗಳನ್ನು ತೋರಿಸಲಾಗಿದೆ.

ಪ್ರತಿಯೊಬ್ಬ ಜಾನಪದ ಸಾಹಿತಿಯು ಅಂಶಗಣಗಳನ್ನರಿತು ಕೊಳ್ಳುವುದು ಅತ್ಯಗತ್ಯ. ನಾಗವರ್ಮನ ಹೇಳಿಕೆಯಂತೆ ಅಂಶಗಣಗಳಲ್ಲಿ ಗುರುಲಘುಗಳ ಗಣನೆಯಾಗಿ ಅವುಗಳಲ್ಲಿ ಬೇರೆಬೇರೆ ರೂಪಗಳಾಗುವುವು. ಅಂಶಗಣದಲ್ಲಿ ಯಾವಾಗಲೂ ಮೂಲಾಂಶವು ಒಂದು 'ಗುರು'. ಆ ಮೂಲಾಂಶಗಳಿಗೆ ಒಂದು, ಎರಡು, ಮೂರು ಗುರುಗಳನ್ನು (ಬೇರೆ ಅಂಶಗಳನ್ನು) ಸೇರಿಸಿದರೆ ತ್ರಿಮೂರ್ತಿ ಗಣಗಳು ಹುಟ್ಟುತ್ತವೆ. ಈ ಗಣಗಳ ಬೇರೆ ರೂಪಾಂತರಗಳಾಗುವ ಕಾಲಕ್ಕೆ ಮೊದಲನೆಯ ಮೂಲಾಂಶದ ಗುರುವಿನ ಬದಲಾಗಿ ಎರಡು ಲಘುಗಳನ್ನಿಡುತ್ತಾರೆ. ಉಳಿದ ಅಂಶಗಳು ಲಘುಗಳಾಗಬಹುದು; ಆದರೆ ಮೊದಲನೆಯ ಅಂಶದಂತೆ ಎರಡು ಲಘುಗಳನ್ನು ಮಾತ್ರ ಪಡೆಯಲಾರವು. ಹೀಗೆ ರೂಪಾಂತರ ಹೊಂದಲು ಪ್ರತಿಯೊಂದು ಗಣದಲ್ಲಿ ಬರುವ ಗುರುಲಘುಗಳ ಮೇಲಿಂದ ಆ ಗಣದ ಅಕ್ಷರಗಳೂ, ಮಾತ್ರೆಗಳೂ ತಿಳಿದು ಬಿಡುವುವು. ಇದರಿಂದ ಬ್ರಹ್ಮಗಣದಲ್ಲಿ ನಾಲ್ಕು, ವಿಷ್ಣುಗಣದಲ್ಲಿ ಎಂಟು ಮತ್ತು ರುದ್ರಗಣದಲ್ಲಿ ಹದಿನಾರು ರೂಪಗಳಾಗಿವೆ.

ಜಾನಪದ ಪದ್ಯಗಳನ್ನು ಅನ್ನುವುದರ ಮೇಲಿಂದಲೇ ಅವುಗಳ ಛಂದವನ್ನರಿಯಬೇಕು. ಅವುಗಳಿಗೆ ಮಾತ್ರಾಗಣಗಳ ಪರಿಮಿತಿಯನ್ನು ಉಪಯೋಗಿಸಿದರೆ ಅವುಗಳಲ್ಲಿಯ ತಾಳಲಯಗಳು ಮಾಯವಾಗಿ ಹಾಡೇ ಅಪಸ್ವರವಾಗುವುದು. ಹಲಕೆಲವು ಹಾಡುಗಳನ್ನು 'ಜಾನಪದ ಸಂಭಾರ' ಎಂಬ ಸಂಕಲನದಿಂದೆತ್ತಿಕೊಂಡು ಪ್ರಸ್ತಾರಹಾಕಿ ಕೆಳಗೆ ತೋರಿಸಲಾಗಿದೆ.

ರು ವಿ
ಯಾಕಬುದ್ಧಿ । ಬಾರದ ।
ರು ರು ರು ವಿ
ಹರಹರನ । ಮ್ಹಾದೇವಗ । ಯಾಕ ನಿದ್ರಿ । ತೋರದ । ॥ಪ॥
<u>ಗು</u> ವಿ ವಿ <u>ಗು</u> ವಿ ಬ್ರ ವಿ
ಓ । ರಂಗದ । ಲ್ಲಿದ್ವಾರ । ಪೂ । ರಾತರ । ಮನೆಯ । ಕದ್ವಾರ ।
ವಿ ರು ರು ರು
ನಾರೀಗೊ । ಬ್ಬಳಿಗೆ ಮೆಚ್ಚಿ । ಬಳಗೆ ಬಾರ । ದಿದ್ವಾರಮ್ಮ ।॥೧॥ *–ಜಾ–ಸಂ–*

ಇಲ್ಲಿ 'ಓ' ಮತ್ತು 'ಪೂ' ಇವು ರಾಗಾಲಾಪದ ವಿರಾಮಗಳಿದ್ದಂತಿವೆ. ಇದೇ ಹಾಡಿನ ಮುಂದಿನ ನುಡಿಯಲ್ಲಿ ತಾಳಲಯಗಳು ಸರಿಯಾಗಿದ್ದು ಗಣಗಳನ್ನೂ, ಮಾತ್ರೆಗಳನ್ನೂ ಬದಲಿಸಿದ್ದು ಕಂಡುಬರುತ್ತದೆ.

ರು ವಿ <u>ಗು</u> ರು ವಿ
ಕಟ್ಗೆಮಣ್ಣ । ಹೊತ್ತಾರ । ತಾ । ಹುಟ್ಲೆ ತಿಪ್ಪಿ । ಕೊಂಡಾರ ।
ರು ವಿ ಬ್ರ ವಿ ರು
ಗಟ್ವಾಳ್ಹರ । ಳರ ಮುಂದ । ಹೊಟ್ಟೆ । ಹೊರಕೊಂಡ । ಜಂಗ್ಮರಮ್ಮ । ॥೧॥ *–ಜಾ–ಸಂ–*

ಹಾಡಿನ ಪದ್ಯಪದ್ಯಗಳಲ್ಲಿ ಪ್ರಸ್ತಾರವು ಹೀಗೆ ಭಿನ್ನವಾಗಿಯೂ ಕಂಡುಬರುವುದು. ಅಕ್ರಮಗಳು (Irregularities) ಹಳ್ಳಿಯ ಹಾಡುಗಳಲ್ಲಿ ಮೇಲಿಂದ ಮೇಲೆ ಕಂಡುಬರುತ್ತವೆ; ಕಂಡುಬರಲೇಬೇಕು. ಯಾಕಂದರೆ ಛಂದಃಶಾಸ್ತ್ರದ ನಿಯಮಗಳನ್ನು ಮುಂದಿಟ್ಟುಕೊಂಡು ಹಾಡು ಕಟ್ಟಿದವರು ಹಳ್ಳಿಗರಲ್ಲ. ತಾಳ ನಿಯಮಗಳನ್ನು ಹೇಳಬಹುದಾದರೂ ಹಳ್ಳಿಗರ ಹಾಡುಗಳಲ್ಲಿ ಅಕ್ರಮಗಳ ಉದಾಹರಣೆಗಳು ಸಾವಿರಾರು.

ರು ವಿ ಬ್ರ ಬ್ರ
ಬನ್ನಿ ಮುಡಿ । ಯೊಣಬಾರ । ಕೋಲು । ಕೋಲ ।
ರು ವಿ ಬ್ರ ಬ್ರ
ಚಿನ್ನ ತರ । ವೊಣ ಬಾರ । ಕೋಲು । ಕೋಲ । ॥ಪ॥
ರು ವಿ ರು ವಿ
ನಾವು ಕುಣಿ । ಯೊಣಬನ್ನಿ । ಹ್ಯಾಂವ ಮರೆ । ಯೊಣಬನ್ನಿ ।
ವಿ ಬ್ರ ಬ್ರ ಬ್ರ
ಜೀವ ಒಂ । ದಾಗಿ । ಇರ । ಬನ್ನಿ । ॥ ಕೋ ॥ *–ಜಾ–ಸಂ–*

ಮೇಲಿನ ಪದ್ಯದಂತೆ ಜಾನಪದ ಹಾಡುಗಳಲ್ಲಿ ಇದೊಂದು 'ದ್ವಿಪದಿ', ಇಲ್ಲಿ ಎರಡು ಲಘುಗಳು (vv)ಬ್ರಹ್ಮಗಣದ ಬದಲಾಗಿ ಬಂದಿವೆ. ಕನ್ನಡ ಕಾವ್ಯಗಳಲ್ಲಿ ಬಳಕೆಯಲ್ಲಿರುವ 'ದ್ವಿಪದಿ'ಯ ಪ್ರತಿಚರಣದಲ್ಲಿ *೫/೫/೫/೩* ಮಾತ್ರೆಗಳ ಅಂಶಗಣಗಳನ್ನೊಳಗೊಂಡ ಹದಿನೆಂಟು ಮಾತ್ರೆಗಳಿರುವುವು. ಒಮ್ಮೊಮ್ಮೆ ಮೂರು ಮಾತ್ರೆಯ ಗಣದ ಬದಲಾಗಿ ನಾಲ್ಕು ಮಾತ್ರೆಯ ಗಣವೂ ಬರುವುದು.

ರು ವಿ ರು ಬ್ರ
ಹಿರಿಯತನ । ಬಂದಾಗ । ಧಿಕ್ಕರಿಸ । ಬೇಡ ।
ವಿ ರು ರು ಬ್ರ
ಸಿರಿ ಬಂದ । ಕಾಲ ದೊಳು । ನೀ ಮೆರೆಯ । ಬೇಡ । *–ದಾಸರಪದ–*

ಅಲ್ಲದೆ ಮೇಲೆ ಉದಹರಿಸಿದ ಜಾನಪದ ದ್ವಿಪದಿಗಳು ಕನ್ನಡ ಛಂದಸ್ಸುಕಾರರು ಹೇಳುವ 'ತ್ರಿಪುಡೆ'ಯನ್ನೂ ಹೋಲಲಾರವು. ಈ 'ತ್ರಿಪುಡೆಗೆ' ಎರಡು ಚರಣಗಳಿದ್ದು ಪ್ರತಿಚರಣದಲ್ಲಿ ೩–೪–೩–೪–೩–೪–೩+ಗು/ಮಾತ್ರೆಗಳ ಅಂಶಗಣಗಳನ್ನೊಳಗೊಂಡ ಇಪ್ಪಾತ್ತಾರು ಮಾತ್ರೆಗಳಿರುವುವು.

ಬ್ರ ವಿ ಬ್ರ ವಿ ಬ್ರ ವಿ ಬ್ರ <u>ಗು</u>
ಒಂದು । ಬೇಡವು । ತನ್ನ । ಬೀಡನು । ಕಟ್ಟ । ಲೋಸುಗ । ಗೆಳೆಯ । ನೇ ।
ಬ್ರ ವಿ ಬ್ರ ವಿ ಬ್ರ ವಿ ಬ್ರ <u>ಗು</u>
ಚಂದ । ವಾದೀ । ಸ್ಥಳವ । ನೊಂದನು । ಹುಡುಕಿ । ಕೊಂಡಿತು । ಗೆಳೆಯ । ನೇ ।

ಹೀಗೆ ಈ ಜಾನಪದ ದ್ವಿಪದಿಗಳು ಅಸಂಬದ್ಧವಾಗಿ ಕಂಡರೂ ತಾಳಲಯಗಳನ್ನೊಳಗೊಂಡೀ ಹಾಡುಗಳು ಹಳ್ಳಿಗರ 'ಕರ್ನಾಟಕ ಸಂಗೀತ' ಪ್ರೌಢಿಯನ್ನು ಬೀರದಿರವೇ?

ಜಾನಪದ ಹಾಡುಗಳಲ್ಲಿ ಕೆಲವು ಅಚ್ಚ ತ್ರಿಪದಿಗಳಾಗಿವೆ. ಬೇರೆ ಕೆಲವು 'ಸಾಂಗತ್ಯ'ಗಳಾಗಿವೆ. ಹಾಡಿನ ರೂಪದಲ್ಲಿರುವ ಈ ಅಂಶಗಣ ಬಂಧಗಳನ್ನು ಕಾವ್ಯದಲ್ಲಿಯ ತ್ರಿಪದಿ ಹಾಗು ಸಾಂಗತ್ಯಗಳಿಗೆ ಹೋಲಿಸಿ ನೋಡೋಣ:

ಬ್ರ ವಿ ವಿ
ಗೂಲಂ। ದಾವಲ್ಲ। ಮುತ್ತಿನಾ।
ಬ್ರ ಬ್ರ ವಿ ಗು
vv
ಭರಣ। ಸುಳಿ। ದಿಂಬನಿ। ಲ್ಲ। ॥ಪ॥
ವಿ ವಿ ವಿ ವಿ
ಹಂದಹಂ। ದರದಾಗ। ಚಂದಚಂ। ದೂಲಿಹೂಡಿ।
ವಿ ಬ್ರ ಬ್ರ ಬ್ರ ರು
ಗಂಧದ। ಚೆಕ್ಕಿ। ಪುಟು। ಮಾಡಿ। ಮದುಮಗನ।
ವಿ ಬ್ರ ಬ್ರ ಬ್ರ
vv
ಅಕ್ಕಮಾ। ದ್ಯಾಕೊಂ। ದದ। ಗಯ। —ಜಾ-ಸಂ-

ಈ ಜಾನಪದ ಹಾಡಿನ ತ್ರಿಪದಿಯಲ್ಲಿ ಎರಡು ಲಘುಗಳು (V V) ಬ್ರಹ್ಮಗಣದ ಬದಲಾಗಿ ಬಂದಿವೆ. ನಿಯಮಬದ್ಧ ತ್ರಿಪದಿಗಳಲ್ಲಿ ಸಾಮಾನ್ಯವಾಗಿ ಇಂತಹ ಎರಡು ಲಘುವಿನ ಗಣಗಳು ಕಡಿಮೆ.

ವಿ ವಿ ವಿ ವಿ
ಬಾಲಿಮ್ಮ। ನೆರೆದಾಳ। ಬಾಲಿಗೆ। ಸೂಯ್ಯಾಲೆ।
ವಿ ಬ್ರ ವಿ
ಬಾಗೀಣ। ತುಂಬ। ಉಡಿ ಮುತ್ತ। ॥ಸೋ॥
<u>ಗು</u> ವಿ
ಸೋ। ಅನ್ನಿರೆ। ॥ಪ॥ —ಜಾ-ಸಂ-

ತ್ರಿಪದಿಯಲ್ಲಿ ಎರಡು ಪಾದಗಳನ್ನು ಹಾಡಿದ ಮೇಲೆ 'ಸೋ ಅನ್ನಿರೆ' ಎಂದು ದನಿಗೂಡಿಸುವ ಸೊಲ್ಲನ್ನು ಕೊನೆಯಲ್ಲಿ ಹೇಳುವ ರೂಢಿಯಿದೆ. ಈ ಪದ್ಯಗಳು ತ್ರಿಪದಿಗಳಾದರೂ, ತಾಳಕ್ಕೆ ಸರಿಯಾಗಿ ಹಾಡಲಿಕ್ಕೆ ಬಂದರೂ, ತಾಳಬಿಟ್ಟು ಎಳೆದೆಳೆದು ಒಂದು ವಿಶೇಷವಾದ ಲಯ (Rhythm) ಕ್ಕೆ ಅನುಸಾರವಾಗಿ ಹಾಡುವ ರೂಢಿಯಿದೆ. ಈ ರೂಢಿಯನ್ನು ಹಾಡುವಾಗಲೇ ತಿಳಿದುಕೊಳ್ಳಬಹುದು.

ವಿ ಬ್ರ
ಒಂದೊಂದು। ತೆರನ।
ವಿ ಬ್ರ ವಿ <u>ಗು</u>
ನಂದನ। ಬನವೊಂ। ದೈಸಿರಿ। ಯ। ॥ಪ॥
ರು ವಿ ರು ರು
ಕಾಡಿನಲಿ। ಗೊಲ್ಲಾಳ। ಬೇಡುವನು। ಲಿಂಗನಿಗೆ।
ವಿ ಬ್ರ ಬ್ರ ಬ್ರ ವಿ
vv
ನಾಡು ಚಿಂ। ದಲ್ಲ। ಶಿವ। ಲಿಂಗ। ನೋಡಲ್ಲಿ।
ವಿ ಬ್ರ ಬ್ರ ಬ್ರ
vv
ಬೀಡ ಬಿ। ಟ್ಟಹುದು। ಬನ। ಸಿರಿಯು। *—ಗೊಲ್ಲಾಳ—*

ಈ ತ್ರಿಪದಿಯಲ್ಲಿ ಹಾಡುವ ರೀತಿಯಲ್ಲಿ ವೈವಿಧ್ಯವನ್ನು ಕಾಣಬಹುದು. ಇಲ್ಲಿಯೂ ಬ್ರಹ್ಮಗಣದ ಬದಲಾಗಿ ಎರಡು ಲಘು vvವುಳ್ಳ ಒಂದು ಗಣವನ್ನು ಬಳಸುತ್ತಾರೆ.

ವಿ ವಿ
ಹರಲೀಯ। ಕೊಡಲಾರೆ।
ವಿ ವಿ
ಕರುನಾಟ। ಕಂದಗ। ॥ಪ॥
ವಿ ರು ವಿ ರು
ಕಥೆಯಕೇ। ಳಿರಿ ಜನರೆ। ಮತಿಯಿಟ್ಟು। ತೂಗುತಲಿ।
ರು ಬ್ರ ರು ವಿ
ಸುತಗಮನ। ಸಿಟ್ಟ। ಕಲಿಯುಗದ। ಮಲತಾಯಿ।
ವಿ ಬ್ರ ರು
vv
ಬತವ ಹಾ। ದೇವ। ನಿಜಗತಿಯ। —ಜಾ-ಸಂ-

ಈ ತ್ರಿಪದಿಯಲ್ಲಿ ವಿಷ್ಣುಗಣಾಗಳ ಬದಲಾಗಿ ರುದ್ರಗಣಾಗಳೇ ಹೆಚ್ಚಾಗಿ ಬಂದಿವೆ. ತಾಳದೊಡನೆ ಮೇಳ ಮಾಡಿ ಹಾಡುವ ಧಾಟಿಯು "ಮೂಡಲಪಾಯ'ದ ಗಡಿಗೆ ಸರಿಯಾಗಿದೆ.

ಕನ್ನಡ ತ್ರಿಪದಿಗಳೆಂದರೆ ಸರ್ವಜ್ಞನ ತ್ರಿಪದಿಗಳೆನ್ನುವಷ್ಟು ಅವು ಜನತೆಯಲ್ಲಿ ಪರಿಪಾಠಾಗಿವೆ.

ಶಿವಿ ಶಿರು ಶಿವಿ ಶಿವಿ
ಒಬ್ಬನ। ಲ್ಲದೆ ಜಗಕೆ। ಇಬ್ಬರುಂ। ಟೇ ಮತ್ತೆ।
ಶಿವಿ ೩+೧ಬ್ರ ೪+೧ವಿ ಶಿವಿ
ಒಬ್ಬ ಸ। ರ್ವಜ್ಞ। ಕರ್ತನು। ಜಗಕೆಲ್ಲ।
ಶಿವಿ ೩+೧ಬ್ರ ಶಿವಿ
ಒಬ್ಬನೇ। ದೈವ। ಸರ್ವಜ್ಞ।

ಈ ತ್ರಿಪದಿಯಲ್ಲಿ ವಿಷ್ಣುಗಣಗಳೇ ಹೆಚ್ಚು. ಆದರೆ ಮೇಲೆ ಹೇಳಿದ ಜಾನಪದ ತ್ರಿಪದಿಗಳು ಹಾಡುಗಳಾಗಿರುವುದರಿಂದ, 'ಲಯಾಲಾಪ'ದ ಮೂಲಕ ರುದ್ರಗಣಗಳೂ, ಬ್ರಹ್ಮಗಣಗಳೂ ಹೆಚ್ಚಾಗಿ ಬರುವುವು. ಅದು ಜಾನಪದ ತ್ರಿಪದಿಗಳ ವೈಶಿಷ್ಟ್ಯವೆಂದೇ ಹೇಳಬಹುದು. ಸರ್ವಜ್ಞನೂ ರುದ್ರಗಣ ಬಳಸಿಕೊಂಡು ವೈವಿಧ್ಯ ತೋರಿದ್ದಾನೆ.

ಸಾಂಗತ್ಯ

ಸಾಂಗತ್ಯವೂ ಒಂದು ಅಂಶಗಣ ಬಂಧ. ತ್ರಿಪದಿಯಂತೆ ಇದಾದರೂ ಜಾನಪದ ಹಾಡುಗಳಲ್ಲಿ ಸಾಕಷ್ಟು ಬಳಸಲ್ಪಟ್ಟಿರುವುದು.

ಬ್ರ ಬ್ರ ಗು
ಬಂಕೀ। ಕಾಡ್ಯಾ। ವ್ರೀ।
ಬ್ರ ವಿ ವಿ ಬ್ರ ಬ್ರ ಗು
ಇಂಥ। ಪರಿಪರಿ। ದಿನದಲ್ಲಿ। ಬಂಕೀ। ಕಾಡ್ಯಾ। ವ್ರೀ। ॥ಪ॥
ವಿ ವಿ ವಿ ಬ್ರ
ತೆಳ್ಳನ್ನ। ಎಂಟ್ಹತ್ತು। ರೊಟ್ಟೀಯ। ಮಾಡಿ।
ವಿ ವಿ ವಿ ಬ್ರ
ಬದನೀಕಾ। ಯೀ ಸುಟ್ಟು। ಬರ್ತವ। ಮಾಡಿ।
ವಿ ವಿ ವಿ ವಿ
ಅಲ್ಲ ಮಾ। ಗಣಿ ಬೇರ। ಹಣ್ಣಿಗಂ। ಚೆಯಕಾಯಿ।
ವಿ ವಿ ವಿ ಬ್ರ
ಸಲಸಂದ। ರೊಂತುತ್ತು। ಸಲಸೇನೊ। ಶಿವನೆ। *–ಜಾ–ಸಂ–*

ಕನ್ನಡ ಸಾಹಿತ್ಯದಲ್ಲಿ, ಹೆಚ್ಚು ಪ್ರಚಲಿತವಾಗಿದ್ದ ಸಾಂಗತ್ಯದ ಒಂದು ಪದದಲ್ಲಿ ಮೊದಲ ಮತ್ತು ಮೂರನೆಯ ಪಾದಗಳಲ್ಲಿ ೪ ವಿಷ್ಣುಗಣ, ಎರಡು ಮತ್ತು ನಾಲ್ಕನೆಯ ಪಾದಗಳಲ್ಲಿ ೨ ವಿಷ್ಣುಗಣ ಮತ್ತು ೧ ಬ್ರಹ್ಮಗಣ ತೋರುತ್ತವೆ. ಮೇಲೆ ಎತ್ತಿಕೊಂಡ ಜಾನಪದ ಸಾಹಿತ್ಯದಲ್ಲಿ ಬಂದ ಸಾಂಗತ್ಯ ಪದದಲ್ಲಿ ಹಲಕೆಲವು ಅಕ್ರಮಗಳು ಕಂಡುಬರುತ್ತವೆ. ಮೊದಲನೆಯ ಪಾದದಲ್ಲಿ ವಿಷ್ಣುಗಣದ ಬದಲಾಗಿ ಒಂದು ಬ್ರಹ್ಮಗಣ ಬಂದಿದೆ; ಮೂರನೆಯ ಪಾದದಲ್ಲಿ ೪ ವಿಷ್ಣುಗಣಗಳಿವೆ. ಎರಡು ಮತ್ತು ನಾಲ್ಕನೆಯ ಪಾದಗಳಲ್ಲಿ ೩ ವಿಷ್ಣುಗಣ ಮತ್ತು ೧ ಬ್ರಹ್ಮ ಗಣಗಳಿವೆ. ಇಲ್ಲಿ ಒಂದು ವಿಷ್ಣುಗಣವು ಹೆಚ್ಚು ಬಂದಿದೆ.

ವಿ ವಿ ವಿ ವಿ
ತಿಲಕುಸು। ಮಾಗ್ರದಿ। ಬ್ಬನಿಜಲ। ಸುಳಿಗಾಳಿ।
ವಿ ವಿ ಬ್ರ
ಗಲುಗುವಂ। ತೆಳೆವೆಣ್ಣಿ। ಮೊಗದ।
ವಿ ವಿ ವಿ ವಿ
ವಿಳಸಿತ। ಮೂಗಿನ। ಮುತ್ತು ಪ। ರತಿಯೊಳು।
ವಿ ವಿ ಬ್ರ
ಹೊಳೆದುದು। ಕುಡುಚೆಲ್ವ। ನಾಂತು।

–ಮೋಳಿಗೆಯ್ಯನ ಪುರಾಣ ಸಂಧಿ ೧ ಪದ್ಯ – ೨೨

ಒಮ್ಮೊಮ್ಮೆ ಈ ನಿಯಮವು ಉಲ್ಲಂಘಿಸಲ್ಪಟ್ಟಿದ್ದನ್ನೂ ನಾವು ಕನ್ನಡ ಕವಿಗಳ ಸಾಂಗತ್ಯದಲ್ಲಿ ಕಾಣಬಹುದು.

ವಿ ವಿ ವಿ ವಿ
ಪೆಣ್ಣಲ್ಲ। ವೆ ತಮ್ಮ। ನೆಲ್ಲಪಡೆ। ದ ತಾಯಿ।
ವಿ ಬ್ರ ಬ್ರ
ಪೆಣ್ಣಲ್ಲ। ವೆ ಪೊರೆ। ದವಳು।

ವಿ ವಿ ವಿ ಬ್ರ
ಪೆಣ್ಣಪೆ। ಣ್ಗೊಂದೇತ। ಕೆ ಬೀಳುಗ। ಳಿವರು।
ವಿ ಬ್ರ ಬ್ರ
ಕಣ್ಣಕಾ। ಣದನಾ। ವಿಲರು।

–ಹದಿಬದೆಯ ಧರ್ಮ

ಇಲ್ಲಿ ಕವಯತ್ರಿ ಸಂಚಿಯ ಹೊನ್ನಮ್ಮನೂ ಬಳಕೆಯಲ್ಲಿರುವ ನಿಯಮೋಲ್ಲಂಘನೆಯನ್ನು ಮಾಡಿದ್ದಾಳೆ ವಿಷ್ಣುಗಣಗಳ ಬದಲು ಇಲ್ಲಿ ಬ್ರಹ್ಮಗಣಗಳು ಬಂದಿವೆ. ಹಳ್ಳಿಗರು ಈ ಯಾವ ನಿಯಮಗಳನ್ನೂ ಪಾಲಿಸಿಲ್ಲ. ಅವರು ಪಾಲಿಸಿದ್ದು ತಾಳ ಲಯಾಲಾಪ. ಅವರ ಹಾಡುಗಳು ಸಾಂಗತ್ಯದಲ್ಲಿ ಬರೆಯಲ್ಪಟ್ಟಿದ್ದರೂ ಅಲ್ಲಿ ವಿವಿಧ ಪ್ರಯೋಗಗಳು ಕಂಡುಬರುತ್ತವೆ.

ವಿ ವಿ ವಿ ಬ್ರ
ಏಳೇಳ। ಬೀಗೂತಿ। ನಿಂದೆಷ್ಟ। ನಿದ್ರೆ।।ಪ।।
ವಿ ರು ರು ವಿ
ಗುರುಲಿಂಗ। ಜಂಗಮದ। ಹೊರತುಪರ। ದೈವವ
ವಿ ವಿ ವಿ ಗು
ಅರಿಯನು। ಸದ್ಭಕ್ತ। ಗುಣವಂತ। ನು
ವಿ ವಿ ವಿ ವಿ
ಸರಿಯಾದ। ಹೆಂಡತಿ। ಅಲ್ಲನ। ಮ್ಮಣ್ಣಗ।
ವಿ ವಿ ವಿ ಗು
ಸಿರಿಗೇಡಿ। ನೀನೆಲ್ಲಿ। ಕುಳತಿದ್ದೇ। ಳ।

–ಜಾ–ಸಂ–

ಇಲ್ಲಿ ರುದ್ರ ಗಣವೂ ಬಂದಿದೆ. ಹಾಡುವುದೇ ಹಳ್ಳಿಗರ ಮೂಲ ಉದ್ದೇಶವಾದುದರಿಂದ ಅವರು ಮಾತ್ರೆಗಳನ್ನು ಗಣನೆ ಮಾಡದೆ ತಾಳ ಲಯಾಲಾಪಗಳ ಸರಾಗ ಧಾಟಿಯೊಡನೆ ಹೆಚ್ಚು ಕಡಿಮೆ ಮಾಡಿ ಹಾಡಿ ತಣಿದಿದ್ದಾರೆ. ನಾಗವರ್ಮನು ತನ್ನ ಕಾವ್ಯಾವಲೋಕನದಲ್ಲಿ ದ್ವಿಪದಿ ತ್ರಿಪದಿ ಮೊದಲಾದುವುಗಳನ್ನು ಹೇಳಿದ್ದರೂ ಸಾಂಗತ್ಯದ ಮಾತನ್ನೇ ಎತ್ತಿರುವುದಿಲ್ಲ. ಅವನ ಕಾಲದಲ್ಲಿ ಸಾಂಗತ್ಯವು, ಉಳಿದ ಕನ್ನಡ ವೃತ್ತಗಳಂತೆ ಜನತೆಗೆ ಅಷ್ಟೊಂದು ಪ್ರಿಯವಾದ 'ಪದ'ವಾಗಿರಲಿಕ್ಕಿಲ್ಲವೇ?

ಜಾನಪದ ಅನೇಕ ಹಾಡುಗಳು ಕರ್ನಾಟಕ ಸಂಗೀತವನ್ನೇ ಒಳಗೊಂಡಿರುವುದರಿಂದ ಅವುಗಳಿಗೆ ಮಾತ್ರಾಗಣಗಳನ್ನು ಹಾಕುವ ಗೋಜಿಗೆ ಯಾರೂ ಹೋಗಕೂಡದು. ಜಾತಿ ತಾಳಗಳಲ್ಲಿ, ರಾಗರಾಗಿಣಿಗಳಲ್ಲಿ ಅವುಗಳಿಗೆ ತಾಳ ರಾಗಗಳನ್ನು ಬೇರೆ ಬೇರೆಯಾಗಿ ಸೂಚಿಸುವುದೇ ಒಳಿತು.

ಬ್ರ ವಿ ಬ್ರ
ಒಂದ। ಸುತ್ತಿನ। ಕ್ವಾಟಿ।
ವಿ ಬ್ರ ವಿ ಬ್ರ
ಅದರೊಳು। ಹೊಂದಿ। ನಿಂತಾನ। ಬಸವ।
ವಿ ರು
ಬಸವಕ। ಬಸವನ್ನಿರೆ।
ವಿ ವಿ ರು
ಬಸವನ। ಪಾದಕ। ಶರಣನ್ನಿರೆ।

–ಜಾ–ಸಂ–

ಚತುರಸ್ರ ಜಾತಿ ಏಕತಾಳದಲ್ಲಿದೆ ಈ ಹಾಡು.

ಬ್ರ ವಿ ವಿ ವಿ ಬ್ರ ವಿ . ವಿ
ಗಂಡ। ಹೆಂಡರ। ಮನವೆರ। ಡಾದರೆ। ದಂಡಾ। ಕೊಡಿಸುವೆ। ಮಲ್ಲಯ್ಯ।
ಬ್ರ ವಿ ಬ್ರ ವಿ ಬ್ರ ಬ್ರ ವಿ .
ಗಂಡ। ಹೆಂಡರ। ಮನ ವೊಂ। ದಾದರೆ। ನಂದಾ। ದೀವೋ। ಮಲ್ಲಯ್ಯ। *–ಕಂ–ಹಾ–*

ಈ ಹಾಡು ಏಕತಾಳದಲ್ಲಿದ್ದು 'ಯಮಕ'ವನ್ನೊಳಗೊಂಡಿವೆ. ಹಳ್ಳಿಗರು ತಮ್ಮ ಹಾಡುಗಳಲ್ಲಿ ರಾಗವೈವಿಧ್ಯತೆಗೆ ತೃಪ್ತಿಗೊಂಡಿಲ್ಲ. ತಾಳಲಯಗಳ ಪರಿಪೂರ್ಣ ಜ್ಞಾನವುಳ್ಳ ಅವರು ತಾಳದಲ್ಲಿಯೂ ವೈವಿಧ್ಯತೆಯನ್ನು ತೋರಿಸಿದ್ದಾರೆ. ಈ ವೈವಿಧ್ಯತೆಗಳ ಅರಿಕೆಯಲ್ಲಿಯೇ ಸಂಗೀತ ಕಲಾಕೋವಿದನ ಕಲೆಯು ತಿಳಿದುಬಿಡುವದು. ಆದರೂ ಕಲಾ ಪರಿಪೂರ್ಣ ನೈಪುಣ್ಯತೆಯುಳ್ಳವನು ಮಾತ್ರ ಅವುಗಳನ್ನು ಕೂಡಲೇ ಗುರುತಿಸಿ ಹೇಳಬಲ್ಲ.

ಬ್ರ ವಿ ಬ್ರ
ನಾನು। ತಿರುಕಾದ। ಮ್ಯಾಲೆ।
ವಿ ರು ಬ್ರ
ಎನ್ನಾತ್ಮ। ತಿರುಕಾಗುವ। ದೇನ। ।।ಪ।।

ಬ್ರ ವಿ ಬ್ರ ಬ್ರ ರು ಬ್ರ
ಗುಡಿಯು । ಡೊಂಕಾದ । ಮ್ಯಾಲೆ । ಬಸವ । ಡೊಂಕಾಗುವ । ನೇನ ।
ರು ರು ಬ್ರ ವಿ ವಿ
ಬಸವ ನೆಂದರೆ । ಬಸವನಲ್ಲ । ಸಂಭ್ರ । ಸಂಭ್ರಮ । ಪೂಜೆಗೆ । *–ಜಾ–ಸಂ*

ಈ ಹಾಡಿನಲ್ಲಿ ಕಂಡುಬರುವುದು ತಾಳ ವೈವಿಧ್ಯತೆ. ಪಲ್ಲವಿಯಲ್ಲಿ ಬಳಸಿದ ತಾಳವು (ಏಕತಾಳ), ಹಾಡಿನಲ್ಲಿಯ ನುಡಿಗಳಲ್ಲಿಲ್ಲ. ಅಲ್ಲಿ ಬರುವ ತಾಳ, 'ಬಿಲಂದಿ ತಾಳ'. ಹಾಡುವಾಗ, ಕೂಡಲೇ ತಾಳವನ್ನು ಬದಲು ಮಾಡಿ ಬೇರೆ ತಾಳಬರುವುದನ್ನು ಗುರುತಿಸಿ, ಸಂಗೀತಕಾರನು ಅದರಲ್ಲಿ ತನ್ನ ವಾದ್ಯ ನುಡಿಸುವದೆಂದರೆ ಸಾಮಾನ್ಯ ಕೆಲಸವಲ್ಲ. ಅಷ್ಟು ಮೇಲ್ಮಟ್ಟವನ್ನು ಮುಟ್ಟಿದೆ ತಾಳರಾಗಗಳಲ್ಲಿ ಕರ್ನಾಟಕ ಸಂಗೀತ!

ಬ್ರ ವಿ ಬ್ರ ಬ್ರ ವಿ ಬ್ರ
ಸಾವು । ಮಧ್ಯನ । ದವ್ವ । ಸ್ವಾಮಿ । ಬಿನ್ನವ । ಏಳ ।
ವಿ ವಿ ವಿ ವಿ ವಿ ರು
ತಣ್ಣೀರ । ಗಿಂಡ್ಯಾಗ । ಉದಕವ । ತಂದೀನಿ । ದೇವರ । ಏಳೆಂದಳ ।
ವಿ ಬ್ರ ವಿ ರು
ಗೌರಮ್ಮ । ನಿಂತು । ಬಿನ್ನವ । ಮಾಡತಾಳ । *–ಜಾ–ಸಂ–*

ಈ ಹಾಡು ಏಕತಾಳದಲ್ಲಿದ್ದರೂ ಇಲ್ಲಿ ಗತಿಯ ವೈವಿಧ್ಯ ಗಮನಾರ್ಹ್ಯವಾಗಿದೆ. ಇಂತಹ ಹಾಡುಗಳಲ್ಲಿ 'ಗತಿಯ' ಮುರಕವನ್ನು ಕಾಣಬಹುದು. ಈ ಹಾಡುಗಳ ನಿಜವಾದ ಛಂದವನ್ನರಿಯದೆ ಮಾತ್ರಾಗಣಗಳ ಗಣನೆಗೆ ಹಚ್ಚಿ ಅವುಗಳನ್ನು 'ಮಲ್ಲಿಗೆ ದಂಡೆ' ಎಂಬ ಜಾನಪದ ಸಂಕಲನದ ಟೀಕೆ ಟಿಪ್ಪಣಿಗಳಲ್ಲಿ, ರಗಳೆಗೊ, ಷಟ್ಪದಿಗೊ, ತ್ರಿಪದಿಗೊ, ಸಾಂಗತ್ಯಕ್ಕೊ ಸಮೀಪವಾಗಿವೆ ಎಂದು ಸಂಕಲನಕಾರರು ಅರಭರವಸೆಯನ್ನೆಳೆದಿದ್ದಾರೆ. ಹೀಗೆ ಮಾಡುವುದು ಕನ್ನಡ ಛಂದಸ್ಸಿನ ದೃಷ್ಟಿಯಿಂದ ಶುದ್ಧ ತಪ್ಪೆಂದೇ ಹೇಳಬಹುದು. ಅಂಶಗಣ ಛಂದವೇ ಈ ಹಾಡುಗಳ ಬಂಧ. ಅದರಲ್ಲಿಯೇ ನಾವು ಅವುಗಳನ್ನರಿಯಲೆತ್ನಿಸುವುದು ಒಳಿತು.

❐

3. ಜಾನಪದ ಮಹಾಭಾರತ ರಾಮಾಯಣಗಳು

ಭರತ ಖಂಡದಲ್ಲಿ ಉಗಮ ಹೊಂದಿದ 'ಮಹಾಭಾರತ' ಹಾಗೂ 'ರಾಮಾಯಣ' ಮಹಾ ಪೌರಾಣಿಕ ಕಾವ್ಯಗಳು ಭಾರತ ಸಾಹಿತ್ಯಕ್ಕೆ ಉಗಮಸ್ಥಾನಗಳಾಗಿವೆ. ಅನೇಕ ಕವಿಗಳು, ಈ ಮಹಾಕಾವ್ಯಗಳ ಒಂದಿಲ್ಲೊಂದು ಪ್ರಸಂಗವನ್ನೆತ್ತಿಕೊಂಡು ಪ್ರತ್ಯೇಕವಾಗಿ ಮಹಾಕಾವ್ಯಗಳನ್ನು ಬರೆದಿದ್ದಾರೆ. ಭಾರತದ ಪ್ರತಿಯೊಂದು ಭಾಗದ ಭಾಷೆಯಲ್ಲಿಯೂ ಮಹಾಭಾರತ–ರಾಮಾಯಣಗಳಿವೆ. ಅಲ್ಲದೆ ಪಾಶ್ಚಿಮಾತ್ಯರೂ ಈ ಕಾವ್ಯಗಳಿಗೆ ಮೆಚ್ಚಿ ತಮ್ಮ ಭಾಷೆಗಳಲ್ಲಿ ಅವುಗಳನ್ನು ಭಾಷಾಂತರಿಸಿದ್ದೂ ಉಂಟು. ಇಷ್ಟು ಲೋಕಪ್ರಿಯವಾಗಿವೆ ಭಾರತದ ಈ ಮಹಾಕಾವ್ಯಗಳು.

ಈ ಮಹಾಕಾವ್ಯಗಳ ಕಥೆಗಳನ್ನು ಕೇಳಿದ ಹಳ್ಳಿಗರು ಅವುಗಳಿಗೆ ಮೆಚ್ಚಿ ಭಕ್ತಿಭಾವದಿಂದಲೂ, ಆದರದಿಂದಲೂ ಅವುಗಳನ್ನು ಜಾನಪದ ವಿಶಿಷ್ಟವಾದ ಶೈಲಿಯಲ್ಲಿ ಹಾಡಿದ್ದಾರೆ. ಗಂಡಸರು ವಿಶೇಷವಾಗಿ ಮಹಾಭಾರತ–ರಾಮಾಯಣ ಕಥೆಗಳ ಬಯಲಾಟಗಳನ್ನು ಜನಪದಕ್ಕೆ ಈಗಲೂ ಆಡಿ ತೋರಿಸುವುದುಂಟು. ಅವರು ಅವುಗಳ ಹಾಡುಗಳನ್ನು ಹಾಡುವುದು ತೀರ ಕಡಿಮೆ; ಇಲ್ಲವೆಂದರೂ ಸಲ್ಲುವುದು. ಹೆಚ್ಚಾಗಿ ಹೆಂಗಸರೇ ಮಹಾಭಾರತ, ರಾಮಾಯಣ ಮೊದಲಾದ ಹಾಡುಗಳನ್ನು ಜನಪದಕ್ಕೆ ಹಾಡುತ್ತ ಬಂದಿದ್ದಾರೆ. ಈ ಹಾಡುಗಳು ಉತ್ತರ ಕರ್ನಾಟಕದ ಬಹುತರ ಎಲ್ಲ ಭಾಗಗಳಲ್ಲಿಯೂ ದೊರೆಯುವುವು. ಬೆಳುವಲದಲ್ಲಂತೂ ಒಂದಿಲ್ಲೊಂದು ಹಳ್ಳಿಯಲ್ಲಿ ಹೆಣ್ಣುಮಕ್ಕಳು ಕೂಡಿ ಶ್ರಾವಣ ಮಾಸದಲ್ಲಾಗಲಿ, ಅಥವಾ ಪುಣ್ಯತಿಥಿಮಿತಿಗಳಲ್ಲಾಗಲಿ, ಪಾಂಡವರ ಹಾಡನ್ನು ಹಚ್ಚಿ ಅನೇಕ ದಿನಗಳವರೆಗೆ ಹಾಡುವುದನ್ನು ಈಗಲೂ ಕೇಳಬಹುದು. ಕೆರೂರು, ನವಲಗುಂದ, ಜಾಲೀಹಾಳ, ಶೆಲವಡಿ, ನರೇಗಲ್ಲು, ಇಟಗಿ, ಧಾರವಾಡ ಮೊದಲಾದ ಊರುಗಳಲ್ಲಿ ಹೆಣ್ಣುಮಕ್ಕಳು ಈ ಹಾಡನ್ನು ಅನೇಕ ದಿನಗಳವರೆಗೆ ಹಾಡುತ್ತಾರೆ. ಹಳ್ಳಿಗರು ಈ ಮಹಾಭಾರತ ಹಾಡಕ್ಕೆ 'ಪಾಂಡವರ ಹಾಡು' ಎಂದೂ, ಕೆಲವು ಊರುಗಳಲ್ಲಿ 'ಚದುರಂಗ ಕುಸುಮಾಲೆ'ಯರ ಹಾಡು ಎಂದೂ ಕರೆಯುತ್ತಾರೆ. ರಾಮಯಣಕ್ಕೆ 'ಲವಕುಶರ ಹಾಡು' ಎಂದೂ ಕರೆಯುವರು. ಮಲೆನಾಡ ಸೆರಗಿನಲ್ಲಿಯೂ ಜನರು ಈ ಹಾಡುಗಳನ್ನು ಹಾಡುವರು. ಬೈಲಹೊಂಗಲದಲ್ಲಿ ಹೆಣ್ಣುಮಕ್ಕಳು ಈ ಹಾಡುಗಳನ್ನು ಹಾಡುತ್ತಾರೆ. ಹೀಗೆ ಜಾನಪದ ಸಾಹಿತ್ಯದಲ್ಲಿ ಮಹಾಭಾರತ ರಾಮಾಯಣಗಳು ದೊಡ್ಡ ಹಾಡುಗಳಾಗಿ ಜನತೆಯ ಬಾಯಲ್ಲುಳಿದು ಬಂದಿವೆ.

ಉತ್ತರ ಕರ್ನಾಟಕದಲ್ಲಿ ಹಾಡುವ ಈ ದೊಡ್ಡ ಹಾಡುಗಳ ಕಥೆಯು ಒಂದೇ ಆಗಿದ್ದರೂ ಹಾಡುವ ರೀತಿ, ಧಾಟಿ, ವರ್ಣನೆ ಮೊದಲಾದುವುಗಳು ಬೇರೆ ಬೇರೆಯಾಗಿವೆ. ಕೆಲವು ಭಾಗಗಳಲ್ಲಿ ಈ ಹಾಡುಗಳು ಬಹಳ ಅಶುದ್ಧ ರೀತಿಯಲ್ಲಿವೆ; ಹಲವು ಭಾಗಗಳಲ್ಲಿ ಇವುಗಳನ್ನು ಹೆಣ್ಣುಮಕ್ಕಳು ಶುದ್ಧರೀತಿಯಲ್ಲಿ ಹಾಡುವರು. ಕೆರೂರಲ್ಲಿಯ ಹೆಣ್ಣುಮಕ್ಕಳು ಹಾಡುವ ಹಾಡುಗಳು ಅತಿಶುದ್ಧವೆನಿಸಿದ ಕಾರಣ ಕೆರೂರ ಭಾಗದಲ್ಲಿಯೇ ಈ ಹಾಡುಗಳನ್ನು ಸಂಕಲನ ಮಾಡಲಾಗಿದೆ. ಈ ಹಾಡುಗಳನ್ನಲ್ಲದೆ ಈ ಭಾಗದ ಹೆಣ್ಣುಮಕ್ಕಳು ಅನೇಕ ಶಿವಶರಣರ ಹಾಡುಗಳನ್ನೂ, ಇನ್ನಿತರ ಹಾಡುಗಳನ್ನೂ ಬಲು ರಮ್ಯವಾಗಿ ನೂರೊಂದು ಧಾಟಿಯಲ್ಲಿ ಹಾಡುವುದನ್ನು ಕೇಳಬಹುದು.

ನಮ್ಮ ಹಳ್ಳಿಯ ಹೆಣ್ಣುಮಕ್ಕಳ ಸಂಸ್ಕೃತಿಯ ದೃಷ್ಟಿಯಿಂದ ದೊಡ್ಡ ಹಾಡುಗಳಲ್ಲಿ ಬರುವ ಬಲಗೊಳ್ಳುವ ಸಂದು (ಸಂಧಿ) ಮುಕ್ತಾಯ ಸಂದು ಬಹಳ ಮಹತ್ವವಾದುವುಗಳು. ಅವುಗಳಲ್ಲಿ ನಮ್ಮ ಹೆಣ್ಣುಮಕ್ಕಳ ಶೀಲ, ಗುಣ, ಧರ್ಮ, ಗ್ರಹ ಶಿಕ್ಷಣ, ಅನೇಕ ರೀತಿ ನೀತಿ, ಆಚಾರ–ವಿಚಾರ, ಉಪದೇಶ, ಧ್ಯೇಯ ಮೊದಲಾದುವು ಚಿತ್ರಿತವಾಗಿವೆ. ಪ್ರತಿಯೊಬ್ಬ ಹೆಣ್ಣುಮಗಳು ಈ ಹಾಡುಗಳನ್ನು ಹಾಡುವ ಹವ್ಯಾಸಕ್ಕೆ ಹೋಗದಿದ್ದರೂ, ಕೇಳಿ ಅರಿತುಕೊಳ್ಳುವುದು ಹಿತಕರವು. ಅದು ಅವಳ ಜೀವನೋದ್ಧಾರದ ಸಾಧನವಾಗುವುದು.

ಜಾನಪದ ಸಾಹಿತ್ಯದ ಕಥನ ಕವನಗಳಲ್ಲಿ ೧. ಲೌಕಿಕ ಹಾಡುಗಳೆಂದೂ, ೨. ಶಿವಶರಣರ ಹಾಗೂ ಪುಣ್ಯಪುರುಷರ ಹಾಡುಗಳೆಂದೂ, ೩. ಐತಿಹಾಸಿಕ ವೀರ ಪುರುಷರ ಹಾಡುಗಳೆಂದೂ ವಿಭಾಗಗಳನ್ನು ಮಾಡಬಹುದು. ಈ ಮೂರೂ ತೆರನಾದ ಹಾಡುಗಳಿಗೆ ಬೇರೆ ಬೇರೆ ಬಲಗೊಳ್ಳುವ ಸಂದುಗಳನ್ನು ನಮ್ಮ ಹಳ್ಳಿಯ ಹಾಡುಗಾರತಿಯರು ಬಳಸಿಕೊಳ್ಳುವರು. ಲೌಕಿಕ ಹಾಡುಗಳಲ್ಲಿ 'ಬಲಗೊಳ್ಳುವ ಸಂದು' ಎಲ್ಲ ಭಾಗಗಳಲ್ಲಿ ಸಾಧಾರಣ ಒಂದೇ ತೆರನಾಗಿರುವುದು. ಒಮ್ಮೊಮ್ಮೆ ಹಾಡುವವರು ಒಂದರಲ್ಲಿ ಒಂದು ಕೂಡಿಸಿ ಹಾಡುವುದನ್ನೂ ಕೇಳಬಹುದು. ಲೌಕಿಕ ಹಾಡುಗಳಲ್ಲಿ ಹೆಣ್ಣುಮಕ್ಕಳು ಕೆಳಗಿನ ಬಲಗೊಳ್ಳುವ ಸಂದನ್ನು ಹಾಡುತ್ತಾರೆ.

ಬಲಗೊಳ್ಳುವ ಸಂದು (ಸ್ತುತಿ ಪರ ಸಂಧಿ)

ಕೋಲೆನ್ನ ಕೋಲ॥ಪ॥

ಎಲ್ಲಕ ನಿನ್ನ ಮೊದಲ, ಬಲ್ಲಿದಳ ಬಲಗೊಂಬೆ
ಎಳ್ಳುರಾಜನ್ನ ಬೆಳೆವಾಕಿ। ಕೋ। ಭೂ ತಾಯಿ
ಬಲ್ಲಿದಳ ಮೊದಲ ಬಲಗೊಂಬೆ। ಕೋ। ॥೧॥

ಆತಕನೀನ ಮೊದಲ, ಕಾತಿ[೧]ಯ ಬಲಗೊಂಬೆ
ಸೂತಕ ಇಲ್ಲ ಹೊಲಿ ಇಲ್ಲ। ಕೋ। ಪರವುತದ
ಪಾತಾಳ ಗಂಗವ್ನ ಬಲಗೊಂಬೆ। ಕೋ। ॥೨॥

ರಾಮಾಯಣ ಹನುಮಾದಿ. [illegible]ಕ ಭೀಮಾರಿ
ಜೀವರಾಶಿಗೆ ಉಸುರಾದಿ। ಮೂಲೋಕ
ವಾಯು ದೇವನ ಬಲಗೊಂಬೆ ॥೩॥

ಮುಂಜೇಲಿ ಮೂಡಿದರ, ಅಂಗಳೊಂದ್ಯೆಸಿರಿ
ಬೆಳಗಾದರೊಮ್ಮೆ ಹಸಮಗನ। ಸೂರದೇವ
ಬೆಳಗಾದಗೊಮ್ಮೆ ಬಲಗೊಂಬೆ ॥೪॥

ಸಂಜೀಕ ಮೂಡಿದರ, ಅಂಗಳೊಂದ್ಯೆಸಿರಿ
ತಿಂಗಳಿಗೊಮ್ಮೆ ಹಸಮಗನ। ಚಂದಪ್ಪ
ಗಂಡೆರಳಿ ಮೊದಲ ಬಲಗೊಂಬೆ ॥೫॥

ಎಳ್ಳ ಹೊಲದಾಗಿರುವ, ಡೊಳ್ಳ ಹೊಟ್ಟೆಯ ಬೆನವ
ಎಳ್ಳಿನುಂಡೀಯ ಪನಿವಾರ। ತಂದೀವಿ
ಎಳ್ಳಷ್ಟ ಮತಿಯ ಕೊಡೊನಮಗ ॥೬॥

ಕಡಲಿ ಹೊಲದಾಗಿರುವ, ಕಟದ ಹೊಟ್ಟೇ ಬೆನವ
ಕಡಲ ಉಂಡೀಯ ಪನಿವಾರ। ತಂದೀವಿ
ಒಡಲೊಂದು ನುಡಿಯ ಒಡಕೊಡ ॥೭॥

ಹಲಗೀಯ ಹಿಡದಿಲ್ಲ, ಬಳಪದಿ ಬರೆದಿಲ್ಲ
ಶ್ರೀಗುರು ನಮಗ ಬರೆಸಿಲ್ಲ। ಕೇಳಿರೆ
ಲೆಕ್ಕಣಿಕಿ ನಮಗ ಗೊತ್ತಿಲ್ಲ ॥೮॥

ಹಿಟ್ಟು ಅಕ್ಕಿಯ ಹಿಡಿದು, ಬೆತ್ತ ಹಲಗೀಯ ಹಿಡಿದು
ಸರಸತಿ ತಾಯೀ ಬರುವೇವು। ಹೆತ್ತವ್ವ
ತಪ್ಪಿದ ನುಡಿಯ ಬರಕೋಡ ॥೯॥

ಬ್ಯಾಳಿ ಬೆಲ್ಲವ ಹಿಡಿದು, ರ‍್ಯಾಯದ ಹಲಗಿಹಿಡಿದು
ಬೊಮ್ಮನ ಮಡದಿ ಬರಲೇವೆ। ಹಡದವ್ವ
ಬಾರದ ನುಡಿಯ ಬರದ್ಹೇಳ ॥೧೦॥

ಅಕ್ಕನ ಬಲಗೊಂಬೆ, ಅಕ್ಕಮ್ಮನ ಬಲಗೊಂಬೆ
ಅಕ್ಕಮಾದೇವಿ ಬಲಗೊಂಬೆ। ಕೆರೂರ
ಅಕ್ಕ ದ್ಯಾಮವ್ನ ಬಲಗೊಂಬೆ ॥೧೧॥

ತಾಯವ್ನ ಬಲಗೊಂಬೆ, ಹಡದವ್ವನ ಬಲಗೊಂಬೆ
ಕೊಳ್ಳದಯಲ್ಲವ್ನ ಬಲಗೊಂಬೆ। ಕೆರೂರ
ಅಪ್ಪ ರಾಚಣ್ಣ ಬಲಗೊಂಬೆ ॥೧೨॥

ಕಿಚ್ಚಿನಾಗ ಹುಟ್ಟತಾಳ, ಕಿಚ್ಚಿನಾಗ ಬೆಳೆಯತಾಳ
ಪಂಚಯ್ಯರ ಗೂಡ ಮನಸೂರಿ। ಪಾಂಡೂರ
ಕೆಂಚಿ ದುರಪsದಿ ಬಲಗೊಂಬೆ ॥೧೩॥

---

೧. ಕಾತಿ: ಹೊಂಡ

ಚದುರಂಗ ಕುಸಮಾಲಿ, ಚಿಕ್ಕ ನಾಗರಕನ್ನೆ
ನಾರಯಣ ತಂಗಿ ಸುಭದೇವಿ । ಸೌಭದ್ರಿ
ಬಾಲ ಅಭಿಮನ್ಯನ ಬಲಗೊಂಬೆ ॥೧೪॥

ಪಿಲ್ಲಿ ಕಾಲುಂಗರವ, ಗಲ್ಲಂಬುಮೆಂಟಗೆ
ನೆಲ್ಲೀಯ ಸರ ಕೊರಳಾಗ । ಧರುಮರ
ಬಲ್ಲಿದ ಸುಭದ್ರಿ ಬಲಗೊಂಬೆ ॥೧೫॥

ಕುಂಕುಮದ ಹಣೆಯಾಕಿ, ಕೊಂಕಿದ ನಿರಿಗಿಯಾಕಿ
ನಿಂತಲ್ಲೆ ಮೊಸರಕಡೆವಾಕಿ । ದೇವಕ್ಕಿ
ಕೃಷ್ಣಯ್ನ ತಾಯಿ ಬಲಗೊಂಬೆ ॥೧೬॥

ಕಲ್ಲ ಮ್ಯಾಲಿನ ಬರಿಯ, ಬಳ್ಳೀಲಿ ಬರಿಯೋಳ
ಅಣ್ಣ ಕೃಷ್ಣನ ಕಿರಿತಂಗಿ । ಸುಭದ್ರಿ
ಬಾಲ ಅಭಿಮನ್ಯನ ಬಲಗೊಂಬೆ ॥೧೭॥

ಹರನಿಲ್ಲದೆ ಹಾಡೂದೇನ, ಗುರುವಿಲ್ಲದೆ ಓದುದೇನ
ಗುರು ಶಾಸ್ತ್ರಹೇಳು ಹಿರಿಯಾರೆ । ಕುಂತೆವ್ವ
ಬಾಲ ರೈವರ ಬಲಗೊಂಬೆ ॥೧೮॥

ಹರನೆ ನೀ ಕೇಳಯ್ಯ, ಗಗಣಕ ನಿಚ್ಚಣಿಕುಂಟೆ
ಹಗಲು ಸೂರ್ಯನಿಗೆ ತಳಿಗುಂಟೆ । ಸತ್ತಿಕರ್ದ್ಹಾಡ
ಇರುಳಾದರು ತಾಸು ನಡೆಸೇವು ॥೧೯॥

ಶಂಭೋ ನೀ ಕೇಳಯ್ಯ, ಅಂಬರಕ ನಿಚ್ಚಣಿಕುಂಟೆ
ಸಂಜಿ ಚಂದ್ರಾಮಗ ತಳಿಗುಂಟೆ । ಶರಣರ್ದ್ಹಾಡ
ಹಗಲಾದರು ತಾಸ ನಡೆಸೇವ ॥೨೦॥

ಇಲ್ಲಿಗೆ ಹರಹರ, ಇಲ್ಲಿಗೆ ಶಿವಶಿವ
ಇಲ್ಲಿಗೆ ಸಂದುಪದ ಮುಂದೊ । ಅವ್ವಗಳಿರಾ
ಮುಂದಿನ ಸಂದು ಹಾಡೇವ ॥೨೧॥

ಸಂದೀಗಿ ಕುಂಕುಮ, ಕೊಟ್ಟ ಹಡದವ್ವಗ
ಮುತ್ತಿನ ಮಾರಗ ದೊರೆಯಲಿ । ಕೆರೂರ
ಸಾವಳಿಗೇಶನ ದಯವಿರಲಿ ॥೨೨॥

ಸಂದೀಗೆ ವಿಭೂತಿ, ಕೊಟ್ಟ ಹಡದವ್ವಗ
ಮುತ್ತಿನ ಮಾರಗ ದೊರೆಯಲಿ । ಕೆರೂರ
ಸಾವಳಿಗೇಶನ ದಯವಿರಲಿ ॥೨೩॥ *–ಜಾ–ಮ–ಭಾ*

ಇಷ್ಟು ಪದ್ಯಗಳುಳ್ಳ ಬಲಗೊಳ್ಳವ ಸಂದನ್ನು ಪ್ರತಿನಿತ್ಯವೂ ಹಾಡನ್ನು ಪ್ರಾರಂಭಿಸುವ ಕಾಲದಲ್ಲಿ ಹಾಡಿ, ಹಾಡತಕ್ಕ ಸಂದನ್ನು ಹಾಡುವ ವಾಡಿಕೆಯುಂಟು. ಯಾವುದೇ ಲೌಕಿಕ ದೊಡ್ಡ ಹಾಡು ಇರಲಿ ಆ ಹಾಡನ್ನು ಹಾಡುವ ಕಾಲಕ್ಕೆ ಉತ್ತರ ಕರ್ನಾಟಕದ ಬಹುತರ ಎಲ್ಲ ಭಾಗಗಳಲ್ಲಿಯೂ ಹೆಚ್ಚು ಕಡಿಮೆ ಇವೇ ಪದ್ಯಗಳು ಬಲಗೊಳ್ಳುವ ಸಂದಿನಲ್ಲಿ ಬರುವುವು.

ಮಹಾಕವಿಗಳು ತಮ್ಮ ಕಾವ್ಯವನ್ನು ಆರಂಭ ಮಾಡುವಾಗ ಸ್ತುತಿಸ್ತವನ ಮಾಡಿ; ಶ್ರೇಷ್ಠ ಕವಿಗಳನ್ನು ಹೊಗಳಿ ತಮ್ಮ ಕಾವ್ಯವನ್ನು ಬರೆಯುವಂತೆ ಹಳ್ಳಿಯ ಹೆಣ್ಣುಮಕ್ಕಳು ಜಾನಪದ ಕಥನ ಕವನ ಪ್ರಾರಂಭದಲ್ಲಿ ಈ ಬಲಗೊಳ್ಳುವ ಸಂದನ್ನು ಮೊದಲು ಹಾಡಿ ಕಥೆಯನ್ನು ಹಾಡಲುದ್ಯುಕ್ತರಾಗುತ್ತಾರೆ. ಓದುಬರಹವನ್ನರಿಯದ ಅವರು ನಮ್ಮ ಸಂಸ್ಕೃತಿಯ ಉಚ್ಚ ಸಂಸ್ಕಾರವನ್ನು ಹೊಂದಿದವರಾಗಿದ್ದಾರೆ. ಹೊಟ್ಟೆಗಾಗಿ ತಮ್ಮ ತನವನ್ನು ಮಾರಿಕೊಂಡು ದೇಹ ಪೋಷಣೆಗೆ ಕಾರಣೀಭೂತಗಳಾದ ಅನ್ನ, ನೀರು, ಹವೆ ಮೊದಲಾದುವುಗಳನ್ನೀಯುವ ಮೂಲ ವಸ್ತುಗಳನ್ನು ಹೊಗಳದೆ ಬಿಟ್ಟುಕೊಟ್ಟು, ತಮ್ಮ ಆಶ್ರಯದಾತರನ್ನು ಸ್ತುತಿಸುವ ಪಂಡಿತ ಕವಿಗಳಷ್ಟು ಅವರು ಕೃತಘ್ನರಲ್ಲ. ಅವರಿಗೆ ಈ ಅರುವಿನ ತೀವ್ರಗತಿಯಿದೆ. ಅನ್ನವನ್ನು ಕೊಡುವವಳು ಭೂ ದೇವಿಯೆಂದೂ, ನೀರನ್ನು ಕೊಡುವವಳು ಗಂಗಾದೇವಿಯೆಂದೂ, ಹವೆಯನ್ನು ಕೊಡುವವನು ವಾಯುದೇವನೆಂದೂ ಅವರಲ್ಲಿ ದೃಢವಾದ ನಂಬಿಕೆಯೂ ಅದೆ. ಈ ಮೂರರ ಪೋಷಣೆಯಿಂದಲೇ ಈ ದೇಹವು ಬೆಳೆದು ಬಂದಿದೆ ಎಂಬ ಅರಿಕೆಯೂ ಅವರಿಗೆ ಪೂರ್ಣವಿದೆ. ಅಂತೆಯೇ ಅವರು ತಮ್ಮ ಹಾಡಿನ ಪ್ರಾರಂಭದಲ್ಲಿ, ಈ ತ್ರಿಭೂತಾದಿಗಳಿಗೆ ಭಕ್ತಿಯಿಂದ ಕೃತಜ್ಞತೆಗಳನ್ನರ್ಪಿಸಿ ಬಲಗೊಳ್ಳುತ್ತಾರೆ. ಮೊಟ್ಟಮೊದಲು ಅವರು ಬಲಗೊಂಬುವುದು 'ಎಳ್ಳ ರಾಜನ್ನ ಬೆಳೆವಾಕಿ/ಭೂ ತಾಯಿ'ಯನ್ನು. ನೀರು ಎಲ್ಲರಿಗೂ ಬೇಕಾಗುವ ಪದಾರ್ಥ. 'ಕಾತಿಯ ಬಲಗೊಂಬೆ' ಎಂಬ ನುಡಿಯು ನೀರಿನ ಹೊಂಡ (ಕಾತಿ)ವನ್ನು ಹೊಗಳುವೆನು

ಎಂದು ಜಾನಪದದಲ್ಲಿ ಅರ್ಥವಾಗುವುದು. ಹಳ್ಳಿಗಳಲ್ಲಿ ಹೊಂಡಗಳನ್ನು ನೋಡಿ ನಿತ್ಯದಲ್ಲಿ ಅವುಗಳ ನೀರು ಕುಡಿಯುವ ಹೆಣ್ಣುಮಕ್ಕಳು ಮೊದಲು ತಮ್ಮ ಹಳ್ಳಿಗಳಲ್ಲಿಯ ಹೊಂಡಗಳನ್ನು ಬಲಗೊಂಡಿದ್ದಾರೆ. ಈ ಹೊಂಡಗಳಲ್ಲಿರುವ ನೀರು ಸೂತಕ, ಹೊಲೆಗಳಲ್ಲದ ಪರವುತ(ಶ್ರೀಶೈಲ)ದ ಪಾತಾಳ ಗಂಗವ್ವನೆಂದು ಭಾವಿಸಿ ಆ ಪಾತಾಳಗಂಗೆಯನ್ನು ಬಲಗೊಂಡಿದ್ದಾರೆ. ಪ್ರಾಣಿಗಳು ಉಸಿರಾಡಿಸಲು ಹವೆಯನ್ನು ಕೊಡುವ ಮೂಲೋಕ ವಾಯುದೇವನನ್ನು ರಾಮಾಯಣದ ಹನುಮಂತನೆಂದೂ, ಮಹಾಭಾರತದ ಭೀಮನೆಂದೂ ಭಿನ್ನರೂಪಗಳೊಡನೆ ಭಕ್ತಿಯಿಂದ ಬಲಗೊಂಡಿದ್ದಾರೆ. ನಂತರ ಅವರಿಗೆ ಅತ್ಯವಶ್ಯವಾಗಿ ಕಂಡುಬಂದುದು ಬೆಳಕು. ಸದಾ ಈ ಜಗತ್ತಿಗೆ ಬೆಳಕನ್ನು ಕೊಡುವ ವಸ್ತುಗಳು ಎರಡು. ಸೂರ್ಯನು ಹಗಲಿನಲ್ಲಿ ಜಗತ್ತನ್ನು ಬೆಳಗುತ್ತಾನೆ. ಅವನ ಬೆಳಕಿನಿಂದಲೇ ಸಸ್ಯಾದಿಗಳು ಬೆಳೆಯುವುವೆಂಬ ಕಲ್ಪನೆಯು ನಮ್ಮ ಹಳ್ಳಿಗರಿಗಿದೆ. ಅಂತೆಯೇ ಅವರು ಸೂರ್ಯನನ್ನು 'ಬೆಳಗಾದರೊಮ್ಮೆ ಹಸಮಗನ' ಎಂದೂ ಅವನು ಮುಂಜಾನೆ ಮೂಡಲು ಅಂಗಳು ಐಸಿರಿಯಾಗುವುದೆಂದೂ ಬೆಳಗಾದರೊಮ್ಮೆ ಬಲಗೊಂಡಿದ್ದಾರೆ. ಸೂರ್ಯನ ಬಿಸಿ ಬೆಳಕನ್ನು ಬಗೆಸುವಂತ ಜಗತ್ತು ತಿಂಗಳ (ಚಂದ್ರ)ನ ತಂಬೆಳಕನ್ನೂ ಬಗೆಸುವುದು. ಬೆಳದಿಂಗಳು ಬರುವುದು ರಾತ್ರಿಯಲ್ಲಿ, ಆಗ ಅಂಗಳದ ಐಸಿರಿ ತುಂಬಿ ಬರಲು ಹಳ್ಳಿಯ ಬಳಗವು ಆ ಬೆಳದಿಂಗಳದ ಸುಖವನ್ನುಣ್ಣಲು ಮನೆಯಂಗಳದ ಕಟ್ಟೆಗಳ ಮೇಲೆ ಕೂಡ್ರುವೂದನ್ನೂ ಹಲಕೆಲವು ಹುಣ್ಣಿಮೆಗಳಲ್ಲಿ ಕೋಲುಹಾಕಿ ಆಡುವುದನ್ನೂ ಈಗಲೂ ಹಳ್ಳಿಗಳಲ್ಲಿ ಕಾಣಬಹುದು. ಇಂಥ ಸೊಬಗನ್ನು ಕೊಡುವ ಚಂದ್ರನು ತಿಂಗಳಿಗೊಮ್ಮೆ ತುಂಬಿದವನಾಗುವುದರಿಂದ 'ತಿಂಗಳಿಗೊಮ್ಮೆ ಹಸಮಗ । ಚಂದಪ್ಪ । ಗಂಡೆರಳಿ ಮೊದಲ ಬಲಗೊಂಬೆ' । ಎಂದು ಅವರು ಹಾಡಿದ್ದಾರೆ. ಬೆಳುವಲದ ಎರೆಯಲ್ಲಿಯ ಹೆಣ್ಣುಮಕ್ಕಳು ಈ ಎರಡೂ ಪದ್ಯಗಳ ಭಿನ್ನರೂಪಾಂತರಗಳನ್ನು ಹಾಡುತ್ತಾರೆ.

ಹೊತ್ತೇರಿ ಬಂದರ, ಹಿತ್ತೂ ಲೊಂದ್ಯೆ ಸೀರಿ
ಹೊತ್ತೇರತೆಂವ ಹಸಮಗ । ಸೂರದೇವ
ಹೊತ್ತೇರಿದಾಗ ಬಲಗೊಂಬೆ ॥ ಕೋ ॥

ಸಂಜೀಲಿ ಬಂದರ, ಅಂಗಲೊಂದ್ಯೆಸೀರಿ
ತಿಂಗಳಿಗೊಮ್ಮೆ ಹಸಮಗ । ಚಂದ್ರಾಮ
ತುಂಬಿ ಬಂದಾಗ ಬಲಗೊಂಬೆ ॥ ಕೋ ॥

'ಹೊತ್ತೇರಿ ಬಂದರ, ಹಿತ್ತಲೊಂದ್ಯೆಸೀರಿ' ಎಂಬ ಮಾತು ಹೆಚ್ಚ ಸಮಂಜಸ ಕಾಣುತ್ತದೆ. ಮನೆಯ ಮುಂದಿನ ಅಂಗಳವು ಬಹುತರ ಬಯಲಾಗಿದ್ದು ಹಸನಿರುವುದು. ಅಲ್ಲಿ ಸೂರ್ಯಪ್ರಕಾಶವು ಬಿದ್ದು ಅದಕ್ಕೆ ಮತ್ತಷ್ಟು ಸೊಬಗು ಬರುವುದು ಸಹಜ. ಆದರೆ ಹಿತ್ತಲದಲ್ಲಿ ಗಿಡಗಳಿಂದಲೂ, ದೊಡ್ಡ ಗೋಡೆ ಮೊದಲಾದುವುಗಳಿಂದಲೂ ಮಬ್ಬಗತ್ತಲೆಯು ಸುರ್ಯೋದಯವಾದರೂ ಮೂಲೆ ಮೂಲೆಯಲ್ಲಿ ಸುಳಿದಾಡುತ್ತಿರುವುದು ಕಂಡುಬರುವುದು. ಹೊತ್ತೇರಿ ಬಂದಂತೆ ಈ ಕತ್ತಲೆಯು ಕರಗಿ ಹೋಗುವುದರಿಂದಲೂ, ಹೆಣ್ಣುಮಕ್ಕಳು ಸಾಮಾನ್ಯವಾಗಿ ಹಿತ್ತಲಲ್ಲಿಯೇ ಇದ್ದು ತಮ್ಮ ಕೆಲಸ ಬೊಗಸೆಗಳನ್ನು ಸಾಗಿಸುವುದರಿಂದಲೂ ಅಲ್ಲಿಯ ಹೆಣ್ಣುಮಕ್ಕಳು 'ಹಿತ್ತಲೊಂದ್ಯೆಸೀರಿ' ಎಂದು ಹಾಡುತ್ತಾರೆ. 'ಚಂದ್ರಾಮ । ತುಂಬಿ ಬಂದಾಗ ಬಲಗೊಂಬೆ' ॥ ಎಂದು ಹುಣ್ಣಿಮೆಯ ಚಂದ್ರನನ್ನೇ ಬಲಗೊಳ್ಳುತ್ತಾರೆ. ಈ ನಿಸರ್ಗ ದೇವತೆಗಳಿಗೆ ಅರ್ಪಿಸ ತಕ್ಕ ಪಾಲನ್ನು ಭಕ್ತಿಯಿಂದರ್ಪಿಸಿ ಸಂಪ್ರದಾಯ ದೇವತೆಗಳಿಗೂ, ಶಿವಶರಣ ಶರಣೆಯರಿಗೂ, ಗ್ರಾಮದೇವತೆಗಳಿಗೂ, ಪುರಾಣಗಳಲ್ಲಿ ಬಂದ ಮಹಾಪುರುಷ–ಸ್ತ್ರೀಯರಿಗೂ, ತಮ್ಮ ಕೃತಜ್ಞತೆಗಳನ್ನು ಪೂಜ್ಯಭಕ್ತಿಯಿಂದಲೂ ಆದರದಿಂದಲೂ ಅರ್ಪಿಸಿ ಹಾಡುತ್ತಾರೆ.

ಸಕಲ ಕಾರ್ಯಗಳಿಗೂ ವಿಘ್ನನಾಶಕನಾದ ವಿನಾಯಕನೂ[೧] ಇವರಿಗೆ ಸಂಪ್ರದಾಯ ದೇವನಾಗಿದ್ದಾನೆ. ಈ ವಿನಾಯಕನನ್ನು 'ಬೆನವ'ನೆಂದು ನಮ್ಮ ಹಳ್ಳಿಯ ಹೆಣ್ಣು ಮಕ್ಕಳು ಬಲಗೊಂಡಿದ್ದಾರೆ. ಅವನಿಗೆ ಅವರು ಒಯ್ಯುವುದು ಎಳ್ಳಿನುಂಡಿಯ ಪನಿವಾರ, ಕಡಲಿಯುಂಡಿಯ ಪನಿವಾರ; ಬೇಡಿಕೊಳ್ಳುವುದು ಎಳ್ಳಷ್ಟು ಮತಿಯ ಕೊಡು ಎಂದೂ, ಒಡನೊಂದು ನುಡಿಯ ಒಡಕೊಡು ಎಂದು. ಈ ಪದ್ಯಗಳನ್ನು ಹೇಳುವ ರೀತಿಯಲ್ಲಿ ಹಾಸ್ಯವೂ ಇಣಕಿ ಹಾಕುವುದು. ಮಹಾಕವಿಗಳಂತೆ ವಿದ್ಯಾದೇವತೆಯಾದ ಸರಸ್ವತಿಯನ್ನೂ ಇವರು ಹೊಗಳಿದ್ದಾರೆ. ಓದು ಬರಹವು ತಮಗೆ ಬರುವದಿಲ್ಲವೆಂದೂ 'ಗುರು' ತಮಗೆ ಕಲಿಸಲಿಲ್ಲವೆಂದೂ, ಲೆಕ್ಕಣಿಕೆಯು ತಮಗೆ ಗೊತ್ತಿಲ್ಲವೆಂದೂ ಹಾಡಿ ತಮ್ಮ ಅಸಹಾಯಸ್ಥಿತಿಯನ್ನು ವ್ಯಕ್ತಪಡಿಸಿದ್ದಾರೆ. ಕುಮಾರವ್ಯಾಸನು ತನ್ನ ಭಾರತದಲ್ಲಿ ಹೇಳಿದ 'ಹಲಗೆ ಬಳಪವ ಹಿಡಿಯದೊಂದಗ್ಗಳಿಕೆ' ಎಂಬ ಮಾತು ಜಾನಪದದಲ್ಲಿ ಎಂದೋ ಬಂದು ಹೋಗಿದೆ. 'ಹಲಗೀಯ ಹಿಡದಿಲ್ಲ, ಬಳಪದಿ ಬರದಿಲ್ಲ' ಎಂಬ ಮಾತು ಇದಕ್ಕಾಧಾರವಾಗಿ ನಿಲ್ಲಬಹುದು. ಕುಮಾರವ್ಯಾಸನು ಈ ಮಾತನ್ನು ತನ್ನ ಕಾವ್ಯಕ್ಕೆ ಜಾನಪದದಿಂದ ಎತ್ತಿಕೊಂಡಿರಬಹುದೇ? ಹಂಗಾಮ (ಸುಸುಮಯ)ವು ಗತಿಸಿಹೋದರೇನು? ಅವರು ಸರಸ್ವತಿಯನ್ನು ಮೊರೆಹೊಕ್ಕು ತಾವು ಹಾಡುವಾಗ ತಪ್ಪಿದನುಡಿಯ ಬರಕೊಡು ಎಂದೂ ಬಾರದ ನುಡಿಯ ಬರದು ಹೇಳೆಂದೂ ಗುರುಭಕ್ತಿಯಿಂದ ಬೇಡಿಕೊಂಡಿದ್ದಾರೆ. ಈ ಪದ್ಯಗಳಲ್ಲಿ ಓದು ಬರಹವು ಬಾರದೆ ವ್ಯಥೆಪಟ್ಟ ಧ್ವನಿಯೂ ಇದೆ. ಜನಪ್ರಿಯರಾದ ಶಿವಶರಣೆಯರಲ್ಲಿ ಅಕ್ಕಮ್ಮ (ಅಕ್ಕನಾಗಾಯಿ)ನನ್ನೂ ಅಕ್ಕ ಮಹಾದೇವಿಯನ್ನೂ ಭಕ್ತಿಯಿಂದ ಬಲಗೊಂಡು, ಗ್ರಾಮದೇವತೆಯಾದ ದ್ಯಾಮವನನ್ನೂ, ಏಳುಕೊಳ್ಳದ ದೇವತೆಯಾದ ಮಲ್ಲವ್ವನನ್ನೂ, ಗ್ರಾಮದೇವರನ್ನೂ ಬಲಗೊಳ್ಳುತ್ತಾರೆ.

ನಮ್ಮ ಹಳ್ಳಿಯ ಹೆಣ್ಣುಮಕ್ಕಳಲ್ಲಿ ರಾಮಾಯಣಕ್ಕಿಂತ ಮಹಾಭಾರತದಲ್ಲಿ ಹೆಚ್ಚು ಅಂಧಶ್ರದ್ಧೆ. ಮಹಾಭಾರತವು ಆದದ್ದು ಕೆಂಚಿ ದ್ರೌಪದಿಯಿಂದ ಎಂಬ ಮಾತನ್ನರಿತ ಅವರು ಅವಳಿಗೆ ಸಲ್ಲಬೇಕಾದ ಮಾನಮನ್ನಣೆಯನ್ನು ಯಥಾರ್ಥವಾಗಿ ಅರ್ಪಿಸಿದ್ದಾರೆ.

---

೧. ಭಾಗ ೨. 'ಐತಿಹಾಸಿಕ ಸಂಗತಿಗಳು', ಜಾನಪದ ಸಂಪ್ರದಾಯಗಳು, ನೋಡಿರಿ.

ಕಿಚ್ಚಿನಾಗ ಹುಟ್ಟತಾಳ, ಕಿಚ್ಚಿನಾಗ ಬೆಳೆಯತಾಳ
ಪಂಚಯ್ಯರಗೂಡ ಮನಸೂರಿ । ಪಾಂಡೂರ
ಕೆಂಚಿ ದುರುಪದಿ ಬಲಗೊಂಬೆ ॥

'ಕಿಚ್ಚಿ ನಾಗ ಹುಟ್ಟತಾಳ, ಕಿಚ್ಚಿನಾಗ ಬೆಳೆಯತಾಳ' ಎಂಬ ಮಾತುಗಳು ದ್ರೌಪದಿಯ ಜೀವನ ಚಿತ್ರವನ್ನು ನಿರರ್ಗಳವಾಗಿ ಚಿತ್ರಿಸುತ್ತವೆ. ಅವಳು ಹುಟ್ಟಿದ್ದು ಕಿಚ್ಚು, ಬೆಳೆದದ್ದು ಕಿಚ್ಚು ಎಂಬ ಜಾನಪದ ಗುಡಿಗಳು ಯಥೋಚಿತವಾಗಿ ಸಂದರ್ಭದೊಡನೆ ಅರ್ಥಗರ್ಭಿತವಾಗಿವೆ. ಹೀಗೆ ಅವಳಿದ್ದರೂ ಪಂಚಯ್ಯರಗೂಡ (ಪಂಚಪಾಂಡವರ ಕೂಡ) ತನ್ನ ಮನಸ್ಸನ್ನು ಸೂರಿ, ಬಂದದ್ದಕ್ಕೆ ಟೊಂಕ ಕಟ್ಟಿದ್ದಳೆಂದು ಧ್ವನಿತವಾಗುತ್ತದೆ. ಅಂತಹ ದ್ರೌಪದಿಯನ್ನು ಜನಪದವು ಬಲಗೊಳ್ಳದೇ ಬಿಟ್ಟೀತೇ? ಚಿತ್ರಾಂಗದೆಗೆ ಅವರು 'ಚದುರಂಗ ಕುಸುಮಾಲೆ'ಯರೆಂದು ಕರೆದಿದ್ದಾರೆ. ಈ ಚದುರಂಗ ಕುಸುಮಾಲೆಯರ ಸಂದು ಜಾನಪದ ಮಹಾಭಾರತದಲ್ಲಿ ಬಹಳ ರಸವತ್ತಾದ ಭಾಗವಾಗಿದೆ. ಅದನ್ನು ಮುಂದೆ ಚರ್ಚಿಸಲಾಗಿದೆ. ಪಾತಾಳಲೋಕದ ನಾಗಕನ್ನೆಯನ್ನೂ, ಕೃಷ್ಣನ ತಂಗಿ ಸೌಭದ್ರೆಯನ್ನೂ, ಬಾಲವೀರ ಅಭಿಮನ್ಯುನನ್ನೂ, ತಾಯಿ ಕುಂತೆವ್ವನನ್ನೂ, ಪಂಚಪಾಂಡವರನ್ನೂ ಬಲಗೊಂಡು, ಅವರು ಮಹಾಭಾರತದ ಪರಿವಿಡಿಯನ್ನೇ ಈ ಪದ್ಯಗಳಲ್ಲಿ ಕೊಟ್ಟಂತೆ ಕಂಡುಬರುವುದು. ಮಹಾಭಾರತ ಸೂತ್ರಧಾರ, ಕೃಷ್ಣನ ತಾಯಿ ದೇವಕ್ಕಿಯನ್ನೂ 'ಕುಂಕುಮದ ಹಣಿಯಾಕಿ, ಕೊಂಕಿದ ನಿರಗಿಯಾಕಿ । ನಿಂತಲ್ಲೇ ಮೊಸರ ಕಡೆವಾಕಿ' । ಎಂದು ಬಲುಮಾರ್ಮಿಕವಾಗಿ ಬಲಗೊಂಡಿದ್ದಾರೆ. 'ಹರನಿಲ್ಲದೆ ಹಾಡುವದುಂಟೇ,' 'ಗುರುವಿಲ್ಲದೆ ಓದುವದುಂಟೇ' ಎಂದು ಹಾಡುವ ನಮ್ಮ ಹಳ್ಳಿಗರು, ಹರಭಕ್ತರೂ ಅಹುದು ಗುರುಭಕ್ತರೂ ಅಹುದು. 'ಹರನೆನೀ ಕೇಳಯ್ಯ, ಗಗನಕ ನಿಚ್ಚಣಿಕುಂಟೆ,' 'ಹಗಲು ಸೂರ್ಯನಿಗೆ ತಳಿಗುಂಟೆ,' ಎಂದು ನಿಸರ್ಗನಿಯಮವನ್ನು ಹೇಳಿ ಶರಣರ ಹಾಡುಗಳನ್ನೂ, ಸತ್ತಿಕರ ಹಾಡುಗಳನ್ನೂ ಹಾಡಲು ಕತ್ತಲೆಯಾದರೇನು? ಬೆಳಗಾದರೇನು? ಹಾಡುವೆವೆಂದು ತಮ್ಮ ಭಕ್ತಿಯ ಹುಮ್ಮಸವನ್ನು ಹೊರಹೊಮ್ಮಿಸಿದ್ದಾರೆ. ಹೀಗೆ ತಮ್ಮ ಮನೋಗತವನ್ನು ತಮ್ಮ ಹಾಡಿನಲ್ಲಿ ವ್ಯಕ್ತಗೊಳಿಸಿ, ನಯವನ್ನು ಸುತ್ತಲೂ ಹೊರಸೂಸಿದ್ದಾರೆ. ಈ ಬಲಗೊಳ್ಳುವ ಸಂದು ಕೊನೆಯಾಗುವ ಮುನ್ನ, ಕುಂಕುಮವನ್ನು ಕೊಡುವ ಮುತ್ತೆಯ್ದೆಯರಿಗೆ ಮುತ್ತೆಯ್ದೆತನವು ಘನವಿರಲಿ ಎಂದೂ, ವಿಭೂತಿಯನ್ನು ಕೊಡುವವರಿಗೆ ಮುತ್ತಿನ ಮಾರಗವು ದೊರೆಯಲೆಂದೂ ಹಾಡಿನಲ್ಲಿ ಹಾರೈಸುತ್ತಾರೆ. (ಇಲ್ಲಿ ಬರುವ ಈ ಎಲ್ಲ ರೀತಿನೀತಿಗಳು ವೀರಶೈವ ಸಂಸ್ಕೃತಿಯ ಸಂಸ್ಕಾರಗಳು) ಸಂದು ಮುಗಿಯಿತೆಂದು ಸೂಚಿಸಲು–

ಇಲ್ಲಿಗೆ ಹರಹರ, ಇಲ್ಲಿಗೆ ಶಿವಶಿವ
ಇಲ್ಲಿಗೆ ಸಂದು ಪದ ಮುಂದೊ । ಕೋ । ಅವ್ವಗಳಿರಾ
ಮುಂದಿನ ಸಂದ ಹಾಡೇವ ॥ಕೋ॥

ಎಂದು ಈ ಪದ್ಯವನ್ನು ಪ್ರತಿಸಂದು ಮುಗಿಯಲು ಎತ್ತಿ ಮುಂದಿನ ಸಂದನ್ನು ಹಾಡುವರು. ಅಷ್ಟಕ್ಕೆ ಮುಗಿಸುವ ಮನಸಿದ್ದರೆ

ಇಲ್ಲಿಗೆ ಹರಹರ, ಇಲ್ಲಿಗೆ ಶಿವ ಶಿವ
ಇಲ್ಲಿಗೆ ಸಂದು ಪದ ಮುಂದೊ । ತಾಯ್ಗಳಿರಾ
ನಾಳಿಗೆ ಬಂದರ ಹಾಡೇವ ॥ ಕೋ ॥

ಎಂದು ಹಾಡಿ ಆ ದಿನ ಪೂರ್ತಿಗೆ ತಮ್ಮ ಹಾಡನ್ನು ನಿಲ್ಲಿಸುವರು.

ಶಿವಶರಣರ ಕಥನ ಕವನಗಳಿಗೆ ಪ್ರಾರಂಭದಲ್ಲಿ ಹಾಡುವ 'ಬಲಗೊಳ್ಳುವ ಸಂದು,' ಬೇರೆ ಇರುವುದು. ಇಲ್ಲಿ ವೀರಶೈವ ಧರ್ಮವು ಪ್ರತಿ ಪದ್ಯದಲ್ಲಿಯೂ ತಲೆಯೆತ್ತಿ ನಿಂತದ್ದು ಕಂಡುಬರುವುದು. ಶಿವಶರಣರ ಹಿರಿಮೆ, ಅವರ ಸಂಚಾರ, ಪ್ರಸಿದ್ಧ ದೇವರ ಸ್ತುತಿ, ಮೊದಲಾದುವುಗಳು ಈ ಬಲಗೊಳ್ಳುವ ನುಡಿಗಳಲ್ಲಿ ಅಡಕವಾದ ಸಂಗತಿಗಳಾಗಿವೆ.

ಶಿವಶರಣರ ಹಾಡುಗಳಿಗೆ ಬಲಗೊಳ್ಳುವ ಸಂದು

ಶಿವಲಿಂಗವೆನ್ನಿರಿ, ಶಿವಲಿಂಗವೆನ್ನಿರಿ
ಶಿವಲಿಂಗ ಕೊಮ್ಮೆ ಶಿವಗೊಮ್ಮೆ । ಸೋಬಾನವ ॥ ಪ ॥

ಶ್ರೀ ಗುರುವೆ ನಾನಿಮ್ಮ, ಪದಕ್ಕೆ ಎರಗುವೆನು,
ಕೊಡುಎನಗೆ ಭೂಲೋಕ ಮತಿಗಳ ॥ ಸೋ ॥ ॥೧॥

ಮತಿಯ ಕೊಡೊಗುರುವೆ, ಮನವ ಕೊಡೊಗುರುವೆ
ಕಥೆಯ ಮುಂದಕ ಪೊಗಳೇವು ॥ ಸೋ ॥ ॥೨॥

ಶರಣರ ಶಿವಗಥೆಯ, ವರಣಿಸಿ ಹಾಡಿದರ
ಗತಿಯ ಹೊಂದಿಸೊ ಬಸವಣ್ಣ ॥ ಸೋ ॥ ॥೩॥

ಶಿವಶಿವ ಎನ್ನಿರೆ, ಶಿವನೆಂದು ಪಾಡಿರೆ
ಶಿವನೆ ಸಂಗಮ ಶರಣರಿಗೆ ॥ ಸೋ ॥ ॥೪॥

ಮುಂಚೊಮ್ಮೆ ಬಲಗೊಂಬೆ, ಪಂಚಮುಖದಯ್ಯನ
ಕಾಂಚನ ಕೈಲಾಸ ದೊಡೆಯನ । ಪರಶಿವನ
ಕೆಂಚಿ ಗೌರವ್ವ ಅರಸರನ ॥ ಕೋ ॥ ॥೫॥

ಮೊದಲಿಗೆ ಬಲಗೊಂಬೆ, ಚದುರ ನನ್ನಯ್ಯನ
ಹದಿನಾರು ಭುಜವ ಶಿರವೆಂಟು । ಕೈಲಾಸ
ಚದುರಿ ಗಂಗವ್ವ ಅರಸರನ ॥೬॥

ನನ್ನಯ್ಯ ಹರಶಿವನೆ, ಪನ್ನಂಗ ಧರಶಿವನೆ
ಮೂರು ಲೋಕಾಳು ಕರತಯ್ಯ । ಕೈಲಾಸ
ನನ್ನಯ್ಯ ಹರನ ಬಲಗೊಂಬೆ ॥೭॥

ಸೊಂಡೀಯ ಬೆನವsನ, ಸುತ್ತ ಮಾರ್ತಂಡನ
ಕೋದಂಡ ನಾಯಕ ತನೂಜನ । ಗೌರಿಕಂದ
ಇಂದೀನ ಸೋಬಾನಕ ಬಲಗೊಂಬೆ ॥೮॥

ಹತ್ತು ಮಾರುದ್ದಿರುವ, ಹೊತ್ತಿಗೆಯ ತಕ್ಕೊಂಡು
ಎತ್ತಿಹಾಡುವೆವು ಮೊದಲಿಂದ । ಸರಸಮ್ಮ
ಚಿತ್ತ ತಪ್ಪಿದರ ಬರದ್ದೇಳ ॥೯॥

ಅತ್ತ ಘನಲಿಂಗ, ಇತ್ತ ಮನಲಿಂಗ
ಬಾಯೊಳಗ ನಮಗ ಬಸವಣ್ಣ । ಅವ್ವಗಳಿರಾ
ತಪ್ಪಿದ ನುಡಿಗೆ ನಗಬ್ಯಾಡಿರೆ ॥೧೦॥

ಅತ್ತ ಕೇದಾರಲಿಂಗ, ಇತ್ತ ಪರವುತಲಿಂಗ
ಮನದೊಳಗೆ ನಮಗ ಮುಕ್ಕಣ್ಣ । ತಾಯ್ಗಳಿರಾ
ಲೆಕ್ಕಣಿಕಿ ಹಿಡಿದು ಬರೆದಿಲ್ಲ ॥೧೧॥

ಹಾಂಗ ಘನಲಿಂಗ, ಹೀಂಗ ಮನಲಿಂಗ
ನಾಲೀಗೆ ಮ್ಯಾಲೆ ಮಾರುದ್ರ । ಅಕ್ಕಗಳಿರಾ
ಮರತಂತ ನುಡಿಗೆ ನಗಬ್ಯಾಡ್ರೆ ॥೧೨॥

ಇಂಗು ಬೆಳವದುನಾಡು, ತೆಂಗುಬೆಳವದು ನಾಡು
ಬಂಗಾರ ಬೆಳೆವದು ಮಲೆನಾಡು । ತಂಪೀಲೆ
ಸಂಗಮ ಶರಣರು ನೆಲಿಸ್ಯಾರ ॥೧೩॥

ಉಪ್ಪು ಬೆಳೆವದು ನಾಡು, ಸೊಪ್ಪು ಬೆಳೆವದು ನಾಡು
ಉತ್ತತ್ತಿ ಬೆಳೆವದು ಮಲೆನಾಡು । ತಂಪೀಲೆ
ಅಕ್ಕವ್ವ ಮಗ ನೆಲಸ್ಯಾರ ॥೧೪॥

ಅಲ್ಲ ಬೆಳೆವದು ನಾಡು, ಬೆಲ್ಲ ಬೆಳೆವದುನಾಡು
ಎಲ್ಲ ಬೆಳೆವದು ಮಲೆನಾಡು । ತಂಪೀಲೆ
ಚೆನ್ನಬಸವಣ್ಣ ನೆಲಸ್ಯಾರ ॥೧೫॥

ಗಂಗಿನಾಥಗ ಶರಣು, ಬಿಂಗಿ ಪ್ರೇಮಿಗೆ ಶರಣು
ಸಂಗಮ ಶರಣೊ ಶರಣರಿಗೆ । ಮಾಡುತಲಿ
ಮುಂದೊಂದು ಗಂಟೆ ನುಡಿಸೇವೊ ॥೧೬॥

ಅಪ್ಪನ ಬಲಗೊಂಬೆ, ಅಪ್ಪಯ್ಯನ್ನ ಬಲಗೊಂಬೆ
ಕಪ್ಪಡಿಸಂಗನ ಬಲಗೊಂಬೆ । ಮರತೇಕ
ಮಕ್ಕಳ ಕೊಟ್ಟವ್ನ ಬಲಗೊಂಬೆ ॥೧೭॥

ಅಣ್ಣನ ಬಲಗೊಂಬೆ, ಅಣ್ಣಯ್ನ ಬಲಗೊಂಬೆ
ಕಿನ್ನರಿ ಬೊಮ್ಮಯ್ನ್ನ ಬಲಗೊಂಬೆ । ಲೋಕಕ
ಕಣ್ಣ ಕೊಟ್ಟವ್ನ ಬಲಗೊಂಬೆ ॥೧೮॥

ಸೊಗಲಾದ ಗುಡ್ಡಕ, ಮಿಗಿಲಾದ ಶರಣರು
ಗಗನಗತಿಯೆಂಬ ಗವಿಯಾಗ । ಸೊಗಲಾದ
ಸೋಮಯ್ಯ ನಿನ್ನ ಬಲಗೊಂಬೆ ॥೧೯॥

ಸಂದೀಗಿ ಕುಂಕುಮ, ಕೊಟ್ಟ ಹಡದವ್ವಗ
ಮುತ್ತೈದಿ ತನ ಘನವಿರಲಿ । ಕೆರೂರ
ಸಾವಳಗೇಶನ ದಯವಿರಲಿ ॥೨೦॥

ಸಂದೀಗಿ ವಿಭೂತಿ, ಕೊಟ್ಟ ಹಡದವ್ವಗ
ಮುತ್ತೀನ ಮಾರಗ ದೊರೆಯಾಲಿ । ಕೆರೂರ
ಸಾವಳಗೇಶನ ದಯವಿರಲಿ ॥೨೧॥

ಇಲ್ಲಿಗೆ ಹರಹರ, ಇಲ್ಲಿಗೆ ಶಿವಶಿವ
ಇಲ್ಲಿಗೆ ಸಂದುಪದ ಮುಂದೊ । ಅವ್ವಗಳಿರಾ
ಮುಂದೀನ ಸಂದು ಹಾಡೇವ ॥೨೨॥

ಶಿವಶರಣರ ದೊಡ್ಡ ಹಾಡುಗಳಿಗೆ ಬಲಗೊಳ್ಳುವ ಸಂದಿನಲ್ಲಿ ಬರುವ ಈ ಪದ್ಯಗಳು ಕರ್ನಾಟಕ ವೀರಶೈವ ಹಳ್ಳಿಯ ಹೆಣ್ಣುಮಕ್ಕಳ ಒಂದು ಉಚ್ಚ ಸಂಸ್ಕೃತಿಯನ್ನು ತೋರಿಸದಿರವು. ಬಲಗೊಳ್ಳುವ ಸಂದು 'ಶಿವಲಿಂಗವೆನ್ನಿರೆ ಶಿವಲಿಂಗವೆನ್ನಿರೆ । ಶಿವಲಿಂಗಗೊಮ್ಮೆ ಶಿವಗೊಮ್ಮೆ" ॥ ಎಂಬ ಎತ್ತುವ ಶಿವಪಲ್ಲವಿಯಿಂದ ಸುರುವಾಗುವುದು. ವೀರಶೈವ ಅಷ್ಟಾವರಣಗಳಲ್ಲಿ 'ಗುರುವಿನ ಮಹತ್ವವನ್ನರಿತ ಈ ಹೆಣ್ಣುಮಕ್ಕಳು ಶಿವಶರಣರನ್ನು, ಹಾಡಲು ಮತಿಯನ್ನೂ, ಮನವನ್ನೂ ಕೊಡಿರೆಂದು ಗುರುವಿಗೆ ಬೇಡಿಕೊಂಡು, ಶರಣರ ಶಿವಗಥೆಯನ್ನು ಬಣ್ಣಿಸಿ ಹಾಡಲು ಬಸವಣ್ಣನೇ ಗತಿಯ ಹೊಂದಿಸೆಂದು ಭಕ್ತಿಯಿಂದ ಕೇಳಿಕೊಂಡು ಶಿವನನ್ನು ಬಲಗೊಳ್ಳಲುದ್ಯುಕ್ತರಾಗಿದ್ದಾರೆ. ಪಂಚಮುಖದಯ್ಯ, ಕಾಂಚನ ಕೈಲಾಸದೊಡೆಯ, ಕೆಂಚಿ ಗೌರವ್ವನ ಅರಸನೆಂದೂ, ಹದಿನಾರು ಭುಜ, ಎಂಟು ಶಿರವುಳ್ಳವನು ಚದುರಿ ಗಂಗವ್ವನ ಅರಸನೆಂದೂ, ಮೂಲೋಕವಾಳುವ ಕರ್ತಾರು, ಪನ್ನಂಗಧರ ಶಿವನೆಂದೂ ಪರಶಿವನಿಗೆ ಕರೆದು ಬಲಗೊಂಡಿದ್ದಾರೆ. ಈ ಹಾಡುಗಳಲ್ಲಿ ಅವರು ಪ್ರಾಶಸ್ತ್ಯ ಕೊಟ್ಟದ್ದು ಶಿವನಿಗೆ ಮೊದಲು. ಸಂಪ್ರದಾಯದಂತೆ ವಿಘ್ನೇಶನನ್ನು, ಸೊಂಡಿಯ ಬೆನವನೆಂದು ಕರೆದು ಇಂದಿನ ಸೋಬಾನಕ್ಕೆ ಬರಬೇಕೆಂದು ಆಮಂತ್ರಿಸುತ್ತಾರೆ. ವಿದ್ಯಾದೇವತೆಯಾದ ಸರಸ್ವತಿಗೆ 'ಹತ್ತು ಮಾರುದ್ದಿರುವ, ಹೊತ್ತಿಗೆಯ ತಕ್ಕೊಂಡು ಎತ್ತಿ ಹಾಡುವೆವು ಮೊದಲಿಂದ" ॥ ಎಂದು ತಾವು ಹಾಡುವ ಹಾಡಿನ ಪರಿಮಾನವನ್ನು ಹೇಳಿ 'ಚಿತ್ತ ತಪ್ಪಿದರ ಬರದ್ಹೇಳ" ಎಂದು ಬೇಡಿಕೊಂಡಿದ್ದಾರೆ. ಮೇಲೆ ಹೇಳಿದ ಈ ನುಡಿಗಳು, ಹೆಣ್ಣುಮಕ್ಕಳು ಶಿವಶರಣರ ಕಥೆಗಳನ್ನು ಬರೆದಿಟ್ಟ ದೊಡ್ಡ ಹೊತ್ತಿಗೆಗಳನ್ನು ತಕ್ಕೊಂಡು ಎತ್ತಿ ಹಾಡುತ್ತಿದ್ದರೆಂದು ಹೇಳುವುದರಿಂದ ಜಾನಪದದಲ್ಲಿ ಬರುವ ಶಿವಶರಣರ ಹಾಡುಗಥೆಗಳು ಮೊದಲು ಗ್ರಂಥಸ್ಥವಾಗಿರಬೇಕು. ಈಗಲೂ ಹೆಣ್ಣುಮಕ್ಕಳು ಈ ಹಾಡುಗಳನ್ನು ಕನ್ನಡದ ಅನೇಕ ಛಂದಗಳಲ್ಲಿ ಹಾಡುವುದರಿಂದ ನೃಪತುಂಗನು ತನ್ನ ಕವಿರಾಜ ಮಾರ್ಗದಲ್ಲಿ ಹೇಳಿದ 'ಚಿತ್ತಾಣ,' 'ಬೆದಂಡೆ' ಗಬ್ಬಗಳೇ ಈ ಹಾಡುಗಳಿರಬೇಕೇನೊ? ಗ್ರಂಥಸ್ತವಾಗಿ ಉಳಿದು ಬಂದ ಚೆನ್ನಪ್ಪ ಕವಿಯ ಮಹಾಗ್ರಂಥವಾದ 'ಶರಣ ಲೀಲಾಮೃತವು' ಈ ತರದ ಕಾವ್ಯವೆಂದೇ ಹೇಳಬಹುದು. ಇದರ ಮೇಲಿಂದ ಶಿವಶರಣರ ಹಾಡುಗಳನ್ನು ಮೊದಲು ಒಬ್ಬ ಅನುಭಾವಿ ಹಳ್ಳಿಯ ಕಬ್ಬಿಗನು ರಚಿಸಿ ಹಾಡುತ್ತಿರಬಹುದು.[೨] ಆ ಹಾಡುಗಳನ್ನು ಕೇಳಿಕೊಂಡು ಜನರು ತಮಗೆ ಬೇಕಾದಾಗ ಹಾಡುತ್ತ ಬಂದಿರಬಹುದು. ಕವಿಯು ಓದು ಬರಹವನ್ನು ಕಲಿತವನಾಗಿದ್ದರೆ ಆ ಹಾಡುಗಳು ಗ್ರಂಥಸ್ಥವಾಗಿರಬೇಕು. ಅಂತೆಯೇ 'ಹತ್ತು ಮಾರುದ್ದಿರುವ ಹೊತ್ತಿಗೆಯ ತಕ್ಕೊಂಡು' ಹಾಡುವೆವೆಂದು ಹಾಡಿನಲ್ಲಿ ಬಂದಿದೆ. ಗ್ರಂಥಸ್ಥವಾಗದೆ ಇಂತಹ ಹಾಡುಗಳು ಎಷ್ಟು ಕಣ್ಮರೆಯಾಗಿ ಹೋಗಿವೆಯೊ ಆರುಬಲ್ಲರು? ಮುಂದೆ ಈ ಹಾಡುಗಳು ಓದುಬರಹವನ್ನರಿಯದ ನಮ್ಮ ಹೆಣ್ಣುಮಕ್ಕಳ ಬಾಯೊಳಗೆ ಅಶುದ್ಧವಾಗಿ ಬಂದಿವೆ. ಬಲಗೊಳ್ಳುವ ಸಂದುಗಳನ್ನು ಪರಿಶೀಲಿಸಿ ನೋಡಿದರೆ ಅವು ಹೆಚ್ಚು ಶುದ್ಧವಾಗಿಯೇ ಕಂಡುಬರುವುವು. ಬಹುತರ ಎಲ್ಲ ಭಾಗಗಳಲ್ಲಿಯ ಹೆಣ್ಣುಮಕ್ಕಳು ಈ ಪದ್ಯಗಳನ್ನು ಮೊದಲಿನ ಗ್ರಂಥಸ್ಥ ಹಾಡುಗಳಿಂದ ಬಾಯಿಪಠನ ಮಾಡಿಕೊಂಡು ಬಾಯಿಂದ ಬಾಯಿಗೆ ಕಲಿಸುತ್ತ ಬಂದುದರಿಂದ ಅವು ಹೆಚ್ಚು ಕಡಿಮೆ ಮೂಲರೂಪದಲ್ಲಿಯೇ ಉಳಿದಿರಬಹುದೆಂದು ಹೇಳಬಹುದು. ಅಲ್ಲದೆ ಕೆಲವು ಹಳ್ಳಿಗಳಲ್ಲಿ ಹೆಣ್ಣುಮಕ್ಕಳು ಈಗಲೂ ಈ ಹಾಡುಗಳನ್ನು ಅತಿ ಶುದ್ಧ ರೀತಿಯಲ್ಲಿಯೇ ಹಾಡುವುದನ್ನು ಕೇಳಿ ಮನಗಾಣಬಹುದು.

ಅಷ್ಟಾವರಣದಲ್ಲಿ 'ಲಿಂಗ'ವೂ ಒಂದಾಗಿದೆ. ವೀರಶೈವರಿಗೆ 'ಲಿಂಗವು' ಪರಶಿವನ ಪರಮ ಚಿತ್ಕಳೆಯು. ಅಂಥ ಲಿಂಗದ ಆಶೀರ್ವಾದವು ತಮಗುಂಟೆಂದೂ, ನಾಲಿಗೆಯ ಮೇಲೆ ಸದಾ ಬಸವಣ್ಣ, ಮುಕ್ಕಣ್ಣ, ಮಹಾರುದ್ರರು ನಲಿದಾಡುತ್ತಿರುವುದರಿಂದ ಹಾಡಿನಲ್ಲಿ ತಪ್ಪಿದ ನುಡಿಗಾಗಲಿ, ಮರೆತನುಡಿಗಾಗಲಿ ನಗಬೇಡಿರೆಂದು ಕೂಡಿದವರಿಗೆ ಕೇಳಿಕೊಳ್ಳುತ್ತಾರೆ. ಓದುಬರಹವನ್ನು ಕಲಿಯದ್ದರಿಂದ ಲೆಕ್ಕಣಿಕೆಯು ತಮಗೆ ಗೊತ್ತಿಲ್ಲವೆಂದೇ ತಪ್ಪಿದ್ದನ್ನು ತೋಡಿಕೊಳ್ಳುತ್ತಾರೆ.

ವೀರಶೈವರ ಷಟ್‌ಸ್ಥಲ ಸಿದ್ಧಾಂತವು ಪರಿಪೂರ್ಣವಾದ ತತ್ವಸಿದ್ಧಾಂತ ಗ್ರಂಥ. ಶರಣಸ್ಥಲವು ಅದರಲ್ಲಿ ಒಂದಾಗಿದೆ. ಶಿವಶರಣರು ಶರಣಸ್ಥಲದಿಂದ ಪ್ರಪಂಚವನ್ನು ಗೆದ್ದು ಐಕ್ಯಸ್ಥಳವನ್ನು ಹೊಂದಿದವರಾಗಿದ್ದಾರೆ. ಇಂಥ ಶಿವಶರಣರನ್ನು ಜನಪದವು ಮರೆಯಬಹುದೇ? ಬಹುತರ ಶಿವಶರಣರ ಎಲ್ಲ ದೊಡ್ಡ ಹಾಡುಗಳಲ್ಲಿ ಅವರಿಗೆ ಜನಪದವು ಉಚಿತ ಸ್ಥಾನವನ್ನು ಭಕ್ತಿಯಿಂದ ಕೊಟ್ಟಿದೆ. ಬಸವಾದಿ ಪ್ರಮಥರಿಗೆ

೨. ಇದಕ್ಕೆ ಜಾನಪದ ಕವಿ 'ಸಾವಳಗೇಶ್ವರ'ನು ರಚಿಸಿ ಹಾಡಿದ ಶಿವಶರಣರ ಹಂತಿಯ ಹಾಡುಗಳೇ ಸಾಕ್ಷಿ.

ಜನಪದವು 'ಸಂಗಮ ಶರಣ'ರೆಂದು ಕರೆದಿದೆ. ಕಲ್ಯಾಣ ಕ್ರಾಂತಿ ಯಾದನಂತರ ಕದಲಿದ ಶರಣರು ಪ್ರಶಾಂತವಾದ ಉಳುವಿಯ ಮಹಾರಣ್ಯವನ್ನು ಸೇರಿ ಅಲ್ಲಿ ನೆಲೆಸಿದ್ದನ್ನು ಕೇಳಿದ ಜನಪದವು ಆ ನಾಡನ್ನು ಗುರುತಿಸಿ ತಂಪುಳ್ಳ ನಾಡು ಮಲೆನಾಡೆಂದು ಹಾಡಿದೆ.

ಇಂಗು ಬೆಳೆವದು ನಾಡು, ಟೆಂಗು ಬೆಳೆವದು ನಾಡು
ಬಂಗಾರ ಬೆಳೆವದು ಮಲೆನಾಡು । ತಂಪೀಲೆ
ಸಂಗಮ ಶರಣರು ನೆಲಸ್ಯಾರ ॥ ಸೋ ॥

ಈ ಪದ್ಯದಲ್ಲಿ ಶಿವಶರಣರ ದೊಡ್ಡ ಬಳಗವೇ ಇಂಗು, ಟೆಂಗು, ಬಂಗಾರ ಬೆಳೆಯುವ ಮಲೆನಾಡ ತಂಪಿನಲ್ಲಿ ನೆಲೆಸಿತೆಂದು ಹಾಡಿದ್ದಾರೆ.

ಉಪ್ಪು ಬೆಳೆವದು ನಾಡು, ಸೊಪ್ಪು ಬೆಳೆವದು ನಾಡು
ಉತ್ತತ್ತಿ ಬೆಳೆವದು ಮಲೆನಾಡು । ತಂಪೀಲೆ
ಅಕ್ಕವ್ವ ಮಗ ನೆಲಸ್ಯಾರೊ ॥ ಸು ॥
ಅಲ್ಲ ಬೆಳೆವದು ನಾಡು, ಬೆಲ್ಲ ಬಳೆವದು ನಾಡು
ಎಲ್ಲ ಬೆಳೆವದು ಮಲೆನಾಡು । ತಂಪೀಲೆ
ಚೆನ್ನಬಸವಣ್ಣ ನೆಲಸ್ಯಾರ ॥ ಸು ॥

ಅಕ್ಕವ್ವ ಮಗ (ಅಕ್ಕನಾಗಮ್ಮನ ಮಗ), ಚೆನ್ನಬಸವಣ್ಣನು ಬಿಜ್ಜಳನ ದಂಡಾಧಿಪನಾಗಿದ್ದನು. ಕಲ್ಯಾಣ ಕ್ರಾಂತಿಯಾದ ನಂತರ ಅವನ ಆಶ್ರಯದಲ್ಲಿ ಶಿವಶರಣರು ಮಲೆನಾಡಿಗೆ ಬಂದು ನೆಲೆಸಿದರೆಂದು ಈ ಪದ್ಯಗಳಿಂದ ವಿಶದವಾಗುತ್ತಿದೆ. ಶಿವಶರಣರ ಇತಿಹಾಸವೂ ಇದಕ್ಕೆ ಪುಷ್ಟಿಯನ್ನು ಕೊಡುವುದು. ಈ ಮಲೆನಾಡಿನ ಭಾಗವೆಂದರೆ ಈಗ ವೀರಶೈವರಿಗೆ ಪುಣ್ಯಕ್ಷೇತ್ರವಾದ ಉಳಿವೆಯು. ಉಳಿವೆಯಲ್ಲಿ ಚೆನ್ನಬಸವಣ್ಣಾದಿಗಳ ಸಮಾಧಿಗಳಿರುವುವು. ಈ ಮೂರು ಪದ್ಯಗಳಲ್ಲಿ ಮಲೆನಾಡಿನ ವರ್ಣನೆಯು ಬಲು ಸ್ವಾರಸ್ಯವಾಗಿ ಬಂದಿದೆ. ಪದ್ಯಗಳ ಲಾಲತ್ಯವು ವರ್ಣನೆಯೊಂದಿಗೆ ಇಂಪಾಗಿದೆ. ಈ ಮೂರೂ ಪದ್ಯಗಳು ಹಲಕೆಲವು ಐತಿಹಾಸಿಕ ಸಂಗತಿಗಳನ್ನು ಹೇಳುವುದರಿಂದಲೂ, ಸಮಂಜಸವಾದ ಮಲೆನಾಡ ಸೌಂದರ್ಯವನ್ನು ಬಣ್ಣಿಸುವುದರಿಂದಲೂ ಮಹತ್ವವಾದುವುಗಳೆಂದು ಹೇಳಬಹುದು. ಮತ್ತೊಮ್ಮೆ ಶಿವನನ್ನು ಬಲಗೊಂಡು ಶಿವಶರಣರಿಗೆ ಅಣ್ಣನೆಂದು ಕರೆಯಲ್ಪಡುವ ಕಿನ್ನರಿ ಬೊಮ್ಮಯ್ಯನನ್ನೂ, ಕಣ್ಣು ಮೊದಲಾದುವುಗಳನ್ನು ಕೊಟ್ಟು ಪವಾಡ ತೋರಿಸಿದ ಶಿವಶರಣರನ್ನೂ ಬಲಗೊಂಡಿದ್ದಾರೆ. ನಂತರ ಮಕ್ಕಳಿಲ್ಲದವರಿಗೆ ಮಕ್ಕಳ ಕೊಟ್ಟ ಕಪ್ಪಡಿ ಸಂಗಯ್ಯನನ್ನೂ, ನಿರಾಶ್ರಿತರಾದ ಶಿವಶರಣರಿಗೆ ಆಶ್ರಯಕೊಟ್ಟ ಸೊಗಲದ ಸೋಮೇಶ್ವರನನ್ನು ಬಲಗೊಂಡು ಬಲಗೊಳ್ಳುವ ಸಂದನ್ನು ಮುಗಿಸುತ್ತಾರೆ. ಕೊನೆಗೆ ಎತ್ತುವ ಮೂರು ಪದ್ಯಗಳು ಲೌಕಿಕ ಹಾಡುಗಳಿಗೆ ಬಲಗೊಳ್ಳುವ ಸಂದಿನಲ್ಲಿಯೂ ಬಂದಿವೆ. ಹಿಂದೆ ಅವುಗಳ ಸಂಬಂಧ ಈಗಾಗಲೆ ಹೇಳಲಾಗಿದೆ.

ಶೂರ ಪುರುಷರ ಹಾಡುಗಳನ್ನು ಹಾಡುವುದು ಉತ್ತರ ಕರ್ನಾಟಕದಲ್ಲಿ ಬೆಳುವಲಕ್ಕಿಂತ ಮಲೆನಾಡ ಸೆರಗಿನಲ್ಲಿಯೂ, ಗಡಿನಾಡಗಳಲ್ಲಿಯೂ ಹೆಚ್ಚೆಂದು ಕಂಡುಬರುವುದು. ಈ ಹಾಡುಗಳು ಹೆಚ್ಚಾಗಿ ಕೋಲುಪದಗಳಿದ್ದು ಕಿತ್ತೂರ ರಾಜಮನೆತನದ ವೀರಪುರುಷರ ಚರಿತೆಗಳಾಗಿರುವುವು. ಈ ಕೋಲುಪದಗಳ ಒಂದು ದೊಡ್ಡ ಸಂಕಲನವನ್ನು ಬೈಲಹೊಂಗಲದ ಶ್ರೀ ಭಾವಪ್ಪ ಮೂಗಿ ಅವರು ಮಾಡಿರುವರು. ಈ ಕೋಲು ಪದಗಳನ್ನು ಹೆಚ್ಚಾಗಿ ಹೆಣ್ಣು ಮಕ್ಕಳೂ, ದುಂದುಮಿಗಳನ್ನು ಗಂಡು ಮಕ್ಕಳೂ ಬಲು ಹುಮ್ಮಸದಿಂದ ಹಾಡುತ್ತಾರೆ. ಹೀಗೆ ಹಾಡುವುದನ್ನು ಬೈಲಹೊಂಗಲ, ಮುರಗೋಡ, ಕಿತ್ತೂರು, ಸಂಪಗಾವಿಗಳಲ್ಲಿಯೂ ಸುತ್ತಮುತ್ತಲಿನ 'ದೊಡವಾಡ' ಮೊದಲಾದ ಚಿಕ್ಕಹಳ್ಳಿಗಳಲ್ಲಿಯೂ ಈಗಲೂ ಪ್ರತ್ಯಕ್ಷ ಕೇಳಬಹುದು.

ವೀರರ ಹಾಡುಗಳಿಗೆ ಬಲಗೊಳ್ಳುವ ಸಂದು

ಅಂದಗಿರಿ ಮಂದಗಿರಿ, ಮಂದ ಮದ್ದಾನಿಗಿರಿ
ಮಾದೇವರಿರುವದು ಕೈಲಾಸ ॥ ಸೋ ॥ ॥೧॥

ಅಚ್ಚಗಿರಿ ಪಚ್ಚಗಿರಿ, ಪಚ್ಚ ಪರಿಮಳ ಗಿರಿ
ಪಾಂಡವರಿರುವದು ಕವಲೂರ ॥ ಸೂ ॥ ॥೨॥

ಬಡ್ಡಿಗೆ ಬಲಗೊಂಬೆ, ದೊಡ್ಡತಲೆ ಅಯ್ಯನ
ಒಡ್ಡೋಲಗದ ಒಡೆಯಾನ । ಕೈಲಾಸ
ಬುದ್ಧಿ ಸಿದ್ಧೀಯ ಅರಸನ ॥೩॥

ತಾಯಿ ಪಾರ್ವತಿ ಮಗನು, ಚಿಕ್ಕವನು ಗಣನಾಥ
ನೆಪ್ಪಿಟ್ಟು ನಿನ್ನ ನೆನದೇನೊ । ಬೆನಕಯ್ಯ
ತಪ್ಪಿದಲ್ಲೆನಗ ಬೆಸನಾಗೊ ॥೪॥

ಮಲ್ಲೀಗೆ ಹೂಗಳ, ಜಲ್ಲಿಲೆ ಮುಡಿಯೂರ
ಗಲ್ಲಗಲ್ಲಂತ ಇರವೂರ । ಹಟ್ಟಿಹೊಳಿ
ವೀರಣ್ಣ ನಿನ್ನ ಬಲಗೊಂಬೆ ॥೫॥

ಹಟ್ಟಿಹೊಳಿ ವೀರಾನ, ಹಂತೆಲ್ಧರಿಯುವಳ್ಯಾರ
ಮುತ್ತಿನ ಬೈತಾಲಿ ಸಿರಿಗಂಗಾ। ಮಲಪಾರಿ
ಬಲಗಡೆ ಸೂಸಿ ಹರಿದಾಳ ॥೬॥
(ಬಲಗಡೆ ಚಲ್ಲರಿದು ನಡೆದಾಳ ॥ ೬ ॥)

ಮಾತಾಡು ಮಲ್ಲೀಗಿ, ರುದ್ರ ಸಾವಂತೀಗಿ
ಇಬ್ಬನ್ನಿಗರಳುವ ಕಣಗಲಿ। ತಾವರೆ
ಇದ್ದಾವ ಈರಣ್ಣ ಎಡಬಲಕ ॥೭॥

ಸಂಪೀಗಿ ಈ ಹೂವ, ತಂಪೀಗಿ ಬೆಳೆದಾವ
ಕಂಪು ಬೀರ್‍ಯಾವ ಸರುವರಿಗೆ। ಆ ಹೂವ
ನೋಂಪಿಲಿ ಈ ರಾಗ ಧರಿಸೀರೆ ॥೮॥

ಅಷ್ಟೂರಕಿಂತ ಮೊದಲು, ನಿಷ್ಟುರನ ಬಲಗೊಂಬೆ
ಶ್ರೇಷ್ಠರೊಳಗಿರುವ ಕರಚೆಲುವ। ಹಟ್ಟಿಹೊಳಿ
ದಿಟ್ಟ ವೀರಣ್ಣನ ಬಲಗೊಂಬೆ ॥೯॥

ಹತ್ತುಗಾವುದ ಮ್ಯಾಲೆ, ಅಪ್ಪತಾ ಇರವೂರ
ಅಪ್ಪ ಹೊಂಡೇದ ಬಸವಯ್ಯ। ಈ ಪದಕ
ತಪ್ಪದಲೆ ವರವ ಕೊಡುನಮಗ ॥೧೦॥

ಗಿಂಡಿ ತುಂಬಿದ ಹಾಲ, ಗಿಣಿಯ ಮುಟ್ಯಾವಂದು
ಲಿಂಗದೊಸ್ತಿರ ಮರೆಮಾಡಿ। ತಂದೇವು
ಹೊಂಡೇದ ಬಸವ ಸಲಿಸೇಳ ॥೧೧॥

ಒದಗೊನೀ ನನ್ನಪ್ಪ, ಒದಗೊನೀ ನನ್ನಯ್ಯ
ಒದಗೊ ಹುಂಡೇದ ಬಸವಯ್ಯ। ಪದಗಳಿಗೆ
ಒದಗೊ ಕಿತ್ತೂರ ಕರಿಗೂಳಿ ॥೧೨॥

ಕರಿಯ ಸೀರಿಯನುಟ್ಟು, ಕರಿಯಾಗ ಬರತಾಳ
ತಾಯಿ ದ್ಯಾಮವ್ವ ರಥವೇರಿ। ಹೊಂಗಲದ
ಹರದಿ ದ್ಯಾಮವ್ವ ಬಲಗೊಂಬೆ ॥೧೩॥

ಆರಸೇರ ಬಂಗಾರ, ಸಿರದಾಗ ಇಟಗೊಂಡು
ಕತ್ತಿಯಾ ಚೆಲುವಿ ಕರಚೆಲುವಿ। ಹೊಂಗಲದ
ಅಕ್ಕ ದುರಗವ್ವ ಬಲಗೊಂಬೆ ॥೧೪॥

ಮಲ್ಲಿಗ್ಹೂವಿನ ಇಂಡಿ, ಮಲ್ಲಿಗ್ಹೂವಿನ ಕೊಂಡಿ
ಮಲ್ಲಿಗ್ಹೂವಿನ ನೆನೆದಂಡಿ । ಕಿತ್ತೂರ
ಕ್ವಾಟ ಕರಿಯವ್ವ ಬಲಗೊಂಬೆ ॥೧೫॥

ಕಿತ್ತೂರ ಅರಸರ, ಉತ್ತಮರ ಪದಗೋಳ
ಚಿತ್ತಿಟ್ಟು ಕೇಳ್ರಿ ದಯವಿಟ್ಟು। ಕಿತ್ತೂರ
ಸುತ್ತೂರ ದೇವರ್‍ನ ಬಲಗೊಂಬೆ ॥೧೬॥

ಎಂದು ಬಲಗೊಂಡು, ವೀರ ಪುರುಷರ ಹಾಡುಗಳನ್ನು ಹಾಡಲು ಪ್ರಾರಂಭಿಸುವರು. ಈ ಬಲಗೊಳ್ಳುವ ಸಂದನ್ನು ಹಾಡುವಾಗ ನಮ್ಮ ಹೆಣ್ಣುಮಕ್ಕಳು ಲೌಕಿಕ ಹಾಡುಗಳಿಗೆ ಎತ್ತುವ ಪದ್ಯಗಳನ್ನು ಮರೆತಿದ್ದಾರೆ. ಶಿವಶರಣರನ್ನಂತೂ ನೆನಪಿಗೆ ತಂದಿಲ್ಲ. ಇಲ್ಲಿ ಕಾಣುವುದು ಕಿತ್ತೂರ ನಾಡೊಳಗಿದ್ದ ಪ್ರಸಿದ್ಧ ದೇವ ದೇವತೆಗಳನ್ನು ಬಲಗೊಂಬುವುದು. ಮಹಾದೇವನನ್ನು ಪ್ರಾರ್ಥಿಸಿ ಪಾಂಡವರನ್ನು (ವೀರರನ್ನು) ಹೊಗಳಿ ಸಂಪ್ರದಾಯದಂತೆ ದೊಡ್ಡತಲೆಯಯ್ಯ (ಗಣಪತಿ)ನನ್ನು ಬಲಗೊಂಡಿದ್ದಾರೆ. ನಂತರ ಹಟ್ಟಿಹೊಳಿ ವೀರಭದ್ರ ದೇವರನ್ನು ಬಲಗೊಂಡಿದ್ದಾರೆ. ಈ ವೀರಭದ್ರ ದೇವರ ವರ್ಣನಾ ವೈಖರಿಯು ಬಲು ಮನೋಹರವಾಗಿದೆ. ದೇವಸ್ಥಾನದ ಬಲಗಡೆಯಲ್ಲಿ ಚಲ್ವರಿದು ಹರಿಯುವ ಶ್ರೀಗಂಗೆ, ಮಲಪ್ರಭೆಯು ಮುತ್ತಿನ ಬೈತಲೆಯೆಂದು ಕರೆದಿದ್ದಾರೆ. ಮಲ್ಲಿಗೆ, ಸೇವಂತಿಗೆ, ಕಣಗಿಲೆ, ತಾವರೆ, ಕಂಪುಳ್ಳ ಸಂಪಿಗೆ ಮೊದಲಾದ ಪುಷ್ಪಗಳು ಸುತ್ತಲೂ ಜಂಪಿಟ್ಟು (ಹೇರಳವಾಗಿ) ಬೆಳೆದುದನ್ನು ವರ್ಣಿಸಿ, ನೋಂಪೆಯಿಂದ ಅವುಗಳನ್ನು ತಂದು ವೀರಭದ್ರನಿಗೆ ಧರಿಸಿರೆಂದು ಹಾಡಿದ್ದಾರೆ. ಹೊಂಡೇದ ಬಸವನಿಗೆ ಈ ಪದವನ್ನು ಹಾಡಲು ವರಕೊಡುವ ಎಂದೂ, ಮುಚ್ಚಿ ತಂದ ಹಾಲನ್ನು ಕುಡಿ ಎಂದೂ ಹೊಗಳಿ ಕಡೆಗೆ "ಪದಗಳಿಗೆ। ಒದಗೊ ಕಿತ್ತೂರ ಕರಿಗೂಳಿ" ॥ ಎಂದು ಕೈ ಮುಗಿದು ಬೇಡಿಕೊಂಡಿದ್ದಾರೆ. ಹೊಂಡೇದ ಬಸವನಿಗೆ 'ಕಿತ್ತೂರ ಕರಿಗೂಳಿ'

ಎಂದು ಕರೆಯುವುದರಲ್ಲಿ ಒಂದು ಔಚಿತ್ಯವಿದ್ದಂತೆ ಕಂಡುಬರುತ್ತದೆ. ಈ ಹೊಂಡೇದ ಬಸವನು ಕಿತ್ತೂರ ಅರಸರ ಮನೆದೇವರೆಂದು ಜನಪದದಿಂದ ತಿಳಿದುಬರುತ್ತದೆ. ಈ ಗುಡಿಗೆ ಈಗಲೂ ಕಿತ್ತೂರರವರು ವತನಿಟ್ಟ ಭೂಮಿಗಳಿವೆ. ಕಿತ್ತೂರರಸರು ಈ ಗುಡಿಯನ್ನು ಕಟ್ಟಿಸುವ ಮೊದಲು, ಆ ಬಸವನು ಅರಸಂಗಳದ ದೊಡ್ಡ ಕರಿಗೂಳಿ ಯಾಗಿರಬಹುದು. ಅದರ ಸ್ಮಾರಕಕ್ಕಾಗಿ ಮುಂದೆ ಕಿತ್ತೂರರಸರು ಗುಡಿಯನ್ನು ಕಟ್ಟಿಸಿರಬಹುದು. ಹೀಗೆ ಜನಪದದಲ್ಲಿಯೂ ಪ್ರತೀತಿಯಿದೆ. ಕೆಲವು ಹೆಣ್ಣುಮಕ್ಕಳು ಈ ಹೊಂಡೇದ ಬಸವನಿಗೆ ನಂದೀಹಳ್ಳಿಯ ಬಸವನೆಂದೂ ತಮ್ಮ ಹಾಡುಗಳಲ್ಲಿ ಬಲಗೊಂಬುವರು. ಆ ಪದ್ಯಗಳೂ ಬಲು ರಮ್ಯಾವಾಗಿವೆ.

ಕೊಂಬು ಅಲ್ಲಾಡೂತ, ಕೊಳಗ ಚಮ್ಯಾಡೂತ
ಜಂಜೂರ ಬಾಲ ಎಳೆಯೂತ। ನಂದ್ಹಳ್ಳಿ ಬಸವ
[3]ಬಗಟಿ – ಗುಡಿಯಾಗ ಹೊಗತಾನ॥

ಎಷ್ಟು ಸುಂದರವಾಗಿದೆ ಹೇಳುವ ಈ ಚಿತ್ರ! ಇಂಥ ಅನೇಕ ಪದ್ಯಗಳನ್ನು ಈ ಹೆಣ್ಣುಮಕ್ಕಳು ಬೇಸರಿಲ್ಲದೆ ಎತ್ತಿ ಹಾಡುತ್ತಾರೆ. ರಥವೇರಿ ಬರುವ ಹೊಂಗಲದ ದ್ಯಾಮವ್ವನನ್ನೂ, ಕತ್ತಿಯನ್ನು ಕೈಯಲ್ಲಿ ಜಳಪಿಸುವ ದುರಗವ್ವನನ್ನೂ, ಮಲ್ಲಿಗ್ಹೂವಿನ ನೆನದಂಡೆಯನ್ನು ಕಟ್ಟಿಕೊಂಡು ಕಿತ್ತೂರ ಕೋಟೆಯ ಕರಿಯವ್ವನನ್ನೂ ಬಲಗೊಂಡು ಕಡೆಗೆ, ಹಾಡುವ ಹಾಡುಗಳು ಕಿತ್ತೂರರಸರ ಉತ್ತಮರ ಪದಗಳೆಂದೂ ಜನವು ಚಿತ್ತವಿಟ್ಟು ಕೇಳಲೆಂದೂ ಹೇಳಿ, ಸುತ್ತದೇವರನ್ನು ಬಲಗೊಂಡಿದ್ದಾರೆ. ಈ ಪ್ರಕಾರ ಬಲಗೊಳ್ಳುವ ಹಾಡುಗಳು ಉತ್ತರ ಕರ್ನಾಟಕದ ಆಯಾ ಭಾಗಗಳಲ್ಲಿ ಎಲ್ಲರ ನಿದರ್ಶನಕ್ಕೆ ಬಂದೇ ಬರುವುವು.

ಹಳ್ಳಿಗರ ಕಥಾಕವನಗಳಲ್ಲಿ ಬಲಗೊಳ್ಳುವ ಸಂದುಗಳಂತೆ 'ಮುಗತಾಯ (ಮುಕ್ತಾಯ) ಸಂದೂ' ಬಹಳ ಮಹತ್ವವಾದುದು. ಈ ಸಂದಿನಲ್ಲಿ ಜಾನಪದ ಕವಿಗಳ, ಹಾಡುಗಾರರ, ವಿಶೇಷ ಸಂಗತಿಯು ಇದ್ದುದು ಕಂಡುಬರುವುದು. ಇಲ್ಲಿ ಹಾಡನ್ನು ಹಚ್ಚುವ (ಹಾಡಿಸುವ) ಉದ್ದೇಶಗಳು ಹೇಳಲ್ಪಟ್ಟಿವೆ. ಹಾಡು 'ಚಾಜಾಗಿ' ಬಂದ ರೀತಿಯೂ ಇದರಲ್ಲಿ ವಿಶದವಾಗಿ ಹೇಳಲ್ಪಟ್ಟಿದೆ. ಸೋಬಾನದ ಸೊಲ್ಲೆತ್ತಿದವರಿಗೂ, ದನಿಕೊಡುವವರಿಗೂ ಹಾಡಿನಲ್ಲಿ ಹಾರೈಕೆ, ಆಶೀರ್ವಾದಗಳು ಕೊಡಲ್ಪಟ್ಟಿವೆ. ಆದರಣೀಯವಾದ ನಮ್ಮ ಹಳ್ಳಿಗರ ಸಂಸ್ಕೃತಿಯೇ ಇಲ್ಲಿ ಹೇಳಲ್ಪಟ್ಟಿದೆ ಎಂದು ಹೇಳಬಹುದು. ಬಹುತರವಾಗಿ ಲೌಕಿಕ ದೊಡ್ಡ ಹಾಡುಗಳಿಗೂ, ಶಿವಶರಣರ ಹಾಡುಗಳಿಗೂ ಮುಗತಾಯ ಸಂದು ಒಂದೇ ಇರುವುದು. ವೀರರ ಹಾಡುಗಳಿಗೆ ಈ ಸಂದಿನಲ್ಲಿಯ ಕೊನೆಯ ಕೆಲವೇ ಪದ್ಯಗಳನ್ನು ಹಾಡಿ ಮುಗಿಸುವ ವಾಡಿಕೇಯಿದೆ. ಕೆಲವೊಂದು ಭಾಗಗಳಲ್ಲಿ ಈ ಮೂರೂ ತೆರದ ಹಾಡುಗಳಿಗೆ ಮುಗತಾಯ ಸಂದು ಒಂದೇ ಇದ್ದಂತೆ ಕಂಡುಬರುವುದು.

ಮುಗತಾಯ ಸಂದು

ಹಾಡಗಳ ಹಾಡೆನಲು, ಹಾಡದವರಿಗೆ ಪಾಪ
ಹಾಡ ಕೇಳಿದರೆ ಪರಮಾತ್ಮ। ಕೋ। ಒಮ್ಮನದಿ
ಹಾಡಿದರೆ ಮುಂದ ಕೈಲಾಸ॥ ಕೋ॥ ॥೧॥

ಎತ್ತಿ ಹಾಡೆನ್ನು ದಕೆ, ಎತ್ತದವರಿಗೆ ಪಾಪ
ಮತ್ತೆ ಕೇಳಿದರ ಸಂಪತ್ತು। ಪರಶಿವನು
ಎತ್ತಿ ಹಾಡಿದರ ಮನದಾಗ ॥೨॥

ನಾಲ್ವರು ಗೆಳತಿಯರು, ಭಾರತವ ಹಾಡುವೇವು
ಬಂದ ಸಂದಣಿ ಕೇಳೀರೆ। ಗುರುವಿನ
ಪಾದಕ ಮನಚಿಲ್ಲಿ ಹಾಡುವೆವು ॥೩॥

ಗುರುತಾಯಿ ಶಿವಗಂಗಾ, ಜೋಳದ ಸಿದ್ದವ್ವ
ಸೆಲವಡಿ ರುದ್ರವ್ವ ಸಿರಿವಂತರ। ದನಿಗೊಡುವ
ಹಾಡಗಾರತಿ ಬಸಲಿಂಗವ್ವ ॥೪॥

ಜತ್ತೀಲಿ ಗೆಳತೇರ, ಮತ್ತಾಗಿ ಕೂಡುವೇವ
ಗದ್ದಗಿಮಠದ ಹಾಡೂ ಮ್ಯಾಳ। ಶ್ರಾವಣಕ
ಶರಣರ ಕಥೆಗಳ ಹಾಡತಿವೆ ॥೫॥

ಉದ್ದಾಮ ಕವಿಗಳಲ್ಲ, ಮುದ್ದಾಮ ಪಂಡಿತರಲ್ಲ
ಸದ್ದಮದ್ದ ಭಕ್ತಿ ನಮ್ಮದ। ತಾಯಿಗಳಿರಾ
ಹಾಸ್ಯವ ಮಾಡಿ ನಗಬ್ಯಾಡ್ರೆ ॥೬॥

ನೂರೊಂದು ರಾಗದಲಿ, ನೂರೊಂದು ಶರಣರ
ರಾಮಾಯಣ ಸಹಿತ ಹಾಡತೀವ। ಶಿವಭಕ್ತಿ
ಹೆಣ್ಣು ಬಳಗಾಕ ಉಣಸತೀವೆ ॥೭॥

---

೩. 'ಬಗಟಿ' – ಕಾಲಕೆದರಿ, ಚಿಮ್ಮಿ

ಸಭೆಗಟ್ಟೆ ಹಾಡಿಲ್ಲ, ತೋಡಿಯ ಒಡ್ಡೇ ಇಲ್ಲ
ಹೆಣ್ಣು ಬಳಗಕ ನಮ್ಮ ಹಾಡ। ಪಂಡಿತರ
ನೀವಿದ್ರ ರಸಿಕ ಮನವಿರಲಿ ॥೮॥

ಗೂಗ್ಯಾಗಿ ಬಾಳುವದು, ಕಾಗ್ಯಾಗಿ ಕೊರಗುವದು
ನಾಕು ದಿನ ಇದ್ದರು ಕೋಗಿಲೆ। ಯಾಗಿದ್ದು
ಹಾಡ್ಯಾಡಿ ಜೀವ ನೀಗೀರೆ ॥೯॥

ಹಾಡಿ ಆಡದ ಜೀವ, ನೋಡಿ ತಣಿಯದ ಮನವ
ಏನಿದ್ದರೇನ ಮನಿಯಾಗ। ಹಾಡತಾವ
ಗೂಗಿಕಾಗೆಲ್ಲ ಸಹಿತವ್ವ ॥೧೦॥

ಹೊಟ್ಟೆಯೊಳಗಿರು ಹಾಡ, ಬಿಟ್ಟ ಬಿಡದಲೆಹಾಡಿ
ಮುಟ್ಟಸಬೇಕ ಕಲಿತರುಣವ। ಇಲದಿರಕ
ಮಟ್ಟ ಹೊಡದ್ಹಂಗ ಬಿಟ್ಟಎತ್ತು ॥೧೧॥

ಅಜ್ಜಿ ಹಾಡಿದಹಾಡ, ಅಮ್ಮ ಹಾಡಿದ ರಾಗ
ನಾವಂದು ದನಿಯ ಗೂಡಿಸಲು। ಕಲಿತಿಂದು
ನಿಮ್ಮುಂದ ಹಾಡು ಹಾಡವ್ವ ॥೧೨॥

ಅಜ್ಜಿಯಿಂದಮ್ಮಗ, ಅಮ್ಮುನಿಂದ ಅವ್ವಗ
ಅವ್ವ ತನ್ನ ಮಕ್ಕಳ ಬಳಗಕ। ಹಾಡಲು
ಪೀಳಿಗೆ ಚಾಜಾತ ಈ ಹಾಡ ॥೧೩॥

ಸತ್ಯವಂತ ಶರಣರ, ಉತ್ತಮರ ಹಾಡುಗಳ
ನಿತ್ಯದಲಿ ಹಾಡಿ ಮುಕುತಿಯ। ದೊರಕಿಸಲು
ಗೊತ್ತಿನ ಹಾದಿ ನಿಮಗವ್ವ ॥೧೪॥

ಅತ್ತಿತ್ತ ಅಗಲದಲೆ, ಚಿತ್ತೆರಡು ಮಾಡದಲೆ
ಜತ್ತಿಲಿ ದನಿ ಗೊಡೈದೇರಿಗೆ। ಮಕ್ಕಳ
ಉತ್ತಮ ಸಂತಾನ ಘನವಿರಲಿ ॥೧೫॥

ಹಾಂಗ ಹಿಂಗಾಗದೆ, ಗ್ಯಾನೆರಡು ಮಾಡದೆ
ಜೋಡಿಲಿ ದನಿಗೊಡು ಗೆಳತಿಗೆ। ಉಡಿಯಕ್ಕಿ
ಸಡುವಾಗದಿರಲೊ ಶಿವಶಿವನೆ ॥೧೬॥

ಶರಣರ ಹಾಡಿಗೆ, ತಪ್ಪದೆ ಸೋ ಅಂದರ
ಕಡಗದ ಕೈಯ <u>ಕೊಡವೇರ</u>। ದಯವಂತ
ಬಿಡದೆನೀ ಸಲುಹು ಬಸವಯ್ಯ ॥೧೭॥

ಸತ್ತಿಕರ ಹಾಡಿಗೆ, ತಪ್ಪದೆ ಸೋ ಅಂದರ
<u>ಕೊಪ್ಪಿನ</u> ಕಿವಿಯ ಬಣತೇರ। ಶಿವಶಿವನೆ
ತಪ್ಪದಲಿ ಸಲಹೊ ಬಸವಯ್ಯ ॥೧೮॥

ಎಂದೆಂದು ಹಾಡಿದರು, ಇದೆ ಹಾಡ ಹಾಡುವರು
ದಥಮ್ ದಥಕಿ ಆಡಿದ್ಹಾಂಗ। ಅಂದರ
ಹಂದಿ ಮಾರಗ ಹತನಾವೊ ॥೧೯॥

ಸತ್ಯ ಶರಣರ ಕಥೆಯ, ಎತ್ತಿ ಹಾಡುದ ಕೇಳಿ
ಅತ್ತಿ ಬಾಯೆಂದು ಸೊಸಿ ಕರೆಯ। ಕರೆದಾಕಿ
ಕತ್ತಿ ಜನಮಕ ಗುರಿಕೇಳ ॥೨೦॥

ಸತ್ತಿಕ ಶರಣರ ಕಥೆ, ಹಚ್ಚಿದರೆಂಬುದ ಕೇಳಿ
ಮನೆಯಕೈಗಪ್ಪ ಹತಮಾಡಿ। ಕೇಳಿದರ
ಪಲ್ಲಕ್ಕಿ ಪದವಿ ದೊರೆಯಾಲೆ ॥೨೧॥

ಕೊಡವೇರ : ದಾನವಂತರು
ಕೊಪ್ಪಿನ : ವಾಲಿಯ (ಒಂದು ಆಭರಣ)

ಬಂದವರ ಬರಮಾಡಿ ಮಾನಮನ್ನಣೆ ಮಾಡಿ
ಜಾಡಿ ಜಂಬೂಳಿ ಹಾಸೂವ। ಮಕ್ಕಳಿಗೆ
ಮುತ್ತೈದಿ ಮರಣ ದೆಡೆಯಿರಲಿ ॥೨೨॥

ಪನ್ನೀರ ತಂಬಿಗೆಯ, ತುಂಬಿ ಪೂಜೆಯ ಮಾಡಿ
ವಿಭೂತಿ ಗಂಧ ಪತ್ರಿಪುಷ್ಪ। ಗಳಧರಿಸಿ
ಶರಣರ ಕಥೆಯ ಕೇಳಬೇಕ ॥೨೩॥

ಕಾಯ ಕಪ್ಪುರ ಬೆಳಗಿ, ಧೂಪ ದೀಪವ ಎತ್ತಿ
ಪಂಚ ಪಳಾರ ಪನಿವಾರ। ಹಂಚಿ ನೀವು
ಕೆಂಚೇರು ಕಥೆಯ ಕೇಳಿರವ್ವ ॥೨೪॥

ರೊಕ್ಕ ಇದ್ದರೆ ಕಾಯಿ, ದುಡ್ಡು ಇದ್ದರೆ ಧೂಪ
ಏನಿಲದಿರಕ ತನಿಗೆಂಡ। ನೀವು ಹಾಕಿ
ಸತ್ತಿಕರ ಕಥೆಯ ಕೇಳಿರವ್ವ ॥೨೫॥

ಸತ್ತಿಕರ ಕಥೆಯನು, ಬಿಚ್ಚಿ ಹೇಳುವ ನಮಗ
ಬೆಳತನ ಕೋದಿದರ ದಣುವಿಲ್ಲ। ಹಡದವ್ವ
ಸಂಜಾದರು ದಣಿವು ನಮಗಿಲ್ಲ ॥೨೬॥

ಚಿತ್ತಿಟ್ಟು ಕೇಳಿದರ, ಗ್ಯಾನಿಟ್ಟು ನಡೆದರ
ಮುತ್ತಿನ ಮಾರಗ ನಿಂಬುತ್ತಿ। ನಮ್ಮಾತ
ಒಪ್ಪಿಟ್ಟು ಕೇಳ ನಡೆಯೀರೆ ॥೨೭॥

ಹಾಡಿದವ್ವನಿಗೈದು, ಕೇಳಿದವ್ವನಿಗ್ಹತ್ತು
ಸೋಬಾನದವ್ಗ ಸವರಾಜ್ಯ। ದೊರೆಯಾಲಿ
ಹಾಡಿಸಾರ್‍ಯ್ಯಾರ ಡೆಂಗುರ ॥೨೮॥

ಹಾಡಿದವ್ವನಕಿಂತ, ಕೇಳಿದವ್ವನಕಿಂತ
ಸೋಬಾನದವ್ವ ದಣಿದೆವ್ವ। ಮನಿಯಾಗ
ಹಾಲು ಬಾನುಂಡು ಮಲಗವ್ವ ॥೨೯॥

ಸೋಬಾನ ಸೋಹಾಡಿ, ಬೆವರ್‍ಹನಿ ಸೂಸಾಡಿ
ದನಿಗುಂತು ಕೂತು ಮನದಣಿದು। ಸಂಜೀಕ
ತೂಗ ಮಂಚಕ ತೂಗಿರೆ ॥೩೦॥

ಸಂಜಾತು ದಿನದೊಡೆಯ, ಇಂಬುನೀ ಕೊಟ್ಟೆಮಗ
ಕುಂತೇನಂದರ ಬಿಡುವಿಲ್ಲ। ಲೋಕsವ
ಪಂಜಾಗಿ ಬೆಳಗೊ ಶರಣಯ್ಯ ॥೩೧॥

ಇಲ್ಲಿಗೆ ಹರಹರ, ಇಲ್ಲಿಗೆ ಶಿವಶಿವ
ಇಲ್ಲಿಗೆ ಸೋಬಾನ ನಿಲ್ಲಲಿ। ಶರಣೆಂದು
ಸಂದುಗಳ ಮುಗಿಸಿ ನಿಂತೇವ ॥೩೨॥ *–ಜಾ–ಮ–ಭಾ–*

ಬಲಗೊಳ್ಳುವ ಸಂದಿಗಿಂತಲೂ ಮುಕ್ತಾಯ ಸಂದಲ ಸುದೀರ್ಘವಾಗಿದೆ. ಬರುವ (ಗೊತ್ತಿದ್ದ) ಹಾಡುಗಳನ್ನು ಹಾಡು ಎನಲು ಹಾಡದಿದ್ದರೆ ಮಹಾ ಪಾಪವೆಂದೂ, ಹಾಡು ಕೇಳಿದರೆ ಪರಮಾತ್ಮವೆಂದೂ, ಒಮ್ಮನಸಿನಿಂದ ಹಾಡಿದವರಿಗೆ ಮುಂದೇ ಕೈಲಾಸವೆಂದೂ, ಪ್ರಾರಂಭದಲ್ಲಿಯೇ ನಮ್ಮ ಹೆಣ್ಣುಮಕ್ಕಳ ಬಲವಾದ ಹಾರೈಕೆಯಿದೆ. ಅಂಧಶ್ರದ್ಧೆಯುಳ್ಳ ಅವರು ಇದೆಲ್ಲವೂ ಅಕ್ಷರಶಃ ಸತ್ಯವೆಂದು ನಂಬಿ ನಡೆದುಕೊಳ್ಳುತ್ತ ಬಂದುದರಿಂದ ಸ್ವಲ್ಪಾದರೂ ಉಳಿದು ಬಂದಿದೆ ನಮ್ಮ ಜಾನಪದ ಸಾಹಿತ್ಯ.

ನಾಲ್ವರು ಗೆಳತಿಯರು ಭಕ್ತಿಯಿಂದ ಭಾರತವನ್ನು ಹಾಡುವೆನೆಂದೂ, ಬಂದ ಸಂದಣಿ ಕೇಳಿರೆಂದೂ ಹಾಡಿನಲ್ಲಿ ಬಂದಿದೆ. ಈ ನಾಲ್ವರು ಗೆಳತಿಯರು ಯಾರು? ಎಂಬುದನ್ನು ಇಲ್ಲಿ ವಿಚಾರ ಮಾಡಬೇಕಾಗಿದೆ. ಇವರ ಸಂಬಂಧ ಅನೇಕ ಸಂಗತಿಗಳೂ ಈ ಮುಗತಾಯ ಸಂದಿನಲ್ಲಿ ಬಂದಿವೆ. ಇವರ ಹೆಸರುಗಳೂ ಹಾಡಿನಲ್ಲಿ ಬಂದಿವೆ. ೧. ಗುರುತಾಯಿ ಶಿವಗಂಗಾದೇವಿ, ೨. ಜೋಳದ ಸಿದ್ದವ್ವ , ೩. ಶೆಲವಡಿ ರುದ್ರವ್ವೆ, ೪. ಹಾಡಗಾರತಿ ಬಸಲಿಂಗವ್ವ ಈ ಸಂದರ್ಭದಲ್ಲಿ ಈ ನಾಲ್ವರು ಕವಯತ್ರಿಯರನ್ನು ಕುರಿತು ಗೊತ್ತಿರುವ ನಾಲ್ಕಾರು ಮಾತುಗಳನ್ನು ಬರೆಯುವುದು ಅಗತ್ಯ.

೧. **ಗುರುತಾಯಿ ಶಿವಗಂಗಾದೇವಿ :** ಇವರೇ ಜಾನಪದ ನಿರಕ್ಕರಕವಿ ಸಾವಳಿಗೇಶ್ವರನ ಧರ್ಮಪತ್ನಿ. ಈಗಿವರ ವಯಸ್ಸು ಸುಮಾರು ೬೦. ಈ ನಾಲ್ವರಲ್ಲಿ ಇವರೇ ಬಹಳ ಚಿಕ್ಕವರು. ಗದ್ದಿಗಿಮಠದ ಪೂರ್ವಪರಂಪರೆಯಿಂದ ಬಂದ ಸಂಸ್ಕೃತಿಯನ್ನು ಇಲ್ಲಿಯವರೆಗೆ ಉಳಿಸಿ ತಂದಿದ್ದಾರೆ. ವರಕವಿಗಳಂತೆ ಹಾಡುಗಳನ್ನು ತಾವೇ ರಚಿಸಿ ಕೂತಲ್ಲಿ ನಿಂತಲ್ಲಿ ಹಾಡುವರು. ಇವರಿಗೆ ಅನಂತ ಕೃತಜ್ಞತೆಗಳು.

೨. **ಜೋಳದ ಸಿದ್ದವ್ವ :** ಇನ್ನೂ ಮೊನ್ನೆ ಮೊನ್ನೆ ಒಂದು ವರುಷದ ಹಿಂದೆ ಇವರು ಕಣ್ಮರೆಯಾದರು. ಸಾಯುವಾಗ ಇವರಿಗೆ ಸುಮಾರ ೭೫ಕ್ಕೆ ಮಿಕ್ಕಿದ್ದುವು. ಇವರ ತವರೂರು ಮಹಾಲಿಂಗಪುರ. ಗಂಡನ ಊರು ಕೆರೂರು. ಸುಖಿಸ್ಥರಾದ ಶಿವಭಕ್ತರಾಗಿದ್ದರು. ಮಹಾಭಾರತವನ್ನು ಹಾಡುವ ಮಹಾಸ್ಫೂರ್ತಿದಾಯಕಳಾದ ಕವಯಿತ್ರಿ, ಇವಳು ಹಾಡಹತ್ತಿದರೆ ಮೈಮರೆತು ಪರವೆಯೇ ಇರುತ್ತಿರಲಿಲ್ಲ. ಮಹಾಭಾರತವನ್ನೂ ಶರಣೆ ಚನ್ನವ್ವನ ಹಾಡನ್ನೂ, ರಡ್ಡೇರ ಅವ್ವಣ್ಣೆವನ ಹಾಡನ್ನೂ ಅನೇಕ ತಿಂಗಳವರೆಗೆ ಬಹಳ ರಸಭರಿತವಾಗಿ ಹಾಡುತ್ತಿದ್ದಳು. ಅವುಗಳಲ್ಲಿ ಮಹಾಭಾರತವನ್ನು ಸಂಕಲಿಸಲಾಗಿದೆ. ಮೃತಾತ್ಮರ ಆತ್ಮಕ್ಕೆ ಶಿವನು ಶಾಂತಿಯನ್ನೀಯಲಿ.

೩. **ಶೆಲವಡಿ ರುದ್ರವ್ವ :** ಇವಳೊಬ್ಬ ವಿಧವೆ ; ಶಿವಶರಣೆ. ಕೆರೂರಲ್ಲಿ ಪ್ರಸಿದ್ಧ ಮನೆತನವಾದ ಸಣ್ಣ ಘಟ್ಟದವರ ಮನೆಯ ಹಿರೆಸೊಸೆ. ತವರೂರು ಶೆಲವಡಿ. ಸಿದ್ದವ್ವನಂತೆ ಇವಳೂ ಮಹಾಭಾರತ ಮೊದಲಾದ ದೊಡ್ಡ ಹಾಡುಗಳನ್ನು ಮನಮೋಹಕರಾಗದಲ್ಲಿ ರಸಭರಿತವಾಗಿ ಹಾಡುತ್ತಾಳೆ. ಮನೆತನದಿಂದ ಇದ್ದುಳ್ಳವಳಿದ್ದು ಶಿವಭಕ್ತಳಿರುವಳು. ಇವಳ ಸದ್ಯದ ವಯಸ್ಸು ಸುಮಾರು ೭೮.

೪. **ಹಾಡುಗಾರತಿ ಬಸಲಿಂಗವ್ವ :** ಇವಳ ತವರೂರು ಗಲಗಲಿ. ಗಂಡನ ಊರು ಕೆರೂರು. ಎಲ್ಲ ತರದ ಹಾಡುಗಳನ್ನು ಇಂಪಾಗಿ ಹಾಡುವುದರಿಂದ ಇವಳಿಗೆ ಹಾಡುಗಾರತಿ ಬಸಲಿಂಗವ್ವನೆಂದ ಹೆಸರು ಬಿದ್ದಿದೆ. ಬಡವಳಿದ್ದು ವಿಧವೆಯಿರುವುದರಿಂದ ದುಡಿದು ತನ್ನ ಪ್ರಪಂಚವನ್ನು ಸಾಗಿಸುತ್ತಿರುವಳು. ಇವಳ ವಯಸ್ಸು ಈಗ ಸುಮಾರು ೭೨ ಇರಬಹುದು.

ಈ ನಾಲ್ವರಲ್ಲಿ ಯಾರೂ ಓದುಬರಹವನ್ನು ಕಲಿತಿಲ್ಲ. ಆದರೂ ಅವರ ಸಂಸ್ಕೃತಿಗೆ ಯಾವ ಕೊರತೆಯೂ ಇಲ್ಲ. ಈ ನಾಲ್ವರೂ ಜಾನಪದ ನಿರಕ್ಕರಕವಿ, ಸಾವಳಿಗೇಶ್ವರನ ತಾಯಿಯ ಬಳಿಯಲ್ಲಿ ಹಾಡುಗಳನ್ನು ಹಾಡಲಿಕ್ಕೆ ಕಲಿತು, ಅನೇಕ ಹಾಡುಗಳನ್ನು ಸ್ವತಃ ತಾವೇ ಕೂಡಿಸಿ ಜನಪದಕ್ಕೆ ಹಾಡುತ್ತ ಬಂದಿದ್ದಾರೆ. ಗುಂಪುಗೂಡಿ ಹಾಡುವ ತಮ್ಮ ಮೇಳಕ್ಕೆ ಹಾಡಿನಲ್ಲಿ 'ಗದ್ದಗಿಮಠದ ಹಾಡುವ ಮ್ಯಾಳೆಂದು' ಕರೆದಿದ್ದಾರೆ. ಜಾನಪದಕವಿ, ಸಾವಳಿಗೇಶ್ವರನು ಹಾಡುವ ಅನೇಕ ಶಿವಶರಣರ ಹಂತಿಯ ಹಾಡುಗಳನ್ನು ಶಿವಸೊಲ್ಲುಗಳೊಡನೆ ಕೂಡಿಸಿ ಇವರು ಈಗಲೂ ಹಾಡುತ್ತಾರೆ. ವಿಶೇಷವಾಗಿ ಇವರು ಕೂಡಿಕೊಂಡು ಹಾಡುಗಳನ್ನು ಹಾಡುವ ಕಾಲವು ಶ್ರಾವಣ ಮಾಸವು. ತಾವು ಉದ್ದಾಮ ಕವಿಗಳಲ್ಲವೆಂದೂ, ಮುಗ್ಧಭಕ್ತಿಯಿಂದ ನೂರೊಂದು ಶಿವಶರಣರ ಹಾಡುಗಳನ್ನೂ, ರಾಮಾಯಣವನ್ನೂ ಹೆಣ್ಣುಮಕ್ಕಳಿಗೆ ಹಾಡುವೆವೆಂದೂ ಹೇಳುವುದರಲ್ಲಿ ತಮ್ಮ ವಿನಯವನ್ನು ತೋರಿಸಿದ್ದಾರೆ. ತೋಡಿಗೆ ತೋಡಿಯನ್ನು ಕೊಟ್ಟು ತಾವು ಸಭೆಗಳಲ್ಲಿ ಹಾಡಿಲ್ಲವೆಂದೂ, ತಮ್ಮ ಹಾಡು ಕೇವಲ ಹೆಣ್ಣು ಬಳಗಕ್ಕೆಂದೂ, ಪಂಡಿತರಿದ್ದರೆ ರಸಿಕ ಮನವಿರಲೆಂದೂ ನಮ್ರತೆಯಿಂದ ಕೇಳಿಕೊಂಡಿದ್ದಾರೆ. ನೂರೊಂದು ರಾಗದಲ್ಲಿ ಈ ಹಾಡುಗಳನ್ನು ಹಾಡುವೆವೆಂದು ಎದೆ ತಟ್ಟಿ ಹೇಳಿಕೊಂಡದ್ದು ಹಾಡುವುದರಲ್ಲಿ ಅವರ ನೈಪುಣ್ಯತೆಯನ್ನು ತೋರಿಸಲಿರಲಾರದು. ಹಾಡುಗಳಲ್ಲಿ ಅವರು ಬಳಸಿದ ಛಂದಸ್ಸು ಹೆಚ್ಚಾಗಿ ತ್ರಿಪದಿ; ಅಲ್ಲೊಂದು ಇಲ್ಲೊಂದು ದ್ವಿಪದಿ ಮತ್ತು ಸಾಂಗತ್ಯಗಳೂ ಕಂಡು ಬರುವುವು. ಅನೇಕ ಹಾಡುಗಳು ಕರ್ನಾಟ ಸಂಗೀತದಲ್ಲಿವೆ. ಈ ಹಾಡುಗಳ ಬಂಧ ಅಂಶಗಣ ಬಂಧ. ಆದುದರಿಂದ ತಾಳ ಲಯಾ ಲಾಪ ರಾಗಾದಿಗಳೊಡನೆ, ಹಿಗ್ಗಿಸಿಯೊ, ಕುಗ್ಗಿಸಿಯೊ ಬೇಕಾದಷ್ಟು ರೀತಿಗಳಲ್ಲಿ ಇವುಗಳನ್ನು ಹಾಡಿ ತೋರಿಸುತ್ತಾರೆ.

ಪಲ್ಲವಿಗಳು : ಹಾಡುಗಳಿಗೆ ಬಳಸುವ ಪಲ್ಲವಿಗಳು ಬೇರೆ ಬೇರೆ ತರದ್ದಿರುವುವು. ಲೌಕಿಕ ಹಾಡುಗಳಿಗೆ ಬಳಸುವ ಪಲ್ಲವಿಗಳು ಬೇರೆ; ಶಿವಶರಣರ ಹಾಡುಗಳಿಗೆ ಬಳಸುವ ಪಲ್ಲವಿಗಳು ಬೇರೆ. ಲೌಕಿಕ ಹಾಡುಗಳಿಗೆ 'ಕೋಲು' ಪಲ್ಲವಿಗಳೇ ಹೆಚ್ಚು. ೧. ಕೋಲೆನ್ನ ಕೋಲ । ೨. ಕೋಲು ಕೋಲ, ರನ್ನದ ಕೋಲು, ಕೋಲೆನ್ನ ಕೋಲ । ೩. ರನ್ನದ ಕೋಲು ಕೋಲ । ೪. ಕೋಲು ಕೋಲಿನ ಕೋಲ । ಹೂವಿನ ಕೋಲು ಕೋಲಿನ ಕೋಲ ॥ ೫. ಕೋಲು ಕೋಲ, ಮುತ್ತಿನ ಕೋಲು ಕೋಲ । ೬. ಸುವ್ವಿ ಬಾಸುವ್ವಿ, ಶರಣರ ಸುವ್ವಿ । ೭. ತುಂಬಿದ ಬೆಳದಿಂಗಳ । ೮. ಓದುವೆ ನಾವು ಓಲೆಯ । ೯. ಕೋಲು ಕೋಲಿನ ಕೋಲ । ಮುತ್ತಿನ ಕೋಲು ಕೋಲಿನ ಕೋಲ ॥ ಕೋಲನಾಡುವ ಬಾಲಿ । ಯುಗಯುಗದ ಯುಗಾದಿ ॥ ೧೦. ತೂಗ ತೂಗನ್ನರೆ । ತೂಗಿರೆ ಮನವ ವಿಚಾಣದಲೆ । ೧೧. ಕೋಲನಾಡ, ಮನನೀ ಕೋಲನಾಡ ॥. ಹೀಗೆ ಅನೇಕ ಕೋಲ ಪಲ್ಲವಿಗಳು ಬಳಕೆಯಲ್ಲಿದ್ದುದು ಕಂಡುಬರುವುವು.

ಶಿವಶರಣರ ಹಾಡುಗಳಲ್ಲಿ ಬಳಸುವ ಪಲ್ಲವಿಗಳಿಗೆ ಈ ಹೆಣ್ಣುಮಕ್ಕಳು ಶಿವಸೊಲ್ಲುಗಳೆಂದು ಕರೆಯುತ್ತಾರೆ.

೧. ಶಿವಧೋ ಹರ ಶಿವಧೋ । ೨. ಶಿವಲಿಂಗವೆ ಶಿವಭಜನೆ । ೩. ಶಿವನೆ, ಶರಣರ ಶಿವಕಾಯಕ । ೪. ಶಿವನೆ ಶಿವನೆ, ಕೈಲಾಸ ಶಿವನೆ ಶಿವಲಿಂಗ ಶಿವನೆ । ೫. ನಾಗಭೂಷಣನವ್ವ ಶಿವಗಣದೊಡೆಯನ । ೬. ಸುವ್ವೀ ಬಾಸುವ್ವೀ ಶರಣರ ಸುವ್ವಿ । ೭. ಕೋಳಿ ಕೂಗುವಾಗ, ಬೆಳಗಾಗುವಾಗ, ೮. ಸಾಗಿಸದ್ಗುರು ಯೋಗಿ ಬಂದರ । ಹೋಗಿ ನೋಡುಣ । ಗುರು ಮೋಕ್ಷವ ಬೇಡುಣ ॥ ೯. ಮಾಡುವೆ ಶರಣ ಮಾಡುವೆ । ನಮ್ಮ ಕೂಡಲ ಸಂಗನ ಶರಣರ ಪಾದಕ । ಬೇಡುವೆ ವರವ ಬೇಡುವೆ ॥ ೧೦. ಸೋಬಾನ ವೆನ್ನಿರೆ, ಸೋಬಾನ ವೆನ್ನಿರೆ । ಸೋಬಾನವೆನ್ನಿ ಶಿವಗೊಮ್ಮೆ ॥ ೧೧. ಶಿವಲಿಂಗವೆನ್ನಿರೆ, ಶಿವಲಿಂಗವೆನ್ನಿರೆ । ಶಿವಲಿಂಗಕೊಮ್ಮೆ ಶಿವಗೊಮ್ಮೆ ॥ ೧೨. ಸೋ ಅನ್ನೆ, ಸೋಬಾನ ಬನ್ನೆ । ೧೩. ಒಂದೊಂದು ತೆರನ ನಂದನ ಬನವೊಂದ್ಯೆಸಿರಿಯ ।. ಈ ಎಲ್ಲ ಪಲ್ಲವಿಗಳನ್ನು ಹಾಕಿ ಅವರು ಹಾಡುವುದನ್ನು ಕೇಳಿದರೆ 'ನೂರೊಂದು ರಾಗದಲ್ಲಿ ಹಾಡುಗಳನ್ನು ಈ ಹೆಣ್ಣು ಮಕ್ಕಳು ಹಾಡುವುದು ಸತ್ಯವೆಂದನಿಸದಿರದು. ಪಲ್ಲವಿಯು ಹಾಡಿನಲ್ಲಿ ವಿರಾಮವೆಂದು ಬಂದದ್ದು. ಅದರಲ್ಲಿ ಯಾವುದಾದರೊಂದು ಗುಣಗಾನವಿರುತ್ತದೆ. ಶಿವಪಲ್ಲವಿಯಿದ್ದರೆ, ಶಿವನ ಗುಣಗಾನವು ತಾಳದೊಡನೆ ಅಡಕವಾಗಿರುವುದು.

ಕೋಲ ಪಲ್ಲವಿಯಿದ್ದರೆ, ಹುಸಿಪೆಟ್ಟುಗಳ ತಾಳವು ಎಣಿಕೆಯಾಗಿ ಮೇಳವಾಗಿರುವುದು. ದನಿಯೆತ್ತಿ ಹಾಡುವ ದೊಡ್ಡ ಹಾಡುಗಳಲ್ಲಿ ಪಲ್ಲವಿಗಳು ಅವಶ್ಯ. ಅವು ಕೇವಲ ಶಬ್ದಗಳ ಗುಂಪಿರದೆ ಅರ್ಥಸೂಚಕವಾಗಿಯೂ ಇರುವುವು.

ಸಂಗೀತದ ಹಿರಿಮೆಯನ್ನರಿತ ಈ ಹಳ್ಳಿಯ ಹೆಣ್ಣು ಮಕ್ಕಳು ಆಶಾಭರಿತರಾಗಿ (optimistic) ಗೂಗೆ ಕಾಗೆಗಳಂತೆ ಬಾಳುವುದಕ್ಕಿಂತ ಕೋಗಿಲೆಯಾಗಿ ಹಾಡಿ ಕುಣಿದು ಜೀವನವನ್ನು ನೀಗಿರೆಂದು ಜನಪದಕ್ಕೆ ಜೀವನ ರಹಸ್ಯವನ್ನು ಹಾಡಿದ್ದಾರೆ. 'ಹಾಡಿ ಆಡದ ಜೀವ, ನೋಡಿ ತಣಿಯದ ಮನವು । ಏನಿದ್ದರೇನ ಮನಿಯಾಗ" ॥ ಎಂದು ಹೆಣ್ಣುಬಳಗಕ್ಕೆ ಹಾಡಿ ಆಡುವುದೇ ಜೀವನವೆಂದು ಬಲು ಸ್ವಾರಸ್ಯವಾಗಿ ಮಾನವ ಜೀವನ ಸಂಗೀತವನ್ನೇ ಅವರು ಹಾಡಿದ್ದಾರೆ. 'ಹೊಟ್ಟೆಯೊಳಗಿರು ಹಾಡ ಬಿಟ್ಟು ಬಿಡದಲೆ ಹಾಡಿ । ಮುಟ್ಟಿಸಬೇಕ ಕಲಿತ ರುಣವ' । ಎಂದು ಹಾಡುವ ಈ ಹೆಣ್ಣುಮಕ್ಕಳು ಜನಪದಕ್ಕೆ ಶಿವಶರಣರ ಹಾಡು, ಭಾರತ, ರಾಮಾಯಣ ಮೊದಲಾದುವುಗಳನ್ನು ಹಾಡಿ ತಮ್ಮ ಋಣವನ್ನು ಈಗಾಗಲೇ ಮುಟ್ಟಿಸಿಬಿಟ್ಟಿದ್ದಾರೆ. ಹಾಡು ಜನಪದ ಪೀಳಿಗೆಗೆ ಉಳಿಯಲೆಂಬುದೇ ಇದರಲ್ಲಿ ಅಡಕವಾದ ಧ್ವನಿಯಾಗಿದೆ. ಈ ಹಾಡುಗಳನ್ನು ತಾವಾದರೂ ಅಜ್ಜಿಯಿಂದಲೊ, ಅಮ್ಮನಿಂದಲೊ ಬಂದ ಹಾಡುಗಳನ್ನು ಅವ್ವನೊಡನೆ ಹಾಡುವಾಗ ದನಿಗೂಡಿಸಿ ಕಲಿತು ಇಂದು ಕೂಡಿದ ಮಂದಿಗೆ ಹಾಡುವೆವೆಂದು ಬಲು ಅಭಿಮಾನದಿಂದ ಹೇಳಿಕೊಂಡಿದ್ದಾರೆ; ಒಪ್ಪಿಕೊಂಡಿದ್ದಾರೆ; ಈ ಹಾಡುಗಳು ಪೀಳಿಗೆಗೆ ಚ್ಯಾಜಾಗಲೆಂದು ಹಾರೈಸಿದ್ದಾರೆ. ಜಾನಪದ ಹಾಡನ್ನು ಕಲಿಸುವ ಹಾಗೂ ಕಲಿಯುವ ರೀತಿಯನ್ನು ಇಲ್ಲಿ ಕಾಣಬಹುದಾಗಿದೆ. ಹಾಡಿನ ಮೇಳದಲ್ಲಿ ಮುಮ್ಮೇಳದವರು, ಹಿಮ್ಮೇಳದವರು ಇದ್ದಂತೆ ಕಂಡುಬರುವುದು. ಮುಮ್ಮೇಳದಲ್ಲಿ, ಪೂರ್ಣಹಾಡಬಲ್ಲವಳು ನುರಿತವಳಾಗಿ ಹಾಡನ್ನೆತ್ತಿ ಹಾಡುತ್ತಾಳೆ. ಅವಳು ಅನುಭವಿಕಳಿದ್ದು, ಸ್ವತಃ ಕವಿಯೂ ಆಗಿರಬಹುದು. ಇವಳೊಡನೆ, ಹಾಡನ್ನು ಕಲಿಯುವವಳು ದನಿಗೂಡಿಸಿ ಹಾಡುವ ಕಲೆಯಲ್ಲಿ ಅಥವಾ ಹಾಡನ್ನು ಕಲಿಯುವುದರಲ್ಲಿ ತರಬೇತಿಯನ್ನು ಹೊಂದುತ್ತಿರುವಳು. ಹಿಮ್ಮೇಳದಲ್ಲಿದ್ದವರು ಎಲ್ಲದರಲ್ಲಿಯೂ ಹೊಸಬರು. ಮನಸು ಮಾಡಿದರೆ ಮುಂದೆ ತರಬೇತಿಯನ್ನು ಹೊಂದತಕ್ಕವರು. ಮುಮ್ಮೇಳದವರು ನುಡಿಯನ್ನು ಹಾಡಿ ನಿಲ್ಲಲು ಹಿಮ್ಮೇಳದವರು ಪಲ್ಲವಿಯನ್ನಾಗಲಿ, ಶಿವಸೊಲ್ಲನ್ನಾಗಲಿ ಎತ್ತುವರು. ಇವರಿಗೆ 'ಸೋಬಾನದವರು' (ಹಿಮ್ಮೇಳದವರು) ಎಂದು ಕರೆಯುತ್ತಾರೆ. ಹೀಗೆ ಈ ಹಾಡುಗಳನ್ನು ಕಲಿಯುವ ರೀತಿಯು ಪರಂಪರೆಯಿಂದ ಬಂದಿದೆ. ಇದೇ ಸಂಪ್ರದಾಯವೇ ಈಗ ಬಳಕೆಯಲ್ಲಿರುವುದು. ಶಿವಶರಣರ ಹಾಡುಗಳು ಹೆಣ್ಣುಮಕ್ಕಳಿಗೆ ಮುಕ್ತಿಯನ್ನು ಸಾಧಿಸಲು ಒಂದು ಸಾಧನವೆಂದು ಅವರು ಜನಪದಕ್ಕೆ ಹಾಡಿದ್ದಾರೆ. ಚಿತ್ತವಿಟ್ಟು ದನಿಗೊಡುವ ಮುತ್ತೈದೆಗೆ ಉತ್ತಮ ಸಂತಾನವಿರಲೆಂದೂ, ಗ್ಯಾನೆರಡು ಮಾಡದಲೆ ದನಿಗೊಡುವವಳಿಗೆ 'ಉಡಿಯಕ್ಕಿ ಸಡಿಲಾಗದಿರಲೊ ಶಿವಶಿವನೆ' । ಎಂದು ಹಾರೈಸಿದ್ದಾರೆ. 'ಸೋ' ಅನ್ನುವವರಿಗೆ ಬಸವಯ್ಯನೇ ಕರುಣಿಸೆಂದು ಬೇಡಿಕೊಂಡಿದ್ದಾರೆ. ಇದೇನು ಹಾಡು? ಎಂದು ಹಾಸರತು ಮಾಡಿದವರಿಗೆ 'ಹಂದಿಯ ಮಾರಗವು ಹತನಾವೊ' ಎಂದೂ, ಕೈಗಷ್ಪ ಬಿಟ್ಟು ಕೇಳಿದವರಿಗೆ ಪಲ್ಲಕ್ಕಿ ಪದವಿಯೆಂದೂ, ಹಾಡಿ ಸಾರಿದ್ದಾರೆ. ತಮ್ಮ ಹಾಡು ಯುಗಯುಗಕ್ಕೆ ಬದುಕಿ ಉಳಿಯಲೆಂಬ ಹಿರಿಯಾಶೆಯುಳ್ಳ ಈ ಹೆಣ್ಣುಮಕ್ಕಳು, ಜಾಡಿ ಜಂಬುಳಿಹಾಸಿ ಬಂದ ಜನರನ್ನು ಕರೆಯುವ ಮಕ್ಕಳಿಗೆ ಮುತ್ತೈದಿ ಮರಣವಿರಲೆಂದು ಆಶೀರ್ವದಿಸಿದ್ದಾರೆ. ಈ ಎಲ್ಲ ಪದ್ಯಗಳಲ್ಲಿ ಉಸುರಾಡುತ್ತಿರುವುದು ವೀರಶೈವ ಸಂಸ್ಕೃತಿ.

ಈ ಹಾಡುಗಳನ್ನು ಹಚ್ಚುವಾಗ (ಹಾಡುವಾಗ) ಕೆಲವು ವಿಧಾನಗಳನ್ನೂ ಅವರು ಪಾಲಿಸುವರು. ಪನ್ನೀರಿನ ಚರಿಗೆ (ತಂಬಿಗೆ)ಯನ್ನು ತುಂಬಿ ವಿಭೂತಿ ಧರಿಸಿ, ಪತ್ರಿಪುಷ್ಪಗಳನ್ನೇರಿಸಿ, ಕಾಯಿ ಕರ್ಪುರದ ಆರುತಿಯೆನ್ನೆತ್ತಿ, ದೀಪದಾರುತಿಯನ್ನು ತುಂಬಿಟ್ಟು, ಮುತ್ತೈದಿಯರು ಸಂದುಗಳಿಗನುಸಾರವಾಗಿ ಕುಂಕುಮವನ್ನೂ, ವಿಭೂತಿಯನ್ನೂ ಜನಸಂದಣಿಗೆ ಕೊಡುತ್ತ ಹೋಗುತ್ತಾರೆ. ಇದು ಸಾಧಿಸದಿದ್ದರೆ, ಚರಿಗೆಯನ್ನು ತುಂಬಿ ಪೂಜೆ ಮಾಡಿ ಹಣವಿಲ್ಲದಿದ್ದರೆ ತನಿಗೆಂಡವನ್ನಾದರೂ ಧೂಪಕ್ಕೆಂದು ತಂದಿಟ್ಟು ಹಾಡನ್ನು ಆರಂಭಿಸಬೇಕೆಂದು ಹಾಡಿನಲ್ಲಿ ಬಂದಿದೆ. ಹಾಡುವವರು ಎಷ್ಟು ಹಾಡಿದರೂ ತಮಗೆ ದಣಿವಿಲ್ಲೆಂದು ಹೇಳುವುದು ಅವರ ಅಪಾರ ಭಕ್ತಿಯನ್ನು ತೋರಿಸುತ್ತದೆ. ಅನೇಕ ದಿನಗಳವರೆಗೆ ದನಿಕೊಟ್ಟು 'ಸೋ' ಎತ್ತಿದವರೂ, ಹಾಡನ್ನು ಕೂತು ಕೇಳಿದವರೂ ದಣಿದರೆಂದೂ, ಮನೆಯಲ್ಲಿ ಹಾಲು ಬೋನುಂಡು ಮಲಗಲೆಂದೂ ಹಾಸ್ಯಮಾಡಿದ್ದಾರೆ. ಸೋಬಾನ 'ಸೋ' ಅನ್ನುವವಳು ಬರೇ 'ಸೋ' ಅಂದು ಅಂದು, ಧ್ವನಿಯು ಸ್ಥಿರಗೊಂಡು ಮನದಣಿದಿರುವುದೆಂದು ಹೇಳಿ ಅವಳು ಇರುಳಲ್ಲಿ ತೂಗ ಮಂಚಕ್ಕೆ ತೂಗಾಡಲೆಂದು ಹಾರೈಸಿ, ನಸುನಗೆಯಲ್ಲಿ ಬಿರಿದ ಹಾಸ್ಯವನ್ನಾಡಿದ್ದಾರೆ. ಹಾಡು ಮುಗಿಯಲು, ಸೂರ್ಯನಿಗೆ ಶರಣೆಂದು ಸೋಬಾನನಿಲ್ಲಲೆಂದು ಹೇಳಿ ಕೂಡಿದವರಿಗೆ ಶರಣು ಶರಣೆಂದು ಹಾಡು ಮುಗಿಸುತ್ತಾರೆ. ಇಲ್ಲಿ ಬರುವ ನಮ್ಮ ಹಳ್ಳಿಯ ಹೆಣ್ಣು ಮಕ್ಕಳ ಸಂಸ್ಕೃತಿಯನ್ನು ಬರೆದು ಎಷ್ಟು ಬಣ್ಣಿಸಿದರೂ ಅದು ತೀರ ಕಡಿಮೆಯೆ.

ಜಾನಪದ ಮಹಾಭಾರತ

ಮೂಲ ಭಾರತಕ್ಕಿಂತ ಜಾನಪದ ಭಾರತವು ಹಲಕೆಲವು ಪ್ರಸಂಗಗಳಲ್ಲಿ ಮಾರ್ಪಾಟು ಹೊಂದಿ ಭಿನ್ನವಾಗಿದೆ. ಕಥೆಯು ದಾಯಾದಿಗಳಾದ ಪಾಂಡವ ಕೌರವರ ರಾಜ್ಯದ ಸಂಬಂಧ ಹೋರಾಟವಿದ್ದರೂ, ಜಾನಪದ ಹಾಡಿನಲ್ಲಿ ರೂಪಾಂತರ ಹೊಂದಿದೆ. ಈ ಭಾರತದಲ್ಲಿ ಎರಡೂ ಮನೆತನಗಳ ನಡುವೆ ಅರಸೊತ್ತಿಗೆಯ ಸಲುವಾಗಿ ಕದನವೇಳಲು ಪಾಂಡವ ಕೌರವರ ಮುತ್ತಜ್ಜನಾದ ಭೀಷ್ಮಾಚಾರ್ಯನು ಭರತಖಂಡವನ್ನು ಎರಡು ಭಾಗಮಾಡಿ ಉತ್ತರ ಭಾಗವನ್ನು ಕೌರವರಿಗೂ, ದಕ್ಷಿಣ ಭಾಗವನ್ನು ಪಾಂಡವರಿಗೂ ಹಂಚಿಕೊಡುತ್ತಾನೆ. ಹಾಡಿನಲ್ಲಿ ಕೌರವರು ಉತ್ತರ ಹಸ್ತನಾವತಿಯಲ್ಲಿ ನಿಂತರೆಂದೂ, ಪಾಂಡವರು ದಕ್ಷಿಣದಲ್ಲಿ ಬೇರೊಂದು ಹಸ್ತಿನಾವತಿಯನ್ನು[೪] ಕಟ್ಟಿಸಿಕೊಂಡು ನಿಂತರೆಂದೂ ಬರುವುದು. ಇದಾವುದೂ ಕೌರವರಿಗೆ ಸಹನವಾಗಲಿಲ್ಲ. ಅವರು ಮೋಸದಿಂದ ಪಾಂಡವರನ್ನು ಜೂಜಾಟದಲ್ಲಿ ಗೆದ್ದು ದಕ್ಷಿಣ ಹಸ್ತಿನಾವತಿಯಿಂದ ಹೊರಗೆ ಹಾಕಿ ಅದನ್ನೂ ಆಕ್ರಮಿಸಲು, ಪಾಂಡವರು ಅರಣ್ಯವಾಸಿಗಳಾಗಿ ಹಾನಗಲ್ಲಿನಲ್ಲಿ (ವಿರಾಟನಗರ) ತಮ್ಮ ಅಜ್ಞಾತವಾಸವನ್ನು ಕಳೆದರೆಂದು ಬರುವುದು. ಅದು ಮುಗಿದ ನಂತರ ಪಾಂಡವರು ಉತ್ತರಕ್ಕೆ ಹೋಗಿ ರಾಜ್ಯವನ್ನು ತಿರುಗಿ ದೊರಕಿಸಲು

ಕುರುಕ್ಷೇತ್ರ ಮಹಾಯುದ್ಧ ಹೂಡಿದರು. ಅದರಲ್ಲಿ ಧರ್ಮರಾಜನನ್ನು ಬಿಟ್ಟು, ಉಳಿದ ಎಲ್ಲ ಕೌರವ ಪಾಂಡವರು ನಿರ್ಮೂಲರಾಗಲು, ಅವನು ರಾಜ್ಯವೇ ಬೇಡೆಂದು ವಿರತಿ ಭಾವವನ್ನು ಹೊಂದಿ ಕೈಲಾಸ ಸೇರುವನೆಂದು ಹಾಡಿನಲ್ಲಿ ಬಂದಿದೆ. ಈ ಜಾನಪದ ಮಹಾಭಾರತದಲ್ಲಿ ಬರುವ ಸನ್ನಿವೇಶಗಳೂ, ವರ್ಣನೆಗಳೂ ಬಲು ಹೃದಯಂಗಮವಾಗಿವೆ.

ಈಗ ಸಂಕಲನ ಮಾಡಿದ ಜಾನಪದ ಭಾರತವು ಮೂರು ಸಾವಿರಕ್ಕೆ ಮಿಕ್ಕುವ ಪದ್ಯಗಳುಳ್ಳದ್ದಿದೆ. ಹಾಡುವವರು ಇದರಲ್ಲಿ ಅನೇಕ ಸಂದುಗಳನ್ನು ಮಾಡಿ ಹಾಡುತ್ತಾರೆ. ಪ್ರತಿಯೊಂದು ದೊಡ್ಡ ಹಾಡು ಪ್ರಾರಂಭವಾಗುವುದು ಬಲಗೊಳ್ಳುವ ಸಂದಿನಿಂದ. ನಂತರ ಕಥೆಯು ಸುರುವಾಗುವುದು. ಕಥಾಗರ್ಭದಲ್ಲಿ ಅನೇಕ ಸಂದುಗಳನ್ನು ಹಾಡಿ, ಕಥೆಯು ಮುಗಿಯಲು ಮುಗತಾಯ ಸಂದನ್ನು ಹಾಡಿ ಹಾಡುವವರು 'ಸೋ' ಎತ್ತುವವರಿಗೆ 'ಸೋಬಾನಸೊಲ್ಲು ನಿಲ್ಲಲಿ' ಎಂದು ಹಾಡಿನ ಮುಖಾಂತರ ಸೂಚಿಸಲು ಅಲ್ಲಿಗೆ ಹಾಡುವುದು ಮುಗತಾಯವಾಗುವುದು.

ಪಾಂಡವರು ದಕ್ಷಿಣ ಹಸ್ತಿನಾವತಿಯಲ್ಲಿ ನಿಂತ ನಂತರ ಅರ್ಜುನನು ಭರತಖಂಡದಲ್ಲಿ ಪ್ರಯಾಣ ಮಾಡಿ ಅನೇಕ ಕನ್ನಿಕೆಯರನ್ನು ಲಗ್ನವಾದ ಸಂದರ್ಭಗಳು ಈ ಜಾನಪದ ಮಹಾಭಾರತದಲ್ಲಿ ಬಲು ಸುಂದರವಾಗಿ ಚಿತ್ರಿಸಲ್ಪಟ್ಟಿವೆ. ಇವುಗಳಲ್ಲಿ ಚದುರಂಗ (ಚಿತ್ರಾಂಗದೆ) ಕುಸುಮಾಲೆಯರ ಪ್ರಸಂಗವೂ ಹಾಗೂ ಪಾತಾಳ ಲೋಕದ ನಾಗಕನ್ನೆ ಉಲೂಪಿಯ ಪ್ರಸಂಗವೂ ಅತಿ ಹೃದಯಂಗಮವಾಗಿವೆ. ಜಾನಪದ ಮಹಾಭಾರತದ ಈ ಪ್ರಸಂಗಗಳಲ್ಲಿ ಲೋಕಾನುರೂಢಿಯಂತೆ ದ್ರೌಪತಿಯು ಸವತಿಮತ್ಸರದ ಮೂಲಕ ಅರ್ಜುನನಿಗೆ ಮೆಚ್ಚು ಮಾಡಿಸಲು, ಅವನು ಉಳಿದ ತನ್ನ ಹೆಂಡಂದಿರನ್ನು ಮರೆತು ದ್ರೌಪತಿಯೊಡನೆ ವಿಷಯ ಲೋಲುಪನಾಗಿ ಹನ್ನೆರಡು ವರುಷ ಕಾಲ ಕಳೆಯುತ್ತಾನೆ. ಅರ್ಜುನನ ಮಾರ್ಗವನ್ನು ನಿರೀಕ್ಷಿಸಿ ಬಾರದಿರಲು ನಿರಾಶಯರಾಗಿ ಚದುರಂಗ ಕುಸುಮಾಲೆಯರು, ಸ್ತ್ರೀ ರಾಜ್ಯವನ್ನು ಕಟ್ಟಿಕೊಂಡು ಸುತ್ತು ನೂರುಗಾವುದ ಪರಪುರುಷರ ಸುಳುವು ಸಹ ಆಗಬಾರದೆಂದು ಭವ್ಯಕೋಟೆಯನ್ನು ನಿರ್ಮಿಸಿ, ಕೋಟೆಯೊಳಗೆ ಅರ್ಜುನನ ರೂಪದ ಎರಕವನ್ನು ಹೊಯ್ಯಿಸಿ ಅದನ್ನು ಪ್ರೇಮದಿಂದ ನೋಡುತ್ತ ದಿನಗಳೆಯುತ್ತಿರುತ್ತಾರೆ. ಅವರ ಈ ಸ್ಥಿತಿಯನ್ನು ನೋಡಿ ಮರುಗಿ ಕನಿಕರಪಟ್ಟು ಲೋಕಮಾತೆ ಪಾರ್ವತಿಯು ತನ್ನ ಸದರಿನ ಎರಡು ಗಿಳಿರಾಮನನ್ನು ಅರ್ಜುನನಿಗೆ ಅವನ ಕೃತಿಗಳನ್ನು ನೆನಪಿಗೆ ತಂದು ಕೊಡಲು, ಕಳುಹಿಸಿಕೊಡುವಳು. ಆಗ ಅರ್ಜುನನಿಗೆ ಪ್ರಜ್ಞೆ ಬಂದು ವ್ಯಾಕುಲನಾಗಿ ಚದುರಂಗ ಕುಸಮಾಲೆಯರ ಇರುವನ್ನು ತಿಳಿದುಕೊಳ್ಳಲಿಕ್ಕೆ ಹೊರಡಲು ಸಿದ್ಧನಾಗುವನು. ಅದನ್ನು ಕಂಡ ದ್ರೌಪದಿಯು ಕಸಿವಿಸಿಯಾಗಿ

ತುಚ್ಚ ಮಾಡದೆ ಎನ್ನ, ಮೆಚ್ಚಿ ಎನ್ನೊಡಗೂಡಿ
ಎಚ್ಚೆದಾಗಿದ್ದಿ ಪತಿದೇವ। ಈ ಹೊತ್ತು
ಮೆಚ್ಚು ಮಾಯಾಗಿ ಹೋತೇನ ॥೮॥

ಮಾಟ ಮದ್ದಿನ ಕಾಲ, ಜೂಟಿಯಾದಾವೊ ದೇವ
ಪಾಟ ಎನಗಿನ್ನು ಮುಂದವ್ವ। ನೀರಿಲ್ಲದ
ಬಾವಿಗೆ ರಾಟಿ ಹಾಕೀದ್ಹಾಂಗ ॥೯॥

–ಜಾ–ಮ–ಭಾ–ಜೋಗಿಯಸಂದು

ಹೀಗೆಂದ ದ್ರೌಪತಿಯು ಅರ್ಜುನನ್ನು ಬಿಟ್ಟಗಲಿ ಇರಲೊಪ್ಪದೆ ಅವನನ್ನು ಅಡ್ಡಗಟ್ಟಿದ್ದಾಳೆ. ಅವಳಿಗೆ ತಿಳಿಯದಂತೆ ಅರ್ಜುನನು ಹೆಂಡರ ಮನಸ್ಸನ್ನು ಒರೆಗೆ ಹಚ್ಚಬೇಕೆಂದು ಜೋಗಿಗಳಿದ್ದಲ್ಲಿಗೆ ಹೋಗಿ, ಜೋಗಿ ರೂಪವನ್ನು ತೊಟ್ಟು, ಚದುರಂಗ ಕುಸುಮಾಲೆಯರ ಮಣಿಪರಕೆ ಹೊರಟ್ಟಿದ್ದಾನೆ.

ತುಂಬಿದ ಬೆಳದಿಂಗಳ ॥ಪ॥

ಮಲಗೀದ ಶರಣರು, ಮೈಮುರಿದು ಎದ್ದಾರು
ಸಿದ್ಧರ ಗವಿಗಳಿಗೆ ಹೊರಟಾರೊ ದೇವಾ ॥ ತುಂ॥ ॥೧೫॥

ಎಂದಿಲ್ಲದ ಶರಣರು, ಇಂದು ಬಂದಾರೆಂದು
ಜೋಗಿಗಳು ಸಾಗತ ಮಾಡ್ಯಾರೊ ದೇವಾ ॥ ತುಂ ॥ ॥೧೬॥

ಸುಖಸುದ್ದಿ ಕೇಳ್ಯಾರ, ಹಿತಮಿತ ನುಡಿದಾರ
ಊಟ ಉಪಚಾರ ಮಾಡ್ಯಾರೊ ದೇವಾ ॥ ತುಂ ॥ ॥೧೭॥

ಹೆಂಡರ ಮನಸನ್ನು, ಒರೆಗೆ ಹಚ್ಚುವೆ ನಾನು
ಜೋಗೀಯ ರೂಪವ ಕೊಡಬೇಕೊ ದೇವಾ ॥ ತುಂ॥ ॥೧೮॥

ಜೋಗಿ ರೂಪವ ತೊಟ್ಟು, ಹೆಂಡರ ಬಳಿಗ್ಹೋಗಿ
ಇನ್ನೆಂಟು ದಿನಕ ಮರಳುವೆನೊ ದೇವಾ ॥ ತುಂ ॥ ॥೧೯॥

ಹೊನ್ನಿನ ಈ ಕಂತಿ, ರನ್ನದ ಆ ಕಂತಿ
ಭಸಮದ ಕಂತಿಗಳ ತಂದಾರೊ ದೇವಾ ॥ ತುಂ ॥ ॥೨೦॥

೪. ದಕ್ಷಿಣ ಹಸ್ತಿನಾವತಿಯು 'ಆನೆಗುಂದಿ' ಇರಬಹುದೆ?

ಜಪಮಾಲೆ ನೂರೊಂದು, ತಪಮಾಲೆ ನೂರೊಂದು
ರುದ್ರಾಕ್ಷಿ ಸರಗಳು ಸಾವಿರೊ ದೇವಾ ॥ ತುಂ ॥ ॥೨೧॥

ನಿಲುವಗನ್ನಡಿ ಹಿಡಿದು, ಭಸಮದ ಜಳಕ ಮಾಡಿ
ಗುಂಡಿಯ ನಿಲುವಂಗಿ ಧರಿಸ್ಯಾರೊ ದೇವಾ ॥ ತುಂ ॥ ॥೨೨॥

ಹನ್ನೆರಡುಗಾವುದ, ಗೆಜ್ಜೆಯ ಸಪ್ಪಳಕ
ನೂರೊಂದು ಗುಬ್ಬಿಗಳು ನುಡಿದಾವೊ ದೇವಾ ॥ ತುಂ ॥ ॥೨೩॥

ಕಿನ್ನರಿ ಕಾಯಿಯ, ಎಡಗೈಲಿ ಹಿಡಕೊಂಡು
ನುಡಿಯುವ ಗಿಳಿಯು ಕಂಡೇನೊ ದೇವಾ ॥ ತುಂ ॥ ॥೨೪॥

ಹತ್ತು ಕೈ ಬೆರಳೀಗೆ, ಮುತ್ತೀನ ಉಂಗುರ
ಹಾಕ್ಯಾರೊ ಕೊರಳಿಗೊ ಸರ ಮಾಲ್ಯೊ ದೇವಾ ॥ ತುಂ ॥ ॥೨೫॥

ಬೂದಿಕಂತಿಯ ಬಡಿದು, ರನ್ನ ಕಂತಿಯ ತೀಡಿ
ಜೋಗಿಯ ರೂಪವು ಒಪ್ಪುವದೊ ದೇವಾ ॥ ತುಂ ॥ ॥೨೬॥

ತೊಟ್ಟ ಜೋಗಿಯ ರೂಪ, ಮೈಕಟ್ಟಿಗೊಪ್ಪೇತಿ
ಕುಣಿಕುಣಿದಾಡೆಂದು ಹೇಳಿದರೊ ದೇವಾ ॥ ತುಂ ॥ ॥೨೭॥

ಕಾಲಿಗೆ ಸಾವಿರ ಸಾಲ, ತೋಳಿಗೆ ಸಾವಿರ ಸಾಲ
ಬಾಲೇರು ಬೆನ್ನ್ಹತ್ತಿ ಬಂದಾರೊ ದೇವಾ ॥ ತುಂ ॥ ॥೨೮॥

ಇಂಥ ಜೋಗಿಯ ರೂಪ, ಯಾರಿಗೂ ತುಂಬಿದ್ದಿಲ್ಲ
ಅರ್ಜುನಗ ಸಿದ್ಧರು ನುಡಿದಾರೊ ದೇವಾ ॥ ತುಂ ॥ ॥೨೯॥

ಸಂಜೆಯ ಚಂದಿರನಲ್ಲ, ಮುಂಜಾವಿನ ಸೂರನಲ್ಲ
ಇಬ್ಬರಿಗೂ ತಳಿಗೆಯ ಹಿಡಿದ್ದಾಂಗೊ ದೇವಾ ॥ ತುಂ ॥ ॥೩೦॥

–ಜಾ–ಮ–ಭಾ–ಜೋಗಿಯಸಂದು

ಎಷ್ಟು ಸುಂದರವಾಗಿದೆ ಈ ಜೋಗಿಯ ರೂಪ ಜಾನಪದ ಮಹಾಭಾರತದಲ್ಲಿ! ಸಿದ್ಧರ ಹೊನ್ನಿನಕಂತಿ, ರನ್ನದಕಂತಿ, ಭಸುಮದ ಕಂತಿ, ಜಪಮಾಲೆ, ತಪಮಾಲೆ, ರುದ್ರಾಕ್ಷಿಸರ, ಗುಂಡಿಯ ನಿಲುವಂಗಿ, ಕಿನ್ನರಿಕಾಯಿ, ಹುಲುಗೆಜ್ಜೆ ಮೊದಲಾದ ಸಾಮಗ್ರಿಗಳೂ, ರೂಪ ಧರಿಸಿದ ಮೇಲೆ, ಒಪ್ಪಿರುವ ರೂಪವನ್ನು ನೋಡಿಕೊಳ್ಳಲು ನಿಲುಗನ್ನಡಿಯೂ ಎಷ್ಟು ಯಥಾರ್ಥವಾಗಿ ಬಂದಿವೆ ಇಲ್ಲಿ! ಸಿದ್ಧರು ರೂಪವನ್ನು ಧರಿಸುವ ರೀತಿಯಂತೂ ಬಲುಮಾರ್ಮಿಕವಾಗಿ ಹೇಳಲ್ಪಟ್ಟಿದೆ. ಇಂಥ ಜೋಗಿಯ ರೂಪತೊಟ್ಟ ಅರ್ಜುನನಿಗೆ ಸಾಲುಸಾಲಾಗಿ ಬಾಲೆಯರು ಬೆನ್ನಹತ್ತುವದರಲ್ಲಿ ಆಶ್ಚರ್ಯವೇನು?

ಈ ಜಾನಪದ ಮಹಾಭಾರತವು ಮೈಸೂರ ಭಾಗದಲ್ಲಿಯೂ ಇದ್ದಂತೆ ಕಂಡುಬರುತ್ತದೆ. ಶ್ರೀ ಮಾಸ್ತಿವೆಂಕಟೇಶ ಅಯ್ಯಂಗಾರರು ಸೀರ್ಯದಕಡೆಯ 'ಜೋಗಿಯ ಭಾರತದ ಹಾಡು' ಎಂಬುದನ್ನು ಕುರಿತು "ಕನ್ನಡ ನಾಡಿನ ಲಾವಣಿ ಸಾಂಗತ್ಯಗಳು" ಎಂಬ ಲೇಖನದಲ್ಲಿ ವಿಶದವಾಗಿ ಚರ್ಚಿಸಿದ್ದಾರೆ. "ಇದು ಭಾರತದಲ್ಲಿರುವ ಕತೆಯಲ್ಲ; ಜನಸಾಮಾನ್ಯದ ಕವಿಯೊಬ್ಬನು ಕಟ್ಟಿದ್ದು. ಭಾರತದ ವೀರರನ್ನೂ, ಕೃಷ್ಣದೇವರನ್ನೂ ಕುರಿತ ಕತೆಗಳು ಜನರಲ್ಲಿ ಮೊಳೆತವು ಇಂತಹವು ಅನೇಕವಿವೆ. ಇವುಗಳಲ್ಲಿ ಅನೇಕ ಕತೆಗಳು ಜೋಗಿಗಳಿಗೆ ಸಂಬಂಧಪಟ್ಟವು. ಪ್ರಾಯಶಃ ಹಾಡುವವರು ಜೋಗಿಗಳಾಗಿದ್ದದ್ದರಿಂದ ವೀರರು ಜೋಗಿಯ ವೇಷದಲ್ಲಿ ಬಂದರೆಂದು ಹೇಳುತ್ತಿರುವಂತೆ ತೋರುತ್ತದೆ."[೫] ಆದರೆ ಉತ್ತರ ಕರ್ನಾಟಕದಲ್ಲಿ ವಿಶೇಷವಾಗಿ ಬೆಳುವಲದಲ್ಲಿ ಈ ಮಹಾಭಾರತವನ್ನು ಹಾಡುವವರು ಜೋಗಿಗಳಲ್ಲ, ಭಿಕ್ಷುಕರಲ್ಲ, ಊರ ಮುತ್ತಯ್ದೆಯರು, ನುರಿತ ಹಿರಿಯ ಅನುಭಾವಿಗಳು. ಜೋಗಿಗಳೇ ಈ ಹಾಡುಗಳನ್ನು ಹಾಡುವುದರಿಂದ ವೀರಪುರುಷರಿಗೆ ಜೋಗಿಯ ರೂಪವನ್ನು ಹಾಕಿದರೆಂದು ಅಯ್ಯಂಗಾರರು ಹೇಳುವುದು ಉತ್ತರಕರ್ನಾಟಕದ ವಾತಾವರಣಕ್ಕೆ ಸಮಂಜಸವೆನಿಸಲಾರದು. ಉತ್ತರಕರ್ನಾಟಕದಲ್ಲಿ ಹೆಂಡರ ಗುಣಗಳನ್ನು ಒರೆಗೆ ಹಚ್ಚಲು ಅನೇಕ ಪುರುಷರು ಜೋಗಿಗಳಾಗಿ ಬಂದ ಉದಾಹರಣೆಗಳೂ ಉಂಟು. ಕಾರಣ, ಈ ಭಾರತವನ್ನು ಕಟ್ಟಿ ಜನಪದಕ್ಕೆ ಹಾಡಿದವರು, ಅರ್ಜುನನು ಚದುರಂಗ ಕುಸುಮಾಲೆಯರ ಮನಸ್ಸನ್ನು ಪರೀಕ್ಷಿಸಲು ಹೋಗುವ ಸಮಯವನ್ನು, ಲೋಕಾನುಭವದ ಪ್ರಸಂಗಗಳಿಗೆ ಹೊಂದಿಸಿ, ಅರ್ಜುನನಿಗೆ ಜೋಗಿಯ ರೂಪವನ್ನು ತೊಡಿಸಿರಬಹುದೆಂದು ಕಾಣುತ್ತದೆ. ಸಾಮಾನ್ಯ ಜನರಿಗೆ ಚದುರಂಗ ಕುಸುಮಾಲೆಯರ ಕೋಟೆಯನ್ನು ಪ್ರವೇಶಿಸುವುದು ಸಾಧ್ಯವಿರಲಿಲ್ಲ. ಅದು ಜೋಗಿಗಳಿಗೇ, ಸಿದ್ಧರಿಗೇ ಸಧ್ಯವಾಗಿದ್ದಿತು. ಆದುದರಿಂದ ಅರ್ಜುನನಿಗೆ ಜೋಗಿಯವೇಷವನ್ನು ಜಾನಪದ ಕವಿಯು ಕೊಟ್ಟಿರಲೂ ಸಾಕು. ಸಾಮಾನ್ಯ ಜನರಿಗಾಗಿ ರಚಿಸಿದ ಈ ಹಾಡು ಅರ್ಜುನನು ಜೋಗಿಯ ರೂಪದಲ್ಲಿ ಬರುವುದು ಹೆಚ್ಚು ಪರಿಣಾಮ ಕಾರಿಯಾಗಲೆಂಬುದೇ ಆ ಜಾನಪದ ಕವಿಯ ಉದ್ದೇಶವೆಂದೂ ಹೇಳಬಹುದು.

---

೫. ಕರ್ನಾಟಕ ಸಾಹಿತ್ಯ ಪರಿಷತ್ಪತ್ರಿಕೆ ಸಂ. ೯ ಸಂಚಿಕೆ–೪, "ಕನ್ನಡ ನಾಡಿನ ಲಾವಣಿ–ಸಾಂಗತ್ಯಗಳು".

ಕಾಲ ಕುಣಿಸುತ್ತ ಮಯ್ಯ ಮಣಿಸುತ್ತ, ಜಂಗು ಡಮರು ಮೊದಲಾದುವುಗಳನ್ನು ನುಡಿಸುತ್ತ ಅರ್ಜುನನು ಹೊರಡಲು ಊರ ಹೆಂಗುಸರು ಬೆರಗಾಗಿ ಜೋಗಿಯ ಬೆನ್ನುಹತ್ತಿ ಬಂದರೆಂದು ಹಾಡಿನಲ್ಲಿ ಬಲು ಮೋಹಕವಾಗಿ ಬಂದಿದೆ. ಕುಣಿಯುವ ಜೋಗಿಯು ಕುಂತಿಯ ಅರಮನೆಯಂಗಳದ ಮುಂದೆ ಕುಣಿದು, ಅರಮನೆಯನ್ನು ಹೊಕ್ಕು ರಾಜಗುರುವೆಂದು ಹೇಳಿ ಹಾಸ್ಯ ಮಾಡಿದ ಮಾತುಗಳಂತೂ ಕಾವ್ಯದ ಮುಗುಳಾಗಿವೆ. ಸುಭದ್ರೆಯು ಶೃಂಗಾರಾಗಿ ಅರ್ಜುನನ ಮಂಚಕ್ಕೆ ಬರುವ ದೃಶ್ಯವಂತೂ ಓದುಗರನ್ನು ಶೃಂಗಾರದಲ್ಲಿ ತೇಲಿಸಿ ಬಿಡುವುದು.

ಬಾಕೂತ ಬಳಕೂತ, ಜಾಕೂತ ಜಳಕೂತ
ನಾಚೂತ ಮೈಯನಡಗೂತ । ಕೋ । ನವನಾರಿ
ರಾಗದೊಂದ್ವೆಜ್ಜ ಚಲ್ಲೂತ । ಕೋ । ॥೧೧೫॥

ಕಾಮಕಾಯವ ನೇರಿ ಕೆಂಪುಗಲ್ಲಕ ಏರಿ
ಅನುರಾಗ ದಾರೂತಿ ಬೆಳಗೂತ । ಕೋ । ಆ ರಾಗ
ಕಂಠ ದೊಳು ಜಾರಿ ಕೆಂಪೇರಿ । ಕೋ । ॥೧೧೬॥

ಚಿಗುರೆಲೆ ಬಣ್ಣದ್ಹಂಗ ಬೆರಳುಗಳು ಕಂಡಾವ
ಕಾಮ ಕಾಂತಿಯ ಮನೆಯಾತ । ಕೋ । ತಿಂಗಳನು
ಉಗ್ಗಿರುವ ರಾಗ ಲಾಲೇನ । ಕೋ । ॥೧೧೭॥

–ಜಾ–ಮ–ಭಾ–ಜೋಗಿಯಸಂದು

ಇಲ್ಲಿ ಪದಗಳ ಲಾಲಿತ್ಯದೊಡನೆ ಶೃಂಗಾರವು ಧುಮುಕಿ ಹರಿಯುವುದು. ಕಾಮ ತುಂಬಿದ ಹೆಣ್ಣಿನ ಸೊಗಸಾದ ಮರೆಯದ ಸಹಜ ಚಿತ್ರವಿದು. ಅದರೊಡನೆ ನಯ, ವಿನಯ, ಅರಳಿದ ಹೆಣ್ಣುತನಗಳು ಪ್ರೇಮಪುಷ್ಪದ ಪರಿಮಳದಂತೆ ಬೆರತಿವೆ. ಬಣ್ಣನೆಯಲ್ಲಿ ಮಾನಸಿಕ ಮನೋವ್ಯಾಪಾರದ ತೆರೆಗಳು ಒಂದೇ ಸವನೆ ಏರಿ ಏರಿ ಬರುತ್ತವೆ. ಹೀಗೆ ಸುಭದ್ರಾದೇವಿಯೊಡನೆ ಇರುಳುಗಳೆದ ಅರ್ಜುನನು ಮರುದಿವಸ ಜೋಗಿ ರೂಪವನ್ನು ತೊಟ್ಟು ಹೊರಬೀಳಲು ಅವನ ರೂಪಕ್ಕೆ ಮೋಹಿಸಿ ಊರ ಹೆಣ್ಣುಗಳು ಮನೆ ಬಿಟ್ಟು ಬೆನ್ನು ಹತ್ತುವುವು. ಜೋಗಿಯನ್ನು ಕೆಣಕಿ ಅವನೊಡನೆ ಕಾಮಾಟವಾಡಲು ಬಗೆಸುವುವು. ಅವರ ಇಂಗಿತವನ್ನರಿತ ಆ ಜೋಗಿಯು ಅವರನ್ನು ನಿರಾಕರಿಸಲು,

ಬಂದಂತ ನಾರೇರು, ಹಿಂದಕ ತಿರುಗ್ಯಾರ
ಚೆಂಡೊಬ್ಬಳದರೊಳಗಿದ್ದಾಳೊ ದೇವಾ ॥ ತುಂ ॥ ॥೧೩೬॥

ಮೆಚ್ಚಿ ಬಂದೇನೋ ನಿನ್ನ, ಕಚ್ಚದೆ ಬಿಡಲಾರೆ
ಎಚ್ಚರದಿ ನನ್ನೊಡನೆ ಮಾತಾಡೊ ದೇವಾ ॥ ತುಂ ॥ ॥೧೩೭॥

–ಜಾ–ಮ–ಭಾ–ಜೋಗಿಯ ಸಂದು

ಗಂಡನಿಗೆ ಹೆಣ್ಣಾಗಿದ್ದರೆ ಎಲೆ ಹೆಣ್ಣೆ ಬೇಡೆನಲು–

ಬೆನ್ಹತ್ತಿ ಕಚ್ಚುವ, ಹುಚ್ಚನಾಯಿಯ ತಲೆಗೆ
ಗುಂಡಗಲ್ಲೀಲೆ ಬಗಿದ್ಹಂಗ । ಕೋ । ಆ ಹೆಣ್ಣು
ತಲೆತಿರುಗಿ ಧುಪ್ಪನೆ ಭೂಮಿಗೂ । ಕೋ । ॥೧೪೦॥

–ಜಾ–ಮ–ಭಾ–ಜೋಗಿಯ ಸಂದು

ಎಂದು ಹೆಣ್ಣು ಮಣ್ಣಾಯಿತೆಂದು ಮರಳುವುದನ್ನು ಹಾಡಿನಲ್ಲಿ ಕಾಣಬಹುದು. ಈ ಜೋಗಿಯ ರೂಪಕ್ಕೆ ನಿಸರ್ಗವೇ ಮೈ ಮರೆತು ಮನಸೋತಿದೆ ಎಂದು ಹಾಡಿನಲ್ಲಿ ಬಲು ಸೊಗಸಾಗಿ ಬಂದಿದೆ.

ಜೋಗಿಯ ನೋಡುತ, ಹುಣಸಿ ಹುಳಿ ಒಡಿದಾಳ
ಕಂಚಿ ನಿಂಬಿಗಳು ಮೊದಲಾಗೆ । ಕೋ । ಡೋರಾಗಿ
ಬಾಗ್ಯಾವ ರುಚಿಯ ನೀಡಾರ ॥ ಕೋ ॥ ॥೧೪೨॥

–ಜಾ–ಮ–ಭಾ–ಜೋಗಿಯ ಸಂದು

'ಅಂಜುರಿ ಕಿತ್ತಳೆಗಳು, ಕೆಂಜಗ ಬಣ್ಣವ ತಾಳಿ,' 'ಗಗನ ಮಲ್ಲಿಗೆ ಅರಳಿ, ಪರಿವಳವ ಸೂಸ್ಯಾವ,' 'ನಾಗಸಂಪೀಗಿ ತೆನಿ ಅರಳಿ । ಕೋ । ಬಳುಕಾವು । ಅನುರಾಗ ಗುಂಗಿ ಕರೆದಾವ' । ಹೀಗೆ ನಿಸರ್ಗವು ಸಹ ಅರ್ಜುನನ ಜೋಗಿ ರೂಪಕ್ಕೆ ಮೋಹಿಸಿದೆ.

ಎಲ್ಲ ಸಿಂಗಾರುಟ್ಟು, ಎಲ್ಲ ಸಿಂಗಾರಿಟ್ಟು
ಚೆಲುವಿಕಿ ಹೆಪ್ಪು ಗಟ್ಟಿತೇನ । ಕೋ । ಕೆಂಚೀರ
ಬಾಗಿಲಕ ಜೋಗಿ ಬಂದಾನ ॥ ಕೋ ॥ ॥೧೩೨॥

–ಜಾ–ಮ–ಭಾ–ಜೋಗಿಯ ಸಂದು

ಹೀಗೆ ಜೋಗಿಯ ರೂಪದಲ್ಲಿ ಅರ್ಜುನನು ಚದುರಂಗ ಕುಸುಮಾಲೆಯರ ಕೋಟೆಯ ಬಾಗಿಲಕ್ಕೆ ಬರುವನು. ಈ ಕೋಟೆ ಕೊತ್ತಳದ ಬಾಗಿಲದ ಮುಂದೆ ಜೋಗಿಯು ಕುಣಿದಾಡುವ ಚಿತ್ರವು ಹೆಣ್ಣು ಮಕ್ಕಳ ಬಾಯಿಂದ ಬಂದಿರಬಹುದೇ? ಎಂಬ ಅನುಮಾನವನ್ನು ಹುಟ್ಟಿಸದಿರದು.

ಅಗಸಿ ಬಾಗಿಲ ಮುಂದ, ಕುಣಿಕುಣಿದಾಡತಾರ
ಸುತ್ತಲು ಸರಗೆಜ್ಜಿ ಸಪ್ಪಳ । ಕೋ । ಘಿಲಘಿಲ್ಲ
ತಾಳಕ ನವಿಲಾಗ ಕುಣಿದಾವ । ಕೋ । ॥೧೫೩॥

ಹತ್ತು ಸಾವಿರ ಗುಬ್ಬಿ, ಸುತ್ತನೂಪೂರ ಸರವು
ನಲಿಯು ಹೆಣ್ಣಿನ ಕಾಲಾಗ । ನುಡಿದ್ಹಾಂಗ
ಕಟ್ಟಿದ್ದುಲಗೆಜ್ಜ ನುಡಿದಾವ ॥೧೫೪॥

ಮುಳ್ಳಗಸಿ ಹಾಕ್ಕೊಂಡು, ಹಿರೆ ಅಗಸಿ ಮುಚಗೊಂಡು
ಕಬ್ಬಿಣದ ಅಗಳಿ ಎಳಕೊಂಡು । ತಮ್ಮಾರಿ
ತೋರದೊಳಗಿರು ಹೆಂಗಳೇರು ॥೧೫೫॥

ಗುಳುಗುಳಿ ಸಪ್ಪಳಕ, ಹುಳುಹುಳಸಿ ನೋಡುತಲಿ
ಒಳಗಿರು ಎಲ್ಲ ಬುಳ್ಳೇರು । ಗಜಬಿಜಲಿ
ಅಗಸಿ ಬಾಗಿಲಕ ದುಡಕ್ಯಾರ ॥೧೫೬॥

ನೀರ್ಹಾದಿ ಹಿಡಿದವರು, ಹೌಹಾರಿ ಮರಳ್ಯಾರ
ಅಗಸಿ ಮುಂದಿರುವ ಮೋಚೇನ । ಬರಿಗೊಡದ
ಬಾಲೇರು ಕೊಡವ ಬಗಲಾಗ ॥೧೫೭॥

ಹೂಬೆಣ್ಣಿ ಹಾರಿದರು, ಕುಣಿಕುಣಿದು ಕಡೆದಾರ
ಗೆಜ್ಜಿತಾಳಕ ಮಜ್ಜೀಗಿ ರಾಣಿ । ಹೂಬೆಣ್ಣಿ
ಕರಗಿ ಮನಕರಗಿ ಹುಳ್ಳುಳ್ಗ ॥೧೫೮॥

ಕರುಬಿಟ್ಟ ಕನ್ನೇರು, ತೊರೆಬಿಟ್ಟ ತುರುಗಳು
ಇನಿದನಿ ಕೇಳಿ ಮಣಿದಾಡಿ । ಕೆಚ್ಚಲಕ
ಕರುಹಾಕಿ ಬಾಯ ತಗೆದಾವ ॥೧೫೯॥

ಹಾಡಿ ಬೀಸುವ ಮುಂದ, ಬಳೆಯ ತಾಳದ ಕೂಡ
ಕುಣಿಯ ಬಗೆಸಿದ ಹೆಣ್ಣುಗಳು । ಸಿಗದಿರಕ
ಬೀಸೂದ ಬಿಟ್ಟು ಕುಣಿದಾರ ॥೧೬೦॥

ಪುಂಗಿನಾದಕ ನಾಗ, ಹಿಂಗ ಹೆಡೆ ಎತ್ತಿದ್ಹಾಂಗ
ಸಂಗಚೋಡಣೆಯ ದನಿಕೇಳಿ । ವೇಸೇರು
ಗುಂಗನಾದಕ ಕುಣಿದಾರ ॥೧೬೧॥

ಮನಸಿಗೇನೊ ಆಗಿ, ಹಳವಂಡ ಹಿಡಿದ್ಹಾಂಗ
ಹೆಂಗಳೇ ರಗಸಿ ಬಾಗಿಲಕ । ಅವಸರದಿ
ಕೆಲಸ ಬಿಟ್ಟೋಡಿ ಬಂದಾರ ॥೧೬೨॥

ಹೆಬ್ಬಾದ ಬಾಗಿಲವ, ಉಬ್ಬಿ ತಗೆದಾರವರು
ಕಬ್ಬಿಣ ಕದವು ಥಣಲೆಂದು । ಆಚಣಕ
ಸುಬ್ಬೇರೆದೆ ಗಂಟೆ ಥಣಥಣ ॥೧೬೩॥

ಬಟ್ಟನ ಬಯಲಾಗ, ನಟ್ಟನಡುವಾ ಜೋಗಿ
ಕಟ್ಟೇಯ ನೇರಿ ನಿಂತಾರ । ಹೆಂಗಸರು
ನೆಟ್ಟ ದಿಟ್ಟೇಲಿ ನೋಡುತಲಿ ॥೧೬೪॥

ಹಿಂಡೆರಳೆ ಗುಂಪಿನಾಗ, ಗಂಡೆರಳೆ ಕಂಡ್ಹಾಂಗ
ಮಂಡಲದಾಗ ಹೆಂಗಸರ । ಅರ್ಜುನರು
ಪುಂಡ ಜೋಗ್ಯಾಗಿ ಕಾಣುವರ ॥೧೬೫॥ *–ಜಾ–ಮ–ಭಾ–ಜೋಗಿಯ ಸಂದು*

ವರ್ಣನಾ ವೈಖರಿಯು ಹೇಳಲಾರದಷ್ಟು ಮೀಸಲಾಗಿದೆ. ಬಿಚ್ಚಿ ಹೇಳಿದರೆ ಅದರ ಮೀಸಲವು ಮುರಿದು ಮಾಸಿಹೋಗಬಹುದು. ಹೆಣ್ಣು ಹೆಣ್ಣಿನ ವರ್ಣನೆಯನ್ನು ಮನಬಿಚ್ಚಿ ಇಷ್ಟೊಂದು ಸರಳ ಶೈಲಿಯಲ್ಲಿ ಬಣ್ಣಿಸಿದ್ದು ನಮಗೆ ಎಲ್ಲಿಯೂ ಕಂಡುಬರುವುದಿಲ್ಲ. ಹೆಣ್ಣೇ ಇದನ್ನು ಚಿತ್ರಿಸಿರುವುದರಿಂದ ಹೆಣ್ಣಿನ ಮನೋವ್ಯಾಪಾರ, ಮಾನಸಿಕ ಪರಿಣಾಮ, ಕಳವಳ, ಉದ್ವಿಗ್ನತೆ, ಚಂಚಲತೆ, ಗಡಬಿಡಿ, ನಾಚಿಕೆ, ಮನೋಬಯಕೆ ಮೊದಲಾದುವುಗಳು ಭಾವಭರಿತವಾಗಿ ಒಡಮೂಡಿವೆ ಹಾಡಿನಲ್ಲಿ. ಅಲ್ಲದೆ, ಇವೆಲ್ಲವುಗಳ ಹಿಂದೆ ಹೆಣ್ಣು ಕೈಕೊಳ್ಳುವ ಮುಂಜಾನೆಯ ಮನೆಗೆಲಸಗಳು ಈ ಎಲ್ಲ ಭಾವಗಳೊಡನೆ ರಸಭರಿತವಾಗಿ ತುಂಬ ಧ್ವನಿತವಾಗಿದೆ. ಕಡೆಯ ಪದ್ಯದಲ್ಲಿ ಬರುವ ಅಲಂಕಾರವಂತೂ ಎಲ್ಲ ದೃಷ್ಟಿಯಿಂದ ತುಂಬಿದ್ದಾಗಿದೆ. ಹೀಗೆ ಕೂಡಿದ ಹೆಣ್ಣು ಮಕ್ಕಳು ಆ ಜೋಗಿಯ ರೂಪಕ್ಕೆ ಮರುಳಾಗಿ ಅವನ ಅಂಗಾಂಗಳನ್ನು ಬಲುಪರಿಣಾಮಕಾರಿಯಾಗಿ ಹೊಗಳುವ ನುಡಿಗಳಂತೂ ಮಾದರಿಯ ಪದ್ಯಗಳಾಗಿವೆ.

ತುಂಬಿದ ಬೆಳದಿಂಗಳ ॥ ಪ ॥

ಯಾವನಾಡಿನ ಜೋಗಿ, ಎಂಥ ಚೆಲುವನು ನೋಡ
ಕಿರಿಗೆಜ್ಜೆ ಹುರಿಗೆಜ್ಜೆ ಕಾಲೊಗೊದೇವಾ । ತುಂ । ॥೧೬೬॥

ತಿದ್ದಿ ತೀಡಿದ ಹುಬ್ಬ, ಮುದ್ದಿಡು ಕೆನ್ನೆಗಳು
ಕದ್ದೀಲಿ ಹುರಿಹಾಕು ಮೀಸಿಗಳೊ ದೇವಾ । ತುಂ । ॥೧೬೭॥

ಹರವಾದ ಹಣೆಯಾಗ, ಮೂಬಳ್ಳ ವಿಭೂತಿ
ಗೆರೆಕೊರೆದು ಬರೆದ ಶಂಕರನು ದೇವಾ । ತುಂ । ॥೧೬೮॥

ಮೂಗು ಸಂಪೀಗಿ ತೆನೆಯೊ, ಕಣ್ಣು ಕವಳೀಯ ಹಣ್ಣು
ತುಟಗಳು ತೊಂಡೆಯ ಹಣ್ಣೇನೊ ದೇವಾ । ತುಂ । ॥೧೬೯॥

ಚೂಂಪಾದ ಗದ್ದವು, ಬಾವೂಲಿ ಕಿವಿಗಳು
ಕೆಂಜೆಡೆಯು ತುಂಬಿದ ತಲೆಯವನೊ ದೇವಾ । ತುಂ । ॥೧೭೦॥

ಎದೆನಾಗ ಹೆಡಿಯ್ಹಂಗ, ಬೆನ್ನುಹಲಗಿಯ್ಹಂಗ
ಕತ್ತು ಸಿಂಗನ ಕುತ್ತಿಗೆಯೊ ದೇವಾ । ತುಂ । ॥೧೭೧॥

ತೆಳ್ಳನ ಹೊಟ್ಟ್ಯಾಗಿ, ಸಿಂಗದ ನಡವಾಗಿ
ಬಾಹುಗಳು ಆನೆಯ ಸೊಂಡಿಗಳೊ ದೇವಾ । ತುಂ । ॥೧೭೨॥

ಕೊರೆದ ಕಂಬಗಳಂತೆ; ತೊಡೆತುಂಬಿ ಕಾಲುಗಳು
ಕಿಪ್ಪೊಟ್ಟೆ ಕೊರೆದಿಟ್ಟ ಗಗ್ಗರಿಯೊ ದೇವಾ । ತುಂ । ॥೧೭೩॥

ಹುಲಿಯಾನ ಚರಮಬೀಸಿ, ಕಂತೆಗಳ ತುಂಬ ಧರಿಸಿ
ಜಂಗುಗಳ ಬಿಕ್ಕೊಂಡ ಶಿವನೇನೊ ದೇವಾ । ತುಂ । ॥೧೭೪॥

ತಾಂಡವ ರೂಪವ ಮಡಿಚಿ, ಲೀಲಾ ರೂಪವ ಧರಿಸಿ
ಲೋಕಕ್ಕೆ ಇಳಿದ ಮುಕ್ಕಣ್ಣನೊ ದೇವಾ । ತುಂ । ॥೧೭೫॥

ಕೊರಳೊಳಗ ರುದ್ರಾಕ್ಷಿ, ಕೈಯೊಳಗ ಜಪಮಾಲೆ
ನಾಗಮುರುಕಿವಿಗೆ ಭೂಷಣವೊ ದೇವಾ । ತುಂ । ॥೧೭೬॥

ಕೂಡಿದ ಹೆಂಗಳೇರು, ನೂರೊಂದು ನುಡಿದಾರು
ಜನಬಾಯಿ ಒಡಕ ಗಡಿಗೆವ್ವ । ಲೆಕ್ಕಿಸದೆ
ಅರ್ಜುನ ಜೋಗಿ ಕುಣಿದಾರ ॥ ಕೋ ॥ ॥೧೭೭॥

ಹಾಗಲ್ಲ ಕೇಳs-ಗೆಳತಿ ।
ಇವನೊಬ್ಬ ಸೋಗೀನ ಜೋಗಿ ಕಾಮ ।
ಮುನಿದ ಮುಕ್ಕಣ್ಣನ ।
ತಪದ ಬೆಂಕಿಗೆ ಸುಟ್ಟ ।
ಬೂದಿಕಾಮೀಗ ಜೋಗಾಗ್ಯಾನ ॥೧೭೮॥

ಜಂಗು ಕಟ್ಟಿದ ಜೋಗಿ, ಮಂಗಕಾಣಿಸತಾನ
ಸಂಗ ಬಗೆಸುವ ವಿಟನ್ಹಂಗ । ಸುರಿತಾಕಿ
ಕೊಂಕು ನುಡಿಗಳ ನುಡಿದಳಾಗ । ಕೋ । ॥೧೭೯॥

ಹೆಣ್ಣಾಗದ ಗನ್ನೇರು, ಗುನ್ನೆ ಮಾಡಿದೆವೆಂದು
ಸೊನ್ನಿಲೆ ಮನದಾಗ ಮರಗೂತೊ ದೇವಾ । ತುಂ । ॥೧೮೦॥ -ಜಾ-ಮ-ಭಾ-ಜೋಗಿಯ ಸಂದು

ಇದೊಂದು, ಹೆಣ್ಣು ಗಂಡನ್ನು ಬಣ್ಣಿಸಿದ ಅಪರೂಪವಾದ ವರ್ಣನೆ. ಗಂಡು ತನ್ನ ಪೌರುಷವನ್ನು ಅನೇಕ ಕಾವ್ಯಗಳಲ್ಲಿ ಹೊಗಳಿಕೊಂಡಿವೆ. ಹೆಣ್ಣನ್ನಂತೂ ಮನಸೋತು ಚಿತ್ರಿಸಿದೆ. ಆದರೆ ಹೆಣ್ಣಿನ ಬಾಯಿಂದ ಗಂಡಿನ ವರ್ಣನೆಯು ಬಂದದ್ದು ಬಲು ವಿರಳ. ಆ ದೃಷ್ಟಿಯಿಂದ ನಾವು ಈ ಪದ್ಯಗಳಿಗೆ ಮಹತ್ವ ಕೊಡಲೇಬೇಕು. ಇಲ್ಲಿ ಅಂಗಾಂಗಳ ವರ್ಣನೆಯು ಬಂದರೂ ಈ ಹಾಡನ್ನು ಮೊದಲು ರಚಿಸಿ ಹಾಡಿದ ಕವಯತ್ರಿಯು ಅಶ್ಲೀಲತೆಯನ್ನು ಎಲ್ಲಿಯೂ ತಂದಿಲ್ಲ. ವರ್ಣನೆಯು ಬೆಡಗಿನೊಂದಿಗೆ ಕನ್ನಡ ಪಡಿಮಾತುಗಳಲ್ಲಿ ಬಲು ಲಲಿತವಾಗಿ ಬಂದಿದೆ. ಇಲ್ಲಿ ಒಡಮೂಡಿದ ನಮ್ಮ ಹಳ್ಳಿಯ ಹೆಣ್ಣುಮಕ್ಕಳ ನಯ, ವಿನಯಾದಿಗಳಿಗೆ ಬೆಲೆಯೇ ಇಲ್ಲ. ಎಲ್ಲವೂ ಅಚ್ಚುಕಟ್ಟಾದ ಜಾನಪದದ ಮಾಸದ ಹೊದಿಕೆಯಲ್ಲಿ ದೇದೀಪ್ಯಮಾನವಾಗಿದೆ. ಈ ಪದ್ಯಗಳನ್ನು ಹಾಡುವ ರೀತಿಯಂತೂ ತುಂಬಿ ತೇಲುವ ರಸಪಾಕ. ಓದುಗರು ಈ ಪದ್ಯಗಳನ್ನೋದ ಹತ್ತಲು ಪ್ರತಿಯೊಂದು ಪದ್ಯದಲ್ಲಿ ಬರುವ ಮನೋಹರವಾದ ತುಂಬಿದ ಚಿತ್ರವನ್ನು ತ್ರಿಕರಣ ಪೂರ್ವಕವಾಗಿ ಅನುಭವಿಸಿ, ತಲೆದೂಗಿ ನಾವೇಕೆ ಚಿತ್ರಗಾರರಾಗಬಾರದು? ಎಂದು ಹಂಬಲಿಸಬಹುದು. ಅಷ್ಟು ಜೀವಿತವಾಗಿವೆ ಇಲ್ಲಿ ಬಂದ ಚಿತ್ರಗಳು! ಹೀಗೆ ಬಂದ ಜೋಗಿ ಕುಣಿದಾಡುತ್ತ ಕೋಟೆಯನ್ನು ಹೊಕ್ಕು ಚದುರಂಗ ಕುಸುಮಾಲೆಯರ ತೋಟದಲ್ಲಿ ಅಲೆದಾಡಿ ಬೆನ್ನು ಹತ್ತಿದ ಅನೇಕ ಹೆಂಗಳೆಯರಿಗೆ ಅನೇಕ ಪ್ರಶ್ನೆಗಳನ್ನು ಕೇಳುತ್ತ ಅವರ ಅರಮನೆಯನ್ನೇ ಸೇರುವನು. ಅರಮನೆಯಲ್ಲಿ ಜೋಗಿಯು ಚದುರಂಗ ಕುಸಮಾಲೆಯರಿಗೆ ಏಕೆ? ಏನು? ಹಾಗೆ, ಹೀಗೆ ಎಂದು ವಿಚಾರಿಸುತ್ತ ಕೊನೆಗೆ ತನ್ನ ನಿಜರೂಪವನ್ನೇ ತೋರಿಸುವನು.

ಗೆದ್ದ ಹುಂಜವು ಎದ್ದು, ಸದ್ದು ಮಾಡದೆ ಕೂಗಿ
ಕದ್ದಿಲೆ ಕರೆದ್ಹಾಂಗ ಕೋಳಿಗಳ । ಕೋ । ಜೋಗಿಯು
ಹುದ್ದೆ ಪಡೆದಾನೊ ಮನಿಯಾಗ । ಕೋ । ॥೨೪೦॥

ಎಂದು ಸಂದರ್ಭಕ್ಕೆ ಸರಿಯಾಗಿ, ಬಲು ಸ್ವಾರಸ್ಯವಾಗಿ ಬಂದಿದೆ ಹಾಡಿನಲ್ಲಿ. ಬಂದ ಜೋಗಿಯು ಅರ್ಜುನನೆಂದು ತಿಳಿಯಲು ಚದುರಂಗ ಕುಸುಮಾಲೆಯರಿಗೆ ಹೆಣ್ಣುತನ ನಾಚಿಕೆಯು ತುಂಬಿ ಬಂತು. ಈಗ ಜೋಗಿಯು ಮನೆಯ ಅಳಿಯನಾದ. ಅವನಿಗೆ ಊಟ ಉಪಚಾರದ ಆದರ ಸತ್ಕಾರವು ನಡೆದದ್ದನ್ನು ಓದಿಯೇ ತಣಿಯಬೇಕು. ಅವನ ಸಲುವಾಗಿ ಮಾಡಿದ ಊಟದಲ್ಲಿ ಕನ್ನಡ ನಾಡಿನ ಕಾಯಿಪಲ್ಲೆಗಳ ದೊಡ್ಡ ಪಟ್ಟಿಯೇ ಬಂದು ಹೋಗಿಬಿಟ್ಟಿದೆ. ಚದುರಂಗ ಕುಸುಮಾಲೆಯರನ್ನು ತನ್ನ ಎಡಬಲದಲ್ಲಿ ಕುಳ್ಳಿರಿಸಿಕೊಂಡ, ಅರ್ಜುನನ ಚಿತ್ರವಂತೂ ಕಲ್ಪನಾತೀತವಾಗಿ ಬಂದಿದೆ ಹಾಡಿನಲ್ಲಿ

ಎಡಕವಳು ಕುಸಮಾಲಿ, ಬಲಕವಳು ಚದುರಂಗಿ
ಶನಿಮಂಗಳ ನಡುವೆ ಚಂದಪ್ಪೊ ದೇವಾ । ತುಂ । ॥೨೭೯॥

ಎಂದು ಬರುವ ಚಿತ್ರದ ರೂಪಕವು ಬಲು ರಮ್ಯವಾಗಿದೆ. ಜಳಕ ಮಾಡಿ ಹೂವಿನ ಹಡದಿಯ ಮೇಲೆ ಹಾಯ್ದು ಊಟದ ಮನೆಗೆ ಬಂದ ಅರ್ಜುನನು ನಾರಿಯರಿಬ್ಬರನ್ನೂ ಊಟಕ್ಕೆ ಕರೆ ಎಂದು ಹಿರೆ 'ದೂತಿ'ಗೆ ಹೇಳಲು

ನಾರೇರು ಇಲ್ಲದೆ, ನಾನುಣ್ಣ ಬೇಕೇನ
ಹಿರೆದೂತಿ ಹೋಗಿ ಕರೆತಾರ । ಕೋ । ಒಲ್ಲೆನುತ
ಗುಲ್ಲ ಮಾಡದಲೆ ಬಂದಾರ ॥ ಕೋ ॥ ॥೨೭೯॥

ಗುಜುಗುಜು ಮಾತಾಡುತ, ಪಿಸಿಪಿಸಿ ನಗವೂತ
ಸೆರಗೀಲೆ ಮುಸುಕ ಎಳೆದರಾಗ । ಕೋ । ಅರಸರಿಗೆ
ಮನದೊಳಗೆ ನೋಡ ಕಸವಿಸಿ ॥ ಕೋ ॥ ॥೨೮೦॥

-ಜಾ-ಮ-ಭಾ-ಜೋಗಿಯ ಸಂದು

ಇಲ್ಲಿ ಬಯಕೆಯುಳ್ಳ ಮೊದಲಗಿತ್ತಿಯ ಸಹಜ ನಾಚಿಕೆಯಿದೆ. ಹೆಣ್ಣಿನ ಸ್ವಭಾವದ 'ಬುಳ್ಳೆತನವು' ಒಲ್ಲೊಲ್ಲೆಂದು ಬೇಕೆನಿಸಿದ್ದನ್ನು ಸುಮ್ಮನೆ ಸ್ವೀಕರಿಸಿದೆ. ಹೆಣ್ಣಿನ ಮುಖವನ್ನು ನೋಡಬೇಕೆಂಬ ಗಂಡಿಸಿಗೆ ಹೆಣ್ಣು ಸೆರಗಳೆಯಲು ಕಸವಿಸಿಯಾಗುವುದು ಸಹಜ. ಆ ಆತುರತೆಯ ಮನೋ ವ್ಯಾಪಾರವು ಒಳ್ಳೆ ಹದವಾಗಿ ಮೂಡಿ ಬಂದಿದೆ ಇಲ್ಲಿ. ಒಡಲೂಟವಾದ ಮೇಲೆ ಹಾಡಿನಲ್ಲಿ ಬರುವ ಸಳೆ ಮಂಚದ ಶೃಂಗಾರವು ಅಪ್ರತಿಮವಾಗಿದೆ.

ಚಂದಿರ ಮಂಚವು, ಮಂದಿರಕ ಒಪ್ಪಿತ್ತ
ಅಂದಾಗಿ ಕೊರೆದ ಮುತ್ತುಗಳ । ಕೋ । ಕುಸರುಗಳು
ಗಗನ ತಾರೆಗಳ ನಕ್ಷಿಯೇನೋ ॥ ಕೋ ॥ ॥೨೮೪॥

ಹುವಿನ್ಹಾಸಿಗಿ ಮ್ಯಾಲೆ, ಅಂಚಿ ದುಪ್ಪಳ ದಿಂಬು
ಮಂಚವು ಹೊಂಚೀಲಿ ಕರೆಯುವದೂ ದೇವಾ । ತುಂ । ॥೨೮೫॥

ಮೂಲಿಗೆ ತೂಗುವ, ಹೂವಾಲೆ ಸರಗಳು
ಪ್ರೇಮಿಗಳ ಬರವನ್ನು ಕಾಯುವವೊ ದೇವಾ । ತುಂ । ॥೨೮೬॥

ತಾಣ ದೀವಿಗೆ ತುಂಬಿ, ಕಟ್ಟದೀವಿಗೆ ತುಂಬಿ
ಸುಗಂಧ ಬೆಳಕದು ಬೆಳದಿಂಗಳೊ ದೇವಾ। ತುಂ। ॥೨೮೭॥

ಲೋಕದ ವಿರಹದ, ತಾಪವ ಕಳೆಯುದಕ
ತಂಪು ಕಂಪುಗಳ ಸೊಂಪೇನೊ ದೇವಾ। ತುಂ। ॥೨೮೮॥

ಜರದ ಹೂವಿನ ಸೀರಿ, ಕಾಮಜ್ವರದ ಸೀರಿ
ತಂಪುಗ್ಗು ಚಂದಿರ ಕುಪ್ಪಸವೊ ದೇವಾ। ತುಂ। ॥೨೮೯॥

ಎಳ್ಳ ಹೂವಿನ ಸೀರಿ, ಬೆಳಕ ನುಂಗುವ ಸೀರಿ
ಎಳೆ ನೂರು ತುಳಿ ನೂರು ಸೆರಗೀಗೊ ದೇವಾ। ತುಂ। ॥೨೯೦॥

ಚೆಂದರ ಕಾಳಿಯ ಸೀರಿ, ಚೆಲುವೇರುಡುವ ಸೀರಿ
ಗಡದುಹೂ ಎಂದು ಕುಪ್ಪಸವೊ ದೇವಾ। ತುಂ। ॥೨೯೧॥

ಸುಗಂಧ ಎಣ್ಣೆ ಹೂಸಿ, ಒತ್ತಿಕ್ಕಿ ಬಾಚ್ಯಾರ
ಚೊಕ್ಕಾದ ನಾಗರ ಮುಡಿಗಳೊ ದೇವಾ। ತುಂ। ॥೨೯೨॥

ಮೇಗುಂಡಿಗೊಳ್ಳದ, ಎಸಳ ಕ್ಯಾದಿಗೆ ತಂದು
ಕುಶಲದಿ ಹಾಕಿರುವ ಹೆಳಲುಗಳೊ ದೇವಾ। ತುಂ। ॥೨೯೩॥

ದುಂಡ ಮಲ್ಲಿಗೆ ದಂಡೆ, ಸೊಜಮಲ್ಲಿಗೆ ತೊಂಡೆ
ಬೆಳವಲ ಮಲ್ಲಿಗೆ ಹಾರಗಳೊ ದೇವಾ। ತುಂ। ॥೨೯೪॥

ಹಚ್ಚಿ ಬೊಟ್ಟನ ತುಂಬ, ಕುಂಕುಮ ಬೊಟ್ಟು ಚೆಂದ
ಮೂಬಳ್ಳ ವಿಭೂತಿ ಗೆರೆಗಳೊ ದೇವಾ। ತುಂ। ॥೨೯೫॥

ಜೋಡೆಳೆಯ ಕರಿಮಣಿಯ, ತಾಳಿಯ ಸರವೊಂದು
ನಾರೇರಿಗೆ ಹೆಚ್ಚಿನ ಭೂಷಣವೊ ದೇವಾ। ತುಂ। ॥೨೯೬॥

ಮುತ್ತಿನ ಬುಗಡಿಗಳು, ಹಳ್ಳ ಹಚ್ಚಿದ ವಾಲಿ
ಮುತ್ತಿನ ಮುಗನತ್ತು ಮೂಗೀನೊ ದೇವಾ। ತುಂ। ॥೨೯೭॥

ದೊಡ್ಡ ಹೆಜ್ಜದ ಕಿವಿಗೆ, ವಜ್ಜರದ ಬೆಂಡೋಲೆ
ಇನ್ನುಳಿದ ಒಪ್ಪುವ ಆಭರಣವೊ ದೇವಾ। ತುಂ। ॥೨೯೮॥

ಮುರಿಗೆಯ ವಂಕಿಗಳು, ಕೊರೆಯೂ ಜಾಜೂಬಂಧ
ವಜ್ರದ ಗೊಂಡೆಗಳ ಸಿಂಗಾರೊ ದೇವಾ। ತುಂ। ॥೨೯೯॥

ಪದಕಗಳ ಸರ ಒಂದು ಚಂದಿರ ಹಾರೊಂದು
ಮುತ್ತಿನ ಸರಗಳ ಜೋಡಣೆಯೊ ದೇವಾ। ತುಂ। ॥೩೦೦॥

ಚಿಂತಾಕ ಸರಗೀಯು, ವಜ್ರ ರುದ್ರಾಕ್ಷಿಗಳು
ನೆಲ್ಲಿಕಾಯಿಯ ಸರಗಳೊ ದೇವಾ। ತುಂ। ॥೩೦೧॥

ರನ್ನದ ಗೋಪುಗಳು, ಮುತ್ತೊತ್ತಿದ ಬಳೆಗಳು
ಸಿಂಗಾರ್ಧ ಕೈಗೆ ಭೂಷಣಗಳೊ ದೇವಾ। ತುಂ। ॥೩೦೨॥

ವೇಡೂರ ವಡ್ಯಾಣ, ಸುತ್ತಕಿನ್ನರಿ ಗೆಜ್ಜೆ
ಕಾಮನ ಬಲ್ಲಿನ ಉಗಮೇನೊ ದೇವಾ। ತುಂ। ॥೩೦೩॥

ಕಿಣಿಕಿಣಿ ಪೈಜಾಣ, ರುಳಿಗಳ ಮೇಲೆದ್ದು
ನಲಿನಲಿದು ಕುಣಿಯೂವ ಧನಿಯೇನೊ ದೇವಾ। ತುಂ। ॥೩೦೪॥

ಅಕ್ಕತಂಗೇರಾಗ, ವೇಷ ಭೂಷಣ ಮಾಡಿ
ಆರೂತಿ ಎಲೆ ತಬಕ ಕೈಯಾಗೊ ದೇವಾ। ತುಂ। ॥೩೦೫॥

ಹಿರೆದೂತಿ ಮುಂದಾಗಿ, ಅಕ್ಕತಂಗೇರವರು
ದಂಡೆತ್ತಿ ಮುತ್ತುವ ಮಾಯೇನೊ ದೇವಾ। ತುಂ। ॥೩೦೬॥

ಬೆಳಗುವ ಮಂದಿರವ, ಝುಗಝುಗಿಸಿ ಹೊಳೆಸೂತ
ಜಕಣೇರು ಮಂಚಕ ನಡೆದಾರೊ ದೇವಾ । ತುಂ । ॥೩೦೭॥

ಬಂಗಾಗಿ ಹೋಗಿದ್ದ, ಅಂಗವಿಲ್ಲದ ಕಾಮ
ಅರ್ಜುನರ ಸಂಗಡ ರೂಪಾಗ್ಯೋ ದೇವಾ । ತುಂ । ॥೩೦೮॥

ವಾರಿನೋಟದ ಗುರಿಯು, ಕ್ವಾರಿ ಕುಡಿಮೀಸೆಯು
ಪ್ರೇಮದಲಿ ಕಾಮುಕ ಕರೆಯುವವೊ ದೇವಾ । ತುಂ । ॥೩೦೯॥

ಎಡಗೈಯ ಟೊಂಕಕ, ಬಲಗಾಲ ಮುಂದಕ
ತೋಳ ತೆಕ್ಕೇಗೆ ಬಲಗೈಯೊ ದೇವಾ । ತುಂ । ॥೩೧೦॥

ಉಬ್ಬಿದ ಮೈದುಂಬಿ, ಜಠರ ಮಡಿಯನ್ನುಟ್ಟು
ಒತ್ತಿಕ್ಕಿ ವಡ್ಯಾಣ ಬಿಗಿದಾರೊ ದೇವಾ । ತುಂ । ॥೩೧೧॥

ಕಾಮ ಕಂಪಾಗಿ ಬರಲು, ಕಾಯ ಕೆಂಪೇರಲು
ಉಬ್ಬುಡುಗಿ ನಿರಿಗೆ ಸಡಿಲ್ಯಾವೊ ದೇವಾ । ತುಂ । ॥೩೧೨॥

ಪುಂಗಿ ಮೋಡಿ ಹಾಡಿ, ನಾಗರ ಹಿಡಿದ್ಹಾಂಗ
ಅರ್ಜುನರ ತೋಳಿಗೆ ನಾರೇರೊ ದೇವಾ । ತುಂ । ॥೩೧೩॥

ರಾಸಾಟ ರಸದೂಟ, ಮನದಾಟ ಮನದೂಟ
ಕಾಯಕ ಕಾಮದ ಕೊನೆಯೂಟೊ ದೇವಾ । ತುಂ । ॥೩೧೪॥

ಅರಿಯದಲೆ ಇರುಳೆಲ್ಲ, ಕಳೆದುಹೋಯಿತು ನೋಡ
ತೋಳತೆಕ್ಕ್ಯಾಗ ತೇಲಾಡಿ ದೇವಾ । ತುಂ । ॥೩೧೫॥

–ಜಾ–ಮ–ಭಾ–ಜೋಗಿಯಸಂದು

ಇದೊಂದು ಪ್ರೇಮರಾತ್ರಿಯ ಶೃಂಗಾರದ ಸೊಬಗಿನ ಚಿತ್ರವೆಂದೇ ಹೇಳಬಹುದು. ಹಲಕೆಲವು ಪದ್ಯಗಳಲ್ಲಿ ಸ್ಥಾನಿಕ ವರ್ಣನೆಗಳು (Local colour) ನೇರವಾಗಿ ಸಮಯಕ್ಕೆ ಜೋಡಣೆಯಾಗಿ ಬಂದಿವೆ. ಶಬ್ದಗಳು ಲಾಲಿತ್ಯದೊಡನೆ ಕುಣಿಕುಣಿದು ಹೊಸರೂಪ ತೊಟ್ಟು ಅರ್ಥಗರ್ಭಿತವಾಗಿವೆ. 'ತಾರೆಗಳ ನಕ್ಷಿ,' 'ಹೂವಿ ನ್ಹಾಸಿಗೆ,' 'ತಾಣ ದೀವಿಗೆ,' 'ಕಟ್ಟು ದೀವಿಗೆ,' 'ಕಾಮ ಜ್ವರದ ಸೀರಿ,' 'ಚಂದಿರ ಕುಪ್ಪಸ' ಮೊದಲಾದವುಗಳಂತೂ ಎಸಳಗರಿಗಳಂತೆ ಒಡೆದು ಬಹಳ ಇಂಪಾಗಿವೆ. ಹಲವು ಪದ್ಯಗಳು ಹೆಣ್ಣುಮಕ್ಕಳ ಆಭರಣಗಳ ಪಟ್ಟಿಯಾಗಿವೆ. ಆ ಎಲ್ಲ ವೇಷಭೂಷಣದ ಜಕಣೆಯರು ಅರ್ಜುನನ ಮಂಚದ ಸಮೀಪಕ್ಕೆ ಬರುತ್ತಿರಲು ಅವನ ವಾರಿನೋಟವೂ, ಕೋರೆ ಮೀಸೆಗಳೂ ಕದ್ದಿನಲಿ ಪ್ರೇಮಕ್ಕೆ ಕರೆಯುತ್ತಿರುವಂತೆ ಹುರಿಗಟ್ಟಿದುವೆಂದೂ, ಕೈ ಚಾಚಿದ ತೋಳ ತೆಕ್ಕೆಗಳು ಗಾಢಾಲಿಂಗನ ಬಗೆಸುತ್ತಿದ್ದವೆಂದೂ, ಹೆಣ್ಣು ಹೀಗೆ ವರ್ಣಿಸುವುದರಲ್ಲಿ ಗಂಡಿನ ರೂಪಲಾವಣ್ಯದ ಅವಳ ಮನೋಬಯಕೆ ವ್ಯಕ್ತವಾಗುತ್ತದೆ. ಮೊದಲು ಭೆಟ್ಟಿಗೆ ಬಂದ ಹೆಣ್ಣು, ತನ್ನ ಉಬ್ಬಿನಲ್ಲಿ ಜರದ ಸೀರಿಯನ್ನುಟ್ಟು ಮೇಲೆ ವಡ್ಯಾಣವನ್ನು ಒತ್ತಿಕ್ಕಿಟ್ಟಿದ್ದರೂ, ಕಾಮ ಕಂಪಾಗಿ ಬರಲು ಕಾಯ ಕೆಂಪೇರಿ, ಆ ಉಬ್ಬುಡುಗಿ ಉಟ್ಟ ಸೀರಿಯೇ ಸಡಿಲಾಯಿತೆಂದು ಹೇಳುವ ರೀತಿಯು ಅಶ್ಲೀಲವಾಗಿಲ್ಲ; ಶೃಂಗಾರರಸ ತುಂಬಿದ ಶ್ರೇಷ್ಠ ಪದ್ಯಗಳಾಗಿವೆ; ಕಾಮ ತುಂಬಿದ ಹೆಣ್ಣಿನ ಮಾನಸಿಕ ಪರಿಸ್ಥಿತಿಯ ನೈಜ ಸಂಗತಿಗಳಾಗಿವೆ. ಪುಂಗಿಮೋಡಿಗೆ ನಾಗರವು ಬೀಳ್ವಂತೆ ಅರ್ಜುನನ ತೋಳತೆಕ್ಕೆಯಲ್ಲಿ ನಾರಿಯರು ರಾಸಾಟವಾಡಿ ರಸದೂಟವನ್ನೂ, ಮನದಾಟವಾಡಿ ಮನದೂಟವನ್ನೂ ಕಾಯಕ್ಕೆ ಕಾಮದ ಕೊನೆಯ ಊಟ (ತೃಪ್ತಿ)ವನ್ನೂ ಹೊಂದುತ್ತಿರಲು ಅವರರಿಯದೆಲೆ ತೋಳತೆಕ್ಕೆಯಲ್ಲಿಯೇ ಇರುಳುಗಳೆದು ಬೆಳಗಾಯಿತೆಂದು ಹೇಳುವ ಈ ಜಾನಪದ ಪದ್ಯಗಳು, ಭವಭೂತಿಯು ಉತ್ತರ ರಾಮಚರಿತೆಯಲ್ಲಿ, ಸೀತೆಯು ಅರಣ್ಯದೊಳಗೆ ರಾಮನ ತೋಳತೆಕ್ಕೆಯಲ್ಲಿ ಇರುಳು ಕಳೆದಳೆಂದು ಹೇಳುವ ಪದ್ಯವನ್ನು ನೆನಪಿಗೆ ತಾರದಿರಲಾಹವು. ಇಷ್ಟು ಮನೋವ್ಯಾಪಾರದ ಪರಿಜ್ಞಾನ ಪರಿಪೂರ್ಣವಾಗಿವೆ ಈ ಪದ್ಯಗಳು.

ಅರ್ಜುನನು ಚದುರಂಗ ಕುಸುಮಾಲೆಯರನ್ನು ತನ್ನ ಅರಮನೆಗೆ ಕರೆದೊಯ್ಯುವೆನೆಂದು ಆಶ್ವಾಸನ ಕೊಟ್ಟು ಹೊರಡುತ್ತಾನೆ. ಹಾದಿಯಲ್ಲಿ 'ಉಲೂಪಿ' ನಾಗಕನ್ನೆಯು ಪಾತಾಳ ಲೋಕದಿಂದ ಬಂದು ಅರ್ಜುನನು ಬರುವ ಹಾದಿಯನ್ನು ಕಾಯುತ್ತ ಕುಳಿತರಲು, ಜೋಗಿ ರೂಪದ ಅರ್ಜುನನು ಅವಳ ರೂಪಕ್ಕೆ ಅಂಜಿ ತನ್ನ ನಿಜರೂಪವನ್ನು ಹೇಳಲು,

ಅರ್ಜುನರ ಹೆಸರನ್ನು, ಕೇಳುತಲಿ ಉಲೂಪಿಗೆ
ಉಸಿರಾಡಲೆದೆ ಹೋಯಿತವ್ವ। ಕೋ । ಪಿಟ್ಟೆನದೆ
ದಿಟ್ಟಿಸಿ ಪರಪಕ ನೋಡತಾಳ । ಕೋ । ॥೩೫೧॥

ಬಹಳ ದಿನಕೆಂದಂಜಿ, ಮಾರಾಯರ ಕಾಣಲು
ಕಾಮಕಾಯಕ ತುಂಬಿ ಹರಿಯೆ । ಕೋ । ಹೆಣ್ಣದೆ
ನಿಮಿರಿ ಮೊಲೆಸುತ್ತ ಬೆವರೊಡೆದು ॥ ಕೋ ॥ ॥೩೫೨॥

ಚಿತ್ತಾರ ಕುಚಗಳು, ಹೆಣ್ಣರೂಪವ ನುಂಗಿ
ಮಾಲೆಗಳ ನಡುವೆ ಒಸರ್‍ಯಾವ । ಕೋ । ಚಿವರೆದೆ
ಮುತ್ತಿನ ಕುಂದಣ ಪದಕೇನ ॥೩೫೩॥

ಥಳಥಳ ಕನಡ್ಯಾಗ ಪಾರಜ ಹರಿದ್ಯಾಂಗ
ಇಬ್ಬರ ದಿಟ್ಟ ಓಡ್ಯಾಡಿತೊ । ಕೋ । ತುಂಬಿಗಳು
ಹೂವಿಂದ್ಹೂವಿಗೆ ಹಾರಿದ್ಹಾಂಗ ॥ ಕೋ ॥ ॥೩೫೪॥ *–ಜಾ–ಮ–ಭಾ–ಜೋಗಿಯ ಸಂದು*

ಅರಿಯದಲೆ ಗಂಡನನ್ನು ಬಹಳ ದಿನಕ್ಕೆ ಕಂಡ ಹೆಣ್ಣಿನ ಮಾನಸಿಕ ಚಿತ್ರವಿದೆ ಇಲ್ಲಿ. ಈ ಶೃಂಗಾರ ಪದ್ಯಗಳ ಶೈಲಿಯೇ ಬೇರೆ ತೆರನಾಗಿದೆ. ಹೇಳುವುದು ಮೋಹಕವಾಗಿ ಚಿತ್ರಮಯವಾಗಿದೆ. ಹೀಗೆ ಅರ್ಜುನನ ಶೃಂಗಾರ ಆಟವನ್ನು ಹೇಳುವ ಈ 'ಜೋಗಿಯ ಸಂದು' ಬಲುರಸವತ್ತಾಗಿದೆ.

ಅರ್ಜುನನು ಹಸ್ತಿನಾವತಿಗೆ ಮರಳಿ ಬಂದ ಮೇಲೆ ಮನೆಯಲ್ಲಿ ತನ್ನ ತಾಯಿಗೂ, ಸಹೋದರರಿಗೂ, ಈ ಎಲ್ಲ ಸಂಗತಿಗಳನ್ನು ತಿಳುಹಿಸಿ ಚದುರಂಗ ಕುಸಮಾಲೆಯರನ್ನು 'ಕರೆತರವ ಸಂದು' ರಾಜ್ಯ ವೈಭವದಿಂದ ತುಂಬಿದೆ. ಒಂಟೆಗೆ ಡಂಕೆಯ ಸಿಂಗಾರ, ಆನೆಗೆ ಅಂಬಾರಿಯ ಸಿಂಗಾರ, ಕುದುರೆಗೆ ಹಲ್ಲಾಣದ ಸಿಂಗಾರ ಮೊದಲಾದುವುಗಳು ತರತರವಾಗಿ ಪದ್ಯಗಳಲ್ಲಿ ಬಂದಿವೆ. ಈ 'ಕರೆತರುವ ಸಂದಿಗೆ' ಹಾಡುವ ರೀತಿಯು ಬಲು ಮನರಂಜಕವಾಗಿದೆ. ಸಂದರ್ಭಕ್ಕೆ ಸರಿಯಾಗಿ ಬರುವ 'ಓದುವೆ ನಾವು ಓಲೆಯ' ಎಂಬ ಪಲ್ಲವಿಯು ಅರ್ಥಪೂರಿತವಾಗಿ ಹಾಡಿನಲ್ಲಿ ಬಂದಿದೆ. 'ಕುರುಕ್ಷೇತ್ರದ ಸಂದು' ಬಲು ಭೀಕರವಾಗಿದೆ; ಭಯಾನಕವಾಗಿದೆ; ಕೇಳುವವರಿಗೆ ಬೀಭತ್ಸರವೆನಿಸಿದರೂ ಅದಕ್ಕೆ ಜಾನಪದ ಹೊದಿಕೆ ಇರುವುದರಿಂದ, ಅವೆಲ್ಲವುಗಳು ಸುಂದರವಾದ ಚಿತ್ರಗಳಾಗಿವೆ.

ಕುದರಿ ಕುಣಿಯತಾವ, ಗಗನಕ ಕೆಂಧೂಳಿ ಹಾರತಾವ
ಹಾರತಾವ ಸರಬಾಣ ತೂರತಾವ ॥ ಪ ॥

ಎಂದು ಎತ್ತುವ ಪಲ್ಲವಿಯೇ ಇಷ್ಟು ಸೊಗಸಾಗಿದೆ. ಈ ವರ್ಣನೆಗಳಲ್ಲದೆ ಸೂರ್ಯೋದಯ ಮೊದಲಾದ ವರ್ಣನೆಗಳು ನವೀನವಾಗಿ ಚಿತ್ತಾಕರ್ಷಕವಾಗಿವೆ.

ಬೆಳ್ಳನ್ನ ಬೆಳಗಾದೆ, ಬೆಳ್ಳಿಯ ಉದಿಹರಿದೆ
ಸೂರಜನ ರಸಿಮಿ ಹರಿದಾವೊ । ಕೋ । ಮೂಡಲದ
ದಾಳಿಂಬ ಕದವು ಢಣಲೆಂದು । ಕೋ । ॥೩॥

–ಜಾ–ಮ–ಭಾ–ಒಡ್ಡೋಲಗ ಸಂದು

ಇಷ್ಟು ರಸವತ್ತಾದ ಬೆಳುವಲ ಹೆಣ್ಣುಮಕ್ಕಳು ಹಾಡುವ ಈ ಜಾನಪದ ಮಹಾಭಾರತವು ಯಾರಿಗೆ ಬೇಕಾಗಲಿಕ್ಕಿಲ್ಲ? ಇದನ್ನು ಹಾಡುತ್ತ ಬಂದ 'ನಾಲ್ವರು ಗೆಳತಿಯರ' ಬಳಗಕ್ಕೆ ಹೃತ್ಪೂರ್ವಕ ವಂದನೆಗಳು.

ರಾಮಾಯಣ

ಜಾನಪದ ಮಹಾಭಾರತದಂತೆ ರಾಮಾಯಣ ಹಾಡುವುದನ್ನು ಬೆಳುವಲದಲ್ಲಿ ಕೇಳಬಹುದು. ಇದನ್ನೂ ಕೆರೂರಲ್ಲಿಯೇ ಸಂಕಲಿಸಲಾಗಿದೆ. ಮೂಲ ರಾಮಾಯಣದಂತೆ ಕಥೆಯು ಬಂದಿದ್ದರೂ, ಹಲಕೆಲವು ಸನ್ನಿವೇಶಗಳಲ್ಲಿ ಅದು ಮಾರ್ಪಾಟುಹೊಂದಿದೆ. ಗರ್ಭಿಣಿಯಾದ ಸೀತೆಯು ವನದೊಳಗೆ ಋಷಿಗಳ ಆಶ್ರಮದಲ್ಲಿದ್ದು 'ಲವ'ನೆಂಬ ಒಬ್ಬನೇ ಮಗನನ್ನು ಹಡೆದಳೆಂದು ಈ ರಾಮಾಯಣ ಕಥೆಯಲ್ಲಿ ಬರುವುದು. ಅವಳು ಬನಕ್ಕೆ ತೊಟ್ಟಿಲ ಕಟ್ಟಿ ಆ ಮಗುವನ್ನು ಜೋಕೆ ಮಾಡುತ್ತಿರಲು, ಒಂದು ದಿನ ಮಗುವನ್ನು ತೊಟ್ಟಿಲದಲ್ಲಿ ಹಾಕಿ ಒಬ್ಬ ಕುರುಡ ಮುನಿಗೆ ತೊಟ್ಟಿಲ ತೂಗಲು ಹಚ್ಚಿ ಮುನಿಕನ್ನಿಕೆಯರೊಡನೆ ಆಶ್ರಮದ ಕೆಲಸದಲ್ಲಿ ನಿರತಳಾಗಿರಲು, ಬೇರೆ ಮುನಿ ಕನ್ನಿಕೆಯರು ಆ ಕುರುಡ ಋಷಿಗೆ ಗೊತ್ತಾಗದೆ ಲವನನ್ನು ಆಡಿಸಲು ಎತ್ತಿಕೊಂಡು ಹೋಗುವರು. ಕೆಲಹೊತ್ತಿನ ಮೇಲೆ ಆ ಕುರುಡ ಮುನಿಯು ತೊಟ್ಟಿಲ ತೂಗುವುದನ್ನು ನಿಲ್ಲಿಸಿ, ತೊಟ್ಟಿಲದಲ್ಲಿ ಕೈಯಾಡಿಸಿ ನೋಡಲು ಕೂಸು ಇದ್ದಿಲ್ಲ. ಆಗ ಗಾಬರಿಯಾಗಿ ತೊಟ್ಟಿಲ ಕಾಲಿಗೆ ನೇತಾಡುವ ಕುಂಚಿಗೆಯನ್ನು ತೊಟ್ಟಿಲದಲ್ಲಿ ಹಾಕಿ ತೂಗಲು ಅದು ಕೂಸಾಯಿತೆಂದೂ ಆ ಕೂಸಿಗೆ 'ಕುಶ'ನೆಂದರೆ ಕುಂಚಿಗೆಯೆಂದು ನಾಮಾಂಕಿತ ಮಾಡಿದರೆಂದೂ ಹಾಡಿನಲ್ಲಿ ಬಂದಿದೆ. ಉಳಿದ ಕಥಾಸಾರವು ಮೂಲರಾಮಾಯಣದಂತೆ ಇದೆ.

ಕಥಾಕವನವಾದ ಈ ಹಾಡಿನಲ್ಲಿಯೂ ಮಹಾಭಾರತದಂತೆ ಬಲಗೊಳ್ಳುವ ಸಂದೂ, ಮುಗತಾಯ ಸಂದೂ ಬರುವುವು. ಕಥಾಗರ್ಭದಲ್ಲಿ ಅನೇಕ ಸಂದುಗಳನ್ನು ಮಾಡಿ ವಿವಿಧ ರಾಗಗಳೊಂದಿಗೆ ಹೆಣ್ಣುಮಕ್ಕಳು ಹಾಡುತ್ತಾರೆ. ಈ ಹಾಡಿನಲ್ಲಿಯೂ ವರ್ಣನಾ ವೈಖರಿಯನ್ನು ಕಾಣಬಹುದಾಗಿದೆ. ಸೀತೆಯನ್ನು ರಾವಣನು ಕದ್ದೊಯ್ದು ಕಾವಲಿನಲ್ಲಿಡಲು ಅವಳನ್ನು ಕಾಣದೆ ರಾಮನು ದುಃಖಿಸಿದ ದೃಶ್ಯವಂತೂ ಕರಳು ಕರಗುವಂತಿದೆ. ಸುಗ್ರೀವನ ಸಹಾಯದಿಂದ ರಾಮನು ಸೀತೆಯನ್ನು ಹುಡುಕಲುದ್ಯುಕ್ತನಾಗುವನು. ಹನುಮಂತನು ಸಪ್ತ ಸಮುದ್ರಗಳನ್ನು ದಾಟಿ ಲಂಕೆಗೆ ಹೋದನೆಂದು ಹಾಡಿನಲ್ಲಿ ಬಂದಿದೆ. ಅವನು ಅಶೋಕವನದಲ್ಲಿದ್ದ ಸೀತೆಯನ್ನು ಗುರುತಿಸಿ ರಾಮನ ಸಂದೇಶವನ್ನು ತಿಳಿಸಲು, ರಾಮನಿಗೆ ಹನುಮಂತನ ಮುಖಾಂತರ ಅವಳು ತನ್ನ ಒಸಗೆಯನ್ನು ಕಳುಹಿಸುವಳು.

ವನದೊಳಗಿರ ಲಾರಿನೆ।
ಶ್ರೀರಾಮರ ದೂತ ವನದೊಳನಿರಲಾರಿನೆ ॥ಪಲ್ಲವಿ॥
ವನದೊಳಗಿರಲಾರೆ, ಘನಕೋಟಿ ರಾಕ್ಷಸರೊಳು।
ಹನುಮಂತ ಕೇಳೊ ಎನಪಂತೆ।
ರಾಕ್ಷಸರು ನೋಡೊ ಎಂಥೆಂತ।
ರಾಮರಿಗೆ ತಿಳಿಸೊ ಈ ಗ್ರಂಥ ॥೧॥

ಕೆಟ್ಟ ರಕ್ಕಸರ ಕೈಯೊಳು, ಕೊಟ್ಟಾನೊ ಶ್ರೀರಾಮ।
ದಿಟ್ಟ ಕೇಳೊ ಧೀರಹನುಮ।
ಕೊಟ್ಟ ರಾವಣನ ದುರ್ಗುಣ।
ಸುಟ್ಟು ಬಿಡು ನೀ ಶೂರ ಹನುಮ ॥೨॥ *–ಜಾ–ರಾಮಾಯನ – 'ಸೀತಾಸೆರೆಮನೆಯ ಸಂದು'*

ಹೀಗೆ ತನ್ನ ಸುಖದುಃಖವನ್ನು ಸೀತೆಯು ಹನುಮಂತನ ಮುಂದೆ ತೋಡಿಕೊಂಡಿದ್ದಾಳೆ.

ಹತ್ತು ತಾಸಿನ ಹಾದಿ, ಐದು ತಾಸಿಗೆ ಬಂದೆ
ಹೊಟ್ಟೆ ಹಸಿದಾವು ಹಡದವ್ವ। ಕೋ। ಬಾನದ
ಹೊತ್ತು ಇದ್ದರ ಉಣನೀಡ ॥ಕೋ॥ *–ಜಾ–ರಾಮಾಯನ–'ಸೀತಾಸೆರೆಮನೆಯ ಸಂದು'*

ಎಂದು ಹನುಮಂತನು ತನಗಾದ ಹಾದಿಯ ದಣುವಿನ ಹಸಿವೆಯನ್ನು ಹೇಳಲು ಸೀತಾದೇವಿಯು–

ಮಾಡಲೇನೊ ಮಗನೆ, ನೀಡಲೇನೊ ಮಗನೆ
ಬಾಡೀದ ಹಣ್ಣ ಮೆಲಹೋಗು। ಕೋ। ವನದಾಗ
ರಾವಣೆದ್ದಾನು ಬಲುಜತನ ॥ ಕೋ ॥

ಹೀಗೆ ಹೇಳಲು ಹನುಮಂತನು ಅಶೋಕಬನವನ್ನೇ ಹಾಳು ಮಾಡಿದನೆಂದು ಹಾಡಿನಲ್ಲಿ ಬಲುರಮ್ಯವಾಗಿ ವರ್ಣಿಸಲ್ಪಟ್ಟಿದೆ. ಮುಂದೆ ರಾಮನು ದೊಡ್ಡದಂಡನ್ನು ತೆಗೆದುಕೊಂಡು ಹೋಗಿ ರಾವಣನನ್ನು ಯುದ್ಧದಲ್ಲಿ ಕೊಂದು ಸೀತೆಯನ್ನು ತಂದು ಅವಳ ಗುಣಗಳನ್ನು ಪರೀಕ್ಷೆ ಮಾಡುವ ಸಂದು ಹಾಡಿನಲ್ಲಿ ಹಿತಮಿತವಾಗಿ ಬಂದಿದೆ.

ಅಟ್ಟಂಬರಡಿವ್ಯಾಗ, ಜತ್ತರಡು ತಿದಿಊದಿ
ಉಕ್ಕೀನಗುಂಡ ಕೈಯಾಗ। ಕೋ। ಇಟಗೊಂಡು
ದಿಕ್ಕ ದಿಕ್ಕಿನೊಳು ಒಗೆಯುವಳ। ಕೋ। ಸೀತವ್ವ
ಬಟ್ಟನೊಳು ಚಿಕ್ಕಿ ಮೊದಲಿಲ್ಲ। ಕೋ। ರಾಮಣ್ಣ
ದಿಟ್ಟ ನೀ ಕೊಡೊ ಮಡದೀಯ ॥ ಕೋ ॥
ಕೊಂಡಾವ ಕಡಿಸೆಂದ, ಕೆಂಡಾವ ಹರಿಸೆಂದ
ಹೆಂಡತಿಗೆ ಕಿಚ್ಚ ಹಾಯೆಂದ। ಕೋ। ಬದುಕಿದರೆ
ಮಂಡಲ ದೊಳಗ ಬಾರೆಂದ ॥ ಕೋ ॥ *–ಜಾ–ರಾಮಾಯನ – 'ಸೀತಾಪರೀಕ್ಷೆಯ ಸಂದು'*

ಹೀಗೆ ಸೀತೆಯನ್ನು ಪರೀಕ್ಷಿಸಿ ರಾಮನು ಅವಳನ್ನು ಕೂಡಿಕೊಂಡರೂ ಅವಳಿಗೆ ಜನಹರಲೆಯ ಕಂಟಕವು ತಪ್ಪಲಿಲ್ಲ.

ಕಟ್ಟಿರು ಕರಿಮಣಿಗಾಗಿ, ಇಟ್ಟಿರುವ ಬಳೆಗಾಗಿ
ಹೊಕ್ಕೆಲ್ಲ ಮಗಳ ಒಡಗಿಚ್ಚು। ಕೋ। ಸೀತವ್ವ
ಬಿಕ್ಕಿದರು ಬಿಡಲಿಲ್ಲ ಜನಹರಲಿ ॥ ಕೋ ॥

ಎಂದು ಹಾಡಿ ಹೆಣ್ಣುಮಕ್ಕಳು ಅಬಲಾಸ್ಥಿತಿಯನ್ನು ನೋಡಿ ಕನಿಕರಬಟ್ಟಿದ್ದಾರೆ. ಮುಂದೆ ಸೀತೆಯು ವನವನ್ನು ಸೇರುವ ಪಾಲು ಬರಲು, ಜನಪದವು ಅವಳನ್ನು ನೋಡಿ ಕಣ್ಣೀರು ಸುರಿಸಿದೆ; ಗರ್ಭಿಣಿಯಾಗಿದ್ದ ಸೀತೆಯು ಆಶ್ರಮದಲ್ಲಿ ಲವನನ್ನು ಹಡೆಯಲು, 'ಜನಕರಾಯನ ಮಗಳು, ಬನಕೆ ತೊಟ್ಟಿಲಕಟ್ಟಿ' ಎಂದು ಹಾಡಿ (ಜನಪದವು) ಅವಳ ವನವಾಸವನ್ನೇ ವ್ಯಕ್ತಿಮಾಡಿಬಿಟ್ಟಿದೆ. ಕೂಸನ್ನು ತೊಟ್ಟಿಲಕ್ಕೆ ಹಾಕಿ ಮುನಿಕನ್ನೆಯರೊಡನೆ ಕೆಲಸದಲ್ಲಿ ಸೀತಾದೇವಿಯು ನಿರತಳಾಗಿರಲು–

ಹರಿಹರಿ ಸಲುಹೆಂದು, ಕುರುಡ ಮುನಿ ತೂಗುತಲಿ
ಹರಿದಾಡು ಕೂಸ ಆಶ್ರಮದ। ಕೋ। ಹರದೇರು
ಕರೆದೊಯ್ದರೆತ್ತಿ ಆಡುದಕ ॥ ಕೋ ॥

ಜೀಕ ನಿಲ್ಲಿಸಿಕಂಡ, ಬರಿಯ ತೊಟ್ಟಿಲ ಮುನಿಯು
ಹರದಿ ಸೀತಮ್ಮ ಕೇಳ್ಯಾಳೊ ಅಂಜೀಕೆ ॥

ಕುಂಚೀಗೆ ಕಳೆತುಂಬಿ, ಮಿಂಚುವ ಮಗುವಾಗಿ
ಕೆಂಚೇರು ನೋಡಿ ನಗತಾರೊ ಅಂಜೇಕೆ ॥

ಕಣ್ಣುಕಾಣದ ಮುನಿಯು, ಮುರಾರಿ ಗತಿಯೆಂದ
ಕಾಲಕುಂಚಿಗೆ ತೊಟ್ಟಲಕೊ ಅಂಜೇಕೆ ॥
ಕುಂಚೀಗೆ ಕೂಸಾಗಿ, ಕುಶನೆಂಬ ನಾಮಾತು
ಹಸನೇರು ಮುದ್ದಿಟ್ಟು ಹಾಡ್ಯಾರೊ ಅಂಜೇಕೆ ॥

–ಜಾ–ರಾಮಾಯನ – 'ಲವಕುಶರ ಸಂದು'

ಹೀಗೆ ಕುಶನ ಹುಟ್ಟನ್ನು ಜನಪದವು ಹಾಡಿದೆ. ಕೊನೆಗೆ ಕಥೆಯು ಮೂಲ ರಾಮಾಯಣದಂತೆ ಕೊನೆಗೊಂಡಿದೆ.

❐

4. ಇತರ ದೊಡ್ಡ ಹಾಡುಗಳು

ರಾಮಾಯಣ ಮಹಾಭಾರತದಂತೆ ಜಾನಪದ ಸಾಹಿತ್ಯದಲ್ಲಿ 'ಶರಣೆ ಚೆನ್ನಮ್ಮನ ಹಾಡು,' 'ಗುಣಸಾಗರಿಯ ಹಾಡು' 'ಮಳೆರಾಜನ ಹಾಡು' ಇವೇ ಮೊದಲಾದುವು ಜನತೆಯಲ್ಲಿ ಹೆಚ್ಚು ಖ್ಯಾತಿಯನ್ನು ಹೊಂದಿವೆ. ಶರಣೆ ಚೆನ್ನಮ್ಮನು ವೀರಶೈವ ಶಿವಶರಣೆಯರ ಮಾತೆಯಲ್ಲಿ ಒಬ್ಬಳಾಗಿದ್ದಾಳೆ. ಅವಳ ಸಂಬಂಧ ಅನೇಕ ಕಥೆಗಳೂ, ಹಾಡುಗಳೂ ವೀರಶೈವರಲ್ಲಿ ಬಂದಿವೆ. ವಿರುಪಾಕ್ಷ ಪಂಡಿತನು ಚೆನ್ನಬಸವ ಪುರಾಣದಲ್ಲಿ–

> **ಕತ್ತಲೆಯರಾಯನ ಕುಮಾರ ಕಾಳಿಂಗನಾ**
> **ಭಿತ್ತಿಯಿಂ ಬರೆದ ಪುಲಿಗಂಜಿ ಪ್ರಾಣವ ಬಿಟ್ಟ।**
> **ಸತ್ತ ಹೆಣಕಾಗ ವಧುವಾಗಿ ಬಸವನ ನೋಂಪಿಯನೋಂತು ಧೈರ್ಯದಿಂದೆ**
> **ಚಿತ್ತ ಜಾರಿಯನೊಲಿಸಿ ಗಂಡನಸುವಂ ಪಡೆದು।**
> **ಮುತ್ತೈದೆಯಾಗಿ ಕೆಲದಿನಮಿರ್ದು ಚೆನ್ನೆಬಳಿ।**
> **[೧]ಕುತ್ತಮದ ಪದವಿಯಂ ಪಡೆದಳೆಲೆ ಸಿದ್ಧರಾಮೇಶ ನೀಂ ಕೇಳೆಂದನು ॥೪೫॥**

ಈ ಕಥೆಯೇ ಜಾನಪದ ಹಾಡಿನಲ್ಲಿ ಬಂದಿದೆ. ಈ ಹಾಡು ಅಲ್ಲದೆ ಬೆಳುವಲ ಒಕ್ಕಲಿಗನು ಈ ಶರಣೆಯ ಪಾವನತೆಯನ್ನರಿತು ಅವಳ ಹೆಸರನ್ನು ನಕ್ಷತ್ರ ಗಣದಲ್ಲಿ ಪೋಣಿಸಿದ್ದಾನೆ. ವಿಮಾನದಾಕೃತಿಯಂತಿರುವ 'ರೋಹಿಣಿ ನಕ್ಷತ್ರ' ಪಂಜಕ್ಕೆ ಅವನು 'ಚೆನ್ನವ್ವನ ವಿಮಾನ'ವೆಂದು ಜನತೆಗೆ ತೋರಿಸುತ್ತ ಬಂದಿದ್ದಾನೆ. ಕೆಲವರು ಇದಕ್ಕೆ 'ಚೆನ್ನವ್ವನ ದಂಡೆ' ಎಂದೂ ಕರೆಯುವರು. ಬೆಳುವಲ ಹಳ್ಳಿಗಳಲ್ಲಿ ಎಲ್ಲ ಒಕ್ಕಲಿಗರು ಈ ನಕ್ಷತ್ರಪುಂಜಕ್ಕೆ ಈಗಲೂ 'ಚೆನ್ನವ್ವನ ವಿಮಾನ'ವೆಂದು ಕರೆಯುವುದನ್ನು ಕೇಳಿ ಪ್ರತ್ಯಕ್ಷ ಮನಗಾಣಬಹುದು.

ಗುಣಸಾಗರಿಯ ಕಥೆಯಂತೂ ಹಳ್ಳಿಗರಿಗೆ ಅಚ್ಚುಮೆಚ್ಚಿನ ಜಾನಪದ ಕಥೆಯಾಗಿದೆ. ಕಥೆಯಲ್ಲಿ ಬರುವ ಹೆಸರುಗಳೂ, ಆಚಾರ ವಿಚಾರಗಳೂ ವೀರಶೈವ ಶಿವಾಚಾರಕ್ಕೆ ಹೊಂದಿಕೆ ಯಾಗುವುದರಿಂದ ಕಥೆಯು ವೀರಶೈವ ಹದಿಬದಿಯ ಕತೆಯೆಂದು ಕೂಡಲೇ ಪ್ರಕಟವಾಗುವುದು. ಈ ಕತೆಯ ಹಾಡು ಉತ್ತರ ಕರ್ನಾಟಕದ ಅನೇಕ ಹಳ್ಳಿಗಳಲ್ಲಿ ಕೇಳಬರುವುದು. ಇದು ದಕ್ಷಿಣ ಕರ್ನಾಟಕದಲ್ಲಿಯೂ ಇದ್ದಂತೆ ಕಾಣುತ್ತದೆ. 'ಗುಬ್ಬಿ ಕರ್ನಾಟಕ ಪ್ರೊಡಕ್ಷನ್'ದವರು ಈ ಹಾಡಿನ ಕಥೆಯನ್ನು ವಾಕ್ಚಿತ್ರಪಟದ ಮೇಲೆ ತಂದು ಕನ್ನಡ ಜಾನಪದ ಸಾಹಿತ್ಯಕ್ಕೆ ಬೆಳಕನ್ನು ಚೆಲ್ಲಿದ್ದಕ್ಕಾಗಿ ಕನ್ನಡ ನಾಡೇ ಅವರಿಗೆ ಚಿರರುಣಿ. ಇಂತಹ ಅನೇಕ ಜಾನಪದ ಹಾಡುಕಥೆಗಳನ್ನು ವಾಕ್ಚಿತ್ರದಲ್ಲಿ ಸಾಧಿಸಲು ಪರಮಾತ್ಮನು ಅವರಿಗೆ ಶಕ್ತಿಯನ್ನೀಯಲು.

ಕನ್ನಡ ಜಾನಪದ ಸಾಹಿತ್ಯದಲ್ಲಿ ಗಂಗೆಗೌರಿಯ ಹಾಡುಗಳು, ಸೋಬಾನ ಹಾಡುಗಳು, ಕಸಬುಗಾರರ ಹಾಡುಗಳು ಇವೇ ಮೊದಲಾದುವು ಇತರ ದೊಡ್ಡ ಹಾಡುಗಳೆಂದು ಹೇಳಬಹುದು. ಅವೆಲ್ಲವುಗಳನ್ನು ಪ್ರತ್ಯೇಕವಾಗಿ ವಿಮರ್ಶಿಸಿ ಇಲ್ಲಿ ಬರೆಯಲು ಅಸಾಧ್ಯ. ಹಲಕೆಲವುಗಳನ್ನು ವಿಷಯಗಳಿಗೆ ಬೇಕಾದಲ್ಲಿ ತುಂಬಿಕೊಳ್ಳಲಾಗಿದೆ.

ಜನಪದದಲ್ಲಿ ಗೌರಿಗಂಗೆಯ ಸಂವಾದ ಹಾಡಗಳು ರಾಶಿ ರಾಶಿ. ಇವುಗಳಲ್ಲಿ ಮಾನವ ಪ್ರಪಂಚದ ಪ್ರವೃತ್ತಿಯು ತುಂಬಿ ತುಳುಕುವುದು ಒಡೆದು ಕಂಡುಬರುವ ಸಂಗತಿ. ಸವತಿ ಸವತಿಯರು ಜಗಳಾಡುವುದು ನಾಡಂತ ಮಾತು. ದೇವರು ಮಾನವನನ್ನು ಹುಟ್ಟಿಸಿದ. ಆದರೆ ಮಾನವನು ತನ್ನಂತೆ ದೇವರ ರೂಪರೇಷೆಯನ್ನು ಕಲ್ಪಿಸಿದ; ಅದಕ್ಕೂ ತನ್ನ ಪ್ರಪಂಚವೆಲ್ಲವನ್ನು ಅಂಟಿಸಿಬಿಟ್ಟ. ಶಿವನಿಗೆ ಹೆಂಡರಿಬ್ಬರನ್ನು ಮದುವೆಯ ಮಾಡಿ ಜಗಳ ಹೂಡಿಸಿದ. ತನ್ನ ಸಾವಿರ ತಪ್ಪುಗಳನ್ನು ಮುಚ್ಚಿಕೊಳ್ಳಲು ದೇವರ ಹೆಸರಿನಲ್ಲಿ ಸಾಧಿಸಿದ. ಹೀಗೆ ಅವನು ಪ್ರಪಂಚವು ಬೇಡಾದರೂ ಬೇಕಾದವರಂತೆ ಅದನ್ನು ಸಾಗಿಸುತ್ತ ಬಂದಿದ್ದಾನೆ.

ಹೆಣ್ಣು ಪ್ರಪಂಚವನ್ನು ಮಾಡುವಾಗ ಗಂಡು ಆವುದೊ ನಿಮಿತ್ತದ ಮೂಲಕ ಬಾಳುವೆಗೆಟ್ಟು ತನ್ನ ಕಡೆಗೆ ಬಾರದೆ ಆವಳನ್ನೊ ಮೆಚ್ಚಿ ಅಲೆದಾಡುವ ಸನ್ನಿವೇಶಗಳು ಹಳ್ಳಿಗರ ಬಾಳಿನಲ್ಲಿ ಸಾವಿರಾರು. ಆ ದುಃಖದಲ್ಲಿ ಬೆಂದ ಅವಳು ಮಹಾದೇವನು ತನ್ನ ಹೆಂಡರೊಡನೆ ಹೂಡಿದ ಆಟವನ್ನು ನೆನಸಿ ಹಾಡಿದೇವರೇ ಹೀಗಿದ್ದ ಮೇಲೆ ಮಾನವನ ಪಾಡೇನು? ಎಂದು ತನ್ನ ಗಂಡನ ಸಂಬಂಧ ಸಮಾಧಾನ

---

೧. 'ಚೆನ್ನಬಸವಪುರಾಣ' ೫೫ನೆಯ ಸಂಧಿ – ಪದ್ಯ ೪೫.

ತಾಳಿಕೊಳ್ಳುತ್ತಾಳೆ. ಒಮ್ಮೊಮ್ಮೆ ಮನೆಯಲ್ಲಿಯೇ ಸವತಿಯಿದ್ದರೆ, ಮತ್ಸರವು ಬೆಳೆದು ಮನೆಯೊಳಗೆ ನಿತ್ಯದಲ್ಲಿ ಕದನವಿಲ್ಲದೆ ಊಟ-ಉಪಚಾರಗಳೇ ಆಗುವುದಿಲ್ಲ. ದೇವರೊಳಗೆ, ಗೌರಿಗಂಗೆಯರ ಸವತಿ ಮತ್ಸರವು ಎಲ್ಲ ಹಳ್ಳಿಗರಿಗೂ ಗೊತ್ತಿದ್ದ ಮಾತು.

ಯಾಕ ಬುದ್ಧಿ ಬಾರದ।
ಹರಹರ ನಮ್ಮ ಮಹಾದೇವರಿಗೆ ಯಾಕ ನಿದ್ರಿತೋರದ ||ಪ||

ಓರಂಗದಲ್ಲಿದ್ದಾರ, ಪುರಾತರ ಮನೆಯ ಕದ್ದಾರ
ನಾರೀಗೊಬ್ಬಳಿಗೆ ಮೆಚ್ಚಿ ಬಳಿಗೆ ಬಾರದಿದ್ದಾರಮ್ಮ ||೧||

ಕಟ್ಟಿಗೆ ಮಣ್ಣ ಹೊತ್ತಾರು, ತಾ ಹುಟ್ಟಲೆ ತಿವಿಸಿ ಕೊಂಡಾರು
ಗಟ್ವಾಳ ಹರಳದ ಮುಂದ ಹೊಟ್ಟೆ ಹೊರಕೊಂಡ ಜಂಗಮರಮ್ಮ ||೨||

ಮಂಟಪದೊಳಗ ಹೊಕ್ಕಾರು, ತಾಮದುವೆ ಕೆಡಿಸಿ ಹೋದಾರು
ಕಂಟಕಗೇಡೆಂದು ನೆಂಟರಮುಂದ ಹೇಳಾರಮ್ಮ ||೩||

ಸೂಳಿ ಕಂಕಣಕಟ್ಯಾರು, ತಾ ಹೇಳಿದ ಮನೆಯ ಸುಟ್ಟಾರು
ಬೇಡ ಬೇಡಂದರೆ, ಜೂಜನಾಡಿ ಸೋತರಮ್ಮ ||೪||

ಚಿಂಗಳಿ ಮನೆಗೆ ಹೋದಾರು, ಸಣ್ಣ ಬಾಲಾಗಿ ಮೊಲೆಯ ನುಂಡಾರು
ಇಳಿಯ ಚಿತ್ತರದಲ್ಲಿ ಕೆಂಪಗ ತಿದ್ದಿ ನಲಿದಾರಮ್ಮ ||೫||

ಹೇಸಿಮನಿಗೆ ಹೋದಾರು ಹಸಗೂಸಿನ ಪ್ರಾಣತಿಂದಾರು
ದೋಸೆ ಪಿಡ್ಡಕ್ಕನ ಮನೆಗೆ ಸಿಸುವಾಗಿ ಉಂಡು ಬಂದಾರಮ್ಮ ||೬||

ಯಾಕ ಬುದ್ಧಿಬಾರದ, ಶಿವನಿಮಗ್ಯಾಕ ನಿದ್ರಿ ತೋರದ
ಲೋಕದವರ ಮುಂದ ಮಾರಿತೋರ ಬಾರದಮ್ಮ ||೭|| *–ಜಾ–ಸಂ.*

ಇಲ್ಲಿ ದೇವರ ಹೆಸರಿನಲ್ಲಿ ಮಾನವ ಪ್ರವೃತ್ತಿಯು ಒಡಮೂಡಿದ್ದು ಒಡೆದು ಕಾಣುವುದು. ಗಂಡನ ವ್ಯಭಿಚಾರಕ್ಕೆ ಧರ್ಮಪತ್ನಿಯು ಖಿನ್ನಳಾಗಿ ಜನತೆಯ ಮುಂದೆ ತನ್ನ ಮುಖವನ್ನು ತೋರಲಾಗದೆಂದು ವ್ಯಥೆಪಟ್ಟಿದ್ದಾಳೆ. ಹೆಂಡತಿಯ ವಿಪ್ರಲಂಭ ಶೃಂಗಾರವು ಇಲ್ಲಿ ಚಿತ್ರವಾಗಿದ್ದರೂ ಭಕ್ತಿರಸದ ಧ್ವನಿ ಎಲ್ಲೆಲ್ಲಿಯೂ ಹುದುಗಿದೆ. ಅವಳು ಈ ಗಂಗೆ ಗೌರಿಯರ ಹಾಡನ್ನು ಹಾಡಿ, ಮನಸ್ಸಿಗೆ ಸಮಾಧಾನ ತಂದುಕೊಂಡಿದ್ದಾಳೆ. ಇಂತಹ ಅನೇಕ ಹಾಡುಗಳು ಜನಪದದಲ್ಲಿ ಎಲ್ಲರ ನಿದರ್ಶನಕ್ಕೆ ಬರುವುವು. ಅವುಗಳನ್ನು ಕಲೆಹಾಕಿದರೆ ಪ್ರತ್ಯೇಕ ದೊಡ್ಡ ಸಂಕಲನವೇ ಆಗುವುದು. ಈ ಕೆಲಸವನ್ನು ಮುಂಬರುವ ಜಾನಪದ ಸಾಹಿತಿಗಳು ಕೈಕೊಳ್ಳುವರೆಂದು ಆಶಿಸಲಾಗಿದೆ.

ಹಳ್ಳಿಯ ಹೆಣ್ಣಿಗೆ ಆತ್ಮವಿಕಾಸದ ಆಧ್ಯಾತ್ಮದ ಕಲ್ಪನೆಯೂ ಇದೆ. ಇದನ್ನು ಕೆಳಗೆ ಎತ್ತಿಕೊಂಡ 'ಕುಟ್ಟುವ ಹಾಡಿ'ನಲ್ಲಿ ಕಾಣಬಹುದು.

ಓಂ ಅಂದು ಕುಟ್ಟೋಣ, ಸೋಂ ಅಂದು ಬೀಸೋಣ
ಓಂ ಸೋಂ ಎರಡು ತಿಳಿಯಬೇಕ ನಾರಿ ಹಾಕವ್ವ ಏರಿ ||ಪ||

ಓಂ ಸೋ ಎರಡು, ಅಕ್ಷರ ತಿಳಿದರ
ಗುರುಮನೆ ಕೀಲ ದೊರೆಕಿತ ನಾರಿ ||೧||

ಗುರುಕೀಲ ದೊರೆಯುದಕ; ದುರ್ಗುಣ ಅಳಿಯಬೇಕ
ಮಾಯಾ ಪ್ರಪಂಚ ತಿಳಿಯಬೇಕು ನಾರಿ ||೨||

ಪ್ರಪಂಚೆಂಬು ಒಳ್ಳ, ಪರಮಾತ್ಮೆಂಬು ಕಳಲಿ
ಜ್ಞಾನದ ವಣಕಿಲೆ ಕುಟ್ಟುಬೇಕು ನಾರಿ ||೩||

ಸೂಕ್ಷ್ಮವೆಂಬ ಅಕ್ಕಿ ತೆಗೆದು, ಕಲ್ಪನೆ ಎಂಬ ಹಳ್ಳ ಆಯ್ದು
ನಿರ್ಗುಣ ನೀರೆಸರ ಇಡಬೇಕ ನಾರಿ ||೪||

ಅಂಗದೊಳು ಹದಮಾಡಿ, ಗಡಗೀಯ ತೂಕಕತಂದು
ಮೂರಕಲ್ಲಒಲಿ ಹೂಡಿ ಇಡಬೇಕ ನಾರಿ ||೫||

ಕಾಮಕ್ರೋಧ ಕಿಚ್ಚಹಚ್ಚಿ, ಹಮ್ಮು ಗುಮ್ಮ ಸೆದೆಯ ಮುಚ್ಚಿ
ಗುರುಮಂತ್ರ ಪುಟುಮಾಡಿ ಇಡಬೇಕು ನಾರಿ ||೬||

ಜಂಗಮಕ ಎಡಿಸಾಗಿ, ಲಿಂಗಕ ನೇವಿದ್ದೆ ತೋರಿ
ಗುರಹಸ್ತ ಪ್ರಸಾದ ಮುಗಿಯಬೇಕ ನಾರಿ ||೭||

ಅನುಮಾನೆಂಬ ಅಡಕಿ ಒಡೆದು, ಸದ್ಗುರುವಿನ ಪಾದಪಿಡಿದು
ಸತ್ಯದಿಂದ ಸಾಧುರಸಂಗ ಹಿಡಿಯಬೇಕನಾರಿ ॥೮॥ – ಜಾ.ಸಂ–

ಇಲ್ಲಿ ಅವಳಿಗೆ 'ಓಂ' 'ಸೋಂ' (ಸೋಅಹಂ) ಎಂಬುದನ್ನು ಅರಿತುಕೊಳ್ಳುವ ಲವಲವಿಕೆಯೂ ಇದೆ. ಆದುದರಿಂದ ಒಮ್ಮೊಮ್ಮೆ ಅವಳು ಆಧ್ಯಾತ್ಮಜೀವಿಯೂ ಅಹುದು. ಅಂತೆಯೇ ಹಳ್ಳಿಯ ಹೆಣ್ಣುಮಕ್ಕಳಲ್ಲಿ ಕೆಲವರು ಶಿವಶರಣೆಯರಾಗಿ, ವಿಷ್ಣುಭಕ್ತೆಯರಾಗಿ ಪಾರಮಾರ್ಥವನ್ನು ಹೊಂದಿದ್ದಾರೆ.

ಬಡಿಗರ ಹಾಡು, ಅಂಬಿಗರ ಹಾಡು, ವಡ್ಡರಹಾಡು ಮೊದಲಾದುವು ಕಸಬುದಾರರ ಹಾಡುಗಳಾಗಿವೆ. ಈ ಹಾಡುಗಳಲ್ಲಿ ಅವರ ಕಲೆಯ ಶ್ರೇಷ್ಠತೆಯನ್ನು ಹಳ್ಳಿಗರು ಬಣ್ಣಿಸಿಹಾಡಿದ್ದಾರೆ.

ಬಡಿಗನ ಹಾಡು

ಕೋಲನಾಡ ಮನನಿ ಕೋಲನಾಡ ॥ಪ॥

ಹರ್‍ಯಾಗೇಳುತ ಲೆದ್ದನ ಬಡಿಗ್ಯಾ।
ಹಾಲು ಬಾನಗಳುಂಡಾನ ಬಡಿಗ್ಯಾ ॥ ಕೋ ॥ ॥೧॥

ಹಾಲು ಬಾನಗಳುಂಡನ ಬಡಿಗ್ಯಾ।
ಏಳು ಸುತ್ತಗುಡ್ಡ ತಿರುಗ್ಯಾನ ಬಡಿಗ್ಯಾ ॥ ಕೋ ॥ ॥೨॥

ಏಳು ಸುತ್ತ ಗುಡ್ಡ ತಿರುಗ್ಯಾನ ಬಡಿಗ್ಯಾ
ಉಳಿಬಾಚಿ ಹೊತ್ತ ತಂದನ ಬಡಿಗ್ಯಾ ॥ ಕೋ ॥ ॥೩॥

ಉಳಿಬಾಚಿ ಹೊತ್ತ ತಂದನ ಬಡಿಗ್ಯಾ।
ಅತ್ತಿ ಮರವೊಂದ್ಹುಡಿಕ್ಯಾನ ಬಡಿಗ್ಯಾ ॥ ಕೋ ॥ ॥೪॥

ಅತ್ತಿಮರವೊಂದ್ಹುಡಿಕ್ಯಾನ ಬಡಿಗ್ಯಾ।
ಬಡ್ಡಿಕೊರೆದು ಬಸವಣ್ಣನ ಮಾಡಿದ ॥ ಕೋ ॥ ॥೫॥

ಬಡ್ಡಿಕೋದು ಬಸವಣ್ಣನ ಮಾಡಿದ
ನಡುವ ಕೊಯ್ದು ನಾಗಮ್ಮನ ಮಾಡಿದ ॥ ಕೋ ॥ ॥೬॥

ನಡವ ಕೊಯ್ದು ನಾಗಮ್ಮನ ಮಾಡಿದ।
ಹೂವ ಕೊಯ್ದು ಹುಲಿಗೆಮ್ಮನ ಮಾಡಿದ ॥ ಕೋ ॥ ॥೭॥

ಹೂವ ಕೊಯ್ದು ಹುಲಿಗೆಮ್ಮನ ಮಾಡಿದ।
ಕಾಯ ಕೊಯ್ದು ಕಾಳಮ್ಮನ ಮಾಡಿದ ॥ ಕೋ ॥ ॥೮॥

ಕಾಯ ಕೊಯ್ದು ಕಾಳಮ್ಮನ ಮಾಡಿದ।
ಎಲಿಯ ಕೊಯ್ದು ಮಲ್ಲಮ್ಮನ ಮಾಡಿದ ॥ ಕೋ ॥ ॥೯॥

ಎಲಿಯ ಕೊಯ್ದು ಯಲ್ಲಮ್ಮನ ಮಾಡಿದ।
ಬೇರ ಕೊಯ್ದು ಬಿರಿಮಲ್ಲನ ಮಾಡಿದ ॥ ಕೋ ॥ ॥೧೦॥

ಬೇರ ಕೊಯ್ದು ಬರಿಮಲ್ಲನ ಮಾಡಿದ।
ಟೊಂಗಿ ಕೊಯ್ದು ಮಾತಂಗಿಯ ಮಾಡಿದ ॥ ಕೋ ॥ ॥೧೧॥

ಟೊಂಗಿ ಕೊಯ್ದು ಮಾತಂಗಿಯ ಮಾಡಿದ।
ಕೊಂಬಿ ಕೊಯ್ದು ಮೂರು ಜಂತ್ರವ ಮಾಡಿದ ॥ ಕೋ ॥ ॥೧೨॥

ಕೊಂಬಿ ಕೊಯ್ದು ಮೂರು ಜಂತ್ರವ ಮಾಡಿದ।
ಪಣೆಯ ಕೊಯ್ದು ಮೂರು ಚಣೆಯನು ಮಾಡಿದ ॥ ಕೋ ॥ ॥೧೩॥

ಪಣೆಯ ಕೊಯ್ದು ಮೂರು ಚಣೆಯನು ಮಾಡಿದ।
ತುದಿಯ ಕೊಯ್ದು ಮಾದೇವನ ಮಾಡಿದ ॥ ಕೋ ॥ ॥೧೪॥

ತುದಿಯ ಕೊಯ್ದು ಮಾದೇವನ ಮಾಡಿದ।
ಬಲಕ ಜಡಿಯ ಗಂಗಮ್ಮನ ಮಾಡಿದ ॥ ಕೋ ॥ ॥೧೫॥ –ಜಾ.ಸಂ.–

ಹಳ್ಳಿಗರು ಹೀಗೆ ಹಾಡಿದ್ದು ಕಲೆಯ ಅಭಿವೃದ್ಧಿಯಾಗಲೆಂದು! ಕಲೆಗಾರನನ್ನು ಪ್ರೋತ್ಸಾಹಿಸಲೆಂದು! ಹಾಡಿನ ಸರಳತೆಯು ಬಡಿಗನನ್ನೇಕೆ ಎಲ್ಲ

ಹಳ್ಳಿಗರ ಮನವನ್ನೇ ಹಿಡಿಯುವುದು. ಹಾಡಿನಲ್ಲಿ ಬಡಿಗನ ಕಲೆಯ ಗುಣಗಾನವಿದೆ ಎಂದೇ ಹೇಳಬಹುದು. ಅವನು ಬಾಚಿಯನ್ನು ಹೊತ್ತು, ಅತ್ತಿಯ ಮರವನ್ನು ಕೊರೆದು ಕೆತ್ತಿದ ದೇವದೇವತೆಗಳು ಗ್ರಾಮದೇವದೇವತೆಗಳಾಗಿ ಹಳ್ಳಿಗರ ಭಕ್ತಿಯ ಉಗಮಸ್ಥಾನಗಳಾಗಿವೆ. ಹಾಡಿನಲ್ಲಿ ಬಂದ ವರ್ಣನೆಗಳು ಚಿಲಕದ ಕೊಂಡಿಗಳಂತೆ ಸರಗಟ್ಟಿ ಸರಪಳಿಯಾಗಿವೆ. ಒಂದನ್ನು ತಗೆದರಾಯಿತು, ಸರಪಳಿಯೇ ಹರಿದು ಹೋಗುವುದು. ಅಷ್ಟು ಬಂಧುರವಿದೆ ಈ ಹಾಡಿನಕಟ್ಟು! ಇಂಥ ಅನೇಕ ಹಾಡಗಳನ್ನು ನಾವು ಕನ್ನಡ ಜಾನಪದ ಸಾಹಿತ್ಯದಲ್ಲಿ ಕಾಣಬಹುದು.

ಹಳ್ಳಿಯ ಹರದೆಯರು, ಕನ್ನೆಯರು, ಐದೆಯರು, ಮುತ್ತಯ್ದೆಯರೇ ಮೊದಲಾದವರು ಹಾಡುವ 'ಮುತ್ತಯ್ದೆತನ' ಎಂಬ ಹಾಡನ್ನು ಎತ್ತಿ ವಿಮರ್ಶೆಗೆ ತಡೆ ಹಾಕಲಾಗಿದೆ.

ಪಾಲೀಸೋ ಮುತ್ತಯ್ದಿತನವ। ನೀ ಎನ್ನ ಗುರುವೇ
ಪಾಲೀಸೋ ಮುತ್ತಯ್ದಿ ತನವ ॥ಪ॥

ಪಾಲೀಸೋ ನಾನಿನ್ನ ಪಾದಕೆ ನಮಿಸುವೆ
ಬ್ರಹ್ಮಾನಂದವ ತೋರಿಸೊ ಗುರುವೆ ॥ಅ.ಪ.॥

ಮುತ್ತೆಯ್ದಿತನವೆಂಬ ಬಡವರ ಬಂಡಿ
ನಾ ಬೇಡಿಕೊಂಬುವೆ ಹೂವಿನ ದಂಡಿ
ಹೂವಿನ ದಂಡಿಮ್ಯಾಲ ಮುತ್ತಿನ ಗೊಂಡಿ
ದಂಡಿ ಹೋದ ಮ್ಯಾಲೆನಾರಂಡಿ ಮುಂಡಿ ॥೧॥

ಮೂಗುತಿ ಎಂಬುದು ಬಡವರ ಕಾಶಿ
ನಾ ಬೇಡಿಕೊಂಬುವೆ ಕುಂಕುಮಗಾಸಿ
ಕರಿಮಣಿರಾಸಿ ಮ್ಯಾಲೆ ಹೊನ್ನಿನರಾಸಿ
ರಾಸಿ ಹೋದ ಮ್ಯಾಲೆನಾ ಪರದೇಸಿ ॥೨॥

ಅಯನೋರಿರುವದು ಅಯನಲಿವಾಸ
ಭಕ್ತರು ಇರುವದು ಕರಿಬಸವೇಶ
ನೀ ಕೇಳೊ ಕೆರೂರ ರಾಚೋಟೇಶ
ಈ ಪದಕೇಳಲು ಪಾಪೆಲ್ಲನಾಶ ॥೩॥ *–ಜಾ.ಸಂ.–*

ಈ ಹಾಡೇ ಜಾನಪದ ಸಂಸ್ಕೃತಿಯ ಮುತ್ತೆಯ್ದೆತನದ ಹೆಗ್ಗುರುತಾಗಿದೆ; ನಮ್ಮ ಹಳ್ಳಿಯ ಹೆಣ್ಣುಮಕ್ಕಳ ಸೌಭಾಗ್ಯ ಸಂದೇಶವಾಗಿದೆ; ಕನ್ನಡತಿಯರ ಮಂಗಲ ತಿಲಕವಾಗಿದೆ. ಒಟ್ಟಿನ ಮೇಲೆ ಜಾನಪದ ಮಂಗಲವೇ ಇದರಲ್ಲಿ ಮೂಡಿರುವುದರಿಂದ ಕನ್ನಡ ಜನಾಂಗವು ಇದನ್ನು ಶತಶತಮಾನಗಳಿಂದ ಸರಾಗವಾಗಿ ಹಾಡುತ್ತ ಬಂದಿದೆ. ಇದೇ ನಮ್ಮೆಲ್ಲರ ಸೌಭಾಗ್ಯ ; ಜಾನಪದಕ್ಕೆ ಶುಭಮಂಗಳ.

ಇಲ್ಲಿಯವರೆಗೆ ಕನ್ನಡ ಜಾನಪದ ಸಾಹಿತ್ಯವನ್ನು ಸ್ಥೂಲವಾಗಿ ಅವಲೋಕಿಸಿಯಾಯಿತು. ಈಗ ಮಾಡಿದ ಸಾಹಸವು ಕನ್ನಡ ಜಾನಪದ ಸಾಹಿತ್ಯ ಸಾಗರವನ್ನು ಅಳೆದು ಬೊಗಸೆಯಲ್ಲಿಟ್ಟಂತಾಗಿದೆ. ಜಾನಪದ ಸಾಹಿತ್ಯದಲ್ಲಂತೂ ವಿಕಾಸಕ್ಕೆ ಇನ್ನೂ ಬಹಳ ಅವಕಾಶವಿದೆ. ಕನ್ನಡ ಜಾನಪದ ಸಾಹಿತ್ಯದ ಅಭಿರುಚಿ ಸಾಹಿತಿಗಳಲ್ಲಿ ಉಂಟಾಗಬೇಕು, ಜನಸಾಮಾನ್ಯವು ಅದರ ರುಚಿಯನ್ನು ಆಸ್ವಾದಿಸಬೇಕು ಎಂದು ಸಾಹಿತ್ಯ ಕ್ಷೇತ್ರದಲ್ಲಿ ಮಾಡಿದ ಅಳಲುಸೇವೆ ಇದು. ಈ ಸಂದರ್ಭದಲ್ಲಿ ಜಾನಪದ ಸಾಹಿತ್ಯದ ಬಳ್ಳಿಗೆ ನೀರೆರೆದು ಅದಕ್ಕೆ ಮೊಗ್ಗೆಗಳು ಬರುವಂತೆ ಪ್ರಯತ್ನಿಸಲಾಗಿದೆ. ಆ ಮೊಗ್ಗುಗಳು ಅರೆಬಿರಿದು ಅರಳಿ ತಮ್ಮ ಪರಿಮಳವನ್ನು ರಸಿಕ ಸಾಹಿತಿಗಳಲ್ಲಿ ಬೀರಿ ಎಲ್ಲರನ್ನೂ ಆನಂದಗೊಳಿಸುವುದು ವಿಮರ್ಶೆ ಸಾಹಿತಿಗಳ ಕರ್ತವ್ಯವಾಗಿದೆ. ಅವರು ಆ ದಿಶೆಯಲ್ಲಿ ಪರಿಶ್ರಮ ಮಾಡುವರೆಂದು ವಿಶ್ವಾಸವಿಡಬಹುದೇ!

ಕನ್ನಡ ಜಾನಪದ ಸಾಹಿತ್ಯ ಪರಿಪೂರ್ಣವಾಗಬೇಕಾದರೆ ಅದರಲ್ಲಿ ಅಡಕವಾದ ಸಂಗತಿಗಳನ್ನು ವಿಂಗಡಿಸಿ, ಬಿಡಿಬಿಡಿ ಮಾಡಿ ಜನತೆಯ ಮುಂದೆ ಇಡುವುದೊಂದು ಮಹತ್ವದ ಕೆಲಸ. ಅವುಗಳಲ್ಲಿ ಅಡಕವಾದ ಸಂಸ್ಕೃತಿಯನ್ನು ಎತ್ತಿ ತೋರಿಸುವುದು ಮತ್ತೊಂದು ಕೆಲಸ. ಇವೆರಡೂ ಕಾರ್ಯಗಳನ್ನು ಸಾಧಿಸುವುದಕ್ಕೆ ಗೊಂದಲಿಗರಲ್ಲಿರುವ ಅಪಾರವಾದ ಜಾನಪದ ಸಾಹಿತ್ಯವನ್ನೂ, ಮಹಮ್ಮದೀಯರ ಸಂಪರ್ಕದಿಂದ ಕನ್ನಡದಲ್ಲಿ ಬಂದ 'ರಿವಾಯತ' ಹಾಡುಗಳನ್ನೂ, ಯಮನೂರ ಪೀರನ ಹಾಡುಗಳನ್ನೂ, ತೊರಗಲ್ಲ ಪೀರನ ಹಾಡುಗಳನ್ನೂ, ಯಲ್ಲವ್ವನ ಹಾಡುಗಳನ್ನೂ, ಚಿಂಚಲ ಮಾಯವ್ವನ ಹಾಡುಗಳನ್ನೂ, ಗೊಗ್ಗಯ್ಯ (ಮೈಲಾರಲಿಂಗ)ನ ಹಾಡುಗಳನ್ನೂ, ಜಾನಪದ ಕಥೆಗಳನ್ನೂ, ಸಂಕಲಿಸಿ ದೀರ್ಘ ಮುನ್ನುಡಿಯೊಡನೆ ಪ್ರಕಟಿಸಬೇಕು. ಈ ಜಾನಪದ ಸಾಹಿತ್ಯದಲ್ಲಿ ಬರುವ ಶಬ್ದಗಳ ಕೋಶವೊಂದು ಸಿದ್ಧವಾಗಬೇಕು. ಸಾಹಿತ್ಯಕ ಹಾಗೂ ಸಂಶೋಧಕರು ಈ ದಾರಿಯಲ್ಲಿ ಪರಿಶ್ರಮಪಡಬೇಕು.

ಭಾರತೀಯರ ಜೀವನವು ಹಳ್ಳಿಗರ ಜೀವನವಾಗಿದೆ. ಇಂದಿನ ಸ್ವಾತಂತ್ರ್ಯೋದಯದ ಸನ್ನಿವೇಶದಲ್ಲಿ ನಮಗೆ ಜೀವನ ವಿಕಾಸದ ಹೊಸ ಹುಮ್ಮಸ್ಸು ಬರಬೇಕಾದರೆ, ನಮ್ಮ ಸಂಸ್ಕೃತಿಯು ಒಡಮೂಡಿದ ಜಾನಪದ ಸಾಹಿತ್ಯದ ಅರಿವು ನಮಗೆ ಬೇಕೇಬೇಕು. ಅದು ನಮ್ಮ ಸಂಸ್ಕೃತಿಯನ್ನು ನಾಡಿನಾಡಿಗಳಲ್ಲಿ ಹರಿಸಿ ನಮ್ಮ ಜೀವನಕ್ಕೆ ಹೊಸ ಬೆಳಕು ತಂದು ಕೊಟ್ಟದ್ದಾದರೆ ಅಂದೇ ಭರತ ಖಂಡದ ಭಾಗ್ಯೋದಯ.

– ಜಾನಪದಕೆ ಶುಭಂ ಮಂಗಳಂ –

ಸಹಾಯಸಾಹಿತ್ಯ (Bibliography)

೧. ಅನುಭವ ಮಂಟಪ ಐತಿಹಾಸಿಕ ಕಥೆ – ಶ್ರೀ ಚೆನ್ನಪ್ಪ ಉತ್ತಂಗಿ
೨. ಕರ್ನಾಟಕ ಗ್ಯಾಝೆಟೀಯರ್
೩. ಕನ್ನಡ ಕೈಪಿಡಿ
೪. ಕರ್ನಾಟಕ ಕವಿಚರಿತೆ – ಭಾಗ ೧–೨
೫. ಕರ್ನಾಟಕ ಸಂಸ್ಕೃತಿ – ಶ್ರೀ ದೇವುಡು
೬. ಕರ್ನಾಟಕ ಜನ ಜೀವನ – ಶ್ರೀ ಬೆಟಗೇರಿ ಕೃಷ್ಣಶರ್ಮ
೭. ಕನ್ನಡ ನಾಡಿನ ಚರಿತೆ ಭಾಗ ೧–೨
೮. ಕವಿರಾಜಮಾರ್ಗ
೯. ಕಿತ್ತೂರ ಬಂಡಾಯ
೧೦. ಕೆಳದಿಯ ನೃಪವಿಜಯ
೧೧. ಗರತಿಯ ಹಾಡು
೧೨. ಗಂಡುಗಲಿ ಕುಮಾರ ರಾಮ – ಶ್ರೀ ಹುಲ್ಲೂರ ಶ್ರೀನಿವಾಸ ಜೋಯಿಸರು
೧೩. ಚೆನ್ನಬಸವ ಪುರಾಣ
೧೪. ಜನತೆಯ ಸಂಸ್ಕೃತಿ – ಶ್ರೀನಿವಾಸ
೧೫. ಜೀವನ ಸಂಗೀತ – ಶ್ರೀ ಸಿಂಪಿಲಿಂಗಣ್ಣ ಮತ್ತು ಧೂಲಾ
೧೬. ದೊರೆ ಮಲ್ಲಸರ್ಜನ ದುಂದುಭಿ – ಶ್ರೀ ರಾಯನಗೌಡ ಪಾಟೀಲ
೧೭. ದೊರೆ ಮಲ್ಲಸರ್ಜನ ದುಂದುಮಿ – ಶ್ರೀ ದೊಡ್ಡ ಭಾವೆಪ್ಪ ಮೂಗಿ
೧೮. ನಾಡಪದಗಳು – ಶ್ರೀ ಎಲ್. ಗುಂಡಪ್ಪ
೧೯. ಬಸವ ಪುರಾಣ
೨೦. ಮರುಳಸಿದ್ಧ ಕಾವ್ಯ – ಶ್ರೀ ಅ.ನ. ಕೃಷ್ಣರಾಯ
೨೧. ಮಲ್ಲಿಗೆದಂಡೆ – ಶ್ರೀ ಕಾಪಸೆ ರೇವಪ್ಪ
೨೨. ಮೋಳಿಗಯ್ಯನ ಪುರಾಣ – ಶ್ರೀ ಸಂ. ಶಿ. ಭೂಸನೂರ ಮಠ
೨೩. ವೀರಶೈವ ಸಾಹಿತ್ಯ ಮತ್ತು ಸಂಸ್ಕೃತಿ – ಶ್ರೀ ಅ.ನ. ಕೃಷ್ಣರಾಯ
೨೪. ವೃಷಭೇಂದ್ರ ವಿಜಯ
೨೫. ಶಿವಶರಣರ ಚರಿತ್ರೆಗಳು ಭಾಗ ೧–೨–೩ – ಶ್ರೀ ಪಿ. ಜಿ. ಹಳಕಟ್ಟಿ
೨೬. ವೀರಶೈವ ರಾಜಮನೆತನಗಳ ಇತಿಹಾಸ – ಶ್ರೀ ಪಿ.ಜಿ. ಹಳಕಟ್ಟಿ
೨೭. ಹದಿಬದಿಯ ಧರ್ಮ
೨೮. ಹರಿಹರನ ರಗಳೆಗಳು (ಭಾಗ – ೧) – ಶ್ರೀ ಪಿ.ಜಿ. ಹಳಕಟ್ಟಿ
೨೯. ಹಳ್ಳಿಯ ಪದಗಳು – ಶ್ರೀ ಬಿ.ಎನ್. ರಂಗಸ್ವಾಮಿ
೩೦. ಹಳ್ಳಿಯ ಹಾಡುಗಳು – ಶ್ರೀ ಬಿ.ಎನ್. ರಂಗಸ್ವಾಮಿ
೩೧. ಹಳ್ಳಿಯ ಬಾಳು – ಶ್ರೀ ಗೊರೂರ ರಾಮಸ್ವಾಮಿ ಅಯಂಗಾರ
೩೨. ನಾಲ್ಕು ನಾಡಪದಗಳು –ಶ್ರೀ ಬಿ.ಎಸ್. ಗದ್ದಗಿಮಠ
೩೩. ಜಾನಪದ ಸಂಭಾರ (ಅಚ್ಚಿಸಲ್ಲದೆ) – ಶ್ರೀ ಬಿ.ಎಸ್. ಗದ್ದಗಿಮಠ
೩೪. ಜಾನಪದ ಮಹಾಭಾರತ (ಅಚ್ಚಾಗಿಲ್ಲ) – ಶ್ರೀ ಬಿ.ಎಸ್. ಗದ್ದಗಿಮಠ
೩೫. ಜಾನಪದ ರಾಮಾಯಣ (ಅಚ್ಚಾಗಿಲ್ಲ) – ಶ್ರೀ ಬಿ.ಎಸ್. ಗದ್ದಗಿಮಠ

೩೬. ಕಾಯಕ ಗೀತೆಗಳು (ಅಚ್ಚಾಗಿಲ್ಲ) – ಶ್ರೀ ಬಿ.ಎಸ್. ಗದ್ದಗಿಮಠ
೩೭. ಸಮರಸ ಗೀತೆಗಳು (ಅಚ್ಚಾಗಿಲ್ಲ) – ಶ್ರೀ ಬಿ.ಎಸ್. ಗದ್ದಗಿಮಠ
೩೮. ಮೂರು ನಾಡಪದಗಳು (ಅಚ್ಚಾಗಿಲ್ಲ) – ಶ್ರೀ ಬಿ.ಎಸ್. ಗದ್ದಗಿಮಠ

ಪತ್ರಿಕೆಗಳು

೧. ಕರ್ನಾಟಕ ಸಾಹಿತ್ಯ ಪರಿಷತ್ ಪತ್ರಿಕೆಗಳು
೨. ಪ್ರಬುದ್ಧ ಕರ್ನಾಟಕ
೩. ಶಿವಾನುಭವ
೪. ಜಯ ಕರ್ನಾಟಕ

1. Beginnings of Vijayanagar History - H.Heras
2. Castes and Tribes of Southern India - E. Thurston
3. Encyclopaedia of Britanica 14th Edition
4. Encyclopaedia of Religion and Ethics
5. English wayfaring life - J.J. Jusserand
6. Golden Bough - Frozer
7. Gujarati and its Literature - Shri K.M. Munsi
8. Hand Book of Folklore - Gomme
9. History of Kannada Languages - Shri R. Narasinhacharya
10. Mysore and Coorg from the inseriptions
11. Studies in Languages and Literature - George R. Coffman
12. Vijayanagar Commemoration Volume. 1936
13. The Folklore Element in Indian Culture - Shri B.K. Sarkar

Journals

1. Modern Review vols. 1993 to 1942

संस्कृत

१. नाय्यशास्त्र
२. स्कंदपुराण

मराठी

१. सहित्याचे मूलधन – श्री चारेघडे
२. स्त्रीजीवन – श्री साने गुरुजी

ಕನ್ನಡ ಜಾನಪದ ಗೀತೆಗಳು



ಡಾ. ಬಿ.ಎಸ್. ಗದ್ದಗಿಮಠ
೧೯೧೨ - ೧೯೬೦

ಕರ್ನಾಟಕದಲ್ಲಿ ಜನಪದ ಸಾಹಿತ್ಯ ಹಾಗೂ ಕಲೆಗಳ ಬಗ್ಗೆ ಇನ್ನೂ ಸರಿಯಾದ ಕಲ್ಪನೆಯೇ ಇರದ ಕಾಲದಲ್ಲಿ ಜನಪದ ಸಾಹಿತ್ಯವು ಗಂಭೀರ ಅಧ್ಯಯನಕ್ಕೆ ಯೋಗ್ಯವಾದ ವಿಷಯವೆಂದು ತೋರಿಸಿಕೊಟ್ಟ ಜ್ಞಾನರೂಪಿ ಜಂಗಮರು ಡಾ. ಬಿ.ಎಸ್. ಗದ್ದಗಿಮಠರು. ಜಾನಪದ ಕ್ಷೇತ್ರದಲ್ಲಿ ಸಂಶೋಧನೆಗೆ ನಾಂದಿ ಹಾಡಿ, ವ್ಯಾಪಕ ಕ್ಷೇತ್ರಕಾರ್ಯ ಕೈಗೊಂಡು, ವಿಪುಲ ಸಾಹಿತ್ಯವನ್ನು ಕಲೆ ಹಾಕಿ, ವೈಜ್ಞಾನಿಕ ಹಾಗೂ ಶಾಸ್ತ್ರೀಯವಾಗಿ ವಿಶ್ಲೇಷಿಸಿ ಜಾನಪದ ಕ್ಷೇತ್ರಕ್ಕೆ ವಿದ್ವತ್ತಿನ ಹೊಂಬಳೆಯನ್ನು ತೊಡಿಸಿದ ಕೀರ್ತಿ ಡಾ. ಗದ್ದಗಿಮಠರಿಗೆ ಸಲ್ಲುತ್ತದೆ. ಕರ್ನಾಟಕ ವಿಶ್ವವಿದ್ಯಾಲಯದ ಪ್ರಥಮ ಡಾಕ್ಟರೇಟ್ ಪದವಿ ಹಾಗೂ ಭಾರತ ದೇಶದಲ್ಲಿ ಜಾನಪದ ಕ್ಷೇತ್ರದಲ್ಲಿ ಪ್ರಥಮ ಡಾಕ್ಟರೇಟ್ ಪದವಿಯನ್ನು ಪಡೆದ ಶ್ರೇಯವೂ ಸಹ ಡಾ. ಬಿ.ಎಸ್. ಗದ್ದಗಿಮಠರಿಗೆ ಸಲ್ಲುತ್ತದೆ. ಜಾನಪದ ಕ್ಷೇತ್ರದಲ್ಲಿ ಪಿಎಚ್.ಡಿ. ಮಹಾ ಪ್ರಬಂಧವನ್ನು ರಚಿಸುವುದರೊಂದಿಗೆ 'ನಾಲ್ಕು ನಾಡಪದಗಳು', 'ಕಂಬಿಯ ಹಾಡುಗಳು', 'ಜನತಾ ಗೀತೆಗಳು', 'ಮಲ್ಲ ಮಲ್ಲಾಣಿ', 'ಕುಮಾರ ರಾಮನ ದುಂದುಮೆ' ಹಾಗೂ 'ಲೋಕ ಗೀತೆಗಳು' ಎಂಬ ಸಂಗ್ರಹಗಳನ್ನು ಪ್ರಕಟಿಸಿದರು. ಅವರು ದೈವಾಧೀನರಾಗುವ ಮೊದಲು ಅನೇಕ ಕೃತಿಗಳನ್ನು ಪ್ರಕಟಣೆಗೆ ಸಿದ್ಧಗೊಳಿಸಿದ್ದರು. ಅವುಗಳಲ್ಲಿ ಸೋಬಾನದ ಹಾಡುಗಳು, ಜಾನಪದ ಭಾವಗೀತೆಗಳು, ಮಕ್ಕಳ ಲಾಲಿಜೋಗುಳ, ಜಾನಪದ ಮಹಾಭಾರತ, ಜಾನಪದ ರಾಮಾಯಣ, ಕಲ್ಯಾಣ ಬಸವನ ಹಾಡುಗಳು, ಜಾನಪದ ಸಂಭಾರ ಭಾಗ-1 ಹಾಗೂ ಭಾಗ-2, ಶಿವಶರಣರ ಹಂತಿಯ ಹಾಡುಗಳು, ಕಿತ್ತೂರ ಕೋಲುಪದಗಳು, ಕೋಲುಪದಗಳು ಪ್ರಮುಖವಾಗಿದ್ದು, ಪ್ರಸ್ತಾವನೆ ಸಹಿತ ಬರೆದು ಮುದ್ರಣಕ್ಕೆ ತಯಾರಿಸಿದ್ದರು. ಆದರೆ ಈ ಯಾವ ಕೃತಿಗಳೂ ಪ್ರಕಟಣೆಗೊಳ್ಳುವುದಿರಲಿ, ಈವರೆಗೂ ಈ ಕೃತಿಗಳ ಹಸ್ತಪ್ರತಿಗಳೂ ಸಹ ದೊರೆತಿಲ್ಲವೆಂಬುದು ವಿಷಾದನೀಯ. ಇದೂ ಅಲ್ಲದೇ ಡಾ. ಗದ್ದಗಿಮಠರು ಸಂಪಾದಿಸಿದ 'ಕನ್ನಡ ಜಾನಪದ ಶಬ್ದಕೋಶ'ವೂ ಅಂದೇ ಪ್ರಕಟಣೆಗೆ ಸಿದ್ಧವಾಗಿದ್ದರೂ ಅದರ ಹಸ್ತಪ್ರತಿ ಇಂದಿಗೂ ಸಹ ಅಲಭ್ಯವಾಗಿರುವುದು ತುಂಬಾ ಖೇದದ ಸಂಗತಿ.

ಡಾ. ಬಿ.ಎಸ್. ಗದ್ದಗಿಮಠರ ಹೆಸರಿನಲ್ಲಿ ಕರ್ನಾಟಕ ಜಾನಪದ ಹಾಗೂ ಯಕ್ಷಗಾನ ಅಕಾಡೆಮಿ, ಬೆಂಗಳೂರು ಜಾನಪದ ಕ್ಷೇತ್ರಕ್ಕೆ ಉತ್ತಮ ಸೇವೆ ಸಲ್ಲಿಸಿದವರಿಗೆ ಪ್ರತಿ ವರುಷ 'ಡಾ. ಬಿ.ಎಸ್. ಗದ್ದಗಿಮಠ ಜಾನಪದ ಪ್ರಶಸ್ತಿ'ಯನ್ನು ಪ್ರದಾನ ಪಡಿಸುತ್ತಿದ್ದಾರೆ. ಜಾನಪದ ಕ್ಷೇತ್ರದಲ್ಲಿ ವಿದ್ವತ್ತಿನ ಮೇರು ಆಗಿದ್ದ ಡಾ. ಬಿ.ಎಸ್. ಗದ್ದಗಿಮಠರನ್ನು 'ಕನ್ನಡ ಜಾನಪದ ಪಿತಾಮಹ' ಎಂದು ಕರೆದರೂ ಅತಿಶಯೋಕ್ತಿಯಲ್ಲ.

Sarpan ಸರ್ಪನ್
ಸರ್ಪನ್ ಪ್ರಕಾಶನ
ಧಾರವಾಡ

ISBN 819317712-6
9 788193 177129